ಡಾ॥ ಎಂ. ಬಸವರಾಜ ಅರಸ್

ವೈದ್ಯಶಾಸ್ತ್ರ ದರ್ಶನ

ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು



ವೈದ್ಯಶಾಸ್ತ್ರ ದರ್ಶನ

ಡಾ|| ಎಂ. ಬಸವರಾಜ ಅರಸ್

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

VYDHYA SHASTRA DHARSHANA
by Dr. M. Basavaraj urs. Published by Prasaranga, Bangalore University, Bangalore. Pp. 421 + viii.

Published under the centrally Sponsored Scheme of production of books and literature in regional Languages at the university level of the Government of India in the Ministry of Education and Social Welfare, New Delhi.

ಪ್ರಕಾಶಕರು:

ಹೆಚ್. ಆರ್. ದಾಸೇಗೌಡ

ನಿರ್ದೇಶಕರು, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು 560 056

ಸಹಾಯಕರು:

ಬಿ. ಕೆ. ಕರೀಗೌಡ

ಬೆಲೆ:

18-00

ಮುದ್ರಣ:

ರೂಪರಾಜ್ ಪ್ರಿಂಟರಿ,
172, ರಮಾವಿಲಾಸ ರಸ್ತೆ,
ಮೈಸೂರು 570 001

ಮೊದಲ ಮಾತು

ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಕನ್ನಡ ಮಾಧ್ಯಮದ ಅವಶ್ಯಕತೆಯನ್ನು ಪೂರೈಸುವ ಸಲುವಾಗಿ ಈಗಾಗಲೇ ಪಠ್ಯಪುಸ್ತಕಗಳನ್ನು ಸಿದ್ಧಪಡಿಸಿ ಪ್ರಕಟಿಸಿದೆ. ಇದರ ಜೊತೆಗೆ ವಿಶ್ವವಿದ್ಯಾಲಯವು ಸಾರ್ವಜನಿಕರಿಗಾಗಿ ವರ್ಷಾದ್ಯಂತ ಏರ್ಪಡಿಸುವ ಪ್ರಚಾರೋಪನ್ಯಾಸಗಳನ್ನು ವಿಶೇಷೋಪನ್ಯಾಸಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸುತ್ತಿದೆ. ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳು ಕೈಗೊಳ್ಳುವ ವೈಯಕ್ತಿಕ ಹಾಗೂ ಸಾಮೂಹಿಕ ಸಂಶೋಧನಾತ್ಮಕ ವ್ಯವಸಾಯಕ್ಕೆ ಗ್ರಂಥರೂಪದ ಅಭಿವ್ಯಕ್ತಿಯನ್ನು ಕೊಡುವ ಕಾರ್ಯವೂ ನಡೆದಿದೆ. ಇದರಿಂದಾಗಿ ವಿವಿಧ ವಿಭಾಗಗಳ ಅಧ್ಯಾಪಕರ ಸಂಶೋಧನಾತ್ಮಕ ಪ್ರವೃತ್ತಿಗೆ ಸಾಕಷ್ಟು ಪ್ರೇರಣೆ ದೊರೆತಿದೆ. ಇದಲ್ಲದೆ ವಿಶ್ವವಿದ್ಯಾಲಯೇತರ ಕ್ಷೇತ್ರಗಳಲ್ಲಿರುವ ವಿವಿಧ ಪರಿಣತರ ಸಂಶೋಧನೆ, ಸಂಪಾದನೆ, ಪರಿಷ್ಕರಣ, ಜಾನಪದ ಅನುವಾದ ಇತ್ಯಾದಿ ನಾನಾ ಬಗೆಯ ಗ್ರಂಥಗಳನ್ನು ಪ್ರಸಾರಾಂಗ ಪ್ರಕಟಿಸುತ್ತಿದೆ. ಡಾ|| ಎಂ. ಬಸವರಾಜ ಅರಸ್ ಅವರ 'ವೈದ್ಯಶಾಸ್ತ್ರ ದರ್ಶನ' ಎಂಬ ಈ ಕೃತಿಯು ಈ ದಿಕ್ಕಿನ ಒಂದು ಮುಖ್ಯ ಪ್ರಕಟಣೆಯಾಗಿದೆ.

ಡಾ|| ಎಂ. ಬಸವರಾಜ ಅರಸ್ ಅವರ 'ವೈದ್ಯಶಾಸ್ತ್ರ ದರ್ಶನ' ಕೃತಿಯು ವೈದ್ಯಕೀಯ ಕ್ಷೇತ್ರಕ್ಕೆ ಕನ್ನಡ ಭಾಷೆಯ ಒಂದು ಪ್ರಮುಖ ಕೊಡುಗೆ. ವೈದ್ಯಶಾಸ್ತ್ರವು ಯಾವ ಯಾವ ದೇಶಗಳಲ್ಲಿ ಹೇಗೆ ಹೇಗೆ ಹುಟ್ಟಿ ವಿಕಾಸ ಹೊಂದುತ್ತಾ ಬಂತು ಎಂಬ ಸುದೀರ್ಘವಾದ ಇತಿಹಾಸ ಈ ಕೃತಿಯಲ್ಲಿದೆ. ಲೇಖಕರ ವೈಜ್ಞಾನಿಕವಾದ ಬರವಣಿಗೆಯು ತುಂಬಾ ಸರಳವಾಗಿ, ಸಂಕ್ಷಿಪ್ತವಾಗಿ, ಸ್ಫುಟವಾಗಿ ಪ್ರಕಟ

ಗೊಂಡಿದೆ. ಈ ಪುಸ್ತಕ ಕನ್ನಡ ವಿದ್ಯಾವಂತ ಓದುಗರಿಗೆ, ವೈದ್ಯಕೀಯ ವಿದ್ಯಾರ್ಥಿ ಹಾಗೂ ವೈದ್ಯರಿಗೆ ಒಂದು ಉಪಯುಕ್ತವಾದ ಕೃತಿಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಇಂತಹ ಕೃತಿಯನ್ನು ವಿಶೇಷ ರೀತಿಯಲ್ಲಿ ಆಸ್ಥೆವಹಿಸಿ ಅಧ್ಯಯನ ಮಾಡಿ ನಮ್ಮ ಪ್ರಕಟಣೆಗೆ ಅನುವು ಮಾಡಿಕೊಟ್ಟ ಈ ಲೇಖಕರಿಗೆ ನನ್ನ ಅಭಿನಂದನೆಗಳು.

ತ. ರಾ. ಜಯರಾಮನ್
ಉಪಕುಲಪತಿ
ಬೆಂಗಳೂರು ವಿಶ್ವವಿದ್ಯಾಲಯ

ನಾಲ್ಕು ಮಾತು

ಕನ್ನಡ ಸಾಹಿತ್ಯವನ್ನು ಅಭಿವೃದ್ಧಿಪಡಿಸುವ ಸದುದ್ದೇಶದಿಂದ ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗವು ಪಠ್ಯ ಹಾಗೂ ಪಠ್ಯೇತರ ಹೊತ್ತಿಗೆಗಳನ್ನು ಪ್ರಕಟಿಸುವುದರ ಜೊತೆಗೆ ಇತರ ವಿಷಯದಲ್ಲಿ ಪ್ರಸಿದ್ಧರಾದ ವಿದ್ವಾಂಸರಿಂದ ಗ್ರಂಥಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ. ಆಧುನಿಕ ಕನ್ನಡ ಸಾಹಿತ್ಯದ ಆವರಣಕ್ಕೆ ಅಗತ್ಯವಾದ ಹಾಗೂ ಜನಸಾಮಾನ್ಯರಿಗೆ ಜ್ಞಾನವನ್ನು ನೀಡಬಲ್ಲ ಸಾಹಿತ್ಯ, ಕಲೆ, ವಿಜ್ಞಾನ ತತ್ತ್ವಶಾಸ್ತ್ರ, ಚರಿತ್ರೆ, ಧರ್ಮ, ನೀತಿ, ಸಂಸ್ಕೃತಿ, ಜಾನಪದ, ಸಾಮಾಜಿಕ ಹಾಗೂ ಮಾನವೀಶಾಸ್ತ್ರ, ಮುಂತಾದ ವಿಷಯಗಳ ಮೇಲೆ ಸ್ವತಂತ್ರವಾಗಿಯೋ, ಭಾಷಾಂತರದ ಮೂಲಕವೋ ಅಥವಾ ಸಂಕಲನದ ಮೂಲಕವೊ ಸರಳ ಹಾಗೂ ಖಚಿತವಾದ ಹೊಸಗನ್ನಡ ಶೈಲಿಯ ಮೂಲಕ ಪ್ರಸಾರಾಂಗವು ಈಗಾಗಲೇ ಅನೇಕ ಹೊತ್ತಿಗೆಗಳನ್ನು ಪ್ರಕಟಿಸಿದೆ. ಮುಂದೆಯೂ ಇಂಥ ಹಲವಾರು ವಿಷಯಗಳ ಮೇಲೆ ಮಹತ್ತರವಾದ ಹೊತ್ತಿಗೆಗಳನ್ನು ಪ್ರಕಟಿಸಬೇಕೆಂಬ ಮಹೋದ್ದೇಶವನ್ನು ಪ್ರಸಾರಾಂಗ ಹೊಂದಿದೆ.

ಡಾ. ಎಂ. ಬಸವರಾಜ ಅರಸ್ ಅವರು 'ವೈದ್ಯಶಾಸ್ತ್ರ ದರ್ಶನ' ಎಂಬ ಈ ಕೃತಿಯಲ್ಲಿ ದೊಡ್ಡ ಪ್ರಮಾಣದಲ್ಲಿ ವೈದ್ಯಶಾಸ್ತ್ರದ ಚರಿತ್ರೆಯನ್ನು ಕನ್ನಡ ಭಾಷೆಯಲ್ಲಿ ಶಾಸ್ತ್ರೀಯವಾಗಿ ನಿರೂಪಿಸಿದ್ದಾರೆ. ವೈದ್ಯಕೀಯ ವಿಜ್ಞಾನದ ಮೇಲೆ ಕನ್ನಡದಲ್ಲಿ ಸಾಕಷ್ಟು ಪುಸ್ತಕಗಳಿಲ್ಲ ಅನ್ನುವ ಕೊರತೆಯನ್ನು ತುಂಬುವ ಒಂದು ಪ್ರಯತ್ನವಾಗಿ ಈ ಪುಸ್ತಕ ಹೊರಬರುತ್ತಲಿದೆ. ಪ್ರಾಚೀನ ಕಾಲದಿಂದ ಪ್ರಪಂಚದಲ್ಲಿ ವೈದ್ಯಶಾಸ್ತ್ರದ ಬೆಳವಣಿಗೆಯು ಹೇಗೆ ಆಧುನಿಕ ಕಾಲದವರೆಗೂ ಹಂತಹಂತಗಳಲ್ಲಿ ರೂಪು

ಗೊಳ್ಳುತ್ತಾ ಬಂತು ಎಂಬುದನ್ನು ಈ ಕೃತಿಯು ಸಮರ್ಥವಾಗಿ ತಿಳಿಸುತ್ತದೆ. ಈ ಕೃತಿಯನ್ನು ವಿಶ್ವವಿದ್ಯಾಲಯದಿಂದ ಪ್ರಕಟಿಸಲು ಅನುವು ಮಾಡಿಕೊಟ್ಟ ಡಾ. ಎಂ. ಬಸವರಾಜ ಅರಸ್ ಅವರಿಗೆ ವಿಶ್ವವಿದ್ಯಾಲಯದ ಪರವಾಗಿ ನಾನು ತುಂಬಾ ಆಭಾರಿ. ಹಾಗೆಯೇ ಈ ಕೃತಿಯನ್ನು ಮುದ್ರಿಸಿಕೊಟ್ಟ ರೂಪರಾಜ್ ಪ್ರಿಂಟರಿ, ಮೈಸೂರು ಇವರಿಗೂ ನನ್ನ ಅಭಿನಂದನೆಗಳು. ಹೀಗೆಯೇ ಕನ್ನಡಿಗರ ಸೌಹಾರ್ದ ಸಹಕಾರ ಗಳಿಂದ ವಿಶ್ವವಿದ್ಯಾಲಯದ ಪ್ರಸಾರಾಂಗದ ಗ್ರಂಥಮಾಲೆಯು ಬೆಳೆಯಲೆಂದು ಆಶಿಸುತ್ತೇನೆ.

ಹೆಚ್. ಆರ್. ದಾಸೇಗೌಡ

ನಿರ್ದೇಶಕರು, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ

ಮುನ್ನುಡಿ

ಮುನ್ನುಡಿಯನ್ನು ಓದಿ ಬರಹಗಾರನ ಉದ್ದೇಶವೇನೆಂಬುದನ್ನು ತಿಳಿಯುವುದು ಅವಶ್ಯಕವೇ ? ಓದುಗರಿಗೆ ಮುನ್ನುಡಿ ಹಿಡಿಸುತ್ತದೆಯೆ ? ಅನೇಕರು ಮುನ್ನುಡಿಯನ್ನು ಓದಿಯೇ ಇರುವುದಿಲ್ಲ. ಮಾವಿನ ಹಣ್ಣಿನ ರುಚಿ ಕಂಡ ಮೇಲೆ ಮಾವಿನ ಮರದ ತಿಳುವಳಿಕೆ ಬೇಡವೆ ?

ವೈದ್ಯಶಾಸ್ತ್ರ ದರ್ಶನ ಬರೆಯಬೇಕೆಂದು ನನಗೆ ಬಹು ದಿನಗಳಿಂದಲೂ ಬಹಳ ಆಸಕ್ತಿ. ಆದರೆ ಕೆಲಸದಲ್ಲಿದ್ದಾಗ ಸಾಕಷ್ಟು ಕಾಲ ಸಿಗುತ್ತಿರಲಿಲ್ಲ. ಈಗ ಬಿಡುವಿರುವುದರಿಂದಲೇ ಈ ಪ್ರಯತ್ನ. ವೈದ್ಯದ ಹುಟ್ಟು, ಬೆಳವಣಿಗೆ ಹಾಗೂ ಅದರ ಗತಿ ಮಿತಿಗಳನ್ನು ಓದುಗರಿಗೆ ಅರ್ಪಿಸುವುದೇ ಇದರ ಗುರಿ. ಹಾಗೂ ವೈದ್ಯದ ಬೆಳವಣಿಗೆಗೆ ಕಾರಣರಾದ ವಿಜ್ಞಾನಿಗಳ ಮತ್ತು ಇತರ ಸಹೋದ್ಯೋಗಿಗಳ ಶ್ರಮ ಎಷ್ಟಿತ್ತೆಂಬುದನ್ನು ತಿಳಿಸುವುದು ಕೂಡ ಅದೇ ದೃಷ್ಟಿಯಿಂದ. ಅಂಗರಚನೆ ತಿಳಿಯಲು ಶವಗಳನ್ನು ರಾತ್ರಿವೇಳೆ ಕದ್ದುತಂದು ಪರೀಕ್ಷೆ ನಡೆಸುತ್ತಿದ್ದರು. ಸಂಶೋಧನೆ ಅರ್ಥಗರ್ಭಿತವಾಗಿದ್ದರೂ ಕಾಲಕ್ಕನುಸಾರವಾಗಿಲ್ಲದಿದ್ದುದರಿಂದ ಸಂಶೋಧಕರನೇಕರು ಕಠಿಣ ಶಿಕ್ಷೆಗೆ ಗುರಿಯಾಗುತ್ತಿದ್ದರು.

ನಾನು ಅಚ್ಚ ಕನ್ನಡಿಗನಾದರೂ ಕನ್ನಡ ಬರವಣಿಗೆಗಾರನಲ್ಲ. ಈ ವೈದ್ಯಶಾಸ್ತ್ರವನ್ನು ಬರೆದಿರುವುದು ಅತಿ ಶ್ರಮದಿಂದ. ಕ್ಷಯ, ಮೂತ್ರಪಿಂಡಗಳ ರೋಗಗಳು, ಎದೆ ರೋಗಗಳು ಹಾಗೂ ಮತ್ತಿತರ ಆರೋಗ್ಯ ವಿಷಯ ಕುರಿತು ಬರೆದಿರುವ ಸಣ್ಣಪುಟ್ಟ ಲೇಖನಗಳು ಆಗಾಗ್ಗೆ ಪ್ರಕಟವಾಗುತ್ತಲಿವೆ. ಈ ಪುಸ್ತಕದಲ್ಲಿ ಅನೇಕ ತಪ್ಪು ನೆಪ್ಪುಗಳಿರುವುದು ಸಹಜ. ಅವುಗಳನ್ನು ದಯವಿಟ್ಟು ತೋರಿಸಿದರೆ ಮುಂದಿನ ಪ್ರಕಟನೆಯಲ್ಲಿ ಸರಿಪಡಿಸಲಾಗುವುದು.

ಡಗ್ಲಸ್ ಗುತ್ರಿ, ಚಾರಲ್ಸ್ ಸಿಂಗರ್ ಮತ್ತು ಆಕ್ನ್ಸವರ್ತ್ ಅಂಡರ್‌ಉಡ್, ಹಾಗೂ ಮುಖ್ಯವಾಗಿ ರಾಲ್ಫ್ ಮೇಜರ್‌ಗಳ ವೈದ್ಯಚರಿತ್ರೆ ಪುಸ್ತಕಗಳು ಈ ನನ್ನ ಪುಸ್ತಕಕ್ಕೆ ಆಧಾರ. ಚಿತ್ರಗಳನ್ನೂ ಕೂಡ ಈ ಪುಸ್ತಕಗಳಿಂದಲೇ ಆರಿಸಲಾಗಿದೆ. ನಾನು ಈಗ್ಗೆ ನಾಲ್ಕು ವರ್ಷಗಳ ಹಿಂದೆ ಅಮೆರಿಕಾಕ್ಕೆ ಭೇಟಿಕೊಟ್ಟದ್ದಾಗ ಡೆಟ್ರಾಯಿಟ್ಟಿನ ಪಾರ್ಕ್ ಡೇವಿಸ್ ಕಂಪೆನಿಯವರು ನನಗೆ ಕೊಟ್ಟಿದ್ದ ವೈದ್ಯಶಾಸ್ತ್ರದ ಹಾಗು ಔಷಧಶಾಸ್ತ್ರದ ಚಿತ್ರಗಳನ್ನು ಅವರ ಅಪ್ಪಣೆ ಪಡೆದು ಧಾರಾಳವಾಗಿ ಉಪಯೋಗಿಸಲಾಗಿದೆ. ಇವರುಗಳೆಲ್ಲರಿಗೂ ನನ್ನ ಹೃತ್ಪೂರ್ವಕ ವಂದನೆಗಳು. ಹಸ್ತಪ್ರತಿಯನ್ನು ತುಂಬಾ ಓದಿ,ತಿದ್ದಿ, ತಕ್ಕ ತಾಂತ್ರಿಕ ಪದಗಳನ್ನು ಉಪಯೋಗಿಸಿ,ಅನೇಕ ಸಲಹೆಗಳನ್ನು ಕೊಟ್ಟ ಉತ್ತಮ ಕನ್ನಡ ಬರಹಗಾರರೆಂದೆನಿಸಿಕೊಂಡಿರುವ, ನಿವೃತ್ತಿ ಹೊಂದಿರುವ ಔಷಧ ಪ್ರಾಧ್ಯಾಪಕ ಡಾ|| ಡಿ.ಎಸ್. ಶಿವಪ್ಪನವರಿಗೆ ನಾನು ನನ್ನ ಕೃತಜ್ಞತೆಗಳನ್ನು ಅತಿ ವಿನಯದಿಂದ ಅರ್ಪಿಸಬಯಸುವೆ.

ಬಹಳ ಶ್ರಮವಹಿಸಿ ಈ ಪುಸ್ತಕವನ್ನು ಪ್ರಕಟಿಸಿರುವ ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗದ ಅಧಿಕಾರಿಗಳಿಗೆ ಚಿರಋಣಿ. ಹಾಗೂ ಅಚ್ಚುಮೆಚ್ಚಾಗಿ ಮುದ್ರಿಸಿರುವ ಮೈಸೂರಿನ ರೂಪರಾಜ್ ಪ್ರಿಂಟರಿಯವರಿಗೂ ನನ್ನ ಕೃತಜ್ಞತೆಗಳು.

ಡಾ|| ಎಂ. ಬಸವರಾಜ ಅರಸ್

ಬಿಎಸ್ಸಿ, ಎಂಬಿಬಿಎಸ್, ಎಫ್‌ಆರ್‌ಸಿಪಿ (ಜಿ)
ವೈದ್ಯಶಾಸ್ತ್ರ ಗೌರವ ಪ್ರಾಧ್ಯಾಪಕ,
ಬೆಂಗಳೂರು ಮೆಡಿಕಲ್ ಕಾಲೇಜು

12-6-79
ಬೆಂಗಳೂರು

ವಿಷಯಾನುಕ್ರಮಣಿಕೆ

೧. ವೈದ್ಯಶಾಸ್ತ್ರದ ಉದಯ

ರೋಗ ಮನುಷ್ಯನ ಜೊತೆಯಲ್ಲೇ ಹುಟ್ಟಿತು ಎಂದರೆ ಅತಿಶಯೋಕ್ತಿ ಆಗಲಾರದು. ಆದರೆ, ಪ್ರಾಣಿಗಳಲ್ಲೂ, ಸಸ್ಯಗಳಲ್ಲೂ ರೋಗ ಸಾವಿರಾರು ವರ್ಷಗಳ ಹಿಂದೆಯೇ ಇತ್ತು. ಏಕಾಣುಜೀವಿಗಳು ೫,೦೦೦,೦೦೦ ವರ್ಷಗಳ ಹಿಂದೆ ಇದ್ದವೆಂಬುದಕ್ಕೆ ಆಧಾರ ಸಿಕ್ಕಿದೆ. ಮೂಳೆ ಗಂತಿಗಳು, ಹುಳುಕಲ್ಲು, ಕೀಲುಬಾವು ಮುಂತಾದ ರೋಗಗಳು ಉರಗಗಳಲ್ಲಿ, ಅವು ನಾಶವಾದ ಕಾಲದಲ್ಲಿ, ಅಂದರೆ ಕ್ರಿಟೇಷಸ್ ಯುಗದಲ್ಲಿ



ಜಾವದಲ್ಲಿ ಸಿಕ್ಕಿದ ತೊಡೆಮೂಳೆಯ ಈ ಗಂತಿ ಮಾನವ ರೋಗಶಾಸ್ತ್ರದ ಅತಿ ಪುರಾತನ ನಿದರ್ಶನ

ಇದ್ದವೆಂದು ಗೊತ್ತಾಗಿದೆ. ಆಮೇಲಿನ ಪ್ಲಿಯೊಸೀನ್ ಯುಗದಲ್ಲಿ ಕಿರಣಣಬೇನೆ ಮತ್ತು ಬೆನ್ನೆಲುಬುರಿತದ ವಿಕಲತೆಯ ರೋಗಗಳು ಇದ್ದುವೆಂದೂ ಹಾಗೂ ಕಪಿಮನುಷ್ಯ ಮನುಷ್ಯನಾಗಿ ಪರಿವರ್ತನೆಯಾದ ಪೇಲಿಯೊಲಿತಿಕ್ ಯುಗದಲ್ಲಿ ಬೆನ್ನೆಲುಬುರಿತ, ಕೊಳೆತ, ಕ್ಷಯ ಮತ್ತು ಮೂಳೆಯುರಿತಗಳಿದ್ದುದಕ್ಕೆ ಬೇಕಾದಷ್ಟು ಆಧಾರಗಳಿವೆ. ಆದ್ದರಿಂದ, ಮನುಷ್ಯ ಹುಟ್ಟುವುದಕ್ಕಿಂತ ಸಾವಿರಾರು ವರ್ಷಗಳ ಮೊದಲೇ ರೋಗ ಇತರ ಜೀವಿಗಳಲ್ಲಿತ್ತೆಂದು ದೃಢವಾಗಿ ಹೇಳಬಹುದು. ಅದರಲ್ಲೂ, ಈಗಿನ ಕಾಲದ ಮನುಷ್ಯನ ರೋಗಗಳು ಆಗಲೂ ಇದ್ದವೆಂದು ದೃಢವಾಗಿದೆ. ಈಜಿಪ್ಟಿನ ರಕ್ಷಿತ ಶವಗಳಲ್ಲಿ ಈಗಿನ ಕಾಲದ ರೋಗಗಳ ಚಿಹ್ನೆಗಳಿರುವುದನ್ನು ರೂಫರ್ ತೋರಿಸಿದ್ದಾನೆ. ೩೦೦೦ ವರ್ಷ ಹಿಂದಿನ ರಕ್ಷಿತ ಶವ ಒಂದರಲ್ಲಿ ಮೂತ್ರಪಿಂಡದ ಹಲವು ಕೀವು ಗೂಡು

ಗಳಿರುವುದನ್ನು ಹಾಗೂ ಕೀವಿನಲ್ಲಿ ಗ್ರಾಂರಂಗೇರದ ಜೀವಾಣುಗಳಿದ್ದುದನ್ನೂ ಬರೆದು ತೋರಿಸಿದ್ದಾನೆ.

ಮನುಷ್ಯ ಎಲ್ಲಿ, ಯಾವಾಗ ಹುಟ್ಟಿದನೆಂದು ಹೇಳಲು ಸಾಧ್ಯವಿಲ್ಲ. ಯೂರೋಪು, ಏಷ್ಯ, ಆಫ್ರಿಕ, ಆಸ್ಟ್ರೇಲಿಯ ಖಂಡದಲ್ಲೆಲ್ಲೋ ಹುಟ್ಟಿರಬಹುದೆಂದು ನಂಬಿಕೆ ಇದೆ. ಕಪಿ ಮನುಷ್ಯ, ಅನೇಕ ವಿಜ್ಞಾನಿಗಳ ಪ್ರಕಾರ ೫,೦೦,೦೦೦ ವರ್ಷಗಳ ಹಿಂದೆ ಇದ್ದನೆಂದೂ



ವೈದ್ಯ ಚರಿತ್ರೆಯ ಅರುಣೋದಯ

ಇನ್ನೂ ಅನೇಕರ ಪ್ರಕಾರ ೧,೦೦೦,೦೦೦ ವರ್ಷಗಳ ಹಿಂದಿದ್ದನೆಂದೂ ಅಂದಾಜು ಮಾಡಲಾಗಿದೆ. ಈ ಕಪಿಮನುಷ್ಯನ ಒಂದು ಅಸ್ಥಿಪಂಜರ ಜಾವ ದೇಶದಲ್ಲಿ ೧೮೯೧-92ರಲ್ಲಿ ಕಂಡುದನ್ನೂ ಹಾಗೂ ಅವರ ಎಡ ತೊಡೆಮೂಳೆಯಲ್ಲಿ ರೋಗವಿದ್ದುದನ್ನೂ ವಿಜ್ಞಾನಿಗಳು ವಿವರಿಸಿದ್ದಾರೆ.

ಪೇಲಿಯೊಲಿತಿಕ್ ಯುಗದ ಮೊದಲನೇ ಭಾಗದಲ್ಲಿ ಕಲ್ಲಿನಿಂದ ಆಯುಧಗಳನ್ನು ಮನುಷ್ಯ ಮಾಡುತ್ತಿದ್ದನೆಂದೂ, ನಿಯೊಲಿತಿಕ್ ಕೊನೆಯ ಭಾಗದಲ್ಲಿ ಅಂದರೆ ನವಶಿಲಾ ಯುಗದಲ್ಲಿ ತಲೆಯ ರೋಗವನ್ನು ಗುಣಪಡಿಸಲು ತಲೆಬುರುಡೆಯನ್ನು ಬೈರಿಗೆಯಿಂದ ಕೊರೆಯುತ್ತಿದ್ದರೆಂದೂ ಗೊತ್ತಾಗಿದೆ. ಹೀಗೆ ಕೊರೆಯಲ್ಪಟ್ಟಿರುವ ನವ ಶಿಲಾಯುಗದ ತಲೆಬುರುಡೆ ಬರ್ಲಿನ್ನಿನ ವಸ್ತುಸಂಗ್ರಹ ಶಾಲೆಯಲ್ಲಿದೆ. ಇಂತಹ ಶಸ್ತ್ರಕ್ರಿಯೆಗಳನ್ನು ೧೦,೦೦೦ ವರ್ಷಗಳ ಹಿಂದೆಯೇ ಪಶ್ಚಿಮ ಯೂರೋಪಿನಲ್ಲೂ ಬೊಹಿಮಿಯ ದೇಶದಲ್ಲೂ ನಡೆಸುತ್ತಿದ್ದರು. ಪೇಲಿಯೊಲಿತಿಕ್ ಯುಗದಲ್ಲಿ ಫ್ರಾನ್ಸ್ ಮತ್ತು ಸ್ಪೆಯಿನ್ ದೇಶ

ಗಳಲ್ಲಿ ಬೆರಳಿನ ಅಂಗಚ್ಛೇದನ ಮಾಡುತ್ತಿದ್ದುದನ್ನು ಗುಹೆಗಳ ಗೋಡೆಗಳ ಮೇಲೆ ಕೆತ್ತಿದ್ದಾರೆ. ಬೆರಳಿನ ಶಸ್ತ್ರಕ್ರಿಯೆ ಭಾರತ, ಆಫ್ರಿಕ, ಈಜಿಪ್ಟ್, ಮೆಕ್ಸಿಕೊ, ಪೆರು ಮತ್ತಿತರ ದೇಶಗಳಲ್ಲಿ ದೇವರಿಗೆ ಶಾಂತಿಯುಂಟುಮಾಡುವುದಕ್ಕೋಸ್ಕರವೋ ಭೂತ



ಪೂರ್ವಕಾಲದ ವೈದ್ಯರೀತಿ

ಪಿಶಾಚಿಗಳನ್ನು ಓಡಿಸುವುದಕ್ಕೋಸ್ಕರವೋ ಮಾಡುತ್ತಿದ್ದರು. ಅಲ್ಲದೆ ಸಂತಾಪ ಸೂಚಿಸುವುದಕ್ಕಾದರೂ ಇರಬಹುದು. ಜಾತಿಭೇದವನ್ನು ಅರಿಯಲೂ ಇದ್ದಿರಬಹುದು.

ಬರೆಯಲು ಆಗ ಲಿಪಿಯಿಲ್ಲದಿದ್ದುದರಿಂದ, ಪುರಾತನ ಮನುಷ್ಯನ ಜಾತಿ, ಭೇದ, ಮತಧರ್ಮ, ತತ್ವ, ರೋಗರುಜಿನಗಳನ್ನು ತಿಳಿಸುವ ಬರಹಗಳು ಯಾವುದೂ ಇರಲಿಲ್ಲ

೨. ಪುರಾತನ ಅಮೆರಿಕನ್ನರ ನಾಗರಿಕತೆ

ಅಮೆರಿಕ ದೇಶವನ್ನು ಯೂರೋಪಿಯನ್ನರು ವಶಪಡಿಸಿಕೊಂಡಾಗ ಅಲ್ಲಿನ ಸ್ಥಳೀಯರಾದ ಇಂಡಿಯನ್ನರು ಇನ್ನೂ ಶಿಲಾಯುಗದ ಜನಗಳಂತಿದ್ದುದರಿಂದ, ಅವರ ಸಂಸ್ಕೃತಿ ಬಹಳ ಹಳೆಯದೆಂದು ಊಹಿಸಲಾಗಿದೆ. ಅಮೆರಿಕದ ಇಂಡಿಯನರು ಅಲೆಮಾರಿಗಳಾಗಿದ್ದುದರಿಂದ, ಅವರ ಜೀವನ ಬಹು ಕಾಲ ರಹಸ್ಯವಾಗಿತ್ತು. ದೇವತೆಗಳು ಅವರ ಜೀವನವನ್ನು ಮಾರ್ಪಡಿಸುತ್ತಿದ್ದರೆಂದು ಅವರಲ್ಲಿ ನಂಬಿಕೆ ಇತ್ತು. ಅವರು ವಿಗ್ರಹಗಳನ್ನು ಪೂಜಿಸದಿದ್ದರೂ ದೇವರಲ್ಲಿ ನಂಬಿಕೆ ಇತ್ತು. ತಮ್ಮ ವಾಸಸ್ಥಳಕ್ಕೆ ಬಂದೊಡನೆಯೇ ತಲೆಬಾಗಿ ದೇವರಿಗೆ ನಮಸ್ಕರಿಸುತ್ತಿದ್ದರು. ಬಿತ್ತುವ ಇಲ್ಲವೇ ಒಕ್ಕಣೆಯ ಕಾಲದಲ್ಲಿ ಪೂಜಿಸುತ್ತಿದ್ದರು. ಸೃಷ್ಟಿಕರ್ತ ದೊಡ್ಡ ದೇವತೆಯೆಂದೂ, ಆಕಾಶ, ನಕ್ಷತ್ರ, ವಾಯು, ಮೋಡ, ಗುಡುಗು, ಮಿಂಚುಗಳು ಚಿಕ್ಕ ದೇವತೆಗಳೆಂದೂ ನಂಬಿದ್ದರು. ಪ್ರತಿಯೊಂದು ಬುಡಕಟ್ಟಿಗೂ, ಹಳ್ಳಿಗೂ, ಮನೆಗೂ ಅಲ್ಲದೆ ಒಬ್ಬೊಬ್ಬನಿಗೂ ಒಂದೊಂದು ದೇವತೆ ಇದೆಯೆಂದು ನಂಬಿದ್ದರು. ಒಂದು ಬುಡಕಟ್ಟಿನವರ ನಡೆವಳಿಕೆ ಮುಂದುವರಿದಂತೆಲ್ಲಾ ಅವರ ದೈವ ಭಾವನೆಯೂ ಮುಂದುವರಿಯುತ್ತಿತ್ತು. ಸಾವು ನೋವು, ಯುದ್ಧ, ವಿಪತ್ತು, ಅಥವಾ ವಯಸ್ಸಾದುದರಿಂದ ಬರುತ್ತಿತ್ತೆಂದೂ, ದೇವತೆಗಳ ಕೋಪದಿಂದ ರೋಗ ಉಂಟಾಗುತ್ತಿತ್ತೆಂದೂ ನಂಬಿದ್ದರು. ಆದ್ದರಿಂದ ರೋಗ ವಾಸಿಮಾಡಲು ರೋಗಕ್ಕೆ ಕಾರಣನಾದ ದೇವತೆಯನ್ನೇ ಪೂಜಿಸಿ ಸಮಾಧಾನಪಡಿಸುತ್ತಿದ್ದರು. ದೇವರಿಗೆ ಅರ್ಪಿತವಾಗುವ ಪದಾರ್ಥವೇ ಔಷಧವೆಂದು ನಂಬಿದ್ದರು. ಅವರಲ್ಲಿ ವೈದ್ಯನಾಗಬೇಕೆನ್ನುವವರು ಕಾಡಿಗಾಗಲೀ ನದಿ ತೀರಕ್ಕಾಗಲೀ ಹೋಗಿ ಹೊಟ್ಟೆಗಿಲ್ಲದೆ ಬಟ್ಟೆಯಿಲ್ಲದೆ ತಪಸ್ಸು ಮಾಡಿ, ಆವೇಶ ಬಂದಾಗ, ಮುಂದೆ ದಾರಿ ತೋರಿಸುವ ಸಿಬ್ಬಂದಿಯನ್ನು ಪಡೆಯುತ್ತಿದ್ದರು. ಇಂಥಹವರೇ ಸಮಾಜದಲ್ಲಿ ಮುಖ್ಯಸ್ಥರಾಗಿರುತ್ತಿದ್ದರು. ಯುದ್ಧದಲ್ಲಿ ಗೆಲ್ಲಲೂ, ಬರಗಾಲದಲ್ಲಿ ಮಳೆಗೂ, ಹೆಚ್ಚು ದವಸ ಧಾನ್ಯಗಳನ್ನು ಬೆಳೆಯಲೂ, ರೋಗಿಗಳಿಗೆ ಗುಣವಾಗಲೂ, ಈ ವೈದ್ಯರನ್ನೇ ಜನರು ಬರಮಾಡಿಕೊಳ್ಳುತ್ತಿದ್ದರು. ಇವರು ದೇವತೆಯನ್ನು ಸಂತೋಷಪಡಿಸಿ ಪಿಶಾಚಿಯನ್ನು ಓಡಿಸಿ ತಮ್ಮ ಕಾರ್ಯವನ್ನು ಸಾಧಿಸುತ್ತಿದ್ದರು. ಈ ಕಾರ್ಯಗಳಿಗೆ ಬೇಕಾದಷ್ಟು ತಂತ್ರ ಮಂತ್ರಗಳನ್ನು ಉಪಯೋಗಿಸುತ್ತಿದ್ದರು. ಒಂದು ವೇಳೆ ಇವುಗಳಿಂದ ರೋಗ ಗುಣವಾಗದಿದ್ದರೆ ಔಷಧವನ್ನು ಕೊಡುತ್ತಿದ್ದರು. ಜ್ವರ ಇಳಿಸಲು ನೀರು ಹಬ್ಬೆ ಮರದ ತೊಗಟೆಯಿಂದ (ಸ್ಯಾಲಿಸಿಲಿಕ್ ಆಮ್ಲದ ಮೂಲವಸ್ತು) ತಯಾರಾದ ಕಷಾಯ, ವಾಂತಿ ಮಾಡಿಸಲು ಹಾಲಿ ಕಷಾಯ, ಮಲಬದ್ಧತೆಯನ್ನು ಹೋಗಲಾಡಿಸಲು ಕಾಸ್ಕಾರ, ಪಾಡೊಫಿಲ್ಲಿನ್ ಮತ್ತು ನಾಗದಂತಿ ಇವೆಲ್ಲ ಆ ಕಾಲದಲ್ಲಿ ರೂಢಿ

ಯಲ್ಲಿದ್ದವು. ಸೊಗದೆ ಬೇರು, ಜೂನಿಪರ್ ಗುಲ್ಮಗಳನ್ನು ಮೂತ್ರ ಹೆಚ್ಚಿಸಲು ಉಪಯೋಗಿಸುತ್ತಿದ್ದರು. ಅಮಲೇರಿಸಲು, ಮತ್ತುಂಟುಮಾಡಲು, ನೋವನ್ನು ಶಮನ ಮಾಡಲು ಔಷಧಿಗಳು ಗೊತ್ತಿದ್ದವು. ಶಸ್ತ್ರಕ್ರಿಯೆ ಮಾಡುವಾಗ ನೋವಾಗದಂತೆ ಉಮ್ಮತ್ತಿ ಜಾತಿಯ ಔಷಧಗಳನ್ನು ಉಪಯೋಗಿಸುತ್ತಿದ್ದರು. ಅವರಲ್ಲಿ ಔಷಧ ಗೊತ್ತಿರುವ ಗೋಪ್ಯವಾದ ಸಂಘಗಳೂ ಇದ್ದವು. ಕೀಲುವಾತಕ್ಕೆ ಔಷಧ ಕೊಡುವ ಬದಲು ಬೆವರು ಸುರಿವಂತೆ ಸ್ನಾನ ಮಾಡಿಸುತ್ತಿದ್ದರು. ಹಾವು ಕಚ್ಚಿದರೆ ತಕ್ಕ ಔಷಧ ಗೊತ್ತಿತ್ತು. ಕಚ್ಚಿದ ಜಾಗವನ್ನು ಕತ್ತರಿಸಿ ರಕ್ತ ಹೀರುವುದೂ ತಿಳಿದಿತ್ತು. ಸೋಂಕು ತಡೆವ, ವಿಷದಿಂದ ರಕ್ಷಿಸುವ ಔಷಧಗಳು ರೂಢಿಯಲ್ಲಿದ್ದವು. ಮೂಳೆ ಮುರಿದರೆ, ಗಾಯಗಳಾದರೆ ಶಸ್ತ್ರಕ್ರಿಯೆ ಮಾಡುತ್ತಿದ್ದರು. ರಕ್ತ ಸುರಿತವನ್ನು ನಿಲ್ಲಿಸಲು ಚುಟಕಿ ಹಾಕುತ್ತಿದ್ದರು. ಕೆಲವರು ರಕ್ತ ಸುರಿವ ಜಾಗಕ್ಕೆ ಪಕ್ಷಿಗಳ ರೆಕ್ಕೆಗಳನ್ನು ತುಂಬಿ ರಕ್ತಸ್ರಾವ ನಿಲ್ಲಿಸುತ್ತಿದ್ದರು. ದೊಡ್ಡ ದೊಡ್ಡ ಗಾಯಗಳನ್ನು ದಾರದಿಂದ ಹೊಲಿದು ಸರಿಪಡಿಸುತ್ತಿದ್ದರು. ಬೆರಳನ್ನು ಕತ್ತರಿಸಿ ಹಾಕುತ್ತಿದ್ದರು. ತಲೆಬುರುಡೆಯನ್ನು ಬೈರಿಗೆಯಿಂದ ಕೊರೆಯುತ್ತಿದ್ದರು.

ಪುರಾತನ ದಕ್ಷಿಣ ಅಮೆರಿಕನ್ನರ ನಾಗರಿಕತೆ

ಉತ್ತರ ಅಮೆರಿಕನ್ನರ ನಾಗರಿಕತೆ ಹೀಗಿದ್ದಾಗ ದಕ್ಷಿಣ ಅಮೆರಿಕದ ನಾಗರಿಕತೆ ಇನ್ನೂ ಮುಂದುವರೆದಿತ್ತು. ಮಾಯ, ಅಜ್ಟೆಕ್ ಮತ್ತು ಇಂಕ ಎಂಬ ಮೂರು ವಂಶಗಳು ದಕ್ಷಿಣ ಅಮೆರಿಕದಲ್ಲಿ ಬಾಳಿ ಬದುಕಿದ್ದವು. ಅವು ಎಷ್ಟು ಉತ್ಕೃಷ್ಟವಾದ ನಾಗರಿಕತೆಯನ್ನು ಹೊಂದಿದ್ದವೋ ಅಷ್ಟೇ ದೈವಭಾವನೆಯನ್ನೂ ಹೊಂದಿದ್ದವು. ಮಾಯ ಚಕ್ರಾಧಿಪತ್ಯ ಸುಮಾರು ೩೦೦ ರಲ್ಲಿ ಆರಂಭವಾಗಿ ೯೦೦ ರಲ್ಲಿ ಬಹಳ ಏಳಿಗೆಯಲ್ಲಿತ್ತು. ಸ್ವಲ್ಪ ಕಾಲ ಕ್ಷೀಣವಾಗಿದ್ದು ೧೧೦೦ರಲ್ಲಿ ಪುನರ್ಜನ್ಮ ತಾಳಿ ೩೦೦ ವರ್ಷಗಳನಂತರ ಪುನಃ ನಾಶವಾಯಿತು. ಅನಂತರ, ಅಜ್ಟೆಕ್ ಆಧಿಪತ್ಯ ಬಂದಿತು. ಇದಾದನಂತರ ಸ್ಪೈಯಿನ್ ದೇಶದವರು ಮುತ್ತಿಗೆ ಹಾಕಿ ದಕ್ಷಿಣ ಅಮೆರಿಕವನ್ನು ವಶಪಡಿಸಿಕೊಂಡರು. ಮಾಯ ಜನರು ಚಿತ್ರಲಿಪಿಯಲ್ಲಿ ಬರೆಯುತ್ತಿದ್ದರು. ಅಜ್ಟೆಕ್ ಜನರು ಭಾವಲಿಪಿ ಬಳಸುತ್ತಿದ್ದರು. ಈ ಲಿಪಿಗಳು ಕಿರಿಗ್ವ, ಕೊಪಾನ್ ಮತ್ತು ಪ್ಯಾಲೆಂಕ್ಯುಗಳಲ್ಲಿರುವ ಕಲ್ಲಿನ ಸ್ಮಾರಕ ಸ್ಥಂಭಗಳ ಮೇಲೆ ಕೆತ್ತಿರುವುದು ಈಗಲೂ ಕಾಣುತ್ತಿವೆ. ಬೂತಾಳೆ ನಾರಿನಿಂದ ಮಾಡಿದ ಕಾಗದದಲ್ಲಿ ಅನೇಕ ಪುಸ್ತಕಗಳನ್ನು ಬರೆದಿದ್ದರು. ಸ್ಪೈಯಿನ್ ವಶಪಡಿಸಿಕೊಂಡ ಮೇಲೆ, ಸ್ಪೈಯಿನಿನ ಪಾದ್ರಿ ಡೀಗೋ ಡಿ ಲಾಂಡ ಮೆಕ್ಸಿಕೊ ತಲುಪಿದಾಗ ಈ ಪುಸ್ತಕಗಳನ್ನು ನೋಡಿ ಪಿಶಾಚಿಗಳ ಕೆಲಸವೆಂದು ನಂಬಿ ಅವನ್ನೆಲ್ಲಾ ಹಾಳುಮಾಡಬೇಕೆಂದು ಆಜ್ಞೆ ಮಾಡಿದನು. ಇದರ ಫಲವಾಗಿ ಎಲ್ಲಾ ಬರಹಗಳು ನಷ್ಟವಾಗಿ ಕೇವಲ ಮೂರು ಮಾತ್ರ ಉಳಿದವು. ೧ ಡ್ರೆಸ್ಡೆನ್

ಸಂಪುಟಕ ೨) ಪ್ಯಾರಿಸ್ಸಿನ ಸೀರೆಜ್ ಸಂಪುಟಕ ೩. ಸ್ಪೆಯಿನಿನ ಟ್ರೊ ಕಾರ್ಟೆಸಿಯಾನೊ. ಇವುಗಳಲ್ಲಿ ಪಂಚಾಂಗ ಮತ್ತು ಮತಧರ್ಮಗಳ ವಿಷಯ ಬರೆದಿದೆ.

ಅಜ್ಟೆಕ್ ನಾಗರಿಕತೆಯ ಬರವಣಿಗೆಗಳೆಲ್ಲಾ ೧೫೨೧ರಲ್ಲಿ ಸ್ಪೆಯಿನಿನ ಮುಂದಾಳಾದ ಕಾರ್ಟೆಜ್‌ನ ಕೈಗೆ ಸಿಕ್ಕಿಬಿದ್ದವು. ಹಾಳಾದವನ್ನು ಬಿಟ್ಟು ಉಳಿದವಲ್ಲಿ ಅಜ್ಟೆಕ್ ಜನರ ಚರಿತ್ರೆ, ನಾಗರಿಕತೆ, ಮತ, ವಿಜ್ಞಾನ ಶಾಸ್ತ್ರ, ವೈದ್ಯಶಾಸ್ತ್ರ ಇವನ್ನೆಲ್ಲ ಬರೆದಿದೆ. ಇದರ ಪ್ರಕಾರ ವೈದ್ಯಶಾಸ್ತ್ರ ದೇವತೆಯ ದಯೆಯಿಲ್ಲದ ಶಿಕ್ಷೆಯೆಂದು ಅವರ ಭಾವನೆಯಾಗಿತ್ತು. ವೈದ್ಯಶಾಸ್ತ್ರ ಅವರ ಮತಧರ್ಮದ ವಿಚಾರವೇ ಆಗಿದ್ದರೂ, ನೈರ್ಮಲ್ಯ, ತೇವ ಕೂಡಿದ ವಾಯುಗುಣ, ಬಿರುಗಾಳಿ, ಉಷ್ಣ, ಶೀತ ಮತ್ತು ಹತೋಟಿಯಲ್ಲದ ಕುಡಿತ ಮತ್ತು ಊಟಗಳಿಗೆ ಸಂಬಂಧಿಸಿದೆಯೆಂದೂ ತಿಳಿದಿದ್ದರು. ರೋಗ ಗುಣವಾಗಬೇಕಾದರೆ, ದೇವರ ಸಹಾಯ ಬೇಕೆಂದೂ ನಂಬಿದ್ದರು. ಆದ್ದರಿಂದ, ಔಷಧಗಳಿಗೆ ದೇವರ ಹೆಸರನ್ನೇ ಇಟ್ಟಿದ್ದರು. ಮಾಟ, ತಂತ್ರ, ಮಂತ್ರಗಳೂ ಅದರಲ್ಲಿದ್ದವು.

ಅಜ್ಟೆಕ್ ವೈದ್ಯಶಾಸ್ತ್ರ

ಸ್ಪೆಯಿನ್ ಮುತ್ತಿಗೆ ಹಾಕಿದಾಗ, ಅಜ್ಟೆಕ್ ವೈದ್ಯರಲ್ಲಿ ಮಾಟಗಾರರೂ ಇದ್ದರು. ಮಾಟಗಾರರು ಮಂತ್ರತಂತ್ರಗಳನ್ನು ಉಪಯೋಗಿಸಿ ರೋಗ ಗುಣಪಡಿಸುವುದಲ್ಲದೆ ಮನುಷ್ಯನ ಮತ್ತು ಜನಾಂಗದ ಭವಿಷ್ಯವನ್ನು ಸಹ ನುಡಿಯುತ್ತಿದ್ದರು. ಅವರಲ್ಲಿ ಒಂದು ಗುಂಪಿನವರು ಜೋತಿಷ್ಯ ತಿಳಿವಿದ್ದವರು.ಪಂಚಾಂಗದ ಮತ್ತು ಗ್ರಹಗಳ ಸಹಾಯದಿಂದ ಭವಿಷ್ಯ ನುಡಿಯುತ್ತಿದ್ದರು.

ಸ್ಪೆಯಿನಿನ ಕಾದಾಳುಗಳು ಮೆಕ್ಸಿಕೊ ಹಿಡಿದಾಗ,ಅಜ್ಟೆಕ್ ಜನರ ಔಷಧವಸ್ತು ಶಾಸ್ತ್ರದ ಓಲೆಯನ್ನು ನೋಡಿ ಬಹಳ ಆಶ್ಚರ್ಯಪಟ್ಟರು. ಫ್ರಾನ್ಸಿಸ್ಕೊ ಹರ್ನಾಂಡಿಸ್ ೩೦೦೦ ಔಷಧಗಳನ್ನು ರೋಗ ಗುಣಪಡಿಸುವುದಕ್ಕೆ ಉಪಯೋಗಿಸುತ್ತಿದ್ದನ್ನು ಕಣ್ಣಾರ ನೋಡಿದ್ದನು. ಇವುಗಳನ್ನೊಳಗೊಂಡ ಒಂದು ದೊಡ್ಡ ಗ್ರಂಥ ಕೊಡೆಕ್ಸ್ ಬಾರ್ಬೆರಿನಿ ಈಗಲೂ ವ್ಯಾಟಿಕನ್ ಪುಸ್ತಕ ಭಂಡಾರದಲ್ಲಿದೆ. ಇದನ್ನು ಬರೆದವನು ಮಾರ್ಟಿನಸ್ ಡಿ ಲ ಕ್ರೂಸ್. ಇವನು ಒಬ್ಬ ಸ್ಥಳೀಯ ವೈದ್ಯ. ಆದರೆ ಇದನ್ನು ಲ್ಯಾಟಿನ್ ಭಾಷೆಗೆ ೧೫೫೨ರಲ್ಲಿ ಭಾಷಾಂತರ ಮಾಡಿದವನು ಜೊನೆಸ್ ಬೇಡಿಯೇನೆಸ್. ವ್ಯಾಟಿಕನ್ ಪುಸ್ತಕ ಭಂಡಾರದಲ್ಲಿ ಸಿಕ್ಕಿದ್ದು ೧೯೨೯ರಲ್ಲಿ. ಇದರ ನಕಲು ಜಾನ್ ಹಾಪ್‌ಕಿನ್ಸ್ ಮುದ್ರಣಾಲಯದಲ್ಲಿ ೧೯೪೦ರಲ್ಲಿ ಪ್ರಕಟವಾಯಿತು. ಬೇಡಿಯೇನಸ್ಸಿನ ಹಸ್ತಪ್ರತಿ ಸ್ಪೆಯಿನರ ಪ್ರಭಾವದಿಂದ ಅಪವಿತ್ರವಾಗಲಿಲ್ಲ.

ಔಷಧವಸ್ತುಶಾಸ್ತ್ರದಲ್ಲಿ, ಪ್ರಾಣಿ, ಸಸ್ಯ, ಕಲ್ಲು, ಮಣ್ಣುಗಳಿಂದ ತಯಾರಾದ ಔಷಧಗಳಿದ್ದುವು. ಅವು ಬಳಕೆಯಲ್ಲೂ ಇದ್ದವು. ಪ್ರಾಣಿಗಳ ಕೊಂಬು, ರಕ್ತ,

ಪಿತ್ತರಸ, ಮಿದುಳುಗಳನ್ನೂ ಉಪಯೋಗಿಸುತ್ತಿದ್ದರು. ಚೀನ, ಭಾರತ, ಈಜಿಪ್ಟ್, ಪರ್ಷಿಯ ಮತ್ತು ಯೂರೋಪಿನಲ್ಲಿ ಉಪಯೋಗಿಸುತ್ತಿದ್ದಹಾಗೆ ಇವರು ಕೂಡ ಅನ್ನ ಕೋಶ, ಕರುಳು, ಪಿತ್ತಕೋಶ, ಮೂತ್ರಪಿಂಡ, ಮೂತ್ರಕೋಶ ಮುಂತಾದುವುಗಳಲ್ಲಿ ಬೆಳೆದ, ವಿಷಮುರಿಯೆಂದು ಹೆಸರು ಪಡೆದಿದ್ದ ಪದಾರ್ಥಗಳನ್ನು (ಗೋರೋಜನ) ರೋಗ ಗುಣಪಡಿಸಲು ಉಪಯೋಗಿಸುತ್ತಿದ್ದರು. ಅಪಾರದರ್ಶಕವಾದ ಬೆಣಚುಕಲ್ಲನ್ನು ರಕ್ತ ಸ್ರಾವ ನಿಲ್ಲಿಸಲೂ, ಹೊಟ್ಟೆ ನುಲಿತ ಸುಧಾರಿಸಲೂ ಉಪಯೋಗಿಸುತ್ತಿದ್ದರು. ಕಾವಿ ಕಲ್ಲು, ಮುತ್ತಿನ ಚಿಪ್ಪು, ಉಪ್ಪು, ಕಡ್ಡುಪ್ಪು, ಪಟಿಕ, ಶಿಲಾರಾಳ, ಚಿನ್ನ ಇತ್ಯಾದಿ ಗಳೆಲ್ಲವೂ ಬಳಕೆಯಲ್ಲಿದ್ದವು. ಎಲ್ಲಕ್ಕಿಂತ ಮಿಗಿಲಾಗಿ ಸಸ್ಯವರ್ಗದ ಔಷಧಗಳು ಹೆಚ್ಚು ಬಳಕೆಯಲ್ಲಿದ್ದವು. ಸ್ಪೆಯಿನ್ ದೇಶದ ಜಯಶಾಲಿಗಳು ಯಥೇಚ್ಛವಾಗಿದ್ದ ಈ ಔಷಧ ಗ್ರಂಥವನ್ನು ಓದಿ ಮೆಚ್ಚಿದ್ದರಲ್ಲದೆ, ಆಶ್ಚರ್ಯವನ್ನು ತೋರ್ಪಡಿಸಿದ್ದರು.

ಬ್ಯಾಡಿಯೇನಸ್ಸಿನ ಹಸ್ತಪ್ರತಿಯಲ್ಲಿ ೧೦೧ ರೋಗಗಳ ಔಷಧಗಳನ್ನೊಳಗೊಂಡ ೧೩ ಅಧ್ಯಾಯಗಳಿದ್ದವು. ತಲೆಯಿಂದ ಕಾಲಿನ ತನಕ ಬರುವ ರೋಗಗಳ ಔಷಧ ಗಳನ್ನೆಲ್ಲಾ ತಿಳಿಸಿತ್ತು. ಹಸ್ತಪ್ರತಿಯಲ್ಲಿ ೧೮೪ ಸಸ್ಯಗಳ ಚಿತ್ರಗಳಿದ್ದವು. ಮತ್ತನ್ನು ಉಂಟುಮಾಡುವ ಹಾಗೂ ನೋವು ಹರಿಸುವ ಔಷಧಗಳನ್ನು ಮುರಿದ ಮೂಳೆ ಕೂಡಿಸುವಾಗ, ಶಸ್ತ್ರಕ್ರಿಯೆ ಮಾಡುವಾಗ ಉಪಯೋಗಿಸುತ್ತಿದ್ದರು. ಉಮ್ಮತ್ತಿ ಜಾತಿಯ ಪಟ್ಟುಗಳು ಮುಖ್ಯವಾಗಿದ್ದವು. ಹೊಗೆಸೊಪ್ಪನ್ನು ನಿರುತ್ಸಾಹ ಗೊಳಿಸಲು ಉಪಯೋಗಿಸುತ್ತಿದ್ದರು. ಜಾಲಪ್, ಕಸ್ಕಾರ ಮಲಬದ್ಧತೆಯನ್ನು ಸರಿಪಡಿಸಲು ಬಳಸುತ್ತಿದ್ದರು. ಕೊಪಾಲ್ ರಾಳದ ಎಣ್ಣೆಯ ಹಬೆಯನ್ನು ಅಪಸ್ಮಾರ ಕ್ಕಾಗಿ ಉಪಯೋಗಿಸುತ್ತಿದ್ದರು. ಅದೇ ಎಣ್ಣೆಯ ಹಬೆಯನ್ನು ಮಿಂಚಿನ ಹೊಡೆತಕ್ಕೂ, ದುರ್ವಾಸನೆ ತಗ್ಗಿಸುವುದಕ್ಕೂ ಬಳಸುತ್ತಿದ್ದರು. ಹಕ್ಕಿಗಳ ರೆಕ್ಕೆ, ಕೂದಲು ಮತ್ತು ಚರ್ಮ ಸುಡುವುದರಿಂದ ಬರುವ ದುರ್ವಾಸನೆಯನ್ನೂ ರೋಗ ಓಡಿಸಲು ಉಪಯೋಗಿ ಸುತ್ತಿದ್ದರು. ಕುರು, ಬೋಳುತಲೆ, ಕಜ್ಜಿ, ಹತ್ತಗಣ್ಣು, ಹಲ್ಲುನೋವು, ಎದೆನೋವು, ಕ್ಷಯ, ಹೃದ್ರೋಗ, ಆಮಶಂಕೆ, ಉರಿಮೂತ್ರ, ಕಾಲು ಹುಣ್ಣು, ಮೊಲ್ಲಾಗರ, ಹುಳು, ಹೇನುಗಳನ್ನೆಲ್ಲಾ ಗುಣಪಡಿಸುತ್ತಿದ್ದರು.

ಅಜ್ಟೆಕ್ ಶಸ್ತ್ರವೈದ್ಯ

ಅಜ್ಟೆಕ್ ಜನರ ಶಸ್ತ್ರವೈದ್ಯ ಕೂಡ ಬಹಳ ಮುಂದುವರೆದಿತ್ತು. ಅಜ್ಟೆಕ್ ವೈದ್ಯರು ದೇಹದ ಹೊರ ಮತ್ತು ಒಳ ಅಂಗಾಂಗಗಳಿಗೆಲ್ಲಾ ಹೆಸರು ಕೊಟ್ಟಿದ್ದರು. ಮೆತುಗಾರೆ, ಗೋಂದುಗಳಿಂದ ಕೂಡಿದ ದಬ್ಬೆಗಳನ್ನು ಮುರಿದ ಮೂಳೆಗಳನ್ನು ಸರಿ ಪಡಿಸಲು ಉಪಯೋಗಿಸುತ್ತಿದ್ದರು. ಕೆಲವು ವೇಳೆ ಮೂಳೆ ಚೂರುಗಳನ್ನೂ ಉಪ ಯೋಗಿಸುತ್ತಿದ್ದರು. ತಲೆ ಒಳಗಿನ ರೋಗ ಪರಿಹರಿಸಲು ಬೈರಿಗೆಯಿಂದ ತಲೆಬುರುಡೆ

ಕೊರೆಯುತ್ತಿದ್ದರು. ಕೊಳಕಾದ ಗಾಯಗಳನ್ನು ಔಷಧ ಬೆರೆಸಿದ ನೀರಿನಿಂದ ತೊಳೆಯುತ್ತಿದ್ದರು. ಗಾಯಗಳನ್ನು ದಾರದಿಂದ ಹೊಲೆಯುತ್ತಿದ್ದರು. ಇನ್ನೂ ಅನೇಕ ಶಸ್ತ್ರಕ್ರಿಯೆಗಳು ಬಳಕೆಯಲ್ಲಿದ್ದವು.

ಅಜ್ಟೆಕ್ ನಾಗರಿಕತೆ

ಈ ಮತ, ನಾಗರಿಕತೆ, ವಿಜ್ಞಾನ ಮತ್ತು ವೈದ್ಯಶಾಸ್ತ್ರ ಮಾಯ ಮತ್ತು ಅಜ್ಟೆಕ್ ವಂಶಗಳಲ್ಲಿದ್ದ ಹಾಗೆ ಇಂಕ ವಂಶದಲ್ಲೂ ಇದ್ದವು. ಅನೇಕ ಆಂಡಿಯನ್ ಸಂಗಡಗಳನ್ನು ಇಂಕ ಜನರು ಆಳುತ್ತಿದ್ದರು. ಇಂಕ ದೊರೆಯನ್ನು ದೇವರೆಂದು ನಂಬಿದ್ದರು. ೧೦೦೦ ವರ್ಷಗಳ ಹಿಂದೆ ಮಾನ್ಕೊ ಕಾಪಕ್ ಎಂಬ ಇಂಕ ರಾಜಕುಮಾರ, ಕುಸ್ಕೊ ಎಂಬ ಸೂರ್ಯಪಟ್ಟಣವನ್ನು (ಚಿನ್ನದ ಪಟ್ಟಣವೆಂದೂ ಹೆಸರಿತ್ತು) ಬೆಟ್ಟ ಕಣಿವೆಗಳ ನಡುವೆ ಕಟ್ಟಿ, ಮಾಯಾ ವಂಶಕ್ಕೆ ಸಮನಾದ ಉತ್ಕೃಷ್ಟ ನಾಗರಿಕತೆಯನ್ನು ಬೆಳೆಸಿದ್ದನು. ಈ ನಾಗರಿಕತೆ ೫೦೦ ವರ್ಷ ಚೆನ್ನಾಗಿ ಬೆಳೆದು, ೧೫೩೨–೧೫೪೦ರಲ್ಲಿ ಸ್ಪೈಯಿನ್ ಮುತ್ತಿಗೆ ಹಾಕಿದಮೇಲೆ ಪಿಸಾರೊನಿಂದ ನಾಶವಾಯಿತು. ಪ್ರಿಸ್ಕಾಟ್ ಹೇಳಿರುವಂತೆ ಇಂಕ ಜನರಲ್ಲಿ ದುರಾಸೆ, ಮನಸ್ತಾಪ, ಅಸೂಯೆ ಇರಲಿಲ್ಲ. ಎಲ್ಲರೂ ಒಂದೇ ಸಮನೆಂದು ನಂಬಿದ್ದರು. ಕುರುಡರು, ಕುಂಟರು, ಬಡವರು, ವಯಸ್ಸಾದವರು ಎಲ್ಲರೂ ಸರ್ಕಾರದ ಖರ್ಚಿನಲ್ಲಿ ಪಾಲನೆಯಲ್ಲಿದ್ದರು. ಜನರಲ್ಲಿ ಶಾಂತಿ ಉಂಟುಮಾಡಬೇಕೆಂಬುದೇ ರಾಜರ ಗುರಿಯಾಗಿತ್ತು. ಆದರೆ ಇಂಕ ವಂಶದಲ್ಲಿ, ಮಾಯ ಮತ್ತು ಅಜ್ಟೆಕ್ ವಂಶದವರ ಹಾಗೆ ಬರೆಯಲು ಲಿಪಿ ಇರಲಿಲ್ಲ. ಚಿತ್ರಗಳು ಕೂಡ ಇರಲಿಲ್ಲ. ಆದರೂ ಪೆರೂಲಿಯನರು ಬಣ್ಣಬಣ್ಣದ ದಾರದಲ್ಲಿ ತರಹಾವರಿ ಗಂಟುಗಳನ್ನು ಹಾಕಿ ಅವುಗಳಿಂದ ಬೇರೆ ಬೇರೆ ಭಾವಗಳನ್ನು ವ್ಯಕ್ತಪಡಿಸುತ್ತಿದ್ದರು.

ಪೆರೂಲಿಯನರು

ಪುರಾತನ ಪೆರೂಲಿಯನರು ಮೊದಮೊದಲು ಮಳೆ, ಗುಡುಗು, ಮಿಂಚುಗಳನ್ನು ದೇವರೆಂದು ಪೂಜಿಸುತ್ತಿದ್ದರು. ಆಮೇಲೆ ಸೂರ್ಯನನ್ನು ಪೂಜಿಸಲು ಆರಂಭಿಸಿದರು. ಜನರೆಲ್ಲಾ ಚಿರಂಜೀವಿಗಳೆಂದು ನಂಬಿದ್ದರಿಂದ, ಈಜಿಪ್ಟಿನವರ ಹಾಗೆ ಹೆಣವನ್ನು ರಕ್ಷಿಸುತ್ತಿದ್ದರು. ಈಜಿಪ್ಟಿನ ಮರಳುಭೂಮಿ ಹೆಣ ರಕ್ಷಿಸಲು ಹೇಗೆ ಸಹಾಯ ಮಾಡುತ್ತಿತ್ತೋ ಹಾಗೆಯೇ ಪೆರು ದೇಶದ ವಾಯುಗುಣ ಸಹಾಯ ಮಾಡುತ್ತಿತ್ತು. ಕುಸ್ಕೊ ನಗರದ ಸೂರ್ಯ ದೇವಾಲಯದಲ್ಲಿಟ್ಟಿದ್ದ ರಕ್ಷಿತ ಶವಗಳು ಸ್ಪೈಯಿನ್ ದಾಳಿಗಾರರಿಗೆ ಸಿಕ್ಕಿದ್ದವು. ಈಜಿಪ್ಟಿನ ಶವಗಳನ್ನು ಮಲಗಿಸಿ ರಕ್ಷಿಸಿದ್ದರೆ, ಪೆರು ಶವಗಳನ್ನು ಕೂಡಿಸಿ ರಕ್ಷಿಸುತ್ತಿದ್ದರು. ರೋಗವನ್ನು ದೈವಸಂಕಲ್ಪ, ದೈವಶಿಕ್ಷೆಯೆಂದು ನಂಬಿದ್ದರು. ಆದ್ದರಿಂದ ದೇವರ ಸ್ತೋತ್ರ, ಉಪವಾಸಗಳಿಂದ ರೋಗ ಗುಣಪಡಿಸಿಕೊಳ್ಳುತ್ತಿದ್ದರು. ಇದಕ್ಕೂ ಜಗ್ಗದಿದ್ದರೆ ಮಾಯಮಾಟಗಳಿಂದ ರೋಗವನ್ನು ಹೋಗಲಾಡಿಸುತ್ತಿದ್ದರು. ಇದರಲ್ಲಿ ಪೂಜಾರಿಗಳ ಪಾತ್ರ ಹೆಚ್ಚಾಗಿತ್ತು.

ಆದರೆ ಪೆರು ದೇಶದ ವೈದ್ಯರೂ, ಶ್ರೀಮಂತರೂ ಓದುತ್ತಿದ್ದ ಕುಸ್ಕೊ ನಗರದ ಪಾಠ ಶಾಲೆಗಳಲ್ಲಿ ವ್ಯಾಸಂಗ ಮಾಡಿ ವಿದ್ಯಾವಂತರಾಗಿದ್ದರು. ಲಿಪಿ ಇಲ್ಲದಿದ್ದುದರಿಂದ ಅವರ ಬರಹಗಳು ಯಾವುದೂ ಇರಲಿಲ್ಲ. ಆದರೂ ಅವರ ಔಷಧಗಳಾದ ಕ್ವಿನೀನ್ ಮತ್ತು ಕೋಕೊ ಈಗಲೂ ಬಳಕೆಯಲ್ಲಿವೆ. ಶಸ್ತ್ರವೈದ್ಯರು ಸಿರಗಳಿಂದ ರಕ್ತವನ್ನು ಹೊರಗೆ ಬಿಡುತ್ತಿದ್ದರು. ಮುರಿದ ಮೂಳೆಗಳನ್ನು ಸರಿಪಡಿಸುತ್ತಿದ್ದರು. ತಲೆಬುರುಡೆ ಕೊರೆಯುತ್ತಿದ್ದರು.

ಪ್ರಾಚೀನ ಶೋಧನೆಯ ಅವಶೇಷಗಳಿಂದಲೂ, ರಕ್ಷಿತ ಶವಗಳಿಂದಲೂ, ಪುರಾತನ ಮಣ್ಣಿನ ಪಾತ್ರೆಗಳ ಮೇಲಿರುವ ಗುರುತುಗಳಿಂದಲೂ ಪೆರುವಿಯನರಲ್ಲಿದ್ದ ರೋಗಗಳ ವಿಚಾರ ತಿಳಿದುಬಂದಿದೆ. ಮೂಗಿನ ಮೇಲ್ಭಾಗದಲ್ಲಿ ಏಳುತ್ತಿದ್ದ ಗೌಂಡ ರೋಗ ಆ ಜನರಲ್ಲಿ ಬಹಳ ಹರಡಿತ್ತು. ವೆರುಗ ಪೆರುವಿಯಾನ ರೋಗ ಅನೇಕ ಜನರಲ್ಲಿತ್ತು. ಸ್ಪೈಯಿನಿನ ಸೈನಿಕರು ದಂಡೆತ್ತಿ ಬಂದಾಗ ಅನೇಕರು ಈ ರೋಗದಿಂದ ಸತ್ತರು. ಆಗ ಚಾಲ್ತಿಯಲ್ಲಿದ್ದ ಉಟ ಎಂಬ ಚರ್ಮದ ಗಾಯ ಲೀಷ್ಮನ್‌ಬೇನೆಯ ಒಂದು ರೂಪವೆಂದು1913 ರಲ್ಲಿ ನಡೆಸಿದ ಹರ್ವಾರ್ಡ್ ವಿಜ್ಞಾನ ತಂಡದಿಂದ ಗೊತ್ತಾಗಿದೆ. ತೂತು ಕೊರೆದಿರುವ ಅನೇಕ ತಲೆಬುರುಡೆಗಳು ಸಿಕ್ಕಿರುವ ಆಧಾರದ ಮೇಲೆ, ತಲೆ



ಪೆರುವಿಯದ ತಲೆ ಬುರುಡೆಯ ಕೊರೆತ

ನೋವು, ಅಪಸ್ಮಾರ, ತಗ್ಗಿದ ತಲೆ ಮೂಳೆಮುರಿತ ಮತ್ತು ವ್ಯಾಕುಲತೆಗಳನ್ನು ಗುಣಪಡಿಸಲು ಆಗಿನ ಶಸ್ತ್ರವೈದ್ಯರು ಬೈರಿಗೆಯಿಂದ ತಲೆಬುರುಡೆಯನ್ನು ಕೊರೆಯುತ್ತಿದ್ದರೆಂದು ಹೇಳಲಾಗಿದೆ.



ಪೆರುದೇಶದಲ್ಲಿ ತಲೆಬುರುಡೆಯನ್ನು ಕೊರೆಯುತ್ತಿರುವುದು

ಉತ್ತರ ಅಮೆರಿಕ, ಮೆಕ್ಸಿಕೊ, ಮಧ್ಯ ಮತ್ತು ದಕ್ಷಿಣ ಅಮೆರಿಕಗಳ ಆದಿ ಜನರೆಲ್ಲರೂ ಒಂದೇ ರೀತಿಯ ಮತಪದ್ಧತಿ ಮತ್ತು ನಡೆವಳಿಕೆಗಳನ್ನು ಹೊಂದಿದ್ದರೆಂದು ಊಹಿಸಲಾಗಿದೆ. ಅಲ್ಲದೆ ಇತರ ಪುರಾತನ ನಾಗರಿಕತೆಗೂ ಇವರ ನಾಗರಿಕತೆಗೂ ಅಷ್ಟೇನೂ ವ್ಯತ್ಯಾಸವಿಲ್ಲ. ಪ್ರಪಂಚಕ್ಕೆ ಇವರ ಉತ್ತಮ ಕೊಡುಗೆ ಎಂದರೆ ತಲೆಬುರುಡೆ ಕೊರೆತ ಹಾಗೂ ಔಷಧ ಓಲೆ. ಔಷಧ ಓಲೆಯಂತೂ ಗೊತ್ತಿಲ್ಲದಂತಹ ಯೂರೋಪಿಯನ್ನರಿಗೆ ಔಷಧಗಳನ್ನು ಪರಿಚಯ ಮಾಡಿಕೊಟ್ಟಿದೆ. ಯೂರೋಪಿಯನ್ನರು ಗೆಲ್ಲುವುದಕ್ಕೆ ಮೊದಲು ಉತ್ತರ ಮತ್ತು ದಕ್ಷಿಣ ಅಮೆರಿಕಗಳೆರಡೂ ಬಹಳ ಆರೋಗ್ಯಕರವಾದ ಮತ್ತು ತೃಪ್ತಿಕೊಂದಿದ ದೇಶಗಳೆಂದು ಮೊದಲಿನ ಪರಿಶೋಧಕರೆಲ್ಲಾ ತಿಳಿಸಿದ್ದಾರೆ. ಯೂರೋಪಿಯನ್ನರು ಈ ದೇಶಗಳನ್ನು ಗೆದ್ದ ಮೇಲೆ ಮಲೇರಿಯ, ಸಿಡುಬು, ಹಳದಿ ಜ್ವರಗಳನ್ನು ಅವರ ಜತೆಯಲ್ಲಿಯೇ ತಂದು ಆ ಜನರಿಗೂ ಹಬ್ಬಿಸಿದರು. ಇದರ ಪರಿಣಾಮವಾಗಿ ಈ ರೋಗಗಳಿಂದಲೂ, ಕ್ಷಯ, ಮೇಹರೋಗಗಳಿಂದಲೂ ಅನೇಕ ಸ್ಥಳೀಯ ಜನರಲ್ಲಿ ಸಾವು ನೋವುಗಳುಂಟಾದವು. ಮೇಹರೋಗ ಯೂರೋಪಿನಿಂದ ಅಮೇರಿಕಾಕ್ಕೆ ಬಂತೋ ಅಥವ ಅಮೆರಿಕದಿಂದ ಯೂರೋಪಿಗೆ ಹೋಯಿತೋ ತಿಳಿಯದು. ಕ್ಷಯ ಮಾತ್ರ ಅಮೆರಿಕದಲ್ಲೇ ಇದ್ದಿರಬಹುದು.

೩. ಮೆಸೊಪೊಟೇಮಿಯ

ಚರಿತ್ರಾರ್ಹವಾದ ಯೂಫ್ರೆಟಿಸ್ ಮತ್ತು ಟೈಗ್ರಿಸ್ ನದಿಗಳ ನಡುವೆ ಮೆಸೊಪೊಟೇಮಿಯ ಇದ್ದರೂ ಅದು ಬಾಡಿದ, ಬಂಜರಾದ, ಪಾಳು ಬಿದ್ದ, ರಕ್ಷಣೆ ಇಲ್ಲದ ಪ್ರದೇಶವಾಗಿತ್ತು. ಪ್ರಕೃತಿ ಸೌಂದರ್ಯ ಹೀಗಿದ್ದರೂ ನಾಗರಿಕತೆ ಯಲ್ಲಿ ಮುಂದಿದ್ದುದನ್ನು ನೋಡಿ ಪ್ರಾಜ್ಞರು ಆಶ್ಚರ್ಯಗೊಂಡಿದ್ದಾರೆ. ಈ ಪ್ರದೇಶಕ್ಕೆ ಈಡನ್ನಿನ ತೋಟವೆಂದು ಹೆಸರಿತ್ತು. ಇದರ ಹತ್ತಿರವೇ ಬ್ಯಾಬಿಲಾನ್ ಪಟ್ಟಣ ಇದ್ದು, ಯೂಫ್ರಟೀಸ್ ಹರಿಯುತ್ತಿತ್ತು. ಬ್ಯಾಬಿಲೋನಿಯನ್ನರ ಪ್ರಕಾರ ಈ ಪ್ರದೇಶದಲ್ಲೇ ಹಾವು ಒಬ್ಬ ಹೆಂಗಸಿಗೆ ಸೇಬು ತೋರಿಸಿ ಮೋಹಗೊಳಿಸಿದ್ದು.

ಈ ಪ್ರದೇಶದಲ್ಲಿ ಸುಮಾರು ಕ್ರಿ.ಪೂ. ೩೦೦ವರ್ಷಗಳ ಹಿಂದೆ ಸುಮೇರಿಯನ್ನರೂ ಅಕ್ಕೇಡಿಯನ್ನರೂ ವಾಸವಾಗಿದ್ದರು. ಇವರ ಮೂಲಸ್ಥಾನ ತಿಳಿದಿರಲಿಲ್ಲವಾದರೂ ಇವರಲ್ಲಿ ಬಹಳ ಉತ್ಕೃಷ್ಟವಾದ ನಾಗರಿಕತೆ ಇತ್ತು. ಸುಮೇರಿಯನ್ನರ ಮತಧರ್ಮದ ಪ್ರಕಾರ ೬ ದೊಡ್ಡ ದೇವತೆಗಳೂ ೬೦೦ ಸಣ್ಣ ದೇವತೆಗಳೂ ಇದ್ದವು. ಅಲ್ಲದೆ ವಿವರವಾದ ಪೂಜೆ ವಿಧಾನಗಳನ್ನು ಆಚರಿಸುತ್ತಿದ್ದರು. ಚಿತ್ರ ಲಿಪಿಗಳ ಮೂಲಕ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದರು. ಈ ಚಿತ್ರ ಲಿಪಿಗಳೇ ಮುಂದಿನ ಶ್ಯಾಸಕ ಲಿಪಿಯಾಯಿತು. ಇವರು ದೊಡ್ಡ ಪಟ್ಟಣ ಗಳನ್ನು, ಅರಮನೆಗಳನ್ನು ಕೋಟೆ ಕೊತ್ತಲುಗಳನ್ನು, ನಾಲೆಗಳನ್ನು ಕಟ್ಟಿದ್ದರು. ಇವರ ಪಟ್ಟಣಗಳಲ್ಲಿ ಬಚ್ಚಲು ನೀರನ್ನು, ಊರಿನ ಕೊಚ್ಚೆಯನ್ನು ಚರಂಡಿಗಳ ಮೂಲಕ ಹೊರಗೆ ಸಾಗಿಸುತ್ತಿದ್ದರು.

ಬ್ಯಾಬಿಲಾನ್

ಆದಿಯಲ್ಲಿ, ಯೂಫ್ರೆಟೀಸ್ ನದಿ ದಡದಲ್ಲಿದ್ದ ಕಿಷ್ ಪಟ್ಟಣ, ಸುಮೇರಿಯ ದೊರೆಯ ರಾಜಧಾನಿಯಾಗಿತ್ತು. ಆದರೆ ಕ್ರಿ.ಪೂ. ೩೦೦೦ ವರ್ಷಗಳ ಕಾಲದಲ್ಲಿ ಯೂಫ್ರೆಟಿಸ್ ನದಿ ತನ್ನ ಮಾರ್ಗವನ್ನು ಬದಲಾಯಿಸಿದ್ದರಿಂದ ಹತ್ತಿರವಿದ್ದ ಬ್ಯಾಬಿಲಾನ್ ಮುಖ್ಯ ಪಟ್ಟಣವಾಯಿತು. ೩೦೦೦ ವರ್ಷಗಳು ಈ ಪಟ್ಟಣ ಏಳಿಗೆಯಲ್ಲಿದ್ದುದರಿಂದ ಕ್ರಿ.ಪೂ. ೨೭೫ ರಲ್ಲಿ ನಾಶವಾದರೂ ಈ ಪ್ರದೇಶಕ್ಕೆ ಬ್ಯಾಬಿ ಲೋನಿಯ ಎಂದು ಹೆಸರು ಬಂದಿತು. ನಾಶವಾದ ಕಾಲದಲ್ಲಿ ದಕ್ಷಿಣದಿಂದ ಸಿಮೆಟಿ ಜನರು ಒಬ್ಬೊಬ್ಬರಾಗಿ ಬಂದು ಅಲ್ಲಿ ನೆಲೆಸಿದರು. ಇವರು ಸುಮೇರಿಯನ್ನರ ಮತವನ್ನೇ ಅವಲಂಬಿಸಿದರು. ಸುಮೇರಿಯನ್ ಭಾಷೆ ಕೂಡ ಇವರ ಕಾಲದಲ್ಲಿ

ಬೆಳೆದು ಲ್ಯಾಟಿನ್ ಹೇಗೆ ರೋಮನ್ ಕ್ಯಾಥೊಲಿಕ್ ದೇವಾಲಯಗಳ ಭಾಷೆಯಾಯಿತೋ ಹಾಗೆ, ಸುಮೆರಿಯನ್ ಮತಧರ್ಮ ಭಾಷೆಯಾಯಿತು.

ಅಕ್ಕಡದ ದೊರೆ

ಗುಟ್ಟಾಗಿ ಹುಟ್ಟಿ, ಗುಟ್ಟಾಗಿ ಜೊಂಡಿನಲ್ಲಿ ಕಟ್ಟಿದ ಪೆಟ್ಟಿಗೆಯಲ್ಲಿಟ್ಟು ಯೂಫ್ರೆಟಿಸ್ ನದಿಯಲ್ಲಿ ತೇಲಿಹೋಗಲು ಬಿಟ್ಟ ಮಗು ಬೆಳೆದು ಅಕ್ಕಡದ ದೊರೆಯಾದನು. ಇವನ ರಾಜ್ಯಭಾರದ ಕಾಲದಲ್ಲಿ ಸುಮಾರು ಕ್ರಿ.ಪೂ. ೩೮೦೦ ರಲ್ಲಿ ಸಿರಿಯ, ಪ್ಯಾಲೆಸ್ಟೈನ್ ಮತ್ತು ಉತ್ತರ ಮೆಸೊಪೋಟೇಮಿಯಗಳೆಲ್ಲಾ ಒಟ್ಟಿಗೆ ಬ್ಯಾಬಿಲೋನಿಯನ್ನನ್ನು ಸೇರಿ ಒಂದು ದೊಡ್ಡ ಚಕ್ರಾಧಿಪತ್ಯವಾಯಿತು. ಈ ರಾಜ್ಯಕ್ಕೆ ಬ್ಯಾಬಿಲೋನ್ ರಾಜಧಾನಿಯಾಯಿತು. ಬ್ಯಾಬಿಲೋನಿಯ ವಂಶಸ್ತರು ಸುಮಾರು ೧೫೦೦ ವರ್ಷ ಎಷ್ಟೇ ಕಷ್ಟಗಳಿದ್ದಾಗ್ಯೂ ತಮ್ಮ ರಾಜ್ಯವನ್ನು ಬೆಳೆಸಿ ಕೀರ್ತಿ ಪಡೆದರು. ಇವರ ಕಾಲದಲ್ಲಿ ವ್ಯವಸಾಯ, ವ್ಯಾಪಾರ, ಕಲೆ ಮತ್ತು ವಿಜ್ಞಾನಗಳು ಬೆಳೆದವಲ್ಲದೆ ಗಣಿತಶಾಸ್ತ್ರ, ಜ್ಯೋತಿಷ್ಯಶಾಸ್ತ್ರಗಳಲ್ಲಿ ಜನರು



ಬ್ಯಾಬಿಲೋನಿಯದಲ್ಲಿಯ ವೈದ್ಯ

ಬಹಳ ಪ್ರವೀಣರಾದರು. ಬ್ಯಾಬಿಲೋನಿಯನ್ನಿನ ಜ್ಯೋತಿಷ್ಯಗಾರರು ಕ್ರಿ ಪೂ. ೨೦೦೦ ವರ್ಷಕ್ಕೆ ಮೊದಲೇ ಶುಕ್ರ ಗ್ರಹ ಹುಟ್ಟುವ ಮತ್ತು ಮುಳುಗುವ ಕಾಲಗಳನ್ನು ತಿಳಿದಿದ್ದರು. ಕ್ರಿ. ಪೂ. ೬೦೪-೫೬೨ ರಲ್ಲಿ ಬ್ಯಾಬಿಲೋನಿಯನ್ನರು ಸೂರ್ಯ

ಚಂದ್ರರ ಪಥವನ್ನು, ಗ್ರಹಗಳ ಪಥವನ್ನು ಗ್ರಹಿಸಿದ್ದರಲ್ಲದೆ, ಗ್ರಹಗಳನ್ನು ನಕ್ಷತ್ರಗಳಿಂದ ವ್ಯತ್ಯಾಸ ಮಾಡುವುದನ್ನೂ, ಗ್ರಹಣವಾಗುವುದನ್ನೂ ತಿಳಿದಿದ್ದರು. ಅಲ್ಲದೆ ಸಂಕ್ರಾಂತಿ, ವಿಷುವೃತ್ತಗಳನ್ನು ಲೆಕ್ಕಮಾಡಿ, ಒಂದು ಕೋನಾಂಶವನ್ನು ೬೦ ಮಿನಿಟ್ಟುಗಳಾಗಿಯೂ, ಒಂದು ಮಿನಿಟ್ಟನ್ನು ೬೦ ಸೆಕೆಂಡುಗಳಾಗಿಯೂ ಭಾಗಿಸಿದ್ದರು. ಕಾಲಮಾನವನ್ನು ಅಳೆಯಲು ನೀರ್ಗಡಿಯಾರ, ಛಾಯ ಯಂತ್ರಗಳನ್ನೂ ಕಂಡುಹಿಡಿದಿದ್ದರು. ಇವರಲ್ಲಿ ಖ್ಯಾತಿ ಪಡೆದ ದೊರೆ ಹಮ್ಮುರಬಿ ಕ್ರಿ.ಪೂ. ೨೧೨೩ ರಿಂದ ೨೦೮೩ರ ತನಕ ೪೩ ವರ್ಷ ರಾಜ್ಯವಾಳಿ ನ್ಯಾಯಶಾಸ್ತ್ರವನ್ನು ವಿವರವಾಗಿ ಕ್ರೋಢೀಕರಿಸಿ, ಶಸ್ತ್ರವೈದ್ಯದ ನ್ಯಾಯಸೂತ್ರಗಳನ್ನೂ ನೇಮಿಸಿದ್ದನು.

ಬ್ಯಾಬಿಲೋನಿಗೆ ೩೦೦ ಮೈಲಿ ದಕ್ಷಿಣದಲ್ಲಿ ಅಸ್ಸಿರಿಯನರು ನಿನೆವೆ ಪಟ್ಟಣವನ್ನು ರಾಜಧಾನಿ ಮಾಡಿಕೊಂಡು ತಮ್ಮದೇ ಒಂದು ನಾಗರಿಕತೆಯನ್ನು ಬೆಳೆಸಿದ್ದರು. ಇವರು ಯುದ್ಧದಲ್ಲಿ ಆಸಕ್ತರೂ, ರಸಿಕರೂ ಆಗಿದ್ದರು. ಕ್ರಿ.ಪೂ. ೧೩೦೦ ರಲ್ಲಿ ಬ್ಯಾಬಿಲೋನ್ ಮೇಲೆ ಯುದ್ಧಹೂಡಿ ವಶಪಡಿಸಿಕೊಂಡರು. ಅನಂತರ ಒಂದು ಚಕ್ರಾಧಿಪತ್ಯವನ್ನು ಕಟ್ಟಿದರು. ಇಲ್ಲಿ ಅಶುರ್ಬಾನಿಪಾಲ್ ಕ್ರಿ. ಪೂ. ೬೬೯ ರಿಂದ ೬೨೬ ತನಕ ರಾಜ್ಯವಾಳಿ ಗ್ರೀಕರಿಂದ ಸರ್ದಾನಪಾಲಸ್ ಎಂದು ಕರೆಯಲ್ಪಟ್ಟನು. ಇವನ ಆಳ್ವಿಕೆಯಲ್ಲಿ ಅಸ್ಸೀರಿಯ ಐಶ್ವರ್ಯದಲ್ಲೂ, ಔದಾರ್ಯದಲ್ಲೂ ಮುಂದುವರೆದಿತ್ತು. ಅರಮನೆಗಳು, ದೇವಸ್ಥಾನಗಳು ಕಟ್ಟಲ್ಪಟ್ಟವು. ಇವನು ಸುಮೆರಿಯನ್ನರ ಮತ್ತು ಬ್ಯಾಬಿಲೋನಿಯನ್ನರ ಸಾಹಿತ್ಯ, ಸಂಸ್ಕೃತಿಗಳ ಶಾಸನ ಬರೆಯಿಸಿ, ೩೦,೦೦೦ ಜನರಿದ್ದ ನಿನೆವೆ ರಾಜಧಾನಿಯ ಪುಸ್ತಕ ಭಂಡಾರದಲ್ಲಿ ಇರಿಸಿದನು. ಈ ಶಾಸನಗಳು ೨೫೦೦ ವರ್ಷಗಳ ಮೇಲೆ, ೧೮೪೫ ರಲ್ಲಿ, ಸರ್ ಆಸ್ಟಿನ್ ಹೆನ್ರಿ ಲೆಯಾರ್ಡ್ ಇಂಗ್ಲಿಷ್ ಬರಹಗಾರ ಮತ್ತು ಪ್ರಾಚೀನ ಶೋಧಕನ ಕೈಗೆ ಸಿಕ್ಕಿದವು. ಅವು ಈಗಲೂ ಬ್ರಿಟಿಷ್ ವಸ್ತುಸಂಗ್ರಹಾಲಯದಲ್ಲಿವೆ. ೧೦೦,೦೦೦ ಶಾಸನಗಳಲ್ಲಿ, ೩೦,೦೦೦ ಮಾತ್ರ ಪತ್ತೆ ಆಗಿವೆ. ಅವುಗಳಲ್ಲಿ ೮೦೦ ಮಾತ್ರ ವೈದ್ಯವೃತ್ತಿಗೆ ಸೇರಿದ್ದವು. ಅಶುರ್ಬಾನಿಪಾಲ್ ಸತ್ತ ೧೦ ವರ್ಷದಲ್ಲೇ ಅವನ ರಾಜ್ಯ ನಾಶವಾಗಿ ನೆಬು ಚದ್ರೆಸಾರ್‌ನ ಕೈ ವಶವಾಯಿತು. ಈ ಶಾಸನ ಗ್ರಂಥಗಳನ್ನು ಅನೇಕ ಪ್ರಾಜ್ಞರು ಅರ್ಥಮಾಡಿ ಅವುಗಳಲ್ಲಿ ಅಡಗಿರುವ ಚರಿತ್ರೆ, ಸಂಸ್ಕೃತಿ, ವಿಜ್ಞಾನಗಳನ್ನೂ ಅಭಿವೃದ್ಧಿಗೊಳಿಸಿ ಲೋಕದ ಬೆಳಕಿಗೆ ತಂದರು. ರಾಲಿನ್‌ಸನ್ ೧೨ ವರ್ಷ ಕಷ್ಟಪಟ್ಟು ಕೆಲಸಮಾಡಿ ಕ್ರಿ.ಪೂ. ೫೮೧ರಿಂದ ೪೮೫ ತನಕ ಆಳುತ್ತಿದ್ದ ಪರ್ಷಿಯ ದೊರೆ ಮೊದಲನೇ ಡೇರಿಯಸ್‌ನ ಅಪ್ಪಣೆ ಪ್ರಕಾರ ಕೆತ್ತಿದ್ದ ಗ್ರಂಥಗಳನ್ನು ಅರ್ಥ ಮಾಡಿರುವವರಲ್ಲಿ ಒಬ್ಬನಾಗಿದ್ದನು.

ಹಮ್ಮುರಬಿ ವೈದ್ಯನೀತಿ

ಜನರು ತಾವು ನೋಡಿದ ಅಥವಾ ತಮ್ಮ ಅನುಭವದ ಆಧಾರದ ಮೇಲೆ ರೋಗಿಗಳ ಮನೆಗೆ ಹೋಗಿ ಔಷಧಗಳ ವಿಚಾರದಲ್ಲಿ ಬುದ್ಧಿವಾದ ಹೇಳುತ್ತಿದ್ದರೆಂಬ ಬ್ಯಾಬಿಲೋನಿಯನ್ನರ ನಡವಳಿಕೆಯನ್ನು ಚರ್ಚಿಸುತ್ತ ಹಿರೊಡೊಟಸ್ ತಿಳಿಸಿದ್ದಾನೆ. ಜನರು ವೈದ್ಯರ ಸಹಾಯ ತೆಗೆದುಕೊಳ್ಳುತ್ತಿರಲಿಲ್ಲವೆಂದೂ ತಿಳಿಸಿದ್ದಾನೆ. ಆದರೆ ಇದು ಶಾಸನದಲ್ಲಿ ಬರೆದಿರುವುದಕ್ಕೆ ವಿರುದ್ಧ. ೧೯೦೨ರಲ್ಲಿ ಸುಸ ಹತ್ತಿರ ಸಿಕ್ಕಿದ ಸ್ಮಾರಕ ಸ್ಥಂಬದ ಮೇಲೆ ಹಮ್ಮುರಬಿ ಕ್ರಿ.ಪೂ.೧೯೫೦ರಲ್ಲಿ ಕೆತ್ತಿಸಿರುವ ನ್ಯಾಯಸೂತ್ರದಲ್ಲಿ 'ವೈದ್ಯ'ಎಂಬ ಪದವಿರುವುದಲ್ಲದೆ,ಶಸ್ತ್ರವೈದ್ಯನಿಗೆ ಕೊಡತಕ್ಕ ರುಸುವನ್ನೂ ಶಸ್ತ್ರಕ್ರಿಯೆ ಯೇನಾದರೂ ತಪ್ಪಾದರೆ ಅದಕ್ಕೆ ತಕ್ಕ ಶಿಕ್ಷೆ ಕೊಡುವುದನ್ನೂ ಬರೆದಿದ್ದವು. ಈ



ಬ್ಯಾಬಿಲೋನಿಯದಲ್ಲಿ ಉಪಯೋಗಿಸುತ್ತಿದ್ದ ಶಸ್ತ್ರವೈದ್ಯದ ಆಯುಧಗಳು

ನ್ಯಾಯಶಾಸ್ತ್ರಗಳನ್ನು ಹಿರೊಡೊಟಸ್ ಹುಟ್ಟುವುದಕ್ಕೆ ೧೫೦೦ ವರ್ಷ ಮೊದಲೇ ಬರೆದಿದ್ದವು. ರೋಗ ಗುಣವಾದ ಮೇಲೆ ವೈದ್ಯನಿಗೆ ಕೊಡತಕ್ಕ ರುಸುಮು ರೋಗಿಯ ಅಂತಸ್ತಿನ ಮೇಲೆ ಗೊತ್ತುಮಾಡಲಾಗುತ್ತಿತ್ತು. ಕೆಲವುವೈದ್ಯ ಶಾಸ್ತ್ರದ ನಿಯಮಗಳು ಹೀಗಿದ್ದವು.

೨೧೮. ವಿಪರೀತವಾದ ಗಾಯವನ್ನು ಕಂಚಿನ ಈಟಿಯಂತಹ ಶಸ್ತ್ರದಿಂದ ಚಿಕಿತ್ಸೆಮಾಡಿ ಸಾವುಂಟಾದರೆ ಅಥವಾ ಶಸ್ತ್ರಕ್ರಿಯೆಯಿಂದ ರೋಗಿಯ ಕಣ್ಣು ಹೋದರೆ ವೈದ್ಯನ ಕೈ ಬೆರಳು ಕತ್ತರಿಸತಕ್ಕದ್ದು.

೨೧೯. ಶಸ್ತ್ರಕ್ರಿಯೆ ಮಾಡಿಸಿಕೊಂಡು ಸತ್ತವನು ಆಳಾಗಿದ್ದರೆ ಅವನ ಸಮ [illegible]

೨೨೧ ಮತ್ತು ೨೨೩. ರೋಗಿಯ ಮುರಿದ ಮೂಳೆಯನ್ನು ಸರಿ ಮಾಡಿದರೆ ಅಥವಾ ಕರುಳಿನ ರೋಗವನ್ನು ಗುಣಪಡಿಸಿದರೆ ವೈದ್ಯನಿಗೆ ೫ ಬೆಳ್ಳಿ ನಾಣ್ಯ ಕೊಡತಕ್ಕದ್ದು. ರೋಗಿ ಆಳಾಗಿದ್ದ ಪಕ್ಷದಲ್ಲಿ ೨ ಬೆಳ್ಳಿ ನಾಣ್ಯವನ್ನು ಆಳಿನ ಯಜಮಾನ ಕೊಡತಕ್ಕದ್ದು.

ಹೀಗೆ ಶಸ್ತ್ರವೈದ್ಯನ ನಿಯಮಗಳಿದ್ದವೇ ಹೊರತು ಔಷಧವೈದ್ಯದ ನಿಯಮಗಳಿರಲಿಲ್ಲ. ಆ ಕಾಲದಲ್ಲಿ ಬ್ಯಾಬಿಲೋನಿಯನ್ನರಲ್ಲಿ ಶಸ್ತ್ರವೈದ್ಯ, ಔಷಧ ವೈದ್ಯ ಎಂದು ಎರಡು ಬಗೆಯ ವೈದ್ಯರಿದ್ದರು. ಔಷಧವೈದ್ಯ ಗುರುಕುಲಕ್ಕೆ ಸೇರಿದ್ದರಿಂದ ಅವನ ನಿಯಮಗಳನ್ನು ಶಸ್ತ್ರವೈದ್ಯನ ನಿಯಮಗಳಲ್ಲಿ ಸೇರಿಸಿರಲಿಲ್ಲ. ಆಗ ಪಶುವೈದ್ಯರೂ ಇದ್ದರು. ಅವರಿಗೂ ನಿಯಮಗಳಿದ್ದವು. ಮೇಲಾಗಿ ಈಗಿರುವಂತೆ ಔಷಧಿ ಚೀಟಿ ಆರಂಭದಲ್ಲಿ ಬರೆಯುವ R- ಗುರುತನ್ನು ಬ್ಯಾಬಿಲೋನಿಯನ್ನರ ಕಾಲದಲ್ಲೂ ವೈದ್ಯರು ಬರೆಯುತ್ತಿದ್ದರು. ಇದು ಔಷಧ ಚೀಟಿ ಬರೆಯುವ ಮೊದಲು ಮಾರ್ಡಕ್ ದೇವರ ಪ್ರಾರ್ಥನೆ ಮಾಡಿ ಪೂಜೆ ಸಲ್ಲಿಸಿ ಅಪ್ಪಣೆ ಪಡೆದುದರ ಗುರುತಾಗಿತ್ತು.

ಅಸ್ಸಿರಿಯ ದೊರೆ ಅಶುರ್ಬನಿಪಾಲ್‌ನ ಪುಸ್ತಕ ಭಂಡಾರದಲ್ಲಿದ್ದ ಶಾಸನ ಗ್ರಂಥಗಳಿಂದ ಬ್ಯಾಬಿಲೋನಿಯನ್ನರ ಮತ್ತು ಅಸ್ಸಿರಿಯನ್ನರ ವೈದ್ಯಶಾಸ್ತ್ರದ ಮಟ್ಟ ಗೊತ್ತಾಗಿದೆ. ಅವು ಯಾವಾಗ ಬರೆದವೆಂಬುದಕ್ಕೆ ಸರಿಯಾದ ಆಧಾರವಿಲ್ಲದಿದ್ದರೂ ಸುಮಾರು ಕ್ರಿ.ಪೂ. ೨೦೦೦ದಲ್ಲಿ ಬರೆದಿರಬೇಕೆಂದು ಊಹಿಸಲಾಗಿದೆ. ಹಮ್ಮುರಬಿ ನಿಯಮಗಳು ಸೂರ್ಯದೇವರಿಂದ ಬಂದಿತೆಂಬ ನಂಬಿಕೆ ಇತ್ತು. ಪೂಜಾರಿಗಳೇ ಆಗಿನ ಕಾಲದಲ್ಲಿ ನ್ಯಾಯಾಧೀಶರೂ, ವಕೀಲರೂ ಮತ್ತು ವೈದ್ಯರೂ ಆಗಿದ್ದರು. ಇದಕ್ಕೆ ಕಾರಣ ಪೂಜಾರಿಗಳು ದೇವರ ಪ್ರತಿನಿಧಿಗಳೆಂಬ ಭಾವನೆ.

ಮನುಷ್ಯನ ಒಂದೊಂದು ರೋಗಕ್ಕೂ ಒಂದೊಂದು ದೇವತೆ ಕಾರಣವೆಂದು ನಂಬಿದ್ದರು. ಹೆಂಗಸರ ರೋಗಕ್ಕೆ ಒಂದು ದೇವತೆ, ಈಲಿ ರೋಗಕ್ಕೆ ಮತ್ತೊಂದು ದೇವತೆ,ಕ್ಷಯಕ್ಕೆ ಇನ್ನೊಂದು ಎಂದು ತಿಳಿದಿದ್ದರಲ್ಲದೆ,ಪ್ರತಿಯೊಬ್ಬ ರೋಗಿ ಒಂದೊಂದು ಭೂತದ ಅಧೀನದಲ್ಲಿದ್ದನೆಂದೂ ನಂಬಿದ್ದರು. ಆದ್ದರಿಂದಲೇ ರೋಗ ಗುಣಮಾಡಲು ಭೂತಗಳನ್ನು ದೇಹದಿಂದ ಓಡಿಸಲು ಯಂತ್ರಮಂತ್ರಗಳನ್ನು ಉಪಯೋಗಿಸುತ್ತಿದ್ದರು. ಮಾಟ, ಮಂತ್ರ, ಯಂತ್ರ ತಂತ್ರಗಳು ಬಹಳ ವಿಧವಿಧವಾಗಿದ್ದವು. ಕೆಲವು ಸುಲಭವಾಗಿದ್ದವು, ಕೆಲವು ಜಟಿಲವಾಗಿದ್ದವು. ಇವುಗಳ ಸಂಗಡ ಮಂತ್ರಶಕ್ತಿಯುಳ್ಳ ನೀರು, ಸಸ್ಯ,ಖನಿಜ ಪೋಲ್ಟೀಸು ಮತ್ತು ಪಟ್ಟಿಕಟ್ಟುಗಳನ್ನು ಉಪಯೋಗಿಸುತ್ತಿದ್ದರು.

ಅಸ್ಸಿರಿಯನ್ನರ ಔಷಧಗ್ರಂಥ

ಅಸ್ಸಿರಿಯನರ ಔಷಧ ಗ್ರಂಥದಲ್ಲಿ ಥಾಂಪ್‌ಸನ್ ಪ್ರಕಾರ ೨೫೦ ಸಸ್ಯ ಪದಾರ್ಥಗಳೂ ೧೨೦ ಖನಿಜ ಪದಾರ್ಥಗಳೂ ಇದ್ದವು. ದ್ರಾಕ್ಷಾರಸ, ಕೊಬ್ಬು, ಎಣ್ಣೆ, ಜೇನುತುಪ್ಪ, ಮೇಣ, ಹಾಲುಗಳನ್ನು ಔಷಧ ತಯಾರುಮಾಡಲು ಉಪಯೋಗಿಸುತ್ತಿದ್ದರು. ಲೋಳೆಸರ, ಸೋಪು, ಇಂಗು, ಬೆಲಡೋನ, ಕನಾಬಿಸ್(ಗಾಂಜ), ಏಲಕ್ಕಿ, ಆವರಿಕೆ, ಹರಳೆಣ್ಣೆ, ಲವಂಗ, ದಾಲ್ಚಿನ್ನಿ, ಕಾಲೊಸಿಂತ್, ಬೆಳ್ಳುಳ್ಳಿ, ಕೊತ್ತುಂಬರಿ, ಹೆನ್‌ಬೇನ್, ಜುನಿಪರ್, ಅತಿಮಧುರ, ಮಾಂಡ್ರಗೊರ, ಪುದೀನ, ಸಾಸಿವೆ, ಗೋಲರಸ, ದಾಳಿಂಬೆ,ಗಸಗಸೆಗಳೆಲ್ಲವನ್ನೂ ರೋಗ ಗುಣಪಡಿಸಲು ಕೊಡುತ್ತಿದ್ದರು. ಗಂಧಕವನ್ನು ಕಜ್ಜಿಗೂ, ಕನಾಬಸ್ ಮಂದತ್ವಕ್ಕೂ, ಸಾಸಿವೆಯನ್ನು ಪ್ರತಿ ಉದ್ರೇಕಕಾರಕವಾಗಿಯೂ, ಗಸಗಸೆಯನ್ನು ನೋವು ತಿನ್ನುವುದಕ್ಕೂ ನಿದ್ದೆ ಬರಿಸುವುದಕ್ಕೂ, ಬೆಲಡೋನವನ್ನು ಮನಶ್ಶಾಂತಿ ಮಾಡಲೂ ಜೊಲ್ಲು ಕಮ್ಮಿ ಮಾಡಲೂ, ಉರಿಮೂತ್ರ ಮತ್ತು ಮುಟ್ಟು ನೋವು ಹೋಗಲೂ ಉಪಯೋಗಿಸುತ್ತಿದ್ದರು. ಇವಲ್ಲದೆ ದುರ್ವಾಸನೆ ಉಂಟುಮಾಡುವ ಸಗಣಿ, ಹಂದಿ ಮಾಂಸ, ನಾಯಿ ಕಸ, ಮನುಷ್ಯನ ಮಲ, ಜಲಗಳನ್ನು ಭೂತ ಓಡಿಸಲು ಬಳಸುತ್ತಿದ್ದರು.

ದೆವ್ವ ಓಡಿಸುವ ಕಾರ್ಯದಲ್ಲಿ ನೀರು, ಮತ್ತು ಜ್ವಾಲೆ ಉಪಯೋಗದಲ್ಲಿದ್ದವು. ಜ್ವಾಲೆ ಪವಿತ್ರವಾದುದರಿಂದ ದೆವ್ವಗಳನ್ನು ಓಡಿಸಲು ಉಪಯೋಗವಾಗುತ್ತಿತ್ತು. ಉರಿಯುವ ಜ್ವಾಲೆಗೆ ಕೆಲವು ಪದಾರ್ಥಗಳನ್ನು ಹಾಕಿ ಮಂತ್ರಗಳ ಸಹಾಯದಿಂದ ದೆವ್ವ ಹೋಗಲಾಡಿಸುತ್ತಿದ್ದರು. ನೀರು ಕೂಡ ದೇವಲೋಕದಿಂದ ಕೊಡುಗೆಯಾಗಿ ಬಂದದ್ದರಿಂದ ಅಶುದ್ಧವೆನಿಸಿದ ರೋಗಗಳನ್ನು ಶುದ್ಧಿಮಾಡಲು ಉಪಯೋಗದಲ್ಲಿತ್ತು. ಬ್ಯಾಬಿಲೋನಿಯನ್ ಭಾಷೆಯಲ್ಲಿ ವೈದ್ಯನೆಂದರೆ "ನೀರಿನ ಚತುರ" ಎಂದು ಅರ್ಥವಿತ್ತು.

ಬ್ಯಾಬಿಲೋನಿಯನ್ ಶಾಸನದಲ್ಲಿ ದಂತ ವೈದ್ಯರ ವಿಷಯವೂ ಬರೆದಿತ್ತು. ಪ್ರಪಂಚದಲ್ಲಿ ಇದೇ ಹಲ್ಲಿನ ಮೊದಲನೆಯ ಗ್ರಂಥವಾಗಿತ್ತು. ಕ್ರಿ. ಪೂ. ೨೦೦೦ ದಲ್ಲಿ ನಿಪ್ಪೂರು ಗ್ರಾಮದ ಮಣ್ಣಿನ ಶಿಲೆಯಲ್ಲಿ ಹುಳುಕಲ್ಲಿನ ಚಿಕಿತ್ಸೆ ಬರೆದಿತ್ತು. ಹಲ್ಲು ನೋವು ನಿವಾರಿಸಲು ಹೆನ್‌ಬೇನ್ ಬೀಜ ಮತ್ತು ಗೋಂದಿನಿಂದ ಮಾಡಿದ ಸಿಮೆಂಟನ್ನು ಹಲ್ಲಿನ ಕುಳಿಗೆ ತುಂಬುತ್ತಿದ್ದರು. ಸಾಸಿವೆ, ಮಾಂಡ್ರಗೊರ, ಗಸಗಸೆ, ಕನಾಬಿಸ್‌ಗಳನ್ನೂ ಈ ಕೆಲಸಕ್ಕೆ ಉಪಯೋಗಿಸುತ್ತಿದ್ದರು. ಅಸ್ಸಿರಿಯನ್ನರ ಪ್ರಕಾರ ಹುಳುಗಳ ಕಡಿತದಿಂದ ಹಲ್ಲುನೋವು ಬರುತ್ತಿತ್ತು. ಆದ್ದರಿಂದಲೇ ಹುಳುಗಳನ್ನು ಓಡಿಸಲು ಯಂತ್ರ ಮಂತ್ರಗಳನ್ನು ಉಪಯೋಗಿಸುತ್ತಿದ್ದರು. ಇದನ್ನು ಬರೆದಿರುವ ಶಿಲೆ ಬ್ರಿಟಿಷ್ ವಸ್ತುಪ್ರದರ್ಶನಾಲಯದಲ್ಲಿ ಈಗಲೂ ಇದೆ. ಇದೇ ನಂಬಿಕೆ

ಭಾರತದಲ್ಲೂ, ಈಜಿಪ್ಟಿನಲ್ಲೂ, ಗ್ವಾಟೆಮಾಲದ ಮಾಯ ಇಂಡಿಯನರಲ್ಲೂ ಇದ್ದಿತು. ಅಲ್ಲದೆ ಹಲ್ಲಿಗೆ ಔಷಧ ಹಚ್ಚುವ ಮೊದಲು ಮಂತ್ರ ಹೇಳುವುದು ವಾಡಿಕೆಯಾಗಿತ್ತು.

ಬ್ಯಾಬಿಲೋನಿಯನ್ನರ ಜೋತಿಷ್ಯ

ಆಗಿನ ಕಾಲದಲ್ಲಿ ರೋಗದ ಮುನ್ನರಿವು ಕೂಡ ವೈದ್ಯನಿಗೆ ತಿಳಿದಿತ್ತು. ದೇವರು ರೋಗಕ್ಕೆ ಕಾರಣವಾದುದರಿಂದ ರೋಗದ ಮುಂದಿನ ನಡತೆ, ಪರಿಣಾಮ ದೇವರಿಂದ ಸೂಚಿಸಲ್ಪಡುತ್ತಿತ್ತೆಂಬ ಭಾವನೆ ಇತ್ತು. ಆದ್ದರಿಂದಲೇ ಅವರಿಗೆ ಭವಿಷ್ಯ ಜ್ಞಾನ ಪಡೆಯಲು ಆಸಕ್ತಿ ಇತ್ತು. ಇದನ್ನು ಕ್ರೋಢೀಕರಿಸಲು ಆಹುತಿ ಕೊಟ್ಟ ಪ್ರಾಣಿಯ ಈಲಿ ಆತ್ಮದ ಪೀಠವೆಂದು ತಿಳಿದು ಅದರ ಆಕಾರ, ಗಾತ್ರ, ರೀತಿ ಮತ್ತು ಪಿತ್ತ ಕೋಶದ ಆಕೃತಿಯನ್ನು ಪರೀಕ್ಷೆ ಮಾಡುತ್ತಿದ್ದರು.

ಭವಿಷ್ಯ ತಿಳಿಯಲು ಜೋತಿಷ್ಯವೂ ಉಪಯೋಗದಲ್ಲಿತ್ತು. ಸೂರ್ಯ, ಚಂದ್ರ, ನಕ್ಷತ್ರ, ಗ್ರಹಗಳನ್ನೆಲ್ಲಾ ದೇವತೆಗಳೆಂದು ಭಾವಿಸಿ ಅವುಗಳ ಸಹಾಯದಿಂದ ರೋಗ ತಿಳಿಯಲೂ, ಗುಣಪಡಿಸಲೂ ಯತ್ನಿಸುತ್ತಿದ್ದರು. ಆ ಕಾಲದ ಬ್ಯಾಬಿಲೋನಿಯದ ಜೋತಿಷ್ಯರ ಬುದ್ಧಿಶಕ್ತಿ ಉತ್ಕೃಷ್ಟವಾಗಿತ್ತು. ಜೋತಿಷ್ಯದ ಸಹಾಯದಿಂದ ದೇಶದ ಏಳಿಗೆ, ಯುದ್ಧದ ಫಲ, ಜನರ ಸೌಖ್ಯಗಳನ್ನು ತಿಳಿದುಕೊಳ್ಳುತ್ತಿದ್ದರಲ್ಲದೆ ರೋಗದ ನಡತೆ ಮತ್ತು ಮುನ್ನರಿವನ್ನು ತಿಳಿದುಕೊಳ್ಳುತ್ತಿದ್ದರು. ಜೋತಿಷ್ಯ ಮತ್ತು ವೈದ್ಯನ ಸಂಬಂಧ ಬ್ಯಾಬಿಲೋನಿಯನರ ಕಾಲದಲ್ಲಿ ಅಗ್ರಸ್ಥಾನ ಪಡೆದಿತ್ತು. ಅದರ ಮಹಿಮೆ ೩೫೦೦ ವರ್ಷಗಳಾದ ನಂತರ ಈಜಿಪ್ಟ್, ಗ್ರೀಸ್ ಮತ್ತು ರೋಮಿನ ವೈದ್ಯರ ಭಾವನೆ ಮತ್ತು ಕಲ್ಪನೆಗಳ ಮೇಲೂ ಪ್ರಭಾವ ಬೀರಿತ್ತು. ಯಹೂದ್ಯರಲ್ಲಿ, ಗ್ರೀಕರಲ್ಲಿ, ಈಜಿಪ್ಟಿನವರಲ್ಲಿ ಕನಸು ಹೇಗೆ ಪ್ರಾಮುಖ್ಯವಾಗಿತ್ತೋ ಹಾಗೆಯೇ ಬ್ಯಾಬಿಲೋನಿಯನ್ನರಲ್ಲೂ ಮುಖ್ಯವಾಗಿತ್ತು. ಸುಗ್ಗಿಯ ಮತ್ತು ರಾಜನ ದಂಡಯಾತ್ರೆಯ ಫಲವನ್ನು ಕನಸಿನ ಮೂಲಕ ದೇವರು ತಿಳಿಸುತ್ತಿದ್ದನೆಂದು ಅವರು ನಂಬಿದ್ದರು.

ಬ್ಯಾಬಿಲೋನಿಯನ್ನರ ಸಂಸ್ಕೃತಿ ಪ್ರಪಂಚದ ಇತಿಹಾಸದ ಮೇಲೆಲ್ಲಾ ಪ್ರಭಾವ ಬೀರಿತ್ತು. ಅವರ ಅನೇಕ ಪುರಾಣ ಕಥೆಗಳು ಯಹೂದ್ಯರಿಗೂ ಯೂರೋಪಿಯನ್ನರಿಗೂ ಮಾದರಿಯಾಯಿತು. ಅವರ ಜೋತಿಷ್ಯಶಾಸ್ತ್ರ, ಪ್ರಾಚೀನ ಸಂಶೋಧನೆ, ಗಣಿತ, ವ್ಯಾಕರಣ, ಚರಿತ್ರೆ, ವೈದ್ಯಶಾಸ್ತ್ರ, ತತ್ವಶಾಸ್ತ್ರಗಳೆಲ್ಲವೂ ಪ್ರಪಂಚಕ್ಕೇ ಮೇಲ್ಪಂಕ್ತಿಯಾದವು.

೪. ಈಜಿಪ್ಟಿನ ವೈದ್ಯಶಾಸ್ತ್ರ

ಪ್ರಾಚೀನ ಈಜಿಪ್ಟು ಪ್ರಪಂಚದಲ್ಲೇ ಮುಖ್ಯ ದೇಶವಾಗಿತ್ತು. ವೈದ್ಯಶಾಸ್ತ್ರದಲ್ಲಂತೂ ಸಾಕಷ್ಟು ಉತ್ಕೃಷ್ಟವಾದ ಲೇಖನಗಳನ್ನು ಒದಗಿಸಿತ್ತು. ಪುರಾತನ ಬರಹಗಾರರು ಈಜಿಪ್ಟಿನ ವೈದ್ಯರನ್ನು ಬಹಳವಾಗಿ ಹೊಗಳಿದ್ದಾರೆ. ಎಲ್ಲಾ ಶಾಸ್ತ್ರಗಳಿಗಿಂತಲೂ ವೈದ್ಯಶಾಸ್ತ್ರದಲ್ಲಿ ಈಜಿಪ್ಟಿನ ಜನರು ಮುಂದಿದ್ದರೆಂದು ಹೋಮರ್ ಒಡೆಸ್ಸಿಯಲ್ಲಿ ತಿಳಿಸಿದ್ದಾನೆ. ಪರ್ಷಿಯನ್ ದೊರೆಗಳಾದ ಸ್ಟೈರುಸ್, ಡೇರಿಯಸ್ ಈಜಿಪ್ಟಿನ ವೈದ್ಯರನ್ನು ಅಧಿಕಾರಿಗಳಾಗಿ ನೇಮಿಸಿಕೊಂಡಿದ್ದರೆಂದು, ಚರಿತ್ರೆ ಪಿತಾಮಹನಾದ ಹಿರೊಡೋಟಸ್ (ಕ್ರಿ. ಪೂ ೪೮೪-೪೨೫) ಹೇಳಿದ್ದಾನೆ. ಹಾಗೂ ದೇಹದ ಪ್ರತಿಯೊಂದು ಭಾಗಕ್ಕೂ, ಒಂದೊಂದು ರೋಗಕ್ಕೂ ಒಬ್ಬೊಬ್ಬ ವೈದ್ಯನಿದ್ದನೆಂದೂ,



ಈಜಿಪ್ಟಿನ ಪುರಾತನ ಕಾಲದ ಚಿಕಿತ್ಸೆ

ಹೃದಯದ, ಕಣ್ಣಿನ, ಕಾಲಿನ, ತಲೆಯ, ಹಲ್ಲಿನ, ಜಠರದ, ಕರುಳಿನ ಮತ್ತು ಸ್ಪಷ್ಟವಾಗದ ರೋಗಗಳಿಗೂ ಒಬ್ಬೊಬ್ಬ ವೈದ್ಯನಿದ್ದನೆಂದೂ ತಿಳಿಸಿದ್ದಾನೆ. ಹಾಗೂ ಚಿಕಿತ್ಸೆಗೆ ತಕ್ಕ ಆಯುಧಗಳೂ ಇದ್ದುವೆಂದು ತಿಳಿಸಿದ್ದಾನೆ.

ಈಜಿಪ್ಟಿನ ಸಂಸ್ಕೃತಿ

ಆಮೇಲೆ ಬಂದ ಕುಶಲರಾದ ಗ್ರೀಕರಿಂದಲೂ, ರೋಮನರಿಂದಲೂ ಚರಿತ್ರಾರ್ಹವಾದ ಈಜಿಪ್ಟಿನ ಸಂಸ್ಕೃತಿ ನೂರಾರು ವರ್ಷಗಳಿಂದ ತಿಳಿದುಬಂದಿದೆ. ಈಜಿಪ್ಟಿನಿಂದ



ಪುರಾತನ ಈಜಿಪ್ಟಿನ ಶಸ್ತ್ರಕ್ರಿಯೆ ಆಯುಧಗಳು

ತೊಂದರೆಯಾಗಿದ್ದರೂ, ಯಹೋದ್ಯರು ಬೈಬಲಿನಲ್ಲಿ ಒಂದೆರಡು ಒಳ್ಳೇ ಮಾತುಗಳನ್ನು ಈಜಿಪ್ಟಿನ ಪರವಾಗಿ ನುಡಿದಿದ್ದಾರೆ. ಅಲ್ಲದೆ ಈಜಿಪ್ಟಿನವರೇ ಚಿತ್ರಲಿಪಿ (ಪುರಾತನ ಈಜಿಪ್ಟಿನ ಬರವಣಿಗೆ)ಗಳಿಂದ ಬರೆದ ಪುಸ್ತಕಗಳಿಂದಲೂ ಅವರ ಸಂಸ್ಕೃತಿ ಗೊತ್ತಾಗಿದೆ. ಟಾಲೆಮಿ, ವಿ. ಎಪಿಫೇನಸ್‌ನ ಅದ್ಭುತ ಕೆಲಸಗಳನ್ನು ಶಿಲೆಮೇಲೆ ಕೆತ್ತಿ ಈಜಿಪ್ಟಿನ ದೇವಾಲಯಗಳಲ್ಲಿ ಇಡಬೇಕೆಂದು ಕ್ರಿ. ಪೂ. ೧೯೬೦ರಲ್ಲಿ ಮೆಂಫಿಸ್‌ನ ಪುರೋಹಿತರು ಅಪ್ಪಣೆ ಕೊಟ್ಟಿದ್ದರು. ಈ ಶಿಲಾಶಾಸನ ೨೦೦೦ ವರ್ಷಗಳಾದ ಮೇಲೆ ೧೭೯೯ ರಲ್ಲಿ ಫ್ರೆಂಚ್ ಸಿಪಾಯಿ ಬೌಸಾರ್ಡ್‌ನ ಕೈಗೆ ರೊಸೆಟ್ಟ ಬಳಿ ಇರುವ ಜುಲಿಯನ್ ಕೋಟೆಯಲ್ಲಿ ಸಿಕ್ಕಿತು. ಈ ರೊಸೆಟ್ಟ ಶಿಲೆ ಆಮೇಲೆ ಬ್ರಿಟಿಷರ ವಶವಾಯಿತು. ಇದರಿಂದ ಈಜಿಪ್ಟಿನವರ ಕುಶಲ ಕೈಗಾರಿಕೆ, ಸಂಸ್ಕೃತಿ, ವಿಜ್ಞಾನಗಳ ಮುನ್ನಡೆ ತಿಳಿದುಬರುತ್ತದೆ.

೧೮೦೨ರಲ್ಲಿ ಸ್ವೀಡನ್ನಿನ ರಾಯಭಾರಿ ಅಕರ್‌ಬ್ಲಾಡ್, ೧೮೧೪ರಲ್ಲಿ ವೈದ್ಯ ಮತ್ತು ಭೌತ ವಿಜ್ಞಾನಿಯಾದ ಥಾಮಸ್ ಯಂಗ್ ೧೮೨೨ರಲ್ಲಿ ಚಾಂಪೊಲಿಯನ್ ಲಿ ಜೋನ್ ಬರಹಗಾರರೆಲ್ಲ ರೊಸೆಟ್ಟ ಶಿಲಾಶಾಸನವನ್ನು ಓದಿ ಈಜಿಪ್ಟಿನ ಜನರ ಭಾಷೆ ಮತ್ತು ಲಿಪಿಗಳ ಮಹತ್ವನ್ನು ಕೊಂಡಾಡಿದ್ದಾರೆ. ಇದರಿಂದ ಈಜಿಪ್ಟಿನ ಚಿತ್ರಲಿಪಿ, ಮೋಡಿ ಬರವಣಿಗೆಗಳು ಗೊತ್ತಾಗಿವೆ.

ಈಜಿಪ್ಟಿನ ವೈದ್ಯಶಾಸ್ತ್ರ ಅವರ ಸಂಸ್ಕೃತಿಯ ಹಾಗೆ ಪುರೋಹಿತರ ವಶದಲ್ಲಿತ್ತು. ಈಜಿಪ್ಟಿನವರು ಭಾರತ ಮತ್ತು ರೋಮ್ ಜನಗಳ ಹಾಗೆ ಅನೇಕ ದೇವರನ್ನು ಪೂಜಿಸುತ್ತಿದ್ದರು. ದೇವರು ಮನುಷ್ಯನ ಅಥವಾ ಪ್ರಾಣಿಯ ಆಕಾರದಲ್ಲಿ ಪ್ರತ್ಯಕ್ಷವಾಗುತ್ತಿದ್ದನು. ಸೂರ್ಯ, ಚಂದ್ರ, ಆಕಾಶ, ನೈಲ್ ನದಿಗಳನ್ನು ದೇವರೆಂದು

ಭಾವಿಸಿದ್ದರು. ಕೆಲವು ಕಾಲ ಬಸವ, ಹದ್ದು, ಮೊಸಳೆ, ಹಸು, ಬೆಕ್ಕು, ನಾಯಿ,



ಎಡಗಡೆ ದೇವರ ಬುದ್ಧಿ ಮತ್ತು ನಾಲಿಗೆಯಾಗಿದ್ದ, ಹಾಗೂ ಮೆಂಫಿಸ್ ಪುಣ್ಯ
ಪುರುಷನಾಗಿದ್ದ ಮಹಾತ್ಮ 'ಟ' :
ಬಲದಲ್ಲಿ ಈಜಿಪ್ಟಿನ ವೈದ್ಯಶಾಸ್ತ್ರದಲ್ಲಿ ಮುಖ್ಯ ಪಾತ್ರವಹಿಸಿದ್ದ ಇಮ್ಹೊಟೆಪ್

ನರಿ, ಹಾವುಗಳನ್ನೂ ಪೂಜಿಸುತ್ತಿದ್ದರು. ವಾಸ್ತುಶಿಲ್ಪಿಯಾದ 'ಟ' ಎಂಬುವನನ್ನು ದೇವರೆಂದು ನಂಬಿದ್ದರು. ಯಹೋದ್ಯರ ಯಹ್ವೆ, ಗ್ರೀಕರ ಅಪಾಲೊಗಳ ಹಾಗೆ ಇವನೂ ಪ್ರಭಾವಶಾಲಿಯಾಗಿ ಇತರ ಕೆಲಸಗಳ ಜತೆಗೆ ಜನರ ಆರೋಗ್ಯವನ್ನು ನೋಡಿ ಕೊಳ್ಳುತ್ತಿದ್ದನು. ಕೆಲವು ದಿನಗಳಾದ ಮೇಲೆ ಇಮ್ಹೊಟೆಪ್ ಸಂಗಡ ಸೇರಿ ತಾನೂ ಜವಾಬ್ದಾರಿ ಹೊರಲಾರಂಭಿಸಿದನು.

ಖ್ಯಾತಿಪಡೆದ ಇಮ್ಹೊಟೆಪ್ ಈಜಿಪ್ಟಿನ ವೈದ್ಯಶಾಸ್ತ್ರದ ಪ್ರವೀಣನಾಗಿದ್ದನು. ಗ್ರೀಕರಿಂದಲೂ, ರೋಮನರಿಂದಲೂ, ದೇವರು ಎಂದು ಭಾವಿಸಲ್ಪಟ್ಟಿದ್ದ ಇವನು ಕ್ರಿ. ಪೂ. ೨೯೮೦ರಲ್ಲಿ ದೊರೆ ಜೋಸರ್‌ನ ಮುಖ್ಯ ವಜೀರನಾಗಿದ್ದನು. ಆಗ ನ್ಯಾಯ ಇಲಾಖೆಗೂ, ಖಜಾನೆಗೂ, ಸೈನ್ಯದಳಕ್ಕೂ ನೌಕಾ ದಳಕ್ಕೂ ವ್ಯವಸಾಯ ಇಲಾಖೆಗೂ ಮತ್ತು ಒಳಾಡಳಿತಕ್ಕೂ ಮುಖ್ಯಸ್ಥನಾಗಿದ್ದನು. ಸಂಪ್ರದಾಯದ ಪ್ರಕಾರ, ಶಿಲ್ಪಿಯೂ, ಜ್ಯೋತಿಷ್ಕನೂ, ಉತ್ತಮ ವೈದ್ಯನೂ ಆಗಿದ್ದನು. ಶಿಲ್ಪಕುಶಲತೆಯಲ್ಲಿ ಆಸಕ್ತಿ ಇದ್ದುದರಿಂದ ಜೋಸರ್‌ದೊರೆಯ ಸಮಾಧಿಗೋಸ್ಕರ ಕಲ್ಲಿನ ಸಕ್ಕಾರದ ಪಿರಮಿಡನ್ನು ಕಟ್ಟಿದನು.



ಇಮ್ಹೊಟೆಪ್ ವೈದ್ಯನ ಪ್ರತಿಮೆ

ಇದು ಚರಿತ್ರಾರ್ಹವಾದ ಮೊದಲನೆ ಕಲ್ಲಿನ ಸ್ತೂಪವಾಯಿತು. ಎಡ್ಫು ದೇವಾಲಯವೂ ಇವನ ಕಟ್ಟಡವೇ ಆಗಿತ್ತು. ಇವನು ರಾಜನ ವೈದ್ಯನಾಗಿದ್ದುದಲ್ಲದೆ, ರಾಜಮನೆತನದ ಆರೋಗ್ಯಕ್ಕೂ, ರಾಜ್ಯದ ಜನಾರೋಗ್ಯಕ್ಕೂ ಜವಾಬ್ದಾರನಾಗಿದ್ದನು. ಇಷ್ಟಾದರೂ



ಸಕ್ಕರದಲ್ಲಿರುವ ಸೊಸರ್ ದೊರೆಯ ಹಂತದ ಪಿರಮಿಡ್ಡು ಇಮ್ಹೊಟೆಪ್ ಮೇಲ್ವಿಚಾರಣೆಯಲ್ಲಿ ಕ್ರಿ.ಪೂ. ರಲ್ಲಿ ೨೮೦೦ಕಟ್ಟಿದ್ದು.

ವೈದ್ಯಶಾಸ್ತ್ರದ ವಿಚಾರದಲ್ಲಿ ಇವನ ಬರವಣಿಗೆ ಯಾವುದೂ ಕಂಡುಬಂದಿಲ್ಲ. ವೈದ್ಯ ವೃತ್ತಿಯಲ್ಲಿ ಇವನ ಶಿಷ್ಯವರ್ಗದವರಾರೂ ಕಂಡಿಲ್ಲ.

ಇವನ ಜೀವಮಾನ ಕಳೆದ ನಂತರ ಇಮ್ಹೋಟೆಪ್‌ನನ್ನು ವೈದ್ಯಶಾಸ್ತ್ರದ ದೇವರೆಂದು ಈಜಿಪ್ಟ್ ನಂಬಿತ್ತು. ಗ್ರೀಕರು ಅವನನ್ನು ಅವರ ಅಸ್ಕ್ಲೆಪಿಯಾಸ್ ಎಂದೇ ನಂಬಿದ್ದರು. ಮೆಂಫಿಸ್ ದೇವಾಲಯದಲ್ಲಿ ಅವನ ವಿಗ್ರಹ ಇಟ್ಟು ಪೂಜೆ ಮಾಡಲೂ ಆರಂಭಿಸಿದರು. ಇಮ್ಹೋಟೆಪ್‌ನ ದೇವಾಲಯಗಳಿಗೆ ರೋಗಿಗಳು ಗುಂಪು ಗುಂಪಾಗಿ ಹೋಗಿ, ಅನೇಕರು ದೇವಾಲಯಗಳಲ್ಲೇ ನಿದ್ರಿಸಲೂ ಆರಂಭಿಸಿದರು. ರೋಗಿಗಳ ಸ್ವಪ್ನದಲ್ಲಿ ಇಮ್ಹೋಟೆಪ್ ಕಾಣಿಸಿಕೊಂಡು ರೋಗಕ್ಕೆ ತಕ್ಕ ಔಷಧ ತಿಳಿಸುತ್ತಿದ್ದನೆಂದು ನಂಬಿದ್ದರು. ಆ ಕಾಲದಲ್ಲಿ ದೇವಾಲಯಗಳಲ್ಲಿ ನಿದ್ರಿಸುವುದು ಒಂದು ರೀತಿಯ ಪೂಜೆ ಎನಿಸಿತ್ತು.

ವೈದ್ಯಶಾಸ್ತ್ರದ ಗ್ರಂಥಗಳು

ಹಲವಾರು ವರ್ಷಗಳು ಹೂತಿಟ್ಟಿದ್ದ ಈಜಿಪ್ಟಿನ ವೈದ್ಯಶಾಸ್ತ್ರದ ಗ್ರಂಥಗಳಿಂದಲೇ ಈಜಿಪ್ಟಿನ ವೈದ್ಯಶಾಸ್ತ್ರದ ವಿಸ್ತಾರ ಮತ್ತು ಮಹತ್ತು ಹೊರಬಿದ್ದಿರುವುದು. ಈ ಗ್ರಂಥಗಳ ಪೈಕಿ ಎಡ್ವಿನ್ ಸ್ಮಿತ್ ಪ್ಯಾಪಿರಸ್, ಇಬರ್ಸ್ ಪ್ಯಾಪಿರಸ್, ಹರ್ಸ್ಟ್, ಕಹೂನ್, ಲಂಡನ್ ಮತ್ತು ಬರ್ಲಿನ್ ಪ್ಯಾಪಿರಸ್ಸುಗಳು ಶ್ರೇಷ್ಠವಾಗಿವೆ. ಸ್ಮಿತ್ ಪ್ಯಾಪಿರಸ್ ಶಸ್ತ್ರವೈದ್ಯದ ಬಹು ಮುಖ್ಯ ಗ್ರಂಥ. ಈಜಿಪ್ಟ್ ಪ್ಯಾಪಿರಸ್ ಔಷಧ ಶಾಸ್ತ್ರದ ಒಂದು ಸಂಗ್ರಹ. ಕಹೂನ್ ಪ್ಯಾಪಿರಸ್ ಸ್ತ್ರೀ ರೋಗದ ಗ್ರಂಥ. ಲಂಡನ್ ಪ್ಯಾಪಿರಸ್ ವಿಶೇಷವಾಗಿ ಯಂತ್ರಮಂತ್ರಗಳ ಗ್ರಂಥ. ಈ ಗ್ರಂಥಗಳೆಲ್ಲಾ ೫೦೦೦ ವರ್ಷಗಳ ಹಿಂದೆ ಬರೆದವು.

ಎಡ್ವಿನ್ ಸ್ಮಿತ್ ಪ್ಯಾಪಿರಸ್

ಇದು ಎಲ್ಲಾ ಗ್ರಂಥಗಳಿಗಿಂತಲೂ ಬಹಳ ಹಳೆಯದು. ಎಡ್ವಿನ್‌ಸ್ಮಿತ್‌೧೮೫೮ರಲ್ಲಿ ಈಜಿಪ್ಟಿಗೆ ಹೋಗಿ, ೧೮೭೬ರ ತನಕ ಲುಕ್ಸಾರ್‌ನಲ್ಲಿ ನೆಲೆಸಿದ್ದು, ೧೮೬೨ರಲ್ಲಿ ಥೇಬಿಸ್‌ನಲ್ಲಿ ತನ್ನ ಈ ಗ್ರಂಥವನ್ನು ಕೊಂಡುಕೊಂಡನು. ಅದನ್ನು ಓದಿ, ವೈದ್ಯಶಾಸ್ತ್ರದ ಉನ್ನತಿಯನ್ನು ತಿಳಿದುಕೊಂಡಿದ್ದರೂ ಅದನ್ನು ಪ್ರಕಟಮಾಡಲಿಲ್ಲ. ಅವನು ಸತ್ತಮೇಲೆ ಅವನ ಮಗಳು ೧೯೦೬ರಲ್ಲಿ ನ್ಯೂಯಾರ್ಕ್ ಚರಿತ್ರೆ ಸಂಘಕ್ಕೆ ಗ್ರಂಥವನ್ನು ದಾನಮಾಡಿ,ಪ್ರಾಧ್ಯಾಪಕ ಜೇಮ್ಸ್ ಹೆನ್ರಿ ಬ್ರೆಸ್ಟೆಡ್‌ನನ್ನು ಭಾಷಾಂತರಿಸಿ ಪ್ರಕಟಿಸಲು ೧೯೨೦ರಲ್ಲಿ ಒಪ್ಪಿಸಿದಳು. ಗ್ರಂಥ ೧೯೩೦ರಲ್ಲಿ ಚಿಕಾಗೊ ವಿಶ್ವವಿದ್ಯಾಲಯ ಮುದ್ರಾಲಯದಿಂದ ಪ್ರಕಟವಾಯಿತು. ಬ್ರೆಸ್ಟೆಡ್ ಪ್ರಕಾರ ಇದರ ಹಸ್ತಪ್ರತಿ ಕ್ರಿ.ಪೂ. ೩೦೦೦-೨೫೦೦ದ "ಪಿರಮಿಡ್‌ಯುಗ"ದಲ್ಲಿ ಚಿತ್ರಲಿಪಿಯಲ್ಲಿ ಬರೆದದ್ದೆಂದು ತಿಳಿದುಬಂದಿದೆ.


ಎಡ್ವಿನ್ ಸ್ಮಿತ್ ಪ್ಯಾಪಿರಸ್ ಅನೇಕ ಅಮೂಲ್ಯವಾದ ಅಂಗರಚನೆಶಾಸ್ತ್ರ, ಜೀವಶಾಸ್ತ್ರದ ವಿಷಯಗಳನ್ನು ತಿಳಿಸುತ್ತದೆ. ಇದರಲ್ಲಿ ಮೊಟ್ಟಮೊದಲಿಗೆ "ಮಿದುಳು" ಎಂಬ ಪದ ಬರೆದಿದೆ. ಮಿದುಳು,ಮಿದುಳಿನ ಮಡಿಕೆ, ಮಿದುಳಿನ ಹೊರಪೊರೆಗಳನ್ನು ವಿವರಿಸಿದೆ. ಸುಮಾರು ಕ್ರಿ.ಪೂ. ೫೦೦ರಲ್ಲಿ ಆಲ್ಕ್ಮಿಯಾನ್ "ಜ್ಞಾನದ ಪೀಠ" ಮಿದುಳಿನಲ್ಲಿದೆ

ಎಂದು ಹೇಳಿದ್ದಲ್ಲದೆ, ಪಾರ್ಶ್ವವಾಯು ಬರುವ ರೀತಿಯನ್ನೂ ತಿಳಿಸಿದ್ದನು. ಕತ್ತಿನ ಮೂಳೆ ಕೀಲು ತಪ್ಪಿದರೆ ಲಿಂಗ ಎದ್ದು ನಿಲ್ಲುವುದಲ್ಲದೆ, ಜೀವಾಂಕುರದ ವಿಸರ್ಜನೆಯೂ ಆಗುತ್ತದೆಂದು ಹೇಳಿದ್ದನು. ರಕ್ತ ಚಲನೆಗೆ ಹೃದಯ ಮುಖ್ಯವಾದ್ದೆಂದೂ ಹಿಪೊಕ್ರೇಟಿಸ್ ಎಣಿಸುವುದಕ್ಕೆ ೧೨೦೦ ವರ್ಷಗಳ ಮೊದಲೇ ನಾಡಿ ಎಣಿಸುವುದನ್ನೂ ತಿಳಿಸಿದ್ದನು.

ಎಡ್ವಿನ್ ಸ್ಮಿತ್ ಪ್ಯಾಪಿರಸ್‌ನಲ್ಲಿ ಮೂಳೆಮುರಿತ, ಕೀಲುಪಲ್ಲಟ, ಹುಣ್ಣು, ಗಡ್ಡೆ, ಗಾಯಗಳಿಗೆ ಚಿಕಿತ್ಸೆ ತಿಳಿಸಿದೆ. ಗಾಯದ ಮೆದುಬಟ್ಟೆ, ಕಟ್ಟುಪಟ್ಟಿ, ಹೀರೊತ್ತುಗಳ ಉಪಯೋಗಗಳನ್ನೂ ಬರೆದಿದ್ದವು. ಅಂಟುಪಳಾಸ್ತ್ರಿಯಿಂದ ಗಾಯದ ಎರಡು ಅಂಚುಗಳನ್ನು ಕೂಡಿಸುವುದನ್ನು ವಿವರಿಸಿದೆ. ಅದೇ ಮೊದಲಾಗಿ ದಾರದಿಂದ ಗಾಯ ಹೊಲೆಯುವುದನ್ನೂ ತಿಳಿಸಿದೆ. ಹುಣ್ಣು, ಗಡ್ಡೆಗಳನ್ನು ಸುಡುವುದೂ ಬರೆದಿತ್ತು. ಕೀವಿರುವ ಹುಣ್ಣುಗಳಿಗೆ ವಿಲ್ಲೊ ತೊಗಟೆಯ ಕಷಾಯ, ಮೈಲುತುತ್ತಗಳ ಉಪಯೋಗಗಳನ್ನು ನಮೂದಿಸಿದೆ. ಕಟ್ಟುಪಟ್ಟಿ ತೆಳುವಾದ ಬಟ್ಟೆಯಿಂದ ಮಾಡಲ್ಪಟ್ಟು, ಪ್ರತಿಯೊಂದು ಪಟ್ಟೆಯೂ ಅರ್ಧ ಮೈಲಿಗೂ ಉದ್ದವಾಗಿತ್ತೆಂದು ತಿಳಿಸಿದೆ. ಯಂತ್ರ ಮಂತ್ರಗಳು ಬರೆದಿದ್ದರೂ ಅಷ್ಟು ಬಳಕೆಯಲ್ಲಿರಲಿಲ್ಲ.

ಇಬರ್ಸ್ ಪ್ಯಾಪಿರಸ್

ಔಷಧಗ್ರಂಥವಾದ ಇಬರ್ಸ್ ಪ್ಯಾಪಿರಸ್ ಅರೆ ಪುರಾತನ ಈಜಿಪ್ಟಿನ ಲಿಪಿಯಲ್ಲಿ ಬರೆದಿದೆ. ೧೮೭೩ರಲ್ಲಿ ಪ್ರಾಧ್ಯಾಪಕ ಜಾರ್ಜ್ ಇಬರ್ಸ್ ಈಜಿಪ್ಟಿನಲ್ಲಿ ಈ ಗ್ರಂಥವನ್ನು ಕೊಂಡುಕೊಂಡನು. ಇದರ ನಕಲು ೧೮೭೫ರಲ್ಲಿ ಪ್ರಕಟವಾಯಿತು. ಬಹಳ ಕಾಲ ಸ್ಮಿತ್ ಪ್ಯಾಪಿರಸ್ಸಿನ ಹಾಗೆ ಇದೂ ಕೂಡ ಮೇಲ್ಪಂಕ್ತಿಯಾಯಿತು ಇದನ್ನು ಕ್ರಿ.ಪೂ. ೧೬ನೇ ಶತಮಾನದಲ್ಲಿ ಬರೆದಿದ್ದರೂ, ಆದರಲ್ಲಿ ಬರೆದಿರುವ ಔಷಧ ಚೀಟಿಗಳು ಕ್ರಿ.ಪೂ. ೩೦೦೦-೨೫೦೦ ವರ್ಷಗಳ ಹಿಂದಿನವಾಗಿದ್ದವು. ಔಷಧ ಕುಡಿಸುವ ಅಥವಾ ಹಚ್ಚುವ ಮೊದಲು ಮಂತ್ರ ಹೇಳುವುದನ್ನು ಇಬರ್ಸ್ ಪ್ಯಾಪಿರಸ್‌ನಲ್ಲಿ ನಮೂದಿಸಿದೆ. ಔಷಧ ಚೀಟಿಗಳು ಅಷ್ಟು ಹಿಂದಿನವಾದರೂ ಈಗಿನ ಕಾಲದಂತಿದ್ದವು. ಈಗಿನ ಹಾಗೆ ಆಗಲೂ ಮುಲಾಮು ಮಾಡಲು ಎಣ್ಣೆಯನ್ನು ಉಪಯೋಗಿಸುತ್ತಿದ್ದರು. ಕುಡಿಸುವ ಔಷಧವನ್ನು ನೀರು, ಹಾಲು, ದ್ರಾಕ್ಷಾರಸ, ಸುರೆಯಲ್ಲಾಗಲೀ ಸೇರಿಸಿ ಕೊಡುತ್ತಿದ್ದರು. ಔಷಧವನ್ನು ಸಿಹಿಗೊಳಿಸಲು ಜೇನುತುಪ್ಪ ಬೆರೆಸುತ್ತಿದ್ದರು. ಔಷಧಗಳು ಸಸ್ಯ, ಪ್ರಾಣಿ ಮತ್ತು ಖನಿಜ ವರ್ಗಗಳಿಗೆ ಸೇರಿದ್ದವು. ಹರಳೆಣ್ಣೆ, ಕಾಲೊಸಿಂತ್, ಸೊನಾಮುಖಿಗಳನ್ನು ಮಲಬದ್ಧತೆಗೂ, ಹೋರಿಗಳ ಈಲಿಯನ್ನು ಇರುಳುಗಣ್ಣಿಗೂ, ಉಪಯೋಗಿಸುತ್ತಿದ್ದರು. ಪುರಾತನ ಈಜಿಪ್ಟಿನ ಜನ ಜಂತುಹುಳು ಮತ್ತು ಲಾಡಿ ಹುಳುಗಳಿಂದ ನರಳುತ್ತಿದ್ದರು. ಹುಳುಗಳನ್ನು ಹೋಗಲಾಡಿಸುವುದಕ್ಕೆ ಕರ್ಪೂರ ತೈಲ, ದಾಳಿಂಬೆ ಬೇರನ್ನು ಕೊಡುತ್ತಿದ್ದರು. ಶರೀರದೊಳಗಿನ ರೋಗಗಳಿಗೆ



ಇಬರ್ಸ್ ಬರೆದಿದ್ದ ಜಂಬುಕಾಗದ ಔಷಧಗ್ರಂಥ

ಹೊಟ್ಟೆಗೆ ಔಷಧ ಕುಡಿಸುತ್ತಿದ್ದರು. ನೋವಿಗೆ ಹಚ್ಚಲೂ, ಶ್ವಾಸಕೋಶ ರೋಗಗಳಿಗೆ ಸೇದಲೂ ಔಷಧ ನಿಯಮಿಸುತ್ತಿದ್ದರು. ಚರ್ಮವ್ಯಾಧಿಗೆ ಮುಲಾಮನ್ನೂ, ಕಣ್ಣಿನ ರೋಗಕ್ಕೆ ಕಣ್ಣುತೊಟ್ಟನ್ನೂ, ಕಿವಿರೋಗಕ್ಕೆ ಕಿವಿತೊಟ್ಟನ್ನೂ, ಗಂಟಲಿನ ರೋಗಕ್ಕೆ ಮುಕ್ಕುಳಿಸುವ ಔಷಧಗಳನ್ನೂ ಕೊಡುತ್ತಿದ್ದರು. ಪಿಚಕಾರಿಯೂ ರೂಢಿಯಲ್ಲಿತ್ತು. ಸ್ತ್ರೀ ರೋಗಗಳಿಗೆ ಯೋನಿಯೊಳಕ್ಕೆ ಔಷಧ ಹಾಕುತ್ತಿದ್ದರು. ಕುಂಡಿಮುಳುಗು ಸ್ನಾನ, ಹಬೆಸ್ನಾನ, ಮಣ್ಣಿನ ಸ್ನಾನಗಳೆಲ್ಲವೂ ರೂಢಿಯಲ್ಲಿದ್ದವು. ಕಹೂನ್ ಪ್ಯಾಪಿರಸ್ಸಿನಲ್ಲಿ ಗರ್ಭರೋಗದ ಔಷಧಗಳ ಉಪಯೋಗವನ್ನೂ ಬರೆದಿತ್ತು. ಕ್ಷೀರಾಮ್ಲದ ಜೆಲ್ಲಿ ಈಗಿನ ಹಾಗೆ ಆಗಲೂ ಗರ್ಭ ನಿರೋಧಕ ಔಷಧವಾಗಿತ್ತು.

ಇಬರ್ಸ್ ಪ್ಯಾಪಿರಸ್ಸಿನಲ್ಲಿ ಗೂರಲು, ವಿಸರ್ಪಿ, ಈಲಿ ರೋಗ, ಪ್ಲೇಗು, ಕೊಕ್ಕೆ ಹುಳದ ರೋಗ, ಬೋಳುತಲೆ, ಗನೋರಿಯ, ಸ್ಕರ್ವಿ, ಅಪಸ್ಮಾರ, ಮೊಳೆರೋಗಗಳ ಸ್ವಭಾವ ಮತ್ತು ನಿದಾನ ಕ್ರಮಗಳನ್ನು ವಿವರಿಸಿತ್ತು. ಹೃದ್ರೋಗದ ಎದೆಶೂಲೆ ಗೊತ್ತಿತ್ತು. ಸಿಹಿಮೂತ್ರ, ಪೋಲಿಯೊಮೈಲೈಟಿಸ್, ಏಕಾಂಡ್ರೊಪ್ಲೇಸಿಯ ರೋಗಗಳೂ ಗೊತ್ತಿದ್ದವು.

ಹಲ್ಲಿನ ರೋಗಗಳೂ ಕೂಡ ಇಬರ್ಸ್ ಪ್ಯಾಪಿರಸಿನಲ್ಲಿ ದಾಖಲಾಗಿದ್ದವು. ಗೀಜ ಎಂಬಲ್ಲಿ ಕ್ರಿ. ಪೂ. ೨೫೦೦ ವರ್ಷಗಳ ಹಿಂದೆ ಕಟ್ಟಿದ್ದ ಕೃತಕ ಹಲ್ಲು ಇತ್ತೀಚೆಗೆ ಸಿಕ್ಕಿದೆ. ಹಿರೊಡೊಟಸ್ ಹೇಳಿರುವಂತೆ ಕಣ್ಣುವೈದ್ಯರ ಹಾಗೆ ಹಲ್ಲಿನ ವೈದ್ಯರೂ

ಕ್ರಿ.ಪೂ. ೨೫೦೦ರಲ್ಲಿ ಇದ್ದರು. ಇವರ ಪೈಕಿ, ರಾಜಮನೆತನದ ಕಣ್ಣಿನ ವೈದ್ಯ ಐವಿ ಕ್ರಿ.ಪೂ. ೨೩೦೦ ರಲ್ಲೇ ಪ್ರಖ್ಯಾತಿ ಹೊಂದಿದ್ದನು.

ಅರಮನೆಗೆ, ದೇವಾಲಯಕ್ಕೆ, ಸಮಾಧಿಗೆ, ಮೇಲಾಗಿ ದೇಶ ಮೇಲಿನ ಆಳ್ವಿಕೆ ನೋಡಿಕೊಳ್ಳಲು ವೈದ್ಯರನ್ನು ನೇಮಿಸುವ ಪದ್ಧತಿ ಇತ್ತು.

ಶವರಕ್ಷಣೆ

ಪುರಾತನ ಈಜಿಪ್ಟಿನಲ್ಲಿ ಅಂಗರಚನೆಶಾಸ್ತ್ರದ ಅರಿವು ಉತ್ಕೃಷ್ಟವಾಗಿತ್ತೆಂದು ಹೇಳಿದರೆ ಅತಿಶಯೋಕ್ತಿ ಆಗಲಾರದು. ಆಗಿನ ಕಾಲದಲ್ಲಿ ಶವ ರಕ್ಷಿಸುವ ರೂಢಿ ಇದ್ದುದರಿಂದ ಶವ ರಕ್ಷಿಸುವುದಕ್ಕೆ ಮೊದಲು ಅಂಗಚ್ಛೇದನ ಮಾಡಿ ರಕ್ಷಿಸುತ್ತಿದ್ದರು. ಇದರಿಂದ ದೇಹದ ಪ್ರತಿಯೊಂದು ಅಂಗದ ವಿಷಯವೂ ಈಜಿಪ್ಟಿನವರಿಗೆ ತಿಳಿದಿತ್ತು. ಪೆರುವಿಯನ್ನರನ್ನು ಬಿಟ್ಟರೆ ಈಜಿಪ್ಟ್ ಜನರಲ್ಲಿ ಮಾತ್ರ ಶವ ರಕ್ಷಿಸುವ ರೂಢಿ ಇದ್ದದ್ದು. ಈ ಕಾರ್ಯದಲ್ಲಿ ಈಜಿಪ್ಟಿನವರಿಗೆ ತುಂಬಾ ಬುದ್ಧಿ ಶಕ್ತಿ ಇತ್ತು, ಶ್ರದ್ಧೆಯೂ ಇತ್ತು. ಶವಕ್ಕೆ ಹೃದಯ ಬೇಕಾಗಬಹುದೆಂದು ಶವದಲ್ಲೇ ಬಿಟ್ಟು ಉಳಿದ ಅವಯವಗಳನ್ನೆಲ್ಲಾ ಅಂಗಚ್ಛೇದನ ಮಾಡುತ್ತಿದ್ದರು. ಮೂಗಿನ ಮೂಲಕ ಮಿದುಳನ್ನು ಹೊರಕ್ಕೆ ತೆಗೆಯುತ್ತಿದ್ದರು, ಇದು ಬಹು ಸಾಮರ್ಥ್ಯದ ಕೆಲಸ. ಆ ಮೇಲೆ ರಕ್ಷಿಸುವಂತಹ ದ್ರವವನ್ನು ಶವದೊಳಕ್ಕೆ ಹಾಯಿಸುತ್ತಿದ್ದರು. ಈ ಶವರಕ್ಷಣೆಯ ಚತುರತೆ ಲೋಕದ ವೈದ್ಯಶಾಸ್ತ್ರದ ಮೇಲೆ ಮಹತ್ತರವಾದ ಪ್ರಭಾವ ಬೀರಿದೆ. ಗ್ರೀಕರು ಶವ ಪಾವನವೆಂದು ನಂಬಿದ್ದರಿಂದ ಶವಪರೀಕ್ಷೆ ಮಾಡುತ್ತಿರಲಿಲ್ಲ. ಆದ್ದರಿಂದ ಈಜಿಪ್ಟಿನವರ ಯುಗ ಕಳೆದು ೨೦೦೦ ವರ್ಷಗಳು ಮುಗಿದಿದ್ದರೂ, ಗ್ರೀಕರಿಗೆ ಅಂಗರಚನೆಶಾಸ್ತ್ರ ಗೊತ್ತಿರಲಿಲ್ಲ. ಈಜಿಪ್ಟಿನ ಸಂಸ್ಕೃತಿ, ವೈದ್ಯಶಾಸ್ತ್ರ, ವಿಜ್ಞಾನ ಎಲ್ಲವೂ ಗ್ರೀಕರಿಗೆ ಮಾತ್ರವೇ ಅಲ್ಲದೆ, ಪ್ರಪಂಚಕ್ಕೇ ಮಾದರಿಯಾಗಿವೆ.



ಎರಡನೇ ರಾಮ್ಸೆಸ್

೫ ಪುರಾತನ ಯಹೋದ್ಯರ ವೈದ್ಯಶಾಸ್ತ್ರ

ಆದಿಯಲ್ಲಿ ಯಹೋದ್ಯರು ಅಲೆದಾಡುವ ವರ್ಗಕ್ಕೆ ಸೇರಿದ್ದರು. ಆಗ ಕರಿ ಮೇಕೆಗಳನ್ನು ಮೇಯಿಸುವುದೇ ಅವರ ಜೀವನವಾಗಿತ್ತು. ಅವರು ಹಲವು ದೇವರುಗಳನ್ನು ನಂಬಿದ್ದರಿಂದ ದನ, ಕುರಿ, ಬಂಡೆ ಇತ್ಯಾದಿಗಳನ್ನು ಪೂಜಿಸುತ್ತಿದ್ದರು. ಅವರಿಗೆ ಹಾವು ವಿವೇಚನೆ ಮತ್ತು ಯಶಸ್ಸಿನ ದೇವರಾಗಿತ್ತು. ಮೊದಲು ಜಹೋವನನ್ನು ನಾಡಿನ ದೇವರೆಂದು ನಂಬಿದ್ದರು. ಆತನ ರೀತಿ ನೀತಿಗಳು ಯಹೋದ್ಯರ ಮತವನ್ನು ಮೆಸೊಪೊಟೇಮಿಯಾದಲ್ಲೇ ಇಲ್ಲದಂತಹ ಉನ್ನತ ಸ್ಥಾನಕ್ಕೆ ಏರಲು ಕಾರಣವಾದವು. ಆದರೆ ಈ ಸ್ಥಿತಿ ಬರಬೇಕಾದರೆ ದೇಶದಾದ್ಯಂತ ಹೋರಾಟವಾಗಬೇಕಾಯಿತು.

ಹಳೆ ಒಡಂಬಡಿಕೆ

ಯಹೋದ್ಯರ ವೈದ್ಯಶಾಸ್ತ್ರ ಅವರ ಬೈಬಲ್ಲಿನ ಹಳೆ ಒಡಂಬಡಿಕೆಯ ೫ ಪುಸ್ತಕಗಳಿಂದ ಸಂಗ್ರಹವಾಗಿತ್ತು. ಆದರೆ ಹಳೆ ಒಡಂಬಡಿಕೆಯ ಮೂಲ ಮತ್ತು ರಚನೆ ಗೊತ್ತಾಗಿಲ್ಲ. ಅವರ ಮತ ಭಿನ್ನವಾಗುವುದೆಂದು ಹೆದರಿ ಮುಖ್ಯ ಜೋಯಿಸರು ಒಟ್ಟುಗೂಡಿ ಒಂದು ಉಪಾಯ ಹುಡುಕಿದರು. ಹಿಲ್ಕಯ್ಯ ಎಂಬ ಮುಖ್ಯಸ್ಥ ಜಹೋವನ ಆದೇಶದ ಮೇರೆಗೆ ಮೋಸಸ್ ಬರೆದ ಗ್ರಂಥ ತನಗೆ



ದೇವರು ಮೋಸೆಸ್ಸಿಗೆ ಹತ್ತು ಆಜ್ಞೆಗಳನ್ನು ಕೊಟ್ಟ ಸ್ಥಳವಾದ ಸಿನೈ ಬೆಟ್ಟ

ಸಿಕ್ಕಿದೆ ಎಂದು ಕ್ರಿ.ಪೂ. ೬೪೧–೬೧೦ ರಲ್ಲಿ ದೊರೆಯಾಗಿದ್ದ ಜೊಸಯ್ಯನಿಗೆ ತಿಳಿಸುತ್ತಾನೆ. ಅದೇ ಗ್ರಂಥವನ್ನು ಹಿರಿಯ ಮತ್ತು ನಾಡಿನ ಜನರಿಗೆಲ್ಲಾ ಓದಿ

ಹೇಳುತ್ತಾನೆ. ಅಷ್ಟರಲ್ಲಿ ಮೋಸಸ್ಸಿನ ಮಹಿಮೆ ಎಲ್ಲರಿಗೂ ತಿಳಿದಿದ್ದರಿಂದ ಜನರಲ್ಲಿ ನಂಬಿಕೆ ಬಂದು, ತಾವು ಜಹೋವನ ಮೆಚ್ಚಿಗೆಗೆ ಪಾತ್ರರಾಗಿರುವೆವೆಂದು ತಿಳಿದು ಎಲ್ಲಾ ಸಂಗಡಗಳು ಒಟ್ಟಿಗೆ ಸೇರಿ ತಮ್ಮ ಮತವನ್ನು ಅಭಿವೃದ್ಧಿಮಾಡಲು ಆರಂಭಿಸುತ್ತಾರೆ. ಅಲ್ಲದೆ ಇಷ್ಟರಲ್ಲೇ ಕ್ರಿ. ಪೂ. ೪೪೪ರಲ್ಲಿ ಎಜ್ರ ಎಂಬ ಜೋಯಿಸ ಮತ್ತೆ ಅದೇ ಗ್ರಂಥವನ್ನು ಜನರಿಗೆಲ್ಲಾ ಬೋಧಿಸುತ್ತಾನೆ. ಮೋಸಸ್ ಈ ಗ್ರಂಥವನ್ನು ಬರೆದಿದ್ದ ಪಕ್ಷದಲ್ಲಿ ಆಗ್ಗೆ ೬೦೦ ವರ್ಷಗಳ ಹಿಂದೆ ಬರೆದಿರಬೇಕು. ಗ್ರಂಥದಲ್ಲಿ ಮುಖ್ಯವಾಗಿ, ಹಳೆ ಒಡಂಬಡಿಕೆಯ ಮೊದಲ ೫ ಭಾಗಗಳು ಸೇರಿದ್ದವು.

ಮೋಸಸ್

ಮೋಸಸ್ಸು ಯಹೋದ್ಯನೋ ಈಜಿಪ್ಟಿನವನೋ ತಿಳಿಯದು. ಹೆಸರು ನೋಡಿದರೆ ಈಜಿಪ್ಟಿನವನೆಂದು ಹೇಳಬಹುದು. ಹುಟ್ಟು ಹೇಗಾದರೂ ಇರಲಿ, ಮೊಸಸ್ ಯಹೋದ್ಯರ ನಾಯಕನೆಂಬುವುದರಲ್ಲಿ ಸಂದೇಹವಿಲ್ಲ. ಅವನ ಗ್ರಂಥವನ್ನು ಅವನೇ ಬರೆದನೋ ಇಲ್ಲವೋ ಎಂದು ಸಂಶಯವಿದ್ದರೂ,ಗ್ರಂಥ ಮಾತ್ರ ಪ್ರಪಂಚಕ್ಕೇ ಮಾದರಿಯಾಗಿದೆ. ಅದು ಆ ಜನರಲ್ಲಿ ಸಮಾಧಾನ, ಸ್ಫೂರ್ತಿ ಮತ್ತು ವಿವೇಕವನ್ನುಂಟುಮಾಡಿತು. ಮೆಸೊಪೊಟೇಮಿಯದ ಸಂಸ್ಕೃತಿ ಮೋಸಸ್ ಗ್ರಂಥದ ಮೇಲೆ ಕೊಂಚವಾದರೂ ಪ್ರಭಾವ ಬೀರದೆ ಇರದು. ಮೆಸೊಪೊಟೇಮಿಯ ದೇಶದ ಹಮ್ಮುರಬಿ ಸಂಗ್ರಹವೂ ಮೋಸಸ್ಸಿಗೆ ಜಹೋವ ಆಜ್ಞಾಪಿಸಿದ ಹತ್ತು ಕಟ್ಟಳೆಗಳ ಪ್ರತಿ ಆಗಿರಬಹುದು. ಇವರಿಬ್ಬರ ಗುಟ್ಟಿನ ಜನನ ಮತ್ತು ನದಿಯಲ್ಲಿ ಹಸುಳೆಗಳನ್ನು ತ್ಯಜಿಸಿದ ಪುರಾತನ ಇತಿಹಾಸಗಳನ್ನು ವಿಮರ್ಶಿಸಿ ನೋಡಿದರೆ ಇವರಿಬ್ಬರೂ ಒಂದೇ ಎಂದು ಹೇಳಲೂಬಹುದು.

ವೈದ್ಯರಲ್ಲಿದ್ದ ನಂಬಿಕೆ

ಪುರಾತನ ಯಹೋದ್ಯರಿಗೆ ಭೂತ ಪ್ರೇತಗಳಲ್ಲಿ ನಂಬಿಕೆ ಇದ್ದುದರಿಂದ ವೈದ್ಯರ ಅಗತ್ಯ ಇರಲಿಲ್ಲವೆಂದು ಅನೇಕರು ತಿಳಿಸಿದ್ದಾರೆ. ಆದರೆ ಅದು ಸುಳ್ಳು ಎನ್ನುವುದಕ್ಕೆ ಸಾಕಷ್ಟು ನಿದರ್ಶನಗಳಿವೆ. ತನ್ನ ತಂದೆ ಜೇಕಬ್ಬಿನ ಶವವನ್ನು ರಕ್ಷಿಸಿಡಬೇಕೆಂದು ಜೋಸೆಫ್, ವೈದ್ಯರಿಗೆ ಅಪ್ಪಣೆಕೊಟ್ಟಿರುವುದೇ ಒಂದು ನಿದರ್ಶನ. ಹಾಗೂ ರೊಫೆ ಅಂದರೆ "ವೈದ್ಯ" ಎಂದು ಅರ್ಥವುಳ್ಳ ಪದವನ್ನು ಇನ್ನೂ ಅನೇಕ ಕಡೆ ಉಪಯೋಗಿಸಲಾಗಿದೆ. ದೊರೆ ಆಸ ತನ್ನ ಕಾಲು ರೋಗವನ್ನು ಗುಣಪಡಿಸಿಕೊಳ್ಳಲು ವೈದ್ಯರಿಗೆ ಅಪ್ಪಣೆ ಮಾಡಿದನೇ ಹೊರತು ದೇವರಲ್ಲಿ ಪ್ರಾರ್ಥನೆ ಮಾಡಲಿಲ್ಲ. ಜರೆಮಯ್ಯ ಮತ್ತು ಜಾಬ್ ಕೂಡ ವೈದ್ಯರ ವಿಷಯವಾಗಿ ನುಡಿದಿದ್ದಾರೆ. ಆದರೆ ಆಗಿನ ಕಾಲದಲ್ಲಿ ಈಜಿಪ್ಟಿನಲ್ಲಿ ಇದ್ದ ಹಾಗೆ ಬೇರೆಬೇರೆ ವೈದ್ಯ ಪ್ರವೀಣರಿರಲಿಲ್ಲ. ಸಾಮಾನ್ಯ ವೈದ್ಯರು ಮಾತ್ರ ಇದ್ದರು. ಸಾಮಾನ್ಯ ಶಸ್ತ್ರಕ್ರಿಯೆ ಕರ್ತನನನ್ನು ಇವರು ಸುತ್ತು ಮಾಡುತ್ತಿದ್ದರು. ಅವರ ಮತ ಪದ್ಧತಿಯಂತೆ ತಂದೆ, ವೈದ್ಯ ಅಥವಾ ನಿಪುಣ ಮಾತ್ರ

ಮಾಡಬೇಕಾಗಿತ್ತು.

ಯಹೋದ್ಯರಿಗೆ ಕನಸಿನಲ್ಲೂ ಯಕ್ಷಿಣಿಯಲ್ಲೂ ನಂಬಿಕೆ ಇತ್ತು. ಕನಸ ದೇವರ ಪ್ರೇರೇಪಣೆ ಎಂದು ಭಾವಿಸಿದ್ದರು. ಹಾವಿನಾಕಾರದಲ್ಲಿ ಮಾಡಿದ್ದ ಹಿತ್ತಾಳೆ ವಿಗ್ರಹದಿಂದ ಹಾವು ಕಚ್ಚಿದವನನ್ನು ಮೋಸಸ್ ಗುಣಪಡಿಸುತ್ತಿದ್ದ. ಹಾಗೂ ಜೋರ್ಡನ್ ನದಿಯಲ್ಲಿ ಚರ್ಮ ರೋಗಿಗಳು ಸ್ನಾನ ಮಾಡಿದರೆ ವ್ಯಾಧಿ ಗುಣವಾಗುತ್ತಿತ್ತು ಎನ್ನುವುದಕ್ಕೆ ಆಧಾರಗಳಿವೆ. ಕೆಲವು ದಿವಸಗಳು ಕಳೆದ ಮೇಲೆ, ಆ ದೇಶದಲ್ಲಿ ನಾಡು ವೈದ್ಯರು ತಲೆ ಎತ್ತಿದರು. ಇವರು ತಮ್ಮ ನಾಡು ವೈದ್ಯವನ್ನು ಅನುಭವದಿಂದ ತಿಳಿದುಕೊಳ್ಳುತ್ತಿದ್ದರು.

ಯಹೋದ್ಯರು ವೈದ್ಯನನ್ನು ವಿದ್ಯಾವಂತನೆಂದೂ,ಜ್ಞಾನಿಯೆಂದೂ ನಂಬಿದ್ದರು. ಬೈಬಲಿನ ಹಳೆ ಒಡಂಬಡಿಕೆಯಲ್ಲಿ ವೈದ್ಯರಿಗೆ ಸಲ್ಲತಕ್ಕ ಗೌರವವನ್ನು ಕೊಡಬೇಕೆಂದು ಸಿರಾಕ್ ವಂಶಸ್ಥ ನುಡಿದಿದ್ದಾನೆ. ಈ ಮಾತುಗಳು ಕ್ರಿ. ಪೂ. ೧೯೦-೧೫೦ ರಲ್ಲಿ ಹೇಳಿರಬಹುದು. ಆಗ ವೈದ್ಯನಿಗೂ ನಿಪುಣನಾದ ಕೆಲಸಗಾರನಿಗೂ ವ್ಯತ್ಯಾಸವಿತ್ತು. ಆದರೂ ನಿಪುಣನಾದ ಕೆಲಸಗಾರ ಅನೇಕ ವೇಳೆ ಪರಿಕರ್ತನ ಮಾಡುತ್ತಿದ್ದ. ವೈದ್ಯ ಶಿಕ್ಷಣ ಪಡೆಯುವ ರೀತಿ ತಿಳಿಯದಿದ್ದರೂ ಹಿರಿಯ ವೈದ್ಯರ ಕೈ ಕೆಳಗೆ ಕೆಲಸಮಾಡಿ ನಿಪುಣರಾಗುತ್ತಿದ್ದರು.ಶವಪರೀಕ್ಷೆಯನ್ನು ಮತಧರ್ಮದ ಪ್ರಕಾರ ರದ್ದು ಮಾಡಿದ್ದರಿಂದ ಅಂಗರಚನೆಶಾಸ್ತ್ರವಾಗಲೀ ಜೀವಶಾಸ್ತ್ರವಾಗಲಿ ಯಹೋದ್ಯರಿಗೆ ತಿಳಿದಿರಲಿಲ್ಲ. ಆದರೂ ಪ್ರಾಣಿಗಳನ್ನು ಆಹುತಿ ಕೊಡುತ್ತಿದ್ದುದರಿಂದ ಕೊಂಚಮಟ್ಟಿಗೆ ಶರೀರ ರಚನೆಯನ್ನು ತಿಳಿದುಕೊಂಡಿದ್ದರು. ದೇಹದ ಅನೇಕ ಭಾಗಗಳಿಗೆ ಅವರ ಭಾಷೆಯಲ್ಲಿ ಹೆಸರು ಇದ್ದವು. ಬೈಬಲ್ಲಿನಲ್ಲಿ ಅನೇಕ ರೋಗಗಳ ಹೆಸರುಗಳನ್ನು ನಮೂದಿಸಿದೆ. ಉ: ಅಪಸ್ಮಾರ, ಕೀಲು ಬಾವು,ಏಡಿಗಂತಿ, ಗಂಟಲುನೋವು, ಮೂರ್ಛೆ, ಊತ ಮುಂತಾದವು. ಎದೆಬಡಿತ, ಕೇಡು ತರುವಂತಹ ಅನುಭವ, ಕಠಿಣ ಎದೆ ನೋವು, ಹೃದ್ರೋಗದ ವಿವರಗಳೂ ತಿಳಿದಿತ್ತು. ಸಿಹಿಮೂತ್ರ, ಒಗ್ಗದಿಕೆ, ಪ್ಲೇಗು, ಪೋಲಿಯೊಮೈಲಿಟಿಸ್, ಮತ್ತು ಮಿದುಳಿನ ರೋಗಗಳು ಕೂಡ ಅವರಿಗೆ ಸಾಕಷ್ಟು ತಿಳಿದಿತ್ತು. ದಾದಿಯರು ಹೆರಿಗೆ ಮಾಡಿಸುವುದರಲ್ಲಿ ಪಳಗಿದ್ದರು. ಯಹೋದ್ಯರಿಗೆ ಈಜಿಪ್ಟಿನವರಷ್ಟು ಔಷಧಗಳು ಗೊತ್ತಿದ್ದರೂ ಬೈಬಲಿನಲ್ಲಿ ಔಷಧ ವಿಚಾರ ಅಷ್ಟೇನೂ ಬರೆದಿಲ್ಲ. ಆದರೆ ೨೦೦-೬೦೦ ರಲ್ಲಿ ಬರೆದ ಟಾಲ್ಮಡ್ ಪುಸ್ತಕದಲ್ಲಿ ಔಷಧ ವಿಷಯ ಸಾಕಷ್ಟು ಬರೆದಿತ್ತು.

ಮೋಸಸ್ಸಿನ ನಿರ್ಮಲೀಕರಣ ಕಾರ್ಯಗಳು

ಯಹೋದ್ಯರ ಅತ್ಯುತ್ತಮವಾದ ಮಹಾಕಾರ್ಯವೆಂದರೆ ನಿರ್ಮಲೀಕರಣ. ಮೋಸಸ್ ಆಗಿನ ಕಾಲದಲ್ಲಿ ಪ್ರಪಂಚಕ್ಕೆಲ್ಲಾ ಉತ್ತಮವಾದ ನೈರ್ಮಲ್ಯ ಶಿಲ್ಪಿ ಎನಿಸಿಕೊಂಡಿದ್ದ. ಲೆವಿಟಿಕಸ್ ಪುಸ್ತಕದಲ್ಲಿ ಬರೆದಿರುವಂತೆ ಆವನು ಶುದ್ಧ ಆಹಾರ,

ಶುದ್ಧ ನೀರು, ಶುದ್ಧ ಗಾಳಿ ಮತ್ತು ಶುದ್ಧ ವಾಸಸ್ಥಳಗಳ ವಿಷಯದಲ್ಲಿ ಬಹಳ ಶ್ರದ್ಧೆವಹಿಸಿದ್ದ. ಪ್ರಾಣಿಗಳಲ್ಲಿ ಶುದ್ಧಿಯಾಗಿರುವವನ್ನು ಮಾತ್ರ ಆಹಾರಕ್ಕಾಗಿ ಉಪ



ಮೋಸಸ್

ಯೋಗಿಸಬೇಕೆಂದೂ, ಕೆಟ್ಟದ್ದನ್ನು ರದ್ದು ಮಾಡಬೇಕೆಂದೂ ತಿಳಿಸಿದ್ದನು. ಹಂದಿಗಳಲ್ಲಿ ಲಾಡಿ ಹುಳುಗಳು ಇರುವುವೆಂದೂ ಹಂದಿ ಮಾಂಸವನ್ನು ತಿನ್ನಕೂಡದೆಂದು ಅಡ್ಡಿಮಾಡಿದ್ದನು. ಅನೇಕ ಹಾನಿಕರ ಮೀನುಗಳನ್ನೂ ಸಿಂಪಿಗಳನ್ನೂ ತಿನ್ನಕೂಡದೆಂದು ಸಾರಿದ್ದನು. ಭಾವಿಯ ನೀರನ್ನು ಶುದ್ಧಿಯಾಗಿಡಬೇಕೆಂದೂ, ಶುದ್ಧಿಮಾಡುವ ಕ್ರಮಗಳನ್ನೂ ತಿಳಿಸಿದ್ದನು. ಮನುಷ್ಯನ ಜಲಮಲಗಳನ್ನು ಭೂಮಿಯಲ್ಲಿ ಸರಿಯಾದ ರೀತಿಯಲ್ಲಿ ಹೂಳಬೇಕೆಂದೂ ತಿಳಿಸಿದ್ದನು. ಊಟಕ್ಕೆ ಮೊದಲು ಕೈ ತೊಳೆಯುವುದು ರೂಢಿಯಲ್ಲಿತ್ತು. ಮೇಹರೋಗ ಅಂಟುರೋಗವೆಂದೂ, ಅಂತಹ ರೋಗಿಗಳನ್ನು ಪ್ರತ್ಯೇಕ ಮಾಡುತ್ತಿದ್ದನು. ರೋಗವಿದ್ದ ಹೆಂಗಸರನ್ನು ಕೆಲವು ವೇಳೆ ಕೊಲ್ಲಿಸುವುದು ರೂಢಿಯಲ್ಲಿತ್ತು. ತೊನ್ನು ಕೂಡ ಅಂಟುರೋಗವೆಂದು ರೋಗಿಗಳನ್ನು ಪ್ರತ್ಯೇಕವಾಗಿರಿಸುತ್ತಿದ್ದನು. ಇತಿಯೋಪಿಯನ್ ಹೆಂಗಸನ್ನು ಮೋಸಸ್ ಮದುವೆಯಾಗಿದ್ದುದರಿಂದ ಯೆಹೋವನಿಗೆ ಅಸಮಾಧಾನವಾಗಿ ಅವಳಿಗೆ ತೊನ್ನು ಬಂತೆಂದೂ, ಆದರೆ ರೋಗ ಕೇವಲ ೭ ದಿವಸಗಳಲ್ಲೇ ಗುಣವಾಯಿತೆಂದೂ ಪ್ರತೀತಿ ಇತ್ತು. ರೋಗ ಗುಣಪಡಿಸುವುದಕ್ಕಿಂತಲೂ ರೋಗ ಬಾರದ ಹಾಗೆ ನೋಡಿಕೊಳ್ಳುವುದೇ ಉತ್ತಮವೆನ್ನುವ ನುಡಿ ಮೋಸಸ್ಸಿಗೂ ತಿಳಿದಿತ್ತು. ಅವನು ಆರೋಗ್ಯಶಾಸ್ತ್ರ ತಿಳಿದಿರುವವರನ್ನು ಮಾತ್ರ ಆರೋಗ್ಯಾಧಿಕಾರಿಗಳಾಗಿ ನೇಮಿಸಿ

ಕೊಳ್ಳುತ್ತಿದ್ದನು. ಜನಸಂಖ್ಯೆ, ಜನನ ಮರಣದ ಸಂಖ್ಯೆ ಗೊತ್ತುಮಾಡಲು ಅನುಕೂಲಗಳನ್ನು ಏರ್ಪಡಿಸಿದ್ದನು. ಮೈಯಿಳಿತವನ್ನು ನಿಷೇಧಿಸಿ, ಸಂತಾನವೃದ್ಧಿಯನ್ನು ಪ್ರೋತ್ಸಾಹಿಸುತ್ತಿದ್ದನು.

ಪುರಾತನ ಯಹೋದ್ಯರಲ್ಲಿ ಪ್ರಭಾವಶಾಲಿ ವೈದ್ಯರಿರಲಿಲ್ಲ. ಹಳೆ ಒಡಂಬಡಿಕೆಯಲ್ಲಿ ಉತ್ತಮ ಬರಹಗಾರರ, ಕವಿಗಳ, ಪೂಜ್ಯರ, ರಾಜರ, ರಣಧೀರರ ಹೆಸರುಗಳಿದ್ದವೇ ಹೊರತು ಉತ್ತಮ ವೈದ್ಯರ ಹೆಸರಿರಲಿಲ್ಲ. ಜೆರೂಸೆ ನಾಶವಾದ ನಂತರ ಯಹೋದ್ಯರು ಬೇರೆಬೇರೆ ದೇಶಗಳಿಗೆ ಚದುರಿದ ಮೇಲೆ ಗಣ್ಯ ವೈದ್ಯರು ಪ್ರಾಮುಖ್ಯತೆಗೆ ಬಂದರು.

೬. ಪ್ರಾಚೀನ ಹಿಂದೂದೇಶದ ವೈದ್ಯಶಾಸ್ತ್ರ

ಪುರಾತನ ಹಿಂದೂ ದೇಶದ ಜನರು ಕ್ರಿ. ಪೂ. ೩ನೇ ಶತಮಾನದಲ್ಲೇ ವೈದ್ಯ ಶಾಸ್ತ್ರದಲ್ಲಿ ವೈಜ್ಞಾನಿಕ ಪದ್ಧತಿಯನ್ನಿಟ್ಟುಕೊಂಡಿದ್ದರಲ್ಲದೆ ಆಗಿನ ಕಾಲದಲ್ಲಿ ಮುಂದಿದ್ದ ಇತರ ದೇಶಗಳಿಗೆ ಯಾವುದರಲ್ಲೂ ಕಡಿಮೆಯಾಗಿರಲಿಲ್ಲ. ಔಷಧಶಾಸ್ತ್ರ, ಶಸ್ತ್ರವೈದ್ಯ ಆರೋಗ್ಯಶಾಸ್ತ್ರಗಳಲ್ಲಿ ಬಹುಮಟ್ಟಿಗೆ ಪ್ರವೀಣರಾಗಿದ್ದರು. ಕ್ರಿ. ಪೂ. ೧೬೦೦ರಲ್ಲಿ ಆರ್ಯರು ಹಿಂದೂದೇಶಕ್ಕೆ ಬರುವುದಕ್ಕೆ ಮೊದಲು ಹಿಂದು ಜನರು ಕಾಡುಜನರಾಗಿದ್ದರೆಂದು ಹೇಳುತ್ತಿದ್ದ ಮಾತುಗಳನ್ನು ಇತ್ತೀಚೆಗೆ ನಡೆಸಿದ ಭೂಶೋಧನೆಗಳು ಸುಳ್ಳೆಂದು ಸಿದ್ಧಪಡಿಸಿವೆ. ಸರ್ ಜಾನ್ ಮಾರ್ಷಲ್ ಭೂಶೋಧನೆ ನಡೆಸಿದ ಮೇಲೆ ಈ ರೀತಿ ನುಡಿದಿದ್ದಾರೆ.

“ಕ್ರಿ. ಪೂ. ೪ನೇ ಮತ್ತು ೩ನೇ ಶತಮಾನದಲ್ಲಿ ಅತ್ಯುತ್ತಮ ಸ್ಥಿತಿಯಲ್ಲಿದ್ದ ಪಟ್ಟಣದ ಜೀವನ, ಅನೇಕ ಜನರ ಮನೆಗಳಲ್ಲಿ ಏರ್ಪಡಿಸಿಕೊಂಡಿದ್ದ ಸ್ನಾನಗೃಹ, ಭಾವಿನೀರು ಸರಬರಾಜು ಹಾಗು ಕೊಚ್ಚೆನೀರು ಬಸಿಯಲು ಉತ್ತಮ ಚರಂಡಿ ಮಾರ್ಪಾಡುಗಳು ಸುಮೇರ್ ದೇಶದಲ್ಲಿ ಒದಗಿಸಿದ್ದ ಅನುಕೂಲಗಳಿಗೆ ಸಮನಾಗಿದ್ದುವಲ್ಲದೆ, ಅದೇ ಕಾಲದ ಬ್ಯಾಬಿಲೋನಿಯ ಮತ್ತು ಈಜಿಪ್ಟ್ ದೇಶಗಳ ಅನುಕೂಲಗಳಿಗಿಂತಲೂ ಉತ್ಕೃಷ್ಟ ಮಟ್ಟದಲ್ಲಿದ್ದದ್ದು ಹಿಂದೂದೇಶದ ಹಿರಿಯ ಜನಜೀವನವನ್ನು ಸೂಚಿಸುತ್ತವೆ.”

ಆಯುರ್ವೇದವೆಂಬ (ಆಯುಸ್ಸಿನ ವೇದ) ಆಗಿನ ಕಾಲದ ವೈದ್ಯಶಾಸ್ತ್ರ ಈನತ್ತಿಗೂ ನಮ್ಮಲ್ಲಿ ರೂಢಿಯಲ್ಲಿದೆ. ಅನೇಕರು ಈ ವಿದ್ಯೆಯನ್ನು ಅಭಿವೃದ್ಧಿಪಡಿಸಬೇಕೆಂದು ಕಾತುರರಾಗಿದ್ದರೂ ಕೆಲವರು ಇದು ಹಳೇ ಕಂತೆ ಪುರಾಣವೆಂದೂ, ಕೇವಲ ಕ್ರಿಯಾತ್ಮಕವಲ್ಲದ ವಿದ್ಯೆಯೆಂದೂ ತಳ್ಳಿಹಾಕಲು ಯತ್ನಿಸುತ್ತಿದ್ದಾರೆ. ಆಯುರ್ವೇದ ಪಂಡಿತರು ಅಳಲೆಕಾಯಿ ಪಂಡಿತರೆಂದು ಹೇಳುವುದೂ ಉಂಟು.

“ಕ್ರಿ. ಪೂ. ೨೫೦೦ರಲ್ಲಿದ್ದ ಹರಪ್ಪ ಮತ್ತು ಮೊಹೆಂಜದಾರೊ ಸಂಸ್ಕೃತಿಗಳನು ಸಿಂಧೂ ನದಿ ಪ್ರದೇಶದ ಭೂಶೋಧನೆ ಪ್ರದರ್ಶಿಸುತ್ತದೆ. ಈ ಸಂಸ್ಕೃತಿಗಳು ಈಜಿಪ್ಟ್ ಮತ್ತು ಬ್ಯಾಬಿಲಾನ್ ಸಂಸ್ಕೃತಿಗಳಿಗಿಂತಲೂ ಹಿಂದಿನವೆಂದೂ ಹಾಗೂ ಅವಕ್ಕೆ ಸಮಾನವಾದುವೆಂದೂ ತಿಳಿದುಬಂದಿದೆ.

ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನೊಳಗೊಂಡಿರುವ ವಿಜ್ಞಾನಶಾಸ್ತ್ರ ಪುರಾತನ ಹಿಂದೂದೇಶದ ವೈದ್ಯಶಾಸ್ತ್ರಕ್ಕೆ ಅಡಿಪಾಯವಾಗಿತ್ತು. ಆಗಿನ ಕಾಲದ ವೈದ್ಯರು ಎಲ್ಲಾ ವಿಜ್ಞಾನಗಳಲ್ಲೂ ಪಂಡಿತರಾಗಿರುವುದು ಸೂಕ್ತವೆಂದು ನಂಬಿದ್ದರು. ಆಯುರ್ವೇದ ಮೊದಲಿಗೆ ೧೦೦೦ ಅಧ್ಯಾಯಗಳನ್ನೊಳಗೊಂಡಿತ್ತೆಂದೂ, ೧,೦೦,೦೦೦

ಶ್ಲೋಕಗಳಿದ್ದವೆಂದೂ, ಆಮೇಲಾಮೇಲೆ ಮನುಷ್ಯನ ಮರೆವಿನಿಂದ ೮ ಅಧ್ಯಾಯಗಳಿಗೆ ಇಳಿಯಿತೆಂದೂ ಹೇಳಲಾಗಿದೆ. ಆಯುರ್ವೇದದ ಪಂಡಿತರು ತಮ್ಮ ಕುಶಲತೆಯನ್ನು ತಮ್ಮಲ್ಲೇ ಬಚ್ಚಿಟ್ಟುಕೊಂಡಿದ್ದುದರಿಂದಲೂ, ಇತರರು ಮುಂದೆ ಬರುವರೆಂಬ ಅಸೂಯೆಯಿಂದಲೂ, ತಂದೆಯಿಂದ ಮಗ, ಗುರುವಿನಿಂದ ಶಿಷ್ಯ ಮಾತ್ರ ವಿದ್ಯೆ ಕಲಿಯುತ್ತಿದ್ದುದರಿಂದಲೂ, ದೊಡ್ಡ ವಿದ್ಯಾಸಂಸ್ಥೆಗಳು ಸ್ಥಾಪಿತವಾಗದೆ ಆಯುರ್ವೇದ ಅಭಿವೃದ್ಧಿಯಾಗಲಿಲ್ಲ. ಆಯುರ್ವೇದ ಸಂಸ್ಕೃತ ಭಾಷೆಯಲ್ಲಿ ಇದ್ದುದರಿಂದ ಆ ಭಾಷೆಯನ್ನರಿಯದ ಪಾಶ್ಚಿಮಾತ್ಯ ಜನರಿಗೆ ಆಯುರ್ವೇದ ಕಲಿಯಲು ಸಾಧ್ಯವಾಗಲಿಲ್ಲ. ಆದರೂ ಅದಕ್ಕೆ ಸಾಕಷ್ಟು ಮರ್ಯಾದೆ ದೊರೆತಿತ್ತು.

ಅಂಗರಚನೆ, ದೇಹಶಾಸ್ತ್ರ, ಔಷಧ ವಸ್ತು ಶಾಸ್ತ್ರ, ಔಷಧ ವೈದ್ಯಶಾಸ್ತ್ರ, ಶಸ್ತ್ರ ವೈದ್ಯಗಳಲ್ಲೆಲ್ಲಾ ಶ್ರೇಯಸ್ಸಿದ್ದಿತು. ಅಂಗರಚನೆಯ ವಿಚಾರವಾಗಿ ವಿಲ್ ಡುರಾಂಟ್ ಹೀಗೆ ಹೇಳಿದ್ದಾನೆ. "ರಸಾಯನಶಾಸ್ತ್ರದ ಕೆಲವು ಮುಖಗಳಂತೆ ಅಂಗರಚನಶಾಸ್ತ್ರವೂ ಅಂಗಕ್ರಿಯೆಶಾಸ್ತ್ರವೂ ಕ್ರಿ. ಪೂ. ೬ನೇ ಶತಮಾನದಷ್ಟು ಹಿಂದಿನ ಹಿಂದೂ ವೈದ್ಯದ ಉಪಉತ್ಪನ್ನಗಳು ಔಷಧಶಾಸ್ತ್ರದ ವಿಷಯವಾಗಿ ಗರ್‌ಟ್ರೂಡ್ ಎಮರ್ಸನ್" 'ಗಿಡ ಮರಗಳ, ಖನಿಜಗಳ, ಪ್ರಾಣಿಗಳ ಮೂಲದಿಂದ ಬಂದ ಮದ್ದುಗಳ ವರ್ಗೀಕರಣವೇ ಚರಕನ ಗ್ರಂಥದ ಅತ್ಯಂತ ಗಮನಾರ್ಹ ಭಾಗ' ಎಂದೂ ಶಸ್ತ್ರವೈದ್ಯದ ವಿಚಾರವಾಗಿ 'ಅವನ ಕಾಲವನ್ನು ಕ್ರಿ. ಪೂ. ೭೦೦ರಷ್ಟು ಹಿಂದಕ್ಕೆ ಹೇಳುವ ಸುಶ್ರುತ ಶಸ್ತ್ರವೈದ್ಯನಾಗಿದ್ದನು. ಅವನು ಶಸ್ತ್ರವೈದ್ಯವನ್ನು ವೈದ್ಯವಿಜ್ಞಾನಗಳಲ್ಲೆಲ್ಲಾ ಪ್ರಥಮ ಮತ್ತು ಅತ್ಯುತ್ತಮ ಎಂದಿದ್ದಾನೆ. ಸುರೂಪಿಕ ಶಸ್ತ್ರವೈದ್ಯವನ್ನು ಕುರಿತು ಪ್ರಾಧ್ಯಾಪಕ ಎ. ಎಲ್. ಬಾಷಮ್ 'ಆ ಕಾಲದಲ್ಲಿ ಮತ್ತೆಲ್ಲೇ ಆಗಲಿ ಏನೇ ಗೊತ್ತಿರುವುದಕ್ಕಿಂತಲೂ ಹೆಚ್ಚಿನದಾಗಿ ಸುರೂಪಿಕ ಶಸ್ತ್ರವೈದ್ಯ ಮುಂದುವರಿದಿತ್ತು' ಎಂದು ಹೊಗಳಿದ್ದಾನೆ.

ಆಯುರ್ವೇದ

ಆಯುರ್ವೇದದ ಪೂರ್ವಚರಿತ್ರೆ ಕ್ರಿ. ಪೂ. ೩೦೦೦ ವರ್ಷಗಳ ಹಿಂದಿನದು ಎಂದು ಹೇಳಬಹುದು. ಅದರ ಪ್ರಭಾವ ರಹಸ್ಯವಾಗಿದ್ದುದರಿಂದ ಆಗಿನ ವೈದ್ಯಶಾಸ್ತ್ರದ ಪಂಡಿತರು ಅಜ್ಞಾತದಲ್ಲಿದ್ದರು. ಪುರಾತನ ಹಿಂದೂ ವೈದ್ಯಶಾಸ್ತ್ರ ದೇವರ ಮಹಿಮೆಯೆಂದೂ, ಆಯುರ್ವೇದವನ್ನು ಬ್ರಹ್ಮ ದಕ್ಷ ಪ್ರಜಾಪತಿಗೆ ಬೋಧಿಸಿದನೆಂದೂ, ಇವನು ಸೂರ್ಯನ ಅವಳಿ ಮಕ್ಕಳಾದ ಅಶ್ವಿನಿ ಕುಮಾರರಿಗೆ ಹೇಳಿಕೊಟ್ಟನೆಂದೂ, ಇವರು ಅನೇಕ ಪುಸ್ತಕಗಳನ್ನು ಬರೆದರೆಂದೂ ಪುರಾಣದಲ್ಲಿ ಹೇಳಿದೆ. ಇವರು ದೈವ ಪಂಡಿತರೆಂದೂ, ಇವರ ಹೆಸರುಗಳನ್ನು ಋಗ್ವೇದದಲ್ಲಿ ನಮೂದಿಸಿದೆಯೆಂದೂ ತಿಳಿಯಲಾಗಿದೆ.

ಕ್ರಿ. ಪೂ. ೧೬೦೦ರಲ್ಲಿ ಆರ್ಯರು ಹಿಂದೂ ದೇಶಕ್ಕೆ ಬರುವುದಕ್ಕೆ ಮೊದಲೇ ಆಗಿನ ಜನರಿಗೆ ವೈದ್ಯಶಾಸ್ತ್ರದಲ್ಲಿ ಸಾಕಷ್ಟು ತಿಳುವಳಿಕೆ ಇತ್ತು. ಕ್ರಿ. ಪೂ. ೪ನೇ

ಮತ್ತು ೩ನೇ ಸಹಸ್ರ ವರ್ಷಗಳ ಹಿಂದೆ ಪಟ್ಟಣಗಳು, ಮೇಲುಕಾಲುವೆಗಳು, ಸ್ನಾನದ ಮನೆಗಳು ಇದ್ದವೆಂಡೂ, ಆಗಿನ ಸಂಸ್ಕೃತಿ ಈಜಿಪ್ಟಿನವರ ಸಂಸ್ಕೃತಿಗಿಂತಲೂ ಮೇಲಾಗಿತ್ತೆಂದೂ, ಆರ್ಯರು ಬಂದು ಆ ಜನರನ್ನು ಜಯಿಸಿ ಅವರಿಂದಲೇ ಅನೇಕ ವಿದ್ಯೆಗಳನ್ನು ಕಲಿತರೆಂದೂ ಹೇಳಿಕೆ ಇದೆ. ಆರ್ಯರು ತಂದ ಭಾಷೆ ಸ್ಥಳೀಯ ಭಾಷೆಯಲ್ಲಿ ಮಿಲನವಾಗಿ ಉಂಟಾದ ಸಂಸ್ಕೃತ ಭಾಷೆ ಪ್ರಪಂಚಕ್ಕೇ ಅತಿ ಶ್ರೇಷ್ಠವಾದ ಭಾಷೆಯಾಯಿತೆಂದು ತಿಳಿಯಲಾಗಿದೆ.

ಆಯುರ್ವೇದದ ಭಾವನೆಯ ಪ್ರಕಾರ ಶರೀರವನ್ನು ದೋಷ, ಧಾತು, ಮಲಗಳೆಂದು ಮೂರು ರಚನಭಾಗಗಳಾಗಿ ವಿಂಗಡಿಸಬಹುದೆಂದೂ, ದೋಷದಲ್ಲಿ ವಾತ, ಪಿತ್ತ, ಕಫಗಳೆಂಬ ತ್ರಿದೋಷಗಳು ; ಆಮರಸ, ರಕ್ತ, ಮಾಂಸ, ಮೇದಸ್ಸು, ಅಸ್ಥಿ, ಮಜ್ಜೆ, ಶುಕ್ರಗಳೆಂಬ ಏಳು ಧಾತುಗಳು ; ಮಲ, ಮೂತ್ರ, ಬೆವರುಗಳೆಂಬ ಮೂರು ಮಲಗಳಿವೆಯೆಂದೂ ವಿವರಿಸಲಾಗಿದೆ. ಸಂಚಲನಕ್ಕೂ, ಜೀವನಾಧಾರಕ್ಕೂ ವಾತ (ವಾಯು) ಅತಿಮುಖ್ಯವಾದುದೆಂದೂ, ನರಗಳ ಚಾಲಕ ಬಲದಿಂದ ಮಾಂಸಖಂಡಗಳು ಕುಗ್ಗಿ ಚಲನ ಉಂಟಾಗುತ್ತದೆಂದು ಹೇಳಿದೆ. ಆಹಾರ ಅರಗಿದ ಮೇಲೆ ದೇಹಪೋಷಕ ದ್ರವ್ಯ, ಜೀವಿಯ ದೇಹದ ಭಾಗವಾಗಿ ಮಾರ್ಪಾಡಾಗುವುದರಲ್ಲೂ ಮತ್ತು ಜೀವ ದ್ರವ್ಯ ಒಡೆದು ಸುಲಭ ರಚನೆಯ ರಸಾಯನಿಕ ಪದಾರ್ಥಗಳಾಗಿ ಮಾರ್ಪಾಡಾಗುವುದರಲ್ಲೂ ಹಾಗೂ ಶರೀರಕ್ಕೆ ಬೇಕಾದ ಶಾಖ ಉತ್ಪತ್ತಿಯಾಗುವುದರಲ್ಲೂ ಪಿತ್ತ ಹೊಣೆಯಾಗುವುದೆಂದು ತಿಳಿಸಿದೆ. ಶರೀರದ ಪ್ರತಿಯೊಂದು ಕಣ ಕೆಲಸ ಮಾಡಲು ಚಲನ ಸೌಲಭ್ಯವುಂಟುಮಾಡುವ ಶಕ್ತಿ ಕಫದಲ್ಲಿದೆಯೆಂದು ರಚಿಸಲಾಗಿದೆ. ಈ ಮೂರು ದೋಷಗಳಿಂದಲೇ ಶರೀರದ ಕ್ರಿಯೆಗಳೆಲ್ಲಾ ನಡೆದುಹೋಗುತ್ತಿವೆಯೆಂದೂ, ಆಹಾರ ಮತ್ತು ಹವಾಗುಣಗಳ ಬದಲಾವಣೆಗಳಿಂದ ತ್ರಿದೋಷಗಳು ವ್ಯತ್ಯಾಸ ಹೊಂದಿ, ರೋಗ ಮತ್ತು ಅನಾರೋಗ್ಯಗಳು ಉಂಟಾಗುತ್ತವೆಂದೂ ವಿವರಿಸಲಾಗಿದೆ. ಆದ್ದರಿಂದ ತ್ರಿದೋಷಗಳು ವ್ಯತ್ಯಾಸ ಹೊಂದದೆ ಒಂದೇ ಸಮನಾಗಿದ್ದರೆ ಆರೋಗ್ಯವಿರುತ್ತದೆಂದು ಸಮರ್ಥಿಸಲಾಗಿದೆ.

ಹಿಂದೂಸ್ಥಾನದ ಕಾಲಮಾನದ ಪ್ರಕಾರ ವೈದ್ಯಶಾಸ್ತ್ರವನ್ನು ೬ ಅವಧಿಗಳಲ್ಲಿ ವಿವರಿಸಬಹುದು.

೧. ಚರಿತ್ರೆಗೂ ಪೂರ್ವದಲ್ಲಿದ್ದ ವೈದ್ಯಶಾಸ್ತ್ರ (ಪುರಾತನ ಶಿಲಾಯುಗ ಮತ್ತು ನವಶಿಲಾಯುಗ) ಕ್ರಿ. ಪೂ. ೨೫೦೦ ವರ್ಷಗಳಿಗೂ ಹಿಂದೆ ಇದ್ದ ರೀತಿ.

೨. ವೇದಗಳಿಗೂ ಪೂರ್ವದಲ್ಲಿದ್ದ ವೈದ್ಯಶಾಸ್ತ್ರ (ಸಿಂಧೂ ನದಿ ಪ್ರದೇಶ ಅಥವಾ ಹರಪ್ಪ ಸಂಸ್ಕೃತಿ) ಕ್ರಿ. ಪೂ. ೨೫೦೦ರಿಂದ ಕ್ರಿ. ಪೂ. ೧೫೦೦ ತನಕ ಇದ್ದ ರೀತಿ.

೩. ವೇದಗಳ ಕಾಲದ ವೈದ್ಯಶಾಸ್ತ್ರ. ಕ್ರಿ. ಪೂ. ೧೫೦೦ರಿಂದ ಕ್ರಿ. ಪೂ. ೮೦೦ರ ತನಕ ಇದ್ದ ರೀತಿ.

೪. ಮಧ್ಯಮಕಾಲದ ವೈದ್ಯಶಾಸ್ತ್ರ (ಉಪನಿಷತ್ ಅಥವ ಬ್ರಾಹ್ಮಣ ಕಾಲ) ಕ್ರಿ. ಪೂ. ೮೦೦ರಿಂದ ಕ್ರಿ. ಪೂ. ೬೦೦ರವರೆವಿಗೆ ಇದ್ದ ರೀತಿ.

೫. ರಚನಾತ್ಮಕ ಕಾಲದ ವೈದ್ಯಶಾಸ್ತ್ರ (ಬುದ್ಧನ ಕಾಲ ಅಥವ ವಿವೇಚನ ಕಾಲ ಅಥವ ಕಲ್ಪನಾಶಕ್ತಿ ಕಾಲ) ಕ್ರಿ. ಪೂ ೬೦೦ರಿಂದ ಕ್ರಿ. ಶ. ೨೦೦ರ ತನಕ ಇದ್ದ ರೀತಿ.

6. ಕ್ಷೀಣ ದೊರೆತ ಕಾಲದ ವೈದ್ಯಶಾಸ್ತ್ರ (ಬುದ್ಧನ ಕಾಲ ಮುಗಿದ ಮೇಲೆ) ಕ್ರಿ. ಶ. ೨೦೦ರಿಂದ ಈಚೆಗೆ ಇದ್ದ ರೀತಿ.

ಚರಿತ್ರೆಗೂ ಪೂರ್ವದ ಶಿಲಾಯುಗ

ಚರಿತ್ರೆಗೂ ಪೂರ್ವದ ಶಿಲಾಯುಗದಲ್ಲಿ ಹೊರ ದೇಶಗಳಿಂದ ಅನೇಕ ತಂಡಗಳು ಹಿಂದೂ ದೇಶಕ್ಕೆ ಬಂದು ನೆಲೆಸಿದವು. ಇವರ ಅನುಯಾಯಿಗಳು ಈಗಲೂ ಹಿಂದೂ ದೇಶದಲ್ಲಿ ಮೂಲನಿವಾಸಿಗಳಾಗಿದ್ದಾರೆ. ಇವರೇ ದ್ರಾವಿಡರು. ಇವರ ಮತ ಪದ್ಧತಿಗಳೂ ಮೂಢನಂಬಿಕೆಗಳೂ ಈಗಲೂ ರೂಢಿಯಲ್ಲಿವೆ.

ಮಹೇಂಜೋದಾರೊ ಮತ್ತು ಹರಪ್ಪ ಸಂಸ್ಕೃತಿ

ಆರ್ಯರು ಹಿಂದೂ ದೇಶಕ್ಕೆ ಬರುವುದಕ್ಕೆ ಮೊದಲಿದ್ದ ಮಹೇಂಜೋದಾರೊ ಮತ್ತು ಹರಪ್ಪ ಸಂಸ್ಕೃತಿಗಳ ಪ್ರಕಾರ ಅತಿಲೌಕಿಕ ಕಾರಣಗಳಿಂದ ರೋಗ ಉತ್ಪತ್ತಿಯಾಗುತ್ತದೆಂದೂ ಮೂಲಮಂತ್ರಗಳಿಂದ ಗುಣವಾಗುತ್ತದೆಂದೂ ಮೂಢನಂಬಿಕೆ ಇತ್ತು. ಆದರೆ ಆರೋಗ್ಯರಕ್ಷಣೆಗೆ ಸಾಕಷ್ಟು ಉತ್ತೇಜನವೂ ಇತ್ತು. ಅಗಲವಾದ ರಸ್ತೆಗಳಿರುವ ಪಟ್ಟಣಗಳು, ಕುಡಿಯುವ ನೀರನ್ನು ಸರಬರಾಜು ಮಾಡಲು ಮೇಲ್ಗಾಲುವೆಗಳು, ಪಟ್ಟಣದ ಗಲೀಜನ್ನು ಸಾಗಿಸಲು ಚರಂಡಿ ಮತ್ತು ಮೋರಿಗಳು, ಗಾಳಿ ಬೆಳಕು ಬರುವುದಕ್ಕೆ ಕಿಟಕಿಗಳು, ಸ್ನಾನದ ಕೊಟಡಿಗಳು ಮುಂತಾದ ಸೌಕರ್ಯಗಳೆಲ್ಲಾ ಇದ್ದವು. ಮಹೇಂಜೊದಾರೊ ಪ್ರಭಾವಕ್ಕೆ ಮುಖ್ಯ ಕಾರಣವೆಂದರೆ ಸಾರ್ವಜನಿಕ ಸ್ನಾನದ



ಮಹೇಂಜೊದಾರೊದಲ್ಲಿನ ಇಟ್ಟಿಗೆಯಲ್ಲಿ ಕಟ್ಟಿರುವ ಚರಂಡಿ

ಮನೆ. ಈ ಹಿಂದೂ ದೇಶದ ನಾಗರಿಕತೆ ಮೆಸೊಪೊಟೇಮಿಯ, ಈಜಿಪ್ಟ್, ಕ್ರೀಟ್, ಬ್ಯಾಬಿಲಾನ್ ದೇಶಗಳ ನಾಗರಿಕತೆಗಿಂತಲೂ ಮೇಲಾಗಿತ್ತು. ಆಗ ಈ ರಾಜ್ಯಗಳ ಜನರಿಗೂ ಹಿಂದೂ ದೇಶದವರಿಗೂ ಸಂಪರ್ಕವಿದ್ದು ಒಬ್ಬರಿಂದೊಬ್ಬರು ವೈದ್ಯ ಶಾಸ್ತ್ರದಲ್ಲೂ, ಮತ ಪದ್ಧತಿಯಲ್ಲೂ ವಿನಿಮಯ ನಡೆಸುತ್ತಿದ್ದರೆಂದು ತಿಳಿದುಬಂದಿದೆ.

ವೇದದ ಕಾಲ

ವೇದದ ಕಾಲದಲ್ಲಿದ್ದ ನಡೆನುಡಿ, ಸಂಸ್ಕೃತಿ, ಸಂಪ್ರದಾಯಗಳನ್ನು ವಿವರಿಸಿ ಬರೆದಿದ್ದ ಲೇಖನಗಳಲ್ಲಿ ಶೃತಿ, ಸ್ಮೃತಿಗಳೆಂದು ಎರಡು ವಿಧವಾದ ಗ್ರಂಥಗಳಿದ್ದವು. ಶೃತಿಗಳು ಮೊದಲನೆಯ ಸ್ಥಾನ ಹೊಂದಿ ಆಧಾರಪೂರ್ವಕವಾದ ನುಡಿಗಳಾಗಿದ್ದವು. ಸ್ಮೃತಿಗಳು ಎರಡನೆಯ ಸ್ಥಾನ ಹೊಂದಿದ್ದವು. ಇವನ್ನು ಋಷಿಗಳು ಬರೆದಿದ್ದರೆಂದು ತಿಳಿದುಬಂದಿದೆ. ಈ ಗ್ರಂಥಗಳಲ್ಲಿ ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವ ವೇದವೆಂಬ ನಾಲ್ಕು ವೇದಗಳಿದ್ದವು. ಋಗ್ವೇದವೇ ಇವುಗಳಲ್ಲೆಲ್ಲಾ ಹಳೆಯದು. ಇದು ಕ್ರಿ. ಪೂ. ೪೦೦೦ ವರ್ಷಗಳಷ್ಟು ಹಿಂದಿನದು. ಆಯುರ್ವೇದವೆಂಬ ವೈದ್ಯಶಾಸ್ತ್ರ ಋಗ್ವೇದದ ಮತ್ತು ಅಥರ್ವವೇದದ ಉಪದೇಶವೆಂದು ತಿಳಿಸಿದೆ.

ಅಥರ್ವವೇದವಲ್ಲಿ ನಾಲ್ಕು ಬಗೆಯ ರೋಗಪರಿಹಾರಗಳನ್ನು ವಿವರಿಸಿವೆ.

೧. ಮನೋರೋಗ ಚಿಕಿತ್ಸೆ

೨. ಸಸ್ಯ ಮತ್ತು ಪ್ರಾಣಿವರ್ಗಕ್ಕೆ ಸೇರಿದ ಔಷಧಗಳ ಉಪಯೋಗ

೩. ದೇವಯೋಗ್ಯವಾದ ಕ್ರಿಯೆಗಳು—ಗಾಳಿ, ಬೆಳಕು, ನೀರು.

೪. ಮನುಷ್ಯ ತಯಾರಿಸಿದ ಔಷಧಗಳ ಉಪಯೋಗ.

ವೇದದ ಕಾಲದಲ್ಲಿ, ರೋಗಗಳು ದೇವರ ಶಾಪದಿಂದಲೂ, ಭೂತಪ್ರೇತಗಳ ಪ್ರೇರಣೆಗಳಿಂದಲೂ, ಮಂತ್ರಗಾರರ ಮಾಟದಿಂದಲೂ ಉಂಟಾಗುತ್ತವೆಂದು ನಂಬಿದ್ದರಿಂದ ರೋಗ ಗುಣಪಡಿಸಲು ಯಂತ್ರಮಂತ್ರ, ಮಾಟ, ಪೂಜೆಗಳನ್ನು ಉಪಯೋಗಿಸುತ್ತಿದ್ದರು. ಹಾಗಿದ್ದರೂ ಶೋಬೆ ಎಂಬುದು ಹೃದ್ರೋಗದ ಒಂದು ಗುಣವೆಂದು, ಕಾಮಾಲೆ ಈ ರೋಗದ ಒಂದು ಲಕ್ಷಣವೆಂದು ಮತ್ತಿತರ ಲಕ್ಷಣ ರೋಗ ಸಂಬಂಧಗಳನ್ನು ಅರಿತಿದ್ದರು. ವೈದ್ಯರಲ್ಲಿ, ಶಸ್ತ್ರವೈದ್ಯರು, ಔಷಧವೈದ್ಯರು, ಮಂತ್ರಯೋಗಿಗಳು, ವಿಷಚಿಕಿತ್ಸಕರೆಂಬ ಬೇರೆಬೇರೆ ಬಗೆಯ ವೈದ್ಯರಿದ್ದರು. ಅಥರ್ವವೇದದಲ್ಲಿ ಗಡ್ಡೆ, ಕುರು, ಕ್ಷಯ, ಹೊಟ್ಟೆನುಲಿತ, ಮಲಬದ್ಧತೆ, ಭೇದಿ, ಮೊಲ್ಲಾಗರ, ಕೀಲುಬಾವು, ಪಿತ್ತಕಾಮಾಲೆ, ಹೃದ್ರೋಗ, ಪಾರ್ಶ್ವವಾಯು, ಕುಷ್ಠರೋಗ, ಮೇಹರೋಗ, ಮನೋರೋಗ, ಕಣ್ಣುರೋಗಗಳೆಂಬ ನಾನಾ ತರಹ ರೋಗಗಳ ವಿಚಾರವನ್ನು ಬರೆದಿದೆ. ಸ್ತ್ರೀರೋಗಗಳನ್ನೂ ವಿವರಿಸಿದೆ. ಗಂಡು ಹೆಣ್ಣು ಬೀಜಗಳೆರಡೂ ಸೇರಿ ಗರ್ಭಾದಾನವಾಗುತ್ತದೆಂದು ಹೇಳಿತ್ತು. ಭ್ರೂಣ ಬೆಳೆಯಲು ೧೦ ಚಾಂದ್ರಮಾಸಗಳು ಹಿಡಿಯುತ್ತದೆಂದೂ ತಿಳಿಸಿತ್ತು. ಶಸ್ತ್ರವೈದ್ಯವನ್ನು ಕುರಿತು, ಕೃತಕ ಕಾಲು, ಕೃತಕ ಕಣ್ಣು ಮತ್ತು ಕೃತಕ ಹಲ್ಲುಗಳನ್ನು ಕೊಡುತ್ತಿದ್ದರೆಂದೂ ಹೇಳಿದೆ.

ಉಪನಿಷತ್ತಿನ ಕಾಲ

ಉಪನಿಷತ್ತಿನ ಕಾಲದಲ್ಲಿ ಹಿಂದೂ ವೈದ್ಯಶಾಸ್ತ್ರ ಶಿಖರದ ತುದಿಯನ್ನು ಮುಟ್ಟಿತ್ತು. ಮನು ಸಂಗ್ರಹದ ಪ್ರಕಾರ, ಬ್ರಾಹ್ಮಣ ಬ್ರಹ್ಮನಿಂದ ಹುಟ್ಟಿದನೆಂದೂ, ರಾಜ್ಯವಾಳಲು ಹಕ್ಕುದಾರನೆಂದೂ, ಸಿದ್ಧಾಂತವಿತ್ತು. ಅವನು ವಿದ್ಯಾವಂತ, ಪಂಡಿತ, ಬರಹಗಾರ, ಕವಿ, ಆಚಾರ್ಯ, ವೇದಪಠಿಸುವವ, ವಕೀಲ, ಗುಮಾಸ್ತ ಮತ್ತು ವೈದ್ಯನೂ ಆಗಿದ್ದನು. ಮನು ಸಂಗ್ರಹದಲ್ಲಿ ದೇಹವಿಚ್ಛೇದನ ಮಾಡುವುದನ್ನು ತಿರಸ್ಕರಿಸಿತ್ತು. ಹೆಣ ಮುಟ್ಟಿದರೆ ಸ್ನಾನಮಾಡಿ ಶುದ್ಧಿಯಾಗಬೇಕಾಗಿತ್ತು. ಸುಶ್ರುತ ಈ ಕಟ್ಟಳೆಗಳನ್ನು ಮೀರಿ ಅಂಗವಿಚ್ಛೇದನ ಮಾಡುತ್ತಿದ್ದನೆಂದು ಹೇಳಿದೆ.

ರಚನಾತ್ಮಕ ಕಾಲ

ಉಪನಿಷತ್ತಿನ ಮತ್ತು ರಚನಾತ್ಮಕ ಕಾಲದಲ್ಲಿದ್ದ ಹಿಂದೂ ವೈದ್ಯರಲ್ಲಿ ಮೂವರು ಪ್ರಸಿದ್ಧಿಯಾಗಿದ್ದರು. ಸುಶ್ರುತ, ಚರಕ, ವಾಗ್ಭಟ, ಇವರ ಖ್ಯಾತಿಯ ಬಗ್ಗೆ ಯಾವ ಸಂಶಯವಿಲ್ಲದಿದ್ದರೂ ಅವರ ಜೀವಮಾನ ಕಾಲದ ವಿಷಯದಲ್ಲಿ ಬಹಳ ಭಿನ್ನಾಭಿಪ್ರಾಯವಿದೆ. ಬಾಸ್‌ನ ಅಭಿಪ್ರಾಯದ ಪ್ರಕಾರ ಚರಕ ಕ್ರಿ. ಪೂ ೧೦೦೦ನೇ ವರ್ಷದಲ್ಲಿದ್ದನೆಂದೂ ಸುಶ್ರುತ ಕ್ರಿ. ಶ. ೧೦೦೦ನೇ ವರ್ಷದಲ್ಲಿದ್ದನೆಂದೂ ಗೊತ್ತಾಗಿದೆ. ಹಿಂದೂ ಸಂಪ್ರದಾಯದ ಪ್ರಕಾರ ಸುಶ್ರುತ ಕ್ರಿ. ಪೂ. ೬ನೇ ಶತಮಾನದ ಬುದ್ಧನ ಕಾಲದಲ್ಲಿದ್ದನೆಂದು ಖಚಿತವಾಗಿ ತಿಳಿದಿದೆ. ಆಗ ತಕ್ಷಶಿಲ ಮತ್ತು ವಾರಾಣಸಿ (ಕಾಶಿ) ಎರಡು ಮುಖ್ಯ ವಿಶ್ವವಿದ್ಯಾನಿಲಯಗಳಿದ್ದವೆಂದೂ, ಆತ್ರೇಯ ಟಾಕ್ಸಿಲದಲ್ಲಿ ಬೋಧಿಸುತ್ತಿದ್ದನೆಂದೂ, ಅವನಿಗೆ ಕಿರಿಯವನಾದ ಸುಶ್ರುತ ವಾರಾಣಸಿಯಲ್ಲಿ ಶಸ್ತ್ರವೈದ್ಯನಾಗಿದ್ದನೆಂದು ತಿಳಿದುಬಂದಿದೆ. ಈ ಅಭಿಪ್ರಾಯವನ್ನು ಅನೇಕ ಸಂಸ್ಕೃತ ಪಂಡಿತರು ಒಪ್ಪಿಕೊಂಡಿದ್ದರೂ ಕೆಲವರು ಸುಶ್ರುತ ಈಚಿನವನೆಂದೂ ಹೇಳಿದ್ದಾರೆ. ಚರಕ ೧೨೦-೧೬೨ರಲ್ಲಿ ಕಾನಿಷ್ಕ ಚಕ್ರವರ್ತಿಯ ಆಳ್ವಿಕೆಯಲ್ಲಿದ್ದು ಪ್ರಖ್ಯಾತಿ ಪಡೆದಿದ್ದನೆಂದು ಸಾಧಾರಣವಾಗಿ ಎಲ್ಲರ ನಂಬಿಕೆಯಾಗಿದೆ. ಹಾಗೂ ಸಂಸ್ಕೃತದಲ್ಲಿದ್ದ ಹಸ್ತಪತ್ರಿಕೆಯ ಚೀನಾ ಭಾಷೆಯ ಭಾಷಾಂತರದಲ್ಲೂ ಇದನ್ನೇ ತಿಳಿಸಿದೆ.

ಇದೇ ಕಾಲದಲ್ಲಿ ವೈದ್ಯಪೀಠಗಳು, ವಿಜ್ಞಾನಮಂದಿರಗಳು ಅಭಿವೃದ್ಧಿಯಲ್ಲಿದ್ದು ಅನೇಕ ಸಂಗ್ರಹಗಳು ಬರೆಯಲ್ಪಟ್ಟಿದ್ದವು. ಸುಶ್ರುತ ಶಲ್ಯ ತಂತ್ರವನ್ನೂ ಬರೆದಿದ್ದನು. ರಸಾಯನ ತಂತ್ರವೂ ಆಗಿನ ಕಾಲದಲ್ಲೇ ಬರೆಯಲಾಗಿತ್ತು. ಆತ್ರೇಯನ ಶಿಷ್ಯ ಅಗ್ನಿವೇಶ ಬರೆದಿದ್ದ ೧೨೦೦೦ ಕೃತಿಗಳು ೧೫ನೇ ಶತಮಾನದ ವರೆವಿಗೂ ಬಳಕೆಯಲ್ಲಿದ್ದವು. ಚರಕ ಸಂಹಿತ ಮತ್ತು ಸುಶ್ರುತ ಸಂಹಿತ ಆಗಿನ ಕಾಲದ ಅತ್ಯುತ್ತಮ ಕೃತಿಗಳಾಗಿದ್ದವು. ಸುಶ್ರುತ ಸಂಹಿತ ಮುಖ್ಯವಾಗಿ ಶಸ್ತ್ರವೈದ್ಯ ಕೃತಿಗಳನ್ನು ಹೊಂದಿದೆ. ಇದರಲ್ಲಿ ೫೦ ಅಧ್ಯಾಯಗಳಿವೆ. ಇದಕ್ಕೆ ಕಾನಿಷ್ಕನ ಕಾಲದಲ್ಲಿ ಒಂದು ಅನುಬಂಧವನ್ನು ಬರೆದು ಸೇರಿಸಲಾಗಿದೆ.

ಆತ್ರೇಯ

ಹಿಪ್ಪೊಕ್ರೇಟಿಸ್ ಹೇಗೆ ಗ್ರೀಕ್ ವೈದ್ಯಶಾಸ್ತ್ರಕ್ಕೆ ಪಿತಾಮಹ ಎಂದೆನಿಸಿಕೊಂಡಿದ್ದನೋ ಹಾಗೆಯೇ ಆತ್ರೇಯ ಹಿಂದೂ ವೈದ್ಯಶಾಸ್ತ್ರಕ್ಕೆ ಪಿತಾಮಹನಾಗಿದ್ದನು. ಇವನ ತಂದೆ ಅತ್ರಿ ಎಂಬುವನು ಬ್ರಹ್ಮನ ಅವತಾರವೆಂದು ಹೇಳಲಾಗಿತ್ತು. ಆತ್ರೇಯ ಸಂಹಿತದಲ್ಲಿ ಗುಣವಾಗುವ ಮತ್ತು ಗುಣವಾಗದಿರುವ ಎರಡು ಬಗೆ ರೋಗಗಳನ್ನು ವಿವರಿಸಿದ್ದನು. ಇವನಾದ ಮೇಲೆ ಬಂದ ಚರಕ ಮುಂತಾದ ಪಂಡಿತರೆಲ್ಲಾ ಇವನನ್ನು ಗೌರವಿಸುತ್ತಿದ್ದರು. ಚರಕ ತಾನು ಆತ್ರೇಯನ ಶಿಷ್ಯನೆಂದು ಹೇಳಿಕೊಂಡಿದ್ದಾನೆ.

ಆತ್ರೇಯ ವೈದ್ಯಶಾಸ್ತ್ರವನ್ನು ಭಾರದ್ವಾಜನಿಂದ ಕಲಿತನೆಂದು ಹೇಳಲಾಗಿದೆ. ಇವನ ಕಾಯ ಚಿಕಿತ್ಸೆ ಅತ್ಯುತ್ತಮವಾಗಿತ್ತು. ಆತ್ರೇಯನ ಬೋಧನೆಗಳನ್ನೆಲ್ಲಾ ಒಟ್ಟುಗೂಡಿಸಿ ಚರಕ ತನ್ನ ಸಂಹಿತವನ್ನು ಬರೆದನೆಂದು ಹೇಳಲಾಗಿದೆ. ಆತ್ರೇಯ ಕ್ರಿ. ಪೂ. ೭ನೇ ಶತಮಾನದಲ್ಲಿ ತಕ್ಷಶಿಲ ಕೇಂದ್ರದಲ್ಲಿ ಬೋಧಿಸುತ್ತಿದ್ದಾಗ, ಅಗ್ನಿವೇಶ, ಬೇಲ, ಜೀವಕ, ಬ್ರಹ್ಮದತ್ತ, ಕೌಟಿಲ್ಯ, ಪತಂಜಲಿ ಮುಂತಾದ ಇತರ ವಿದ್ವಾಂಸರಿದ್ದರು. ವ್ಯಾಕರಣ ವಿದ್ವಾಂಸನಾದ ಪಾಣಿನಿಯೂ ಆಗ ಟಾಕ್ಸಿಲಾದಲ್ಲಿದ್ದನು. 'ಹಿತವಾದ ವಿವೇಚನಾ ಶಕ್ತಿ, ಬುದ್ಧಿಶಕ್ತಿಯ ವಿಶಾಲತೆ ಮತ್ತು ಪರಿಪೂರ್ಣತೆ, ದೂರದೃಷ್ಟಿ, ಲಕ್ಷಣ ನಿರೂಪಣೆಯ ಸ್ಪಷ್ಟತೆ, ಎಲ್ಲಕ್ಕಿಂತಲೂ ಮಿಗಿಲಾಗಿ ರೋಗಕ್ಕೆ ಮದ್ದುಗಳನ್ನು ಒಂದಕ್ಕೊಂದು ಸಂಬಂಧಿಸುವುದರಲ್ಲಿ ಪರಿಣತನಾಗಿ ಎದ್ದು ಕಾಣುವ ಶಿಕ್ಷಕನಾದ, ಆತ್ರೇಯ ಆಯುಸ್ಸಿನ ವಿಜ್ಞಾನದ ಶಿಕ್ಷಕರಲ್ಲಿ ವರಿಷ್ಠನಾಗಿದ್ದಾನೆ' ಎಂದು ಚರಕ ಸಂಹಿತದಲ್ಲಿ ಹೇಳಿದೆ.

ಸುಶ್ರುತ

ಸುಶ್ರುತ ಸಂಹಿತ ಸಂಸ್ಕೃತ ಸಾಹಿತ್ಯದಲ್ಲೇ ಮುಖ್ಯಸ್ಥಾನ ಪಡೆದಿತ್ತು. ಮೊದಲಿನ ಸಂಹಿತ ನಾಶವಾಗಿರುವುದರಿಂದ, ಈಗಿರುವ ಸಂಹಿತ ಪುನಃ ಪರಿಶೀಲನೆಯಾದದ್ದು. ಇದನ್ನು ಕ್ರಿ. ಪೂ. ೪ನೇ ಶತಮಾನದಲ್ಲಿದ್ದ ನಾಗಾರ್ಜುನ ಪರಿಶೀಲಿಸಿದನೆಂದು ಬಿಷಗ್ ರತ್ನ ತನ್ನ ಇಂಗ್ಲಿಷ್ ಭಾಷಾಂತರದ ಸಂಹಿತದಲ್ಲಿ ತಿಳಿಸಿದ್ದಾನೆ. ಸುಶ್ರುತ ಸಂಹಿತ ಶಸ್ತ್ರವೈದ್ಯದ ಸಂಗ್ರಹವಾಗಿದ್ದರೂ ಔಷಧ ಶಾಸ್ತ್ರ, ಔಷಧ ವಸ್ತು ಶಾಸ್ತ್ರ, ಆಹಾರ ಶಾಸ್ತ್ರ, ಚಿಕಿತ್ಸೆ ವಿಧಾನ, ಅಂಗರಚನೆ, ರೋಗನಿದಾನ, ಕಣ್ಣು ರೋಗ, ಸ್ತ್ರೀರೋಗ, ವೈದ್ಯಶಾಸ್ತ್ರದ ನೀತಿಗಳನ್ನೆಲ್ಲಾ ಹೊಂದಿದೆ. ಇಷ್ಟಾಗಿದ್ದರೂ, ಚರಕ ಸಂಹಿತಕ್ಕೆ ಹೋಲಿಸಿ ನೋಡಿದರೆ, ಚರಕ ಸಂಹಿತವೇ ಸುಶ್ರುತ ಸಂಹಿತಕ್ಕಿಂತ ಮೇಲಾಗಿದೆಯೆಂದು ಹೇಳಲಾಗಿದೆ. ಏಕೆಂದರೆ ಅಂಗರಚನೆ ಅಧ್ಯಾಯದಲ್ಲಿ ದೇಹ ವಿಚ್ಛೇದನೆ ಮಾಡುವ ವಿಧಾನ ತಿಳಿಸುತ್ತ, ಶರೀರದಲ್ಲಿ ೧೦೭ ಮುಖ್ಯ ಅಂಗಗಳಿವೆಯೆಂದೂ, ೭೦೦ ರಕ್ತನಾಳಗಳಿವೆಯೆಂದೂ, ३೦೦ ಮೂಳೆಗಳು, ೯೦೦

ಅಸ್ಥಿಬಂಧಗಳು, ೫೦೦ ಸ್ನಾಯುಗಳು ಇವೆಯೆಂದೂ ಹೇಳಿದ್ದನು. ಹೆಂಗಸರಲ್ಲಿ ೨೦ ಹೆಚ್ಚು ಸ್ನಾಯುಗಳಿರುತ್ತವೆಂದೂ ಹೇಳಿದ್ದನು. ಅಂಗಕ್ರಿಯೆಶಾಸ್ತ್ರದಲ್ಲೂ ಇದೇ ರೀತಿಯ ಅವ್ಯವಸ್ಥೆ ಇದೆಯೆಂದೂ, ವಾಯು, ಪಿತ್ತ, ಕಫಗಳೆಂಬ ರಸಧಾತುಗಳಿವೆಯೆಂದೂ, ಅವುಗಳ ವ್ಯತ್ಯಾಸದಿಂದ ರೋಗ ಉತ್ಪತ್ತಿಯಾಗುತ್ತದೆಂದೂ ಹೇಳಲಾಗಿತ್ತು. ಅಲ್ಲದೆ ೫ ವಿಧವಾದ ವಾಯು, ೪ ವಿಧವಾದ ಪಿತ್ತ, ೫ ವಿಧವಾದ ಕಫಗಳಿವೆಯೆಂದೂ ತಿಳಿಸಿದ್ದನು.



ಸುಶ್ರುತ ನಡೆಸುತ್ತಿರುವ ಶಸ್ತ್ರಕ್ರಿಯೆ

ಆದರೆ ಸುಶ್ರುತನ ಔಷಧಶಾಸ್ತ್ರ ಬಹಳ ಉತ್ಕೃಷ್ಟವಾಗಿತ್ತು. ಕುಷ್ಠರೋಗ ಸಾಂಕ್ರಾಮಿಕರೋಗ ಎಂದೂ ರೋಗಿಗಳ ಶರೀರದ ಅನೇಕ ಭಾಗಗಳಲ್ಲಿ ಸ್ಪರ್ಶಜ್ಞಾನವಿರುವುದಿಲ್ಲವೆಂದೂ, ಸ್ಕರ್ವಿ ರೋಗದಲ್ಲಿ ಒಸಡಿನಿಂದ ರಕ್ತ ಸುರಿಯುತ್ತದೆಂದೂ, ಒಸಡು ಕೊಳೆತು ದುರ್ವಾಸನೆ ಬರುತ್ತದೆಂದೂ, ಸಿಹಿಮೂತ್ರ ರೋಗದಲ್ಲಿ ಬೆವರು ಮತ್ತು ಕಫ ಸಿಹಿಯಾಗಿರುತ್ತವೆಂದೂ, ಮೂತ್ರ ಹುಯ್ದಿದ್ದ ಜಾಗಕ್ಕೆ ಇರುವೆ ಮುತ್ತುತ್ತವೆಂದೂ ಹೇಳಿದ್ದಾನೆ. ಒಂದು ಅಧ್ಯಾಯವನ್ನು ಹೃದ್ರೋಗಗಳಿಗೆ ಮೀಸಲಾಗಿಟ್ಟು, ಎದೆಶೂಲೆಯ ನೋವು ಜಜ್ಜುವ ಅಥವಾ ಸಿಡಿಯುವ ರೂಪ ತಾಳುತ್ತದೆಂದೂ ಅದರಲ್ಲಿ ತಿಳಿಸಿದ್ದಾನೆ. ಕ್ಷಯರೋಗಿ ತೆಳ್ಳಗಾಗುತ್ತಾನೆಂದೂ, ಧ್ವನಿ ವ್ಯತ್ಯಾಸ ಹೊಂದುತ್ತದೆಂದೂ, ಪಕ್ಕೆ ನೋಯುವುದೆಂದೂ, ಜ್ವರವಿರುವುದೆಂದೂ, ಕಫದಲ್ಲಿ ರಕ್ತವಿರುವುದೆಂದೂ, ಆಹಾರ ಜೀರ್ಣವಾಗುವುದಿಲ್ಲವೆಂದೂ, ಬೆನ್ನುಮೂಳೆ ಮತ್ತು ಎದೆಮೂಳೆಗಳೆದ್ದು ಕಾಣುವುವೆಂದೂ ತಿಳಿಸಿದ್ದಾನೆ. ಒಟ್ಟು ೧೧೨೦ ರೋಗ

ಗಳನ್ನು ವಿವರಿಸಿದ್ದಾನೆ. ರೋಗಿಯನ್ನು ಪರೀಕ್ಷಿಸುವಾಗ, ಕಣ್ಣಿನಿಂದ ನೋಡಿ, ಕೈಯಿಂದ ಮುಟ್ಟಿ, ಬೆರಳಿನಿಂದ ಕುಟ್ಟಿ ರೋಗ ನಿದಾನ ಮಾಡಬೇಕೆಂದೂ ತಿಳಿಸಿದ್ದಾನೆ. ನಾಡಿ ಪರೀಕ್ಷೆ ರೋಗ ನಿದಾನ ಮಾಡಲು ಸಹಾಯವಾಗುತ್ತದೆಂದು ಅವನಿಗೆ ತಿಳಿದಿತ್ತು. ೭೬೦ ಗಿಡಮೂಲಿಕೆಗಳು ಗೊತ್ತಿದ್ದವೆಂದೂ, ನಂಜಿನ ಕೊರಡು ಅಜೀರ್ಣಕ್ಕೂ, ಉಮ್ಮತ್ತಿ ಗೂರಲಿಗೂ, ಕರ್ಪೂರ, ಏಲಕ್ಕಿ, ಶುಂಠಿಗಳು ಹಸಿವುಂಟು ಮಾಡಲೂ ಉಪಯೋಗದಲ್ಲಿದ್ದವು. ಉಪ್ಪಿಲ್ಲದ ಆಹಾರವನ್ನು ಮೂತ್ರಪಿಂಡ ರೋಗಿಗಳಿಗೆ ಕೊಡಬೇಕೆಂದೂ ಕಬ್ಬಿಣ, ತಾಮ್ರ, ಮತ್ತು ಚಿನ್ನಗಳನ್ನು ರಕ್ತಕೊರೆ ಇರುವವರಿಗೆ ಕೊಡಬೇಕೆಂದೂ ಹೇಳಿದ್ದಾನೆ. ಕಣ್ಣಿನ ಪೊರೆ ತೆಗೆಯುವ ವಿಧಾನವನ್ನು ವಿಶದವಾಗಿ ಬರೆದಿದ್ದಾನೆ. ಹೆರಿಗೆ ಕಷ್ಟವಾದಾಗ ಹೊಟ್ಟೆ ಬಗೆದು ಶಿಶು ಹೆರಿಗೆ ಮಾಡಿಸುವುದೂ ಗೊತ್ತಿತ್ತು. ಸುಶ್ರುತ ತನ್ನ ಶಸ್ತ್ರವೈದ್ಯ ಸಂಹಿತದಲ್ಲಿ ೧೦೧ ಶಸ್ತ್ರಗಳನ್ನು ವಿವರಿಸಿರುವನು ಆದರೂ ಕೈಗೆ ಸಮನಾದ ಶಸ್ತ್ರ ಯಾವುದೂ ಇಲ್ಲವೆಂದೂ ಹೇಳಿದ್ದಾನೆ. ೨೪ ಬಗೆಯ ಚಿಮುಟಗಳು, ಚಾಕುಗಳು, ಸೂಜಿಗಳು, ವಿಧವಿಧವಾದ ಹೊಲೆಯುವ ದಾರಗಳು ಗೊತ್ತಿದ್ದವು. ಜಲೋದರದಿಂದ ನೀರು ತೆಗೆಯುವುದನ್ನೂ, ಸೂಜಿಗಲ್ಲಿನಿಂದ ಆಯುಧಗಳ ಚೂರುಗಳನ್ನು ಶರೀರದಿಂದ ಹೊರ ತೆಗೆಯುವುದನ್ನೂ ವಿವರಿಸಿದ್ದಾನೆ. ಹತ್ತಿ, ನಾರು, ಚರ್ಮ, ಕುದುರೆ ಬಾಲ, ರೇಷ್ಮೆ ದಾರಗಳು ಗಾಯ ಹೊಲೆಯಲು ಉಪಯೋಗದಲ್ಲಿದ್ದವು. ಕರುಳಿನ ಬಿರುಕನ್ನು ಹೊಲೆದು ಸರಿಪಡಿಸಲು ಕಪ್ಪು ಇರುವೆಗಳಿಂದ ಕಚ್ಚಿಸಿ ಸರಿಪಡಿಸುವುದೂ ರೂಢಿಯಲ್ಲಿತ್ತು. ಮೂತ್ರಕೋಶದಿಂದ ಕಲ್ಲು ತೆಗೆಯುವ ವಿಧಾನವೂ ಗೊತ್ತಿತ್ತು. ಆಗಿನ ಕಾಲದಲ್ಲಿ ಮನುಸಂಗ್ರಹದ ಮೇರೆ, ವ್ಯಭಿಚಾರ ಮಾಡಿದವರಿಗೆ ಮೂಗು ಕತ್ತರಿಸಿ ಶಿಕ್ಷೆ ಕೊಡುತ್ತಿದ್ದುದರಿಂದ, ಮೂಗು ಸುರೂಪಿಸುವ ಶಸ್ತ್ರಕ್ರಿಯೆ ಬಹು ಜರೂರಾಗಿತ್ತು. ಹರಿದ ಕಿವಿ, ತುಟಿಗಳನ್ನು ಹೊಲೆದು ಸರಿಪಡಿಸುವುದು ಸಾಮಾನ್ಯ ಕ್ರಿಯೆಯಾಗಿತ್ತು. ಹೀಗೆ ಹೊಸ ಮೂಗು, ಕಿವಿ, ತುಟಿಗಳನ್ನು ಕೊಡುವ ಸುರೂಪಿಕ ಶಸ್ತ್ರಕ್ರಿಯೆ ಅತ್ಯುತ್ತಮವಾಗಿತ್ತು. ಶಸ್ತ್ರ



ಮೂಗು ಸುರೂಪಿಕೆಯ ಚಿತ್ರ

ಕ್ರಿಯೆ ಮಾಡುವಾಗ ಜ್ಞಾನವಿಲ್ಲದಂತೆ ಮಾಡಲು ಅಥವಾ ಸ್ಪರ್ಶಜ್ಞಾನವಿಲ್ಲದಂತೆ ಮಾಡಲು ಕನ್ನಾಬಿಸ್ (ಗಾಂಜ) ಉಪಯೋಗದಲ್ಲಿತ್ತು. ಯೂರೋಪಿನಲ್ಲಿ ಕ್ರಿ. ಶ. ೧೬ನೇ ಶತಮಾನದಲ್ಲಿ ಮಾಡಲಾಗದಂತಹ ಶಸ್ತ್ರಕ್ರಿಯೆಗಳನ್ನು ಸುಶ್ರುತ ಕ್ರಿ. ಪೂ. ೫ನೇ ಶತಮಾನದಲ್ಲೇ ಮಾಡುತ್ತಿದ್ದನು. ಸುಶ್ರುತ ತನ್ನ ಸಂಹಿತದಲ್ಲಿ ಅಡ್ಡ ಕಸಬಿ ವೈದ್ಯರು ಮೋಸಗಾರರೆಂದೂ, ಅವರನ್ನು ರಾಜರು ಕೊಲ್ಲಿಸಬೇಕೆಂದೂ ಸೂಚಿಸಿದ್ದನು.

ಚರಕ

ಹಿಂದೂ ವೈದ್ಯಶಾಸ್ತ್ರದ ಗ್ರಂಥಗಳಲ್ಲೆಲ್ಲಾ ಚರಕ ಸಂಹಿತವೇ ಮೇಲಾಗಿರುವುದು. ಅದರಲ್ಲಿ ಹೇಳಿರುವಂತೆ ಮೊಟ್ಟಮೊದಲಿಗೆ ಈ ಸಂಹಿತವನ್ನು ಆತ್ರೇಯ ಶಿಷ್ಯ ಅಗ್ನಿವೇಶ ಬರೆದದ್ದು. ಅದನ್ನು ಚರಕ ಪರಿಶೀಲಿಸಿ ಉತ್ತಮ ಸ್ಥಿತಿಗೆ ತಂದನು. ಇದೇ ಸಂಹಿತವನ್ನು ಕ್ರಿ. ಶ. ೯ನೇ ಶತಮಾನದಲ್ಲಿ ದೃಢಬಲ ಪುನಃ ಪರಿಶೀಲಿಸಿ ಶುದ್ಧಿಪಡಿಸಿದನು. ಆದ್ದರಿಂದ ಚರಕ ಸಂಹಿತದ ಕೆಲವು ಭಾಗಗಳು ಬಹಳ ಹಿಂದಿನವೆಂದು ಮತ್ತೆ ಕೆಲವು ಭಾಗಗಳು ಈಚಿನವೆಂದೂ ಹೇಳಬಹುದು. ಇದರಲ್ಲಿ ಮತ, ತತ್ವ, ವೈದ್ಯ ಸಮಸ್ಯೆಗಳು ಒಂದಕ್ಕೊಂದು ಹೆಣೆದುಕೊಂಡಿವೆ. ಪುರಾಣ ಕಥೆಗಳು, ಮತ ಪದ್ಧತಿಗಳು, ಯಂತ್ರಮಂತ್ರಗಳು, ಪೂಜೆ ಪುನಸ್ಕಾರಗಳು ಮತ್ತು ವೈದ್ಯ ಪರಿಶೀಲನೆಗಳೂ ಇವೆ. ಚರಕ ಅಂಗವಿಚ್ಛೇದನೆ ಮಾಡದೆ ಅಂಗರಚನೆ ಬರೆದಿರಬಹುದೆಂದು ಊಹಿಸಲಾಗಿದೆ. ಇದರ ಪ್ರಕಾರ ಶರೀರದಲ್ಲಿ ೩೦೬ ಮೂಳೆಗಳಿವೆಯೆಂದೂ, ವಾಯು, ಪಿತ್ತ ಮತ್ತು ಕಫಗಳೆಂಬ ತ್ರಿದೋಷಗಳ ವ್ಯತ್ಯಾಸದಿಂದ ರೋಗಬರುತ್ತದೆಂದೂ, ೮೦ ರೋಗಗಳಿಗೆ ವಾಯು ಕಾರಣವೆಂದೂ, ೪೦ ರೋಗಗಳಿಗೆ ಪಿತ್ತಕಾರಣವೆಂದೂ ೨೦ ರೋಗಗಳಿಗೆ ಕಫ ಕಾರಣವೆಂದೂ ತಿಳಿಸಿದ್ದಾನೆ. ಅಲ್ಲದೆ ೮ ಬಗೆಯ ಜಠರ ರೋಗಗಳನ್ನೂ, ೭ ಬಗೆ ಕುಷ್ಠರೋಗಗಳನ್ನೂ, ೮ ಬಗೆ ಮೂತ್ರ ಬಂದಾಗುವ ಸ್ಥಿತಿಗಳನ್ನೂ,೬ ಬಗೆ ಅತಿಸಾರವನ್ನೂ ೫ ಬಗೆ ರಕ್ತಕೊರೆಯನ್ನೂ, ೫ ಬಗೆ ಗೂರಲು, ಬಿಕ್ಕಳಿಕೆ, ತಲೆನೋವು, ಹುಚ್ಚು ಮತ್ತು ತೊರಳೆ ರೋಗಗಳನ್ನು ವಿವರಿಸಿದ್ದಾನೆ. ಗಾಳಿ, ಪಿತ್ತ, ಕಫ, ಗಾಯ ಮತ್ತು ಕಸಗಳಿಂದುಂಟಾಗುವ ೫ ಬಗೆ ಕ್ಷಯರೋಗವನ್ನು ವಿವರಿಸಿದ್ದಾನೆ. ೨೦ ಬಗೆಯ ಮೇಹ ಅಥವಾ ಬಹುಮೂತ್ರವನ್ನು ವಿವರಿಸಿ, ಕಫದಿಂದುಂಟಾಗುವ ೧೦ ಬಗೆ ಮೇಹಗಳು ಗುಣವಾಗುವುವೆಂದೂ, ಪಿತ್ತದಿಂದುಂಟಾಗುವ ೬ ಬಗೆ ಮೇಹವನ್ನು ತಗ್ಗಿಸಬಹುದೆಂದೂ, ವಾಯುವಿನಿಂದ ಬಂದಿರುವ ೪ ಬಗೆ ಗುಣವಾಗುವುದಿಲ್ಲವೆಂದೂ ತಿಳಿಸಿದ್ದನು. ವಾಯುದೋಷದಿಂದ ಬಂದಿರುವ ಮೇಹದಲ್ಲಿ ಮಾಂಸಖಂಡಗಳು ಸಡಿಲವಾಗುವುವೆಂದೂ, ಬಾಯಿ ಒಣಗುತ್ತದೆಂದೂ ಮತ್ತು ಸಿಹಿಯಾಗುತ್ತದೆಂದೂ, ಕೈಕಾಲುಗಳಲ್ಲಿ ಉರಿ ಬರುತ್ತದೆಂದೂ, ಮೂತ್ರಕ್ಕೆ ಇರುವೆ ಮುತ್ತುವುವೆಂದೂ ವಿವರಿಸಿದ್ದನು. ಆದ್ದರಿಂದ ಕ್ರಿ. ಶ. ೨ನೇ ಶತಮಾನದಲ್ಲೇ ಸಿಹಿ

ಮೂತ್ರರೋಗ ಹಿಂದೂ ವೈದ್ಯರುಗಳಿಗೆ ತಿಳಿದಿತ್ತೆಂದು ಹೇಳಬಹುದು. ಜ್ವರವಿರುವ ರೋಗಗಳು ಈಗಿನಂತೆ ಆಗಲೂ ಹೆಚ್ಚಾಗಿದ್ದವು. ಇವು ಕೂಡ ತ್ರಿದೋಷಗಳ ವ್ಯತ್ಯಾಸದಿಂದ ಬರುತ್ತವೆಂದು ಹೇಳಿದ್ದಾನೆ. ಚರಕ ನಾನಾ ತರಹ ಜ್ವರಗಳನ್ನೂ ವಿವರಿಸುತ್ತ "ವಿಷಯಾಸಕ್ತಿ, ಕೊರಗುಗಳಿಂದ ವಾಯು ಕೆರಳುತ್ತದೆ; ಕೋಪದಿಂದ ಪಿತ್ತ ಉದ್ರೇಕವಾಗುತ್ತದೆ; ಕೆಟ್ಟ ಆತ್ಮಗಳು ಸೇರುವುದರಿಂದ ಮೂರೂ ದೋಷಗಳೂ ಪ್ರಚೋದವಾಗುತ್ತವೆ" ಎಂದು ಬರೆದನು. ಜ್ವರವಿರುವ ರೋಗಿ ಹಸಿದಿರಬೇಕೆಂದೂ, ಶರೀರವನ್ನು ತಂಪು ಮಾಡಬೇಕೆಂದೂ ತಿಳಿಸಿದ್ದನು.

ಸಸ್ಯ, ಪ್ರಾಣಿ ಮತ್ತು ಖನಿಜಗಳ ಗುಂಪಿಗೆ ಸೇರಿದ ಮೂರು ವಿಧಗಳ ಔಷಧಗಳಿವೆಯೆಂದು, ಚರಕ ತನ್ನ ಸಂಹಿತದಲ್ಲಿ ವಿವರಿಸಿದ್ದಾನೆ. ಕ್ಷಯ ಮತ್ತು ಕುಷ್ಠರೋಗಗಳಿಗೆ ೧೦೦ ಔಷಧ ನಿಯಮಗಳನ್ನು, ಹಾವು ಕಚ್ಚಿದುದಕ್ಕೆ ಮತ್ತು ವಿಷಸೇವನೆಗೆ ತಕ್ಕ ಔಷಧಗಳ ಸೂಕ್ಷ್ಮ ಪರಿಚಯವನ್ನು ಮಾಡಿದ್ದನು. ಹುಚ್ಚು, ಅಪಸ್ಮಾರಗಳನ್ನು ವಿವರಿಸಿ ಔಷಧ ಸೂಚಿಸಿದ್ದನು. ಸ್ವಪ್ನದ ಮುನ್ನರಿವು ಮತ್ತು ನಿದಾನಗಳನ್ನು ವಿವರಿಸಿದ್ದಾನೆ. ಹವಾಗುಣ, ಋತು, ಆಹಾರ ಮತ್ತು ಇತರ ಜೀವನ ಪದ್ಧತಿಗಳ ವ್ಯತ್ಯಾಸದಿಂದ ಬರುವ ರೋಗಗಳನ್ನು ತಿಳಿಸಿದ್ದಾನೆ.

ಚರಕ ಸಂಹಿತ ಪೂರ್ತಿಯಾಗಿ ಔಷಧಶಾಸ್ತ್ರದ ಸಂಗ್ರಹವಾಗಿದ್ದರೂ, ಶಸ್ತ್ರವೈದ್ಯವನ್ನೂ ಒಳಗೊಂಡಿತ್ತು. ಜಲೋದರದಿಂದ ನೀರು ತೆಗೆಯುವ ವಿಧಾನ ವಿವರಿಸುತ್ತ, ಹೊಕ್ಕುಳ ಕೆಳಗೆ ಎಡಭಾಗದಲ್ಲಿ ನಳಿಕೆ ತೂರಿಸಬೇಕೆಂದೂ, ನೀರನ್ನು ನಿಧಾನವಾಗಿ ತೆಗೆಯಬೇಕೆಂದೂ, ತೆಗೆದ ಮೇಲೆ ಹೊಟ್ಟೆಯನ್ನು ಬಟ್ಟೆಯಿಂದ ಬಿಗಿದು ಕಟ್ಟಬೇಕೆಂದು ತಿಳಿಸಿದ್ದನು. ಕರುಳುಗಳಲ್ಲಿ ಅಕಸ್ಮಾತ್ ಉಂಟಾಗುವ ತೂತುಗಳನ್ನಾಗಲೀ, ಬಿರುಕುಗಳನ್ನಾಗಲೀ ಸರಿಪಡಿಸಲು ಇರುವೆಗಳಿಂದ ಕಚ್ಚಿಸುವ ರೂಢಿಯೂ ಇತ್ತು. ಕಟ್ಟಿರುವೆಗಳು ಈ ಕ್ರಿಯೆಯಲ್ಲಿ ಉತ್ತಮವೆಂದೂ, ತಲೆಯನ್ನು ಬಿಟ್ಟು ಇರುವೆಯ ಶರೀರವನ್ನು ಕತ್ತರಿಸಿ ಬಿಸಾಡಬೇಕೆಂದು ತಿಳಿಸಿದ್ದಾನೆ.

ವಾಗ್ಭಟ

ಸುಶ್ರುತ ಮತ್ತು ಚರಕ ಹೇಗೆ ಪ್ರಸಿದ್ಧವಾಗಿದ್ದರೋ ಹಾಗೆಯೇ ವಾಗ್ಭಟನೂ ಪ್ರಸಿದ್ಧವಾಗಿದ್ದನು. ವೈದ್ಯಶಾಸ್ತ್ರದಲ್ಲಿ ಇವನಿಗೆ ಮೂರನೇ ಸ್ಥಾನ ದೊರಕಿತ್ತು. ಅವರಂತೆಯೇ ಇವನ ಜೀವಮಾನ ಕಾಲವೂ ನಿರ್ಧಾರವಾಗಿಲ್ಲ. ವಾಗ್ಭಟ ತನ್ನ ಲೇಖನಗಳಲ್ಲಿ ಸುಶ್ರುತ, ಚರಕರವರನ್ನು ಕುರಿತು ಅವರ ಮಹತ್ತನ್ನು ಒರೆದಿರುವುದರಿಂದ ಇವನು ಅವರಿಗಿಂತಲೂ ಈಚಿನವನೆಂದು ಹೇಳಲಾಗಿದೆ. ವಾಗ್ಭಟನ ಮುಖ್ಯ ಗ್ರಂಥ ಅಷ್ಟಾಂಗ ಸಂಗ್ರಹವಾಗಿತ್ತು. ಇದರಲ್ಲಿ ವೈದ್ಯಶಾಸ್ತ್ರ, ಚಿಕಿತ್ಸೆವಿಧಾನ, ಆರೋಗ್ಯಶಾಸ್ತ್ರ, ಅಂಗರಚನೆ, ಶಸ್ತ್ರವೈದ್ಯ, ಕಣ್ಣಿನ ರೋಗ, ರೋಗನಿದಾನ, ಸ್ತ್ರೀರೋಗಗಳನ್ನೆಲ್ಲಾ ವಿವರಿಸಲಾಗಿತ್ತು. ಚಿಕಿತ್ಸೆವಿಭಾಗದಲ್ಲಿ ವಾಂತಿಮಾಡಿಸುವ, ಭೇದಿ

ಮಾಡಿಸುವ, ಜ್ವರ ಇಳಿಸುವ ಔಷಧಗಳನ್ನೂ, ಕಣ್ಣಿಗೆ ಹಚ್ಚುವ, ಬಾಯಿ ಮುಕ್ಕಳಿಸುವ ಔಷಧಗಳನ್ನೂ ವಿವರಿಸಿದೆ. ಸಿಹಿಮೂತ್ರ, ಕುಷ್ಠರೋಗ, ಗೂರಲು, ರಕ್ತಕೊರೆ, ಮೊಳೆರೋಗ, ಪೇಚಾಟ, ಮುಂತಾದ ರೋಗಗಳನ್ನು ಅತಿ ಸೂಕ್ಷ್ಮವಾಗಿ ವಿವರಿಸಲಾಗಿದೆ. ಅಲ್ಲದೆ ವಿಷಸೇವನೆಗೆ, ಹಾವು, ಕೀಟಗಳ ಕಡಿತಕ್ಕೆ ತಕ್ಕ ಔಷಧಗಳನ್ನು ಬರೆದಿದೆ.

ಚರಕ, ಸುಶ್ರುತ, ವಾಗ್ಭಟ ಇವರ ಗ್ರಂಥಗಳು ಒಂದೇ ರೀತಿ ಇರುವುದರಿಂದ, ಇವರ ಮೂಲ ಆಧಾರ ಆತ್ರೇಯ ಸಂಹಿತವಿರಬೇಕೆಂದು ಅನೇಕರ ಅಭಿಪ್ರಾಯ. ಈ ವಿವರಣೆಗಳು ಅಥರ್ವ ವೇದದಲ್ಲೂ ಇವೇ ರೋಗವನ್ನು ಪ್ರಾರಂಭದಲ್ಲೇ ಎದುರಿಸಬೇಕೆಂದೂ, ರೋಗಿಗಳನ್ನು ಪರೀಕ್ಷಿಸುವಾಗ, ರೋಗಿಗಳ ಪೂರ್ವ ಚರಿತ್ರೆ ತಿಳಿದು ಸಹಾಯ ಪಡೆಯಬೇಕೆಂದೂ, ಕಣ್ಣಿನಿಂದ ನೋಡಿ, ಕೈಯಿಂದ ಮುಟ್ಟಿ, ಬೆರಳಿನಿಂದ ಕುಟ್ಟಿ, ಎದೆಯೊಳಗೆ ಕೇಳಿಬರುವ ಶಬ್ದಗಳನ್ನು ಕಿವಿಗೊಟ್ಟು ಕೇಳಿ ರೋಗ ನಿದಾನ ಮಾಡಬೇಕೆಂದೂ ಈ ಮೂರ್ವರ ಅಭಿಪ್ರಾಯವಾಗಿತ್ತು. ರೋಗ ಬಾರದಿರುವ ಹಾಗೆ ನೋಡಿಕೊಳ್ಳುವುದು ರೋಗ ಚಿಕಿತ್ಸೆಗಿಂತಲೂ ಯೋಗ್ಯವಾದುದೆಂದೂ, ರೋಗ ಗುಣ ಮಾಡಲು ಆಹಾರ ಮತ್ತು ಶುಶ್ರೂಷೆಗಳು ಬಹು ಮುಖ್ಯವಾದ ಅಂಶಗಳೆಂದೂ ಮೂವರೂ ತಿಳಿಸಿದ್ದರು.

ಈ ಪ್ರಖ್ಯಾತರಾದವರ ಶ್ರೇಣಿಯಲ್ಲಿ ಇನ್ನೂ ಕೆಲವು ಮಂದಿ ಹಿಂದೂ ವೈದ್ಯರು ಮತ್ತು ವಿಜ್ಞಾನಿಗಳಿದ್ದರು. ಹಾಗೂ ಅನೇಕ ಪುಸ್ತಕಗಳನ್ನು ಬರೆದಿದ್ದರು. ಬ್ಲಾಕ್ ಹೇಳಿರುವಂತೆ "ಹಿಂದೂಗಳ ವೈದ್ಯಕೀಯ ಗ್ರಂಥಗಳ ಸಂಖ್ಯೆ ಅಸಾಧಾರಣವಾಗಿ ದೊಡ್ಡದು". ಲೈಟಾರ್ಡ್ ೨೩೦ ಗ್ರಂಥಕರ್ತರ ೫೦ ವೈದ್ಯ ಪುಸ್ತಕಗಳ ಮತ್ತು ಹೆಸರುಗಳನ್ನು ಸಂಗ್ರಹಿಸಿ, ಒಟ್ಟು ವೈದ್ಯಗ್ರಂಥಗಳ ಸಂಖ್ಯೆ ೭೦೦-೮೦೦ ಎಂದು ಅಂದಾಜು ಮಾಡಿರುವನು.

ಧನ್ವಂತರಿ

ದೈವಿಕ ಅಧಿಕಾರ ಹೊಂದಿದ್ದ ಧನ್ವಂತರಿಯನ್ನು ಗ್ರೀಕರ ಎಸ್ಕುಲೇಪಿಯಸ್ಸಿಗೆ ಹೋಲಿಸಬಹುದು. ಇವನು ವೈದ್ಯಶಾಸ್ತ್ರವನ್ನು ಮಾನವನಿಗೆ ಬಿಡಿಸಿಹೇಳಿದನೆಂದು ಸುಶ್ರುತ ಸಂಹಿತದಲ್ಲಿ ತಿಳಿಸಿದೆ. ಇವನು ಬ್ರಹ್ಮನಿಂದ ಉಪದೇಶ ಪಡೆದು ಅಥರ್ವ ವೇದವನ್ನು ಕೂಡ ಮಾನವನ ಮುಂದಿಟ್ಟಿದ್ದನು.

ನಾಗಾರ್ಜುನ

ಇನ್ನೊಬ್ಬ ಪ್ರಸಿದ್ಧ ವೈದ್ಯನಾದ ನಾಗಾರ್ಜುನ ವಿದರ್ಭ ದೇಶದವನು. ಇವನು ತತ್ವಶಾಸ್ತ್ರಜ್ಞನೂ ಆಗಿದ್ದನು. ಕ್ರಿ. ಪೂ. ಮೊದಲನೇ ಶತಮಾನದಲ್ಲೂ ಕ್ರಿ.ಶ. ಮೊದಲನೇ ಶತಮಾನದಲ್ಲೂ ಇದ್ದನೆಂದು ಹೇಳಲಾಗಿದೆ. ಇವನ ಕಾಲ

ದಲ್ಲಿ ಕೃಷ್ಣನದಿಯ ದಡದಲ್ಲಿದ್ದ ಅಮರಾವತಿ ಪಟ್ಟಣದ ವಿಶ್ವವಿದ್ಯಾನಿಲಯ ಬಹು ಉತ್ಕೃಷ್ಟದಲ್ಲಿತ್ತು. ಅಲ್ಲಿ ಆಯುರ್ವೇದವೂ ಒಂದು ಅಂಗವಾಗಿತ್ತು. ಇವನು ರಸಾಯನ ಶಾಸ್ತ್ರಜ್ಞನಾಗಿದ್ದರೂ, ವೈದ್ಯಶಾಸ್ತ್ರವನ್ನು ಕುರಿತು ಅನೇಕ ಪುಸ್ತಕಗಳನ್ನು ಬರೆದಿದ್ದನು. ಯೋಗಸಾರ, ರಸೇಂದ್ರಮಂಗಳ ಮತ್ತು ಆರೋಗ್ಯಮಂಜರಿ ಇವನ ಮುಖ್ಯ ಗ್ರಂಥಗಳಾಗಿದ್ದವು.

ಕ್ರಿ.ಪೂ. ೨ನೇ ಶತಮಾನದಲ್ಲಿದ್ದ ಪತಂಜಲಿಯೂ ರಸಾಯನ ಶಾಸ್ತ್ರಜ್ಞನಾಗಿದ್ದನು. ಇವನ ಲೋಹಶಾಸ್ತ್ರ ಯಶಸ್ಸನ್ನು ಪಡೆದಿತ್ತು.

ವಿಜಯನಗರ ಸಾಮ್ರಾಜ್ಯದಲ್ಲಿ ಪ್ರಖ್ಯಾತಿ ಪಡೆದಿದ್ದ ಮಾಧವ ಹಿಂದೂ ವೈದ್ಯಶಾಸ್ತ್ರದ ಮೇಲೆ 'ಮಾಧವನಿದಾನ'ವೆಂಬ ಗ್ರಂಥವನ್ನು ಬರೆದಿದ್ದಾನೆ. ೧೬ನೇ ಶತಮಾನದಲ್ಲಿ ಭಾವಮಿಶ್ರ ಉತ್ತರ ಹಿಂದುಸ್ಥಾನದಲ್ಲಿದ್ದು ಔಷಧಗಳ ವಿಚಾರವಾಗಿ ಅನೇಕ ಪುಸ್ತಕಗಳನ್ನು ಬರೆದಿದ್ದಾನೆ.

ಒಟ್ಟಿನಲ್ಲಿ ಹೇಳುವುದಾದರೆ, ಔಷಧ ವೈದ್ಯಶಾಸ್ತ್ರದಲ್ಲೂ ಮತ್ತು ವಿಷ ವಿಜ್ಞಾನದಲ್ಲೂ ಹಿಂದೂ ವೈದ್ಯರು ಆಗಿನ ಕಾಲದ ಇತರ ದೇಶಗಳ ವೈದ್ಯರಿಗಿಂತಲೂ ಉತ್ತಮರಾಗಿದ್ದರು. ಔಷಧ ತಯಾರಿಕೆಯಲ್ಲೂ ಇವರಿಗಿದ್ದಷ್ಟು ಜಾಣತನ ಇತರರಿಗಿರಲಿಲ್ಲ. ಪಾದರಸ, ಗಂಧಕ, ಸ್ಫಟಿಕ, ಸೀಸ, ಕಬ್ಬಿಣ, ತವರ, ತಾಮ್ರ, ಬೆಳ್ಳಿ, ಚಿನ್ನ ಮುಂತಾದ ಲೋಹಗಳನ್ನು ಉಪಯೋಗಿಸಿ ಔಷಧ ತಯಾರಿಸುತ್ತಿದ್ದರು. ಪಾದರಸವನ್ನು ಹಿಂದೂ ವೈದ್ಯರೇ ಮೊಟ್ಟಮೊದಲಿಗೆ ಮೇಹರೋಗಕ್ಕೆ ಉಪಯೋಗಿಸಿದವರು. ಸಿಹಿ ಮೂತ್ರದ ಎಲ್ಲಾ ಲಕ್ಷಣಗಳೂ ಗೊತ್ತಿದ್ದವು. ಮೂತ್ರ ಸಿಹಿ ಇರುವುದರ ವಿಚಾರವಾಗಿ ಮುಲ್ಲರ್ ಹೀಗೆ ನುಡಿದಿದ್ದಾನೆ, 'ಅಂತಹ ಕಣ್ಣರಿಕೆಯ ಸಾಧ್ಯತೆಯನ್ನು ನಿರಾಕರಿಸುವಂತಿಲ್ಲ. ಅಂತಹ ವೈದ್ಯಕೀಯ ತಿಳಿವಳಿಕೆಗೆ ಖಚಿತ ಪುರಾವೆ ಇಲ್ಲಿನ ತನಕ ಸಿಕ್ಕಿಲ್ಲ'.

ಸಿಡುಬು ರೋಗವನ್ನು ತಡೆಯಲು ಹೊಮ್ಮಿರುವ ಗಾಯಗಳ ಕೀವನ್ನು ಚುಚ್ಚುಮದ್ದಾಗಿ ಉಪಯೋಗಿಸುವ ಪದ್ಧತಿ ಬಹಳ ಹಿಂದೆಯೇ ಹಿಂದೂ ವೈದ್ಯರಿಗೆ ತಿಳಿದಿತ್ತು. ಇದನ್ನು ಅಥರ್ವವೇದದಲ್ಲೂ (ಕ್ರಿ.ಪೂ. ೧೦೦೦) ತಿಳಿಸಿತ್ತೆಂದು ಹೇಳಲಾಗಿದೆ. ಆದರೆ ಚರಕ, ಸುಶ್ರುತ, ವಾಗ್ಭಟ ಯಾರೂ ಈ ವಿಚಾರವನ್ನು ಕುರಿತು ಚರ್ಚಿಸಿಲ್ಲ. ಶಸ್ತ್ರವೈದ್ಯದಲ್ಲೂ ಆಗಿನ ವೈದ್ಯರು ಇತರ ದೇಶಗಳ ವೈದ್ಯರನ್ನು ಮೀರಿಸಿದ್ದರು. ಕೃತಕ ಮೂಗು ಕೊಡುವುದರಲ್ಲಿ ನಿಸ್ಸೀಮರಾಗಿದ್ದರು. ಹರಿದ ತುಟಿ ಮತ್ತು ಕಿವಿಗಳನ್ನು ಸರಿಪಡಿಸುತ್ತಿದ್ದರು. ಸೂಜಿಗಲ್ಲಿನಿಂದ ಆಯುಧಗಳ ಚೂರುಗಳನ್ನು ಶರೀರದಿಂದ ಹೊರತೆಗೆಯುತ್ತಿದ್ದರು. ಹೊಟ್ಟೆ ಬಗೆದು ರೋಗ ನಿದಾನಮಾಡುತ್ತಿದ್ದರು. ಕರುಳನ್ನು ಹೊಲೆಯಲು ದಾರದ ಬದಲು ಕಪ್ಪು ಇರುವೆ ಉಪಯೋಗಿಸುತ್ತಿದ್ದ ಪದ್ಧತಿ ಹಿಂದೂ ವೈದ್ಯರ ಆಶ್ಚರ್ಯಕರವಾದ ಕ್ರಿಯೆಯಾಗಿತ್ತು.

ಶಸ್ತ್ರಕ್ರಿಯೆ ಮಾಡುವಾಗ ಸ್ಪರ್ಶಜ್ಞಾನವಿಲ್ಲದಂತೆ ಮಾಡಲು ಔಷಧಗಳು ಗೊತ್ತಿದ್ದವು. ಸಮ್ಮೋಹಿನಿ ಎಂಬ ಔಷಧ ಇದಕ್ಕೋಸ್ಕರ ಹೆಚ್ಚು ಉಪಯೋಗದಲ್ಲಿತ್ತು. ಭಾವ ಪ್ರೇರಣೆ ಮತ್ತು ಕೃತಕನಿದ್ದೆ ಬರಿಸಿ ರೋಗ ಗುಣಮಾಡುತ್ತಿದ್ದ ರೂಢಿ ಈಜಿಪ್ಟ್ ಮತ್ತು ಗ್ರೀಸಿನಲ್ಲಿ ಎಷ್ಟು ಪ್ರಖ್ಯಾತಿ ಹೊಂದಿತ್ತೋ ಅಷ್ಟೇ ಹಿಂದು ದೇಶದಲ್ಲೂ ಪಡೆದಿತ್ತು. ೧೯ ನೇ ಶತಮಾನದಲ್ಲಿ ಇಂಗ್ಲಿಷರು ರೋಗ ಗುಣಮಾಡಲು ಕೃತಕ ನಿದ್ದೆಬರಿಸುವುದನ್ನು ಹಿಂದೂ ದೇಶದ ಜನರಿಂದ ಕಲಿತದ್ದಕ್ಕೆ ಸಾಕಷ್ಟು ರುಜುವಾತುಗಳಿವೆ.

ಚರಕ, ಸುಶ್ರುತ ಮತ್ತು ಇತರರು ಹಲ್ಲಿನ ಆರೈಕೆಗೆ ಸಾಕಷ್ಟು ಗಮನ ಕೊಟ್ಟಿದ್ದರು. ಹಲ್ಲುರೋಗಗಳಿಗೆ ತಕ್ಕ ಔಷಧಗಳನ್ನು ಕಂಡುಹಿಡಿದಿದ್ದರು. ಹಲ್ಲುಜ್ಜುವ ಕ್ರಮವೂ ತಿಳಿದಿದ್ದಿತು. ಕೆಟ್ಟ ಹಲ್ಲನ್ನು ತೆಗೆಯಲು ಹೇಳಿದ್ದರು. ಅಲ್ಲಾಡುತ್ತಿರುವ ಹಲ್ಲನ್ನು ಬಿಗಿಮಾಡುವ ಔಷಧ ಕೂಡ ಚರಕನಿಗೆ ಗೊತ್ತಿತ್ತು.

ಪಶುವೈದ್ಯಶಾಸ್ತ್ರದಲ್ಲೂ ನಿಪುಣರಾಗಿದ್ದರು. ಕುದುರೆ ಮತ್ತು ಆನೆಗಳಿಗೆ ಬರುತ್ತಿದ್ದ ರೋಗಗಳ ವಿಚಾರವನ್ನು ಚೆನ್ನಾಗಿ ಅರಿತಿದ್ದರು. ಆನೆ ಕಣ್ಣಿಗೆ ಹಾಲನ್ನು ಚುಚ್ಚುಮದ್ದಾಗಿ ಉಪಯೋಗಿಸುವ ಕ್ರಮವನ್ನು ಮೆಗಾಸ್ತನೀಸ್ ಕ್ರಿ.ಪೂ. ೩೦೦ರಲ್ಲಿ ಹಿಂದೂ ದೇಶಕ್ಕೆ ಭೇಟಿಕೊಟ್ಟಿದ್ದಾಗ ವಿವರಿಸಿದ್ದಾನೆ. ಅಶೋಕ ಚಕ್ರವರ್ತಿ ಪಶುವೈದ್ಯಶಾಲೆಗಳನ್ನು ತೆರೆದಿದ್ದನು. ಕ್ರಿ. ಶ. ೪ ನೇ ಶತಮಾನದಲ್ಲಿ ಸಿಲೋನಿನ ಬುದ್ಧದಾಸನೆಂಬ ರಾಜ ಪಶುವೈದ್ಯನನ್ನು ತನ್ನ ಸೈನ್ಯದ ಆನೆ ಕುದುರೆಗಳನ್ನು ನೋಡಲು ನೇಮಿಸಿಕೊಂಡಿದ್ದನು.

ಆಸ್ಪತ್ರೆಗಳು

ಆಸ್ಪತ್ರೆಗಳ ಅನುಕೂಲ—ಕ್ರಿ.ಪೂ. ೫ನೇ ಶತಮಾನದಲ್ಲಿ ಮೊಟ್ಟಮೊದಲಿಗೆ ಸ್ಥಾಪಿಸಿದ್ದ ಆಸ್ಪತ್ರೆ ಸಿಲೋನಿನಲ್ಲಿತ್ತು. ದತ್ತಗಾಮಿನಿ ಕ್ರಿ. ಪೂ. ೨ನೇ ಶತಮಾನದಲ್ಲೇ ೧೮ ಬೇರೆಬೇರೆ ಸ್ಥಳಗಳಲ್ಲಿ ಆಸ್ಪತ್ರೆಗಳನ್ನು ಸ್ಥಾಪಿಸಿದ್ದನು. ಅಶೋಕ ಚಕ್ರವರ್ತಿ (ಕ್ರಿ.ಪೂ ೨೭೩-೨೩೨) ತನ್ನ ಸಾಮ್ರಾಜ್ಯದ ನಾನಾ ಕಡೆಗಳಲ್ಲಿ ಆಸ್ಪತ್ರೆಗಳನ್ನು ಸ್ಥಾಪಿಸಿದುದಲ್ಲದೆ ಬಂಡೆಗಳ ಮೇಲೆ ರಾಜ ಶಾಸನವನ್ನು ಕೆತ್ತಿಸಿದ್ದನು. ಈ ಕೆತ್ತನೆಯಲ್ಲಿ ಪ್ರಿಯದರ್ಶಿನಿ ರಾಜನ ಆಳ್ವಿಕೆಯಲ್ಲಿ ಮನುಷ್ಯರಿಗೂ ಪ್ರಾಣಿಗಳಿಗೂ ಬೇರೆಬೇರೆ ಆಸ್ಪತ್ರೆಗಳಿದ್ದವೆಂದೂ, ಗಿಡಮೂಲಿಕೆಗಳಿಲ್ಲದ ಕಡೆ ಅವನ್ನು ತಂದು ನೆಡಬೇಕೆಂದೂ ತಿಳಿಸಿದ್ದಾನೆ. ಚೀನ ದೇಶದ ಯಾತ್ರಿಕ ಫಾಹಿಯಾನ್ ಕ್ರಿ.ಶ. ೫ನೇ ಶತಮಾನದಲ್ಲಿ ಹಿಂದೂದೇಶಕ್ಕೆ ಭೇಟಿಕೊಟ್ಟಾಗ ಅನೇಕ ಆಸ್ಪತ್ರೆಗಳಿದ್ದವೆಂದೂ, ಅವೆಲ್ಲವೂ ಧರ್ಮ ಸಂಸ್ಥೆಗಳಾಗಿದ್ದವೆಂದೂ ಹೊಗಳಿದ್ದನು. ಇದಕ್ಕೆಲ್ಲಾ ಬೌದ್ಧಮತವೇ ಕಾರಣವೆಂದೂ, ಮೌರ್ಯ ಮತ್ತು ಗುಪ್ತ ರಾಜರುಗಳ ಜನಪ್ರಿಯ ರಾಜ್ಯಭಾರವೂ ಕಾರಣವೆಂದೂ ಹೇಳಲಾಗಿದೆ. ಅನುರಾಧಪುರದ

ಹತ್ತಿರವಿದ್ದ ಮಿಹಿಂತಲೆಯಲ್ಲಿ ಈಗಲೂ ಆಗಿನ ಕಾಲದ ಆಸ್ಪತ್ರೆಗಳ ಅವಶೇಷಗಳಿವೆ. ಇವನ್ನು ಅಶೋಕನ ಮಗ ಮಹೇಂದ್ರ ಕಟ್ಟಿಸಿದ್ದನೆಂದು ಹೇಳಲಾಗಿದೆ. ಆಗಿನ ಕಾಲದಲ್ಲಿ ಮಕ್ಕಳ ಪಾಠಶಾಲೆಗಳ ವಿದ್ಯಾರ್ಥಿ ನಿಲಯಗಳಲ್ಲಿ ಆಸ್ಪತ್ರೆಗಳು ಇದ್ದ ವೆಂದೂ, ಇವುಗಳಲ್ಲಿ ಕೊನೆಯ ಪಕ್ಷ ೧೫ ರೋಗಿ ಹಾಸಿಗೆಗಳಿದ್ದವೆಂದೂ, ಪ್ರತಿ ಯೊಂದು ಆಸ್ಪತ್ರೆಗೂ ಒಬ್ಬೊಬ್ಬ ವೈದ್ಯನಿದ್ದನೆಂದೂ ಹೇಳಲಾಗಿದೆ. ಸಾರ್ವ ಜನಿಕ ಆಸ್ಪತ್ರೆಗಳಲ್ಲಿ ವೈದ್ಯರ ಸಂಗಡ ಕೆಲಸ ಮಾಡಲು ದಾದಿಯರು, ಆಳುಗಳು ಸಂಗೀತಗಾರರು ಮತ್ತು ಮೈನೀವುವವರು ಇದ್ದರೆಂದು ಹೇಳಿದೆ.

ವೈದ್ಯ ಶಿಕ್ಷಣ

ಬುದ್ಧನ ಕಾಲದಲ್ಲಿ ನಳಂದ ಮತ್ತು ತಕ್ಷಶಿಲಗಳೆಂಬ ಎರಡು ಸುಪ್ರಸಿದ್ಧ ವಿಶ್ವವಿದ್ಯಾನಿಲಯಗಳಿದ್ದವು. ನಳಂದ ವಿದ್ಯಾಪೀಠದಲ್ಲಿ ವಿದ್ಯಾರ್ಥಿಗಳು ಸ್ಥಳದಲ್ಲೇ ವಾಸಿಸಲು ಅನುಕೂಲಗಳಿದ್ದವು. ಶಿಕ್ಷಣ ಇಲ್ಲಿ ಉಚಿತವಾಗಿತ್ತು. ರಾಜರಿಂದಲೂ, ದಯಾಪರರಿಂದಲೂ ಸಹಾಯ ಬರುತ್ತಿತ್ತು. ನಳಂದ ವಿಶ್ವವಿದ್ಯಾನಿಲಯದಲ್ಲಿ ೮೫೦೦ ವಿದ್ಯಾರ್ಥಿಗಳಿದ್ದರೆಂದೂ, ೧೫೧೦ ಉಪಾಧ್ಯಾಯರಿದ್ದರೆಂದೂ ಹೇಳಿದೆ. ಇಲ್ಲಿಯ ವಿದ್ಯಾರ್ಥಿಗಳು ಹಿಂದೂ ದೇಶದಲ್ಲಿ ಮಾತ್ರವಲ್ಲದೆ ಪಕ್ಕದ ನೇಪಾಳ, ಟಿಬೆಟ್ ಮತ್ತು ಚೀನ ದೇಶಗಳಿಗೆ ಹೋಗಿ ರಾಯಭಾರಿಗಳಾಗಿ ಹಿಂದೂ ದೇಶದ ಕೀರ್ತಿಯನ್ನು ಬೆಳೆಸುತ್ತಿದ್ದರು. ತಕ್ಷಶಿಲ ವಿಶ್ವವಿದ್ಯಾನಿಲಯ ಕೂಡ ವೈದ್ಯ ಶಿಕ್ಷಣದಲ್ಲಿ ಮುಂದಿತ್ತು. ಅನೇಕ ಹೊರದೇಶಗಳಿಂದ ಇಲ್ಲಿ ವ್ಯಾಸಂಗ ಮಾಡಲು ವಿದ್ಯಾರ್ಥಿಗಳು ಬರುತ್ತಿದ್ದರು.

ವಿದ್ಯಾಪೀಠಗಳಿಗೆ ಸೇರಲು ಈಗ ಎಷ್ಟು ಕಷ್ಟವಿದೆಯೋ ಅಷ್ಟೇ ಕಷ್ಟ ಆಗಲೂ ಇತ್ತು. ವಿದ್ಯಾರ್ಥಿಗಳನ್ನು ನೇಮಿಸುವಾಗ ಮತ, ಜಾತಿ, ಬಂಧುತ್ವ ಮತ್ತು ಗುರುವಿನಲ್ಲಿರುವ ಗೌರವಗಳನ್ನೆಲ್ಲಾ ಪರೀಕ್ಷಿಸಿ ಯೋಗ್ಯರಾದವರನ್ನು ಮಾತ್ರ ಆರಿಸಿಕೊಳ್ಳುತ್ತಿದ್ದರು. ಬ್ರಾಹ್ಮಣರು ಇತರರಿಗೆ ಸಹಾಯವಾಗಲು, ಕ್ಷತ್ರಿಯರು ತಮ್ಮ ವಂಶ ಕಾಪಾಡಲು, ವೈಶ್ಯರು ಹಣ ಸಂಪಾದಿಸಲು ವೈದ್ಯ ಶಾಲೆಗೆ ಸೇರುತ್ತಿದ್ದ ರೆಂದು ಹೇಳಲಾಗಿದೆ. ಆದರೆ ಶೂದ್ರರಿಗೆ ಜಾಗವಿರಲಿಲ್ಲ. ವಿದ್ಯಾಪೀಠಕ್ಕೆ ಸೇರಿದ ಮೇಲೆ ವಿದ್ಯಾರ್ಥಿಗಳು ಗುರುಗಳ ಅಧೀನದಲ್ಲಿರಬೇಕಾಗಿತ್ತು. ವಿದ್ಯಾರ್ಥಿಗಳು ಗುರುಗಳಿಗೆ ಒಪ್ಪಿಗೆಯಾಗಬೇಕಿತ್ತು. ಆದ್ದರಿಂದ ಗುರುಗಳ ಶಿಷ್ಯರ ಸಂಬಂಧ ಮೊದಲಿನಿಂದಲೂ ಹೃತ್ಪೂರ್ವಕವಾಗಿರುತ್ತಿತ್ತು. ವ್ಯಾಸಂಗ ಪ್ರಾರಂಭ ಮಾಡುವ ಮೊದಲು ವಿದ್ಯಾರ್ಥಿಗಳಿಗೆ ನಡತೆ ಮೊದಲಾದ ವಿಷಯಗಳಲ್ಲಿ ಉಪದೇಶ ನಡೆಯು ತ್ತಿತ್ತು. ಇವುಗಳ ಜತೆಗೆ ಚರಕ ತನ್ನದೇ ಆದ ಕೆಲವು ನಿಯಮಗಳನ್ನು ಉಪದೇಶಿ ಸುತ್ತಿದ್ದ ಶಿಷ್ಯರು ಇತರರ ಹೆಂಡತಿಯರನ್ನು ದೃಷ್ಟಿಸಕೂಡದೆಂದೂ, ಸಂಪಾದನೆ ಮೇಲೆ ಆಸೆಪಡಬಾರದೆಂದೂ, ರೋಗಿಯ ವಿಚಾರಗಳನ್ನು ರಹಸ್ಯವಾಗಿಡಬೇಕೆಂದೂ,

ಹೆಂಗಸರನ್ನು ಪರೀಕ್ಷೆ ಮಾಡುವಾಗ ಹತ್ತಿರ ಒಬ್ಬ ದಾದಿ ಇರಬೇಕೆಂದೂ ಹಾಗೂ ಸಾಮಾನ್ಯವಾಗಿ ಎಲ್ಲರಿಗೂ ಒಳ್ಳೆಯದನ್ನು ಮಾಡಬೇಕೆಂದೂ ವಿಜ್ಞಾಪಿಸುತ್ತಿದ್ದನು.

ವೈದ್ಯವಿದ್ಯೆ ಮುಗಿಯಲು ಸುಮಾರು ೬ ವರ್ಷಗಳಾಗುತ್ತಿತ್ತು. ಒಬ್ಬ ಗುರುವಿನ ಕೆಳಗೆ ೪ ವಿದ್ಯಾರ್ಥಿಗಳು ಮಾತ್ರ ವಿದ್ಯಾಭ್ಯಾಸಮಾಡಬಹುದಾಗಿತ್ತು. ಶಿಕ್ಷೆಯ ಮೊದಲ ವಿಭಾಗದಲ್ಲಿ ತತ್ವಗಳನ್ನೂ, ಶ್ಲೋಕಗಳನ್ನೂ ಕಲಿತು, ಅರ್ಥಮಾಡಿಕೊಂಡು, ಪ್ರಥಮ ಭಾಗದಲ್ಲಿ ತೇರ್ಗಡೆಯಾದ ನಂತರ ಕೊನೆಯ ವಿಭಾಗವಾದ ಪ್ರಯೋಗ ಶಿಕ್ಷಣವನ್ನು ಪಡೆಯಬೇಕಾಗಿತ್ತು. ಇವೆರಡೂ ಮುಗಿದು ಗುರುವಿನಿಂದ ಶಿಫಾರಸ್ಸು ಪಡೆದ ಮೇಲೆ ಪಧವೀದರನಾಗುತ್ತಿದ್ದನು. ಇದಾದ ಮೇಲೆ ದೊರೆಯ ಅಪ್ಪಣೆ ಪಡೆದು ವೈದ್ಯ ವೃತ್ತಿಯಲ್ಲಿ ತೊಡಗಬೇಕಾಗಿತ್ತು. ವೈದ್ಯ ವೃತ್ತಿಯಲ್ಲಿ ತೊಡಗಿರುವಾಗಲೂ ಅವನ ನಡತೆ, ಕುಶಲತೆ, ಸಹಾಯಗಳೆಲ್ಲವನ್ನೂ ಹಿರಿಯರು ಪರಿಶೀಲಿಸುತ್ತಿದ್ದರು.

ಯೂರೋಪಿನಲ್ಲಿ ಗ್ರೀಕರೂ ಏಷ್ಯಾದಲ್ಲಿ ಹಿಂದುಗಳೂ ಒಂದೇ ರೀತಿ, ಒಂದೇ ಮಟ್ಟದಲ್ಲಿದ್ದುದರಿಂದ ಗ್ರೀಕರು ತಮ್ಮ ಸಂಸ್ಕೃತಿಯನ್ನು ಹಿಂದೂಗಳಿಂದ ಕಲಿತರೋ ಅಥವಾ ಹಿಂದೂಗಳು ಗ್ರೀಕರಿಂದ ಕಲಿತರೋ ಎಂದು ನಿರ್ಧರಿಸುವುದು ಅಷ್ಟು ಸುಲಭವಲ್ಲ. ಅನೇಕ ವಿದ್ವಾಂಸರ ಪ್ರಕಾರ ಎರಡು ಸಂಸ್ಕೃತಿಗಳೂ ಸ್ವತಂತ್ರವಾಗಿಯೇ ಬೆಳೆದು ಬಂದಿದ್ದವೆಂದೂ, ಆದರೆ ಎರಡಕ್ಕೂ ಪರಸ್ಪರ ವಿನಿಮಯವಿತ್ತೆಂದೂ ಹೇಳಲಾಗಿದೆ. ಹಿಪ್ಪೊಕ್ರೇಟಿಸ್ ಬರವಣಿಗೆಯಲ್ಲಿ ಅನೇಕ ಹಿಂದೂದೇಶದ ಔಷಧಗಳ ಹೆಸರುಗಳು ಕಂಡುಬಂದಿದ್ದವೆಂದೂ ಹಾಗೂ ಹಿಪ್ಪೊಕ್ರೇಟಿಸ್ಸಿನ ಕಾಲದಲ್ಲಿದ್ದ ಟೆಸಿಯಸ್ ಹಿಂದೂದೇಶಕ್ಕೆ ಬಂದು, ಹಿಂದೂ ವೈದ್ಯಶಾಸ್ತ್ರವನ್ನು ಕಲಿತು, ಪುಸ್ತಕ ಒರೆದಿದ್ದನೆಂದು ಹೇಳಿದೆ. ಇವನ ಹೇಳಿಕೆಯ ಪ್ರಕಾರ ಹಿಂದೂಗಳು ಅನೇಕ ಪ್ರಯೋಗಗಳಲ್ಲಿ ಮುಂದಿದ್ದರೆಂದು ಹೇಳಲಾಗಿದೆ. ಆದರಲ್ಲೂ ಹಾವು ಕಚ್ಚಿದ್ದವರನ್ನು ಗುಣಮಾಡುವುದರಲ್ಲಿ ನಿಪುಣರಾಗಿದ್ದರೆಂದು ಹೇಳಿದೆ. ೪ನೇ ಶತಮಾನದಲ್ಲಿ ಅಲೆಗ್ಸಾಂಡರ್ ಹಿಂದೂದೇಶಕ್ಕೆ ದಂಡೆತ್ತಿ ಬಂದು ಗೆದ್ದಮೇಲೆ, ಹಿಂದೂ ವೈದ್ಯಶಾಸ್ತ್ರ ಗ್ರೀಕರ ವೈದ್ಯಶಾಸ್ತ್ರದಲ್ಲಿ ಜತೆಗೆ ಬೆರೆತುಕೊಂಡಿತು. ಗ್ರೀಕ್ ವೈದ್ಯರಲ್ಲನೇಕರು ಹಿಂದೂ ವೈದ್ಯಶಾಸ್ತ್ರದಲ್ಲಿ ಪ್ರವೀಣರಾದರು. ಅಲೆಗ್ಸಾಂಡರ್ ಚಕ್ರವರ್ತಿ ತನ್ನ ಆಸ್ಥಾನಕ್ಕೆ ಹಿಂದೂ ವೈದ್ಯರನ್ನು ನೇಮಿಸಿಕೊಂಡನು. ಇವನನಂತರ ಬಂದ ಪ್ಲೈನಿ ಮತ್ತು ಗ್ಯಾಲನ್ ಹಿಂದೂ ಸಂಸ್ಕೃತಿಯನ್ನೂ ಹಿಂದೂ ವೈದ್ಯಶಾಸ್ತ್ರವನ್ನೂ ಹೆಚ್ಚು ಹೆಚ್ಚಾಗಿ ಬಳಸುತ್ತಿದ್ದರು. ಆಮೇಲೆ ಬಂದ ಅರಬ್ಬರು ಕೂಡ ಅವರ ಬೆಳವಣಿಗೆಗೆ ಹಿಂದೂ ಸಂಸ್ಕೃತಿಯನ್ನೇ ಅವಲಂಬಿಸಿದರು. ಬಾಗದಾದಿನ ಹರುನ್ ಅಲ್ ರಷೀದ್ ೭೭೩ರಲ್ಲಿ ಬಾಗದಾದಿನ ವೈದ್ಯಪೀಠಕ್ಕೆ ಪಾಠಹೇಳಲು ಹಿಂದೂ ವೈದ್ಯರಾದ ಮಾನಕ ಮತ್ತು ಸಲಹ ಎಂಬುವರನ್ನು ಬರಮಾಡಿಕೊಂಡಿದ್ದನು.

೭. ಪ್ರಾಚೀನ ಚೀನೀಯರ ವೈದ್ಯಶಾಸ್ತ್ರ

ಕ್ರಿ. ಪೂ. ೨೯೫೩ರಲ್ಲಿ ಫು ಸಿ ಎಂಬ ಜೈನ ಚಕ್ರವರ್ತಿಗೆ ಪಕ್ವ ಎಂಬ ಚೀನೀಯರ ಪ್ರಭಾವದ ಯಂತ್ರಶಕ್ತಿಯನ್ನು ಬರೆದಿರುವ ಪುಸ್ತಕಗಳ ವಿಚಾರ ತಿಳಿಸಿದ ವಿಷಯವನ್ನು ಚರ್ಚಿಸುತ್ತ ಕನ್ಫೂಷಿಯಸ್ ದಿಗ್ಭ್ರಮೆಗೊಂಡು ೫೦ ವರ್ಷ ಈ ಮಂತ್ರವನ್ನು ಓದಿ ಅರ್ಥ ಮಾಡಿಕೊಂಡರೆ ತಾನು ಜ್ಞಾನಿಯಾಗುವೆನೆಂದು ತಿಳಿಸಿದ್ದಾನೆ. ಅದೇ ಕನ್ಫೂಷಿಯಸ್ ತನ್ನ ಮತಾಚರಣೆ ಪುಸ್ತಕದಲ್ಲಿ ಹಳೆಯದನ್ನು ಮರೆಯಬಾರದು, ಹಳಬರನ್ನು ಮರೆಯಬಾರದು, ಹಳೆಯದಕ್ಕೆಲ್ಲಾ ಗೌರವ ಸಲ್ಲಿಸಬೇಕೆಂದು ತಿಳಿಸಿದ್ದಾನೆ. ಈ ನೀತಿ ಚೀನೀಯರಲ್ಲಿ ಮನದಟ್ಟಾಗಿ ನಿಂತಿರುವುದರಿಂದ ಈಗಿನ ವೈದ್ಯಶಾಸ್ತ್ರ ಸ್ವಲ್ಪವೂ ಬದಲಾಗದೆ ಪ್ರಾಚೀನ ವೈದ್ಯಶಾಸ್ತ್ರದಂತೆ ಇದೆಯೆಂದು ನ್ಯುಬರ್ಗರ್ ಹೇಳಿದ್ದಾನೆ. ಚೀನೀಯರಿಗೆ ಕಲ್ಪನಾಶಕ್ತಿ ಇಲ್ಲವೆಂದು ಅನೇಕರು ಹೇಳಿದ್ದರೂ, ೬೧೮-೯೦೭ರಲ್ಲೇ ಟಾಂಗ್ ವಂಶದವರು ಮದ್ದಿನ ಪುಡಿಯನ್ನು ಕಂಡುಹಿಡಿದಿದ್ದರು. ೧೦೫ರಲ್ಲಿ ಕಾಗದ ತಯಾರಿಸುತ್ತಿದ್ದರು. ಕ್ರಿ.ಶ. ೧೦೦೦ದಲ್ಲಿ ಕಾಗದದ ಹಣವನ್ನು ಕಲ್ಪಿಸಿದ್ದರು. ಕ್ರಿ. ಶ. ೧೩೨ರಲ್ಲಿ ಭೂಕಂಪ ತಿಳಿಸುವ ಯಂತ್ರವನ್ನು ಕಂಡುಹಿಡಿದಿದ್ದರು. ಇವಕ್ಕೂ ಹಿಂದೆ ಕ್ರಿ.ಪೂ. ೧೧೧೫-೧೦೭೮ರಲ್ಲೇ ಚೆಂಗ್ ವಾಂಗ್ ಆಳ್ವಿಕೆಯಲ್ಲಿ ಹಡಗು ನಡೆಸಲು ಸಹಕಾರಿಯಾದ ಉತ್ತರ ಮುಖಿಯನ್ನು ಕಂಡುಹಿಡಿದಿದ್ದರು. ಆದರೂ ಚೀನೀಯರಿಗೆ ಬದಲಾವಣೆ ಹಿಡಿಸುತ್ತಿರಲಿಲ್ಲ. ೪೦೦೦ ವರ್ಷಗಳು ಕಳೆದಿದ್ದರೂ ಚೀನೀಯರ ಪದ್ಧತಿ, ನ್ಯಾಯ, ಭಾಷೆ ಮತ್ತು ಬಟ್ಟೆಬರೆಗಳಲ್ಲಿ ಯಾವ ವ್ಯತ್ಯಾಸವೂ ಕಂಡುಬಂದಿಲ್ಲವೆಂದು ವಾಲ್ಟೇರ್ ಹೇಳಿದ್ದಾನೆ.

ಪ್ರಾಚೀನ ಚೀನೀಯರು ಇತರ ಪ್ರಾಚೀನರಂತೆ ಸೂರ್ಯ, ಚಂದ್ರ, ನಕ್ಷತ್ರ, ಮೋಡ, ಬೆಂಕಿ ಇತ್ಯಾದಿಗಳನ್ನು ದೇವರ ಅವತಾರಗಳೆಂದು ನಂಬಿದ್ದರು. ರೋಗಗಳಿಗೆ ಭೂತಗಳೇ ಕಾರಣಗಳೆಂದು ನಂಬಿಕೆ ಇತ್ತು. ಅಲ್ಲದೆ ರೋಗವನ್ನು ಹೋಗಲಾಡಿಸಲು ಯಂತ್ರಮಂತ್ರಗಳನ್ನು ಉಪಯೋಗಿಸುತ್ತಿದ್ದರು. ಹೀಗಿದ್ದರೂ ಕ್ರಿ.ಪೂ. ೧೧೪೦ರ ಚೌ ವಂಶದ ಕಾಲದಲ್ಲಿ ವೈದ್ಯ ಮತ್ತು ಜೋಯಿಸ ಬೇರೆ ಬೇರೆಯೆಂದು ನಂಬಿದ್ದರು. ವೈದ್ಯ ಔಷಧೋಪಚಾರಗಳಲ್ಲಿ ಕೆಲಸಮಾಡುವಂತೆಯೂ, ಜೋಯಿಸ ಆಧ್ಯಾತ್ಮಿಕ ಕಾರ್ಯಗಳಲ್ಲಿ ಕೆಲಸ ಮಾಡುವಂತೆಯೂ ನೇಮಿಸಲ್ಪಟ್ಟಿದ್ದರು.



ಚೀನಾದಲ್ಲಿ ಹಳೆಕಾಲದ ವೈದ್ಯರೀತಿ

ಚೀನಿಯರ ಮತಗಳು

ಚೀನೀಯರು ಮೂರು ಮತಗಳನ್ನು ಅವಲಂಬಿಸಿದ್ದರು. ಟಾವೊ, ಕನ್ಫೂಷಿಯಸ್ ಮತ್ತು ಬೌದ್ಧರ ಮತಗಳೇ ಈ ಮೂರು ಮತಗಳು. ಟಾವೊ ಮತ್ತು ಕನ್ಫೂಷಿಯಸ್ ಮತಗಳು ಸ್ಥಳದವು. ಬೌದ್ಧಮತ ಭಾರತದಿಂದ ಬಂದದ್ದು. ೬೭ರಲ್ಲಿ ಬೌದ್ಧಮತವನ್ನು ಚೀನೀಯರು ಅವಲಂಬಿಸಿದರು. ೬೧೮–೯೦೭ರವರೆಗೆ ಟಾಂಗ್ ವಂಶದ ಕಾಲದಲ್ಲಿ ಬೌದ್ಧಮತ ಬಹಳ ಏಳಿಗೆಯಲ್ಲಿತ್ತು. ಟಾವೊ ಮತದವರಲ್ಲಿ ಯಕ್ಷಿಣಿ ಪ್ರಾಮುಖ್ಯವಾಗಿದ್ದರೆ, ಬೌದ್ಧಮತದವರಲ್ಲಿ ನಂಬಿಕೆ ಮತ್ತು ಸ್ವಯಂ ಪ್ರೇರಣೆ ಮುಖ್ಯವಾಗಿದ್ದವು. ಆದರೆ ಮತಧರ್ಮದಲ್ಲಿ ಮಾತ್ರ ಅವರು ಯಾವ ವ್ಯತ್ಯಾಸವನ್ನೂ ಮಾಡುತ್ತಿರಲಿಲ್ಲ.

ಯಿನ್ ಮತ್ತು ಯಾಂಗ್ ಶಕ್ತಿಗಳು

ಲೊಸು ಎಂಬ ಪೂಜ್ಯ ತತ್ವಜ್ಞಾನಿ (ಕ್ರಿ.ಪೂ. ೬೦೦) ಲೋಕದಲ್ಲಿ ಯಿನ್ ಮತ್ತು ಯಾಂಗ್ ಎಂಬ ಎರಡು ಶಕ್ತಿಗಳಿವೆಯೆಂದು ಹೇಳಿದ್ದನು. "ಯಿನ್" ಎಂಬುದು ಪ್ರತಿಭಟಿಸದ ಅಥವಾ ಸ್ತ್ರೀ ಶಕ್ತಿಯೆಂದೂ, ಅದರಲ್ಲಿ ಶೀತ, ಕತ್ತಲೆ, ರೋಗ ಮತ್ತು ಸಾವು ಅಡಗಿರುವುವೆಂದೂ, "ಯಾಂಗ್" ಎಂಬುದು ಚುರುಕಾದ ಅಥವಾ ಪುರುಷ ಶಕ್ತಿಯೆಂದೂ ಅದರಲ್ಲಿ ಸೆಕೆ, ಬೆಳಕು, ಆರೋಗ್ಯ ಮತ್ತು ಜೀವ ಅಡಗಿರುವುವೆಂದೂ ಸೂಚಿಸಿದ್ದನು. ಇವೆರಡು ವಿಶ್ವ ಶಕ್ತಿಗಳಲ್ಲಿ ಕಾಡು, ಅಗ್ನಿ

ನೆಲ, ಲೋಹ ಮತ್ತು ಜಲಗಳೆಂಬ ಪಂಚಭೂತಗಳಿದ್ದಿತೆಂದು, ಈ ಪಂಚ ಭೂತಗಳಿಂದಲೇ ಪ್ರಪಂಚದ ಜೀವ ಮತ್ತು ಅಜೈವ ವಸ್ತುಗಳು ಹುಟ್ಟಿದವೆಂದು ತಿಳಿಸಿದ್ದನು. ಈ ನಂಬಿಕೆ ಪ್ರಕಾರ ದೇಹ ಈ ಪಂಚ ಭೂತಗಳಿಂದ ಕೂಡಿತ್ತೆಂದು, ಅವು ಸರಿಯಾದ ಅಳತೆಯಲ್ಲಿದ್ದರೆ ಆರೋಗ್ಯವಿರುವುದೆಂದೂ, ಇಲ್ಲದಿದ್ದರೆ ರೋಗಬರುವುದೆಂದೂ ನಂಬಿದ್ದನು. ಈ ಪಂಚ ಭೂತಗಳಿಗೆ ಸರಿಸಮನಾಗಿ ದೇಹದಲ್ಲಿ ಈಲಿ, ತೊರಳೆ, ಹೃದಯ ಶ್ವಾಸಕೋಶ ಮತ್ತು ಮೂತ್ರಪಿಂಡವೆಂಬ ಐದು ಅಂಗಗಳಿವೆಯೆಂದೂ, ಇವಲ್ಲದೆ ತಲೆ, ಹೊಟ್ಟೆ ಮತ್ತು ಕಾಲಿನಲ್ಲಿ ಒಂದೊಂದು ಜೀವಾತ್ಮವಿದೆಯೆಂದು ನಂಬಿದ್ದನು. ಪರಿಶೀಲನೆ, ಕಿವಿಗೊಟ್ಟುಕೇಳುವ, ವಿಚಾರಣೆ ಮತ್ತು ಮುಟ್ಟಿನೋಡುವ ನಾಲ್ಕು ಪರೀಕ್ಷೆ ವಿಧಾನಗಳನ್ನು ನಂಬಿದ್ದನು.

ಪ್ರಾಚೀನ ವೈದ್ಯರ ತತ್ವಗಳು

ಪ್ರಾಚೀನ ವೈದ್ಯರಲ್ಲಿ ಅನೇಕ ಗುಂಪುಗಳಿದ್ದರೂ, ಎಲ್ಲರೂ ಐದು ತೆರನ ಸಂಕಟಗಳು ; ಐದು ಬಗೆಯ ನೋವುಗಳು ; ಮೋಹ, ಕಾಮಾಲೆ, ಅಜೀರ್ಣ ಮುಂತಾದ ಐದು ವಿಧದ ರೋಗಗಳು, ಐದು ಬಗೆಯ ಗಾಯಗಳು, ಆರು ಬಗೆಯ ಹವಾಮಾನಗಳು, ಏಳು ಬಗೆಯ ಮನೋಭಾವಗಳೂ ಇದ್ದವೆಂದು ಒಪ್ಪಿಕೊಂಡಿದ್ದರು. ಚೀನೀಯರ ತತ್ವಶಾಸ್ತ್ರದ ಮುಖ್ಯ ಉಪದೇಶದ ಪ್ರಕಾರ ವಿಶ್ವ ಜಗತ್ತು ಅಥವಾ ಬ್ರಹ್ಮಾಂಡ ಮತ್ತು ಸೂಕ್ಷ್ಮ ಜಗತ್ತು ಅಥವಾ ಮನುಷ್ಯವೆಂಬ ಎರಡು ತತ್ವಗಳಿವೆಯೆಂದು ನಂಬಿದ್ದರು. ಸ್ವರ್ಗ ಗುಂಡಾಗಿಯೂ, ಭೂಮಿ ಚೌಕವಾಗಿಯೂ ಇರುವಂತೆ ಮನುಷ್ಯನ ತಲೆ ಗುಂಡಾಗಿಯೂ, ಕಾಲು ಚೌಕನಾಗಿಯೂ ಇದೆ ಎಂದು ಹೇಳಿಕೆ ಇದೆ. ಸ್ವರ್ಗ ಹೇಗೆ ಸೂರ್ಯ, ಚಂದ್ರ, ನಕ್ಷತ್ರ, ಮೋಡ, ಗಾಳಿ, ಗುಡುಗು, ಮಿಂಚುಗಳನ್ನು ಹೊಂದಿದೆಯೋ ಹಾಗೇ ಮನುಷ್ಯನ ಕಣ್ಣು, ಮೂಗು ಬಾಯಿ, ಹಲ್ಲು, ಸಂತೋಷ, ಕೋಪ ಮತ್ತು ಶಬ್ದಗಳನ್ನು ಹೊಂದಿದ್ದಾನೆಂದು ನಂಬಿದ್ದರು. ಭೂಮಿಯಲ್ಲಿರುವ ೯ ಪ್ರಾಂತ್ಯಗಳಿಗೆ ಸರಿಸಮನಾಗಿ ಶರೀರದಲ್ಲಿ ೯ ಕಂಡಿಗಳಿವೆಯೆಂದೂ, ಭೂಮಿಯಲ್ಲಿ ೪ ಸಮುದ್ರಗಳಿರುವಂತೆ ಶರೀರದಲ್ಲಿ ಮಿದುಳು, ರಕ್ತ, ಗಾಳಿ, ನೀರು ಎಂಬ ೪ ದ್ರವಾಶಯುಗಳಿವೆಯೆಂದು ನಂಬಿದ್ದಾರೆ. ೧೨ ನದಿಗಳು ಭೂಮಿಯಲ್ಲಿರುವಂತೆ ಶರೀರದಲ್ಲಿ ೧೨ ನಾಡಿಗಳಿವೆಯೆಂದೂ ಮತ್ತು ಒಂದು ಸುತ್ತುವರಿತದಲ್ಲಿ ೩೬೦ ಡಿಗ್ರಿಗಳಿರುವಂತೆ ಶರೀರದಲ್ಲಿ ೩೬೦ ಮೂಳೆಗಳಿವೆಯೆಂದು ನಂಬಿದ್ದಾರೆ. ಇದೇ ಅವರ ತತ್ತ್ವ.

ಷೇನ್ ನುಂಗ್

ಷೇನ್ ನುಂಗ್ ಕ್ರಿ.ಪೂ. ೨೮೩೮ ರಿಂದ ೨೬೯೮ರ ತನಕ ಜೀವಿಸಿದ್ದು ಚೀನೀಯರ ವೈದ್ಯಶಾಸ್ತ್ರದ ಮಹಾವೀರನೆಂದೆನಿಸಿಕೊಂಡಿದ್ದನು. ಆತನ ತಲೆ, ಎತ್ತಿನ

ತಲೆ ಆಕಾರ ಹೊಂದಿತ್ತು. ಅವನು ಸಸ್ಯಗಳಲ್ಲಿರುವ ವೈದ್ಯಗುಣಗಳನ್ನು ಕಂಡುಹಿಡಿದು, ವೈದ್ಯಶಾಸ್ತ್ರಕ್ಕೆ ತಳಹದಿ ಹಾಕಿದ್ದಾನೆ. ಅವನು ಬರೆದ ಮೂಲಿಕೆ ಶಾಸ್ತ್ರದಲ್ಲಿ ೩೬೫ ಔಷಧಗಳಿವೆ. ಅವುಗಳಲ್ಲಿ ೩೬೦ ಸಸ್ಯವರ್ಗಕ್ಕೆ ಸೇರಿದ್ದವು. ಕ್ರಿ.ಪೂ. ೨೫೫೫ರಲ್ಲಿ ಜೀವಿಸಿದ್ದ ಪೆನ್‌ಚಿಯೊ ಮತ್ತೊಬ್ಬ ಅತಿಮುಖ್ಯ ವೈದ್ಯ. ಇವನಿಗೆ ಒಂದು ಮೋಹಿನಿ ಹಸುರು ಮದ್ದು ಕೊಟ್ಟು ಒಂದು ತಿಂಗಳು ತೆಗೆದುಕೊಳ್ಳಬೇಕೆಂದು ಹೇಳಿದ ಪ್ರಕಾರ ಇವನು ಸೇವನೆ ಮಾಡಿದ ಮೇಲೆ ಶರೀರದಲ್ಲಿ ಬರಬಹುದಾದ ರೋಗಗಳೆಲ್ಲಾ ಇವನಿಗೆ ಪರಿಚಯವಾಗಿ ರೋಗ ನಿರ್ಧಾರ ಕೊಡಲೂ ತಿಳಿವಳಿಕೆ ಬಂತೆಂದು ಇತಿಹಾಸದ ಕತೆ ಇದೆ. ಇವನ ಭವಿಷ್ಯ ನುಡಿಗಳೂ ಮತ್ತು ಚಕಿತಗೊಳಿಸುವ ರೋಗ ಪರಿಹಾರಗಳೂ ದೇಶಾದ್ಯಂತ ಹರಡಿ ಪ್ರಸಿದ್ಧಿಯಾದೆನು. ಇವನು ಹೃದಯವನ್ನು ಒಬ್ಬರಿಂದೊಬ್ಬರಿಗೆ ಬದಲಾಯಿಸಿದನೆಂದು ಹೇಳಿದೆ. ಇವನು ರೋಗ ವಾಸಿಮಾಡುತ್ತ ದೇಶದಿಂದ ದೇಶಕ್ಕೆ ಪ್ರಯಾಣ ಮಾಡುತ್ತಿರುವಾಗ ಇವನ ವೈರಿಗಳು ಅಸೂಯೆ ಪಟ್ಟುಕೊಲ್ಲುತ್ತಾರೆ. ಇವನು ಚೌ ವಂಶದ ಪ್ರಸಿದ್ಧ ಪುರುಷ.

ವೈದ್ಯಶಾಸ್ತ್ರ

ಚೀನೀಯರ ಪುರಾತನ ವೈದ್ಯಶಾಸ್ತ್ರದ ಗ್ರಂಥವಾದ ನೀ ಚಿಂಗ್ ೩೦೦೦ ವರ್ಷದ ಹಿಂದೆ ಬರೆದಿದ್ದರೂ ನಾಡು ವೈದ್ಯರೂ ಈಗಲೂ ಅದನ್ನು ಅನುಸರಿಸುತ್ತಿದ್ದಾರೆ. ಇದನ್ನು ಕ್ರಿ.ಪೂ. ೨೬೯೮-೨೫೯೮ರಲ್ಲಿ ಹಳದಿ ಚಕ್ರವರ್ತಿ ಹಾಂಗ್ ಟಿ. ಬರೆದನು. ಈ ಗ್ರಂಥದಲ್ಲಿ ಎರಡು ಭಾಗಗಳಿವೆ. ಒಂದರಲ್ಲಿ ಚಕ್ರವರ್ತಿ ಹಾಂಗ್ ಟಿ, ಅವನ ಮಂತ್ರಿ ಚಿ ಪಾಯ್ ಜತೆಯಲ್ಲಿ ಸಂಭಾಷಣೆ ಮಾಡಿದ್ದನ್ನು ಬರೆದಿದೆ. ಇನ್ನೊಂದರಲ್ಲಿ ಸೂಜಿಹಾಕುವ ವಿಶೇಷ ವಿಧಾನಗಳನ್ನು ತಿಳಿಸಿತ್ತು. “ನೀ ಚಿಂಗ್” ಗ್ರಂಥದಲ್ಲಿ ಅಂಗವಿಚ್ಛೇದನ ಮಾಡಿ ಅಂಗರಚನೆಯನ್ನು ತಿಳಿಸಿದ್ದರೂ, ಕನ್ಫೂಷಿಯಸ್ ಮತ್ತು ಇತರ ವಿಜ್ಞಾನಿಗಳ ಕಾಲದಲ್ಲಿ ಅಂಗವಿಚ್ಛೇದನವನ್ನು ಮತ ಪದ್ಧತಿ ಮೇರೆ ನಿಷೇಧ ಮಾಡಲಾಗಿತ್ತು. ಈ ನಿಷೇಧ ಈಗ್ಗೆ ಸ್ವಲ್ಪ ದಿವಸಗಳವರೆಗೂ ಜಾರಿಯಲ್ಲಿತ್ತು. ೧೮೮೧ ರಲ್ಲಿ ಪ್ರಾರಂಭವಾದ ರಾಜಪ್ರತಿನಿಧಿ ವೈದ್ಯಶಾಲೆಯಲ್ಲೂ ಅಂಗವಿಚ್ಛೇದನ ನಡೆಸದೆ, ಅಂಗರಚನೆಶಾಸ್ತ್ರವನ್ನು ಚಿತ್ರಪಠಗಳ ಮತ್ತು ಪ್ರತಿಮೆಗಳ ಸಹಾಯದಿಂದ ಪಾಠ ಹೇಳುತ್ತಿದ್ದರು. ೧೯೧೩ನೇ ನವೆಂಬರ್ ತಿಂಗಳಲ್ಲಿ ಮೊದಲನೇ ಬಾರಿಗೆ ಅಂಗವಿಚ್ಛೇದನೆ ಪರೀಕ್ಷೆ ಮಾಡಲು ಚೀನ ಸರ್ಕಾರ ಅಪ್ಪಣೆ ಕೊಟ್ಟಿತು. ಶವಪರೀಕ್ಷೆ ಮಾಡಲು ಆಗ ಅಪ್ಪಣೆ ದೊರೆಕಿತು. ಆದ್ದರಿಂದ “ನೀ ಚಿಂಗ್” ಗ್ರಂಥ ಕೇವಲ ಕಲ್ಪನೆಯಾಗಿತ್ತೇ ಹೊರತು ಪ್ರಯೋಗಗಳಿಂದ ಸ್ಥಾಪಿತವಾಗಿರಲಿಲ್ಲ. ಆದರೂ ಅದರಲ್ಲಿ ನಾಲಿಗೆ, ಅನ್ನನಾಳ, ಅನ್ನಕೋಶ, ಕರುಳು, ಗುದನಾಳಗಳ ಆಕೃತಿಗಳನ್ನು ವಿವರಿಸಲಾಗಿತ್ತು. ಸಣ್ಣ ಕರುಳು ಮತ್ತು ದೊಡ್ಡ ಕರುಳುಗಳಲ್ಲಿ ೧೬ ಸುರುಳಿಗಳಿದ್ದವೆಂದೂ, ಗಂಡಸಿನಲ್ಲಿ ೩೬೫ ಮೂಳೆಗಳೂ, ಹೆಂಗಸಿನಲ್ಲಿ ೩೬೦ ಮೂಳೆಗಳೂ ಹಾಗೂ

೩೬೫ ಕೀಲುಗಳೂ ಇದ್ದವೆಂದೂ ಬರೆದಿದೆ. ವರ್ಷದ ೧೨ ತಿಂಗಳುಗಳಿಗೆ ಅನುಗುಣವಾಗಿ ಶರೀರದಲ್ಲಿ ೧೨ ದೊಡ್ಡ ರಕ್ತನಾಳಗಳೂ, ೪ ಋತುಗಳಿಗೆ ಸಮನಾಗಿ ೪ ಧಮನಿಗಳೂ ಇವೆಯೆಂದು ತಿಳಿಸಿದೆ.

ಅಂಗರಚನೆಶಾಸ್ತ್ರದಂತೆ ಜೀವಿಶಾಸ್ತ್ರ ಕೂಡ ಕಲ್ಪನೆಯೇ ಆಗಿತ್ತು. ಹೃದಯವನ್ನು ದೊರೆಗೆ ಹೋಲಿಸಿ, ಶ್ವಾಸಕೋಶವನ್ನು ಮಂತ್ರಿಗೆ ಹೋಲಿಸಲ್ಪಟ್ಟಿತ್ತು. ಈಲಿಯನ್ನು ಸೈನ್ಯಾಧಿಕಾರಿಗೂ, ಮೂತ್ರಪಿಂಡವನ್ನು ಶಕ್ತಿ ಮತ್ತು ಉತ್ಸಾಹಗಳಿಗೂ ಹೋಲಿಸಲಾಗಿದೆ. ರಕ್ತ ಚಲನೆ ವಿಭಾಗ ಅನೇಕ ಪ್ರೇಕ್ಷಕರ ಮನಸ್ಸನ್ನು ಸೆಳೆದಿತ್ತು. ರಕ್ತ ಚಲನೆಗೆ ಹೃದಯ ಮುಖ್ಯ ಅಂಗವಾಗಿತ್ತೆಂದೂ ರಕ್ತ ನಿಲ್ಲದೆ ಚಕ್ರಕಾರದಲ್ಲಿ ಹರಿಯುತ್ತದೆಂದೂ ರಚಿಸಿತ್ತು. ಇದರಿಂದ ವಿಲಿಯಂ ಹಾರ್ವೆಯ ಪ್ರಕಟಣೆಯನ್ನು ಪುರಾತನ ಚೀನೀಯರು ಮೊದಲೇ ಆಲೋಚಿಸಿದ್ದರೆಂದು ನಂಬಬೇಕಾಗಿದೆ. ಆದರೆ "ನೀ ಚಿಂಗ್"ನಲ್ಲಿ ಧಮನಿ ಮತ್ತು ಸಿರಗಳನ್ನು ವ್ಯತ್ಯಾಸ ಮಾಡಿರಲಿಲ್ಲ. ದೇಹದ ಅಂಗಗಳ ಕೆಲಸಗಳನ್ನು ವಿವರಿಸುತಾ್ತ, ಈಲಿ ಕೋಪದ, ಹೃದಯ ಸಂತೋಷದ, ತೊರಳೆ ಬುದ್ಧಿಶಕ್ತಿಯ, ಶ್ವಾಸಕೋಶ ದುಃಖದ, ಮೂತ್ರಪಿಂಡ ಅಂಜಿಕೆಯ ಪೀಠಗಳೆಂದು ತಿಳಿಸಿತ್ತು. ಆದ್ದರಿಂದ ಚೀನೀಯರ ಅಂಗರಚನೆ ಶಾಸ್ತ್ರ ಮತ್ತು ಜೀವಶಾಸ್ತ್ರ ಪರಿಶೀಲನೆಯಿಂದಾಗಲೀ ಅಥವಾ ಪ್ರಯೋಗ ಪರೀಕ್ಷೆಗಳಿಂದಾಗಲೀ ಜನಿಸದೆ ಕೇವಲ ವಿಶ್ವವಿಕಾಸದಿಂದ ಸಂಗ್ರಹವಾಗಿತ್ತು.

ರೋಗಗಳ ಬಗೆ, ಕಾರಣ

ಹೊರ ಪ್ರಭಾವಗಳಿಂದ ಬರತಕ್ಕ ರೋಗಗಳು, ಒಳಗಿನ ಉದ್ರೇಕಗಳಿಂದ ಉಂಟಾಗುವ ರೋಗಗಳು ಎಂದು ಎರಡು ಪಂಗಡಗಳಾಗಿ ರೋಗಗಳನ್ನು ವಿಂಗಡಿಸಲಾಗಿತ್ತು. ರೋಗ ಬರಲು ಗಾಳಿ, ಚಳಿ, ಮಳೆ, ಒಣ ಹವೆ ಹೊರಗಿನ ಕಾರಣಗಳಾಗಿಯೂ, ಸಂತೋಷ, ದುಃಖ, ಕೋಪ, ಅಂಜಿಕೆಗಳು ಒಳಗಿನ ಕಾರಣಗಳಾಗಿಯೂ ವಿವರಿಸಲಾಗಿತ್ತು. ಚಿಕಿತ್ಸೆಯ ವಿಷಯ ವಿವರಿಸುತ್ತ, "ನೀ ಚಿಂಗ್"ನಲ್ಲಿ ಸೂಜಿಹಾಕಣೆಯನ್ನು ವಿವರವಾಗಿ ಬರೆಯಲಾಗಿದೆ. ೭೬೨ರಲ್ಲಿ ವಾಂಗ್ ಪಿಂಗ್ ಎಂಬುವನೇ "ನೀ ಚಿಂಗ್"ನ ಆಗಿನ ಸ್ಥಿತಿಗೆ ಕಾರಣನಾಗಿದ್ದ. ಆದರೆ ಆಮೇಲಾಮೇಲೆ ಅನೇಕ ವೈದ್ಯಶಾಸ್ತ್ರಜ್ಞರು ಆ ಗ್ರಂಥಕ್ಕೆ ಟಿಪ್ಪಣಿಗಳನ್ನು ಬರೆದರು. ಚಿಂಗ್ ವಂಶ ಮುಗಿಯುವುದರೊಳಗೆ ಮತ್ತೆ ೪೯ ಟೀಕೆಗಳು ಸೇರಿದವು. "ನೀ ಚಿಂಗ್" ಪ್ರಕಾರ ನಾಡಿಯನ್ನು ೪ ರೀತಿಯಲ್ಲಿ ಪರೀಕ್ಷೆ ಮಾಡುತ್ತಿದ್ದರು. ಪರಿಶೀಲನೆ, ಕಿವಿಗೊಟ್ಟು ಕೇಳುವುದು, ವಿಚಾರಣೆ ಮತ್ತು ಮುಟ್ಟಿ ನೋಡುವುದು, ಮೊದಲು ಮೊದಲು ಈ ೪ ಬಗೆಗಳಲ್ಲಿ ನಾಡಿ ಪರೀಕ್ಷೆ ನಡೆಸುತ್ತಿದ್ದರೂ, ಆಮೇಲಾಮೇಲೆ ಮೊದಲ ಮೂರು ಬಗೆಯ ಪರೀಕ್ಷೆಗಳು ಕೊನೆಗೊಂಡು, ನಾಡಿ ಮುಟ್ಟುವ ಪರೀಕ್ಷೆ



ಚೀನಹೆಂಗಸಿನ ಪ್ರತಿಮೆ. ವೈದ್ಯನಿಗೆ ಹೆಂಗಸು ದೇಹವನ್ನು ಬಿಚ್ಚಿ ತೋರಿಸದೆ, ನೋವಿರುವ ಜಾಗವನ್ನು ಪ್ರತಿಮೆ ಮೇಲೆ ಗುರ್ತಿಸಿ ತಿಳಿಸುವುದು ವಾಡಿಕೆಯಾಗಿತ್ತು.

ಮಾಡುವ ಪದ್ಧತಿ ಮಾತ್ರ ಸ್ಥಿರವಾಯಿತು. ಈ ರೀತಿಯ ನಾಡಿ ಪರೀಕ್ಷೆಯನ್ನು ಮೊಟ್ಟಮೊದಲು ಕ್ರಿ.ಪೂ. ೨೫೫ರಲ್ಲಿ ಪಿಯನ್ ಚಿಯೊ ಕಂಡುಹಿಡಿದನು. ಆದರೆ ನಾಡಿಪರೀಕ್ಷೆಯ ವಿಷಯವಾಗಿ ಕ್ರಿ. ಶ. ೨೮೦ರಲ್ಲಿ ವಾಂಗ್ ಷುಹೊ ವಿಶದವಾಗಿ, ಅಧಿಕಾರಯುಕ್ತವಾಗಿ ೧೦ ಪುಸ್ತಕಗಳುಳ್ಳ ಮಹಾಗ್ರಂಥ ಒಂದನ್ನು ಬರೆದನು. ಎಡಗೈಯಿಂದ ಬಲನಾಡಿಯನ್ನು ಬಲಗೈಯಿಂದ ಎಡನಾಡಿಯನ್ನು ಹಿಡಿದು ಸೂರ್ಯ ಉದಯವಾಗುವ ವೇಳೆಯಲ್ಲಿ ಪರೀಕ್ಷಿಸಬೇಕೆಂದು ತಿಳಿಸಿದೆ. ಮೊದಲ ಮೂರು ಬೆರಳುಗಳನ್ನು ನಾಡಿಯ ಮೇಲಿಟ್ಟು, ಪ್ರತಿ ಬೆರಳಿನಿಂದಲೂ ನಾಡಿಹೊಡೆತವನ್ನು ಸ್ಪರ್ಶ ಮಾಡಬೇಕೆಂದು ತಿಳಿಸಿತ್ತು. ಪ್ರತಿ ನಾಡಿ ಹೊಡೆತದಲ್ಲಿ ಒಳನಾಡಿ ಮತ್ತು ಹೊರನಾಡಿಗಳೆಂದು ಎರಡು ವಿಧಗಳಿರುವುದರಿಂದ ಒಟ್ಟು ೧೨ ನಾಡಿಗಳನ್ನು ಪರೀಕ್ಷಿಸಬೇಕೆಂದು, ಈ ೧೨ ನಾಡಿಗಳು ದೇಹದೊಳಗಿರುವ ೧೨ ಅಂಗಗಳ ಸ್ಥಿತಿಯನ್ನು ತಿಳಿಸುತ್ತವೆಯೆಂದು ಹೇಳಿತ್ತು. ಹೀಗೆ ಕರುಳು, ಶ್ವಾಸಕೋಶ, ಹೃದಯ, ತೊರಳೆ, ಈಲಿ, ಅನ್ನಕೋಶ, ಪಿತ್ತಕೋಶ, ಮೂತ್ರಪಿಂಡ, ಮೂತ್ರನಾಳಗಳ ಸ್ಥಿತಿಯನ್ನು ತಿಳಿಯುತ್ತಿದ್ದರು. ಈ ಹಲವು ಬಗೆಯ ನಾಡಿಗಳಲ್ಲದೆ ಸಾವು ಸೂಚಿಸುವ ಮತ್ತು ರೋಗ ಕೊನೆಗಾಣಿಸುವ ಪ್ರತ್ಯೇಕ ನಾಡಿಗಳನ್ನೂ ತಿಳಿದಿದ್ದರು. ಹೀಗೆ ಒಟ್ಟು ೫೨ ಬಗೆಗಳ ನಾಡಿಗಳು ಗೊತ್ತಿದ್ದವು.

ಚಿಕಿತ್ಸೆ ವಿಧಾನಗಳು

ರೋಗ ಚಿಕಿತ್ಸೆಯ ವಿಧಾನಗಳಲ್ಲಿ ಸೂಜಿಚುಚ್ಚಿಗೆ, ಪ್ರತ್ಯುದ್ರೇಕಕಾರಿಯಿಂದ ಸೂಡುಹಾಕುವುದು ಮತ್ತು ನೀವುವುದೂ ರೂಢಿಯಲ್ಲಿದ್ದವು. ಸೂಜಿ ಹಾಕುವುದನ್ನು ಹಾಂಗ್ ಟಿ ಕ್ರಿ. ಪೂ. ೨೬೮೫–೨೫೯೮ರಲ್ಲಿ ಕಂಡುಹಿಡಿದಿದ್ದನು. ತಣ್ಣಗಿರುವ, ಬಿಸಿಯಾಗಿರುವ ಸೂಜಿಗಳನ್ನು ಶರೀರದ ಹಲವೆಡೆಗಳಲ್ಲಿ ಚುಚ್ಚುವ ಪದ್ಧತಿ ಇತ್ತು. ಸೂಜಿಗಳು ಚಿನ್ನ, ಬೆಳ್ಳಿ, ಹಿತ್ತಾಳೆ, ತಾಮ್ರ, ಕಬ್ಬಿಣ, ಉಕ್ಕುಗಳಿಂದ ಮಾಡಲ್ಪಟ್ಟು, ಉದ್ದವಾಗಿ ಅಥವಾ ತುಂಡಾಗಿ ಇರುತ್ತಿದ್ದವು. ಈ ಸೂಜಿಗಳನ್ನು ಯಿನ್ ಮತ್ತು ಯಾಂಗ್ ಎಂಬ ಅಂಗಭಾಗಗಳಿರುವ ಕಡೆಗಳಲ್ಲಿ ಹಾಕಲಾಗುತ್ತಿತ್ತು. ರೋಗವಿರುವಾಗ ಈ ಎರಡು ಧಾತುಗಳು ಕಲಕಿ ವ್ಯತ್ಯಾಸವಾಗಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿರುವ ಧಾತುವನ್ನು ಸೂಜಿಯ


ಸೂಜಿಹಾಕಲು ಅರ್ಹವಾದ ಜಾಗಗಳು

ಮೂಲಕ ಹೊರಗೆ ತೆಗೆದು ಆರೋಗ್ಯವನ್ನು ಪೂರ್ವಸ್ಥಿತಿಗೆ ತರಲಾಗುತ್ತಿತ್ತು. ಶರೀರದಲ್ಲಿ ಸೂಜಿಹಾಕಣೆಗೆ ೩೬೫ ಸ್ಥಳಗಳಿವೆಯೆಂದು ಪ್ರತಿಯೊಂದು ರೋಗಕ್ಕೂ ಪ್ರತ್ಯೇಕ ಸ್ಥಳವಿದೆಯೆಂದೂ, ಇವನ್ನು ವೈದ್ಯರು ರೂಢಿ ಮಾಡಿದ್ದರೆಂದು ಗೊತ್ತಾಗಿದೆ. ಈಗಲೂ ಈ ಸೂಜಿಹಾಕಣೆ ಕಾಲರ, ಕೀಲುಬಾವು, ಉಳುಕು, ಚಳುಕುಗಳಿಗೆ ಹಾಕಲಾಗುತ್ತಿದೆ.

ಪ್ರತ್ಯುದ್ರೇಕಕಾರಿ ಪುರಾತನ ಕಾಲದ ಚಿಕಿತ್ಸೆ ಕ್ರಮವಾಗಿತ್ತು. ಮುಗ್ವರ್ಟ್ ಗಿಡದ ಎಲೆಪುಡಿಯಿಂದ ಮಾಡಿದ ಶಂಕು ಆಕಾರವುಳ್ಳ ಗುಳಿಗೆಯನ್ನು ಚರ್ಮದ ಮೇಲಿಟ್ಟು ಸೂಡು ಹಾಕುತ್ತಿದ್ದರು. ಮೇಲಿನ ಹೊಟ್ಟೆಯನ್ನು ಸೂಡು ಹಾಕುವುದಕ್ಕೆ ಬಹಳ ವಿಶೇಷವಾಗಿ ಉಪಯೋಗಿಸುತ್ತಿದ್ದರು. ಇದರಿಂದ ಹೊಪ್ಪಳೆ ಎದ್ದು ನೋವು ಉಂಟಾಗುತ್ತಿತ್ತು.

ನೀವುವ ಪದ್ಧತಿ ಇವುಗಳಿಗೆಲ್ಲಾ ಹಳೆಯ ಚಿಕಿತ್ಸೆ ಕ್ರಮವಾಗಿತ್ತು. ಟಾಂಗ್ ವಂಶದ ಕಾಲದಲ್ಲಿ ಪ್ರಸಿದ್ಧಿ ಪಡೆದಿತ್ತು. ಈಗಲೂ ಈ ಕ್ರಮವನ್ನು ಅನೇಕ ಕಡೆಗಳಲ್ಲಿ ಉಪಯೋಗಿಸುತ್ತಿದ್ದಾರೆ.

ಲಿ.ಷಿ. ಚೆನ್ ಔಷಧ ಗ್ರಂಥ

ಇವಲ್ಲದೆ ಔಷಧಗಳ ಉಪಯೋಗವೂ ಇತ್ತು. ಮಿಂಗ್ ವಂಶದ ಕಾಲದಲ್ಲಿ ಲಿ.ಷಿ. ಚೆನ್ ಒಂದು ದೊಡ್ಡ ಔಷಧ ಗ್ರಂಥವನ್ನೇ ಬರೆದನು. ಅದನ್ನು ಬರೆಯಲು ೨೭ ವರ್ಷಗಳು ಹಿಡಿದಿದ್ದವು ಕ್ರಿ. ಶ. ೧೫೫೨ರಲ್ಲಿ ಪ್ರಾರಂಭವಾಗಿ ೧೫೭೮ರಲ್ಲಿ ಮುಗಿಯಿತು. ಇದರ ೫೨ ಪುಸ್ತಕಗಳಲ್ಲಿ ೧೮೭೭ ಬೇರೆಬೇರೆ ಔಷಧಗಳಿದ್ದವು. ಇವುಗಳಲ್ಲಿ ಕೆಲವು ಸೊಗದೆಬೇರಿನ ಜಾತಿಗೆ ಸೇರಿದ ಚೈನಬೇರು, ಕರ್ಪೂರ, ಎಫಿಡ್ರಿನ್ ಮೊದಲಾದ ಔಷಧಗಳು ಪಶ್ಚಿಮ ಪ್ರದೇಶಗಳಲ್ಲೂ ಪ್ರಖ್ಯಾತಿ ಹೊಂದಿವೆ. ಪ್ರಾಣಿಗಳ ಗುಂಪಿಗೆ ಸೇರಿದ ಕುರಿಯ ಥೈರಾಯಿಡ್ ಗ್ರಂಥಿಯನ್ನು ಗಳಗಂಡ ರೋಗದಲ್ಲೂ, ಕ್ರೆಟಿನಿಸಮ್ ರೋಗದಲ್ಲೂ ಉಪಯೋಗಿಸಲಾಗಿತ್ತು. ರಕ್ತವನ್ನು ಈಲಿ ಶೇಖರಿಸುವುದರಿಂದ ರಕ್ತರೋಗಗಳಲ್ಲಿ ಈಲಿ ಉಪಯೋಗವಾಗುತ್ತದೆಂದು ಲಿ.ಷಿ. ಚೆನ್ ಹೇಳಿರುವನು.

ಟ್ರಿಯೊ ಸಾಂಗ್ ಕುಂಗ್

ಟ್ರಿಯೊ ಸಾಂಗ್ ಕುಂಗ್, ಚಾಂಗ್ ಚುಂಗ್ ಚಿಂಗ್ ಮತ್ತು ಹ ಟೊ ಈ ಮೂವರು ವೈದ್ಯರು ವೈದ್ಯಶಾಸ್ತ್ರದಲ್ಲಿ ಬಹಳ ಪ್ರಖ್ಯಾತಿ ಹೊಂದಿದ್ದರು. ಟ್ರಿಯೊ ಸಾಂಗ್ ಕುಂಗ್ ಕ್ರಿ. ಪೂ. ೧೮೦ ರಲ್ಲಿ ವೈದ್ಯಶಾಸ್ತ್ರವನ್ನು ಕಲಿತು ವೈದ್ಯಶಾಸ್ತ್ರದ ಮಹಾಪಿತನಾದನು. ಇವನು ೨೫ ರೋಗಿಗಳ ವಿಚಾರ ಬರೆದಿದ್ದನು. ಅವು ಹಿಪ್ಪೊಕ್ರೇಟಿಸ್‌ನ ಬರಹಗಳಷ್ಟು ಉತ್ತಮವಾಗಿಲ್ಲದಿದ್ದರೂ ಎಲ್ಲರನ್ನೂ ಮೆಚ್ಚಿಸಿದ್ದವು. ಅನ್ನಕೋಶದ ಏಡಿಗಂತಿ, ಮೂತ್ರಕೋಶುರಿತ, ಕಟುಮೂತ್ರ, ಕೀಲುಬಾವು, ಲಕ್ವ, ರಕ್ತಕಫ ಮತ್ತು ಮೂತ್ರಪಿಂಡುರಿತಗಳ ವಿಚಾರವಾಗಿ ವಿವರಿಸಿದ್ದ. ಅವನು ವಿಶೇಷವಾಗಿ ಔಷಧಗಳನ್ನೇ ಉಪಯೋಗಿಸುತ್ತಿದ್ದನು. ನೀವುವುದನ್ನೂ ಸೂಜಿಹಾಕುವುದನ್ನೂ ಅಷ್ಟಾಗಿ ಉಪಯೋಗಿಸುತ್ತಿರಲಿಲ್ಲ. ಚಾಂಗ್ ಚುಂಗ್–ಚಿಂಗ್ ಎಂಬುವನನ್ನು ಚೀನಾದ ಹಿಪ್ಪೊಕ್ರೇಟಿಸ್ ಎಂದು ಕರೆಯಲಾಗಿತ್ತು. ಅವನು ಮಹಾಪಂಡಿತನಾಗಿದ್ದ. ೧೬೮ ರಲ್ಲಿ ಪದವೀಧರನಾಗಿ, ೧೯೬ರಲ್ಲಿ ಚಾಂಗ್ಸ್ನಾ ಪಟ್ಟಣದ ಪೌರಸಭೆಯ ಮುಖ್ಯಸ್ಥನಾದನು. ಇವನು ವಿಷಮಶೀತ ಮತ್ತು ಇತರ ಜ್ವರಗಳ ವಿಷಯವಾಗಿ ೧೬ ಪುಸ್ತಕಗಳನ್ನು ಬರೆದು ಪ್ರಖ್ಯಾತಿ ಪಡೆದನು. ಇವನಿಗೆ ಇತರರ ಹಾಗೆ ಯಂತ್ರಮಂತ್ರಗಳಲ್ಲಿ ನಂಬಿಕೆ ಇರಲಿಲ್ಲ. ರೋಗಗಳ ಪರಿಚಯ ಮತ್ತು ಅವುಗಳ ಚಿಕಿತ್ಸೆ ಕ್ರಮ ಅವನಲ್ಲಿ ಮೇಲಾಗಿದ್ದವು. ಇವನ ಕಾಲದಲ್ಲೇ ಹಾಟೊ ಶಸ್ತ್ರಕ್ರಿಯೆಯಲ್ಲಿ ಪ್ರವೀಣನಾಗಿದ್ದನು. ಇವನು ೧೯೦ ರಲ್ಲಿ ಹುಟ್ಟಿ ಸೊಸೊ. ದೊರೆಗೆ ವೈದ್ಯನಾಗಿದ್ದು, ಅಪ್ಪಣೆ ಇಲ್ಲದೆ ಅರಮನೆಗೆ ಗೈರ್‌ಹಾಜರಿಯಾದ್ದರಿಂದ ಗಲ್ಲಿಗೇರಿಸಲ್ಪಟ್ಟನು. ಇವನು ಕೇವಲ ಕೆಲವು ಔಷಧಗಳನ್ನು ಮಾತ್ರ ಉಪಯೋಗಿಸುತ್ತಿದ್ದನು. ಸ್ಪರ್ಶಜ್ಞಾನ ವಿಲ್ಲದಂತೆ ಮಾಡಿ ಸೂಜಿಹಾಕುವುದರಲ್ಲಿ ನಿಸ್ಸೀಮ

ನಾಗಿದ್ದ. ಒಂದು ಸಲ ಸ್ಪರ್ಶಜ್ಞಾನ ತಪ್ಪಿಸಿ ಒಬ್ಬ ರೋಗಿಯಿಂದ ಕೊಳೆತಿದ್ದ ತೊರಳೆಯನ್ನು ಹೊರಗೆ ತೆಗೆದುಹಾಕಿದನೆಂದು ಹೇಳಿದೆ. ಸ್ಪರ್ಶಜ್ಞಾನ ತಪ್ಪಿಸಲು ಕನ್ನಾಬಿಸ್, ಉಮ್ಮತ್ತಿ, ವತ್ಸನಾಭಿಗಳನ್ನು ಉಪಯೋಗಿಸುತ್ತಿದ್ದನು. ಇವನ ಮರಣದಿಂದ ಚೀನಾ ದೇಶದ ಶಸ್ತ್ರವೈದ್ಯ ಕೊನೆಗಂಡಿತು. ಇವನಾದಮೇಲೆ ಶವ ಪರೀಕ್ಷೆ, ಅಂಗಚ್ಛೇದನ ಮುಂತಾದ ಕ್ರಿಯೆಗಳನ್ನು ನಿಷೇಧ ಮಾಡಲಾಯಿತು.

ವೈದ್ಯಶಾಸ್ತ್ರದ ಬೆಳವಣಿಗೆ

ಪ್ರಾಚೀನ ಚೀನೀಯರ ನ್ಯಾಯ ಸೂತ್ರಗಳ ಪ್ರಕಾರ ಹೆರಿಗೆ ಕಾಲದಲ್ಲಿ ಗಂಡಸರಿರುವುದನ್ನು ನಿಷೇಧಿಸಿದ್ದುದರಿಂದ ದಾದಿಯರೇ ಹೆರಿಗೆ ಮಾಡಿಸುತ್ತಿದ್ದರು. ಕಣ್ಣಿನ ರೋಗ, ಹುಳುಗಳ ರೋಗಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದರು. ಜಂತು ಹುಳಕ್ಕೆ, ಲಾಡಿಹುಳಕ್ಕೆ ಔಷಧಗಳು ಗೊತ್ತಿದ್ದವು. ಕುಷ್ಠರೋಗ ಕ್ರಿ.ಪೂ. ೬೦೦ ರಲ್ಲೇ ಗೊತ್ತಿತ್ತು. ಬೆರಿಬೆರಿ ೧೬೪೨ ರಲ್ಲಿ ಬಾಂಟಿಯಸ್ ಡಚ್ ವೈದ್ಯನಿಂದ ಕಂಡು ಹಿಡಿಯಲ್ಪಟ್ಟದ್ದರೂ ಕ್ರಿ.ಪೂ. ೨೬೯೭ರಲ್ಲೇ ಚೀನಿಯರ ವೈದ್ಯಶಾಸ್ತ್ರದಲ್ಲಿ ಒಣ ಬೆರಿ ಬೆರಿ, ಹಸಿ ಬೆರಿಬೆರಿಗಳನ್ನು ವಿವರಿಸಲಾಗಿದ್ದವು. ೨೬೫-೩೧೩ರಲ್ಲಿ ಕೊ. ಹಂಗ್ ಸಿಡುಬು ರೋಗವನ್ನು ಹೂಣರು ಚೈನಾಕ್ಕೆ ತಂದಿದ್ದರಿಂದ, "ಹೂಣ ಮೈಲಿ" ಎಂದು ಕರೆದಿದ್ದನು. ೧೧ನೇ ಶತಮಾನದಲ್ಲಿ ಭಾರತದಿಂದ ದೇವಿಹಾಕುವುದನ್ನು ಚೀನೀ ಯರು ಕಲಿತಿದ್ದರೂ ೧೮೦೫ ರಲ್ಲಿ ಈಸ್ಟ್ ಇಂಡಿಯ ಕಂಪನಿಯ ವೈದ್ಯಶಾಸ್ತ್ರದ ಮುಖ್ಯಸ್ಥ ಡಾ. ಅಲೆಗ್ಜಾಂಡರ್ ಪಿಯರ್‌ಸನ್ ದೇವಿಹಾಕುವುದನ್ನು ಚೀನಾದಲ್ಲಿ ಅಭಿವೃದ್ಧಿಪಡಿಸಿದನು. ಆದರೂ, ದೇವಿಹಾಕುವುದನ್ನು ಜೆನ್ನರ್ ಕಂಡುಹಿಡಿಯುವು ದಕ್ಕೆ ಮೊದಲೇ ಚೀನಾದಲ್ಲಿ ಸಿಡುಬು ರೋಗವನ್ನು ತಡೆಯುವ ಕ್ರಮಗಳನ್ನು ತಿಳಿದಿದ್ದರೆಂದು ಹೇಳಲಾಗಿದೆ. ಉಪದಂಶ ಚೀನಾದಲ್ಲಿ ಪುರಾತನ ಕಾಲದಿಂದಲೂ ಇತ್ತೆಂದು ತಿಳಿದಿದೆ. ಅನೇಕರು ಇದನ್ನು ನಂಬುತ್ತಿಲ್ಲ. ಈ ರೋಗವನ್ನು ಪೋರ್ಚು ಗೀಸರು ೧೬ನೇ ಶತಮಾನದಲ್ಲಿ ಚೈನಾಕ್ಕೆ ತಂದರೆಂದೂ, ಆದರಿಂದ ಮಿಂಗ್ ವಂಶದವರಲ್ಲಿ ಬಹಳ ನಷ್ಟವಾಯಿತೆಂದೂ ಹೇಳಿದೆ.

ವೈದ್ಯಶಾಸ್ತ್ರ ಟಾಂಗ್ ವಂಶದ ಕಾಲದಲ್ಲಿ (೬೧೯–೯೦೮) ಪ್ರಾರಂಭವಾದರೂ ಆಗ ಅದರ ಫಲ ಚಕ್ರವರ್ತಿಗಳ ಮತ್ತು ಅವರ ವಂಶೀಕರುಗಳಿಗೆ ಮಾತ್ರ ಸಲ್ಲು ತ್ತಿತ್ತು. ಅನೇಕ ವೈದ್ಯಶಾಲೆಗಳು ಸುಂಗ್ ವಂಶದ ಕಾಲದಲ್ಲಿ ಪ್ರಾರಂಭವಾದವು. ೧೦೭೬ರಲ್ಲಿ ಸಾಮ್ರಾಜ್ಯ ವೈದ್ಯ ಕಾಲೇಜು ಪ್ರಾರಂಭವಾಯಿತು. ಚೀನೀಯರ ಗ್ರಂಥಗಳೇ ಪಠ್ಯ ಪುಸ್ತಕಗಳಾದವು. ತೇರ್ಗಡೆ ಹೊಂದಿದ ಪದವೀಧರರಿಗೆ ಅಧಿ ಕಾರ ಸ್ಥಾನ ದೊರಕುತ್ತಿತ್ತು. ಅವರು ಪಾಠ ಹೇಳಲೂ ಬರೆಯಲೂ ಅಪ್ಪಣೆ ಪಡೆದಿದ್ದರು. ಮೇಲ್ತರಗತಿಯಲ್ಲಿ ತೇರ್ಗಡೆ ಹೊಂದಿರುವವರಿಗೆ ವೈದ್ಯಶಾಸ್ತ್ರ

ವೃತ್ತಿಯನ್ನು ನಡೆಸಲು ಅಧಿಕಾರ ಕೊಟ್ಟಿದ್ದರು. ತೇರ್ಗಡೆ ಆಗದಿದ್ದವರು ಅವರ ವೃತ್ತಿಯನ್ನೇ ಬದಲಾಯಿಸಬೇಕಾಗಿತ್ತು.

ರೋಗ ನಿವಾರಣ ಶಾಸ್ತ್ರದಲ್ಲಿ ಪುರಾತನ ಚೀನೀಯರು ಈಗಿನವರಿಗಿಂತಲೂ ಉತ್ತಮ ದರ್ಜೆಯಲ್ಲಿದ್ದರೆಂದು ಹೇಳಿದೆ. ಕ್ರಿ. ಪೂ. ೧೧೦೦ರಲ್ಲೇ ಅನೇಕ ರೋಗ ನಿವಾರಣೆ ಕೆಲಸಗಳನ್ನು, ರೋಗ ನಿವಾರಿಸುವ ಆಹಾರ ಪದಾರ್ಥಗಳನ್ನು ಅನುಸರಿಸುತ್ತಿದ್ದರು. ಬಾಯಿ ಮೂಲಕ ರೋಗ ಶರೀರದಲ್ಲಿ ಸೇರುತ್ತದೆಯೆಂದು ಚೆನ್ನಾಗಿ ಅಡಿಗೆ ಮಾಡಿದ ಪದಾರ್ಥಗಳನ್ನೇ ತಿನ್ನಬೇಕೆಂದು ಕನ್ಫೂಷಿಯಸ್ ತಿಳಿಸಿದ್ದನು.

ಚಾ ವಂಶದ ಕಾಲದಲ್ಲಿ (ಕ್ರಿ.ಪೂ. ೧೧೨೧–೨೪೯) ಔಷಧ ವೈದ್ಯ,ಶಸ್ತ್ರವೈದ್ಯ, ಆಹಾರ ವೈದ್ಯ ಮತ್ತು ಪಶು ವೈದ್ಯ ಹೀಗೆ ನಾಲ್ಕು ಬಗೆಯ ವೈದ್ಯರಿದ್ದರು. ಕ್ರಿ. ಪೂ. ೧೦ನೇ ಶತಮಾನದಲ್ಲೇ ಧರ್ಮದ ಆಸ್ಪತ್ರೆಗಳಿದ್ದವೆಂದು ತಿಳಿಸಿದೆ. ಕ್ರಿ.ಪೂ. ೩೦೦ರಲ್ಲಿ ಕುರುಡರಿಗೆ, ಕುಂಟರಿಗೆ, ಬಡವರಿಗೆ ಮತ್ತು ಹುಚ್ಚರಿಗೆ ಬೇರೆ ಬೇರೆ ಧರ್ಮ ಗೃಹಗಳನ್ನು ಏರ್ಪಡಿಸಿದ್ದರು. ಬೌದ್ಧಮತ ಹಬ್ಬಿದಮೇಲೆ ಬೌದ್ಧ ಸನ್ಯಾಸಿಗಳು ಅನೇಕ ಆಸ್ಪತ್ರೆಗಳನ್ನೂ ದೇವಾಲಯಗಳನ್ನೂ ಕಟ್ಟಿ ಜನಸೇವೆ ಮಾಡುತ್ತಿದ್ದರು. ದಂತ ಶಾಸ್ತ್ರದಲ್ಲೂ ಕೂಡ ಪ್ರಾಚೀನ ಚೀನೀಯರು ಏಳಿಗೆಯಲ್ಲಿದ್ದರು. ಸೂಜಿ ಹಾಕಣೆಯನ್ನು ಹಲ್ಲು ನೋವಿಗೂ ಉಪಯೋಗಿಸಿ ಹುಳುಕಲ್ಲನ್ನು ಕೀಳುತ್ತಿದ್ದರು.

೮. ಗ್ರೀಸ್ ದೇಶದ ವೈದ್ಯಶಾಸ್ತ್ರ

ಗ್ರೀಸಿನ ವೈದ್ಯಶಾಸ್ತ್ರ ಮತ್ತು ಸಂಸ್ಕೃತಿ ದೇವಲೋಕದಿಂದೇನೂ ಇಳಿದು ಬಂದಿಲ್ಲ. ಹಿಂದೆ ಅಭಿವೃದ್ಧಿಯಲ್ಲಿದ್ದ ಬ್ಯಾಬಿಲೋನಿಯ ಮೇಲಾಗಿ ಈಜಿಪ್ಟಿನವರ ಸಂಸ್ಕೃತಿಗಳೇ ಅವಕ್ಕೆ ಆಧಾರವಾಗಿದ್ದುವು. ಇದಕ್ಕೆ ಸಮರ್ಥನೆಗಳು ಬೇಕಾದಷ್ಟಿವೆ. ಗ್ರೀಸಿನ ಎಸ್ಕ್ಲಿಪಿಯಸ್ ಮತ್ತು ಈಜಿಪ್ಟಿನ ಇಮ್ಹೊಟೆಪ್ ಒಂದೇ, ಬೇರೆಬೇರೆ ಅಲ್ಲವೆಂದೂ, ಇಮ್ಹೊಟೆಪ್‌ನ ಜೀವನ ಚರಿತ್ರೆಗೂ ಎಸ್ಕ್ಲಿಪಿಯಸ್ ಜೀವನ ಚರಿತ್ರೆಗೂ ಯಾವ ವ್ಯತ್ಯಾಸವೂ ಇಲ್ಲವೆಂದೂ ಅನೇಕ ವಿಜ್ಞಾನಿಗಳು ತಿಳಿಸಿದ್ದಾರೆ. ಗ್ರೀಸಿನ ಮಹಾ ಶ್ರೇಷ್ಠನಾದ ಹಿಪ್ಪೊಕ್ರೇಟಿಸ್‌ನ ಪ್ರಮಾಣಗಳೂ ಕೂಡ ಈಜಿಪ್ಟಿನ ಸಂಸ್ಕೃತಿಗಳಿಂದಲೆ ಶೇಖರವಾಗಿವೆಯೆಂದು ನುಡಿದಿದ್ದಾರೆ.


ಎಸ್ಕುಲೇಪಿಯಸ್ (ಎಸ್ಕ್ಲಿಪಿಯಸ್)

ತೆಸ್ಸಾಲಿಯಲ್ಲಿ ಎಸ್ಕುಲೇಪಿಯಸ್ ವೈದ್ಯಶಾಸ್ತ್ರದಲ್ಲಿ ಬಹಳ ಪ್ರವೀಣನಾಗಿ ಪ್ರಸಿದ್ಧಿಯಾಗಿದ್ದುದರಿಂದ ಲೋಕದ ಜನರೆಲ್ಲರೂ ಅವನ ಹತ್ತಿರ ಹೋಗಲು ಪ್ರಾರಂಭವಾದಾಗ ಅಸೂಯೆ ತಾಳಲಾರದೆ ಪಾತಾಳ ಲೋಕದ ಅಧಿಪತಿಯಾದ ಇಂದ್ರನಲ್ಲಿ ಪ್ಲೂಟೊ ಮೊರೆಯಿಟ್ಟು, ಎಸ್ಕ್ಲಿಪಿಯಸ್‌ನನ್ನು ಸಿಡಿಲಿನಿಂದ ಕೊಲ್ಲಿಸುತ್ತಾನೆ. ಇಂದ್ರ ತಾನು ಮಾಡಿದ್ದು ತಪ್ಪೆಂದು ಪಶ್ಚಾತ್ತಾಪಪಟ್ಟು ಎಸ್ಕ್ಲಿಪಿಯಸ್‌ನನ್ನು ದೇವರ ಅಂತಸ್ತಿಗೆ ಎತ್ತಿ ದೇವರೆಂದು ಭಾವಿಸುತ್ತಾನೆ. ಇದು ಪುರಾಣ ಕಥೆಯಾದರೂ, ಎಸ್ಕ್ಲಿಪಿಯಸ್‌ನ ದರ್ಜೆಯನ್ನು ತೋರಿಸುತ್ತದೆ.


ಎಸ್ಕುಲೇಪಿಯಸ್ ಅನ್ಸಿಯೊದ ಅಮೃತಶಿಲೆ ಪ್ರತಿಮೆ

ಎಸ್ಕ್ಲಿಪಿಯಸ್‌ನ ಉಪಾಸನೆ ಗ್ರೀಸಿನಲ್ಲೆಲ್ಲಾ ಹರಡಿ, ಅವನನ್ನು ಪೂಜಿಸಲು ೨೦೦ ದೇವಾಲಯಗಳನ್ನು ಕಟ್ಟಲಾಯಿತು. ಇವುಗಳಲ್ಲಿ ಮುಖ್ಯವಾದ ದೇವಾಲಯಗಳು ಟ್ರಿಕ್ಕ, ಎಪಿಡಾರಸ್, ಕಾಸ್, ಪೆರ್ಗಮಾನ್, ಕಾರಿಂತ್ ಮತ್ತು ಅಥೆನ್ಸ್‌ಗಳಲ್ಲಿ ಕ್ರಿ. ಪೂ. ೪೨೦ರಲ್ಲಿ ಪ್ರಾರಂಭವಾದವು. ಅವನ ಉಪಾಸನೆ ಕ್ರಿ. ಪೂ. ೨೯೩ರಲ್ಲಿ ರೋಮ್ ಪಟ್ಟಣಕ್ಕೂ ಹರಡಿತು. ಆಗ ಪ್ಲೇಗು ರೋಮಿನಲ್ಲಿ ಹರಡುತ್ತಿದ್ದುದರಿಂದ ರೋಮನರ ಇಷ್ಟದಂತೆ

ಒಂದು ನಿಯೋಗ ಎಪಿಡಾರಸ್‌ನಿಂದ ಟೈಬರ್ ನದಿಯ ಮೂಲಕ ದೋಣಿಯಲ್ಲಿ ಹೊರಟಿತು. ಹತ್ತಿರ ಹೋದಾಗ ದೋಣಿಯಿಂದ ಒಂದು ಪವಿತ್ರವಾದ ಸರ್ಪ ಎದ್ದು ಈಜಿಕೊಂಡು ದಡವನ್ನು ಸೇರುತ್ತದೆ. ಆ ಜಾಗದಲ್ಲಿ ಎಸ್ಕ್ಲಿಪಿಯಸ್‌ನನ್ನು ಪೂಜಿಸಲು ಒಂದು ದೇವಾಲಯವನ್ನು ಕಟ್ಟಲಾಯಿತು. ಸರ್ಪಕ್ಕೂ ರೋಗಕ್ಕೂ ಇರುವ ಬಾಂಧವ್ಯ ಬಹಳ ಹಿಂದಿನದು. ಮೋಸಸ್ ಹಿತ್ತಾಳೆ ಸರ್ಪವನ್ನು ರೋಗ ಗುಣ ಮಾಡಲು ಹೇಗೆ ಉಪಯೋಗಿಸುತ್ತಿದ್ದನೋ, ಅದೇ ರೀತಿಯಲ್ಲಿ ಗ್ರೀಕರೂ ಉಪಯೋಗಿ



ಎಸ್ಕ್ಲಿಪಿಯಸ್ ದೇವಾಲಯ

ಸುತ್ತಿದ್ದರು. ಗ್ರೀಕರ ಪುರಾಣ ಕಥೆಗಳಲ್ಲಿ ರೋಗ ಗುಣಮಾಡುವ ಸರ್ಪಗಳ ಅದ್ಭುತ ಶಕ್ತಿಯನ್ನು ಬಹಳವಾಗಿ ಹೊಗಳಿದ್ದಾರೆ. ಪ್ರತಿ ದೇವಾಲಯದಲ್ಲೂ ಸರ್ಪದ ವಿಗ್ರಹಗಳು ಇದ್ದೇ ಇರುತ್ತಿದ್ದವು. ಎಸ್ಕ್ಲಿಪಿಯಸ್ ಸರ್ಪಗಳ ಸಾಮರ್ಥ್ಯ ವನ್ನು ಅರಿತಿರುವುದೂ ಅಲ್ಲದೆ ನಂಬುತ್ತಲೂ ಇದ್ದ. ಇದು ಸರ್ಪವೇ ಸುತ್ತಿರುವ ಒಂದು ಊರುಗೋಲನ್ನು ಎಸ್ಕ್ಲಿಪಿಯಸ್ ಹಿಡಿದುಕೊಂಡಿರುವ ಚಿತ್ರಗಳಿಂದ ತಿಳಿಯುತ್ತದೆ. ಇಂತಹ ದೃಶ್ಯಗಳು ಈಗಲೂ ಉಪಯೋಗದಲ್ಲಿವೆ.

ಎಸ್ಕ್ಲಿಪಿಯಸ್‌ನ ಉಪಾಸನೆ ಯಾವಾಗ ರಾಷ್ಟ್ರೀಯವಾಯಿತು ಎಂದು ಸರಿಯಾಗಿ ತಿಳಿದಿಲ್ಲ. ಆದರೂ ಸಾಕ್ರೆಟಿಸ್ ಸಾಯುವ ಮೊದಲೇ ಇತ್ತೆಂದು ನಂಬಲಾಗಿದೆ. ಸಾಕ್ರೆಟಿಸ್ ಸತ್ತದ್ದು ಕಿ. ಪೂ. ೩೯೯ರಲ್ಲಿ ಆದ್ದರಿಂದ ಕ್ರಿ. ಪೂ. ೪ನೇ ಶತಮಾನದ ಮಧ್ಯಭಾಗ ಮುಗಿದ ಮೇಲೆ ಎಸ್ಕ್ಲಿಪಿಯಸ್‌ನ ಉಪಾಸನೆ ದೇಶ ದಲ್ಲೆಲ್ಲಾ ಹರಡಿ ರಾಷ್ಟ್ರೀಯವಾಯಿತೆಂದೂ ಹೇಳಬಹುದು. ಎಸ್ಕ್ಲಿಪಿಯಸ್‌ನ

ದೇವಾಲಯಗಳು ಒಳ್ಳೆಯ ಜಾಗದಲ್ಲಿದ್ದವು. ಒಂದೊಂದು ಕಡೆಯೂ ಹಲವು ಕಟ್ಟಡಗಳಿರುತ್ತಿದ್ದವು. ಅವುಗಳಲ್ಲಿ ರೋಗಿಗಳು ಮಲಗುವುದಕ್ಕೂ, ಸ್ನಾನ ಮಾಡುವುದಕ್ಕೂ, ಭೌತರೋಗ ಚಿಕಿತ್ಸೆಗೂ ಗೃಹಗಳಿದ್ದವು. ಆಗಿನ ಕಾಲದ ಕ್ರೀಡಾರಂಗ ಮತ್ತು ಹೊರಗಿನ ಮಲ್ಲರಂಗ ಈಗಲೂ ಸುರಕ್ಷಿತವಾಗಿವೆ. ಈ ಸ್ಥಳಗಳಲ್ಲಿ ಒಳ್ಳೇ ನೀರಿನ ಚಿಲುಮೆಗಳೂ ಜನರಿಗೆ ಬೇಕಾದ ನೆರಳೂ ಇದ್ದವು. ಈ ದೇವಾಲಯಗಳಲ್ಲಿ ರೋಗಿಗಳು ತಮ್ಮ ರೋಗಗಳಿಂದ ಚೆನ್ನಾಗಿ ಪಾರಾಗುತ್ತಿದ್ದರು. ದೇವಾಲಯಗಳು ಗ್ರೀಸಿನ ಆದ್ಯಂತ ಹರಡಿದ್ದರಿಂದ ಅವುಗಳ ಕಾರ್ಯಚಟುವಟಿಕೆಗಳು ಒಂದಕ್ಕೊಂದಕ್ಕೆ ವ್ಯತ್ಯಾಸವಾಗಿದ್ದವು. ಹುದ್ದೆಗಳಿಗೆ ಜೋಯಿಸರನ್ನು ಆರಿಸುವ ಪದ್ಧತಿಯಲ್ಲೂ ವ್ಯತ್ಯಾಸವಿತ್ತು. ಕೆಲವರು ಜೀವಾವಧಿ ಕೆಲಸ ಮಾಡುತ್ತಿದ್ದರು. ಕೆಲವರು ವಂಶಪಾರಂಪರ್ಯವಾಗಿರುತ್ತಿದ್ದರು. ಮತ್ತೆ ಕೆಲವರು ಇತರ ಅಧಿಕಾರಿಗಳ ಹಾಗೆ ಆಗಾಗ್ಗೆ ನೇಮಿಸಲ್ಪಡುತ್ತಿದ್ದರು. ಗ್ರೀಸಿನ ಆದಿಭಾಗದಲ್ಲಿ ಯಂತ್ರಮಂತ್ರಗಳಲ್ಲಿ ನಂಬಿಕೆ ಇದ್ದುದರಿಂದ ಜೋಯಿಸರುಗಳೇ ವೈದ್ಯರ ಕೆಲಸವನ್ನು ಮಾಡುತ್ತಿದ್ದರು. ಅನಂತರ ವೈದ್ಯ ವೃತ್ತಿಯಲ್ಲಿ ಪ್ರವೀಣರಾದವರು ಕೆಲಸ ಮಾಡಲು ಬಂದರು. ಆಗ ಔಷಧ, ಅಭ್ಯಂಜನ, ನೀವುವಿಕೆ, ಅಂಗಸಾಧನೆಗಳು ಮುಂದುವರಿದಿದ್ದವು. ಒಂದು ಕಾಲದಲ್ಲಿ ಅನೇಕ ಸಲಹೆಗಾರ ವೈದ್ಯರೂ ಇದ್ದರು.

ರೋಗವನ್ನು ಗುಣಪಡಿಸಿಕೊಳ್ಳಲು ರೋಗಿಗಳು ದೇವಾಲಯಕ್ಕೆ ಕಿಕ್ಕಿರಿದು ಬರುತ್ತಿದ್ದರು. ಬಂದವರು ಅಲ್ಲೇ ಮಲಗುವ ರೂಢಿಯಿತ್ತು. ಸ್ವಪ್ನ ಬೀಳುವುದು ರೋಗಿಗಳಲ್ಲಿ ಒಂದು ವಿಶೇಷವಾಗಿತ್ತು. ಸ್ವಪ್ನದಲ್ಲಿ ರೋಗಿಗಳಿಗೆ ಬೇಕಾದ ಔಷಧ ವಿಚಾರ ತಿಳಿಯುತ್ತಿತ್ತು. ಈ ವಿಚಾರಗಳನ್ನು ಜೋಯಿಸರು ಅರ್ಥಮಾಡಿಕೊಂಡು ಚಿಕಿತ್ಸೆ ಕೊಡುತ್ತಿದ್ದರು. ಕನಸು ಮೊದಲನೆಯ ದಿವಸ ಬೀಳದಿದ್ದರೆ, ಕನಸು ಕಾಣುವ ತನಕ ದಿನವೂ ದೇವಾಲಯಗಳಲ್ಲೇ ರೋಗಿಗಳು ಮಲಗುತ್ತಿದ್ದರು. ಈ ಅಭ್ಯಾಸ ಪೂರ್ತಿಯಾಗಿ ಗ್ರೀಕರದೇನಲ್ಲ. ಅವರಿಗಿಂತಲೂ ಮೊದಲಿದ್ದ ಅಸ್ಸೀರಿಯನರಲ್ಲೂ, ಈಜಿಪ್ಟಿನವರಲ್ಲೂ ಈ ಅಭ್ಯಾಸವಿತ್ತು. ಆದ್ದರಿಂದ ದೇವಾಲಯದಲ್ಲಿ ನಿದ್ರಿಸುವ ಅಭ್ಯಾಸ ಅವರ ಪೂರ್ವೀಕರಿಂದ ಬಂದಿತ್ತು. ಇದು ತಿಳಿವಳಿಕೆ ಇಲ್ಲದವರಲ್ಲಿ ಮಾತ್ರವಲ್ಲದೆ, ತತ್ವಜ್ಞಾನಿಗಳಲ್ಲೂ ರೂಢಿಯಲ್ಲಿತ್ತು.

ಮೊದಲನೆಯ ದಿನದ ಕನಸು ಸ್ವಾರಸ್ಯವಾಗಿರುತ್ತಿತ್ತು. ರೋಗಿಗೆ ಜಡತೆ ಬಂದ ಮೇಲೆ, ಜೋಯಿಸರು ರೋಗಿಯಿಂದ ರೋಗಿಗೆ ಸರ್ಪಗಳ ಸಮೇತ ಭೇಟಿ ಕೊಡುತ್ತಿದ್ದರಲ್ಲದೆ, ಭೇಟಿಯ ಕಾಲದಲ್ಲಿ ಸರ್ಪಗಳು ರೋಗವಿರುವ ಅಂಗಗಳನ್ನು ಮತ್ತು ಗಾಯಗಳನ್ನು ನೆಕ್ಕುತ್ತಿದ್ದವು. ಇದರಿಂದ ರೋಗ ಗುಣವಾಗುತ್ತಿತ್ತು. ಎಸ್ಕ್ಲಿಪಿಯಸ್ ತನ್ನ ಮಕ್ಕಳ ಜತೆಯಲ್ಲಿ ರೋಗಿಗಳ ಸ್ವಪ್ನದಲ್ಲಿ ಕಾಣಿಸಿಕೊಳ್ಳುತ್ತಿದ್ದುದರಿಂದಲೂ ರೋಗ ಗುಣವಾಗುತ್ತಿತ್ತು. ರೋಗ ಗುಣವಾಗಿ ಮನೆಗೆ ಹೋಗುವ ಮುನ್ನ ಪ್ರತಿ ರೋಗಿಯೂ ತನ್ನ ಹರಕೆಯನ್ನು ಕುರಿತು ಇತರ ರೋಗಿಗಳ



ಕಾಲಿನ ಸಿರದುರಿತದಿಂದ ಹರಕೆ ಸಲ್ಲಿಸಿದುದರ ಶಿಲಾಫಲಕ

ಪ್ರೋತ್ಸಾಹಕಕ್ಕೋಸ್ಕರ ಶಿಲಾಶಾಸನವನ್ನು ಬರೆಯಿಸಿ ಹೋಗುತ್ತಿದ್ದನು. ಇದರಿಂದ ಅನಂತರ ಬರುವ ರೋಗಿಗಳಿಗೆ ನಂಬಿಕೆ ಹುಟ್ಟುತ್ತಿತ್ತು.

ಹರಕೆ ಕೆತ್ತನೆಗಳು

ಈ ಹರಕೆ ಕೆತ್ತನೆಗಳು ಮೂರು ರೀತಿ ಇದ್ದವು. ಮೊದಲನೆಯದರಲ್ಲಿ ಎಸ್ಕ್ಲಿಪಿಯಸ್ ಮತ್ತು ಅವನ ಪುತ್ರರಾದ ಮಚೋನ್, ಪೊಡಲೀರಿಯಸ್, ಪುತ್ರಿಯರಾದ ಹೈಜಿಯ, ಪೆನೇಷಿಯ ಮತ್ತು ಐಯಾಸೊರ ಪ್ರತಿಮೆಗಳನ್ನು ಕೆತ್ತಿದ್ದರು. ಎರಡನೆಯದರಲ್ಲಿ, ರೋಗವಿದ್ದ ಅಂಗಗಳ ಚಿತ್ರಗಳಾದ ಕಿವಿ, ಕಣ್ಣು, ಮೂಗು, ಎದೆ, ಜನನಾಂಗಗಳನ್ನು ಕೆತ್ತಿದ್ದವು. ಮೂರನೆಯದರಲ್ಲಿ ರೋಗ ಗುಣವಾದ ಅಂಶವನ್ನು ಕೆತ್ತಿತ್ತು. ಕಾಸ್‌ನಲ್ಲಿರುವ ಎರಡು ಕೆತ್ತನೆಗಳಲ್ಲಿ ಗರ್ಭಕೋಶದ ಚಿತ್ರವಿದೆ. ಈ ಕೆತ್ತನೆಗಳನ್ನು ಅಮೃತಶಿಲೆಯಲ್ಲಾಗಲೀ ಟೆರಕೋಟದಲ್ಲಾಗಲಿ ಕೆತ್ತಿದ್ದರು.

ಪಾಸನಿಯಸ್ ಎಂಬ ಬರಹಗಾರ ೧೬೫ರಲ್ಲಿ ಎಪಿಡಾರಸ್ಸಿಗೆ ಹೋಗಿ, ಅರ್ಥಮಾಡಿಕೊಂಡು ಕೆತ್ತನೆಗಳ ವಿಚಾರ ಬರೆದಿದ್ದಾನೆ. ಕಲ್ವಡಿಯಸ್ ಗ್ರೀಸಿನ ಪ್ರಾಚೀನ ಶೋಧಕ ೧೮೮೩ರಲ್ಲಿ ಎಪಿಡಾರಸ್ ದೇವಾಲಯಗಳಲ್ಲಿದ್ದ ನಾಲ್ಕೂ ಕೆತ್ತನೆಗಳನ್ನು ಪತ್ತೆಮಾಡಿ, ಅವುಗಳಲ್ಲಿ ಕೆತ್ತಿದ ರೋಗ ಚಿಕಿತ್ಸೆಗಳನ್ನು ಭಾಷಾಂತರ ಮಾಡಿದ್ದಾನೆ. ಕಣ್ಣಿಲ್ಲದಿದ್ದವರಿಗೆ ಕಣ್ಣು ಬಂದದ್ದು, ಮಾತು ಬರದಿದ್ದವರಿಗೆ ಮಾತು ಬಂದದ್ದು ಇತ್ಯಾದಿ ವಿವರಿಸಿದ್ದಾನೆ. ಎರಡನೇ ಶತಮಾನದಲ್ಲಿ ಅಂಟೊನಿನಸ್ ಪಯಸ್‌ನ ಆಳ್ವಿಕೆಯಲ್ಲಿ ಎಮ್. ಜೂಲಿಯಸ್ ಅಪೆಲ್ಲಾಸ್ ಎಂಬ ರೋಗಿ ಒಂದು ದೊಡ್ಡ ಲೇಖನವನ್ನೇ ಬರೆದಿದ್ದಾನೆ. ಇವನು ಕೆತ್ತಿಸಿರುವ ಶಿಲೆಯಲ್ಲಿ ಮಂತ್ರತಂತ್ರಗಳ ವಿಷಯಗಳಿಲ್ಲದೆ, ಕೇವಲ ಔಷಧಗಳಿಂದ ತನ್ನ ರೋಗ ಗುಣವಾದದ್ದನ್ನು ತಿಳಿಸಿದೆ. ಹೀಗೆ ಆಗಿನ ಕಾಲದಲ್ಲಿ ಮನೋಚಿಕಿತ್ಸೆ, ಕಾಯಕ ಚಿಕಿತ್ಸೆ ಮತ್ತು ಔಷಧ ಚಿಕಿತ್ಸೆಗಳೆಲ್ಲದರಿಂದಲೂ ರೋಗ ಗುಣಮಾಡುತ್ತಿದ್ದರು. ಆದುದರಿಂದ ಕೇವಲ ೬೦೦ ವರ್ಷಗಳಲ್ಲಿ ಯಕ್ಷಿಣಿ ವಿದ್ಯೆ ಹೋಗಿ ವಿಚಾರಪೂರ್ವಕವಾದ, ಅವಿವೇಕವಿಲ್ಲದ ವೈದ್ಯಶಾಸ್ತ್ರ ಗ್ರೀಕರಲ್ಲಿ ಮೂಡಿಬಂದಿತು.

೯. ತತ್ವಜ್ಞಾನಿ ವೈದ್ಯರು

ಪುರಾತನ ಗ್ರೀಕರಿಗೆ ಜ್ಞಾನಾರ್ಜನೆಯೆಂದರೆ ಬಹಳ ಪ್ರೇಮ. ಪ್ರಪಂಚದಲ್ಲಿರುವುದನ್ನೆಲ್ಲಾ ತಿಳಿದುಕೊಳ್ಳಬೇಕೆಂದೂ ಮತ್ತು ಅವುಗಳ ಪ್ರಕೃತಿಯೇನೆಂದು ತಿಳಿಯಲೂ ಪ್ರಯತ್ನಿಸುತ್ತಿದ್ದರು. ಹಾಗೂ ಇಡೀ ವಿಶ್ವವನ್ನು ತಿಳಿಯಲು ತೊಡಗಿದ್ದರು. ಜ್ಞಾನ ಸಂಪಾದನೆ ಮಾಡಿದವರನ್ನು ಪಂಡಿತರೆಂದು (ಕುತಾರ್ಕಿಕ) ಕರೆಯುತ್ತಿದ್ದರು. ಜ್ಞಾನ ಸಂಪಾದನೆಯಲ್ಲಿ ವೈದ್ಯವಿದ್ಯೆಯೂ ಸೇರಿತ್ತು. ಅವರ ಪೈಕಿ ಪೈತಾಗೊರಸ್ ಮುಖ್ಯ ಪಂಡಿತ. ಅವನಿಗೆ ಜ್ಞಾನ ಅಥವಾ ಪಂಡಿತನೆಂಬುವುದು ಹಿಡಿಸಲಿಲ್ಲ. ಅದು ಒಂದು ಆಡಂಬರದ ಮಾತೆಂದು ನಂಬಿ ಅದರ ಬದಲು ಜ್ಞಾನಪ್ರೇಮಿಗಳೆಂದು ಕರೆಯುವುದು ಮೇಲೆಂದು ಉಪದೇಶಿಸಿದನು. ಇವರು ಏಷ್ಯ ಮೈನರಿನ ತೀರಪ್ರದೇಶದಿಂದ ಬಂದಿದ್ದರು.

ತೇಲಿಸ್

ಇಂತಹ ಜ್ಞಾನಪ್ರೇಮಿಗಳಲ್ಲಿ ಮಿಲೆಟಸ್‌ನ ತೇಲಿಸ್‌ನೂ ಒಬ್ಬ. ಈತನು ಕ್ರಿ. ಪೂ. ೬೨೯–೫೪೪ರ ತನಕ ಜೀವಿಸಿದ್ದನು. ಇವನು ಸೂರ್ಯಗ್ರಹಣ, ರೇಖಾ ಗಣಿತ, ಸಪ್ತಋಷಿ ಮಂಡಲದಿಂದ ನಾವಿಕರಿಗೆ ಆಗುವ ಉಪಯೋಗ ಮುಂತಾದುವನ್ನು ಕಂಡುಹಿಡಿದಿದ್ದನು. ಆದರೆ ಭೂಮಿ ನೀರಿನ ಮೇಲೆ ತೇಲುತ್ತದೆಂದು ನಂಬಿದ್ದನು.

ಅನಾಕ್ಸಿಮಾಂಡರ್


ಅದೇ ಕಾಲದಲ್ಲಿದ್ದ (ಕ್ರಿ. ಪೂ. ೫೬೫) ಮಿಲೆಟಸ್ಸಿನ ಅನಾಕ್ಸಿಮಾಂಡರ್ ತೇಲಸ್ಸಿನ ಶಿಷ್ಯನಾಗಿದ್ದರೂ ಗುರುವಿನ ನಂಬಿಕೆಯನ್ನು ಪ್ರತಿಭಟಿಸಿ, ಭೂಮಿ ನೀರಿನ ಮೇಲೆ ತೇಲುವುದಿಲ್ಲ, ಆಕಾಶದಲ್ಲಿ ಜೋಲಾಡುತ್ತಿದೆಯೆಂದೂ, ಅದಕ್ಕೆ ಯಾವ ಊರೆಯೂ ಇಲ್ಲವೆಂದೂ ಸಾರಿದನು. ಹಾಗೂ ಪ್ರಪಂಚದ ಜೀವಪ್ರಾಣಿಗಳೆಲ್ಲಾ ಸೂರ್ಯನ ಶಕ್ತಿಯಿಂದಾದ ಮೂಲಪದಾರ್ಥಗಳ ಬದಲಾವಣೆ ಎಂದೂ ತಿಳಿಸಿದ್ದನು.

ಪೈತಾಗೊರಸ್

ಪೈತಾಗೊರಸ್ಸಿನ ಜ್ಞಾನಾರ್ಜನೆಯನ್ನು ಹೇಳತೀರದು. ಅವನು ಸಮಾಸ್‌ನಲ್ಲಿ ಹುಟ್ಟಿ, ವಿದ್ಯಾಭ್ಯಾಸ, ದೇಶಾಟನೆ ಮುಗಿಸಿಕೊಂಡು ತನ್ನ ತೌರೂರಿಗೆ ಹಿಂತಿರುಗಿ ಕೆಲವು ದಿನ ಕಾಲ ಕಳೆದು, ಪಾಲಿಕ್ರೇಟಸ್‌ನ ದಬ್ಬಾಳಿಕೆ ಮತ್ತು ದ್ವೇಷವನ್ನು ತಾಳಲಾರದೆ ದಕ್ಷಿಣ ಇಟಲಿಯ ಕ್ರೊಟೋನಕ್ಕೆ ತೆರಳಿದನು. ಇಲ್ಲಿ ಉಪದೇಶ ಮಾಡಲು

ಪ್ರಾರಂಭಿಸಿ ಒಂದು ಗುಂಪನ್ನು ಕಟ್ಟಿದನು. ಗುರುಭಕ್ತಿ ಹಾಗೂ ಪ್ರತಿಯೊಬ್ಬರಿಗೂ ಗೌರವ ಸಲ್ಲಿಸುವುದೇ ಇದರ ಮುಖ್ಯ ಉದ್ದೇಶವಾಗಿತ್ತು. ಅಲ್ಲದೆ ವಿಜ್ಞಾನದಿಂದ ಜ್ಞಾನಸಂಪಾದಿಸುವುದು ಕೂಡ ಅದರ ಗುರಿಯಾಗಿತ್ತು. ಹೀಗೆ ಅವನ ಗುಂಪು ಬೆಳೆದು ಅಂತಿಮದಲ್ಲಿ ಒಂದು ರಾಜಕೀಯ ಸಂಸ್ಥೆಯಾಗಿ ದಕ್ಷಿಣ ಇಟಲಿಯ ಪಟ್ಟಣಗಳಲ್ಲೆಲ್ಲಾ ಪ್ರಭಾವ ಬೀರಿತು. ರಾಜಕೀಯದಲ್ಲಿಳಿದುದೇ ಕಾರಣವಾಗಿ ಈ ಸಂಸ್ಥೆ ಕ್ರಿ. ಪೂ. ೫ನೇ ಶತಮಾನದಲ್ಲಿ ನಾಶವಾಗಲು ಪ್ರಾರಂಭವಾಯಿತು.

ಪೈತಾಗೊರಸಿನ ಬೋಧನೆಗಳಲ್ಲಿ ಗಣಿತಶಾಸ್ತ್ರ ಮುಖ್ಯವಾದ ವಿಷಯವಾಗಿತ್ತು. ಗಣಿತಶಾಸ್ತ್ರದಲ್ಲಿ ರೇಖಾಗಣಿತ, ಜ್ಯೋತಿಷ್ಯ, ಸಂಗೀತಗಳೂ ಸೇರಿದ್ದವು. ರೇಖಾಗಣಿತದಲ್ಲಿ ಅನೇಕ ನಿಯಮಗಳನ್ನು ಕಂಡು ಹಿಡಿದಿದ್ದನು. ಸಂಗೀತಕ್ಕೂ ಅಂಕಿಗಳಿಗೂ ಇರುವ ಸಂಬಂಧವನ್ನು ವಿಮರ್ಶಿಸಿದ್ದನು. ಭೂಮಿ ಗುಂಡಾಗಿದೆಯೆಂದೂ, ಪಶ್ಚಿಮದಿಂದ ಪೂರ್ವಕ್ಕೆ ಸುತ್ತುವುದೆಂದೂ, ಸೂರ್ಯನಿಗೂ, ಚಂದ್ರನಿಗೂ ಭೂಮಿ ಮಧ್ಯ ಬಂದಾಗ ಚಂದ್ರಗ್ರಹಣವಾಗುತ್ತದೆಂದೂ ತಿಳಿಸಿದ್ದನು. ಭೂಮಿ ಗುಂಡಾಗಿದೆ ಎಂದು ಇವನೇ ಮೊಟ್ಟಮೊದಲು ಹೇಳಿದ್ದು. ಸುವ್ಯವಸ್ಥಿತ ವಿಶ್ವವೆಂಬ ಹೆಸರನ್ನು ಕೊಟ್ಟದ್ದೂ ಇವನೇ. ಇಷ್ಟೆಲ್ಲಾ ವಿಜ್ಞಾನಕ ಭಾವನೆಗಳಿದ್ದರೂ, ಅವುಗಳ ಸಮೂಹದಲ್ಲಿ ಪುನರ್ಜನ್ಮವಿದೆಯೆಂದೂ, ಆತ್ಮ ಬದಲಾಗುತ್ತದೆಂದೂ ನಂಬಿದ್ದನು.



ಪೈತಾಗೊರಸ್

ಇವನ ವಿಜ್ಞಾನಕ ಬುದ್ಧಿಶಕ್ತಿ ಆಗಿನ ವೈದ್ಯಶಾಸ್ತ್ರದ ಮೇಲೆ ಬಹಳ ಪ್ರಭಾವ ಬೀರಿತ್ತು. ಮಣ್ಣು, ಗಾಳಿ, ಬೆಳಕು, ನೀರು ಈ ನಾಲ್ಕುಮೂಲಾಂಶಗಳು ಜೀವಕ್ಕೆ ಅಗತ್ಯವೆಂದು ತಿಳಿಸಿದ್ದನು. ಈ ನಾಲ್ಕು ಮೂಲಾಂಶಗಳಿಗೂ ಒಣಕಲು, ಶೀತ, ಬಿಸಿ ಮತ್ತು ತೇವವೆಂಬ ನಾಲ್ಕು ಗುಣಗಳಿದ್ದವೆಂದೂ ತಿಳಿಸಿದ್ದನು. ನಾಲ್ಕು ಮೂಲಾಂಶಗಳು, ನಾಲ್ಕು ಗುಣಗಳು ಸೇರಿ ಶರೀರದ ನಾಲ್ಕು ರಸಧಾತುಗಳಾಗುತ್ತವೆಂದು ಊಹಿಸಿದ್ದನು. ರಕ್ತ ಬಿಸಿಯಾಗಿ ನೀರಾಗಿಯೂ, ಹಳದಿ ಪಿತ್ತ ಬಿಸಿಯಾಗಿ ಒಣಗಿಯೂ, ಕಫ ತಣ್ಣಗೆ ನೀರಾಗೂ, ಕಪ್ಪು ಪಿತ್ತ ತಣ್ಣಗೆ ಒಣಗಿಯೂ ಇರುತ್ತವೆಂದು ಸೂಚಿಸಿದ್ದನು. ಪೈತಾಗೊರಸ್ ತಿಳಿಸಿದ ವೈದ್ಯಶಾಸ್ತ್ರದ ಈ ರಸಧಾತುಗಳ ತತ್ತ್ವ ಕ್ರಿ. ಪೂ. ೫೦೦ ರಿಂದ ಕ್ರಿ. ಶ. ೧೮೫೮ ರಲ್ಲಿ ವರ್ಕೌ ವಿರೋಧಿಸುವವರೆವಿಗೂ ಪ್ರಚಲಿತವಾಗಿತ್ತು.

ಆಲ್ಕ್‌ಮೇನ್

ಕ್ರೊಟನ್ನಿನ ಆಲ್ಕ್‌ಮೇನ್ ಕ್ರಿ. ಪೂ. ಐದನೇ ಶತಮಾನದಲ್ಲಿ ಪೈತಾಗೊರಸ್ಸನ ಅತಿ ಶ್ರೇಷ್ಠ ಶಿಷ್ಯನಾಗಿದ್ದನು. ಇವನೇ ವೈದ್ಯಶಾಸ್ತ್ರದ ಮೊಟ್ಟಮೊದಲನೇ ಬರಹಗಾರ. ಇವನೇ ನಾಲ್ಕು ಮೂಲಾಂಶಗಳನ್ನು ಸೂತ್ರೀಕರಿಸಿದನು ಪ್ರಾಣಿಗಳ ಅಂಗಚ್ಛೇದನ ಮಾಡಿದುದರ ಫಲವಾಗಿ ದೃಷ್ಟಿನರವನ್ನೂ, ಯೂಸ್ಟೇಕಿಯಸ್‌ನ ಹೆಸರು ಪಡೆದಿರುವ ನಾಳವನ್ನೂ ಕಂಡುಹಿಡಿದಿದ್ದನು. ಪೈತಾಗೊರಸ್ ಶಿಷ್ಯನಾದ್ದರಿಂದ, ಆಗಿನ ಕಾಲಕ್ಕನುಸಾರವಾಗಿ, ಮನುಷ್ಯ ಶರೀರದ ಅಂಗಚ್ಛೇದನ ಮಾಡುತ್ತಿರಲಿಲ್ಲ.

ಅನಾಕ್ಸಗೊರಸ್

ಆಗಿನ ಕಾಲದಲ್ಲಿದ್ದ ಕ್ಲಾಸೊಮಿನದ ಅನಾಕ್ಸಗೊರಸ್ ವಿಜ್ಞಾನಿ, ಅಥೆನ್ಸ್‌ನಲ್ಲಿದ್ದ ಪೆರಿಕಲ್ಸ್‌ನ ಗುಣಗಳನ್ನು ಮೆಚ್ಚಿ ಅಥೆನ್ಸಿಗೆ ೨೦ನೇ ವರ್ಷ ವಯಸ್ಸಿನಲ್ಲೇ ಹೋದನು. ಅಲ್ಲಿಯ ಜನರಿಗೆ ಈತನ ಸ್ವತಂತ್ರ ವಿಚಾರ ಭಾವನೆ ಸರಿಹೋಗದೆ, ಪೆರಿಕಲ್ಸ್ ಎಷ್ಟೇ ವಾದ ಮಾಡಿದರೂ ಇವನನ್ನು ಕೊಲ್ಲಿಸಲು ಯತ್ನಿಸುತ್ತಾರೆ. ಆದರೆ ಅವನು ಅಲ್ಲಿಂದ ಹೇಗೊ ತಪ್ಪಿಸಿಕೊಂಡು ಲಾಂಪ್ಸಾಕಸ್‌ಗೆ ಹೋಗಿ ಕೆಲವು ವರ್ಷಗಳಿದ್ದು ಮರಣಹೊಂದುತ್ತಾನೆ. ಸೂರ್ಯ ದೇವರಲ್ಲ, ಒಂದು ಬಿಸಿಯಾದ ಕೆಂಪು ಕಲ್ಲೆಂದೂ, ಚಂದ್ರ ಹೆಣ್ಣು ದೇವತೆಯಲ್ಲ, ಭೂಮಿಯ ಒಂದು ಭಾಗವೆಂದೂ, ಚಂದ್ರನಿಗೆ ಸೂರ್ಯನಿಂದ ಬೆಳಕು ಬರುತ್ತದೆಂದೂ ಉಪದೇಶಿಸಿದ್ದರಿಂದ ಅಥೆನ್ಸ್ ಜನರ ದ್ವೇಷಕ್ಕೆ ಗುರಿಯಾಗುತ್ತಾನೆ. ಕಪ್ಪು ಮತ್ತು ಹಳದಿ ಬಣ್ಣದ ಎರಡು ಬಗೆಯ ಪಿತ್ತರಸ ಶರೀರದಲ್ಲಿದೆಯೆಂದೂ, ಇವು ಕೆರಳುವುದರಿಂದ ರೋಗ ಉತ್ಪತ್ತಿಯಾಗುತ್ತದೆಂದೂ ಅನಾಕ್ಸಗೊರಸ್ ನಂಬಿದ್ದನು.


ಎಂಪೆಡೊಕಲ್ಸ್

ಕ್ರಿ. ಪೂ. ೫೦೦–೪೩೦ ತನಕ ಅಕ್ರಗಾಸ್ಸಿನ ಎಂಪೆಡೊಕಲ್ಸ್ ಪ್ರಖ್ಯಾತಿ ಹೊಂದಿದ್ದನು. ಇವನು ಸಿಸಿಲಿಯ ದೊಡ್ಡದಾದ ಮತ್ತು ಐಶ್ವರ್ಯದಿಂದ ತುಂಬಿದ ಅಗ್ರಿಜೆಂಟಮ್ ಪಟ್ಟಣದಲ್ಲಿ ಹುಟ್ಟಿದ್ದನು. ಎಲ್ಲರಂತೆ ಇವನು ವೈದ್ಯಶಾಸ್ತ್ರದಲ್ಲಿ ಪ್ರವೀಣನಾಗಿದ್ದನು. ಇವನು ಸೆಲಿನಸ್ ಪಟ್ಟಣದ ಕೊಳಚೆ ನೀರನ್ನು ಕಾಲುವೆಗಳ ಮೂಲಕ ಬರಿದುಮಾಡಿ ಅಲ್ಲಿ ಪ್ರಬಲವಾಗಿದ್ದ ಸಾಂಕ್ರಾಮಿಕ ರೋಗ (ಮಲೇರಿಯ ರೋಗವಿರಬಹುದು) ಹರಡದಂತೆ ತಡೆಗಟ್ಟಿದನು. ಪೈತಾಗೊರಸ್ಸಿನ ನಾಲ್ಕು ತತ್ವಗಳನ್ನೇ ಇವನೂ ಉಪದೇಶ ಮಾಡಿದ್ದನು. ಉಸಿರಾಡಲು ಶ್ವಾಸಕೋಶ ಒಂದೇ ಅಲ್ಲದೆ ಚರ್ಮದ ರಂಧ್ರಗಳ ಮೂಲಕವೂ ನಡೆಯುತ್ತದೆಂದು ತಿಳಿದಿದ್ದನು. ರಕ್ತ ಚಲನೆಗೆ ಹೃದಯ ಮುಖ್ಯವಾದ ಅಂಗ, ಆದರಿಂದ ಹೊರಕ್ಕೂ, ಒಳಕ್ಕೂ ರಕ್ತ ಹರಿಯುತ್ತದೆಯೆಂದೂ ಹೇಳಿದ್ದ. ಗರ್ಭಕೋಶದಲ್ಲಿ ಬೆಳೆಯುತ್ತಿರುವ ಭ್ರೂಣ ಒಂದು ಪೊರೆಯಿಂದ ಸುತ್ತಿದೆ ಎಂದೂ, ಪೊರೆಯ ಒಳಗೆ ಒಂದು ಬಗೆಯ ಸ್ರಾವವಿದೆಯೆಂದು

ತಿಳಿದಿದ್ದನು. ಅಲ್ಲದೆ ಜನನ ಕಾಲದಲ್ಲಿ ಪೊರೆ ಒಡೆದು, ಶಿಶು ಜನನವಾದ ಮೇಲೆ ಉಸಿರಾಟ ಪ್ರಾರಂಭವಾಗುತ್ತದೆಂದೂ ಹೇಳಿದ್ದನು. ಎಂಪೆಡೊಕಲ್ಸ್ ಜ್ಞಾನಿಯೇ ಇಟಲಿಯ ವೈದ್ಯಶಾಸ್ತ್ರ ಶಾಲೆಯನ್ನು ಸ್ಥಾಪಿಸಿದ್ದು. ಈ ಶಾಲೆ ಕಾಸ್ ಮತ್ತು ನೈಡಸ್ಸಿನ ವೈದ್ಯಶಾಲೆಗಳಿಗೆ ಸಮನಾಗಿದ್ದಿತು. ನೈಡಸ್ ಶಾಲೆಯ ವೈದ್ಯರು ರೋಗ ನಿದಾನದಲ್ಲಿ ನಿಪುಣರಾಗಿದ್ದರು. ಕಾಸ್ ವೈದ್ಯಶಾಲೆ ಪ್ರಾಮುಖ್ಯತೆಗೆ ಮಹಾಪಂಡಿತನಾದ ಹಿಪ್ಪೊಕ್ರೇಟಿಸ್ ಎಂಬುವನೇ ಕಾರಣನಾಗಿದ್ದನು. ಇವನು ವೈದ್ಯಶಾಸ್ತ್ರವನ್ನು ಬಹಳ ಆಸಕ್ತಿಯಿಂದ ಕಲಿತಿದ್ದನು. ಎಸ್ಕ್ಲಿಪಿಯಸ್ ದೇವಾಲಯಗಳ ಜೋಯಿಸರಿಂದ ಕಲಿಯಲಿಲ್ಲ. ಅವನ ಪೂರ್ವಿಕರಾದ ತೇಲಿಸ್,ಅನಾಕ್ಸಿಮಾಂಡರ್, ಅನಾಕ್ಸಿಗೋರಸ್,ಪೈತಾಗೊರಸ್,ಆಲ್ಕ್‌ಮೇನ್, ಮತ್ತು ಎಂಪಿಡೊಕಲ್ಸ್ ಮುಂತಾದವರಿಂದ ಕಲಿತು ವೈದ್ಯಶಾಸ್ತ್ರದಲ್ಲಿ ನಿಪುಣನಾದನು. ಅವರಂತೆ ವಿಜ್ಞಾನವನ್ನು ರೂಢಿಮಾಡದೆ, ವೈದ್ಯಶಾಸ್ತ್ರದಲ್ಲಿ ಮಾತ್ರ ಪ್ರವೀಣನಾದನು.


೧೦. ಹಿಪ್ಪೊಕ್ರೇಟಿಸ್

ಗ್ರೀಸಿನ ವೈದ್ಯಶಾಸ್ತ್ರದ ಉನ್ನತ ಸ್ಥಿತಿಗೆ ಹಿಪ್ಪೊಕ್ರೇಟಿಸ್ಸೇ ಕಾರಣ. ಅವನ ಕಾಲದ ವೈದ್ಯಶಾಸ್ತ್ರದ ಪ್ರಖ್ಯಾತಿಯನ್ನು ಮೀರಿಸಲು ೫೦೦ ವರ್ಷಗಳು ಬೇಕಾಯಿತು.



ಹಿಪ್ಪೊಕ್ರೇಟಿಸ್

ಇಷ್ಟು ಉನ್ನತ ಸ್ಥಿತಿಗೆ ತಂದದ್ದರಿಂದ ಅವನು ವೈದ್ಯಶಾಸ್ತ್ರದ ಪಿತಾಮಹ ಎನ್ನಿಸಿಕೊಂಡಿರುವನು. ಆಗ ಜ್ಞಾನ ಸಂಪಾದಿಸುವ ಕಾಲವಾಗಿತ್ತು. ಪ್ಲೇಟೊ,ಸಾಕ್ರೆಟಿಸ್, ಪ್ರೊಟಗೇರಸ್ ಮುಂತಾದ ಪ್ರಖ್ಯಾತ ತತ್ವಶಾಸ್ತ್ರಜ್ಞರೂ, ಏಸ್ಕಿಲಸ್, ಸಾಫೊಕ್ಲಿಸ್, ಯೂರಿಪೆಡಿಸ್ ಮುಂತಾದ ನಾಟಕಕಾರರೂ, ಹಿರೊಡೊಟಸ್, ತೂಸಿಡೈಡಸ್ ಎಂಬ ಚರಿತ್ರೆಕಾರರೂ, ಫೀಡಿಯಸ್,ಪಾಲಿಕ್ಲಿಟಸ್, ಪ್ರಾಕ್ಸಿಟಿಲಿಸ್ ಎಂಬ ಶಿಲ್ಪಿಗಾರರೂ ಆ ಕಾಲದಲ್ಲಿ ಉನ್ನತ ಸ್ಥಾನ ಪಡೆದಿದ್ದರು. ಇಂಥ ಮಹಾವ್ಯಕ್ತಿಗಳು ಇಲ್ಲಿಯವರೆವಿಗೆ ಚರಿತ್ರೆಯಲ್ಲೇ ಕಂಡುಬಂದಿಲ್ಲ. ೧೦೦ ವರ್ಷದಲ್ಲಿ ಯಾವ ದೇಶವೂ ಇಷ್ಟು ಪ್ರಖ್ಯಾತಿಯನ್ನೂ ಪಡೆದಿರಲಿಲ್ಲ.



ಸಾಕ್ರಟಿಸ್

ಹಿಪ್ಪೊಕ್ರೇಟಿಸ್ ಬಾಲ್ಯ, ವಿದ್ಯಾಭ್ಯಾಸ

ಹಿಪ್ಪೊಕ್ರೇಟಿಸ್ಸಿನ ಹೆಸರು ಗ್ರೀಸಿನ ಮನೆಮಂದಿಗೆಲ್ಲಾ ಗೊತ್ತಿತ್ತು. ಅವನ ತಾತನ ಮತ್ತು ಮಕ್ಕಳ ಹೆಸರು ಅದೇ ಆದ್ದರಿಂದ ಪ್ರಖ್ಯಾತಿಗೊಂಡ ವೈದ್ಯ ಪಿತಾಮಹ ನನ್ನು ಎರಡನೆ ಹಿಪ್ಪೊಕ್ರೇಟಿಸ್ ಎಂದು ಕರೆದರು. ಅವನ ಜೀವನ ಚರಿತ್ರೆಯನ್ನು ಅವನು ಸತ್ತ ೫೦೦ ವರ್ಷಗಳಾದ ಮೇಲೆ ಸೊರನಸ್ ಬರೆದನು. ಕ್ರಿ. ಪೂ. ೪೬೦ರಲ್ಲಿ ಕಾಸ್ ದ್ವೀಪದಲ್ಲಿ ಹುಟ್ಟಿ ವೈದ್ಯಶಾಸ್ತ್ರವನ್ನು ಅಲ್ಲಿನ ಎಸ್ಕ್ಲಿಪಿಯಸ್ ದೇವಾಲಯ ಗಳಲ್ಲಿ ಪ್ರಾರಂಭಮಾಡಿ, ನೈಡಸ್ಸಿನಲ್ಲಿ ಮುಂದುವರಿಸಿ, ಗ್ರೀಸಿನ ತೆಸ್ಸಾಲಿಯಲ್ಲಿ ಬಂದು ನೆಲೆಸಿದನು. ಕೆಲವರ ಪ್ರಕಾರ ಈಜಿಪ್ಟಿನಲ್ಲೂ ವಿದ್ಯೆ ಕಲಿತಿದ್ದನು. ೯೦ ವರ್ಷಗಳು ಬದುಕಿದ್ದು ವೈದ್ಯಶಾಸ್ತ್ರಕ್ಕೆ ಬೆಂಬಲ ಕೊಟ್ಟು ಕ್ರಿ.ಪೂ. ೩೭೦ರಲ್ಲಿ ಸತ್ತನಂತರ ಲಾರಿಸ್ಸದಲ್ಲಿ ಹೂಳಲ್ಪಟ್ಟನು.

ಕಾಸ್ ದ್ವೀಪದ ಚರಿತ್ರೆ

೨೫ ಮೈಲಿ ಉದ್ದ ೬ ಮೈಲಿ ಅಗಲವಿದ್ದ ಕಾಸ್ ದ್ವೀಪ ಏಷ್ಯ ಮೈನರ್ ತೀರ ದಲ್ಲಿರುವ ಡೊಡೆಕಾನೀಸ್ ದ್ವೀಪಗಳಲ್ಲೊಂದಾಗಿತ್ತು. ಅವನು ವಿದ್ಯಾಭ್ಯಾಸ ಮಾಡಿದ ನೈಡಸ್ ನಗರ ಏಷ್ಯ ಮೈನರ್ರಿಗೆ ದಕ್ಷಿಣದಲ್ಲಿತ್ತು. ಐಶ್ವರ್ಯದಿಂದ ತುಂಬಿ

ತುಳುಕುತ್ತಿದ್ದ ನಗರ ಈಗ ಕುರಿ ಮೇಯಿಸುವವರ ಬೀಡಾಗಿದೆ. ಹಿಪ್ಪೊಕ್ರೇಟಿಸ್ ಹುಟ್ಟಿದ ಕಾಸ್ ದ್ವೀಪದಲ್ಲಿ ಟಾಲೊಮಿ ಫಿಲಡೆಲ್ಫಸ್ ಎಂಬ ಈಜಿಪ್ಟಿನ ಶ್ರೇಷ್ಠದೊರೆ, ತಿಯೊಕ್ರಿಟಸ್ ಎಂಬ ಕವಿ, ಅಪೆಲ್ಲಸ್ ಎಂಬ ಚಿತ್ರಗಾರರೂ ಹುಟ್ಟಿದ್ದರು. ಅವರ ಕಾಲದಲ್ಲಿ ಏಳಿಗೆಯಲ್ಲಿದ್ದ ಎಸ್ಕ್ಲಿಪಿಯಸ್ ದೇವಾಲಯಗಳು ಈಗ ಕಾಣದಂತಾಗಿವೆ.

ರುಡಾಲ್ಫ್ ಹರ್ಸಾಗ್ ೧೯೦೨ರಲ್ಲಿ ನಡೆಸಿದ ಭೂಶೋಧನೆಯಿಂದ ಕಾಸ್ ದ್ವೀಪದ ಪೂರ್ವ ಸ್ಥಿತಿ ತಿಳಿದುಬಂದಿದೆ. ಹಿಪ್ಪೊಕ್ರೇಟಿಸ್ಸಿನ ಪ್ರತಿಮೆ ಎಂದು ಊಹಿಸಲಾಗಿರುವ ಒಂದು ಶಿಲಾಪ್ರತಿಮೆ ೧೯೨೯ರಲ್ಲಿ ಲಾರೆನ್ಸಿಗೆ ಸಿಕ್ಕಿತು. ಕಾಸ್ ದ್ವೀಪದ ಐಶ್ವರ್ಯಕ್ಕೋಸ್ಕರ ಅನೇಕ ರಾಜರೂ ಮತ್ತು ಕೊಳ್ಳೆಗಾರರೂ ಆ ದ್ವೀಪವನ್ನು ವಶಪಡಿಸಿಕೊಂಡಿದ್ದರು ಒಂದು ಕಾಲದಲ್ಲಿ ಸ್ಪಾರ್ಟನ್ನರೂ ಕೊಳ್ಳೆ ಹೊಡೆದಿದ್ದರು. ಆಮೇಲೆ ಮಾರ್ಕ್ ಆನ್ಟೊನಿ ಮತ್ತು ಆಕ್ಟೇವಿಯಸ್ ಕೈವಶ ಮಾಡಿಕೊಂಡಿದ್ದರು. ನಂತರ ೧೫೨೩ರಲ್ಲಿ ಟರ್ಕಿ ವಶಪಡಿಸಿಕೊಂಡಿತ್ತು. ೧೯೧೨ರಲ್ಲಿ ಇಟಲಿಯ ಕೈಸೇರಿತು. ಎರಡನೇ ಮಹಾಯುದ್ಧವಾದನಂತರ ಗ್ರೀಸಿನ ಆಡಳಿತಕ್ಕೆ ಬಂತು. ಈಗ ಕಾಸ್ ದ್ವೀಪ ಒಂದು ಸೌಮ್ಯವಾದ ಪಟ್ಟಣವಾಗಿ, ಎಸ್ಕ್ಲಿಪಿಯಸ್ ದೇವಾಲಯಗಳ ಅವಶೇಷಗಳು, ಹಿಪ್ಪೊಕ್ರೇಟಿಸ್ ಶಿಲಾಪ್ರತಿಮೆ ಮತ್ತು ಅವನು ಪ್ಲೇನ್ ಮರದಡಿಗಳ ನೆರಳಿನಲ್ಲಿ ಉಪದೇಶ ಮಾಡಿದ ಜಾಗಗಳು ಅದರ ಪೂರ್ವ ಚರಿತ್ರೆಯನ್ನು ಜ್ಞಾಪಕ ಮಾಡುತ್ತಿವೆ.

ಪುರಾಣಕಥೆ

ಹಿಪ್ಪೊಕ್ರೇಟಿಸ್ ಸತ್ತಮೇಲೆ ಅವನ ವಿಷಯವಾಗಿ ಅನೇಕ ಪುರಾಣ ಕಥೆಗಳು ಬರೆಯಲ್ಪಟ್ಟಿವೆ. ಅವುಗಳಲ್ಲಿ ಅವನ ವೈದ್ಯ ಪ್ರವೀಣತೆಯನ್ನು ಹೊಗಳಿದೆ. ಅವನ ಸಮಾಧಿಯಲ್ಲಿ ಕಟ್ಟಿದ್ದ ಜೇನುಗಳ ತುಪ್ಪ ರೋಗ ಗುಣಮಾಡುವ ಶಕ್ತಿಯನ್ನು ಹೊಂದಿತ್ತೆಂದು ಹೇಳಿದೆ. ಅಥೆನ್ಸ್ ನಗರದಲ್ಲಿ ಹಬ್ಬಿದ್ದ ಅಂಟು ರೋಗವನ್ನು ಅಲ್ಲಲ್ಲಿ ಬೆಂಕಿ ಹಚ್ಚಿ ಹೋಗಲಾಡಿಸಿದನೆಂದು ಹೇಳಿದೆ.

ಹಿಪ್ಪೊಕ್ರೇಟಿಸ್ ದೇಶಸಂಚಾರಿಯಾಗಿದ್ದುದರಿಂದ ಅಥೆನ್ಸನ್ನು ತನ್ನ ಆಧ್ಯಾತ್ಮಿಕ ಬೀಡನ್ನಾಗಿ ಮಾಡಿಕೊಂಡಿದ್ದನು. ಅವನು ತನ್ನ ವಿದ್ಯಾಭ್ಯಾಸವನ್ನು ಕಾಸ್ ದೇವಾಲಯಗಳಲ್ಲಿ ಪ್ರಾರಂಭ ಮಾಡಿದ್ದರೂ ಅನೇಕರ ಅಭಿಪ್ರಾಯದಲ್ಲಿ ನಿಜವಲ್ಲವೆಂದು ಹೇಳಲಾಗಿದೆ. ಕಾಸ್ ದೇವಾಲಯಗಳಲ್ಲಿರುವ ಶಿಲಾಕೆತ್ತನೆಗಳು ಅವನ ವೈದ್ಯ ವಿದ್ಯೆಗೆ ಆಧಾರವಾಗಿದ್ದರೂ ಸಹ ಅವನು ಕಾಸ್ ದೇವಾಲಯಗಳಲ್ಲಿ ವಿದ್ಯಾಭ್ಯಾಸ ಪ್ರಾರಂಭ ಮಾಡಲಿಲ್ಲವೆಂದು ತಿಳಿಸಿದ್ದಾರೆ. ಈ ಎಸ್ಕ್ಲಿಪಿಯಸ್ ದೇವಾಲಯಗಳು ಕ್ರಿ. ಪೂ. ೨೫೦ ರಲ್ಲೇ ಕೊನೆಗಂಡಿದ್ದರಿಂದ ಹಿಪ್ಪೊಕ್ರೇಟಿಸ್ ಕಾಲದಲ್ಲಿ ಅವು ಉಳಿದಿರುವುದಕ್ಕೆ ಕಾರಣವೇ ಇಲ್ಲವೆಂದು ಈ ಟೀಕೆಕಾರರ ಭಾವನೆ.

ಹಿಪ್ಪೊಕ್ರೇಟಿಸ್ ಪುರಾಣಕಥೆಯ ಸಾಧಾರಣ ಅಗೋಚರನೇನಲ್ಲ. ಆಗಿನ

ಕಾಲದಲ್ಲಿದ್ದ ಪ್ಲೇಟೊ ಅವನನ್ನು ವೈಯಕ್ತಿಕವಾಗಿ ಅರಿತಿದ್ದನು. ಅವನು ಹೇಳಿರುವಂತೆ, ಹಿಪ್ಪೊಕ್ರೇಟಿಸ್ ಅಸ್ಕ್ಲಿಪಿಯಸ್ ವಂಶಕ್ಕೆ ಸೇರಿದವನಾಗಿದ್ದ. ಕಾಸ್ ದ್ವೀಪದಲ್ಲಿ ವೈದ್ಯ ವೃತ್ತಿಯನ್ನು ಅವಲಂಬಿಸಿ ವೈದ್ಯ ವಿದ್ಯೆಯನ್ನು ಕಲಿಸುತ್ತಿದ್ದನು. ಅವನ



ಕಾಸ್ ದ್ವೀಪದಲ್ಲಿ ಹಿಪ್ಪೊಕ್ರೇಟಿಸ್ ತನ್ನ ಬೆಂಬಲಿಗರಿಗೆ
ಬೋಧಿಸುತ್ತಿದ್ದ ಮರದಡಿ ಸ್ಥಳ

ಹೆಸರಿನಲ್ಲಿರುವ ಗ್ರಂಥಗಳನ್ನೆಲ್ಲಾ ಅವನೇ ಬರೆದನೆಂಬುವುದಕ್ಕೆ ಆಧಾರವಿಲ್ಲ. ಅವನ ಪೂರ್ವೀಕರು ಕೆಲವನ್ನು ಬರೆದಿರಬಹುದೆಂದು ಊಹೆ ಇದೆ. ಹಿಪ್ಪೊಕ್ರೇಟಿಸ್ಸಿನ ಖ್ಯಾತಿ ಅಲೆಗ್ಸಾಂಡ್ರಿಯಾದ ಪುಸ್ತಕ ಭಂಡಾರದಲ್ಲಿದ್ದ ಅವನ ಗ್ರಂಥಗಳನ್ನೆಲ್ಲಾ ಸಂಗ್ರಹಿಸಿದ ಮೇಲೆ ತಿಳಿದು ಬಂತು. ಒಂದು ವೇಳೆ ಈ ಪುಸ್ತಕ ಭಂಡಾರ ನಾಶವಾದರೂ, ಹಿಪ್ಪೊಕ್ರೇಟಿಸ್ಸಿನ ಗ್ರಂಥಗಳು ಹಾಳಾಗದಿರಲೆಂದು ಅನೇಕ ಪ್ರತಿಗಳನ್ನು ಬರೆಯಿಸಿ ನಾನಾ ಕಡೆಗಳಲ್ಲಿ ಇರಿಸಿದರು. ಕೆಲವು ಶತಮಾನಗಳಾದ ಮೇಲೆ ಈ ಪ್ರತಿಗಳನ್ನೇ ಆಧಾರವಾಗಿಟ್ಟುಕೊಂಡು ಅನೇಕ ವಿಜ್ಞಾನಿಗಳು ಅನೇಕ ಭಾಷೆಗಳಿಗೆ ಭಾಷಾಂತರ ಮಾಡಿದ್ದಾರೆ. ಫೇಬಿಯಸ್ ಕಾಲ್ವಿಯಸ್ ಲ್ಯಾಟಿನ್ ಭಾಷೆಗೆ ಭಾಷಾಂತರ ಮಾಡಿ ಅಚ್ಚು ಹಾಕಿಸಿ, ೧೫೨೫ರಲ್ಲಿ ರೋಮ್ ಪಟ್ಟಣದಲ್ಲಿ ಪ್ರಕಟ ಮಾಡಿದನು. ಮುಂದಿನ ವರ್ಷ ವೆನಿಸ್ಸಿನಲ್ಲಿ ಆಲ್ಡಸ್ ಎಂಬುವನಿಂದ ಗ್ರೀಕ್ ಭಾಷೆಯಲ್ಲಿ ಮುದ್ರಣವಾಯಿತು. ಅಲ್ಲಿಂದೀಚೆಗೆ ಅನೇಕರು ಅನೇಕ ಭಾಷೆಗಳಲ್ಲಿ ಪ್ರಕಟಿಸಿದ್ದಾರೆ. ಜರ್ಮನ್ ಭಾಷೆಯಲ್ಲೂ, ಫ್ರೆಂಚ್ ಭಾಷೆಯಲ್ಲೂ, ಇಂಗ್ಲಿಷ್ ಭಾಷೆಯಲ್ಲೂ ಪ್ರಕಟವಾಗಿರುವ ಪ್ರತಿಗಳು ಪ್ರಮಾಣೀಕೃತವಾಗಿದೆ.

ಹಿಪ್ಪೊಕ್ರೇಟಿಸ್ಸಿನ ಪ್ರಮಾಣ ವಚನಗಳು ಈಗಲೂ, ಇನ್ನು ಮುಂದೆಯೂ

ವೈದ್ಯಪ್ರಪಂಚದಲ್ಲಿ ಪ್ರಭಾವ ಹೊಂದಿರುವುದರಲ್ಲಿ ಯಾವ ಅನುಮಾನವೂ ಇಲ್ಲ. ಈ ಪ್ರಮಾಣ ವಚನಗಳು ಬಹಳ ಹಳೆಯವು. ಕ್ರಿ.ಪೂ.೪೦೦ರಲ್ಲೇ ಜಗತ್ತಿಗೆ ಗೊತ್ತಿದ್ದವು. ಹಿಪ್ಪೊಕ್ರೇಟಿಸ್ ಕಾಲದಲ್ಲೂ ಜಾರಿಯಲ್ಲಿದ್ದವು. ಆದರೂ ಇವು ಪೈತಾಗೊರಸ್ಸಿನಿಂದ ಬಂದಿರಬಹುದೆಂದು ಎಡೆಲ್‌ಸ್ಟೀನ್ ಊಹಿಸಿದ್ದಾನೆ. ಈ ವಿವಾದವನ್ನು ವಿವರಿಸುತ್ತ ರಾಲ್ಫ್‌ಮೇಜರ್ ತನ್ನ ವೈದ್ಯಶಾಸ್ತ್ರ ಚರಿತ್ರೆಯಲ್ಲಿ "ಗ್ರಂಥಕರ್ತನ ಹಾಗೂ ಪ್ರಮಾಣ ವಚನ ಸ್ವೀಕಾರದ ದಿನದ ವಾದವಿವಾದಗಳು ಹೇಗೇ ಇದ್ದರೂ ಹಿಪ್ಪೊಕ್ರೇಟಿಸ್ಸನ ಗ್ರಂಥ ಸಂಗ್ರಹಗಳ ಭಾವನೆ ಹಾಗೂ ಪ್ರಭಾವ ಈ ವಚನಗಳಲ್ಲೂ ಇಂಗಿತವಾಗಿವೆ; ಅಲ್ಲದೆ ಈ ರೀತಿಯ ಹೇಳಿಕೆಗಳು ಹಿಪ್ಪೊಕ್ರೇಟಿಸ್ಸಿನ ಇತರ ಗ್ರಂಥಗಳಲ್ಲಿ ತುಂಬಿ ತುಳುಕುತ್ತಿವೆ" ಎಂದು ತಿಳಿಸಿದ್ದಾನೆ.

ತತ್ವಶಾಸ್ತ್ರದಲ್ಲಿ ಅಡಗಿದ್ದ ವೈದ್ಯಶಾಸ್ತ್ರವನ್ನು ಹಿಪ್ಪೊಕ್ರೇಟಿಸ್ ಬೇರೆಬೇರೆ ಮಾಡಿದನು. ಇವನಿಗೆ ಮುಂಚೆ, ತತ್ವಶಾಸ್ತ್ರಜ್ಞರೇ ವೈದ್ಯಶಾಸ್ತ್ರವನ್ನು ಅಭ್ಯಾಸಮಾಡು ತ್ತಿದ್ದರು. ಉ : ಎಂಪೆಡೊಕ್ಲಿಸ್, ಪೈತಾಗೊರಸ್. ಬೇರೆ ಬೇರೆ ಆಗುವಾಗ ಜೋಯಿಸ ರನ್ನು, ಯಕ್ಷಿಣಿ ಮುಂತಾದ ಮಾಯಾಮಾಟಗಳನ್ನು, ಯಂತ್ರಮಂತ್ರಗಳನ್ನು ಹಿಪ್ಪೊಕ್ರೇಟಿಸ್ ಖಂಡಿಸಿದನು. ಯಂತ್ರಮಂತ್ರಗಳಿಂದ ಅಪಸ್ಮಾರ ಗುಣವಾಗುತ್ತ ದೆಂಬುದನ್ನೂ ಖಂಡಿಸಿದನು. ರೋಗಕ್ಕೆ ಮನುಷ್ಯ ಕಾರಣನೇ ಹೊರತು ದೇವರಲ್ಲ ವೆಂದು ಸಾರಿದನು ಅಂದ ಮಾತ್ರಕ್ಕೆ ಅವನಿಗೆ ದೇವರ ಮೇಲೆ ನಂಬಿಕೆ ಇರಲಿಲ್ಲ ವೆಂದು ಅರ್ಥವಲ್ಲ.

ವೈದ್ಯ ತತ್ತ್ವಗಳು

ಆದರೆ ಪೈತಾಗೊರಸ್ಸಿನ ನಾಲ್ಕು ದೋಷಗಳ ಸೂತ್ರವನ್ನು ಹಿಪ್ಪೊಕ್ರೇಟಿಸ್ ನಂಬಿದ್ದನು. ರಕ್ತ, ಕಫ, ಹಳದಿ ಪಿತ್ತ ಮತ್ತು ಕಪ್ಪು ಪಿತ್ತಗಳ ವ್ಯತ್ಯಾಸದಿಂದ ರೋಗ ಬರುತ್ತದೆಂದು ನಂಬಿದ್ದನು. ಇವುಗಳ ವ್ಯತ್ಯಾಸವಿಲ್ಲದಿದ್ದಾಗ ಮನುಷ್ಯ ಆರೋಗ್ಯ ವಾಗಿರುವನೆಂದು ಊಹಿಸಲಾಗಿತ್ತು. ಶರೀರದೊಳಗಿನ ಈ ದೋಷಗಳ ವ್ಯತ್ಯಾಸ ದಿಂದ ರೋಗ ಬರುವ ಹಾಗೆ ಹೊರಗಿನ ಪರಿಸ್ಥಿತಿಗಳು ಬದಲಾಯಿಸಿದರೂ ರೋಗ ಬರಬಹುದೆಂದು ತಿಳಿಸಿದ್ದನು. ಆದ್ದರಿಂದ ಹೊರಗಿನ ಪರಿಸ್ಥಿತಿಗಳಾದ, ಒಣ ಹವೆ, ಶೀತ, ಬಿಸಿ ಮತ್ತು ತೇವಗಳ ಹೆಚ್ಚಳದಿಂದಲೂ, ತಗ್ಗುವುದರಿಂದಲೂ ದೋಷಗಳ ವ್ಯತ್ಯಾಸ ಆಗಿ ರೋಗ ಉಂಟಾಗುತ್ತದೆಂದು ನಂಬಿದ್ದನು. ಅವನಿಗೆ ಋತುಗಳಲ್ಲಿ ನಕ್ಷತ್ರಗಳಲ್ಲಿ ನಂಬಿಕೆಯಿದ್ದರೂ, ಜೋತಿಷ್ಯದಲ್ಲಿ ನಂಬಿಕೆ ಇರಲಿಲ್ಲ. ರೋಗದ ಮುನ್ನರಿವಿಗೂ ನಕ್ಷತ್ರ ಬಲಕ್ಕೂ ಯಾವ ಸಂಬಂಧವೂ ಇಲ್ಲವೆಂದು ಹೇಳಿದ್ದನು.

ದೋಷಗಳ ವ್ಯತ್ಯಾಸವನ್ನು ಸರಿಪಡಿಸಿ ರೋಗ ಗುಣಪಡಿಸಲು ಪ್ರಕೃತಿಯೇ ಕಾರಣವೆಂದು ತಿಳಿದಿದ್ದನು. ಈ ವ್ಯವಸ್ಥೆಗೆ ಪೆಪ್ಸಿಸ್ ಎಂದು ಕರೆಯಲಾಗಿತ್ತು. ಶರೀರದ ಶಾಖದಿಂದ ದೋಷಗಳು ಒಂದು ಹದಕ್ಕೆ ಬಂದು, ಹೆಚ್ಚಾಗಿರುವ ದೋಷ

ವಿಸರ್ಜನೆಯಾಗುವುದರಿಂದ ರೋಗ ಗುಣವಾಗುತ್ತದೆಂದು ನಂಬಿದ್ದನು. ಹದವಾಗುವ ರಚನೆಗೆ ಯೂಕ್ರೇಸಿಯವೆಂದೂ, ದೋಷ ವಿಸರ್ಜನೆಗೆ ಕ್ರೈಸಿಸ್ ಎಂದೂ ಹೆಸರಿಡಲಾಗಿತ್ತು. ಕ್ರೈಸಿಸ್ ಉಂಟಾಗುವ ವೇಳೆಯಲ್ಲಿ ಅಪಾಯ ಸಂಭವಿಸಬಹುದೆಂದು ರೋಗಿಯನ್ನು ಜಾಗರೂಕತೆಯಿಂದ ನೋಡಿಕೊಳ್ಳಬೇಕೆಂದೂ ತಿಳಿಸಿದ್ದನು. ಗ್ಯಾಲೆನ್ ಕೂಡ ಈ ತತ್ವವನ್ನು ನಂಬಿದ್ದ. ತೀವ್ರ ರೋಗಗಳಲ್ಲಿ ಕ್ರೈಸಿಸ್ ಬಂದರೆ, ಬೇರೂರಿದ ರೋಗಗಳಲ್ಲಿ ಲೈಸಿಸ್ ಉಂಟಾಗಿ ರೋಗ ಗುಣವಾಗುತ್ತಿತ್ತೆಂದೂ ತಿಳಿಸಿದ್ದನು. ಈ ಕಲ್ಪನೆಗಳು ಈಗಲೂ ರೂಢಿಯಲ್ಲಿವೆ. ರೋಗ ಶರೀರದ ಒಂದು ಕಡೆಯಿಂದ ಮತ್ತೊಂದು ಕಡೆಗೆ ದಾಟುವ ಗುಣವೂ ಅವನಿಗೆ ಗೊತ್ತಿತ್ತು. ಇದಕ್ಕೆ ಅಪೊಸ್ಟೇಸಿಸ್ ಎಂದು ಹೆಸರಿಟ್ಟಿದ್ದನು. ಈಗ ಇದನ್ನು ಮೆಟಾಸ್ಟೇಸಿಸ್ ಎಂದು ಕರೆಯುತ್ತೇವೆ. ಆದ್ದರಿಂದ ಹಿಪ್ಪೊಕ್ರೇಟಿಸ್ಸಿನ ತತ್ತ್ವದ ಪ್ರಕಾರ ರೋಗ ಗುಣವಾಗಲು ಪ್ರಕೃತಿಯೇ ಕಾರಣವೆಂದೂ, ವೈದ್ಯ ಕೇವಲ ಸಹಾಯಕನೆಂದೂ ತಿಳಿದುಬರುತ್ತದೆ. ಈ ತತ್ತ್ವ ಹಿಪ್ಪೊಕ್ರೇಟಿಸ್ಸಿನ ವೈದ್ಯಶಾಸ್ತ್ರದ ತಳಹದಿಯಾಗಿತ್ತು. ಅವನು ಬರೆದಿರುವ ಲೇಖನ



ಹಿಪ್ಪೊಕ್ರೇಟಿಸ್ ರೋಗಿಯನ್ನು ಪರೀಕ್ಷಿಸುತ್ತಿರುವುದು.

ಗಳಲ್ಲಿ ರೋಗಲಕ್ಷಣಗಳೇ ಪ್ರಾಮುಖ್ಯವಾಗಿದ್ದವು. ಇವು ಹಿಂದಿನ ವಿಜ್ಞಾನಿಗಳಲ್ಲಿ ಮಾತ್ರವಲ್ಲದೆ ಈಗಿನ ವಿಜ್ಞಾನಿಗಳಲ್ಲೂ ಮೆಚ್ಚಿಗೆ ಪಡೆದಿವೆ.

ಅಂಗರಚನೆ

ಅಂಗರಚನೆಶಾಸ್ತ್ರವನ್ನು ಹಿಪ್ಪೊಕ್ರೇಟಿಸ್ ಅಷ್ಟು ವಿಶದವಾಗಿ ಬರೆದಿಲ್ಲ. ಉಸಿ ನಾಳ ಗಂಟಲಿನಲ್ಲಿ ಪ್ರಾರಂಭವಾಗಿ ಶ್ವಾಸಕೋಶದಲ್ಲಿ ನಿಲ್ಲುತ್ತದೆಂದೂ, ಶ್ವಾಸಕೋಶ

ಗಳ ಮಧ್ಯೆ ಹೃದಯವಿದೆಯೆಂದೂ, ಹೃದಯದಿಂದ ರಕ್ತನಾಳಗಳ ಮೂಲಕ ರಕ್ತ ಶರೀರದ ಹೊರಭಾಗಕ್ಕೆ ಚಲಿಸುತ್ತದೆಂದೂ, ಅನ್ನನಾಳ, ಅನ್ನಕೋಶ, ಕರುಳುಗಳ ಮೂಲಕ ಆಹಾರ ಹಾದು ಗುದನಾಳದಿಂದ ಹೊರಗೆ ಬರುತ್ತದೆಂದೂ, ಈಲಿ ಮತ್ತು ಮೂತ್ರಪಿಂಡಗಳಿಗೆ ರಕ್ತಚಲದೆಯಿದೆಯೆಂದೂ ಹೇಳಿದ್ದನು. ಕಂಕಾಳದಲ್ಲಿ ನೀಳ ಮತ್ತು ತುಂಡು ಮೂಳೆಗಳಿವೆಯೆಂದು ತಿಳಿಸಿದ್ದನು. ತಲೆಬುರುಡೆಯನ್ನು ವಿವರಿಸುತ್ತ T ಮತ್ತು X ಆಕಾರದ ಸೇರುವೆಗಳಿವೆಯೆಂದೂ, ಮಿದುಳಿನ ಮಧ್ಯೆ ಪೊರೆಯಿದೆ ಯೆಂದೂ ತಿಳಿಸಿದ್ದನು. ಅವನು ಅಂಗವಿಚ್ಛೇದನ ಮಾಡಿದುದಕ್ಕೆ ಯಾವ ಆಧಾರವೂ ಇಲ್ಲ. ಆದರೂ ಅವನು ಮನುಷ್ಯನ ಅಂಗರಚನೆಶಾಸ್ತ್ರವನ್ನು ಸಾಕಷ್ಟು ಅರಿತಿದ್ದನು. ಬಹುಶಃ ಪ್ರಾಣಿಗಳನ್ನು ಆಹುತಿ ಕೊಡುತ್ತಿರುವಾಗ ನೋಡಿ ಕಲಿತಿರಬೇಕು. ಇಲ್ಲದಿದ್ದರೆ ರಣರಂಗದಲ್ಲಿ ಮಡಿದವರ ದೇಹ ನೋಡಿ ಕಲಿತಿರಬೇಕೆಂದು ಹೇಳಲಾಗಿದೆ.

ಜನನ, ಶಿಶುಪಾಲನೆ, ಸಂತಾನಾಭಿವೃದ್ಧಿ ಮುಂತಾದ ವಿಚಾರಗಳನ್ನೂ ಹಿಪ್ಪೊಕ್ರೇಟಿಸ್ ತನ್ನ ಗ್ರಂಥಗಳಲ್ಲಿ ಬರೆದಿದ್ದಾನೆ. ಗಂಡು ಮತ್ತು ಹೆಣ್ಣು ಬೀಜ ಗಳೆರಡೂ ಸೇರಿ ಗರ್ಭ ಉಂಟಾಗುತ್ತದೆಂದೂ, ಗರ್ಭಕೋಶದಲ್ಲಿ ಭ್ರೂಣ ಬೆಳೆಯಲು ಹೊಕ್ಕುಳು ನಾಳದ ಮೂಲಕ ಭ್ರೂಣಕ್ಕೆ ರಕ್ತ ಹೋಗುತ್ತದೆಂದೂ, ಪೊರೆಯಂತಿರುವ ಹೊದಿಕೆ ಭ್ರೂಣಕ್ಕೆ ಇರುವುದೆಂದೂ, ಪೊರೆ ಒಡೆದ ಮೇಲೆ ಜನನವಾಗುತ್ತೆಂದೂ ಹೇಳಿದ್ದಾನೆ.

ಔಷಧವೈದ್ಯಶಾಸ್ತ್ರ

ಹೃದಯವೇ ಜ್ಞಾನೋದಯಕ್ಕೆ ಕಾರಣವಾದ ಅಂಗವೆಂಬ ಇವನ ಪೂರ್ವೀಕರ ನಂಬಿಕೆಯನ್ನು ತಳ್ಳಿಹಾಕಿ ಮಿದುಳೇ ಕಾರಣವೆಂದು ಹೇಳಿದ್ದಾನೆ. ಈ ಅಭಿಪ್ರಾಯ ವನ್ನು ಅರಿಸ್ಟಾಟಲ್ ಕೂಡ ಸಮರ್ಥಿಸಿದ್ದನು. ಔಷಧವೈದ್ಯ, ಶಸ್ತ್ರವೈದ್ಯಗಳಲ್ಲಿ ಹಿಪ್ಪೊಕ್ರೇಟಿಸ್ನಿಗಿದ್ದಷ್ಟು ತಿಳಿವಳಿಕೆ ಆಗಿನ ಕಾಲದಲ್ಲಿ ಮತ್ತೆ ಯಾರಿಗೂ ಇರಲಿಲ್ಲ.ಆನು ವಂಶೀಯತೆ, ದೇಹ ಪ್ರಕೃತಿ, ಋತು ಮತ್ತು ಹವಮಾನಗಳ ಪರಿಣಾಮ, ಪ್ರಕೃತಿಯ ಉಪಶಮನ ಇವಲ್ಲೆಲ್ಲಾ ಅವನು ಆದರ್ಶಮಾರ್ಗಿಯಾಗಿದ್ದನು. ಆದ್ದರಿಂದಲೇ, ಅವನನ್ನು ಆಧುನಿಕ ವೈದ್ಯಶಾಸ್ತ್ರದ ಪಿತಾಮಹ ಎಂದು ಕರೆಯುವುದು. ಅಪಸ್ಮಾರ ರೋಗವನ್ನು ವಿವರಿಸುತ್ತಾ, ಇದು ವಂಶಪಾರಂಪರ್ಯವಾಗಿ ಬರುತ್ತದೆಂದೂ, ತಂದೆ ತಾಯಿಗಳು ಈ ರೋಗದಿಂದ ನರಳಿದ್ದರೆ ಮಗು ಕೂಡ ನರಳುತ್ತದೆಂದೂ ಹೇಳಿರು ವನು. ರೋಗ ಬೆಳೆಯಲು ದೇಹ ಪ್ರಕೃತಿ ಅನುಕೂಲಿಸುತ್ತೆಂದು ತಿಳಿಸುತ್ತ ಕ್ಷಯ ರೋಗಿಯ ದೇಹ ಪ್ರಕೃತಿಯನ್ನು ಈಗಿನ ಮಟ್ಟದಲ್ಲಿ ವಿವರಿಸಿದ್ದನು. ಋತು ಮತ್ತು ಹವಮಾನಗಳ ವಿಷಯ ಚರ್ಚಿಸುತ್ತ ದೇಹ ಬೆಳವಣಿಗೆಯಲ್ಲಿ ಅವುಗಳ ಪ್ರಭಾವವನ್ನು ವಿವರಿಸಿದನು. ಪುಪ್ಪುಸುರಿತ, ಅಳ್ಳೆಪರೆಯುರಿತ, ಮಲೇರಿಯ, ಆಮಶಂಕೆ ಮುಂತಾದ ರೋಗಗಳು ಬೇಸಿಗೆ ಕಾಲದಲ್ಲಿ ಹೆಚ್ಚುತ್ತವೆಂದು ತಿಳಿಸಿದ್ದನು. ಕ್ಷಯ,

ವಿಷಮಶೀತ ಜ್ವರ ಇತ್ಯಾದಿ ರೋಗಗಳ ಲಕ್ಷಣಗಳನ್ನೆಲ್ಲಾ ವಿವರಿಸಿದನು. ಇರುಳು ಗಣ್ಣು ಮತ್ತು ಅದನ್ನು ಗುಣಪಡಿಸುವ ವಿಧಾನವನ್ನು ಅರಿತಿದ್ದನು. ದನದ ಹಸಿ ಈಲಿ ಮಾಂಸವನ್ನು ಜೇನುತುಪ್ಪದಲ್ಲಿ ನೆನೆಸಿಕೊಟ್ಟರೆ ಇರುಳುಗಣ್ಣು ಗುಣವಾಗುತ್ತ ದೆಂದು ಹೇಳಿದ್ದನು. ಹೀಗೆ ೨೦೦೦ ವರ್ಷಗಳ ಹಿಂದೆ ಹಿಪ್ಪೊಕ್ರೇಟಿಸ್ ಬರೆದ ಲೇಖನಗಳ ವಿವರಗಳು ಈಗಿನ ಕಾಲದವನ್ನು ಬಹುಪಟ್ಟಿಗೆ ಹೋಲುತ್ತವೆ. ಗ್ಯಾರಿ ಸನ್ ಹೇಳಿರುವಂತೆ, ಅವನು ಬರೆದಿರುವ ರೋಗವಿವರಣೆಗಳನ್ನು ಈಗಿನ ಕಾಲದ ಪಠ್ಯಪುಸ್ತಕಗಳಲ್ಲೂ ಸೇರಿಸಬಹುದು. ಹಿಪ್ಪೋಕ್ರೇಟಿಸ್ಸಿನ ಹೆಸರಿನಲ್ಲಿ ಅನೇಕ ರೋಗ ಲಕ್ಷಣಗಳು ಈಗಲೂ ಉಪಯೋಗದಲ್ಲಿವೆ : ಹಿಪ್ಪೋಕ್ರೇಟಿಸ್ ಮುಖಚಹರೆ, ಹಿಪ್ಪೊಕ್ರೇಟಿಸ್ ಬೆರಳು, ಹಿಪ್ಪೊಕ್ರೇಟಿಸ್ ತುಳುಕು ಶಬ್ದ. ಲೆನೆಕ್ ತಿಳಿಸಿರುವಂತೆ, ರೋಗ ತಿಳಿಯಲು, ಎದೆಮೇಲೆ ಕಿವಿಯಿಟ್ಟು ಆಲಿಸುವ ರೂಢಿಯೂ ಅವನಿಗಿತ್ತು. ಪುಪ್ಪುಸದುಬ್ಬರದಲ್ಲಿ ಕೇಳಿಬರುವ 'ರಾಲ್' ಶಬ್ದ ಮತ್ತು ಅಳ್ಳೆಪರೆಯುರಿತದಲ್ಲಿ ಕೇಳಿಬರುವ 'ಉಜ್ಜುವ' ಶಬ್ದ ಅವನಿಗೆ ತಿಳಿದಿದ್ದವು. ಶಸ್ತ್ರಕ್ರಿಯೆ ನಡೆಸುವಾಗ ರೋಗಿ ಇರಬೇಕಾದ, ವೈದ್ಯನ, ದೀಪಗಳ ಸ್ಥಾನಗಳನ್ನೆಲ್ಲಾ ಹಿಪ್ಪೊಕೇಟಿಸ್ ತನ್ನ ಗ್ರಂಥದಲ್ಲಿ ವಿವರಿಸಿದ್ದನು. ಗಾಯ ಹೊಲಿಯುವ ವಿಧಾನ, ದಾರ ಗಂಟುಹಾಕುವ ವಿಧಾನ, ಕಟ್ಟುಪಟ್ಟಿ, ನೀರಿನ ಶಾಖ, ಕೈ ತೊಳೆಯುವ ರೀತಿಗಳನ್ನೂ ವಿವರಿಸಿದನು. ತಲೆ ಮೂಳೆಮುರಿತ ಐದು ರೀತಿ ಇದ್ದವೆಂದೂ, ಅಗತ್ಯವಿದ್ದಲ್ಲಿ ತಲೆ ಬುರುಡೆಯಲ್ಲಿ ತೂತು ಕೊರೆಯಬೇಕೆಂದೂ ತಿಳಿಸಿದ್ದನು. ದವಡೆ ಮೂಳೆ ಮುರಿದಿದ್ದರೆ ಚಿನ್ನದ ತಂತಿಯಿಂದ ಹೊಲಿಯಬೇಕೆಂದು ಹೇಳಿದ್ದನು.

ಶಸ್ತ್ರವೈದ್ಯ

ಗಂಟಲನೋವಿಗೆ ಔಷಧ ಗೊತ್ತಿತ್ತು. ಉಸಿರುಕಟ್ಟಿ, ಉಸಿರಾಡಲು ತೊಂದರೆ ಇದ್ದಾಗ ಗಂಟಲ ಮೂಲಕ ಶ್ವಾಸಕೋಶಕ್ಕೆ ಉಸಿರ್ನಳಿಕೆ ತೂರಿಸಬೇಕೆಂದೂ ಅದ ರಿಂದ ಉಸಿರಾಟ ಉತ್ತಮವಾಗುವುದೆಂದೂ ಹೇಳಿದ್ದನು. ಹೊಸ ಗಾಯದ ಅಂಚು ಗಳು ಸೇರಿ ಪ್ರಥಮ ಯತ್ನದಿಂದಲೇ ಮಾಯುವುದೆಂದೂ ತಿಳಿಸಿದ್ದ. ತಲೆಯ ಗಾಯ ಗಳಿಗೆ ನೀರು ಸೋಕಕೂಡದೆಂದೂ, ಒಣಗಿದಂತಿರಬೇಕೆಂದೂ ಹೇಳಿದ್ದನು. ಮೊಳೆ ರೋಗವನ್ನು ಕಾದ ಗುಳದಿಂದ ಸುಡಬೇಕೆಂದೂ, ಇಲ್ಲದಿದ್ದರೆ ಕತ್ತರಿಯಿಂದ ಕತ್ತರಿಸ ಬೇಕೆಂದು ತಿಳಿಸಿದ್ದನು. ಕೆಲವು ವೇಳೆ ಮೊಳೆ ಒಳಗಿದ್ದಾಗ, ಒಳಗನ್ನಡಿಯಿಂದ ನೋಡಬಹುದೆಂದೂ, ಅದಕ್ಕೆ ತಕ್ಕ ಅಡಿಮದ್ದು ಇಡಬಹುದೆಂದೂ ಹೇಳಿದ್ದನು.

ಮೂಳೆ ಮುರಿತ ಮತ್ತು ಕೀಲುಗಳ ಸ್ಥಾನಪಲ್ಲಟವಾದಾಗ, ಮೂಳೆಗಳನ್ನು ಎಳೆದು ಕಟ್ಟಬೇಕೆಂದೂ, ಅದಕ್ಕೆ ತಕ್ಕ ಉದ್ದವಾದ ಕಾಲ್ಮಣೆ ಉಪಯೋಗಿಸ ಬೇಕೆಂದೂ, ಬೆನ್ನುಮೂಳೆಗೆ ಕ್ಷಯ ತಗುಲಿದ್ದಾಗ, ಬೆನ್ನು ಗೂನಾಗುವುದೆಂದೂ,ಆಗ ಶ್ವಾಸಕೋಶದಲ್ಲಿ ಸಾವೆತೆರ ಗಂಟುಗಳಿರಬಹುದೆಂದೂ, ಹಾಗೂ ಬೆನ್ನುಮೂಳೆ ಪಕ್ಕ

ದಲ್ಲಿ ಕೀವು ಸೇರಿರಬಹುದೆಂದೂ ಹೇಳಿದ್ದ. ಸಂಯುಕ್ತ ಮೂಳೆಮುರಿತ ಬೇಗನೆ ಗುಣವಾಗುವುದಿಲ್ಲವೆಂದೂ, ಮೂಳೆಗಳನ್ನು ಎಳೆದು ಕಟ್ಟಿದ ಮೇಲೆ ಕಟುಕರೋಹಿಣಿಯನ್ನು ಉಪಯೋಗಿಸಬೇಕೆಂದೂ ಹೇಳಿದನು. ಸೊಟ್ಟ ಮೂಳೆಗಳನ್ನು ಸರಿಪಡಿಸಿ ತಕ್ಕರೀತಿಯಲ್ಲಿ ಜೋಡಿಸಿ, ಪಟ್ಟಿ ಕಟ್ಟಬೇಕೆಂದೂ ತಿಳಿಸಿದ್ದನು.

ಮಿದುಳುಬಳ್ಳಿಗೆ ಏಟು ಬಿದ್ದು ನೋವಾಗಿದ್ದರೆ ಎರಡು ತೊಡೆ ಕಾಲುಗಳಿಗೆ ಲಕ್ವಹೊಡೆದು ಉಪಯೋಗಕ್ಕೆ ಬಾರದಂತಾಗುವುದೆಂದೂ, ಮುಟ್ಟಿದರೆ ಗೊತ್ತಾಗುವುದಿಲ್ಲವೆಂದೂ, ಜಲಮಲ ಕಟ್ಟುವುವೆಂದೂ, ರೋಗ ಬಲಿತ ಮೇಲೆ ಜಲಮಲ ತಾವಾಗಿಯೇ ಹೊರಹೋಗುವುವೆಂದೂ ತಿಳಿಸಿದ್ದನು. ಮಿದುಳಿನ ಬಲ ಭಾಗದಲ್ಲಿ ಗಾಯವಾಗಿದ್ದರೆ, ಶರೀರದ ಎಡ ಪಾರ್ಶ್ವಕ್ಕೆ ಲಕ್ವ ತಗಲುವುದೆಂದೂ, ಎಡ ಭಾಗಕ್ಕೆ ಏಟು ಬಿದ್ದಿದ್ದರೆ ಬಲ ಭಾಗ ಸೋಲುವುದೆಂದೂ ತಿಳಿಸಿದ್ದಾನೆ. ಹಿಪ್ಪೊಕ್ರೇಟಿಸ್ ಇಂತಹ ರೋಗಗಳ ಲಕ್ಷಣಗಳನ್ನು ಅರಿತಿದ್ದರೂ, ೧೯೦೦ ವರ್ಷಗಳಾದ ಮೇಲೆ ಪ್ಯಾರಸೆಲ್ಸಸ್ ಕಂಡುಹಿಡಿದನೆಂದು ಅವನಿಗೆ ಪ್ರಶಸ್ತಿ ಕೊಡಲಾಗಿದೆ.

ಹಿಪ್ಪೊಕ್ರೇಟಿಸ್ಸಿನ ಸೂತ್ರಗಳು

ಹಿಪ್ಪೊಕ್ರೇಟಿಸ್ಸಿನ ೪೧೨ ಸೂತ್ರಗಳಲ್ಲಿ ಮೊದಲನೇ ಸೂತ್ರ ಹೀಗಿತ್ತು: 'ಜೀವನ ಮೊಟಕು, ಕಲೆ ದೀರ್ಘ, ಅನುಭವ ಮೋಸಕರ, ತೀರ್ಪು ಕಷ್ಟ'. ಉಳಿದ ಸೂತ್ರಗಳಲ್ಲಿ ರೋಗಗಳ ಕಾರಣ, ನಿದಾನ, ಲಕ್ಷಣ, ಮುನ್ನರಿವು ಮತ್ತು ಚಿಕಿತ್ಸೆಗಳ ವಿವರಗಳಿವೆ. ರೋಗದ ಮುನ್ನರಿವಿನ ವಿವರಗಳು ಈಗಲೂ ಅನೇಕರನ್ನು ದಿಗ್ಭ್ರಮೆಗೊಳಿಸಿವೆ. ರೋಗಿಗೆ ರೋಗದ ಮುನ್ನರಿವನ್ನು ತಿಳಿಯಲು ಆಸಕ್ತಿ ಇದೆಯೇ ಹೊರತು, ರೋಗ ನಿದಾನದಲ್ಲಿಲ್ಲವೆಂದು ಹೇಳಿದ್ದನು. ಹಲ್ಲುಕಡಿತ, ತೆರೆದ ಕಣ್ಣು, ತೆರೆದ ಬಾಯಿ, ಬುದ್ಧಿವಿಕಲ್ಪ,ಬಟ್ಟೆ ತರಿಯುವುದು, ಕೈ ಅದಿರಾಟ ಇವು ಕೆಟ್ಟ ಚಿಹ್ನೆಗಳೆಂದೂ, ಮೂತ್ರ ಬದಲಾವಣೆ ರೋಗನಿದಾನದಲ್ಲಿ ಸಹಾಯವಾಗುವುದಲ್ಲದೆ ಮುನ್ನರಿವನ್ನು ತಿಳಿಯಲು ಸಹಾಯವಾಗುತ್ತದೆಂದೂ, ಮೂತ್ರ ಕಪ್ಪಾಗಿದ್ದರೆ, ಹಳದಿ ಬಣ್ಣವಿದ್ದರೆ, ನೊರೆನೊರೆಯಾಗಿದ್ದರೆ ಕೆಟ್ಟದೆಂದೂ ಹೇಳಿದ್ದಾನೆ. ಈಗ ಮೂತ್ರ ಪರೀಕ್ಷೆಗೆ ಎಷ್ಟು ಪ್ರಾಧಾನ್ಯತೆ ಇದೆಯೋ ಅಷ್ಟೇ ಆಗಲೂ ಇತ್ತು. ಕನಸು ಕೂಡ ರೋಗದ ಮುನ್ನರಿವಿಗೂ ರೋಗನಿದಾನಕ್ಕೂ ಸಹಾಯವಾಗುತ್ತದೆಂದೂ, ಸೂರ್ಯ, ಚಂದ್ರ, ನಕ್ಷತ್ರಗಳ ಸಾಮಾನ್ಯ ಕೆಲಸ ಕನಸಿನಲ್ಲಿ ಬಿದ್ದರೆ ಒಳ್ಳೆಯದೆಂದೂ, ಅವಕ್ಕೆ ವಿರುದ್ಧವಾಗಿ ಕನಸು ಬಿದ್ದರೆ ಕೆಡಕೆಂದೂ, ಬಿಳಿ ಬಟ್ಟೆಯಲ್ಲಿ ಹೊದಿಸಿರುವ ಹೆಣ ಕಂಡರೆ ಒಳ್ಳೆಯದೆಂದೂ, ಕಪ್ಪು ಬಟ್ಟೆಯಲ್ಲಿ ಹೊದಿಸಿದ್ದರೆ ಕೆಟ್ಟದ್ದೆಂದೂ ನಂಬಿದ್ದನು.

ಹಿಪ್ಪೊಕ್ರೇಟಿಸ್ಸಿನ ಔಷಧವಸ್ತುಶಾಸ್ತ್ರ ಅಷ್ಟಾಗಿ ದೊಡ್ಡದಾಗಿರಲಿಲ್ಲ. ರೋಗಗಳು ಸ್ವಾಭಾವಿಕವಾಗಿಯೇ ಗುಣವಾಗುತ್ತವೆಂದು ನಂಬಿದ್ದರಿಂದ ಔಷಧಗಳನ್ನು ಅಷ್ಟಾಗಿ ಉಪಯೋಗಿಸುತ್ತಿರಲಿಲ್ಲ. ರಕ್ತ ತೆಗೆಯುವುದರಲ್ಲೂ, ಬಟ್ಟೆ ಬಟ್ಟಲು

ಹಾಕುವುದರಲ್ಲೂ ಪ್ರವೀಣನಾಗಿದ್ದನು. ೨೦೦೦ ವರ್ಷಗಳಾದರೂ ಈ ಪದ್ಧತಿಗಳು ಈಗಲೂ ಉಪಯೋಗದಲ್ಲಿವೆ. ಇವನ ಪ್ರಕೃತಿ ನೀತಿ ಬೋಧನೆಗಳನ್ನು ನಡೆಸಿಕೊಂಡು ಬಂದಿದ್ದರೆ ಹಲವು ಅಪಾಯಕರ ಶಸ್ತ್ರಚಿಕಿತ್ಸೆಗಳಿಂದಲೂ ಮತ್ತು ಔಷಧಗಳಿಂದಲೂ ರೋಗಿಗಳು ಪಾರಾಗುತ್ತಿದ್ದರು.

ಗ್ರೀಸ್ ಕ್ಷೀಣಕ್ಕೆ ಕಾರಣ

ಹಿಪ್ಪೊಕ್ರೇಟಿಸ್ಸಿನ ಕಾಲದಲ್ಲಿ ಗ್ರೀಸು ಅತ್ಯಂತ ವೈಭವದಲ್ಲಿತ್ತು. ಆಗ ಅಥೆನ್ಸ್ ಅದರ ರಾಜಧಾನಿಯಾಗಿತ್ತು. ಸೈನಿಕರ ಶೌರ್ಯ, ನೌಕಾದಳದ ಯಶಸ್ಸು, ವಿಜ್ಞಾನದ ಮತ್ತು ಸಂಸ್ಕೃತಿಗಳ ಪ್ರಭಾವ ಅಥೆನ್ಸ್ ಸಾಮ್ರಾಜ್ಯದಲ್ಲಿ ಮೊಳಗುತ್ತಿದ್ದವು.

ಸ್ಪಾರ್ಟನರ ಜತೆ ಯುದ್ಧ

ಹೀಗಿದ್ದ ರಾಜ್ಯ ಕ್ರಿ. ಪೂ. ೪೩೧–೪೦೪ರ ತನಕ ನಡೆದ ಪೆಲೊಪೊನ್ನೆಷಿಯ ಯುದ್ಧದಲ್ಲಿ ಸ್ಪಾರ್ಟನರ ಕೈಯಿಂದ ಸೋತು ಮಣ್ಣುಪಾಲಾಯಿತು. ತೂಸಿಡೈಡಸ್ ಬರೆದಿರುವ ಈ ಯುದ್ಧ ಚರಿತ್ರೆ, ಸಾಹಿತ್ಯಸಂಪತ್ತಿನಲ್ಲಿ ಒಂದು ರಮಣೀಯ ಲೇಖನವಾಗಿದೆ.

ಅಂಟುರೋಗದ (ಪ್ಲೇಗ್) ಹಾವಳಿ

ಯುದ್ಧದ ಎರಡನೇ ವರ್ಷದಲ್ಲಿ ಕಂಡ ಅಂಟುರೋಗದ ಹಾವಳಿಯನ್ನು ತೂಸಿಡೈಡಸ್ ವಿಶದವಾಗಿ ವಿವರಿಸಿದ್ದಾನೆ. ಈ ಅಂಟು ಜಾಡ್ಯ ಇತಿಯೋಪಿಯ ರಾಜ್ಯದಲ್ಲಿ ಕಂಡು ಈಜಿಪ್ಟಿನ ಮೂಲಕ ಹರಡಿ ಗ್ರೀಸನ್ನು ಬಲು ಬೇಗ ಆವರಿಸಿತು. ಅಥೆನ್ಸ್ ನಗರ ಈ ಹಾವಳಿಗೆ ತುತ್ತಾಗಿ ನೆಲಸಮವಾಯಿತು. ಸುಖದಲ್ಲಿದ್ದ ಜನರು ಇದ್ದಕ್ಕಿದ್ದ ಹಾಗೆ ಸಾಯಲಾರಂಭಿಸಿದರು. ಜ್ವರದ ತಾಪವನ್ನು ತಡೆಯಲಾರದೆ ರೋಗಿಗಳು ನೀರಿನಲ್ಲಿ ಮುಳುಗುತ್ತಿದ್ದರು. ಅನೇಕರು ಅಲ್ಲೇ ಸಾಯುತ್ತಿದ್ದರು. ಉಳಿದವರು ತೂರಾಡಿ ರಸ್ತೆ ಮತ್ತು ಅಂಗಳಗಳಲ್ಲಿ ಸಾಯುತ್ತಿದ್ದರು.

ಈ ಅಂಟು ಜಾಡ್ಯ ಬಡವರು ಬಲ್ಲಿದರು ಎಂದು ವ್ಯತ್ಯಾಸ ಮಾಡಲಿಲ್ಲ. ವೈದ್ಯನ ಸಹಾಯವಿದ್ದವರೂ ಸಾಯುತ್ತಿದ್ದರು. ವೈದ್ಯರು ಕೂಡ ಬಲಿಯಾದರು. ಅಂತ್ಯದಲ್ಲಿ ಈ ಹಾವಳಿಯಿಂದ ಮತ ಪದ್ಧತಿಯೆಲ್ಲಾ ಮರೆಯಾಯಿತು. ತೂಸಿಡೈಡಸ್ ಲೇಖನದ ಪ್ರಕಾರ "ದೇವರ ಭಯವಾಗಲಿ ಮಾನವನ ಕಾನೂನಾಗಲಿ, ಅವರನ್ನು ತಡೆಯಲು ಯಾವುದೂ ಇರಲಿಲ್ಲ. ಮೊದಲನೆಯದರ ವಿಚಾರವಾಗಿ, ದೇವರನ್ನು ಪೂಜಿಸಿದರೂ ಒಂದೇ ಬಿಟ್ಟರೂ ಒಂದೇ ಎಂದು ಭಾವಿಸಿದರು. ಏಕೆಂದರೆ, ಎಲ್ಲರೂ ಒಂದೇ ಸಮನಾಗಿ ಸಾಯುವುದನ್ನು ನೋಡುತ್ತಿದ್ದರು. ಮಾನವನ ಕಾನೂನುಗಳ ವಿಚಾರವಾಗಿ, ಅಪರಾಧಗಳಿಗಾಗಿ ವಿಚಾರಣೆಗೆ ಗುರಿಯಾಗುವ ತನಕ ಯಾರೂ ಬದುಕುಳಿಯುವರೆಂದು ನಿರೀಕ್ಷಿಸುತ್ತಲೂ ಇರಲಿಲ್ಲ" ಆದ್ದರಿಂದ ಹೆಂಗಸರು ಗಂಡಸರೆಲ್ಲರೂ ಲಕ್ಷ್ಯಮಾಡದೆ ಕುಡಿಯಲು ಆರಂಭಿಸಿದರು. ಮಾನ ಮರ್ಯಾದೆ ಬಿಟ್ಟು ಮನಬಂದಂತೆ ಕಾಮದಲ್ಲಿ ತೊಡಗಿದರು.

ಈ ಅಂಟು ಜಾಡ್ಯದ ಹಾವಳಿಯಿಂದ ಎಷ್ಟು ಮರಣಗಳು ಸಂಭವಿಸಿದವೆಂದು ಖಚಿತವಿಲ್ಲ. ಕೆಲವರ ಪ್ರಕಾರ ಅಥೆನ್ಸ್‌ನ ಅರ್ಧ ಜನರು ಸತ್ತರೆಂದೂ, ಮತ್ತೆ ಕೆಲವರ ಪ್ರಕಾರ ಮುಕ್ಕಾಲು ಭಾಗ ಸತ್ತರೆಂದೂ ಹೇಳಲಾಗಿದೆ. ಈ ಅಂಟು ಜಾಡ್ಯವನ್ನು ಅನೇಕರು ಪ್ಲೇಗು ರೋಗವೆಂದೂ, ಸೊಕ್ಕಿನ (ಟೈಫಸ್) ಜ್ವರವೆಂದೂ, ಮತ್ತೆ ಕೆಲವರು ವಿಷಮಶೀತ ಜ್ವರವೆಂದೂ, ಉಳಿದವರು ಒಂದು ಹೊಸ ಗೂಢ ರೋಗವೆಂದೂ ಹೇಳಿರುವರು. ಅಂತೂ ಅಥೆನ್ಸ್ ನಗರ ನುಣ್ಣಗಾಯಿತು. ಪೊಟಿಡೆಯವನ್ನೂ ಹಿಡಿಯಲು ಹೋದ ಪೆರಿಕ್ಲಿಸ್ ಮತ್ತು ಅವನ ನೌಕಾದಳದವರನ್ನು ಕೊನೆಗಾಣಿಸಿತು. ಈ ಹಾವಳಿ ನಡೆದಾಗ ಹಿಪ್ಪೊಕ್ರೇಟಿಸ್ ಅಥೆನ್ಸ್ ನಗರದಲ್ಲಿರಲಿಲ್ಲ. ತೆಸ್ಸಾಲಿಯಲ್ಲಿ ವೈದ್ಯವೃತ್ತಿಯನ್ನು ಮುಂದುವರಿಸುತ್ತಿದ್ದನು. ಹಿಪ್ಪೊಕ್ರೇಟಿಸ್ ಏನಾದರೂ ಈ ಹಾವಳಿಯನ್ನು ಕಣ್ಣಾರ ನೋಡಿ ಬರೆದಿದ್ದರೆ, ರೋಗವೇನೆಂಬುದು ತಿಳಿಯುತ್ತಿತ್ತೇನೊ! ಅವನು ಬರೆದಿರುವ ಲೇಖನಗಳಲ್ಲಿ ಈ ಹಾವಳಿ ವಿಚಾರವೇ ಬಂದಿಲ್ಲ.

೧೧. ಹಿಪ್ಪೊಕ್ರೇಟಿಸ್ಸಿನನಂತರದವರು

ವೈದ್ಯಶಾಸ್ತ್ರವನ್ನು ತತ್ತ್ವಶಾಸ್ತ್ರದಿಂದ ಬೇರ್ಪಡಿಸಲು ಹಿಪ್ಪೊಕ್ರೇಟಿಸ್ ಎಷ್ಟೇ ಪ್ರಯತ್ನಿಸಿದರೂ ಅವನಿಗೆ ಪೂರ್ತಿಯಾಗಿ ಸಾಧ್ಯವಾಗಲಿಲ್ಲ. ವೈದ್ಯಶಾಸ್ತ್ರ ತತ್ತ್ವ ಶಾಸ್ತ್ರದ ಊಹೆಗಳ ಪ್ರಭಾವದಿಂದಲೇ ನಿಲ್ಲಬೇಕಾಯಿತು. ಹಿಪ್ಪೊಕ್ರೇಟಿಸ್ಸಿನ ಮಕ್ಕಳಾದ ತೆಸ್ಸಲಾಸ್ ಮತ್ತು ಡ್ರಾಕನ್ ಎಲ್ಲಿ ಪರಿಶೀಲನೆ ಸಾಧ್ಯವಿಲ್ಲವೋ ಅಲ್ಲಿ ಊಹೆಗಳೇ ಆಧಾರವೆಂದು ಹೇಳಿ ವೈದ್ಯಶಾಸ್ತ್ರವನ್ನು ಅಭಿವೃದ್ಧಿ ಮಾಡಲು ತೊಡಗಿದರು.

ಪ್ಲೇಟೊ

ತತ್ತ್ವಜ್ಞಾನಿ ಮತ್ತು ಗಣಿತ ಶಾಸ್ತ್ರಜ್ಞನಾದ ಪ್ಲೇಟೊ (ಕ್ರಿ.ಪೂ.೪೩೦-೩೪೭) ಸ್ಥಾಪಿಸಿದ ಸಾಹಿತ್ಯದ ಪ್ರೌಢ ವಿದ್ಯಾಶಾಲೆ ಕ್ರಿ.ಶ. ೫೨೯ರವರೆಗೆ ೯೦೦ ವರ್ಷಕಾಲ ಪ್ರಖ್ಯಾತಿಯಲ್ಲಿತ್ತು. ಪ್ಲೇಟೊ ತತ್ತ್ವಗಳು ಮೊದಲಿನಿಂದಲೂ ಮತ್ತು ಈಗಲೂ ಮಾನವ ನಾಗರಿಕತೆಗೆ ದೊಡ್ಡ ಬೆಂಬಲವಾಗಿವೆ. ಅವನು ಗಣಿತ ಶಾಸ್ತ್ರದಲ್ಲಿ ಅನೇಕ ಹೊಸ ವಿಷಯುಗಳನ್ನು ಕಂಡುಹಿಡಿದಿದ್ದನು. ಮಾನವ ಪ್ರಪಂಚ, ವಿಶ್ವಪ್ರಪಂಚ ಎಂಬ ಕಲ್ಪನೆಯ ತತ್ತ್ವವನ್ನು ಅವನ ಟಿಮಿಯಸ್ ಕೃತಿಯಲ್ಲಿ ತಿಳಿಸಿದ್ದನು. ಟಿಮಿಯಸ್ಸಿನಲ್ಲಿ ಅರಿವಿಲ್ಲದ ಸ್ಥಿತಿಯ ವಿಷಯವನ್ನೂ ಬರೆದಿದ್ದನು. ಕ್ರಿ.ಶ. ೧೧೫೬ರ ತನಕ ಪ್ಲೇಟೊ ಬರೆದ ಕೃತಿಗಳಲ್ಲಿ ಟಿಮಿಯಸ್ ಒಂದೇ ಒಂದು ಕೃತಿ ಗೊತ್ತಾಗಿತ್ತು. ಹಿಪ್ಪೊಕ್ರೇಟಿಸ್ಸಿನ ಲೇಖನಗಳೇ ಅವನ ದೇಹಶಾಸ್ತ್ರಕ್ಕೆ ಆಧಾರವಾಗಿದ್ದವು. ಅಪಸ್ಮಾರ ರೋಗ ರಸ ಧಾತುಗಳ ವ್ಯತ್ಯಾಸದಿಂದ ಬರುವುದೆಂದೂ ಕೂಡ ತಿಳಿಸಿದ್ದನು.



ಪ್ಲೇಟೊ ಮತ್ತು ಅರಿಸ್ಟಾಟಲ್

ಅರಿಸ್ಟಾಟಲ್

ಒಬ್ಬ ವೈದ್ಯನ ಮಗನಾದ ಅರಿಸ್ಟಾಟಲ್ (ಕ್ರಿ.ಪೂ. ೩೮೪-೩೨೨) ಒಬ್ಬ ಶ್ರೇಷ್ಠ ವಿಜ್ಞಾನಿಯಾಗಿದ್ದನಲ್ಲದೆ ತತ್ತ್ವಜ್ಞಾನಿಯೂ ಆಗಿದ್ದನು. ಅವನ ಗ್ರಂಥಗಳಲ್ಲಿ ವೈದ್ಯಶಾಸ್ತ್ರದ ವಿಚಾರವೇ ಹೆಚ್ಚಾಗಿತ್ತು. ರೇಖಾಗಣಿತ, ಜ್ಯೋತಿಷ್ಯ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಮತ್ತು ದೇಹಶಾಸ್ತ್ರದ ವಿಚಾರವಾಗಿಯೂ ಬರೆದಿದ್ದನು. ಅವನ ಅಂಗರಚನೆಶಾಸ್ತ್ರ ಗಮನಾರ್ಹವಾಗಿತ್ತು. ಅವನು ಎಲ್ಲಾ ಪ್ರಾಣಿಗಳ ಗರ್ಭಕೋಶಗಳನ್ನು ಹೋಲಿಸಿ ಬರೆದಿದ್ದನು. ಮೆಲುಕು ಹಾಕುವ ಪ್ರಾಣಿಗಳ ಜಠರವನ್ನು ವಿವರಿಸಿದ್ದನು. ಆದರೂ ಅವನ ಲೇಖನಗಳಲ್ಲಿ ಅನೇಕ ತಪ್ಪುಗಳಿದ್ದವು. ಸಸ್ಯಗಳಲ್ಲಿ ಲಿಂಗ ಲಕ್ಷಣಗಳಿಲ್ಲವೆಂದೂ, ಹೃದಯವೇ ಜ್ಞಾನದ ಕೇಂದ್ರವೆಂದೂ, ಧಮನಿಗಳಲ್ಲಿ ರಕ್ತ ಮತ್ತು ವಾಯು ಎರಡೂ ಹರಿಯುತ್ತವೆಂದೂ ಹೇಳಿದ್ದನು. ಆದರೂ ಅವನ ಪ್ರಭಾವ ಬಹಳ ಕಾಲ ಎಲ್ಲಾ ಶಾಸ್ತ್ರಗಳಲ್ಲೂ ವಿಸ್ತರಿಸಿತ್ತು.

ತಿಯೋಫ್ರಾಸ್ಟಸ್

ತಿಯೋಫ್ರಾಸ್ಟಸ್ (ಕ್ರಿ.ಪೂ. ೩೭೦-೨೮೫) ಆಗಿನ ಕಾಲದಲ್ಲಿ ಒಬ್ಬ ದೊಡ್ಡ ಸಸ್ಯಶಾಸ್ತ್ರ ಪಂಡಿತನಾಗಿದ್ದನು. ಅವನು ಇರೆಸಸ್‌ನಲ್ಲಿ ಹುಟ್ಟಿ, ಪ್ಲೇಟೊ ಮತ್ತು



ತಿಯೊಫ್ರಾಸ್ಟಸ್

ಅರಿಸ್ಟಾಟಲ್‌ರ ಶಿಷ್ಯನಾಗಿದ್ದನು. ಇವನು ನಾನಾ ಶಾಸ್ತ್ರಗಳಲ್ಲೇ ಅಲ್ಲದೆ, ವೈದ್ಯಶಾಸ್ತ್ರದಲ್ಲೂ ಪಾಂಡಿತ್ಯ ಹೊಂದಿದ್ದ. ತನ್ನ ಗುರುವಿನ ತತ್ತ್ವವನ್ನು ವಿರೋಧಿಸಿ, ಜ್ಞಾನಕ್ಕೆ ಹೃದಯ ಕೇಂದ್ರವಲ್ಲ, ಮಿದುಳೇ ಕೇಂದ್ರವೆಂದು ಹೇಳಿದನು. ಅವನ

ಔಷಧವಸ್ತುಶಾಸ್ತ್ರಕ್ಕೆ ಅವನ ಸಸ್ಯಶಾಸ್ತ್ರದ ಪಾಂಡಿತ್ಯವೇ ಕಾರಣವಾಗಿತ್ತು. ಅವನು ಅನೇಕ ಗಿಡಮೂಲಿಕೆಗಳನ್ನು ವಿವರಿಸಿದ್ದನು. ಕಟುಕರೋಹಿಣಿ, ಅತಿಮಧುರ, ದಾಲ್ಚಿನ್ನಿ, ಏಲಕ್ಕಿ ಮುಂತಾದವುಗಳ ಉಪಯೋಗಗಳನ್ನು ತಿಳಿದಿದ್ದನು. ಕಟುಕರೋಹಿಣಿಯನ್ನು ಮಲಬದ್ಧತೆ ಸರಿಪಡಿಸಲೂ, ಮಂಜಿಷ್ಠ ಬಳ್ಳಿಯನ್ನು ಮೂತ್ರ ಹೆಚ್ಚಿಸಲೂ, ಅತಿಮಧುರವನ್ನು ಕೆಮ್ಮಿಗೂ ಡಿಟ್ಟಾನಿಯನ್ನು ಹೆರಿಗೆನೋವು ತಡೆಯಲೂ. ಮಾಂಡ್ರಗೋರವನ್ನು ನಿದ್ದೆಬರಿಸಲೂ, ಗಂಡು ಜರೀಗಿಡದ ಬೇರನ್ನು ಲಾಡಿಹುಳಕ್ಕೂ ಉಪಯೋಗಿಸುವುದನ್ನು ತಿಳಿಸಿದ್ದನು.

ಪ್ರಾಕ್ಸಿಗೋರಸ್

ಕಾಸ್ ದ್ವೀಪದ ಪ್ರಾಕ್ಸಿಗೊರಸ್ಸಿನ (ಕ್ರಿ.ಪೂ. ೩೪೦-೩೨೦) ಲೇಖನಗಳು ಕ್ರಿ. ಶ. ೨೦೦ರ ವರೆಗೂ ಪ್ರಾಮುಖ್ಯವಾಗಿದ್ದವು. ಹಿಪ್ಪೊಕ್ರೇಟಿಸ್ ಅಸಡ್ಡೆ ಮಾಡಿದ್ದ ನಾಡಿ ಪರೀಕ್ಷೆಯನ್ನು ಕ್ರೋಢೀಕರಿಸಿ ಅತ್ಯಂತ ಉತ್ತಮ ಲೇಖನವನ್ನು ಬರೆದಿದ್ದನು. ಧಮನಿ ಮತ್ತು ಸಿರಗಳು ಬೇರೆಬೇರೆ ಎಂದೂ, ಧಮನಿಗಳಲ್ಲಿ ಮಾತ್ರ ನಾಡಿ ಹೊಡೆಯುತ್ತದೆಂದೂ ತಿಳಿಸಿದ್ದನು. ಸ್ಪರ್ಶ ಜ್ಞಾನಕ್ಕೆ ನರಗಳೇ ಕಾರಣವೆಂದೂ, ಮಿದುಳುಬಳ್ಳಿ ಮಿದುಳಿನ ಒಂದು ಅನುಬಂಧವೆಂದೂ ಹೇಳಿದ್ದನು.

ಕೈಸಿಪ್ಪಾಸ್

ನೈಡಸ್ ಪಟ್ಟಣದ ಕೈಸಿಪ್ಪಾಸ್ ಕ್ರಿ.ಪೂ. ೩೦೦ರಲ್ಲಿ ಬಹು ಶ್ರೇಷ್ಠ ವೈದ್ಯನಾಗಿದ್ದನು. ಅವನು ಈಜಿಪ್ಟಿನ ದೊರೆ ಟಾಲೆಮಿಯ ಖಾಸ ವೈದ್ಯನಾಗಿದ್ದನು. ಶರೀರದ ಶೋಬೆ ಇಳಿಸಲು ಮೂತ್ರ ಹೆಚ್ಚಿಸಬೇಕೆಂದೂ ತಿಳಿದಿದ್ದ. ಜ್ವರವಿರುವಾಗ ನಾಡಿ ವ್ಯತ್ಯಾಸವಾಗುವುದೂ ತಿಳಿದಿತ್ತು.

೧೨. ಅಲೆಗ್ಸಾಂಡ್ರಿಯ

ಪ್ರಪಂಚದ ಚರಿತ್ರೆಯಲ್ಲಿ ಕ್ರಿ.ಪೂ. ೫ನೇ ಶತಮಾನವೇ ಬಹು ಪ್ರಾಮುಖ್ಯವಾದ ಕಾಲವೆಂದರೆ ಅತಿಶಯವಾಗಲಾರದು. ಸ್ಪಾರ್ಟನರಿಂದ ಅಥೆನ್ಸ್ ಮಣ್ಣುಪಾಲಾದಾಗಲೇ ಗ್ರೀಸಿನ ಸುವರ್ಣಯುಗವೂ ಕ್ರಿ.ಪೂ. ೪೦೪ರಲ್ಲಿ ಕೊನೆಗೊಂಡಿತು. ಸ್ಪಾರ್ಟನ್ ಚಕ್ರಾಧಿಪತ್ಯ ಯುದ್ಧಾಸಕ್ತ ದೇಶವಾದ್ದರಿಂದ ಕೇವಲ ೩೩ ವರ್ಷಗಳು ಮಾತ್ರ ಅಭಿವೃದ್ಧಿಯಲ್ಲಿತ್ತು. ಕ್ರಿ.ಪೂ. ೩೭೧ರಲ್ಲಿ ಲೂಕ್ಟ್ರ ಯುದ್ಧದಲ್ಲಿ ತೇಬೀಸ್ ರಾಜನಿಂದ ಮುರಿದುಬಿತ್ತು. ಇವನು ಕೂಡ ಸ್ಥಿರವಾದ ರಾಜ್ಯ ಕಟ್ಟದಿದ್ದರಿಂದ ಮ್ಯಾಸಿಡೋನಿಯ ಸೈನ್ಯಾಧಿಪತಿ ಅಲೆಗ್ಸಾಂಡರ್ ಮುಖ್ಯಾಧಿಕಾರಿಯಾದನು. ಇವನು ಯುದ್ಧದಲ್ಲಿ ಪರಾಕ್ರಮಿಯಾದ್ದರಿಂದ ಕೇವಲ ೧೧ ವರ್ಷಗಳಲ್ಲೇ ಚರಿತ್ರಾರ್ಹವಾದ ಮ್ಯಾಸಿಡೋನಿಯ ಚಕ್ರಾಧಿಪತ್ಯವನ್ನು ಕಟ್ಟಿದನು. ಆದರೆ ಅವನ ಆಕಸ್ಮಿಕ ಮರಣದಿಂದ ಈ ಚಕ್ರಾಧಿಪತ್ಯ ಚೂರು ಚೂರಾಗಿ ಈಜಿಪ್ಟ್, ಅಥೆನ್ಸ್ ಬೇರೆಬೇರೆಯಾದವು. ಅಲೆಗ್ಸಾಂಡರಿನ ಸೇನಾಧಿಪತಿಯಾದ ಟಾಲೆಮಿ ಈಜಿಪ್ಟಿನ ದೊರೆಯಾದನು. ಅಥೆನ್ಸಿಗೆ ಸರಿಯಾದ ಮುಂದಾಳು ಇಲ್ಲದಿದ್ದುದರಿಂದ ಕ್ಷೀಣ ಹೊಂದಿ ಹಿಂದೆ ಸರಿಯಿತು. ಟಾಲೆಮಿ ದೊರೆಯಾದ ಮೇಲೆ ಆತನಿಂದ ಸ್ಥಾಪಿತವಾದ ವಂಶ ೩೦೦ ವರ್ಷಗಳು ನಿರಂತರವಾಗಿ ಏಳಿಗೆಯಲ್ಲಿತ್ತು. ರಾಣಿ ಕ್ಲಿಯೋಪಾತ್ರ ಅದರ ಕೊನೆಯ ಅಧಿಕಾರಿಯಾಗಿದ್ದಳು.

ಅಲೆಗ್ಸಾಂಡ್ರಿಯದ ಸಂಸ್ಕೃತಿ

ಅಲೆಗ್ಸಾಂಡರ್ ಸ್ಥಾಪಿಸಿದ ಅಲೆಗ್ಸಾಂಡ್ರಿಯ ಪಟ್ಟಣ ಟಾಲೆಮಿ ದೊರೆಯ ರಾಜಧಾನಿಯಾಯಿತು. ಕೇವಲ ಸ್ವಲ್ಪ ದಿನಗಳಲ್ಲೇ ಅಲೆಗ್ಸಾಂಡ್ರಿಯ ಪ್ರಖ್ಯಾತಿಗೆ ಬಂದು ಗ್ರೀಸಿನ ಸಂಸ್ಕೃತಿಗೆ ಕೇಂದ್ರವಾಯಿತು. ವೀರಪುರುಷನಾದ, ರಾಜ್ಯಾಡಳಿತದಲ್ಲಿ ನಿಪುಣನಾದ ಮೊದಲನೆ ಟಾಲೆಮಿ ಸಾಹಿತ್ಯ ಮತ್ತು ವಿಜ್ಞಾನಗಳಿಗೆ ಉತ್ತೇಜನ ಕೊಟ್ಟು ಮ್ಯಾಸಿಡೋನಿಯ ಚಕ್ರಾಧಿಪತ್ಯಕ್ಕೆ ಕೀರ್ತಿ ತಂದನು. ಇವನು ಅಲೆಗ್ಸಾಂಡ್ರಿಯದಲ್ಲಿ ಪುಸ್ತಕ ಭಂಡಾರ, ವಸ್ತುಸಂಗ್ರಹಶಾಲೆಗಳನ್ನು ನಿರ್ಮಿಸಿದನು. ಅವನನಂತರ ಬಂದ ಎರಡನೆ ಟಾಲೆಮಿ (ಕ್ರಿ.ಪೂ ೩೦೯—೨೪೬) ಕೂಡ ಸಾಹಿತ್ಯ ಮತ್ತು ವಿಜ್ಞಾನಗಳಲ್ಲಿ ಆಸಕ್ತಿ ಹೊಂದಿದ್ದರಿಂದ ಅವನ್ನು ಬೆಳೆಸುತ್ತಾ ಬಂದನು. ಇವನ ಆಸ್ಥಾನದಲ್ಲಿ ತತ್ವಶಾಸ್ತ್ರಜ್ಞರು, ಶಿಲ್ಪಿಗಳು, ಚರಿತ್ರೆಗಾರರು, ಚಿತ್ರಕಾರರು, ಸಂಗೀತಗಾರರು, ಕವಿಗಳು ಮತ್ತು ವಿಜ್ಞಾನಿಗಳೂ ಇದ್ದರು. ಆದ್ದರಿಂದ ಆಗಿನ ಸಂಸ್ಕೃತಿ ಈಜಿಪ್ಟಿನಲ್ಲೂ, ಉತ್ತರ ಆಫ್ರಿಕದಲ್ಲೂ ಮತ್ತು ಏಷ್ಯ ಮೈನರಿನಲ್ಲೂ ಒಂದೇ ಸಮನೆ ವಿಸ್ತರಿಸಿತ್ತು. ಗ್ರೀಕ್ ಭಾಷೆ ವಿಶ್ವವಿದ್ಯಾಲಯದ ಭಾಷೆಯಾಯಿತು. ಸಾಹಿತ್ಯದಲ್ಲೂ ವಿಜ್ಞಾನದಲ್ಲೂ ಗ್ರೀಕ್ ಭಾಷೆಯನ್ನೇ ಉಪಯೋಗಿಸಲಾಯಿತು. ಅಲೆಗ್ಸಾಂಡರಿನ ಜಯಗಳಿಂದಲೂ,

ಅಲೆಗ್ಸಾಂಡ್ರಿಯದ ಪ್ರೌಢ ಜ್ಞಾನಾಭಿವೃದ್ಧಿಯಿಂದಲೂ ಗ್ರೀಕ್ ಭಾಷೆ ಈ ಪ್ರೌಢ ಸ್ಥಾನವನ್ನು ಪಡೆಯಿತು.

ವಸ್ತುಸಂಗ್ರಹ ಶಾಲೆ ಮತ್ತು ಪುಸ್ತಕ ಭಂಡಾರ

ಅಲೆಗ್ಸಾಂಡ್ರಿಯದ ವಸ್ತುಸಂಗ್ರಹಶಾಲೆ ಈಗಿನದಕ್ಕಿಂತಲೂ ಉತ್ತಮವಾಗಿತ್ತೆಂದು ಹೇಳಲಾಗಿದೆ. ವಸ್ತುಸಂಗ್ರಹದ ಜತೆಗೆ, ಉಪನ್ಯಾಸ ಅಂಗಳಗಳೂ ವಿಹಾರ ಅಂಗಳಗಳೂ, ವಿಜ್ಞಾನಿಗಳಿಗೆ ಊಟದ ಮನೆಗಳೂ ಇದ್ದವು. ಹತ್ತಿರದಲ್ಲೇ ಇದ್ದ ಪುಸ್ತಕ ಭಂಡಾರದಲ್ಲಿ ೪ ರಿಂದ ೭ ಲಕ್ಷ ಗ್ರಂಥಗಳಿದ್ದವು. ಈ ಪುಸ್ತಕ ಭಂಡಾರ ಕ್ರಿ.ಪೂ. ೪೮ರಲ್ಲಿ ಜೂಲಿಯಸ್ ಸೀಸರ್ ಅಲೆಗ್ಸಾಂಡ್ರಿಯವನ್ನು ಮುತ್ತಿಗೆ ಹಾಕಿದಾಗ ಬೆಂಕಿ ಬಿದ್ದು ಸುಮಾರಷ್ಟು ನಾಶವಾಯಿತು. ಪುಸ್ತಕ ಭಂಡಾರ ಮತ್ತು ವಸ್ತು ಸಂಗ್ರಹ ಶಾಲೆ ಪ್ರಖ್ಯಾತಿಯಾಗಿದ್ದಾಗ ವಿದ್ವಾಂಸರೂ, ವಿದ್ಯಾರ್ಥಿಗಳೂ ವ್ಯಾಸಂಗ ಮಾಡಲು ಕಿಕ್ಕಿರಿದು ತುಂಬಿರುತ್ತಿದ್ದರು. ಆಗ ಅದಕ್ಕೆ ಅಲೆಗ್ಸಾಂಡ್ರಿಯ ವಿಶ್ವವಿದ್ಯಾನಿಲಯವೆಂದು ಹೆಸರು ಬಂತು. ಅಲ್ಲಿ ಜ್ಞಾನ ಸಂಪಾದಿಸಲು ಪ್ರಪಂಚದ ನಾನಾ ಕಡೆಗಳಿಂದ ಕವಿಗಳೂ, ತತ್ವಜ್ಞಾನಿಗಳೂ, ವೈದ್ಯರೂ, ಮುಂತಾದವರೆಲ್ಲಾ ಬರುತ್ತಿದ್ದರು. ಅವರಲ್ಲಿ ಕವಿಗಳಾದ ಫಿಲೆಟಸ್, ತಿಯೋಕ್ರಿಟಸ್, ಹೆರಂಡಾಸ್ ಮುಂತಾದವರೂ, ಗಣಿತಶಾಸ್ತ್ರಜ್ಞರಾದ ಯೂಕ್ಲಿಡ್ ಮತ್ತು ಆರ್ಕಿಮಿಡಿಸ್, ಚರಿತ್ರೆಗಾರನಾದ ಮಾನೆತೊ ಮತ್ತು ವೈದ್ಯಪ್ರವೀಣರಾದ ಹಿರೋಫಿಲಸ್ ಮತ್ತು ಇರಸಿಸ್ಟ್ರಾಟಸ್ ಮುಖ್ಯ ವ್ಯಕ್ತಿಗಳಾಗಿದ್ದರು. ಮೊಟ್ಟಮೊದಲಿಗೆ ಅಲ್ಲಿನ ವೈದ್ಯ ವಿದ್ಯಾಶಾಲೆಯಲ್ಲಿ ಶವದ ಅಂಗರಚನೆ ಪರೀಕ್ಷೆ ಮಾಡಲು ಆರಂಭಿಸಿ ಸಾಕಷ್ಟು ಹೊಸ ವಿಷಯಗಳನ್ನು ತಿಳಿದರು. ಆದರೆ ಸ್ವಲ್ಪ ಕಾಲದಲ್ಲೇ ಈ ರೂಢಿ ತಪ್ಪಿ ಪುನಃ ಕಾರ್ಯರೂಪಕ್ಕೆ ಬರಲು ೧೦೦೦ ವರ್ಷಗಳಾದವು.

ಹಿರೋಫಿಲಸ್

ಗ್ಯಾಲೆನ್ ಹೇಳಿರುವ ಪ್ರಕಾರ ಶವ ಅಂಗ ರಚನೆ ಪರೀಕ್ಷೆ ಮಾಡಿದವರಲ್ಲಿ ಹಿರೊಫಿಲಸ್ (ಕ್ರಿ.ಪೂ. ೩೦೦) ಮೊದಲನೆಯವನಾಗಿದ್ದನು. ಇವನು ಮನುಷ್ಯ ಮತ್ತು ಪ್ರಾಣಿಗಳ ದೇಹಗಳನ್ನು ಪರೀಕ್ಷೆ ಮಾಡಿದ್ದನು. ಇವನನ್ನು ಅಂಗರಚನೆಶಾಸ್ತ್ರ ಪಿತಾಮಹನೆಂದು ಕರೆದರು. ಇವನಿಗೆ ಈ ಶಾಸ್ತ್ರದಲ್ಲಿ ಆಸಕ್ತಿ ಬರಬೇಕಾದರೆ ಕಾಸ್ ದ್ವೀಪದ ಆತನ ಗುರು ಪ್ರಾಕ್ಸಿಗೊರಸ್ಸೇ ಕಾರಣ.

ಅನೇಕ ಹೊಸ ವಿಷಯಗಳನ್ನು ಹಿರೋಫಿಲಸ್ ಅವನ ಅಂಗರಚನೆ ಶಾಸ್ತ್ರದಲ್ಲಿ ವಿವರಿಸಿದ್ದನು. ಮಿದುಳನ್ನು ವಿವರಿಸುತ್ತ, ಸಣ್ಣ ಮಿದುಳು, ಅನೇ ಮಿದುಳ್ಗುಳಿ, ಮಿದುಳಿನ ಪೊರೆ, ಹಿರೋಫಿಲಸ್‌ನ ತಿರುವುಗಳನ್ನೂ ತಿಳಿಸಿದ್ದನು. ನರವ್ಯೂಹಕ್ಕೆ ಮಿದುಳೇ ಕೇಂದ್ರವೆಂದು ಹೇಳಿದ್ದನು. ನರಗಳಿಗೂ ಕಂಡರಗಳಿಗೂ ವ್ಯತ್ಯಾಸ ಮಾಡಿದ್ದನು. ಚಾಲಕ ಮತ್ತು ಅರಿವಿನ ಎಂಬ ಎರಡು

ಬಗೆಯ ನರಗಳನ್ನು ವಿವರಿಸಿದ್ದನು. ಈಲಿ, ಮಾಂಸಲಿ ಗ್ರಂಥಿ, ಜೊಲ್ಲು ಗ್ರಂಥಿ ಮತ್ತು ಲಿಂಗಾಂಗಗಳನ್ನೂ ವಿವರಿಸಿದ್ದನು. ಮುಂಗರುಳು ೧೨ ಬೆರಳಗಲವಿದೆಯೆಂದೂ, ಮುನ್ನಿಲುಗ (ಪ್ರಾಸ್ಟೇಟ್) ಗ್ರಂಥಿ ಮೂತ್ರಕೋಶದ ಕಾವಲೆಂದೂ ತಿಳಿಸಿದ್ದನು. ಸಿರಗಳಿಗಿಂತಲೂ ಧಮನಿ ದಪ್ಪವಾಗಿರುವುದೆಂದೂ, ಧಮನಿಯಲ್ಲಿ ರಕ್ತ ಮಾತ್ರ ಇದೆಯೆಂದೂ ವಾಯು ಇರುವುದಿಲ್ಲವೆಂದೂ ತಿಳಿಸಿದ್ದನು. ನಾಡಿಯನ್ನು ಎಣಿಸಲು ನೀರ್ಗಡಿಯಾರವನ್ನು ಉಪಯೋಗಿಸಿದ್ದನು.

ವೈದ್ಯಶಾಸ್ತ್ರದ ತಿಳಿವಳಿಕೆ ಹೆಚ್ಚು ಮುಂದುವರೆದಿರಲಿಲ್ಲ. ಹಿಪ್ಪೊಕ್ರೇಟಿಸ್ಸಿನ ನಾಲ್ಕು ರಸಧಾತುಗಳ ತತ್ತ್ವವನ್ನೇ ಇವನೂ ಅನುಸರಿಸುತ್ತಿದ್ದನು. ಗ್ಯಾಲೆನ್ ಬರೆದಿರುವ ಪ್ರಕಾರ ರೋಗದ ಕಾರಣಗಳು, ನಾಡಿಶಾಸ್ತ್ರ, ಚಿಕಿತ್ಸೆ ವಿಧಾನ, ಕಣ್ಣಿನ ರೋಗ, ಆಹಾರಶಾಸ್ತ್ರ, ಹಿಪ್ಪೊಕ್ರೇಟಿಸ್ಸಿನ ಮುನ್ನರಿವು ಮತ್ತು ಬೋಧನೆಗಳ ವಿಮರ್ಶೆ ಮತ್ತು ಹಿಪ್ಪೊಕ್ರೇಟಿಸ್ಸಿನ ಪದಗಳ ನಿರೂಪಣೆ ಎಂಬ ೯ ಲೇಖನಗಳನ್ನು ಮಾತ್ರ ಬರೆದಿದ್ದನು.

ಇರಾಸಿಸ್ಟ್ರಾಟಸ್

ಹಿರೋಫಿಲಸ್ ಅಂಗರಚನೆಶಾಸ್ತ್ರದಲ್ಲಿ ಪ್ರವೀಣನಾಗಿದ್ದರೆ ಇರಾಸಿಸ್ಟ್ರಾಟಸ್ (ಕ್ರಿ.ಪೂ. ೨೯೦) ಶರೀರ ಶಾಸ್ತ್ರದಲ್ಲಿ ಪ್ರವೀಣನಾಗಿದ್ದನು. ಹಿರೋಫಿಲಸ್ ಕಾಸ್ ದ್ವೀಪಕ್ಕೆ ಸೇರಿದವನಾಗಿದ್ದರೆ, ಇರಸಿಸ್ಟ್ರಾಟಸ್ ನೈಡಸಿಗೆ ಸೇರಿದವನಾಗಿದ್ದನು. ಮನುಷ್ಯನ ಮಿದುಳು ಪ್ರಾಣಿಗಳ ಮಿದುಳಿಗಿಂತಲೂ ಹೆಚ್ಚು ಸುರುಳಿಗಳನ್ನು ಹೊಂದಿದೆಯೆಂದೂ, ಹೆಚ್ಚು ಸುರುಳಿಗಳಿದ್ದಷ್ಟೂ ಬುದ್ಧಿಶಕ್ತಿ ಹೆಚ್ಚಾಗಿರುತ್ತದೆಂದೂ ಇರಾಸಿಸ್ಟ್ರಾಟಸ್ ತಿಳಿಸಿದ್ದನು. ಪ್ರತಿಯೊಂದು ಅಂಗಕ್ಕೂ ಧಮನಿ ಮತ್ತು ಸಿರಗಳಿರುತ್ತವೆಂದೂ ತಿಳಿಸಿದ್ದನು. ಹಿಪ್ಪೊಕ್ರೇಟಿಸ್ ಬೋಧಿಸಿದ್ದ ನಾಲ್ಕು ರಸಧಾತುಗಳ ತತ್ತ್ವವನ್ನು ವಿರೋಧಿಸಿ, ರಕ್ತ ಮತ್ತು ಎರಡು ವಿಧವಾದ ವಾಯುಗಳಿವೆಯೆಂದೂ, ಸಿರಗಳಲ್ಲಿ ರಕ್ತ ಹರಿಯುತ್ತದೆಂದೂ, ಧಮನಿಯಲ್ಲಿ ವಾಯು ಚಲಿಸುತ್ತದೆಂದೂ ಹೇಳಿದನು. ಎಳೆದುಕೊಂಡ ಉಸಿರು ಹೃದಯಕ್ಕೆ ಹೋದಾಗ ಜೀವಾಳ ಸತ್ತ್ವ ಎಂಬ ವಾಯುವಾಗುತ್ತದೆಂದೂ, ಆಮೇಲೆ ಮಿದುಳಿಗೆ ಹೋದಾಗ ಎರಡನೆ ತರಹದ ವಾಯುವಾಗುತ್ತದೆಂದೂ ತಿಳಿಸಿದ್ದನು. ಇದಕ್ಕೆ ಪ್ರಾಣಿ ಸತ್ತ್ವವೆಂದು ಹೆಸರು ಕೊಟ್ಟಿದ್ದನು. ಹೃದಯದಲ್ಲಿ ಎರಡು ಮತ್ತು ಮೂರು ಕವಾಟಗಳುಳ್ಳ ಬಾಗಿಲುಗಳಿವೆಯೆಂದೂ, ಇವು ರಕ್ತ ಹಿಂದೆ ಹೋಗುವುದನ್ನು ತಡೆಯುತ್ತವೆಂದೂ ತಿಳಿಸಿದ್ದನು. ಶರೀರದಲ್ಲಿರುವ ಇತರ ಧಮನಿಗಳನ್ನೂ ವಿವರಿಸಿದ್ದನು. ಕೋಳಿಗಳನ್ನು ಗೂಡುಗಳಲ್ಲಿಟ್ಟು, ಅವುಗಳ ತೂಕ, ಆಹಾರ ಮತ್ತು ಮಲವಿಸರ್ಜನೆಗಳನ್ನು ಪರೀಕ್ಷೆ ಮಾಡುತ್ತಿದ್ದನು. ಆದರೆ ಈ ಪ್ರಯೋಗಗಳ ಫಲವೇನಾಯಿತೆಂಬುದು ಗೊತ್ತಾಗಿಲ್ಲ.

ಸೆಲ್ಸಸ್ ಹೇಳಿರುವ ಪ್ರಕಾರ, ಹಿರೋಫಿಲಸ್ ಮತ್ತು ಇರಸಿಸ್ಟ್ರಾಟಸ್ ಇಬ್ಬರೂ

ದೊರೆ ಅಪ್ಪಣೆ ಮೇರೆ ಅಪರಾಧಿಗಳನ್ನು ಜೀವಸಹಿತ ಅಂಗಚ್ಛೇದನ ಮಾಡಿ ಅಂಗ ರಚನೆಯನ್ನು ತಿಳಿಯುತ್ತಿದ್ದರೆಂದು ಹೇಳಲಾಗಿದೆ. ಕೆಲವರು ಇದನ್ನು ನಂಬಿದ್ದರು. ಅನೇಕರು ನಂಬಿರಲಿಲ್ಲ.

ನಿಕಂಡ್ರಾಸ್

ಹೀಗೆ ಗ್ರೀಸು ಪ್ರಕಾಶಮಾನವಾಗಿ ಬೆಳಗುತ್ತಿದ್ದಾಗ ಇನ್ನೂ ಅನೇಕ ವಿದ್ವಾಂಸರು ತಮ್ಮ ತಮ್ಮ ಪ್ರಯೋಗಗಳಲ್ಲಿ ತೊಡಗಿದ್ದರು. ಅವರಲ್ಲಿ ಒಬ್ಬನಾದ ನಿಕಂಡ್ರಾಸ್ (ಕ್ರಿ. ಪೂ. ೨೭೫) ವೈದ್ಯಶಾಸ್ತ್ರದಲ್ಲಿ ಪಂಡಿತನಾಗಿ ಎರಡು ಪಠ್ಯಪುಸ್ತಕಗಳನ್ನು ಬರೆದಿದ್ದನು. ತೆರಿಯಕ ಎಂಬ ಮೊದಲನೆ ಪುಸ್ತಕದಲ್ಲಿ ವಿಷಪ್ರಾಣಿಗಳನ್ನು ಕುರಿತು ೯೫೮ ಪದ್ಯಗಳನ್ನೂ, ಎರಡನೆಯ ಅಲೆಕ್ಸಿ ಫಾರ್ಮಕ ಪುಸ್ತಕದಲ್ಲಿ ವಿಷಗಳ ಮತ್ತು ಗಿಡಮೂಲಿಕೆಗಳನ್ನು ಕುರಿತು ೬೩೦ ಪದ್ಯಗಳನ್ನೂ ಬರೆದಿದ್ದನು. ಮೊಟ್ಟ ಮೊದಲಿಗೆ ಇದರಲ್ಲಿ ಸೀಸದಿಂದಾಗುವ ಹಾನಿಗಳನ್ನು ವಿವರಿಸಿದ್ದನು.

ಮಿತ್ರಿಡೇಟಸ್

ಇನ್ನೊಬ್ಬ ಪಂಡಿತ ಪಾಂಟಸ್ ರಾಜ್ಯದ ದೊರೆಯಾಗಿದ್ದನು. ಈ ಆರನೆಯ ಮಿತ್ರಿಡೇಟಸ್ ಯೂಪಾಟ ಕ್ರಿ.ಪೂ. ೧೨೦—೬೩ರ ತನಕ ರಾಜ್ಯವಾಳುತ್ತಿದ್ದಾಗ ರೋಂ ನಗರದ ಅಸಾಧಾರಣ ಶತ್ರುವಾಗಿದ್ದು, ರೋಮನ್ನರೆಲ್ಲರನ್ನೂ ಏಷ್ಯಾದಿಂದ ಹೊಡೆದೋಡಿಸಬೇಕೆಂದು ಅಪ್ಪಣೆ ಮಾಡಿದ್ದನು. ಇವನು ೨೨ ಭಾಷೆಗಳಲ್ಲಿ ನುರಿತಿದ್ದುದಲ್ಲದೆ, ಶೌರ್ಯದಲ್ಲೂ, ಶಕ್ತಿಯಲ್ಲೂ ಎಲ್ಲರನ್ನೂ ಮೀರಿಸಿದ್ದನು. ಆದರೆ ವಿಷ ಹಾಕುವರೆಂಬ ಭಯ ಇವನಿಗೆ ತುಂಬಾ ಇತ್ತು. ಆದ್ದರಿಂದ ವಿಷಶಾಸ್ತ್ರವನ್ನು ಚೆನ್ನಾಗಿ ಕಲಿತು, ಮಿತ್ರಿಡೇಟಸ್ ಎಂಬ ಕಟ್ಟುಮದ್ದನ್ನು ಕಂಡುಹಿಡಿದು ತನಗೆ ವಿಷದಿಂದ ಹಾನಿಯಾಗದಂತೆ ನೋಡಿಕೊಂಡಿದ್ದನು. ಆದ್ದರಿಂದಲೇ ಆ ಮದ್ದಿನಿಂದ ಅವನ ಹೆಸರು ಬಂದಿತ್ತು. ತನ್ನ ಆಸ್ಥಾನಕ್ಕೆ ಆಗಾಗ ಎಲ್ಲಾ ವಿದ್ಯಾವಂತರನ್ನೂ ಬರಮಾಡಿಕೊಂಡು ಅವರಿಗೆ ತಕ್ಕ ಮರ್ಯಾದೆಯನ್ನು ಸಲ್ಲಿಸಿ, ಅವರ ಸಂಗಡ ಚರ್ಚೆ ನಡೆಸುತ್ತಿದ್ದನು.

ಮೊದಲನೇ ಮತ್ತು ಎರಡನೇ ಟಾಲೆಮಿ ದೊರೆಗಳು ಬುದ್ಧಿಶಕ್ತಿಯಲ್ಲೂ, ಪಾಂಡಿತ್ಯದಲ್ಲೂ, ರಾಜ್ಯಾಡಳಿತದಲ್ಲೂ, ಸಾಹಿತ್ಯ ಮತ್ತು ವಿಜ್ಞಾನಗಳಲ್ಲೂ ಕೀರ್ತಿ ಪಡೆದಿದ್ದರು. ಇವರ ಕಾಲದಲ್ಲಿ ಅಲೆಗ್ಸಾಂಡ್ರಿಯ ಅತಿ ಉತ್ತಮ ಸ್ಥಿತಿಯಲ್ಲಿತ್ತು. ಗ್ರೀಕ್ ಸಂಸ್ಕೃತಿಯನ್ನು ಗೌರವಸ್ಥಾನದಲ್ಲಿ ಕಾಪಾಡಿಕೊಂಡು ಬಂದಿದ್ದರು. ಅನಂತರ ಬಂದ ಟಾಲೆಮಿ ದೊರೆಗಳು ಅಶಕ್ತರಾದುದರಿಂದ ಅಲೆಗ್ಸಾಂಡ್ರಿಯ ಕೀಳು ಸ್ಥಿತಿಗಿಳಿಯುತ್ತಾ ಬಂತು. ಏಳನೇ ಟಾಲೆಮಿ ಅಲೆಗ್ಸಾಂಡ್ರಿಯದಿಂದ ಎಲ್ಲಾ ವಿದ್ವಾಂಸರನ್ನೂ ಹೊರಗೋಡಿಸಿದನೆಂದು ಹೇಳಲಾಗಿದೆ. ಅಂತ್ಯದ ೧೨ನೇ ಟಾಲೆಮಿ ಕಾಲದಲ್ಲಿ ಅಲೆಗ್ಸಾಂಡ್ರಿಯ ರೋಮನ್ನರ ಕೈವಶವಾಗಿ, ರೋಂ ರಾಜ್ಯದ ಅಡಿಯಾಳಾಯಿತು.

ಕೊನೆಗಾಲ

ಜೂಲಿಯಸ್ ಸೀಸರ್ ಕ್ರಿ.ಪೂ. ೪೮—೪೭ರಲ್ಲಿ ಅಲೆಗ್ಸಾಂಡ್ರಿಯಕ್ಕೆ ಮುತ್ತಿಗೆ

ಹಾಕಿದಾಗ ಅಲ್ಲಿಯ ಪುಸ್ತಕ ಭಂಡಾರ ಬೆಂಕಿಯಿಂದ ಸ್ವಲ್ಪಮಟ್ಟಿಗೆ ಭಸ್ಮವಾಯಿತು. ಕ್ರಿ.ಶ.೨೭೩ರಲ್ಲಿ ಆರೆಲಿಯಸ್‌ನಿಂದ ಇನ್ನಷ್ಟು ನಷ್ಟಹೊಂದಿ ಕ್ರಿ.ಶ. ೩೯೫ರಲ್ಲಿ ಕ್ರೈಸ್ತ ಜನರ ಮುಖ್ಯಸ್ಥ ತಿಯೋಫಿಲಸ್‌ನಿಂದ ಪೂರ್ಣ ನಾಶವಾಯಿತು. ಕ್ರಿ.ಶ. ೬೪೦ರಲ್ಲಿ ಅರಬ್ ಜನರ ಮುಖಂಡ ಅಮ್ರು ಕೊರಾನಿನಲ್ಲಿ ಸಮಸ್ತ ತಿಳಿವಳಿಕೆ ಇದೆಯೆಂಬ ಅಹಂ ಭಾವದಿಂದ, ಮತ್ತಷ್ಟು ಕೊಳ್ಳೆ ಹೊಡೆದು ಉಳಿದಿದ್ದ ಅಲೆಗ್ಸಾಂಡ್ರಿಯವನ್ನು ಸುಟ್ಟು ಭಸ್ಮ ಮಾಡಿದನೆಂಬ ಹೇಳಿಕೆಯನ್ನು ಸಮರ್ಥಿಸಬೇಕಾಗಿದೆ.

ಅಲೆಗ್ಸಾಂಡ್ರಿಯ ಪ್ರಖ್ಯಾತಿ ಪಡೆದಿದ್ದರಿಂದ ಅನೇಕ ವಿದ್ವಾಂಸರು ವಿದ್ಯಾಭ್ಯಾಸ ಮಾಡಲು ಅಲ್ಲಿಗೆ ಬರುತ್ತಿದ್ದದ್ದು ಅಲ್ಲಿಯ ಜನರಿಗೆ ಒಂದು ಹೆಮ್ಮೆಯಾಗಿತ್ತು. ವಿದ್ಯಾ ಭ್ಯಾಸ ಮುಗಿದ ಮೇಲೆ ಅವರ ದರ್ಜೆಯನ್ನು ತಿಳಿಯಲು ಯಾವ ಪರೀಕ್ಷೆಯನ್ನೂ ನಡೆಸುತ್ತಿರಲಿಲ್ಲ. ಯಾವ ವಿಧವಾದ ಪದವಿ ಪ್ರಶಸ್ತಿ ಪತ್ರವನ್ನೂ ಕೊಡುತ್ತಿರಲಿಲ್ಲ. ಆದ್ದರಿಂದ ಕೊನೆಕೊನೆಗೆ ಅಡ್ಡಕಸಬಿ ವೈದ್ಯರು ಹೆಚ್ಚಿ ತಮ್ಮ ಮೋಸದ ಸಂಪಾದನೆ ಯಲ್ಲಿ ತೊಡಗಿದ್ದರು.

ಹಿರೊಫಿಲಸ್ ಕಾಸ್ ದ್ವೀಪದಿಂದಲೂ, ಇರಸಿಸ್ಟ್ರಾಟಸ್ ನೈಡಸ್ಸಿನಿಂದಲೂ, ಅಲ್ಲಲ್ಲಿಯ ಸಂಪ್ರದಾಯಗಳನ್ನು ಅಲೆಗ್ಸಾಂಡ್ರಿಯಕ್ಕೆ ತಂದು, ಅಭಿವೃದ್ಧಿಗೊಳಿಸಿದ್ದ ರಿಂದ, ಇವೆರಡು ವಿದ್ಯಾಸಂಸ್ಥೆಗಳ ಸಂಯೋಗದಿಂದ ಅಲೆಗ್ಸಾಂಡ್ರಿಯ ಪ್ರಖ್ಯಾತಿಗೆ ಬಂತು. ಮೇಲಾಗಿ ಶ್ರೇಷ್ಠ ವಿಜ್ಞಾನಿ ಅರಿಸ್ಟಾಟಲ್ ಬೀರುತ್ತಿದ್ದ ಪ್ರಭಾವದಿಂದ ಮತ್ತಷ್ಟು ಪ್ರಖ್ಯಾತಿಯನ್ನು ಪಡೆಯಿತು. ಅದೇ ಕಾಲದ ಶ್ರೇಷ್ಠ ಶಸ್ತ್ರವೈದ್ಯ ಲಿತಾಟ ಮಸ್ (ಕ್ರಿ.ಪೂ. ೨೮೩–೨೪೭) ಮೂತ್ರಕೋಶದಿಂದ ಕಲ್ಲನ್ನು ಚೂರುಚೂರು ಮಾಡಿ ಮೂತ್ರನಾಳದ ಮೂಲಕ ಹೊರಗೆ ತೆಗೆಯುತ್ತಿದ್ದನು. ಈಗಲೂ ಈ ಅಶ್ಮರೀ ಕರ್ತನ ರೂಢಿಯಲ್ಲಿದೆ.

ವೈದ್ಯರ ಪಂಗಡಗಳು

ಹಿಪ್ಪೊಕ್ರೇಟಿಸ್ ಕಾಲದಲ್ಲಿ ವೈದ್ಯರ ಹಗೆತನದ ಪಂಗಡಗಳಿರಲಿಲ್ಲ. ಇದ್ದಿದ್ದರೆ ಅವನು ಸಹಿಸುತ್ತಿರಲಿಲ್ಲ. ಆದರೆ ಅವನನಂತರ ಬಂದ ವೈದ್ಯರ ಅಸೂಯೆಯಿಂದ ಬೇರೆ ಬೇರೆ ಪಂಗಡಗಳು ಜನಿಸಿದವು. ಜಗಳ ಪ್ರಾರಂಭವಾಗಿ ಭಿನ್ನಾಭಿಪ್ರಾಯದಿಂದ ಒಬ್ಬರ ನ್ನೊಬ್ಬರು ಹೀಯಾಳಿಸುತ್ತಿದ್ದರು. ಈ ಭಿನ್ನಾಭಿಪ್ರಾಯದ ಜಗಳ ಅಲೆಗ್ಸಾಂಡ್ರಿಯ ದಲ್ಲಿ ಬಹಳ ಕಾಲವಿದ್ದು ರೋಂ ರಾಜ್ಯಕ್ಕೂ ಹರಡಿತ್ತು.

ಈ ಪಂಗಡಗಳಲ್ಲಿ ಎರಡು ಮುಖ್ಯವಾಗಿದ್ದವು. ಶಾಸ್ತ್ರಾಧಾರದ ವೈಚಾರಿಕ ಪಂಗಡ ಹಿಪ್ಪೊಕ್ರೇಟಿಸ್ಸಿನ ಮಕ್ಕಳು ಕೆಸ್ತಲಸ್ ಮತ್ತು ಡ್ರಾಕನ್‌ರವರ ಬೆಂಬಲದಿಂದ ಹುಟ್ಟಿತ್ತು. ಇವರು ಊಹಾಪೋಹವನ್ನು ವೈದ್ಯಶಾಸ್ತ್ರಕ್ಕೆ ಅನುಮೋದಿಸುತ್ತಿದ್ದರು. ಎಲ್ಲಿ ಪರಿಶೀಲನೆ ವಿಫಲವಾಯಿತೋ ಅಲ್ಲಿ ಆಲೋಚನಾಶಕ್ತಿ ಗೆಲ್ಲಬೇಕೆಂಬ ಹೇಳಿಕೆ ಯನ್ನು ನಂಬಿದ್ದರು. ಇದು ಹಿಪ್ಪೊಕ್ರೇಟಿಸ್ಸಿನ ತತ್ತ್ವವಾಗಿದ್ದರೂ ನೂರಾರು ವರ್ಷ ಗಳಾದ ಮೇಲೆ ಊಹಾಪೋಹವೇ ಮೇಲಾಗಿ ಪರಿಶೀಲನೆ ಹಿಂಜರಿಯಿತು. ಈ ಸಂಸ್ಥೆ

ಈ ರೀತಿಯಲ್ಲಿ ಬೆಳೆಯುತ್ತಿದ್ದಾಗ ಕ್ರಿ.ಪೂ. ೨೮೦ರಲ್ಲಿ ಹಿರೋಫಿಲಸ್‌ನ ಶಿಷ್ಯನಾದ ಫಿಲಿನಸ್‌ನ ಆಶ್ರಯದಲ್ಲಿ ಶಾಸ್ತ್ರಜ್ಞಾನವಿಲ್ಲದೆ ಬರೀ ಅನುಭವದಿಂದ ಕೆಲಸ ಮಾಡುವ ಪಂಗಡ ಆರಂಭವಾಯಿತು. ಶಾಸ್ತ್ರಾಧಾರದ ಪಂಗಡ ರೋಗಿಗಳ ಸುಖವನ್ನು ಕಾಪಾಡುತ್ತಿರಲಿಲ್ಲವೆಂಬ ಭಾವನೆಯಿಂದ ಅದಕ್ಕೆ ವಿರೋಧವಾಗಿ ಶಾಸ್ತ್ರಜ್ಞಾನವಿಲ್ಲದ ಪಂಗಡ ಸ್ಥಾಪಿತವಾಯಿತು. ಇದರ ನಿಜವಾದ ಸ್ಥಾಪಕ ಅಲೆಗ್ಸಾಂಡ್ರಿಯದ ಸಿರಪಯನ್ (ಕ್ರಿ.ಪೂ. ೨೭೦). ಈ ಪಂಗಡ ಅನುಭವದಿಂದಲೇ ರೋಗ ಗುಣ ಮಾಡಲು ಯತ್ನಿಸಿತ್ತು. ರೋಗ ಹಲವು ಲಕ್ಷಣಗಳನ್ನು ಹೊಂದಿದೆ ಎಂದೂ, ಪ್ರತಿಯೊಂದು ಲಕ್ಷಣಕ್ಕೂ ಔಷಧ ಬೇಕಾಗುತ್ತದೆಂದೂ ಈ ಪಂಗಡದ ಅಭಿಪ್ರಾಯವಾಗಿತ್ತು.

ಗ್ರೀಸ್ ದೇಶದ ಇವೆರಡು ಪಂಗಡಗಳೂ ಪ್ರತ್ಯೇಕವಾಗಿ ಗ್ರೀಸ್ ಹಾಳಾದ ಮೇಲೆ ರೋಂ ನಗರವನ್ನು ಸೇರಿದವು.

೧೩. ರೋಮನ್ ಚಕ್ರಾಧಿಪತ್ಯದ ವೈದ್ಯಶಾಸ್ತ್ರ

ಗ್ರೀಸ್ ರಾಜ್ಯ ನಾಶವಾದರೂ, ಗ್ರೀಸಿನ ಔದಾರ್ಯ, ಸಂಸ್ಕೃತಿಗಳು ನಾಶವಾಗಲಿಲ್ಲ. ಸಾಹಿತ್ಯ, ವಿಜ್ಞಾನ, ಕಲೆ, ಶಿಲ್ಪ, ತತ್ವಶಾಸ್ತ್ರ ಮತ್ತು ವೈದ್ಯಶಾಸ್ತ್ರಗಳು ರೋಮನ್ ನಗರಕ್ಕೂ ಬಂದು ನೆಲೆಸಿದವು. ಆಗಿನ ಕಾಲದ ರೋಮನ್ ಜನರು ಇದಕ್ಕೆ ವಿರೋಧವಾಗಿದ್ದರೂ ಬೇರೂರಿದವು. ಮುಖ್ಯಸ್ಥರಾದ ಪ್ಲೈನಿ ಮತ್ತು ಕಾಟೊ ಬಹಳ ವಿರೋಧಿಸಿದರು. ರೋಮನ್ ನಗರದಲ್ಲಿ ನೆಲೆಸಲು ಬಂದ ಗ್ರೀಕ್ ವೈದ್ಯರನ್ನು ವಿಷ ಕೊಡುವವರೆಂದು ಹೇಳಿ ಅಲ್ಲಿ ವಾಸಿಸಲು ಸ್ಥಳ ಕೊಡದಿದ್ದರೂ, ಅವರ ಪ್ರಭಾವ ಬೆಳೆಯುತ್ತಲೇ ಬಂತು. ಪ್ಲೈನಿ ಮತ್ತು ಕಾಟೊ ಅಳಲೆಕಾಯಿ ಪಂಡಿತರಂತಿದ್ದರು. ಕೋಸುಗೆಡ್ಡೆ ಮತ್ತು ದ್ರಾಕ್ಷಾರಸವನ್ನು ಎಲ್ಲಾ ರೋಗಗಳಿಗೂ ಕೊಡುತ್ತಿದ್ದರು. ಇವುಗಳ ಜೊತೆಗೆ ಯಂತ್ರಮಂತ್ರಗಳನ್ನು ಉಪಯೋಗಿಸುತ್ತಿದ್ದರು. ಮೇಲಾಗಿ ಆಗಿನ ರೋಮನ್ ನಗರದ ಪಂಡಿತರು ಪುರಾಣ ಮತ್ತು ದೇವತೆಗಳಲ್ಲಿ ನಂಬಿದ್ದರು. ಒಂದೊಂದು ರೋಗದ ಗುಂಪಿಗೂ ಒಂದೊಂದು ದೇವತೆ ಇದೆಯೆಂದು ನಂಬಿ ಪೂಜಿಸುತ್ತಿದ್ದರು. ಕರುಳಿಗೆ ಆಶ್ರಯ ಕೊಡುವ ಕಾರ್ನಾ, ಜನನ ದೇವತೆ ಲೂಸಿನ, ಸೋಂಕಿನ ದೇವತೆ ಮೆಫಿಟಿಸ್, ಜ್ವರದ ದೇವತೆ ಫೆಬ್ರಿಸ್ ಮುಂತಾದವರಲ್ಲಿ ತುಂಬಾ ನಂಬಿಕೆ ಇತ್ತು. ಆಗಿನ ರೋಮನ್ ನಗರದ ವೈದ್ಯಶಾಸ್ತ್ರ ಹೀಗೆ ಹೀನಸ್ಥಿತಿಯಲ್ಲಿದ್ದುದರಿಂದ ಸುಶಿಕ್ಷಿತ ಶಾಸ್ತ್ರೀಯ ಪದ್ಧತಿಯುಳ್ಳ ಗ್ರೀಕ್ ವೈದ್ಯರ ಏಳಿಗೆಗೆ ಯಾವ ಅಡಚಣೆಯೂ ಇರಲಿಲ್ಲ. ಮೇಲಾಗುತ್ತಲೇ ಬಂತು.

ಜನಾರೋಗ್ಯ

ರೋಮನ್ನರ ವೈದ್ಯಶಾಸ್ತ್ರ ಹೀಗೆ ಕೀಳ್ಮಟ್ಟದಲ್ಲಿದ್ದರೂ, ಸಾರ್ವಜನಿಕ ಆರೋಗ್ಯ, ನೈರ್ಮಲ್ಯ ಅವರಲ್ಲಿ ಮೇಲ್ಮಟ್ಟದಲ್ಲೇ ಇದ್ದವು. ಇವೆರಡು ಪದ್ಧತಿಗಳು ಆಗಿನ ಕಾಲದ ಇತರ ರಾಷ್ಟ್ರಗಳ ಪದ್ಧತಿಗಳನ್ನು ಮೀರಿಸಿದ್ದವು. ಅಲ್ಲದೆ ಈಗಿನ ಕಾಲದ ಪದ್ಧತಿಗಳನ್ನು ಹೆಚ್ಚು ಕಡಿಮೆ ಹೋಲುತ್ತಲೂ ಇದ್ದವು. ಮೊದಲನೆಯದಾಗಿ, ರೋಮನ್ ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡಲು ಮೇಲ್ಕಾಲುವೆಯನ್ನು ಕಟ್ಟಿದ್ದರು. ಮೊಟ್ಟಮೊದಲಿನ ಕಾಲುವೆಯನ್ನು ಯೂಟ್ರೇಸಿಯದ ವಾಸ್ತುಶಿಲ್ಪ ರಚನೆ ಪ್ರಕಾರ ಎಪ್ರಿಯಸ್ ಕ್ಲಾಡಿಯಸ್ ಸೀಕಸ್ ಕ್ರಿ.ಪೂ. ೩೧೨ರಲ್ಲಿ ಕಟ್ಟಿದನು. ಕ್ರಿ.ಶ. ಪ್ರಾರಂಭವಾಗುವುದರಲ್ಲಿ ೬ ಮೇಲ್ಕಾಲುವೆಗಳು ಕಟ್ಟಲಾಗಿದ್ದವು. ಕ್ರಿ.ಶ. ೯೭ರಲ್ಲಿ ೧೦ ಮೇಲ್ಕಾಲುವೆಗಳಿದ್ದು, ರೋಮನ್ ನಗರಕ್ಕೆ ೨೫೦ ಲಕ್ಷ ಗ್ಯಾಲನ್ ನೀರು ಒದಗಿಸಲಾಗುತ್ತಿತ್ತು. ಇದರಲ್ಲಿ ಅರ್ಧದಷ್ಟು ಸಾರ್ವಜನಿಕ ಚಿಕಿತ್ಸೆಯ ಸ್ನಾನಗೃಹಗಳಿಗೆ ಹೋಗುತ್ತಿತ್ತು. ಮಿಕ್ಕ ನೀರನ್ನು ಒಬ್ಬನಿಗೆ ೫೦ ಗ್ಯಾಲನ್ ಪ್ರಕಾರ ೨,೦೦೦,೦೦೦



ರೋಮ್ ನಗರಕ್ಕೆ ಸಿಹಿ ನೀರು ಸರಬರಾಜು ಮಾಡುತ್ತಿದ್ದ ನೀರೊ ಮೇಲ್ಕಾಲುವೆ (ಕ್ರಿ. ಶ. ೯೬)

ಜನರಿಗೆ ಕೊಡಲಾಗುತ್ತಿತ್ತು. ಇವುಗಳ ಪೈಕಿ ನಾಲ್ಕು ಕಾಲುವೆಗಳನ್ನು ದುರಸ್ತು ಮಾಡಿ ಈಗಿನ ರೋಮ್ ನಗರಕ್ಕೆ ಸಾಕಷ್ಟು ನೀರು ಒದಗಿಸಲು ಉಪಯೋಗಿಸಲಾಗುತ್ತಿದೆ. ಮೇಲ್ಕಾಲುವೆಗಳ ಅವಶೇಷಗಳು ರೋಮ್, ಇಸ್ತಾಂಬುಲ್, ಸೆಗೊವಿಯ, ಟೆರ್ರಗೊನ ಮತ್ತು ನಿಮೆಸ್‌ಗಳಲ್ಲಿ ಈಗಲೂ ಕಾಣುತ್ತಿವೆ.

ಚಿಕಿತ್ಸಾ ಸ್ನಾನಗೃಹಗಳು

ರೋಮ್ ನಗರದ ಚಿಕಿತ್ಸಾ ಸ್ನಾನದ ಮನೆಗಳು ರೋಮನ್ನರ ದೇಶೀಯ ಪದ್ಧತಿಯಲ್ಲೊಂದಾಗಿದ್ದವು. ೧೮೬–೨೧೭ರಲ್ಲಿ ಕರಕಲ್ಲದಲ್ಲಿದ್ದ ಚಿಕಿತ್ಸಾ ಸ್ನಾನದ ಮನೆಗಳಲ್ಲಿ ೧೬೦೦ ಜನರು ಒಂದೇ ಸಲ ಚಿಕಿತ್ಸೆ ಪಡೆಯುತ್ತಿದ್ದರು. ೨೪೫–೩೧೩ರಲ್ಲಿ ಇದ್ದ ಡಿಯೊಕಿಷಿಯನ್‌ನಲ್ಲಿ ೩೦೦೦ ಕೊಟಡಿಗಳಿದ್ದುವು. ಇವನ್ನು ಪ್ರೋತ್ಸಾಹಿಸುತ್ತಿದ್ದ ಜನರು ಮೊದಲು ಬಟ್ಟೆ ತೆಗೆದು, ದೇಹವನ್ನು ನೀವಿಸಿಕೊಂಡು ಬೆವರು ಬರಿಸುವ ಕೊಟಡಿ ಮೂಲಕ, ಬಿಸಿನೀರು ಮತ್ತು ತಣ್ಣೀರು ಮನೆಗಳಲ್ಲಿ ಸ್ನಾನ ಮಾಡುವ ರೂಢಿಯಲ್ಲಿದ್ದರು. ಇಂತಹ ಸಾರ್ವಜನಿಕ ಚಿಕಿತ್ಸಾ ಸ್ನಾನದ ಮನೆಗಳು ಸುತ್ತಮುತ್ತಲೂ ಹರಡಿ ಉಪಯೋಗದಲ್ಲಿದ್ದವು. ಈಗಲೂ ಇವುಗಳ ಅವಶೇಷಗಳು ಏಷ್ಯ ಮೈನರ್, ಉತ್ತರ ಆಫ್ರಿಕ, ಯೂರೋಪ್ ಮತ್ತು ಇಂಗ್ಲೆಂಡಿನಲ್ಲೂ ಇವೆ. ಯೂರೋಪಿನಲ್ಲಿರುವ ಖನಿಜ ಜಲದ ಊಟೆಗಳು ರೋಮನ್ನರ ಕಾಲದಿಂದಲೂ ಬಳಕೆಯಲ್ಲಿವೆ.

ಗ್ರಾಮಸಾರದ ಮೋರಿಗಳು

ಗ್ರಾಮಸಾರದ ಮೋರಿಗಳು ರೋಮನ್ನರ ಉನ್ನತಿಗೆ ಹೆಗ್ಗುರುತಾಗಿದ್ದುವು.


ಮೊದಲನೇ ಮೋರಿಯನ್ನು ಕ್ರಿ.ಪೂ. ೬ನೇ ಶತಮಾನದಲ್ಲಿ ಕಟ್ಟಲಾಗಿತ್ತು. ಆದರೂ ಈಗಿನ ಕಾಲದ ಮೋರಿಗಳಷ್ಟು ಪ್ರಯೋಜನವಿತ್ತು. ಸಾಕಷ್ಟು ಕೊಚ್ಚು ನೀರಿನ ಕಕ್ಕಸ್ಸುಗಳಿದ್ದವು. ಈ ಪದ್ಧತಿಯನ್ನು ಇತರ ದೇಶಗಳೂ ಅನುಸರಿಸಲು ಆರಂಭಿಸಿದ್ದರು. ಪಾಂಪೆ ಮತ್ತು ಹರ್ಕ್ಯುಲೇನಿಯಮ್‌ಗಳಲ್ಲಿರುವ ಭಗ್ನಾವಶೇಷಗಳಲ್ಲಿ ಈಗಲೂ ಆಗಿನ ಕಾಲದ ಮೇಲ್ಗಾಲುವೆ, ನೀರು ಸರಬರಾಜು ಮಾಡುವ ಯಂತ್ರ, ಕೊಚ್ಚು ನೀರಿನ ಕಕ್ಕಸ್ಸು ಮುಂತಾದ ನೈರ್ಮಲ್ಯ ಸಾಧನಗಳು ಕಾಣುತ್ತಿವೆ. ವೆಸ್ಪಾಸಿಯನ್ ಚಕ್ರವರ್ತಿ ಅಮೃತಶಿಲೆಯಲ್ಲಿ ಕಟ್ಟಿಸಿದ್ದ ಮೂತ್ರಕೊಟಡಿಗಳು ಆಗಿನ ಕಾಲಡ ಮತ್ತೊಂದು ವೈಶಿಷ್ಟ್ಯವಾಗಿತ್ತು. ಇದನ್ನು ಉಪಯೋಗಿಸುವವರು ಸಣ್ಣ ತೆರಿಗೆಯನ್ನು ಕೊಡುತ್ತಿದ್ದರು.

ಆರ್ಕಗಾತಸ್

ಮೊದಮೊದಲು ರೋಮ್ ದೇಶಕ್ಕೆ ಬಂದ ಗ್ರೀಕರಲ್ಲನೇಕರು ಉನ್ನತ ವೈದ್ಯರೆಂದು ನಟಿಸಿ, ಜನರನ್ನು ಮೋಸಮಾಡಿ ಹಣ ಸಂಪಾದಿಸುತ್ತಿದ್ದರು. ಇದು ಕ್ರಮೇಣ ಜನರಿಗೆ ಗೊತ್ತಾಗಿ ಗ್ರೀಕ್ ವೈದ್ಯರ ಪ್ರಖ್ಯಾತಿ ಕುಂದಲು ಪ್ರಾರಂಭವಾಯಿತು. ಅವರ ಮೊಟ್ಟಮೊದಲನೆಯವನ ಹೆಸರು ಆರ್ಕಗಾತಸ್ ಎಂದಿತ್ತು. ಇವನು ಕ್ರಿ.ಪೂ. ೨೧೯ರಲ್ಲಿ ಪೆಲೆಪೆನ್ನೆಸಸ್‌ನಿಂದ ರೋಮ್ ನಗರಕ್ಕೆ ಬಂದು ಸ್ವಲ್ಪ ಕಾಲ ಪ್ರಖ್ಯಾತಿಯಾಗಿದ್ದು ನಂತರ ಮೋಸಗಾರನೆಂದು ತಿಳಿದ ಮೇಲೆ ಅವನನ್ನು ರೋಮ್ ನಗರದಿಂದ ಹೊರಕ್ಕೆ ದಬ್ಬಿದರು. ಇವನು ಒಬ್ಬ ಬಡ ಅಡ್ಡಕಸಬಿಯೆಂದು ಗ್ರೀಸಿನಲ್ಲಿ ಬಾಳಲು ಶಕ್ತಿಯಿಲ್ಲದೆ ರೋಮ್ ನಗರದಲ್ಲಿ ಅದೃಷ್ಟ ಪರೀಕ್ಷಿಸಲು ಬಂದನೆಂದು ವಿದಿಂಗ್ಟನ್ ಬರೆದಿದ್ದಾನೆ. "ಅಜ್ಞಾನಿ ವೈದ್ಯರನ್ನು ಶಿಕ್ಷಿಸಲು ಯಾವ ನಿಯಮವೂ ಇಲ್ಲದಿರುವುದು ನಮ್ಮ ದುರದೃಷ್ಟ. ....ಆದರೂ ಅವರು ನಮ್ಮನ್ನೂ ಸಾಯಿಸಿ ಪ್ರಯೋಗ ನಡೆಸುವರು" ಎಂದು ಬರೆದಿದ್ದಾನೆ.

ಎಸ್ಕ್ಲೆಪಿಯಾಡಿಸ್

ರೋಮ್ ನಗರಕ್ಕೆ ಮೊದಲು ಬಂದವರಲ್ಲಿ ಬಹಳ ಪ್ರಖ್ಯಾತಿ ಪಡೆದ ವೈದ್ಯನೆಂದರೆ ಕಪ್ಪುಸಮುದ್ರದ ದಕ್ಷಿಣ ತೀರದಲ್ಲಿರುವ ಬಿತಿನಿಯ ಪ್ರಾಂತ್ಯದ ಪ್ರೂಸ ಊರಿನ ಎಸ್ಕ್ಲೆಪಿಯಾಡಿಸ್. ಇವನು ಅಲೆಗ್ಸಾಂಡ್ರಿಯದಲ್ಲೂ, ಅಥೆನ್ಸಿನಲ್ಲೂ ವಿದ್ಯಾಭ್ಯಾಸ ಮಾಡಿ ರೋಮ್ ನಗರದಲ್ಲಿ ನೇಮಿಸಿದ್ದನು. ಅನಿಸೆನ್ನ ಮೆಚ್ಚದಿದ್ದರೂ, ಇವನನ್ನು ಎಲ್ಲರೂ ವೈದ್ಯರ ರಾಜಕುಮಾರನೆಂದು ಕರೆಯುತ್ತಿದ್ದರು. ಅಲೆಗ್ಸಾಂಡ್ರಿಯದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಇರಸಿಸ್ಟ್ರಾಟಸ್ಸಿನ ಅಭಿಪ್ರಾಯಗಳನ್ನು ಅನುಸರಿಸುತ್ತಿದ್ದನು. ಇವನ ದೃಢ ಶರೀರ ಮತ್ತು ಸಂಸ್ಕೃತಿಯನ್ನು ಮೆಚ್ಚಿ ಇವನನ್ನು ಗೌರವಿಸುತ್ತಿದ್ದರು. ಇವನು ೩೦ ವರ್ಷ ವಯಸ್ಸಿನಲ್ಲೇ ಬಹಳ ಪ್ರಖ್ಯಾತಿಗೆ ಬಂದು, ಸಿಸಿರೊ, ಮಾರ್ಕ್ ಆಂಟೊನಿ ಮುಂತಾದವರ ವೈದ್ಯನೂ ಸ್ನೇಹಿತನೂ ಆಗಿದ್ದನು. ಒಂಪತು



ಏಸ್ಕ್ಲಿಪಿಯಾಡಿಸ್

ದಿನ ನಡೆದು ಹೋಗುತ್ತಿದ್ದಾಗ ಎದುರಿಗೆ ಬರುತ್ತಿದ್ದ ಹೆಣ ನೋಡಿ, ಇನ್ನೂ ಜೀವ ವಿದ್ದುದನ್ನು ಕಂಡು, ಮೆರವಣಿಗೆ ನಿಲ್ಲಿಸಿ, ಚಿಕಿತ್ಸೆ ಮಾಡಿ, ಅವನ ಉತ್ತರಾಧಿಕಾರಿಗಳಿಗೆ ನಿರಾಶೆಯಾಗುವಂತೆ ಬದುಕಿಸಿದ ಕಥೆ ಪೂರ್ವದಿಂದಲೂ ಹೇಳಲಾಗಿದೆ. ಇದನ್ನು ನೋಡಿ ಜನರು ಆಶ್ಚರ್ಯಗೊಂಡು ಮತ್ತಷ್ಟು ಉತ್ತೇಜನ ಕೊಟ್ಟರು. ಉಳಿದ ದೇಶಗಳಲ್ಲೆಲ್ಲಾ ಅವನ ಕೀರ್ತಿ ಹಬ್ಬಿ ಇನ್ನಷ್ಟು ಹೆಚ್ಚಾಯಿತು.

ಪರಮಾಣು ಸೂತ್ರ

ಇವನು ವೈದ್ಯಶಾಸ್ತ್ರದ ಪಿತಾಮಹನಾದ ಹಿಪ್ಪೊಕ್ರೇಟಿಸ್ ಬೆಂಬಲಿಗನಾದರೂ, ಅವನ ರಸತತ್ತ್ವವನ್ನು ನಂಬದೆ ಶರೀರ ಪರಮಾಣುಗಳಿಂದ ಕೂಡಿದೆಯೆಂದೂ, ಪರಮಾಣುಗಳ ಮಧ್ಯೆ ರಂಧ್ರಗಳಿವೆಯೆಂದೂ, ಈ ರಂಧ್ರಗಳ ಮೂಲಕ ಸಣ್ಣ ಸಣ್ಣ ಪರಮಾಣುಗಳು ಹಾಯುತ್ತವೆಂದೂ, ರಂಧ್ರಪರಮಾಣುಗಳ ವ್ಯತ್ಯಾಸದಿಂದ ರೋಗ ಬರುತ್ತದೆಂದೂ ತಿಳಿಸಿದ್ದನು. ಈ ವಿವಾದ ಆಗಿನ ವಿಜ್ಞಾನಿಗಳಾದ ಡೆಮೊಕ್ರಿಟಸ್ ಮತ್ತು ಎಪಿಕ್ಯುರಸ್‌ರವರ ಪರಮಾಣು ಸೂತ್ರವನ್ನು ಅನುಸರಿಸುತ್ತಿದ್ದುದರಿಂದ ಮೆಚ್ಚಿಗೆ ಪಡೆದಿತ್ತು. ಹಿಪ್ಪೊಕ್ರೇಟಿಸ್ಸಿನ "ಪ್ರಕೃತಿಯೇ ಅತ್ಯುತ್ತಮ ವೈದ್ಯ" ಎಂಬ ನುಡಿಯನ್ನು ತಳ್ಳಿಹಾಕಿ, ವೈದ್ಯನಿಂದಲೇ ರೋಗ ಗುಣವಾಗುತ್ತದೆಂಬ ಭರವಸೆ ನೀಡಿ

ದ್ದನು. ರೋಗವನ್ನು ಸುರಕ್ಷಿತವಾಗಿ, ವೇಗವಾಗಿ ಮತ್ತು ಹಿತವಾಗಿ ಗುಣಪಡಿಸ ಬೇಕೆಂದು ಇವನೇ ಮೊದಲು ಹೇಳಿದ್ದು. ರೋಗಿಯ ಗುಣಕ್ಕನುಗುಣವಾಗಿ ಔಷಧ ಕೊಡಬೇಕೆಂದೂ, ಆಹಾರ, ನೀವುವಿಕೆ, ದ್ರಾಕ್ಷಾರಸ, ಸ್ನಾನ ಮುಂತಾದ ಹಿತವಾದ ಔಷಧಗಳನ್ನು ಕೊಟ್ಟು ಗುಣಮಾಡಬೇಕೆಂದೂ ತಿಳಿಸಿದ್ದನು. ನಾನಾವಿಧವಾದ ಜಲ ಚಿಕಿತ್ಸೆಗಳನ್ನು ಅರಿತಿದ್ದನು. ಶ್ವಾಸನಾಳಚ್ಛೇದನವನ್ನು ಇವನೇ ಮೊದಲು ಕಂಡು ಹಿಡಿದಿದ್ದು. ರೋಗಗಳನ್ನು ಕೂರಾದ ಮತ್ತು ಬೇರೂರಿದ ರೋಗಗಳೆಂದು ವಿಂಗಡಿಸಿ, ಬೇರೂರಿದ ರೋಗಗಳನ್ನು ಪರೀಕ್ಷಿಸಿ ಔಷಧ ಕೊಡಬೇಕೆಂದು ಹೇಳಿದ್ದೂ ಇವನೇ. ಮಾನಸಿಕ ರೋಗಗಳನ್ನೂ ಮತ್ತು ವಯಸ್ಸಾದವರಲ್ಲಿ ಬರುವ ರೋಗಗಳನ್ನೂ ತಕ್ಕ ಔಷಧಗಳಿಂದ ಗುಣಪಡಿಸುತ್ತಿದ್ದನು. ಮಾನಸಿಕ ರೋಗಿಗಳನ್ನು ಕತ್ತಲೆ ಮನೆ ಯಲ್ಲಿ ಕೂಡಿಸುತ್ತಿದ್ದ ಹಳೆಯ ಪದ್ಧತಿಯನ್ನು ಖಂಡಿಸಿ, ಬೆಳಕಿನಲ್ಲೂ, ವಾಯು ಸಂಚಾರವಿರುವೆಡೆಗಳಲ್ಲೂ ಇಟ್ಟು, ಸಂಗೀತ, ಅಂಗಸಾಧನೆ, ದ್ರಾಕ್ಷಾರಸ ಕೊಟ್ಟು ಶಾಂತಿಗೊಳಿಸುತ್ತಿದ್ದನು. ಇವನನ್ನು ಜಂಬಗಾರ, ಹಟಗಾರ, ನಾಚಿಕೆ ಇಲ್ಲದವ, ಕೋಪಿಷ್ಟ ಎಂದು ಗ್ಯಾಲೆನ್ ಖಂಡಿಸಿದ್ದರೂ, ಪ್ಲೈನಿ ಮತ್ತು ಸೆಲ್ಸಸ್ ಹೊಗಳಿದ್ದರು. ಹಿಪ್ಪೊಕ್ರೇಟಿಸ್ ಬಿಟ್ಟರೆ ಇವನಂತಹ ಶ್ರೇಷ್ಠನಿಲ್ಲವೆಂದು ಸೆಲ್ಸಸ್ ಹೇಳಿದ್ದನು.

ಆನ್ಟೋನಿಯಸ್ ಮೂಸ

ಆನ್ಟೋನಿಯಸ್ ಮೂಸ ಜ್ಞಾಪಕಾರ್ಹನಾದ ಇನ್ನೊಬ್ಬ ವೈದ್ಯ ೧೦ರಲ್ಲಿ ಆಗಸ್ಟಸ್ ಸೀಸರ್ ಚಕ್ರವರ್ತಿಗೂ ಮತ್ತು ಹೊರೇಸ್ ಕವಿಗೂ ಕೀಲುಬಾವನ್ನು ತಣ್ಣೀರು ಸ್ನಾನದಿಂದ ಗುಣಪಡಿಸಿದನೆಂದು ಹೇಳಲಾಗಿದೆ. ಇವನು ಇನ್ನೂ ಇತರ ಪ್ರಖ್ಯಾತ ವಿಜ್ಞಾನಿಗಳನ್ನೂ, ಪಂಡಿತರುಗಳನ್ನೂ ಅಂಗಸಾಧನೆ, ತಣ್ಣೀರು ಸ್ನಾನ ಮತ್ತು ಕಟ್ಟುಮದ್ದಿನಿಂದ ಗುಣಪಡಿಸುತ್ತಿದ್ದನು.

ಸ್ಕ್ರಿಬೊನಿಯಸ್ ಲಾರ್ಗಸ್

ಸ್ಕ್ರಿಬೊನಿಯಸ್ ಲಾರ್ಗಸ್ ೪೩-೪೮ರಲ್ಲಿ ಅನೇಕ ಔಷಧಗಳ ಪಟ್ಟಿಯುಳ್ಳ ಪುಸ್ತಕ ಬರೆದು ಕ್ಲಾಡಿಯಸ್ ಚಕ್ರವರ್ತಿಗೆ ಅರ್ಪಿಸಿದ್ದನು. ಇವನು ದೇಶ ಸುತ್ತಿ ಔಷಧ ಪಟ್ಟಿಗಳನ್ನು ಸಂಪಾದಿಸುತ್ತಿದ್ದನು. ಮೊಟ್ಟಮೊದಲಿಗೆ ಗಾಂಜ ಕಷಾಯ ವನ್ನು ವಿವರಿಸಿದ್ದನು. ಹಲ್ಲಿನ ರೋಗಗಳನ್ನು ಅರಿತಿದ್ದನು. ಎಲ್ಲರಲ್ಲೂ ಹುಳು ಕಲ್ಲನ್ನು ಕೀಳಬೇಕಾಗಿಲ್ಲವೆಂದೂ, ರೋಗವಿರುವ ಭಾಗವನ್ನು ಮಾತ್ರ ಕೆರೆದು ನಯ ಮಾಡಿದರೆ ಸಾಕೆಂದು ಹೇಳಿದ್ದನು.

ತೆಮಿಸನ್

ಕ್ರಿ. ಪೂ. ೧೨೩-೪೩ ರಲ್ಲಿ ಎಸ್ಕ್ಲಿಪಿಯಾಡಿಸ್‌ನ ಶಿಷ್ಯ ಲೊಡಿಸೆಯದ ತೆಮಿ ಸನ್ ಈ ಗುಂಪನ್ನು ಸ್ಥಾಪಿಸಿದನು ಎಸ್ಕ್ಲಿಪಿಯಾಡಿಸ್‌ನ ಪರಮಾಣು ಮತ್ತು ರಂಧ್ರದ ತತ್ವವನ್ನು ಪ್ರೋತ್ಸಾಹಿಸಿ ರೋಗಗಳು ಎರಡು ವಿಧವಾಗಿವೆಯೆಂದೂ,

ಒಂದರಲ್ಲಿ ರಂಧ್ರಗಳು ಕಿರಿದಾಗಿರುವುದರಿಂದ ಅಥವಾ ಮುಚ್ಚಿರುವುದರಿಂದ ರೋಗ ಬರುವುದೆಂದೂ, ಇನ್ನೊಂದರಲ್ಲಿ ರಂಧ್ರಗಳು ಅಗಲವಾಗಿರುವುದರಿಂದ ರೋಗ ಬರುತ್ತದೆಂದೂ ತಿಳಿಸಿದ್ದನು. ಹೀಗೆ ಬಿಗಿತ ಅಥವಾ ಸಡಿಲತೆಗಳ ವ್ಯತ್ಯಾಸದಿಂದ ರೋಗ ಉಂಟಾಗುತ್ತದೆಂದು, ಬಿಗಿತದಿಂದ ರೋಗ ಬಂದಿದ್ದರೆ ಸಡಿಲಿಸುವ ಔಷಧಗಳನ್ನೂ, ಸಡಿಲತೆಯು ರೋಗ ಉಂಟಾಗಿದ್ದರೆ ಬಿಗಿತಗೊಳಿಸುವ ಔಷಧಗಳನ್ನೂ ಕೊಡಬೇಕೆಂದು ತಿಳಿಸಿದ್ದನು. ಜ್ವರದ ಮೊದಲನೆ ಹಂತದಲ್ಲಿ ಬಿಗಿತವಿರುವುದರಿಂದ ಸಡಿಲಿಸುವ ಔಷಧ ಕೊಡಬೇಕೆಂದೂ, ಜ್ವರದ ಕೊನೆಯ ಹಂತದಲ್ಲಿ ಸಡಿಲವಾಗಿರುವುದರಿಂದ ಬಿಗಿತಗೊಳಿಸುವ ಔಷಧ ಕೊಡಬೇಕೆಂದೂ ಹೇಳಿದ್ದನು. ಆದ್ದರಿಂದ, ಈ ಕ್ರಮಬದ್ಧ ವರ್ಗದವರ ತತ್ತ್ವ ಕೈತೂಕ ಬಾಯಿ ಬಣ್ಣ ಎಂಬಂತೆ ಅಭ್ಯಾಸದ ನೆಪ್ಪಿನ ಮೇಲೆ ವೈದ್ಯರು ಔಷಧ ಕೊಡುತ್ತಿದ್ದರು.

ತಸಲಸ್

ತೆಮಿಸನ್ನಿನ ಶಿಷ್ಯನಾದ ತಸಲಸ್ ಹಿಪ್ಪೊಕ್ರೇಟಿಸ್ಸನ್ನೂ ಇರಸಿಸ್ಟ್ರಾಟಸನ್ನೂ ಹೀಯಾಳಿಸಿ ವೈದ್ಯಶಾಸ್ತ್ರ ಕಲಿಯಲು ಕೇವಲ ಆರೇ ತಿಂಗಳು ಸಾಕೆಂದು ಹೇಳಿದ ಸಂತೋಷ ಸುದ್ದಿ ಕೇಳಿ, ಕಮ್ಮಾರರೂ, ಕೂಲಿಗಾರರು, ವಿದ್ಯೆ ಇಲ್ಲದವರೂ ಇತರರೂ ವೈದ್ಯವೃತ್ತಿ ಪ್ರಾರಂಭಿಸಿದಾಗ, ಈ ಕ್ರಮಬದ್ಧ ವರ್ಗದವರ ಗುಂಪು ದೊಡ್ಡದಾಗುತ್ತಾ ಬಂತು. ಒಂದು ಶತಮಾನವಾದ ಮೇಲೂ ಅಲೆಗ್ಸಾಂಡ್ರಿಯದಲ್ಲೂ ರೋಮ್ ನಗರದಲ್ಲೂ ಈ ಗುಂಪು ಬೆಳೆಯುತ್ತಿರುವುದನ್ನೂ, ಅದರ ಜವಾಬ್ದಾರಿಯನ್ನೂ ಗ್ಯಾಲನ್ ಕಂಡನು. ಈ ಗುಂಪಿನ ಪ್ರಭಾವ ಮಧ್ಯ ಯುಗದವರೆವಿಗೂ ಬೀರುತ್ತಿತ್ತೆಂದು ಹೇಳಲಾಗಿದೆ.

ರೋಮನ್ನರಿಂದ ಅಕ್ರಗಾತಸ್ ಮತ್ತು ಅವನ ಕಾಲದ ವೈದ್ಯರನ್ನೆಲ್ಲಾ ಹೊರಗೋಡಿಸಿದರೂ, ಗ್ರೀಕ್ ವೈದ್ಯರು ರೋಮ್ ನಗರಕ್ಕೆ ಬರುವುದು ಮಾತ್ರ ತಪ್ಪಲಿಲ್ಲ. ಗ್ರೀಕ್ ವೈದ್ಯರು ಭಾರಿ ಹುದ್ದೆಗಳನ್ನು ಸಂಪಾದಿಸಿದರಲ್ಲದೆ, ಸೀಸರ್ ಮುಂತಾದ ಮುಖ್ಯಾಧಿಕಾರಿಗಳ ಸೇವೆ ಮಾಡಲು ಪ್ರಾರಂಭಿಸಿದರು. ಗ್ರೀಕ್ ವೈದ್ಯರು ರೋಮನ್ನರ ಸೈನ್ಯಕ್ಕೆ ಅಗತ್ಯವಾಗಿ ಬೇಕಾಗಿದ್ದುದರಿಂದ ಜೂಲಿಯಸ್ ಸೀಸರ್ ಅವರಿಗೆ ರೋಮ್ ನಗರದ ಪ್ರಜೆತನ ಕೊಟ್ಟಮೇಲಂತೂ ಅವರು ರೋಮ್ ನಗರದಲ್ಲಿ ಸ್ಥಿರವಾಗಿ ನಿಂತರು.

೧೪. ರೋಮ್‌ನಗರದ ವಿಶ್ವಜ್ಞಾನಿಗಳು

ಸೆಲ್ಸಸ್

ರೋಮ್ ಚಕ್ರಾಧಿಪತ್ಯದ ಮೊದಲನೇ ಶತಮಾನದಲ್ಲಿ ವೈದ್ಯವೃತ್ತಿ ಗ್ರೀಕರ ಕೈಯಲ್ಲಿದ್ದರೂ, ವೈದ್ಯನಲ್ಲದ ಕಾರ್ನೀಲಿಯಸ್ ವಂಶಕ ರೋಮನ್ನನಾದ ಸೆಲ್ಸಸ್ 'ಡಿ ಮೆಡಿಸಿನ' ಎಂಬ ಶ್ರೇಷ್ಠ ವೈದ್ಯಶಾಸ್ತ್ರದ ಗ್ರಂಥವನ್ನು ಬರೆದಿದ್ದನು. ಇದನ್ನು ಒಳಗೊಂಡಿದ್ದ ವಿಶ್ವಕೋಶ ಶುದ್ಧ ಲ್ಯಾಟಿನ್ ಭಾಷೆಯಲ್ಲಿ ಬರೆಯಲಾಗಿತ್ತು. ವ್ಯವಸಾಯ, ಯುದ್ಧ ತತ್ವಶಾಸ್ತ್ರ, ನ್ಯಾಯ, ಇತ್ಯಾದಿ ಸಕಲ ವಿದ್ಯೆಗಳೆಲ್ಲಾ ಈ ವಿಶ್ವಕೋಶದಲ್ಲಿದ್ದವು. ಆದರೆ ವೈದ್ಯಶಾಸ್ತ್ರದವನ್ನು ಬಿಟ್ಟು ಉಳಿದ ಗ್ರಂಥಗಳೆಲ್ಲಾ ಹಾಳಾದವು. ೧೪ ಶತಮಾನಗಳಾದ ಮೇಲೆ ಈ ವೈದ್ಯಶಾಸ್ತ್ರದ ಹಸ್ತಪ್ರತಿ ಐದನೆ ಪೋಪ್ ನಿಕೊಲಾಸ್ ಕೈಗೆ ಸಿಕ್ಕಿ ಅದನ್ನು ೧೪೭೮ರಲ್ಲಿ ಫ್ಲಾರೆನ್ಸಿನಲ್ಲಿ ಅಚ್ಚಾಯಿತು. ಇದನ್ನು ನೋಡಿ ಎಲ್ಲರೂ ಆಶ್ಚರ್ಯಗೊಂಡರು. ಅದರ ಶುದ್ಧ ಲ್ಯಾಟಿನ್ ಭಾಷೆಯನ್ನು ಓದಿ ಸಾಹಿತ್ಯಗಾರರೆಲ್ಲಾ ಬೆರಗಾದರು. ವೈದ್ಯರಂತೂ ಅದರ ವೈದ್ಯಶಾಸ್ತ್ರದ ಆಳವನ್ನು ಹೇಳಲಾರದಾದರು. ಇವನ ಶೈಲಿಯನ್ನು ಮೆಚ್ಚಿ ರೋಮನ್ನರ ಹಿಪ್ಪೊಕ್ರೇಟಿಸ್ ಎಂದು ಹೆಸರಿಟ್ಟು, ಇವನ ಹೆಸರನ್ನು ಹಿಪ್ಪೊಕ್ರೇಟಿಸ್ ಮತ್ತು ಗ್ಯಾಲೆನ್‌ರ ಗುಂಪಿಗೆ ಸೇರಿಸಿದರು.

ಹೋಮರನ ಕಾಲದಿಂದ ,ಎಸ್ಕ್ಲಿಪಿಯಾಡಿಸ್ ಕಾಲದವರಿವಿಗೂ ವೈದ್ಯಶಾಸ್ತ್ರ ಅಭಿವೃದ್ಧಿಯಾಗುತ್ತಿದೆಯೆಂದು ಸೆಲ್ಸಸ್ ತನ್ನ ಗ್ರಂಥದ ಮುನ್ನುಡಿಯಲ್ಲಿ ಬರೆದಿರುವನು. ಅವನು ತಿಳಿಸಿರುವ ಪ್ರಕಾರ ಹಿರೋಫಿಲಸ್ ಮತ್ತು ಇರಾಸಿಸ್ಟ್ರಾಟಸ್‌ರವರ ಕಾಲದಲ್ಲಿ ವೈದ್ಯಶಾಸ್ತ್ರವನ್ನು ಮೂರು ಪಂಗಡಗಳಾಗಿ ವಿಭಾಗಿಸಿದ್ದರು. ಒಂದು ಆಹಾರ, ಎರಡನೆಯದು ಔಷಧವಸ್ತುಶಾಸ್ತ್ರ, ಮೂರನೆಯದು ಶಸ್ತ್ರವೈದ್ಯ. ಮುನ್ನುಡಿಯನ್ನು ಮುಗಿಸುತ್ತಾ 'ಅದೂ ಅಲ್ಲದೆ, ಬದುಕಿರುವವರ ದೇಹಗಳನ್ನು ಕೊಯ್ದು ನೋಡುವುದು ಕ್ರೂರ ಮತ್ತು ನಿರುಪಯೋಗಕರ. ಆದರೆ ವೈದ್ಯಶಾಸ್ತ್ರ ಆರಾಧಕರು ಮಾತ್ರ ಸತ್ತವರನ್ನು ಕೊಯ್ದು ನೋಡುವುದನ್ನು ಕೈಬಿಡುವಂತಿಲ್ಲ', ಹೀಗೆಂದು ಅಂಗಚ್ಛೇದನದ ಪ್ರಾಮುಖ್ಯತೆಯನ್ನು ವಿವರಿಸಿದ್ದನು.

ವೈದ್ಯ ಗ್ರಂಥಗಳು

ಸೆಲ್ಸಸ್ ಬರೆದ ೮ ಪುಸ್ತಕಗಳಲ್ಲಿ, ಮೊದಲನೆಯದರಲ್ಲಿ ಆಹಾರ, ಆರೋಗ್ಯಶಾಸ್ತ್ರಗಳ ವಿಷಯಗಳಿದ್ದವು. ಎರಡನೆಯದರಲ್ಲಿ ರೋಗಗಳ ಕಾರಣ, ಲಕ್ಷಣ, ಮುನ್ನರಿವುಗಳನ್ನು ವಿವರಿಸಿತ್ತು. ಇದಕ್ಕೆ ಹಿಪ್ಪೊಕ್ರೇಟಿಸ್ಸಿನ ಲೇಖನಗಳೇ ಮೂಲ

ಆಧಾರ. ಮೂರನೆಯ ಪುಸ್ತಕದಲ್ಲಿ ಜ್ವರ ಮತ್ತು ಜ್ವರದ ಚಿಕಿತ್ಸೆ ಬರೆದಿತ್ತು. ಇದರಲ್ಲಿ ಉರಿತದ ನಾಲ್ಕು ಗುಣಗಳಾದ ಕೆಂಬಣ್ಣ, ಊತ, ಕಾವು ಮತ್ತು ನೋವುಗಳನ್ನು ವಿವರಿಸಿದೆ. ಮಲನಾಳದೊಳಕ್ಕೆ ಪುಷ್ಟಿಕರವಾದ ಆಹಾರವನ್ನು ವಸ್ತಿಗಳಾಗಿ ಕೊಡುವ ವಿಧಾನವನ್ನೂ ವಿವರಿಸಿದೆ. ವೈದ್ಯಶಾಸ್ತ್ರದಲ್ಲಿ ಇದೇ ಮೊದಲನೇ ಸಲ ಈ ವಿಷಯ ಬರೆದಿರುವುದು. ನಾಲ್ಕನೆಯ ಪುಸ್ತಕದಲ್ಲಿ ಅಂಗ ರಚನೆ, ಮೈ ಊತ, ಸೆಟೆಬೇನೆ, ಗೂರಲು, ಪುಪ್ಪುಸುರಿತ, ಗಂಟಲುನೋವು, ದಪ್ಪನಾದ ತೊರಳೆ, ಆಮಶಂಕೆ ಮತ್ತು ಕೀಲುಬಾವು ಮುಂತಾದವನ್ನು ಬರೆದಿದೆ. ಐದನೆಯದರಲ್ಲಿ ಔಷಧ ವಸ್ತುಗಳ ವಿಚಾರ ಮತ್ತು ಗಾಯಗಳ ವಿವರ ಗಳಿವೆ. ಮೇಲೆ ಹಚ್ಚುವ ಔಷಧಗಳು, ಹೊಟ್ಟೆಗೆ ಕುಡಿಸುವ ಔಷಧಗಳು, ಭೇದಿ ಆಗು ಆಗುವುದಕ್ಕೆ ಕೊಡುವ ಲೋಳೆಸರ,ಕಟುಕರೋಹಿಣಿ,ಗಾಯಕ್ಕೆ ಹಚ್ಚುವ ಓವ್ ಎಣ್ಣೆ, ದೇವದಾರು ತೈಲ; ನೋವುಕಳೆವ ಮಾಂಡ್ರಗೊರ, ಗಾಂಜಗಳ ವಿಷಯಗಳೆಲ್ಲಾ ಇದ್ದವು. ಗಾಯ ಚಿಕಿತ್ಸೆ ವಿವರಿಸುತ್ತ ರಕ್ತಸಾವ್ರವನ್ನು ನಿಲ್ಲಿಸಲು ಒತ್ತಬೇಕೆಂದು, ಅಗತ್ಯವಿದ್ಯಲ್ಲಿ ರಕ್ತ ಬರುತ್ತಿರುವ ರಕ್ತನಾಳಗಳನ್ನು ದಾರದಿಂದ ಬಿಗಿಯಬೇಕೆಂದೂ ಹೇಳಿತ್ತು. ಹೊಸ ಗಾಯಗಳ ಅಂಚುಗಳನ್ನು ಸೇರಿಸಿ ಹೊಲಿಯಬೇಕೆಂದೂ, ಹೊಲಿಯುವುದಕ್ಕೆ ಮುಂಚೆ ಗಾಯದ ಒಳ ಭಾಗವನ್ನು ಚೊಕ್ಕಟವಾಗಿ ತೊಳೆಯ ಬೇಕೆಂದೂ, ಇಲ್ಲದಿದ್ದರೆ ಕೀವು ಸೇರಬಹುದೆಂದೂ ತಿಳಿಸಿತ್ತು. ಆರನೆಯ ಪುಸ್ತಕ ದಲ್ಲಿ ಚರ್ಮ ರೋಗ ಮತ್ತು ಹುಣ್ಣುಗಳ ವಿಚಾರ ವಿವರಿಸುತ್ತಾ, ಮೂಳೆ ರೋಗ, ಮೇಹರೋಗದ ಹುಣ್ಣು, ಲಿಂಗದ ಏಡಿಗಂತಿಗಳನ್ನೂ; ಏಳನೆಯದರಲ್ಲಿ ಶಸ್ತ್ರ ಕ್ರಿಯೆಗಳನ್ನೂ, ಎಂಟನೆಯದರಲ್ಲಿ ಮೂಳೆ ಮುರಿತ ಮತ್ತು ಕೀಲು ಪಲ್ಲಟಗಳನ್ನು ಬರೆಯಲಾಗಿದೆ. ಶಸ್ತ್ರಕ್ರಿಯೆಗಳಲ್ಲಿ ಅಶ್ಮರೀಕರ್ತನ, ಕೆಳತುಟಿ ಏಡಿಗಂತಿಯ ಶಸ್ತ್ರ ಕ್ರಿಯೆ, ಸುರೂಪಿಕ ಶಸ್ತ್ರವೈದ್ಯ, ಕಣ್ಣಿನ ಪೊರೆ ಚಿಕಿತ್ಸೆ, ಹಲ್ಲುಕೀಳುವಿಕೆ, ಮೆಂಡಿಕೆ ಶಸ್ತ್ರಕ್ರಿಯೆಗಳನ್ನೂ ವಿವರಿಸಿದೆ. ಕೊಳೆತಿರುವ ಕೈ ಕಾಲುಗಳ ಅಂಗಚ್ಛೇದನ ವಿಧಾನಗಳೂ ಇದ್ದವು.

ಮಾರ್ಕಸ್ ಟೆರೆನ್ಷಿಯಸ್ ವಾರ್ರೊ

ಮಾರ್ಕಸ್ ಟೆರೆನ್ಷಿಯಸ್ ವಾರ್ರೊ ಕ್ರಿ.ಪೂ. ೧೧೬-೨೭ರಲ್ಲಿ ಇದ್ದ ಇನ್ನೊಬ್ಬ ವಿಶ್ವಜ್ಞಾನಿ, ವ್ಯಾಕರಣ, ರೇಖಾಗಣಿತ, ಗಣಿತಶಾಸ್ತ್ರ, ಜ್ಯೋತಿಷ್ಯ, ಸಂಗೀತ, ಕಲೆ ಮತ್ತು ವೈದ್ಯಶಾಸ್ತ್ರಗಳೆಲ್ಲೆಲ್ಲಾ ಅತ್ಯುತ್ತಮವಾಗಿ ಬರೆದು ಖ್ಯಾತಿ ಪಡೆದಿದ್ದನು. ಇವನು ಜೌಗುಪ್ರದೇಶದಲ್ಲಿ,ರೋಗ ಕ್ರಿಮಿಗಳಿರುವುದರಿಂದ ಅಲ್ಲಿ ಮನೆಕಟ್ಟಬಾರದೆಂದು ತಿಳಿಸಿದ್ದನು. ಹಾಗೂ ಆರಂಭಗೆಲಸದಲ್ಲೂ ಅನೇಕ ಸೂಚನೆಗಳನ್ನು ಬರೆದಿದ್ದನು.

ಇಮ್ಮಡಿ ಕೆಯಸ್ ಪ್ಲೀನಿಯಸ್

ಇಮ್ಮಡಿ ಕೆಯಸ್ ಪ್ಲೀನಿಯಸ್ ೨೩-೭೯ರವರೆವಿಗೆ ಎಲ್ಲರಿಗಿಂತಲೂ ಶ್ರೇಷ್ಠ ನಾಗಿದ್ದು, ಬರಹಗಾರ, ವಕೀಲ, ಸಿಪಾಯಿ, ದೇಶಸಂಚಾರಿ ಮತ್ತು ಆಡಳಿತ

ಗಾರನೂ ಆಗಿದ್ದನು. ಬೆಳಗಾಗುವುದರೊಳಗೆ ದೊರೆ ವೆಸ್ಪಾಸಿಯನ್ ಜತೆ ರಾಜ್ಯಾಡಳಿತವನ್ನು ಕುರಿತು ಚರ್ಚೆ ನಡೆಸಿ, ನಂತರ ಮನೆಯಲ್ಲಿ ದಿವಸವೆಲ್ಲಾ ಓದುವುದರಲ್ಲಿ ತೊಡಗುತ್ತಿದ್ದನು. ಓದಿದ್ದನ್ನೆಲ್ಲಾ ಬರೆಯುವ ರೂಢಿಯೂ ಇವನಲ್ಲಿತ್ತು. ಕೆಲಸವಿಲ್ಲದೆ ಕಾಲ ಕಳೆಯುವುದನ್ನು ಕಂಡರೆ ಸರಿಬೀಳುತ್ತಿರಲಿಲ್ಲ. ವಿಸೂವಿಯಸ್ ಜ್ವಾಲಾಮುಖಿ ಹೊರ ಚಿಮ್ಮುವುದನ್ನು ನೋಡಿ ತನ್ನ ಕುತೂಹಲವನ್ನು ಇಂಗಿಸುವುದಕ್ಕೋಸ್ಕರ ಹೋಗಿದ್ದಾಗ ಪಾಂಪೆ ಹತ್ತಿರವಿದ್ದ ಸ್ಟೆಬಿಯದಲ್ಲಿ ಕ್ರಿ.ಶ. ೭೯ರಲ್ಲಿ ಪ್ರಾಣ ಕಳೆದುಕೊಂಡನು.

ಇವನು ಬರೆದಿರುವ ಗ್ರಂಥಗಳಲ್ಲಿ ರೋಮ್ ನಗರದ ಚರಿತ್ರೆ, ಜರ್ಮನಿಯ ಯುದ್ಧಗಳು. ಭಾಷಣ ಮತ್ತು ಪ್ರಕೃತಿ ಚರಿತ್ರೆ ಮುಖ್ಯವಾದವು. ಇವನ ಪ್ರಕೃತಿ ಚರಿತ್ರೆಯಲ್ಲಿ ಅನೇಕ ತಪ್ಪುಗಳಿದ್ದರೂ, ಪ್ರಪಂಚದಲ್ಲಿರುವುದನ್ನೆಲ್ಲಾ ಸಂಗ್ರಹಿಸಿ ಬರೆದಿದ್ದನು. ಡ್ಯುರಾಂಟ್ ಹೇಳಿರುವಂತೆ, 'ಈ ಪ್ರಕೃತಿ ಚರಿತ್ರೆ ರೋಮನ್ನರ ಅಜ್ಞಾನದ ಶಾಶ್ವತ ಸ್ಮಾರಕ'ವಾಗಿತ್ತು. ಆದರೂ ಅದರಲ್ಲಿ ಚರಿತ್ರೆಕಾರರಿಗೆ ಬೇಕಾದ ವಿಷಯಗಳು ಬಹಳವಿದ್ದವು. ಅಲ್ಲದೆ, ಪ್ಲೈನಿ ಕಡೆಗಣಿಸಿದ್ದ ಆಗಿನ ಕಾಲದ ಗ್ರೀಕರ ವೈದ್ಯವೃತ್ತಿಯನ್ನೂ, ರೋಮನ್ನರ ವೈದ್ಯ ಕಲೆಯನ್ನೂ ವಿವರಿಸಿದ್ದವು. ಅವನ ಪ್ರಕೃತಿ ಚರಿತ್ರೆಯ ವೈದ್ಯಭಾಗದಲ್ಲಿ ಅನೇಕ ಅವಿವೇಕಗಳಿದ್ದರೂ, ಹಿಪ್ಪೊಕ್ರೇಟಿಸ್ ಪ್ರಾಕ್ಸಗೊರಸ್, ಎಸ್ಕ್ಲಿಪಿಡಿಯಾಸ್, ಇರಾಸಿಸ್ಟ್ರಾಟಸ್‌ಗಳನ್ನು ಹೊಗಳಿ, ೬೦೦ ಗಿಡ ಮೂಲಿಕೆಗಳ ಉಪಯೋಗಗಳನ್ನು ವಿವರಿಸಿತ್ತು. ನೀರಿನ ಚಿಲುಮೆಗಳ ವಿಷಯವಾಗಿ ಬರೆಯುತ್ತಾ ಜರ್ಮನಿಯ ಮಟ್ಟಿಯಕಮ್ ಬಿಸಿನೀರಿನ ಚಿಲುಮೆಗಳ, ಪೆರಿನಿಯಸ್ ಪರ್ವತದ ಬಿಸಿ ನೀರು ಮತ್ತು ತಣ್ಣೀರು ಚಿಲುಮೆಗಳ ಉಪಯೋಗಗಳನ್ನೂ ತಿಳಿಸಿದ್ದನು. ಆದರೂ, ಅವಿವೇಕ ವಚನಗಳಾಗಿ, ಕೆಲವು ಚಿಲುಮೆ ನೀರು ಕುಡಿದರೆ ಬಿಳಿ ಕುರಿ ಕರಿಯಾಗುತ್ತದೆಂದು, ಕರಿ ಕುರಿ ಬಿಳಿದಾಗುತ್ತದೆಂದೂ ತಿಳಿಸಿದ್ದನು. ಇಷ್ಟಾದರೂ ಈ ಆಶ್ಚರ್ಯಕರವಾದ ಗ್ರಂಥಗಳು ೧೦ ಶತಮಾನಗಳು ಕಳೆಯುವವರೆಗೂ ಅತ್ಯಂತ ಶ್ರೇಷ್ಠವಾಗಿದ್ದು ಕೊನೆಗೆ ೧೪೯೨ರಲ್ಲಿ ನಿಕೊಲೊ ಲಿಯೊನಿಸಿನೊವಿನಿಂದ ಖಂಡಿಸಲ್ಪಟ್ಟವು.

೧೫ ರೋಮ್ ಸಾಮ್ರಾಜ್ಯದಲ್ಲಿ ವೈದ್ಯ

ಹಿಂದೆ ರೋಮನ್ನರ ವೈದ್ಯವೃತ್ತಿ ಕ್ರಮಬದ್ಧವಾಗಿರಲಿಲ್ಲ. ಗ್ರೀಕರು ರೋಮ್ ನಗರಕ್ಕೆ ಬರುವ ತನಕ ಕೆಳದರ್ಜೆಯಲ್ಲೇ ಇತ್ತು. ಗ್ರೀಕರ ಪ್ರಭಾವಕ್ಕೆ ಒಳಪಟ್ಟ ಮೇಲೂ ಲ್ಯಾಟಿನ್ ಜನರಲ್ಲಿ ಒಬ್ಬನಾದರೂ ಶ್ರೇಷ್ಠ ವೈದ್ಯನಾಗಲಿಲ್ಲ. ಮೊದಲಿಗೆ ಖಾಸಗಿ ವೈದ್ಯಶಿಕ್ಷಣ ಮಾತ್ರ ಇತ್ತು. ಕ್ರಿ.ಪೂ. ೧೨೪–೧೪೦ರಲ್ಲಿ ಎಸ್ಕ್ಲಿಪಿಯಾಡಿಸ್ ಶಾಸ್ತ್ರೀಯವಾದ ವಿದ್ಯಾಭ್ಯಾಸ ಪ್ರಾರಂಭ ಮಾಡಿದನು. ಆಗ ರೋಮ್ ನಗರದಲ್ಲಿ ಕ್ರಮಬದ್ಧವಾದ ವಿದ್ಯಾಮಂದಿರಗಳು ತೆರೆದವು. ಅವನು ಸತ್ತಮೇಲೂ ಇವು ಅಭಿವೃದ್ಧಿಯಲ್ಲಿದ್ದವು. ವಿದ್ಯಾಶಾಲೆಯಲ್ಲಿ ಮುಖ್ಯ ವೈದ್ಯರು ರೋಗಿಗಳನ್ನು ಪರೀಕ್ಷಿಸುವಾಗ ಹಿಂದೆ ವ್ಯಾಸಂಗ ಮಾಡುತ್ತಿದ್ದ ತಮ್ಮ ಶಿಷ್ಯರನ್ನು ಕರೆದುಕೊಂಡು ಹೋಗಿ ಅಲ್ಲಲ್ಲಿ ಪಾಠ ಹೇಳುತ್ತಿದ್ದರು. ಆಗಸ್ಟಸ್ ಚಕ್ರವರ್ತಿಯ (ಕ್ರಿ.ಪೂ. ೨೭–ಕ್ರಿ.ಶ. ೧೪) ಕಾಲದಲ್ಲಿ ವೈದ್ಯರೆಲ್ಲ ಒಟ್ಟಿಗೆ ಸೇರಿ ಸಭೆ ನಡೆಸಲು ಒಂದು ಸ್ಥಳ ಪಡೆದರು. ಕ್ರಮೇಣ ಆಮೇಲಿನ ರಾಜರುಗಳ ಕಾಲದಲ್ಲಿ ಒಂದು ಸಾರ್ವಜನಿಕ ಸಭಾಂಗಣವನ್ನೂ ಕಟ್ಟಿದರು. ಮೊದಲಿಗೆ ಪ್ರಾಧ್ಯಾಪಕರು ಶಿಷ್ಯರಿಂದ ಮಾತ್ರ ವೇತನವನ್ನು ತೆಗೆದುಕೊಳ್ಳುತ್ತಿದ್ದರು. ೭೦—೭೯ರಲ್ಲಿ ವೆಸ್ಪಾಸಿಯನ್ ಚಕ್ರವರ್ತಿ ಬಂದ ಮೇಲೆ ಸಾರ್ವಜನಿಕ ಹಣದಿಂದ ಸಂಬಳ ಕೊಡಲಾಯಿತು. ಆಮೇಲೆ ಬಂದ ರಾಜರೂ ಈ ಪದ್ಧತಿಯನ್ನೇ ಅನುಸರಿಸಿದರು. ಆಗ ರೋಮ್ ನಗರ ವೈದ್ಯಶಾಸ್ತ್ರದ ಕೇಂದ್ರವಾಯಿತು. ಅಲ್ಲಿಂದ ಸಹಾಯಕ ಕೇಂದ್ರಗಳು ಇತರ ಇಟಲಿ ಪಟ್ಟಣಗಳಲ್ಲೂ, ಫ್ರಾನ್ಸ್ ದೇಶದ ಮುಖ್ಯ ಪಟ್ಟಣಗಳಲ್ಲೂ ಪ್ರಾರಂಭವಾದವು. ಆದ್ದರಿಂದ ಸರ್ಕಾರದ ಸಾರ್ವಜನಿಕ ವೈದ್ಯ ಸಂಸ್ಥೆಗಳು ರೋಮ್ ಸಾಮ್ರಾಜ್ಯದ ಮೊದಲನೆ ಶತಮಾನದಲ್ಲಿ ಪ್ರಾರಂಭವಾಗಿ, ಸಾರ್ವಜನಿಕ ವೈದ್ಯರನ್ನೂ ಆಸ್ಪತ್ರೆಗಳಲ್ಲಿ ನೇಮಿಸಿದರು. ೧೬೦ರಲ್ಲಿ ಆನ್ಟೊನಿನಸ್ ಚಕ್ರವರ್ತಿ ವೈದ್ಯ ನೌಕರರ ಸೇವಾ ಮಿತಿ ಚೌಕಟ್ಟನ್ನು ಸ್ಥಾಪಿಸಿ ಅವರನ್ನು ಕೆಲವು ನಿಯಮಗಳಿಗೆ ಒಳಪಡಿಸಿದನು. ಬಡಜನರಿಗೆ ಸಹಾಯ ಮಾಡುವುದು ಒಂದು ಮುಖ್ಯ ನಿಯಮವಾಗಿತ್ತು.

ಸೇನಾ ವೈದ್ಯಸಂಸ್ಥೆಗಳು

ರೋಮ್ ಸಾಮ್ರಾಜ್ಯದ ಆಸ್ಪತ್ರೆಗಳಲ್ಲೆಲ್ಲಾ ಖಾಸಗೀ ಜನರಿಗಿಂತ ಸೇನಾ ವೈದ್ಯರಿಗೆ ಹೆಚ್ಚು ಪ್ರೋತ್ಸಾಹವಿತ್ತು. ಸೇವಾದಳದ ವೈದ್ಯಸಂಸ್ಥೆಗಳು ಸೇನಾ ಪದ್ಧತಿ ಪ್ರಕಾರ ನಡೆದುಕೊಳ್ಳುತ್ತಿದ್ದುದರಿಂದ ಬಹಳ ಉತ್ತಮ ಸ್ಥಿತಿಯಲ್ಲಿದ್ದವು. ಸೇನಾ ವೈದ್ಯರು ಸನ್ನದು ಪಡೆದಿಲ್ಲದ ನೌಕರರಾಗಿದ್ದರು. ಅವರು ತೆರಿಗೆ ಕೊಡಬೇಕಾಗಿರಲಿಲ್ಲ. ರಣರಂಗಕ್ಕೆ ಹೋಗದಿರಲು ವಿನಾಯತಿ ಇತ್ತು. ಆಗಿನ ಕಾಲದಲ್ಲಿ ವೈಜ್ಞಾ

ನಿಕ ಸಂಶೋಧನೆಗಳಾಗಲೀ, ಉತ್ತಮ ಗ್ರಂಥಗಳಾಗಲೀ ಯಾವುವೂ ಹೊರಡಲಿಲ್ಲ. ಆದರೆ ನೀರೊ ಚಕ್ರವರ್ತಿಯ ಸೈನ್ಯ ದಳದಲ್ಲಿ ಕೆಲಸಕ್ಕಿದ್ದ ಪೆಡನಿಯಸ್ ಡಿಯೊಸ್ಕೊರಿಡಿಸ್ ಔಷಧವಸ್ತುಶಾಸ್ತ್ರದ ಗ್ರಂಥವನ್ನು ಗ್ರೀಕ್ ಭಾಷೆಯಲ್ಲಿ ಬರೆದನೇ ಹೊರತು ಲ್ಯಾಟನ್ನಲ್ಲಿ ಬರೆಯಲಿಲ್ಲ. ಲ್ಯಾಟಿನ್ ಭಾಷೆಗೆ ಭಾಷಾಂತರವೂ ಆಗಲಿಲ್ಲ. ೩೦ರಲ್ಲಿ ಮೊಟ್ಟಮೊದಲಿಗೆ ಶುದ್ಧ ಲ್ಯಾಟಿನ್ ಭಾಷೆಯಲ್ಲಿ "ಡಿ ಮೆಡಿಸಿನ" ವೈದ್ಯಶಾಸ್ತ್ರವನ್ನು ಕಾರ್ನೀಲಿಯಸ್ ಸೆಲ್ಸಸ್ ಬರೆದನು.

ಆಸ್ಪತ್ರೆಗಳು

ವೈದ್ಯಶಾಸ್ತ್ರ ಅಷ್ಟು ಮುಂದುವರಿದಿದ್ದರೂ ವೈದ್ಯಶಾಲೆ ಪದ್ಧತಿಗಳಲ್ಲಿ ರೋಮನ್ನರು ಪ್ರಪಂಚಕ್ಕೇ ಆದರ್ಶರಾಗಿದ್ದರು. ಅದರಲ್ಲೂ ಸೈನ್ಯದಳದ ವೈದ್ಯಶಾಲೆಗಳು ಗಮನಾರ್ಹವಾಗಿದ್ದವು. ಆ ವಿಭಾಗದಲ್ಲಿ ಸೈನಿಕರಿಗೆ ರೋಗ ಬಂದರೆ ರೋಗಿಗಳನ್ನು ಮನೆಗೆ ಕಳುಹಿಸುತ್ತಿದ್ದರು. ರೋಮನ್ನರ ಚಕ್ರಾಧಿಪತ್ಯ ದೊಡ್ಡದಾಗುತ್ತಾ ಬಂದ ಮೇಲೆ ಅಲ್ಲಲ್ಲೇ ಆಸ್ಪತ್ರೆಗಳನ್ನು ಸ್ಥಾಪಿಸಬೇಕಾಯಿತು. ಭೂಶೋಧನೆಯಿಂದ ಈ ಆಸ್ಪತ್ರೆಗಳ ಅವಶೇಷಗಳು ಸಾಕಷ್ಟು ಕಡೆ ಸಿಕ್ಕಿವೆ. ವಿಯನ್ನ ಹತ್ತಿರವಿದ್ದ ಕಾರ್ನುಂಟಮ್ ಒಂದನೇ ಶತಮಾನದಲ್ಲಿತ್ತೆಂದು ತಿಳಿದುಬಂದಿದೆ. ಡುಸೆಲ್‌ಡಾರ್ಫ್ ಹತ್ತಿರ ಮತ್ತೊಂದಿತ್ತು. ಸಿಂಗರ್ ಹೇಳಿರುವಂತೆ 'ಆಧುನಿಕ ಕಾಲದ ತನಕ, ಯಾವ ಸೇನಾ ಆಸ್ಪತ್ರೆಯನ್ನಾದರೂ ಇದು ಮೀರಿಸುವಂತಿತ್ತು'. ಸ್ವಿಟ್ಸರ್ಲೆಂಡಿನ ವಿಂಡೊನಿಸ್ಸ ಆಸ್ಪತ್ರೆಯಲ್ಲಿ ೬೦ ಕೊಟಡಿಗಳಿದ್ದವು. ಒಂದೊಂದರಲ್ಲಿ ೮ ರೋಗಿಗಳನ್ನು ಇಡುತ್ತಿದ್ದರು. ಪ್ರತಿಯೊಂದಕ್ಕೂ ನೀರಿನ ಸೌಕರ್ಯ ಮತ್ತು ಕಕ್ಕಸ್ಸು ಸೌಕರ್ಯಗಳಿದ್ದವು. ಚಳಿ ತಡೆಯಲು ಅಗ್ಗಿಷ್ಟಿಕೆಗಳಿದ್ದವು. ಈ ಮೇಲ್ಪಂಕ್ತಿಯಲ್ಲಿ ಸಾರ್ವಜನಿಕ ಆಸ್ಪತ್ರೆಗಳನ್ನು ಅನೇಕ ಪಟ್ಟಣಗಳಲ್ಲಿ ಕಟ್ಟಲಾಗಿತ್ತು. ಇದು ಕ್ರೈಸ್ತ ಜನರಿಗೆ ಆಸ್ಪತ್ರೆ ಕಟ್ಟಿಸಲು ಸಹಾಯಕರವಾಯಿತು. ಇದರ ಫಲವಾಗಿ ಫ್ಯಾಬಿಯೊಲ ಕ್ರೈಸ್ತ ಮತದ ಹೆಂಗಸೊಬ್ಬಳು ನಾಲ್ಕನೇ ಶತಮಾನದಲ್ಲಿ ರೋಮ್ ನಗರದಲ್ಲಿ ಒಂದು ಆಸ್ಪತ್ರೆಯನ್ನು ಸ್ಥಾಪಿಸಿದಳು.


ಸೇನಾವೈದ್ಯರು

ರೋಮನ್ನರ ಮೊದಲ ದಿನಗಳಲ್ಲಿ ವೈದ್ಯರು ಸೈನ್ಯದಲ್ಲಿರಲಿಲ್ಲ. ಸೈನಿಕರು ಅವರವರೇ ಗಾಯಗಳಿಗೆ ಪಟ್ಟಿಕಟ್ಟಿಕೊಳ್ಳುತ್ತಿದ್ದರು. ರೋಮ್ ನಗರದಲ್ಲಿ ಯಾವಾಗ ವೈದ್ಯವೃತ್ತಿ ಆರಂಭವಾಯಿತೋ, ಆಗಿನಿಂದ ವೈದ್ಯರನ್ನು ಸೈನ್ಯಕ್ಕೆ ತೆಗೆದುಕೊಳ್ಳುವ ರೂಢಿ ಬಂತು. ರೋಮ್ ನಗರದ ನಾನಾ ಕಡೆಗಳಲ್ಲಿ, ಹೆಸರು ಕೆತ್ತಿರುವ ಸೇನಾ ವೈದ್ಯರ ಸಮಾಧಿ ಶಿಲೆಗಳು ಸಿಕ್ಕಿವೆ. ಕಾರಕಲ್ಲ ಚಕ್ರವರ್ತಿ ಕಾಲದಲ್ಲಿ (೨೧೨) ೧೦೦೦ ನೌಕರರ, ೧೩ ಅಧಿಕಾರಿಗಳ ಹೆಸರುಗಳನ್ನು ಕೆತ್ತಿರುವ ಕಲ್ಲಿನ ಕಂಬ ಅವರ ಜ್ಞಾಪಕಾರ್ಥವಾಗಿ ಮಾಡಿಸಿತ್ತು. ಇಂತಹ ಕಂಬಗಳು ಅನೇಕ ಕಡೆ ಇದ್ದವು.

ಇವುಗಳಲ್ಲಿ ಕೆತ್ತಿಸಿರುವ ಹೆಸರುಗಳ ಪೈಕಿ ಮುಕ್ಕಾಲು ಭಾಗದ ಹೆಸರುಗಳು ಗ್ರೀಕರ ಹೆಸರುಗಳಾಗಿದ್ದವು. ಹೀಗೆ ಗ್ರೀಕರು ಜನರ ವೈದ್ಯವೃತ್ತಿಯಲ್ಲಿ ಮಾತ್ರವಲ್ಲದೆ, ಸೈನ್ಯ ದಳದಲ್ಲೂ ಮುಂದಿದ್ದರು. ಸೈನ್ಯದಳದಂತೆ ನೌಕಾ ದಳದಲ್ಲೂ ಇದ್ದರು.

ರೋಮನ್ನರ ವೈದ್ಯಶಸ್ತ್ರಗಳು

ರೋಮನ್ನರ ಶಸ್ತ್ರವೈದ್ಯದ ಕರಣಗಳು ರೋಮ್ ಸಾಮ್ರಾಜ್ಯದ ಹರ್ಕ್ಯುಲೇನಿಯಮ್ ಮತ್ತು ಪಾಂಪೆಯಲ್ಲೂ, ಫ್ರಾನ್ಸ್ ದೇಶದ ಪ್ಯಾರಿಸ್ ಮತ್ತು ಕಲೋನ್ ಮುಂತಾದ ನಗರಗಳಲ್ಲೂ ಭೂಶೋಧನೆಗಳಿಂದ ಸಿಕ್ಕಿವೆ. ಇವುಗಳಲ್ಲಿ ಅನೇಕ ವಿಧ



ಪಾಂಪೆಯಲ್ಲಿ ಸಿಕ್ಕಿದ ಪ್ರಾಚೀನ ರೋಮನರ ವೈದ್ಯಶಸ್ತ್ರಗಳು


1. ಕೊಯ್ಯುರಿ
2. ಇಕ್ಕುಳ
3. ಕೊಕ್ಕೆ
4. ಕತ್ತರಿ ಇಕ್ಕುಳ
5. ಚಿಗಿವ ಹಿಡಿ ಇರುವ ಕತ್ತರಿ

ವಾದ ಉಪಕರಣಗಳಿದ್ದವು. ರಾಲ್ಫ್ ಮೇಜರ್ ಹೇಳಿರುವಂತೆ, 'ಇವುಗಳಲ್ಲಿ ಬಹು ಪಾಲು ಹಳೆಯ ಗೆಳೆಯರಂತೆ ಕಾಣುತ್ತಿದ್ದವು'.

ಪೆಡೊನಿಯಸ್ ಡಿಯೊಸ್ಕೊರಿಡಿಸ್

ಪೆಡೊನಿಯಸ್ ಡಿಯೊಸ್ಕೊರಿಡಿಸ್ ೭೭ರಲ್ಲಿ ಬರೆದ ಔಷಧವಸ್ತುಶಾಸ್ತ್ರದ ಪ್ರಭಾವ ಶತಮಾನಗಳು ಕಳೆದರೂ ಕಡಮೆಯಾಗಿರಲಿಲ್ಲ. ಅಲ್ಲಿಯ ವರೆವಿಗೂ ಆಧಾರ ಪೂರ್ವಕವಾಗಿಯೇ ಇತ್ತು. ಅನೇಕ ಗಿಡಮೂಲಿಕೆಗಳು, ಲವಣಗಳು ಮತ್ತು ಮೂಲ ಪದಾರ್ಥಗಳು ಅವನಿಗೆ ತಿಳಿದಿದ್ದವು. ನೋವುಕಳೆವ ಮತ್ತು ನಿದ್ದೆ ಬರಿಸುವ ಅಫೀಮು ಮತ್ತು ಮಾಂಡ್ರಗೊರಗಳು ಉಪಯೋಗದಲ್ಲಿದ್ದವು. ಅನೇಕ ವೇಳೆ ಸ್ಪರ್ಶ ಜ್ಞಾನವಿಲ್ಲದಂತೆ ಮಾಡಲು ಮಾಂಡ್ರಗೊರ ಉಪಯೋಗವಾಗುತ್ತಿತ್ತು. ಮೆಂಫಿಸ್


ಕಲ್ಲನ್ನು ಅರೆದು ಹಚ್ಚಿದರೂ ಸ್ಥಳೀಯವಾಗಿ ಸ್ಪರ್ಶ ಜ್ಞಾನವಿರುತ್ತಿರಲಿಲ್ಲ. ಇದನ್ನು ಗುದನಾಳದ ಮೂಲಕವೂ ಕೊಡುತ್ತಿದ್ದರು.



ಡಿಯೊಸ್ಕೊರಿಡೆಸ್

ಆನ್ಡ್ರೊಮಕಾಸ್

ನೀರೋ ಕಾಲದ ಮತ್ತೊಬ್ಬ ವೈದ್ಯ ಆನ್ಡ್ರೊಮಕಾಸ್ ಕ್ರೀಟ್ ದೇಶದಿಂದ ಬಂದು ರೋಮ್ ನಗರದಲ್ಲಿ ವೈದ್ಯವೃತ್ತಿಯಲ್ಲಿ ತೊಡಗಿದ್ದ. ಅವನು ಅಷ್ಟು ಪ್ರಸಿದ್ಧಿ



ನೀರೋ ಸೈನ್ಯದ ಶಸ್ತ್ರವೈದ್ಯ ಡಿಯೊಸ್ಕೊರಿಡೆಸ್

ಯಾಗದಿದ್ದರೂ ಅವನು ಕಂಡುಹಿಡಿದ ತೆರಿಯಕ್ (ಹಾವಿಷಮುರಿತ) ಎಂಬ ಔಷಧ ವಸ್ತು ಬಹಳ ಉಪಯೋಗದಲ್ಲಿತ್ತು. ಇದು ೬೧ ಬೇರೆಬೇರೆ ವಸ್ತುಗಳಿಂದ ಮಾಡಲ್ಪಟ್ಟು, ಮಿತ್ರಿಡೇಟ್ ಔಷಧದಷ್ಟೇ ಪ್ರಯೋಜನವಿದ್ದು, ೧೭ನೇ ಶತಮಾನದವರೆವಿಗೂ ಬಳಕೆಯಲ್ಲಿತ್ತು. ಇದರ ಗುಣಗಳನ್ನು ಗ್ಯಾಲೆನ್ ಕೂಡ ಬಹಳ ಹೊಗಳಿದ್ದನು.

ಜೀವಾತ್ಮ ಪದ್ಧತಿ

ಹೀಗೆ ಗ್ರೀಕ್ ವೈದ್ಯಶಾಸ್ತ್ರ ರೋಮನ್ನರ ವೈದ್ಯಶಾಸ್ತ್ರವನ್ನು ಮೀರಿದ್ದಾಗ, ಜಾರಿಯಲ್ಲಿದ್ದ ಹಲವು ಪದ್ಧತಿಗಳ ಜತೆಗೆ ಮತ್ತೊಂದು ವೈದ್ಯಪದ್ಧತಿ ಪ್ರಾರಂಭವಾಯಿತು. ಈ ಜೀವಾತ್ಮ ಪದ್ಧತಿ ವಸ್ತುನಿಜವಾದವನ್ನು ನಿರಾಕರಿಸಿ ಎಲ್ಲವನ್ನೂ ಆಕ್ರಮಿಸಿರುವ ಜೀವಾತ್ಮವೇ ಶರೀರವನ್ನು ಹತೋಟಿಯಲ್ಲಿಡುತ್ತದೆಂದೂ, ಚಲನೆ, ಸ್ಪರ್ಶ ಜ್ಞಾನ ಮತ್ತು ಅಪೇಕ್ಷೆಗಳನ್ನು ಉಂಟುಮಾಡುತ್ತದೆಂದೂ ನಂಬಲಾಯಿತು. ಜೀವಾತ್ಮ ಅಥವಾ ಉಸಿರು, ಗಾಳಿಯ ಮೂಲಕ ಶ್ವಾಸಕೋಶಗಳಿಗೆ ಹೋಗುವುದೆಂದೂ, ಚರ್ಮ ರಂಧ್ರಗಳ ಮೂಲಕವೂ ಶರೀರವನ್ನು ಸೇರುವುದೆಂದೂ, ಅಲ್ಲಿಂದ ರಕ್ತನಾಳಗಳ ಮೂಲಕ ಶರೀರದ ಎಲ್ಲಾ ಕಡೆಗೂ ಹರಡುವುದೆಂದೂ, ಮನುಷ್ಯನ ಆರೋಗ್ಯಕ್ಕೆ ಇದೇ ಮುಖ್ಯ ಆಧಾರವೆಂದೂ ನಂಬಲಾಗಿತ್ತು. ನಾಡಿ ಪರೀಕ್ಷೆಯಿಂದ ಜೀವಾತ್ಮವನ್ನು ನಿರ್ಧಾರ ಮಾಡಬಹುದೆಂದೂ ತಿಳಿಯಲಾಗಿತ್ತು. ಈ ಪದ್ಧತಿ ಹಿಪ್ಪೊಕ್ರೇಟಿಸ್ಸಿನ ನಾಲ್ಕು ರಸತತ್ತ್ವಗಳನ್ನು ಅಂಗೀಕರಿಸಿ, ರಸತತ್ತ್ವಗಳ ವ್ಯತ್ಯಾಸದಿಂದ, ಜೀವಾತ್ಮ ಬದಲಾಗಿ ರೋಗ ಉಂಟಾಗುತ್ತದೆಂದೂ ತಿಳಿಸಿತ್ತು.

ಸಾರಗ್ರಾಹಿಗಳು

ಈ ಪದ್ಧತಿಯನ್ನು ಊಹಿಸಿ ಮುಂದಿಟ್ಟವನು ಏಷ್ಯಾದ ಅಟ್ಟಲದ ಊರಿನ ಅತೆನಿಯಸ್. ಇವನ ಪಂಗಡದವರು ಇತರ ಪದ್ಧತಿಗಳಲ್ಲಿದ್ದ ಮುಖ್ಯಾಂಶಗಳನ್ನು ತಮ್ಮ ಪದ್ಧತಿಗೆ ಸೇರಿಸಿಕೊಂಡು ವೈದ್ಯವೃತ್ತಿಯನ್ನು ರೂಢಿಸಲು ಪ್ರಾರಂಭಿಸಿದರು. ಆದ್ದರಿಂದ ಈ ಪಂಗಡದವರು ಸಾರಗ್ರಾಹಿಗಳೆಂದು ಹೆಸರು ಪಡೆದರು. ಕ್ಲಾಡಿಯಸ್ (೪೧–೫೪) ಮತ್ತು ನೀರೊ (೫೪–೬೮) ಕಾಲದಲ್ಲಿ, ಅತೆನಿಯಸ್ ವೈದ್ಯಶಾಸ್ತ್ರದ ೩೦ ಪುಸ್ತಕಗಳನ್ನು ಬರೆದರೂ, ಕೆಲವು ಮಾತ್ರ ರಕ್ಷಿತವಾಗಿವೆ. ಈ ಗ್ರಂಥಗಳಲ್ಲಿ ಚಿಕಿತ್ಸೆ, ದೇಹರಚನಶಾಸ್ತ್ರ ಮತ್ತು ರೋಗ ನಿದಾನ ಗಮನಾರ್ಹವಾಗಿದ್ದವು. ಇವನ ಶಿಷ್ಯ ಅಗಾತಿನಸ್ ಮತ್ತು ಟ್ರಾಜನ್ ಚಕ್ರವರ್ತಿಯ (೯೮–೧೧೭) ಕಾಲದಲ್ಲಿದ್ದ ಆರ್ಕಿಯಜೆನಿಸ್ ಸಾರಸಂಗ್ರಹಣ ಪದ್ಧತಿಗಳನ್ನು ಕಾಪಾಡಿಕೊಂಡು ಬಂದರು. ಗ್ಯಾಲೆನ್ ಆರ್ಕಿಯಜೆನಿಸ್‌ನನ್ನು ಹೊಗಳಿ ಲೇಖನವನ್ನು ಬರೆದಿದ್ದನು. ಈ ಆರ್ಕಿಯಜೆನಿಸನ ಸಂಗ್ರಹಗಳಿಂದ, ಅರೆಟಿಯಸ್ ಮತ್ತು ಏಟಿಯಸ್ ನಿರ್ಭಯರಾಗಿ ತಮ್ಮ ಸಂಗ್ರಹಗಳಿಗೆ ಅನೇಕ ವಿಷಯಗಳನ್ನು ಸೇರಿಸಿಕೊಂಡರು.

ಅರೆಟಿಯಸ್

ಕ್ಯಾಪಡೋಸಿಯದ ಅರೆಟಿಯಸ್ ಸಾರಗ್ರಾಹಿಗಳಲ್ಲಿ ಬಹು ಮುಖ್ಯ ವೈದ್ಯನಾ

ಗಿದ್ದನು. ಇವನ ಜೀವನಚರಿತ್ರೆ ಬಹು ಕಾಲ ತಿಳಿದಿರಲಿಲ್ಲ. ಗ್ಯಾಲೆನ್ ಇವನ ವಿಷಯ ವನ್ನೇ ಎತ್ತಿರಲಿಲ್ಲ. ಲ್ಯಾಟಿನ್ ಮತ್ತು ಅರೇಬಿಯ ಬರಹಗಾರರು ಕೂಡ ಇವನನ್ನು ತಿಳಿದಿರಲಿಲ್ಲ. ಬಹಳ ದಿವಸ ಆದ ಮೇಲೆ ಇವನ ಗ್ರೀಕ್ ಭಾಷೆಯ ಕೈಬರಹ ಸಿಕ್ಕಿ, ೧೫೫೪ರಲ್ಲಿ ಪ್ರಕಟವಾದ ಮೇಲೆ ಇವನ ಮಹಿಮೆ ಗೊತ್ತಾಯಿತು. ಇವನು ಸುಮಾರು ೧೨೦-೨೦೦ರಲ್ಲಿ ಜೀವಿಸಿದ್ದನೆಂದು, ಕೂರಾದ ಮತ್ತು ಬೇರೂರಿದ ರೋಗಗಳ ಕಾರಣ ಮತ್ತು ಚಿಕಿತ್ಸೆಗಳ ವಿಷಯವಾಗಿ ಬರೆದಿದ್ದನೆಂದೂ ತಿಳಿದುಬಂದವು, ಇವನ ಬರಹ ಗಳು ಹಿಪ್ಪೊಕ್ರೇಟಿಸ್ ಬರಹಗಳಿಗೆ ಸಮಾನವಾಗಿದ್ದವೆಂದೂ ಗೊತ್ತಾದವು.

ಇವನ ಅನೇಕ ಉತ್ಕೃಷ್ಟವಾದ ವಿವರಣೆಗಳು ಇಲ್ಲಿಯ ವರೆವಿಗೂ ಅತಿಶಯ ವಾಗಿಯೇ ಇದ್ದವು. ಗಂಟಲಮಾರಿ ರೋಗವನ್ನು ವಿವರಿಸುತ್ತ, ಗಂಟಲಿನ ಪೊರೆ, ಶ್ವಾಸನಾಳಕ್ಕೆ ಹರಡುವ ಬಗೆಗಳನ್ನು ತಿಳಿಸಿದ್ದನು. ನೀರು ಕುಡಿದರೆ ಮೂಗಿನ ಮೂಲಕ ಹೊರಗೆ ಬರುವುದೆಂಬ ಭಯದಿಂದ ಬಾಯಾರಿಕೆಯಾದರೂ ನೀರು ಕುಡಿಯ ದಿದ್ದುದನ್ನು ವಿವರಿಸಿದ್ದನು. ಸೆಟೆಬೇನೆಯ ಸರ್ವಗುಣಗಳನ್ನು ತಿಳಿಸಿ, ಸರಿಯಾದ ಔಷಧವಿಲ್ಲದಿದ್ದುದರಿಂದ, ರೋಗಿಗೆ ಕರುಣೆಯನ್ನಾದರೂ ತೋರಿಸಬೇಕೆಂದು ನುಡಿ ದಿದ್ದನು. ಸಿಹಿಮೂತ್ರ ರೋಗದ ಲಕ್ಷಣಗಳು ಈಗಿನ ಕಾಲದಲ್ಲಿ ಬರೆದಂತಿದ್ದವು. ಎಷ್ಟು ನೀರು ಕುಡಿದರೂ ನೀರಡಿಕೆ ಇಂಗದಿದ್ದುದನ್ನೂ, ಹೆಚ್ಚು ಮೂತ್ರ ಹೋಗುವು ದನ್ನೂ ವಿವರಿಸಿದ್ದನು. ಪುಪ್ಪುಸುರಿತ, ಅಳ್ಳೆಪರೆಯುರಿತ, ಗೂರಲು, ಅಪಸ್ಮಾರ ಮುಂತಾದ ಇನ್ನೂ ಅನೇಕ ರೋಗಗಳ ವಿಷಯವಾಗಿ ಬರೆದಿದ್ದನು. ಹೃದ್ರೋಗದಲ್ಲಿ ಸಿಗುವ ನಾಡಿಯ ವಿಧಾನಗಳನ್ನು ವಿವರಿಸಿದುದಲ್ಲದೆ, ಎದೆ ಹೊಡೆತ, ತಲೆ ತಿರುಗು, ಕಗ್ಗತ್ತಲು, ಎದೆಯಲ್ಲಿ ಕೇಳಿಬರುವ ಮರ್ಮರಗಳನ್ನು ವಿವರಿಸಿದ್ದನು. ಗೂರಲು ರೋಗದಲ್ಲಿ ಕೇಳಿಬರುವ 'ಗೊಗ್ಗರ' ಶಬ್ದವನ್ನು ವಿವರಿಸಿದ್ದನು. ಆನೆಕಾಲು ರೋಗ ಅವನಿಗೆ ಗೊತ್ತಿತ್ತು. ರೋಗಿಗಳಿಗೆ ಚಿಕಿತ್ಸೆ ಕೊಡುವಾಗ ಆಹಾರ ಪಥ್ಯವಿಟ್ಟು ಹೆಚ್ಚಿಗೆ ಔಷಧ ಉಪಯೋಗಿಸುತ್ತಿರಲಿಲ್ಲ. ಇವನ ಗ್ರಂಥಗಳು ಉತ್ತಮವಾಗಿದ್ದರೂ, ಆರ್ಕಿಯಜೆನಿಸ್‌ನ ಬರವಣಿಗೆಯಿಂದ ಅನೇಕ ವಿಷಯಗಳನ್ನು ಕದ್ದು ಆರಿಸಿಕೊಂಡಿ ದ್ದನೆಂದು ಹೇಳಲಾಗಿದೆ. ಡಗ್ಲಾಸ್ ಗುತ್ರಿ ಬರೆದಿರುವಂತೆ, "ಅರೆಟಿಯಸ್ ಕಂಡ ಹಾಗೇ ನಕಲೆತ್ತುವವನಾಗಿದ್ದರೂ, ಅವನ ರೋಗಲಕ್ಷಣಗಳ ವರ್ಣನೆಯಲ್ಲಿ ಸ್ವಂತಿಕೆ ಯನ್ನು ತೋರಿಸಿದ. ಇಂದಿಗೂ ಅವನ ಗ್ರಂಥವನ್ನು ಓದುವುದು ಪ್ರಯೋಜನಕರ.

ರೂಫಸ್

ಆಗಿನ ಕಾಲದ ಮತ್ತೊಬ್ಬ ಈ ವೈದ್ಯನ ಜೀವನ ಚರಿತ್ರೆಯೂ ಗೊತ್ತಿಲ್ಲದೆ ಬಹಳ ದಿವಸಗಳಾದ ಮೇಲೆ ಆಗಿನ ಬರಹಗಾರರ ಸಂಗ್ರಹಗಳಿಂದ ತಿಳಿದುಬಂತು. ಇವನ ಹೆಸರು ರೂಫಸ್ (೧೦೦). ಅಲೆಗ್ಸಾಂಡ್ರಿಯದಲ್ಲಿ ವಿದ್ಯಾಭ್ಯಾಸ ಮಾಡಿ ರೋಮ್ ನಗರದಲ್ಲಿ ವೈದ್ಯವೃತ್ತಿಯನ್ನು ರೂಢಿಸಿದ್ದನು. ಇವನ ಗುಣಗಳನ್ನೂ ಬುದ್ಧಿಶಕ್ತಿ ಯನ್ನೂ ಗ್ಯಾಲೆನ್ ಹೊಗಳಿದ್ದಾನೆ. ಅರೇಬಿಯದ ವೈದ್ಯರೂ ಇವನ ಹೆಸರನ್ನು

ಕೊಂಡಾಡಿದ್ದಾರೆ. ಅಂಗರಚನೆಯಲ್ಲಿ ಇವನು ನಿಸ್ಸೀಮನಾಗಿದ್ದನು. ಶರೀರದ ನಾನಾ ಭಾಗಗಳಿಗೆ ಕೊಟ್ಟಿರುವ ಹೆಸರುಗಳು ಅಡಕವಾಗಿದ್ದವು. ಕಣ್ಣಿನ ಅನೇಕ ಭಾಗಗಳಿಗೆ ಈಗಲೂ ರೂಢಿಯಲ್ಲಿರುವ ಹೆಸರುಗಳನ್ನು ಕೊಟ್ಟಿದ್ದನು. ಕಣ್ಣಿನ ಅಡ್ಡೆರೆ, ದನಿನಾಳ, ಅನ್ನನಾಳ, ಸಣ್ಣ ಕರುಳು, ಹೆಗ್ಗರುಳು, ಮಾಂಸಲಿ ಗ್ರಂಥಿ, ಪ್ರಾಸ್ಟೇಟ್ ಗ್ರಂಥಿ, ಗರ್ಭಕೋಶ ಮುಂತಾದವನ್ನೆಲ್ಲಾ ವಿವರಿಸಿದ್ದನು. ಚಾಲಕ ಮತ್ತು ಜ್ಞಾನ ವಾಹಕ ನರಗಳ ವ್ಯತ್ಯಾಸ ತಿಳಿದಿದ್ದನು.

ರೋಗಿಗೆ ಪ್ರಶ್ನೆಹಾಕುವ ವಿಧಾನ ಅವನ ವೈದ್ಯಶಾಸ್ತ್ರದ ಒಂದು ಮುಖ್ಯ ಅಂಗ ವಾಗಿತ್ತು. ರೋಗಿಗೆ ಮಾತ್ರವಲ್ಲ, ಅವನ ತಂದೆತಾಯಿಗಳಿಗೂ, ಸ್ನೇಹಿತರಿಗೂ ಪ್ರಶ್ನೆಹಾಕಿ ರೋಗದ ಹಿಂದಿನ ಮತ್ತು ಆಗಿನ ವಿಶೇಷ ಗುಣಗಳನ್ನು ಪಡೆಯಬಹು ದೆಂಬುದು ಅವನಿಗೆ ತಿಳಿದಿತ್ತು. ಕಚ್ಚಿದ ನಾಯಿಯ ಲಕ್ಷಣಗಳನ್ನು ಕೇಳಿ ನಾಯಿಯ ಹೆಕಲಿ ರೋಗವನ್ನು ನಿದಾನ ಮಾಡುತ್ತಿದ್ದನು.

ಇವನು ನಾಡಿ ಪರೀಕ್ಷೆಯ ಮೇಲೆ ಬರೆದಿರುವ ಲೇಖನ ಅತಿ ಶ್ರೇಷ್ಠವಾಗಿತ್ತು. ಇದನ್ನು ಬ್ರಾಡ್‌ಬೆಂಟ್ ೧೮೯೦ರಲ್ಲಿ ಓದಿ ಹೀಗೆ ಬರೆದಿದ್ದಾನೆ: 'ನಾಡಿಯ ಬಗೆ ಬಗೆಯ ಗುಣವಿಶೇಷಗಳ ಅವನ ವರ್ಣನೆಗೆ ಇಂದಿಗೂ ಮತ್ತೇನನ್ನೂ ಸೇರಿಸುವಂತಿಲ್ಲ. ನಾಡಿಯ ಅನೇಕ ಲಕ್ಷಣಗಳನ್ನು ತಿಳಿಸಿರುವುದಲ್ಲದೆ ಮೊಟ್ಟಮೊದಲಿಗೆ ಹೃದಯ ಕುಗ್ಗುವುದರಿಂದ ನಾಡಿ ಉಂಟಾಗುತ್ತದೆಯೇ ಹೊರತು ಹಿಗ್ಗುವುದರಿಂದಲ್ಲವೆಂದು ನುಡಿದನು.'

ಮೂತ್ರಪಿಂಡ, ಮೂತ್ರಕೋಶ ಗ್ರಂಥದಲ್ಲಿ ಮೂತ್ರಪಿಂಡುರಿತ, ರಕ್ತಮೂತ್ರ, ಬಹುಮೂತ್ರ, ಮೂತ್ರಪಿಂಡದ ಮತ್ತು ಮೂತ್ರಕೋಶದ ಕಲ್ಲುಗಳ ಮತ್ತು ಗಡ್ಡೆಗಳ ವಿವರಣೆಗಳು ಇದ್ದವು. ಮೇಹ ರೋಗ, ಪ್ಲೇಗು, ಜ್ವರ, ನರವ್ಯಾಧಿ ಮುಂತಾದ ರೋಗಗಳ ವಿಷಯವನ್ನೂ ಬರೆದಿದ್ದನು.

ಇವನ ಲೇಖನಗಳ ಅನೇಕ ಭಾಗಗಳು, ಗ್ಯಾಲೆನ್, ಅರಿಬಾಸಿಯುಸ್, ಏಟಿ ಯುಸ್ ಮತ್ತು ರೇಸಸ್ ಮುಂತಾದ ವೈದ್ಯವಿಜ್ಞಾನಿಗಳ ಬರಹಗಳಲ್ಲಿ ಸಿಕ್ಕಿವೆ. ರೋಗಿಗೆ ಜ್ವರ ಬರಿಸುವುದರಿಂದ ಅಪಸ್ಮಾರ, ಎಡೆಸೆಳವು, ಗೂರಲು, ಮನೋವ್ಯಾಧಿ, ಚರ್ಮರೋಗಗಳು ಗುಣವಾಗುವುವೆಂದು ತಿಳಿದಿದ್ದನು. ಈ ರೀತಿ ಜ್ವರದಿಂದ ರೋಗ ನಿವಾರಣೆ ಮಾಡುವ ಪದ್ಧತಿ ಗ್ರೀಕ್ ವೈದ್ಯ ಯೂನರ್‌ಗೆ ಮೊದಲೇ ಗೊತ್ತಿತ್ತೆಂದೂ ಅವನೇ ತಿಳಿಸಿದ್ದನು.

ಸೊರನಸ್

ಅರೆಟೆಯಸ್ ಮತ್ತು ರೂಫಸ್ ಕಾಲದಲ್ಲೇ ಇದ್ದ ಸೊರನಸ್ ಹೆರಿಗೆಶಾಸ್ತ್ರ ಮತ್ತು ಸ್ತ್ರೀರೋಗಶಾಸ್ತ್ರಗಳಲ್ಲಿ ಮಹಾಪಂಡಿತನಾಗಿದ್ದನು. ಇವನು ೯೮–೧೩೮ರ ತನಕ ಜೀವಿಸಿದ್ದನು. ಇಫೆಸಸ್‌ನಲ್ಲಿ ಹುಟ್ಟಿ, ಅಲೆಗ್ಸಾಂಡ್ರಿಯದಲ್ಲಿ ಓದಿ, ಟ್ರಾಜನ್

ಮತ್ತು ಹಾಡ್ರಿಯಸ್ ಚಕ್ರವರ್ತಿಗಳ ಕಾಲದಲ್ಲಿ ರೋಮ್ ನಗರದಲ್ಲಿ ವೈದ್ಯವೃತ್ತಿಯಲ್ಲಿ ತೊಡಗಿದ್ದನು. ಈತನ ಹೆರಿಗೆಶಾಸ್ತ್ರ ಮತ್ತು ಸ್ತ್ರೀರೋಗ ಗ್ರಂಥ ಮುಂದಿನ ೧೫ ಶತಮಾನಗಳ ವರೆವಿಗೂ ಆದರ್ಶವಾಗಿತ್ತು. ಈ ಗ್ರಂಥದಲ್ಲಿ ಮುಟ್ಟು, ಬಸಿರು, ಮುಟ್ಟುನೋವು, ಗರ್ಭದಿಂದ ರಕ್ತಸ್ರಾವ, ಮಕ್ಕಳ ಪೋಷಣೆಗಳನ್ನೆಲ್ಲಾ ವಿವರಿಸಿದ್ದನು. ಕಷ್ಟವಾದ ಹೆರಿಗೆಗಳ ಕಾರಣ ತಾಯಿಯ ಗರ್ಭಕೋಶದಲ್ಲಾಗಲೀ, ಚಪ್ಪೆ ಕುಗ್ಗಿರುವುದು ಅಥವಾ ಪಿಂಡಗೂಸಿನ ಊನಗಳು ಎಂದು ತಿಳಿದಿದ್ದನು. ಗರ್ಭಕೋಶದೊಳಗೆ ಪಿಂಡಗೂಸು ಎಂದಿನಂತಿರದೆ ಸ್ಥಾನಪಲ್ಲಟವಾಗಿದ್ದರೆ ಕೈಹಾಕಿ ಸರಿಪಡಿಸಬೇಕೆಂದು ಹೇಳಿದ್ದನು. ಈ ವಿಧಾನಗಳಿಂದ ಹೆರಿಗೆ ಸಾಧ್ಯವಾಗದಿದ್ದರೆ ಶಸ್ತ್ರ ಉಪಯೋಗಿಸಬೇಕೆಂದೂ, ಪಿಂಡಗೂಸನ್ನು ಕತ್ತರಿಸಿ ತೆಗೆಯಬಹುದೆಂದೂ ತಿಳಿಸಿದ್ದನು. ಇವನು ಕ್ರಮಬದ್ಧ ವರ್ಗೀಕರಣ ಗುಂಪಿಗೆ ಸೇರಿದ್ದನು. ಈ ಗುಂಪಿನವರನ್ನು ಗ್ಯಾಲೆನ್ ಅಸಹ್ಯದಿಂದ ಕಂಡಿದ್ದರೂ, ಸೊರನಸ್ಸನ್ನು ಮಾತ್ರ ಗೌರವದಿಂದ ಕಂಡಿದ್ದನು.

ಇವನ ಗ್ರಂಥದ ಒಂದು ಅಧ್ಯಾಯದಲ್ಲಿ, ಯಾವಾಗಲೂ ಕನ್ಯೆಯಾಗಿಯೇ ಇದ್ದರೆ ಶರೀರಕ್ಕೆ ಯಾವ ತೊಂದರೆಯೂ ಬರುವುದಿಲ್ಲವೆಂದೂ, ಯಾವ ರೋಗವೂ ಅಂಟುವುದಿಲ್ಲವೆಂದೂ ತಿಳಿಸಿದ್ದನು. ಬಸುರಿನ ಲಕ್ಷಣಗಳನ್ನು ವಿವರಿಸುತ್ತ, ಮುಟ್ಟು ನಿಲ್ಲುತ್ತದೆಂದೂ, ಸ್ತನಗಳು ದೊಡ್ಡವಾಗುತ್ತವೆಂದೂ, ಚರ್ಮದ ಮೇಲೆ ಕಪ್ಪು ಕಲೆಗಳು ಬರಬಹುದೆಂದೂ ಹೇಳಿದ್ದನು. ಬಸಿರಾಗದಿರಲು ಸಕಾಲದಲ್ಲಿ ಸಂಭೋಗ ನಡೆಸಬಾರದೆಂದೂ, ಗರ್ಭಕೋಶದ ಕುತ್ತಿಗೆಗೆ ಸೀಸ ಅಥವಾ ಪಟಿಕದ ಮುಲಾಮು ಹಚ್ಚಬೇಕೆಂದೂ ತಿಳಿಸಿದ್ದನು. ಅವನ ಪುಸ್ತಕದಲ್ಲಿ ಹೆರಿಗೆ ಕುರ್ಚಿ, ಹೊಕ್ಕಳುಕರ್ತನ, ಎದೆಹಾಲು ಕುಡಿಸುವ ವಿಧಾನ, ಹಾಲು ಕುಡಿಸುವ ರೀತಿ, ಬಾಣಂತಿಯ ಆಹಾರ, ಶಿಶುಪಾಲನೆ, ಶಿಶು ರೋಗಗಳು, ಹಲ್ಲು ಬರುವಿಕೆ ಮುಂತಾದ ವಿಷಯಗಳನ್ನು ವಿಶದವಾಗಿ ತಿಳಿಸಿದ್ದನು. ಮಕ್ಕಳ ಮೆದುಮೂಳೆರೋಗವೂ ತಿಳಿದಿತ್ತು.

ಸೊರನಸ್ಸಿನ ಸ್ತ್ರೀರೋಗ ಗ್ರಂಥವನ್ನು ಉದ್ದೇಶಿಸಿ ರಾಲ್ಫ್ ಮೇಜರ್, 'ಇಡೀ ಕೃತಿ ತಿಳಿಯಾಗೂ ವೈಜ್ಞಾನಿಕವಾಗೂ ಬರೆದಿದೆ. ಮಾಯಾಮಂತ್ರ, ಮೂಢನಂಬಿಕೆ ಇದರಲ್ಲಿ ಎಲ್ಲೂ ಇಲ್ಲ'ವೆಂದು ಹೇಳಿದ್ದಾನೆ. ಸ್ತ್ರೀರೋಗಗಳ ಲೇಖನಗಳ ಜತೆಗೆ ಕೂರಾದ ಮತ್ತು ಬೇರೂರಿದ ಇತರ ರೋಗಗಳ ಮತ್ತು ಮೂಳೆಮುರಿತದ ವಿಷಯಗಳನ್ನೂ ಬರೆದಿದ್ದನು.

೧೬. ವೈದ್ಯಶಾಸ್ತ್ರದ ಪ್ರಭಾವಶಾಲಿ ಗ್ಯಾಲೆನ್

ಗ್ಯಾಲೆನ್ ಪ್ರಾಮುಖ್ಯತೆಗೆ ಬಂದನಂತರ ಗ್ರೀಕರ ರೋಮನ್ನರ ಕಾಲಮಾನದ ಸಂಸ್ಕೃತಿ ಶಿಖರವನ್ನು ಮುಟ್ಟಿತು. ಅವನ ಖ್ಯಾತಿ ೧೫೦೦ವರ್ಷಗಳು ಕಳೆದರೂ ಇಳಿಯಲಿಲ್ಲ. ಮಧ್ಯಯುಗದ ಮೊದಲನೆಯ ಭಾಗದಲ್ಲಿ ಅವನ ಉಪದೇಶಗಳನ್ನು ಮರುಮಾತಿಲ್ಲದೆ ಎಲ್ಲರೂ ಕೇಳಿಕೊಂಡಿದ್ದರು. ಅವನ ಉಪದೇಶಗಳನ್ನು ವಿರೋಧಿಸಿದವರು ಸಂಪ್ರದಾಯ ಬಾಹಿರರಾಗುತ್ತಿದ್ದರು. ಶರೀರ ಆತ್ಮದ ರಥವೆಂಬ ಗ್ಯಾಲೆನ್ನಿನ ನಂಬಿಕೆ. ಆಗಿನ ಕಾಲದ ಕ್ರೈಸ್ತರ ಮತ್ತು ಮುಸ್ಲಿಮರ ನಂಬಿಕೆಯೂ ಆದದ್ದರಿಂದ ಇವನಿಗೆ ಬೆಂಬಲ ಕೊಟ್ಟಿದ್ದರು. ಹಿಪ್ಪೊಕ್ರೇಟಿಸ್ಸಿನಷ್ಟು ಕೀರ್ತಿ ಇವನಿಗಿಲ್ಲದಿದ್ದರೂ ವೈದ್ಯಶಾಸ್ತ್ರದ ಪಿತಾಮಹ ಹಿಪ್ಪೊಕ್ರೇಟಿಸ್ಸಿನ ಅಧಿಕಾರತ್ವವನ್ನು ಅಂಗೀಕರಿಸಿದ್ದುದರಿಂದ ಇವನನ್ನು ಜನರು ಮೆಚ್ಚಿದ್ದರು. ಹಿಪ್ಪೊಕ್ರೇಟಿಸ್ ಮತ್ತು ಅರಿಸ್ಟಾಟಲ್‌ರ ಸಂಪ್ರದಾಯವನ್ನು ಬೆಂಬಲಿಸುತ್ತಿದ್ದುದರಿಂದ ಇವನ ಪ್ರಭಾವ ಮತ್ತಷ್ಟು ಹೆಚ್ಚಿತ್ತು.



ಗ್ಯಾಲೆನ್ನಿನ ಐದು ಭಾವಚಿತ್ರಗಳು

ಬಾಲ್ಯ ಮತ್ತು ವಿದ್ಯಾಭ್ಯಾಸ

ಇವನು ೧೩೦ರಲ್ಲಿ ಏಷ್ಯ ಮೈನರಿನ ಪೆರ್ಗಮಾನ್‌ನಲ್ಲಿ ಹುಟ್ಟಿದವನು. ಇವನ ತಂದೆ ಶಿಲ್ಪಿ ನಿಕಾನ್ ಶಾಂತ ಎಂದು ಅರ್ಥಬರುವ ಗ್ಯಾಲಿನಾಸ್ ಎಂಬ ಹೆಸರನ್ನು ಮಗನಿಗಿಟ್ಟನು. ಕ್ರಮೇಣ ಕ್ಲಾಡಿಯಸ್ ಅಥವಾ ಕ್ಲಾರಿಸ್ಸಿಮಸ್(ಪ್ರಕಾಶ) ಶಬ್ದವನ್ನೂ ಉಪಯೋಗಿಸಿ ಕ್ಲಾಡಿಯಸ್ ಗ್ಯಾಲೆನ್ ಎಂದು ವಿಜ್ಞಾನಿಗಳು ಕರೆದರು. ಇವನ ತಂದೆ ಎಷ್ಟು ಗೌರವಸ್ಥ, ಶಾಂತಮೂರ್ತಿ ಆಗಿದ್ದನೋ ಇವನ ತಾಯಿ ಅಷ್ಟೇ ಜಗಳಗಂಟಿಯಾಗಿದ್ದಳು. ಇವರಿಬ್ಬರ ನಡತೆಗಳನ್ನು ಪಿತ್ರಾರ್ಜಿತವಾಗಿ ಪಡೆದಿದ್ದರಿಂದ ಗ್ಯಾಲೆನ್ ಬುದ್ಧಿವಂತನಾಗಿ

ದ್ದರೂ ಕೋಪಿಷ್ಟನಾಗಿದ್ದನು. ಮಗ ಪ್ರಸಿದ್ಧಿಯಾದ ವೈದ್ಯನಾಗುವನೆಂದು ನಿಕಾನ್ ತನ್ನ ಸ್ವಪ್ನದಲ್ಲಿ ಕಂಡಿದ್ದರಿಂದ ಮಗನಿಗೆ ತಕ್ಕ ವಿದ್ಯಾಭ್ಯಾಸ ಕೊಡಿಸಲು, ಪೆರ್ಗಮಾನ್ ಮತ್ತು ಸ್ಮರ್ನಗಳಲ್ಲಿ ತತ್ತ್ವ ಶಾಸ್ತ್ರವನ್ನು, ಅಲೆಗ್ಸಾಂಡ್ರಿಯದಲ್ಲಿ ವೈದ್ಯ ಶಾಸ್ತ್ರವನ್ನೂ ಹೇಳಿಸಿದನು. ತನ್ನ ೧೭ನೇ ವಯಸ್ಸಿನಲ್ಲೇ ಗ್ಯಾಲೆನ್ ಪೆರ್ಗಮಾನಿನ ಎಸ್ಕ್ಲಿಪಿಯಸ್ ದೇವಾಲಯಗಳಲ್ಲಿ ವಿದ್ಯೆಯನ್ನು ಪ್ರಾರಂಭಿಸಿದನು. ಅಲೆಗ್ಸಾಂಡ್ರಿಯದಲ್ಲಿ ಓದುತ್ತಿದ್ದಾಗ ಅಲ್ಲಿಯ ವೈದ್ಯ ವಿದ್ಯಾಭ್ಯಾಸ ಈತನಿಗೆ ಹಿಡಿಸಲಿಲ್ಲ. ಆಗ ರೋಗಿಗಳ ಬಳಿ ಎಂದೂ ಸುಳಿಯದ ೧೪ ವರುಷ ವಯಸ್ಸಿನ ಹುಡುಗರ ತಂಡಕ್ಕೆ, ದೀರ್ಘ ಅಸಂಬದ್ಧ ಉಪನ್ಯಾಸಗಳ ಮೂಲಕ ವೈದ್ಯಶಾಸ್ತ್ರ ಕಲೆಯನ್ನು ದಡ್ಡರು ಕೂಲಿಪಂಡಿತರಂತೆ ಕಲಿಸುತ್ತಿದ್ದರು. ಆದರೂ ಅಲ್ಲೇ ೧೧ ವರ್ಷ ವೈದ್ಯ ವಿದ್ಯಾಭ್ಯಾಸ ಮಾಡಿ ಪೆರ್ಗಮಾನಿಗೆ ಹಿಂತಿರುಗುವ ಮೊದಲು ೪೫ ಸಾಮಾನ್ಯ ಕೈಪಿಡಿಗಳನ್ನೂ ೫ ವೈದ್ಯಶಾಸ್ತ್ರದ ಕೈಪಿಡಿಗಳನ್ನೂ ಬರೆದನು. ಆದರೆ ಅವೆಲ್ಲಾ ನಾಶವಾದವೇ ಹೊರತು ಜನರ ಉಪಯೋಗಕ್ಕೆ ಸಿಕ್ಕಲಿಲ್ಲ.

ಮಲ್ಲರಂಗಗಳ ವೈದ್ಯ

ಪೆರ್ಗಮಾನ್‌ಗೆ ಬಂದ ಮೇಲೆ ಅವನು ಮಲ್ಲರೋಗಗಳ ವೈದ್ಯನಾಗಿ ನೇಮಕವಾದನು. ಆಗ ಮಲ್ಲರ ಗಾಯಗಳನ್ನು ಪರೀಕ್ಷೆ ಮಾಡಲು ಅವಕಾಶ ಸಿಕ್ಕಿ



ವೈದ್ಯಗಾರಿಕೆಯಲ್ಲಿ ಗ್ಯಾಲೆನ್

ಅಂಗರಚನೆ ಮತ್ತು ಶರೀರ ಶಾಸ್ತ್ರಗಳನ್ನು ರೂಢಿ ಮಾಡಿದನು. ಹಾಗೂ ಪ್ರಾಣಿಗಳನ್ನು ಪರೀಕ್ಷಿಸಿ ಜ್ಞಾನ ಸಂಪಾದಿಸುತ್ತಿದ್ದನು. ಮೊಟ್ಟಮೊದಲಿಗೆ ಹಂದಿಯ

ಧ್ವನಿಸಾಳದ ಹಿಂದೆ ತಿರುಗಿ ಬರುವ ನರವನ್ನು ಕತ್ತರಿಸಿದರೆ ಕಿರಿಚಲಾಗುವುದಿಲ್ಲವೆಂಬು ದನ್ನು ಕಂಡುಹಿಡಿದನು. ಇದರಿಂದ ಮಿದುಳು ಜ್ಞಾನೇಂದ್ರಿಯದ ಕೇಂದ್ರವಲ್ಲವೆಂಬ ಅರಿಸ್ಟಾಟಲ್ಲಿನ ಅಭಿಪ್ರಾಯವನ್ನು ವಿರೋಧಿಸಿ, ಅರಿವಿನ ನರಗಳಿಗೂ, ಮಿದುಳಿಗೂ ಇರುವ ಸಂಬಂಧವನ್ನು ತೋರಿಸಿದನು.

೧೬೪ರಲ್ಲಿ ತನ್ನ ಅದೃಷ್ಟವನ್ನು ಪರೀಕ್ಷಿಸಲು, ೩೩ನೇ ವಯಸ್ಸಿನಲ್ಲಿ, ಆಗಿನ ಚಕ್ರವರ್ತಿ ಮಾರ್ಕಸ್ ಅರೆಲಿಯಸ್‌ನ ತತ್ತ್ವಶಾಸ್ತ್ರ ಮತ್ತು ಬುದ್ಧಿಶಕ್ತಿಯನ್ನು ಮೆಚ್ಚಿ ರೋಮ್ ನಗರಕ್ಕೆ ಹೋದನು. ಕೆಲವು ದಿನಗಳಲ್ಲೇ ಗ್ಯಾಲೆನ್ ಹೆಸರು ಪಡೆದು, ಚಕ್ರವರ್ತಿಗೆ ವೈದ್ಯನಾದನು. ಅಲ್ಲಿ ಕೇವಲ ೩ ವರ್ಷಗಳಲ್ಲೇ ವೈರಿಗಳ ಕಿರುಕುಳ ತಡೆಯಲಾರದೆ ಪೆರ್ಗಮಾನಿಗೆ ಹಿಂತಿರುಗಿ ತನ್ನ ವೈದ್ಯವೃತ್ತಿಯಲ್ಲಿ ತೊಡಗುವನು. ಆದರೆ ಕೆಲವೇ ದಿನಗಳಲ್ಲಿ ಚಕ್ರವರ್ತಿಯ ಅಪ್ಪಣೆ ಮೇರೆಗೆ ಪುನಃ ರೋಮ್ ನಗರಕ್ಕೆ ಬಂದು ಚಕ್ರವರ್ತಿಯ ವೈದ್ಯನಾಗಿ ಮುಂದುವರಿಯುವನು. ಆಮೇಲೆ ರಾಜಪುತ್ರ ಕಮ್ಮೊಡಸ್ ಮತ್ತು ನಂತರ ಬಂದ ಸೆಪ್ಟಿಮಸ್ ಚಕ್ರ ವರ್ತಿಯ ವೈದ್ಯನಾಗಿ ಬಹಳ ಕಾಲ ರೋಮ್ ನಗರವನ್ನು ಬಿಟ್ಟು ಹೋಗಲಿಲ್ಲ. ಕಡೆಗಾಲದಲ್ಲಿ ದೇಶಸಂಚಾರ ಹೊರಟು, ಪೆರ್ಗಮಾನಿಗೆ ಬಂದು ಪ್ರಾಯಶಃ ೨೦೦ರಲ್ಲಿ ಸಿಸಿಲಿಯಲ್ಲಿ ಸತ್ತನು.

ಗ್ಯಾಲೆನ್ ಕೀರ್ತಿ

ಆಗಿನ ಕಾಲದಲ್ಲಿ ಗ್ಯಾಲೆನ್ನಿನ ಮಾತು ವೇದವಾಕ್ಯವಾಗಿತ್ತು. ೧೫ ಶತಮಾನಗಳು ಕಳೆಯುವ ವರೆವಿಗೂ ಯಾವ ವೈದ್ಯನೂ ಇವನ ಹೇಳಿಕೆಯನ್ನು ತಳ್ಳಿಹಾಕಲಿಲ್ಲ. ಇವನು ರೋಮನ್ನನಾದರೂ ವಿದ್ಯಾವಂತರಿಗೆ ತಿಳಿಯಲು ಗ್ರೀಕ್ ಭಾಷೆಯಲ್ಲೇ ಗ್ರಂಥಗಳನ್ನು ಬರೆದನು. ಕೆಲವು ಗ್ರಂಥಗಳನ್ನು ಬಿಟ್ಟು ಉಳಿದ ಗ್ರಂಥಗಳೆಲ್ಲಾ ಸುಟ್ಟುಹೋದವು. ಅವನೇ ಹೇಳಿರುವಂತೆ, ತತ್ತ್ವಶಾಸ್ತ್ರ, ಗಣಿತಶಾಸ್ತ್ರ, ನ್ಯಾಯ ಶಾಸ್ತ್ರ ಮತ್ತು ವ್ಯಾಕರಣ ಮುಂತಾದ ಶಾಸ್ತ್ರಗಳಲ್ಲಿ ೧೨೫ ಪುಸ್ತಕಗಳನ್ನೂ ಬರೆ ದಿದ್ದನು. ವೈದ್ಯಶಾಸ್ತ್ರದ ಮೇಲೆ ಬರೆದಿದ್ದ ೫೩ ಪುಸ್ತಕಗಳು ನಾಶವಾಗಿ, ಉಳಿ ದವುಗಳಲ್ಲಿ, ನಿಜವಾದ ವೈದ್ಯಶಾಸ್ತ್ರಕ್ಕೆ ಸೇರಿರುವ ೮೩ ಗ್ರಂಥಗಳು ಈಗಲೂ ಇವೆ. ಅನೇಕ ಶಂಕಾಸ್ಪದ, ಖೋಟಾ ಪುಸ್ತಕಗಳೂ ಇವೆ. ಇನ್ನೂ ಅನೇಕ ಗ್ರಂಥಗಳು ಪ್ರಕಟವೇ ಆಗಿಲ್ಲ. ಇತರರು ಬರೆದು ಇವನ ಹೆಸರಿನಲ್ಲಿ ಪ್ರಕಟವಾದ ಪುಸ್ತಕ ಗಳನ್ನು ಗ್ಯಾಲೆನ್ನೇ ಕಣ್ಣಾರ ನೋಡಿದ್ದನು. ಈ ವಿಷಯವನ್ನು ಚರ್ಚಿಸುತ್ತಾ ಅವನೇ ಹೀಗೆ ಹೇಳಿದನು, "ನನ್ನ ಸ್ವಂತ ಪುಸ್ತಕಗಳ ಮೇಲೇ ನಾನೊಂದು ಪುಸ್ತಕವನ್ನು ಬರೆಯಬೇಕೆಂದು ನೀನು ಹೇಳುವುದು ಸರಿ, ನನ್ನ ಬೆಸಿಯಸ್". ಇಷ್ಟೊಂದು ಬರೆದಿರುವ ಮಹಾಶಯ ಹಿಂದೆಯೂ ಇರಲಿಲ್ಲ ಮುಂದೆಯೂ ಬರು ವುದಿಲ್ಲ ಎಂದು ಹೇಳಲಾಗಿದೆ. ಪುಸ್ತಕಗಳ ಒಂದು ಪುಟದಲ್ಲಿ ಆದ್ಯ ಗ್ರೀಕ್

ಭಾಷೆಯಲ್ಲೂ, ಎದುರು ಪುಟದಲ್ಲಿ ಭಾಷಾಂತರವಾದ ಲ್ಯಾಟಿನ್ ಭಾಷೆಯಲ್ಲೂ ಮುದ್ರಣವಾಗಿ ೧೮೨೧-೩೩ ರಲ್ಲಿ ಲೀಪ್ಜಿಗ್ ಪಟ್ಟಣದಲ್ಲಿ ಪ್ರಕಟವಾದ ಎರಡು ಸಂಪುಟಗಳು ಈಗಲೂ ಇವೆ. ಇವೇ ಗ್ಯಾಲೆನ್ ಬರೆದ ಆದರ್ಶವಾದ ಕುನ್ ಮುದ್ರಣಗಳು, ಅಡಕವಾಗಿ ಹೇಳುವುದಾದರೆ, ಗ್ಯಾಲೆನ್ ಬರೆದ ವೈದ್ಯಶಾಸ್ತ್ರದಲ್ಲಿ ಕೊನೆಯ ಪಕ್ಷ ೨,೫೦೦,೦೦೦ ಪದಗಳಿದ್ದುವು.

ಉಪದೇಶಗಳು

ಗ್ಯಾಲೆನ್ ಉಪದೇಶಗಳ ಪ್ರಕಾರ ಎಲ್ಲಾ ದ್ರವ್ಯಗಳಲ್ಲೂ, ಮಣ್ಣು, ಗಾಳಿ, ಬೆಳಕು, ನೀರುಗಳೆಂಬ ನಾಲ್ಕು ಮೂಲಧಾತುಗಳಿವೆಯೆಂದೂ, ಎಲ್ಲಾ ದ್ರವ್ಯಗಳಲ್ಲೂ ಕಾವು, ತಂಡಿ, ಒಣಕಲು, ತೇವಗಳೆಂಬ ನಾಲ್ಕು ಗುಣಗಳಿವೆಯೆಂದೂ ನಿಯಮ ಇತ್ತು. ರಸಧಾತುಗಳಲ್ಲಿ ರಕ್ತ, ಕಫ, ಹಳದಿ ಪಿತ್ತ ಮತ್ತು ಕಪ್ಪುಪಿತ್ತವೆಂದು ನಾಲ್ಕು ವಿಧಗಳಿವೆಯೆಂದೂ, ರಕ್ತ ಬೆಚ್ಚಗೆ, ತೇವವಾಗಿಯೂ ಇರುವುದೆಂದೂ, ಕಫ ತಣ್ಣಗೆ ತೇವವಾಗಿಯೂ, ಹಳದಿ ಪಿತ್ತ ಬೆಚ್ಚಗೆ ಒಣಕಲಾಗೂ, ಕಪ್ಪು ಪಿತ್ತ ತಣ್ಣಗೂ ಇರುವುವೆಂದೂ ಹೇಳಿದ್ದನು. ಅವನ ಹೇಳಿಕೆಯ ಪ್ರಕಾರ ಹಿಪ್ಪೊಕ್ರೇಟಿಸ್ಸಿನ ಈ ರಸಧಾತುಗಳ ತತ್ತ್ವವನ್ನು ತಾನೂ ಅನುಸರಿಸುತ್ತಿದ್ದನು. ಇವನು ಅವನ್ನು ವಿಶದವಾಗಿಯೂ ಕಂಗೊಳಿಸುವಂತೆಯೂ ಹೇಳಿದ್ದರಿಂದ ಅವುಗಳ ಪ್ರಭಾವ ೧೫ ಶತಮಾನಗಳಾದರೂ ಇಳಿಮುಖವಾಗದೆ ಪ್ರತಿಯೊಬ್ಬ ವೈದ್ಯನೂ ತನ್ನ ವೈದ್ಯ ವೃತ್ತಿಯಲ್ಲಿ ತೊಡಗುವುದಕ್ಕೆ ಮುಂಚೆ ಗ್ರಹಿಸುವಂತಹುದಾಗಿತ್ತು. ಇವುಗಳ ಸಹಾಯದಿಂದಲೇ ರೋಗ ನಿದಾನ ಮತ್ತು ಚಿಕಿತ್ಸೆ ಸಾಧ್ಯವಾಗಿತ್ತು.

ತತ್ತ್ವಶಾಸ್ತ್ರ, ಗಣಿತಶಾಸ್ತ್ರಗಳಲ್ಲೂ ಗ್ಯಾಲೆನ್ ಪಾರಂಗತನಾಗಿದ್ದುದರಿಂದ, ಕೇವಲ ವೈದ್ಯಶಾಸ್ತ್ರದಲ್ಲಿ ಮಾತ್ರ ನಿಪುಣನಾಗಿದ್ದ. ಹಿಪ್ಪೊಕ್ರೇಟಿಸ್‌ನ ತತ್ತ್ವಗಳನ್ನು ಮೀರಿಸಿ, ವೈದ್ಯಶಾಸ್ತ್ರವನ್ನು, ತತ್ತ್ವಶಾಸ್ತ್ರದ, ಗಣಿತಶಾಸ್ತ್ರಗಳ ಅಧೀನಕ್ಕೊಳಪಡಿಸಿದ್ದನು. ಇದರ ಪ್ರಭಾವದಿಂದ ಶರೀರದ ಅಂಗಗಳ ಕ್ರಿಯೆಗಳನ್ನು ಸಾಕಾಗದ ಸರಿಯಲ್ಲದ ರೀತಿಯಲ್ಲಿ ವಿವರಿಸಿದ್ದನು. ಹೀಗಿದ್ದರೂ ಗ್ಯಾಲೆನ್ನಿನ ಕೀರ್ತಿ ಸ್ವಲ್ಪವೂ ತಗ್ಗಿರಲಿಲ್ಲ.

ಬರಹಗಳು

ಅಂಗರಚನೆಯನ್ನು ಅನೇಕ ಜಾತಿಯ ಪ್ರಾಣಿಗಳ ಅಂಗವಿಚ್ಛೇದನ ಮಾಡಿ ಕಲಿತಿದ್ದನು. ಮನುಷ್ಯನ ದೇಹವನ್ನೂ ಅಂಗವಿಚ್ಛೇದನ ಮಾಡಿದ್ದನೆಂದು ಕೆಲವರು ಹೇಳಿದ್ದಾರೆ. ಅಂಗರಚನೆ ವಿಷಯವಾಗಿ ಒಟ್ಟು ೧೬ ಪುಸ್ತಕಗಳಿದ್ದವು. ಅವುಗಳಲ್ಲಿ ಮೊದಲು ಸಿಕ್ಕಿಲ್ಲದಿದ್ದ ೭ ಪುಸ್ತಕಗಳು ಅರಬ್ಬಿ ಭಾಷೆಯ ಭಾಷಾಂತರಗಳಲ್ಲಿ ಆಮೇಲೆ ಸಿಕ್ಕಿದವು. ಜರ್ಮನ್ ಭಾಷೆಯಲ್ಲೂ, ಮತ್ತಿತರ ಭಾಷೆಗಳಲ್ಲೂ ಭಾಷಾಂತರ

ಮಾಡಿರುವ ಅವನ ಕೃತಿಗಳು ಈಗಲೂ ಪಡೆಯಲು ಸಾಧ್ಯ. ಅಲೆಗ್ಸಾಂಡ್ರಿಯದಲ್ಲಿ ಕಲಿತ ಅಸ್ಥಿಶಾಸ್ತ್ರದಲ್ಲಿ ಉದ್ದವಾದ ಚಪ್ಪಟೆಯಾದ ಎರಡು ವಿಧದ ಮೂಳೆಗಳಿವೆ ಯೆಂದೂ, ತಲೆ ಮೂಳೆ, ದವಡೆಮೂಳೆ, ಬೆನ್ನು ಹುರಿಯ ೨೪ ಕೀಲುಮೂಳೆಗಳು ಚಪ್ಪಟೆಯಾಗಿವೆಯೆಂದೂ, ತೊಡೆ, ತೋಳಿನ ಮೂಳೆಗಳು ಉದ್ದವಾಗಿವೆಯೆಂದೂ ಹೇಳಿದ್ದನು. ಶರೀರದ ಸ್ನಾಯುಗಳು, ಮಿದುಳಿನ ಪೊರೆ, ಮಿದುಳೊಳಗಿನ ಅನೇಕ ಭಾಗಗಳು, ಮಿದುಳಿನ ನರಗಳು, ಹೃದಯದ ನಾಲ್ಕು ಕೋಣೆಗಳು, ಧಮನಿ ಮತ್ತು ಸಿರಗಳನ್ನೆಲ್ಲಾ ವಿವರಿಸಿದ್ದನು. ಗ್ಯಾಲೆನ್ನಿನ ಈ ಅಂಗರಚನೆ ೧೫ ಶತಮಾನಗಳು ಕಳೆದರೂ ಆಧಾರಪೂರ್ವಕವಾಗಿತ್ತು. ಅವನಾದ ಮೇಲೆ ಬಂದ ಕ್ರೈಸ್ತ ಮತದವರು ಮತ್ತು ಅರಬ್ಬರು, ಗ್ಯಾಲೆನ್ನಿನ ಪ್ರಸಿದ್ಧಿಯನ್ನು ಮೆಚ್ಚಿ ಅಂಗವಿಚ್ಛೇದನ ಮಾಡ ಬೇಕಿಲ್ಲವೆಂದು ಹೇಳಿದರು. ಅನೇಕರಿಗೆ ಅಂಗವಿಚ್ಛೇದನ ಇಷ್ಟವಿರಲಿಲ್ಲ.

ಕೆಲವು ತಪ್ಪು ಭಾವನೆಗಳನ್ನು ಬಿಟ್ಟರೆ, ಅಂಗಕ್ರಿಯೆಶಾಸ್ತ್ರದ ಅನೇಕ ವಿಷಯಗಳು ಆಧಾರಪೂರ್ವಕವಾಗಿದ್ದವು. ಅನ್ನಕೋಶ ಆಹಾರವನ್ನು ಸ್ವೀಕರಿ ಸುತ್ತದೆಂದೂ, ಜೀರ್ಣಮಾಡುತ್ತದೆಂದೂ, ಅನಂತರ ಕರುಳಿಗೆ ಆಹಾರವನ್ನು ತಳ್ಳು ತ್ತದೆಂದೂ ವಿವರಿಸಿದ್ದನು. ಆದರೆ ಪಿಟ್ಯೂಟರಿ ನಿರ್ನಾಳಗ್ರಂಥಿ ಮಿದುಳಿನ ಸಿಂಬಳ ವನ್ನು ಗಂಟಲಿಗೆ ವಿಸರ್ಜಿಸುತ್ತದೆಂದು ತಪ್ಪು ನುಡಿದಿದ್ದನು. ಮತ್ತೊಂದು ಮನ್ನಿಸಲಾರದ ತಪ್ಪುಭಾವನೆ ಎಂದರೆ, ರಕ್ತಚಲನೆಯ ವಿವರ. ಜೀವಾತ್ಮ ಉಸಿ ರ್ನಾಳದ ಮೂಲಕ ಎಡ ಹೃತ್ಕರ್ಣವನ್ನು ಸೇರುತ್ತದೆಂದೂ, ಕರುಳಿನಿಂದ ಬಂದ ಅನ್ನಕ್ಷೀರ ಈಲಿಯಲ್ಲಿ ಮಲಿನ ರಕ್ತವಾಗುತ್ತದೆಂದೂ ಮಲಿನ ರಕ್ತಚಲನೆಗೆ ಕೇಂದ್ರವೆಂದೂ, ಅಲ್ಲಿಂದ ದೇಹದ ಇತರ ಭಾಗಗಳಿಗೆ ಮಲಿನ ರಕ್ತ ಹರಡಿ ಆಹಾರ ಪದಾರ್ಥಗಳನ್ನು ಒದಗಿಸುತ್ತದೆಂದೂ, ಶ್ವಾಸಕೋಶಕ್ಕೆ ಬಂದ ಮಲಿನ ರಕ್ತ ಶುದ್ಧಿಯಾಗಿ ಉಸಿರ್ನಾಳದ ಮೂಲಕ ಮಲಿನ ಪದಾರ್ಥಗಳನ್ನೆಲ್ಲಾ ಹೊರಗೆಡ ಹುತ್ತದೆಂದು ಹೇಳಿದ್ದನು. ಹೃದಯ ಹಿಗ್ಗುವಾಗ ಜೀವಾತ್ಮ ಎಡ ಹೃತ್ಕರ್ಣಕ್ಕೂ, ರಕ್ತ ಬಲ ಹೃತ್ಕರ್ಣಕ್ಕೂ ಬರುವುದೆಂದೂ, ಕುಗ್ಗಿದಾಗ ಗಾಳಿ ಮತ್ತು ರಕ್ತ ಹೊರಗೆ ಹೋಗುತ್ತವೆಂದು ಹೇಳಿದ್ದನು.


೧೫೪೩ರಲ್ಲಿ ವೆಸೇಲಿಯಸ್ ಗ್ಯಾಲೆನ್ನಿನ ಅಂಗರಚನೆಯನ್ನು ವಿರೋಧಿಸಿ ದರೂ, ತಪ್ಪು ಭಾವನೆ ಹೊಂದಿದ್ದ ರಕ್ತಚಲನೆಯನ್ನು ವಿರೋಧಿಸದೆ ಅದನ್ನೇ ಅನು ಮೋದಿಸಿದನು. ಆದರೆ ೧೫ ಶತಮಾನಗಳಾದ ನಂತರ ಬಂದ ವಿಲಿಯಮ್ ಹಾರ್ವೆ ೧೬೨೮ ರಲ್ಲಿ ರಕ್ತ ಚಲನೆಯನ್ನು ಸರಿಯಾಗಿ ವಿವರಿಸುತ್ತಾ, ಪ್ರಭಾವ ಬೀರುತ್ತಿದ್ದ ಗ್ಯಾಲೆನ್ ಏಕೆ ತನ್ನ ದೋಷಗಳನ್ನು ಅರಿತು, ಸರಿಯಾದ ರಕ್ತಚಲನೆ ಕಂಡು ಹಿಡಿಯಲಿಲ್ಲವೆಂದು ಆಶ್ಚರ್ಯಪಟ್ಟುದುದಲ್ಲದೆ, ವ್ಯಸನವನ್ನು ತೋರಿದನು.

ನರಗಳ ವಿಷಯದಲ್ಲಿ ಗ್ಯಾಲೆನ್‌ಗೆ ಸಾಕಷ್ಟು ಅರಿವಿತ್ತು. ಚಾಲಕ ಮತ್ತು ಅರಿವಿನ ನರಗಳಿವೆಯೆಂದೂ, ಬೆನ್ನುಹುರಿ ನರವನ್ನು ಬೇರೆಬೇರೆ ಮಟ್ಟದಲ್ಲಿ ಕತ್ತರಿಸಿದರೆ

ಬೇರೆಬೇರೆ ಲಕ್ಷಣಗಳುಂಟಾಗುತ್ತವೆಂದೂ ಮತ್ತು ಮಿದುಳಿನ ಹಲವು ಬಗೆಯ ಕ್ರಿಯೆಗಳನ್ನೂ ಕ್ರಮಬದ್ಧವಾಗಿ ವಿವರಿಸಿದ್ದನು.

ಗ್ಯಾಲೆನ್ನಿನ ಚತುರತೆ

ವೈದ್ಯಶಾಸ್ತ್ರದಲ್ಲೂ ನಿಪುಣನಾಗಿದ್ದನು. ಕ್ಷಯ ರೋಗವನ್ನು ಸೂಕ್ಷ್ಮವಾಗಿ ವಿವರಿಸಿ ಚಿಕಿತ್ಸೆಕೊಡುವಾಗ ಹವಾಗುಣದ ಮತ್ತು ಆಹಾರದ ಅಗತ್ಯವನ್ನು ತಿಳಿಸಿ



ಗ್ಯಾಲೆನ್ ಪರೀಕ್ಷಿಸುತ್ತಿರುವುದು

ದ್ದನು. ಹಾಲಿನ ಪುಷ್ಟಿಗುಣವನ್ನು ಹೇಳಿದ್ದನು. ಅಳ್ಳೆಪರೆಯುರಿತವನ್ನು ಪುಪ್ಪುಸುಃತದಿಂದ ವ್ಯತ್ಯಾಸ ಮಾಡಲು ತಿಳಿದಿದ್ದನು. ಅಳ್ಳೆಪರೆಯುರಿತದಲ್ಲಿ ಬರುವ ಪಕ್ಕೆ ನೋವನ್ನು ಈಲಿ ರೋಗಗಳಲ್ಲಿ ಉಂಟಾಗುವ ನೋವಿನಿಂದ ಭೇದ ಮಾಡಲು ಗೊತ್ತಿತ್ತು. ಮಿದುಳು ಜ್ವರ, ಮನೋರೋಗಗಳ ಪರಿಚಯವೂ ಅವನಲ್ಲಿ ಅತ್ಯುತ್ತಮವಾಗಿತ್ತು. ನಾಡಿಯ ವಿಚಾರವಾಗಿ ೭ ಪುಸ್ತಕಗಳನ್ನು ಬರೆದಿದ್ದನು. ಅಲ್ಲದೆ ವ್ಯತ್ಯಾಸವುಳ್ಳ ೨೭ ಬೇರೆಬೇರೆ ಬಗೆಗಳ ನಾಡಿಗಳನ್ನೂ ವಿವರಿಸಿದ್ದನು.

ಆಶ್ಚರ್ಯಕರವಾಗಿ ಗ್ಯಾಲೆನ್ ಕನಸಿನ ವಿಚಾರವಾಗಿಯೂ ಲೇಖನ ಬರೆದಿದ್ದನು. ರೋಗದ ಮುನ್ನರಿವು, ಚಿಕಿತ್ಸೆಗಳನ್ನು ಆತನು ಕನಸಿನಂತೆ ಕಾಣುತ್ತಿದ್ದುದರಿಂದ, ಅದರಲ್ಲಿ ನಂಬಿಕೆ ಹುಟ್ಟಿತ್ತು. ನಕ್ಷತ್ರ ಮತ್ತು ಗ್ರಹಗಳಲ್ಲಿ ನಂಬಿಕೆ ಇದ್ದರೂ ಜ್ಯೋತಿಷ್ಯದಲ್ಲಿ ನಂಬಿಕೆ ಇರಲಿಲ್ಲ.

ಗ್ಯಾಲೆನ್, ವೈದ್ಯಶಾಸ್ತ್ರದಲ್ಲಿ ಪಂಡಿತನಾಗಿದ್ದುದಲ್ಲದೆ, ಶಸ್ತ್ರವೈದ್ಯದಲ್ಲೂ ದೊಡ್ಡ ಗ್ರಂಥವನ್ನು ಬರೆದಿದ್ದನು. ಅದರಲ್ಲಿ ತಲೆಮೂಳೆ ಮುರಿತ, ತಲೆಬುರುಡೆ ತೂತು



ಪಾಂಪೆಯ ಮುಂಡೊಡಕ ಚಿತ್ರ. ಇಕ್ಕಳದಿಂದ ಅಂಬಿನ ಕಣೆಯನ್ನು ಶಸ್ತ್ರವೈದ್ಯ ತೆಗೆಯುತ್ತಿರುವುದು.

ಕೊರೆವ ವಿಧಾನ, ಗಾಯ, ಅಂಡವಾಯು ಮುಂತಾದ ವಿಷಯುಗಳಿದ್ದುವು. ರಕ್ತ ಸ್ರಾವ ನಿಲ್ಲಿಸುವ ಕ್ರಮಗಳೂ ಗೊತ್ತಿದ್ದವು, ರಕ್ತನಾಳವನ್ನು ಬಿಗಿಯಲು ದಾರಗಳನ್ನು ಉಪಯೋಗಿಸುತ್ತಿದ್ದನು. ದಾರಗಳಲ್ಲಿ, ನಾರು, ರೇಷ್ಮೆದಾರ ಮತ್ತು ಕರುಳಿನ ಹುರಿಗಳ ಉಪಯೋಗವೂ ಚೆನ್ನಾಗಿ ತಿಳಿದಿತ್ತು.

ವೈದ್ಯಶಾಸ್ತ್ರ ಚರಿತ್ರೆಯಲ್ಲೂ ಅವನಿಗೆ ಬಹಳ ಆಸೆ ಇತ್ತು. ಅವನ ಬರವಣಿಗೆಯಿಂದ ಆಗಿನ ಕಾಲದ ವೈದ್ಯವೃತ್ತಿಯನ್ನು ತಿಳಿಯಬಹುದು. ಆಗಿನ ಪದ್ಧತಿಗಳು, ಭಿನ್ನಾಭಿಪ್ರಾಯಗಳು, ವೈದ್ಯರ ಗುಂಪುಗಳು ಮತ್ತು ವಿದ್ಯಾರ್ಥಿಗಳಿಗೆ ಉಪದೇಶ ಮಾಡುತ್ತಿದ್ದ ವಿಷಯಗಳು ಗ್ರಂಥದಲ್ಲಿದ್ದವು.

ವಿಷಮುರಿ ಔಷಧ ತಯಾರಿಸುವುದರಲ್ಲೂ ಇವನಿಗೆ ಅರಿವಿತ್ತು. ೭೩ ಸಾಮಾನುಗಳುಳ್ಳ ಪ್ರತಿವಿಷ ವಸ್ತುವಾದ ತೆರಿಯಾಕ್‌ನ್ನು ಚಕ್ರವರ್ತಿಯಾದ ಮಾರ್ಕಸ್ ಅರೂಲಿಯನ್‌ಗೆ ಕ್ರಮಬದ್ಧವಾಗಿ ಕೊಡುತ್ತಿದ್ದನು. ವಿಷ ಹಾಕುವರೆಂಬ ಭಯ ಜನರಲ್ಲಿದ್ದುದರಿಂದ ತೆರಿಯಾಕ್ ಬಹಳ ಉಪಯೋಗವಲ್ಲಿತ್ತು. ೧೮ನೇ ಶತಮಾನದ ಇಂಗ್ಲೆಂಡಿನಲ್ಲೂ ಇದರ ಮಹಿಮೆ ಬಹಳವಿತ್ತು.

ಆದ್ದರಿಂದ ಗ್ಯಾಲೆನ್ನಿನ ಬರವಣಿಗೆ, ವೈದ್ಯಶಾಸ್ತ್ರ, ಅಂಗರಚನೆ, ದೇಹಶಾಸ್ತ್ರ, ರೋಗಿಗಳ ಪರೀಕ್ಷೆ, ಶಸ್ತ್ರವೈದ್ಯ, ಚಿಕಿತ್ಸೆ ಕ್ರಮ, ಔಷಧವಸ್ತುಶಾಸ್ತ್ರ, ಆರೋಗ್ಯಶಾಸ್ತ್ರ, ನೀತಿಶಾಸ್ತ್ರ ಮತ್ತು ವೈದ್ಯಶಾಸ್ತ್ರ ಚರಿತ್ರೆಗಳೆಲ್ಲಾ ಕೂಡಿದ್ದ ಒಂದು ದೊಡ್ಡ ವಿಶ್ವಕೋಶವಾಗಿತ್ತು. ಇಷ್ಟೊಂದು ಓದುಬರಹ ತಿಳಿದ ವಿಜ್ಞಾನಿ ಅತಿ ವಿರಳ. ಅವನ ಎಲ್ಲಾ ಬರವಣಿಗೆಗಳನ್ನು ಓದಿರುವವರೂ ಅತಿ ವಿರಳ.

ಗ್ಯಾಲೆನ್ ಮತ್ತು ಹಿಪ್ಪೊಕ್ರೇಟಿಸ್ ಇಬ್ಬರೂ ಗ್ರೀಕ್ ವೈದ್ಯಶಾಸ್ತ್ರದಲ್ಲಿ ಪ್ರಚಂಡ ಪುರುಷರಾಗಿದ್ದರು. ಆದರೂ ಕೆಲವರ ಪ್ರಕಾರ, ಗ್ಯಾಲೆನ್ನೇ ಮೇಲಾಗಿದ್ದ. ಇವನ ಪ್ರಭಾವ ಕ್ರೈಸ್ತ ಜನರಲ್ಲೂ ಅರಬ್ಬ ಜನರಲ್ಲೂ ಮನದಟ್ಟುಂಟುಮಾಡಿತ್ತು. ಇವನ ತತ್ತ್ವಗಳನ್ನೇ ಅವರು ಕೂಡ ಅವಲಂಬಿಸಿದರು. ಮಧ್ಯ ಯುಗದಲ್ಲಿ ಗ್ಯಾಲೆನ್ನಿನ ಹೆಸರನ್ನು ಕೊಂಡಾಡದಿದ್ದವರೇ ಇರಲಿಲ್ಲ.

೧೭. ಗ್ಯಾಲೆನ್ ಅನಂತರದ ವೈದ್ಯಶಾಸ್ತ್ರ

ಆನ್ಟಿಲ್ಲಾಸ್

ಗ್ಯಾಲೆನ್ ಹೇಗೆ ತನ್ನ ವ್ಯಕ್ತಿಪ್ರಭಾವದಿಂದಲೂ, ಸರ್ವವ್ಯಾಪಕ ಬುದ್ಧಿಶಕ್ತಿಯಿಂದಲೂ ಉನ್ನತ ಸ್ಥಾನದಲ್ಲಿದ್ದನೋ ಅದೇ ರೀತಿ ಶಸ್ತ್ರವೈದ್ಯದಲ್ಲಿ ಆನ್ಟಿಲ್ಲಾಸ್ (೧೫೦) ಪ್ರಸಿದ್ಧಿಯಾಗಿದ್ದನು. ಇವನ ಬರವಣಿಗೆಗಳು ಹಾಳಾಗಿದ್ದರೂ ಒರಿಬಾಸಿಯಸ್ ತನ್ನ ಲೇಖನಗಳಲ್ಲಿ ಅಲ್ಲಲ್ಲಿ ಆನ್ಟಿಲ್ಲಾಸ್‌ನ ಶಸ್ತ್ರವೈದ್ಯದ ಖ್ಯಾತಿಯನ್ನು ಬರೆದಿದ್ದಾನೆ. ಆನ್ಟಿಲ್ಲಾಸ್‌ನ ಜೀವನ ಚರಿತ್ರೆ ಸ್ವಲ್ಪವೂ ಗೊತ್ತಿಲ್ಲದಿದ್ದರೂ, ಇವನ ಹೆಸರಿನಿಂದ ಗ್ರೀಕನೆಂದು ಹೇಳಬಹುದಾಗಿತ್ತು. ಇವನು ೨ನೇ ಶತಮಾನದಲ್ಲಿದ್ದು, ಆರೋಗ್ಯ ಅನಾರೋಗ್ಯಗಳ ಮೇಲೆ ಗಾಳಿ ನೆಲಗಳ ಪರಿಣಾಮ, ಆಹಾರಶಾಸ್ತ್ರ, ಅಂಗ ಸಾಧನೆ, ಶುಶ್ರೂಷೆ ಮುಂತಾದ ವೈದ್ಯವಿಚಾರಗಳನ್ನು ಬರೆದಿದ್ದಲ್ಲದೆ, ಶಸ್ತ್ರವೈದ್ಯದಲ್ಲಿ ವಿಶೇಷ ಪ್ರವೀಣತೆಯನ್ನು ಹೊಂದಿದ್ದರಿಂದ ಇವನ ಕೀರ್ತಿ ಬೆಳೆಯಿತು. ತನ್ನ ಬರವಣಿಗೆಯಲ್ಲಿ ಶಸ್ತ್ರಕ್ರಿಯೆ ಮಾಡುವ ರೀತಿ, ಅವುಗಳ ತೊಡಕುಗಳನ್ನೂ ತಿಳಿಸಿ ತನ್ನ ಚತುರತೆಯನ್ನು ಪ್ರದರ್ಶಿಸಿದನು. ಕಣ್ಣಿನ ಪೊರೆ, ಉಸಿರ್ನಾಳಛೇದನ, ಮೊಳೆ ರೋಗದ, ಸ್ತನಗಳ ಮತ್ತು ಕರುಳಿನ ಶಸ್ತ್ರಕ್ರಿಯೆಗಳು, ಮೂಳೆ ಮತ್ತು ಕೀಲು ರೋಗಗಳ ಚಿಕಿತ್ಸೆ ಕ್ರಮಗಳನ್ನೂ ವಿವರಿಸಿದನು. ಸಿರ, ಧಮನಿಗಳನ್ನು ಸೀಳುವ ಕ್ರಿಯೆಯೂ ಅತ್ಯುತ್ತಮವಾಗಿತ್ತು. ಸುರೂಪಿಕ ಶಸ್ತ್ರಕ್ರಿಯೆ ಮತ್ತು ಧಮನಿಗಳ ಅಗಲುಬ್ಬುಗಳ ಕರ್ತನ ಇನ್ನೂ ಮೇಲಾಗಿದ್ದವು. ಹೀಗೆ ಅನೇಕ ಶಸ್ತ್ರಕ್ರಿಯೆಗಳಲ್ಲಿ ಪಾಂಡಿತ್ಯ ಹೊಂದಿದ್ದ ಆನ್ಟಿಲ್ಲಾಸ್‌ನ ಕೀರ್ತಿ ಯಾವಾಗಲೂ ಅಳಿಯದಂತಿತ್ತು. ಇವನು ಸತ್ತ ಮೇಲೆ, ಗ್ರೀಕರ ರೋಮನ್ನರ ವೈದ್ಯಶಾಸ್ತ್ರ ಅವನ ಜತೆಯಲ್ಲೇ ಅಳಿಯಿತು. ಆದರೆ ಕಾನ್‌ಸ್ಟ್ಯಾಂಟೈನ್ ತನ್ನ ರಾಜಧಾನಿಯನ್ನು ಬಾಸ್‌ಫೊರಸ್ ಜಲಸಂಧಿಯಲ್ಲಿದ್ದ ಬೈಸಾಂಟಿನ್ ನಗರಕ್ಕೆ ಬದಲಾಯಿಸಿದಾಗ ಗ್ರೀಕರ ರೋಮನ್ನರ ವೈದ್ಯಶಾಸ್ತ್ರ ಸ್ವಲ್ಪ ಚೇತರಿಸಿಕೊಂಡು, ಲಿಯೊನಿಡಿಸ್, ಸೀಲಿಯಸ್ ಆರೇಲಿಯಾನಸ್ ಮತ್ತು ಕ್ಯಾಸಿಯಸ್ ಫೆಲಿಕ್ಸ್‌ರ ಕೈಸೇರಿತು.

ಸೀಲಿಯಸ್ ಆರೇಲಿಯಾನಸ್

ಗ್ಯಾಲೆನ್ ಕಾಲವಾದ ಮೇಲೆ, ಅವನಷ್ಟು ಪ್ರಖ್ಯಾತಿ ಇಲ್ಲದಿದ್ದರೂ ಲ್ಯಾಟಿನ್ ಭಾಷೆಯಲ್ಲಿ ವೈದ್ಯಶಾಸ್ತ್ರವನ್ನು ಬರೆದವರಲ್ಲಿ ಸೀಲಿಯಸ್ ಆರೇಲಿಯಾನಸ್ ಶ್ರೇಷ್ಠನಾಗಿದ್ದನು. ನ್ಯುಮಿಡಿಯದ ಸಿಕ್ಕದಲ್ಲಿ ಹುಟ್ಟಿ ಪ್ರಾಯಶಃ ರೋಮ್ ನಗರದಲ್ಲಿ ವೈದ್ಯ ನಡೆಸುತ್ತಿದ್ದನು. ಇವನು ೪ ಅಥವಾ ೫ನೇ ಶತಮಾನದಲ್ಲಿದ್ದನೆಂದು ಹೇಳಲಾಗಿದೆ. ಇವನು ಕೂರಾಗಿ ಬರುವ, ಮತ್ತು ಬೇರೂರಿರುವ ರೋಗಗಳ ವಿಷಯವಾಗಿ

ಲೇಖನ ಬರೆದಿದ್ದನು. ಈ ಲೇಖನವನ್ನು ಕುರಿತು "ಇದು ಸೊರನಸ್ ಬರೆದಿರುವ ಅದೇ ರೀತಿಯ ಬರವಣಿಗೆಯ ಭಾಷಾಂತರವಾಗಿ ಕಂಡುಬಂದರೂ, ಅಲ್ಲಿನ ಅನೇಕ ಅಭಿಪ್ರಾಯಗಳು ಆವನವೇ" ಎಂದು ರಾಲ್ಫ್ ಮೇಜರ್ ಬರೆದಿದ್ದಾನೆ. ಆದರೂ ಪ್ರತಿಯೊಂದು ರೋಗದ ನಿರೂಪಣೆ, ಕಾರಣ, ಲಕ್ಷಣ, ನಿದಾನ, ಮುನ್ನರಿವು, ಚಿಕಿತ್ಸೆ ಕ್ರಮಗಳನ್ನು ಬೇರೆಬೇರೆ ಭಾಗಗಳಾಗಿ ವಿಂಗಡಿಸಿ ಬರೆದಿದ್ದನು. ರೋಗಗಳ ವ್ಯತ್ಯಾಸ ಗುರುತಿಸುವ ಕ್ರಮ ಮತ್ತು ಚಿಕಿತ್ಸೆ ಕ್ರಮಗಳು ಅತಿಶಯವಾಗಿದ್ದವು. ವೈದ್ಯಶಾಸ್ತ್ರದ ಚರಿತ್ರೆಯನ್ನೂ ಹಿಪ್ಪೊಕ್ರೇಟಿಸ್ ಕಾಲದಿಂದ ಸೊರನಸ್ ಕಾಲದ ವರೆವಿಗೂ ವಿವರಿಸಿದ್ದನು. ಕ್ಷಯ ರೋಗದ ವಿವರಣೆ ಈಗಿನ ಕಾಲಕ್ಕನುಗುಣವಾಗಿತ್ತು. ಆಳ್ವಿಪರೆಯುರಿತ, ಪುಪ್ಪುಸುರಿತ, ಎದೆ ಶೂಲೆಗಳ ವಿಚಾರ ಅತ್ಯುತ್ತಮವಾಗಿತ್ತು. ಕಾಲೂತದಲ್ಲಿ ಬೆರಳಿನಿಂದ ಅದುಮಿದರೆ ಕುಳಿ ಬೀಳುತ್ತಿದ್ದುದನ್ನೂ, ಹೊಟ್ಟೆಯ ಉಬ್ಬರದಲ್ಲಿ ಬೆರಳಿನಿಂದ ಹೊಡೆದರೆ ನಗಾರಿ ಹೊಡೆದಂತಾಗುವ ಶಬ್ದವನ್ನೂ ವಿವರಿಸಿದ್ದನು. ನರ ದೌರ್ಬಲ್ಯ, ಅಪಸ್ಮಾರ, ಮಿದುಳು ಜ್ವರ, ಮನೋರೋಗ, ತೊದಲು ಮುಂತಾದುವನ್ನೂ ಅವುಗಳ ಚಿಕಿತ್ಸೆಗಳನ್ನೂ ತಿಳಿಸಿದ್ದನು. ಆದರೆ ಇವನ ಬರೆವಣಿಗೆ ಲ್ಯಾಟಿನ್ನಿನಲ್ಲಿದ್ದರೂ ಪೂರ್ಣ ಪಾಂಡಿತ್ಯವಿಲ್ಲದೆ ಭಾಷೆ ಶುದ್ಧವಾಗಿರಲಿಲ್ಲ. ಆದರೂ ಇವನ ಪ್ರಾಮುಖ್ಯತೆ ಕಡಿಮೆಯಲ್ಲವೆಂದು ಬಹಳ ವಿಜ್ಞಾನಿಗಳ ಅಭಿಪ್ರಾಯ.

೧೮. ಬೈಸಾಂಟಿಯಮ್ ವೈದ್ಯಶಾಸ್ತ್ರ

ರೋಮ್ ಅವನತಿ

ಗಿಬ್ಬನ್ ಹೇಳಿರುವ ಪ್ರಕಾರ ಗ್ಯಾಲೆನ್ ಇದ್ದ ೨ನೇ ಶತಮಾನವೇ ಬಹಳ ಕೀರ್ತಿ ಪಡೆದು ಸುಖ ಸಂಪತ್ತುಗಳನ್ನು ಹೊಂದಿದ್ದು, ೨ನೇ ಶತಮಾನ ಕಳೆದ ನಂತರ ರೋಮ್ ಸಾಮ್ರಾಜ್ಯ ಕೊನೆಗಾಣಲು ಆರಂಭವಾಯಿತು. ಅನೇಕ ಕಡೆಗಳಿಂದ ಅನಾಗರಿಕ ಜನರು ಕೊಳ್ಳೆ ಹೊಡೆಯಲು ರೋಮ್ ಸಾಮ್ರಾಜ್ಯವನ್ನು ಮುತ್ತಿದರು : ಹೂಣರು, ವಾಂಡಲ್ಲರು, ಮತ್ತು ಗಾತರು. ಮಾರ್ಕಸ್ ಅರೆಲಿಯಸ್ ಚಕ್ರವರ್ತಿ ತನ್ನ ರಾಜ್ಯದ ಆಡಳಿತದ ಕುಶಲತೆಯಿಂದಲೂ ಮತ್ತು ಪೌರುಷದಿಂದಲೂ ರೋಮ್ ಚಕ್ರಾಧಿಪತ್ಯಕ್ಕೆ ಕುಂದು ಬರದಂತೆ ನೋಡಿಕೊಂಡಿದ್ದನು. ಕಾನ್‌ಸ್ಟಾಂಟೈನ್, ಪದವಿಗೆ ಬಂದಮೇಲೂ ಅವೇ ತೊಂದರೆಗಳಿದ್ದುದರಿಂದ, ರೋಮ್ ಪಟ್ಟಣವನ್ನು ತ್ಯಜಿಸಿ ಬಾಸ್‌ಫೊರಸ್ ಸಮುದ್ರ ತೀರದಲ್ಲಿದ್ದ ಬೈಸಾಂಟಿಯಮ್ ಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿ ರಾಜ್ಯವಾಳಲು ಪ್ರಾರಂಭಿಸಿದನು. ಆದರೂ ೫ನೇ ಶತಮಾನದಲ್ಲಿ ರೋಮ್ ಚಕ್ರಾಧಿಪತ್ಯ ನಾಶವಾಗುವುದನ್ನು ಯಾರೂ ತಡೆಯಲಾಗಲಿಲ್ಲ. ಗ್ಯಾಲನ್ ಸತ್ತಂದಿನಿಂದ ರೋಮ್ ರಾಜ್ಯ ಕೊನೆಗಾಣುವ ತನಕ ವೈದ್ಯಶಾಸ್ತ್ರವನ್ನು ಅನೇಕ ವೈದ್ಯ ಪ್ರವೀಣರು ಕಾಪಾಡಿಕೊಂಡು ಬಂದರು.

ರೋಮ್ ಸಾಮ್ರಾಜ್ಯ ಕೊನೆಗಾಣುವುದಕ್ಕೆ ಅನಾಗರಿಕರ ಮುತ್ತಿಗೆ ಒಂದೇ ಕಾರಣವಾಗಿರಲಿಲ್ಲ. ರೋಮನ್ನರಲ್ಲೇ ಲಂಚಕೋರತನ, ಗೂಂಡಾಡಳಿತಗಳು ತಲೆ ದೋರಿದುದರಿಂದಲೂ, ಮಲೇರಿಯ ರೋಗ ದೇಶದಾದ್ಯಂತ ಹರಡಿ, ಜನರು ರೋಮ್ ನಗರಕ್ಕೆ ತಮ್ಮ ಸೌಕರ್ಯಕ್ಕಾಗಿ ನುಗ್ಗಿದ್ದುದರಿಂದಲೂ, ರೋಮನ್ನರು ಏಸುವನ್ನು ಜುಡೆ ಎಂಬಲ್ಲಿ ಕೊಂದದ್ದರಿಂದ, ಏಸುವಿನ ಬೆಂಬಲಿಗರು ಕೋಪಗೊಂಡು ಸೇಡು ತೀರಿಸಿ ಕೊಳ್ಳಲು ರೋಮನ್ನರ ಮತವನ್ನೇ ನಾಶ ಮಾಡಲು ಪ್ರಾರಂಭಿಸಿದ್ದರಿಂದಲೂ, ರೋಮ್ ಚಕ್ರಾಧಿಪತ್ಯ ನುಣ್ಣಗಾಯಿತು. ಹಾಗೂ ಮೇಜರ್ ಹೇಳಿರುವಂತೆ, ರೋಮನ್ನರಲ್ಲೇ ತಮ್ಮ ಹಳೆಯ ದೇವರುಗಳಲ್ಲಿ ನಂಬಿಕೆ ಹೋಗಿ ಹೊಸ ದೇವರುಗಳತ್ತ ತಿರುಗಿದರು.

ಸಂತ ಕಾಸ್ಮಾಸ್, ಸಂತ ಡಾಮಿಯನ್

ಮೊಟ್ಟ ಮೊದಲಿನ ಕ್ರಿಸ್ಚಿಯನರು ರೋಮನ್ನರ ದೇವಾಲಯಗಳನ್ನೇ ಚರ್ಚು ಗಳನ್ನಾಗಿ ಬದಲಾಯಿಸಿ, ಎಸ್ಕ್ಲೆಪಿಯಸ್ಸಿನ ಬದಲು ಕ್ರೈಸ್ತನನ್ನು ಮತ್ತು ಅವನ ಪವಿತ್ರವಾದ ಪೂಜ್ಯರನ್ನು ಪೂಜಿಸಲು ಆರಂಭಿಸಿದರು. ಅವರ ಪೈಕಿ, ,ವೈದ್ಯಶಾಸ್ತ್ರದ ಪೂಜ್ಯರಾದ ಸಂತಕಾಸ್ಮಾಸ್ ಮತ್ತು ಸಂತ ಡಾಮಿಯನ್ ಮುಖ್ಯಸ್ಥರಾಗಿದ್ದರು.

ಇವರು ರೋಗಿಗಳನ್ನು ಗುಣಮಾಡುವುದರಲ್ಲಿ ನಿಸ್ಸೀಮರಾಗಿದ್ದರು. ಆದ್ದರಿಂದ ಇವರಿಗೆ ಅರ್ಪಿತವಾಗಲು ೬ ಕ್ರೈಸ್ತ ದೇವಾಲಯಗಳನ್ನು ಬೈಸಾಂಟಿಯಮ್ಮಿನಲ್ಲಿ



ತೊನ್ನು ರೋಗಿಯನ್ನು ಕ್ರಿಸ್ತ ಗುಣಪಡಿಸುತ್ತಿರುವುದು

ಕಟ್ಟಿಸಲಾಗಿತ್ತು. ರೋಮಿನಲ್ಲೂ, ಗ್ರೀಸಿನಲ್ಲೂ ಏಷ್ಯಾ ಮೈನರಿನಲ್ಲೂ ಇವರ ಪ್ರಭಾವ ಹೆಚ್ಚಾಗಿತ್ತು. ಹೀಗೆ ಕ್ರೈಸ್ತಮತ ಹಬ್ಬುತ್ತಿರುವುದನ್ನು ಕಾನ್‌ಸ್ಟಾಂಟೈನ್ ಚಕ್ರವರ್ತಿ ನೋಡಿ, ಕ್ರೈಸ್ತಮತವನ್ನೇ ರೋಮ್ ಚಕ್ರಾಧಿಪತ್ಯ ಅವಲಂಬಿಸಿದರೆ



ಸಂತ ಡಾಮಿಯನ್ ಹಾಗೂ ಕಾಸ್ಮಾಸ್ ಸೋದರರು ಹಾಗೂ ಅರೇಬಿಯದ ವೈದ್ಯರು

ಒಳ್ಳೆಯದೆಂದು ನಂಬಿ ರೋಮ್ ನಗರವನ್ನು ಬಿಟ್ಟು ಬೈಸಾಂಟಿಯುಮ್ಮನ್ನು ೩೨೬ರಲ್ಲಿ ರೋಮ್ ಸಾಮ್ರಾಜ್ಯದ ರಾಜಧಾನಿಯನ್ನಾಗಿ ಮಾಡಿಕೊಂಡನು.

ಕಾನ್‌ಸ್ಟ್ಯಾಂಟೈನ್ ಚಕ್ರವರ್ತಿ

ಬೈಸಾಂಟಿಯುವ್ ಕ್ರಿ.ಪೂ. ೬೫೭ರಲ್ಲಿ ಗ್ರೀಕರಿಂದ ಸ್ಥಾಪಿಸಲ್ಪಟ್ಟಿತ್ತು. ಇದರ ಹತ್ತಿರವೇ ಹೊಸ ಪಟ್ಟಣವನ್ನು ಸ್ಥಾಪಿಸಿ ಅದಕ್ಕೆ ಹೊಸ ರೋಮ್ ಎಂದು ನಾಮಕರಣ ಮಾಡಿದನು. ಕಾನ್‌ಸ್ಟ್ಯಾಂಟೈನ್ ಸ್ಥಾಪಿಸಿದುದರಿಂದ ಕಾನ್‌ಸ್ಟ್ಯಾಂಟಿನೋಪಲ್ ಎಂದೂ ಹೆಸರು ಬಂತು. ಆದರೆ ಕೆಲವು ಕಾಲ ಬೈಸಾಂಟಿಯುವ್ ಎಂಬ ಹಳೇ ಹೆಸರನ್ನು ಅಳಿಸಲಾಗಲಿಲ್ಲ. ಕಾನ್‌ಸ್ಟ್ಯಾಂಟೈನ್ ತನ್ನ ಸಾಮರ್ಥ್ಯವನ್ನೆಲ್ಲಾ ಉಪಯೋಗಿಸಿ, ರೋಮ್ ಚಕ್ರಾಧಿಪತ್ಯವನ್ನು ಕಾಪಾಡಿಕೊಂಡು ಬಂದು ಕೀರ್ತಿಶೇಷರಾದ ರೋಮ್ ಚಕ್ರವರ್ತಿಗಳಲ್ಲಿ ತಾನೂ ಒಬ್ಬನಾದನು. ಇವನು ಅಥೆನ್ಸ್ ನಗರದಲ್ಲಿ ಪಾಠಶಾಲೆಗಳನ್ನು ಅಭಿವೃದ್ಧಿ ಮಾಡಿದನು. ಕಾನ್‌ಸ್ಟ್ಯಾಂಟಿನೋಪಲ್ಲಿನಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದನು. ವೈದ್ಯಶಾಸ್ತ್ರಜ್ಞರಿಗೆ ಸಾಕಷ್ಟು ಸೌಕರ್ಯವನ್ನು, ಹಕ್ಕುಭಾದ್ಯತೆಗಳನ್ನು ಕೊಟ್ಟನು. ಹೀಗೆ ಸ್ಥಾಪಿಸಲ್ಪಟ್ಟ ಬೈಸಾಂಟಿಯುವ್ ಸಂಸ್ಕೃತಿ ೧೦೦೦ ವರ್ಷಗಳ ಕಾಲ ಪ್ರಖ್ಯಾತಿಯಲ್ಲಿತ್ತು.

ಒರಿಬಾಸಿಯಸ್

ಒರಿಬಾಸಿಯಸ್ ಬೈಸಾಂಟಿಯುಮ್ಮಿನ ವೈದ್ಯರಲ್ಲೆಲ್ಲಾ ಪ್ರಸಿದ್ಧಿಯಾಗಿದ್ದನು. ಇವನು ೩೨೫ರಲ್ಲಿ ಪೆರ್ಗಮಾನ್‌ನಲ್ಲಿ ಜನಿಸಿ, ಅಲೆಗ್ಸಾಂಡ್ರಿಯದಲ್ಲಿ ವಿದ್ಯಾಭ್ಯಾಸ ಮಾಡಿ, ಜೂಲಿಯನ್ ಚಕ್ರವರ್ತಿಯ ಆಸ್ಥಾನ ವೈದ್ಯನಾಗಿದ್ದನು. ರಾಜನ ಸಂಗಡ ಯುದ್ಧಕ್ಕೂ ಹೋಗುತ್ತಿದ್ದನು. ಪರ್ಷಿಯದ ಮೇಲೆ ಯುದ್ಧ ಮಾಡುತ್ತಿದ್ದಾಗ ಗಾಯಗೊಂಡು ಜೂಲಿಯನ್ ಸತ್ತಮೇಲೆ ದೊರೆತನಕ್ಕೆ ಬಂದ ಹೊಸ ಚಕ್ರವರ್ತಿಗಳು ಹಗೆತನದಿಂದ ಒರಿಬಾಸಿಯಸ್ಸನ್ನು ಅನಾಗರಿಕರಾದ ಗಾತರ ವಶಕ್ಕೆ ಕಳುಹಿಸಿಬಿಟ್ಟರು. ಗಾತರ ವಶದಲ್ಲಿದ್ದಾಗ ಅವರನ್ನು ಮೆಚ್ಚಿಸಿ ಪುನಃ ಪ್ರಖ್ಯಾತಿಗೆ ಬಂದದ್ದನ್ನು ನೋಡಿ ಚಕ್ರವರ್ತಿಗಳು ತಮ್ಮಲ್ಲಿಗೆ ಕರೆಸಿಕೊಂಡು ಅವನಿಗೆ ಸಲ್ಲತಕ್ಕ ಗೌರವಗಳನ್ನೆಲ್ಲಾ ಕೊಟ್ಟು ತಮ್ಮ ಆಸ್ಥಾನ ವೈದ್ಯನನ್ನಾಗಿ ನೇಮಿಸಿಕೊಂಡರು. ಒರಿಬಾಸಿಯಸ್ ಬಹಳ ಕಾಲ ಬದುಕಿದ್ದು ಅನೇಕ ವೈದ್ಯ ಗ್ರಂಥಗಳನ್ನು ಬರೆದು ಕೀರ್ತಿ ಪಡೆದನು. ವೈದ್ಯಶಾಸ್ತ್ರದ ವಿಶ್ವಕೋಶವನ್ನು ಜೂಲಿಯನ್ ಚಕ್ರವರ್ತಿಯ ಪ್ರೇರಣೆಯ ಮೇಲೆ ಬರೆದಿದ್ದನು. ಈ ವಿಶ್ವಕೋಶದಲ್ಲಿ ೭೦ ಪುಸ್ತಕಗಳಿದ್ದವು. ಅನೇಕ ಪುಸ್ತಕಗಳು ನಾಶವಾಗಿ ಕೆಲವು ಮಾತ್ರ ಸಿಕ್ಕಿವೆ. ಇವನ್ನು ಡಾರೆಂಬರ್ಗ್ ೧೮೬೦ರಲ್ಲಿ ಫ್ರೆಂಚ್‌ಭಾಷೆಗೆ ಅನುವಾದಿಸಿದ ೬ ಸಂಗ್ರಹಗಳು ಒರಿಬಾಸಿಯಸ್ಸಿನ ಕೀರ್ತಿಯನ್ನು ನೆನಪು ಮಾಡುತ್ತಿವೆ. ಇವುಗಳ ಜತೆಗೆ ವಿಶ್ವಕೋಶದ ಸಾರಾಂಶವನ್ನೂ, ಆಗಿನ ಕಾಲದಲ್ಲಿ ನಕಲಿ ವೈದ್ಯರು ಹೆಚ್ಚಿದ್ದರಿಂದ ಅವರನ್ನು ಎದುರಿಸಲು ಯುಪೊರಿಸ್ಟ್ ಗ್ರಂಥವನ್ನೂ ಬರೆದಿದ್ದನು.

ಯಿೀಟಿಯಸ್

ಬೈಸಾಂಟಿಯಮ್ಮಿನ ಮತ್ತೊಬ್ಬ ಪ್ರಖ್ಯಾತ ವೈದ್ಯ ಕ್ರೈಸ್ತಮತದವನಾಗಿದ್ದನು. ಇವನ ಹೆಸರು ಯಿೀಟಿಯಸ್. ಟೈಗ್ರಿಸ್ ನದಿಯ ದಡದಲ್ಲಿದ್ದ ಅಮಿಡದಲ್ಲಿ ಹುಟ್ಟಿ, ಅಭ್ಯಾಸವಾದನಂತರ ವೈದ್ಯವೃತ್ತಿಯಲ್ಲಿ ತೊಡಗಿದ್ದನು. ಇವನು ೫೦೨ ರಿಂದ ೫೭೫ರ ವರೆವಿಗೆ ಇದ್ದನು. ಇವನ ಲೇಖನಗಳಿಗೆ ಪೂರ್ವೀಕರಾದ ಗ್ಯಾಲೆನ್, ಸೊರನಸ್, ಒರಿಬಾಸಿಯಸ್, ಆರ್ಕಿಯಜನಸ್ ಮತ್ತು ರೂಫಸ್ಸರ ಬರವಣಿಗೆಗಳು ಆಧಾರವಾಗಿದ್ದವು. ಗಂಟಲಮಾರಿ ರೋಗವನ್ನು ವಿವರಿಸುತ್ತ ಅಂಗುಳು ಕೆಲಸ ಮಾಡದಿರುವುದನ್ನೂ, ಉಸಿರು ಕಟ್ಟುವುದನ್ನೂ ತಿಳಿಸಿದ್ದನು. ಶಸ್ತ್ರವೈದ್ಯ ಮತ್ತು ವಿಷವಸ್ತುಗಳ ವಿಷಯವಾಗಿಯೂ ಬರೆದಿದ್ದನು. ಇವನ ೬೧ ರೋಗಗಳುಳ್ಳ ಕಣ್ಣಿನ ಗ್ರಂಥ ಅತ್ಯುತ್ತಮವಾಗಿತ್ತು. ಮೂರು ಜಾತಿಯ ಕರುಳಿನ ಹುಳುಗಳನ್ನು ವಿವರಿಸಿದ್ದನು: ಲಾಡಿಹುಳು, ಜಂತುಹುಳು ಮತ್ತು ಸೂಜಿಹುಳು. ಲಾಡಿಹುಳಕ್ಕೆ ಫೀಲಿಕ್ಸನ್ನೂ ಮತ್ತು ದಾಳಿಂಬೆ ಚಕ್ಕೆಯನ್ನೂ, ಜಂತುಹುಳಕ್ಕೆ ಸ್ಯಾಂಟೊನಿನ್ನನ್ನು, ಸೂಜಿಹುಳಕ್ಕೆ ಮಲನಾಳದ ಮೂಲಕ ಕ್ಯಾಸಿಯ ನೀರು ವಸ್ತಿ ಕೊಡಬೇಕೆಂದೂ ಹೇಳಿದ್ದನು. ಕೆಲವು ವೇಳೆ ಔಷಧ ತಯಾರಿಸುವ ವೇಳೆಯಲ್ಲಿ ಮಂತ್ರ ಜಪಿಸುವುದನ್ನೂ ರೂಢಿ ಮಾಡಿದ್ದನು.

ಟ್ರಾಲಿಸ್ಸಿನ ಅಲೆಗ್ಸಾಂಡರ್

೫೨೫-೬೦೫ರವರೆಗೆ ಇದ್ದ ಟ್ರಾಲ್ಲಿಸ್ಸಿನ ಆಲೆಗ್ಸಾಂಡರ್ ತನ್ನ ತಂದೆಯ ಕಿರಿಯ ಮಗನಾಗಿದ್ದನು. ಮಕ್ಕಳೆಲ್ಲರೂ ಉನ್ನತ ಸ್ಥಿತಿಯಲ್ಲಿದ್ದರು. ಅಲೆಗ್ಸಾಂಡರ್ ತನ್ನ ತಂದೆ ಸ್ಟೆಫನಾಸ್ ಹತ್ತಿರ ವೈದ್ಯಶಾಸ್ತ್ರವನ್ನು ಕಲಿತು, ದೇಶಸಂಚಾರ ಮಾಡಿ, ರೋಮ್ ನಗರದಲ್ಲಿ ವೈದ್ಯ ಕೆಲಸ ಮಾಡುತ್ತಿದ್ದನು. ಗ್ಯಾಲೆನ್ನನ್ನು ಬಿಟ್ಟರೆ, ಪುನರುಜ್ಜೀವನ ಕಾಲದವರೆಗೂ ಇವನಿಗಿಂತ ಶ್ರೇಷ್ಠರಿರಲಿಲ್ಲ. ಇವನು ಗ್ರೀಕ್ ಭಾಷೆಯಲ್ಲಿ ಬರೆದಿದ್ದ ಗ್ರಂಥಗಳೆಲ್ಲಾ ಲ್ಯಾಟಿನ್ ಭಾಷೆಗೂ, ಅರಬ್ಬಿ ಭಾಷೆಗೂ, ಯಹೋದ್ಯರ ಭಾಷೆಗೂ ಭಾಷಾಂತರವಾಗಿದ್ದವು. ಅರಬ್ಬಿಯಲ್ಲಿಯೂ, ಸೊಲೆರ್ನೊದಲ್ಲಿಯೂ ಇವನಿಗಿದ್ದ ಗೌರವದಿಂದ ಇವನ ಪ್ರಭಾವ ಮಧ್ಯಯುಗದ ಕಾಲದಲ್ಲೆಲ್ಲಾ ಬೆಳೆದಿತ್ತು. ಇವನ ಔಷಧ ತಯಾರಿಕೆಶಾಸ್ತ್ರ ೫ ಶತಮಾನ ಕಳೆದ ಮೇಲೆ ಪ್ಯಾರಿಸ್ಸಿನ ವಿಶ್ವವಿದ್ಯಾನಿಲಯದಲ್ಲಿ ಉಪಯೋಗದಲ್ಲಿತ್ತು. ಇವನ ಅತ್ಯುತ್ತಮ ಗ್ರಂಥ ಎಂದರೆ ವೈದ್ಯಶಾಸ್ತ್ರದ ೧೨ ಸಂಪುಟಗಳು. ಇವುಗಳಲ್ಲಿ ಹೊಸದಾದ ತನ್ನವೇ ಆದ ವಿವರಗಳಿದ್ದವು. ಇವನು ಗ್ಯಾಲೆನ್ನನ್ನು ಅನುಸರಿಸುತ್ತಿದ್ದರೂ, ಸಮಯ ಬಂದಾಗ ಅವನನ್ನು ವಿರೋಧಿಸಲು ಹಿಂಜರಿಯುತ್ತಿರಲಿಲ್ಲ. ಹಿಪ್ಪೊಕ್ರೇಟಸ್ಸಿನ, ಗ್ಯಾಲೆನ್ನಿನ ನಾಲ್ಕು ರಸಧಾತುಗಳ ತತ್ತ್ವಗಳೇ ಇವನ ತತ್ವಗಳಾಗಿದ್ದವು. ರೋಗ ನಿದಾನವಾದ ಮೇಲೆ ಚಿಕಿತ್ಸೆ ಕೊಡುವ ರೂಢಿ ಇವನಲ್ಲಿತ್ತು. ಒಂದು ವೇಳೆ ಕ್ರಮಬದ್ಧವಾದ ಔಷಧ ರೋಗವನ್ನು ಗುಣ ಮಾಡದಿದ್ದಲ್ಲಿ ಮಾಟ ಮಂತ್ರಗಳನ್ನು ಉಪಯೋಗಿಸುವ ರೂಢಿಯೂ ಇತ್ತು.

ಹೀಗೆ ಮಾಡಲು ಮನಸ್ಸು ಬಾರದಿದ್ದರೂ, ಅವನು ಉಪಯೋಗ ಮಾಡುತ್ತಿದ್ದುದಕ್ಕೆ ಕಾರಣ ಹೀಗಿತ್ತು. ಜನರಿಗೆ ಮಾಟ ಮಂತ್ರ, ತಾಯಿತಿಗಳಲ್ಲಿ ನಂಬಿಕೆಯಿತ್ತು. ನಿಜವಾಗಿಯೂ ಅವು ಪರಿಣಾಮಕಾರಿಯಾಗಿದ್ದುವು.

ಈಲಿ ರೋಗದಲ್ಲಿ ಜಲೋದರ, ಶೋಬೆ, ಹೊಟ್ಟೆ ಉಬ್ಬರವೆಂಬ ಮೂರು ಬಗೆಗಳ ಲಕ್ಷಣಗಳು ಇದ್ದವೆಂದು ಅಲೆಗ್ಸಾಂಡರ್ ತಿಳಿಸಿದ್ದನು. ರೋಗಿಯನ್ನು ಪರೀಕ್ಷಿಸುವಾಗ ಕಣ್ಣಿಂದ ನೋಡಿ, ಕೈಯಿಂದ ಮುಟ್ಟಿ, ಬೆರಳಿಂದ ಕುಟ್ಟಿ ಪರೀಕ್ಷೆ ಮಾಡುವ ರೂಢಿ ಇವನಲ್ಲಿತ್ತು. ಇವನು ಶ್ರೇಷ್ಠ ವಿದ್ಯಾವಂತನೂ, ಚತುರ ವೈದ್ಯನೂ ಮೇಲಾಗಿ ಗುಣವಂತನೂ ಪ್ರಮಾಣಿಕನೂ ಆಗಿದ್ದನು.

ಯೂಜಿನದ ಪಾಲ್

ಬೈಸಾಂಟಿಯುಮ್ಮಿನ ವೈದ್ಯರಲ್ಲಿ ಕೊನೆಯವನಾದ ಯೂಜಿನ್ ದ್ವೀಪದ ಪಾಲ್ ೬೨೫-೬೯೦ರವರೆಗಿದ್ದನು. ಯೂಜಿನ್ ದ್ವೀಪದಲ್ಲಿ ಹುಟ್ಟಿ, ಅಲೆಗ್ಸಾಂಡ್ರಿಯದಲ್ಲಿ ವೈದ್ಯಶಾಸ್ತ್ರವನ್ನು ಕಲಿತು, ಅಲ್ಲೇ ವೈದ್ಯವೃತ್ತಿಯಲ್ಲಿ ತೊಡಗಿದ್ದನು. ಅರಬ್ಬರು ಮುತ್ತಿಗೆ ಹಾಕಿದ ಮೇಲೂ ಇವನು ವೈದ್ಯವೃತ್ತಿಯನ್ನೂ ಬಿಡಲಿಲ್ಲ. ಅರಬ್ಬಿ ವೈದ್ಯಶಾಸ್ತ್ರವನ್ನು ಬೆಳೆಸಲು ಇವನಿಂದ ಅರಬ್ಬರು ಅನೇಕ ಸಹಾಯಗಳನ್ನು ಪಡೆದಿದ್ದರು. ಇವನು ೭ ಪುಸ್ತಕಗಳುಳ್ಳ ವೈದ್ಯಶಾಸ್ತ್ರದ ವಿಶ್ವಕೋಶವನ್ನು ಬರೆದಿದ್ದನು. ಶಸ್ತ್ರವೈದ್ಯದಲ್ಲಿ ಇವನಿಗೆ ಬಹಳ ಕುತೂಹಲವಿತ್ತು. ಶಸ್ತ್ರವೈದ್ಯಕ್ಕೆ ಮೀಸಲಾಗಿದ್ದ ಇವನ ೬ನೇ ಪುಸ್ತಕ ಬಹಳ ಉನ್ನತ ಮಟ್ಟದಲ್ಲಿತ್ತು. ಪ್ಯಾರಿಸ್ಸಿನಲ್ಲಿ ಪಠ್ಯಪುಸ್ತಕವಾಗಿತ್ತು. ಇದರಲ್ಲಿ ಅನೇಕ ಶಸ್ತ್ರಕ್ರಿಯೆಗಳನ್ನು ವಿವರಿಸಿದ್ದನು. ಜಲೋದರ, ಹೊಟ್ಟೆಯಿಂದ ನೀರು ತೆಗೆಯುವ ವಿಧಾನವನ್ನು, ಮೂತ್ರಕೋಶದಿಂದ ಮೂತ್ರ ತೆಗೆಯುವುದನ್ನು ಮತ್ತು ತೊಳೆಯುವುದನ್ನೂ, ಕಣ್ಣಿನ ಪೊರೆ ತೆಗೆಯುವ ವಿಧಾನವನ್ನೂ ವಿವರವಾಗಿ ಬರೆದಿದ್ದನು.

ಜೊಹಾನ್ನೆಸ್ ಆಕ್ಟುಯೂರಿಯಸ್

೧೩ನೇ ಶತಮಾನದಲ್ಲಿ ಜೊಹಾನ್ನೆಸ್ ಆಕ್ಟುಯಾರಿಯಸ್ ಕಾನ್‌ಸ್ಟಾಂಟಿನೋಪಲ್ಲಿನ ಆಸ್ಥಾನ ವಿದ್ವಾಂಸನಾಗಿದ್ದನು. ಇವನು ವೈದ್ಯಶಾಸ್ತ್ರದಲ್ಲೂ ಪಾಂಡಿತ್ಯ ಹೊಂದಿದ್ದನು. ಮೂತ್ರದ ವಿಷಯದ ಮೇಲೆ ಒಂದು ದೊಡ್ಡ ಗ್ರಂಥವನ್ನೇ ಬರೆದಿದ್ದನು. ಇದರಲ್ಲಿ ಮೊಟ್ಟಮೊದಲಿಗೆ ರಕ್ತವರ್ಣಜನಕವಿರುವ ಮೂತ್ರವನ್ನು ತಿಳಿಸಿದನು. ಹಿಪ್ಪೊಕ್ರೇಟಿಸ್ ಮತ್ತು ಗ್ಯಾಲೆನ್ ಇವನಿಗೆ ಆದರ್ಶರಾಗಿದ್ದರು. ಇವನ ಕಾಲ ಮುಗಿದ ಮೇಲೆ ಬೈಸಾಂಟಿಯುಮ್ಮಿನ ವೈದ್ಯಶಾಸ್ತ್ರ ತಲೆಯೆತ್ತಲೇ ಇಲ್ಲ. ರೋಮ್ ಸಾಮ್ರಾಜ್ಯ ಕೂಡ ನಾಶಹೊಂದಿತು. ಸಿರಿಯದಲ್ಲೂ, ಉತ್ತರ ಆಫ್ರಿಕದಲ್ಲೂ, ಸ್ಪೆಯಿನಿನಲ್ಲೂ ಉಳಿದಿದ್ದ ರೋಮ್ ಚಕ್ರಾಧಿಪತ್ಯ ಅರಬ್ಬರ ಪೌರುಷದಿಂದ ಅಳಿಸಿಹೋಯಿತು. ಬೈಸಾಂಟಿಯುಮ್ಮಿನ ಸೈನ್ಯ ಪರಾಕ್ರಮ, ಸಂಸ್ಕೃತಿ, ವೈದ್ಯಶಾಸ್ತ್ರದ ಏಳಿಗೆ ಎಲ್ಲವೂ ಈಗಾಗಲೇ ಅರಬ್ಬರ ಕೈವಶವಾಗಿದ್ದವು.

೧೯. ಅರಬ್ಬೀ ವೈದ್ಯಶಾಸ್ತ್ರ

ಮಧ್ಯ ಯುಗವನ್ನು ಅಂಧಕಾರ ಯುಗವೆಂದು ಅನೇಕರು ಸಾರಿದ್ದರೂ, ಅದರ ಮೊದಲನೇ ಪಾದದಲ್ಲಿ ಅರಬ್ಬರು, ರೋಮನ್ ಸಾಮ್ರಾಜ್ಯದಂತಹ ಒಂದು ದೊಡ್ಡ ಚಕ್ರಾಧಿಪತ್ಯವನ್ನೇ ಕಟ್ಟಿದರು. ಪ್ರಾರಂಭದಲ್ಲಿ ಅವರು ಯಾವ ಸಂಸ್ಕೃತಿಯನ್ನೂ ಹೊಂದಿಲ್ಲದಿದ್ದರೂ, ಅವರ ದೂರದೃಷ್ಟಿಯಿಂದಲೂ ಮತ್ತು ದೃಢ ನಿರ್ಧಾರದಿಂದಲೂ ಗ್ರೀಕರ ಮತ್ತು ರೋಮನ್ನರ ಸಂಸ್ಕೃತಿಯನ್ನೇ ಮೇಲ್ಪಂಕ್ತಿಯಾಗಿಟ್ಟುಕೊಂಡು ಮುಂದೆ ಸಾಗಿದರು. ಜೊತೆಗೆ ಮುಖ್ಯವಾದ ಹೆಚ್ಚಿನವನ್ನೂ ಸೇರಿಸಿದರು.

ಮುಹಮುದ್ ಪೈಗಂಬರ್

ಇಸ್ಲಾಂ ಮತವನ್ನು ೫೭೦ರಲ್ಲಿ ಸ್ಥಾಪಿಸಿದ ಮುಹಮುದನು ಶುದ್ಧ ಅರಬ್ಬಿ ಭಾಷೆಯಲ್ಲಿ ಕೊರಾನನ್ನು ಬರೆದು ಜನರಲ್ಲಿ ಒಂದು ಹೊಸ ಅರಿವನ್ನು ಉಂಟುಮಾಡಿದನು. ಅಲ್ಲದೆ ದರೋಡೆಕಾರರೂ, ದಂಗೆಕಾರರೂ ಆಗಿದ್ದ ಅರಬ್ ಜನರನ್ನು ಒಟ್ಟುಗೂಡಿಸಿ ಪ್ರಾಚೀನ ರಾಜರನ್ನು ಸೋಲಿಸಿ, ಅರಬ್ಬಿ ರಾಜ್ಯವನ್ನು ಸ್ಥಾಪಿಸಿದನು. ಇದರಿಂದ ಅನಾಗರಿಕವಾಗಿದ್ದ ಅರಬ್ಬಿ ಭಾಷೆ, ಅರಬ್ಬಿ ಸಾಮ್ರಾಜ್ಯದ ಭಾಷೆಯಾಯಿತು. ಪಶ್ಚಿಮ ದೇಶಗಳಲ್ಲಿ ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳು ಪಡೆದಷ್ಟೇ ಕೀರ್ತಿಯನ್ನು ಪೂರ್ವ ದೇಶವಾದ ಅರೇಬಿಯದಲ್ಲಿ ಅರಬ್ಬಿ ಭಾಷೆ ಪಡೆಯಿತು. ಆದ್ದರಿಂದ ಆಗಿನ ಕಾಲದ ಸಾಹಿತ್ಯ, ಸಂಸ್ಕೃತಿ, ಕಲೆ, ನ್ಯಾಯ, ವಿಜ್ಞಾನ, ವೈದ್ಯಗಳೆಲ್ಲವೂ ಅರಬ್ಬಿ ಭಾಷೆಯಲ್ಲಿ ಬೆಳೆದುಬಂದವು. ವಿದ್ಯಾವಂತರ ಮತ್ತು ವಿದ್ವಾಂಸರ ಭಾಷೆಯಾಯಿತು ೮ರಿಂದ ೧೧ನೇ ಶತಮಾನದವರೆಗೆ ಪ್ರಪಂಚದ ಭಾಷೆಯಾಯಿತು. ಆಗ ಮುಹಮುದ್ ಬರೆದಿದ್ದ ಶುದ್ಧ ಅರಬ್ಬಿ ಭಾಷೆಯ ಕೃತಿಗಳು ಈಗಲೂ ಸುಲಭವಾಗಿ ಅರ್ಥವಾಗುತ್ತಿವೆ. ಅರಬ್ಬಿ ಭಾಷೆ ಇಸ್ಲಾಂ ಮತದ ಜನರ ಭಾಷೆ ಮಾತ್ರವೇ ಆಗಿರಲಿಲ್ಲ. ಸ್ಪೇಯಿನ್ ದೇಶದವರ, ಪರ್ಷಿಯನರ, ಯಹೋದ್ಯರ, ಈಜಿಪ್ಷಿನವರ, ಸಿರಿಯನ್ನರೆಲ್ಲರ ಭಾಷೆಯಾಗಿತ್ತು. ಕ್ರೈಸ್ತ ಮತದವರೂ ಅರಬ್ಬಿ ಭಾಷೆಯನ್ನು ಅವಲಂಬಿಸಿದ್ದರು. ಒಟ್ಟಿನಲ್ಲಿ ಹೇಳುವುದಾದರೆ, ಅರಬ್ಬಿ ಭಾಷೆ ಮಾತನಾಡುತ್ತಿದ್ದ ಜನರಲ್ಲಿ ಕೇವಲ ಕೆಲವರು ಮಾತ್ರ ಮುಸ್ಲಿಮರಾಗಿದ್ದರು.

ರೋಂ ಸಾಮ್ರಾಜ್ಯ ಅಳಿದ ಮೇಲೆ, ಗ್ರೀಕರ ಸಂಸ್ಕೃತಿ ಕ್ಷೀಣವಾಗುತ್ತಾಬಂದು, ದೇಶದಲ್ಲೆಲ್ಲಾ ಅಂಧಕಾರ ಪ್ರಾರಂಭವಾಯಿತು. ಸುಮಾರು ೪೭೬ರಲ್ಲಿ ಪ್ರಾರಂಭವಾಗಿ ೧೪೫೩ರಲ್ಲಿ ತುರ್ಕರು ಕಾನ್‌ಸ್ಟಾಂಟಿನೋಪಲ್ ಪಟ್ಟಣವನ್ನು ಮುತ್ತಿ ವಶಪಡಿಸಿಕೊಳ್ಳುವ ತನಕ ಅಂಧಕಾರವಿತ್ತು. ಆಮೇಲೆ ಯೂರೋಪಿನಲ್ಲೆಲ್ಲಾ ಕ್ರೈಸ್ತಮತದವರ ಆರಾಧನ ಮಂದಿರಗಳು ಹುಟ್ಟಿ, ಅವು ಪ್ರಬಲವಾದುದರಿಂದಲೂ, ಅನೇಕ ಕೀರ್ತಿ

ಹೊಂದಿದ ವಿಶ್ವವಿದ್ಯಾನಿಲಯಗಳು ಕಾರ್ಯರೂಪಕ್ಕೆ ಬಂದುದರಿಂದಲೂ, ಚೀನಾ ದೇಶದಲ್ಲಿ ಮುದ್ರಣ ಯಂತ್ರವನ್ನು ಕಂಡುಹಿಡಿದುದರಿಂದಲೂ ಪ್ರಪಂಚದಲ್ಲಿ ಹೊಸ ಹುಟ್ಟು ಉಂಟಾಯಿತು. ಅನೇಕರ ಪ್ರಕಾರ ಗ್ಯಾಲೆನ್ನಿನ ಪಕ್ಷಪಾತವಾದ, ವಿಚಾರ ಕ್ಕೆಡೆಕೊಡದ ತತ್ತ್ವಗಳಿಂದಲೇ ಅಂಧಕಾರ ಉಂಟಾಯಿತೆಂದೂ ಹೇಳಲಾಗಿದೆ. ಆದರೆ ದೇವರು ಒಬ್ಬನು, ಶರೀರಕ್ಕಿಂತಲೂ ಆತ್ಮವೇ ಮೇಲೆಂಬ ಹೇಳಿಕೆ ಇವನ ತತ್ತ್ವ ವಾಗಿದ್ದುದರಿಂದ ಇವನಲ್ಲಿ ಕ್ರೈಸ್ತಮತಸ್ತರಿಗೆ ನಂಬಿಕೆ ಹುಟ್ಟಿ ಪ್ರೋತ್ಸಾಹ ಸಿಕ್ಕಿತು. ಇಲ್ಲದಿದ್ದರೆ ಅಂಧಕಾರ ಯಾವಾಗಲೋ ಬರಬೇಕಾಗಿತ್ತು. ಅಲ್ಲದೆ ಅಂಧಕಾರ ಇನ್ನೂ ಹೊಲಸಾಗಬೇಕಾಗಿತ್ತು. ಆದರೆ ಆ ಕಾಲವನ್ನು 'ಶತಮಾನಗಳಲ್ಲೆಲ್ಲ ಮಹತ್ತರವಾದ್ದು' ಎಂದು ವಾಲ್ಷ್ ವರ್ಣಿಸಿದ್ದಾನೆ. ಹಾಗೂ ಡಗ್ಲಾಸ್ ಗುತ್ರಿ ಅಂಧಕಾರದ ಬಗ್ಗೆ ಪ್ರಶ್ನೆ ಮಾಡಿ 'ಗ್ರೀಕ್ ವೈದ್ಯದ ಸಂಚಯಿತ ಭಂಡಾರವನ್ನು ಮುಂದಿನ ಪೀಳಿಗೆಗಳ ಅನುಕೂಲಕ್ಕಾಗಿ ಹಾಗೇ ಉಳಿಸಿಕೊಂಡಿದ್ದೇ ಅಲ್ಲದೆ, ಅದಕ್ಕೆ ತನ್ನ ಸ್ವಂತ ಕೊಡುಗೆಯನ್ನೂ ನೀಡಿತು' ಎಂದು ಹೇಳಿದ್ದಾನೆ.

ನೆಸ್ಟೋರಿಯಸ್

ಮೇರಿ ದೇವರ ತಾಯಿಯಲ್ಲ, ಜೀಸಸ್ಸಿನ ತಾಯಿ ಮಾತ್ರವೆಂದು ಕಾನ್ಸ್ಟಾಂಟಿ ನೋಪಲ್ಲಿನ ಕುಲಪತಿಯಾದ ನೆಸ್ಟೋರಿಯಸ್ ಘೋಷಿಸಿದುದಕ್ಕೋಸ್ಕರ ಅವನನ್ನೂ ಅವನ ಬೆಂಬಲಿಗರನ್ನೂ ಇಫೆಸಸ್ ಮಂತ್ರಾಲೋಚನ ಸಭೆ ೪೩೧ರಲ್ಲಿ ಬಹಿಷ್ಕಾರ ಹಾಕಿತು. ಈ ಕಾರ್ಯದಲ್ಲಿ ಅಲೆಗ್ಸಾಂಡ್ರಿಯದ ಕ್ರೈಸ್ತಗುರು ಸೈರಸ್‌ನ ಕೈವಾಡ ವಿತ್ತು. ಪದಚ್ಯುತರಾದ ನೆಸ್ಟೋರಿಯಸ್ ಮತ್ತು ಬೆಂಬಲಿಗರು ಕಾನ್‌ಸ್ಟಾಂಟಿ ನೊಪಲ್ಲನ್ನು ಬಿಟ್ಟು, ಏಷ್ಯ ಮೈನರಿನಲ್ಲಿರುವ ಇಡೆಸ್ಸ ಸೇರಿದರು. ಅವರಿಂದ ಒಂದು ವಿದ್ಯಾನಿಲಯ ಪ್ರಾರಂಭವಾಗಿ ಅಭಿವೃದ್ಧಿಗೆ ಬಂದುದನ್ನು ಸೈರಸ್ ಸಹಿಸಲಾರದೆ ಜ್ನೀನೊ ಚಕ್ರವರ್ತಿಯ ಮೂಲಕ ವಿದ್ಯಾಶಾಲೆಯನ್ನು ಮುಚ್ಚಿಸಿ, ಅಲ್ಲಿಯ ವಿದ್ವಾಂಸ ರನ್ನೆಲ್ಲಾ ಹೊರಗೋಡಿಸಿದನು. ಇದರಿಂದ ನೆಸ್ಟೋರಿಯನರು ಅನೇಕ ಕಡೆಗಳಿಗೆ ಹೋಗಬೇಕಾಯಿತು. ಕೆಲವರು ಚೀನ, ಸೈಬೀರಿಯ, ಇಂಡಿಯ ತಲುಪಿದರು. ಅನೇಕರು ಪರ್ಷಿಯದ ದೊರೆ ಆಶ್ರಯದಲ್ಲಿ ಜುಂಡಿ ಷಾಪೂರ್ ಸೇರಿದರು.

ಜುಂಡಿ ಷಾಪೂರ್

ಜುಂಡಿ ಷಾಪೂರ್ ಮೊದಲಿಗೆ ಆರ್ಯರಿಂದ ಸ್ಥಾಪಿತವಾಗಿತ್ತು. ೨೬೦ರಲ್ಲಿ ಮೊದ ಲನೇ ಪರ್ಷಿಯ ದೊರೆ ರೋಮನ್ ಚಕ್ರವರ್ತಿ ವಲೇರಿಯನ್‌ನನ್ನು ಸೋಲಿಸಿದ ಜ್ಞಾಪಕಾರ್ಥವಾಗಿ ಈ ಪಟ್ಟಣವನ್ನು ಜುಂಡಿಷಾಪೂರ್ ಎಂದು ಕರೆದನು. ಹುಟ್ಟುವ ಮುಂಚೆಯೇ, ಗರ್ಭದಲ್ಲಿರುವಾಗಲೇ ಕಿರೀಟಧಾರಣೆಯಾಗಿ ಅಧಿಕಾರಕ್ಕೆ ಬಂದ ಎರಡನೆ ಷಾಪೂರ್ ದೊರೆ ಈ ಪಟ್ಟಣದಲ್ಲಿ ೩೫೦ರಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿ, ಪಟ್ಟಣವನ್ನು ಅಭಿವೃದ್ಧಿ ಮಾಡಿದನು. ಇಲ್ಲಿ ಗ್ರೀಕರ, ಯಹೋದ್ಯರ, ಪರ್ಷಿಯನರ, ಹಿಂದುಗಳ ವಿಜ್ಞಾನ ಮತ್ತು ತತ್ವಶಾಸ್ತ್ರಗಳು ಬಳಕೆಗೆ ಬಂದವು.

ಮುಖ್ಯವಾಗಿ ನೆಸ್ಟೋರಿಯನರು ಈ ಎಲ್ಲಾ ಭಾಷೆಗಳ ಗ್ರಂಥಗಳನ್ನು ಸಿರಿಯನ್ ಭಾಷೆಗೆ ಭಾಷಾಂತರ ಮಾಡಿದರು. ಹೀಗೆ ಜುಂಡಿ ಷಾಪೂರ್ ಪ್ರಖ್ಯಾತಿಗೆ ಬಂದಿದ್ದಾಗ, ಅರಬ್ಬರು ೬೩೬ರಲ್ಲಿ ಮುತ್ತಿಗೆಹಾಕಿ ಪಟ್ಟಣವನ್ನು ವಶಪಡಿಸಿಕೊಂಡರು. ಆದರೆ ಪಟ್ಟಣವನ್ನು ಕೊಳ್ಳೆಹೊಡೆಯದೆ, ವಿಶ್ವವಿದ್ಯಾನಿಲಯ ಇನ್ನಷ್ಟು ಮುಂದೆ ಬರಲು ಪ್ರೋತ್ಸಾಹ ನೀಡಿದರು. ಆದ್ದರಿಂದ ಈ ವಿಶ್ವವಿದ್ಯಾನಿಲಯ ಮುಸ್ಲಿಮರ ರಾಷ್ಟ್ರದಲ್ಲೇ, ವೈದ್ಯಶಾಸ್ತ್ರದಲ್ಲಿ ಬಹು ದೊಡ್ಡ ಕೇಂದ್ರವಾಯಿತು. ಇಲ್ಲಿ ವಿಶೇಷವಾಗಿ ಕ್ರಿಶ್ಚಿಯನರೂ ಯಹೋದ್ಯರೂ ಅಧ್ಯಾಪಕರಾಗಿದ್ದರು. ಅದರಲ್ಲೂ ನೆಸ್ಟೋರಿಯನ್ ಕ್ರಿಶ್ಚಿಯನರು ಜುಂಡಿ ಷಾಪೂರ್‌ನಲ್ಲಿ ಬಹಳ ಪ್ರಭಾವಶಾಲಿಗಳಾಗಿದ್ದರು. ಹೀಗಿದ್ದರೂ ಅರಬ್ಬರು ವಿದ್ಯಾಭಿವೃದ್ಧಿಗೆ ಉತ್ತೇಜನ ಕೊಟ್ಟರೇ ಹೊರತು ನಾಶಮಾಡಲು ಯತ್ನಿಸಲಿಲ್ಲ. ಪ್ರಖ್ಯಾತಿ ಹೊಂದಿದ್ದ ಕ್ರಿಶ್ಚಿಯನ್ ವಿದ್ವಾಂಸರಿಂದಲೇ ಅರಬ್ಬರು ವಿದ್ಯೆ ಕಲಿತು ಜುಂಡಿ ಷಾಪೂರಿನ ಕೀರ್ತಿಯನ್ನು ದೇಶದಲ್ಲೆಲ್ಲಾ ಹರಡಿದರು. ಹಿಪ್ಪೊಕ್ರೇಟಿಸ್, ಗ್ಯಾಲೆನ್ ಮತ್ತಿತರ ಗ್ರೀಕ್ ವಿದ್ವಾಂಸರ ಸಂಸ್ಕೃತಿಯನ್ನು ಪಾಲಿಸಿದರು. ಚೀನ, ಇಂಡಿಯ ಮತ್ತು ಪರ್ಷಿಯನರ ವೈದ್ಯವಿದ್ಯೆಯನ್ನು ಕಲಿತರು. ನೆಸ್ಟೋರಿಯನ್ ಪಾದ್ರಿಗಳು ಈ ದೇಶಗಳಿಗೆಲ್ಲಾ ಹೋಗಿ ಅವರ ಪದ್ಧತಿಗಳನ್ನೆಲ್ಲಾ ಅಭ್ಯಾಸ ಮಾಡಿದರು. ಆಗ ಜಿರ್ಜಿಸ್, ಇವನ ಮೊಮ್ಮಗ ಗೇಬ್ರಿಯಲ್ ಮತ್ತು ಇವರ ಸಂತತಿಯವರು ಶ್ರೇಷ್ಠ ವೈದ್ಯರಾಗಿದ್ದು ಸುಮಾರು ೨೫೦ ವರ್ಷಗಳ ಕಾಲ ರಾಜರ ಆಸ್ಥಾನದಲ್ಲಿ ಪಂಡಿತರಾಗಿದ್ದರು. ಗೇಬ್ರಿಯಲ್ ೨೦ ವರ್ಷಗಳ ಕಾಲ ಕಲೀಫರಿಗೆ ವೈದ್ಯನಾಗಿದ್ದು ೧೦,೦೦೦,೦೦೦ ಡಾಲರ್‌ಗಳಿಗಿಂತಲೂ ಹೆಚ್ಚು ಸಂಪಾದನೆ ಮಾಡಿದ್ದನೆಂದು ಹೇಳಲಾಗಿದೆ.

ಹರಿತ್ ಇಬಿನ್ ಕಲದ ಅಲ್‌ತಕಸಿ

ಜುಂಡಿ ಷಾಪೂರಿನ ಆಸ್ಪತ್ರೆ ಮತ್ತು ವಿದ್ಯಾಶಾಲೆ ಆಗಿನ ಅರಬ್ಬರ ವೈದ್ಯಶಾಸ್ತ್ರಕ್ಕೆ ಮುಖ್ಯ ಪೋಷಣೆ ಕೇಂದ್ರವಾಗಿತ್ತು. ಅರಬ್ಬರ ಮೊದಲನೆಯ ವೈದ್ಯನಾದ ಹರಿತ್ ಇಬಿನ್ ಕಲದ ಅಲ್‌ತಕಸಿ ಮೆಕ್ಕ ಹತ್ತಿರ ಜನ್ಮವೆತ್ತಿ, ಜುಂಡಿ ಷಾಪೂರಿನಲ್ಲಿ ವೈದ್ಯ ವಿದ್ಯೆ ಕಲಿತನು. ಮೊದಲು ಪರ್ಷಿಯ ದೊರೆಗೆ ವೈದ್ಯನಾಗಿದ್ದು ನಂತರ ತನ್ನ ದೇಶವಾದ ಅರೇಬಿಯಾಕ್ಕೆ ಹಿಂತಿರುಗಿ, ಮಹಮದ್ ಪೈಗಂಬರನಿಗೆ ಸ್ನೇಹಿತನೂ ವೈದ್ಯನೂ ಆದನು. ಇವನು ಇಸ್ಲಾಂ ಮತವನ್ನು ಅವಲಂಬಿಸದಿದ್ದರೂ ಇವನಿಗೆ ಸಾಕಷ್ಟು ಗೌರವ ಸಲ್ಲುತ್ತಿದ್ದಿತು. ಇವನ ಹಾಗೆಯೇ ಇತರ ಕ್ರಿಶ್ಚಿಯನರೂ ಯಹೋದ್ಯರೂ ಪೈಗಂಬರನ ಉತ್ತರಾಧಿಕಾರಿಗಳಿಗೆ ವೈದ್ಯರಾಗಿದ್ದರು (೧೧೩೮–೧೧೯೩).

ಇಸ್ಲಾಮಿನ ಮಹತ್ವ ಅರೇಬಿಯದಿಂದ ಪೂರ್ವ ದಿಕ್ಕಿಗೆ, ಸಿರಿಯ, ಇರಾನ್, ಪರ್ಷಿಯ ದೇಶಗಳಿಗೂ, ಪಶ್ಚಿಮಕ್ಕೆ ಈಜಿಪ್ಟ್, ಉತ್ತರ ಆಫ್ರಿಕ ಮತ್ತು ಸ್ಪೈಯಿನ್ ದೇಶಗಳಿಗೂ ಹರಡಿ, ಪೂರ್ವದಲ್ಲೊಂದು ಪಶ್ಚಿಮದಲ್ಲೊಂದು ಕಲೀಫಗಿರಿಗಳು ಪ್ರಾರಂಭವಾದವು. ಪೂರ್ವದಲ್ಲಿ ಮೆಕ್ಕದಿಂದ ಡೆಮಾಸ್ಕಸ್ಸಿಗೂ, ಡೆಮಾಸ್ಕಸ್ಸಿನಿಂದ ಬಾಗ

ದಾದಿಗೂ ಕಲೀಫಗಿರಿ ವರ್ಗವಾಗಿ, ಜುಂಡಿ ಷಾಪೂರಿನ ವಿದ್ವಾಂಸರೆಲ್ಲಾ ಬಾಗದಾದಿಗೆ ತೆರಳಿ, ಬಾಗದಾದನ್ನು ಇಸ್ಲಾಮಿನ ಇತಿಹಾಸಗಳ ಮತ್ತು ವೈದ್ಯಶಾಸ್ತ್ರದ ಕೇಂದ್ರವಾಗಿ ಪರಿಗಣಿಸಿದರು. ಆದರೂ ಇವೆರಡು ಕೇಂದ್ರಗಳಲ್ಲಿ ಸಹಾನುಭೂತಿ, ಸಹಕಾರ, ಅನ್ಯೋನ್ಯತೆಗಳಿದ್ದುವು.

೭೫೦ರಿಂದ ೮೫೦ರ ವರೆಗಿನ ಕಾಲ ಅರಬ್ಬರ ನಾಗರಿಕತೆಯ ಸುವರ್ಣ ಯುಗ. ವೈದ್ಯಶಾಸ್ತ್ರದ ಭಾಷಾಂತರ ಯುಗವೂ ಸಂಗ್ರಹಕಾಲವೂ ಆಗಿತ್ತು. ಆಗಿನ ಕಾಲದಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ತತ್ತ್ವಶಾಸ್ತ್ರ, ನ್ಯಾಯಶಾಸ್ತ್ರ, ಕೊರಾನ್, ಜ್ಯೋತಿಷ್ಯ, ಮತಧರ್ಮ ಮತ್ತು ವೈದ್ಯಶಾಸ್ತ್ರಗಳಲ್ಲಿ ಪ್ರವೀಣನಾಗಬೇಕೆಂಬ ಆಸೆ ಇತ್ತು. ಹಾರೂನ್ ಮತ್ತು ಅಲ್‌ಮಮೂನ್‌ರ ಆಡಳಿತದಲ್ಲಿ ಬಾಗದಾದು ಅತಿ ಪ್ರಖ್ಯಾತಿ ಹೊಂದಿ, ಇಸ್ಲಾಮ್ ಸಾಹಿತ್ಯ ಮತ್ತು ಸಂಸ್ಕೃತಿಗಳ ಕೇಂದ್ರವಾಯಿತು. ವೈದ್ಯಶಾಸ್ತ್ರವೂ ಜತೆಯಲ್ಲಿ ಬೆಳೆಯಿತು. ೧೧೬೦ನೇ ವರ್ಷ, ಬಾಗದಾದಿನಲ್ಲಿ ಒಟ್ಟು ೬೦ ಆಸ್ಪತ್ರೆಗಳಿದ್ದವು. ವೈದ್ಯ ವಿದ್ಯಾಭ್ಯಾಸಕ್ಕೆ ಸಾಕಷ್ಟು ಅನುಕೂಲವಿತ್ತು. ೯೩೧ರಲ್ಲಿ ವೈದ್ಯರಿಗೆ ಪರೀಕ್ಷೆ ನಡೆಸಲು ಒಂದು ಸಂಸ್ಥೆಯನ್ನೂ ಸ್ಥಾಪಿಸಿ ಪದವೀಧರರಿಗೆ ಪದವಿಪತ್ರಗಳನ್ನು ಕೊಡುತ್ತಿದ್ದರು. ದೊಡ್ಡ ಆಸ್ಪತ್ರೆಗಳಲ್ಲಿ ಪುಸ್ತಕ ಭಂಡಾರಗಳಿದ್ದವು ೪೦೦ಕ್ಕಿಂತಲೂ ಹೆಚ್ಚು ಮಂದಿ ವೈದ್ಯ ಪ್ರವೀಣರಿದ್ದರು.

ಮೆಸೂ ಸೀನಿಯರ್

ನೆಸ್ಟೋರಿಯಿನ್ ಕ್ರಿಶ್ಚಿಯನ್ನಾದ ಮೆಸೂ ಸೀನಿಯರ್ ಅವರಲ್ಲಿ ಮುಖ್ಯ ಸ್ಥಾನ ಪಡೆದಿದ್ದನು. ಜುಂಡಿ ಷಾಪೂರಿನಲ್ಲಿ ಹುಟ್ಟಿ, ಗೇಬ್ರಿಯಲ್ಲಿನ ಶಿಷ್ಯನಾಗಿದ್ದು ರಾಜಸ್ಥಾನದ ವೈದ್ಯನೂ, ಬಾಗದಾದಿನ ವೈದ್ಯಶಾಲೆಯ ಮುಖ್ಯಾಧಿಪತಿಯೂ ಆದನು. ಇವನು ಅನೇಕ ಗ್ರಂಥಗಳನ್ನು ಭಾಷಾಂತರಿಸಿದುದಲ್ಲದೆ, ತಾನೇ ಅನೇಕ ಪುಸ್ತಕಗಳನ್ನು ಬರೆದನು. ಇವನು ಬರೆದ ಆಹಾರಶಾಸ್ತ್ರ ಮತ್ತು ಔಷಧವಸ್ತುಶಾಸ್ತ್ರಗಳು ಕೀರ್ತಿ ಪಡೆದಿದ್ದವು.

ಪೂರ್ವ ಕಲೀಫಗಿರಿ

ಹುನಾಯಿನ್ ಇಬಿನ್ ಇಷಕ್

ಮೆಸು ಕೊಡುತ್ತಿದ್ದ ಭಾಷಣಗಳನ್ನು ಕೇಳಿ ಕಲಿಯಬೇಕೆಂಬ ಆಸೆಯಿಂದ ಹುನಾಯಿನ್ ಇಬಿನ್ ಇಷಾಕ್ (೮೦೯-೮೭೩) ಆಗಾಗ್ಗೆ ಪ್ರಶ್ನೆ ಹಾಕುತ್ತಿದ್ದುದನ್ನು ನೋಡಿ ಬೇಜಾರುಪಟ್ಟು, "ನಿನಗೇಕೆ ವೈದ್ಯ ? ನಿನ್ನಂತಹವರು ಬೀದಿಯಲ್ಲಿ ಚಿಂದಿ ಬಟ್ಟೆ ಮಾರಬೇಕು" ಎಂದು ಮೆಸು ಅವಮಾನ ಮಾಡಿದ್ದರಿಂದ ಹುನಾಯಿನ್ ನೈಮರೆಸಿ ಹೋಗಿ, ಅನೇಕ ವರ್ಷಗಳನಂತರ ಗಡ್ಡಮೀಸೆಗಳನ್ನು ಬೆಳೆಸಿಕೊಂಡು ಬಾಗದಾದಿಗೆ ಹಿಂತಿರುಗಿ ಬಂದು ಗ್ರೀಕ್ ಭಾಷೆಯಲ್ಲಿ ಹೋಮರ್ ಗ್ರಂಥಗಳನ್ನು ಪಠಿಸುತ್ತಿದ್ದಾಗ ಅವನ ಶಿಷ್ಯನೊಬ್ಬನು ಅವನನ್ನು ಗುರುತಿಸಿದನು. ಈ ಜತೆಗಾರನ ಸಂಗಡ ಹೋಗಿ

ತಾನು ಭಾಷಾಂತರ ಮಾಡಿದ್ದ ಹಿಪ್ಪೊಕ್ರೇಟಿಸ್ಸಿನ ಸೂತ್ರಗಳನ್ನು ಮೆಸುಗೆ ಓದಲು ಕೊಟ್ಟಾಗ, ಅವನಿಗೆ ದಿಗ್ಭ್ರಮೆಯಾಗಿ, ಸೂತ್ರಗಳನ್ನು ಪರಮಾತ್ಮನ ಪ್ರೇರಣೆಯಿಂದ ಬರೆದಿರಬೇಕೆಂದು ಹೇಳಿದುದಕ್ಕೆ "ನೀನು ಓಡಿಸಿದ ನಿನ್ನ ಶಿಷ್ಯನೆ ಬರೆದದ್ದು" ಎಂದು ಹೇಳಲು, ಸಂತೋಷಪಟ್ಟು ಆಗಿನಿಂದ ಗುರುಶಿಷ್ಯರಿಬ್ಬರೂ ಒಟ್ಟಿಗೆ ಕೆಲಸ ಮಾಡಲು ಆರಂಭಿಸಿದರು.

ಹುನಾಯಿನ್ ಮತ್ತು ಅವನ ಸಹೋದ್ಯೋಗಿಗಳು, ಹಿಪ್ಪೊಕ್ರೇಟಿಸ್, ಗ್ಯಾಲೆನ್, ಒರಿಬಾಸಿಯಸ್, ಪಾಲ್, ಡಿಯೊಸ್ಕೊರಿಡಿಸ್‌ರವರ ಗ್ರಂಥಗಳನ್ನೆಲ್ಲಾ ಅರಬ್ಬಿ ಭಾಷೆಗೆ ಭಾಷಾಂತರ ಮಾಡಿದರು. ಇವಕ್ಕೆ ಬಹುಮಾನವಾಗಿ ಹುನಾಯಿನ್ ಬರೆದಿದ್ದ ಗ್ರಂಥಗಳ ತೂಕದಷ್ಟು ಚಿನ್ನವನ್ನು ಅವನಿಗೆ ಕೊಡಲಾಯಿತು. ಹುನಾಯಿನ್ ತಾನೇ ಬರೆದ ಲೇಖನಗಳು ೧೦೦ಕ್ಕಿಂತಲೂ ಹೆಚ್ಚಾಗಿದ್ದವು. ಅವುಗಳ ಪೈಕಿ 'ವೈದ್ಯಶಾಸ್ತ್ರದ ಪ್ರಶ್ನೆಗಳು' ಮತ್ತು ಕಣ್ಣನ್ನು ಕುರಿತು ಬರೆದ ೧೦ ಪ್ರಕರಣಗಳು ಬಹು ಶ್ರೇಷ್ಠವಾಗಿದ್ದವು. ಅಲ್ಲದೆ, ಅರಿಸ್ಟಾಟಲ್, ಪ್ಲೇಟೊ ಮತ್ತು ಆರ್ಕಿಮೆಡಿಸ್ ಬರೆದಿದ್ದ ಗ್ರಂಥಗಳನ್ನೆಲ್ಲಾ ಅರಬ್ಬಿ ಅಥವ ಸಿರಿಯ ಭಾಷೆಗಾಗಲೀ ಭಾಷಾಂತರ ಮಾಡಿದನು. ಇವನು ಬರವಣಿಗೆಯಲ್ಲಿ ಎಷ್ಟು ಶ್ರೇಷ್ಠನೋ, ನಡತೆ, ಪ್ರಮಾಣಿಕತೆಗಳಲ್ಲೂ ಅಷ್ಟೇ ಶ್ರೇಷ್ಠನಾಗಿದ್ದನು. ಆಗಿನ ಕಲೀಫ ತನ್ನ ವೈರಿಯೊಬ್ಬನಿಗೆ ವಿಷ ಕೊಡಬೇಕೆಂದು ಅಪ್ಪಣೆ ಕೊಟ್ಟದ್ದನ್ನು ನಿರಾಕರಿಸಿ ಸೆರಮನೆಯನ್ನು ಸೇರಿದ್ದನು. ಮತ್ತೊಮ್ಮೆ ಅದೇ ಕೆಲಸಕ್ಕೆ ಚಿನ್ನದ ಬಹುಮಾನ ಸಿಗುತ್ತದೆಂದು ಪ್ರೇರೇಪಿಸಿದ್ದಕ್ಕೆ, ತನ್ನದು ಬದುಕಿಸುವ ಕಸಬೆಂದೂ, ಕೊಲ್ಲುವ ಕಸಬಲ್ಲವೆಂದೂ ಹೇಳಿ ತನ್ನ ಘನತೆಯನ್ನು ತೋರ್ಪಡಿಸಿದನು.

ಜಾಬಿರ್

ಜಾಬಿರ್ ಎಂಬುವನು ಆ ಕಾಲದಲ್ಲಿ ಅರೇಬಿಯದ ರಸತಂತ್ರದ ಪಿತಾಮಹನಾಗಿದ್ದನು. ಚೀನ, ಇಂಡಿಯ ದೇಶಗಳ ಔಷಧವಸ್ತುಶಾಸ್ತ್ರವನ್ನು ಅರಿತಿದ್ದನು. ಲೋಹಗಳನ್ನು ರಸತಂತ್ರದಲ್ಲಿ ಚಿನ್ನ ಬೆಳ್ಳಿಗೆ ಬದಲು ಮಾಡುವ ಸ್ಪರ್ಶಮಣಿಯನ್ನು ಹುಡುಕುವುದರಲ್ಲಿ ಆಗಿನ ವಿಜ್ಞಾನಿಗಳು ತೊಡಗಿದ್ದರು. ಇದರ ಫಲವಾಗಿ ಅನೇಕ ಔಷಧವಸ್ತುಗಳನ್ನೂ ಕಂಡುಹಿಡಿದಿದ್ದರು. ಜಾಬಿರ್ ಬರೆದ ರಸತಂತ್ರ ಲ್ಯಾಟಿನ್ ಭಾಷೆಗೆ ಭಾಷಾಂತರವಾಗಿ ಯೂರೋಪಿನಲ್ಲಿ ಅನೇಕ ಶತಮಾನಗಳು ಪ್ರಖ್ಯಾತಿಯಲ್ಲಿತ್ತು. ಅಲ್ಲದೆ ಅವನ ಅನೇಕ ಅರಬ್ಬಿ ಭಾಷೆಯ ಪದಗಳು ಯೂರೋಪಿನ ಇತರ ಭಾಷೆಗಳಿಗೆ ಸೇರಿದವು.

ರೇಜ್ಸಸ್

ಅಬು ಬಾಕರ್ ಮಹಮದ್ ಇಬಿನ್ ಜ್ಸಕಾರಿಯ ಅಲ್‌ರಾಜ್ಸಿ(೮೪೧--೯೨೬) ಟೆಹರಾನ್ ಪಟ್ಟಣದ ಬಳಿ ಇರುವ ರೆ ಎಂಬ ಊರಿನಲ್ಲಿ ಹುಟ್ಟಿದವನು. ಆದ್ದರಿಂದ ಅವನ ಹೆಸರು ರಾಜ್ಸಿಯಾಯಿತು. ಯೂರೋಪಿನ ಜನರು ರೇಜ್ಸಸ್ ಎಂದು ಕರೆದರು. ಇವನು ಪರ್ಷಿಯದವನಾದರೂ ಅರಬ್ಬಿ ಭಾಷೆಯಲ್ಲೇ ಬರೆಯುವ ರೂಢಿ

ಇತ್ತು. ಇವನ ಕಾಲದಲ್ಲಿ ವಿಜ್ಞಾನಿಗಳು ಹಳೆ ಗ್ರಂಥಗಳನ್ನು ಭಾಷಾಂತರ ಮಾಡುವುದನ್ನು ಕಡಿಮೆ ಮಾಡಿ ತಾವೇ ಬರೆಯಲು ಪ್ರಾರಂಭಿಸಿದ್ದರು "ರೇಜ್ಸಸ್ ಕಾಲ



ರೇಜ್ಸಸ್ ರೋಗಿಯನ್ನು ಪರೀಕ್ಷಿಸುತ್ತಿರುವುದು.

ದಲ್ಲಿ ಅರಬ್ಬಿ ವೈದ್ಯಶಾಸ್ತ್ರ ಭಾಷಾಂತರ ಕಾಲವನ್ನು ಬಿಟ್ಟು ಸ್ವತಂತ್ರ ಕಲ್ಪನಾ ಕಾಲವನ್ನು ಸೇರಿತು" ಎಂದು ರಾಲ್ಫ್ ಮೇಜರ್ ತಿಳಿಸಿದ್ದಾನೆ.

ರೇಜ್ಸಸ್ ೪೦ ವರ್ಷ ವಯಸ್ಸಾದ ಮೇಲೆ ವೈದ್ಯಶಾಸ್ತ್ರ ಕಲಿಯಲು ಪ್ರಾರಂಭಿಸಿದನು. ಚಿಕ್ಕಂದಿನಲ್ಲಿ ರಸತಂತ್ರ, ಸಂಗೀತ, ಭೌತಶಾಸ್ತ್ರಗಳಲ್ಲಿ ತೊಡಗಿದ್ದನು. ವೈದ್ಯಶಾಸ್ತ್ರದಲ್ಲಿ ಪಂಡಿತರ ಪಂಡಿತನಾದನು. ಬಾಗದಾದಿನ ದೊಡ್ಡ ಆಸ್ಪತ್ರೆಯ ಮುಖ್ಯಾಧಿಕಾರಿಯಾದನು. ಕೊಳಚೆ ಪ್ರದೇಶಗಳಲ್ಲಿ ಆಸ್ಪತ್ರೆಗಳನ್ನು ಸ್ಥಾಪಿಸುವುದು ಹಾನಿಕರ ಎಂದು ತಿಳಿದಿದ್ದನು. ದೊಡ್ಡ ಆಸ್ಪತ್ರೆ ಕಟ್ಟುವಾಗ, ಮಾಂಸದ ತುಂಡುಗಳನ್ನು ಪಟ್ಟಣದ ಅನೇಕ ಕಡೆಗಳಲ್ಲಿ ನೇತು ಹಾಕಿ, ಹೆಚ್ಚು ದಿವಸ ಮಾಂಸದ ತುಂಡುಗಳು ಎಲ್ಲಿ ಕೊಳೆಯಲಿಲ್ಲವೋ ಅಲ್ಲಿ ಕಟ್ಟಲು ಸಲಹೆ ಮಾಡಿದ್ದನು.

ರೇಜ್ಸಸ್ ಹೆಚ್ಚು ಹಣ ಸಂಪಾದಿಸಿದ್ದರೂ, ಸಾಯುವಾಗ ಅತಿ ಬಡವನಾಗಿ ಸತ್ತನು. ಸಂಪಾದಿಸಿದ ಹಣವನ್ನೆಲ್ಲಾ ಬಡಬಗ್ಗರಿಗೆ ದಾನಮಾಡಿದನು. ೮೨ನೇ ವಯಸ್ಸಿನಲ್ಲಿ ಸಾಯುವುದಕ್ಕೆ ಮೊದಲು ಕಣ್ಣಿನಲ್ಲಿ ಪೊರೆ ಬಂದು ಕುರುಡನಾಗಿ ಸತ್ತನೆಂದು ಹೇಳಲಾಗಿದೆ. ಕೆಲವರ ಅಭಿಪ್ರಾಯದಲ್ಲಿ, ಲೋಹಗಳನ್ನು ಚಿನ್ನ ಮಾಡಲು ಸಾಧ್ಯವಾಗದಿದ್ದುದರಿಂದ, ಬೊಕಾರ ದೊರೆ ಕೋಪಗೊಂಡು ರೇಜ್ಸಸ್ ಜತೆ ಜಗಳವಾಡಿ ಅವನು ಬರೆದ ಪುಸ್ತಕದಿಂದಲೇ ತಲೆ ಹೋಳಾಗುವ ವರೆಗಾಗಲೀ ಅಥವ ಪುಸ್ತಕ ಚೂರಾಗುವ ವರೆಗಾಗಲೀ ತಲೆ ಮೇಲೆ ಹೊಡೆಯಬೇಕೆಂದು ಅಪ್ಪಣೆ ಕೊಡಿಸಿದ್ದುದರ

ಫಲವಾಗಿ ತಲೆ ಗಾಯವಾಗಿ ಕಣ್ಣು ಕುರುಡಾಯಿತೆಂದು ಗೊತ್ತಾಗಿದೆ.

ರೇಜ್ಜಸ್ ತನ್ನ ವೈದ್ಯವೃತ್ತಿಯಲ್ಲಿ ಹಿಪ್ಪೊಕ್ರೇಟಿಸ್ ಮತ್ತು ಗ್ಯಾಲೆನ್‌ರ ಪದ್ಧತಿಗಳನ್ನು ಅನುಸರಿಸುತ್ತಿದ್ದನು. ಹಾಗೂ ತಾನೇ ಸ್ವತಂತ್ರವಾಗಿ ಆಲೋಚಿಸಿ ಕೆಲಸ ಮಾಡುತ್ತಿದ್ದನು. ಇವನು ಸುಮಾರು ೨೩೭ ಪುಸ್ತಕಗಳನ್ನು ಬರೆದಿರುವನು. ಅವುಗಳಲ್ಲಿ ಅರ್ಧದಷ್ಟು ವೈದ್ಯಶಾಸ್ತ್ರಕ್ಕೆ ಸೇರಿದ್ದವು. ೨೫ ಪುಸ್ತಕಗಳನ್ನೊಳಗೊಂಡ ಔಷಧವೈದ್ಯ ಮತ್ತು ಶಸ್ತ್ರವೈದ್ಯಶಾಸ್ತ್ರಗಳ ವಿಶ್ವಕೋಶವನ್ನೂ ಬರೆದಿದ್ದನು. ರೋಗನಿದಾನ ಮಾಡುವುದರಲ್ಲಿ ನಿಸ್ಸೀಮನಾಗಿದ್ದನು. ಮಲೇರಿಯ ರೋಗವೆಂದು ಹೇಳಿದ್ದ ಒಬ್ಬ ರೋಗಿಯ ಮೂತ್ರದಲ್ಲಿ ಕೀವು ಕಂಡು, ಮೂತ್ರಪಿಂಡದ ಸೋಂಕೆಂದು ನಿರ್ಧರಿಸಿ ಔಷಧಕೊಟ್ಟು ಗುಣ ಮಾಡಿದ್ದನು. ದಡಾರ ಮತ್ತು ಸಿಡುಬು ರೋಗಗಳ ಮೇಲೆ ಬರೆದಿದ್ದ ಗ್ರಂಥ ಅತ್ಯುತ್ತಮವಾಗಿತ್ತು. ಅದು ರೋಗಗಳನ್ನು ಸ್ವತಃ ನೋಡಿ ಬರೆದ ಗ್ರಂಥ. ಅದರಲ್ಲಿ ತಿಳಿಸಿರುವ ರೋಗಲಕ್ಷಣಗಳು ಈಗಿನ ವೈದ್ಯರಿಗೆ ತಿಳಿದಿರುವಷ್ಟಿದ್ದವು. ಮೂತ್ರಕೋಶ ಮತ್ತು ಮೂತ್ರಪಿಂಡಗಳಲ್ಲಿ ತಲೆದೋರುವ ಕಲ್ಲಿನ ರೋಗ, ಮಕ್ಕಳ ರೋಗ, ಕೈಕಾಲುಗಳ ರೋಗ ವಿಚಾರಗಳು ಅವನ ಇತರ ಪುಸ್ತಕಗಳಲ್ಲಿದ್ದವು. ಭೌತಶಾಸ್ತ್ರ, ತತ್ವಶಾಸ್ತ್ರ, ಗಣಿತ, ಜ್ಯೋತಿಷ್ಯ, ವ್ಯಾಕರಣ, ಆರೋಗ್ಯ, ಬೆಳವಣಿಗೆ, ಪವನಶಾಸ್ತ್ರ ಮತ್ತು ರಸತಂತ್ರಗಳಲ್ಲೂ ಪಂಡಿತನಾಗಿದ್ದು, ಪುಸ್ತಕಗಳನ್ನೂ ಬರೆದಿದ್ದನು. ಅವನು ಬರೆದ ರಸಾಯನಶಾಸ್ತ್ರದಲ್ಲಿ ಹೆಚ್ಚು ಭಾಗ ಔಷಧವಸ್ತು ರಚನೆಯಾಗಿತ್ತು. ವೈದ್ಯಶಾಸ್ತ್ರ ಕುರಿತು ಇನ್ನೊಂದು ಚಿಕ್ಕ ಪುಸ್ತಕವನ್ನೂ ಬರೆದಿದ್ದನು. ಇವನ ಪುಸ್ತಕಗಳು ಯೂರೋಪಿನಲ್ಲೆಲ್ಲಾ ಪ್ರಖ್ಯಾತಿಯಾಗಿ ಅನೇಕ ವರ್ಷಗಳು ಬಳಕೆಯಲ್ಲಿದ್ದವು. ೧೪೮೬ರಲ್ಲಿ ಲ್ಯಾಟಿನ್ ಭಾಷೆಗೆ ಭಾಷಾಂತರವಾದ ವಿಶ್ವಕೋಶ ೨೨ ಪೌಂಡುಗಳಷ್ಟು ತೂಕವಿತ್ತು. ಪ್ರಾಧ್ಯಾಪಕ ಬ್ರೌನ್ ಪ್ರಕಾರ ಅವರಲ್ಲಿ ಅರ್ಧವಾದರೂ ಈಗ ದೊರೆಯುತ್ತದೆಯೋ ಎಂದು ಸಂಶಯ ಹುಟ್ಟಿದೆ.

ಆಲಿ ಅಬ್ಬಾಸ್

ಜುಂಡಿ ಷಾಪೂರ್ ಹತ್ತಿರ ಹುಟ್ಟಿ, ೯೯೪ರಲ್ಲಿ ಸತ್ತ ಆಲಿ ಇಬಿನ್ ಅಬ್ಬಾಸ್ ಎಂಬ ಪರ್ಷಿಯನ್ ವೈದ್ಯ ಆಗಿನ ಕಾಲದಲ್ಲಿ ಪ್ರಖ್ಯಾತಿ ಹೊಂದಿದ ಮತ್ತೊಬ್ಬ ಪಂಡಿತನಾಗಿದ್ದನು. ಇವನು ಅರಬ್ಬಿ ಭಾಷೆಯಲ್ಲಿ ಬರೆದ ವೈದ್ಯಶಾಸ್ತ್ರ ಲ್ಯಾಟಿನ್ ಭಾಷೆಗೆ ಎಲ್ಲಕ್ಕೂ ಮೊದಲೇ ಭಾಷಾಂತರವಾಯಿತು. ಇದರಲ್ಲಿ ಗ್ರೀಕ್ ಮತ್ತು ಅರಬ್ಬಿ ವೈದ್ಯರನ್ನು ಕುರಿತು ಮಾಡಿರುವ ಟೀಕೆಗಳು ಬಹಳ ಸ್ವಾರಸ್ಯವಾಗಿದ್ದವು.

"ಹಿಪ್ಪೊಕ್ರೇಟಿಸ್ಸಿನ ಗ್ರಂಥಗಳು ಅಡಕವಾಗಿದ್ದುದರಿಂದ ಅಸ್ಪಷ್ಟವಾಗಿದ್ದುವೆಂದೂ, ಗ್ಯಾಲೆನ್ನಿನವು ಅನಾವಶ್ಯಕವಾದ ವಿಷಯ ಹೊಂದಿದ್ದವೆಂದೂ, ಒರಿಬೇಸಿಯಸ್ ಹಾಗೂ ಯೂಜಿನಾದ ಪಾಲ್ ಶಸ್ತ್ರವೈದ್ಯ ಮತ್ತು ಅಂಗರಚನೆಯನ್ನು ಅಸಡ್ಡೆಯಿಂದ ಕಂಡಿದ್ದರೆಂದೂ, ರೇಜ್ಜಸ್‌ನ ಸಂಗ್ರಹಗಳು ಬಹಳ ಪ್ರಮಾಣಭೂತವಾದವೆಂದೂ ಹಾಗೂ ಬಹಳ ಬೆಲೆಯಾದವೆಂದೂ" ತಿಳಿಸಿದ್ದನು.

ಈ ಗ್ರಂಥದ ಶಸ್ತ್ರವೈದ್ಯ ಭಾಗದಲ್ಲಿ ಧ್ವನಿನಾಳಕರ್ತನವನ್ನೂ, ಮೂತ್ರಕೋಶದಿಂದ ನಳಿಕೆಯ ಮೂಲಕ ಮೂತ್ರವನ್ನು ತೆಗೆಯುವ ಕ್ರಮವನ್ನೂ ಬಹಳ ವಿಶದವಾಗಿ ವಿವರಿಸಿದ್ದನು. ಚರ್ಮವ್ಯಾಧಿಗಳಲ್ಲಿ ಅನೇಕ ರೋಗಗಳನ್ನೂ ಅವುಗಳ ವ್ಯತ್ಯಾಸಗಳನ್ನೂ, ಚಿಕಿತ್ಸೆಯನ್ನೂ ತಿಳಿಸಿದ್ದನು.

ಅವಿಸೆನ್ನ

ವೈದ್ಯ ರಾಜಕುಮಾರನೆಂದು ಹೆಸರು ಪಡೆದಿದ್ದ ಅಬು ಆಲಿ ಅಲ್ ಹುಸೇನ್ ಇಬಿನ್ ಅಬ್ದುಲ್ಲ ಇಬಿನ್ ಸಿನ(೯೮೦-೧೦೩೭) ಆಗಿನ ಕಾಲದಲ್ಲಿ ಅರಬ್ಬಿ ನಾಗರಿಕತೆ ಮತ್ತು ಸಂಸ್ಕೃತಿಗೆ ರತ್ನಪ್ರಾಯನಾಗಿದ್ದನು. ಮಧ್ಯ ಯುಗದ ಬರಹಗಾರರು ಇವನನ್ನು ಅವಿಸೆನ್ನ ಎಂದು ಕರೆದರು. ವೈದ್ಯಶಾಸ್ತ್ರ, ವಿಜ್ಞಾನ, ತತ್ತ್ವಶಾಸ್ತ್ರ, ರಾಜತಂತ್ರ, ಕವಿತೆ ಇವುಗಳಲ್ಲೆಲ್ಲ ಪ್ರವೀಣನಾಗಿದ್ದನು. ಇವನು ಪರ್ಶಿಯ ದೇಶದ ಆಫ್ಶಿನದಲ್ಲಿ ಹುಟ್ಟಿ ತನ್ನ ದೇಶದ ಕೀರ್ತಿ ಬೆಳಗಿದ್ದನು. ಇವನ ತಂದೆ ಕಂದಾಯ ವಸೂಲಿ ಮಾಡುತ್ತಿದ್ದನು.



ಅವಿಸೆನ್ನ (ಇಬಿನ್ ಸಿನ)

ಇವನ ಬುದ್ಧಿಶಕ್ತಿ ಬಹಳ ಚುರುಕಾಗಿತ್ತು. ೧೦ನೇ ವಯಸ್ಸಿನಲ್ಲೇ ಕೊರಾನನ್ನು ಬಾಯಿಪಾಠ ಮಾಡಿದ್ದನು. ಆಗಿನಿಂದಲೇ ನ್ಯಾಯಶಾಸ್ತ್ರ, ಗಣಿತಶಾಸ್ತ್ರ, ಭೌತಶಾಸ್ತ್ರ ಮತ್ತು ತತ್ವಶಾಸ್ತ್ರಗಳನ್ನು ಕಲಿತು,೧೬ನೇ ವಯಸ್ಸಿನಲ್ಲಿ ವೈದ್ಯಶಾಸ್ತ್ರವನ್ನು ಕಲಿಯಲು ಪ್ರಾರಂಭಿಸಿದ್ದನು. ಯಾವುದೂ ಇವನಿಗೆ ಕಷ್ಟವಾಗಿ ಕಾಣಿಸಲಿಲ್ಲ. ಅರಿಸ್ಟಾಟಲ್ಲಿನ ಆಧ್ಯಾತ್ಮಶಾಸ್ತ್ರವೂ ಕಷ್ಟ ತೋರಲಿಲ್ಲ. ೧೮ನೇ ವಯಸ್ಸಿನಲ್ಲೇ ವೈದ್ಯಶಾಸ್ತ್ರದಲ್ಲಿ ಪಾರಂಗತನಾಗಿ,ರಾಜಕುಮಾರ ನು ಇಬಿನ್ ಮನ್ಸೂರ್‌ನ ರೋಗ ಗುಣಪಡಿಸಿದ್ದರಿಂದ ರಾಜನ ಪುಸ್ತಕ ಭಂಡಾರದ ಅನೇಕ ಅಪೂರ್ವ ಗ್ರಂಥಗಳು ಇವನಿಗೆ ದೊರಕಿದವು. ೨೧ನೇ ವಯಸ್ಸಿನಲ್ಲಿ ಎಲ್ಲಾ ವಿಜ್ಞಾನಗಳನ್ನೊಳಗೊಂಡ ವಿಶ್ವಕೋಶವನ್ನು ಬರೆದನು. ಇವನಿಗೆ ದೇಶಾಟನೆ ಅಂದರೆ ಬಹಳ ಇಷ್ಟ. ಖಿವ, ಜುರ್ಜಾ, ಇಸ್ಪಹಾನ್ ಮುಂತಾದ ಸ್ಥಳಗಳಿಗೆ ಭೇಟಿ ಕೊಟ್ಟು, ಹಮದಾನ್ ಎಂಬಲ್ಲಿಗೆ ಹಿಂತಿರುಗಿ, ರಂಜಾನ್ ತಿಂಗಳಲ್ಲಿ ೫೮ನೇ ವಯಸ್ಸಿನಲ್ಲಿ ಮರಣ ಹೊಂದಿದನು. ಇವನ ಸಮಾಧಿ ಈಗಲೂ ತೀರ್ಥ

ಯಾತ್ರಿಗೆ ಪವಿತ್ರ ಸ್ಥಳವಾಗಿದೆ.

ಇವನು ರಾಯಭಾರ ಕೆಲಸಗಳಲ್ಲಿ ಹೆಚ್ಚಾಗಿ ತೊಡಗಿದ್ದರೂ, ಓದುವುದಕ್ಕೂ ಉಪನ್ಯಾಸ ಮತ್ತು ವೈದ್ಯನ ಕೆಲಸ ಮಾಡುವುದಕ್ಕೂ ಸಾಕಷ್ಟು ಕಾಲ ಮೀಸಲಾಗಿಟ್ಟಿದ್ದನು. ಶುಶ್ರೂಷೆ ಮಾಡುವವರ ಸಂಗಡ ಮದ್ಯಪಾನ ಮಾಡುತ್ತಾ ಕಾಲ ಕಳೆಯುತ್ತಿದ್ದ. ಆದ್ದರಿಂದಲೇ ಇವನಿಗೆ ಸಾವು ಬೇಗ ಬಂತೆಂದು ಹೇಳಲಾಗಿದೆ. ಇವನ ಮತಪದ್ಧತಿಗಳನ್ನೂ, ಅಭಿಪ್ರಾಯಗಳನ್ನೂ ಇವನ ಸಹೋದ್ಯೋಗಿಗಳಲ್ಲನೇಕರು ಖಂಡಿಸಿದ್ದರೂ, ಇವನು ಹಿಂಜರಿದಿರಲಿಲ್ಲ. ಇವನು ತನ್ನ ಕೊನೆದಿನಗಳಲ್ಲಿ ದಿನವೂ ಕೊರಾನ್ ಓದುವುದನ್ನು ಬಿಟ್ಟಿರಲಿಲ್ಲ. ತನ್ನ ಆಸ್ತಿಯನ್ನೆಲ್ಲಾ ಒಡವರಿಗೆ ಹಂಚಿ ತಾನೂ ಬಡವನಾಗಿಯೇ ಸತ್ತನು. ಇವನಿಗೆ ಪರ್ಷಿಯ ಸಾಹಿತ್ಯದಲ್ಲಿದ್ದ ಪ್ರಭಾವದಿಂದಲೂ, ಇವನ



ಅವಿಸೆನ್ನ

ಕವಿತೆಗಳ ಶ್ರೇಷ್ಠತೆಯಿಂದಲೂ, ಇವನನ್ನು ಅನೇಕ ಬರಹಗಾರರು ಉಮರ್‌ಖಯಾಮ್‌ನಿಗೆ ಹೋಲಿಸಿದ್ದರು, ಇವನ ಕವಿತೆಗಳು ಇತರ ಲೇಖನಗಳಂತೆ ಅರಬ್ಬಿ ಭಾಷೆಯಲ್ಲಿರದೆ ಅವನ ದೇಶಭಾಷೆಯಾದ ಪರ್ಷಿಯಲ್ಲಿದ್ದವು. ತತ್ತ್ವಶಾಸ್ತ್ರದ ಕುಶಲತೆಯಲ್ಲಿ ಇವನಿಗೆ ಯಾರೂ ಸಮಾನರಿರಲಿಲ್ಲ. ಅವೆರ್ರೋಸ್ ಒಬ್ಬ ಮಾತ್ರ ಇವನ ಪ್ರತಿಸ್ಪರ್ಧಿಯಾಗಿದ್ದನು. ಆಸ್ಲರ್ ಅವಿಸೆನ್ನನ ಮಹಾತ್ಮೆಯನ್ನು ಕೊಂಡಾಡುತ್ತ "ಆತನ ಕೆಲವು ಆಧ್ಯಾತ್ಮಿಕ ಹಾಗೂ ದಾರ್ಶನಿಕ ಬರಹಗಳನ್ನು ಓದುವ ವರೆವಿಗೂ ನನಗೆ ಅವನ ಚತುರತೆ ಮನದಟ್ಟಾಗಿರಲಿಲ್ಲ" ಎಂದು ನುಡಿದಿದ್ದಾನೆ. ಅವನು ಬರೆದಿದ್ದ ಗಣಿತಶಾಸ್ತ್ರ, ಭೌತಿಕಶಾಸ್ತ್ರ, ರಸಾಯನಶಾಸ್ತ್ರ, ಮತ್ತಿತರ ಶಾಸ್ತ್ರಗಳನ್ನೊಳಗೊಂಡಿದ್ದ ೧೦೦ ಪುಸ್ತಕಗಳಿಗೆಲ್ಲಾ ಅವನ ವೈದ್ಯಶಾಸ್ತ್ರದ ಗ್ರಂಥವೇ ಮೇಲಾಗಿತ್ತು. ಆಸ್ಲರ್

ಈ ಪುಸ್ತಕವನ್ನು ವಿವರಿಸುತ್ತ "ಎಂದೆಂದಿಗೂ ಬರೆಯಲಾಗದ ಬಹು ಶ್ರೇಷ್ಠ ವೈದ್ಯ ಪಠ್ಯಪುಸ್ತಕ ಹಾಗೂ ಬೇರೆ ಗ್ರಂಥಗಳಿಗಿಂತಲೂ ಬಹಳ ಕಾಲ ವೈದ್ಯದ ಬೈಬಲ್ಲು" ಎಂದು ಹೇಳಿದ್ದಾನೆ.

ಅಂಗಚ್ಛೇದನ ಇಸ್ಲಾಮ್ ಮತಕ್ಕೆ ವಿರೋಧವಾದ್ದರಿಂದ, ಅಂಗರಚನೆಶಾಸ್ತ್ರ ಅಷ್ಟು ಮುಂದೆ ಬಂದಿರಲಿಲ್ಲ. ದೇಹಶಾಸ್ತ್ರವೂ ಮುಂದುವರಿದಿರಲಿಲ್ಲ, ಆದರೂ ಅವಿಸೆನ್ನನ ವೈದ್ಯಶಾಸ್ತ್ರ ಉನ್ನತ ಮಟ್ಟವನ್ನು ಮುಟ್ಟಿತ್ತು. ಇದು ಅನೇಕ ಶತಮಾನಗಳ ಕಾಲ ಯೂರೋಪಿನಲ್ಲಿ ಬಳಕೆಯಲ್ಲಿತ್ತು. ಮಾಂಟ್‌ಪೆಲ್ಲಿಯರ್‌ನ ವಿದ್ಯಾಪೀಠದಲ್ಲಿ ೧೬೫೦ ರಲ್ಲೂ ಪಠ್ಯ ಪುಸ್ತಕವಾಗಿತ್ತು. ಇದನ್ನು ಇಂಗ್ಲೀಷ್ ಭಾಷೆಗೆ ೧೯೩೧ ರಲ್ಲಿ ಒ. ಸಿ. ಗ್ರುನರ್ ಭಾಷಾಂತರಿಸಿದನು. ಅವಿಸೆನ್ನ ಹೇಳಿರುವ ಸೂತ್ರಗಳು ಅಚ್ಚುಮೆಚ್ಚಾಗಿದ್ದವು. ಹೊಟ್ಟೆನೋವು, ಜ್ವರ ಎರಡೂ ಇದ್ದ ಕಡೆ ರೋಗಿಗೆ ಕಷ್ಟವುಂಟಾಗುವುದೆಂದೂ, ರೋಗಿಯ ಕೈಗಳು ಅದುರಿದರೆ ಮರಣ ಖಂಡಿತವೆಂದೂ ಹೇಳಿದ್ದ. ಕ್ಷಯ ಅಂಟುರೋಗವೆಂದು ಅವನೇ ಮೊದಲಿಗೆ ತಿಳಿಸಿದ್ದು. ಈಗಿನ ಪಠ್ಯ ಪುಸ್ತಕಗಳಲ್ಲಿರುವ ವಿಷಯಗಳೆಲ್ಲಾ ಅವನ ಗ್ರಂಥಗಳಲ್ಲಿದ್ದವು. ಶುದ್ಧವಾದ ನೀರು, ಒಳ್ಳೆ ಹವಾಗುಣ, ಸ್ನಾನ, ನಿದ್ದೆ ಆರೋಗ್ಯಕ್ಕೆ ಮುಖ್ಯವೆಂದು ತಿಳಿಸಿದ್ದನು. ಸಂಗೀತವೂ ಕೆಲವು ವೇಳೆ ರೋಗ ಗುಣಮಾಡುವ ಶಕ್ತಿ ಹೊಂದಿದೆಯೆಂದೂ ತಿಳಿದಿತ್ತು. ಹೆರಿಗೆ ಕಷ್ಟವಾದರೆ ಶಸ್ತ್ರಕ್ರಿಯೆ ಅಗತ್ಯವೆಂದೂ ಹೇಳಿದ್ದ. ಮಿದುಳು ಜ್ವರ, ಮೂತ್ರಪಿಂಡುರಿತ, ಮುಖದ ಎರಡು ಬಗೆ ಲಕ್ವ, ಹೊಟ್ಟೆಹುಣ್ಣುಗಳೆಲ್ಲವೂ ತಿಳಿದಿದ್ದವು. ಪಿತ್ತರಸದ ಚಲನೆ ತಡೆಯಿಂದಲೂ, ರಕ್ತಕಣ ನಾಶದಿಂದಲೂ ಹಾವಿನ ವಿಷದಿಂದಲೂ ಹಳದಿ ಕಾಮಾಲೆ ಬರಬಹುದೆಂದು ವಿವರಿಸಿದ್ದನು. ಜ್ಯೋತಿಷ್ಯಕ್ಕೂ ರೋಗಕ್ಕೂ ಯಾವ ಸಂಬಂಧವೂ ಇಲ್ಲವೆಂದು ಸಾರಿದನು. ಅವನ 'ಜ್ಯೋತಿಷ್ಯದ ನಿಷ್ಪ್ರಯೋಜನತೆ'ಯನ್ನು ರೂಢಿಸಿದ್ದರೆ ವೈದ್ಯಶಾಸ್ತ್ರ ಇನ್ನೂ ಮುಂದುವರಿಯುತ್ತಿತ್ತೆಂದು ಹೇಳಲಾಗಿದೆ.

ಅಬ್ದುಲ್ ಲತೀಫ್

ಪೂರ್ವ ಕಲೀಫಗಿರಿಯಲ್ಲಿ ಇನ್ನೂ ಅನೇಕ ಶ್ರೇಷ್ಠ ವೈದ್ಯರಿದ್ದರು. ಅವರ ಪೈಕಿ ಅಬ್ದುಲ್ ಲತೀಫ್ (೧೧೬೨-೧೨೩೧) ಬಾಗದಾದಿನಲ್ಲಿ ಹುಟ್ಟಿ, ತನ್ನ ಎಳೆತನದಲ್ಲೇ ಅವಿಸೆನ್ನನ ಗ್ರಂಥಗಳನ್ನು ಖಂಡಿಸಿ, ಅಸಡ್ಡೆಮಾಡಿ, ಸ್ವಂತ ಆಲೋಚನೆಗಳಿಗೆ ಪ್ರಾಮುಖ್ಯತೆ ಕೊಟ್ಟಿದ್ದನು. ಅವನು ಈಜಿಪ್ಟಿಗೆ ಹೋಗಿದ್ದಾಗ, ಮಾಕ್ಸ್ ಎಂಬಲ್ಲಿಗೆ ಭೇಟಿಕೊಡಲು ಅಲ್ಲಿ ೨೦,೦೦೦ ಅಸ್ತಿಪಂಜರಗಳು ಸಿಕ್ಕಿ, ಅವನ್ನು ಪರಿಶೀಲಿಸಿ, ಒಂದು ಪುಸ್ತಕವನ್ನು ಬರೆದನು. ಆ ಪುಸ್ತಕದಲ್ಲಿ ಗ್ಯಾಲೆನ್ನನ ಅಂಗರಚನೆಯನ್ನು ತಿರಸ್ಕರಿಸಿ, ಅಲ್ಲಿರುವ ತಪ್ಪುಗಳನ್ನು ಸರಿಪಡಿಸಿದನೆಂದು ಹೇಳಲಾಗಿದೆ.


ಪಶ್ಚಿಮ ಕಲೀಫಗಿರಿ

ಬಾಗದಾದಿನ ಅಬ್ಬಾಸಿಡ್ ವಂಶದವರು ಡಮಾಸ್ಕಸ್ಸಿನ ಉಮ್ಮಾಯದ್ ವಂಶ

ದವರನ್ನು ನಾಶಪಡಿಸಿದ ಮೇಲೆ,ಡಮಾಸ್ಕಸ್ಸಿನ ೧೦ನೇ ಕಲೀಫನ ಮೊಮ್ಮಗ ಅಬ್ದುಲ್ ರಹಮಾನ್ ದೇಶಭ್ರಷ್ಟನಾಗಿ, ಪ್ಯಾಲೆಸ್ಟೈನ್, ಈಜಿಪ್ಟ್, ಉತ್ತರ ಆಫ್ರಿಕ ಮೂಲಕ, ಕಾಲ್ನಡಗೆಯಲ್ಲೇ ಪ್ರಯಾಣಮಾಡಿ, ೫ ವರ್ಷಗಳಾದ ಮೇಲೆ ಕ್ರಿ. ಶ. ೭೫೮ರಲ್ಲಿ ಸ್ಪೈಯಿನ್ ದೇಶವನ್ನು ತಲುಪಿದನು. ಅಲ್ಲಿ ಡಮಾಸ್ಕಸ್ ಸಿರಿಯನ್ನರೇ ಇದ್ದುದರಿಂದ ಅವರು ಇವನನ್ನು ಬರಮಾಡಿಕೊಂಡು ತಮ್ಮ ಚಕ್ರವರ್ತಿಯನ್ನಾಗಿ ನೇಮಿಸಿಕೊಂಡರು. ಅಲ್ಲಿ ಅಬ್ದುಲ್ ರಹಮಾನ್ ರಾಜ್ಯವನ್ನು ಕಟ್ಟಿ ಕಾರ್ಡೋವ ಪಟ್ಟಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು.

ಕಾರ್ಡೋವ

ಇದೇ ಕಾರ್ಡೋವ ಕಲೀಫಗಿರಿ ಅಥವಾ ಪಶ್ಚಿಮದ ಕಲೀಫಗಿರಿ. ೧೦ನೇ ಶತಮಾನದಲ್ಲಿ ಯೂರೋಪಿಗೆಲ್ಲಾ ಕಾರ್ಡೋವ ನಾಗರಿಕತೆಯ ಮುಖ್ಯ ಪಟ್ಟಣವಾಯಿತು. ಆಗ ಅಲ್ಲಿ ೧೦ ಲಕ್ಷ ಜನಸಂಖ್ಯೆಯಿತ್ತು. ३೦೦ ಮಸೀದಿಗಳು, ೭೦ ಪುಸ್ತಕ ಭಂಡಾರಗಳೂ, ೯೦೦ ಸಾರ್ವಜನಿಕ ಸ್ನಾನದ ಮನೆಗಳೂ, ೫೦ ಆಸ್ಪತ್ರೆಗಳೂ ಇದ್ದವು. ೮ನೇ ಶತಮಾನದಲ್ಲೇ ಸ್ಥಾಪಿತವಾಗಿದ್ದ ವಿಶ್ವವಿದ್ಯಾನಿಲಯವನ್ನು ಕ್ರಿಶ್ಚಿಯನರು ತಮ್ಮ ವಿದ್ಯಾ ಕೇಂದ್ರವನ್ನಾಗಿ ಮಾಡಿಕೊಂಡಿದ್ದರು. ಅಲ್ ಹಕಮ್‌ನ ಪುಸ್ತಕ ಭಂಡಾರದಲ್ಲಿ ೨,೫೫೦೦೦ ಪುಸ್ತಕಗಳಿದ್ದವು. ಕಾರ್ಡೋವಕ್ಕೆ ವಿದ್ಯಾಭ್ಯಾಸಕ್ಕಾಗಿ ಯೂರೋಪಿನ ಅನೇಕ ಸ್ಥಳಗಳಿಂದ ವಿದ್ವಾಂಸರು ಬರುತ್ತಿದ್ದರು. ಮಸೀದಿಗಳ ಪೈಕಿ, ಕಾರ್ಡೋವ ಮಸೀದಿ ಮೆಕ್ಕಾದ ಕಾಬಗಿಂತಲೂ ದೊಡ್ಡದಾಗಿತ್ತು.



ಕಾರ್ಡೋವದ ಮಸೀದಿಯ ಶಿಖರ

ಈ ಪಶ್ಚಿಮ ಕಲೀಫಗಿರಿಯ ವೈದ್ಯಶಾಸ್ತ್ರ ಅವಿಸೆನ್ನನ ಅಭಿಪ್ರಾಯಗಳಿಗೆ ವಿರೋಧವಾಗಿ ಬೆಳೆಯುತ್ತಿತ್ತು. ಕಾರ್ಡೋವಕ್ಕೂ ಬಾಗದಾದಿಗೂ ಬುದ್ಧಿಶಕ್ತಿಯಲ್ಲಿ ಸಂಬಂಧವಿದ್ದರೂ ಕಾರ್ಡೋವ ಜ್ಞಾನಿಗಳು ಬಾಗದಾದಿನವರ ಬೋಧನೆಯನ್ನು ಆಲಿಸುತಿದ್ದರೇ ಹೊರತು ಅನುಸರಿಸುತ್ತಿರಲಿಲ್ಲ. ಪಶ್ಚಿಮ ಕಲೀಫಗಿರಿಯಲ್ಲಿ ಅಷ್ಟು ಮಂದಿ ವೈದ್ಯರಿರಲಿಲ್ಲ. ರೇಜ್ಸಸ್ ಅವಿಸೆನ್ನನ ಅನಂತರ ಬಹಳ ವರ್ಷಗಳಾದ ಮೇಲೆ ಇಲ್ಲಿ ವೈದ್ಯರು ಪ್ರಖ್ಯಾತರಾದರು. ಪೂರ್ವ ಕಲೀಫಗಿರಿಯಲ್ಲಿ ವೈದ್ಯರು ಪ್ರಖ್ಯಾತಿಗೆ ಬಂದಿದ್ದರೆ,

ಪಶ್ಚಿಮ ಕಲೀಫಗಿರಿಯಲ್ಲಿ ಬರದೆ, ಶಸ್ತ್ರವೈದ್ಯರು ಮಾತ್ರವೇ ಮುಂದಕ್ಕೆ ಬಂದರು. ಆಗ ಔಷಧ ವೈದ್ಯಕ್ಕಿದ್ದಷ್ಟು ಗೌರವ ಶಸ್ತ್ರವೈದ್ಯಕ್ಕಿರಲಿಲ್ಲ, ಹಾಗೂ ಅಂಗರಚನೆ ಅಷ್ಟು ಬೆಳೆದಿಲ್ಲದಿದ್ದರಿಂದ ಶಸ್ತ್ರವೈದ್ಯ ಮುಸ್ಲಿಮ್ ರಾಜ್ಯದಲ್ಲೇ ಕೆಳಮಟ್ಟದಲ್ಲಿತ್ತು.

ಅಲ್ಬುಕೇಸಿಸ್

೯೩೬ ರಲ್ಲಿ ಕಾರ್ಡೋವ ಹತ್ತಿರ ಜನಿಸಿದ ಅಬುಲ್ ಖಾಸಿಮ್ ಇಸ್ಲಾಮ್ ಮತದಲ್ಲೇ ಶ್ರೇಷ್ಠ ಶಸ್ತ್ರವೈದ್ಯನಾಗಿದ್ದನು. ಇವನ ತಾಯಿ ತಂದೆಗಳು ಸ್ಪೈಯಿನ್ ದೇಶದವರು. ಲ್ಯಾಟಿನ್ ಯೂರೋಪಿನಲ್ಲಿ ಇವನನ್ನು ಅಲ್ಬುಕೇಸಿಸ್ ಎಂದು ಕರೆಯುತ್ತಿದ್ದರು. ಇವನು ಬರೆದ ಔಷಧ ವೈದ್ಯ ಮತ್ತು ಶಸ್ತ್ರವೈದ್ಯದ ವಿಶ್ವಕೋಶದಲ್ಲಿ (ವಿಧಾನ) ೩೦ ಭಾಗಗಳಿದ್ದುವು. ಇದು ಲ್ಯಾಟಿನ್ ಭಾಷೆಗೆ ೫ ಸಲ ಭಾಷಾಂತರವಾಗಿತ್ತು. ಇವನ ಕೊನೆಯ ಪುಸ್ತಕವಾದ ಶಸ್ತ್ರವೈದ್ಯದಲ್ಲಿ ೨೦೦ ಶಸ್ತ್ರಗಳ ಚಿತ್ರಗಳಿದ್ದುವು. ಇವನ ಸುಡಿಕೆ ಕ್ರಮ ಉತ್ತಮವಾಗಿತ್ತು. ಅರೆತಲೆನೋವು, ಲಕ್ವ, ಅಪಸ್ಮಾರ, ಏಡಿಗಂತಿ, ಅಂಡವಾಯು, ಕಣ್ಣಿನ ಪೊರೆಗಳಿಗೆಲ್ಲಾ ಸುಡಿಕೆ ಹಾಕುತ್ತಿದ್ದನು. ಎದೆಯ ಏಡಿಗಂತಿಗೆ ತಕ್ಕ ಶಸ್ತ್ರಕ್ರಿಯೆಯೂ ಗೊತ್ತಿತ್ತು. ಏಡಿಗಂತಿ ಸ್ಥಾನಾಂತರಿಸುವ ಲಕ್ಷಣವನ್ನು ತಿಳಿದಿದ್ದ. ಕಣ್ಣಿನ ಪೊರೆಯನ್ನು ಶಸ್ತ್ರದ ಮೂಲಕ ತೆಗೆಯುವುದನ್ನು ಅರಿತಿದ್ದ. ಮೂಳೆಮುರಿತ, ಮೂಳೆ ಸ್ಥಳಪಲ್ಲಟಗಳನ್ನು ಬೇರೊಂದು ಪುಸ್ತಕದಲ್ಲಿ ವಿವರಿಸಿದ್ದನು.

ಅವೆನ್ಜೋರ್

ಇಬಿನ್ ಜ್ಸುರ್ (೧೦೭೨-೧೧೬೨) ಯೂರೋಪಿನಲ್ಲಿ ಅವೆನ್ಜೋರ್ ಎಂದು ಕರೆಯಲ್ಪಟ್ಟಿದ್ದರೂ ಅವನ ಜೀವಮಾನ ಚೆನ್ನಾಗಿ ತಿಳಿದಿಲ್ಲ. ಆದರೆ ಅವನು ಬರೆದಿದ್ದ "ತಿಯಿಸಿಸ್" ವೈದ್ಯಶಾಸ್ತ್ರ ಬಹಳ ಉತ್ಕೃಷ್ಟವಾಗಿತ್ತು. ಅದರಲ್ಲಿ, ವೈದ್ಯ ನಡೆದುಕೊಳ್ಳಬೇಕಾದ ರೀತಿಗಳು, ಔಷಧ ಮತ್ತು ಆಹಾರಗಳ ತಯಾರಿಕೆ, ಹೃದಯ ಹೊರಪರೆಯುರಿತ,ನಡುದೆರೆ ಕೀವು ಹುಣ್ಣು, ಉಸಿರ್ನಾಳಕರ್ತನಗಳೆಲ್ಲಾ ವಿವರಿಸಲಾಗಿತ್ತು. ಅನ್ನನಾಳ ಕಿರಿದಾಗಿದ್ದರೆ, ಮಲದ್ವಾರದಿಂದ ವಸ್ತಿಯ ಮೂಲಕ ಆಹಾರ ಕೊಡಬಹುದೆಂದು ತಿಳಿಸಿದ್ದನು. ವೈದ್ಯಶಾಸ್ತ್ರದಲ್ಲಿ ಜ್ಯೋತಿಷ್ಯಕ್ಕೂ, ಆಧ್ಯಾತ್ಮಯೋಗಕ್ಕೂ ಸ್ಥಾನವಿಲ್ಲವೆಂದು ತಿರಸ್ಕರಿಸಿದ್ದನು. ಕಜ್ಜಿಗೆ ಜೇಡರ ಜಾತಿಯ ಹುಳು ಕಾರಣವೆಂದು ಇವನೇ ಮೊಟ್ಟಮೊದಲಿಗೆ ತಿಳಿಸಿದ್ದು. ಈ ಹುಳುವನ್ನು ಸೂಜಿಯಿಂದ ಹೊರತೆಗೆಯಬಹುದೆಂದು ತಿಳಿಸಿದ್ದನು. ಇವನ ತಂದೆಯೂ ಪ್ರಸಿದ್ಧ ವೈದ್ಯನಾಗಿದ್ದನು. ಅವಿಸೆನ್ನನ ಗ್ರಂಥಗಳನ್ನು ಖಂಡಿಸಿ, ತನ್ನ ಪುಸ್ತಕ ಭಂಡಾರದಲ್ಲಿಡಲು ಯೋಗ್ಯವಲ್ಲವೆಂದು, ಅದರ ಹಾಳೆಗಳನ್ನು ಹರಿದು ತನ್ನ ವಿರೋಧವನ್ನು ತೋರ್ಪಡಿಸಿದ್ದನು. ತಂದೆಯಂತೆ ಮಗನೂ ಅವಿಸೆನ್ನನ ಗ್ರಂಥವನ್ನು ಅಸಡ್ಡೆಯಿಂದ ಕಂಡಿದ್ದನು. ಹೀಗಿದ್ದರೂ ಅವೆನ್ಜೋರ್ ಯೂರೋಪಿನಲ್ಲೆಲ್ಲಾ ಪ್ರಖ್ಯಾತಿ ಪಡೆದಿದ್ದನು. ಇವನ ಗ್ರಂಥ ಯಹೋದ್ಯ, ಲ್ಯಾಟಿನ್ ಭಾಷೆಗಳಿಗೆ ಭಾಷಾಂತರವಾಗಿತ್ತು.

ಅವೆರ‍್ರೊ

ಅವೆನ್ಸೋರ್‌ನ ಸ್ನೇಹಿತನೂ, ಶಿಷ್ಯನೂ ಆದ ಇಬಿನ್ ರಷೀದ್ (೧೧೨೬–೧೧೯೮) ಕಾರ್ಡೋವದಲ್ಲಿ ಜನಿಸಿ, ನ್ಯಾಯಶಾಸ್ತ್ರ, ತತ್ತ್ವಶಾಸ್ತ್ರ ಮತ್ತು ವೈದ್ಯಶಾಸ್ತ್ರಗಳಲ್ಲಿ ಅವನ ತಂದೆ ತಾತಂದಿರಂತೆ ತಾನೂ ಪ್ರವೀಣನಾಗಿದ್ದನು. ಯೂರೋಪಿನಲ್ಲಿ ಅವೆರ‍್ರೊ ಎಂದು ಹೆಸರಾದ ಇವನನ್ನು ಪಶ್ಚಿಮ ಕಲೀಫಗಿರಿಯ ಅವಿಸೆನ್ನನೆಂದೂ ಕರೆಯುತ್ತಿದ್ದರು. ಇವನು ಅರಿಸ್ಟಾಟಲ್ಲಿನ ಪದ್ಧತಿಗಳನ್ನೂ ತತ್ತ್ವಗಳನ್ನೂ ಅನುಮೋದಿಸಿ ಪ್ರತಿಪಾದಿಸುತ್ತಿದ್ದನು. ವೈದ್ಯಶಾಸ್ತ್ರಕ್ಕಿಂತಲೂ ತತ್ವಶಾಸ್ತ್ರದಲ್ಲಿ ಮಹಾಪಂಡಿತನಾಗಿದ್ದನು. ಕಾರ್ಡೋವದಲ್ಲಿ ನ್ಯಾಯಧೀಶನ ಪದವಿಯನ್ನೂ ಮತ್ತು ರಾಜಪ್ರತಿನಿಧಿ ಪದವಿಯನ್ನೂ ಪಡೆದಿದ್ದನು. ಆದರೂ ಇವನನ್ನೂ ಇವನ ಬೆಂಬಲಿಗರನ್ನೂ ಆಚಾರಗೆಟ್ಟ ಅಭಿಪ್ರಾಯಗಳನ್ನು ಹೊಂದಿದ್ದಾರೆಂದೂ ಎಲ್ ನೆಸಬ ಎಂಬಲ್ಲಿ ಸೆರೆಯಲ್ಲಿಟ್ಟಿದ್ದರು. ಮೂರು ವರ್ಷಗಳನಂತರ ಅವೆರ‍್ರೊನನ್ನು ಮೊರಾಕೊಪಿಗೆ ಕಳುಹಿಸಿದಾಗ, ಅಲ್ಲಿ ಸೆರೆಮನೆಯಲ್ಲಿ ಪ್ರಾಣಬಿಟ್ಟನು.

ಮೈಮೊನಿಡೆಸ್

ಅವೆರ‍್ರೊನ ಆಪ್ತ ಶಿಷ್ಯನಾದ ಮೂಸ ಇಬಿನ್ ಮೈಮೂನ್(೧೧೩೫-೧೨೦೪) ಯೂರೋಪ ಜನರಿಂದ ಮೈಮೊನಿಡೆಸ್ ಎಂದು ಕರೆಯಲ್ಪಟ್ಟಿದ್ದನು. ಇವನು ಪ್ರಸಿದ್ಧ ಯಹೋದ್ಯನಾಗಿದ್ದನು. ಇವನು ೧೩ನೇ ವಯಸ್ಸಿನವನಾಗಿದ್ದಾಗ, ೧೧೪೮ ರಲ್ಲಿ, ಮೂಢರು ಮತ್ತು ವಿವೇಚನೆ ಇಲ್ಲದ ಆಲ್ಮೊಹಾಡೇಸ್ ಗುಂಪಿನವರು ಉತ್ತರ ಆಫ್ರಿಕದಿಂದ ಬಂದು ಕಾರ್ಡೋವವನ್ನು ಮುತ್ತಿ ಪಟ್ಟಣವನ್ನು ವಶಪಡಿಸಿಕೊಂಡರು. ಇದೇ ಕಾರ್ಡೋವ ನಾಗರಿಕತೆಯ ನಾಶಕ್ಕೆ ಕಾರಣವಾಯಿತು. ಕ್ರಿಶ್ಚಿಯನರು, ಯಹೋದ್ಯರು, ಮುಸ್ಲಿಮ್ ಮತವನ್ನು ಅವಲಂಬಿಸದಿದ್ದರೆ, ದೇಶ ಬಿಟ್ಟು ಹೋಗಬೇಕೆಂಬ ಆಲ್ಮೊಹಾಡೆಸ್ಸರ ಬೆದರಿಕೆಯಿಂದ, ಅನೇಕರು ಮುಸ್ಲಿಮರಾದರು. ಅನೇಕ ಕ್ರಿಶ್ಚಿಯನರು ಉತ್ತರ ಸ್ಪೆಯಿನಿಗೆ ತೆರಳಿದರು. ಅನೇಕ ಯಹೋದ್ಯರು ಮೊರಾಕೊ, ಈಜಿಪ್ಟ ಮತ್ತು ಪ್ಯಾಲೆಸ್ಟೈನ್‌ಗಳಿಗೆ ಹೊರಟರು. ಮೈಮೊನಿಡೆಸ್ ತನ್ನ ಸಂಸಾರವನ್ನು ಕರೆದುಕೊಂಡು ದೇಶವೆಲ್ಲಾ ಅಲೆದಾಡಿ, ಕೊನೆಗೆ ಈಜಿಪ್ಟಿಗೆ ಹೋಗಿ ಕೈರೋ ಪಟ್ಟಣದ ಹತ್ತಿರ ನೆಲೆಸಿದನು. ಇಲ್ಲಿಗೆ ಬಂದ ಕೂಡಲೇ, ತಂದೆ ತೀರಿ ಹೋಗಿ, ಹಡಗಿನಲ್ಲಿದ್ದ ಮನೆತನದ ಆಸ್ತಿಯೆಲ್ಲಾ ಹಿಂದೂಸಾಗರದಲ್ಲಿ ಮುಳುಗಿ ನಾಶವಾದುದರಿಂದ, ಜೀವನ ನಡೆಸಲು ವೈದ್ಯವೃತ್ತಿಯಲ್ಲಿ ತೊಡಗಿದನು. ಸ್ವಲ್ಪ ಕಾಲದಲ್ಲೇ ಇವನ ಕೀರ್ತಿ ಬೆಳಗಿ ಸಂಪಾದನೆ ಹೆಚ್ಚಿತು. ರಿಚರ್ಡ್ ಸಿಯರ್ ಡಿ ಲಯನ್‌ನಿಂದ ವೈದ್ಯನಾಗಲು ಕರೆ ಬಂದರೂ ಒಪ್ಪಿಗೆ ಕೊಡಲಿಲ್ಲ. ಇವನು ಒಂದು ಸಲಹೆ ಪುಸ್ತಕವನ್ನು ಮಗ ಸಲಾರಿನ್‌ಗೋಸ್ಕರ ಆಹಾರ ಮತ್ತು ಶರೀರಾರೋಗ್ಯದ ವಿಚಾರವಾಗಿ ಬರೆದನು. ಗ್ಯಾಲೆನ್ನನ ಸೂಕ್ತಿಗಳನ್ನೆಲ್ಲಾ ಕೂಡಿಸಿ ಮತ್ತೊಂದು ಪುಸ್ತಕವನ್ನು ಬರೆದನು. ಇವುಗಳ ಲ್ಯಾಟಿನ್ ಭಾಷಾಂತರಗಳು ಯೂರೋಪಿನಲ್ಲೆಲ್ಲಾ

ಪ್ರಖ್ಯಾತಿ ಪಡೆದದ್ದರಿಂದ, ೧೪೮೯ ರಿಂದ ೧೫೭೯ರ ತನಕ ೫ ಬಾರಿ ಲ್ಯಾಟಿನ್ ಭಾಷೆಗೆ ಭಾಷಾಂತರವಾದವು. ಅವಿಸೆನ್ನನ ಕ್ಯಾನನ್ನನ್ನೂ ಯಹೋದ್ಯ ಭಾಷೆಗೆ ಭಾಷಾಂತರಿಸಿದ್ದನು.

ಅರಬ್ಬಿ ನಾಗರಿಕತೆಯು ಪತನ

ಕಾರ್ಡೋವ ನಾಶದೊಂದಿಗೆ ಪಶ್ಚಿಮ ಕಲೀಫಗಿರಿ ಮುಳುಗಿತು. ಅಲ್ಲಿಯ ವಿಜ್ಞಾನ, ವೈದ್ಯಶಾಸ್ತ್ರವೂ ಕೊನೆಗಂಡವು. ಆದರೂ ಅವುಗಳಲ್ಲಿನ ಆಸಕ್ತಿ ಜನರಲ್ಲಿ ಕಣ್ಮರೆಯಾಗಲಿಲ್ಲ. ಚರಿತ್ರೆ ಪುನರಾವೃತ್ತಿಯಾಗಬೇಕಾಯಿತು. ಅಲ್ಮೊ ಹಾಡೆಸ್‌ರನ್ನು ಕ್ರಿಶ್ಚಿಯನರು ಗೆದ್ದು, ಕಾರ್ಡೋವ, ಸೆವಿಲ್ಲ ಮತ್ತು ಗ್ರೆನಡಗಳನ್ನು ವಶಪಡಿಸಿಕೊಂಡರು. ಕ್ರಿಶ್ಚಿಯನರು ಇಸ್ಲಾಮ್ ನಾಗರಿಕತೆಯನ್ನು ನಾಶಮಾಡದೆ, ಅವರ ಅನೇಕ ಪದ್ಧತಿಗಳನ್ನೂ ಶಾಸ್ತ್ರಗಳನ್ನೂ, ನಡೆನುಡಿಗಳನ್ನೂ ತಮ್ಮ ಮತಕ್ಕೆ ಅವಲಂಬಿಸಿಕೊಂಡರು. ಪಶ್ಚಿಮದಲ್ಲಿ ಅರಬ್ಬರ ನಾಗರಿಕತೆ ಹೇಗೆ ನಾಶವಾಯಿತೋ, ಅದಕ್ಕಿಂತಲೂ ಹೆಚ್ಚಾಗಿ ಪೂರ್ವದ ಕಲೀಫಗಿರಿಯೂ ಮೊಗಲರಿಂದ ನಾಶವಾಯಿತು. ೧೨೫೮ರ ಫೆಬ್ರವರಿ ತಿಂಗಳು ೧೩ರಲ್ಲಿ ಮೊಗಲರ ಹಲಗು ಖಾನ್ ಬಾಗದಾದನ್ನು ಮುತ್ತಿಗೆ ಹಾಕಿ ವಶಪಡಿಸಿಕೊಂಡನು. ಬಾಗದಾದು ಒಂದು ವಾರದಲ್ಲಿ ಬರಿದಾಯಿತು. ೮ ಲಕ್ಷ ಜನರು ಕೊಲೆಯಾದರು. ವಿಜ್ಞಾನ, ವೈದ್ಯಶಾಸ್ತ್ರದ ಗ್ರಂಥಗಳೆಲ್ಲಾ ಭಸ್ಮವಾದವು. ಪ್ರಸಿದ್ಧವಾದ ಪುಸ್ತಕ ಭಂಡಾರ ಸುಟ್ಟು ಬೂದಿಯಾಯಿತು. ಟೈಗ್ರಿಸ್ ನದಿಗೆ ಬಿಸಾಡಿದ ಪುಸ್ತಕಗಳು ಒಂದು ದಡದಿಂದ ಇನ್ನೊಂದು ದಡಕ್ಕೆ ಸೇತುವೆ ಯಂತಾದುವು. ಬಾಗದಾದಿನ ಕೊಳ್ಳೆಯಿಂದ ಸಾವಿರಕ್ಕೆ ಒಂದು ಗ್ರಂಥವಾದರೂ ಉಳಿಯಲಿಲ್ಲ. ಅಲ್ಲಿಯ ವಿದ್ವಾಂಸರು, ವೈದ್ಯರು, ವಿಜ್ಞಾನಿಗಳೆಲ್ಲರೂ,ದಯದಾಕ್ಷಿಣ್ಯ ವಿಲ್ಲದೆ ಕೊಲೆಯಾದರು. 'ಎಂದಿಗಾದರೂ ಅಷ್ಟು ಮಹತ್ತರ ಮತ್ತು ಉಜ್ವಲ ನಾಗರಿಕತೆ ಅಷ್ಟುಬೇಗನೆ ಬೆಂಕಿಗೆ ಆಹುತಿಯಾಗಿ ರಕ್ತದಿಂದ ಶಮನವಾಗಿರಲಾರದು' ಎಂದು ಬ್ರೌನ್ ವರ್ಣಿಸಿದ್ದಾನೆ.

ಅರಬ್ಬಿ ವೈದ್ಯ ಮಹಾತ್ಮೆ

ಇಸ್ಲಾಮ್ ಚಕ್ರಾಧಿಪತ್ಯ ೫ ಶತಮಾನಗಳ ಕಾಲ ನಾಗರಿಕತೆಯಲ್ಲೂ, ಸಂಸ್ಕೃತಿಯಲ್ಲೂ ಪ್ರಪಂಚದಲ್ಲೇ ಎಲ್ಲೂ ಇಲ್ಲದ ಪ್ರಖ್ಯಾತಿ ಪಡೆದಿತ್ತು. ಯೂರೋಪ್ ಅನಾಗರಿಕತೆಯಲ್ಲೂ, ಅಜ್ಞಾನದಲ್ಲೂ ಮುಳುಗಿದ್ದಾಗ, ಇಸ್ಲಾಮ್ ಆಧಿಪತ್ಯ, ಪುಸ್ತಕ ಭಂಡಾರಗಳನ್ನೂ, ವಿದ್ಯಾಸಂಸ್ಥೆಗಳನ್ನೂ ಸ್ಥಾಪಿಸಿ ಮೊಳಗುತ್ತಿತ್ತು. ಕೈರೊ ಪಟ್ಟಣದ ಮನ್ಸೂರಿ ಆಸ್ಪತ್ರೆಯ ಪುಸ್ತಕ ಭಂಡಾರ ಕಾರುಬಾರು ನೋಡಲು ೬ ಅಧಿಕಾರಿಗಳನ್ನು ನೇಮಿಸಿಕೊಳ್ಳುವಷ್ಟು ದೊಡ್ಡದಾಗಿತ್ತು. ಬಾಗದಾದ್, ಬೊಕಾರ, ಕೈರೊ, ಕಾರ್ಡೋವಗಳಲ್ಲೆಲ್ಲಾ ದೊಡ್ಡದೊಡ್ಡ ಪುಸ್ತಕ ಭಂಡಾರ ಗಳಿದ್ದವು. ಇವುಗಳಲ್ಲೆಲ್ಲಾ ವಕೀಲರು, ಜ್ಯೋತಿಷಿಗಳು, ವೈದ್ಯರು, ಗಣಿತಶಾಸ್ತ್ರಜ್ಞರು

ಸೇರಿ ಸಮಾಲೋಚನೆ ನಡೆಸುತ್ತಿದ್ದರು. ಅಲ್ಲದೆ ಈ ಪಟ್ಟಣಗಳಲ್ಲೆಲ್ಲಾ ದೊಡ್ಡ ದೊಡ್ಡ ಆಸ್ಪತ್ರೆಗಳಿದ್ದವು. ಕೈರೊ ಪಟ್ಟಣದ ಮನ್ಸೂರಿ ಆಸ್ಪತ್ರೆ ಎಲ್ಲಕ್ಕಿಂತಲೂ ಮೇಲಾಗಿತ್ತು. ೧೨೮೪ರಲ್ಲಿ ಇದರ ಕಟ್ಟಡ ಮುಗಿದು ಒಂದು ವರ್ಷಕ್ಕೆ ೧ ಲಕ್ಷ ಡಾಲರುಗಳಷ್ಟು ಆದಾಯವಿತ್ತು. ಬೇರೆಬೇರೆ ರೋಗಗಳಿಗೆ ಬೇರೆಬೇರೆ ರೋಗಿ ಕೋಣೆಗಳಿದ್ದವು. ಹೊರಗಿನ ರೋಗಿಗಳಿಗೆ ತಕ್ಕ ಸೌಕರ್ಯಗಳಿದ್ದವು. ರೋಗಿಗಳನ್ನು ಅವರವರ ಮನೆಯಲ್ಲೇ ನೋಡಿ ಉಪಚಾರ ಮಾಡಲು ಅನುಕೂಲಗಳಿದ್ದವು. ಕೊರಾನ್ ಹಗಲೂ ರಾತ್ರಿ ಪಠಿಸಲಾಗುತ್ತಿತ್ತು. ರೋಗಿಗಳಿಗೆ ಕಥೆ ಕೇಳಲೂ ಸಂಗೀತ ಕೇಳಲೂ ಅನುಕೂಲಗಳಿದ್ದವು. ಪ್ರತಿ ರೋಗಿಯೂ ಆಸ್ಪತ್ರೆ ಬಿಟ್ಟು ಮನೆಗೆ ಹೋಗುವಾಗ ೧೨ ಡಾಲರಷ್ಟು ಹಣ ಕೊಟ್ಟು ಕಳುಹಿಸುತ್ತಿದ್ದರು. ಹೀಗೆ ಅಭಿವೃದ್ಧಿಯಾಗುವುದರಲ್ಲೇ ಇಸ್ಲಾಮ್ ಸಾಮ್ರಾಜ್ಯ ಕೊನೆಗಾಣಲು ಪ್ರಾರಂಭವಾಯಿತು. ಕಾರ್ಡೋವ ೧೨೩೬ ರಲ್ಲಿ ಕೊನೆಗಂಡಿತು. ಬಾಗದಾದು ೧೨೫೮ರಲ್ಲಿ ನಾಶವಾಯಿತು. ಆದರೂ ಗ್ರೆನಡ ಇನ್ನೂ ೨೦೦ ವರ್ಷಗಳ ಕಾಲ ಶತ್ರುಗಳನ್ನು ದೂರವಿಟ್ಟು ಪ್ರಬಲವಾಗಿಯೇ ಇತ್ತು. ಯೂರೋಪು ಕಗ್ಗತ್ತಲಲ್ಲಿದ್ದಾಗ ಮುಸ್ಲಿಮ್ ವೈದ್ಯರು, ಗ್ರೀಕರ ವೈದ್ಯಶಾಸ್ತ್ರಗಳನ್ನೆಲ್ಲಾ ಅರಬ್ಬಿ ಭಾಷೆಗೆ ಭಾಷಾಂತರ ಮಾಡಿದರು. ಅರಬ್ಬಿ ಭಾಷೆಯಿಂದ ಲ್ಯಾಟಿನ್ ಭಾಷೆಗೆ ಭಾಷಾಂತರವಾದ ಗ್ರಂಥಗಳಿಂದಲೇ ಯೂರೋಪ್ ಜನರು ಹಿಪ್ಪೊಕ್ರೇಟಿಸ್, ಗ್ಯಾಲೆನ್, ಪಾಲ್, ಡಿಯೊಸ್ಕೊರಿಡಿಸ್ ಮುಂತಾದ ಪಂಡಿತರ ಮಹತ್ವವನ್ನು ತಿಳಿಯಲು ಸಾಧ್ಯವಾಯಿತು. ಈಗಲೂ, ಗ್ಯಾಲೆನ್ ಬರೆದ ೭ ಅಂಗ ರಚನೆಯ ಪುಸ್ತಕಗಳು ಅರಬ್ಬಿ ಭಾಷೆಯಲ್ಲಿವೆ. ಗ್ರೀಕ್ ವೈದ್ಯಶಾಸ್ತ್ರವನ್ನು ಪ್ರಪಂಚಕ್ಕೆ ಉಳಿಸಿಕೊಟ್ಟಿರುವುದೇ ಇಸ್ಲಾಮ್ ಮತದ ಒಂದು ದೊಡ್ಡ ಕೊಡುಗೆಯಾಗಿದೆ. ಅದರ ಸ್ವಂತ ಆಲೋಚನಾಶಕ್ತಿಯೂ ಸಾಕಷ್ಟು ಸೇವೆ ಸಲ್ಲಿಸಿದೆ.

೨೦. ಮಧ್ಯಯುಗದ ವೈದ್ಯಶಾಸ್ತ್ರ

ಮಧ್ಯಯುಗದ ಅಂಧಕಾರ

೪೭೬ರಲ್ಲಿ ಕಾನ್‌ಸ್ಟಾಂಟೈನ್ ಚಕ್ರವರ್ತಿ ರೋಮ್ ಸಾಮ್ರಾಜ್ಯವನ್ನು ತ್ಯಜಿಸಿ ಬೈಸಾಂಟಿಯಮ್‌ಗೆ ವರ್ಗಾಯಿಸಿದ ಮೇಲೆ, ರೋಮ್‌ನಗರ ಅಂಧಕಾರದಲ್ಲಿ ಮುಳುಗಿತು. ವಾಸ್ತವವಾಗಿ, ೧೯೯ರಲ್ಲಿ, ಗ್ಯಾಲೆನ್ ಸತ್ತಾಗಿನಿಂದಲೇ, ಅಂಗರಚನೆಶಾಸ್ತ್ರ ಮತ್ತು ದೇಹಶಾಸ್ತ್ರಗಳ ಶೋಧನೆಗಳೆಲ್ಲಾ ಕೊನೆಗಂಡು, ಅಂಧಕಾರ ಪ್ರಾರಂಭವಾಗಿತ್ತು. ಇದಕ್ಕೆ ಅನೇಕ ಕಾರಣಗಳನ್ನು ಹೇಳಲಾಗಿದೆ. ಜನರಲ್ಲಿ ವರ್ತನೆಯೇ ಬದಲಾಗುತ್ತ ಬಂದಿತ್ತು. ಜೀವನವೇ ಬೇಡವಾಗಿತ್ತು. ಪ್ರಪಂಚದಲ್ಲಿ ಮಂಜು ಕವಿದು ಎಲ್ಲೆಲ್ಲೂ ನಿರಾಶೆಯುಂಟಾಗಿತ್ತು. ಇನ್ನೂ ಮೇಲಾಗಿ ಕ್ರೈಸ್ತ ಮತದ ಪ್ರಾರಂಭವೇ ಆ ಅಂಧಕಾರಕ್ಕೆ ಮುಖ್ಯ ಕಾರಣವೆಂದು ಅನೇಕರು ಅಭಿಪ್ರಾಯಪಟ್ಟಿದ್ದರು. ಆದರೆ ಬೈಸಾಂಟಿಯಮ್ ಪಟ್ಟಣದ ಗ್ರೀಕರ, ರೋಮನ್ನರ ಸಂಸ್ಕೃತಿ ಅರಬ್ಬಿ ದೇಶಕ್ಕೆ ಹರಡಿ, ಅಲ್ಲಿ ಪ್ರಗತಿಯಾಗಿ ಅಷ್ಟರಲ್ಲೇ ಪ್ರಪಂಚದ ದೃಶ್ಯವೇ ಬದಲಾಯಿಸಲು ಆರಂಭವಾಯಿತು. ಬಾಗದಾದಿನಿಂದ ಕಾಡೊರ್ಗೀವ ವರೆವಿಗೆ ಅರಬ್ಬಿ ಸಾಮ್ರಾಜ್ಯ ಬೆಳೆಯಿತು. ಅರಬ್ಬಿ ನಾಗರಿಕತೆ ಹೀಗೆ ಹಬ್ಬುತ್ತಿದ್ದಾಗ ಯೂರೋಪಿನಲ್ಲೆಲ್ಲಾ ಕಗ್ಗತ್ತಲು ಕವಿದಿತ್ತು (ಕಾಳಯುಗ). ಸುಮಾರು ೪೦೦ ರಿಂದ ೧೨೦೦ರ ತನಕ ಯಾವ ಅಭಿವೃದ್ಧಿಯೂ ಕಾಣಿಸಲಿಲ್ಲ. ಇಟಲಿಯ ದಕ್ಷಿಣದಲ್ಲಿ ಸಿಸಿಲಿಯಲ್ಲಿ ಮಾತ್ರ ಗ್ರೀಕ್ ಭಾಷೆ ಮತ್ತು ಸಂಸ್ಕೃತಿ ಅಲ್ಲಲ್ಲಿ ಸ್ವಲ್ಪ ಉಸಿರಾಡುತ್ತಿತ್ತು. ಹೀಗಿರುವಾಗ ನಾರ್ಮಂಡಿ ದೇಶದ ಜನರು ಇಂಗ್ಲೆಂಡಿನ ಮೇಲೆ ಮುತ್ತಿಗೆ ಹಾಕಿದ ಹಾಗೆಯೇ ಇಟಲಿಯ ಮೇಲೂ ಮುತ್ತಿಗೆ ಹಾಕಿ, ಅಲ್ಲಿಂದ ಅನಾಯಕತೆಯನ್ನು ವ್ಯವಸ್ಥೆಪಡಿಸಿ ಸುಧಾರಣೆ ತಂದರು. ನಾರ್ಮಂಡಿಯ ಸ್ಕಾಂಡಿನೇವಿಯನ್ ಮತ್ತು ಫ್ರಾಂಕಸ್ ಬುಡಕಟ್ಟಿನ ಮಿಶ್ರ ಸಂತತಿಯ ಆಡಳಿತಗಾರರ ಕೈವಾಡದಲ್ಲಿ ಜ್ಞಾನ ಪುನಃ ಉದಯವಾಯಿತು. ಇದರ ಫಲವಾಗಿ ನೇಪಲ್ಸ್ ಪಟ್ಟಣಕ್ಕೆ ಹತ್ತಿರವಿದ್ದ ಸಲೆರ್ನೊ ಎಂಬಲ್ಲಿ ೯ನೇ ಶತಮಾನದಲ್ಲಿ ಒಂದು ಸಾಧಾರಣ ವೈದ್ಯಶಾಲೆ ಆರಂಭವಾಯಿತು.

ಕ್ರೈಸ್ತ ಸಂತರ ಮಠ

ನಾರ್ಮನರು ತಲೆಯೆತ್ತುವುದಕ್ಕಿಂತ ಮುಂಚೆ, ಕ್ರೈಸ್ತ ಸಂತರ ಮಠಗಳಲ್ಲಿ ವೈದ್ಯಶಾಸ್ತ್ರ ಗುಟ್ಟಾಗಿ ಬೆಳೆಯುತ್ತಾ ಬರುತ್ತಿತ್ತು. ರೋಗಿಗಳನ್ನು ಸಂರಕ್ಷಿಸುವುದೇ ಕ್ರಿಶ್ಚಿಯನ್ನರ ಮುಖ್ಯ ಉದ್ದೇಶವಾಗಿದ್ದುದರಿಂದ, ವೈದ್ಯಶಾಸ್ತ್ರ ಅಲ್ಲಿ ಬೆಳೆಯಲು


ತೊಂದರೆ ಇರಲಿಲ್ಲ. ಗ್ರೀಕ್ ಭಾಷೆಯಲ್ಲಿದ್ದ ವೈದ್ಯಶಾಸ್ತ್ರದ ಹಸ್ತಪ್ರತಿಗಳು ಈ ಮಠಗಳ ವಶಕ್ಕೆ ಬಂದು ಇವನ್ನು ಅನೇಕ ಸನ್ಯಾಸಿಗಳು ಭಾಷಾಂತರಿಸಲಾರಂಭಿಸಿದರು. ಆದರೂ ಮಠಗಳಲ್ಲಿ ರೋಗಿಗಳನ್ನು ಗುಣಪಡಿಸುತ್ತಿದ್ದ ಕ್ರಮಗಳು ಶಾಸ್ತ್ರೀಯವಾಗಿರಲಿಲ್ಲ. ದೇವತಾ ಪ್ರಾರ್ಥನೆ, ಮಂತ್ರ, ಜಪತಪಗಳು ಔಷಧಗಳ ಬದಲಾಗಿ ಉಪಯೋಗದಲ್ಲಿದ್ದವು. ಹರಕೆ, ಮುಡಿ, ಗುಡಿಯಲ್ಲಿನ ನಿದ್ರೆಗಳು ಬಳಕೆಯಲ್ಲಿದ್ದವು. ಮನುಷ್ಯನ ತಪ್ಪುಗಳಿಗೆ ಶಿಕ್ಷೆಯಾಗಿ ರೋಗ ಬರುತ್ತದೆಂದು ಸನ್ಯಾಸಿಗಳ ನಂಬಿಕೆಯಾಗಿತ್ತು. ಎಸ್ಕುಲೇಪಿಯಸ್ ದೇವಾಲಯಗಳ ಕ್ರಮಗಳೆಲ್ಲಾ ಸನ್ಯಾಸಿಗಳ ಮಠಗಳಲ್ಲಿ ಪುನಃ ಜಾರಿಗೆ ಬಂದಿದ್ದವು.

ಕಾಸ್‌ಮಾಸ್ ಮತ್ತು ಡಾಮಿಯನ್

ಕಾಸ್‌ಮಾಸ್ ಮತ್ತು ಡಾಮಿಯನ್ ಕ್ರೈಸ್ತ ಸಂತರು ರೋಗ ಗುಣಪಡಿಸುವ ಕ್ರಮಗಳನ್ನು ಅನುಸರಿಸುತ್ತಿದ್ದವರಲ್ಲಿ ಮೊದಲನೆಯವರು. ಇವರು ಮೊದಲು ಅರಬ್ಬಿ ವೈದ್ಯರಾಗಿದ್ದರು. ದೂರ ಪ್ರಯಾಣವನ್ನು ಬೆಳೆಸಿ, ಕ್ರೈಸ್ತ ಮತವನ್ನು ಉಪದೇಶಿಸುವುದೇ ಇವರ ಮುಖ್ಯ ಕರ್ತವ್ಯ. ರೋಗಿಗಳನ್ನು ಉಪಚರಿಸುವುದೂ ಇವರ ಗುರಿಯಾಗಿತ್ತು. ಕಾಲಿನಲ್ಲಿ ಏಡಿಗಂತಿಯಾಗಿ ನರಳುತ್ತಿದ್ದವನ ಕಾಲನ್ನು ತೆಗೆದು ಬೇರೊಂದು ರೋಗದಿಂದ ಸತ್ತಿದ್ದ ಒಬ್ಬ ನೀಗ್ರೋನ ಕಾಲನ್ನು ಕಸಿ ಮಾಡಿ,ಏಡಿಗಂತಿಯ ರೋಗಿಯನ್ನು ಬದುಕಿಸಿದ ಮಹತ್ವವನ್ನು ಜನರು ನೋಡಿ ದಿಗ್ಭ್ರಮೆಗೊಂಡಿದ್ದರು. ಇವರಿಬ್ಬರ ಉಪದೇಶಗಳು ಕ್ರೈಸ್ತ ಮತಕ್ಕೆ ವಿರೋಧವಾಗಿದ್ದುದರಿಂದ, ಇವರಿಬ್ಬರೂ ೩೦೩ ರಲ್ಲಿ ಧರ್ಮ ಬಲಿಯಾದ ಮೇಲೆ ಅವರ ಹೆಸರಿನಲ್ಲಿ ರೋಮ್, ಗಾಲ್, ಗ್ರೀಸ್, ಏಷ್ಯ ಮೈನರ್ ಮತ್ತು ಬೈಸಾಂಟಿಯಮ್‌ಗಳಲ್ಲೆಲ್ಲಾ ಮಂದಿರಗಳನ್ನು ಕಟ್ಟಿಸಿ ಪೂಜೆ ಸಲ್ಲಿಸುತ್ತಿದ್ದರು. ಬೈಸಾಂಟಿಯಮ್ ಒಂದರಲ್ಲೇ ಅವರಿಗೆ ಅರ್ಪಿಸಲಾಗಿದ್ದ ೬ ದೇವಾಲಯಗಳಿದ್ದವು.

ಇತರ ಸಂತರು

ಆಗ ಇವರ ಹಾಗೆ ಇನ್ನೂ ಅನೇಕ ಸಂತರಿದ್ದರು. ಆದರೆ ಕ್ರೈಸ್ತರ ಅಭಿಪ್ರಾಯಕ್ಕೆ ವಿರೋಧವಾಗಿರುವವರಿಗೆ ಶಿಕ್ಷೆ ದೊರೆಯುತ್ತಿತ್ತು. ಮನುಷ್ಯನ ಭವಿಷ್ಯ ಗ್ರಹಗಳ ಪ್ರಬಲತೆಗೆ ಒಳಗಾಗಿದೆ ಎಂದು ಸಂತ ಪ್ರಿಸಿಲ್ಲಿಯನ್ ಹೇಳಿದದಕ್ಕೆ ಅವನನ್ನು ಜೀವಸಹಿತ ಸುಡಲಾಯಿತು. ರಾಶಿಗಳ ಪ್ರಭಾವದ ಬದಲು ಶರೀರದ ಪ್ರತಿಯೊಂದು ಅಂಗವೂ ಸಂತರ ಅಧೀನದಲ್ಲಿದೆಯೆಂದು ಆಗಿನ ನಂಬಿಕೆಯಾಗಿದ್ದುದರಿಂದ, ಪ್ರತಿಯೊಂದು ಅಂಗಕ್ಕೂ ಪ್ರಭಾವವಿದ್ದ ಸಂತರ ಹೆಸರನ್ನು ಕೊಟ್ಟಿದ್ದರು. ಗಂಟಲಿಗೆ ಸಂತ ಬ್ಲಾಸಿಯನ್, ಶ್ವಾಸಕೋಶಕ್ಕೆ ಸಂತ ಬರ್ನಾರ್ಡಿನ್, ಹಲ್ಲಿಗೆ ಸಂತ ಅಪಲ್ಲೋನಿಯ, ಹೊಟ್ಟೆಗೆ ಸಂತ ಇರಾಸ್ಮಸ್ ಪ್ರಭಾವವಿತ್ತೆಂದು ನಂಬಿದ್ದರು. ರೋಗ ಬರುವುದಕ್ಕೂ, ರೋಗ ಗುಣವಾಗುವುದಕ್ಕೂ ಸಂತರೇ ಕಾರಣರೆಂದೂ



ಸಂತ ಸೆಬ್ಯಾಸ್ಟಿಯನ್

ನಂಬಿದ್ದರು. ರೋಮ್ ನಗರಕ್ಕೆ ಸಂತ ಸೆಬ್ಯಾಸ್ಟಿಯನ್ನನ ಶವವನ್ನು ತರುವ ತನಕ, ಆಗ(೬೮೩) ಹರಡಿದ್ದ ಪ್ಲೇಗು ನಿಲ್ಲದೆಂದು ನಂಬಿದ್ದರಿಂದ ಅವನು ಬಾಣಗಳಿಗೆ ತುತ್ತಾಗಬೇಕಾಯಿತು. ಅಪಸ್ಮಾರ ಮತ್ತು ತಲೆದಿಪ್ಪಟಿಗಳಿಗೆ ಸಂತ ಅವರ್ಟಿನ್‌ನ್ನು ಪ್ರಾರ್ಥಿಸಿದರೆ ಗುಣವಾಗುತ್ತದೆಂದು ನಂಬಿದ್ದರು. ಮಲದಾರದ ರೋಗಗಳಿಗೆ ಸಂತ ಫಿಯಾಕರ್ ಜವಾಬ್ದಾರನೆಂದೂ ನಂಬಿದ್ದರು.

ಪ್ಲೇಗ್ ರೋಗಕ್ಕೆ ಸಂಬಂಧಪಟ್ಟ ಸಂತ ರಾಕ್‌ನ ಇತಿಹಾಸದ ಪ್ರಕಾರ ೧೪ನೇ ಶತಮಾನದ ಮೊದಲನೆಯ ಭಾಗದಲ್ಲಿ ದೊಡ್ಡ ಮನೆತನಕ್ಕೆ ಸೇರಿದ ಸಂತ ರಾಕ್, ಮಾಂಟಿಪೆಲ್ಲಿಯರ್‌ನಲ್ಲಿ ಹುಟ್ಟಿ, ಸಕಲ ಐಶ್ವರ್ಯವನ್ನೂ ಬಡವರಿಗೆ ತ್ಯಾಗ ಮಾಡಿ ಪ್ಲೇಗ್ ರೋಗಿಗಳನ್ನು ಶುಶ್ರೂಷೆ ಮಾಡುತ್ತಿದ್ದನು. ಹೀಗೆ ಸಹಾಯ ಮಾಡುತ್ತಿದ್ದಾಗ ಅವನಿಗೂ ಅದೇ ರೋಗ ಬಂದು ಸಾಯುವ ಸ್ಥಿತಿಗೆ ಬಂದನು. ಒಂದು ರಾತ್ರಿ ದಿವ್ಯ ದೇವತೆ ಬಂದು ಅವನನ್ನು ಗುಣಪಡಿಸಿ ಹೋದಳು. ಅನಂತರ ಸಂತ ರಾಕ್ ತನ್ನ ಪಟ್ಟಣವಾದ ಮಾಂಟಿಪೆಲ್ಲಿಯರ್‌ಗೆ ಹಿಂತಿರುಗಿದಾಗ, ಜನರು ಅವನನ್ನು ಗುರುತಿಸದೆ, ಗೂಢಚಾರನೆಂದು ಭಾವಿಸಿ ಸೆರೆಮನೆಯಲ್ಲಿಟ್ಟರು. ಕೆಲವು ದಿನ ಕಳೆದ ಮೇಲೆ ಅಲ್ಲೇ ಸಾಯುವನು. ೧೫ನೇ ಶತಮಾನದಲ್ಲಿ ಇವನ ಉಪಾಸನೆ ಉಚ್ಚ ಸ್ಥಾನ ಹೊಂದಿ, ಇವನ ಪ್ರತಿಮೆಯನ್ನು ರೋಗ ನಿವಾರಣೆಗೋಸ್ಕರ ಮೆರವಣಿಗೆಯಲ್ಲಿ ಒಯ್ಯುವ ರೂಢಿ ಬಂದಿತ್ತು.

ಆಗಿನ ಕಾಲದಲ್ಲಿ ಸಂತರ ಹೆಸರುಗಳನ್ನು ರೋಗಗಳಿಗೂ ನಾಮಕರಣ ಮಾಡಿದ್ದರು. ಕಂಪವಾತ ರೋಗಕ್ಕೆ ಸಂತ ವೈಟಸ್ ಕುಣಿತವೆಂದು ಇಟ್ಟದ್ದ ಆ ಹೆಸರು ಈಗಲೂ ರೂಢಿಯಲ್ಲಿದೆ. ಸಂತ ವೈಟಸ್ ಸಿಸಿಲಿ ದೇಶಕ್ಕೆ ಸೇರಿದ ಸನ್ಯಾಸಿ. ಮಧ್ಯ ಯುಗದ ಜರ್ಮನಿ, ಇಟಲಿ, ಹಾಲೆಂಡುಗಳಲ್ಲಿ ಸಂತ ವೈಟಸ್ ಕುಣಿತ ಸಾಂಕ್ರಾ



ಸಂತ ವೈಟಸ್ ಕುಣಿತ (೧೩೭೪)

ಮಿಕವಾಗಿತ್ತು. ರೋಗಿಗಳು ಸುಸ್ತಾಗಿ ಕೆಳಕ್ಕೆ ಬೀಳುವವರೆವಿಗೂ ವಿಚಿತ್ರವಾಗಿ ಕುಣಿಯುತ್ತಿದ್ದರು. ಇಟಲಿಯಲ್ಲಿ ಒಂದು ಬಗೆಯ ಜೇಡರ ಹುಳುವಿನ ಕಡಿತದಿಂದಲೂ ಜರ್ಮನಿಯಲ್ಲಿ ದೆವ್ವಗಳಿಂದಲೂ ಈ ರೋಗ ಬರುತ್ತದೆಂದು ತಿಳಿದಿದ್ದರು. ಜರ್ಮನಿಯಲ್ಲಿ ೧೪ನೇ ಶತಮಾನದಲ್ಲಿ ವ್ಯಾಪಕವಾಗಿತ್ತು. ಇಟಲಿಯಲ್ಲಿ ೧೭ನೇ ಶತಮಾನದಲ್ಲಿತ್ತು. ಇದು ಒಂದು ಸಾಮಾನ್ಯ ರೋಗಲಕ್ಷಣವಾದ್ದರಿಂದ, ಅದಕ್ಕೆ ಸಂತರ ಹೆಸರನ್ನು ಕೊಡಬಾರದೆಂದು ಪ್ಯಾರಸೆಲ್ಸಸ್ ಸಾಧಿಸುವ ತನಕ ಈ ರೋಗವನ್ನು ಹೋಗಲಾಡಿಸಲು ದೇವತಾ ಪ್ರಾರ್ಥನೆಗಳೇ ನಡೆಯುತ್ತಿದ್ದವು. ಸಂತ ಆನ್ತೊನಿ ಜ್ವಾಲೆ ಎಂಬ ಮತ್ತೊಂದು ರೋಗ ಸಾಂಕ್ರಾಮಿಕವಾಗಿ ಹಬ್ಬಿ ಅನೇಕ ಸಾವುಗಳಾಗಿದ್ದವು. ಈ ರೋಗ ರೈ ಧಾನ್ಯದಿಂದ ಮಾಡಿದ ರೊಟ್ಟಿ ತಿಂದರೆ ಬರುತ್ತದೆಂದು ತಿಳಿದಿದ್ದರು. ಈ ರೋಗದಲ್ಲಿ ಕೈಕಾಲುಗಳಲ್ಲಿ ತೀವ್ರವಾದ ಉರಿ ಮತ್ತು ನೋವಾಗುತ್ತಿದ್ದುದರಿಂದ ಜ್ವಾಲೆ ಎಂದು ಹೆಸರು ಬಂದಿತ್ತು. ಎರ್ಗಟ್ ಬೂಷ್ಟಿನ ವಿಷತೆಯಿಂದಾದ ಈ ರೋಗ ೧೦ ಮತ್ತು ೧೧ನೇ ಶತಮಾನಗಳಲ್ಲಿ ಫ್ರಾನ್ಸಿನಲ್ಲಿ ಸಾಂಕ್ರಾಮಿಕವಾಗಿದ್ದು, ೧೯ನೇ ಶತಮಾನದಲ್ಲಿ ರಷ್ಯದಲ್ಲಿ ಸಾಂಕ್ರಾಮಿಕವಾಗಿತ್ತು.

ಮಾಂಟೆ ಕ್ಯಾಸ್ಸಿನೊ

ಯೂರೋಪಿನಲ್ಲಿ ಕಗ್ಗತ್ತಲು ಹೀಗೆ ಕವಿದಿದ್ದಾಗ ಅನೇಕ ರಾಜರು ಜ್ಞಾನ ಸಂಪಾದಿಸಲು ಆಗಿನ ಕಾಲದ ಸನ್ಯಾಸಿಗಳಿಗೆ ಸಾಕಷ್ಟು ಪ್ರೋತ್ಸಾಹ ಕೊಟ್ಟಿದ್ದರು. ತಿಯೊಡೋರಿಕ್ (೪೫೪--೫೨೬) ತನ್ನ ರಾಜ್ಯದಲ್ಲಿ ರೋಗಿಗಳನ್ನು ಉಪಚರಿಸಲು ಉತ್ತೇಜನ ಕೊಟ್ಟಿದ್ದನು. ಅವನ ಮುಖ್ಯಮಂತ್ರಿ ಕ್ಯಾಸಿಯೊಡೋರಸ್ (೪೯೦–

೫೮೫) ತನ್ನ ಜನ್ಮಸ್ಥಳವಾದ ಕ್ಯಾಲಿಬ್ರಿಯದಲ್ಲಿ ಎರಡು ಸನ್ಯಾಸಿ ಮಠಗಳನ್ನು ಕಟ್ಟಿಸಿದ್ದನು. ನರ್ಸಿಯದ ಸಂತ ಬೆನಿಡಿಕ್ಟ್ ಸ್ಥಾಪಿಸಿದ್ದ ಬೆನಿಡಿಕ್ಟೈನ್ ವರ್ಗದವರಲ್ಲಿ ರೋಗಿಗಳ ಹಿತವೇ ಮುಖ್ಯ ಉದ್ದೇಶವಾಗಿತ್ತು. ಗ್ರೀಕ್ ಭಾಷೆಯನ್ನು ಕಲಿಯಬೇಕೆಂದೂ ಹಿಪ್ಪೊಕ್ರೇಟಿಸ್, ಗ್ಯಾಲೆನ್, ಡಿಯೊಸ್ಕೊರಿಡಿಸ್‌ರ ಗ್ರಂಥಗಳನ್ನು ಓದಬೇಕೆಂದೂ, ಆಗಿನ ಹಸ್ತಪ್ರತಿಗಳನ್ನು ನಕಲು ಮಾಡಬೇಕೆಂದೂ ಆಜ್ಞಾಪಿಸಿದ್ದನು. ಸಲೆರ್ನೊ ಹತ್ತಿರವಿದ್ದ ಮಾಂಟೆ ಕ್ಯಾಸ್ಸಿನೊನಲ್ಲಿ (೫೨೯) ಬೆನಿಡಿಕ್ಟ್ ಒಂದು ಸನ್ಯಾಸಿ ಮಠವನ್ನು ಕಟ್ಟಿಸಿ ಪ್ರೋತ್ಸಾಹ ಕೊಟ್ಟಿದ್ದನು. ಅಲ್ಲಿ ಆಸ್ಪತ್ರೆ ಮತ್ತು ವೈದ್ಯ ವಿದ್ಯಾಶಾಲೆಯೂ ಇದ್ದವು. ೧೦೧೪ ರಲ್ಲಿ ಎರಡನೆಯ ಹೆನ್ರಿ ಚಕ್ರವರ್ತಿಗೆ ರೋಗ ಗುಣವಾದ ವಿಷಯ ಇತಿಹಾಸದ ಕಥೆಯಾಗಿದೆ. ಮೂತ್ರಕೋಶದ ಕಲ್ಲಿನಿಂದುಂಟಾದ ನೋವಿಗೋಸ್ಕರ ಮಾಂಟೆ ಕ್ಯಾಸ್ಸಿನೋಗೆ ಒಂದು ರಾತ್ರಿ ನಿದ್ದೆಹೋಗಿದ್ದಾಗ, ಸಂತ ಬೆನಿಡಿಕ್ಟ್ ಸ್ವಪ್ನದಲ್ಲಿ ಬಂದು, ಮೂತ್ರಕೋಶದಿಂದ ಕಲ್ಲು ತೆಗೆದನೆಂದು ಹೇಳಲಾಗಿದೆ. ಮತ್ತೊಂದು ಹೇಳಿಕೆಯ ಪ್ರಕಾರ, ಹೆನ್ರಿ ನಿದ್ರಿಸುತ್ತಿದ್ದಾಗ ಸಂತ ಬೆನಿಡಿಕ್ಟ್ ಕನಸಿನಲ್ಲಿ ಬಂದು ಆಶೀರ್ವಾದಿಸಿ ಹೋದ ಮೇಲೆ, ಮರು ದಿನ ಬೆಳಗ್ಗೆ ಎದ್ದ ಕೂಡಲೇ ಮೂತ್ರದಲ್ಲಿ ಮೂರು ಕಲ್ಲುಗಳನ್ನು ಹೊಯ್ದನೆಂದು ಹೇಳಿದೆ.

ಈ ಮಾಂಟೆ ಕ್ಯಾಸ್ಸಿನೊ, ಸಲೆರ್ನೊ ಹತ್ತಿರವಿದ್ದುದರಿಂದ, ಅದಕ್ಕೆ ಬಹಳ ಬೆಂಬಲ ಕೊಟ್ಟಿತ್ತು. ವೈದ್ಯ ವಿದ್ಯಾಭ್ಯಾಸಕ್ಕೆ ಕ್ರಿ.ಶ. ೭೬೮ ರಲ್ಲಿ ಶಾರ್ಲಮಾನ್ ಚಕ್ರವರ್ತಿಯೂ ಕ್ರಿ.ಶ. ೮೯೧ ರಲ್ಲಿ ಆಲ್ಫ್ರೆಡ್ ಮಹಾಚಕ್ರವರ್ತಿಯೂ ಪ್ರೋತ್ಸಾಹ ಕೊಟ್ಟು ಜನಾನುರಾಗಿಗಳಾಗಿದ್ದರು.

ಸಲೆರ್ನೊ ವೈದ್ಯಕೇಂದ್ರ

ಸಲೆರ್ನೊ

ನೇಪಲ್ಸ್ ಪಟ್ಟಣದ ದಕ್ಷಿಣಕ್ಕೆ ೩೫ ಮೈಲಿ ದೂರದಲ್ಲಿದ್ದ ಸಲೆರ್ನೊ ಪಟ್ಟಣ ಯುರೋಪಿನಲ್ಲೇ ಒಂದು ಸುವ್ಯವಸ್ಥಿತ ಸುಪ್ರಸಿದ್ಧ ವೈದ್ಯ ಕೇಂದ್ರವಾಗಿತ್ತು. ೫ ಶತಮಾನಗಳ ಕಾಲ ನಾರುತ್ತಿದ್ದ ವೈದ್ಯಶಾಸ್ತ್ರ ಇಲ್ಲಿ ತಲೆ ಎತ್ತಿತ್ತು. ಇಲ್ಲಿಯ ತನಕ ವೈದ್ಯಶಾಸ್ತ್ರ ಅಲ್ಲಲ್ಲಿ ಹರಡಿದ್ದ ಯೂರೋಪಿನ ಸನ್ಯಾಸಿಮಠಗಳಲ್ಲಿ ಹುದುಗಿಕೊಂಡಿತ್ತು. ಉತ್ತರ ದಿಕ್ಕಿನಿಂದ ಬೀಸುವ ಚಳಿಗಾಳಿಯನ್ನು ಪರ್ವತ ಶ್ರೇಣಿಗಳು ತಡೆದು ಸಲೆರ್ನೊ ಪಟ್ಟಣದ ಚಳಿಗಾಲದ ಹವಾಗುಣ ಹಿತಗೊಳಿಸುತ್ತಿದ್ದುದಲ್ಲದೆ ಬೇಸಿಗೆಯಲ್ಲಿ, ಪಟ್ಟಣ ಸಮುದ್ರತೀರದಲ್ಲಿದ್ದುದರಿಂದ, ತಂಗಾಳಿ ಬೀಸಿ ಬಿಸಿಲಿನ ತಾಪವನ್ನು ತಗ್ಗಿಸುತ್ತಿತ್ತು. ಈ ಸಮಶೀತೋಷ್ಣ ವಾಯುಗುಣವಿದ್ದುದರಿಂದ ಪಟ್ಟಣ ಬೆಳೆಯಲು ಅನುಕೂಲವಿತ್ತು. ಈ ಪಟ್ಟಣಕ್ಕೆ ನಾನಾ ಕಡೆಗಳಿಂದ ದಾರಿ



ಸಲೆರ್ನೊ ಪರ್ವತಗಳ ಮರೆಯಲ್ಲಿ ಸಲೆರ್ನೊ ಕೊಲ್ಲಿಯಲ್ಲಿ

ಸುಲಭವಾಗಿದ್ದುದರಿಂದಲೂ, ಸಿಸಿಲಿ ಮತ್ತು ದಕ್ಷಿಣ ಇಟಲಿಯಲ್ಲಿ ರೋಮನ್ ಸಾಮ್ರಾಜ್ಯ ನಾಶವಾದ ಮೇಲೂ ಗ್ರೀಕ್ ಭಾಷೆ ಬಳಕೆಯಲ್ಲಿದ್ದುದರಿಂದಲೂ ವೈದ್ಯ ವೃತ್ತಿ ಬೆಳೆಯಲು ಸಾಕಷ್ಟು ಸೌಕರ್ಯವಿತ್ತು. ಆದ್ದರಿಂದ ಅಲ್ಲಲ್ಲೇ ವೈದ್ಯರೂ, ವಿದ್ಯಾರ್ಥಿಗಳೂ ಸೇರುತ್ತಿದ್ದರೆಂದು ಹೇಳಲಾಗಿದೆ. ಸಲೆರ್ನೊ ಹವಾಗುಣದ ಪ್ರಯುಕ್ತ, ಒಂದು ಆರೋಗ್ಯ ಪ್ರವಾಸ ಸ್ಥಳವಾಗಿದ್ದುದರಿಂದ ರೋಗಿಗಳು ಸುಧಾರಿಸಿಕೊಳ್ಳಲು ಇಲ್ಲಿಗೆ ಬರುತ್ತಿದ್ದರು. ರೋಗಿಗಳು ಬಂದ ಕಡೆ ವೈದ್ಯರೂ ಬಂದರು.

ವೈದ್ಯಶಾಲೆ ಸ್ಥಾಪನೆ

ಸಲೆರ್ನೊ ವೈದ್ಯಶಾಲೆಯ ಸ್ಥಾಪನೆ ಖಚಿತವಾಗಿ ತಿಳಿಯದಿದ್ದರೂ, ಇತಿಹಾಸದ ಪ್ರಕಾರ ಯಹೂದ್ಯನಾದ ಇಲಿನಸ್ ಗ್ರೀಕನಾದ ಪಾಂಟಸ್, ಅರಬ್ಬಿಯ ಅಡಲೆ ಮತ್ತು ಲ್ಯಾಟನ್ನಿನ ಸಲೆರ್ನಸ್ ಈ ನಾಲ್ವರೂ ಸ್ಥಾಪಿಸಿದರೆಂದು ಹೇಳಲಾಗಿದೆ. ಆದ್ದರಿಂದ ಈ ವೈದ್ಯಶಾಲೆಗೆ ಜಾತಿಭೇದವಿಲ್ಲದೆ ಎಲ್ಲಾ ಜನಾಂಗದವರು ವಿದ್ಯೆ ಕಲಿಯಲು ಬರುತ್ತಿದ್ದರೆಂದು ಹೇಳಲಾಗಿದೆ. ಇದು ಒಂದು ಸಾಮಾನ್ಯ ಲೌಕಿಕರ ಸ್ಥಾಪನೆಯಾಗಿತ್ತೇ ಹೊರತು, ಹತ್ತಿರವಿದ್ದ ಮಾಂಟೆ ಕ್ಯಾಸ್ಸಿನೊ ಸನ್ಯಾಸಿಮಠದ ಹಂಗೇನಿರಲಿಲ್ಲ. ಆದರೂ ಮಾಂಟೆ ಕ್ಯಾಸ್ಸಿನೊ ಬೆನಿಡಿಕ್ಟೈನ್ ಸನ್ಯಾಸಿಗಳಿಗೂ, ಸಲೆರ್ನೊ ವೈದ್ಯರಿಗೂ ಸ್ನೇಹ ಬಾಂಧವ್ಯವಿತ್ತೆಂದೂ, ಹಾಗೂ ಮಾಂಟೆ ಕ್ಯಾಸ್ಸಿನೊದಲ್ಲಿದ್ದ ಗ್ರಂಥಗಳ ಹಸ್ತ ಪತ್ರಿಕೆಗಳು ಸಲೆರ್ನೋ ವೈದ್ಯರಿಗೆ ಸುಲಭವಾಗಿ ಲಭಿಸುತ್ತಿದ್ದವೆಂದೂ ತಿಳಿದುಬಂದಿದೆ. ಅನೇಕ ವಿಜ್ಞಾನಿಗಳ ಪ್ರಕಾರ ಈ ಸಲೆರ್ನೊ ವೈದ್ಯಶಾಲೆ ಸ್ಥಾಪಿತವಾಗಲೂ ಶಾರ್ಲಮಾನ್ ಕಾರಣವೆಂದು ಹೇಳಲಾಗಿದೆ. ಮತ್ತೆ ಕೆಲವರ ಅಭಿಪ್ರಾಯಗಳ ಪ್ರಕಾರ ಅರೇಬಿಯ ವೈದ್ಯಶಾಸ್ತ್ರವೇ

ಸಲೆರ್ನೊ ವಿದ್ಯೆಗೆ ಮೂಲಾಧಾರವೆಂದಿದೆ. ಆದರೆ ಇತ್ತೀಚಿನ ಶೋಧನೆಯ ಪ್ರಕಾರ ಸಲೆರ್ನೊ ವಿದ್ಯೆಗೂ ಅರೇಬಿಯ ವೈದ್ಯಶಾಸ್ತ್ರಕ್ಕೂ ಯಾವ ಸಂಬಂಧವೂ ಇರಲಿಲ್ಲವೆಂದು ಗೊತ್ತಾಗಿದೆ. ಸಲೆರ್ನೊ ವೈದ್ಯಶಾಸ್ತ್ರ ಜನಪ್ರಿಯವಾಗದಿರುವುದಕ್ಕೆ ಅರೇಬಿಯ ವೈದ್ಯಶಾಸ್ತ್ರದ ಶ್ರೇಷ್ಠತೆಯೇ ಕಾರಣ ಎಂದು ತಿಳಿದಿದೆ. ಸಲೆರ್ನೊ ೯ನೇ ಶತಮಾನದಲ್ಲಿ ಪ್ರಾರಂಭವಾಗಿ, ೧೦ ಮತ್ತು ೧೧ನೇ ಶತಮಾನಗಳಲ್ಲಿ ಉನ್ನತ ಸ್ಥಿತಿಯಲ್ಲಿದ್ದು, ೧೩ನೇ ಶತಮಾನದಲ್ಲಿ ನೇಪಲ್ಸ್ ವಿದ್ಯಾಪೀಠಕ್ಕೂ, ಮಾಂಟಪೆಲ್ಲಿಯರ್ ಮತ್ತು ಬೊಲೋನ ವಿಶ್ವವಿದ್ಯಾನಿಲಯಗಳ ಸ್ಥಾಪನೆಗೆ ಸ್ಥಾನ ಕೊಟ್ಟು, ೧೮೧೧ ರಲ್ಲಿ ನೆಪೋಲಿಯನ್ನನಿಂದ ನಾಶವಾಯಿತು.

ಬೆನಿಡಿಕ್ಟೈನ್ ಸಂತರ ಅಧೀನದಲ್ಲಿ ಆರ್ಚ್‌ಡೆಕನ್ ಅಡೆಲ್ಮಸ್ ೮೨೦ರಲ್ಲಿ ಒಂದು ಆಸ್ಪತ್ರೆಯನ್ನು ಸಲೆರ್ನೊ ಪಟ್ಟಣದಲ್ಲಿ ಸ್ಥಾಪಿಸಿದನು. ಅಷ್ಟರಲ್ಲೇ ಕೆಲವು ಅಶಿಕ್ಷಿತ ವೈದ್ಯರು ವೈದ್ಯವೃತ್ತಿಯಲ್ಲಿ ತೊಡಗಿದ್ದರು. ಕ್ರಮೇಣ ಇವರು ಹಳೇ ಗ್ರಂಥಗಳನ್ನು ಓದಿ ತಮ್ಮ ಅನುಭವದ ಜತೆಗೆ ಗ್ರಂಥಗಳಿಂದ ಕಲಿತ ವಿದ್ಯೆಯನ್ನು ಉಪಯೋಗಿಸಲು ಪ್ರಾರಂಭಿಸಿದರು. ಮೊದಲಿಗೆ ಮಾಂಟೆ ಕ್ಯಾಸ್ಸಿನೊ ಸಂಗಡ ವಿದ್ದ ಸಂಬಂಧವನ್ನು ತೊರೆದು, ೧೨ನೇ ಶತಮಾನದಲ್ಲಿ, ನಿಯಮಗಳಿಗನುಸಾರ ವಾಗಿ ವ್ಯಾಸಂಗ ಕ್ರಮಗಳನ್ನು ಅನುಸರಿಸಿ, ೧೨ನೇ ಶತಮಾನದಲ್ಲೇ ನ್ಯಾಯ ಸ್ಥಾನದಿಂದ ಹಕ್ಕು ಭಾದ್ಯತೆ ಪಡೆದು, ರಾಜನಿಂದ ವಿಶೇಷಾಧಿಕಾರ ಹೊಂದಿ ವೈದ್ಯ ವ್ಯಾಸಂಗಕ್ಕೆ ನಾನಾ ದೇಶಗಳ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ವ್ಯಾಸಂಗ ನಡೆಸಲು ಪ್ರಾರಂಭಿಸಿದರು. ಹೀಗೆ ಮಾಡಿದುದರಿಂದ ಸಲೆರ್ನೊ ವಿದ್ಯಾಶಾಲೆಗೆ ತಕ್ಕ ಉಚ್ಚ ಸ್ಥಾನ ಸಿಕ್ಕಿತು.

ಕಾನ್‌ಸ್ಟ್ಯಾಂಟೈನ್ ಆಫ್ರಿಕಾನಸ್

ಸುಮಾರು ೧೦೮೬ ರಲ್ಲಿ ನಾರ್ಮಂಡಿಯ ರಾಬರ್ಟ್ ಗೈಸ್ಕಾರ್ಡ್ ಅವನ ಸಹೋದರ ರೋಜರನ ಸಹಾಯದಿಂದ, ಸಿಸಿಲಿ ದ್ವೀಪವನ್ನು ದೋಚಿಕೊಂಡು, ಮೆಸ್ಸಿನ ಮತ್ತು ಪಲೆರ್ಮೊಗಳನ್ನು ವಶಪಡಿಸಿಕೊಂಡು, ಸಲೆರ್ನೊ ಪಟ್ಟಣಕ್ಕೆ ಮುತ್ತಿಗೆ ಹಾಕಿ, ೮ ತಿಂಗಳು ಹೊಡೆದಾಡಿ ಅದನ್ನೂ ವಶಪಡಿಸಿಕೊಂಡರು. ಅವನ ಸಂಗಡ ಅವನ ಕಾರ್ಯದರ್ಶಿಯಾಗಿ ಕಾನ್‌ಸ್ಟ್ಯಾಂಟೈನ್ ಆಫ್ರಿಕಾನಸ್ ಎಂಬ ಶ್ರೇಷ್ಠ ವೈದ್ಯ ಬಂದಿದ್ದನು. ಇವನು ಇಸ್ಲಾಮಿನ ವೈದ್ಯಶಾಸ್ತ್ರವನ್ನು ಯೂರೋಪಿನಲ್ಲಿ ಹರಡಲು ಹೊಣೆಯಾದನು. ಇವನು ಕಾರ್ತೇಜ್‌ನಲ್ಲಿ ಹುಟ್ಟಿ, ಪರ್ಷಿಯ, ಇಂಡಿಯ ದೇಶಗಳಲ್ಲಿ ೩೦ ವರ್ಷಗಳ ಕಾಲ ಸಂಚಾರ ಮಾಡಿ, ಗ್ರೀಕ್, ಲ್ಯಾಟಿನ್, ಹಿಂದು ಮತ್ತು ಅರಬ್ಬಿ ವೈದ್ಯಶಾಸ್ತ್ರಗಳಲ್ಲಿ ಪಾರಂಗತನಾಗಿ ತನ್ನ ಪಟ್ಟಣಕ್ಕೆ ಹಿಂತಿರುಗಿದಾಗ ಜನರಿಂದ ಗುರುತಿಸಲಾಗದೆ ತೊಂದರೆಗೀಡಾಗಿ, ಅಲ್ಲಿಂದ ತಪ್ಪಿಸಿ

ಕೊಂಡು ಸಲೆರ್ನೊ ಪಟ್ಟಣವನ್ನು ಸೇರಿದನು. ಇಲ್ಲಿ ಅವನ ವೈದ್ಯ ವಿದ್ಯೆಯ ಮಹತ್ತು ಅರಿವಾಗಿ ತಕ್ಕ ಗೌರವ ಪಡೆದನು.

ಸಲೆರ್ನೊ ವಿದ್ಯಾಪೀಠದಲ್ಲಿ ಕೊಂಚಕಾಲ ಮಾತ್ರವಿದ್ದು ಮಾಂಟೆ ಕ್ಯಾಸ್ಸಿನೊವಿಗೆ ಸನ್ಯಾಸಿಯಾಗಿ ಹೋಗಿ ಸೇರಿದನು. ಅಲ್ಲಿ ಸಾಯುವ ವರೆಗಿದ್ದು ಅರಬ್ಬಿ ವೈದ್ಯಶಾಸ್ತ್ರಗಳನ್ನು ಲ್ಯಾಟಿನ್ ಭಾಷೆಗೆ ಭಾಷಾಂತರ ಮಾಡಿದನು. ಅವನ ೩೭ ಲೇಖನಗಳಲ್ಲಿ ಪಂಟಾಗ್ನಿ ಎಂಬ ಗ್ರಂಥ ಬಹಳ ಶ್ರೇಷ್ಠವಾಗಿತ್ತು. ಲ್ಯಾಟಿನ್ ಓದುಗರಿಗೆ ಇಸ್ಲಾಮ್ ವೈದ್ಯಶಾಸ್ತ್ರದ ಮೂಲ ಸಂಪತ್ತನ್ನು ಮುಂದಿಟ್ಟು ಹೆಸರು ಪಡೆದನು. ಇವನು ಬರೆದ ಗ್ರಂಥಗಳು ಸಲೆರ್ನೊ ವೈದ್ಯರಲ್ಲಿ ಒಳ್ಳೆಯ ಪರಿಣಾಮವನ್ನುಂಟುಮಾಡಿದವು. ಆಗಿನಿಂದ ಅಲ್ಲಿಯ ವೈದ್ಯರು ತಾವೇ ಲೇಖನಗಳನ್ನು ಬರೆಯಲಾರಂಭಿಸಿದರು. ಗ್ರೀಕರ ವೈದ್ಯಶಾಸ್ತ್ರ ಪುನಃ ಬೆಳಗಿತು. "ಸಲೆರ್ನೊ ವೈದ್ಯವಿದ್ಯೆಯ ವಾಕ್ಸಂಪತ್ತಿಗೂ ಸವಿನುಡಿಗೂ ಕಾನ್‌ಸ್ಟಾಂಟೈನೇ ಮೂಲ ಕಾರಣ" (ಸ್ಯಾಂಡಾಫ್).

ಸಲೆರ್ನೊ ಕೃತಿಗಳು

ಸಲೆರ್ನೊ ವೈದ್ಯಶಾಲೆಯ ಮೊದಲ ಬರಹಗಾರರ ಪೈಕಿ ಗ್ಯಾರಿಯೊಪಾಂಟಸ್ ೧೦೫೦ರಲ್ಲಿ ಪ್ಯಾಷನೇರಿಯಸ್ ಎಂಬ ವೈದ್ಯಶಾಸ್ತ್ರದ ಪುಸ್ತಕವನ್ನು ಬರೆದಿದ್ದನು. ಈ ಪುಸ್ತಕಕ್ಕೆ ಗ್ರೀಕ್ ಗ್ರಂಥಗಳೇ ಆಧಾರವಾಗಿದ್ದವು. ಪೆಟ್ರನ್‌ಸಿಲ್ಲಸ್‌ನ 'ಪ್ರ್ಯಾಕ್ಟಿಕ' ಎಂಬ ಪುಸ್ತಕ ೧೦೩೫ರಲ್ಲಿ ಬರೆಯಲಾಗಿತ್ತು. ಡಿ ರೆನ್ಸಿ ೧೮೫೨ರಲ್ಲಿ ಈ ಪುಸ್ತಕವನ್ನು ಪ್ರಕಟಿಸಿದನು. ಬಹಳ ಕಾಲ ಸಲೆರ್ನೊ ವಿದ್ಯಾಶಾಲೆಯಲ್ಲಿ ಟೀಕೆಗಳನ್ನು ಪ್ರತಿಭಟಿಸಿ ಪಠ್ಯಪುಸ್ತಕವಾಗಿದ್ದ ಆಂಟಿಡೊಟೇರಿಯಮ್ ಎಂಬ ಪುಸ್ತಕ ಅನೇಕ ಮುದ್ರಣಗಳಾಗಿ ಪ್ರಖ್ಯಾತಿ ಪಡೆದಿತ್ತು. ಇದರಲ್ಲಿ ರೋಗಗಳಿಗೆ ಸಲ್ಲುವ ಔಷಧಗಳ ಪ್ರಮಾಣ ಮತ್ತು ಪ್ರಯೋಗಗಳನ್ನು ವಿವರಿಸಿತ್ತು. ಇನ್ನೊಂದು ಚಿಕ್ಕ ಪುಸ್ತಕವಾದ ಆಂಟಿಡೊಟೇರಿಯಮ್ ಪಾರ್ವ ಸ್ಪರ್ಶಜ್ಞಾನವಿಲ್ಲದಂತೆ ಮಾಡುವ ಔಷಧ ವಿವರಗಳನ್ನು ಹೊಂದಿತ್ತು. ಬಾರ್ತಲೊಮ್ಯು ಎಂಬ ಇಂಗ್ಲಿಷ್ ವೈದ್ಯ ಬರೆದ ವಿಶ್ವಕೋಶ ಬಹಳ ವರ್ಷಗಳ ಕಾಲ ಮಧ್ಯ ಯುಗದ ವಿಶ್ವವಿದ್ಯಾನಿಲಯಗಳಲ್ಲಿ ಉಪಯೋಗಿಸಲಾಗಿತ್ತು. ಇದನ್ನು ಇಂಗ್ಲೀಷಿಗೆ ೧೩೯೭ರಲ್ಲಿ ಟ್ರೆವಿಸದ ಜಾನ್ ಭಾಷಾಂತರಿಸಿದನು. ಇವರೆಲ್ಲರಿಗಿಂತಲೂ ಮಹಿಳೆಯರ ಪೈಕಿ ಟ್ರೊಟ್ಯುಲ ಸ್ತ್ರೀ ರೋಗಗಳನ್ನು ಕುರಿತು ಪುಸ್ತಕವನ್ನು ಬರೆದಿದ್ದಳು. ಇವಳು ಯಾರೆಂಬುದು ತಿಳಿಯದು. ಆದರೆ ಆಗಿನ ಕಾಲದಲ್ಲಿ ಟ್ರಾಟ್ಯುಲ ಎಂಬುದು ಹೆಂಗಸರ ಹೆಸರಾಗಿದ್ದುದರಿಂದ, ಮಹಿಳೆ ವೈದ್ಯೆಯಾಗಿದ್ದಿರಬಹುದೆಂದು ನಂಬಲಾಗಿದೆ. ಈ ಪುಸ್ತಕದಲ್ಲಿ ಹೆರಿಗೆ ವಿಧಾನ, ಶಿಶು ರಕ್ಷಣೆ, ಶಿಶು ಆಹಾರ, ಗರ್ಭಕೋಶದ ರೋಗಗಳೆಲ್ಲಾ ವಿವರವಾಗಿದ್ದವು. ರೋಗಿಗಳ ಆಹಾರದ ಪಾಕ ವಿಷಯದಲ್ಲಿ ಮೂಸಾಂಡಿನಸ್ ಬರೆದಿದ್ದ

ಗ್ರಂಥ ಆಹಾರ ತಯಾರಿಸುವ ವಿಧಾನಗಳನ್ನು ವಿವರಿಸಿತ್ತು. ವೈದ್ಯ ನೀತಿಶಾಸ್ತ್ರದ ವಿಷಯವಾಗಿ ಆರ್ಕಿಮೆತಿಯಸ್ ಬರೆದಿದ್ದ ಗ್ರಂಥದಲ್ಲಿ ವೈದ್ಯರ ನಡವಳಿಕೆ ಮುಂತಾದ ವಿಷಯಗಳು ರಚಿತವಾಗಿದ್ದವು.

ವ್ಯಾಸಂಗ ಕ್ರಮ

ಸಲೆರ್ನೊ ಸ್ಥಾಪನೆಗೆ ಕಾರಣನಾಗಿದ್ದ ಕಾನ್‌ಸ್ಟಾಂಟೈನ್ ಪ್ರಭಾವದಿಂದ ಸಲೆರ್ನೊ ವೈದ್ಯಶಾಲೆಯಲ್ಲಿ ಅನೇಕ ತಿದ್ದುಪಡಿಗಳಾದವು. ೧೨ನೇ ಶತಮಾನದ ಪ್ರಾರಂಭದಲ್ಲೇ ವೈದ್ಯವೃತ್ತಿ ಸಿಸಿಲಿ ದೊರೆ ಎರಡನೆ ರೋಜರ್‌ನ ಅಧಿಕಾರ ವ್ಯಾಪ್ತಿಗೊಳಗಾಯಿತು. ಸಲೆರ್ನೊ ವೈದ್ಯರಿಂದ ಪರೀಕ್ಷೆಗೊಳಪಟ್ಟು ಯೋಗ್ಯರೆಂದು ಭಾವಿಸಿದರೆ ಮಾತ್ರ, ವೈದ್ಯವೃತ್ತಿ ಅವಲಂಬಿಸಲು ಅರ್ಹರೆಂದು ೧೨೨೧ರಲ್ಲಿ ಎರಡನೇ ಫ್ರೆಡರಿಕ್ ಚಕ್ರವರ್ತಿ ಆಜ್ಞೆ ವಿಧಿಸಿದ್ದನು. ವೈದ್ಯಶಿಕ್ಷಣಕ್ಕೆ ಸೇರುವ ಮೊದಲು ವಿದ್ಯಾರ್ಥಿಗೆ ೨೧ ವರ್ಷ ವಯಸ್ಸಾಗಿರಬೇಕೆಂದೂ, ಧರ್ಮಸಂತಾನದವನಾಗಿರಬೇಕೆಂದೂ, ಮೂರು ವರ್ಷಗಳ ಕಾಲ ತರ್ಕಶಾಸ್ತ್ರವನ್ನು ಅಭ್ಯಾಸ ಮಾಡಿರಬೇಕೆಂದೂ ನಿಯಮಗಳಿದ್ದವು. ವೈದ್ಯಶಿಕ್ಷಣ ೫ ವರ್ಷ ನಡೆಯಬೇಕೆಂದೂ, ನಂತರ ಒಂದು ವರ್ಷ ಹಿರಿಯರ ಕೈಕೆಳಗೆ ಕೆಲಸ ಮಾಡಬೇಕೆಂದೂ, ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಪ್ರಮಾಣ ವಚನ ಸ್ವೀಕರಿಸಿರಬೇಕೆಂದೂ, ವಿಷ ಮದ್ದುಗಳನ್ನು ಉಪಯೋಗಿಸಕೂಡದೆಂದೂ, ಸುಳ್ಳು ಹೇಳಕೂಡದೆಂದೂ, ವ್ಯಾಪಾರದ ಅಂಗಡಿ ಇಡಬಾರದೆಂದೂ ಬಡವರಿಗೆ ಉಚಿತವಾಗಿ ಉಪಚರಿಸಬೇಕೆಂದೂ ನಿಯಮಗಳಿದ್ದವು. ಪದವೀಧರರಾದ ಅಭ್ಯರ್ಥಿಗಳು, ಉಂಗುರ, ಹೂವಿನ ಹಾರ, ಶಾಂತಿ ಆಲಿಂಗನ ಸ್ವೀಕರಿಸಿ ಯೋಗ್ಯರೆಂದು ತಿಳಿದ ಮೇಲೆ ವೈದ್ಯವೃತ್ತಿಯಲ್ಲಿ ತೊಡಗಬೇಕಾಗಿತ್ತು. ಡಾಕ್ಟರ್ ಅಥವಾ ವೈದ್ಯನೆಂಬ ಬಿರುದನ್ನು ಮೊಟ್ಟಮೊದಲಿಗೆ ಸಲೆರ್ನೊ ವೈದ್ಯಪೀಠದಲ್ಲಿ ಕೊಟ್ಟರು. ಭೇದ ಭಾವವಿಲ್ಲದೆ ಯಾವುದೇ ಜನಾಂಗ, ಮತ, ದೇಶದವರಾಗಲೀ ಇಲ್ಲಿ ವ್ಯಾಸಂಗ ಮಾಡಲು ಅಡ್ಡಿ ಇರಲಿಲ್ಲ.

ಸಲೆರ್ನೊ ಪದವೀಧರರು ಹಾಗೂ ಪ್ರಾಧ್ಯಾಪಕರು

ಗಿಲ್ಲಿಸ್ ಡಿ ಕಾರ್ಬೇಲ್

ಗಿಲ್ಲಿಸ್ ಡಿ ಕಾರ್ಬೇಲ್ ಪ್ಯಾರಿಸ್ಸಿಗೆ ಹತ್ತಿರವಿದ್ದ ಕಾರ್ಬೇಲ್‌ನಲ್ಲಿ ೧೧೪೦ರಲ್ಲಿ ಹುಟ್ಟಿ ಸಲೆರ್ನೊದಲ್ಲಿ ವ್ಯಾಸಂಗ ಮಾಡಿ ಮಾಂಟ್‌ಪೆಲ್ಲಿಯರ್‌ಗೆ ಕೆಲಸ ಮಾಡಲು ಬಂದನು. ಇವನಲ್ಲಿದ್ದ ಸಲೆರ್ನೊ ಅಭಿಮಾನ ಮತ್ತು ಗ್ರೀಕ್ ಸಂಪ್ರದಾಯಗಳು ಅಲ್ಲಿನ ಅರಬ್ಬಿ ಸಂಸ್ಕೃತಿಗಳ ಪ್ರಭಾವಕ್ಕೆ ಹೊಂದದೆ ಸ್ವಲ್ಪ ದಿನಗಳಲ್ಲೇ ಮಾಂಟ್‌ಪೆಲ್ಲಿಯರ್ ಬಿಟ್ಟು ಪ್ಯಾರಿಸ್ಸಿಗೆ ತೆರಳಿದನು. ಇಲ್ಲಿ ಇವನಿಗೆ ಸಾಕಷ್ಟು ಪ್ರೋತ್ಸಾಹ

ಸಿಕ್ಕಿ ತನ್ನ ಬರಹಗಳಿಂದಲೂ ಮತ್ತು ಬೋಧನೆಗಳಿಂದಲೂ ಪ್ರಖ್ಯಾತಿ ಪಡೆದು ಪ್ರಾಧ್ಯಾಪಕನಾದನು. ವಾಸ್ತವವಾಗಿ ಇವನೇ ಪ್ಯಾರಿಸ್ಸಿನ ವೈದ್ಯ ವಿದ್ಯಾಶಾಲೆಗೆ ಸ್ಥಾಪಕನಾಗಿದ್ದನೆಂದು ಹೇಳಲಾಗಿದೆ. ಇವನ ಪ್ರಭಾವ ಹೆಚ್ಚಿ ಸ್ವಲ್ಪ ಕಾಲದಲ್ಲೇ ಆಸ್ಥಾನ ವೈದ್ಯನೂ, ಕ್ರೈಸ್ತಮತದ ಮುಖ್ಯಸ್ಥನೂ ಆದನು. ಇವನು ವೈದ್ಯಶಾಸ್ತ್ರವನ್ನು ಕುರಿತು ಬರೆಯುವುದರಲ್ಲಿ ನಿಸ್ಸೀಮನಾಗಿದ್ದನು. ಸಲೆರ್ನೋದಲ್ಲಿ ಚರ್ಚಿಸಲಾಗುತ್ತಿದ್ದ ನಾಡಿ, ಔಷಧ ವಸ್ತುಗಳ ಸಂಯೋಜನೆ, ಮೂತ್ರ, ರೋಗದ ಚಿಹ್ನೆಗಳ ವಿಷಯವಾಗಿ ಪದ್ಯ ರೂಪದಲ್ಲಿ ಕಾವ್ಯ ಬರೆದನು. ಇವು ಹಲವು ವರ್ಷಗಳ ಕಾಲ ಆಕರ ಗ್ರಂಥಗಳಾಗಿದ್ದವು. ಇವನ "ಕಾರ್ಮಿನ ಡಿ ಯೂರಿನೇರಂ" ಎಂಬ ಮೂತ್ರವನ್ನು ಕುರಿತು ಬರೆದಿದ್ದ ಗ್ರಂಥ ಆದರ್ಶವಾಗಿತ್ತು. ಇದರಲ್ಲಿ ಮೂತ್ರದ ಬಣ್ಣ ಗಸಿ ಮತ್ತು ಅಂಶಗಳನ್ನು ವಿವರಿಸಿತ್ತು.

ಮೈಕೇಲ್ ಸ್ಕಾಟ್

ಮೈಕೇಲ್ ಸ್ಕಾಟ್ ೧೧೭೫ರಲ್ಲಿ ಪದವೀಧರನಾಗಿ ಸಾಮಾನ್ಯ ವೈದ್ಯವೃತ್ತಿಯಲ್ಲಿ ಖ್ಯಾತಿ ಪಡೆದಿದ್ದನು. ಇವನ ಸ್ಪರ್ಶಜ್ಞಾನ ಹೋಗಲಾಡಿಸುವ ಔಷಧಗಳ ಬಳಕೆ ಬಹು ಶ್ರೇಷ್ಠವಾಗಿತ್ತು. ಅಫೀಮು, ಮಾಂಡ್ರಗೊರ, ಹೆನ್‌ಬೇನ್ ಪುಡಿಮಾಡಿ ಸಮವಾಗಿ ನೀರಿನಲ್ಲಿ ಬೆರಸಿ ಮೂಗಿನ ಹೊಳ್ಳೆಯಲ್ಲಿ ಇಟ್ಟರೆ ಸ್ಪರ್ಶಜ್ಞಾನ ಹೋಗಿ ರೋಗಿಯ ಮೇಲೆ ಯಾವ ಶಸ್ತ್ರಕ್ರಿಯೆಯನ್ನಾದರೂ ಮಾಡಬಹುದಾಗಿತ್ತು.

ರೋಜರ್ ಮತ್ತು ರೋಲೆಂಡ್

ರೋಜರ್ ಶಸ್ತ್ರವೈದ್ಯದಲ್ಲಿ ಪ್ರವೀಣನಾಗಿ ಶಸ್ತ್ರವೈದ್ಯದ ಪ್ರಾಧ್ಯಾಪಕನಾಗಿದ್ದನು. ಇವನು ೧೧೭೦ರಲ್ಲಿ ಬರೆದ 'ರೋಜರನ ಶಸ್ತ್ರವೈದ್ಯ' ಬಹಳ ಉತ್ಕೃಷ್ಟವಾಗಿತ್ತು. ಇದು ಸಲೆರ್ನೊ, ಬೊಲೋನ, ಮಾಂಟ್‌ಪಿಲ್ಲಿಯರ್ ವಿಶ್ವವಿದ್ಯಾನಿಲಯಗಳಲ್ಲಿ ಪಠ್ಯಪುಸ್ತಕವಾಗಿತ್ತು. ಇದಕ್ಕೆ ಆಗಾಗ್ಗೆ ಹೊಸ ವಿಷಯಗಳನ್ನು ಸೇರಿಸಲಾಗುತ್ತಿತ್ತು. ಟೊಲಿಡೊದಿಂದ ಯೂರೋಪಿಗೆ ಹರಡಿದ ಅರಬ್ಬಿ ವೈದ್ಯಶಾಸ್ತ್ರವನ್ನೂ ಈ ಪುಸ್ತಕದಲ್ಲಿ ಸೇರಿಸಲಾಗಿತ್ತು. ರೋಜರ್ ಶಿಷ್ಯ ರೋಲೆಂಡ್ ಬೊಲೋನ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕನಾಗಿದ್ದು ರೋಜರ್ ಶಸ್ತ್ರವೈದ್ಯ ಗ್ರಂಥವನ್ನು ಪುನರ್ವಿಮರ್ಶೆಮಾಡಿ ಹೊಸ ಮುದ್ರಣ ಹೊರಡಿಸಿದ್ದನು. ರೋಜರ್ ಬರೆದಿದ್ದ ಪ್ರಾಕ್ಟಿಕ ಎಂಬ ಮತ್ತೊಂದು ಪುಸ್ತಕದಲ್ಲಿ ತಲೆಮೂಳೆಮುರಿತವನ್ನು ಬೆರಳುಗಳಿಂದ ಮುಟ್ಟಿನೋಡಿ ಪರೀಕ್ಷೆ ಮಾಡುವುದೇ ಎಲ್ಲಾ ಪರೀಕ್ಷೆಗಳಿಗಿಂತಲೂ ಉತ್ತಮವಾದದ್ದೆಂದು ತಿಳಿಸಿದ್ದನು. ಮೂಳೆ ಚೂರುಗಳನ್ನು ಗಾಯದಿಂದ ಹೊರತೆಗೆದು, ಮೂಳೆಗೂ ಮಿದುಳಿನ ಹೊರಪರೆಗೂ ಮಧ್ಯೆ ಬಟ್ಟೆ ಇಟ್ಟು, ಚರ್ಮ ಒಟ್ಟುಗೂಡಿಸಿ, ಮೊಟ್ಟೆ ಬಿಳುಪಿನಲ್ಲಿ ಅದ್ದಿದ ಬಟ್ಟೆಯಿಂದ ಗಾಯವನ್ನು ಕಟ್ಟಿ ಗುಣಪಡಿಸುತ್ತಿದ್ದನು.

ದವಡೆ ಮೂಳೆಮುರಿತವನ್ನು ಎಳೆದು ಸರಿಪಡಿಸುತ್ತಿದ್ದನು. ಮೊಳೆ ರೋಗ, ಮೂಗಿನ ಮಾಂಸದ ಗಡ್ಡೆಗಳನ್ನು ಚುಟಿಕೆ ಹಾಕಿ ಸುಡುತ್ತಿದ್ದನು. ಕತ್ತಿನ ಗಳಗಂಡವನ್ನು ಕೊಯ್ದು ತೆಗೆಯುತ್ತಿದ್ದನು. ಮೂತ್ರಕೋಶದ ಕಲ್ಲನ್ನು ತೆಗೆಯಲು, ಎರಡು ಬೆರಳಗಲ ಮಲದ್ವಾರದ ಮೇಲೆ ಕೊಯ್ದು ಶಸ್ತ್ರದಿಂದ ಕಲ್ಲನ್ನು ಹಿಡಿದೆಳೆಯುತ್ತಿದ್ದನು. ಒಟ್ಟನಲ್ಲಿ, ಕಾನ್‌ಸ್ಟಾಂಟೈನ್ 'ಪೆಂಟಗ್ನಿ'ಯಲ್ಲಿ ವಿವರಿಸಿದ್ದ ಕ್ರಿಯೆಗಳನ್ನೆಲ್ಲಾ ಇವನು ಪ್ರಯೋಗಿಸಿದ್ದನು.

ಗಿಲ್ಬರ್ಟಸ್ ಆಂಗ್ಲಿಕಸ್

ಗಿಲ್ಬರ್ಟಸ್ ತನ್ನ ವೈದ್ಯ ಶಾಲೆಯಾದ ಸಲೆರ್ನೊವಿಗೆ ಗೌರವ ತಂದ ಗಿಲ್ಬರ್ಟಸ್ ಆಂಗ್ಲಿಕಸ್ (೧೧೮೦–೧೨೫೦). ವಿದ್ಯಾಭ್ಯಾಸ ಮುಗಿದ ಮೇಲೆ ತನ್ನ ದೇಶವಾದ ಇಂಗ್ಲೆಂಡಿಗೆ ಬಂದು ಶ್ರೇಷ್ಠ ವೈದ್ಯನಾದನು. ಮೂರನೆಯ ಧರ್ಮ ಯುದ್ಧ ದಲ್ಲಿ ತೊಡಗಿದ್ದನೆಂದೂ ಹೇಳಿದೆ. ಕೆಲವು ದಿವಸಗಳಾದ ಮೇಲೆ ಯೂರೋಪಿಗೆ ಪುನಃ ಬಂದು, ಕಾಂಪೆಂಡಿಯಮ್ (ಮಹಾಸಂಪುಟ) ಎಂಬ ೭ ಪುಸ್ತಕಗಳನ್ನೊಳ ಗೊಂಡ ಸಂಗ್ರಹವನ್ನು ಬರೆದನು. ಇದರಲ್ಲಿ ದೇಹಶಾಸ್ತ್ರ, ಕಣ್ಣಿನ ರೋಗ, ಸ್ತ್ರೀರೋಗ, ಶಸ್ತ್ರಕ್ರಿಯೆ ಮುಂತಾದ ವೈದ್ಯಶಾಸ್ತ್ರದ ಅನೇಕ ಶಾಖೆಗಳನ್ನು ಕುರಿತು ಬರೆದಿದ್ದನು. ರೋಜರ್ ಪದ್ಧತಿಗಳನ್ನೆಲ್ಲಾ ಇವನು ಉಪಯೋಗಿಸುತ್ತಿದ್ದನು. ಇವನ ಗಳಗಂಡದ ಶಸ್ತ್ರಕ್ರಿಯೆ ರೋಜರ್ ಕ್ರಮವನ್ನೇ ಅನುಸರಿಸಿತ್ತು. ಈ ಸಂಗ್ರಹದಲ್ಲಿ ತೊನ್ನು, ದಡಾರ, ಸಿಡುಬುಗಳ ವಿವರಗಳೂ ಇದ್ದವು.

ಆರೋಗ್ಯ ನಿಯಮಗಳು

ಇದನ್ನು ಪದ್ಯರೂಪದಲ್ಲಿ ಬರೆದಿರುವ ಉತ್ತಮ ಸಾಹಿತ್ಯವನ್ನು ತಿಳಿಯದಿದ್ದರೆ, ಉಳಿದೆಲ್ಲ ಸಲೆರ್ನೊ ವಿಷಯಗಳನ್ನೂ ಪೂರ್ತಿ ತಿಳಿದಂತಾಗದು. ಇದು ಗೃಹ ವೈದ್ಯ ಶಾಸ್ತ್ರದ ಸಾಮಾನ್ಯ ಕೈಪಿಡಿಯಾಗಿತ್ತು. ಇದನ್ನು ಬರೆಯಲು ಅನೇಕರು ಭಾಗಿ ಗಳಾಗಿದ್ದರೆಂದು ತಿಳಿದಿದೆ. ಸುದಾಫ್ ಪ್ರಕಾರ, ೧೩ನೇ ಶತಮಾನದಲ್ಲಿ ಬರೆದಿದ್ದಿರ ಬಹುದೆಂದು ಊಹಿಸಲಾಗಿದೆ. ಜಯಶಾಲಿ ವಿಲಿಯಮ್‌ನ ಮಗ ನಾರ್ಮಂಡಿ ಡ್ಯೂಕ್ ರಾಬರ್ಟ್‌ನ ಜ್ಞಾಪಕಾರ್ಥವಾಗಿ ಇದು ಬರೆಯಲಾಗಿತ್ತೆಂದು ಅನೇಕರ ಅಭಿಪ್ರಾಯ. ನಾರ್ಮಂಡಿ ಡ್ಯೂಕ್ ಯುದ್ಧದಲ್ಲಿ ಗಾಯಗೊಂಡು, ಚಿಕಿತ್ಸೆ ಗೋಸ್ಕರ ಸಲೆರ್ನೊವಿಗೆ ಬಂದಿದ್ದನು. ಸಲೆರ್ನೊ ಪಟ್ಟಣವನ್ನು ವಶಪಡಿಸಿಕೊಂಡು, ರಾಜನಾಗಿದ್ದ ರಾಬರ್ಟ್ ಗೈಸ್ಕಾರ್ಡ್ ಡ್ಯೂಕನ ಮಗಳಾದ ಸಿಬಿಲ್ಲ ನಾರ್ಮಂಡಿ ಡ್ಯೂಕ್ ನಿದ್ರಿಸುತ್ತಿದ್ದಾಗ, ಅವನ ಗಾಯವನ್ನು ಬಾಯಿಂದ ಹೀರಿ ಗುಣಪಡಿಸಿ ಅವನ ಪತ್ನಿಯಾದಳು. ಹೀಗೆ ನಾರ್ಮಂಡಿ ರಾಬರ್ಟ್ ಕಾಲ ಕಳೆದು ಇಂಗ್ಲೆಂಡಿಗೆ ಹಿಂತಿರುಗಿದಾಗ ಅವನ ಸಹೋದರನಿಂದಲೇ ಸಾಯುವ ತನಕ ಸೆರೆಯಲ್ಲಿಡಲ್ಪಟ್ಟು ರಾಜ್ಯವನ್ನು ಕಳೆದುಕೊಂಡನು. ಫ್ರಾನ್ಸಿನ ದೊರೆಯ ಜ್ಞಾಪಕಾರ್ಥವಾಗಿ ಬರೆ

ದಿತ್ತೆಂದು ಮತ್ತಿತರ ಅಭಿಪ್ರಾಯವೂ ಆಗಿದೆ.

ಇದರಲ್ಲಿ ಅನೇಕ ಹಸ್ತಪ್ರತಿಗಳಿದ್ದವೆಂದೂ ಮತ್ತು ೩೦೦ ಮುದ್ರಣ ಗಳಾಗಿದ್ದವೆಂದೂ ಹೇಳಲಾಗಿದೆ. ಅನೇಕ ಭಾಷೆಗಳಿಗೆ ಭಾಷಾಂತರವೂ ಆಗಿತ್ತು. ವಿಲ್ಲಿಸೋವ ಆರ್ನಾಲ್ಡ್ ಸಂಗ್ರಹಿಸಿದ್ದ ಪದ್ಯಗಳ ಪ್ರಥಮ ಮುದ್ರಣದಲ್ಲಿ ೩೬೨ ಪದ್ಯಗಳು ಮಾತ್ರ ಇದ್ದು ಆಮೇಲಿನ ಮುದ್ರಣಗಳಲ್ಲಿ ಪದ್ಯಗಳು ಹೆಚ್ಚಾಗುತ್ತ ಬಂದು, ಬ್ರಾಡಿ ಡಿ ಬಾಲ್ಟಿಕ್ ೩,೮೩೧ ಪದ್ಯಗಳಷ್ಟು ಹೆಚ್ಚಿಸಿದವೆಂದು ತಿಳಿಯಬಂದಿದೆ. ಮೊಟ್ಟ ಮೊದಲಿಗೆ ಥಾಮಸ್ ಪೇನಲ್ ೧೫೩೫ರಲ್ಲಿ ಇಂಗ್ಲಿಷ್ ಭಾಷೆಗೆ ಭಾಷಾಂತರ ಮಾಡಿದನು. ಇದರಲ್ಲಿ ಪದ್ಯಗಳು ಲ್ಯಾಟಿನ್ ಭಾಷೆಯಲ್ಲೇ ಇದ್ದು ಟೀಕೆ ಮಾತ್ರ ಇಂಗ್ಲೀಷಿನಲ್ಲಿತ್ತು. ಸರ್ ಜಾನ್ ಹ್ಯಾರಿಂಗ್ಟನ್, ೧೬೦೭ರಲ್ಲಿ, ಎಲಿಜಬೆತ್ ರಾಣಿಗೆ ಅರ್ಪಿಸಲು ಎರಡನೇ ಬಾರಿಗೆ ಇಂಗ್ಲೀಷಿಗೆ ಭಾಷಾಂತರ ಮಾಡಿದನು. ೧೮೩೦ರಲ್ಲಿ ಸರ್ ಅಲೆಗ್ಸಾಂಡರ್ ಕ್ರೋಕ್ ಭಾಷಾಂತರ ಮಾಡಿದ ಇಂಗ್ಲೀಷ್ ಪದ್ಯಗಳಲ್ಲಿ ೧೦ ಭಾಗಗಳಿದ್ದವು. ಆರೋಗ್ಯ ವಿಚಾರಗಳೆಲ್ಲಾ ಅಡಕವಾಗಿದ್ದವು.

ಮೊದಲಿಗೆ ಕಾನ್‌ಸ್ಟಾಂಟೈನ್ ಇದ್ದಾಗ, ಗ್ರೀಕ್ ಪದ್ಧತಿಗಳನ್ನು ಅನುಸರಿಸು ತ್ತಿದ್ದು, ಕ್ರಮೇಣ ಅರಬ್ಬಿ ಸಂಪ್ರದಾಯವನ್ನು ಸಲೆರ್ನೊ ವೈದ್ಯಶಾಲೆ ಅಂಗೀಕರಿಸಿತು. ಇತರ ವಿಶ್ವವಿದ್ಯಾನಿಲಯುಗಳ ಹಾಗೆ ಸುಲಭವಾಗಿ ಒಳಗಾಗದೆ ತನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಬಂದಿತ್ತು. ಜ್ಯೋತಿಷ್ಯವನ್ನು ತಿರಸ್ಕರಿಸಿತ್ತು. ಮಾಂಟ್ ಪೆಲ್ಲಿಯರ್, ಬೊಲೋನ ವಿಶ್ವವಿದ್ಯಾನಿಲಯುಗಳ ಪ್ರಾಬಲ್ಯ ಹೆಚ್ಚಾದುದರಿಂದಲೂ ೧೨೨೪ರಲ್ಲಿ ಎರಡನೇ ಫ್ರೆಡರಿಕ್‌ನಿಂದ ಸಲೆರ್ನೊ ಹತ್ತಿರವಿದ್ದ ನೇಪಲ್ಸ್ ಪಟ್ಟಣದಲ್ಲಿ ಮತ್ತೊಂದು ವಿಶ್ವವಿದ್ಯಾನಿಲಯ ಸ್ಥಾಪಿತವಾದುದರಿಂದಲೂ, ಸಲೆರ್ನೊ ಕ್ಷೀಣ ಗೊಳ್ಳುತ್ತಾ ಬಂತು. ಕಡೆಗೆ ನೆಪೋಲಿಯನ್ ೧೮೧೧ರಲ್ಲಿ ರಾಜಶಾಸನ ಹೊರಡಿಸಿ ಕೊನೆಗಾಣಿಸಿದನು. ಆದರೂ ಪ್ರಪಂಚದ ವೈದ್ಯಶಾಸ್ತ್ರದ ಬೆಳವಣಿಗೆಯಲ್ಲಿ ಸಲೆರ್ನೊ ಕೊಡುಗೆ ಅತಿಶಯವಾಗಿತ್ತು. ಉತ್ಕೃಷ್ಟವಾದ ವೈದ್ಯಶಾಸ್ತ್ರದ ಪದ್ಯಗಳು ಮರೆಯ ದಂತಿವೆ. ರೋಜರ್, ಗಿಲ್ಲಿಸ್, ಗಿಲ್ಬರ್ಟ್‌ರವರ ಹೆಸರು ಶಾಶ್ವತವಾಗಿವೆ. ಸಲೆರ್ನೊ ರೋಗ ನಿದಾನ, ನಾಡಿಪರೀಕ್ಷೆ, ಮೂತ್ರಪರೀಕ್ಷೆ, ಚಿಕಿತ್ಸೆವಿಧಾನ (ಗ್ರೀಕರ, ಹಿಂದುಗಳ, ಮುಸ್ಲಿಮರಿಂದ ಆರಿಸಿಕೊಂಡ ಔಷಧವಸ್ತುಗಳು) ರೋಗದ ಮುನ್ನರಿವು ಮಾರ್ಗ ದರ್ಶಕವಾಗಿವೆ.

ಮಧ್ಯ ಯುಗದ ವಿಶ್ವವಿದ್ಯಾನಿಲಯುಗಳು

ಮಧ್ಯ ಯುಗ ಕ್ಷೀಣ ಸ್ಥಿತಿಯಲ್ಲಿದ್ದಾಗ್ಯೂ ಜನಾಂಗಕ್ಕೆ ಶ್ರೇಷ್ಠವಾದ, ಶಾಶ್ವತ ವಾದ ವಿಶ್ವವಿದ್ಯಾನಿಲಯುಗಳ ಪದ್ಧತಿಯನ್ನು ಬಿಟ್ಟುಹೋಗಿರುವುದೇ ಒಂದು ಮಹತ್ತರ ಸೇವೆ ಎನ್ನಬಹುದು. ೧೨ನೇ ಮತ್ತು ೧೩ನೇ ಶತಮಾನಗಳ ವಿಶ್ವವಿದ್ಯಾನಿಲಯ ಗಳಲ್ಲಿ ಈಗಿನ ಹಾಗೆ ಎಲ್ಲಾ ಪಾಂಡಿತ್ಯಗಳ ಶಾಖೆಗಳಿರಲಿಲ್ಲ. ಆದರೂ ಎಲ್ಲಾ ದೇಶ

ಗಳಿಂದ ವಿದ್ಯಾರ್ಥಿಗಳೂ, ಅಧ್ಯಾಪಕರೂ ಬಂದು ಸೇರುತ್ತಿದ್ದರು. ಪ್ಯಾರಿಸ್ಸು ಅತ್ಯಂತ ಉನ್ನತ ಸ್ಥಿತಿಯಲ್ಲಿದ್ದಾಗಲೂ ನ್ಯಾಯಾಂಗ, ಮತ್ತಿತರ ಶಾಖೆಗಳಿರಲಿಲ್ಲ. ವಿದ್ಯಾಶಾಲೆಗಳಿದ್ದವೇ ಹೊರತು ವಿಶ್ವವಿದ್ಯಾನಿಲಯವೆಂಬ ಹೆಸರಿರಲಿಲ್ಲ. ವಾಸ್ತವವಾಗಿ ೧೩೧೬ರಲ್ಲಿ ಪೆರೂಜಿಯವೆಂಬಲ್ಲಿ ವಿಶ್ವವಿದ್ಯಾನಿಲಯವೆಂಬ ಪದ ಮೊಟ್ಟಮೊದಲಿಗೆ ಉಪಯೋಗಕ್ಕೆ ಬಂತು. ಆಮೇಲಾಮೇಲೆ ಬೊಲೋನ್, ಪ್ಯಾರಿಸ್, ಮಾಂಟಪೆಲ್ಲಿಯರ್, ಆಕ್ಸ್‌ಫರ್ಡ್ ಮುಂತಾದ ಪಟ್ಟಣಗಳಲ್ಲಿ ವಿಶ್ವವಿದ್ಯಾನಿಲಯಗಳು ಪ್ರಾರಂಭವಾದವು. ಆದರೆ ಯಾವಾಗ ಪ್ರಾರಂಭವಾದವು ಎಂದು ಗೊತ್ತಿಲ್ಲ. ಅದಕ್ಕಿಂತಲೂ ಅನೇಕ ವರ್ಷಗಳ ಮೊದಲೇ ಈ ಪಟ್ಟಣಗಳಲ್ಲಿ ಸಾಹಿತ್ಯ, ನ್ಯಾಯ ಮತ್ತು ವೈದ್ಯಶಾಸ್ತ್ರಗಳು ರೂಢಿಯಲ್ಲಿದ್ದವು. ಸಲೆರ್ನೊ ಪಟ್ಟಣದಲ್ಲಿ ವೈದ್ಯಶಾಸ್ತ್ರದ ವ್ಯಾಸಂಗ ಕ್ರಮಬದ್ಧವಾಗಿ ಬಹಳ ದಿವಸಗಳಿಂದಲೂ ನಡೆದು ಬಂದಿದ್ದರೂ, ಈಗಿನ ವಿಶ್ವವಿದ್ಯಾನಿಲಯಗಳ ರೂಪ ಬಂದಿರಲಿಲ್ಲ. ಈ ನವೀನ ರೂಪ ಮೊದಲಿಗೆ ಬೊಲೋನದಲ್ಲಿ ಕಾಣಿಸಿತು. ಕ್ರಮೇಣ ಪ್ಯಾರಿಸ್, ಮಾಂಟ್‌ಪೆಲ್ಲಿಯರ್, ಆಕ್ಸ್‌ಫರ್ಡ್, ಕೇಂಬ್ರಿಡ್ಜ್‌ಗಳಲ್ಲಿ ಕಾಣಿಸಿಕೊಂಡು ಈಗಲೂ ಉಳಿದುಬಂದಿವೆ.

ಬೊಲೋನ



ಬೊಲೋನದಲ್ಲಿದ್ದ ಅಂಗರಚನೆಯ ಭವನ ೧೬೩೦ರಲ್ಲಿ ಕಟ್ಟಿದ್ದು

ಮೊದಲಿಗೆ ಇದು ಒಂದು ಖಾಸಗಿ ಸಂಸ್ಥೆಯಾಗಿದ್ದು, ೧೧೫೮ರಲ್ಲಿ ಸನ್ನದು

ಪಡೆದು ವಿಶ್ವವಿದ್ಯಾನಿಲಯವಾಯಿತು. ಬಹು ಬೇಗ ಪ್ರಖ್ಯಾತಿಗೆ ಬಂದು ೧೩೨೦ರಲ್ಲಿ ಸುಮಾರು ೧೫೦೦೦ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರೆಂದು ತಿಳಿದುಬಂದಿದೆ. ಹೊರದೇಶಗಳಿಂದ ಬಹಳ ಮಂದಿ ಬರುತ್ತಿದ್ದರೆಂದೂ, ಅವರನ್ನು ದೇಶಗಳ ಮೇರೆ ವಿಂಗಡಿಸಿದ್ದರೆಂದೂ ತಿಳಿದುಬಂದಿದೆ. ಮೊದಲಿನಿಂದಲೂ ಬೊಲೋನ ವಿದ್ಯಾರ್ಥಿಗಳ ಕೇಂದ್ರವಾಗಿತ್ತು. ಪ್ಯಾರಿಸ್ಸು ಅಧ್ಯಾಪಕರುಗಳ ಕೇಂದ್ರವಾಗಿತ್ತು. ಬೊಲೋನ ದಲ್ಲಿ ವಿದ್ಯಾರ್ಥಿಗಳೇ ಅಧ್ಯಾಪಕರನ್ನು ಆರಿಸಿಕೊಳ್ಳುತ್ತಿದ್ದರು. ಅಧ್ಯಾಪಕರು ರಜ ತೆಗೆದುಕೊಳ್ಳದೆ ಕೆಲಸಕ್ಕೆ ಗೈರ್ ಹಾಜರಾದರೆ ತಪ್ಪಾಗುತ್ತಿತ್ತು. ವಿದ್ಯಾರ್ಥಿಗಳ ಪ್ರಗತಿ ಅಧ್ಯಾಪಕರ ಜವಾಬ್ದಾರಿಯಾಗಿತ್ತು. ವಿದ್ಯಾರ್ಥಿಗಳೇ ಅಧ್ಯಾಪಕರ ವೇತನಕ್ಕೆ ಹೊಣೆಯಾಗಿದ್ದರು.

ಟಾಡ್ಡಿಯೊ ಆಲ್ಡೆರೊಟ್ಟಿ

ಇವನು (೧೨೨೩-೧೩೦೩) ೧೨೬೦ರಲ್ಲಿ ಅಧ್ಯಾಪಕನಾಗಿ ಕೆಲಸ ಆರಂಭಿಸಿದನು ಇವನು ತನ್ನ ೩೦ ವರ್ಷ ವಯಸ್ಸಿನ ತನಕ ದಡ್ಡನಾಗಿದ್ದು ಮೇಣದ ಬತ್ತಿ ಮಾರಿ ಜೀವನ ಮಾಡುತ್ತಿದ್ದನೆಂದು ಹೇಳಲಾಗಿದೆ. ತನ್ನ ಪಟ್ಟಣವಾದ ಫ್ಲಾರೆನ್ಸ್ ಬಿಟ್ಟು ಬೊಲೋನ ಸೇರಿದ ಮೇಲೆ ವೈದ್ಯವೃತ್ತಿಯಲ್ಲಿ ತೊಡಗಿ ಪ್ರಖ್ಯಾತನಾದನು. ಹಿಪ್ಪೊ ಕ್ರೇಟಿಸ್, ಗ್ಯಾಲೆನ್, ಅರಿಸ್ಟಾಟಲ್‌ರ ಗ್ರಂಥಗಳ ಮೇಲೆ ಟೀಕೆ ಬರೆದುದಲ್ಲದೆ ಕಾನ್ಸಿ ಲಿಯ ಎಂಬ ರೋಗಿ ಶಯ್ಯೆಯ ವಿಚಾರ ಬರೆದನು. ಹೆಚ್ಚು ಹಣ ಸಂಪಾದಿಸುವಷ್ಟು ಪ್ರಖ್ಯಾತಿಯಾಗಿದ್ದುದಲ್ಲದೆ, ಆಗಿನ ಪಾದ್ರಿಗಳಿಗೂ ವೈದ್ಯನಾಗಿದ್ದನು. ಇವನ ಉಪನ್ಯಾಸ ಕೇಳಲು ಡಾಂಟೆ ಕೂಡ ಬರುತ್ತಿದ್ದನೆಂದು ಹೇಳಲಾಗಿದೆ.

ಹ್ಯೂಗೊ ಮತ್ತು ತಿಯೊಡೆರಿಕ್

ಇವರು ತಂದೆ ಮಕ್ಕಳು. ಇಬ್ಬರೂ ಶಸ್ತ್ರವೈದ್ಯರು. ತಂದೆ ಹ್ಯೂಗೊ ಧರ್ಮ ಯುದ್ಧದ ಕಾಲದಲ್ಲಿ ಬೊಲೋನಿನ ಸೈನ್ಯದ ವೈದ್ಯನಾಗಿದ್ದನು. ಇವನ ಬರವಣಿಗೆಗಳು ಬೆಳಕಿಗೆ ಬರದಿದ್ದರೂ ಇವನ ಮಗ ಮತ್ತು ಶಿಷ್ಯ ತಿಯೊಡೆರಿಕ್ (೧೨೦೫-೧೨೯೮) ಆಗಾಗ್ಗೆ ತನ್ನ ಲೇಖನಗಳಲ್ಲಿ ತಂದೆಯ ಹೆಸರನ್ನು ಸೂಚಿಸಿದ್ದನು. ತಿಯೊಡೆರಿಕ್ ಬರೆದ ವೈದ್ಯಶಾಸ್ತ್ರ ಅವನ ಜ್ಞಾನ ಸಂಪತ್ತನ್ನು ತೋರ್ಪಡಿಸುತ್ತಿತ್ತು. ಗಾಯ ಕೀವುಗಟ್ಟುವುದು ಕೆಟ್ಟದೆಂದೂ, ಕೀವು ಸೇರದ ಹಾಗೆ ರಕ್ಷಿಸುವುದೇ ಉತ್ತಮವೆಂದೂ, ದ್ರಾಕ್ಷಾರಸದಲ್ಲಿ ಅದ್ದಿದ ಬಟ್ಟೆಯಿಂದ ಕಟ್ಟುತ್ತಿದ್ದನು. ಲಿಸ್ಟರ್ ತಿಳಿಸುವುದಕ್ಕಿಂತ ೬೦೦ ವರ್ಷಗಳ ಮೊದಲೇ ಗಾಯಕ್ಕೆ ಸೋಂಕು ತಗುಲದ ಹಾಗೆ ಕಾಪಾಡಿದರೆ ಕೀವು ಸೇರುವುದಿಲ್ಲವೆಂದು ತಿಳಿಸಿದ್ದನು. ಸ್ಪರ್ಶಜ್ಞಾನವಿಲ್ಲದಂತೆ ಮಾಡಲು ಮಾಂಡ್ರ ಗೊರ ಮತ್ತು ಅಫೀಮು ರಸದಲ್ಲಿ ಅದ್ದಿದ ಹೀರುಕಟ್ಟನ್ನು ಉಪಯೋಗಿಸುವ ರೀತಿ ಯನ್ನು ತಿಳಿಸಿದ್ದನು.

ಮಾಂಡ್ರಗೊರ ಗಿಡ ಈಗಲೂ ಮೆಡಿಟರೇನಿಯನ್ ಸುತ್ತಮುತ್ತಲೂ ಬೆಳೆಯು

ತ್ತದೆ. ಇದರ ಉದ್ದವಾದ ಎರಡು ಕವಲುಗಳ ಬೇರು ಮನುಷ್ಯನ ಆಕಾರವನ್ನು



ಮಾಂಡ್ರಗೊರ (ಮನಷ್ಯನ ಆಕಾರದಲ್ಲಿರುವ ಗಿಡ ಮೂಲಿಕೆ)
ಮಾಂಡ್ರಗೊರ ಮದ್ದನ್ನು ಹುಡುಕುವ ರೂಢಿ ನಾಯಿಗಿತ್ತು.

ಹೋಲುತ್ತದೆ. ಇದರ ಉಪಯೋಗ ಡಿಯೊಸ್ಕೊರಿಡಿಸ್‌ಗೆ ೫ನೇ ಶತಮಾನದಲ್ಲೇ ಗೊತ್ತಿತ್ತು. ಇದನ್ನು ಉಪಯೋಗಿಸಿದರೆ ಗಾಢನಿದ್ರೆ ಬರುತ್ತದೆಂದೂ, ಆಗ ಶಸ್ತ್ರ ಕ್ರಿಯೆ ನೋವಿಲ್ಲದೆ ನಡೆಸಬಹುದೆಂದೂ ತಿಳಿಸಿದ್ದನು. ಷೇಕ್ಸ್‌ಪಿಯರ್ ಆಂಟೊನಿ ಮತ್ತು ಕ್ಲಿಯೋಪಾತ್ರ ನಾಟಕದಲ್ಲಿ ಮ್ಯಾಂಡ್ರಗೋದ ಉಪಯೋಗವನ್ನು ತಿಳಿಸಿದ್ದಾನೆ.

ಮಾಂಡ್ರಗೊರ ಗಿಡವನ್ನು ಬೇರುಸಹಿತ ಕೀಳುವಾಗ ಸಿಡಿಲು ಹೊಡೆದಂತಹ ಶಬ್ದವಾಗುತ್ತಿದ್ದುದರಿಂದ, ಕೀಳುವವನು ಸಾಯುತ್ತಿದ್ದನೆಂದೂ ಇಲ್ಲವೇ ಜ್ಞಾನ ತಪ್ಪುತ್ತಿದ್ದನೆಂದೂ ಆಗಿನ ಕಾಲದ ವೈದ್ಯರು ಗಿಡವನ್ನು ಕೀಳುವಾಗ, ಬೇರು ಬಿಡಿಸಿ, ಬೇರಿನ ತುದಿಯನ್ನು ನಾಯಿ ಕತ್ತಿಗೆ ಕಟ್ಟಿ ನಾಯಿಯಿಂದ ಕೀಳಿಸುತ್ತಿದ್ದರು. ಷೇಕ್ಸ್‌ಪಿಯರ್ 'ರೊಮೀಯೊ ಮತ್ತು ಜೂಲಿಯಟ್' ನಾಟಕದಲ್ಲಿ ಇದನ್ನು ಸೂಚಿಸಿದ್ದಾನೆ. ಆದ್ದರಿಂದ ತಿಯೋಡೆರಿಕ್ ಶಸ್ತ್ರಚಿಕಿತ್ಸೆಗೆ ಅತಿ ಮುಖ್ಯವಾದ ನಂಜುರೋಧಕ ಶಸ್ತ್ರವೈದ್ಯ ಮತ್ತು ಸ್ಪರ್ಶಜ್ಞಾನವಿಲ್ಲದಂತೆ ಮಾಡುವ ವಿಧಾನಗಳೆರಡನ್ನೂ ತಿಳಿದಿದ್ದನು.

ಸ್ಕ್ಯಾಲಿನಿಟೋದ ವಿಲಿಯಂ

ಇವನು (೧೨೧೦-೧೨೭೭) ರಣರಂಗಗಳಲ್ಲಿ ಶಸ್ತ್ರಕ್ರಿಯೆ ನಡೆಸಿ ಔಷಧ ವೈದ್ಯದಲ್ಲೂ ಪಳಗಿದ್ದನು. ವೈದ್ಯಶಾಸ್ತ್ರ, ಶಸ್ತ್ರವೈದ್ಯಗಳು ಎರಡರ ಮೇಲೂ ಪುಸ್ತಕ ಬರೆದಿದ್ದನು. ವೈದ್ಯಶಾಸ್ತ್ರದ ಪುಸ್ತಕದಲ್ಲಿ ಮೂತ್ರಪಿಂಡುರಿತ, ಶೋಬೆ ಗುಣಪಡಿಸುವ ಔಷಧಗಳನ್ನು ವಿವರಿಸಿದ್ದನು. ಶಸ್ತ್ರವೈದ್ಯ ಪುಸ್ತಕದಲ್ಲಿ ಮೂತ್ರಕೋಶದಿಂದ ಕಲ್ಲು ತೆಗೆಯುವ ವಿಧಾನ, ಶರೀರದಿಂದ ಬಾಣಗಳನ್ನು ತೆಗೆಯುವ ಕ್ರಮ, ಮೇಹ ರೋಗಗಳ ಚಿಕಿತ್ಸೆಗಳನ್ನೆಲ್ಲಾ ಬರೆದಿದ್ದನು. ಚುಟುಕಿ ಹಾಕುವ ಬದಲಾಗಿ ಚಾಕುವಿನಿಂದ ಕತ್ತರಿಸುವುದೇ ಮೇಲೆಂದು ಹೇಳಿದ್ದ. ಬೊಲೋನದಲ್ಲಿ ಇವನೇ ಮೊಟ್ಟಮೊದಲಿಗೆ ಶವಚ್ಛೇದನೆ ಮಾಡಿದನು. ಇವನ ಶಿಷ್ಯ ಮಿಲಾನಿನ ಲಾನ್ ಫ್ರಾಂಚಿ ಅದೇ ಕಾಲದಲ್ಲಿ ಪ್ಯಾರಿಸ್ಸಿನ ಅತಿ ಮುಖ್ಯ ಶಸ್ತ್ರವೈದ್ಯನಾಗಿದ್ದನು. ಆದ್ದರಿಂದಲೇ ಪ್ಯಾರಿಸ್ಸಿನ ಶಸ್ತ್ರವೈದ್ಯಶಾಲೆ, ಬೊಲೋನಿನ ಕವಲಾಗಿ ಪ್ರಾರಂಭವಾಯಿತೆಂದು ಹೇಳಲಾಗಿದೆ. ತಿಯೋಡೆರಿಕ್‌ನ ಶಿಷ್ಯ ಹೆನ್ರಿ ಡಿ ಮಾಂಡೆವಿಲ್ಲೆ ಆಗಿನ ಕಾಲದ ಸನ್ಯಾಸಿಗಳು ಹಣದ ಆಸೆಗೋಸ್ಕರ ವೈದ್ಯಶಾಸ್ತ್ರವನ್ನು ರೂಢಿಸುತ್ತಿದ್ದುದರಿಂದ ಅವರನ್ನು ಖಂಡಿಸಿದ್ದನು. ಅಷ್ಟರಲ್ಲೇ ಮಧ್ಯ ಯುಗದಲ್ಲಿ ವೈದ್ಯರಿಗೂ, ಶಸ್ತ್ರವೈದ್ಯರಿಗೂ ವೈರತ್ವ ಬೆಳೆದಿದ್ದುದನ್ನು ಕಂಡು, ಇವೆರಡು ಕಸುಬುಗಳೂ ಸಂಕುಚಿತ ಮನೋಭಾವದಿಂದ ತಾರತಮ್ಯಮಾಡದೆ ಕೆಲಸ ಮಾಡಬೇಕೆಂದು ಬೋಧಿಸಿದನು. 'ಶಸ್ತ್ರವೈದ್ಯ ಗೊತ್ತಿಲ್ಲವಾದರೆ ಹೇಗೆ ಒಳ್ಳೆಯ ವೈದ್ಯನಾಗಲಾರನೋ ಹಾಗೆಯೇ ಚಿಕಿತ್ಸಾವೈದ್ಯ ತಿಳಿಯದ ಯಾವ ಶಸ್ತ್ರವೈದ್ಯನೂ ಪರಿಣತನಾಗಲಾರ' ಎಂದಿದ್ದಾನೆ,

ಮುಂಡಿನೊ

ಮುಂಡಿನೊ (೧೨೭೦-೧೩೨೬) ಬೊಲೋನದಲ್ಲಿ ಹುಟ್ಟಿ ಟಾಡ್ಡಿಯೊ ಶಿಷ್ಯನಾಗಿ ಕೀರ್ತಿ ಪಡೆದಿದ್ದನು. ಇವನು ೧೩೦೬ರಲ್ಲಿ ಅಂಗರಚನೆಶಾಸ್ತ್ರದ ಪ್ರಾಧ್ಯಾಪಕನಾಗಿದ್ದನು. ಶವಚ್ಛೇದನೆ ಮಾಡಿ ೧೩೧೬ರಲ್ಲಿ ತನ್ನ ಅನುಭವಗಳಿಂದ ಅಂಗರಚನೆ ಪುಸ್ತಕ ಬರೆದಿದ್ದನು. ಆದರೆ ಶುದ್ಧ ಲ್ಯಾಟಿನ್ ಭಾಷೆಯಲ್ಲಿಲ್ಲದೆ, ಅನೇಕ ಅರಬ್ಬಿ ಪದಗಳನ್ನೂ ಹೆಸರುಗಳನ್ನೂ ಉಪಯೋಗಿಸಿದ್ದನು. ಮೊದಮೊದಲು ತಾನೇ ಅಂಗಚ್ಛೇದನೆ ಮಾಡುತ್ತಿದ್ದು ಕ್ರಮೇಣ ತನ್ನ ಶಿಷ್ಯರಿಗೆ ಆ ಕೆಲಸವನ್ನು ಕೊಟ್ಟು ತಾನು ಬಂದು ಎತ್ತರವಾದ ಪೀಠದ ಮೇಲೆ ಕುಳಿತು ಪಾಠ ಹೇಳುವ ರೂಢಿಯಲ್ಲಿದ್ದನು. ಈ ಪದ್ಧತಿ ಅನೇಕ ವರ್ಷಗಳ ಕಾಲ ಜಾರಿಯಲ್ಲಿತ್ತು. ಇವನಿಗೆ ಅಂಗರಚನೆಶಾಸ್ತ್ರದ ಜೀರ್ಣೋದ್ಧಾರಕನೆಂದು ಹೆಸರು ಬಂದಿತ್ತು. ಆದರೆ ಈ ರಚನೆ ಕ್ರಮುಗಳಲ್ಲಿ ಕೆಲವು ತಪ್ಪು ಭಾವನೆಗಳು ಇದ್ದವು. ಉ : ಹೃದಯದಲ್ಲಿ ಮೂರು ಹೃತ್ಕರ್ಣಗಳಿವೆಯೆಂದು ಹೇಳಿದ್ದ. ಆದರೂ ವೆಸೇಲಿಯಸ್ ಖ್ಯಾತಿಗೆ ಬರುವ ತನಕ ಇವನ ಪುಸ್ತಕವೇ ಮೂಲಾಧಾರವಾಗಿತ್ತು. ಮುಂಡಿನೊ ಸತ್ತ ಬಳಿಕ ಅವನ ಶಿಷ್ಯ ಬೆರ್ಟುಸಿಯೊ ಮುಖ್ಯ ಅಂಗರಚನೆಕಾರನಾದನು. ಆದ್ದರಿಂದ ೧೩ನೇ ಶತಮಾನದಿಂದ ೧೬ನೇ

ಶತಮಾನದ ವರಿವಿಗೆ, ಬೊಲೋನ ವಿಶ್ವವಿದ್ಯಾನಿಲಯ ಅಂಗರಚನೆಶಾಸ್ತ್ರಕ್ಕೆ ಪೋಷಣಾಲಯವಾಗಿತ್ತು. ಇದರ ಜ್ಞಾಪಕಾರ್ಥವಾಗಿ ೧೬೩೭ರಲ್ಲಿ ಒಂದು ಹೊಸ ಅಂಗರಚನೆ ಮಂದಿರವನ್ನು ಸ್ಥಾಪಿಸಲಾಯಿತು.

ಮಾಂಟ್‌ಪೆಲ್ಲಿಯರ್

ಮಾಂಟ್‌ಪೆಲ್ಲಿಯರ್ ವೈದ್ಯಶಾಲೆ ಸಲೆರ್ನೊ ವೈದ್ಯಶಾಲೆಯಃ ಕವಲಾಗಿ ಪ್ರಾರಂಭ ವಾಯಿತು. ಸಲೆರ್ನೊ ಕೊನೆಗಂಡ ಮೇಲೆ ಮಾಂಟ್‌ಪೆಲ್ಲಿಯರ್ ಅದರ ಪ್ರಾಮುಖ್ಯತೆ ಯನ್ನು ಪಡೆಯಿತು. ಸಲೆರ್ನೊ ಹಾಗೆ ಮಾಂಟ್‌ಪೆಲ್ಲಿಯರ್ ಕೂಡ ಒಂದು ಆರೋಗ್ಯ ಪ್ರವಾಸ ಸ್ಥಳವಾಗಿತ್ತು. ಆಗಿನ ವಿಜ್ಞಾನಿಗಳೆಲ್ಲಾ ಅದರ ಸುತ್ತಮುತ್ತಲೂ ವಾಸ ವಾಗಿರುತ್ತಿದ್ದರು. ಅದು ಸ್ಪೈಯಿನಿಗೂ ಫ್ರಾನ್ಸಿಗೂ ಮಧ್ಯೆ ಇದ್ದುದರಿಂದ ಜನರಿಗೆ ಹೋಗಲೂ ಬರಲೂ ಹತ್ತಿರವಾಗಿತ್ತು. ಆದ್ದರಿಂದ ಅಲ್ಲಿ ಒಂದು ವೈದ್ಯಶಾಲೆ ಬೆಳೆಯಲು ಯಾವ ತಡೆಯೂ ಇರಲಿಲ್ಲ. ಇದು ಸುಮಾರು ೧೨ನೇ ಶತಮಾನದಲ್ಲಿ ಪ್ರಾರಂಭವಾಗಿರ ಬಹುದೆಂದು ನಂಬಲಾಗಿದೆ. ೧೩ ಮತ್ತು ೧೪ನೇ ಶತಮಾನಗಳಲ್ಲಿ ಪ್ರಖ್ಯಾತಿ ಪಡೆದ್ದ ಅನೇಕ ವೈದ್ಯರು ಅಲ್ಲಿಗೆ ಬರುತ್ತಿದ್ದರು ಪ್ಯಾರಿಸ್ ಮತ್ತು ಪಾಡ್ವ ವೈದ್ಯಸಂಸ್ಥೆಗಳು ಪ್ರಾರಂಭವಾದ ಮೇಲೆ ಮಾಂಟ್‌ಪೆಲ್ಲಿಯರ್‌ನ ಅಗ್ರಸ್ಥಾನ ಕಡಿಮೆಯಾಗುತ್ತ ಬಂದಿತು. ಆದರೂ ಸಲೆರ್ನೊ ಹಾಗೆ ಕಣ್ಮರೆಯಾಗಲಿಲ್ಲ. ೧೮೯೦ ರಲ್ಲಿ ೬೦೦ನೇ ವರ್ಷದ ಶತಮಾನೋತ್ಸವ ಸಮಾರಂಭ ನಡೆಯಿತು.

೭೩೭ರಲ್ಲಿ ಮಾಂಟ್‌ಪೆಲ್ಲಿಯರ್ ಪಟ್ಟಣ ಜನಿಸಿದ್ದರೂ, ೧೦೦೦ದಲ್ಲಿ ವೈದ್ಯಶಿಕ್ಷಣ ಪ್ರಾರಂಭವಾಯಿತು. ನ್ಯಾಯ ಶಾಖೆ ಸ್ಥಾಪನೆಯಾಗುವುದಕ್ಕಿಂತಲೂ ಮೊದಲೇ ವೈದ್ಯ ಶಾಖೆ ಪ್ರಾರಂಭವಾಗಿತ್ತು. ೧೧೮೧ರಲ್ಲಿ ಜಾತಿಭೇದವಿಲ್ಲದೆ ಯಾವ ಜನಾಂಗ ದವರಾದರೂ ಮಾಂಟ್‌ಪೆಲ್ಲಿಯರ್‌ನಲ್ಲಿ ಶಿಕ್ಷಣ ಕೊಡಲು ಬರಬಹುದೆಂದು ಆಹ್ವಾನ ಕೊಡಲಾಗಿತ್ತು. ಇದೇ ಸಮಯದಲ್ಲಿ ಸಲೆರ್ನೊ ಕೊನೆಗಾಣುತ್ತಿದ್ದುದರಿಂದಲೂ ಮತ್ತು ಅಲ್ಮೊಹಾಡಿಸ್ ಕಾರ್ಡೋವವನ್ನು ವಶಪಡಿಸಿಕೊಂಡು, ಕ್ರಿಶ್ಚಿಯನ್ನರೂ, ಯಹೋದ್ಯರೂ ಇಸ್ಲಾಂ ಮತವನ್ನು ಅವಲಂಬಿಸದಿದ್ದರೆ ದೇಶಭ್ರಷ್ಠರಾಗುವರೆಂದೂ ಅಜ್ಞೆ ಮಾಡಿದ್ದರಿಂದಲೂ, ಅನೇಕ ಕ್ರಿಶ್ಚಿಯನ್ ಮತ್ತು ಯಹೋದ್ಯ ವೈದ್ಯರು ಮಾಂಟ್‌ಪೆಲ್ಲಿಯರ್ ಬಂದು ಸೇರಿದರು. ಸ್ವಲ್ಪ ಕಾಲದಲ್ಲೇ ಕಾರ್ಡೋವ ಅಧಿಪತಿಯ್ರ ಕಿರುಕುಳವನ್ನು ತಡೆಯಲಾರದೆ ಮುಸ್ಲಿಮ್ ವೈದ್ಯರು ಕೂಡ ಮಾಂಟ್‌ಪೆಲ್ಲಿಯರ್‌ಗೆ ಪ್ರಯಾಣ ಮಾಡಿದರು. ಈ ಮೂರು ಪಂಗಡದವರು ತಮ್ಮ ಅರಬ್ಬಿ ಸಂಸ್ಕೃತಿಯನ್ನು ಜತೆಯಲ್ಲೇ ತಂದು,ಮಾಂಟ್‌ಪೆಲ್ಲಿಯರ್ ವೈದ್ಯಶಾಲೆಗೆ ಅರಬ್ಬಿರೂಪವನ್ನು ಕೊಟ್ಟರು. ಇದು ಸಾಲದೆ ಟೊಲೀಡೊದಲ್ಲಿ ಆರ್ಚಿಬಿಷಪ್ ರೇಮಂಡ್ ಸ್ಥಾಪಿಸಿದ್ದ ಗ್ರೀಕರ, ಅರ ಬ್ಬರ ಸಂಸ್ಕೃತಿಗಳನ್ನೊಳಗೊಂಡ ಭಾಷಾಂತರಕಾರರ ವಿದ್ಯಾಶಾಲೆಯ ಪ್ರಭಾವದಿಂದ ಮಾಂಟ್‌ಪೆಲ್ಲಿಯರ್‌ನಲ್ಲಿ ಅರಬ್ಬಿ ಸಂಪ್ರದಾಯ ಮತ್ತಷ್ಟು ಹೆಚ್ಚಿತು.

೧೨೨೦ರಲ್ಲಿ ಕಾರ್ಡಿನಲ್ ಕಾನ್ರಾಡ್‌ನನ್ನು ಮಾಂಟ್‌ಪೆಲ್ಲಿಯರ್ ವೈದ್ಯಶಿಕ್ಷಣದ ಮೇಲ್ವಿಚಾರಣೆಗೆ ಪೋಪ್ ಅನೋರಿಯಸ್ ನೇಮಿಸಿದನು. ಇಲ್ಲಿ ಅನುಮತಿ ಪಡೆದ ಅಧ್ಯಾಪಕರೇ ಶಿಕ್ಷಕರಾಗಿದ್ದರು. ಇವರಿಂದ ಶಿಕ್ಷಣ ಪಡೆದ ವಿದ್ಯಾರ್ಥಿಗಳೇ ಅರ್ಹರಾದ ಅಭ್ಯರ್ಥಿಗಳಾಗಿದ್ದರು. ಯಹೂದ್ಯರಿಗಾಗಲೀ, ಮುಸ್ಲಿಮರಿಗಾಗಲೀ ವ್ಯಾಸಂಗ ಮಾಡಲು ಯಾವ ಅಡ್ಡಿಯೂ ಇರಲಿಲ್ಲ. ಆದ್ದರಿಂದ ಅನೇಕ ಯಹೂದ್ಯರು, ಮುಸ್ಲಿಮರು ೧೩ ಮತ್ತು ೧೪ನೇ ಶತಮಾನಗಳಲ್ಲಿ,ಮಾಂಟ್‌ಪೆಲ್ಲಿಯರ್‌ನಲ್ಲಿ ವ್ಯಾಸಂಗ ಪಡೆಯುತ್ತಿದ್ದರು. ಮೊದಲಿಗೆ ವೈದ್ಯ, ನ್ಯಾಯ, ಸಾಹಿತ್ಯ ಶಾಖೆಗಳೆಲ್ಲಾ ಬೇರೆಯಾಗಿದ್ದು, ೧೨೮೯ರಲ್ಲಿ, ೪ನೇ ನಿಕೊಲಾಸ್‌ನ ರಾಜಶಾಸನದ ಪ್ರಕಾರ ಒಟ್ಟಿಗೆ ಸೇರಿ, ಮಾಂಟ್‌ಪೆಲ್ಲಿಯರ್ ವಿಶ್ವವಿದ್ಯಾಲಯವಾಗಿ ಪರಿಣಮಿಸಿತು. ಅನೇಕ ವರ್ಷಗಳ ಕಾಲ ಮಾಂಟ್‌ಪೆಲ್ಲಿಯರ್ ವಿಶ್ವವಿದ್ಯಾಲಯ ಪ್ರಖ್ಯಾತವಾದ ಕೇಂದ್ರವಾಗಿತ್ತು. ಗ್ರೀಕ್ ಮತ್ತು ಅರಬ್ಬಿ ಸಂಪ್ರದಾಯಗಳೇ ಅದರ ಆಧಾರವಾಗಿತ್ತು. ಪ್ರವೀಣತಾಪತ್ರ, ಸ್ನಾತಕ ಪದವಿ ಮತ್ತು ಕಲಾಪ್ರವೀಣನೆಂದು ಮೂರು ಬಗೆ ಪದವಿಗಳನ್ನು ವೈದ್ಯಶಾಸ್ತ್ರಜ್ಞರಿಗೆ ಕೊಡಲಾಗುತ್ತಿತ್ತು.

ವಿಲ್ಲಿನೋವ ಆರ್ನಾಲ್ಡ್

ವಿಲ್ಲಿನೋವ ಆರ್ನಾಲ್ಡ್ ಮಧ್ಯ ಯುಗದ ವೈದ್ಯರಲ್ಲಿ ಅತ್ಯುನ್ನತ ಕೀರ್ತಿ ಪಡೆದಿದ್ದನು. ತತ್ತ್ವಶಾಸ್ತ್ರ, ಮತಧರ್ಮಶಾಸ್ತ್ರ ಮತ್ತು ವಿಜ್ಞಾನದಲ್ಲೂ ಪಂಡಿತನಾಗಿದ್ದನು. ಸ್ಪೆಯಿನಿನಲ್ಲಿ ಹುಟ್ಟಿ, ಮಾಂಟ್‌ಪೆಲ್ಲಿಯರ್‌ನಲ್ಲಿ ವ್ಯಾಸಂಗ ಮಾಡಿದ್ದನು. ಒಳ್ಳೆಯ ಬರಹಗಾರನಾಗಿ ಲ್ಯಾಟಿನ್, ಗ್ರೀಕ್, ಅರಬ್ಬಿ ಮತ್ತು ಯಹೂದ್ಯ ಭಾಷೆಗಳಲ್ಲಿ ಪರಿಣತನಾಗಿದ್ದನು. ಬಹಳ ದಿವಸಗಳು ಮಾಂಟ್‌ಪೆಲ್ಲಿಯರ್‌ನಲ್ಲಿ ವೈದ್ಯಶಿಕ್ಷಕನಾಗಿದ್ದು, ರಾಜರ ಮತ್ತು ಕ್ರೈಸ್ತ ಗುರುಗಳ ಖಾಸಾ ವೈದ್ಯನಾಗಿದ್ದನು. ಆದರೂ ಅನೇಕ ವೇಳೆ ತನ್ನ ಗುರುಗಳನ್ನೇ ವಿರೋಧಿಸಿ ತನ್ನ ಆಚಾರರಹಿತವಾದ ಮಾತುಗಳಿಂದ ಹಗೆತನವನ್ನು ಸಂಪಾದಿಸಿದ್ದನು. ಇದನ್ನು ಸಹಿಸಲಾರದೆ ಇವನು ಬರೆದಿದ್ದ ಪುಸ್ತಕಗಳನ್ನೆಲ್ಲಾ ಕ್ರೈಸ್ತ ಗುರುಗಳು ಸುಟ್ಟರೆಂದು ಹೇಳಲಾಗಿದೆ.

ಇವನ ವೈದ್ಯಶಾಸ್ತ್ರ ಮತ್ತು ಶಸ್ತ್ರವೈದ್ಯಗಳೆರಡೂ ಪ್ರಸಿದ್ಧ ಗ್ರಂಥಗಳಾಗಿದ್ದವು. ಕೀವ್ಗೂಡಿದ ಗಾಯದಿಂದ ಕೀವು ತೆಗೆಯದಿದ್ದರೆ ಕೇಡುಂಟಾಗುವುದೆಂದೂ, ಹುಚ್ಚುನಾಯಿ ಕಡಿದ ಸ್ಥಳವನ್ನು ಅಗಲ ಮಾಡಿ ರಕ್ತ ಹರಿಯುವಂತೆ ಮಾಡಬೇಕೆಂದೂ, ಇಲಿಗಳನ್ನು ಓಡಿಸಲು ಹೊಗೆಯನ್ನು ಹಾಕಬೇಕೆಂದೂ ತಿಳಿಸಿದ್ದನು. ಇವನು ವಿಷಗಳನ್ನು ಕುರಿತು ಬರೆದಿದ್ದ ಪುಸ್ತಕದ ಪ್ರಾರಂಭದಲ್ಲಿ, ಹೆಂಗಸರು ವಿಷಜಂತುಗಳಾದ್ದರಿಂದ,ದೇವರ ನೆರವಿನಿಂದ ಹೆಂಗಸರ ರೋಗಗಳನ್ನು ಈ ಪುಸ್ತಕದಲ್ಲಿ ಪರಿಶೀಲಿಸಲು ಯತ್ನಿಸುವೆನು' ಎಂದು ಹೇಳಿದ್ದನು. ಜ್ಞಾನ ಶೋಧನೆಯಲ್ಲಿ ಜೀವನ ಸಂಜೀವಿನಿಯನ್ನು ಹುಡುಕುತ್ತ, ಬ್ರಾಂದಿಯನ್ನು ತಯಾರಿಸಿ "ಜೀವಾಳ ಜಲ" ಎಂದು ಹೆಸರು ಕೊಟ್ಟಿದ್ದನು.

ಈಗಲೂ ಉಪಯೋಗದಲ್ಲಿರುವ ಮದ್ಯಾರ್ಕ ಅವನ ಶೋಧನೆಯ ಫಲ. ಇಷ್ಟಾದರೂ, ಇವನು ಮಾಯಾ ಮಂತ್ರ, ಮಾಟ, ರಸತಂತ್ರ,....ಅಲ್ಲದೆ ಜ್ಯೋತಿಷ್ಯವನ್ನೂ ನಂಬಿದ್ದನು.

ಗೈ ಡಿ ಷಾಲಿಯರ್

ಗೈ ಡಿ ಷಾಲಿಯರ್ (೧೩೦೦-೧೩೬೮) ಇವನು ಮಾಂಟ್‌ಪೆಲ್ಲಿಯರ್ ಮತ್ತು ಬೊಲೋನಗಳಲ್ಲಿ ವಿದ್ಯಾಭ್ಯಾಸ ಮಾಡಿ ಅವಿಗ್ನಾನ್ ಎಂಬಲ್ಲಿ ವೈದ್ಯನಾಗಿದ್ದನು. ಅಲ್ಲಿ ಪೋಪ್ ಆರನೇ ಕ್ಲೆಮೆಂಟ್‌ಗೆ ವೈದ್ಯನಾಗಿದ್ದನು. ಆಗ ಹಬ್ಬಿದ್ದ ಪ್ಲೇಗ್ ರೋಗಿಗಳಿಗೆ ಮನಃಪೂರ್ವಕವಾಗಿ ಸೇವೆ ಸಲ್ಲಿಸಿದ್ದನು. ಅವನಿಗೂ ಪ್ಲೇಗ್ ತಗುಲಿದರೂ ದೈವವಶಾತ್ ಗುಣವಾಯಿತು. ಇವನು ಬೊಲೋನದಲ್ಲಿದ್ದಾಗಲೇ ಶವಚ್ಛೇದನೆ ಮತ್ತು ಶವಪರೀಕ್ಷೆಗಳನ್ನು ಮಾಡುತ್ತಿದ್ದನು. ಆದ್ದರಿಂದ ಮಾಂಟ್‌ಪೆಲ್ಲಿಯರ್‌ಗೆ ಬಂದ ಮೇಲೆ ಅಲ್ಲಿಯೂ ಈ ಕ್ರಿಯೆಗಳು ನಡೆದುಬಂದಿದ್ದವು. ಇವನು ಬರೆದಿದ್ದ ಶಸ್ತ್ರವೈದ್ಯ ಪುಸ್ತಕದ ಪ್ರಾರಂಭದಲ್ಲೇ ಅಂಗಚ್ಛೇದನವನ್ನು ಕುರಿತು ಬರೆಯುತ್ತ, 'ವೈದ್ಯರಿಗೆ ಇದು ಉಪಯೋಗವಾಗುವುದಾದರೆ, ಶಸ್ತ್ರವೈದ್ಯರಿಗಂತೂ ಇನ್ನೂ ಅತ್ಯಗತ್ಯ' ಎಂದು ಹೇಳಿದ್ದನು. ೧೩೬೩ರಲ್ಲಿ ಬರೆದ ಈ ಪುಸ್ತಕ, ೧೮ನೇ ಶತಮಾನದ ವರೆವಿಗೂ ಪ್ರಚಾರದಲ್ಲಿತ್ತು. ಲ್ಯಾಟಿನ್ ಭಾಷೆಯಲ್ಲಿ ೧೬ ಪ್ರಕಟಣೆಗಳಾಗಿದ್ದವು. ಫ್ರೆಂಚ್ ಭಾಷೆಯಲ್ಲಿ ೪೩, ಇಟಾಲಿಯನ್ ಭಾಷೆಯಲ್ಲಿ ೫, ಸ್ಪಾನಿಷ್ ಭಾಷೆಯಲ್ಲಿ ೫, ಇಂಗ್ಲೀಷಿನಲ್ಲಿ ೧, ಜರ್ಮನ್ ಭಾಷೆಯಲ್ಲಿ ಅನೇಕ ಪ್ರಕಟನೆಗಳಾಗಿದ್ದವು. ಹಿಪ್ಪೊಕ್ರೇಟಿಸ್, ಗ್ಯಾಲೆನ್, ರೇಸಸ್, ಅವಿಸೆನ್ನ, ಹಾಲಿ ಅಬ್ಬಾಸ್, ಅಲ್ಬುಕೇಸಿಯನ್, ಸಾಲಿಸಾಟೊ, ಆರ್ನಾಲ್ಡ್ ಮುಂತಾದವರ ಪ್ರಭಾವವನ್ನು ವಿವರಿಸಿದ್ದನು. ಆದರೆ ತಿಯೊಡೆರಿಕ್‌ನನ್ನು ದೂಷಿಸಿದ್ದನು. ಶಸ್ತ್ರವೈದ್ಯನ ಗುಣಗಳನ್ನು ವಿವರಿಸುತ್ತ, "ಶಸ್ತ್ರವೈದ್ಯನಿಗೆ ಆಸೆ, ಲಾಭಗಳಿರದೆ, ವಿನಯ, ಶಾಂತತೆ, ಕರ್ತವ್ಯನಿಷ್ಠೆ, ಹಾಗೂ ಕರುಣೆ ಇದ್ದು ತನ್ನದೇ ಆದ ಘನತೆ ಇರಬೇಕು" ಎಂದು ಹೇಳಿದ್ದನು. ಬೂರುವನ್ನು ಬುಡಮುಟ್ಟ ಶಸ್ತ್ರಕ್ರಿಯೆಯಿಂದ ಸರಿಪಡಿಸಬೇಕೆಂದು ಅವನ ಅಭಿಲಾಷೆಯಾಗಿದ್ದರೂ, ಎಲ್ಲಾರೋಗಿಗಳಲ್ಲೂ ಶಸ್ತ್ರಕ್ರಿಯೆ ಮಾಡುತ್ತಿರಲಿಲ್ಲ. ಬೇಕಾದ ಕಡೆ ಜೀರ್ಕಟ್ಟನ್ನು ಉಪಯೋಗಿಸಬಹುದೆಂದು ಹೇಳಿದ್ದನು. ಶಸ್ತ್ರಕ್ರಿಯೆ ಮಾಡಲೇ ಬೇಕಾದರೆ ರೋಗಿಯನ್ನು "ಟ್ರೆಂಡಲನ್‌ಬರ್ಗ್" ನಿಲುವಿನಲ್ಲಿ ಮಲಗಿಸಿ ಮಾಡುತ್ತಿದ್ದನು. ವೃಷಣವನ್ನು ತ್ಯಾಗ ಮಾಡುತ್ತಿದ್ದ. ಅಂಡವಾಯುವಿನ ಶಸ್ತ್ರಕ್ರಿಯೆಯ ಕ್ರಮವನ್ನು ಖಂಡಿಸಿದ್ದನು. ಮೂಳೆಮುರಿತವನ್ನು ಶುದ್ಧಮಾಡಿ, ದಬ್ಬೆಕಟ್ಟಿ, ಮುರಿದಿರುವ ತುದಿಗಳು ಸರಿಯಾದ ಸ್ಥಾನಕ್ಕೆ ಬರಲು ಗಡಗಡೆಯನ್ನು ಉಪಯೋಗಿಸಿ ಮುರಿದ ಭಾಗವನ್ನು ಎಳೆದಿಡುತ್ತಿದ್ದನು. ರೋಗಿಗಳು ಮೇಲೆ ಏಳಲು ಅನುಕೂಲವಾಗಲು ಎದುರುಗಡೆ ಹಗ್ಗ ಕಟ್ಟುವ ಕ್ರಮವನ್ನು ತೋರಿಸಿದ್ದನು. ದೋಷವಿಲ್ಲದೆ ಶಸ್ತ್ರಚಿಕಿತ್ಸೆ

ಮಾಡಬೇಕಾದರೆ ಅಂಗರಚನೆಯನ್ನು ಚೆನ್ನಾಗಿ ತಿಳಿಧಿರಬೇಕೆಂದು ಒತ್ತಿ ಹೇಳಿದ್ದನು. ಹಲ್ಲುಗಳನ್ನು ಶುದ್ಧವಾಗಿಡುವ ಕ್ರಮಗಳನ್ನೂ, ಸವೆದ ಹಲ್ಲುಗಳನ್ನು ತೆಗೆದುಹಾಕಿ ಕೃತಕ ಹಲ್ಲು ಕಟ್ಟುವ ವಿಧಾನಗಳನ್ನು ತಿಳಿದಿದ್ದನು. ಇವನ ಶಸ್ತ್ರವೈದ್ಯದ ಪುಸ್ತಕದಲ್ಲಿ, ಔಷಧವಸ್ತುಶಾಸ್ತ್ರ ಮತ್ತು ಮುರತಗಳ ರಚನೆಗಳೂ ಇದ್ದವು. ಇವನು ಶಸ್ತ್ರವೈದ್ಯದಲ್ಲಿ ಶ್ರೇಷ್ಠಸ್ಥಾನವನ್ನು ಪಡೆದಿದ್ದುದರಿಂದ, ಶಸ್ತ್ರವೈದ್ಯದ ಪಿತಾಮಹನೆಂದು ಬಿರುದು ಕೊಟ್ಟಿದ್ದರು. ಆದರೂ ಆ ಕಾಲದ ವಿಜ್ಞಾನಿಗಳಂತೆ ಇವನೂ ಮನುಷ್ಯನ ಮೇಲಿರುವ ಗ್ರಹಗಳ ಪ್ರಭಾವವನ್ನು ನಂಬಿದ್ದನು.

ಆರ್ಡರ್ನೆ ಜಾನ್

ಇದೇ ಕಾಲದಲ್ಲಿ ಇಂಗ್ಲೆಂಡಿನಲ್ಲೂ ಹಲವಾರು ವೈದ್ಯರಿದ್ದಿರಬಹುದು. ಅವರ ಪೈಕಿ ಆರ್ಡರ್ನೆಯ ಜಾನ್ ಮುಖ್ಯಸ್ಥನಾಗಿದ್ದನು (೧೩೦೭-೧೩೯೦). ಮಾಂಟ್‌ಪೆಲ್ಲಿಯರ್‌ನಲ್ಲಿ ವ್ಯಾಸಂಗ ಮಾಡಿ, ಫ್ರಾನ್ಸಿನಲ್ಲೇ ಅನೇಕ ದಿವಸವಿದ್ದು ಸೈನ್ಯದ ಮುಖ್ಯ ವೈದ್ಯನಾಗಿದ್ದನು. ಕೆಲವು ವರ್ಷಗಳ ಮೇಲೆ ತನ್ನ ದೇಶವಾದ ಇಂಗ್ಲೆಂಡಿಗೆ ಹಿಂದಿರುಗಿ, ನಿವಾರ್ಕ್‌ನಲ್ಲಿ ಕೆಲವು ದಿವಸವಿದ್ದು, ಲಂಡನ್ನಿಗೆ ಬಂದು ವೈದ್ಯವೃತ್ತಿಯನ್ನು ಆರಂಭಿಸಿದನು. ಮಲದ್ವಾರದ ರೋಗಗಳ ಶಸ್ತ್ರಕ್ರಿಯೆ ನಡೆಸುವುದರಲ್ಲಿ ಇವನು ನಿಸ್ಸೀಮನಾಗಿದ್ದನು. ಆಸನದಲ್ಲಿನ ಬೊರಿಗೆ ರೋಗಕ್ಕೆ ಹೊಸ ಶಸ್ತ್ರಕ್ರಿಯೆಯೊಂದನ್ನು ಕಂಡುಹಿಡಿದಿದ್ದನು. ಇವನು ಮಲದ್ವಾರದ ಏಡಿಗಂತಿಯನ್ನು ನಿದಾನ ಮಾಡುವ ಕ್ರಮವನ್ನು ಅರಿತಿದ್ದನು. ಅದನ್ನು ಶಸ್ತ್ರಕ್ರಿಯೆಯಿಂದ ತೆಗೆದರೆ ಹಾನಿಯಾಗುವುದೆಂದೂ ತಿಳಿದಿದ್ದನು. ಶಸ್ತ್ರಕ್ರಿಯೆ ಮಾಡಲು ದೂರದ ಪ್ರಾಂತ್ಯಗಳಿಗೆ ಹೋಗುತ್ತಿದ್ದನೆಂದೂ ಹೆಚ್ಚು ರುಸುಮು ತೆಗೆದುಕೊಳ್ಳುತಿದ್ದನೆಂದೂ ಹೇಳಲಾಗಿದೆ. ಶಸ್ತ್ರಕ್ರಿಯೆ ಮಾಡುವ ಮೊದಲು ಶಸ್ತ್ರವೈದ್ಯ ತನ್ನ ಉಗುರುಗಳನ್ನು ಕತ್ತರಿಸಿ ನಯ ಮಾಡಬೇಕೆಂದೂ, ಕೈಗಳನ್ನು ಚೊಕ್ಕಟವಾಗಿಟ್ಟುಕೊಳ್ಳಬೇಕೆಂದೂ ತಿಳಿಸಿದ್ದನು. ಇಷ್ಟಾದರೂ ಯಂತ್ರ ಮಂತ್ರಗಳಲ್ಲಿ ಅವನಿಗೆ ನಂಬಿಕೆ ಹೋಗಿರಲಿಲ್ಲ. ಇವನ ಅನೇಕ ಲೇಖನಗಳು ಇನ್ನೂ ಪ್ರಕಟವಾಗದೆ ಹಸ್ತಪ್ರತಿಗಳ ರೂಪದಲ್ಲೇ ಇವೆ.

ಪ್ಯಾರಿಸ್ ವಿಶ್ವವಿದ್ಯಾಲಯ

ಶಾರ್ಲೆಮಾನ್‌ನಿಂದ ಪ್ಯಾರಿಸ್ ವಿಶ್ವವಿದ್ಯಾಲಯ ಪ್ರಾರಂಭವಾಯಿತೆಂದು ಸಂಪ್ರದಾಯದ ಮಾತಾಗಿದ್ದರೂ, ಇದನ್ನು ಇನ್ನೂ ದೃಢಪಡಿಸಲಾಗಿಲ್ಲ, ಮತಧರ್ಮ ಶಾಸ್ತ್ರದ ಪ್ರವೀಣ ಪೀಟರ್ ಅಬೆಲಾರ್ಡ್ (೧೦೭೯-೧೧೪೨) ಸ್ಥಾಪಕನಿರಬಹುದೆಂದು ಹೇಳಲಾಗಿದೆ. ಪ್ಯಾರಿಸ್ ವಿಶ್ವವಿದ್ಯಾಲಯ ಪ್ರಾರಂಭದಿಂದಲೂ ಕ್ರೈಸ್ತ ಗುರುಗಳ ಅಧೀನದಲ್ಲೇ ಇತ್ತು. ಅಲ್ಲಿಯ ವಿದ್ಯಾರ್ಥಿ, ಅಧ್ಯಾಪಕರೆಲ್ಲಾ ಬ್ರಹ್ಮಚರ್ಯವನ್ನು ಆಚರಿಸಬೇಕಾಗಿತ್ತು. ಆಚರಿಸದಿದ್ದವರು ಕಠಿಣ ಶಿಕ್ಷೆಗೆ ಗುರಿಯಾಗು

ತ್ತಿದ್ದರು. ೧೩೯೫ರಲ್ಲಿ ಒಬ್ಬ ವಿದ್ಯಾರ್ಥಿ ವ್ಯಾಸಂಗ ಮಾಡುತ್ತಿದ್ದಾಗಲೇ ಮದುವೆಯಾದ್ದರಿಂದ ಅವನು ಪದವೀಧರನಾಗಲು ಅಪ್ಪಣೆ ಸಿಗಲಿಲ್ಲ. ೧೪೪೩ರಲ್ಲಿ ಒಬ್ಬ ಮುಖ್ಯ ವಿದ್ಯಾಧಿಕಾರಿ ಮತಪದ್ಧತಿಗೆ ವಿರೋಧವಾಗಿ (ಅದರಲ್ಲೂ ವಿಧವೆಯನ್ನು) ಲಗ್ನವಾದ್ದರಿಂದ, ಅವನನ್ನು ಅಧಿಕಾರದಿಂದ ತೆಗೆದುಹಾಕಿದರು. ಈ ನಿಬಂಧನೆಗಳಿದ್ದರೂ ವೈದ್ಯ ಸಂಸ್ಥೆ ಮಾತ್ರ ಕ್ರೈಸ್ತಮಂದಿರದ ಆಡಳಿತದಲ್ಲೇ ಮುಂದುವರಿಯುತ್ತಿತ್ತು. ಹಲವು ವರ್ಷಗಳ ವರಿವಿಗೂ, ಸಲೆರ್ನೊ, ಬೊಲೋನ, ಮಾಂಟ್‌ಪೆಲ್ಲಿಯರ್ ವಿದ್ಯಾಪೀಠಗಳ ಪ್ರಖ್ಯಾತಿಯನ್ನು ಪ್ಯಾರಿಸ್ ವೈದ್ಯಪೀಠ ಪಡೆಯಲೇ ಇಲ್ಲ. ಆದ್ದರಿಂದ ಹೊರ ದೇಶದ ವಿದ್ಯಾರ್ಥಿಗಳು ಪ್ಯಾರಿಸ್ ವೈದ್ಯಶಾಲೆಗೆ ಹೆಚ್ಚು ಹೆಚ್ಚಾಗಿ ಬರುತ್ತಿರಲಿಲ್ಲ. ವೈದ್ಯ ಶಿಕ್ಷಣ ೬ ವರ್ಷಗಳ ಕಾಲ ನಡೆಯುತ್ತಿದ್ದರೂ ಪಠ್ಯಪುಸ್ತಕಗಳು ಅಷ್ಟು ಶ್ರೇಷ್ಠವಾಗಿರಲಿಲ್ಲ. ಅಂಗರಚನೆಶಾಸ್ತ್ರ ಅಭಿವೃದ್ಧಿಯಾಗಿರಲಿಲ್ಲ. ೧೩೭೭ರಲ್ಲೇ ಮಾಂಟ್‌ಪೆಲ್ಲಿಯರ್‌ನಲ್ಲಿ ಅಂಗಚ್ಛೇದನೆ ಕಾನೂನಿಗೆ ಒಳಗಾಗಿ ಬಹಳವಾಗಿ ನಡೆಯುತ್ತಿದ್ದರೂ, ಪ್ಯಾರಿಸ್ಸಿನಲ್ಲಿ ೧೫೫೧ರ ತನಕ ಕಾನೂನು ಜಾರಿಗೆ ಬಂದಿರಲಿಲ್ಲ. ಕ್ರಮೇಣ ಮಾಂಟ್‌ಪೆಲ್ಲಿಯರ್ ಹಿಂದೆ ಬೀಳಲು, ಪ್ಯಾರಿಸ್ ಮತ್ತು ಪಾಡ್ವ ವಿಶ್ವವಿದ್ಯಾಲಯಗಳು ಮುಂದೆ ಸರಿದು ಪ್ರಖ್ಯಾತಿ ಪಡೆದವು.

ಸರ್ವೋತ್ತಮ ಅಲ್ಬರ್ಟಸ್

ಇವನು ತನ್ನ ೧೬ನೇ ವಯಸ್ಸಿನಲ್ಲೇ ಡಾಮಿನಿಕನ್ ಪಂಥವನ್ನು ಸೇರಿ ಪ್ಯಾರಿಸ್ಸಿನಲ್ಲೂ ಪಾಡ್ವದಲ್ಲೂ ವಿದ್ಯಾಭ್ಯಾಸ ಮಾಡಿ ಜರ್ಮನಿಯಲ್ಲಿ ಕೆಲಸಕ್ಕೆ ಸೇರಿದ್ದನು. ಅನಂತರ ರ್‍ಯಾಟಿಸ್‌ಬಾನ್‌ನಲ್ಲಿ ಕ್ರೈಸ್ತ ಗುರುವಾಗಿದ್ದನು. ಸ್ವಲ್ಪ ಕಾಲದ ಮೇಲೆ ಪ್ರೌಢ ವಿದ್ವಾಂಸನಾಗಬೇಕೆಂಬ ಆಸೆಯಿಂದ ಕ್ರೈಸ್ತ ಗುರುವಿನ ಕೆಲಸಕ್ಕೆ ರಾಜಿನಾಮೆ ಕೊಟ್ಟು, ಕಲೋನ್ ಪಟ್ಟಣಕ್ಕೆ ಬಂದು ೧೨೪೮ ರಲ್ಲಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಿದನು. ಮತಧರ್ಮಶಾಸ್ತ್ರ, ತತ್ವಶಾಸ್ತ್ರ, ರಸಾಯನ ಶಾಸ್ತ್ರ ಮುಂತಾದ ಇನ್ನೂ ಅನೇಕ ಶಾಸ್ತ್ರಗಳಲ್ಲಿ ಪಾಂಡಿತ್ಯ ಹೊಂದಿ ಅನೇಕ ಪುಸ್ತಕಗಳನ್ನು ಬರೆದಿದ್ದನು. ವೈದ್ಯಶಾಸ್ತ್ರದಲ್ಲೂ ಪಾಂಡಿತ್ಯ ಹೊಂದಿ, ಗಿಡಮೂಲಿಕೆಗಳ ಮತ್ತು ಶಿಲೆಗಳ ಪ್ರಯೋಜನಗಳನ್ನು ಕುರಿತು ಪುಸ್ತಕವನ್ನು ಬರೆದಿಟ್ಟನು. ೧೨ ಮತ್ತು ೧೩ ನೇ ಶತಮಾನಗಳಲ್ಲಿ ಜ್ಞಾನಸಂಪಾದನೆ ಮಾಡಿದವರಲ್ಲಿ ಇವನು ಬಹಳ ಮುಖ್ಯನಾಗಿದ್ದುದರಿಂದ ಸರ್ವೋತ್ತಮನೆಂದು ಹೆಸರು ಪಡೆದಿದ್ದನು. ಇವನ ಶಿಷ್ಯರಾಗಿ ಪೀಟ್ರಸ್ ಹಿಸ್ಪಾನಸ್, ರೋಜರ್ ಬೇಕನ್, ಮತ್ತು ಥಾಮಸ್ ಅಕ್ವಿನಾಸ್ ವಿದ್ವಾಂಸರುಗಳಿದ್ದರು.

ಪೀಟ್ರಸ್ ಹಿಸ್ಪಾನಸ್

ಪೀಟ್ರಸ್ ಹಿಸ್ಪಾನಸ್-ಇವನು ಪೋರ್ಚುಗೀಸ್ ದೇಶದ ಲಿಸ್ಬನ್ ಪಟ್ಟಣದಲ್ಲಿ

ಸುಮಾರು ೧೨೧೦-೧೨೨೦ರ ಒಳಗೆ ಜನಿಸಿರಬಹುದೆಂದು ಊಹಿಸಲಾಗಿದೆ. ಚಿಕ್ಕ ವಯಸ್ಸಿನಲ್ಲೇ ವ್ಯಾಸಂಗ ಮಾಡಲು ಪ್ಯಾರಿಸ್ಸಿಗೆ ಬಂದು, ಮತಧರ್ಮ, ತರ್ಕ ಮತ್ತು ವೈದ್ಯಶಾಸ್ತ್ರಗಳಲ್ಲಿ ಶಿಕ್ಷಣ ಪಡೆದು, ೧೨೪೭ರಲ್ಲಿ ವೈದ್ಯಶಾಸ್ತ್ರದ ಪ್ರಾಧ್ಯಾಪಕನಾದನು. ಆಗ ಆರೋಗ್ಯಶಾಸ್ತ್ರ ಮತ್ತು ಕಣ್ಣುರೋಗಗಳನ್ನು ಕುರಿತು ಪುಸ್ತಕಗಳನ್ನು ಬರೆದನು. ಕ್ರಮೇಣ ಇವನ ಮಹತ್ವ ಬೆಳೆದು ಹತ್ತನೆ ಗ್ರೆಗರಿ ಕ್ರೈಸ್ತ ಗುರುವಿಗೆ ಮುಖ್ಯ ವೈದ್ಯನಾದನು. ಅನಂತರ ೧೨೭೩ರಲ್ಲಿ ಕಾರ್ಡಿನಲ್ ಪದವಿಯನ್ನೂ ಸಂಪಾದಿಸಿದನು. ಗ್ರೆಗರಿ ಸತ್ತ ಮೂರು ವರ್ಷಗಳಲ್ಲಿ ಇವನೇ ಪೋಪ್ ಪದವಿಯನ್ನೂ ಸಂಪಾದಿಸಿದನು. ವೈದ್ಯನಾಗಿದ್ದು ಪೋಪ್ ಪದವಿಯನ್ನು ಸಂಪಾದಿಸಿದವರಲ್ಲಿ ಇವನೇ ಮೊದಲನೆಯವ.

ರೋಜರ್ ಬೇಕನ್

ರೋಜರ್ ಬೇಕನ್ (೧೨೧೪-೧೨೯೪) ಆಕ್ಸ್‌ಫರ್ಡ್‌ನಲ್ಲಿ ವ್ಯಾಸಂಗ ಮಾಡಿ, ಎಂ. ಎ. ಪದವೀಧರನಾಗಿ, ಪ್ಯಾರಿಸ್ಸಿನಲ್ಲಿ ಬಹಳ ಕಾಲ ಪ್ರಾಧ್ಯಾಪಕನಾಗಿದ್ದನು. ಇವನ ಬುದ್ಧಿಶಕ್ತಿಯನ್ನು ಮೆಚ್ಚಿ ಡಾಕ್ಟರ್ ಮಿರಾಬಿಲಿಸ್ ಎಂಬ ಪ್ರಶಸ್ತಿಯನ್ನು ಕೊಟ್ಟಿದ್ದರು. ಇವನು ಸಾಕಷ್ಟು ಹಣವಂತನಾಗಿದ್ದುದರಿಂದ, ಅನೇಕ ಪ್ರಯೋಗಗಳಿಗೆ ಹಣ ಒದಗಿಸಿ, ಅನೇಕ ಯಂತ್ರಗಳನ್ನು ನಿರ್ಮಿಸಿದ್ದನು. ದೂರದರ್ಶಕ ಯಂತ್ರ, ಸೂಕ್ಷ್ಮದರ್ಶಕಯಂತ್ರ, ಕನ್ನಡಕ, ಮುಳುಗು ಪೆಟ್ಟಿಗೆ, ಹಾರುಮದ್ದು ಮುಂತಾದುವನ್ನು ನಿರ್ಮಿಸಿದುದಲ್ಲದೆ, ಆಕಾಶಯಾನ ನಿರ್ಮಾಣದಲ್ಲೂ ಭವಿಷ್ಯ ನುಡಿದಿದ್ದನು. ಇವನು ವೈದ್ಯನಲ್ಲದಿದ್ದರೂ ವೈದ್ಯದ ಬೆಳವಣಿಗೆಗೆ ಸಾಕಷ್ಟು ಪ್ರೋತ್ಸಾಹ ಕೊಟ್ಟಿದ್ದನು.

ಫ್ರಾನ್ಸಿಸ್ಕನ್ ಪಂಥವನಾದರೂ ಇಂಗ್ಲೆಂಡಿಗೆ ಹಿಂತಿರುಗಿದ ಮೇಲೆ ಫ್ರಾನ್ಸಿಸ್ಕನ್ ಮತ್ತು ಡಾಮಿನಿಕನ್ ಪಂಥಗಳ ಆಚಾರಗಳನ್ನು ಖಂಡಿಸಿದ್ದರಿಂದ, ೧೨೭೭ ರಿಂದ ೧೨೯೨ರ ತನಕ ಸೆರೆಮನೆಯಲ್ಲಿರಬೇಕಾಯಿತು. ಬಿಡುಗಡೆಯಾದ ಸ್ವಲ್ಪ ದಿವಸಗಳಲ್ಲೇ ಮರಣ ಸಂಭವಿಸಿತು.

ಲಾನ್‌ಫ್ರಾಂಚಿ

ಲಾನ್‌ಫ್ರಾಂಚಿ, ಇವನು ಸಾಲಿಸಿಟೊ ಶಿಷ್ಯನಾಗಿದ್ದು, ಗುರುವಿನ ಹಾಗೆ ವೈದ್ಯಶಾಸ್ತ್ರ ಮತ್ತು ಶಸ್ತ್ರವೈದ್ಯಗಳೆರಡರಲ್ಲೂ ತೊಡಗಿದ್ದನು. ಆದರೆ ಇವನಿಗೆ ಶಸ್ತ್ರವೈದ್ಯದಲ್ಲಿ ಹೆಚ್ಚು ಪ್ರೇಮವಿತ್ತು. ಇವನು ಮಿಲಾನಿನಲ್ಲಿ ಕೆಲಸಮಾಡುತ್ತಿದ್ದಾಗ, ಆ ಪಟ್ಟಣದ ಧಣಿಯೊಡನೆ ವಾದವಿವಾದಗಳಲ್ಲಿ ವಿರೋಧ ತೋರಿದ್ದರಿಂದ ದೇಶಭ್ರಷ್ಟನಾಗಿ ಲಿಯನ್ ಪಟ್ಟಣ ಸೇರಿದನು. ಇಲ್ಲಿ ಕಿರಿಯ ಶಸ್ತ್ರವೈದ್ಯ ("ಕೈರರ್ಜಿಯ ಪಾರ್ವ") ಎಂಬ ಪುಸ್ತಕ ಬರೆದು ಪ್ರಖ್ಯಾತಿಗೆ ಬಂದನು. ೧೨೯೫ರಲ್ಲಿ ಪ್ಯಾರಿಸ್ಸಿಗೆ ಬಂದು ಶಸ್ತ್ರವೈದ್ಯದಲ್ಲಿ ಶಿಕ್ಷಣ ಕೊಡುತ್ತಿದ್ದಾಗ, 'ಹಿರಿಯ ಶಸ್ತ್ರವೈದ್ಯ' (ಕೈರರ್ಜಿಯ ಮ್ಯಾಗ್ನ) ಎಂಬ ಪುಸ್ತಕ ಬರೆದನು. ಪ್ಯಾರಿಸ್ಸಿಗೆ ಬಂದ ಮೇಲೆ, ಫ್ರಾನ್ಸಿನ ಶಸ್ತ್ರವೈದ್ಯ ಚರಿತ್ರಾರ್ಹವಾಗಿ ಬೆಳೆಯಿತು. ಅಲ್ಲಿಯ ತನಕ ಶಸ್ತ್ರವೈದ್ಯ ಅವಿದ್ಯಾವಂತರ ಕೈಯಲ್ಲಿತ್ತು.


ಲಾನ್‌ಫ್ರಾಂಚ

ಇವನ ಪುಸ್ತಕಗಳು ಆಗಿನ ಕಾಲದಲ್ಲಿ ಅತಿ ಉತ್ಕೃಷ್ಟವಾಗಿದ್ದುದರಿಂದ ಯೂರೋಪಿನ ಎಲ್ಲಾ ವೈದ್ಯಶಾಲೆಗಳಲ್ಲೂ ಉಪಯೋಗದಲ್ಲಿದ್ದವು. ಗಂಟಲಿನಲ್ಲಿ ಗಾಯವಾಗಿ ನುಂಗಲ ಸಾಧ್ಯವಾಗಿದ್ದಾಗ, ಬೆಳ್ಳಿಯ ನಳಿಕೆಯಿಂದ ಅನ್ನನಾಳದ ಮೂಲಕ ಆಹಾರ ಕೊಡುವ ರೀತಿಯನ್ನು ಬಳಕೆಗೆ ತಂದಿದ್ದನು. ತಲೆ ಮೂಳೆಮುರಿತ ಇವನ ಆಪ್ತ ಉದ್ಯಮವಾಗಿತ್ತು. ಕುಡಿಯುವ ನೀರಿನ ದೋಷದಿಂದ ಗಳಗಂಡ ಬರುತ್ತದೆಂದೂ, ಆಲ್ಪ್ಸ್ ಮತ್ತು ಲೊಂಬಾರ್ಡಿ ನೀರು ಕುಡಿಯಬಾರದೆಂದೂ ತಿಳಿಸಿದ್ದನು.

ಪಾಡ್ವ

ಪಾಡ್ವ ವಿಶ್ವವಿದ್ಯಾಲಯ

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಪ್ಯಾರಿಸ್ಸಿನ ಆಶ್ರಯದಲ್ಲಿ ಹೇಗೆ ಸ್ಥಾಪಿತವಾಯಿತೋ ಹಾಗೆಯೇ ಪಾಡ್ವ ವಿಶ್ವವಿದ್ಯಾಲಯ ಬೊಲೋನದ ಆಶ್ರಯದಲ್ಲಿ ಸ್ಥಾಪಿತವಾಯಿತು. ಬೊಲೋನದಲ್ಲಿದ್ದ ಹಾಗೆ ಪಾಡ್ವದಲ್ಲೂ ಲೌಕಿಕ ವಿದ್ಯಾರ್ಥಿಗಳ ಸಂಸ್ಥೆಯಿತ್ತು. ಆದರೆ ಆಕ್ಸ್‌ಫರ್ಡ್ ಮತ್ತು ಪ್ಯಾರಿಸ್ಸುಗಳಲ್ಲಿ ವಿದ್ಯಾರ್ಥಿಗಳೂ ಅಧ್ಯಾಪಕರೂ ಬ್ರಹ್ಮಚರ್ಯವನ್ನು ಅನುಸರಿಸಬೇಕಾಗಿತ್ತು. ಪ್ರಾರಂಭವಾದ ಕೊಂಚ ಕಾಲದಲ್ಲೇ ಪಾಡ್ವ ವಿಶ್ವವಿದ್ಯಾಲಯ ಪ್ರಖ್ಯಾತಿಗೆ ಬಂದು ತನಗೆ ಆಶ್ರಯ ಕೊಟ್ಟ ಬೊಲೋನ ವಿಶ್ವವಿದ್ಯಾಲಯವನ್ನೇ ಮೀರಿಸುವ ಸ್ಥಿತಿಗೆ ಬಂತು.

ವಿದ್ಯಾರ್ಥಿಯೇ ಆಗಲಿ ಅಥವ ಅಧ್ಯಾಪಕರೇ ಆಗಲಿ ಬೊಲೋನ ಬಿಟ್ಟು, ಬೇರೆ ಯಾವ ವೈದ್ಯಶಾಲೆಗೂ ಹೋಗಬಾರದೆಂದೂ, ಹೋದರೆ ಕಠಿಣ ಶಿಕ್ಷೆ ವಿಧಿಸುವ ಆಜ್ಞೆ ಇದ್ದುದರಿಂದ, ವಿದ್ಯಾರ್ಥಿಗಳಿಗೂ ಅಲ್ಲಿಯ ಜನರಿಗೂ ಅಸಮಾಧಾನವಾಗಿ, ಕೆಲವು ವಿದ್ಯಾರ್ಥಿಗಳು ಬೊಲೋನ ಬಿಟ್ಟು ಪಾಡ್ವದಲ್ಲಿ ನೆಲೆಸಲು ಬಂದು ೧೨೨೨ರಲ್ಲಿ ಒಂದು ವಿಶ್ವವಿದ್ಯಾಲಯ ಪ್ರಾರಂಭವಾಗಲು ಕಾರಣರಾದರು. ಕೇವಲ ಆರು ವರ್ಷಗಳಲ್ಲೇ ಪಾಡ್ವ ಪರಿಸ್ಥಿತಿ ಹದಗೆಟ್ಟು, ಅನೇಕ ವಿದ್ಯಾರ್ಥಿಗಳು ಬಿಟ್ಟು ವರ್ಸೆಲ್ಲಿಗೆ ಹೋದರು. ವರ್ಸೆಲ್ಲಿಯಲ್ಲಿ ೫೦೦೦ ವಿದ್ಯಾರ್ಥಿಗಳಿಗೆ ವಸತಿಯನ್ನು, ೧೪ ಪ್ರಾಧ್ಯಾಪಕರಿಗೆ ಸಂಬಳ

ವನ್ನೂ ಮತ್ತು ವಿದ್ಯಾರ್ಥಿಗಳಿಗೆ, ೧೦,೦೦೦ ಪೌಂಡುಗಳ ಸಾಲವನ್ನೂ ಕೊಡಲು ಒಪ್ಪಿಗೆಯಾಗಿತ್ತು. ಹೀಗೆ ವಿದ್ಯಾರ್ಥಿಗಳು ಬಿಟ್ಟುಹೋದರೂ ಪಾಡ್ವ ವಿಶ್ವವಿದ್ಯಾಲಯದ ಕೀರ್ತಿ ಮಾತ್ರ ಕುಗ್ಗಲಿಲ್ಲ. ೧೪೦೫ರಲ್ಲಿ ವೆನಿಸ್ ಪಟ್ಟಣದ ಪ್ರಭಾವಕ್ಕೆ ಒಳಗಾದ ಮೇಲಂತೂ ಪಾಡ್ವ ಕೀರ್ತಿ ಇನ್ನಷ್ಟು ಹೆಚ್ಚಿ ಉತ್ಕೃಷ್ಟ ಸ್ಥಿತಿಗೇರಿತು.

ಬೊಲೋನ ವಿಶ್ವವಿದ್ಯಾಲಯದ ರಚನೆಯನ್ನೇ ಪಾಡ್ವ ಸಂಪೂರ್ಣವಾಗಿ ಅನುಸರಿಸಿತ್ತು. ನ್ಯಾಯ, ಸಾಹಿತ್ಯ, ವೈದ್ಯ ಮುಂತಾದ ಶಾಖೆಗಳೆಲ್ಲಾ ಪ್ರಾರಂಭವಾದವು. ವಿದ್ಯಾರ್ಥಿಗಳೇ ಅಧ್ಯಾಪಕರನ್ನು ಆರಿಸಿಕೊಳ್ಳುವ ರೂಢಿ ಇಲ್ಲೂ ಇತ್ತು. ವಿಶ್ವವಿದ್ಯಾಲಯದ ಅಧ್ಯಕ್ಷರ ಪಟ್ಟಾಭಿಷೇಕದ ಸಮಾರಂಭದಲ್ಲಿ ಅವನ ಮೇಲುಡುಪಿನ ಹಿಂಭಾಗವನ್ನು ಹರಿದು ಹಿಂದಕ್ಕೆ ಮಾರುತ್ತಿದ್ದ ಬೊಲೋನ ವಿದ್ಯಾರ್ಥಿಗಳ ಪದ್ಧತಿಯನ್ನು ಇಲ್ಲೂ ಅನುಸರಿಸುತ್ತಿದ್ದರು. ವಿಶ್ವವಿದ್ಯಾಲಯ ಕ್ರೈಸ್ತ ಗುರುಗಳ ಅಧೀನದಲ್ಲಿಲ್ಲದ್ದರಿಂದ, ಯಾವ ನಿಬಂಧನೆಯೂ ಇಲ್ಲದೆ ಉತ್ತಮ ಸ್ಥಿತಿಗೆ ಬೆಳೆಯಲು ಅನುಕೂಲವಾಯಿತು. ಇಲ್ಲಿ ಪ್ರಾಟೆಸ್ಟೆಂಟರೂ, ಯಹೂದ್ಯರೂ ವಿದ್ಯಾಭ್ಯಾಸ ಮಾಡಿ ಪದವೀಧರರಾಗುತ್ತಿದ್ದರು. ಕ್ಯಾತೊಲಿಕ್ ನಿಷ್ಠೆ ಪ್ರಕಾರ ಪದವೀಸ್ವೀಕಾರ ಕ್ರೈಸ್ತ ಮಂದಿರದಲ್ಲಾಗಬೇಕಾಗಿತ್ತು. ಆದರೆ ವಿಶ್ವವಿದ್ಯಾಲಯ ಇದನ್ನನುಸರಿಸದೆ ರಾಜರ ಅರಮನೆಯಲ್ಲಿ ಪದವೀ ಸ್ವೀಕಾರ ಸಮಾರಂಭವನ್ನು ನಡೆಸುತ್ತಿತ್ತು. ೧೪ ಮತ್ತು ೧೫ನೇ ಶತಮಾನಗಳಲ್ಲಿ ಬೊಲೋನ ಹೇಗೆ ಉತ್ತಮ ಕೇಂದ್ರವಾಗಿತ್ತೋ, ಅದೇ ರೀತಿ, ೧೬ನೇ ಶತಮಾನದಲ್ಲಿ ಪಾಡ್ವ ವಿಶ್ವವಿದ್ಯಾಲಯ ನಿಸ್ಸಂದೇಹವಾದ ಕೀರ್ತಿ ಪಡೆದು, ಯೂರೋಪಿನಲ್ಲೇ ಪ್ರಮುಖ ಸ್ಥಾನ ಪಡೆಯಿತು.

ಅಬಾನೋದ ಪೀಟರ್

ಅಬಾನೋದ ಪೀಟರ್ (೧೨೫೦-೧೩೧೫) ಇಡೀ ಪಾಡ್ವ ವಿಶ್ವವಿದ್ಯಾಲಯದ ಮೊದಲನೇ ಪ್ರಾಧ್ಯಾಪಕನಾಗಿ ಸಾಕಷ್ಟು ಗೌರವ ತಂದು ಪಾಡ್ವ ವಿಶ್ವವಿದ್ಯಾಲಯಕ್ಕೆ ಸೇವೆ ಸಲ್ಲಿಸಿದನು. ಅಲ್ಲಿಗೆ ೫ ಮೈಲಿ ದೂರದಲ್ಲಿದ್ದ ಅಬಾನೊ ಹಳ್ಳಿಯಲ್ಲಿ ೧೨೫೦ರಲ್ಲಿ ಜನಿಸಿ, ಗ್ರೀಸ್ ಮತ್ತು ಕಾನ್‌ಸ್ಟಾಂಟಿನೋಪಲ್‌ಗಳಲ್ಲಿ ವ್ಯಾಸಂಗ ಮಾಡಿ, ಪ್ಯಾರಿಸ್ಸಿನಲ್ಲಿ ವೈದ್ಯ ಪದವೀಧರನಾಗಿ, ಪಾಡ್ವಕ್ಕೆ ಶಿಕ್ಷಣ ಕೊಡಲು ಆಹ್ವಾನಿಸಲ್ಪಟ್ಟಿದ್ದನು. ಕೆಲವು ದಿವಸಗಳಲ್ಲೇ ತೇಜಸ್ವಿಯಾಗಿ ಎಲ್ಲರ ನಂಬಿಕೆಯನ್ನೂ ಪಡೆದಿದ್ದನು. ಇವನು ವೈದ್ಯವೃತ್ತಿಯಿಂದ ಹೆಚ್ಚು ಹಣ ಸಂಪಾದಿಸಿದ್ದರಿಂದಲೂ, ಇವನ ವಿವೇಚನಾ ತತ್ವಗಳು ಕ್ರೈಸ್ತ ಮಂದಿರಗಳಿಗೆ ವಿರೋಧವಾಗಿದ್ದುದರಿಂದಲೂ, ಇವನ ಪ್ರಾಣಕ್ಕೆ ಹಾನಿ ಬರುವ ಪರಿಸ್ಥಿತಿ ಒದಗಿ ಬಂದ ಸಮಯದಲ್ಲಿ ತಾನೇ ರೋಗಕ್ಕೆ ತುತ್ತಾಗಿ ತನ್ನ ಶತ್ರುಗಳಿಂದ ಪಾರಾದನು. ಆದರೂ ಕ್ರೈಸ್ತ ಮಂದಿರದವರು ಸೇಡು ತೀರಿಸಿಕೊಳ್ಳಲು ಇವನ ಪ್ರತಿಮೆಯನ್ನು ಸುಟ್ಟರೆಂದೂ, ಇವನ ಆಸ್ತಿಪಾಸ್ತಿಗಳನ್ನೆಲ್ಲಾ ಕ್ರೈಸ್ತ ಮಂದಿರಕ್ಕೆ ಮುಟ್ಟುಗೋಲು ಹಾಕಿದರೆಂದೂ ಹೇಳಲಾಗಿದೆ. ಇವನು ಗ್ರೀಕ್ ಭಾಷೆ

ಯಲ್ಲಿ ಪ್ರವೀಣನಾಗಿದ್ದುದರಿಂದ, ಅರಿಸ್ಟಾಟಲ್, ಹಿಪ್ಪೊಕ್ರೇಟಿಸ್‌ರ ಗ್ರಂಥಗಳನ್ನು ಓದಿ ಅರ್ಥ ಮಾಡಿಕೊಳ್ಳಲು ಸುಲಭವಾಗಿತ್ತು. ತತ್ವಶಾಸ್ತ್ರ ಮತ್ತು ವೈದ್ಯಶಾಸ್ತ್ರಗಳೆರಡಕ್ಕೂ ಸಮನ್ವಯವಾಗುವಂತೆ ಮಾಡಿ, "ಸಮನ್ವಯಿ" ಎಂಬ ಶಿರೋನಾಮೆ ವೈದ್ಯಶಾಸ್ತ್ರವನ್ನು ಬರೆದು ಗ್ರೀಕ್ ಮತ್ತು ಅರಬ್ಬಿ ವೈದ್ಯಶಾಸ್ತ್ರಗಳಲ್ಲಿದ್ದ ವಿರೋಧ ತತ್ವಗಳನ್ನು ಸುಧಾರಿಸಿದನು.

ಬ್ರೂನೊ ಡ ಲಾಂಗೊಬರ್ಗೊ

ಬ್ರೂನೊ ಡ ಲಾಂಗೊಬರ್ಗೊ ಪೀಟರ್ ಹಾಗೆ ಮೊದಲ ಗುಂಪಿಗೆ ಸೇರಿದ ಪ್ರಖ್ಯಾತ ಪ್ರಾಧ್ಯಾಪಕ. ಸಲೆರ್ನೊದಲ್ಲಿ ವ್ಯಾಸಂಗ ಮಾಡಿ, ಪಾಡ್ವದಲ್ಲಿ ಶಿಕ್ಷಣ ಕೊಡುತ್ತಿದ್ದನು. ೧೨೫೨ರಲ್ಲಿ 'ಹಿರಿಯ ಶಸ್ತ್ರವೈದ್ಯ' ಎಂಬ ಪುಸ್ತಕವನ್ನು ಬರೆದು ಮುಗಿಸಿದನು. ಈ ಪುಸ್ತಕದಲ್ಲಿ ನರಗಳ ಗಾಯ ಸರಿಪಡಿಸುವುದನ್ನೂ, ದೇಹದಿಂದ ಬಾಣ ತೆಗೆಯುವ ೨೦ ರೀತಿಗಳನ್ನೂ, ಮೂಳೆಮುರಿತ, ಕೀಲುಪಲ್ಲಟ, ಗಳಗಂಡ ಮುಂತಾದ ರೋಗಗಳ ಚಿಕಿತ್ಸೆ ಕ್ರಮಗಳನ್ನೂ ಬರೆದಿದ್ದನು.

ಜೆಂಟಿಲ್ ಡ ಫೊಲಿಗ್ನೊ

ಇವನು ಬೊಲೋನ ವಿಶ್ವವಿದ್ಯಾಲಯದ ಪದವೀಧರನಾಗಿ, ಪಾಡ್ವದಲ್ಲಿ ಔಷಧ ವೈದ್ಯಶಾಸ್ತ್ರದ ಪ್ರಾಧ್ಯಾಪಕನಾಗಿದ್ದನು. ಇವನು ಅನೇಕ ಪುಸ್ತಕಗಳನ್ನು ಬರೆದು ಪ್ರಖ್ಯಾತಿ ಪಡೆದಿದ್ದನು. ಸಾಂಕ್ರಾಮಿಕ ರೋಗವನ್ನು ಕುರಿತು ಬರೆದಿದ್ದ ಪುಸ್ತಕ ಮೇಲಾಗಿತ್ತು. ಇವನು ಶವಚ್ಛೇದನವನ್ನು ರೂಢಿ ಮಾಡಿದ್ದನು. ೧೩೪೧ರಲ್ಲಿ ಮೊದಲನೇ ಅಂಗಚ್ಛೇದನೆ ಮಾಡಿದನೆಂದು ಹೇಳಲಾಗಿದೆ.

ಆಕ್ಸಫರ್ಡ್ ಮತ್ತು ಕೇಂಬ್ರಿಡ್ಜ್

ಆಕ್ಸ್‌ಫರ್ಡ್ ಮತ್ತು ಕೇಂಬ್ರಿಡ್ಜ್ ವಿಶ್ವವಿದ್ಯಾಲಯಗಳು

೧೪ನೇ ಶತಮಾನದ ಮೊದಲ ಭಾಗದಲ್ಲಿ ಯೂರೋಪಿನಲ್ಲಿದ್ದ ಅನೇಕ ವಿಶ್ವವಿದ್ಯಾಲಯಗಳ ಪೈಕಿ ಹೆಚ್ಚು ವಿಶ್ವವಿದ್ಯಾಲಯಗಳು ಇಟಲಿ ದೇಶಲ್ಲಿದ್ದವು. ಇಟಲಿ ವಿಶ್ವವಿದ್ಯಾಲಯಗಳು ಹೆಚ್ಚು ಗೌರವವನ್ನು ಸಂಪಾದಿಸಿದ್ದುದರಿಂದ ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡಲು ಅಲ್ಲಿಗೆ ಬರುತ್ತಿದ್ದರು. ಯಾವ ವಿಶ್ವವಿದ್ಯಾಲಯದಲ್ಲಿ ಶ್ರೇಷ್ಠ ಪ್ರಾಧ್ಯಾಪಕರಿದ್ದರೋ ಅಲ್ಲಿಗೆ ವಿದ್ಯಾರ್ಥಿಗಳು ಹೋಗುವ ರೂಢಿ ಇತ್ತು. ಭಾಷೆ ಇದಕ್ಕೆ ಅಡ್ಡಿ ಬಂದಿರಲಿಲ್ಲ. ಲ್ಯಾಟಿನ್ ಭಾಷೆಯೇ ವಿಶ್ವವಿದ್ಯಾಲಯಗಳ ಭಾಷೆಯಾಗಿತ್ತು ವಿದ್ಯಾರ್ಥಿಗಳು ಹೇಗೆ ಒಂದು ವಿಶ್ವವಿದ್ಯಾಲಯದಿಂದ ಮತ್ತೊಂದು ವಿಶ್ವವಿದ್ಯಾಲಯಕ್ಕೆ ಹೋಗುತ್ತಿದ್ದರೋ ಹಾಗೆಯೇ ಪ್ರಾಧ್ಯಾಪಕರೂ ಶ್ರೇಷ್ಠ ವಿಶ್ವವಿದ್ಯಾಲಯಕ್ಕೆ ಹೋಗುವ ರೂಢಿ ಇತ್ತು. ಆದ್ದರಿಂದ ಅನೇಕ ಪ್ರಾಧ್ಯಾಪಕರು ಹಲವು ವಿಶ್ವವಿದ್ಯಾಲಯಗಳಲ್ಲಿ ಕೆಲಸ ಮಾಡಿದ್ದರೆಂದು ಹೇಳಬಹುದು.

ಇಟಲಿ, ಫ್ರಾನ್ಸಿನಲ್ಲಿದ್ದ ಹಾಗೆಯೇ ಇಂಗ್ಲೆಂಡಿನಲ್ಲೂ ವಿಶ್ವವಿದ್ಯಾಲಯಗಳು ಕೀರ್ತಿ ಪಡೆದಿದ್ದವು. ಆಕ್ಸ್‌ಫರ್ಡ್ ಮತ್ತು ಕೇಂಬ್ರಿಡ್ಜ್, ಇಂಗ್ಲೆಂಡಿನ ಮುಖ್ಯ ಕೇಂದ್ರಗಳಾಗಿದ್ದವು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಪ್ಯಾರಿಸ್ಸಿನಿಂದ ಬಂದ ವಿದ್ಯಾರ್ಥಿಗಳಿಂದ ಪ್ರಾರಂಭವಾಯಿತೇ ಹೊರತು, ಆಲ್‌ಫ್ರೆಡ್ ಮಹಾಶಯನಿಂದಲ್ಲ. ಎರಡನೆ ಹೆನ್ರಿಗೂ ಫ್ರಾನ್ಸಿನ ದೊರೆಯ ಬೆಂಬಲವಿದ್ದ ಥಾಮಸ್ ಎ ಬೆಕೆಟ್‌ಗೂ ಜಗಳವಾಗಿ, ಪ್ಯಾರಿಸ್ಸಿನಲ್ಲಿ ವ್ಯಾಸಂಗ ಮಾಡುತ್ತಿರುವ ಇಂಗ್ಲೀಷ್ ವಿದ್ಯಾರ್ಥಿಗಳೆಲ್ಲಾ ಇಂಗ್ಲೆಂಡಿಗೆ ಹಿಂದಿರುಗಬೇಕೆಂಬ ಆಜ್ಞೆಯ ಮೇರೆಗೆ, ವಿದ್ಯಾರ್ಥಿಗಳೆಲ್ಲಾ ಹಿಂದಿರುಗಿ ಬಂದ ಮೇಲೆ ವಿಶ್ವವಿದ್ಯಾಲಯ ಪ್ರಾರಂಭವಾಯಿತು. ಆದ್ದರಿಂದ ಪ್ಯಾರಿಸ್ಸಿನ ನಡೆ ನುಡಿಗಳೇ ಇಲ್ಲೂ ರೂಢಿಯಲ್ಲಿದ್ದವು. ವಿದ್ಯಾರ್ಥಿಗಳೂ ಅಧ್ಯಾಪಕರೂ ಬ್ರಹ್ಮಚರ್ಯ ವನ್ನು ಆಚರಿಸಬೇಕಾಗಿತ್ತು, ಕ್ರೈಸ್ತಮತದವರ ಉಡುಪನ್ನು ಧರಿಸಬೇಕಾಗಿತ್ತು. ಶಿಕ್ಷಣ ಪ್ಯಾರಿಸ್ಸಿನಲ್ಲಿ ಇದ್ದ ಹಾಗೆಯೇ ಇತ್ತು. ೧೨೦೯ ರಲ್ಲಿ ಆಕ್ಸ್‌ಫರ್ಡ್ ಜನ ರಿಗೂ, ವಿದ್ಯಾರ್ಥಿಗಳಿಗೂ ಘರ್ಷಣೆ ಆಗಿ, ಅದರ ಫಲವಾಗಿ ಅನೇಕ ವಿದ್ಯಾರ್ಥಿಗಳು ಕೇಂಬ್ರಿಡ್ಜ್‌ಗೆ ಹೋಗಿ ಅಲ್ಲಿ ಒಂದು ವಿಶ್ವವಿದ್ಯಾಲಯವನ್ನು ಪ್ರಾರಂಭಿಸಿದರು. ಯೂರೋಪಿನ ವಿಶ್ವವಿದ್ಯಾಲಯಗಳಷ್ಟು ಪ್ರಖ್ಯಾತಿಗೆ ಬರದಿದ್ದರೂ, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ವಿದ್ವಾಂಸರು ಸಾಕಷ್ಟು ಪ್ರವೀಣತೆ ಹೊಂದಿ, ಅದರ ಪ್ರಖ್ಯಾತಿ ಯನ್ನು ಪ್ರಪಂಚದಲ್ಲೆಲ್ಲಾ ಹರಡಿದರು.

ಮೈಕೇಲ್ ಸ್ಕಾಟ್

ಇವರ ಪೈಕಿ, ಮೈಕೇಲ್ ಸ್ಕಾಟ್, ಬಾರ್ತಲೊಮಿಯಸ್ ಆಂಗ್ಲಿಕಸ್, ರೋಜರ್ ಬೇಕನ್ ಮತ್ತು ಗಾಡೆಸ್ಡನ್ ಜಾನ್ ಉನ್ನತ ವೈದ್ಯರಾಗಿದ್ದರು. ಮೈಕೇಲ್ ಸ್ಕಾಟ್ (೧೧೭೫-೧೨೩೪) ಆಕ್ಸ್‌ಫರ್ಡ್ ಮತ್ತು ಪ್ಯಾರಿಸ್ಸು ಗಳಲ್ಲಿ ವಿದ್ಯಾಭ್ಯಾಸಮಾಡಿ, ಇಟಲಿಯಲ್ಲೂ ಸಿಸಿಲಿಯಲ್ಲೂ ವೈದ್ಯವೃತ್ತಿಯಲ್ಲಿ ತೊಡಗಿದ್ದನು. ಸಲೆರ್ನೊ ಮತ್ತು ಟೊಲಿಡೊಗಳಲ್ಲಿ ಅರಬ್ಬಿ ಭಾಷೆ ಕಲಿತು, ಸಿಸಿ ಲಿಯ ಎರಡನೆ ಫ್ರೆಡರಿಕ್ ಕೋರಿಕೆ ಪ್ರಕಾರ ಅರಿಸ್ಟಾಟಲ್ಲಿನ ಗ್ರಂಥಗಳನ್ನು ಅರಬ್ಬಿ ಭಾಷೆಯಿಂದ ಲ್ಯಾಟಿನ್ ಭಾಷೆಗೆ ಭಾಷಾಂತರಿಸಿದನು.

ಬಾರ್ತಲೊಮಿಯಸ್ ಆಂಗ್ಲಿಕಸ್

ಬಾರ್ತಲೊಮಿಯಸ್ ಆಂಗ್ಲಿಕಸ್, ಆಕ್ಸ್‌ಫರ್ಡ್ ಪದವೀಧರನಾಗಿ ಪ್ಯಾರಿಸ್ಸಿ ನಲ್ಲಿ ೧೨೨೦ ರಲ್ಲಿ ಕೆಲಸಕ್ಕಿದ್ದನು. ೧೨೫೦ರಲ್ಲಿ ಅವನು ಬರೆದ ಸಾಧಾರಣ ವಿಶ್ವ ಕೋಶ ಯೂರೋಪಿನ ಜನರಲ್ಲೆಲ್ಲಾ ಅಭಿರುಚಿ ಉಂಟುಮಾಡಿತ್ತು. ನಾನಾ ಭಾಷೆ ಗಳಿಗೆ ಭಾಷಾಂತರವಾಗಿತ್ತು. ಈ ವಿಶ್ವಕೋಶದಲ್ಲಿ ಇತರ ಸಾಮಾಜಿಕ, ವೈಜ್ಞಾನಿಕ ವಿಷಯಗಳ ಜತೆಗೆ ೭೦ ಅಧ್ಯಾಯಗಳ ವೈದ್ಯಶಾಸ್ತ್ರದ ಭಾಗವೂ ಇತ್ತು. ಗ್ರೀಕ್,

ಲ್ಯಾಟಿನ್, ಅರಬ್ಬಿ ಬರಹಗಾರರ ಹೆಸರುಗಳನ್ನು ವಿಶೇಷವಾಗಿ ಸೂಚಿಸಿತ್ತು. ಕಾನ್ಸ್ಟ್ಯಾಂಟೈನ್ ಆಫ್ರಿಕಾನಸ್ ಹೆಸರು ಬಹಳ ಪ್ರಾಮುಖ್ಯ ಪಡೆದಿತ್ತು. ಫ್ರೆಂಚ್ ಮತ್ತು ಇಂಗ್ಲೀಷ್ ಭಾಷೆಗೆ ಭಾಷಾಂತರವಾದ ಪುಸ್ತಕಗಳಲ್ಲಿ ಮೊಟ್ಟಮೊದಲಿಗೆ ಶವಚ್ಛೇದನದ ಚಿತ್ರಗಳು ಮುದ್ರಿತವಾಗಿದ್ದವು.

ಗ್ಯಾಡೆಸ್ಡನ್ ಜಾನ್

ಗ್ಯಾಡೆಸ್ಡನ್ ಜಾನ್ ಬಹಳ ಮುಖ್ಯ ಇಂಗ್ಲೀಷ್ ವೈದ್ಯನಾಗಿದ್ದನು. ಸುಮಾರು ೧೨೮೦ ರಲ್ಲಿ ಹುಟ್ಟಿರಬಹುದೆಂದು ಊಹಿಸಲಾಗಿದೆ. ವ್ಯಾಸಂಗ ಮುಗಿದ ಮೇಲೆ ಮರ್ಟನ್ ಕಾಲೇಜಿನಲ್ಲಿ ಶಿಕ್ಷಣ ಕೊಡುತ್ತಿದ್ದು, ೧೩೧೪ ರಲ್ಲಿ ರೊಸ ಆಂಗ್ಲೀಕ ಎಂಬ ಪುಸ್ತಕವನ್ನು ಬರೆದಿದ್ದನು. ಇದು ಇಂಗ್ಲೀಷ್ ಗ್ರಂಥಕರ್ತರು ಬರೆದ ಮೊದಲನೆ ಪುಸ್ತಕವಾಗಿತ್ತು. ಇದಕ್ಕೆ ಅರಬ್ಬಿ ವೈದ್ಯಶಾಸ್ತ್ರವೇ ಆಧಾರವಾಗಿತ್ತು. ಈ ಪುಸ್ತಕದಲ್ಲಿ ಅನೇಕ ಅಸಂಬದ್ಧ ಮಾತುಗಳಿದ್ದರೂ, ವೈದ್ಯಶಾಸ್ತ್ರದ ವಿವೇಕದ ಪದ್ಧತಿಗಳಿದ್ದವು. ಶೋಬೆಯ ರೋಗಿಗಳು ಉಪ್ಪು ತಿನ್ನಬಾರದೆಂದೂ, ಉಪ್ಪಿಲ್ಲದ ರೊಟ್ಟಿ ಉಪಯೋಗಿಸಬೇಕೆಂದೂ, ಕ್ಷಯ ರೋಗಿಗಳು ಎತ್ತರವಾದ ಜನವಿರಳವಾದ ಸ್ಥಳಗಳಲ್ಲಿ ವಾಸಿಸಬೇಕೆಂದೂ, ಹಾಲು ಮತ್ತು ಪುಷ್ಟಿಕರ ಆಹಾರವನ್ನು ಸೇವಿಸಬೇಕೆಂದೂ ತಿಳಿಸಿದ್ದನು. ಮೂತ್ರ ಹೆಚ್ಚು ತಯಾರ್ಮಾಡುವಂತಹ ವಸ್ತುವಾದ ಮೂತ್ರ ಲವಣ ಮೂತ್ರದಲ್ಲಿದೆಯೆಂದೂ ಅರಿತಿದ್ದನು. ಅವನ ಪುಸ್ತಕವನ್ನು ಅವನೇ ವಿವರಿಸುತ್ತ, ಹೂವುಗಳಲ್ಲೆಲ್ಲಾ ಗುಲಾಬಿ ಹೂವು ಹೇಗೆ ಶ್ರೇಷ್ಠವೋ, ಈ ಪುಸ್ತಕವೂ ಕೂಡ ಹಾಗೆ ವೈದ್ಯಶಾಸ್ತ್ರದ ಪುಸ್ತಕಗಳಲ್ಲಿ ಶ್ರೇಷ್ಠ ಎಂದು ಹೇಳಿದ್ದಾನೆ.

ಮಧ್ಯ ಯುಗದ ಸಾಂಕ್ರಾಮಿಕ ರೋಗ

ಪ್ಲೇಗ್

೧೪ನೇ ಶತಮಾನದಲ್ಲಿ ಪ್ರಪಂಚದ ಜನಸಂಖ್ಯೆಯಲ್ಲಿ ಸುಮಾರು ಕಾಲು ಭಾಗದಷ್ಟು ಜನರಲ್ಲಿ ಸಾವನ್ನುಂಟುಮಾಡಿದ ಪ್ಲೇಗ್ ರೋಗವನ್ನು (ಕರಾಳ ಮೃತ್ಯು, ರಾಜನ ಕೆಟ್ಟಕಣ್ಣು) ವಿವರಿಸದ ವೈದ್ಯಚರಿತ್ರೆ ಪೂರ್ಣವಾಗಿರುವುದಿಲ್ಲ. ಲಂಡನ್ ಪಟ್ಟಣದ ಅರ್ಧ ಜನರು ಈ ರೋಗದಿಂದ ಸತ್ತರೆಂದೂ, ಹೆಕರ್ ಪ್ರಕಾರ ಯೂರೋಪಿನಲ್ಲೆಲ್ಲಾ ೨೫ ಲಕ್ಷ ಜನ ಸತ್ತರೆಂದೂ ಹೇಳಲಾಗಿದೆ. ಫ್ರಾನ್ಸಿನಲ್ಲಿ ಮುಕ್ಕಾಲರಷ್ಟು ಜನ ಸಾವಿಗೀಡಾದರೆಂದೂ, ಇಟಲಿಯಲ್ಲಿ ಅರ್ಧದಷ್ಟು ಸತ್ತರೆಂದೂ ಗೊತ್ತಾಗಿದೆ. ಸತ್ತವರನ್ನು ಹೂಳಲು ಜಾಗ ಸಾಲದೆ, ಹೆಣಗಳನ್ನು ರ್ಹೋನ್ ನದಿಗೆ ಹಾಕಬಹುದೆಂದು ಪೋಪ್ ಅಪ್ಪಣೆ ಕೊಡಿಸಿದ್ದನು. ಲಂಡನ್ನಿನ ಒಂದು ಸ್ಮಶಾನದಲ್ಲಿ ೫೦,೦೦೦ ಹೆಣಗಳನ್ನು ಹೂತರೆಂದು ತಿಳಿಸಲಾಗಿದೆ.

೧೩೩೪ ರಲ್ಲಿ ಮಧ್ಯ ಏಷ್ಯಾದಲ್ಲಿ ಪ್ರಾರಂಭವಾಗಿ ವಾಣಿಜ್ಯ ಮಾರ್ಗಗಳ

ಮೂಲಕ, ಇಂಡಿಯ, ಈಜಿಪ್ಟ್, ಯೂರೋಪಿನ ಇಟಲಿ, ಫ್ರಾನ್ಸ್, ಇಂಗ್ಲೆಂಡ್, ಜರ್ಮನಿ ಮತ್ತು ರಷ್ಯಗಳಿಗೆ ಹರಡಿ ಬಂದಿತೆಂದು ತಿಳಿದುಬಂದಿದೆ. ನಾವಿಕರಿಲ್ಲದ ಹಡಗುಗಳು ಮೆಡಿಟರೇನಿಯನ್ ಮತ್ತು ಉತ್ತರ ಸಮುದ್ರಗಳಲ್ಲಿ ಸುಳಿದಾಡಿ ತೀರ ಸೇರಿದ ಸ್ಥಳಗಳಲ್ಲೆಲ್ಲಾ ರೋಗ ಹರಡಿ ಅತಿ ನಷ್ಟ ಉಂಟಾಯಿತು. ೧೩೩೭ ರಲ್ಲಿ ಸಿಸಿಲಿಯನ್ನು ಮುಟ್ಟಿ, ೧೩೫೨ರಲ್ಲಿ ರಷ್ಯಕ್ಕೂ ತಟ್ಟಿತ್ತು. ೧೩೪೮ರಲ್ಲಿ ಅವಿಗ್ನಾನ್ ಪಟ್ಟಣದಲ್ಲಿ ರೋಗ ಕಂಡಾಗ ಅಲ್ಲಿಯ ಪೋಪ್ ೬ನೇ ಕ್ಲೆಮೆಂಟ್ ರೋಗದ ಕಾರಣ ವನ್ನು ಕಂಡುಹಿಡಿಯಲು ಶವಪರೀಕ್ಷೆ ಮಾಡಬೇಕೆಂದು ಆಜ್ಞೆಮಾಡಿದ್ದನು. ಪ್ಲೇಗು ಸಾಂಕ್ರಾಮಿಕವಾಗಿ ಹರಡುತ್ತಿದ್ದಾಗ ಜನಗಳ ಕಷ್ಟಗಳನ್ನು ಎಷ್ಟು ಹೇಳಿದರೂ ತೀರದು. ಸಾವಿರಾರು ಸಾವುಗಳನ್ನು ನೋಡಿ ಜನರು ಹೆದರಿದ್ದರು. ಸಾಯುವವರಿಗೆ ಸಹಾಯ ನೀಡುವುದು ಕಷ್ಟವಾಗಿತ್ತು. ರಸ್ತೆಗಳಲ್ಲಿ, ಬಯಲುಗಳಲ್ಲಿ ಸಾಯುವವರು ಎಷ್ಟೋ ಮಂದಿ ಇದ್ದರು. ಮನೆಗಳಲ್ಲಿ ಕೊಳೆತ ಶವಗಳ ದುರ್ವಾಸನೆ ಸಹಿಸಲಾರದೆ ಅನೇಕರು ಸತ್ತರು. ಹೆಣ ಹೂಳಲು ಜಾಗ ಸಾಲದಿದ್ದುದರಿಂದ ರಸ್ತೆಗಳಲ್ಲೇ ರಾಶಿ ರಾಶಿಯಾಗಿ ಬಿದ್ದಿದ್ದವು. ವೈದ್ಯರ ಚಿಕಿತ್ಸೆಯಿಂದ ಗುಣವಾಗದಿದ್ದುದರಿಂದ ಜನರು ಪೂಜೆ ಪುನಸ್ಕಾರ ಗಳಿಗೆ ಗಮನ ಕೊಡಬೇಕಾಯಿತು. ಆಗ ಸಂತ ರಾಕ್ ಎಂಬ ಸನ್ಯಾಸಿ 'ಪ್ಲೇಗ್ ಸನ್ಯಾಸಿ' ಎಂದು ಕರೆಯಲ್ಪಟ್ಟು, ರೋಗಿಗಳಿಗೆ ಸೇವೆ ಸಲ್ಲಿಸುತ್ತಿದ್ದನು. ರೋಮ್ ನಗರದಲ್ಲೂ ಅಕ್ಕಪಕ್ಕಗಳ ಪಟ್ಟಣಗಳಲ್ಲೂ ೩ ವರ್ಷಗಳ ಕಾಲ ಇವನು ಈ ಕೆಲಸದಲ್ಲಿ ತೊಡಗಿದ್ದನು. ಪಿಯಸೆನ್ಸ ಎಂಬಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ರೋಗ ಅವನಿಗೂ ಬಂದು ದೈವವಶಾತ್ ಗುಣಹೊಂದಿದನು. ಇವನಹಾಗೆ ಕೀರ್ತಿಶೇಷನಾದ ಸಂತ ಸೆಬ್ಯಾಸ್ಟಿಯನ್ ೬ನೇ ಶತಮಾನದಲ್ಲಿ ಪ್ಲೇಗ್ ಬಂದಿದ್ದಾಗ ಸೇವೆ ಸಲ್ಲಿಸಿದ್ದನು. ಇವರ ಜ್ಞಾಪಕಾರ್ಥವಾಗಿ ಮಂದಿರಗಳನ್ನು ಕಟ್ಟಿಸಿ ಪೂಜಿಸುತ್ತಿದ್ದರು. ವೆನಿಸ್ ಪಟ್ಟಣದಲ್ಲಿ ೧೪೮೫ರಲ್ಲಿ ಪದೇ ಪದೇ ಪ್ಲೇಗು ಬರುತ್ತಿದ್ದುದನ್ನು ತಡೆಗಟ್ಟಲು, ಮಾಂಟ್‌ಪೆಲ್ಲಿಯರ್‌ನಲ್ಲಿದ್ದ ಸಂತ ರಾಕಿನ ಮೃತ ದೇಹವನ್ನು ಕದ್ದುತಂದು ವಿನಿಸ್ಸಿ ನಲ್ಲಿ ಕಟ್ಟಿಸಲಾಗಿದ್ದ ಮಂದಿರದಲ್ಲಿ ಇಟ್ಟು ಪೂಜೆ ಸಲ್ಲಿಸುತ್ತಿದ್ದರು. ಇದೇ ರೀತಿ ಸೆಂಟ್ ಸೆಬ್ಯಾಸ್ಟಿಯನ್ ದೇಹವನ್ನು ರೋಂ ನಗರಕ್ಕೆ ತರಲಾಗಿತ್ತು.

ಅವಿಗ್ನಾನ್‌ನಲ್ಲಿ ಪೋಪ್ ೬ನೇ ಕ್ಲೆಮೆಂಟ್ ಹತ್ತಿರ ವೈದ್ಯನಾಗಿದ್ದ ಗೈ ಡಿ ಷಾಲಿಯಕ್ ಈ ರೋಗದ ಹಾವಳಿಯನ್ನು ವಿವರಿಸುತ್ತ ಕೆಟ್ಟ ಗ್ರಹಗಳ ಸಮೂಹ ದಿಂದಲೂ ಜನರ ಶಕ್ತಿಹೀನತೆಯಿಂದಲೂ ಪ್ಲೇಗು ಬರುತ್ತಿದ್ದಿತೆಂದು ತಿಳಿಸಿದ್ದನು. ಗಡ್ಡೆ ಪ್ಲೇಗು ಮತ್ತು ಪ್ಲೇಗು ಪುಪ್ಪುಸುರಿತವೆಂದು ಎರಡು ವಿಧವಾದ ರೋಗವನ್ನು ವಿವರಿಸಿದ್ದನು. ಮೊದಲನೆಯದರಲ್ಲಿ ತೊಡೆಸಂದಿಯಲ್ಲೂ, ಕಂಕುಳಿನಲ್ಲೂ ಗಡ್ಡೆಯೆದ್ದು ಜ್ವರದಿಂದ ನರಳುತ್ತಿದ್ದರೆಂದೂ, ಎರಡನೆಯದರಲ್ಲಿ ರಕ್ತ ಕಾರಿ ಕೇವಲ ಕೆಲವು ಘಂಟೆ ಗಳಲ್ಲೇ ಸಾಯುತ್ತಿದ್ದರೆಂದೂ ಬರೆದಿದ್ದನು. ರೋಗಿಗಳನ್ನು ಮುಟ್ಟಿದರೆ ರೋಗ

ಬರುತ್ತದೆಂದೂ, ಮನೆಯಲ್ಲಿ ಬೆಂಕಿ ಹಚ್ಚಿಟ್ಟರೆ ರೋಗವನ್ನು ತಡೆಗಟ್ಟಬಹುದೆಂದೂ ಗೈ ವೈದ್ಯ ಹೇಳಿದ್ದರ ಮೇಲೆ, ಪೋಪ್ ತನ್ನ ಕೊಟ್ಟಡಿಯೊಳಕ್ಕೆ ಯಾರನ್ನೂ ಬರ ಮಾಡಿಕೊಳ್ಳದೆ ಬೆಂಕಿಯನ್ನು ಯಾವಾಗಲೂ ಹಚ್ಚಿಟ್ಟಿದ್ದನು.

ಕೆಲವರ ಪ್ರಕಾರ ಯಹೋದ್ಯರು ನೀರಿಗೆ ವಿಷ ಹಾಕಿರುವುದರಿಂದ ರೋಗ ಬಂದಿರುವುದೆಂದು ನಂಬಿ, ಯಹೋದ್ಯರನ್ನೆಲ್ಲಾ ಒಟ್ಟುಗೂಡಿಸಿ ಬೆಂಕಿ ಹಚ್ಚಿ ಸುಟ್ಟರೆಂದೂ, ಸ್ಟ್ರಾಸ್‌ಬರ್ಗ್ ಪಟ್ಟಣದಲ್ಲಿ ಒಂದೇ ಸಲ ೨೦೦೦ ಯಹೋದ್ಯರನ್ನು ಗಲ್ಲಿಗೇರಿಸಿದರೆಂದೂ ಹೇಳಲಾಗಿದೆ. ಆದರೆ ೬ನೇ ಕ್ಲೆಮೆಂಟ್, ಯಹೋದ್ಯರ ಮೇಲೆ ಕರುಣೆ ಇಟ್ಟು, ಅವರು ನಿರಪರಾಧಿಗಳೆಂದೂ, ಅವರನ್ನು ಕೊಲ್ಲಕೂಡದೆಂದೂ ಗುರು ಶಾಸನ ಹೊರಡಿಸಿ ರಕ್ಷಣೆ ಕೊಟ್ಟಿದ್ದನು. ಅಷ್ಟರಲ್ಲೇ ಸಾವಿರಾರು ಯಹೋದ್ಯರು ಬಲಿಯಾಗಿದ್ದರು.

ರೋಗ ತಡೆಯುವ ಕ್ರಮ ಅಷ್ಟು ಗೊತ್ತಿಲ್ಲದಿದ್ದರೂ, ಹೊರ ದೇಶದಿಂದ ಬಂದ ಹಡಗುಗಳನ್ನು ಬೇರೆ ಬಂದರಿನಲ್ಲಿ ಪ್ರತ್ಯೇಕಿಸಿ, ಪ್ರಯಾಣಿಕರನ್ನೂ ೪೦ ದಿವಸ ಪ್ರತ್ಯೇಕವಾಗಿಟ್ಟ ಮೇಲೆ, ರೋಗದ ಪ್ರಭಾವ ಕಡಿಮೆಯಾಗುತ್ತಾ ಬಂತು. ತಕ್ಷಣವೇ ಈ ಕ್ರಮ ಎಲ್ಲೆಲ್ಲೂ ಜಾರಿಗೆ ಬಂದಿತು. ಏಡ್ರಿಯಾಟಿಕ್ ಸಮುದ್ರ ತೀರದಲ್ಲಿದ್ದ ರಾಗುಸ ಪಟ್ಟಣದಲ್ಲಿ ಮೊಟ್ಟಮೊದಲಿಗೆ ೧೩೭೭ರಲ್ಲಿ ಈ ಕ್ರಮವೇ ಕಾನೂನಾಯಿತು. ಸ್ಥಳೀಯವಾಗಿ ರೋಗ ತಡೆಯಲು ಮನೆಗಳಲ್ಲಿ ಜುನಿಪರ್ ಹೊಗೆ ಹಾಕುತ್ತಿದ್ದರು. ವೈದ್ಯ ಕೈಚೀಲಗಳನ್ನು ಉಪಯೋಗಿಸುತ್ತಿದ್ದುದಲ್ಲದೆ ಮೈತುಂಬ ಬೇರೆ ಉಡುಪನ್ನು ಹಾಕಿಕೊಂಡು ರೋಗಿಗಳನ್ನು ಉಪಚರಿಸಬೇಕಾಗಿತ್ತು.

ಮಧ್ಯ ಯುಗದ ಆಸ್ಪತ್ರೆಗಳು

ಕ್ರಿಶ್ಚಿಯನರು ರೋಗಿಗಳ ಸೌಕರ್ಯಗಳನ್ನು ಮೊದಲಿನಿಂದಲೂ ನೋಡಿಕೊಳ್ಳುತ್ತಿದ್ದುದರಿಂದ, ಕ್ರೈಸ್ತಮಂದಿರಗಳ ಅಧೀನದಲ್ಲೇ ಆಸ್ಪತ್ರೆಗಳು ಪ್ರಾರಂಭವಾಗಿದ್ದವು. ಆಗ ಕ್ರೈಸ್ತಮಂದಿರಗಳು, ವೈದ್ಯಶಾಸ್ತ್ರದ ಮುನ್ನಡೆಗೆ ಎಷ್ಟೇ ಅಡ್ಡಿ ತಂದಿದ್ದರೂ, ರೋಗಿಗಳಿಗೆ ಮಾತ್ರ ಸಾಕಷ್ಟು ಸೌಕರ್ಯಗಳನ್ನು ವಸತಿರೂಪದಲ್ಲೂ, ಶುಶ್ರೂಷೆ ರೂಪದಲ್ಲೂ ಒದಗಿಸಿ ಪ್ರೋತ್ಸಾಹ ಕೊಟ್ಟಿದ್ದರು. ೧೩ ಮತ್ತು ೧೪ನೇ ಶತಮಾನಗಳಲ್ಲಿ ಅನೇಕ ಕಡೆ ಆಸ್ಪತ್ರೆಗಳು ಕಟ್ಟಿದ್ದವು. ರೋಗಿಗಳಿಗೆ ಸಾಕಷ್ಟು ಗಾಳಿ ಬೆಳಕು ಬರುವಂತೆ, ಆಸ್ಪತ್ರೆಗಳಲ್ಲಿ ದೊಡ್ಡ ಕಿಟಕಿ ಬಾಗಿಲುಗಳನ್ನು ಒದಗಿಸಿದ್ದರು. ವಿಶಾಲವಾದ ರೋಗಿಕೋಣೆಗಳಲ್ಲಿ ಮಂಚ ಹಾಸಿಗೆಗಳನ್ನಿಟ್ಟು, ನೀರಿನ ಸೌಕರ್ಯವನ್ನೂ ಮತ್ತು ಆರೋಗ್ಯ ನಿಯಮಗಳ ಅನುಕೂಲತೆಗಳನ್ನು ಒದಗಿಸಿದ್ದರು.

ಮಧ್ಯ ಯುಗದ ಮೊದಲನೇ ಆಸ್ಪತ್ರೆ ರೊಡ್ಸ್ ದ್ವೀಪದಲ್ಲಿ ಕಟ್ಟಲಾಗಿತ್ತು. ಇದು ಈಗಲೂ ಇದೆ. ಧರ್ಮಯುದ್ಧದಲ್ಲಿ ತೊಡಗಿದ್ದ ವೀರರು ಇವುಗಳಿಂದ ಹೆಚ್ಚು ಉಪಕಾರ ಪಡೆಯುತ್ತಿದ್ದರು. ಜೆರುಸಲೆಂ ಮತ್ತು ಮಾಲ್ಟ ದ್ವೀಪದಲ್ಲಿ ಇಂತಹ ಸಂಸ್ಥೆ



ಮಧ್ಯಯುಗದ ಆಸ್ಪತ್ರೆ: ಗಾಳಿ, ಬೆಳಕು, ಸಾಕಷ್ಟು ಸ್ಥಳದ ಅವಕಾಶಗಳಿವೆ.



ಜೆರುಸೆಲಂನಲ್ಲಿ ಸಂತ ಜಾನ್ ಸೇನಾನುಚರರಿಗಿದ್ದ ಆಸ್ಪತ್ರೆಯ ಬೀಳು

ಗಳಿದ್ದವು. ಲಂಡನ್ನಿನಲ್ಲೂ ಕ್ರೈಸ್ತ ಮಂದಿರದ ಅಧೀನದಲ್ಲಿ ಕೆಲವು ಆಸ್ಪತ್ರೆಗಳು ಪ್ರಾರಂಭವಾಗಿದ್ದವು. ೧೧೨೩ ರಲ್ಲಿ ಸಂತ ಬಾರ್ತಾಲೊಮ್ಯೂ ಆಸ್ಪತ್ರೆಯೂ, ೧೨೧೫ ರಲ್ಲಿ ಸಂತ ಥಾಮಸ್ ಆಸ್ಪತ್ರೆಯೂ ಕೆಲಸಕ್ಕೆ ಆರಂಭಿಸಿದ್ದವು. ಸಂತ ಬಾರ್ತಾಲೊಮ್ಯೂ ಆಸ್ಪತ್ರೆ ಇಂಗ್ಲೆಂಡಿಗೆ ಬಹಳ ಪುರಾತನದ್ದಾಗಿದ್ದಿತು. ಆಗಿನ ಕಾಲದಲ್ಲಿ ರೋಗಿಗಳಿಗೋಸ್ಕರ ಕೆಲವು ಆಸ್ಪತ್ರೆಗಳು, ಕೆಲವು ಪ್ರಯಾಣಿಕರಿಗೆ,ಮತ್ತೆ ಕೆಲವು ಯಾತ್ರಾರ್ಥಿಗಳಿಗೆ, ಇನ್ನೂ ಕೆಲವು ವಯಸ್ಸಾದವರಿಗೆ ಎಂದು ಪ್ರತ್ಯೇಕ ಆಸ್ಪತ್ರೆಗಳನ್ನು ಕಟ್ಟಿಸಿದ್ದರು. ಇವು ಮೊದಲು ಕ್ರೈಸ್ತಮಂದಿರದ ಅಧೀನದಲ್ಲಿದ್ದು ಕ್ರಮೇಣ ಪೌರ ಸಂಸ್ಥೆಗಳ ಅಧೀನಕ್ಕೆ ಬಂದವು. ೧೪ನೇ ಶತಮಾನದ ವೇಳೆಗೆ ಅನೇಕ ಆಸ್ಪತ್ರೆಗಳು ಸ್ವಂತವಾಗಿ ಕೆಲಸ ಮಾಡಲು ಪ್ರಾರಂಭಿಸಿದ್ದವು.

ಕುಷ್ಠರೋಗದ ಆಸ್ಪತ್ರೆ

ಕುಷ್ಠರೋಗಿಗಳಿಗೆ ಪ್ರತ್ಯೇಕ ಆಸ್ಪತ್ರೆಗಳು ಇದ್ದವು. ೧೩ನೇ ಶತಮಾನದಲ್ಲಿ ಕುಷ್ಠರೋಗ ಸಾಂಕ್ರಾಮಿಕವಾಗಿ ಹಬ್ಬಿದ್ದುದರಿಂದ ಫ್ರಾನ್ಸಿನಲ್ಲೇ ೨೦೦೦ ಕುಷ್ಠ ರೋಗದ ಆಸ್ಪತ್ರೆಗಳಿದ್ದವು. ಇಡೀ ದೇಶದಲ್ಲಿ ಒಟ್ಟು ೧೯೦೦೦ ಕ್ರಿಶ್ಚಿಯನ್ನರ ಆಸ್ಪತ್ರೆಗಳಿದ್ದವೆಂದು ಹೇಳಲಾಗಿದೆ. ಲಾಸರಸ್ ಎಂಬುವನು ಈ ರೋಗದಿಂದ ನರಳಿದ್ದುದರಿಂದ ಕುಷ್ಠರೋಗದ ಆಸ್ಪತ್ರೆಗಳಿಗೆ "ಲಾಸರಸ್ ಮಂದಿರ" ಎಂದು ಕರೆಯಲಾಗಿತ್ತು. ರೋಗಿಗಳೆಲ್ಲಾ ಈ ಲಾಸರಸ್ ಮಂದಿರಗಳಿಗೆ ಹೋಗುತ್ತಿರಲಿಲ್ಲ. ಗರೀಬರು ಅನೇಕರು ದೇಶಾಟನೆ ಮಾಡಿಕೊಂಡು ಊರೂರು ಸುತ್ತುತ್ತಿದ್ದರು.ಇವರನ್ನು ಗುರ್ತಿಸಲು ಪ್ರತ್ಯೇಕ ಉಡುಪನ್ನು ಧರಿಸಬೇಕಾಗಿತ್ತು. ಪ್ರತಿಯೊಬ್ಬ ರೋಗಿಯೂ ಕತ್ತಿಗೆ ಘಂಟೆಯನ್ನು ಕಟ್ಟಿಕೊಳ್ಳಬೇಕಾಗಿತ್ತು. ಘಂಟೆಯ ಶಬ್ದ ಕೇಳಿದೊಡನೆ ಜನರು ದೂರ ಹೋಗುತ್ತಿದ್ದರು. ಕುಷ್ಠರೋಗಿಗಳು ಕ್ರೈಸ್ತಮಂದಿರಗಳಿಗೆ ಹೋಗುವಂತಿರಲಿಲ್ಲ. ಜನರ ಗುಂಪಿನಲ್ಲೂ ಸೇರುತ್ತಿರಲಿಲ್ಲ. ಈ ಸ್ಥಿತಿಗಳನ್ನು ನೋಡಿ ದಯಾಪರರನೇಕರು ಕನಿಕರಪಟ್ಟು ಧರ್ಮಶಾಲೆಗಳನ್ನು ಮತ್ತು ಇತರ ಸಹಾಯಗಳನ್ನು ಕೊಟ್ಟಿದ್ದರು.

ರೋಗವನ್ನು ತಡೆಗಟ್ಟುವ ಕೆಲವು ಕ್ರಮಗಳು ಜಾರಿಯಲ್ಲಿದ್ದುದರಿಂದಲೂ, ಮುಖ್ಯವಾಗಿ ೧೪ನೇ ಶತಮಾನದ ಮೊದಲ ಭಾಗದಲ್ಲಿ ಕಂಡ ಸಾಂಕ್ರಾಮಿಕ ಪ್ಲೇಗ್ ಜಾಡ್ಯದ ಹಾವಳಿಯಿಂದ ಅನೇಕ ರೋಗಿಗಳು ಸತ್ತಿದ್ದರಿಂದಲೂ, ರೋಗ ಕಡಿಮೆಯಾಗುತ್ತಾ ಬಂದಿತು. ೧೫ ಮತ್ತು ೧೬ನೇ ಶತಮಾನದ ವೇಳೆಗೆ ಕುಷ್ಠರೋಗವೇ ಯೂರೋಪಿನಲ್ಲಿ ಇಲ್ಲದಂತಾಯಿತು.

ಮಧ್ಯಯುಗದ ಜ್ಯೋತಿಷ್ಯ


ಬ್ಯಾಬಿಲೋನಿಯ, ಅಸ್ಸಿರಿಯ ದೇಶಗಳ ಜ್ಯೋತಿಷ್ಯಶಾಸ್ತ್ರ ಬಹಳ ವರ್ಷಗಳ ಕಾಲ ಮರೆಸಿದ್ದು, ಅಸ್ಸಿರಿಯ ಚಕ್ರವರ್ತಿ ಅಸ್ಸುರ್ಬನಿಪಾಲ್‌ನ (ಕ್ರಿ. ಪೂ. ೬೬೬–೬೨೬) ಆಳ್ವಿಕೆಯಲ್ಲಿ ಪುನರುಜ್ಜೀವನ ಪಡೆಯಿತು. ಆಗಿನಿಂದೀಚೆಗೆ ಈಜಿಪ್ಟ್, ಗ್ರೀಸ್,ರೋಮ್ ಮತ್ತು ಅರಬ್ಬಿ ರಾಜ್ಯಗಳಲ್ಲಿ ಮುಂದುವರಿಯುತ್ತಾ ಬಂತು. ಆದರೂ ಅಲ್ಲಲ್ಲಿ ಅನೇಕರು ಜ್ಯೋತಿಷ್ಯವನ್ನು ನಿಂದಿಸಿದ್ದರು. ಮಧ್ಯಯುಗದ ಜ್ಯೋತಿಷ್ಯ ಅರಬ್ಬಿ ಸಂಪ್ರದಾಯದ ಆಧಾರದ ಮೇಲೆ ಬೆಳೆದುಬಂದಿತ್ತು. ಇದು ಮಧ್ಯಯುಗದ ವೈದ್ಯಶಾಸ್ತ್ರದ ಮೇಲೆ ಸಾಕಷ್ಟು ಪ್ರಭಾವ ಬೀರಿತ್ತು. ಖಗೋಳಶಾಸ್ತ್ರ ಕೂಡ ಅದೇ ರೀತಿ ಬೆಳೆದು ಬಂದಿತ್ತು.ನಕ್ಷತ್ರಗಳು, ಗ್ರಹಗಳು, ಸೂರ್ಯಚಂದ್ರಾದಿಗಳೆಲ್ಲಾ ಮನುಷ್ಯನ ಆರೋಗ್ಯದ ಮೇಲೆ ಪ್ರಭಾವ ಬೀರುತ್ತಿದ್ದವೆಂಬ ನಂಬಿಕೆ ಇತ್ತು. ರಾಜರ ಸಂಪತ್ತು, ರಾಜ್ಯಭಾರ, ಯುದ್ಧ, ಬರಗಾಲ, ಹವಾಗುಣ ಮತ್ತು ಬೆಳೆಗಳ ಮೇಲೂ ಪ್ರಭಾವ ಬೀರುತ್ತವೆಂದು ನಂಬಿಕೆ ಇತ್ತು. ಗ್ರಹಗಳ ದೆಶೆಯಿಂದ ಮನುಷ್ಯನ ಅದೃಷ್ಟ ರೂಪಗೊಳ್ಳುತ್ತದೆಂದೂ, ಜೋಯಿಸರು ಜ್ಯೋತಿಷ್ಯದ ಸಹಾಯದಿಂದ ಮನು

ಷ್ಯನ ಭವಿಷ್ಯ ನುಡಿಯುತ್ತಿದ್ದರೆಂದೂ, ಜಾತಕವನ್ನು ಬರೆಯುತ್ತಿದ್ದರೆಂದೂ, ಈಗಿರುವ ಹಾಗೆ ಆಗಲೂ ನಂಬಿಕೆ ಇತ್ತು.

ಆಗಿನ ಕಾಲದ ಅನೇಕ ವಿಶ್ವವಿದ್ಯಾಲಯಗಳಲ್ಲಿ ನ್ಯಾಯಶಾಸ್ತ್ರ, ವೈದ್ಯಶಾಸ್ತ್ರ ಮುಂತಾದವನ್ನು ರೂಢಿಸುತ್ತಿದ್ದ ಹಾಗೆ ಜ್ಯೋತಿಷ್ಯವನ್ನೂ ರೂಢಿಸುತ್ತಿದ್ದರು. ರೋಜರ್ ಬೇಕನ್, ಆಲ್ಬರ್ಟಸ್ ಮ್ಯಾಗ್ನಸ್, ಅಬಾನೊ ಪೀಟರ್ ಮುಂತಾದ ವೈದ್ಯರೆಲ್ಲಾ ಜ್ಯೋತಿಷ್ಯವನ್ನು ನಂಬಿದ್ದರು. ಪುನರುಜ್ಜೀವನ ಕಾಲದಲ್ಲೂ ನವಯುಗದಲ್ಲೂ ಅದೇ ನಂಬಿಕೆ ಮುಂದುವರಿಯುತ್ತಿದೆ.

ರಾಜಸ್ಪರ್ಶ

ವೈದ್ಯಕ್ಕೆ ಸಂಬಂಧಪಟ್ಟಿರುವ ರಾಜಸ್ಪರ್ಶ, ಮಧ್ಯಯುಗದಲ್ಲಿ ಅನೇಕ ರೋಗಗಳನ್ನು ಗುಣಮಾಡುತ್ತದೆಂಬ ಪ್ರಖ್ಯಾತಿ ಪಡೆದಿತ್ತು. ಕ್ಷಯ ರೋಗದಿಂದುಂಟಾದ ಗಂಡಮಾಲೆ ರಾಜಸ್ಪರ್ಶದಿಂದ ಗುಣವಾಗುತ್ತಿದ್ದ ರೋಗಗಳಲ್ಲೊಂದಾಗಿತ್ತು. ಫ್ರಾನ್ಸಿನ ೯ನೇ ಲೂಯಿ ಚಕ್ರವರ್ತಿ ರಾಜಸ್ಪರ್ಶದಿಂದ ಗುಣಮಾಡುತ್ತಿದ್ದ ಮಹಾ ವ್ಯಕ್ತಿಯಾಗಿದ್ದನು. ಇದನ್ನು ನೆರವೇರಿಸಲು ಒಂದು ಸಮಾರಂಭವನ್ನೇ ಏರ್ಪಡಿಸುತ್ತಿದ್ದರು. ಹಬ್ಬದ ದಿನಗಳಲ್ಲಿ ಈ ಕಾರ್ಯವನ್ನು ನೆರವೇರಿಸುತ್ತಿದ್ದರು. ರಾಜಸ್ಪರ್ಶದಿಂದ ರೋಗ ಗುಣವಾಗದಿದ್ದರೆ, ರಾಜ ಧರ್ಮ ಸಂತಾನದವನಲ್ಲವೆಂದು ಭಾವಿಸಿದ್ದರು. ಇಂಗ್ಲೆಂಡಿನಲ್ಲಿ ಎಡ್ವರ್ಡ್ ದಿ ಕನ್ಫೆಸರ್ (೧೦೪೨-೧೦೬೬) ಈ ರೀತಿ ರಾಜಸ್ಪರ್ಶದಿಂದ ಗುಣಮಾಡುತ್ತಿದ್ದವರಲ್ಲಿ ಮುಖ್ಯನಾಗಿದ್ದನು. ನಂತರ ೭ನೇ ಹೆನ್ರಿಯೂ ಈ ಪದ್ಧತಿಯನ್ನು ಅನುಸರಿಸುತ್ತಿದ್ದನು. ಈ ಪದ್ಧತಿಯನ್ನು ಸಾಮಾನ್ಯ ಜನರು ಒಪ್ಪಿದ್ದುದಲ್ಲದೆ, ವಿಜ್ಞಾನಿಗಳೂ ವಿದ್ವಾಂಸರೂ, ಒಪ್ಪಿ ಪ್ರೋತ್ಸಾಹಿಸುತ್ತಿದ್ದರು. ಚಕ್ರವರ್ತಿಗಳ ಹಾಗೆ ಸಾಮಾನ್ಯ ಮನುಷ್ಯರೂ ಈ ಪದ್ಧತಿಯನ್ನು ಉಪಯೋಗಿಸಿ ರೋಗ ಗುಣಮಾಡುತ್ತಾರೆಂದು ಹೇಳಲಾಗಿದೆ. ಎರಡನೇ



ವ್ಯಾಲೆಂಟೈನ್ ಗ್ರೇಟ್‌ರೇಕ್ಸ್ ರೋಗ ಗುಣಮಾಡಲು ರೋಗಿಯನ್ನು ಮುಟ್ಟುತ್ತಿದ್ದಾನೆ.

ಚಾರಲ್ಸ್ ದೊರೆಯ ಪ್ರತಿಸ್ಪರ್ಧಿಯಾದ ವ್ಯಾಲೆಂಟೈನ್ ಗ್ರೇಟ್‌ರೇಕ್ಸ್ ರೋಗ ಗುಣ ಮಾಡಲು ಯತ್ನಿಸಿದ್ದನು. ರೋಗಿಯ ತಲೆಮೇಲೆ ಕೈಯಿಟ್ಟು 'ನಾನು ನಿನ್ನನ್ನು ಸ್ಪರ್ಶಿಸುತ್ತೇನೆ,ದೇವರು ನಿನಗೆ ಗುಣಪಡಿಸುವನು' ಎಂದು ರಾಜರು ಹೇಳುವ ಪದ್ಧತಿ ಇತ್ತು. ಹೀಗೆ ೭೦೦ ವರ್ಷಗಳ ಕಾಲ ರಾಜಸ್ಪರ್ಶ ಪ್ರಬಲವಾಗಿ ನಡೆದುಕೊಂಡು ಬಂದಿತ್ತು.

ಮಧ್ಯಯುಗದ ಹಿಂದೂ ವೈದ್ಯಪದ್ಧತಿ

ಹಿಂದೂ ವೈದ್ಯಶಾಸ್ತ್ರ ೫ ಮತ್ತು ೬ನೇ ಶತಮಾನಗಳಲ್ಲಿ ಗ್ರೀಸ್ ಮತ್ತು ರೋಮನ್ ವೈದ್ಯಶಾಸ್ತ್ರಕ್ಕೆ ಸಮನಾಗಿತ್ತೆಂದೂ, ಅನೇಕ ವಿಷಯಗಳಲ್ಲಿ ಅವಕ್ಕಿಂತಲೂ ಮೇಲಾಗಿತ್ತೆಂದೂ ಹೇಳಲಾಗಿದೆ. ಹಿಂದೂ ವೈದ್ಯಶಾಸ್ತ್ರ ಹಾಗೂ ಗ್ರೀಸ್ ವೈದ್ಯಶಾಸ್ತ್ರಗಳೆರಡೂ ಸ್ವತಂತ್ರವಾಗಿ ಬೆಳೆದು ಬಂದಿದ್ದರೂ ಒಂದಕ್ಕೊಂದು ಪರಸ್ಪರ ವಿನಿಮಯವಿತ್ತೆಂದು ಅನೇಕ ಮಹನೀಯರ ಅಭಿಪ್ರಾಯವಾಗಿದೆ. ಅಲೆಗ್ಸಾಂಡರ್ ದಂಡೆತ್ತಿ ಬಂದು ಹೋದ ಮೇಲಂತೂ ಈ ಪರಸ್ಪರ ವಿನಿಮಯ ಇನ್ನೂ ಹೆಚ್ಚಾಗಿ, ಹಿಂದೂ ದೇಶದಿಂದ ಗ್ರೀಸಿಗೂ, ಗ್ರೀಸಿನಿಂದ ಹಿಂದೂ ದೇಶಕ್ಕೂ ವೈದ್ಯರು ಹೋಗಿ ಬರುತ್ತಿದ್ದರೆಂದು ಹೇಳಲಾಗಿದೆ. ೭ನೇ ಶತಮಾನದ ಇಸ್ಲಾಮರ ಕಾಲದಲ್ಲಿ ಹಿಂದೂ ವೈದ್ಯಶಾಸ್ತ್ರ ಅತ್ಯುತ್ತಮವಾಗಿದ್ದು ಅರಬ್ಬಿ ವೈದ್ಯಶಾಸ್ತ್ರದ ಬೆಳವಣಿಗೆಗೆ ಸಹಕಾರಿಯಾಗಿತ್ತು. ಆದರೆ ೬೬೪ರಲ್ಲಿ ಮುಸ್ಲಿಮರ ದಂಡಯಾತ್ರೆ ಆರಂಭವಾದ ಮೇಲೆ ಹಿಂದೂದೇಶದಲ್ಲಿ ಅರಬ್ಬಿ ವೈದ್ಯಶಾಸ್ತ್ರ ಅಭಿವೃದ್ಧಿಯಾಗುತ್ತಾ ಬಂದಿತು

ಮುಸ್ಲಿಮರ ದಂಡಯಾತ್ರೆ ಮೊದಲು ಪಶ್ಚಿಮ ಪಂಜಾಬಿನ ಮುಲ್ತಾನ್ ಪಟ್ಟಣದ ಮೇಲೆ ನಡೆಯಿತು. ಇಂತಹ ದಂಡಯಾತ್ರೆಗಳು ೧೧೮೬ರ ತನಕ ನಡೆಯುತ್ತಲೇ ಬಂದು, ಆಫ್ಘಾನಿಸ್ಥಾನದ ತುರ್ಕ ಜನಾಂಗದ ಘೋರಿ ದೆಹಲಿಯನ್ನು ವಶಪಡಿಸಿಕೊಂಡು ಸುಲ್ತಾನರ ರಾಜ್ಯವನ್ನು ಸ್ಥಾಪಿಸಿದನು. ಆಮೇಲೆ, ೧೩೯೮ರಲ್ಲಿ ತೈಮೂರ್ ಲೇನ್ ದಂಡೆತ್ತಿ ಬಂದು ದೆಹಲಿಯನ್ನು ಸುಲ್ತಾನರಿಂದ ವಶಪಡಿಸಿಕೊಂಡು, ೧೦೦,೦೦೦ ಯುದ್ಧಕೈದಿಗಳನ್ನು ಕೊಂದು, ತನ್ನ ರಾಜಧಾನಿಯಾದ ಸಮರ್ಖಂಡ್ ಪಟ್ಟಣಕ್ಕೆ ಹಿಂತಿರುಗಿದನು. ಇವನು ಹಿಂತಿರುಗಿದನಂತರ ಸುಲ್ತಾನರು ಪುನಃ ರಾಜ್ಯ ಸ್ಥಾಪಿಸಿ ಬಾಬರ್ ದಂಡೆತ್ತಿ ಬರುವ ತನಕ, ಒಂದು ಶತಮಾನ ರಾಜ್ಯವಾಳುತ್ತಿದ್ದರು. ೧೫೨೬ರಲ್ಲಿ ಬಾಬರ್ ದೆಹಲಿ ಸುಲ್ತಾನನ್ನು ಗೆದ್ದು, ಪಟ್ಟಣವನ್ನು ವಶಪಡಿಸಿಕೊಂಡು ಮೊಗಲ್ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಈ ಮೊಗಲ್ ಸಾಮ್ರಾಜ್ಯ ಬ್ರಿಟಿಷರ ಆಳ್ವಿಕೆ ಬರುವ ತನಕ ಪ್ರಬಲವಾಗಿಯೇ ಇತ್ತು.

ಬಾಬರನ ಮೊಮ್ಮಗ ಅಕ್ಬರ್ (೧೫೬೦–೧೬೦೫) ಮೊದಲು ಅನಾಗರಿಕನೂ, ಕ್ರೂರನೂ ಆಗಿದ್ದು, ಕ್ರಮೇಣ ಚರಿತ್ರೆಯಲ್ಲೇ ಚತುರನಾದ, ದಯಾಪರನಾದ ಅತ್ಯುತ್ತಮ ರಾಜಕಾರಣಿಯಾದ ರಾಜರ್ಷಿಯಾಗಿದ್ದನು. ಇವನಿಗೆ ಓದಲು ಬರದಿದ್ದರೂ ಓದುಗರಲ್ಲೂ, ಗ್ರಂಥಗಳಲ್ಲೂ ಬಹಳ ಆಸಕ್ತಿ ಇತ್ತು. ಪಂಡಿತರು ಓದುವು

ದನ್ನು ಕೇಳಿ ಸಂತೋಷಪಡುತ್ತಿದ್ದುದಲ್ಲದೆ, ತಾನೇ ಸಾಕಷ್ಟು ಜ್ಞಾನವನ್ನೂ ಸಂಪಾದಿಸುತ್ತಿದ್ದನು. ಹೀಗೆ ಸಾಹಿತ್ಯ, ಸಂಸ್ಕೃತಿಗಳಿಗೆ ಉತ್ತೇಜನ ಕೊಡುತ್ತಿದ್ದನು. ಇವನಲ್ಲಿ ಇಸ್ಲಾಮ್, ಯಹೋದ್ಯ, ಹಿಂದೂ, ಕ್ರಿಶ್ಚಿಯನ್ ಎಂಬ ಮತ ಭಾವನೆಯಿರಲಿಲ್ಲ. ಇವನ ಮಗನೊಬ್ಬನಿಗೆ ವಿದ್ಯಾಭ್ಯಾಸ ಮಾಡಿಸಲು ರೋಮನ್ ಕ್ಯಾತೊಲಿಕ್ ಗುರುವನ್ನೇ ನೇಮಿಸಿದ್ದನು. ಕ್ರಮೇಣ ಇವನಿಗೆ ಇಸ್ಲಾಂ ಮತದಲ್ಲಿ ನಂಬಿಕೆ ಹೋಗಿ, ಒಂದು ಹೊಸ ಮತವನ್ನು ಸ್ಥಾಪಿಸಿ, ಅದರ ಮುಖ್ಯಾಧಿಪತಿಯಾಗಿದ್ದನು. ಆಗ ಹಿಂದೂ ದೇಶದಲ್ಲಿದ್ದ ಎಲ್ಲಾ ಮತಗಳ ಮುಖ್ಯಾಂಶಗಳನ್ನು ಆರಿಸಿ, ಈ ಹೊಸ ಮತದಲ್ಲಿ ಅಳವಡಿಸಿಕೊಂಡಿದ್ದನು. ಈ ನಡತೆ ಅನೇಕ ಮುಸ್ಲಿಮರಿಗೆ ಸರಿಹೋಗದೆ ಅಕ್ಬರನ ಮಗ ಜಹಂಗೀರ್‌ನನ್ನು ತಂದೆಯ ಮೇಲೆ ಎತ್ತಿಕಟ್ಟಿ, ಅಕ್ಬರನನ್ನು ಪದಚ್ಯುತಿ ಮಾಡಿಸಿದರೆಂದು ತಿಳಿದುಬಂದಿದೆ. ಹೀಗೆ ರಾಜ್ಯ ಕಳೆದುಕೊಂಡ ಅಕ್ಬರ್ ಕೆಲವು ದಿನಗಳಾದ ಮೇಲೆ ಮರಣ ಹೊಂದಿದನು.


ಹಿಂದೂ ದೇಶವನ್ನು ವಶಪಡಿಸಿಕೊಂಡಿದ್ದ ಮೊಗಲರು ನಿಜವಾದ ತುರ್ಕರ ಜನಾಂಗದವರು. ಇವರ ವಂಶವನ್ನು ಸ್ಥಾಪಿಸಿದ ಬಾಬರ್ ತನ್ನ ಸೈನ್ಯದಲ್ಲಿ ತನ್ನ ಶಸ್ತ್ರವೈದ್ಯರನ್ನೇ ನೇಮಿಸಿಕೊಂಡಿದ್ದನು. ಇವನ ಮಗ ಹಾಗೂ ಅಕ್ಬರನ ತಂದೆ ಹುಮಾಯೂನ್ ಪರ್ಷಿಯ ದೇಶದಲ್ಲಿ ೧೧ ವರ್ಷಗಳಿದ್ದು, ದೆಹಲಿಗೆ ಹಿಂತಿರುಗಿದಾಗ, ಅವನ ಜತೆಯಲ್ಲಿ ಪರ್ಷಿಯದ ವೈದ್ಯರನ್ನು ಕರೆತಂದಿದ್ದನು, ಆಗಿನಿಂದ ಅರಬ್ಬಿ ವೈದ್ಯಶಾಸ್ತ್ರವೇ ಜಾರಿಗೆ ಬಂದಿತ್ತು. ಅಕ್ಬರನ ಕಾಲದಲ್ಲಿ ಅರಬ್ಬಿ ವೈದ್ಯಶಾಸ್ತ್ರ ಮತ್ತು ಹಿಂದೂ ವೈದ್ಯಶಾಸ್ತ್ರಗಳೆರಡಕ್ಕೂ ಪ್ರೋತ್ಸಾಹ ಸಿಕ್ಕಿ ಪರಸ್ಪರ ಸಂಬಂಧ ಬೆಳೆದಿತ್ತು. ಆದರೆ ಉಳಿದ ಮೊಗಲರ ರಾಜ್ಯಭಾರದಲ್ಲಿ ವಿಶೇಷವಾಗಿ ಮುಸ್ಲಿಂ ವೈದ್ಯರೇ ಇದ್ದುದರಿಂದ ಅವಿಸೆನ್ನನ ಪದ್ಧತಿಯನ್ನೇ ಅನುಸರಿಸುತ್ತಿದ್ದರು. ಮೊಗಲರ ಅಂತ್ಯಕಾಲದಲ್ಲಿ ರಾಜರು ಯೂರೋಪಿನ ವೈದ್ಯರಿಗೇ ಹೆಚ್ಚು ಪ್ರೋತ್ಸಾಹ ಕೊಟ್ಟದ್ದರಿಂದ, ಆಗಿನಿಂದ ಹಿಂದೂ ದೇಶದಲ್ಲಿ ಯೂರೋಪಿನ ವೈದ್ಯಶಾಸ್ತ್ರವೇ ಬೆಳೆಯುತ್ತಾ ಬಂದಿತು.

೨೧. ಆಧುನಿಕ ವೈದ್ಯಶಾಸ್ತ್ರ

ವೈದ್ಯಶಾಸ್ತ್ರದ ಪುನರುಜ್ಜೀವನ ೧೫ನೇ ಶತಮಾನದ ಮಧ್ಯ ಭಾಗದಲ್ಲಿ ಪ್ರಪಂಚದ ನಾಗರಿಕತೆಗೆ ಪುನರ್ಜನ್ಮ ಬಂದಿತೆಂದೂ ಅದಕ್ಕೆ ಹಿಂದೆ ಅಂಧಕಾರವಿತ್ತೆಂದೂ ಸಾಮಾನ್ಯವಾಗಿ ಎಲ್ಲಾ ವಿದ್ವಾಂಸರೂ ಹೇಳಿದ್ದಾರೆ. ಮಧ್ಯ ಯುಗದ ಕಾಲವೆಲ್ಲಾ ಅಂಧಕಾರದಲ್ಲಿ ಮುಳುಗಿತ್ತೆಂಬ ಆಕ್ಷೇಪಣೆ ಸರಿಯೊ ಅಲ್ಲವೊ ಎಂಬುದನ್ನೂ ಅನೇಕರು ಟೀಕಿಸಿದ್ದಾರೆ. ಸಾಮಾನ್ಯವಾಗಿ ಹೇಳುವುದಾದರೆ, ಆ ಕಾಲದಲ್ಲಿ ಧರ್ಮ ಯುದ್ಧದ ದೆಸೆಯಿಂದಲೂ ಅಂಟುರೋಗಗಳ ಹಾವಳಿಯಿಂದಲೂ ಹೆಚ್ಚು ಪ್ರಗತಿಯಾಗ ದಿದ್ದರೂ, ಯೂರೋಪಿನಲ್ಲೆಲ್ಲಾ ಪ್ರಸಿದ್ಧ ಕಾವ್ಯಗಳು ರಚನೆಯಾಗಿದ್ದವು. ಅನೇಕ ವಿಶ್ವವಿದ್ಯಾಲಯಗಳು ಪ್ರಾರಂಭವಾಗಿದ್ದವು. ಮಹತ್ತರವಾದ ಕ್ರೈಸ್ತ ಆರಾಧನ ಮಂದಿರಗಳು ನಿರ್ಮಾಣವಾಗಿದ್ದವು. ಆಗಿನ ವಿದ್ವಾಂಸರೂ, ವಿಜ್ಞಾನಿಗಳೂ ನಾಗರಿಕತೆಯನ್ನು ಎಂದಿನಂತೆ ಮುಂದುವರಿಸಲು ಕಾತುರರಾಗಿದ್ದರು. ಪುನರುಜ್ಜೀವನದ ಮಾರ್ಗದರ್ಶಕರಾದ ಡಾಂಟೆ ಮತ್ತು ಪೆಟ್ರಾರ್ಕ್ ಮಧ್ಯ ಯುಗದಲ್ಲೇ ಹುಟ್ಟಿ ಪ್ರಖ್ಯಾತರಾಗಿದ್ದರು. ಮಾನವನ ಘನತೆ, ಆಧ್ಯಾತ್ಮಿಕ ಸ್ವಾತಂತ್ರ್ಯಗಳೇ ಆಗಿನ ಕಾಲದ ಜನರ ಮುಖ್ಯ ಗುರಿಯಾಗಿದ್ದವು. ಆದರೆ ವಿಜ್ಞಾನ ಸಂಶೋಧನೆ ಅಷ್ಟೊಂದು ಅಭಿವೃದ್ಧಿಯಾಗಿರಲಿಲ್ಲವೆಂದು ಅನೇಕರ ಆಪಾದನೆ. ಹೀಗಿದ್ದರೂ ಮಧ್ಯಯುಗದಲ್ಲಿ ಪ್ರಖ್ಯಾತವಾಗಿದ್ದ ವಿಶ್ವವಿದ್ಯಾಲಯಗಳಾದ ಬೊಲೋನ, ಮಾಂಟ್‌ಪೆಲ್ಲಿಯರ್, ಪಾಡ್ವ, ಪ್ಯಾರಿಸ್ ಮುಂತಾದವಲ್ಲಿ ವೈದ್ಯಶಾಸ್ತ್ರ ಉತ್ಕೃಷ್ಟ ಸ್ಥಿತಿಯಲ್ಲೇ ಇತ್ತೆಂದು ಹೇಳಬಹುದು. ಆದರೆ ಅಂಗರಚನೆ, ದೇಹಶಾಸ್ತ್ರ, ಶಸ್ತ್ರವೈದ್ಯ ಮುಂತಾದ ಇನ್ನೂ ವೈದ್ಯಶಾಸ್ತ್ರದ ಅನೇಕ ಶಾಖೆಗಳಲ್ಲಿ, ೧೬ನೇ ಶತಮಾನದಿಂದೀಚೆಗೆ ಸಂಶೋಧನೆಗಳು ನಡೆದು ಕ್ರಮಬದ್ಧವಾಗಿ ವೈದ್ಯಶಾಸ್ತ್ರ ಬೆಳೆಯಲು ಪ್ರಾರಂಭವಾಯಿತು.

ಪುನರುಜ್ಜೀವನ

೧೪೫೩ ರಲ್ಲಿ ಕಾನ್‌ಸ್ಟಾಂಟಿನೋಪಲ್ ತುರ್ಕರ ಕೈವಶವಾಗಿ ಅಲ್ಲಿದ್ದ ಗ್ರೀಕ್ ಶಾಸ್ತ್ರಜ್ಞರೆಲ್ಲಾ ಪಶ್ಚಿಮ ದೇಶಗಳಿಗೆ ಹೊರಟು ಹೋದಾಗಿನಿಂದ ಪುನರುಜ್ಜೀವನ ಪ್ರಾರಂಭವಾಯಿತೆಂದು ಅನೇಕರು ಊಹಿಸಿದ್ದಾರೆ. ಇನ್ನೂ ಅನೇಕರು ೧೪೫೪ ರಲ್ಲಿ ಮುದ್ರಣ ಯಂತ್ರ ಕಂಡುಹಿಡಿಯಲ್ಪಟ್ಟು ಜಾರಿಗೆ ಬಂದ ಮೇಲೆ ಪ್ರಾರಂಭವಾಯಿತೆಂದು ಹೇಳಿದ್ದಾರೆ. ವೈದ್ಯಶಾಸ್ತ್ರ ಪ್ರಗತಿಗೆ ಬಂದದ್ದು, ಸೆಲ್ಸಸ್ ಬರೆದ "ಡಿ ಮೆಡಿಸಿನ" ಎಂಬ ಹಸ್ತಪ್ರತಿ ೧೪೪೩ ರಲ್ಲಿ ಬೆಳಕಿಗೆ ಬಂದ ಮೇಲೆ ಎಂದು ವಿದಿಂಗ್ಟನ್ ಹೇಳಿದ್ದಾನೆ. ೧೪೯೨ ರಲ್ಲಿ ಅಮೆರಿಕ ಖಂಡವನ್ನು ಕಂಡುಹಿಡಿದಾಗಿನಿಂದ



ಮುರಿದಿದ್ದ ತೋಳಿನ ಮೂಳೆಯನ್ನು ನೆಟ್ಟಗೆ ಮಾಡುತ್ತಿರುವ ರೀತಿ (೧೪೬೦)

ಯೂರೋಪಿನಲ್ಲಿ ಕುತೂಹಲ ಹೆಚ್ಚಿ, ಕಲ್ಪನಾಶಕ್ತಿ ಕುದುರಿತೆಂದೂ ಅನೇಕರ ಭಾವನೆ. ಒಟ್ಟನಲ್ಲಿ ಹೇಳುವುದಾದರೆ, ೧೪೫೦ ರಿಂದ ೧೫೦೦ ರ ತನಕ ಉಂಟಾದ ಅತ್ಯುನ್ನತ ಬದಲಾವಣೆಗಳೇ ಜ್ಞಾನ ಪುನರುಜ್ಜೀವನಕ್ಕೆ ಕಾರಣವೆಂದು ಹೇಳಬಹುದು.

ಪುನರುಜ್ಜೀವನ ಮೊಟ್ಟಮೊದಲಿಗೆ ಇಟಲಿಯ ಫ್ಲಾರೆನ್ಸಿನಲ್ಲಿ ಪ್ರಾರಂಭವಾಯಿತು. ಇಟಲಿಯ ಇತರ ಮುಖ್ಯ ಪಟ್ಟಣಗಳಲ್ಲೂ ಅಲ್ಲಿಯ ರಾಜರುಗಳಿಂದ ಪ್ರೋತ್ಸಾಹ ಒದಗಿತ್ತು. ಅನಂತರ ಫ್ರಾನ್ಸಿಗೂ, ಜರ್ಮನಿಗೂ ಮತ್ತು ಇಂಗ್ಲೆಂಡಿಗೂ ಹರಡಿ ಅಲ್ಲಿಯ ರಾಜರ ಒತ್ತಾಸೆಗೊಳಗಾಯಿತು. ಇಟಲಿಯ ಪೋಪ್ ೫ನೇ ನಿಕೊಲಾಸ್ ಕಾನ್‌ಸ್ಟಾಂಟಿನೋಪಲ್ಲಿನ ಪ್ಯಾಟ್ರಿಯಾರ್ಕ್ ಫ್ರಾನ್ಸಿನ ೮ನೇ ಚಾರಲ್ಸ್ ಮತ್ತು ಜರ್ಮನಿಯ ೧ನೇ ಫ್ರಾನ್ಸಿಸ್ ಮುಂತಾದವರೆಲ್ಲಾ ಹೊಸ ಹೊಸ ಅಭಿಪ್ರಾಯಗಳನ್ನು ಮುಂದಿಟ್ಟರು. ಇಂಗ್ಲೆಂಡಿನ ೭ನೇ ಹೆನ್ರಿ ಜ್ಞಾನಾರ್ಜನೆಗೆ ಸಾಕಷ್ಟು ಉತ್ತೇಜನವನ್ನು ಕೊಟ್ಟನು. ಷೇಕ್ಸ್‌ಪಿಯರ್ ಇಟಲಿಗೆ ಹೋಗಿ ತನ್ನ ನಾಟಕಗಳಿಗೆ ಬೇಕಾದ ಕಥಾವಸ್ತುವನ್ನು ಶೇಖರಿಸಿದ್ದನು. ಆಗ ಇಟಲಿಯ ಪ್ರಭಾವ ಎಲ್ಲೆಲ್ಲೂ ಹರಡಿದ್ದುದರಿಂದ ಇಟಲಿಗೆ ಹೋಗಿ ವ್ಯಾಸಂಗ ಮಾಡದಿದ್ದವರೇ ಇರಲಿಲ್ಲ. ಲಂಡನ್ನಿನಲ್ಲಿ ಪುಸ್ತಕಗಳು ಅಚ್ಚಾಗಿದ್ದರೂ, ಇಟಲಿಯಲ್ಲಾಯಿತೆಂದು ಬರೆಯಲಾಗುತ್ತಿತ್ತು. ಹೀಗೆ ಪುನರುಜ್ಜೀವನಕ್ಕೆ ಇಟಲಿ ದಾರಿ ತೋರಿಸುತ್ತಿದ್ದಾಗ, ಇಂಗ್ಲೆಂಡಿನಲ್ಲಿ ೮ನೇ ಹೆನ್ರಿ ಮತ್ತು ರಾಣಿ ಎಲಿಸಬೆತ್ ಇಟಾಲಿಯನ್ ಭಾಷೆಯನ್ನೇ ನ್ಯಾಯಾಸ್ಥಾನದ ಭಾಷೆಯನ್ನಾಗಿ ಅವಕಾಶ ಕಲ್ಪಿಸಿ, ಸಾಹಿತ್ಯ, ಕಲೆ, ವಿಜ್ಞಾನ ಮುಂತಾದ ಸಂಸ್ಕೃತಿಗಳಿಗೆಲ್ಲಾ ಪ್ರೋತ್ಸಾಹ ಕೊಟ್ಟಿದ್ದರು. ಎಲಿಜಬೆತ್ ರಾಣಿಯ ಕಾಲ ಚರಿತ್ರೆಯಲ್ಲೇ ಉತ್ಕೃಷ್ಟವಾದ ಕಾಲವಾಗಿತ್ತು.

ಅಂಗರಚನೆಶಾಸ್ತ್ರದ ಬೆಳವಣಿಗೆ

ಲಿಯನಾರ್ಡೊ ಡ ವಿನ್ಸಿ

ಪುನರುಜ್ಜೀವನ ಕಾಲದ ಕಲೆಗಾರರು, ಚಿತ್ರಗಾರರು ಗ್ರೀಕರಿಗೆ ಆದರ್ಶ ಪ್ರಾಯವಾದ ಶರೀರದ ಹೊರಗಿನ ಸೌಂದರ್ಯವನ್ನು ಸುಂದರವಾಗಿ ಚಿತ್ರಿಸುತ್ತಿದ್ದುದಲ್ಲದೆ, ಶರೀರದ ಅಂಗರಚನೆಯನ್ನೂ ಕಲಿತು, ಅದರ ಸೌಂದರ್ಯವನ್ನೂ ರಚಿಸಲು ಪ್ರಾರಂಭಿಸಿದ್ದರು. ಈ ಚಿತ್ರಕಲೆಗಾರರ ಪೈಕಿ, ಶರೀರ ಅಂಗಚ್ಛೇದನೆ ಮಾಡಿ ಕಲೆ ಅಭಿವೃದ್ಧಿ ಪಡಿಸುವುದರಲ್ಲಿ ಲಿಯನಾರ್ಡೊ ಡ ವಿನ್ಸಿ (೧೪೫೨–೧೫೧೯) ಬಹಳ ಆಸಕ್ತಿಹೊಂದಿದ್ದನು. ಇವನು ವಿನ್ಸಿ ಎಂಬಲ್ಲಿ ಜನಿಸಿ, ವಿರೋಚ್ಚಿಯೊ ಕೈ ಕೆಳಗೆ ವರ್ಣಚಿತ್ರಕಲೆ ಕಲಿತು, ಮಿಲಾನಿನಲ್ಲೂ, ರೋಮ್‌ನಗರದಲ್ಲೂ ಕೆಲಸಕ್ಕಿದ್ದನು. ಇವನು ಚಿತ್ರಕಲೆಯಲ್ಲದೆ, ಗಣಿತ ಶಾಸ್ತ್ರ, ಜ್ಯೋತಿಷ್ಯ, ಅಂಗರಚನೆಶಾಸ್ತ್ರ, ಶರೀರಶಾಸ್ತ್ರ, ತತ್ತ್ವಶಾಸ್ತ್ರ, ಭೂ ಮತ್ತು ನೌಕಾಸೈನ್ಯಕ್ಕೆ ಸೇರಿದ ವಾಸ್ತುಶಿಲ್ಪಗಳಲ್ಲೂ ಇವನು ಶ್ರೇಯಸ್ಸು ಪಡೆದಿದ್ದನು. ಫ್ರಾನ್ಸಿನ ಫ್ರಾನ್ಸಿಸ್ ದೊರೆಯ ಕಾಲದಲ್ಲಿ ಅಂಬಾಯ್ಸಿನಲ್ಲಿ ೧೫೧೯ರಲ್ಲಿ ಮರಣ ಹೊಂದುವುದರೊಳಗೆ ಇವನ ಅನೇಕ ವರ್ಣಚಿತ್ರಗಳು ಪ್ರಖ್ಯಾತಿ ಹೊಂದಿದ್ದವು. ಹಡಗುಗಳ ಸಂಚಾರಕ್ಕೆ ಉಪಯೋಗವಾಗುವ ನೀರು ಕಾಲುವೆಗಳ ಕ್ರಮಗಳನ್ನು ವಿಶದವಾಗಿ ಚಿತ್ರಿಸಿದ್ದನು. ಪ್ರಾರ್ಥನಾ ಮಂದಿರಗಳ ನಕಾಸೆ ತಯಾರಿಸುವುದರಲ್ಲಿ ನಿಪುಣನಾಗಿದ್ದನು, ಸೈನ್ಯದಲ್ಲಿ ಉಪಯೋಗಿಸುವ ಫಿರಂಗಿ, ರಥ, ಜಲಾಂತಸ್ಸಾಗಣೆ ಮತ್ತು ಆಕಾಶಯಾನದ ಯಂತ್ರಗಳ ನಕಾಸೆ ಚಿತ್ರಗಳನ್ನೂ ತಯಾರಿಸುತ್ತಿದ್ದನು. ಇವನ್ನೆಲ್ಲಾ ವಿವರಿಸಿದ್ದ ಟಿಪ್ಪಣಿ ಪುಸ್ತಕಗಳನ್ನು ಇವನ ಸ್ನೇಹಿತನಾದ ಫ್ರಾನ್ಸಿಸ್ಕೊ ಮೆಲ್ಸಿಗೆ ತನ್ನ ಅಂತಿಮ ಇಷ್ಟಪತ್ರದ ಮೂಲಕ ಬಿಟ್ಟುಹೋಗಿದ್ದನು. ಅನೇಕ ವರ್ಷಗಳು ಕಳೆದು ಇವು ಬೆಳಕಿಗೆ ಬಂದ ಮೇಲೆ ಲಿಯನಾರ್ಡೋನ ಸಾಮರ್ಥ್ಯ



ಲಿಯನಾರ್ಡೊ ಡ ವಿನ್ಸಿ

ಪ್ರಪಂಚಕ್ಕೆ ಗೊತ್ತಾಯಿತು. ಇವುಗಳಲ್ಲಿ ಅನೇಕ ಹಸ್ತಪ್ರತಿಗಳು ಮಿಲಾನಿನಲ್ಲಿರುವ ಆಂಬ್ರೊಸಿಯದ ಪುಸ್ತಕಭಂಡಾರವನ್ನು ಸೇರಿದವು. ಯುದ್ಧದಲ್ಲಿ ತೊಡಗಿದ್ದ ೧ನೇ ನೆಪೋಲಿಯನ್ ಅನೇಕ ಹಸ್ತಪ್ರತಿಗಳನ್ನು ಫ್ರಾನ್ಸಿಗೆ ಕೊಂಡುಹೋದನು. ಕೆಲವನ್ನು ಇಂಗ್ಲೆಂಡಿನ ೧ನೇ ಚಾರಲ್ಸ್ ಕೊಂಡುಕೊಂಡು ಹೋಗಿ ವಿಂಡ್ಸರ್ ರಾಜನ ಪುಸ್ತಕ ಭಂಡಾರದಲ್ಲಿಟ್ಟನು. ಮುಖ್ಯವಾಗಿರುವ ಪ್ರತಿಗಳೆಲ್ಲಾ ಈಗಲೂ ಆಂಬ್ರೊಸಿಯದ ಪುಸ್ತಕಭಂಡಾರದಲ್ಲಿವೆ. ಈ ಹಸ್ತಪ್ರತಿಗಳಲ್ಲಿ ೭೫೦ ವಿಧವಿಧವಾದ ಅಂಗರಚನೆ ಚಿತ್ರಗಳಿದ್ದವು. ಕಂಕಾಳ, ಸ್ನಾಯು, ಹೃದಯ, ಶ್ವಾಸಕೋಶ, ನರ, ರಕ್ತನಾಳ, ಮಿದುಳು ಮುಂತಾದುವೆಲ್ಲಾ ಚಿತ್ರಿಸಲಾಗಿವೆ. ಅಂಗರಚನೆಶಾಸ್ತ್ರವನ್ನು ಬರೆಯಬೇಕೆಂದು ಲಿಯನಾರ್ಡೊ ಈ ಚಿತ್ರಗಳನ್ನೆಲ್ಲಾ ರಚಿಸಿದ್ದನೆಂದು ಊಹಿಸಲಾಗಿದೆ. ಆದರೆ ಅದು ನೆರವೇರಲಿಲ್ಲ. ಗ್ಯಾಲೆನ್ನನ ಮತ್ತು ಮಂಡಿನೊ ಬೋಧನೆಗಳೇ ಇವನಿಗೆ ಆಧಾರವಾಗಿದ್ದವು. ಹಾಗೂ ಅನೇಕ ಅರಬ್ಬಿ ಪದಗಳನ್ನು ತನ್ನ ಲೇಖನಗಳಲ್ಲಿ ಉಪಯೋಗಿಸಿದ್ದನು. ಎಲ್ಲಕ್ಕೂ ಮಿಗಿಲಾಗಿ ತಾನೇ ಅಂಗಚ್ಛೇದನೆ ಮಾಡಿ ನೋಡಿದ ವಿಷಯಗಳನ್ನು ಹೆಚ್ಚಾಗಿ ಉಪಯೋಗಿಸಿದ್ದನು. ಇವನು ಬರೆದಿದ್ದ ಅಂಗರಚನೆ ಗ್ರಂಥಗಳು ಎರಡು ಶತಮಾನಗಳ ಕಾಲ ಬೆಳಕಿಗೆ ಬರಲೇ ಇಲ್ಲ, ಇವೇನಾದರೂ ಅವನ ಜೀವಮಾನದಲ್ಲೇ ಅಥವಾ ಸತ್ತ ತಕ್ಷಣವೇ ಪ್ರಕಟವಾಗಿದ್ದ ಪಕ್ಷದಲ್ಲಿ ಅವನ ಪ್ರಖ್ಯಾತಿ ಮತ್ತಷ್ಟು ಹೆಚ್ಚುತ್ತಿತ್ತು.



ಲಿಯನಾರ್ಡೊ ಡ ವಿನ್ಸಿ ಬರೆದ ನಕ್ಷೆ. ಗರ್ಭಕೋಶದಲ್ಲಿರುವ ಕೂಸು

ಮಿದುಳಿನ ಕುಹರಗಳ ಆಕಾರವನ್ನು ತಿಳಿಯಲು ಅವುಗಳೊಳಕ್ಕೆ ಕರಗಿದ ಮೇಣವನ್ನು ತುಂಬುತ್ತಿದ್ದನು. ಕಣ್ಣಿನ ಪದರಗಳನ್ನು ತೆಗೆಯಲು ಕಣ್ಣನ್ನು ಮೊಟ್ಟೆಯ ಬಿಳುಪಿನಲ್ಲಿ ಬೇಯಿಸಿ ಅದು ಗಟ್ಟಿಯಾದ ಮೇಲೆ ಕತ್ತರಿಸುತ್ತಿದ್ದನು. ತೊಡೆ ತೋಳುಗಳನ್ನು ಕೂಡ ಅಡ್ಡ ಕತ್ತರಿಸಿ ಪರೀಕ್ಷಿಸುತ್ತಿದ್ದನು. ಗರ್ಭಕೋಶದಲ್ಲಿದ್ದ ಭ್ರೂಣವನ್ನು ಪರೀಕ್ಷಿಸಿದ್ದನು. ಇವೆಲ್ಲವನ್ನೂ, ಮುಖದ ಮೂಳೆ

ಗೂಡುಗಳನ್ನೂ, ಹೃದಯದ ಮಾಡರೇಟರ್ ಪಟ್ಟಿಯನ್ನೂ ಕಾರೊನರಿ ರಕ್ತನಾಳಗಳನ್ನೂ ಮತ್ತು ಹೃದಯದ ಕವಾಟಗಳನ್ನೂ ಚಿತ್ರರೂಪಕ್ಕೆ ಅಳವಡಿಸಿದ್ದನು. ಉಸಿರ್ನಾಳಗಳು ಕಿರಿದಾಗಿ ಗಾಳಿಗೂಡುಗಳಲ್ಲಿ ಕೊನೆಯಾಗುತ್ತವೆಯೇ ಹೊರತುಗ್ಯಾಲೆನ್ ಹೇಳಿದ್ದಂತೆ ಹೃದಯಕ್ಕೆ ಸೇರುತ್ತಿರಲಿಲ್ಲವೆಂದು ತಿಳಿಸಿದ್ದನು.



ಲಿಯನಾರ್ಡೊ ಡ ವಿನ್ಸಿಯ ಗುಂಡಿಗೆ ನಕ್ಷೆ

ಲಿಯನಾರ್ಡೊ ಡ ವಿನ್ಸಿಯಷ್ಟು ಪ್ರಖ್ಯಾತಿಗೆ ಬರದಿದ್ದರೂ, ಮೈಕೇಲ್ ಆಂಜೆಲೊ, ರಾಫೇಲ್ ಮತ್ತು ಆಲ್ಬ್ರೆಕ್ಟ ಡ್ಯೂರರ್ ಚಿತ್ರಕಲೆಗಾರರು ಸಹ ಶವಚ್ಛೇದನೆ ಮಾಡಿ ಅಂಗರಚನೆಯನ್ನು ಅಭಿವೃದ್ಧಿ ಮಾಡುತ್ತಿದ್ದರು. ಈ ಕಲೆಗಾರರೆಲ್ಲಾ ಅಂಗರಚನೆಯನ್ನು ಚಿತ್ರರೂಪಕ್ಕೆ ಅಳವಡಿಸಿದ ಕಾರ್ಯ ಒಂದು ವಿಶೇಷ ಸಾಧನವೆಂದು ಹೇಳಿದರೆ ಅತಿಶಯವಾಗಲಾರದು.

ಅಂಗರಚನೆಶಾಸ್ತ್ರಜ್ಞರು

ಎಲ್ಲಾ ವಿಜ್ಞಾನ ಶಾಸ್ತ್ರಗಳಂತೆ ಅಂಗರಚನೆಶಾಸ್ತ್ರ ಕೂಡ ಹಿಂದಿನ ಕಾಲದಿಂದ ಬೆಳೆದು ಬಂದು, ೧೬ನೇ ಶತಮಾನದಲ್ಲಿ ಮೇಲ್ಮಟ್ಟವನ್ನು ಪಡೆದು ವೈದ್ಯಶಾಸ್ತ್ರಕ್ಕೆ ಕಳೆ ತಂದಿತ್ತು.

ಮುಂಡಿನೊ

೧೩೧೬ರಲ್ಲೇ ಮುಂಡಿನೊ ಶವದ ಅಂಗಚ್ಛೇದನೆ ಮಾಡಿ ಜನರಿಗೆ ಪ್ರದರ್ಶಿಸುತ್ತಿದ್ದನೆಂದು ಹೇಳಲಾಗಿದೆ. ಇವನು ಬೊಲೋನದಲ್ಲಿ ಮಾಡಿದ ಅದ್ಭುತ ಕಾರ್ಯಗಳಿಂದ ಅಂಗರಚನೆಶಾಸ್ತ್ರ ಪ್ರಖ್ಯಾತಿ ಹೊಂದಿ ಪುನರುಜ್ಜೀವನ ಬಂದ ಮೇಲೆ ಅಂಗರಚನೆ ಶಾಸ್ತ್ರಜ್ಞರಿಗೆ ಮೇಲ್ಪಂಕ್ತಿಯಾಯಿತು. ಇವನು ಅಂಗರಚನೆಶಾಸ್ತ್ರದ ಪುನಸ್ಸ್ಥಾಪಕನೆಂದು ಹೆಸರು ಪಡೆದುದಲ್ಲದೆ, ಇವನು ಕೆಲಸದಲ್ಲಿದ್ದ ಬೊಲೋನ ವಿಶ್ವವಿದ್ಯಾಲಯವೂ ಮುಂದಿನ ಅಂಗರಚನಾಕಾರರಿಗೆ ಪೋಷಣಾಲಯವಾಯಿತು.

ಅಲೆಸ್ಸಾಂಡ್ರೊ ಅಚ್ಚಿಲಿನಿ

ಇವನ ತರುವಾಯಿಗಳ ಪೈಕಿ, ಬೊಲೋನದಲ್ಲೂ ಪಾಡ್ವದಲ್ಲೂ ಬೋಧಿಸುತ್ತಿದ್ದ ಅಲೆಸ್ಸಾಂಡ್ರೊ ಅಚ್ಚಿಲಿನಿ (೧೪೬೩–೧೫೧೨) ಮಂಡಿನೊನ್ನು ಕುರಿತು ವಿಮರ್ಶೆ ಮಾಡಿದ್ದ ಗ್ರಂಥ ೧೫೨೦ರಲ್ಲಿ ಪ್ರಕಟವಾಯಿತು. ಇದರಲ್ಲಿ ಮೊಟ್ಟಮೊದಲಿಗೆ ಮ್ಯಾಲಿಯಸ್ ಮತ್ತು ಇಂಕಸ್ ಎಂಬ ಕಿವಿಯೊಳಗಿನ ಸಣ್ಣ ಎಲುಬುಗಳನ್ನೂ, ಕೆಳದವಡೆಯ ಸಾಗುನಾಳವನ್ನೂ ವಿವರಿಸಿದ್ದನು. ಈ ಸಾಗುನಾಳವನ್ನು ೧೬೫೬ ರಲ್ಲಿ ವಾರ್ಟನ್ ಪುನಃ ಕಂಡುಹಿಡಿದುದರಿಂದ ವಾರ್ಟನ್ ನಾಳವೆಂದು ಈಗ ಹೆಸರು ಬಂದಿದೆ.


ಮಂಡಿನೊ ಅಂಗರಚನೆಯ ಕ್ರಮಗಳನ್ನು ಗೈ ಡಿ ಶಾಲಿಯಕ್ ಮತ್ತು ಗೈಡೊ ಡಿ ವಿಗಿವಾನೊ ಎಂಬಿಬ್ಬರು ಫ್ರಾನ್ಸಿಗೆ ಕೊಂಡುಹೋಗಿ ಅಲ್ಲಿ ಅಭಿವೃದ್ಧಿಪಡಿಸಿದರು. ಮಂಡಿನೊ ೧೩೧೬ರಲ್ಲಿ ಬರೆದ ಅನೊತೋಮಿಯ ಅನೇಕ ಕಡೆಗಳಲ್ಲಿ ಬೆಳಕಿಗೆ ಬಂದು ೧೪೭೮ರಲ್ಲಿ ಮೊದಲಿಗೆ ಅಚ್ಚು ಹಾಕಲಾಯಿತು.

ಅಂಗರಚನೆಶಾಸ್ತ್ರದ ಪುಸ್ತಕಗಳಲ್ಲಿ ಚಿತ್ರಗಳನ್ನು ಸೇರಿಸಲು ಬೆರಂಗೇರಿಯಾರಾಡ ಕಾರ್ಪಿ ಮೊದಲಿಗೆ ಪ್ರಾರಂಭಿಸಿದನು. ಇವನು ಬೊಲೋನ ಪದವೀಧರ. ಇವನಡ ಅನೇಕ ಶವಗಳನ್ನು ಅಂಗಚ್ಛೇದನೆ ಮಾಡಿ ೧೫೨೧ ರಲ್ಲಿ ಅಂಗರಚನೆಯ ವಿಮರ್ಶೆಯನ್ನು ಬರೆದನು. ಇದರಲ್ಲಿ ಅನೇಕ ಚಿತ್ರಗಳಿದ್ದವು. ೧೫೨೨ರಲ್ಲಿ ಇಸಗೊಗೆ ಎಂಬ ಮೊದಲಿನದಕ್ಕಿಂತಲೂ ಉತ್ತಮವಾದ ಮತ್ತೊಂದು ವಿಮರ್ಶೆ ಬರೆದನು. ಇವನು ಅನ್ನಕ್ಷೀರ ನಾಳಗಳನ್ನು ಸಿರಗಳಿಂದ ವ್ಯತ್ಯಾಸ ಮಾಡಿದನು. ಕ್ರಿಮಿಯ ಆಕಾರದ ಕರುಳಿನ ಬಾಲವನ್ನೂ, ಹೃದಯದೊಳಗಿರುವ ಕವಾಟಗಳನ್ನೂ, ಲಾಳಾಕಾರದ ಮೂತ್ರಪಿಂಡವನ್ನೂ ವಿವರಿಸಿದನು.

ಆಂಡ್ರೀಸ್ ವಿಸೇಲಿಯಸ್

ಎಲ್ಲರಿಗಿಂತಲೂ ಅಂಗರಚನೆಶಾಸ್ತ್ರದಲ್ಲಿ ಪ್ರಖ್ಯಾತಿ ಪಡೆದು ಪ್ರಪಂಚಕ್ಕೇ ಮಾದರಿಯಾಗಿದ್ದ ಅಂಗರಚನಾಕಾರನಾದ ಆಂಡ್ರೀಸ್ ವಿಸೇಲಿಯಸ್ ಬ್ರಸಲ್ಸ್ ಪಟ್ಟಣದಲ್ಲಿ ೧೫೧೪–೧೫ರಲ್ಲಿ ಜನಿಸಿ, ತನ್ನ ಎಳೆತನದಲ್ಲೇ ಅಂಗಚ್ಛೇದನೆ ಮಾಡಲು ಆಸಕ್ತಿ ಹೊಂದಿದ್ದನು. ಇಲಿ, ಬೆಕ್ಕು, ನಾಯಿಗಳನ್ನು ಅಂಗಚ್ಛೇದನೆ ಮಾಡಿ ಟಿಪ್ಪಣಿ ಬರೆಯುತ್ತಿದ್ದನು. ಇವನ ತಂದೆತಾತಂದಿರೆಲ್ಲಾ ವೈದ್ಯಶಾಸ್ತ್ರಜ್ಞರಾಗಿದ್ದರು. ಇವನ ತಾತ, ಹಿಪ್ಪೊಕ್ರೇಟಿಸ್ ಮತ್ತು ರೇಸಸ್ ಇವರನ್ನು ಕುರಿತು ವಿಮರ್ಶೆ ಬರೆದಿದ್ದನು. ವಿಸೇಲಿಯಸ್ ತನ್ನ ೧೭ನೇ ವಯಸ್ಸಿನಲ್ಲೇ ಪ್ಯಾರಿಸ್ಸಿಗೆ ಹೋಗಿ ವೈದ್ಯ ವಿದ್ಯಾಭ್ಯಾಸ ಮಾಡಲು ಆರಂಭಿಸಿದ್ದನು. ಇಲ್ಲಿ ಜೇಕೋಬಸ್ ಸಿಲ್ವಿಯಸ್ ಮತ್ತು ಜೊಹಾರ್ ಗಿಂಟೆರಿಯಸ್ ಇಬ್ಬರೂ ಇವನ ಅಧ್ಯಾಪಕರಾಗಿದ್ದರು. ಇವರಿಬ್ಬರೂ ಶ್ರೇಷ್ಠರಾದ ಅಂಗರಚನೆಶಾಸ್ತ್ರಜ್ಞರಾಗಿದ್ದರು. ಗ್ಯಾಲೆನ್ನನ ಬೋಧನೆಗಳೇ ಇವರಿಗೆ

ಮಾದರಿಯಾಗಿದ್ದವು. ಸಿಲ್ವಿಯಸ್ ಕೊನೆಕೊನೆಗೆ ವಿಸೇಲಿಯಸ್ ಕಂಡುಹಿಡಿದ ಅಂಗರಚನೆಯ ಹೊಸ ವಿಷಯಗಳನ್ನು ಹೀಯಾಳಿಸಿ ವಿರೋಧಿಯಾದನು. ಅವನನ್ನು ಹುಚ್ಚನೆಂದೂ, ಅವನ ಬೆಂಬಲಿಗರನ್ನು ಕತ್ತೆಗಳೆಂದೂ ಭಾವಿಸಿ ಅಸಡ್ಡೆ ತೋರಿಸಿದ್ದನು. ಆದರೆ ಗಿಂಟೆರಿಯಸ್ ಹಾಗಿರಲಿಲ್ಲ. ವಿಸೇಲಿಯಸ್‌ನ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸಿ ಸಹಾಯ ಮಾಡುತ್ತಿದ್ದನು.


ಫ್ಯಾಬ್ರಿಜಿಯೋ ಅಂಗರಚನೆ ಮಂದಿರದ ಚಿತ್ರ (೧೫೬೧-೧೬೧೬)

ವಿಸೇಲಿಯಸ್ ತಾನು ಮೊದಲಿಗೆ ಗ್ರೀಕ್, ಲ್ಯಾಟಿನ್, ಹೆಬ್ರು ಮತ್ತು ಅರಬ್ಬಿ ಸಂಸ್ಕೃತಿಗಳನ್ನು ಕಲಿತ ಲೊವೇನ್ ವಿಶ್ವವಿದ್ಯಾಲಯಕ್ಕೆ, ಪ್ಯಾರಿಸ್ಸಿನಿಂದ ಹಿಂತಿರುಗಿ, ೧೮ ವರ್ಷಗಳ ಕಾಲ ನಿಂತು ಹೋಗಿದ್ದ ಶವಚ್ಛೇದನವನ್ನು ಪುನಃ ಪ್ರಾರಂಭ ಮಾಡಿ, ವಿದ್ಯಾರ್ಥಿಗಳಿಗೆ ಬೋಧಿಸಲು ಯತ್ನಿಸಿದನು. ಪ್ಯಾರಿಸ್ಸಿನಲ್ಲಿ ತನ್ನ ಪಂಡಿತ ಪದವಿಗೋಸ್ಕರ ಬರೆದಿದ್ದ ರೇಸಸ್ಸಿನ ೯ನೇ ಪುಸ್ತಕದ ತಾತ್ಪರ್ಯ ಅನಂತರ ಅಚ್ಚಾಯಿತು. ಇದೇ ವಿಸೇಲಿಯಸ್ಸಿನ ಮೊದಲನೇ ಅಂಗರಚನೆ ಪುಸ್ತಕ. ಇದಾದ ಕೆಲವು ದಿವಸಗಳ ಮೇಲೆ ವಿಸೇಲಿಯಸ್ ಲೊವೇನ್ ಬಿಟ್ಟು ವೆನಿಸ್ಸಿಗೆ ಹೊರಟನು. ಚಿತ್ರಕಲೆಗಾರನಾದ ಕಾಲ್ಕರ್ ಇಲ್ಲಿ ಪ್ರಸಿದ್ಧಿಯಾಗಿದ್ದು ದೇಶಬಾಂಧವನಾಗಿದ್ದನು. ಕಾಲ್ಕರ್ ಜೊತೆ ಸೇರಿ ಲೈಂಗಿಕ ವಿವರಪಟ್ಟಿ ಎಂಬ ಆರು ಚಿತ್ರಪಟಗಳನ್ನು ರಚಿಸಲು ಪ್ರಾರಂಭಿಸಿದನು. ಅದೇ ವರ್ಷ ವೆನಿಸ್ ಬಿಟ್ಟು ಪಾಡ್ವ ವಿಶ್ವವಿದ್ಯಾಲಯ ಸೇರಿ, ೧೫೩೭ರಲ್ಲಿ ಪಂಡಿತ ಪದವಿ ಪಡೆದು, ಶಸ್ತ್ರವೈದ್ಯ ಮತ್ತು ಅಂಗರಚನೆಶಾಸ್ತ್ರಗಳ ಪ್ರಾಧ್ಯಾಪಕನಾಗಿ ಟ್ಯಾಬುಲೆ ಅನಟಾಮಿಕೆ ಸೆಕ್ಸ್ ಎಂಬ ಚಿತ್ರಪಟಗಳ ಗ್ರಂಥವನ್ನು ಬಿಡುಗಡೆ ಮಾಡಿದನು. ಇದನ್ನು ಮುಗಿಸಿದಾಗ ವಿಸೇಲಿಯಸ್ಸಿಗೆ ಕೇವಲ ೨೪ ವರ್ಷ ಮಾತ್ರ. ಈ ಗ್ರಂಥದಲ್ಲಿ ಗ್ಯಾಲೆನ್ ರೀತಿಗಳನ್ನೇ ಅನುಸರಿಸಿದ್ದುದರಿಂದ, ಚಿತ್ರಗಳು ಅಂದವಾಗಿದ್ದರೂ ವಿಷಯಗಳಲ್ಲಿ ಅನೇಕ ತಪ್ಪುಗಳಿದ್ದವು. ಈಲಿಯಲ್ಲಿ ೫ ಹಾಲೆಗಳಿರುವುವೆಂದೂ, ಸಿರವ್ಯೂಹ ಈಲಿಯಿಂದ ಪ್ರಾರಂಭವಾಗುತ್ತದೆಂದೂ ವಿವರಿಸಲಾಗಿತ್ತು. ಪಾಡ್ವದಲ್ಲಿ ೫೦೦ ವಿದ್ಯಾರ್ಥಿಗಳ ದೊಡ್ಡ ತರಗತಿಗಳಿಗೆ ಉಪನ್ಯಾಸ ಮಾಡುತ್ತಿದ್ದನು. ಪಾಡ್ವದಿಂದ ಬೊಲೋನ ವಿಶ್ವವಿದ್ಯಾಲಯಕ್ಕೆ ಉಪನ್ಯಾಸ ಮಾಡಲು ಆಹ್ವಾನ ಪಡೆದು ಎರಡು ಬಾರಿ ಹೋಗಿ ಬಂದಿದ್ದನು.

ತಾನೇ ಶವಚ್ಛೇದನೆ ಮಾಡಿದ ಆಧಾರದ ಮೇಲೆ "ಫ್ಯಾಬ್ರಿಕ" ಎಂಬ ಉತ್ಕೃಷ್ಟವಾದ ಅಂಗರಚನೆಶಾಸ್ತ್ರದ ಗ್ರಂಥವನ್ನು ತನಗೆ ೨೮ ವರ್ಷ ವಯಸ್ಸಾಗಿದ್ದಾಗ (೧೫೪೩) ಬರೆದು ಮುಗಿಸಿದನು. ಇದರ ಜತೆಯಲ್ಲೇ ಒಂದು ಸಣ್ಣ ಸಂಗ್ರಹವನ್ನೂ ಬರೆದನು.



೨೮ ವರ್ಷ ವಯಸ್ಸಿನ ವಿಸೇಲಿಯಸ್
(೧೫೧೪-೬೪)

ಫ್ಯಾಬ್ರಿಕದಲ್ಲಿ ಚಿತ್ರಿಸಿರುವ ಅಸ್ಥಿಪಂಜರ ಮತ್ತು ಸ್ನಾಯುಗಳ ಚಿತ್ರಗಳು ಎಲ್ಲೂ ಇಲ್ಲದಂತಹ ಸುಂದರ ಚಿತ್ರಗಳಾಗಿದ್ದವು. ಇವು ಈಗಲೂ ಸುರಕ್ಷಿತವಾಗಿವೆ. ಫ್ಯಾಬ್ರಿಕದ ೭ ಅಧ್ಯಾಯಗಳ ಮೊದಲಿನ ಗ್ರಂಥದಲ್ಲಿದ್ದ ತಪ್ಪುಗಳನ್ನೆಲ್ಲಾ ಸರಿಪಡಿಸಿ ಮೆಚ್ಚುವಂತೆ ಬರೆದಿದ್ದನು. ಕೆಳದವಡೆ ಒಂದೇ ಮೂಳೆಯೆಂದೂ, ಎದೆಯ ಎಲುಬು ಮೂರು ಭಾಗವಾಗಿದೆಯೆಂದೂ ಗ್ಯಾಲೆನ್ನನ ಬೋಧನೆಯನ್ನು ತಾನು ಖಂಡಿಸಿ ಸರಿಪಡಿಸಿದ್ದನು. ಈ ಗ್ರಂಥದ ಮೊದಲ ಪ್ರಕಟನೆಯಲ್ಲಿ ಹೃತ್ಕರ್ಣಗಳ ನಡುವೆರೆಯಲ್ಲಿ ರಂಧ್ರಗಳಿವೆಯೆಂದು ಹೇಳಿದ್ದುದನ್ನು ೧೫೫೫ರಲ್ಲಿ ಹೊರಡಿಸಿದ ಎರಡನೆಯ ಪ್ರಕಟಣೆಯಲ್ಲಿ ಇದನ್ನು ಸರಿಪಡಿಸಿ, ನಡುವೆರೆಯಲ್ಲಿ ರಂಧ್ರಗಳಿಲ್ಲವೆಂದೂ, ಒಂದು ಹೃತ್ಕರ್ಣದಿಂದ ಮತ್ತೊಂದಕ್ಕೆ ರಕ್ತ ಹಾಯುವುದಿಲ್ಲವೆಂದೂ ತಿಳಿಸಿ ಗ್ಯಾಲೆನ್ನನ ಭಾವನೆಯನ್ನು ತಿದ್ದಿದನು. ಈ ತಿದ್ದುಪಡಿಗಳಿಂದ ಗ್ಯಾಲೆನ್ನನ ಅಂಗರಚನೆಗೆ ದೊಡ್ಡ ಪೆಟ್ಟು ಬಿದ್ದಂತಾಯಿತು. ರಕ್ತಚಲನೆಯ ವರ್ಣನೆ ಮಾಡಲು ಹಾರ್ವೆಗೆ ಸಹಾಯವಾಯಿತು.

ಫ್ಯಾಬ್ರಿಕ ಮತ್ತು ಅದರ ಸಂಗ್ರಹಗಳೆರಡರಿಂದಲೂ ವಿಸೇಲಿಯಸ್ಸಿನ ಖ್ಯಾತಿ ಬೆಳಗಿ ಪ್ರಪಂಚದ ಅಂಗರಚನೆಶಾಸ್ತ್ರಜ್ಞರಲ್ಲಿ ಮುಂದಾಳಾದನು. ಹೀಗೆ ಅವನ ಅಂಗರಚನೆಶಾಸ್ತ್ರ ಕ್ರಾಂತಿ ಎಬ್ಬಿಸಿದ್ದರೂ ಕೆಲವರಿಂದ ಟೀಕೆಗಳನ್ನು ತಪ್ಪಿಸಿಕೊಳ್ಳಲಿಲ್ಲ. ಪ್ರಾಯಶಃ ಈ ಟೀಕೆಗಳನ್ನು ಸಹಿಸಲಾರದೆ ಪಾಡ್ವ ಬಿಟ್ಟು ಮೆಡ್ರಿಡ್ಡಿಗೆ ಹೋದನೆಂದು ಹೇಳಲಾಗಿದೆ. ಮೆಡ್ರಿಡ್ಡಿನಲ್ಲಿ ೫ನೇ ಚಾರಲ್ಸ್ ಚಕ್ರವರ್ತಿಗೆ ವೈದ್ಯನಾಗಿ ಗೌರವವನ್ನೂ ಕೀರ್ತಿಯನ್ನೂ ಪುನಃ ಸಂಪಾದಿಸಿದನು. ಆದರೆ ೧೫೬೪ರಲ್ಲೇ ಮೆಡ್ರಿಡ್ ಬಿಡಬೇಕಾಗಿ ಬಂದು, ಜೆರುಸೆಲಂ ಕ್ರೈಸ್ತನ ಸಮಾಧಿಗೆ ಯಾತ್ರೆ ಹೋಗಬೇಕಾಗಿ ಬಂದಿತು. ಇದಕ್ಕೆ ಸರಿಯಾದ ಕಾರಣ ಗೊತ್ತಿಲ್ಲದಿದ್ದರೂ, ಒಬ್ಬ ಸ್ಪೇಯಿನ್ ದೇಶ ಭಕ್ತನ ಶವಪರೀಕ್ಷೆ ಮಾಡುತ್ತಿದ್ದಾಗ, ಹೃದಯ ಇನ್ನೂ ಕೆಲಸ ಮಾಡುತ್ತಿದ್ದುದನ್ನು

ಕಂಡು ವಿಚಾರಣೆಗೆ ಗುರಿಯಾಗುವುದನ್ನು ನಿವಾರಿಸಲು ತೀರ್ಥಯಾತ್ರೆಗೆ ಹೋಗಬೇಕಾಗಿಬಂದಿತೆಂದು ಹೇಳಲಾಗಿದೆ. ಅಲ್ಲಿಂದ ಹಿಂತಿರುಗುವಾಗ ಹಡಗು ಒಡೆದು ಸಾಂಟೆ ದ್ವೀಪವನ್ನು ತಲುಪಿ ಅಲ್ಲಿ ಅದೇ ವರ್ಷದಲ್ಲಿ ಸತ್ತನೆಂದು ತಿಳಿದುಬಂದಿದೆ.

ಇವನು ಅಂಗರಚನೆಶಾಸ್ತ್ರವನ್ನು ಕಲಿಯಲು ಬಹಳ ಆಸಕ್ತಿ ಹೊಂದಿದ್ದರಿಂದ, ಸಾಕಷ್ಟು ಶವಪರೀಕ್ಷೆ ಮಾಡುತ್ತಿದ್ದನು. ಶವಗಳು ಸಿಕ್ಕದಿದ್ದಾಗ, ಕಳ್ಳತನದಿಂದಾಗಲೀ ಅಥವಾ ಲಂಚಕೋರತನದಿಂದಾಗಲೀ ಹೂತಿದ್ದ ಶವಗಳನ್ನು ವಶಪಡಿಸಿಕೊಂಡು



ವಿಸೇಲಿಯಸ್ ಅಂಗರಚನೆಯನ್ನು ಬೋಧಿಸುತ್ತಿರುವುದು

ಪರೀಕ್ಷೆ ನಡೆಸುತ್ತಿದ್ದನು. ಒಂದು ಸಲ, ಯುದ್ಧದ ದೆಸೆಯಿಂದ, ಪ್ಯಾರಿಸ್ಸನ್ನು ಬಿಟ್ಟು ಲೊವೇನಿಗೆ ಬರುತ್ತಿದ್ದಾಗ ದಾರಿಯಲ್ಲಿ, ನೇಣುಹಾಕಿದ್ದ ಒಬ್ಬ ಅಪರಾಧಿಯ ಅಸ್ಥಿಬಂಧನಗಳಿದ್ದ ಅಸ್ಥಿಪಂಜರವನ್ನು ಕಂಡು, ತನ್ನ ಸ್ನೇಹಿತನ ಸಹಾಯದಿಂದ ಯಾರಿಗೂ ಗೊತ್ತಿಲ್ಲದಂತೆ,ಶವವನ್ನು ತಂದು ಪರೀಕ್ಷೆ ಮಾಡಿ ಸಾಕಷ್ಟು ಅಮೂಲ್ಯ ವಿಷಯಗಳನ್ನು ಹೊರಗೆಡಹಿದನೆಂದು ಹೇಳಲಾಗಿದೆ.

ವಿಸೇಲಿಯಸ್ಸಿನ ಯಶಸ್ಸು ಬಹಳ ಪ್ರಬಲವಾಗಿದ್ದುದರಿಂದ ಅವನ ಉತ್ತರಾಧಿಕಾರಿಗಳಿಗಾಗಲೀ ಸಹೋದ್ಯೋಗಿಗಳಿಗಾಗಲೀ ಅಂಗರಚನೆಶಾಸ್ತ್ರದ ಹೆಸರು ಪಡೆಯಲಾಗಲಿಲ್ಲ. ಆದರೂ ಕೆಲವರು ಸಾಕಷ್ಟು ಶ್ರೇಷ್ಠ ಕೊಡುಗೆಗಳನ್ನು ನೀಡಿದ್ದರು.

ರಿಯಾಲ್ಡಸ್ ಕೊಲಂಬಸ್

ವಿಸೇಲಿಯಸ್ಸಿನ ಅನುಯಾಯಿಯಾದ ರಿಯಾಲ್ಡಸ್ ಕೊಲಂಬಸ್ (೧೫೧೦–೧೫೫೯) ಬಲಹೃತ್ಕರ್ಣದಿಂದ ಶ್ವಾಸಕೋಶಕ್ಕೆ, ಶ್ವಾಸಕೋಶದಿಂದ ಎಡಹೃತ್ಕರ್ಣಕ್ಕೂ

ಹರಿಯುವ ರಕ್ತಚಲನೆಯನ್ನು ಪ್ರಯೋಗಗಳ ಸಹಾಯದಿಂದ ದೃಢಪಡಿಸಿದನು. ಇದಕ್ಕೆ ೬ ವರ್ಷಗಳ ಹಿಂದೆ ಮೈಕೇಲ್ ಸರ್ವಿಟಸ್ (೧೫೦೯-೧೫೫೩) ಇದೇ ರಕ್ತ ಚಲನೆಯನ್ನು ಕಂಡುಹಿಡಿದಿದ್ದರೂ, ಮತ ಧರ್ಮಶಾಸ್ತ್ರದ ಗ್ರಂಥಗಳಲ್ಲಿ ಪ್ರಕಟಿಸಿದ್ದುದ ರಿಂದ ಬೆಳಕಿಗೆ ಬರಲಿಲ್ಲ. ಇದು ಶಾಸ್ತ್ರೀಯ ಸಂಸ್ಕೃತಿಗೆ ವಿರೋಧವಾದದ್ದೆಂದು, ಕಾಲ್ವಿನ್ ಟೀಕಿಸಿ, ಸರ್ವಿಟಸ್‌ನನ್ನು ೧೫೫೩ನೇ ಅಕ್ಟೋಬರ್ ತಿಂಗಳು ೨೭ರಲ್ಲಿ ಜೀವಸಹಿತ ಸುಡಿಸಿದನು. ಅವನ ಸಂಗಡ ಅವನ ಗ್ರಂಥವನ್ನೂ ಸುಡಿಸಿದನು. ಅವನ ೩ ಪ್ರತಿಗಳು ಮಾತ್ರ ಈಗಲೂ ಇವೆ. ಇಷ್ಟಾದರೂ ರಿಯಾಲ್ಡಸ್ ಮತ್ತು ಸರ್ವಿಟಸ್ ಇಬ್ಬರೂ ಕೂಡ ಶರೀರವ್ಯೂಹ ರಕ್ತಚಲನೆಯನ್ನು ಮಾತ್ರ ವಿವರಿಸಲಿಲ್ಲ. ಆಂಡ್ರಿಯ ಸಿಸಾಲ್ಪಿನೊ (೧೫೧೯-೧೬೦೩) ಅಂಗರಚನೆಶಾಸ್ತ್ರದಲ್ಲಿ ಮಾತ್ರವಲ್ಲದೆ ಸಸ್ಯಶಾಸ್ತ್ರ ದಲ್ಲೂ ಪ್ರವೀಣನಾಗಿದ್ದನು. ಹೃದಯದಿಂದ ರಕ್ತಚಲನೆ ಪ್ರಾರಂಭವಾಗುತ್ತದೆಯೇ ಹೊರತು ಈಲಿಯಿಂದಲ್ಲವೆಂದು ಗ್ಯಾಲೆನ್ನನ ತಪ್ಪನ್ನು ತಿದ್ದಿದನು. ಈ ತಿಳಿವಳಿಕೆಯೂ ಹಾರ್ವೆ ರಕ್ತಚಲನೆಯನ್ನು ವಿವರಿಸಲು ನೆರವಾಯಿತು. ವಿಸೇಲಿಯಸ್ ನಂತರ ಬಂದ ಮತ್ತೊಬ್ಬ ಅಂಗರಚನೆಕಾರನಾದ ಫ್ಯಾಬ್ರಿಷಿಯಸ್ (೧೫೩೩-೧೬೧೪) ಸಿರಗಳಲ್ಲಿ ರುವ ಕವಾಟಗಳನ್ನು ವಿವರಿಸಿದುದಲ್ಲದೆ, ಕ್ರಮವಾಗಿ ರಕ್ತ ಹರಿಯುವಂತೆ ಮಾಡುತ್ತ ವೆಂದು ಹೇಳಿದ್ದನು. ರಕ್ತ ಒಂದೇ ದಿಕ್ಕಿನಲ್ಲಿ ಹರಿಯಲು ಈ ಕವಾಟಗಳು ಸಹಾಯ ಮಾಡುವುವೆಂದು ಹಾರ್ವೆ ಕೆಲವು ವರ್ಷಗಳಾದ ಮೇಲೆ ತಿಳಿಸಿದನು. ಈ ಶ್ರೇಷ್ಠ ಫ್ಯಾಬ್ರಿಷಿಯಸ್ಸಿನ ಶಿಷ್ಯನೇ ವಿಲಿಯಂ ಹಾರ್ವೆ. ಇವರೆಲ್ಲರೂ ಪಾಡ್ವ ವಿಶ್ವವಿದ್ಯಾ ಲಯಕ್ಕೆ ಸೇರಿದವರು. ಇವರ ಶೋಧನೆಗಳಿಂದಲೇ ಹಾರ್ವೆ ರಕ್ತಚಲನೆಯನ್ನು ಕಂಡುಹಿಡಿಯಲು ಸಾಧ್ಯವಾಯಿತು.

ಗೇಬ್ರಿಯಲ್ ಫೆಲ್ಲೋಪಿಯಸ್

ಗೇಬ್ರಿಯಲ್ ಫೆಲ್ಲೋಪಿಯಸ್ (೧೫೨೩-೧೫೬೨) ಇಟಲಿಯ ಪೀಸ ಎಂಬಲ್ಲಿ ಮೊದಲಿಗೆ ಅಂಗರಚನೆಶಾಸ್ತ್ರದ ಪ್ರಾಧ್ಯಾಪಕನಾಗಿದ್ದು, ನಂತರ ಪಾಡ್ವಕ್ಕೆ ಆಗಮಿಸಿ ವಿಸೇಲಿಯಸ್ಸಿನ ಸ್ಥಾನವನ್ನು ಅಲಂಕರಿಸಿದನು. ವಿಸೇಲಿಯಸ್ ಹೇಗೆ ಗ್ಯಾಲೆನ್ನನ ಬೋಧನೆಗಳನ್ನು ವಿರೋಧಿಸಿದ್ದನೋ ಹಾಗೆಯೇ ವಿಸೇಲಿಯಸ್ ಮಾಡಿದ್ದ ತಪ್ಪು ಗಳನ್ನು ಫೆಲ್ಲೋಪಿಯಸ್ ನಿರ್ಭಯದಿಂದ ವಿರೋಧಿಸಿದನು. ಆದರೂ ವಿಸೇಲಿಯಸ್ ನನ್ನು ಅಂಗರಚನೆಶಾಸ್ತ್ರದ ರಾಜಕುಮಾರನೆಂದು ಹೊಗಳಿದ್ದನು. ತಾನು ಬರೆದಿದ್ದ ಪುಸ್ತಕದ ಒಂದು ಪ್ರತಿಯನ್ನು ವಿಸೇಲಿಯಸ್ಸಿಗೆ ಮೆಡ್ರಿಡ್ಡಿನಲ್ಲಿದ್ದಾಗ ಕಳುಹಿಸಿ ಕೊಟ್ಟಿದ್ದಕ್ಕೆ, ವಿಸೇಲಿಯಸ್ ಒಳ್ಳೆ ನುಡಿಗಳನ್ನಾಡಿದ್ದರೂ ಅಲ್ಲಲ್ಲಿ ಟೀಕೆ ಮಾಡಿ ದ್ದನು. ಈ ಪುಸ್ತಕದಲ್ಲಿ ಫೆಲ್ಲೋಪಿಯಸ್ ನಾಳ, ಕಾರ್ಡ ಟಿಂಪಾನಿ, ಫೀನಾಯ್ಡ್ ಮೂಳೆಗೂಡು, ಫೆಲ್ಲೋಪಿಯಸ್ ನೀರುನಾಳ, ಕಿವಿಯೊಳಗಿನ ಅರ್ಧ ವೃತ್ತಾಕಾರದ ನಾಳಗಳನ್ನೂ ವಿವರಿಸಿದ್ದನು. ಹಾಗೂ ಯೋನಿ, ಗರ್ಭಕೋಶದ ಮಾಸು, ಕರ್ಣ

ಶಂಖ, ಸಂಕೀರ್ಣ ಕುಹರ, ಅಂಗುಳು ಮುಂತಾದ ಹೊಸ ಪದಗಳನ್ನು ಅಂಗರಚನೆಗೆ ಸೇರಿಸಿದ್ದನು.

ಬಾರ್ಟೊಲೊಮಿಯಸ್ ಯೂಸ್ಟೇಕಿಯಸ್

ವಿಸೇಲಿಯಸ್ ಪಾಡ್ವದಲ್ಲಿದ್ದಾಗ, ರೋಂ ವಿಶ್ವವಿದ್ಯಾಲಯದಲ್ಲಿ ಬಾರ್ಟೊಲೊಮಿಯಸ್ ಯೂಸ್ಟೇಕಿಯಸ್ (೧೫೨೦–೧೫೭೪) ಅಂಗರಚನೆಶಾಸ್ತ್ರದ ಪ್ರಾಧ್ಯಾಪಕನಾಗಿದ್ದನು. ಇವನೂ ಶವಚ್ಛೇದನೆ ಮಾಡಿ ಅಂಗರಚನೆಶಾಸ್ತ್ರದಲ್ಲಿ ಪ್ರವೀಣನಾಗಿದ್ದು, ವಿಸೇಲಿಯಸ್ಸನ ಹಾಗೆ ತಾಮ್ರದ ತಗಡುಗಳ ಮೇಲೆ ಉತ್ತಮವಾದ ಅಂಗರಚನೆಯ ಚಿತ್ರಗಳನ್ನು ಬರೆದಿದ್ದನು. ಆದರೆ ಇವು ಅನೇಕ ವರ್ಷಗಳು ಬಯಲಿಗೆ ಬರಲಿಲ್ಲ. "ಮುಗಿದನಂತರ ಈ ಚಿತ್ರಗಳೂ ೧೫೫೨ರಲ್ಲೇ ಬೆಳಕಿಗೆ ಬಂದಿದ್ದರೆ ವಿಸೇಲಿಯಸ್‌ಗೆ ಸಮನಾಗಿ ನವೀನ ಅಂಗರಚನೆಶಾಸ್ತ್ರದ ಸ್ಥಾಪಕರಲ್ಲೊಬ್ಬನಾಗಿರಬಹುದಾಗಿತ್ತು" ಎಂದು ಚಾರ್ಲ್ಸ್ ಸಿಂಗರ್ ಹೇಳಿದ್ದಾನೆ. ಎದೆಯ ಸಾಗುನಾಳ, ಕಣ್ಣಿನೆಯ ಸ್ನಾಯು, ಮುಖದ ಮತ್ತು ಧ್ವನಿನಾಳದ ಸ್ನಾಯುಗಳು, ಮೂತ್ರಪಿಂಡ ಮುಂತಾದುವನ್ನೆಲ್ಲಾ ತಾಮ್ರದ ತಗಡುಗಳ ಮೇಲೆ ಚಿತ್ರಿಸಿದ್ದನು. ಆದರೆ ಅವನ ಹೆಸರಿನಲ್ಲಿರುವ ಯೂಸ್ಟೇಕಿಯಸ್ ನಾಳವನ್ನು ತಾಮ್ರದ ತಗಡಿನ ಮೇಲೆ ಚಿತ್ರಿಸಿರಲಿಲ್ಲ. ೧೫೬೪ರಲ್ಲಿ ಪ್ರಕಟವಾದ ಕಿವಿ ರಚನಾ ಪುಸ್ತಕದಲ್ಲಿ ಮೊದಲಿಗೆ ವಿವರಿಸಲಾಯಿತು.

೨೨. ಶಸ್ತ್ರವೈದ್ಯದ ಬೆಳವಣಿಗೆ

ಆಂಬ್ರೋಸಿ ಪಾರೆ

ಶಸ್ತ್ರವೈದ್ಯದ ಪುನರುಜ್ಜೀವನಕ್ಕೆ ಅಂಗರಚನೆಯ ಹೊಸ ವಿಷಯಗಳ ಕಲ್ಪನೆಗಳಿಗಿಂತಲೂ, ಸಿಡಿಮದ್ದಿನ ನಿರ್ಮಾಣ ಮತ್ತು ಅದರ ಪರಿಣಾಮಗಳೇ ಕಾರಣವೆಂದು ಹೇಳಲಾಗಿದೆ. ಯುದ್ಧವೇ ಶಸ್ತ್ರವೈದ್ಯದ ಅಧ್ಯಾಪಕನೆನ್ನುವ ಮಾತು ನಿಜ. ಪುನರುಜ್ಜೀವನ ಕಾಲದಲ್ಲಿ ಅನೇಕ ಶಸ್ತ್ರವೈದ್ಯರು ಸೇನಾ ವೈದ್ಯರಾಗಿದ್ದರೂ, ರಣರಂಗದಲ್ಲಿ ಶಸ್ತ್ರಚಿಕಿತ್ಸೆ ಮಾಡುತ್ತಿದ್ದರೂ, ನಿಜವಾದ ಪುನರುಜ್ಜೀವನ ೧೯ನೇ ಶತಮಾನದವರೆಗೂ ಬರಲಿಲ್ಲ. ಅಂಗರಚನೆಗೆ ವಿಸೇಲಿಯಸ್ ಕೊಟ್ಟಷ್ಟು ಕೊಡುಗೆ, ವೈದ್ಯಶಾಸ್ತ್ರಕ್ಕೆ ಪ್ಯಾರಸೆಲ್ಸಸ್ ಮಾಡಿದಷ್ಟು ಸೇವೆ, ಪುನರುಜ್ಜೀವನ ಕಾಲದಲ್ಲಿ ಶಸ್ತ್ರವೈದ್ಯಕ್ಕೆ ಮತ್ತೆ ಯಾರಿಂದಲೂ ಸೇವೆ ಸಲ್ಲಲಿಲ್ಲ. ಆದರೆ ಅಂಧಕಾರ ಕಾಲದ ಗೈ ಡಿ ಶಾಲಿಯಕ್, ಆರ್ಡರ್ನೆ ಜಾನ್ ಮುಂತಾದ ಶಸ್ತ್ರವೈದ್ಯರ ಮಹಿಮೆ ಪುನರುಜ್ಜೀವನ ಕಾಲದಲ್ಲೂ ತೋರಿಬರುತ್ತಿತ್ತು. ಇವರ ಅನುಭವಗಳನ್ನು ಅನುಸರಿಸಿಕೊಂಡು ಆಂಬ್ರೋಸಿ ಪಾರೆ (೧೫೧೦-೧೫೯೦) ಶಸ್ತ್ರವೈದ್ಯದಲ್ಲಾಗಬೇಕಾಗಿದ್ದ ಸುಧಾರಣೆಗಳನ್ನು ಆಚರಣೆಗೆ ತಂದನು. ಇವನ ಧೈರ್ಯ, ಸಾಹಸ, ಮನೋಧರ್ಮ, ದಯೆ, ಉತ್ಸಾಹಗಳೇ ಇದಕ್ಕೆ ಕಾರಣಗಳಾಗಿದ್ದವು. ಶಸ್ತ್ರವೈದ್ಯ ಹೀಗೆ ಪರಿವರ್ತನೆಯಾದ್ದರಿಂದ ಇವನನ್ನು ಆಧುನಿಕ ಶಸ್ತ್ರವೈದ್ಯದ ಪಿತಾಮಹನೆಂದು ಕರೆದರು. ಇವನಿಗೆ ಲ್ಯಾಟಿನ್ನಾಗಲೀ ಗ್ರೀಕಾಗಲೀ ಬರುತ್ತಿರಲಿಲ್ಲ. ಆದರೂ ತನ್ನ ಪರಿಶೀಲನಾ ಶಕ್ತಿಯಿಂದ ಹೆಚ್ಚು ಜ್ಞಾನ ಸಂಪಾದಿಸಿದನು. ಕ್ರಮೇಣ ಇವನು ಅನುಕ್ರಮವಾಗಿ ಫ್ರಾನ್ಸಿನ ನಾಲ್ಕು ಚಕ್ರವರ್ತಿಗಳಿಗೆ ಶಸ್ತ್ರವೈದ್ಯನಾದನು.

ಆಂಬ್ರೋಸಿ ಪಾರೆ ದೀನ ವಂಶದವನಾಗಿ೧೫೧೦ರಲ್ಲಿ ಮೇನ್ ಪ್ರಾಂತ್ಯದ ಲವಾಲಿನ ಹತ್ತಿರ ಒಂದು ಹಳ್ಳಿಯಲ್ಲಿ ಜನಿಸಿದನು. ಇವನ ತಂದೆ ಕಾರ್ಮಿಕನೂ ಸೇವಕನೂ ಆಗಿದ್ದನು. ಇವನ ನಂಟರಿಷ್ಟರೆಲ್ಲಾ ಸಾಮಾನ್ಯವಾಗಿ ಕಾರ್ಮಿಕರಾಗಿದ್ದರು. ೧೫೩೨ರಲ್ಲೋ ಅಥವಾ ೧೫೩೩ರಲ್ಲೋ ಪ್ಯಾರಿಸ್ಸಿಗೆ ಬಂದು ಕ್ಷೌರ ಮಾಡುವುದನ್ನು ಬಿಟ್ಟು ಒಬ್ಬ ಕೆಲಸಿ ಶಸ್ತ್ರವೈದ್ಯನ ಹತ್ತಿರ ಕೆಲಸಕ್ಕೆ ಸೇರಿದನು. ಆ ಕಾಲದಲ್ಲಿ ಪ್ಯಾರಿಸ್ಸಿನ ವೈದ್ಯರಲ್ಲಿ ಮೂರು ಪಂಗಡಗಳಿದ್ದವು. ವೈದ್ಯಶಾಸ್ತ್ರಜ್ಞರು ಮೊದಲನೇ ಪಂಗಡಕ್ಕೆ ಸೇರಿದವರಾಗಿ ವೈದ್ಯ ವೃತ್ತಿಯಲ್ಲೇ ಶ್ರೇಷ್ಠರೆಂದು ಭಾವಿಸಲ್ಪಟ್ಟಿದ್ದರು. ಎರಡನೆಯ ಪಂಗಡವಾದ ಸಂತ ಕೋಮ್ ಸಂಸ್ಥೆಯ ಶಸ್ತ್ರವೈದ್ಯರು, ನಿಲುವಂಗಿ ತೊಟ್ಟು, ಶಸ್ತ್ರಕ್ರಿಯೆ ಮಾಡದೆ,ಗಾಯಕ್ಕೆ ಔಷಧ ಹಚ್ಚುವುದರಲ್ಲಿ ಮಾತ್ರ ತೊಡಗಿದ್ದರು.ಮೂರನೆಯ

ಪಂಗಡಕ್ಕೆ ಸೇರಿದ, ಸಾಮಾನ್ಯವಾಗಿ ಕೆಲಸಿ ವೃತ್ತಿಯಲ್ಲಿ ತೊಡಗಿದ್ದವರು ಶಸ್ತ್ರಕ್ರಿಯೆ ಮಾಡಲು ಯತ್ನಿಸಿದರು. ಈ ಮೂರನೆಯ ಪಂಗಡಕ್ಕೆ ಸೇರಬೇಕೆಂಬ ಇಚ್ಛೆ ಪಾರೆಗೆ ಇತ್ತು. ಪ್ಯಾರಿಸ್ಸಿಗೆ ಬಂದ ಕೂಡಲೆ ಅಲ್ಲಿಯ ದೊಡ್ಡ ಆಸ್ಪತ್ರೆಯಾದ “ಹೊಟೇಲ್ ಡ್ಯು”ನಲ್ಲಿ, ಸ್ಥಳವಾಸಿ ಶಸ್ತ್ರವೈದ್ಯನ ಕೆಲಸ ಸಿಕ್ಕಿ, ೪ ವರ್ಷಗಳ ನಂತರ ಯುದ್ಧದಲ್ಲಿ ಗಾಯಗೊಂಡವರನ್ನು ರಕ್ಷಿಸಲು ಕರ್ನಲ್ ಮಾಂಟೆಜಾನ್ ಸಂಗಡ ಯುದ್ಧಕ್ಕೆ ಹೊರಟನು. ಪಾರೆಯ ಜೀವಮಾನದಲ್ಲಿ ಫ್ರಾನ್ಸ್ ಅನೇಕ ಯುದ್ಧಗಳಲ್ಲಿ ಕೈಹಾಕಬೇಕಾಗಿತ್ತು. ಇಟಲಿ, ಜರ್ಮನಿ, ಇಂಗ್ಲೆಂಡ್ ದೇಶಗಳೊಡನೆ ಹಲವಾರು ಯುದ್ಧಗಳಿದ್ದುದಲ್ಲದೆ, ಫ್ರಾನ್ಸಿನಲ್ಲೇ ಕ್ಯಾತೊಲಿಕ್ ಗುಂಪಿಗೂ, ಹೂಗುನೊ ಗುಂಪಿಗೂ ಜಗಳವಿದ್ದುದರಿಂದ ಪಾರೆ ೩೦ ವರ್ಷಗಳ ಕಾಲ ಪ್ಯಾರಿಸ್ಸಿನಲ್ಲೇ ವಾಸವಾಗಿದ್ದು ಯುದ್ಧದಲ್ಲಿ ತೊಡಗಿರುತ್ತಿದ್ದನು. ಆದರೆ ಆಗ ಸುವ್ಯವಸ್ಥಿತ ವೈದ್ಯದಳವಿಲ್ಲದ್ದರಿಂದ ಪಾರೆಗೆ ನಿರ್ದಿಷ್ಟ ಪದವಿ ಇರಲಿಲ್ಲ.

ಪಾರೆ ತನ್ನ ಮೊದಲನೇ ಯುದ್ಧದಲ್ಲೇ ಒಂದು ವಿಶೇಷ ಹೊಸ ವಿಷಯ ಕಂಡು ಹಿಡಿದನು. ಗಿಯೊವನ್ನಿಡಿವಿಗೊ ಪ್ರೇರಣೆ ಮೇರೆ ಕೀತ ಗಾಯಗಳಿಗೆ ಕುದಿಯುತ್ತಿರುವ ಎಣ್ಣೆ ಹಚ್ಚುವ ವಾಡಿಕೆ ಇದ್ದು, ಎಣ್ಣೆ ಮುಗಿದುಹೋದದ್ದುದರಿಂದ ಮೊಟ್ಟೆ, ಹಳದಿ, ಗುಲಾಬಿ ಎಣ್ಣೆ ಮತ್ತು ಕರ್ಪೂರ ತೈಲದ ಮಿಶ್ರಣವನ್ನು ಉಪಯೋಗಿಸಬೇಕಾಯಿತು. ಮರುದಿನ ಎಂದಿನಂತೆ ಚಿಕಿತ್ಸೆ ಪಡೆದಿದ್ದವರನ್ನು ಪರೀಕ್ಷಿಸಿದಾಗ ಮಿಶ್ರ ತೈಲದಿಂದ ಚಿಕಿತ್ಸೆ ಪಡೆದಿದ್ದವರು ಮೇಲಾಗಿದ್ದುದನ್ನೂ, ಕುದಿಯುತ್ತಿದ್ದ ಎಣ್ಣೆ ಪಡೆದವರು ಜ್ವರ, ನೋವು, ಊತದಿಂದಲೂ ನರಳುತ್ತಿದ್ದುದನ್ನು ಕಂಡ.

ಯುದ್ಧದಿಂದ ಪ್ಯಾರಿಸ್ಸಿಗೆ ಹಿಂತಿರುಗಿದ ಕೂಡಲೆ ೧೫೪೧ರಲ್ಲಿ ಕೆಲಸಿ ಶಸ್ತ್ರವೈದ್ಯರಲ್ಲಿ ಪಂಡಿತ ಪದವಿ ದೊರೆಯಿತು. ಒಂದು ದಿನ ಗುರುಗಳಲ್ಲೊಬ್ಬನಾದ ಜೆಕೊಬಸ್ ಸಿಲ್ವಿಯಸ್ ಜತೆಯಲ್ಲಿ ಊಟಮಾಡುತ್ತಿದ್ದಾಗ, ಪಾರೆ ಹೇಳಿದ ಯುದ್ಧದ ಅನುಭವಗಳನ್ನೆಲ್ಲಾ ಕೇಳಿ, ಅವನ್ನು ಕುರಿತು ಲೇಖನ ಬರೆಯಲು ಸಿಲ್ವಿಯಸ್ ಕೊಟ್ಟ ಸಲಹೆ ಮೀರದೆ, ೧೫೪೫ರಲ್ಲಿ ತನ್ನ ಮೊದಲನೆಯ ಪುಸ್ತಕವನ್ನು ಬರೆದನು. ಪಾರೆಗೆ ಲ್ಯಾಟಿನ್ನಾಗಲೀ, ಗ್ರೀಕಾಗಲೀ ಬರದಿದ್ದುದರಿಂದ ತನ್ನ ಮಾತೃಭಾಷೆಯಾದ ಫ್ರೆಂಚ್ ಭಾಷೆಯಲ್ಲೇ ಬರೆಯಬೇಕಾಯಿತು. ಕೇವಲ ಎರಡು ವರ್ಷಗಳಾದ ಕೂಡಲೆ ಈ ಪುಸ್ತಕ ಡಚ್, ಇಂಗ್ಲೀಷ್, ಜರ್ಮನ್, ಸ್ಪಾನಿಷ್ ಮತ್ತು ಜಪಾನಿ ಭಾಷೆಗಳಿಗೆ ಭಾಷಾಂತರವಾಗಿ ಅನೇಕ ಶಸ್ತ್ರವೈದ್ಯರ ಕೈಪಿಡಿಯಾಯಿತು. ಅಂದಿನಿಂದ ಪಾರೆ ಕ್ರಮಬದ್ಧವಾಗಿ ಪುಸ್ತಕಗಳನ್ನು ಬರೆಯಲು ಆರಂಭಿಸಿದನು. ೧೫೪೯ರಲ್ಲಿ ಅವನ ಎರಡನೇ ಪುಸ್ತಕ ಹೊರಬಿತ್ತು. ಇದರಲ್ಲಿ ಚಿತ್ರಗಳಿಲ್ಲದಿದ್ದುದರಿಂದ ವಿಸ್ತಾರವಾದ ಮೂರನೇ ಪುಸ್ತಕದಲ್ಲಿ ತಾನೇ ಶವಚ್ಛೇದನೆ ಮಾಡಿ ನೋಡಿದ ಚಿತ್ರಗಳನ್ನು ಸೇರಿಸಿ ೧೫೬೧ರಲ್ಲಿ

ಪ್ರಕಟಿಸಿದನು. ಅವನ ಹೇಳಿಕೆಯಂತೆ, ಇದಕ್ಕೆ ವಿಶೇಷವಾಗಿ ಆಂಡ್ರಿಯಸ್ ವಿಸೇಲಿಯಸ್ಸಿನ ಗ್ರಂಥವೇ ಆಧಾರವಾಗಿತ್ತು.

೧೫೫೨ರಲ್ಲಿ ಪಾರೆ ಮತ್ತೆ ಯುದ್ಧಕ್ಕೆ ಹೊರಟನು. ಈ ಸಾರಿ ಎರಡನೆ ಹೆನ್ರಿ ದೊರೆಯ ಮೆಚ್ಚಿಗೆಗೆ ಪಾತ್ರನಾಗಿ ದೊರೆಯ ಶಸ್ತ್ರವೈದ್ಯನಾಗಿ ನೇಮಕವಾದನು. ಪಾರೆಯ ಶಸ್ತ್ರನಿಪುಣತೆಯನ್ನು ಮೆಚ್ಚಿ, ಸಂತಕೋಮ್ ಗುಂಪಿನ ಶಸ್ತ್ರವೈದ್ಯರು ಪಾರೆಯನ್ನು ತಮ್ಮ ಸಂಗಡಕ್ಕೆ ಬರಮಾಡಿಕೊಂಡು, ಶಸ್ತ್ರವೈದ್ಯ ಪಂಡಿತ ಪದವಿಯನ್ನು ದಯಪಾಲಿಸಿದರು. ಎರಡನೆ ಹೆನ್ರಿ ದೊರೆಗೂ ಕೌಂಟ್ ಮಾಂಟ್ಗೊಮರಿಗೂ ನಡೆದ ಸ್ನೇಹ ಕ್ರೀಡಾಸ್ಪರ್ಧೆಯಲ್ಲಿ, ಹೆನ್ರಿಯ ತಲೆಗೆ ಭಲ್ಲೆಯಿಂದ ಪೆಟ್ಟುಬಿದ್ದು, ಪಾರೆ ಮತ್ತು ಬ್ರಸ್ಸೆಲ್ಸಿನಿಂದ ಬರಮಾಡಿಕೊಂಡ ವಿಸೇಲಿಯಸ್ ಇಬ್ಬರೂ ಚಿಕಿತ್ಸೆ ನಡೆಸಿದರೂ ಹೆನ್ರಿ ೧೧ನೇ ದಿವಸ ಮರಣ ಹೊಂದಿದನು. ದೊರೆಯ ಶವಪರೀಕ್ಷೆ ಮಾಡಿ, ತಲೆಗೆ ಏಟು ಬಿದ್ದಿದ್ದ ಎದುರುಗಡೆಯ ಮಿದುಳಿನ ಹೊಂಪೊರೆ ಕೆಳಗೆ ರಕ್ತಸ್ರಾವವಾಗಿ ಹೆಪ್ಪುಕಟ್ಟಿದ್ದನ್ನು ಪಾರೆ ಕಂಡನು. ೨ನೇ ಹೆನ್ರಿ ತರುವಾಯ ಬಂದ ದೊರೆಗಳಿಗೂ ಶಸ್ತ್ರವೈದ್ಯನಾಗಿ ಪಾರೆ ಮುಂದುವರಿದಿದ್ದನು. ೯ನೇ ಚಾರಲ್ಸ್ ೧೫೬೨ರಲ್ಲಿ ಪಾರೆಯನ್ನು ತನ್ನ ಮೊದಲನೇ ಶಸ್ತ್ರವೈದ್ಯನನ್ನಾಗಿ ನೇಮಕ ಮಾಡಿಕೊಂಡನು. ಇವನ ಕೀರ್ತಿ ಮತ್ತು ಚಾತುರ್ಯವನ್ನು ಮೆಚ್ಚಿದ್ದುದರಿಂದ, ಕ್ಯಾತೊಲಿಕ್ ಗುಂಪಿನವರಿಗೂ ಹೂಗುನೊ ಗುಂಪಿನವರಿಗೂ ಜಗಳವಾದ ಪ್ರತಿಫಲವಾಗಿ ಸಂತ ಬಾರ್ತಾಲೊಮ್ಯು ಸಮೂಹ ಕೊಲೆ ನಡೆಯುತ್ತಿದ್ದಾಗ, ಚಾರಲ್ಸ್ ತನ್ನ ಕೊಟಡಿಯಲ್ಲೇ ಪಾರೆಯನ್ನು ಇಟ್ಟು ವೈರಿಗಳ ಕೈಗೆ ಸಿಕ್ಕದಂತೆ ಆಶ್ರಯ ಕೊಟ್ಟು ಕಾಪಾಡಿದನು.

ಮತ್ತೊಂದು ಪುಸ್ತಕದಲ್ಲಿ ಅಂಗಚ್ಛೇದನೆ ಮಾಡಿದ ಭಾಗಕ್ಕೆ ಹೊಲಿಗೆ ಹಾಕುವ ವಿಧಾನಗಳನ್ನೂ ಮತ್ತು ಸೂಡು ಹಾಕುವ ಪದ್ಧತಿಯನ್ನೂ ವಿರೋಧಿಸಿ ಪಾರೆ ಲೇಖನವನ್ನು ಬರೆದಿದ್ದನು. ಈ ಕಲ್ಪನೆಗಳು ಇವನ ವಿರೋಧಿಗಳಿಗೆ ಸರಿಹೋಗದೆ ಮನಸ್ತಾಪ ಉಂಟಾಗಿ, ಪ್ಯಾರಿಸ್ಸಿನ ವೈದ್ಯಶಾಸ್ತ್ರಜ್ಞರ ಸಂಸ್ಥೆಯ ಮುಖ್ಯಾಧಿಕಾರಿ ಗೌರ್ಮೆಲೆನ್ ತನ್ನ ಪುಸ್ತಕದಲ್ಲಿ ಪಾರೆಯನ್ನು ಹೀಯಾಳಿಸಿ, ಇವನ ಪದ್ಧತಿಗಳನ್ನು ಟೀಕಿಸಿ ಬರೆದಿದ್ದನು. ಆಗಿನ ಕಾಲದಲ್ಲಿ ವೈದ್ಯರಿಗೂ, ಶಸ್ತ್ರವೈದ್ಯರಿಗೂ ಅಸಮಾಧಾನದಿಂದ ವೈರತ್ವವಿತ್ತು. ವೈದ್ಯರು ಉತ್ಕೃಷ್ಟರಾದವರೆಂಬ ಭಾವನೆ ಇದ್ದುದರಿಂದ, ರೋಗ ಚಿಕಿತ್ಸೆಯಲ್ಲಿ ಕೈ ಹಾಕುತ್ತಿದ್ದ ಶಸ್ತ್ರವೈದ್ಯರನ್ನು ಖಂಡಿಸುತ್ತಿದ್ದರು. ಈ ದೃಷ್ಟಿಯಿಂದ, ಶಸ್ತ್ರಚಿಕಿತ್ಸೆಯ ಜತೆಗೆ, ಸ್ತ್ರೀರೋಗ, ಪ್ಲೇಗು ಮತ್ತಿತರ ರೋಗಗಳನ್ನು ಪಾರೆ ತನ್ನ ಪುಸ್ತಕದಲ್ಲಿ ವಿವರಿಸಿದ್ದುದರಿಂದ ಗೌರ್ಮೆಲೆನ್ ವಿರೋಧಿಸಿ ಪಾರೆಯನ್ನು ಖಂಡಿಸಿದ್ದನು. ಇದಕ್ಕೆ ಉತ್ತರವಾಗಿ "ಶಸ್ತ್ರಚಿಕಿತ್ಸೆ ವಿಚಾರ ನನಗೆ ಪಾಠ ಹೇಳಲು ಎಷ್ಟು ಧೈರ್ಯ ನಿನಗೆ ? ಕಣ್ಣಿನಿಂದ ನೋಡಿ, ಕೈಯಿಂದ ಮಾಡಿ ಶಸ್ತ್ರಚಿಕಿತ್ಸೆ ಕಲಿಯಬೇಕು. ನಿನ್ನ ಹಾಗೆ ಕೂತ ಜಾಗದಿಂದಲ್ಲ. ಕೂತ ಸ್ಥಳದಿಂದ ಬಾಯಿ ಬಡಿದುಕೊಳ್ಳುವುದೊಂದ

ಲ್ಲದೆ ಬೇರೆ ಏನೂ ತಿಳಿಯದು ನಿನಗೆ" ಎಂದು ಪಾರೆ ಪ್ರತಿಭಟಿಸಿದ್ದನು.

ಮದ್ದು ಗುಂಡುಗಳಿಂದಾದ ಗಾಯಗಳ ಚಿಕಿತ್ಸೆ ಮಾತ್ರವೇ ಅಲ್ಲ, ಮೂಳೆ ಮುರಿತ, ಕೀಲು ಪಲ್ಲಟಗಳ ಚಿಕಿತ್ಸೆಯೂ ಆಂಬ್ರೋಸಿ ಪಾರೆಗೆ ಗೊತ್ತಿತ್ತು. ಶಸ್ತ್ರ



ಆಂಬ್ರೊಸಿ ಪಾರೆ (೧೫೧೦-೧೫೯೦) ಸೇನಾ ಶಸ್ತ್ರವೈದ್ಯ. ಮೂಳೆ ಮುರಿತ ಹಾಗೂ ಸ್ಫೋಟಕ ಗಾಯಗಳ ಅನುಭವಶಾಲಿ

ಕ್ರಿಯೆಗೆ ಬೇಕಾಗುವ ಅನೇಕ ಉಪಕರಣಗಳನ್ನು ಕಂಡುಹಿಡಿದಿದ್ದನು. ಧಮನಿಗಳ ಹಿಗ್ಗುವಿಕೆಗೆ ಉಪದಂಶ ಮೇಹರೋಗ ಕಾರಣವೆಂದು ತಿಳಿದಿದ್ದನು. ಕೃತಕ ಕಣ್ಣು, ಕೈಕಾಲುಗಳನ್ನು ಉಪಯೋಗಿಸುವುದನ್ನೂ ತಿಳಿದಿದ್ದನು. ತಲೆಯು ಬದಲು, ಹಿರ್ರಿ ಮೊದಲು ಬಂದು ಹೆರಿಗೆ ಕಷ್ಟವಾದ ಕಡೆ,ಪಿಂಡಗೂಸನ್ನು ತಿರುಗಿಸಿ ಸರಿಪಡಿಸುತ್ತಿದ್ದನು. ದಂತ ವೈದ್ಯದಲ್ಲೂ ಪ್ರವೀಣತೆ ಹೊಂದಿ ಹಲ್ಲುಜ್ಜುವ ಪುಡಿ ಮತ್ತು ದ್ರಾವಕಗಳನ್ನು ಕಂಡುಹಿಡಿದಿದ್ದನು. ಹಲ್ಲುಗಳನ್ನು ಕೀಳಲು ತಕ್ಕ ಸಾಧನಗಳನ್ನು ವಿವರಿಸಿದ್ದನು.ಹಲ್ಲಿನ ಹುಳುಕುಗಳಿಗೆ ಸೀಸ ತುಂಬುವುದನ್ನೂ, ಕೃತಕ ಹಲ್ಲು ಕಟ್ಟುವುದನ್ನೂ ಕಲಿತಿದ್ದನು. ದಂತದ ಹಲ್ಲನ್ನು ಕಟ್ಟಿ ಚಿನ್ನದ ಅಥವಾ ಬೆಳ್ಳಿಯ ತಂತಿಯಿಂದ ಬಿಗಿಸುತ್ತಿದ್ದನು.

ಶಸ್ತ್ರವೈದ್ಯದ ಒಂದು ಸಂಗ್ರಹವನ್ನು ತನ್ನ ೬೫ನೇ ವಯಸ್ಸಿನಲ್ಲಿ, ೧೫೭೫ರಲ್ಲಿ ಮೊದಲನೆಯ ಸಲ ಪ್ರಕಟಿಸಿದನು.ಇದು ಒಂದಲ್ಲ, ಎರಡಲ್ಲ, ಐದು ಮುದ್ರಣಗಳನ್ನು ಕಂಡಿತು. ೫ನೇ ಮುದ್ರಣ ತಯಾರಾಗುತ್ತಿದ್ದಾಗ ಪಾರೆ ತನ್ನ ೮೦ನೇ ವಯಸ್ಸಿನಲ್ಲಿ ಮರಣಹೊಂದಿದನು. ಈ ಸಂಗ್ರಹದಲ್ಲಿ ಹೆಚ್ಚು ಶಸ್ತ್ರವೈದ್ಯದ ವಿಷಯಗಳಿಲ್ಲವೆಂಬ ಅಪಾದನೆಯ ಮೇಲೆ, ಅದು ಪ್ರಕಟವಾಗದಂತೆ ಔಷಧ ವೈದ್ಯಸಂಸ್ಥೆ ಸಾಕಷ್ಟು ವಿರೋ

ಧಿಸಿತು. ಆದರೆ ಅದು ನೆರವೇರಲಿಲ್ಲ. ಅನೇಕ ವಿದ್ವಾಂಸರ ಅಭಿಪ್ರಾಯದಲ್ಲಿ ಈ ಸಂಗ್ರಹ ಆ ಕಾಲದಲ್ಲಿ ಬಹು ಶ್ರೇಷ್ಠ ಲೇಖನವಾಗಿತ್ತೆಂದೂ, ಅಂಗರಚನೆ ಶಾಸ್ತ್ರಕ್ಕೆ ವಿಸೇಲಿಯಸ್ ಎಷ್ಟು ಸೇವೆ ಮಾಡಿದ್ದನೋ,ಅಷ್ಟೇ ಸೇವೆಯನ್ನು ಶಸ್ತ್ರವೈದ್ಯಕ್ಕೆ ಆಂಬ್ರೋಸಿ ಪಾರೆ ಸಲ್ಲಿಸಿದ್ದನೆಂದು ಗೊತ್ತಾಗಿದೆ.

ಶಸ್ತ್ರವೈದ್ಯದ ವಿಷಯವಾಗಿ ಕೆಲವು ನಿಯಮಗಳನ್ನು ಪಾರೆ ಜನರ ಮುಂದಿಟ್ಟನು. ಅವುಗಳ ಪೈಕಿ ನಾಲ್ಕನ್ನು ಮಾತ್ರ ಇಲ್ಲಿ ತಿಳಿಸಲಾಗುತ್ತದೆ. ಇವು ಸತ್ಯದ ನುಡಿಗಳಾಗಿದ್ದವು.

೧. ಹಣಕ್ಕಾಗಿ ಶಸ್ತ್ರವೈದ್ಯನಾಗುವವನು ಏನೂ ಸಾಧಿಸಲಾರ.

೨. ಅನುಭವವಿಲ್ಲದ ಹೆಚ್ಚಿನ ಜ್ಞಾನದಿಂದ ಶಸ್ತ್ರವೈದ್ಯನಿಗೆ ಆತ್ಮವಿಶ್ವಾಸ ಮೂಡದು.

೩. ಇತ್ತೀಚೆಗೆ ಕಂಡುಹಿಡಿದಿದ್ದಕ್ಕಿಂತಲೂ ಆದ್ಯಂತವಾಗಿ ಪರೀಕ್ಷಿಸಿದ ಔಷಧವೇ ಉತ್ತಮ.

೪. ರೋಗ ಲಕ್ಷಣಗಳು ಮಾರಕವಾಗಿ ತೋರಿದರೂ ರೋಗಿಗೆ ಭರವಸೆ ಕೊಡುವುದು ಯಾವಾಗಲೂ ವಿವೇಕಯುತ.

ಆಂಬ್ರೋಸಿ ಪಾರೆಯನ್ನು ಜಾನ್ ಹಂಟರ್‌ಗೆ ಅನೇಕ ವಿಜ್ಞಾನಿಗಳು ಹೋಲಿಸಿ, ಚರಿತ್ರೆಯಲ್ಲೇ ಪ್ರಸಿದ್ಧ ಶಸ್ತ್ರವೈದ್ಯನೆಂದು ಹೊಗಳಿದ್ದಾರೆ.

ಕೊಯ್ದು ಕಲ್ಲುತೆಗೆವ ಶಸ್ತ್ರವೈದ್ಯರು

ಆಂಬ್ರೋಸಿ ಪಾರೆಯ ಕಾಲದಲ್ಲಿ ಅವನ ಸಹೋದ್ಯೋಗಿಗಳಾಗಲೀ ಅಥವ ಅವನ ತರುವಾಯಿಗಳಾಗಲೀ ಪ್ರಬಲರಾಗಲು ಸಾಧ್ಯವಾಗದಿದ್ದರೂ, ಸಾಕಷ್ಟು ಗೌರವ ಪಡೆದಿದ್ದ ಅನೇಕ ಶಸ್ತ್ರವೈದ್ಯರಿದ್ದರು. ಇವರಲ್ಲಿ ಅನೇಕರಿಗೆ ಮೂತ್ರಕೋಶವನ್ನು ಕೊಯ್ದು ಕಲ್ಲುತೆಗೆವ (ಲಿತಾಟಮಿ) ಶಸ್ತ್ರಕ್ರಿಯೆ ಮಾಡಲು ಅನುಮತಿಯಿತ್ತು. ಈ ರೋಗ ಯೂರೋಪಿನಲ್ಲೆಲ್ಲಾ ಹೆಚ್ಚಾಗಿದ್ದುದರಿಂದ ಈ ಶಸ್ತ್ರವೈದ್ಯರು ಊರಿಂದೂರಿಗೆಹೋಗಿ ಶಸ್ತ್ರಕ್ರಿಯೆ ಮಾಡುತ್ತಿದ್ದರು.

ಫ್ರೀರೆ ಜೆಕ್ವೈಸ್

ಇಂತಹ ಶಸ್ತ್ರವೈದ್ಯರ ಪೈಕಿ ಇಬ್ಬರು ಫ್ರೆಂಚ್ ಸನ್ಯಾಸಿಗಳು ಅನುಕ್ರಮವಾಗಿ ೧೭ ಮತ್ತು ೧೮ನೇ ಶತಮಾನಗಳಲ್ಲಿ ಪ್ರಖ್ಯಾತರಾಗಿದ್ದರು. ಫ್ರೀರೆ ಜೆಕ್ವೈಸ್ (೧೬೫೧–೧೭೧೯) ಮಧ್ಯಫ್ರಾನ್ಸಿನವನು. ಕೊಯ್ದು ಕಲ್ಲುತೆಗೆವುದನ್ನು ರೂಢಿ ಮಾಡಲು ಹಲವಾರು ಸ್ಥಳಗಳಲ್ಲಿ ಸಂಚಾರ ಮಾಡಿದ್ದನು. ಶಸ್ತ್ರಕ್ರಿಯೆಯಾದ ರೋಗಿ ಕೊಟ್ಟಷ್ಟು ರುಸುಮನ್ನು ತೆಗೆದುಕೊಳ್ಳುತ್ತಿದ್ದನೇ ಹೊರತು, ಹೆಚ್ಚು ವಸೂಲಿ ಮಾಡುತ್ತಿರಲಿಲ್ಲ. ಅಲ್ಲದೆ ತನಗೆ ಅಗತ್ಯವಾದಷ್ಟು ಹಣವನ್ನು ಉಪಯೋಗಿಸಿಕೊಂಡು ಉಳಿದದ್ದನ್ನು ಬಡಬಗ್ಗರಿಗೆ ಹಂಚುತ್ತಿದ್ದನು. ೧೬೯೭ರಲ್ಲಿ ಪ್ಯಾರಿಸ್ಸಿಗೆ

ಹಿಂತಿರುಗಿದನಂತರ ಇವನ ಸಾಹಸ ಮತ್ತು ಸಿದ್ಧಿ ಪ್ರಬಲವಾದುದನ್ನು ಸಹಿಸಲಾರದೆ ಅಲ್ಲಿಯ ವೈದ್ಯರು ಇವನನ್ನು ಟೀಕಿಸಲು ಪ್ರಾರಂಭಿಸಿದರು. ಈ ಹಿಂಸೆ ತಡೆಯಲಾರದೆ ಪುನಃ ಯೂರೋಪಿನಲ್ಲಿ ಸಂಚಾರ ಕೈಗೊಂಡನು. ಇವನು ಮುಂಡದ ಪಕ್ಕದಿಂದ ಲಿತಾಟಮಿ ಮಾಡುವುದನ್ನು ಅಭ್ಯಾಸ ಮಾಡಿದ್ದುದರಿಂದ, ಈ ಶಸ್ತ್ರಕ್ರಿಯೆಗೆ ಇವನ ಹೆಸರನ್ನಿಡಲಾಗಿತ್ತು.

ಫ್ರೀರೆ ಜೀನ್

ಫ್ರೀರೆ ಜೀನ್ (೧೭೦೩-೧೭೮೧) ಎಂಬ ಎರಡನೇ ಫ್ರೆಂಚ್ ಸನ್ಯಾಸಿ ಅತ್ಯುತ್ತಮವಾಗಿ ಲಿತಾಟಮಿ ಮಾಡುತ್ತಿದ್ದುದರಿಂದ ಪ್ಯಾರಿಸ್ಸಿನಲ್ಲೇ ಒಂದು ಖಾಸಗಿ ಆಸ್ಪತ್ರೆಯನ್ನು ನಡೆಸಲು ಪ್ರಾರಂಭಿಸಿದ್ದನು. ಇವನ ೧೦೦೦ ಶಸ್ತ್ರಕ್ರಿಯೆಗಳಲ್ಲಿ ಶೇ. ೬೦ ರಷ್ಟು ಮೇಲಾಗುತ್ತಿದ್ದವು.

ಪಿಯರ್ರೆ ಫ್ರಾಂಕೊ

ಲಿತಾಟಮಿ ಶಸ್ತ್ರವೈದ್ಯದಲ್ಲಿ ಇವರಲ್ಲದೆ, ಇವರಿಗಿಂತಲೂ ಮೊದಲು ಅನೇಕ ಅನುಭವಶಾಲಿಗಳೂ ಸಾಹಸಿಗಳೂ ಇದ್ದರು. ಪಿಯರ್ರೆ ಫ್ರಾಂಕೊ (೧೫೦೫-೧೫೭೦) ಮೊದಲು ಬರ್ನ್ ಪಟ್ಟಣದಲ್ಲಿದ್ದು ಆಮೇಲೆ ಲಾಸಾನೆ ಪಟ್ಟಣಕ್ಕೆ ಬಂದು, ಗುಂಜೆಲು ಮೇಲಿನಿಂದ ಲಿತಾಟಮಿ ಮಾಡುವವರಲ್ಲಿ ಇವನೇ ಮೊದಲನೆಯವನಾಗಿದ್ದನು. ಆದರೆ ಈ ಹೊಸ ಕ್ರಮವನ್ನು ಅನನುಭವಿಗಳು ಮಾಡಬಾರದೆಂದು ತಿಳಿಸಿದ್ದನು. ಆದ್ದರಿಂದ ಜಾನ್ ಡಗ್ಲಾಸ್ ೧೭೧೮ರಲ್ಲಿ ಪುನಃ ಬಳಕೆಗೆ ತರುವ ತನಕ ಬೇರೆ ಯಾರೂ ಈ ಕ್ರಮವನ್ನು ಅನುಸರಿಸಿರಲಿಲ್ಲ. ಕಲ್ಲು ದಪ್ಪವಾಗಿದ್ದು, ಹೊರಕ್ಕೆ ತೆಗೆಯಲು ಆಗದಿದ್ದರೆ ಕಲ್ಲನ್ನು ಸಣ್ಣಗೆ ಜಜ್ಜುವ ಇಕ್ಕಳವನ್ನು ಫ್ರಾಂಕೊ ಕಂಡುಹಿಡಿದಿದ್ದನು. ಕುಡಿಯುವ ಔಷಧದಿಂದ ಕಲ್ಲು ಕರಗುತ್ತದೆಂಬ ನಂಬಿಕೆ ಇವನಲ್ಲಿರಲಿಲ್ಲ. ಲಿತಾಟಮಿ ಶಸ್ತ್ರಕ್ರಿಯೆಯ ಮೇಲೆ ಬರೆದಿದ್ದಲ್ಲದೆ, ಬೂರುವನ್ನೂ ಕುರಿತು ಗ್ರಂಥವನ್ನು ಬರೆದಿದ್ದನು. ಡೊಕ್ಕರಿಸಿದ ಬೂರುವನ್ನು ಶಸ್ತ್ರಕ್ರಿಯೆ ಮಾಡಿ ಸರಿಪಡಿಸಿದವರಲ್ಲಿ ಇವನೇ ಮೊದಲನೆಯವನಾಗಿದ್ದನು. ಹಾಗೂ ಕಣ್ಣಿನ ಪೊರೆ ತೆಗೆಯುವುದನ್ನೂ ರೂಢಿ ಮಾಡಿದ್ದನು.

ಇಟಲಿ ಮತ್ತು ಜರ್ಮನಿ ದೇಶಗಳ ಶಸ್ತ್ರವೈದ್ಯ

ಸಾಮಾನ್ಯವಾಗಿ ಇಟಲಿ ದೇಶದ ಅಂಗರಚನಾಕಾರರೆಲ್ಲಾ ಶಸ್ತ್ರವೈದ್ಯರಾಗಿದ್ದರು. ವಿಸೇಲಿಯಸ್ ಮತ್ತು ಪಾರೆ ಇಂತಹವರಲ್ಲಿ ಅಗ್ರಗಣ್ಯರು. ಹೆನ್ರಿ ಸಾಯುವ ಕಡೆಗಾಲದಲ್ಲಿ ಇವರಿಬ್ಬರೂ ಮೊಟ್ಟಮೊದಲಿಗೆ ಭೇಟಿಯಾಗಿ ದೊರೆಗೆ ಶುಶ್ರೂಷೆ ಮಾಡಿದರು. ಅಂಗರಚನೆಕಾರರಾದ ಫ್ಯಾಬ್ರಿಷಿಯಸ್ ಮತ್ತು ಗೈಡೊ ಗೈಡಿಗೂ ಶಸ್ತ್ರಕ್ರಿಯೆ ಮಾಡುವ ಅಭ್ಯಾಸವಿತ್ತು.

ಗ್ಯಾಸ್ಪರೆ ಟ್ಯಾಗ್ಲಿಯಾಕೊಸ್ಸಿ

ಸುರೂಪಿಕ ಶಸ್ತ್ರವೈದ್ಯನಾದ ಗ್ಯಾಸ್ಪರೆ ಟ್ಯಾಗ್ಲಿಯಕೊಸ್ಸಿ (೧೫೪೫-೧೫೯೯)

ಮೂಗಿನ ಸೊಟ್ಟುಗಳನ್ನು ಸರಿಪಡಿಸುವುದರಲ್ಲಿ ಖ್ಯಾತಿ ಪಡೆದಿದ್ದನು. ಇವನು ಕತ್ತರಿಸಿ ಹೋಗಿದ್ದ ಮೂಗಿನ ಭಾಗಕ್ಕೆ ತೋಳಿನ ಚರ್ಮವನ್ನು ನಾಟಿ ಹಾಕಿ ಮೂಗನ್ನು ಮೊದಲ ಸ್ಥಿತಿಗೆ ತರುತ್ತಿದ್ದನು. ಈ ಶಸ್ತ್ರಕ್ರಿಯೆಯನ್ನು ಕ್ರೈಸ್ತಮಂದಿರದ ಮುಖ್ಯಾಧಿಪತಿಗಳು ವಿರೋಧಿಸಿದ್ದುದರಿಂದ, ೧೬ನೇ ಶತಮಾನದ ವರೆವಿಗೂ ಮತ್ತೆ ಬಳಕೆಗೆ ಬರಲಿಲ್ಲ. ಟ್ಯಾಗ್ಲಿಯಕೊಸ್ಸಿ ಬೊಲೋನ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮಾಡಿ, ೧೫೭೦ರಲ್ಲಿ ವೈದ್ಯಶಾಸ್ತ್ರದಲ್ಲಿ ಪದವೀಧರನಾಗಿ, ಅಲ್ಲೇ ಶಸ್ತ್ರವೈದ್ಯದಲ್ಲೂ ಮತ್ತು ಅಂಗರಚನೆಶಾಸ್ತ್ರದಲ್ಲೂ ಪ್ರಾಧ್ಯಾಪಕನಾದನು. ಇವನು ೧೫೯೭ರಲ್ಲಿ ಪ್ರಸಿದ್ಧವಾದ ಸುರೂಪಿಕ ಶಸ್ತ್ರವೈದ್ಯ ಗ್ರಂಥವನ್ನು ಬರೆದು, ಅದರಲ್ಲಿ ಮೂಗು, ಕಿವಿ, ತುಟಿಗಳನ್ನು ಸರಿಪಡಿಸುವ ವಿಧಾನಗಳನ್ನು ವಿವರಿಸಿದ್ದನು.

ಜಾರ್ಜ್ ಬಾರ್ಟಿಸ್

ಜರ್ಮನಿಯ ಶಸ್ತ್ರವೈದ್ಯ ಇಟಲಿಯದರಷ್ಟು ಮುಂದೆ ಬಂದಿರಲಿಲ್ಲ. ಊರೂರು ಅಲೆಯುತ್ತಿದ್ದ ಲಿತಾಟಮಿ ಶಸ್ತ್ರವೈದ್ಯರು ಮತ್ತು ಸಂಚಾರಿ ಕಣ್ಣು ವೈದ್ಯರೇ ಆಗ ಶಸ್ತ್ರ ಚಿಕಿತ್ಸೆ ಮಾಡುತ್ತಿದ್ದವರು. ಇಂತಹವರಲ್ಲಿ ಜಾರ್ಜ್ ಬಾರ್ಟಿಸ್ (೧೫೩೫) ಒಬ್ಬನಾಗಿದ್ದ. ಇವನು ತನ್ನ ೧೩ನೇ ವಯಸ್ಸಿನಲ್ಲೇ ಊರೂರು ತಿರುಗಲಾರಂಭಿಸಿ, ಕೊನೆಗೆ ಡ್ರೆಸ್ಡೆನ್‌ನ ಕಣ್ಣಿನ ಶಸ್ತ್ರವೈದ್ಯನಾಗಿದ್ದನು. ಉಳಿದ ಶಸ್ತ್ರಕ್ರಿಯೆಗಳನ್ನೂ ಮಾಡುತ್ತಿದ್ದ ಇವನು ಟ್ಯಾಗ್ಲಿಯಕೊಸ್ಸಿಯ ಹಾಗೆ ವೈದ್ಯ ವಿದ್ಯಾಭ್ಯಾಸ ಮಾಡಿರಲಿಲ್ಲ. ಅದರೂ ಈತನು ಪ್ರಸಿದ್ಧಿಯಾಗಿದ್ದನು.

೧೬ನೇ ಶತಮಾನದ ಇಂಗ್ಲೆಂಡಿನ ಶಸ್ತ್ರವೈದ್ಯ

೧೪ನೇ ಶತಮಾನದ ಇಂಗ್ಲೆಂಡಿನಲ್ಲಿ ಕೆಲಸಿಗರು ಶಸ್ತ್ರಕ್ರಿಯೆ ಮಾಡುತ್ತಿದ್ದರು. ತಮ್ಮದೇ ಒಂದು ಸಂಘವನ್ನೂ ಏರ್ಪಡಿಸಿಕೊಂಡಿದ್ದರು. ಹೀಗೆ ಪ್ರತಿಯೊಂದು ಪಟ್ಟಣದಲ್ಲೂ ಒಂದೊಂದು ಸಂಘವಿತ್ತು. ದೇಶದಲ್ಲೆಲ್ಲಾ ಸುಮಾರು ೩೦ ಸಂಘಗಳಿದ್ದಿರಬಹುದು. ಈ ಶಸ್ತ್ರವೈದ್ಯರ ಗುಣದೋಷಗಳು ಅಷ್ಟಾಗಿ ಗೊತ್ತಿರಲಿಲ್ಲ.

ಆರ್ಡರ್ನೆ ಜಾನ್

ಆರ್ಡರ್ನೆ ಜಾನ್ ಆಗಿನ ಶಸ್ತ್ರವೈದ್ಯವನ್ನು ಕುರಿತು ಲೇಖನ ಬರೆದಿದ್ದವರಲ್ಲಿ ಒಬ್ಬನಾಗಿದ್ದ. ಫ್ರಾನ್ಸಿನ ಗ್ಯಾಡೆಸ್ಟನ್ ಮತ್ತು ಗಿಲ್ಬರ್ಟಸ್‌ರ ಹಾಗೆ ವೈದ್ಯ ಮತ್ತು ಶಸ್ತ್ರವೈದ್ಯಗಳೆರಡರಲ್ಲೂ ಪ್ರವೀಣನಾಗದೆ, ಶಸ್ತ್ರವೈದ್ಯದಲ್ಲಿ ಮಾತ್ರ ಪ್ರವೀಣನಾಗಿದ್ದನು. ಆದ್ದರಿಂದ ಇವನನ್ನು ಇಂಗ್ಲಿಷ್ ಶಸ್ತ್ರವೈದ್ಯದ ಪಿತಾಮಹನೆಂದು ಕರೆಯಲಾಗಿತ್ತು. ಆರ್ಡರ್ನೆ ಜಾನ್ ೧೩೦೭ರಲ್ಲಿ ಜನಿಸಿ, ವಿಲ್ಟ್‌ಷೈರ್, ನೀವಾರ್ಕ್ ಮತ್ತು ಲಂಡನ್‌ಗಳಲ್ಲಿ ವೈದ್ಯವೃತ್ತಿಯನ್ನು ನಡೆಸುತ್ತಿದ್ದನು. ಇವನ ವಿದ್ಯಾಭ್ಯಾಸ ಸರಿಯಾಗಿ ಗೊತ್ತಿಲ್ಲದಿದ್ದರೂ, ಸೇನಾವೈದ್ಯನಾಗಿ ೧೦೦ ವರ್ಷದ ಯುದ್ಧದಲ್ಲಿ ನಿರತನಾಗಿದ್ದುದು ತಿಳಿದು ಬಂದಿದೆ. ಪುಣ್ಯವಂತರೂ ಭಾಗ್ಯವಂತರೂ ವಿದ್ವಾಂಸರೂ ಇವನಿಂದ

ಚಿಕಿತ್ಸೆ ಪಡೆಯುತ್ತಿದ್ದರು. ಇವನು ಅನೇಕ ಪುಸ್ತಕಗಳನ್ನು ಲ್ಯಾಟಿನ್ ಭಾಷೆಯಲ್ಲಿ ಬರೆದಿದ್ದರೂ ಅವು ಅಚ್ಚಾಗದೆ ಬೆಳಕಿಗೆ ಬರಲಿಲ್ಲ. ಇವನ ಶಸ್ತ್ರಚಿಕಿತ್ಸೆ ಈಗಿನ ಕಾಲದ ನಂಜುರಹಿತ ಶಸ್ತ್ರಕ್ರಿಯೆಗೆ ಹೋಲಿಸಬಹುದಾಗಿತ್ತು. ಗಾಯ ಕೀವುಗೂಡಬಾರ ದೆಂದೂ, ಉರಿತವಾಗಿಸುವ ಔಷಧಗಳನ್ನು ಉಪಯೋಗಿಸಕೂಡದೆಂದೂ, ಗಾಯ ಕಟ್ಟುಗಳನ್ನು ಪದೇ ಪದೇ ಬದಲಾಯಿಸಬೇಕೆಂದೂ ತಿಳಿಸಿದ್ದನು. ಇವನು ಕಂಡು ಹಿಡಿದ ಆಸನದ್ವಾರದ ಬೊರಿಗೆಯ ಚಿಕಿತ್ಸೆಯ ಕ್ರಮ ಈಗಲೂ ಜಾರಿಯಲ್ಲಿದೆ. ಈ ಶಸ್ತ್ರಕ್ರಿಯೆ ಯಶಸ್ವಿಯಾದಲ್ಲಿ ತಕ್ಷಣವೇ ೪೦ ಪೌಂಡುಗಳನ್ನೂ, ಬಟ್ಟೆಬರೆಯನ್ನೂ ಮತ್ತು ಜೀವಾವಧಿ ವರ್ಷ ಒಂದಕ್ಕೆ ೧೦೦ ಷಿಲ್ಲಿಂಗುಗಳನ್ನೂ ರುಸುಮಾಗಿ ರೋಗಿ ಕೊಡಬೇಕಾಗಿತ್ತು. ಈಗಿನ ಬೆಲೆಯ ಪ್ರಕಾರ ತಕ್ಷಣದ ರುಸುಮು ೪೮೦೦೦ ಡಾಲರ್ ಮತ್ತು ವರ್ಷ ಒಂದರ ರುಸುಮು ೬೦೦೦ ಡಾಲರ್ ಆಗಬಹುದು.

ನೂರು ವರ್ಷದ ಯುದ್ಧದಲ್ಲೂ, ಗುಲಾಬಿ ಲಾಂಛನಗಳ ಒಳಯುದ್ಧದಲ್ಲೂ ಗಾಯಗೊಂಡವರಿಗೆ ಚಿಕಿತ್ಸೆಮಾಡಲು ಸೇನಾವೈದ್ಯರು ಅವಶ್ಯಕವಾಗಿ ಬೇಕಾಗಿದ್ದರು. ಅವರಿಗೆ ಸಾಕಷ್ಟು ರುಸುಮು ಸಲ್ಲುತ್ತಿತ್ತು. ಯುದ್ಧದಲ್ಲಿ ತೊಡಗಿದ್ದ ವೈದ್ಯರ ಸಂಘ ಒಂದು ೧೩೬೯ರಲ್ಲಿ ಏರ್ಪಾಡಾಗಿ, ಸಂಘದ ಪಂಡಿತರು ಪರೀಕ್ಷೆ ನಡೆಸಿ ತೇರ್ಗಡೆ ಯಾದವರನ್ನು ಮಾತ್ರ ಸದಸ್ಯರನ್ನಾಗಿ ನೇಮಿಸಿಕೊಳ್ಳುತ್ತಿದ್ದರು. ಇದಕ್ಕೆ ಮೊದಲೇ ೧೩೦೦ರಲ್ಲಿ. ಖಾಸಗೀ ಕೆಲಸಿ ಶಸ್ತ್ರವೈದ್ಯರ ಸಂಘಗಳು ಪ್ರಾರಂಭವಾಗಿದ್ದವು. ಇವು ಉಮೇದುವಾರರಿಗೆ ವೈದ್ಯವಿದ್ಯಾಭ್ಯಾಸ ಕೊಟ್ಟುಪರೀಕ್ಷೆಯಲ್ಲಿ ತೇರ್ಗಡೆಯಾದವ ರಿಗೆ, ವೈದ್ಯವೃತ್ತಿ ನಡೆಸಲು ಅಧಿಕಾರ ಕೊಡುತ್ತಿದ್ದುವು. ಈ ಸಂಘಗಳಲ್ಲಿ ೧೩೧೩ರ ಕಾನೂನಿನ ಪ್ರಕಾರ, ಶಸ್ತ್ರವೈದ್ಯರೆಲ್ಲಾ ಸದಸ್ಯರಾಗಬೇಕಾಗಿತ್ತು. ಸದಸ್ಯರ ಸಂಖ್ಯೆ ಹೆಚ್ಚುತ್ತಾ ಬಂದು ೧೫೩೭ರಲ್ಲಿ ೧೮೫ಕ್ಕೆ ಏರಿತ್ತು. ಆಗ ಲಂಡನ್ನಿನಲ್ಲಿ ಇನ್ನೂ ಅನೇಕ ಸಂಸ್ಥೆಗಳಿದ್ದವು. ಸೇನಾ ಶಸ್ತ್ರವೈದ್ಯರ ಸಂಘ ಮತ್ತು ಖಾಸಗೀ ಕೆಲಸಿಗ ಶಸ್ತ್ರವೈದ್ಯರ ಸಂಘಗಳೆರಡೂ ೧೫೪೦ರಲ್ಲಿ ಪಾರ್ಲಿಮೆಂಟಿನ ಕಾನೂನಿನ ಪ್ರಕಾರ ಒಟ್ಟಿಗೆ ಸೇರಿ, ಕೆಲಸಿಗಳ ಮತ್ತು ಶಸ್ತ್ರವೈದ್ಯರ ಸಂಯುಕ್ತ ಸಂಘ ಒಂದು ಏರ್ಪಾಡಾಯಿತು. ಆಗ ಕೆಲಸಿಗಳು ಶಸ್ತ್ರವೈದ್ಯದಲ್ಲಿ ತೊಡಗಬಾರದೆಂದೂ, ಶಸ್ತ್ರವೈದ್ಯರು ಕ್ಷೌರ ಮಾಡಬಾರದೆಂದೂ ಪಾರ್ಲಿಮೆಂಟು ಅಧಿಕೃತವಾಗಿ ಕಾನೂ ನನ್ನು ವಿಧಿಸಿತು. ಇದು ನೆರವೇರಲು ಥಾಮಸ್ ವಿಕಾರಿ ಹೊಣೆಗಾರನಾಗಿದ್ದನು.

ಥಾಮಸ್ ವಿಕಾರಿ

ಆಗಿನ ಕಾಲದ ಮುಖ್ಯ ಶಸ್ತ್ರವೈದ್ಯನಾಗಿದ್ದ ಥಾಮಸ್ ವಿಕಾರಿ ೧೪೯೫ರಲ್ಲಿ ಜನಿಸಿ, ವಿದ್ಯಾಭ್ಯಾಸ ಮುಗಿದ ಮೇಲೆ, ಲಂಡನ್ನಿನ ಕೆಲಸಿ ಶಸ್ತ್ರವೈದ್ಯರ ಸಂಯುಕ್ತ ಸಂಘದ ಸದಸ್ಯನಾದನು. ೧೫೩೫ರಲ್ಲಿ ೮ನೇ ಹೆನ್ರಿಯ ಮುಖ್ಯ ಶಸ್ತ್ರವೈದ್ಯನಾಗಿ, ೧೫೪೮ರಲ್ಲಿ ಸಂಯುಕ್ತ ಸಂಘದ ಅಧ್ಯಕ್ಷನಾಗಿ ಚುನಾಯಿತನಾದನು. ಅನಂತರ

ಅಂಗರಚನೆಶಾಸ್ತ್ರದ ಅಧ್ಯಾಪಕನಾಗಿ ೧೫೪೮ರಲ್ಲಿ ಆ ಶಾಸ್ತ್ರದ ಪುಸ್ತಕ ಒಂದನ್ನು ಬರೆದು ಪ್ರಕಟ ಮಾಡಿದನು. ಸಂತ ಬಾರ್ತಾಲೊಮ್ಯು ಆಸ್ಪತ್ರೆ ಕ್ರೈಸ್ತ ಮಂದಿರದ ಆಡಳಿತದಲ್ಲಿದ್ದುದರಿಂದ ೮ನೇ ಹೆನ್ರಿ ಸರ್ಕಾರಕ್ಕೆ ವಹಿಸಿಕೊಂಡು, ಕೆಲವು ವರ್ಷ ಕಳೆದ ಮೇಲೆ ಪುನಃ ಆರಂಭಮಾಡಿ ಥಾಮಸ್ ವಿಕಾರಿಯನ್ನು ಸ್ಥಳವಾಸಿ ಶಸ್ತ್ರವೈದ್ಯನನ್ನಾಗಿ ನೇಮಿಸಿದನು. ವಿಕಾರಿ ೧೫೬೧ರಲ್ಲಿ ಸಾಯುವ ತನಕ ಅದೇ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದನು. ಇವನ ಲೇಖನಗಳು ಉತ್ತಮವಾಗಿಲ್ಲದಿದ್ದರೂ, ಇವನ ಪ್ರಖ್ಯಾತಿ ಮಾತ್ರ ಕುಂದಿರಲಿಲ್ಲ.

ಥಾಮಸ್ ಗಾಲೆ

ವಿಕಾರಿಯ ಸಹೋದ್ಯೋಗಿ ಥಾಮ್ಸ್ ಗಾಲೆ (೧೫೦೭-೧೫೮೭) ಕೂಡ ಸೇನಾ ಶಸ್ತ್ರವೈದ್ಯನಾಗಿ ೮ನೇ ಹೆನ್ರಿಯ ಸೈನ್ಯವನ್ನೂ ಸೇರಿ, ಮಾನ್ಟ್ರೀಲ್ ಮತ್ತು ಸಂತ ಕ್ವಿಂಟಿನ್ ಯುದ್ಧಗಳಲ್ಲಿ ಭಾಗವಹಿಸಿ ಪ್ರಖ್ಯಾತಿ ಪಡೆದಿದ್ದನು. ಲಂಡನ್ನಿಗೆ ಹಿಂತಿರುಗಿದ ಮೇಲೆ ಸಂಯುಕ್ತ ಸಂಘದ ಅಧ್ಯಕ್ಷನಾದನು. ೧೫೬೩ರಲ್ಲಿ ಇಂಗ್ಲೀಷಿನಲ್ಲಿ ಶಸ್ತ್ರವೈದ್ಯದ ಪುಸ್ತಕವನ್ನು ಬರೆದು ಪ್ರಕಟಿಸಿದನು. ಅದೇ ವರ್ಷ ಗಾಯಗಳನ್ನು ಕುರಿತು ಮತ್ತೊಂದು ಪುಸ್ತಕವನ್ನು ಬರೆದನು.

ಜಾನ್ ಹಾಲ್ಲೆ

ಜಾನ್ ಹಾಲ್ಲೆ (೧೫೨೯-೧೫೬೮) ಎಂಬ ಮತ್ತೊಬ್ಬ ಶಸ್ತ್ರವೈದ್ಯ, ಕೇವಲ ಕೆಲವು ವರ್ಷಗಳು ಜೀವಿಸಿದ್ದರೂ, ಲಾನ್‌ಫ್ರಾಂಚಿಯ ಗ್ರಂಥಗಳನ್ನು ಇಂಗ್ಲೀಷಿಗೆ ಭಾಷಾಂತರ ಮಾಡಿದ್ದನು. ಆದರೆ ವಿಸೇಲಿಯಸ್ಸಿನ ಫ್ಯಾಬ್ರಿಕದ ವಿಷಯವನ್ನೇ ತನ್ನ ಪುಸ್ತಕದಲ್ಲಿ ಎತ್ತಿರಲಿಲ್ಲ. ಶಸ್ತ್ರವೈದ್ಯರು ವಿದ್ಯಾವಂತರಾಗಿರಬೇಕೆಂದೂ, ಔಷಧ ವೈದ್ಯ ಶಾಸ್ತ್ರದಲ್ಲೂ ಪಂಡಿತರಾಗಬೇಕೆಂದೂ, ಠಕ್ಕ ವೈದ್ಯರನ್ನು ಬಹಿರಂಗಪಡಿಸಬೇಕೆಂದೂ ಇವನ ಇಚ್ಛೆಯಾಗಿತ್ತು.

ಮುಂದಿನ ತಲೆಮೊರೆಯ ವಿಲಿಯಂ ಕ್ಲೌಸ್ (೧೫೪೪-೧೬೦೪) ಬ್ರಿಟನ್ನಿನ ಶಸ್ತ್ರವೈದ್ಯರಲ್ಲೆಲ್ಲಾ ಬಹಳ ಚತುರನಾದವನು. ಸೇನಾ ಶಸ್ತ್ರವೈದ್ಯನಾಗಿದ್ದು ಫ್ರಾನ್ಸಿನ ಯುದ್ಧಗಳಲ್ಲಿ ತೊಡಗಿದ್ದಾಗ ಜಾನ್ ಬ್ಯಾನೆಸ್ಟರ್‌ನ ಸ್ನೇಹ ಸಂಪಾದಿಸಿದನು. ಆಮೇಲೆ ನೌಕಾದಳದಲ್ಲೂ ಸೇವೆ ಸಲ್ಲಿಸಿ, ಲಂಡನ್ನಿಗೆ ೧೫೬೯ರಲ್ಲಿ ಹಿಂತಿರುಗಿದನು. ಆಗ ಸಂಯುಕ್ತ ಸಂಸ್ಥೆಗೆ ಸದಸ್ಯನಾಗಿ ಸಂತ ಬಾರ್ತಾಲೊಮ್ಯು ಆಸ್ಪತ್ರೆಯ ಒಬ್ಬ ಅಧಿಕಾರಿಯಾಗಿ ನೇಮಿತವಾದನು. ೧೫೮೫ರಲ್ಲಿ ಸೇನಾನಾಯಕನಾಗಿ ಹಾಲೆಂಡಿಗೆ ಹೋಗಿ ಸ್ಪೈಯಿನ್ ಮೇಲಿನ ಯುದ್ಧದಲ್ಲಿ ಸಹಾಯ ಮಾಡಿದ್ದನು. ಅನಂತರ ೧೫೮೮ರಲ್ಲಿ ಸ್ಪಾನಿಷ್ ಆರ್ಮೆಡ ಗೆದ್ದ ಸರ್ ಫ್ರಾನ್ಸಿಸ್ ಡ್ರೇಕ್‌ನ ದಳವನ್ನು ಸೇರಿದ್ದನು. ಯುದ್ಧದಿಂದ ಹಿಂತಿರುಗಿ ಲಂಡನ್ನಿನಲ್ಲಿ ವೈದ್ಯವೃತ್ತಿ ನಡೆಸುತ್ತಿದ್ದಾಗ ಪ್ಲೇಗ್ ರೋಗ ತಗುಲಿ ಎಸೆಕ್ಸಿನ ತನ್ನ ಭವನದಲ್ಲಿ ಮರಣ ಹೊಂದಿದನು. ಇವನು ಪ್ರಸಿದ್ಧವಾದ ನಾಲ್ಕು

ಶಸ್ತ್ರವೈದ್ಯ ಪುಸ್ತಕಗಳನ್ನು ಬರೆದು ಕೀರ್ತಿ ಪಡೆದಿದ್ದನು. ಇವುಗಳೊಂದರಲ್ಲಿ ಸಿಡಿಮದ್ದು ಮತ್ತು ಗುಂಡಿನೇಟನಿಂದ ಆದ ಗಾಯಗಳು ವಿಷದಿಂದ ಕೂಡಿಲ್ಲವೆಂದು ಸಮರ್ಥಿಸಿದ್ದಲ್ಲದೆ ಅವುಗಳ ಚಿಕಿತ್ಸೆಯನ್ನೂ ವಿವರಿಸಿದ್ದನು. ಈ ಪುಸ್ತಕ ನಾಲ್ಕು ಮುದ್ರಣ ಕಂಡು ಎಲ್ಲರ ಪ್ರಶಂಸೆಗೀಡಾಗಿತ್ತು.

ಜಾನ್ ಬ್ಯಾನೆಸ್ಟರ್

ಮತ್ತೊಬ್ಬ ಶ್ರೇಷ್ಠ ಸೇನಾ ಶಸ್ತ್ರವೈದ್ಯ, ಜಾನ್ ಬ್ಯಾನೆಸ್ಟರ್, ವಿಲಿಯಂ ಕ್ಲೌಸಿನ ಪರಮ ಸ್ನೇಹಿತ. ಆಕ್ಸ್‌ಫರ್ಡ್‌ನಲ್ಲಿ ವ್ಯಾಸಂಗ ಮಾಡಿ, ೧೫೭೩ರಲ್ಲಿ ವೈದ್ಯಶಾಸ್ತ್ರದ ಪದವೀಧರನಾದನು. ನಾಟಿಂಗ್ಯಾಮ್‌ನಲ್ಲಿ ಕೆಲವು ದಿವಸವಿದ್ದು ೧೫೮೮ರಲ್ಲಿ ಲಂಡನ್ನಿಗೆ ಬಂದು, ರಾಣಿ ಎಲಿಸಬೆತ್ ಅಪ್ಪಣೆ ಮೇರೆ, ಔಷಧ ವೈದ್ಯರ ರಾಜ ವಿದ್ಯಾಶಾಲೆಯಿಂದ (ರಾಯಲ್ ಕಾಲೇಜ್ ಆಫ್ ಫಿಸಿಷಿಯನ್ಸ್) ಔಷಧವೈದ್ಯ ಮತ್ತು ಶಸ್ತ್ರವೈದ್ಯಗಳೆರಡರಲ್ಲೂ ವೃತ್ತಿ ನಡೆಸಲು ಅವಕಾಶ ಪಡೆದನು. ಅಂಗರಚನೆಶಾಸ್ತ್ರ ಬೋಧಿಸುತ್ತಿದ್ದ ಇವನ ಭಾವಚಿತ್ರ ಈಗಲೂ ವೆಲ್‌ಕಮ್ ವೈದ್ಯಚರಿತ್ರೆಯ ಸಂಗ್ರಹಾಲಯದಲ್ಲಿದೆ. ಇವನು ಬರೆದ ಅನೇಕ ಪುಸ್ತಕಗಳು ಸ್ವತಃ ಯೋಚನೆ ಮಾಡಿ ಬರೆದವಲ್ಲ, ಭಾಷಾಂತರವಾದವು.

ಶಸ್ತ್ರವೈದ್ಯ ಇತ್ತೀಚಿನ ವರೆವಿಗೂ, ಇಂಗ್ಲೆಂಡಿನಲ್ಲಿ,ವೈದ್ಯಶಾಸ್ತ್ರದ ಅಡಿಯಾಳಾಗಿತ್ತು. ಕ್ಲೌಸ್, ಗಾಲೆ ಮುಂತಾದವರು ವೈದ್ಯಶಾಸ್ತ್ರದಲ್ಲೂ, ಶಸ್ತ್ರವೈದ್ಯರೆಲ್ಲರೂ ಪಂಡಿತರಾಗಬೇಕೆಂದು ಪಟ್ಟ ಪ್ರಯತ್ನಗಳು ಸಫಲವಾಗಲಿಲ್ಲ. ಶಸ್ತ್ರವೈದ್ಯರಿಗೆ ಆಗ ವೈದ್ಯಶಾಸ್ತ್ರದ ಮೂಲತತ್ವಗಳು ಅವರಿಗೆ ಹಿಡಿಸಿರಲಿಲ್ಲ. ಅವರು ಕೇವಲ ಕೆಲಸಗಾರರು ಮಾತ್ರ ಆಗಿದ್ದರು.

ಸ್ಕಾಟ್ಲೆಂಡಿನ ಶಸ್ತ್ರವೈದ್ಯ

ವಿಲಿಯಂ ಶೆವೆಸ್

೧೫ನೇ ಶತಮಾನದ ವರೆವಿಗೂ ಸ್ಕಾಟ್ಲೆಂಡಿನ ಶಸ್ತ್ರವೈದ್ಯ ಅಷ್ಟು ಉತ್ತಮವಾಗಿರಲಿಲ್ಲ. ಆದರೆ ಸಂತ ಆಂಡ್ರೂಸ್‌ನಲ್ಲಿ ವಿಲಿಯಂ ಶೆವೆಸ್ (೧೪೨೮–೧೪೯೭) ಮಾತ್ರ ಸಾಮಾನ್ಯ ವೈದ್ಯವೃತ್ತಿಯಲ್ಲಿ ತೊಡಗಿದ್ದನು. ಮತಶಾಸ್ತ್ರದಲ್ಲಿ ಪ್ರವೀಣನಾಗಿದ್ದು ೧೪೮೭ರಲ್ಲಿ ಸ್ಕಾಟ್ಲೆಂಡಿನ ಕ್ರೈಸ್ತಮತದ ಪ್ರಧಾನ ಅಧಿಪತಿಯಾಗಿದ್ದನು. ೩ನೇ ಜೇಮ್ಸ್ ದೊರೆಗೆ ರಾಜವೈದ್ಯನೂ ಆಗಿದ್ದನು.

ಸ್ಕಾಟ್ಲೆಂಡಿನ ಶಸ್ತ್ರವೈದ್ಯ ಇಂಗ್ಲೆಂಡಿನಲ್ಲಿದ್ದ ಹಾಗೆ ಕೆಲಸಿ ಶಸ್ತ್ರವೈದ್ಯರ ಕೈಯಲ್ಲಿತ್ತು. ಇವರ ಎಡಿನ್‌ಬರೊ ಸಂಸ್ಥೆ ೧೫೦೬ರಲ್ಲಿ ೪ನೇ ಜೇಮ್ಸ್ ದೊರೆಯಿಂದ ಅಂಗೀಕೃತವಾಯಿತು. ಇದೇ ಸಂಸ್ಥೆ ೧೭೭೮ರಲ್ಲಿ ಎಡಿನ್‌ಬರೊ ಶಸ್ತ್ರವೈದ್ಯರ ರಾಜ ವಿದ್ಯಾಸಂಸ್ಥೆಯಾಯಿತು (ರಾಯಲ್ ಕಾಲೇಜ್ ಆಫ್ ಸರ್ಜನ್ಸ್). ಇದರ ಸದಸ್ಯರು ಅಂಗರಚನೆ, ಪ್ರಕೃತಿ, ದೇಹ ಸ್ವರೂಪ, ಸಿರಗಳ ನೆಲೆ, ನಕ್ಷತ್ರ ರಾಶಿ ಮತ್ತು ಅವುಗಳ ಪ್ರಭಾವಗಳೆಲ್ಲವನ್ನೂ ತಿಳಿದು ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕಾಗಿತ್ತು. ಪ್ರತಿಯೊಬ್ಬ ಶಸ್ತ್ರವೈದ್ಯನಿಗೂ ಓದಲೂ ಬರೆಯಲೂ ಬರಬೇಕಾಗಿತ್ತು. ಸಂಸ್ಥೆ ವರ್ಷ ಒಂದಕ್ಕೆ

ಮರಣ ಹೊಂದಿದ ಒಬ್ಬ ಅಪರಾಧಿಯ ಶವಪರೀಕ್ಷೆ ಮಾಡಬಹುದಾಗಿತ್ತು. ಆಶ್ಚರ್ಯಕರವಾಗಿ, ಸಂಸ್ಥೆ ವಿಸ್ಕಿಯನ್ನು ತಯಾರಿಸಿ ಮಾರಲೂ ಬಹುದಾಗಿತ್ತು. ಪ್ರತಿಯೊಬ್ಬ ಸದಸ್ಯನೂ ಸಂಸ್ಥೆಗೆ ಸೇರುವಾಗ ೪ ಪೌಂಡು ರುಸುಮು ಕೊಡಬೇಕಾಗಿತ್ತಲ್ಲದೆ, ಆಗಿನ ಸದಸ್ಯರಿಗೆಲ್ಲಾ ಒಂದು ಔತಣಕೂಟವನ್ನು ಏರ್ಪಡಿಸಬೇಕಾಗಿತ್ತು. ಆಗ್ಗೆ ಗಿಲ್ಬರ್ಟ್ ಪ್ರಿಂರೋಸ್ (೧೫೩೫-೧೬೧೬) ಸಂಸ್ಥೆಯ ಸಮರ್ಥ ಅಧ್ಯಕ್ಷನಾಗಿದ್ದನು. ಆದರೆ ಇವನು ಯಾವ ದಾಖಲೆಯನ್ನೂ ಇಡಲಿಲ್ಲ. ಸಭೆಗಳು ನಡೆದುದಕ್ಕೆ ಕೂಡ ದಾಖಲೆಯಿರಲಿಲ್ಲ.

ಪೀಟರ್ ಲೌವೆ

ಇದೇ ಕಾಲದಲ್ಲಿ ಗ್ರಂಥಕರ್ತ, ಗ್ಲಾಸ್ಗೊ ಪಟ್ಟಣದ ಪೀಟರ್ ಲಾವೆ (೧೫೫೦-೧೬೧೨) ತನ್ನ ಸ್ನೇಹಿತ ಗಿಲ್ಬರ್ಟ್ ಪ್ರಿಂರೋಸ್‌ನಿಗೆ ತಾನು ಬರೆದ ಶಸ್ತ್ರವೈದ್ಯದ ಮೊದಲ ಪುಸ್ತಕವನ್ನು ಮುಡುಪಾಗಿ ಅರ್ಪಿಸಿದ್ದನು. ಇದು ಇಂಗ್ಲೀಷಿನಲ್ಲೇ ಬರೆದಿತ್ತು. ಇವನು ಫ್ರಾನ್ಸಿನಲ್ಲಿ ವ್ಯಾಸಂಗಮಾಡಿ ಗ್ಲಾಸ್ಗೋ ಪಟ್ಟಣಕ್ಕೆ ಬಂದ ಮೇಲೆ, ವೈದ್ಯವೃತ್ತಿಯನ್ನು ಹಿಡಿದಿದ್ದವರಲ್ಲಿ ಸುವ್ಯವಸ್ಥಿತ ಸಂಘವಿಲ್ಲದ್ದನ್ನು ನೋಡಿ, ೬ನೇ ಜೇಮ್ಸ್ ದೊರೆಗೆ ಮೊರೆಯಿಟ್ಟು, ೧೫೯೯ರಲ್ಲಿ ಗ್ಲಾಸ್ಗೊ ಔಷಧ ವೈದ್ಯರ ಮತ್ತು ಶಸ್ತ್ರವೈದ್ಯ ಶಾಖೆಯೊಂದನ್ನು ತೆರೆಯಿಸಿದನು. ಇದು ೧೯೦೯ರಲ್ಲಿ ರಾಜಶಾಖೆಯಾಯಿತು. ಈ ಸಂಘದಲ್ಲಿ ವೈದ್ಯರೂ ಶಸ್ತ್ರವೈದ್ಯರೂ ಸದಸ್ಯರಾಗಿ ಈಗಲೂ ಕೆಲಸಮಾಡುತ್ತಿದ್ದಾರೆ. ಬಡಬಗ್ಗರಿಗೆ ಉಚಿತವಾಗಿ ಚಿಕಿತ್ಸೆ ಕೊಡಬೇಕೆಂಬ ಈ ಸಂಸ್ಥೆಯ ಧ್ಯೇಯ ಈಗ ಕಾರ್ಯಾಚರಣೆಯಲ್ಲಿ ಇಲ್ಲದಿದ್ದರೂ, ಮಾತಿನಲ್ಲಾದರೂ ನಡೆದುಕೊಂಡು ಬಂದಿದೆ. ಕಾರ್ಯಕ್ರಮ ಮುಗಿದ ಮೇಲೆ ಪ್ರತಿ ಸಲವೂ "ಬಡವರಿಗೆ ಪುಕ್ಕಟೆಯಾಗಿ ಚಿಕಿತ್ಸೆ ಮಾಡಲಾಯಿತಾಗಿ ವೈದ್ಯಸಭೆಯನ್ನು ಮುಂದುಹಾಕಲಾಗಿದೆ" ಎಂದು ಈಗಲೂ ಮುಕ್ತಾಯ ಮಾಡುವ ರೂಢಿ ಇದೆ.

ಲಂಡನ್ ಮತ್ತು ಎಡಿನ್‌ಬರೊ ಸಂಸ್ಥೆಗಳ ಹಾಗೆ ಇದೂ ಕೂಡ ಪರೀಕ್ಷೆ ಮಾಡಿ ತೇರ್ಗಡೆಯಾದವರನ್ನು ಮಾತ್ರ ಸದಸ್ಯರನ್ನಾಗಿ ಮಾಡಿಕೊಳ್ಳುವ ಪದ್ಧತಿ ಈಗಲೂ ಜಾರಿಯಲ್ಲಿದೆ. ೧೯ನೇ ಶತಮಾನದ ಮೊದಲ ಭಾಗದಲ್ಲಿ ಗ್ಲಾಸ್ಗೊ ವಿಶ್ವವಿದ್ಯಾಲಯ ತನ್ನ ವೈದ್ಯ ಪದವೀಧರರಿಗೆ ವೈದ್ಯವೃತ್ತಿಯನ್ನು ನಡೆಸಲು ಅಧಿಕಾರಕೊಡಲು ಗ್ಲಾಸ್ಗೊ ವೈದ್ಯರ ಸಂಸ್ಥೆ ಅಡ್ಡಿ ಬಂದು, ಗ್ಲಾಸ್ಗೊ ವೈದ್ಯರ ಸಂಸ್ಥೆಯ ಸದಸ್ಯರು ಮಾತ್ರ ವೈದ್ಯವೃತ್ತಿ ನಡೆಸಬಹುದೇ ಹೊರತು, ವಿಶ್ವವಿದ್ಯಾಲಯದವರು ನಡೆಸಬಾರದೆಂದು ಕೋರ್ಟಿನಿಂದ ತೀರ್ಪು ಪಡೆಯಿತು. ಇದಕ್ಕೆ ವಿರೋಧವಾಗಿ ವಿಶ್ವವಿದ್ಯಾಲಯ ಪಂಡಿತಪದವಿ ಪರೀಕ್ಷೆ ಆರಂಭಮಾಡಿ ಅದರ ಪದವೀಧರರು ವೈದ್ಯವೃತ್ತಿ ನಡೆಸಲು ಹಕ್ಕು ಪಡೆಯಲು ಯತ್ನಿಸಿದರು. ಇದಕ್ಕೂ ಗ್ಲಾಸ್ಗೊ ಸಂಸ್ಥೆ ಒಪ್ಪಲಿಲ್ಲ. ಸಂಸ್ಥೆಯ ಪರವಾಗಿಯೇ ಆಗಲೂ ಕೋರ್ಟು ತೀರ್ಪುಕೊಟ್ಟಿತು. ಹೀಗೆ ೧೪ ವರ್ಷಗಳು ಜಗಳವಾಡಿ, ಕೊನೆಗೆ ೧೮೫೮ರಲ್ಲಿ ವೈದ್ಯ ವೃತ್ತಿ ನಡೆಸಲು ಬೇಕಾದ ಹಕ್ಕನ್ನು ಸಾರ್ವತ್ರಿಕ ವೈದ್ಯರ ಮಂಡಲಿಗೆ ಒಪ್ಪಿಸಿದ ಮೇಲೆ, ವಾದ ವಿವಾದ ನಿಂತು, ಸ್ನೇಹಭಾವ ಹುಟ್ಟಿತು.

೨೩. ಔಷಧ ವೈದ್ಯಶಾಸ್ತ್ರದ ಬೆಳವಣಿಗೆ

ಶಸ್ತ್ರವೈದ್ಯದ ಪುನರುಜ್ಜೀವನಕ್ಕೆ ಆಂಬ್ರೋಸಿ ಪಾರೆಯಿಂದ ಹಿಡಿದು ಪೀಟರ್ ಲೌವೆ ವಶಿಲಿಗೆ ಶಸ್ತ್ರವೈದ್ಯರು ಹೇಗೆ ಪ್ರೋತ್ಸಾಹ ಕೊಟ್ಟರೋ, ಹಾಗೆಯೇ ವೈದ್ಯ ಶಾಸ್ತ್ರದಲ್ಲೂ ಶೋಧನೆ ನಡೆದು ಪ್ರೋತ್ಸಾಹ ಸಿಕ್ಕಿತ್ತು. ಆದರೂ ವಿಲಿಯಂ ಹಾರ್ವೆಯ ಕಾಲದ ತನಕ ಅತಿಶಯವಾದ ಜ್ಞಾನ ಸಂಪಾದನೆಯೇನೂ ಕಂಡುಬರಲಿಲ್ಲ. ವಾಸ್ತವ ವಾಗಿ ವಿಚಿತ್ರಬುದ್ಧಿಯ ಪ್ಯಾರಸೆಲ್ಸಸ್ ಹಳೆ ಪದ್ಧತಿಗಳನ್ನು ತಿರಸ್ಕರಿಸಿ, ಹೊಸ ರೀತಿ ಯಲ್ಲಿ ಪ್ರತಿಭಟನೆ ತೋರಿಸಿದ್ದನು. ಅಲ್ಲದೆ ಜೆರೋಮ್ ಕಾರ್ಡನ್ ಫ್ರಾಕಾಸ್ಟೋರಿ ಯಸ್, ಥಾಮಸ್ ಲಿನೇಕರ್, ಜಾನ್, ರೇಯಸ್ ಮುಂತಾದವರು ತಮ್ಮ ಶಕ್ತಿಗನು ಸಾರವಾಗಿ ವೈದ್ಯಶಾಸ್ತ್ರಕ್ಕೆ ಸಾಕಷ್ಟು ಕಾಣಿಕೆ ಒಪ್ಪಿಸಿದ್ದರು.

೧೩ನೇ ಶತಮಾನದಲ್ಲಿ ಕಂಡುಹಿಡಿದ ಮದ್ದು ಗುಂಡುಗಳು, ೧೬ನೇ ಶತ ಮಾನದ ಆದಿಯ ಯುದ್ಧಗಳಲ್ಲಿ ಹೆಚ್ಚು ಉಪಯೋಗವಾಗಿ, ಅಂಗಹೀನತೆಯ ಗಾಯ ಗಳ ಶಸ್ತ್ರಚಿಕಿತ್ಸೆಗೆ ಹೇಗೆ ಹೆಚ್ಚು ಗಮನ ಕೊಡಬೇಕಾಯಿತೋ ಹಾಗೆಯೇ ಆಗಾಗ್ಗೆ ಕಾಡುತ್ತಿದ್ದ ಪ್ಲೇಗು, ಬೆವರುಜ್ವರ, ಉಪದಂಶ (ಸಿಫಿಲಿಸ್) ರೋಗಗಳನ್ನು ತಡೆಯಲು ವೈದ್ಯಶಾಸ್ತ್ರಕ್ಕೂ ಅಷ್ಟೇ ಉತ್ತೇಜನ ಕೊಡಬೇಕಾಗಿ ಬಂತು.

ಉಪದಂಶ

೧೪೯೫ರಲ್ಲಿ ಫ್ರಾನ್ಸಿನ ದೊರೆ ೮ನೇ ಚಾರಲ್ಸ್ ಇಟಲಿಯ ನೇಪಲ್ಸ್ ಪಟ್ಟಣ ವನ್ನು ವಶಪಡಿಸಿಕೊಳ್ಳಲು ಮುತ್ತಿಗೆ ಹಾಕಿದಾಗ, ಈ ಭಯಂಕರವಾದ ಉಪ ದಂಶ (ಸಿಫಿಲಿಸ್) ಮೇಹರೋಗ ಸಾಂಕ್ರಾಮಿಕವಾಗಿ ಕಾಣಿಸಿಕೊಂಡು, ಶರೀರದ ಮೇಲೆ ದದ್ದುಗಳೂ, ಹುಣ್ಣುಗಳೂ ಎದ್ದುದಲ್ಲದೆ, ಶರೀರದ ಅಂಗಗಳು ಕೂಡ ನಾಶ ವಾಗಿ, ಅನೇಕ ಸಾವು ನೋವುಗಳಾದವು. ಉಳಿದವರಲ್ಲಿ ರೋಗ ವಾಸಿಯಾಯದೆ ಅನೇಕ ತೊಡರುಗಳಿಂದ ನರಳಬೇಕಾಗಿತ್ತು. ಕ್ರಿಸ್ಟೊಫರ್ ಕೊಲಂಬಸ್ ಅಮೆರಿಕವನ್ನು ಕಂಡು ಹಿಡಿದಾಗ, ಅವನ ನೌಕಾ ದಳದವರು, ಪಶ್ಚಿಮ ಇಂಡೀಸ್‌ನಿಂದ ಈ ರೋಗವನ್ನು ಸ್ಪೇಯಿನಿಗೆ ತಂದರೆಂದೂ, ಅಲ್ಲಿಂದ ನೇಪಲ್ಸ್ ಪಟ್ಟಣದಲ್ಲಿದ್ದ ಸ್ಪೆಯಿನ್ ಜನರಿಗೆ ಹಬ್ಬಿತೆಂದೂ, ಅನಂತರ ನೇಪಲ್ಸ್ ಪಟ್ಟಣವನ್ನು ಮುತ್ತಿಗೆ ಹಾಕಿದ ಫ್ರೆಂಚ್ ಸೈನ್ಯಕ್ಕೆ ಹರಡಿತೆಂದೂ ನಂಬಲಾಗಿದೆ. ಕೆಲವು ದಿವಸಗಳಲ್ಲೇ ಯೂರೋಪಿನ ಎಲ್ಲಾ ಭಾಗಗಳಿಗೂ ಹರಡಿ ಭಯಂಕರ ಪರಿಣಾಮಗಳುಂಟಾದವು. ಈ ರೋಗವನ್ನು ಫ್ರೆಂಚರು ನೇಪಲ್ಸ್ ರೋಗವೆಂದೂ, ಸ್ಪೆಯಿನ್ ಜನರು ಫ್ರೆಂಚ್ ರೋಗವೆಂದೂ ನಾಮಕರಣ ಮಾಡಿದ್ದರು. ಆದರೆ ಫ್ರಾಕಾಸ್ಟೋರಿಯಸ್ ಮೊಟ್ಟಮೊದಲಿಗೆ ಈ ರೋಗಕ್ಕೆ ಸಿಫಿಲಿಸ್ ಎಂದು ಹೆಸರು ಕೊಟ್ಟನು. ಈಗಲೂ ಅದೇ ಹೆಸರು ನಿಂತಿದೆ.

ಫ್ರಾಕಾಸ್ಟೋರಿಯಸ್

ಫ್ರಾಕಾಸ್ಟೋರಿಯಸ್ (೧೪೮೩-೧೫೫೩) ವೈದ್ಯವನ್ನು ತನ್ನ ವೃತ್ತಿಯನ್ನಾಗಿ ಅವಲಂಬಿಸಿದುದಲ್ಲದೆ, ಗಣಿತಶಾಸ್ತ್ರ, ಭೂಗರ್ಭಶಾಸ್ತ್ರ, ಜ್ಯೋತಿಷ್ಯ ಮುಂತಾದವೆಲ್ಲವನ್ನೂ ಕಲಿತು ಪಾಂಡಿತ್ಯ ಹೊಂದಿದ್ದನು. ಅಲ್ಲದೆ ಸಂಗೀತ ಮತ್ತು ಕಾವ್ಯ ವೆಂದರೆ ಇವನಿಗೆ ಬಹಳ ಇಷ್ಟ. ಇವನು ಉಪದಂಶ ಕುರಿತು ಬರೆದಿದ್ದ ಪದ್ಯ ಸ್ವಾರಸ್ಯವಾಗಿತ್ತು. ಅದು ಇವನ ಮೊದಲನೆಯ ಕಾವ್ಯ. ಈ ಪದ್ಯದಲ್ಲಿ ಕಾಲ್ಪನಿಕ ವ್ಯಕ್ತಿಯಾದ ಸಿಫಿಲಸ್ ಎಂಬುವನು ಅಧಾರ್ಮಿಕ ಕೆಲಸದಲ್ಲಿ ತೊಡಗಿ, ದೇವರ ಶಾಪಕ್ಕೆ ಒಳಗಾಗಿ ಈ ಮೇಹ ರೋಗವನ್ನು ಸಂಪಾದಿಸಿದನೆಂದು ಹೇಳಿದೆ.



ಗಿಕೊಲಾ ವೊಫ್ರಕಾ ಸ್ಟೋರಿಸ್
(೧೪೭೮-೧೫೫೩)

ಅವನಿಗೆ ಹತ್ತಿದ ಗಡ್ಡೆಗಳು ನೋಡಲು ಭಯಂಕರ. ಮೊದಲು ವಿಚಿತ್ರ ನೋವು ತಿಂದ, ನಿದ್ದೆ ಬಾರದ ರಾತ್ರಿಗಳ ಕಳೆದ ಬೇನೆಗೆ ಹೆಸರು ಅವನಿಂದ ಬಂದಿತು. ಅಕ್ಕಪಕ್ಕದ ಕುರುಬರಿಗೂ ಹರಡಿದ ಬೆಂಕಿ ತಾಕಿತು.

ಈ ಪದ್ಯದಲ್ಲಿ ಕಥೆ ಇಲ್ಲದಿದ್ದರೂ, ಸಿಫಿಲಸ್ ಎಂಬುವನು ನರಳಿದ ರೋಗಕ್ಕೆ ಸಿಫಿಲಿಸ್ ಎಂದು ಹೆಸರು ಬಂದದ್ದು ತಿಳಿಯುತ್ತದೆ.

ಫ್ರಾಕಾಸ್ಟೋರಿಯಸ್ ಪಾಡ್ವ ವಿಶ್ವವಿದ್ಯಾಲಯದ ಪದವೀಧರನಾದ ಮೇಲೆ ಅಂಗರಚನಶಾಸ್ತ್ರದಲ್ಲಿ ಪ್ರಾಧ್ಯಾಪಕನಾಗಿದ್ದನು. ೧೫೩೦ರಲ್ಲಿ ಪ್ರಕಟವಾದ ಇವನ ಸಿಫಿಲಿಸ್ ಸಿವ್ ಮಾರ್ಬಸ್ ಗ್ಯಾಲಿಕಸ್ ಎಂಬ ಪದ್ಯ ನೂರಾರು ಪ್ರಕಟಣೆಗಳಿಗೊಳಗಾಗಿ, ಇಂಗ್ಲೀಷ್, ಜರ್ಮನ್, ಸ್ಪಾನಿಷ್ ಮುಂತಾದ ಭಾಷೆಗಳಿಗೆ ಭಾಷಾಂತರವಾಯಿತು. ಇವನು ಅಂಟುರೋಗಗಳನ್ನು ಕುರಿತೂ ೧೫೪೬ರಲ್ಲಿ ಬರೆದು ಪ್ರಕಟಿಸಿದ್ದನು. ಇದರಲ್ಲಿ ಸೋಂಕು, ಅದು ತಗಲುವ ರೀತಿ ಮತ್ತು ಹಬ್ಬುವಿಕೆಗಳನ್ನು ವಿವರಿಸಿದೆ. ೩ ವಿಧಗಳಲ್ಲಿ ಸೋಂಕು ತಗಲುವ ರೀತಿಗಳನ್ನು ತಿಳಿದಿದ್ದನು. ಸಂಪರ್ಕ, ಅಂಟು ಪದಾರ್ಥಗಳು, ಗಾಳಿ ಇವುಗಳ ಮೂಲಕ ಹರಡುತ್ತದೆಂದು ವಿವರಿಸಿದನು. ಈ ಪುಸ್ತಕದ ಎರಡನೇ ಭಾಗದಲ್ಲಿ, ಜ್ವರ, ಸಿಡುಬು, ಸೊಕ್ಕಿನ (ಟೈಫಸ್) ಜ್ವರ, ಬೆವರು ಜ್ವರ, ಗೋಣಿತಟ್ಟು, ಕ್ಷಯ, ಹೆಕಲಿ (ರೇಬೀಸ್), ಉಪದಂಶ, ಕುಷ್ಠ, ಕಜ್ಜಿ

ಮುಂತಾದ ರೋಗಗಳನ್ನೆಲ್ಲಾ ವಿವರಿಸಿದ್ದನು. ಸಂಭೋಗದಿಂದ ಉಪದಂಶ ಹೆತ್ತುತ್ತ ದೆಂದು ಹೇಳಿದ್ದಲ್ಲದೆ, ತಾಯಿಯಿಂದ ಮಗುವಿಗೆ ಹರಡುವ ರೀತಿಯನ್ನೂ ತಿಳಿಸಿದನು. ಅಂಟುಜಾಡ್ಯಗಳು ಸೂಕ್ಷ್ಮಜೀವಿಗಳಿಂದ ಉತ್ಪತ್ತಿಯಾಗುತ್ತವೆಂದು, ಸೂಕ್ಷ್ಮ ದರ್ಶಕ ಯಂತ್ರ ಬರುವುದಕ್ಕೆ ತೀರಾ ಮೊದಲೇ ಊಹೆಮಾಡಿದ್ದನು.ಇವನ ಊಹೆಗಳ ಮಹತ್ವ, ಅನೇಕ ಶತಮಾನಗಳಾದ ಮೇಲೆ ತಿಳಿದುಬಂದು ಇವನನ್ನು ಅಂಟುರೋಗ ಶಾಸ್ತ್ರದ ಮೂಲಪುರುಷನೆಂದು ಭಾವಿಸಿದರು. ಇವನ ಮರಣದಿಂದ ಪ್ರಪಂಚಕ್ಕೆ ನಷ್ಟವಾದುದೇನಾಶ್ಚರ್ಯವಲ್ಲ. ಇವನ ಜ್ಞಾಪಕಾರ್ಥವಾಗಿ ವೆರೋನ ಪಟ್ಟಣದ ಮುಖ್ಯ ಚೌಕದಲ್ಲಿ ಇವನ ಪ್ರತಿಮೆಯನ್ನು ನಿಲ್ಲಿಸಿ ಗೌರವ ಸಲ್ಲಿಸಲಾಗಿದೆ.

ಪ್ಯಾರಸೆಲ್ಸಸ್

ಪ್ಯಾರಸೆಲ್ಸಸ್ (೧೪೯೦-೧೫೪೧) ಎಂಬ ವಿಚಿತ್ರ ವೈದ್ಯ,ವಿಲಿಯಂ ಆಸ್ಲರ್‌ನಿಂದ 'ವೈದ್ಯಶಾಸ್ತ್ರದ ಲೂತರ್' ಎಂದು ಹೆಸರು ಪಡೆದಿದ್ದರೂ ಅನೇಕರು ಅವನಿಗೆ ಸಾಕಷ್ಟು ಮರ್ಯಾದೆ ಕೊಟ್ಟಿರಲಿಲ್ಲ. ಇವನು ಜೂರಿಚ್ ಹತ್ತಿರದ ಹಳ್ಳಿಯಲ್ಲಿ ಜನಿಸಿ, ಬಾಸೆಲ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದ್ದನೆಂದು ತಿಳಿದುಬಂದಿದೆ. ವೈದ್ಯ ವೃತ್ತಿಯಲ್ಲಿದ್ದ ಇವನ ತಂದೆ ಅದೇ ಊರಿನ ಆಸ್ಪತ್ರೆಯ ದಾದಿಯರ ಅಬ್ಬೆಯನ್ನು ಮದುವೆಯಾದ್ದರಿಂದ, ಇವನ ಕುಲ ಕೀಳೆಂದು ಭಾವಿಸಿ, ಇವನನ್ನು ಪ್ಯಾರಿಸ್ಸಿನ ವೈದ್ಯರ ಸಂಸ್ಥೆಯ ಸದಸ್ಯನಾಗಲು ಸೇರಿಸಲಿಲ್ಲ. ಇವನ ನಡವಳಿಕೆಗಳು ಹಿತವಾಗಿಲ್ಲ ದ್ದರಿಂದ ಇವನು ಅನೇಕರಿಗೆ ವೈರಿಯಾಗಿದ್ದನು. ಸತ್ತಮೇಲೂ ಇವನನ್ನು ಸಾಧಾರಣ ವೈದ್ಯನೆಂದೂ, ಕುಖ್ಯಾತ ಬಡಾಯಿಗಾರನೆಂದೂ, ಕುಡಿದು ಅಮಲೇರಿದ ನಟನೆಗಾರ ನೆಂದೂ ಅನೇಕರು ನಿಂದಿಸಿದ್ದರು. ಕೆಲವರು ಮಾತ್ರ ನಿಂದಿಸದೆ, ಅವನಿಗೆ ಜ್ಞಾನ ಸರಿಯಿರಲಿಲ್ಲವೆಂದು ಹೇಳಿದ್ದರು. ಅವನ ಬರವಣಿಗೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲದ್ದರಿಂದಲೂ, ಅವನ ತತ್ವಗಳು ಜಟಿಲವಾಗಿದ್ದುದರಿಂದಲೂ, ಅವನ ಲೇಖನಗಳು ಇಂಗ್ಲೀಷ್ ಭಾಷೆಯಲ್ಲಿಲ್ಲದ್ದರಿಂದಲೂ ಸಾಮಾನ್ಯರಿಗೆ ಅವನನ್ನು ತಿಳಿದು ಕೊಳ್ಳಲು ಕಷ್ಟವಾಗಿತ್ತೆಂದು ಡಗ್ಲಾಸ್ ಗುತ್ರೀ ತಿಳಿಸಿದ್ದಾನೆ.

ಪ್ಯಾರಸೆಲ್ಸಸ್ ಸಂಚಾರ

ಇವನಿಗೆ ಎಳೆತನದಿಂದಲೂ ರಸಾಯನಶಾಸ್ತ್ರ ಮತ್ತು ಖನಿಜಶಾಸ್ತ್ರಗಳಲ್ಲಿ ಅಭಿರುಚಿಯಿದ್ದು, ದೇಶಸಂಚಾರದಿಂದ ಜ್ಞಾನಾರ್ಜನೆ ಉಂಟಾಗುತ್ತದೆಂದು ಹೇಳಿ ತನ್ನ ೨೦ನೇ ವಯಸ್ಸಿನಲ್ಲೇ ಹೊರಟು ೧೨ ವರ್ಷಗಳ ಕಾಲ ಯುರೋಪಿನಲ್ಲೆಲ್ಲಾ ಸಂಚರಿಸಿದ್ದನು. ಆಗ ಮಾಂಟ್‌ಪೆಲ್ಲಿಯರ್, ಬೊಲೋನ, ಪಾಡ್ವಗಳಲ್ಲಿ ಸ್ವಲ್ಪ ಕಾಲ ವಿದ್ಯಾಭ್ಯಾಸಮಾಡಿ, ನಂತರ ಫ್ರಾನ್ಸ್, ಸ್ಪೇಯಿನ್, ಸ್ವೀಡನ್, ರಷ್ಯ, ತುರ್ಕಿ ಗಳಿಗೆ ಭೇಟಿ ಕೊಟ್ಟಿದ್ದನು. ಹಾಲೆಂಡಿನಲ್ಲಿದ್ದಾಗ ಸೈನ್ಯಕ್ಕೂ ಸೇರಿದ್ದನು. ಹೀಗೆ ಊರೂರು ಸುತ್ತುತ್ತಿರುವಾಗ ಬರೆಯುವುದರಲ್ಲೂ, ಉಪನ್ಯಾಸ ಮಾಡುವುದರಲ್ಲೂ

ತೊಡಗಿದ್ದನು. ಜ್ಞಾನಾರ್ಜನೆಯನ್ನು ಮುಗಿಸಿ, ಸ್ವಿಟ್ಸರ್ಲೆಂಡಿಗೆ ೧೫೨೬ರಲ್ಲಿ ಹಿಂತಿರುಗಿದಾಗ, ಇರಾಸ್ಮಸ್ಸಿನ ಪ್ರಭಾವದಿಂದ ಬಾಸೆಲ್ ಪಟ್ಟಣದಲ್ಲಿ ವೈದ್ಯನಾಗೂ ಬಾಸೆಲ್



ಸದಾ ಸಂಚಾರಿ ಪ್ಯಾರಸೆಲ್ಸಸ್ ಅನುಭವವಿಲ್ಲದೆ ವೈದ್ಯ ಮಾಡುವುದನ್ನು ಖಂಡಿಸಿದ್ದನು.

ವಿಶ್ವವಿದ್ಯಾಲಯದ ವೈದ್ಯಶಾಸ್ತ್ರದ ಅಧ್ಯಾಪಕನಾಗೂ ನೇಮಕವಾದನು. ಇಲ್ಲಿ ಸೈರಿಸದಂತಹ ಅವನ ನಡವಳಿಕೆಗಳಿಂದಲೂ, ಅಧಿಕಾರಿಗಳಿಗೆ ವಿರುದ್ಧವಾಗಿ ಲ್ಯಾಟನ್ನಿನಲ್ಲಿ ಉಪನ್ಯಾಸ ಮಾಡದೆ, ಜರ್ಮನ್ ಭಾಷೆಯಲ್ಲಿ ಮಾಡಿದ್ದರಿಂದಲೂ, ತಾನೇ ತಯಾರಿಸಿದ ಔಷಧಗಳನ್ನು ಉಪಯೋಗಿಸಿದ್ದರಿಂದಲೂ, ಮೇಲಾಗಿ ಹಿಂದಿನ ವೈದ್ಯ ಪಿತಾಮಹರ ಮತ್ತು ಸಹೋದ್ಯೋಗಿಗಳ ಪದ್ಧತಿಗಳನ್ನು ಹೀಯಾಳಿಸುತ್ತಿದ್ದರಿಂದಲೂ ಬಹು ಬೇಗ ಎಲ್ಲರೂ ಇವನ ವಿರೋಧಿಗಳಾದರು. ಅಲ್ಲದೆ ತಾನು ಉಪನ್ಯಾಸ ಮಾಡುವ ಮೊದಲು, ಗ್ಯಾಲೆನ್ ಮತ್ತು ಅವಿಸೆನ್ನ ಬರೆದಿದ್ದ ಗ್ರಂಥಗಳನ್ನು ಸುಟ್ಟು ಅವರನ್ನು ತುಚ್ಛವಾಗಿ ಹೀಯಾಳಿಸುತ್ತಿದ್ದನು. "ಗ್ಯಾಲೆನ್ ಇಲ್ಲವೇ ಅವಿಸೆನ್ನನಿಗಿಂತಲೂ ನನ್ನ ಕಾಲುಜೋಡುಗಳ ಕೊಂಡಿಗಳೇ ಎಷ್ಟೋ ವಿದ್ವತ್ಪೂರ್ಣವಾಗಿವೆ" ಎಂದು ಹೇಳಿದ್ದನು.

ಪ್ಯಾರಸೆಲ್ಸಸಿನ ಸರಿಯಾದ ಹೆಸರು ಫಿಲಿಪ್ಪಸ್ ಆರಿಯೊಲಸ್ ಥಿಯೋಫ್ರಾಸ್ಟಸ್ ಬೊಂಬಾಸ್ಟಸ್ ವಾನ್ ಹೊಹೆನ್‌ಹೇಮ್ ಎಂದು. ಸೆಲ್ಸಸ್ ಎಂಬ ಮಹಾಪುರುಷನಿಗೆ ಸಮಾನನೆಂದು ತೋರಿಸಲು, ಪ್ಯಾರ-ಸೆಲ್ಸಸ್ ಎಂದು ತಾನೇ ಹೆಸರಿಟ್ಟುಕೊಂಡನು. ಅವನ ಈ ಹೆಸರೇ ಪ್ರಪಂಚದಲ್ಲೆಲ್ಲಾ ವಿಶೇಷವಾಗಿ ಪರಿಚಯವಾಗಿರುವುದು. ಇವನಿಗೆ ಮಖಮಲ್ಲಿನ ಉಡುಗೆ ಸರಿಹೋಗದೆ ಸಾಧಾರಣ ಉಡುಪನ್ನು

ಧರಿಸುತ್ತಿದ್ದನು. ಯಾವಾಗಲೂ ತನ್ನ ಪಕ್ಕದಲ್ಲೇ ಒಂದು ಕತ್ತಿಯನ್ನು ಪ್ರದರ್ಶಿಸುತ್ತಿದ್ದನು. ಕೇವಲ ಎರಡು ವರ್ಷಗಳಲ್ಲೇ ಇಷ್ಟೊಂದು ವಿರೋಧ ಬೆಳೆದು, ಸಂಬಳದ ವಿಷಯದಲ್ಲಿ ಜಗಳ ಬಂದು ಪ್ಯಾರಸೆಲ್ಸಸ್ ಬಾಸೆಲ್ ಪಟ್ಟಣವನ್ನು ಬಿಟ್ಟು ಪುನಃ ದೇಶ ಸಂಚಾರ ಹೊರಟನು. ಅವನು ಎಲ್ಲೇ ಹೋಗಲಿ, ಎಷ್ಟೇ ವಿರೋಧವಿರಲಿ, ಬಹುಬೇಗ ಪ್ರಖ್ಯಾತಿ ಸಂಪಾದಿಸುತ್ತಿದ್ದನು. ಹೀಗೆ ಊರೂರು ತಿರುಗಿ, ಬಳಲಿ, ಆಯಾಸಗೊಂಡು, ಚಿನ್ನಕ್ಕೂ ಅಲ್ಲ ಪದವಿಗೂ ಅಲ್ಲ, ಆದರೆ ಜ್ಞಾನ ಮತ್ತು ಸತ್ಯಕ್ಕಾಗಿ ಸುತ್ತಾಡುತ್ತಾ, ಕೊನೆಗೆ ೧೫೪೧ರಲ್ಲಿ ಸಾಲ್ಸಬರ್ಗ್ ಪಟ್ಟಣವನ್ನು ಸೇರಿದನು. ಅಲ್ಲಿಗೆ ಪ್ರಯಾಣವೂ ನಿಂತಿತು. ೧೫೪೧ರ ಸೆಪ್ಟೆಂಬರ್ ೨೪ರಲ್ಲಿ ಮರಣವೂ ಸಂಭವಿಸಿತು.

ಪ್ಯಾರಸೆಲ್ಸಸ್ಸಿನ ಬರವಣಿಗೆ

ಯಾರು ಏನೇ ಹೇಳಿದರೂ, ಪ್ಯಾರಸೆಲ್ಸಸ್ ಪುನರುಜ್ಜೀವನ ಕಾಲದ ಯಶಸ್ವಿಯಾದ ಬರಹಗಾರನೇ ಸರಿ. ಅವನು ಬರೆದ ಗ್ರಂಥಗಳು ಅವನು ಜೀವಂತನಾಗಿರುವಾಗ ಅಷ್ಟಾಗಿ ಪ್ರಕಟವಾಗಲಿಲ್ಲ. ಸತ್ತ ೨೦ ವರ್ಷಗಳ ವರೆವಿಗೂ ಅವನ ಲೇಖನಗಳು ಯಾರಿಗೂ ಅರ್ಥವಾಗುವುದಿಲ್ಲವೆಂದು ಅವನೇ ಹೇಳಿರುವಂತೆ, ಬಹಳ ವರ್ಷಗಳು ಪ್ರಕಟವಾಗದೆ, ೧೫೮೯ರಲ್ಲಿ ಬಾಸೆಲ್ಲಿನ ಜೆ. ಹೂಸರ್ ಪ್ಯಾರಸೆಲ್ಸಸ್ಸಿನ ಗ್ರಂಥಗಳನ್ನು ಮೊಟ್ಟಮೊದಲಿಗೆ ಹೊರಗೆಡಹಿದನು. ಕೆಲವು ಬರಹಗಾರರು ತಾವು ಬರೆದ ಗ್ರಂಥಗಳನ್ನು ಪ್ಯಾರಸೆಲ್ಸಸ್ ಬರೆದನೆಂದೂ ಹೇಳಿದರು. ಅದರಲ್ಲೂ ಇಂಗ್ಲೆಂಡ್, ಜರ್ಮನಿಗಳಲ್ಲಿ ಇದಕ್ಕೆ ಪ್ರೋತ್ಸಾಹವಿತ್ತು, ಪ್ಯಾರಸೆಲ್ಸಸ್ಸಿನ ಬರವಣಿಗೆಗಳನ್ನು ಬಹಳವಾಗಿ ಪ್ರಚುರಪಡಿಸಿದ್ದರು. ರಾಬರ್ಟ್ ಫ್ಲಡ್ (೧೫೭೪–೧೬೩೭) ಈ ಕಾರ್ಯದಲ್ಲಿ ಮುಖ್ಯ ಪಾತ್ರ ವಹಿಸಿದ್ದನು. ಸುರಮಾ ಲೋಹದ ಉಪಯೋಗವನ್ನು ಕುರಿತು ಬರೆದವರ್ಯಾರೆಂಬುದನ್ನು ನಿಶ್ಚಯಿಸಲು ನೂರಾರು ವರ್ಷಗಳು ಹಿಡಿದವು. ಬೇಸಿಲ್ ವ್ಯಾಲೆಂಟೈನ್ ಎಂಬ ಪಾದ್ರಿ ೧೫ನೇ ಶತಮಾನದಲ್ಲೇ ಸುರಮಾವನ್ನು ಕಂಡುಹಿಡಿದು, ಅದರ ವಿಚಾರವಾಗಿ ಬರೆದಿದ್ದನೆಂದು ಕಥೆ ಕಟ್ಟಲಾಗಿತ್ತು. ಇದರ ಪ್ರಕಾರ ಬೇಸಿಲ್ ರಸತಂತ್ರದಲ್ಲೂ, ವೈದ್ಯಶಾಸ್ತ್ರದಲ್ಲೂ, ಜ್ಯೋತಿಷ್ಯದಲ್ಲೂ ಪಂಡಿತನಾಗಿದ್ದನೆಂದೂ ಅವನು ಸುರಮಾವನ್ನು ಹಂದಿಗಳಿಗೆ ಕೊಟ್ಟಾಗ ಅವು ದಪ್ಪವಾದ್ದನ್ನು ನೋಡಿ,ಈ ಸಾಧ್ಯತೆಯನ್ನು ದೃಢಪಡಿಸಲು ತನ್ನ ಸಹೋದರ ಸನ್ಯಾಸಿಗಳಿಗೆ ಕೊಡಲು ಅನಾಹುತವಾಯಿತೆಂದು ಹೇಳಲಾಗಿದೆ. ಆದ್ದರಿಂದಲೇ ಈ ಲೋಹಕ್ಕೆ ಸನ್ಯಾಸಿ ಹಾರಿ ಎಂದು ಹೆಸರು ಬಂದಿತೆಂದೂ ಹೇಳಲಾಗಿದೆ. ಸಾಕಷ್ಟು ಚರ್ಚೆ ನಡೆದು ಪ್ಯಾರಿಸ್ಸಿನ ವೈದ್ಯರ ಸಂಘ ೧೫೬೬ರಲ್ಲಿ ಸುರಮಾ ವಿಷವೆಂದೂ ಅದನ್ನು ಉಪಯೋಗಿಸಬಾರದೆಂದು ಬಹಿರಂಗ ಪಡಿಸಿದರು.ಅನಂತರ ಪ್ಯಾರಿಸ್ಸಿನ ಪಾರ್ಲಿಮೆಂಟು ಕೂಡ ಇದರ ಉಪಯೋಗವನ್ನು ಖಂಡಿಸಿತು. ಇಷ್ಟಾದರೂ ಅದನ್ನು ಉಪಯೋಗಿಸುವುದನ್ನು ಅನೇಕರು ನಿಲ್ಲಿಸಲಿಲ್ಲ. ಆಗಿನ ನಂಬಿಕೆ ಪ್ರಕಾರ ಸುರಮಾ ಸರ್ವರೋಗ ನಿವಾರಣೆಯಾಗಿತ್ತೆಂದೂ,

ಕುಷ್ಠ, ಉಪದಂಶ, ಮೂರರ ಜ್ವರ, ನಾಲ್ಕರ ಜ್ವರ, ಮುಂತಾದ ರೋಗಗಳಿಗೆ ಉಪಯೋಗಿಸುತ್ತಿದ್ದುದಲ್ಲದೆ, ಬುದ್ಧಿ ವಿಕಾಸಕ್ಕೂ ಎದೆನೋವಿಗೂ ಕಟ್ಟುಸರಿಗೂ ಬಳಸಲಾಗುತ್ತಿತ್ತು.

'ಸುರವಮೂದ ವಿಜಯೋತ್ಸಾಹದ ರಥ' (೧೬೦೪) ಎಂಬ ಪುಸ್ತಕದ ಹಕ್ಕನ್ನು ಬೇಸಿಲ್ ವ್ಯಾಲೆಂಟೈನಿನಿಂದ ಪ್ಯಾರಸೆಲ್ಸಸ್ ಪಡೆದನೆಂದು ಕೆಲವರು ವೈದ್ಯರು ನಂಬಿದ್ದರೂ ಅನೇಕರು ಈ ಹಕ್ಕು ಪ್ಯಾರಸೆಲ್ಸಸ್ಸಿಗೆ ಸೇರಬೇಕೆಂದೂ, ಪ್ಯಾರಸೆಲ್ಸಸ್ಸಿನಿಂದ, ಜೊಹನ್ ತೊಲ್ಡೆ ಮೋಸದಿಂದ ತನ್ನದಾಗಿ ಮಾಡಿಕೊಂಡು, ಬೇಸಿಲ್ ವ್ಯಾಲೆಂಟೈನಿನ ನಾಮಾಂಕಿತದಲ್ಲಿ ಪ್ರಕಟ ಮಾಡಿದನೆಂದೂ ಹೇಳಲಾಗಿದೆ.

ಪ್ಯಾರಸೆಲ್ಸಸ್ಸಿನ ತರ್ಕ

ಪ್ಯಾರಸೆಲ್ಸಸ್ ರೂಪಿಸಿದ ತತ್ವಗಳು ಬಹಳ ವಿಚಿತ್ರವಾಗಿದ್ದವೆಂದು ಎಲ್ಲರ ಭಾವನೆ. ಆಗಿನ ವಿದ್ವಾಂಸರೂ ಅದೇ ಅಭಿಪ್ರಾಯದಲ್ಲಿದ್ದರು. ಪ್ಯಾರಸೆಲ್ಸಸ್ ಬರೆದಿರುವ 'ಪ್ಯಾರಮಿರಮ್' ಪ್ರಕಾರ ಗಂಧಕ, ಪಾದರಸ ಮತ್ತು ಸುಣ್ಣಗಳಿಂದ ಮನುಷ್ಯನ ಶರೀರ ನಿರ್ಮಾಣವಾಗಿದೆಯೆಂದೂ, ಇವುಗಳ ಪ್ರಮಾಣ ಮತ್ತು ಗುಣಗಳಿಂದ ಶರೀರದ ಅಂಗಾಂಗಗಳು ಕೆಲಸಮಾಡುತ್ತವೆಂದೂ, ಇವುಗಳ ವ್ಯತ್ಯಾಸದಿಂದ ರೋಗ ಬರುತ್ತದೆಂದೂ ಯಾವುದಾದರೂ ಒಂದರಿಂದ ರೋಗ ಗುಣವಾಗುತ್ತದೆಂದು ತಿಳಿಯುತ್ತದೆ. ತತ್ವಶಾಸ್ತ್ರ, ಜ್ಯೋತಿಷ್ಯ, ರಸತಂತ್ರ ಮತ್ತು ಸದ್ಗುಣಗಳೆಂಬ ನಾಲ್ಕು ಆಧಾರಸ್ಥಂಬಗಳ ಅಧೀನದಲ್ಲಿ ವೈದ್ಯಶಾಸ್ತ್ರ ನಿಂತಿದೆಯೆಂದೂ, ತತ್ವಶಾಸ್ತ್ರ ವೈದ್ಯಶಾಸ್ತ್ರಕ್ಕೆ ಹೆಬ್ಬಾಗಿಲಂತಿದೆಯೆಂದೂ, ತತ್ವಶಾಸ್ತ್ರವನ್ನು ಬಿಟ್ಟು ಬೇರೆ ದಾರಿಯಿಂದ ವೈದ್ಯ ಕಲಿತವರೆಲ್ಲರೂ ಕಳ್ಳರು ಅಥವ ಕೊಲೆಗಾರರೆಂದೂ, ಜ್ಯೋತಿಷ್ಯ ರೋಗ ಚಿಕಿತ್ಸೆಗೆ ಅತ್ಯಗತ್ಯವೆಂದೂ, ರಸತಂತ್ರ ಔಷಧಗಳನ್ನು ತಯಾರಿಸಲು ಮೂಲಸ್ಥಾನವೆಂದೂ, ಸದ್ಗುಣ ಎಲ್ಲಕ್ಕಿಂತಲೂ ಮಿಗಿಲಾದ ಮೂಲ ನಡತೆಯೆಂದೂ ಉಪದೇಶಿಸಿದ್ದನು, ಶವ ಪರೀಕ್ಷೆಯಿಂದ ಜ್ಞಾನ ಸಂಪಾದನೆ ಆಗುವುದಿಲ್ಲವೆಂದೂ ದೇವರಲ್ಲಿ ಭಕ್ತಿ ಇಟ್ಟು, ದೇವರಿಗೆ ಅಂಜಿ ನಡೆದರೆ ಮಾತ್ರ ಜ್ಞಾನಾರ್ಜನೆ ಉಂಟಾಗುತ್ತದೆಂದೂ ನಂಬಿದ್ದನು. ಚಿಕಿತ್ಸೆ ಸಂಬಂಧವಾಗಿ ಚರ್ಚಿಸುತ್ತ, ಮನುಷ್ಯನ ಅಂಗಗಳ ಆಕಾರವನ್ನು ಹೋಲುವ ವಸ್ತುಗಳಿಂದ ಅಂಗಗಳ ರೋಗ ಗುಣವಾಗುತ್ತದೆಂದು ನಂಬಿದ್ದನು. ಕಿವಿ ಆಕಾರವಿರುವ ಸೈಕ್ಲಮೀನ್ ಗಿಡದ ಎಲೆಯನ್ನು ಕಿವಿ ರೋಗಕ್ಕೆ ಉಪಯೋಗಿಸಬಹುದೆಂದೂ, ಹಳದಿ ಬಣ್ಣದ ವಸ್ತುಗಳನ್ನು ಹಳದಿ ಕಾಮಾಲೆಗೆ ಉಪಯೋಗಿಸಬಹುದೆಂದೂ, ನರಿ ಶ್ವಾಸಕೋಶವನ್ನು ಶ್ವಾಸಕೋಶದ ರೋಗಕ್ಕೆ ಉಪಯೋಗಿಸಬಹುದೆಂದೂ ತಿಳಿಸಿದ್ದನು, ಇಷ್ಟಾದರೂ ಕಬ್ಬಿಣ, ಸುರಮಾ, ಖನಿಜಗಳ ಉಪ್ಪು ಮುಂತಾದವುಗಳನ್ನು ಔಷಧ ವಸ್ತುಶಾಸ್ತ್ರಕ್ಕೆ ಸೇರಿಸಿದವನೇ ಇವನು. ಮೊಲಲ್ಲಾಗರ, ಹುಚ್ಚು, ಸಂತ ಪೀಟರ್‌ನ ಕುಣಿತ ಮುಂತಾದ ರೋಗಗಳೆಲ್ಲಾ ಆತನಿಗೆ ಗೊತ್ತಿದ್ದವು. ಸ್ಪರ್ಶಜ್ಞಾನವಿಲ್ಲದಿರು

ವಂತೆ ಮಾಡುವ ಔಷಧಗಳೂ ಗೊತ್ತಿದ್ದವು. ಅವನು ಸತ್ತನಂತರ ಅವನ ಬೋಧನೆಗಳ ಮಹತ್ವ ಬೆಳಕಿಗೆ ಬಂದು, ಸುಧಾಫ್ ಪ್ರೇರಣೆಯಿಂದ, ಪ್ಯಾರಸೆಲ್ಸಸ್ಸಿನ ತತ್ವಗಳನ್ನು ಪುನಃ ಓದಿತಿಳಿದುಕೊಳ್ಳಲು ಸ್ವಿಟ್ಸರ್ಲೆಂಡಿನಲ್ಲಿ ಪ್ಯಾರಸೆಲ್ಸಸ್ ಸಂಘ ಒಂದನ್ನು ೧೯೪೨ರಲ್ಲಿ ಸ್ಥಾಪಿಸಲಾಯಿತು. ಇದರ ಸಂಶೋಧನೆಯಿಂದ, ಜೀವಸತ್ವಗಳು, ಚರ ಚಿಕಿತ್ಸಾಲಯ ವ್ಯವಸ್ಥೆ ಹಾಗೂ ವಶ್ಯಸುಪ್ತಿ, ಭಾವಸೂಚನೆ, ಮನೋವಿಶ್ಲೇಷಣೆ ಮುಂತಾದುವೆಲ್ಲಾ ಪ್ಯಾರಸೆಲ್ಸಸ್ಸಿಗೆ ತಿಳಿದಿದ್ದವೆಂದು ಗೊತ್ತಾಗಿದೆ. "ಪ್ಯಾರಸೆಲ್ಸಸ್ಸಿನ ವೈಯಕ್ತಿಕ ಗುರಿ ಹಾಗೂ ವೈದ್ಯಶಾಸ್ತ್ರದ ಏಳಿಗೆಗೆ ಅವನ ಕೊಡುಗೆಗಳ ವಿಷಯದಲ್ಲಿ ಯಾರ ಅಭಿಪ್ರಾಯವೇನೇ ಇರಲಿ, ಅವನ ಸ್ವತಂತ್ರ ಆಲೋಚನಾ ಶಕ್ತಿ ಬಹಳ ಹಿರಿಯದಾಗಿತ್ತು" ಎಂದು ಗುತ್ರೀ ತನ್ನ ವೈದ್ಯಶಾಸ್ತ್ರದ ಪುಸ್ತಕದಲ್ಲಿ ಬರೆದಿದ್ದಾನೆ.

ಜೆರೋಮ್ ಕಾರ್ಡನ್

ಹೀಗೆ ಸ್ವಿಟ್ಸರ್ಲೆಂಡಿನಲ್ಲಿ ಪ್ಯಾರಸೆಲ್ಸಸ್ ಝೇಂಕರಿಸುತ್ತಿದ್ದಾಗ, ಇಟಲಿಯಲ್ಲಿ ಅತ್ಯುತ್ತಮ ವೈದ್ಯ ಜೆರೋಮ್ ಕಾರ್ಡನ್ (೧೫೦೧–೧೫೭೬) ಸದ್ದಿಲ್ಲದೆ ಪ್ರಖ್ಯಾತಿಗೆ ಬರುತ್ತಿದ್ದನು. ಇವನು ಮಿಲಾನಿನಲ್ಲಿ ಬಡವನಾಗಿ ಹುಟ್ಟಿ, ಬಡವನಾಗಿ ಬೆಳೆದು, ಬಡತನದಲ್ಲೇ ಹೊಡೆದಾಡಿ, ಕೊನೆಗೆ ಎಲ್ಲರಿಗೂ ಆಶ್ಚರ್ಯವಾಗುವಂತೆ ವೈದ್ಯಶಾಸ್ತ್ರದ ಪ್ರಾಧ್ಯಾಪಕನಾಗಿ, ಪಾಡ್ವದಲ್ಲೂ, ಪಾವಿಯದಲ್ಲೂ ಕೆಲಸ ಮಾಡಿದನು. ಇವನಿಗೆ ವೈದ್ಯಶಾಸ್ತ್ರದಲ್ಲಿ ಶ್ರದ್ಧೆ ಇದ್ದಂತೆ, ತತ್ವಶಾಸ್ತ್ರ, ಗಣಿತಶಾಸ್ತ್ರ, ಜ್ಯೋತಿಷ್ಯಗಳಲ್ಲೂ ಇತ್ತು. ಕೊನೆಗಾಲದಲ್ಲಿ, ಕೊಲೆಗಾರನೆಂದು ಅವನ ಮಗನನ್ನು ಗಲ್ಲಿಗೇರಿಸಿದ್ದರ ಯೋಚನೆಯಿಂದ ಕೊರಗಿ, ರೋಮ್ ಪಟ್ಟಣದಲ್ಲಿ ಪೋಪಿನಿಂದ ವಿಶ್ರಾಂತಿ ವೇತನ ಪಡೆಯುತ್ತಿದ್ದಾಗ ಮರಣ ಹೊಂದಿದನು. ಇದನ್ನೆಲ್ಲಾ ವಿವರಿಸಿರುವ ಅವನ ಆತ್ಮಚರಿತ್ರೆ ಒಂದು ಅದ್ವಿತೀಯ ಲೇಖನದಂತಿದೆ.

ಕಾರ್ಡನ್ನಿನ ಸ್ವಾರಸ್ಯವಾದ ಸಂಗತಿ

ಇವನ ಜೀವಮಾನದಲ್ಲಿ ಒಂದು ಸ್ವಾರಸ್ಯವಾದ ಸಂಗತಿ ನಡೆಯಿತು. ಏನೆಂದರೆ ಸ್ಕಾಟ್ಲೆಂಡಿನ ಮೇರಿ ಸ್ಟ್ಯೂಯರ್ಟಿನ ಚಿಕ್ಕ ವಯಸ್ಸಿನಲ್ಲಿ ಆರ್ಚಿಬಿಷಪ್ ಹ್ಯಾಮಿಲ್ಟನ್ ಸರ್ವಾಧಿಕಾರಿಯಾಗಿದ್ದಾಗ, ಅವನು ಗೂರಲು ರೋಗದಿಂದ ನರಳುತ್ತಿದ್ದು, ಅವನ ಆಸ್ಥಾನ ವೈದ್ಯನಾದ ಸ್ಪೈಯಿನ್ನಿನ ಕ್ಯಾಸನಾಟಿ ಎಂಬುವನು ಮತ್ತೊಬ್ಬ ವೈದ್ಯನ ಸಲಹೆ ಪಡೆಯಲು, ಇಟಲಿಯಿಂದ ಕಾರ್ಡನ್ನನ್ನು ಬರಮಾಡಿಕೊಂಡನು. ಬ್ರಿಟನ್ನಿನ ವೈದ್ಯರು ಆಗ ಅಷ್ಟು ಹೀನಸ್ಥಿತಿಯಲ್ಲಿದ್ದರೆಂಬುದನ್ನು ಕುರಿತು ಅನೇಕರು ಸಂದೇಹಪಟ್ಟಿದ್ದರು. ಕಾರ್ಡನ್ ಎಡಿನ್‌ಬರೊ ಪಟ್ಟಣದಲ್ಲಿ ಅನೇಕ ತಿಂಗಳುಗಳು ಇದ್ದು ನವೀನ ರೀತಿಯಲ್ಲೇ ಔಷಧ ಕೊಟ್ಟು ಹ್ಯಾಮಿಲ್‌ಟನ್‌ನ ರೋಗವನ್ನು ಗುಣಪಡಿಸಿದನು. ಆದರೆ ಅದೃಷ್ಟವಿಲ್ಲದ ಆರ್ಚಿಬಿಷಪ್ ರಾಜದ್ರೋಹದ ಕಾರಣ ಕೆಲವು

ದಿವಸಗಳಲ್ಲೇ ಗಲ್ಲಿಗೇರಿಸಲ್ಪಟ್ಟನು. ಇವನು ವೈದ್ಯಶಾಸ್ತ್ರಕ್ಕೆ ಅಷ್ಟೊಂದು ಕೊಡುಗೆ ಕೊಡದಿದ್ದರೂ, ಸಾಕಷ್ಟು ಭಾವನೆಗಳನ್ನು ಸಂಗ್ರಹಿಸಿದ್ದನು. ಎಡಿನ್‌ಬರೊ ದಾರಿಯಲ್ಲಿ ಅನೇಕ ಪ್ರಖ್ಯಾತ ಪುರುಷರಾದ, ಪ್ಯಾರಿಸ್ಸಿನ ಜೇನ್ ಫರ್ನೆಲ್, ಅಂಗರಚನೆ ಶ್ರೇಷ್ಠನಾದ ಸಿಲ್ವಿಯಸ್, ಲಂಡನ್ನಿನ ದೊರೆ ೬ನೇ ಎಡ್ವರ್ಡ್, ಸೂರಿಚ್ಚಿನ ಕಾನ್ರಾಡ್ ಜೆಸ್ನರ್‌ರನ್ನು ಕಂಡು ಸ್ನೇಹ ಬೆಳೆಸಿದ್ದನು. ಇವನ ಅನೇಕ ಬರವಣಿಗೆಗಳಲ್ಲಿ ಮೂರನೆಯ ಒಂದು ಭಾಗ ವೈದ್ಯಶಾಸ್ತ್ರಕ್ಕೆ ಸಂಬಂಧಿಸಿತ್ತೆಂದು ಹೇಳಲಾಗಿದೆ. ಇವನ ಕೊನೆಯದಾದ ಆತ್ಮ ಚರಿತ್ರೆಯ ಜತೆಗೆ ಬೀಜಗಣಿತ, ಗಣಿತಶಾಸ್ತ್ರಗಳನ್ನೂ ಮೆಟೊಪೊಸ್ಕೊಪಿ ಎಂಬ ಹಸ್ತ ಸಾಮುದ್ರಿಕೆ ಹೋಲುವ ವಿಚಿತ್ರವಾದ ಹಣೆಯ ಸಾಮುದ್ರಿಕೆಯನ್ನೂ ಬರೆದಿದ್ದನು ಇವಲ್ಲದೆ "ಡಿ ಸಬ್ಟಿಲಿಟೇಟ್" ಎಂಬ ಅತ್ಯುತ್ತಮವಾದ ಸಂಸಾರಕ್ಕೆ ಸಂಬಂಧಪಟ್ಟ ವಿಶ್ವಕೋಶವನ್ನೂ, ಮಕ್ಕಳಿಗೆ ಬುದ್ಧಿವಾದ ಹೇಳುವ ಪುಸ್ತಕವನ್ನೂ ಬರೆದಿದ್ದನು.


ಪುನರುಜ್ಜೀವನ ಕಾಲದ ಇಂಗ್ಲೆಂಡಿನ ವೈದ್ಯರು

ಇಟಲಿಯಲ್ಲಿ ಹುಟ್ಟಿದ ವೈಜ್ಞಾನಿಕ ವೈದ್ಯಶಾಸ್ತ್ರ ಇಂಗ್ಲೆಂಡನ್ನು ಮುಟ್ಟಲು ಹಲವಾರು ವರ್ಷಗಳಾದವು. ಎಲಿಸಬೆತ್ ರಾಣಿಯ ಕಾಲದವರೆಗೆ ಸುಪ್ರಸಿದ್ಧ ವೈದ್ಯರಿರಲಿಲ್ಲ. ಆದರೂ ಲಿನೇಕರ್, ಕೇಯಸ್ ಮುಂತಾದವರು ಗ್ಯಾಲೆನ್ನಿನ ತತ್ವಗಳನ್ನು ಆಧಾರವಾಗಿಟ್ಟುಕೊಂಡು ಸಾಕಷ್ಟು ಅಭಿವೃದ್ಧಿಯನ್ನುಂಟುಮಾಡಿದ್ದರು.

ಥಾಮಸ್ ಲಿನೇಕರ್

ಥಾಮಸ್ ಲಿನೇಕರ್ (೧೪೬೦-೧೫೨೪) ಕ್ಯಾಂಟರ್‌ಬರಿಯಲ್ಲಿ ಜನಿಸಿ, ಆಕ್ಸ್‌ಫರ್ಡ್ ಪದವೀಧರನಾಗಿ ಜ್ಞಾನಾರ್ಜನೆಗೆ ಇಟಲಿ ದೇಶಕ್ಕೆ ಹೋಗಿದ್ದನು. ಬೊಲೋನ, ರೋಮ್ ನಗರಗಳಲ್ಲಿ ವೈದ್ಯ ಕಲಿಯುತ್ತಿದ್ದಾಗ, ಗ್ರೀಕ್ ಭಾಷೆಯಲ್ಲಿದ್ದ ಅರಿಸ್ಟಾಟಲ್ ಮತ್ತು ಗ್ಯಾಲೆನ್‌ರ ಗ್ರಂಥಗಳನ್ನು ಅರ್ಥಮಾಡಿಕೊಂಡವರಲ್ಲಿ ಇವನೇ ಮೊದಲಿಗನಾಗಿದ್ದನೆಂದು ಹೇಳಲಾಗಿದೆ. ಆಕ್ಸ್‌ಫರ್ಡ್‌ಗೆ ಹಿಂತಿರುಗಿದನಂತರ ಇವನು ವಿಶ್ವವಿದ್ಯಾಲಯದ ಗ್ರೀಕ್‌ಭಾಷೆಯ ಪ್ರಾಧ್ಯಾಪಕನಾಗಿ, ೭ನೇ ಹೆನ್ರಿ ಮಗ ರಾಜಕುಮಾರ ಆರ್ಥರ್‌ನ ವಿದ್ಯಾಭ್ಯಾಸಕ್ಕೆ ಕಾರಣನಾಗಿದ್ದನು. ಇವನು ಅನುಕ್ರಮವಾಗಿ ಮೂರು ರಾಜ ಸಂತಾನಗಳಿಗೆ ಖಾಸ ವೈದ್ಯನಾಗಿದ್ದನು.

ಇವನು ಗ್ರೀಕ್ ಗ್ರಂಥಗಳನ್ನು ಇಂಗ್ಲೀಷಿಗೆ ಭಾಷಾಂತರ ಮಾಡಿದ್ದಲ್ಲದೆ, ಆಗಿನ ಕಾಲದ ಲಂಡನ್ನಿನಲ್ಲಿ ಜವಾಬ್ದಾರಿಯುಳ್ಳ ವೈದ್ಯರ ಸಂಘವಿಲ್ಲದೆ ಠಕ್ಕು ವೈದ್ಯರ ಮತ್ತು ಸನ್ಯಾಸಿಗಳ ಅಧೀನದಲ್ಲಿ ವೈದ್ಯ ವಿದ್ಯೆ ಇದ್ದುದರಿಂದ, ೮ನೇ ಹೆನ್ರಿ ದೊರೆಯಿಂದ ೧೫೧೮ರಲ್ಲಿ ಒಂದು ವೈದ್ಯ ಸಂಸ್ಥೆಯನ್ನು ಸ್ಥಾಪಿಸಲು ಅಪ್ಪಣೆ ಪಡೆದನು. ಈ



ಥಾಮಸ್ ಲಿನೇಕರ್ ಲಂಡನ್ನಿನ ರಾಜವೈದ್ಯರ ಕಾಲೇಜನ್ನು ಸ್ಥಾಪಿಸಿದನು

ಸಂಘವೇ ೧೫೧೮ರಲ್ಲಿ ಲಂಡನ್ನಿನ ವೈದ್ಯರ ರಾಜವೈದ್ಯ ಕಾಲೇಜಾಯಿತು. ವೈದ್ಯವೃತ್ತಿ ನಡೆಸಲು ಅನುಮತಿ ಕೊಡುವುದಕ್ಕೂ ಮತ್ತು ವೈದ್ಯರ ನಡತೆ, ಚಿಕಿತ್ಸೆ ಕ್ರಮಗಳ ಯೋಗ್ಯತೆ ನಿರ್ಣಯಿಸುವುದಕ್ಕೂ ಈ ಸಂಸ್ಥೆ ಹಕ್ಕು ಪಡೆದಿತ್ತು. ಆದರೆ ಆಕ್ಸಫರ್ಡ್ ಮತ್ತು ಕೇಂಬ್ರಿಡ್ಜ್ ಪದವೀಧರರು. ಈ ಕ್ರಮಗಳಿಗೆ ಒಳಪಟ್ಟಿರಲಿಲ್ಲ. ಥಾಮಸ್ ಲಿನೇಕರ್‌ನೇ ಈ ಸಂಸ್ಥೆಯ ಮೊದಲ ಅಧ್ಯಕ್ಷನಾಗಿದ್ದನು. ಇವನು ಶ್ರದ್ಧೆಯಿಂದ ಕೆಲಸಮಾಡಿ,ಎಲ್ಲರ ಗೌರವವನ್ನೂ ಸಂಪಾದಿಸಿದ್ದನು. ಇರ್ಯಾಸ್ಮಸ್ ಕೂಡ ಇವನಿಗೆ ಗೌರವಸಲ್ಲಿಸಿದ್ದನು. ಇವನ ಪಾರ್ಥಿವ ಶರೀರವನ್ನು ಸಂತ ಪಾಲ್ ಆರಾಧನ ಮಂದಿರದಲ್ಲಿ ಜ್ಞಾಪಕಾರ್ಥಕವಾಗಿ ಹೂಳಲಾಗಿದೆ.

ಜಾನ್ ಕೇಯಸ್

ಲಿನೇಕರ್ ಆಕ್ಸ್‌ಫರ್ಡ್‌ನಲ್ಲಿ ಪ್ರಸಿದ್ಧಿಯಾಗಿದ್ದಂತೆ ಜಾನ್ ಕೇಯಸ್ (೧೫೧೦–೧೫೭೩) ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಖ್ಯಾತಿ ಪಡೆದಿದ್ದನು. ಇವನು ಪಾಡ್ವದಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ವಿಸೇಲಿಯಸ್ ಇದ್ದ ಮನೆಯಲ್ಲೇ ವಾಸವಾಗಿದ್ದನು. ಕೇಂಬ್ರಿಡ್ಜಿಗೆ ಹಿಂತಿರುಗಿದನಂತರ ಇವನ ಖ್ಯಾತಿ ಮತ್ತೂ ಬೆಳಗಿ, ೮ನೇ ಹೆನ್ರಿಗೆ ಮತ್ತೊಬ್ಬ ಆಸ್ಥಾನ ವೈದ್ಯನಾಗಿ ನೇಮಕವಾದನು. ಹೆನ್ರಿಯನಂತರ ೬ನೇ ಎಡ್ವರ್ಡಿಗೂ, ಟ್ಯೂಡರ್ ಮೇರಿಗೂ ಮತ್ತು ಎಲಿಸಬೆತ್ ರಾಣಿಗೂ ಖಾಸ ವೈದ್ಯನಾಗಿದ್ದನು. ಲಿನೇಕರ್ ತರುವಾಯ ಇವನೇ ರಾಜವೈದ್ಯ ಕಾಲೇಜಿನ ೨ನೇ ಅಧ್ಯಕ್ಷನಾಗಿ ೯ ವರ್ಷ ತಪ್ಪದೆ ಆ ಪದವಿಯನ್ನು ಅಲಂಕರಿಸಿದ್ದನು. ಇವನು ಶ್ರೂಸ್ಬರಿಯಲ್ಲಿ ವೈದ್ಯವೃತ್ತಿ ನಡೆಸುತ್ತಿದ್ದಾಗ ಇಂಗ್ಲೆಂಡಿನಲ್ಲೆಲ್ಲಾ ಸಾಂಕ್ರಾಮಿಕವಾಗಿ ಹಬ್ಬಿದ್ದ ಬೆವರು ಜ್ವರವನ್ನು ಕುರಿತು ಒಂದು ಉತ್ಕೃಷ್ಟ ಗ್ರಂಥವನ್ನು ೧೫೫೨ರಲ್ಲಿ ಬರೆದನು. ಅದೇ ವರ್ಷ ಲಂಡನ್ನಿಗೆ ಬಂದು ನೆಲಸಿ ಬಹು ಬೇಗ ಪ್ರಖ್ಯಾತಿ ಪಡೆದು, ೬ನೇ ಎಡ್ವರ್ಡ್, ಮೇರಿ, ಎಲಿಸಬೆತ್ ರಾಣಿಯರಿಗೆ ಖಾಸ ವೈದ್ಯನಾಗಿದ್ದನು. ಆದರೆ ಇವನು ಕ್ಯಾತೊಲಿಕ್ ತತ್ತ್ವಗಳನ್ನು ಅನುಸರಿಸುತ್ತಿದ್ದುದರಿಂದ ಎಲಿಸಬೆತ್ ರಾಣಿಯು

ವೈದ್ಯಗಿರಿಯಿಂದ ವಜಾ ಆದನು. ಇವನು ರಾಜವೈದ್ಯ ಕಾಲೇಜಿಗೆ ಅಧ್ಯಕ್ಷನಾಗಿದ್ದಾಗ ತನ್ನ ವಿದ್ಯಾಪೀಠವಾದ ಕೇಂಬ್ರಿಡ್ಜ್ ಶಾಲೆಗೆ ಹಣ ಒದಗಿಸಿ, ಹೊಸ ಕಟ್ಟಡ ಕಟ್ಟಿಸಿ ಕೇಯಸ್ ವೈದ್ಯಶಾಲೆಯೆಂದು ಹೆಸರಿಟ್ಟನು. ಆಕ್ಸ್‌ಫರ್ಡ್ ವೈದ್ಯಶಾಲೆ ಬಹಳ ಪುರಾತನವಾದ್ದೆಂದು ೧೫೭೪ರಲ್ಲಿ ಆಕ್ಸ್‌ಫರ್ಡಿನ ವಿದ್ಯಾರ್ಥಿಯೊಬ್ಬ ಬರೆದ ಲೇಖನವನ್ನು ಟೀಕಿಸಿ, ಆಕ್ಸ್‌ಫರ್ಡ್‌ಗಿಂತ ಕೇಂಬ್ರಿಡ್ಜ್ ೧೨೬೭ ವರ್ಷಗಳಿಂದ ಹಳೆಯದೆಂದೂ, ಕ್ರಿ.ಪೂ. ೩೯೪ರಲ್ಲೇ, ಸ್ಪೈಯಿನಿನ ರಾಜಕುಮಾರ ಕ್ಯಾಂಟಬರ್‌ನಿಂದ ಸ್ಥಾಪಿತವಾಗಿತ್ತೆಂದೂ ಕೇಯಸ್ ಸಾಧಿಸಿದ್ದನು. ೧೫೫೮ರಲ್ಲಿ ಕೇಯಸ್-ವೈದ್ಯ ಕಾಲೇಜಿಗೆ ಮುಖ್ಯಾಧಿಪತಿಯಾಗಿದ್ದಾಗ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಜತೆ ಜಗಳವಾಡಿ ಜನವಿರೋಧಿಯಾಗಿದ್ದನು. ಇದರ ನಿಮಿತ್ತವಾಗೂ ಮತ್ತು ಇವನ ಹತ್ತಿರವಿದ್ದ ರೋಮನ್ ಕ್ಯಾತೊಲಿಕ್ ಮತ ಧರ್ಮದ ಲೇಖನಗಳು ಸುಟ್ಟುದರ ನಿಮಿತ್ತವಾಗೂ ಕೇಯಸ್ ಯೋಚನೆಗೊಳಗಾಗಿ ಬೇಗ ಮರಣ ಹೊಂದಿದನೆಂದು ಹೇಳಲಾಗಿದೆ. ಇವನ ಪಾರ್ಥಿವ ಶರೀರ ಕೇಯಸ್ ವೈದ್ಯಶಾಲೆಯ ಗಾನ್‌ವಿಲ್ ಆರಾಧನ ಮಂದಿರದಲ್ಲಿ ಹೂಳಲಾಗಿದೆ. ಅದರಡಿ 'ನಾನು ಕೇಯಸ್' ಎಂದು ಕೆತ್ತಲಾಗಿದೆ.

ಬೆವರು ಜ್ವರ

ಕೇಯಸ್ ಬರೆದ ಬೆವರುವ ಜ್ವರದ ಮೇಲಿನ ಪುಸ್ತಕ ಮತ್ತು ಕೇಂಬ್ರಿಡ್ಜ್ ಪುರಾತನ ಪಟ್ಟಣವೆಂದು ಸಾಧಿಸಿ ಬರೆದ ಪುಸ್ತಕ ಇವೆರಡೂ ಅತಿ ಶ್ರೇಷ್ಠವಾದ ಬರವಣಿಗೆಗಳಾಗಿದ್ದವು. ಬೆವರು ಜ್ವರದ ಪುಸ್ತಕ ಕೊನೆಯದಾಗಿ ೫ನೇ ಮುದ್ರಣ ಕಂಡಾಗ ಕೇಯಸ್ ತಾನೇ ರೋಗದ ಗುಣಗಳನ್ನು ಪರಿಶೀಲಿಸಿ, ಅನಾರೋಗ್ಯ ಕ್ರಮಗಳಿಂದ ಬರುತ್ತದೆಂದು ತಿಳಿಸಿದ್ದನು. ಯುದ್ಧದಲ್ಲಿ ಗೆದ್ದು ಇಂಗ್ಲೆಂಡಿಗೆ ಹಿಂತಿರುಗಿದ ೭ನೇ ಹೆನ್ರಿ ಸೈನಿಕರಲ್ಲಿ ಈ ರೋಗ ೧೪೮೫ರಲ್ಲಿ ಪ್ರಾರಂಭವಾಗಿ ಇಂಗ್ಲೆಂಡನ್ನೆಲ್ಲಾ ಆವರಿಸಿ, ಬಹಳ ಸಾವು ನೋವಾದುದನ್ನು ಕಂಡನು. ಇಬ್ಬರು ಮೇಯರುಗಳು ೯ಜನ ಆಲ್ಲರ್ಮನ್ನುಗಳು ಒಂದೇ ವಾರದಲ್ಲಿ ಸತ್ತರು. ಚಿಕ್ಕವರು, ದೊಡ್ಡವರು, ಬಡವರು, ಭಾಗ್ಯವಂತರು, ಹೆಂಗಸರು,ಗಂಡಸರು ಎಂಬ ಭೇದಭಾವವಿಲ್ಲದೆ ಸಾಯುತ್ತಿದ್ದರು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಮುಚ್ಚಲಾಯಿತು. ಹೆನ್ರಿ ಪಟ್ಟಾಭಿಷೇಕ ನಿಂತಿತು. ಎಷ್ಟು ಬೇಗ ರೋಗ ಜನರಲ್ಲಿ ಕಾಣಿಸಿಕೊಂಡಿತೋ ಅಷ್ಟೇ ಬೇಗ ಮರೆಯೂ ಆಯಿತು. ಆದರೆ, ಇಂಗ್ಲೆಂಡ್ ಬಿಟ್ಟು ಆಗ ಸ್ಕಾಟ್ಲೆಂಡಿಗಾಗಲೀ, ಐರ್ಲೆಂಡಿಗಾಗಲೀ ಹರಡಲಿಲ್ಲ.

ಜ್ವರ, ಚಳಿ, ತಲೆನೋವು, ಹೊಟ್ಟೆ ನೋವು ಬಹು ಬೇಗ ರೋಗಿಯಲ್ಲಿ ಕಾಣಿಸಿಕೊಂಡು ಧಾರಾಳವಾಗಿ ಬೆವರು ಸುರಿಯುತ್ತಿತ್ತು. ಕೇವಲ ೨೪ ಘಂಟೆಗಳಲ್ಲಿ ಸಾವುಂಟಾಗುತ್ತಿತ್ತು. ಕೆಲವು ವೇಳೆ ಒಂದೇ ಘಂಟೆಯಲ್ಲಿ ಮರಣ ಸಂಭವಿಸುತ್ತಿತ್ತು. ಹಾಸಿಗೆ ವಿಶ್ರಾಂತಿಯನ್ನು ಬಿಟ್ಟು ಬೇರೆ ಯಾವ ಚಿಕಿತ್ಸೆ ಕ್ರಮಗಳೂ ಇರಲಿಲ್ಲ. ಇದೇ ರೋಗ

೧೫೦೮, ೧೫೧೭, ೧೫೨೮ ಮತ್ತು ೧೫೫೧ ರಲ್ಲೂ ಬಂದಿತ್ತು. ೧೫೨೮ರ ರೋಗ ಆದಷ್ಟು ಹಾವಳಿ ನಡೆಸಿ ಉತ್ತರ ಯೂರೋಪಿಗೆ ೧೫೨೯ರಲ್ಲಿ ಹರಡಿ ಅಲ್ಲೂ ಅನೇಕ ಸಾವು ನೋವುಗಳನ್ನು ಉಂಟುಮಾಡಿತ್ತು. ಇದೇ ತರಹದ ರೋಗ ೧೭೧೮ರಲ್ಲಿ ಫ್ರಾನ್ಸಿನಲ್ಲೂ ಬಂದಿತ್ತೆಂದು ಹೇಳಲಾಗಿದೆ.

ಇಂಗ್ಲೀಷ್ ಭಾಷೆಯಲ್ಲಿ ಇತರ ವೈದ್ಯ ಪುಸ್ತಕಗಳು

ಇಂಗ್ಲೀಷಿನಲ್ಲಿ ಬರೆದಿರುವ ವೈದ್ಯಶಾಸ್ತ್ರದ ಪುಸ್ತಕಗಳಲ್ಲಿ ಆಂಡ್ರ್ಯು ಬೂರ್ಡಿ (೧೪೯೦–೧೫೪೯) ಬರೆದ ದಿ ಬ್ರಿವಿಯೂವಿ ಆಫ್ ಹೆಲ್ತ್ ಎಂಬ ಪುಸ್ತಕವೇ ಮೊಟ್ಟಮೊದಲನೆಯದಾಗಿತ್ತು. ಬೂರ್ಡಿ ಆಕ್ಸ್‌ಫರ್ಡ್‌ನಲ್ಲಿ ವ್ಯಾಸಂಗ ಮಾಡಿ, ಮಾಂಟ್‌ಪೆಲ್ಲಿಯರ್‌ನಲ್ಲಿ ವೈದ್ಯ ಕಲಿತು, ದೇಶ ಸಂಚಾರದಲ್ಲಿ ಕಾಲ ಕಳೆಯುತ್ತಿದ್ದನು. ಹೋದ ಕಡೆಗಳಲ್ಲೆಲ್ಲಾ ಉಪನ್ಯಾಸ ಮಾಡುವ ಅಭ್ಯಾಸ ಇವನಿಗಿತ್ತು. ಲನೇ ಹೆನ್ರಿಗೆ ಹಲವು ವರ್ಷಗಳು ವೈದ್ಯನಾಗಿದ್ದನು. ಇವನು ಬರೆದ ಪುಸ್ತಕಗಳೆಲ್ಲವೂ ಬಹಳ ಸ್ವಾರಸ್ಯವಾಗಿದ್ದವು. ಸ್ಕಾಟ್ಲೆಂಡಿನಲ್ಲಿ ಒಂದು ವರ್ಷ ವೈದ್ಯವೃತ್ತಿ ನಡೆಸುತ್ತಿದ್ದಾಗ ಅಲ್ಲಿಯ ಜನರನ್ನು ಇವನು ನಂಬಿರಲಿಲ್ಲ.'ಯಾವ ಸ್ಕಾಟನನ್ನೂ ನಂಬದಿರು ಎಂದು ಅವನ ಪುಸ್ತಕದಲ್ಲಿ ಬರೆದಿದ್ದನು. ಪಡಿಯುಣಿಸು ಎಂಬ ಪುಸ್ತಕದಲ್ಲಿ ಆಹಾರ, ವಾಸಸ್ಥಾನ, ಶರೀರಾರೋಗ್ಯ, ನಿದ್ರೆ, ವ್ಯಾಯಾಮ, ವಿಶ್ರಾಂತಿ ಮುಂತಾದುವನು ಕುರಿತು ಲೇಖನ ಬರೆದಿದ್ದನು. ಅವನ ಬ್ರಿವಿಯೂವಿ ಪುಸ್ತಕ ಎಲ್ಲಾ ಪುಸ್ತಕಗಳಿಗಿಂತಲೂ ಸ್ವಾರಸ್ಯವಾಗಿತ್ತು.

ಥಾಮಸ್ ಫೇರ್ (೧೫೧೦–೧೫೬೦) ಮೊದಲು ವಕೀಲನಾಗಿದ್ದು, ನಂತರ ವೈದ್ಯಶಾಸ್ತ್ರವನ್ನು ಕಲಿಯುತ್ತಿದ್ದನು. ಮಕ್ಕಳ ರೋಗಗಳನ್ನು ಕುರಿತು, "ಮಕ್ಕಳ ಪುಸ್ತಕ" ಬರೆದಿದ್ದನು. ಇದೇ ಇಂಗ್ಲೀಷ್ ಭಾಷೆಯಲ್ಲಿ ಬರೆದ ಮಕ್ಕಳ ರೋಗಗದ ಮೊದಲನೆಯ ಪುಸ್ತಕ. ಸೂಲಗಿತ್ತಿತನದ ಮೇಲೆ ಇಂಗ್ಲೀಷಿನಲ್ಲಿ ಬರೆದ ಪುಸ್ತಕ ರೋಸಲಿನ್ ಪುಸ್ತಕದ ಭಾಷಾಂತರವಾಗಿತ್ತು. ಇದು ಇಂಗ್ಲೀಷ್ ಭಾಷೆಯಲ್ಲಿ ೧೫೧೩ರಲ್ಲಿ ಅಚ್ಚಾಗಿತ್ತು. ಥಾಮಸ್ ರೇನಾಲ್ಡ್ ೧೫೪೫ರಲ್ಲಿ ಬರೆದ 'ಮಾನವ ಕುಲದ ಹುಟ್ಟು' ಈಗಲೂ ಬ್ರಿಟಿಷ್ ವಸ್ತುಸಂಗ್ರಹದಾಲಯದಲ್ಲಿದೆ. ವಿಲಿಯಂ ಹಾರ್ವೆ ರಕ್ತ ಚಲನೆಯ ಮೂಲ ಪುರುಷನಾಗಿದ್ದುದಲ್ಲದೆ, ಸೂಲಗಿತ್ತಿತನವನ್ನು ಕುರಿತು ಉತ್ಕೃಷ್ಟವಾದ ಪುಸ್ತಕವನ್ನೂ ಬರೆದಿದ್ದನು. ಇವನೇ ಬ್ರಿಟನ್ನಿನಲ್ಲಿ ಪುನರುಜ್ಜೀವನ ಉಂಟು ಮಾಡಲು ಮುಖ್ಯ ಕಾರಣ ಕರ್ತೃವಾಗಿದ್ದನು.

೨೪. ೧೭ನೇ ಶತಮಾನದ ವೈದ್ಯಶಾಸ್ತ್ರ

ವಿಲಿಯಂ ಹಾರ್ವೆ ಯುಗ

ಕಲೆ ಮತ್ತು ವಿಜ್ಞಾನಗಳಲ್ಲಿ ೧೭ನೇ ಶತಮಾನ ಬಹಳ ಉನ್ನತಿಯಲ್ಲಿತ್ತು. ವೈದ್ಯ ವಿಜ್ಞಾನದಲ್ಲಂತೂ ಚಿನ್ನದ ಯುಗವಾಗಿತ್ತು. ಹೊಸ ಭಾವನೆಗಳು ಹುಟ್ಟಿ ಬೆಳೆದವು. ಅನೇಕ ಸಂಶೋಧನೆಗಳು ಹೊರಬಿದ್ದವು. ಹಳೆಯದನ್ನು ತಿರಸ್ಕರಿಸಿ ಹೊಸದನ್ನು ಆರಿಸುವ ಆಸೆ ಇತ್ತು. ಆದರೂ ಸರ್ ತಿಯೊಡೋರ್ ಟರ್ಕೆಟ್ ಮತ್ತು ಸರ್ ಥಾಮಸ್ ಬ್ರೌನ್‌ನಂತಹ ಕೆಲವರು ಮಾತ್ರ ಹಳೆಯ ಸಂಪ್ರದಾಯಗಳನ್ನೂ ಮತ್ತು ಭಾವನೆಗಳನ್ನೂ ಬಿಟ್ಟಿರಲಿಲ್ಲ. ಹೀಗೆ ಗ್ಯಾಲೆನ್ನಿನ ರಸತತ್ವಗಳನ್ನು ಅನುಸರಿಸುತ್ತಿದ್ದ ಕೆಲವರನ್ನು ಬಿಟ್ಟು ಉಳಿದವರೆಲ್ಲಾ ಹೊಸ ನಿಜಸ್ಥಿತಿಯನ್ನು ಹುಡುಕಲಾರಂಭಿಸಿದ್ದರು. ಇವರ ಪೈಕಿ ೧೭ನೇ ಶತಮಾನದ ವೈದ್ಯಶಾಸ್ತ್ರಕ್ಕೆ ಸಾಕಷ್ಟು ಕಾಣಿಕೆ ಸಲ್ಲಿಸಿದ್ದ ವಿಲಿಯಂ ಹಾರ್ವೆ, ತತ್ತ್ವಶಾಸ್ತ್ರದಲ್ಲಿ ಕ್ರಾಂತಿಯೆಬ್ಬಿಸಿದ್ದ ಬೇಕನ್ ಮತ್ತು ಡೆಸ್ಕಾರ್ಟೆಸ್‌ರ ಶ್ರೇಣಿಯನ್ನು ಸೇರಿದ್ದನು. ವೈದ್ಯಶಾಸ್ತ್ರದ ಶೋಧನೆಗಳಿಗೆ ತತ್ತ್ವಶಾಸ್ತ್ರದ ಬೆಂಬಲ ಬೇಕೇಬೇಕಾಗಿತ್ತು. ಈ ಬೆಂಬಲವನ್ನು ಬೇಕನ್ ಮತ್ತು ಡೆಸ್ಕಾರ್ಟೆಸ್ ಸಲ್ಲಿಸಿದ್ದರು.

ಫ್ರಾನ್ಸಿಸ್ ಬೇಕನ್

ಫ್ರಾನ್ಸಿಸ್ ಬೇಕನ್ (೧೫೬೧–೧೬೨೬) ತತ್ತ್ವಜ್ಞಾನಿ ಹಾಗೂ ರಾಜಕಾರಣಿಯೂ ಹೌದು. ಇವನನ್ನು ೧೩ನೇ ಶತಮಾನದ ಮಹಾಪುರುಷ ರೋಜರ್ ಬೇಕನ್ನಿಗೆ ಸಮಾನನೆಂದು ಹೇಳಲಾಗಿತ್ತು. ಆದರೂ ಫ್ರಾನ್ಸಿಸ್ ತನ್ನ ಬರವಣಿಗೆಗಳಲ್ಲಿ ರೋಜರ್ ಹೆಸರನ್ನೇ ಎತ್ತಿರಲಿಲ್ಲ. ಈ ಇಬ್ಬರು ಬೇಕನ್ನರು ಆಗಿನ ಹಳೇ ಭಾವನೆಗಳನ್ನು ಎದುರಿಸಿ, ಹೊಸ ಪ್ರಯೋಗಗಳಲ್ಲಿ ಆಸಕ್ತಿ ಹೊಂದಿದ್ದರು. ಅನುಭವದಿಂದ ಸತ್ಯ ಹುಟ್ಟುತ್ತದೆಯೇ ಹೊರತು ಅಧಿಕಾರದಿಂದ ಬರುವುದಿಲ್ಲವೆಂದು ಹೇಳಿದ್ದರು. ಫ್ರಾನ್ಸಿಸ್ ಇಂಗ್ಲೆಂಡಿನ ಲಾರ್ಡ್ ಚಾನ್ಸಲರ್ ಕೂಡ ಆಗಿದ್ದನು. ಇವನ ಬರವಣಿಗೆಯನ್ನು ಕುರಿತು 'ಪ್ರಧಾನ ನ್ಯಾಯಾಧೀಶನಂತೆ ಅವನು ತತ್ತ್ವಶಾಸ್ತ್ರ ಬರೆಯುತ್ತಾನೆ' ಎಂದು ಇವನ ವೈದ್ಯಶಿಷ್ಯ ವಿಲಿಯಂ ಹಾರ್ವೆ ನುಡಿದಿದ್ದನು. ಇವನು ವಿಜ್ಞಾನ ಮತ್ತು ತತ್ತ್ವಶಾಸ್ತ್ರಗಳ ವಾದವಿವಾದಗಳನ್ನು ಪ್ರಯೋಗ ಪರೀಕ್ಷೆಗಳಿಂದ ಸಮರ್ಥಿಸಲು ದಾರಿ ತೋರಿಸಿದ್ದನು. ಡೆಸ್ಕಾರ್ಟೆಸ್ ಪ್ರೋತ್ಸಾಹ ಕೊಟ್ಟದ್ದ ಹಾಗೆ ಬೇಕನ್ ತತ್ತ್ವಶಾಸ್ತ್ರಕ್ಕೆ ಕೊಟ್ಟು ಶಾಲೆ ತೆರೆದಿರಲಿಲ್ಲ. ಆದರೂ ಇವನು ಮಹಾಜ್ಞಾನಿಯೆಂದೂ, ಪ್ಲೇಟೋ ಪದ್ಧತಿಗಳನ್ನು ಪುನಃ ಆಚರಣೆಗೆ ತಂದಿದ್ದನೆಂದೂ ಹೇಳಲಾಗಿದೆ. ಇವನ 'ನೋವಂ ಆರ್ಗೇನಂ' (೧೬೨೦) ಪುಸ್ತಕದಲ್ಲಿ, ಅಧಿಕಾರ, ಜನಸಾಮಾನ್ಯ ಅಭಿ

ಪ್ರಾಯ,ಕಾನೂನಿಗೊಳಗಾದ ಪ್ರೇರಣೆ, ವೈಯಕ್ತಿಕ ದುರಭಿಪ್ರಾಯಗಳನ್ನು ತ್ಯಜಿಸಿ, ಅನುಭವಪೂರಿತ ಭಾವನೆಗಳನ್ನು ಹೊಂದಿರಬೇಕೆಂದು ತಿಳಿಸಿದ್ದನು. ಇವನ ಅಭಿಪ್ರಾಯಗಳನ್ನು ತಕ್ಷಣಕ್ಕೆ ಅನುಸರಿಸಲಾಗದಿದ್ದರೂ ವಿಜ್ಞಾನ ಮತ್ತು ವೈದ್ಯಶಾಸ್ತ್ರಗಳಲ್ಲಿ ಸಾಕಷ್ಟು ಪ್ರಭಾವ ಬೀರಿದ್ದವೆಂದು ಅನೇಕರು ಸಮರ್ಥಿಸಿದ್ದಾರೆ.

ರೀನೆ ಡೆಸ್ಕಾರ್ಟೆಸ್

ವೈಯಕ್ತಿಕ ಭಾವನೆಗಳಲ್ಲಿ ಬೇಕನ್ನಿನಂತಿರದಿದ್ದರೂ, ರೀನೆ ಡೆಸ್ಕಾರ್ಟೆಸ್ (೧೫೯೬–೧೬೫೦) ಸದ್ಗುಣ ಸ್ವಭಾವದವನು. ಇವನೂ ಆಗಿನ ವೈದ್ಯಶಾಸ್ತ್ರದ ಮೇಲೆ ಸಾಕಷ್ಟು ಪ್ರಭಾವ ಬೀರಿ,ತತ್ತ್ವಜ್ಞಾನಿಯಾಗಿದ್ದರೂ "ಡಿ ಹೋಮೈನ್"ಎಂಬ ದೇಹಶಾಸ್ತ್ರದ ಪುಸ್ತಕವನ್ನು ಬರೆದಿದ್ದನು. ಇದು ಅವನು ಸತ್ತು ಕೆಲವು ವರ್ಷಗಳಾದ ಮೇಲೆ ಪ್ರಕಟವಾಯಿತು. ವ್ಯಾಸಂಗದಲ್ಲಿ ಅತ್ಯುತ್ತಮನಾಗಿದ್ದು ಡೆಸ್ಕಾರ್ಟೆಸ್ ಪ್ರಪಂಚ ನೋಡಬೇಕೆಂಬ ಆಸೆಯಿಂದ ಸೈನ್ಯ ಸೇರಿದ್ದನು. ಗತ್ರೀ ಹೇಳಿದಂತೆ, 'ಈ ತತ್ತ್ವಜ್ಞಾನಿಗೆ ಬಲು ವಿಚಿತ್ರ ವೃತ್ತಿ ಇದು'. ಅನಂತರ ೨೦ ವರ್ಷಗಳ ಕಾಲ ಹಾಲೆಂಡಿನಲ್ಲಿ ಏಕಾಂತವಾಗಿ ವಾಸಮಾಡಿ ತನ್ನ ಅಭಿಪ್ರಾಯಗಳನ್ನು ಪ್ರಚುರಪಡಿಸಿದನು. ಕೊನೆಗೆ ಸ್ವೀಡನ್ನಿನ ಕ್ರಿಶ್ಚಿಯನ್ ರಾಣಿಯಿಂದ ಕರೆ ಬಂದು ಅವಳ ಆಸ್ಥಾನವನ್ನು ಸೇರಿದನು. ಆದರೆ ದುರದೃಷ್ಟದಿಂದ ಆ ದೇಶದ ಚಳಿ ತಡೆಯಲಾರದೆ ಪುಪ್ಪುಸುರಿತ ಬಂದು ಮೃತಪಟ್ಟನು. ಇವನ ತತ್ತ್ವಗಳ ಪ್ರಕಾರ ಮನಸ್ಸು ಮತ್ತು ವಿಷಯಗಳೆರಡರಿಂದ ಪ್ರಪಂಚ ಸ್ಥಾಪಿತವಾಗಿದೆಯೆಂದೂ, ಅವು ಒಂದಕ್ಕೊಂದು ಸಂಬಂಧ ಹೊಂದಿಲ್ಲವೆಂದೂ ಬೋಧಿಸಿದ್ದನು. ಆದರೆ ಆಶ್ಚರ್ಯಕರವಾಗಿ ಮನುಷ್ಯನ ಮಿದುಳಿನ ಮೂರನೆಯ ಕುಹರದ ಹಿಂದೆ,ಇರುವ ಪೈನಿಯಲ್ ಗ್ರಂಥಿಯಿಂದ ಆತ್ಮ ಹುಟ್ಟುತ್ತದೆಂದು ತಿಳಿಸಿದ್ದನು. ಪ್ರಾಣಿಗಳಲ್ಲಿ ಮನಸ್ಸು ಮತ್ತು ಆತ್ಮಗಳಿಲ್ಲವೆಂದೂ ಮನುಷ್ಯನ ಶರೀರ ಯಂತ್ರದಂತೆ ಕೆಲಸಮಾಡಿದರೂ, ಮನಸ್ಸಿಗೊಳಗಾಗಿದೆಯೆಂದೂ ತಿಳಿಸಿದ್ದನು. ಈ ಬೋಧನೆಗಳಿಂದಲೂ,ದೇಹಶಾಸ್ತ್ರದಲ್ಲಿದ್ದ ಇಚ್ಛೆಯಿಂದಲೂ, ವಿಲಿಯಂ ಹಾರ್ವೆಯ ಸಂಶೋಧನೆಗಳಲ್ಲಿದ್ದ ಪ್ರೀತಿಯಿಂದಲೂ ಇವನನ್ನು ವೈದ್ಯಶಾಸ್ತ್ರಜ್ಞರು ಗೌರವದಿಂದ ಕಂಡರು.

ಗೆಲಿಲಿಯೊ ಗೆಲಿಲಿ

ವೈದ್ಯದ ಬೆಳವಣಿಗೆಗೆ ತತ್ತ್ವಶಾಸ್ತ್ರ ಹೇಗೆ ಪ್ರಭಾವ ಬೀರಿತ್ತೋ ಹಾಗೆಯೇ ವಿಜ್ಞಾನ ಕೂಡ ಬೀರಿತ್ತು. ಕೋಪರ್ನಿಕಸ್, ಕೆಪ್ಲರ್ ಮತ್ತು ಗೆಲಿಲಿಯೊ ಇವರ ವಿಜ್ಞಾನ ಸಂಶೋಧನೆಗಳು ವೈದ್ಯಶಾಸ್ತ್ರಕ್ಕೆ ಸಾಕಷ್ಟು ಸಹಾಯಕವಾಗಿದ್ದವು. ಗೆಲಿಲಿಯೊ ಗೆಲಿಲಿ (೧೫೬೪-೧೬೪೨) ವೈದ್ಯ ವಿದ್ಯಾಭ್ಯಾಸ ಮಾಡುತ್ತಿದ್ದಾಗ, ಗಣಿತ ಶಾಸ್ತ್ರ ಮತ್ತು ವೈದ್ಯಶಾಸ್ತ್ರ ಒಂದಕ್ಕೊಂದು ಹೊಂದುವುದಿಲ್ಲವೆಂದು ನಂಬಿ, ಗಣಿತ ಶಾಸ್ತ್ರವನ್ನು ಅವನು ಅಧ್ಯಯನ ಮಾಡಿರಲಿಲ್ಲ. ಆದರೂ ತನ್ನ ೨೦ ವರ್ಷ ವಯಸ್ಸಿಗೆ

ಮೊದಲೇ ಒಂದು ಮಹತ್ವ ಶೋಧನೆ ಮಾಡಿದ್ದನು. ಪೀಸ ಪಟ್ಟಣದ ಆರಾಧನ ಮಂದಿರದಲ್ಲಿದ್ದ ತೂಗುದೀಪ ಆಡುತ್ತಿರುವುದನ್ನು ತನ್ನ ನಾಡಿ ಬಡಿತಕ್ಕೆ ಹೋಲಿಸಿ, ಅದರ ಸಹಾಯದಿಂದ, ಘಂಟೆಯನ್ನು ಲೆಕ್ಕಹಾಕಬಹುದೆಂದು ತೀರ್ಮಾನಿಸಿದ್ದನು. ಈ ಪರಿಚಯದಿಂದ ತೂಗು ಲೋಲಕವನ್ನು ವಿವರಿಸಿದ್ದನು. ದೂರದರ್ಶಕ ಯಂತ್ರವನ್ನು ತಾನೇ ಕಂಡುಹಿಡಿಯದಿದ್ದರೂ ಅದರ ಉಪಯೋಗಗಳನ್ನು ತಿಳಿದಿದ್ದನು. ಆಕಾಶಗಂಗೆ ಅಥವ ಕ್ಷೀರಪಥ ಒಂದು ನಕ್ಷತ್ರಗಳ ಗುಂಪೆಂದೂ, ಚಂದ್ರಗ್ರಹದ ಮೇಲೆ ಬೆಟ್ಟಗಳಿವೆಯೆಂದೂ, ಸೂರ್ಯನ ಮೈಮೇಲೆ ಕಪ್ಪು ಕಲೆಗಳು ಇವೆಯೆಂದೂ ತಿಳಿದಿದ್ದನು. ಈ ಆಶ್ಚರ್ಯಕರವಾದ ಶೋಧನೆಗಳನ್ನು ಕ್ರೈಸ್ತಮಂಡಲಿ ನಂಬದೆ ಗೆಲಿಲಿಯೊನನ್ನು ಖಂಡಿಸಿ ಅವನಿಂದ ಇವು ಅಸಾಧ್ಯವೆಂದು ಭಾಷೆ ತೆಗೆದುಕೊಂಡಿತು. ಆಗಲೂ 'ಏನೇ ಆದರೂ ಅದು ಚಲಿಸಿಯೇ ಚಲಿಸುತ್ತದೆ' ಎಂದು ಗೆಲಿಲಿಯೊ ಹೇಳಿದನೆಂದು ತಿಳಿಯಲಾಗಿದೆ. ಈ ಶೋಧನೆಗಳ ಸಹಾಯದಿಂದ ರೋಗನಿದಾನ ಮಾಡಲು ಬೇಕಾದ ಸಲಕರಣೆಗಳನ್ನು ಕಂಡುಹಿಡಿಯಲು ಸಾಧ್ಯವಾಯಿತು.

ಮತ್ತೊಬ್ಬ ವೈದ್ಯ, ವಿಲಿಯಂ ಗಿಲ್ಬರ್ಟ್ ವೈದ್ಯರ ಕಾಲೇಜಿಗೆ ಅಧ್ಯಕ್ಷನಾಗಿದ್ದಾಗ 'ಸೂಜಿಗಲ್ಲು' ಎಂಬ ಪುಸ್ತಕವನ್ನು ಬರೆದು, ವಿದ್ಯುಚ್ಛಕ್ತಿ ಪದವನ್ನು ನಿರೂಪಿಸಿದ್ದನು.

ಸ್ಯಾಂಟೊರಿಯೊ

ನಾಡಿ ಬಡಿತದ ಲೆಕ್ಕದಿಂದ ಲೋಲಕದ ತೂಗಾಟವನ್ನು ಲೆಕ್ಕ ಮಾಡಬಹುದೆಂದು ಹೇಳಿದ್ದ ಗೆಲಿಲಿಯೋವಿನ ಶೋಧನೆಯನ್ನು ಹಿಂದುಮುಂದು ಮಾಡಿ ಲೋಲಕ್ಕಿನ ತೂಗಾಟದಿಂದ ನಾಡಿಹೊಡೆತವನ್ನು ಲೆಕ್ಕಮಾಡಬಹುದೆಂದು ಸ್ಯಾಂಟೊರಿಯೊ ಸಮರ್ಥಿಸಿದನು. ಗೆಲಿಲಿಯೊ ಕಂಡುಹಿಡಿದಿದ್ದ ಮದ್ಯಸಾರದ ಶಾಖಮಾಪಕದ ಪರಿಚಯವನ್ನು ಅಭಿವೃದ್ಧಿಪಡಿಸಿ, ಜ್ವರದ ತೀವ್ರತೆಯನ್ನು ಅಳೆಯಲು ೩ ವಿಧವಾದ ಶಾಖಮಾಪಕಗಳನ್ನು ಸ್ಯಾಂಟೊರಿಯೊ ಕಂಡುಹಿಡಿದನು. ಅವುಗಳಲ್ಲಿ ಒಂದನ್ನು ರೋಗಿಯ ಬಾಯಲ್ಲಿಟ್ಟು ಜ್ವರದ ಶಾಖವನ್ನು ಅಳೆಯಬಹುದಾಗಿತ್ತು. ಶಾಖಮಾಪಕವನ್ನು ಕುರಿತು ೧೬೧೨ರಲ್ಲೇ ಸ್ಯಾಂಟೊರಿಯೊ ತಿಳಿಸಿದ್ದರೂ, ೧೬೨೫ರಲ್ಲಿ ಬರೆದ ಪುಸ್ತಕದಲ್ಲಿ ಮಾತ್ರ ಅದರ ಚಿತ್ರ ಮತ್ತು ಉಪಯೋಗ ವಿವರಿಸಿತ್ತು. ಊಟ ಮಾಡಿದ ಮೇಲೂ, ವಿಧವಿಧವಾದ ಕೆಲಸ ಮಾಡಿದ ಮೇಲೂ, ತನ್ನ ತೂಕ ನೋಡಿ, ತನ್ನ ಜಲಮಲ, ಅಗೋಚರ ಬೆವರುಗಳ ತೂಕವನ್ನೂ ಅಳೆದು, ಹೋಲಿಸಿ ನೋಡಿ, ಹೊಟ್ಟೆಗೆ ತೆಗೆದುಕೊಂಡ ಆಹಾರವೆಲ್ಲಾ ಜಲಮಲ, ಅಗೋಚರ ಬೆವರಾಗುವುದಿಲ್ಲವೆಂದೂ, ಆಹಾರದ ಸ್ವಲ್ಪ ಭಾಗ ಅಗೋಚರ ಬೆವರಾಗುತ್ತದೆಂದೂ ವಿವರಿಸಿ, ಮೂಲ ಜೀವದ್ರವ್ಯೀಕರಣಕ್ಕೆ ಇವನೇ ಅಸ್ತಿಭಾರ ಹಾಕಿದನು. ಈ ಸಂಶೋಧನೆಗಳೆಲ್ಲಾ ಸೇರಿ, ೧೬೧೪ರಲ್ಲಿ ಪ್ರಕಟವಾದ ಅವನ "ಡಿ ಮೆಡಿಸಿನಾ ಸ್ಟಾಟಿಕಾ ಅಫೊರಿಸ್ಮಿ" ಎಂಬ ಪುಸ್ತಕ ಬಹಳ ಉತ್ಕೃಷ್ಟವಾಗಿತ್ತು. ಇವನ ಸಂಶೋಧನೆಗಳು ಆಗಿನ ವೈದ್ಯಶಾಸ್ತ್ರದ ಮೇಲೆ ತಕ್ಕ ಪ್ರಭಾವ ಬೀರದಿದ್ದರೂ, ಮುಂದಿನ ಶತಮಾನಗಳ ಸಂಶೋಧನೆಗಳಿಗೆ

ಅತ್ಯುತ್ತಮವಾದ ಸಹಾಯ ನೀಡಿದ್ದವು.

ರಕ್ತಚಲನೆ ಪರಿಶೋಧನೆ

೧೬ನೇ ಶತಮಾನದಲ್ಲಿ ಅಂಗರಚನೆಶಾಸ್ತ್ರ ಎಷ್ಟು ಪ್ರಸಿದ್ಧಿಗೆ ಬಂದಿತ್ತೋ ಅಷ್ಟೇ ಪ್ರಸಿದ್ಧಿಗೆ ೧೭ನೇ ಶತಮಾನದಲ್ಲಿ ದೇಹಶಾಸ್ತ್ರ ಬಂದಿತ್ತು. ದೇಹಶಾಸ್ತ್ರದ ಪ್ರಸಿದ್ಧಿಗೆ ಮುಖ್ಯವಾಗಿ ವಿಲಿಯಂ ಹಾರ್ವೆಯ ರಕ್ತಚಲನೆಯ ಸಂಶೋಧನೆಯೇ ಕಾರಣ ವಾಗಿತ್ತು. ಈ ವಿಶೇಷ ಸಂಶೋಧನೆ ಎಲ್ಲಾ ಸಂಶೋಧನೆಗಳ ಹಾಗೆ ಅನುಕ್ರಮ ವಾಗಿ ಅನೇಕ ಮಾರ್ಗದರ್ಶಕರಿಂದ ಸಲಹೆ ಪಡೆದಿತ್ತು. ಮೊಟ್ಟಮೊದಲಿಗೆ ಪ್ರಯೋಗ ದೇಹಶಾಸ್ತ್ರದ ಪಿತಾಮಹನೆಂದು ಹೆಸರು ಪಡೆದಿದ್ದ ಗ್ಯಾಲೆನ್ ಧಮನಿಗಳಲ್ಲಿ ಗಾಳಿಯ ಬದಲು ರಕ್ತವಿದೆಯೆಂದೂ, ಸಿರದ ರಕ್ತ ಧಮನಿ ರಕ್ತಕ್ಕಿಂತ ಕಪ್ಪಾಗಿದೆಯೆಂದೂ ತೋರಿಸಿದ್ದನು. ಉಬ್ಬರವಿಳಿತಗಳಿಂದ ರಕ್ತ ಚಲಿಸುತ್ತದೆಂದೂ ಹೇಳಿದ್ದನು. ಈ ವಿವರ ಸುಮಾರು೧೪೦೦ ವರ್ಷ ಅದಲು ಬದಲಾಗದೆ ವೈದ್ಯಶಾಸ್ತ್ರಜ್ಞರ ಮನದಲ್ಲಿ ನಾಟಿತ್ತು. ರಕ್ತ, ಬಲಹೃತ್ಕರ್ಣದಿಂದ ಎಡಹೃತ್ಕರ್ಣಕ್ಕೆ ನಡುತಡಕೆಯಲ್ಲಿರುವ ರಂಧ್ರಗಳ ಮೂಲಕ ಹರಿಯುತ್ತದೆಂಬುದೇ ಗ್ಯಾಲೆನ್ನಿನ ಮುಖ್ಯ ವಾದವಾಗಿತ್ತು. ಆದರೆ ನಡುತಡಕೆ ಯನ್ನು ವಿಸೇಲಿಯಸ್ ಪರೀಕ್ಷೆ ಮಾಡಿ ಯಾವ ರಂಧ್ರವೂ ಇಲ್ಲವೆಂದು ತಿಳಿಸಿ, ದೇವರ ಕೃಪೆಯಿಂದ ರಕ್ತ ಬಲಹೃತ್ಕರ್ಣದಿಂದ ಎಡ ಹೃತ್ಕರ್ಣಕ್ಕೆ ನಡುತಡಕೆಯ ಮೂಲಕ ಕಣ್ಣಿಗೆ ಕಾಣಿಸದೆ ಬೆವರುತ್ತದೆಂದು ವ್ಯಂಗ್ಯವಾಗಿ ನುಡಿದಿದ್ದನು. ಹೀಗೆ ವಿಸೇಲಿಯಸ್ ಸಂದೇಹಪಟ್ಟಿದ್ದರೂ, ಅದಕ್ಕೆ ಯಾವ ಸಮಾಧಾನವನ್ನೂ ನೀಡಿರಲಿಲ್ಲ. ಆದರೂ ಅವನ ಅಭಿಪ್ರಾಯದಲ್ಲಿ ಅಂಗರಚನೆ ತಿಳಿಯದೆ ದೇಹಶಾಸ್ತ್ರದ ಪ್ರಯೋಗ ನಡೆಸು ವುದು ಅಸಾಧ್ಯವಾಗಿತ್ತು.

ಇಬಿನ್ ಅಲ್ ನಫೀಸ್

ವಿಸೇಲಿಯಸ್ಸಿಗೂ ಮೊದಲೇ ಅಂದರೆ ೧೩ನೆ ಶತಮಾನದಲ್ಲೇ ಅರಬ್ಬಿ ಔಷಧ ವೈದ್ಯನಾದ ಇಬಿನ್ ಅಲ್ ನಫೀಸ್ ನಡುತಡಕೆಯಲ್ಲಿ ರಂಧ್ರಗಳಿಲ್ಲವೆಂದು ಹೇಳಿದ್ದನು. ಇವನು ಕೈರೊ ಪಟ್ಟಣದ ಮಸ್ಸೂರಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾಗ ಅವಿಸಿನ್ನನ ಗ್ರಂಥವನ್ನು ಟೀಕಿಸಿ ಬರೆದಿದ್ದ ಪುಸ್ತಕದಲ್ಲಿ ಹೀಗೆಂದು ನುಡಿದಿದ್ದನು. ಅದೂ ಅಲ್ಲದೆ ಶ್ವಾಸಕೋಶ ಧಮನಿಯಲ್ಲಿ ರಕ್ತ ಉಬ್ಬಿ, ಶ್ವಾಸಕೋಶಕ್ಕೆ ಹಾದು, ವಾಯು ಮಿಶ್ರ ವಾಗಿ ಶ್ವಾಸಕೋಶದ ಸಿರಕ್ಕೆ ಹಾಯುತ್ತದೆಂದು ಹೇಳಿದ್ದನು. ಹೀಗೆ, ಇಬಿನ್ ಅಲ್ ನಫೀಸ್ ಮೊಟ್ಟಮೊದಲಿಗೆ ಶ್ವಾಸಕೋಶದ ರಕ್ತ ಪರಿಚಲನೆಯನ್ನು ವಿವರಿಸಿದ್ದರೂ ಸುಮಾರು ೭ ಶತಮಾನಗಳ ಕಾಲ ಪಶ್ಚಿಮ ದೇಶಗಳ ಶಾಸ್ತ್ರಜ್ಞರ ಕಿವಿಗೆ ಬಿದ್ದಿರಲಿಲ್ಲ.

ಮೈಕೇಲ್ ಸರ್ವಿಟಸ್

ಶ್ವಾಸಕೋಶದ ರಕ್ತಚಲನೆಯನ್ನು ಸರ್ವಿಟಸ್ ಮತ್ತು ಕೊಲಂಬೊ ಎಂಬುವರು ಕಂಡುಹಿಡಿದರೆಂದು ಸಾಮಾನ್ಯವಾಗಿ ಹೇಳಲಾಗಿದೆ. ಮೈಕೇಲ್ ಸರ್ವಿಟಸ್ ಸರಗೊಸ್ಸ ದಲ್ಲಿ ಮತಧರ್ಮವನ್ನೂ,ಟೌಲೌಸಿಯಲ್ಲಿ ನ್ಯಾಯಶಾಸ್ತ್ರವನ್ನೂ ಕಲಿತು, ಪ್ಯಾರಿಸ್ಸಿನಲ್ಲಿ

ವೈದ್ಯಶಾಸ್ತ್ರವನ್ನು ಕಲಿಯುತ್ತಿದ್ದಾಗ ಗಿಂಟೆರಿಯಸ್, ಸಿಲ್ವಿಯಸ್ ಮತ್ತು ವಿಸೇಲಿಯಸ್‌ರ ಸಹೋದ್ಯೋಗಿಯಾಗಿದ್ದನು. ಇವನು ವಿಶಾಲ ದೃಷ್ಟಿಯುವನಾಗಿದ್ದು, ಕ್ರೈಸ್ತ ಮಂದಿರಗಳನ್ನು ಪುನರ್ರೂಪಿಸುವ ಕಾರ್ಯವನ್ನು ಕುರಿತು ೧೫೫೩ರಲ್ಲಿ ಬರೆದಿದ್ದರಿಂದ ಇವನು ಸೆರೆಮನೆಯಲ್ಲಿರಬೇಕಾಯಿತು. ಅಲ್ಲಿಂದ ಹೇಗೋ ತಪ್ಪಿಸಿಕೊಂಡು ಜಿನೀವದಲ್ಲಿದ್ದ ಜಾನ್ ಕ್ಯಾಲ್ವಿನ್ ರಕ್ಷಣೆಯನ್ನು ಪಡೆಯಲು ಹೋದನು. ಆದರೆ ಇವನ ಅಭಿಪ್ರಾಯಗಳು ಕ್ಯಾಲ್ವಿನ್ನಿಗೂ ಮತ್ತು ಇತರ ಕ್ಯಾತೊಲಿಕ್ ಗುಂಪಿನವರಿಗೂ ಹಿಡಿಸದೆ ಇವನನ್ನು ಸೆರೆಹಿಡಿದು, ವಿಚಾರಣೆ ನಡೆಸಿ, ಶಾಸ್ತ್ರೀಯ ಸಂಪ್ರದಾಯಕ್ಕೆ ವಿರೋಧವಾಗಿ ನುಡಿದಿರುವನೆಂದು, ೧೫೫೩ನೇ ಅಕ್ಟೋಬರ್ ೨೭ರಲ್ಲಿ ಜೀವಸಹಿತ ಸುಟ್ಟರು. ಇವನು ಶ್ವಾಸಕೋಶದ ರಕ್ತಚಲನೆಯನ್ನು ಕುರಿತು, ರಕ್ತ ಶ್ವಾಸಕೋಶ ಧಮನಿಯಿಂದ, ಶ್ವಾಸಕೋಶಕ್ಕೆ ಬಂದು, ದೂರ ತೆರಳಿ, ದಾರಿಯಲ್ಲಿ ಶುದ್ಧ ಕೆಂಪು ಬಣ್ಣ ಹೊಂದಿ, ಪುನಃ ಶ್ವಾಸಕೋಶ ಸಿರದ ಮೂಲಕ ಎಡಹೃತ್ಕರ್ಣ ಸೇರುತ್ತದೆಂದು ಹೇಳಿದ್ದನು. ಇವನ ಶೋಧನೆಯೂ ಯಾರಿಗೂ ಗೋಚರವಾಗದೆ ಇದ್ದು, ಇಂಗ್ಲೀಷ್ ಶಸ್ತ್ರವೈದ್ಯ ಚಾರಲ್ಸ್ ಬರ್ನಾರ್ಡ್ ಸರ್ವಿಟಸ್ ಸತ್ತ ೧೪೪ ವರ್ಷಗಳಾದ ಮೇಲೆ ಬೆಳಕಿಗೆ ತಂದನು.

ರಿಯಾಲ್ಡೊ ಕೊಲೊಂಬೊ

ಕ್ರಿಮೋನದಲ್ಲಿ ೧೫೧೬ರಲ್ಲಿ ಜನಿಸಿದ ರಿಯಾಲ್ಡೊ ಕೊಲೊಂಬೊ ವೆನಿಸ್ಸಿನಲ್ಲೂ, ಪಾಡ್ವದಲ್ಲೂ ವ್ಯಾಸಂಗ ಮಾಡಿ, ಅಂಗರಚನೆಶಾಸ್ತ್ರಜ್ಞರಿಗೆಲ್ಲಾ ಚೆನ್ನಾಗಿ ಪರಿಚಯವಾಗಿದ್ದನು. ೧೫೪೦ರಲ್ಲಿ ಪಾಡ್ವದ ಶಸ್ತ್ರವೈದ್ಯದ ಪ್ರಾಧ್ಯಾಪಕನಾಗಿ ನೇಮಕವಾದನು. ಕೊಂಚ ದಿವಸಗಳಲ್ಲೇ ಪ್ರಾಧ್ಯಾಪಕ ಪದವಿಯನ್ನು ವಿಸೇಲಿಯಸ್ಸಿಗೆ ಬಿಡಬೇಕಾಗಿ ಬಂದು, ತಾನು ಅವನ ಪ್ರತಿನಿಧಿಯಾಗಿ ಅಂಗರಚನೆಶಾಸ್ತ್ರದ ಅಧ್ಯಾಪಕನಾದನು. ಶವಪರೀಕ್ಷೆಯಲ್ಲಿ ಉತ್ತಮನಾಗಿದ್ದರೂ, ವಿಸೇಲಿಯಸ್ಸಿನ ವಿರೋಧದಿಂದ, ಪಾಡ್ವ ಬಿಟ್ಟು, ೧೫೪೬ರಲ್ಲಿ ಪೀಸ ಪಟ್ಟಣಕ್ಕೆ ಅಂಗರಚನೆಶಾಸ್ತ್ರ ಪ್ರಾಧ್ಯಾಪಕನಾಗಿ ಹೋಗಬೇಕಾಯಿತು. ಅಲ್ಲಿಂದ ೪ನೇ ಪಾಲ್ ಪೋಪಿನಿಂದ ಕರೆ ಬಂದು ರೋಂ ಪಟ್ಟಣಕ್ಕೆ ಹೋಗಿ ಅಲ್ಲಿ ೧೫೫೯ರಲ್ಲಿ ಸಾಯುವ ತನಕ ಕೆಲಸ ಮಾಡುತ್ತಿದ್ದನು. ರೋಮಿನಲ್ಲಿದ್ದಾಗ ಪ್ರಯೋಗ ನಡೆಸಿ ಬರೆದ ತನ್ನ ಪುಸ್ತಕದಲ್ಲಿ ನಡುತಡಕೆಯಲ್ಲಿ ರಂಧ್ರಗಳಿಲ್ಲವೆಂದೂ, ಆದುದರಿಂದ ರಕ್ತ ಬಲ ಹೃತ್ಕರ್ಣದಿಂದ ಎಡ ಹೃತ್ಕರ್ಣಕ್ಕೆ ನೇರವಾಗಿ ಹಾಯುವುದು ಸುಳ್ಳೆಂದೂ, ರಕ್ತ ಬಲ ಹೃತ್ಕರ್ಣದಿಂದ ಶ್ವಾಸಕೋಶದ ಧಮನಿ ಮೂಲಕ ಶ್ವಾಸಕೋಶಕ್ಕೆ ಹೋಗಿ, ಅಲ್ಲಿ ವಾಯು ಮಿಶ್ರವಾಗಿ, ಶ್ವಾಸಕೋಶ ಸಿರದ ಮೂಲಕ ಎಡಹೃತ್ಕರ್ಣ ಸೇರುತ್ತದೆಂದು ತಿಳಿಸಿದ್ದನು. ಹೀಗೆ ಪ್ರಯೋಗ ಮಾಡಿ, ಶ್ವಾಸಕೋಶದಲ್ಲಿನ ರಕ್ತಚಲನೆಯನ್ನು ಕೊಲೊಂಬೊ ಕಂಡುಹಿಡಿದಿದ್ದರೂ ಅನೇಕರು ನಂಬದೆ, ಸರ್ವಿಟಸ್‌ನ ಪುಸ್ತಕದಿಂದ ಕಲಿತು ಬರೆದಿರುವನೆಂದು ಹೇಳಿದ್ದರು. ಮತ್ತೆ ಕೆಲವರು ಇದನ್ನು ವಿರೋಧಿಸಿದ್ದರು.

ಸಿಸಾಲ್ಪಿನೊ

ವಿಲಿಯಂ ಹಾರ್ವೆಗೆ ಹಿಂದೆ ಇದ್ದ ಸಿಸಾಲ್ಪಿನೊ ರಕ್ತ ಪರಿಚಲನೆ ಸಂಶೋಧನೆಯಲ್ಲಿ ಸಾಕಷ್ಟು ಮಾರ್ಗದರ್ಶಕನಾಗಿದ್ದನು. ಆಂಡ್ರಿಯ ಸಿಸಾಲ್ಪಿನೊ ಸಸ್ಯಶಾಸ್ತ್ರದಲ್ಲೂ ಮತ್ತು ವೈದ್ಯಶಾಸ್ತ್ರದಲ್ಲೂ ಪ್ರವೀಣನಾಗಿದ್ದು, ಶ್ವಾಸಕೋಶದಲ್ಲಿನ ರಕ್ತ ಚಲನೆಯನ್ನು ಸಮರ್ಥಿಸಿದ್ದಲ್ಲದೆ, ಶರೀರದ ಸಾಮಾನ್ಯ ರಕ್ತಚಲನೆಯನ್ನೂ ಪರಿಚಯ ಮಾಡಿದ್ದನು. ಇದನ್ನು ಸಮರ್ಥಿಸಲು ಸಿರಗಳನ್ನು ದಾರದಿಂದ ಬಿಗಿದು, ಬಿಗಿದ ಸ್ಥಳದ ಕೆಳಗೆ ಸಿರಗಳಲ್ಲಿ ರಕ್ತ ತುಂಬಿ ಉಬ್ಬಿರುವುದನ್ನು ಪ್ರಕಟಪಡಿಸಿದನು. ವೈದ್ಯಶಾಸ್ತ್ರದ ಪ್ರಾಧ್ಯಾಪಕನಾಗಿಯೂ, ರೋಂ ನಗರದ ೮ನೇ ಕ್ಲೆಮೆಂಟ್ ಪೋಪಿಗೆ ವೈದ್ಯನೂ ಆಗಿದ್ದನು. ರಕ್ತಪರಿಚಲನೆ ಎನ್ನುವ ಪದವನ್ನು ರೂಪಿಸಿದವನು ಇವನೇ ಎಂದು ಹೇಳಲಾಗಿದೆ. ಇವನ ಜ್ಞಾಪಕಾರ್ಥವಾಗಿ, ೧೬೦೩ರಲ್ಲಿ ಸತ್ತ ಇವನ ಸಮಾಧಿಯ ಅಡಿಯಲ್ಲಿ ಇವನೇ ರಕ್ತಚಲನೆ ಕಂಡುಹಿಡಿದವನೆಂದು ಕೆತ್ತಿದೆ.

ವಿಲಿಯಂ ಹಾರ್ವೆ

ಈ ಮಹಾಶಯರುಗಳ ಶೋಧನೆಗಳೇ ವಿಲಿಯಂ ಹಾರ್ವೆ ರಕ್ತಪರಿಚಲನೆ ಕಂಡುಹಿಡಿಯಲು ಆಧಾರವಾದವು. ತನ್ನ "ಡಿ ಮೋಟು ಕಾರ್ಡಿಸ್" ಎಂಬ ಪುಸ್ತಕದಲ್ಲಿ ರಕ್ತ ಪರಿಚಲನೆಯನ್ನು ವರ್ಣಿಸುತ್ತಾ, ಮೊದಲು ಹೃತ್ಕುಕ್ಷಿ ಕುಗ್ಗಿ ರಕ್ತ ಹೃತ್ಕರ್ಣಕ್ಕೆ ಹಾಯುತ್ತದೆ. ಹೃತ್ಕರ್ಣ ತುಂಬಿದನಂತರ ಹೃದಯದ ಸ್ನಾಯುಗಳ ಸಂಕೋಚನೆಯಿಂದ ಹೃತ್ಕರ್ಣ ಕುಗ್ಗಿ, ಹೃತ್ಕುಕ್ಷಿಯಿಂದ ಬಂದ ರಕ್ತ ಧಮನಿಗಳಿಗೆ ಹಾಯುತ್ತದೆ. ಬಲ ಹೃತ್ಕರ್ಣದಿಂದ ಶ್ವಾಸಕೋಶ ಧಮನಿಗೂ ಎಡಹೃತ್ಕರ್ಣದಿಂದ ಮಹಾಧಮನಿಗೂ ಚಲಿಸುತ್ತದೆಂದು ಬರೆದಿದ್ದನು. ಶ್ವಾಸಕೋಶದಲ್ಲಿನ ರಕ್ತಚಲನೆಯನ್ನು ವಿವರಿಸುತ್ತ, ಕೊಲೊಂಬೊ ಅಭಿಪ್ರಾಯಗಳನ್ನೇ ಸಮರ್ಥಿಸಿದ್ದನು.

'ಡಿ ಮೋಟು ಕಾರ್ಡಿಸ್'

ತನ್ನ ಹಿಂದಿನ ಅಧ್ಯಾಪಕನಾದ ಫ್ಯಾಬ್ರಿಸಿಯೊ ಬರೆದಿದ್ದ ಸಿರಗಳಲ್ಲಿರುವ ಕವಾಟಗಳ ಕರ್ತವ್ಯದ ವಿವರಗಳನ್ನು ಉದ್ಧರಿಸಿದನು. ಫ್ಯಾಬ್ರಿಸಿಯೊ ಪ್ರಕಾರ ರಕ್ತ ಹೃತ್ಕರ್ಣದಿಂದ ಮಹಾಧಮನಿಗೆ ಹಾದು, ಸಿರಗಳ ಮೂಲಕ ಹೃದಯಕ್ಕೆ ಹಿಂತಿರುಗಿ ಬರುತ್ತದೆಂದು ಗೊತ್ತಾಗಿತ್ತು. ಈ ವಿವರಗಳನ್ನೊಳಗೊಂಡಿದ್ದ ಹಾರ್ವೆಯ "ಡಿ ಮೋಟು ಕಾರ್ಡಿಸ್"ನ್ನು ಅನೇಕರು ಶ್ಲಾಘಿಸಿದ್ದರೂ, ಕೆಲವರು ಕಟುವಾಗಿ ಟೀಕಿಸಿದ್ದರು. ಹಾರ್ವೆಯ ಸಹೋದ್ಯೋಗಿ ಅಲೆಗ್ಸಾಂಡರ್ ರೀಡ್ ಹಾರ್ವೆಯ ಹೇಳಿಕೆಯನ್ನು ತುಂಬಾ ಕಡೆಗಣಿಸಿದ್ದನು. ವೆನಿಸ್ಸಿನ ಎಮಿಲಿಯೊ ಪ್ಯಾರಿಸಾನೊ, ಪ್ಯಾರಿಸ್ಸಿನ ಜೇಮ್ಸ್ ಪ್ರಿಮ್ರೋಸ್, ನ್ಯೂರೆಂಬರ್ಗಿನ ಕ್ಯಾಸ್ಪರ್ ಹಾಫ್ಮನ್ ಮತ್ತು ಪಾಡ್ವದ ಜೋನೆಸ್ ವೆಸ್ಲಿಂಗ್ ಮುಂತಾದವರೆಲ್ಲಾ ಹಾರ್ವೆಯ ನುಡಿಗಳನ್ನು ಹೀಯಾಳಿಸಿ ಟೀಕಿಸಿದ್ದರು. ಅದರಲ್ಲೂ ಪ್ಯಾರಿಸ್ಸಿನ ಅಂಗರಚನೆಶಾಸ್ತ್ರದ ಪ್ರಾಧ್ಯಾ

ಪಕ ಜೋನೆಸ್ ರಿಯೊಲಾನ್ ಕಟು ಟೀಕೆಗಾರರಲ್ಲೆಲ್ಲಾ ಅತಿ ಕಟು ಟೀಕೆಗಾರನಾಗಿದ್ದನು. ಹಾರ್ವೆಯನ್ನು ಹೊಗಳಿ ನುಡಿದಿದ್ದವರಲ್ಲಿ ರೀನೆ ಡಿಸ್ಕಾರ್ಟಿಸ್ ಮತ್ತು ಮೊಂಟ್‌ಪೆಲ್ಲಿಯರ್‌ನ ರಿವಿರೆ ಮುಖ್ಯವಾದವರು. ಹಾರ್ವೆಯ ನುಡಿಗಳು ಯೋಗ್ಯವಾದವೆಂದು ಕ್ರಮೇಣ ಗೊತ್ತಾಗಿ ಯೂರೋಪಿನ ಉತ್ಕೃಷ್ಟ ಅಂಗರಚನೆಶಾಸ್ತ್ರಜ್ಞರೆಲ್ಲಾ ಅವನಿಗೆ ಬೆಂಬಲ ಕೊಟ್ಟರು. ಇಷ್ಟಾದರೂ ರಿಯೊಲಾನ್ ಮಾತ್ರ ಟೀಕಿಸುವುದನ್ನು ಬಿಟ್ಟಿರಲಿಲ್ಲ.

ಹಾರ್ವೆಯ ಬಾಲ್ಯ

ವಿಲಿಯಂ ಹಾರ್ವೆ (೧೫೭೮–೧೬೫೭) ಫೋಕ್ಸ್‌ಟನ್ ಪೌರಸಭಾಧ್ಯಕ್ಷನಾಗಿದ್ದ ಥಾಮಸ್ ಹಾರ್ವೆಯ ಹಿರಿಯ ಮಗ, ಇವನಿಗೆ ೭ ಜನ ತಮ್ಮಂದಿರಿದ್ದರು. ಫೋಕ್ಸ್‌ಟನ್‌ನಲ್ಲಿ ಜನಿಸಿ, ಕ್ಯಾಂಟರ್ಬರಿ ವ್ಯಾಕರಣ ಶಾಲೆಯಲ್ಲೂ ಮತ್ತು ಕೇಂಬ್ರಿಡ್ಜ್ ಕೇಯಸ್ ಕಾಲೇಜಿನಲ್ಲೂ ವ್ಯಾಸಂಗ ಮಾಡಿ, ಆಗ್ಗೆ ಬಹು ಶ್ರೇಷ್ಠವಾಗಿದ್ದ ಪಾಡ್ವ ವಿಶ್ವವಿದ್ಯಾಲಯದಲ್ಲಿ ವೈದ್ಯ ವಿದ್ಯೆ ಮುಂದುವರಿಸಿ, ೪ ವರ್ಷಗಳಾದನಂತರ ವೈದ್ಯ ಪಂಡಿತ ಪದವಿಯನ್ನು ೧೬೦೨ರಲ್ಲಿ ಪಡೆದನು. ವಿಶ್ವವಿದ್ಯಾಲಯದ ಮಂದಿರ ಒಂದರಲ್ಲಿರುವ ಅವನ ಬಿರುದಾವಳಿ ಲಾಂಛನ (೨ ಹಾವುಗಳು ಸುತ್ತುಕೊಂಡಿರುವ ಉರಿಯುವ ದೀಪಸ್ತಂಭ) ೧೮೯೨ರಲ್ಲಿ ಪತ್ತೆಯಾಯಿತು. ಪಾಡ್ವದಲ್ಲಿದ್ದಾಗ ವಿಸೇಲಿಯಸ್, ಫ್ಯಾಬ್ರಿಸಿಯೊ ಅವನ ಗುರುಗಳಾಗಿದ್ದರು. ಸಿರಗಳಲ್ಲಿರುವ ಕವಾಟಗಳ ಕ್ರಿಯೆ ಫ್ಯಾಬ್ರಿಸಿಯೊಗೆ ಅರ್ಥವಾಗಲಿಲ್ಲವಾದರೂ, ರಕ್ತ ಪರಿಚಲನೆಗೆ ಅವುಗಳ ಉಪಯೋಗ ಹಾರ್ವೆಗೆ ಚೆನ್ನಾಗಿ ತಿಳಿದಿತ್ತು.



ವಿಲಿಯಂ ಹಾರ್ವೆಯ ಬಿರುದಾವಳಿ ಲಾಂಛನ.

ವಿದ್ಯಾರ್ಥಿ ಪಾಡ್ವಕ್ಕೆ ಸೇರಿದ ಕೂಡಲೆ ಈ ರೀತಿಯ ಫಲಕ ಅವನ ಹೆಸರಿನಲ್ಲಿ, ವಿದ್ಯಾಶಾಲಾಂಗಣದ ಗೋಡೆಯ ಮೇಲೆ ಬಣ್ಣದಲ್ಲಿ ಚಿತ್ರಿಸುವುದು ವಾಡಿಕೆ. ಹಾರ್ವೆಯ ಫಲಕ ಬಲ ಕಂಬದ ಮೇಲೆ ಕಾಣುತ್ತದೆ.

ಲಮ್ಲಿ ಉಪನ್ಯಾಸ ಮಾಲೆ

ವ್ಯಾಸಂಗ ಮುಗಿಸಿ ಲಂಡನ್ನಿಗೆ ಹಿಂತಿರುಗಿದ ಕೆಲವು ವರ್ಷಗಳಲ್ಲೇ, ವೈದ್ಯರ ವಿದ್ಯಾಶಾಲೆಯ ಸದಸ್ಯನಾಗಿಯೂ, ಸಂತ ಬಾರ್ತೊಲೊಮ್ಯು ಆಸ್ಪತ್ರೆಯ ವೈದ್ಯನಾಗಿಯೂ ನೇಮಕವಾದನು. ಈ ಆಸ್ಪತ್ರೆಯಲ್ಲಿ ಇವನು ವಾರಕ್ಕೆ ಒಂದು ದಿವಸ ಬಡವರಿಗೆ ಉಚಿತವಾಗಿ ಔಷಧೋಪಚಾರ ಮಾಡಬೇಕಾಗಿತ್ತು. ಲಾರ್ಡ್ ಲಮ್ಲಿ ಮತ್ತು ಡಾ|| ಕಾಲ್ಡ್‌ವೆಲ್ ಹೆಸರಿನಲ್ಲಿ ೧೫೮೧ರಲ್ಲಿ ಸ್ಥಾಪಿತವಾದ ಅಂಗರಚನೆಶಾಸ್ತ್ರ ಮತ್ತುಶಸ್ತ್ರವೈದ್ಯದ ಅಧ್ಯಾಪಕತ್ವಕ್ಕೆ ಇವನು ನೇಮಿತವಾದುದರಿಂದಲೇ ಇವನಿಗೆ




ವಿಲಿಯಂ ಹಾರ್ವೆ (೧೫೭೮-೧೬೫೭)

ಅನಂತಗೌರವ ಸಂದಿತು.ಈ ಅಧಿಕಾರದಲ್ಲಿ, ವಾರಕ್ಕೆ ೨ ಸಲ,ವರ್ಷವೆಲ್ಲಾ ಉಪನ್ಯಾಸ ಮಾಡಬೇಕಾಗಿತ್ತು. ಇವನ ಮೊದಲನೆಯ ಉಪನ್ಯಾಸದಂತೆ ೧೬೧೬ನೇ ಏಪ್ರಿಲ್ ೧೬ ರಲ್ಲಿ ಷೇಕ್ಸ್‌ಪಿಯರ್ ಸಾಯುವುದಕ್ಕೆ ಒಂದು ವಾರ ಮುಂಚಿತವಾಗಿ ನಡೆಯಿತು. ೪೦ ವರ್ಷಗಳ ಕಾಲ ಈ ಹುದ್ದೆಯ ಅಧಿಕಾರ ವಹಿಸಿದ್ದನು. ಇವನು ನಡೆಸಿದ ಮೊದಲನೆಯ ಉಪನ್ಯಾಸ ಮಾಲೆಯ ಹಸ್ತಪ್ರತಿ ಈಗಲೂ ಬ್ರಿಟಿಷ್ ಪ್ರದರ್ಶನಾಲಯದಲ್ಲಿದೆ. ಹಸ್ತಪ್ರತಿ ಲ್ಯಾಟಿನ್ ಮತ್ತು ಇಂಗ್ಲೀಷ್ ಪದಗಳ ಮಿಶ್ರ ಭಾಷೆಯಲ್ಲಿ, ಓದಲು ಕಷ್ಟವಾದ ಮೋಡಿ ಅಕ್ಷರಗಳಲ್ಲಿ ಬರೆಯಲಾಗಿದೆ. ಈ ಮೊದಲನೇ ಹಸ್ತಪ್ರತಿಯಲ್ಲೇ ರಕ್ತ ವೃತ್ತಾಕಾರದಲ್ಲಿ ಸುತ್ತುತ್ತದೆಂದೂ ಹಾಗೂ ಹೃದಯ ಸಂಕೋಚನೆಯಿಂದ ರಕ್ತ ಮುಂದೆ ಚಲಿಸುತ್ತದೆಂದೂ ತಿಳಿಸಿದ್ದನು. ಹೀಗೆ ಹೇಳಿ ೧೨ ವರ್ಷಗಳಾದರೂ ಪ್ರಕಟವಾಗದೆ, ಪ್ರತಿಯೊಂದು ಸಂಗತಿಯೂ ಸಂಶಯವಿಲ್ಲದೆ ದೃಢವಾದನಂತರ, ೭೨ ಪುಟಗಳ "ಡಿ ಮೋಟು ಕಾರ್ಡಿಸ್" ಪುಸ್ತಕ ಪ್ರಕಟವಾಗಿ, ೧೬೨೮ರಲ್ಲಿ ಫ್ರಾಂಕ್‌ಫರ್ಟ್

ಪಟ್ಟಣದಲ್ಲಿ ಅಚ್ಚಾಯಿತು. ವೈದ್ಯ ಸಾಹಿತ್ಯದಲ್ಲೇ ಅತಿ ಶ್ರೇಷ್ಠವಾಗಿದ್ದ ಈ ಪುಸ್ತಕ ವನ್ನು ೧ನೇ ಚಾರಲ್ಸ್ ದೊರೆಗೆ ಅರ್ಪಿಸಲಾಗಿತ್ತು.

ವಿಲಿಯಂ ಹಾರ್ವೆ ಕಪ್ಪು ಗುಂಗುರು ಕೂದಲು, ಕಪ್ಪು ಕಣ್ಣು, ಕಂದು ಬಣ್ಣದ ಶರೀರದವನಾಗಿ ಕುಳ್ಳನಾಗಿದ್ದನು. ತಾನು ಯಾವಾಗಲೂ ಧರಿಸುತ್ತಿದ್ದ ಬಾಕುವನ್ನು ಆಗಾಗ್ಗೆ ಮುಟ್ಟಿನೋಡಿ ತನ್ನ ಪುಕ್ಕಲುತನವನ್ನು ವ್ಯಕ್ತಪಡಿಸುತ್ತಿದ್ದನು. ವೈದ್ಯವೃತ್ತಿಯಲ್ಲಿ ಹೆಚ್ಚು ಪ್ರಖ್ಯಾತಿ ಪಡೆಯುದಿದ್ದರೂ ಸಾಕಷ್ಟು ಹಣ ಸಂಪಾದಿಸುತ್ತಿದ್ದನು. ಆದರೆ ರಕ್ತಪರಿಚಲನೆಯ ಶೋಧನೆಯನ್ನು ಪ್ರಕಟಿಸಿದ ಮೇಲೆ ಅವನಿಗಿದ್ದ ವೈದ್ಯದ ಗೌರವ ಕುಸಿಯಿತೆಂದು ಹೇಳಲಾಗಿದೆ. ಇದಕ್ಕೆ ರಿಯೊಲಾನಿನ ವಿರೋಧವೇ ಕಾರಣವೆಂದಿದ್ದರು. ಇವನು ರೋಗಿಗಳನ್ನು ನೋಡಲು ಆಗಿನ ಕಾಲದ ಪದ್ಧತಿಯಂತೆ ಕುದುರೆ ಮೇಲೆ ಹೋಗುತ್ತಿದ್ದನೆಂದೂ ಅವನ ಸೇವಕ ನಡೆದುಬರುತ್ತಿದ್ದನೆಂದೂ ತಿಳಿದಿದೆ.



ಜೀನ್ ರಿಯೋಲಾನ್ (೧೫೮೦–೧೬೫೭)
ವಿಲಿಯಂ ಹಾರ್ವೆಯ ಕಟ್ಟಾ ವಿರೋಧಿ

ಹಾರ್ವೆಯ ಇತರ ಸಂಶೋಧನೆಗಳು

೧೬೧೮ರಲ್ಲಿ ೧ನೇ ಜೇಮ್ಸ್ ದೊರೆ ಹಾರ್ವೆಯನ್ನು ಪ್ರಧಾನ ವೈದ್ಯನನ್ನಾಗಿಯೂ, ಅನಂತರ ಬಂದ ಅವನ ಮಗ ೧ನೇ ಚಾರಲ್ಸ್ ಸಾಮಾನ್ಯ ವೈದ್ಯನನ್ನಾಗೂ ನೇಮಿಸಿದ್ದರು. ದೊರೆಗಳು ಪ್ರಯಾಣ ಹೋದಾಗ ಇವನು ಸಂಗಡ ಹೋಗುತ್ತಿದ್ದನು. ಸ್ಕಾಟ್ಲೆಂಡಿನಲ್ಲಿ ದೊರೆಯ ಪಟ್ಟಾಭಿಷೇಕಕ್ಕೆ ಹೋಗಿದ್ದಾಗ, ಎಡಿನ್‌ಬರೊ ಪಟ್ಟಣದ ತೋಟಗಳಿಗೂ, ಮೃಗಾಲಯಗಳಿಗೂ ಭೇಟಿಕೊಟ್ಟು, ಅನೇಕ ವಿಷಯಗಳನ್ನು ನೋಡಿ ವಿವರಿಸಿದ್ದನು. ಹೃದಯದ ಸಂಕೋಚನೆಯನ್ನು ತಣ್ಣ ರಕ್ತವುಳ್ಳ ಕಪ್ಪೆ, ಮೀನುಗಳಲ್ಲಿ ಪರೀಕ್ಷಿಸಿದರೆ ಚೆನ್ನಾಗಿ ಅರಿವಾಗುತ್ತದೆಂದು ಹೇಳಿದ್ದನು. ಎಲ್ಲಾ ವಿಧದ ಪ್ರಾಣಿಗಳ ಅಂಗರಚನೆಯನ್ನು ತಿಳಿದು ಹೋಲಿಕೆಯ ಅಂಗರಚನೆಶಾಸ್ತ್ರವನ್ನು ಬರೆದಿದ್ದನು. ಇದರ ಹೆಚ್ಚು ಭಾಗ ನಾಶವಾಗಿ ವಿಜ್ಞಾನಕ್ಕೆ ಕುಂದು ಬಂದಂತಾಗಿದೆ. ಸ್ಕಾಟ್ಲೆಂಡಿನ ಪ್ರಯಾಣ ಮುಗಿಸಿ ಹಿಂತಿರುಗಿದ ಕೂಡಲೇ

ದೊರೆ ಆಜ್ಞೆ ಮೇರೆ, ೧೫೦ ವರ್ಷ ಬದುಕಿದ್ದ ಥಾಮಸ್ ಪಾರ್‌ನ ಮೃತ ದೇಹವನ್ನು ಪರೀಕ್ಷಿಸಿ, ಅಳ್ಳೆಪರೆ ಪುಪ್ಪುಸುರಿತದಿಂದ ಮರಣ ಉಂಟಾಗಿತ್ತೆಂದೂ, ಅದಕ್ಕೆ ಲಂಡನ್ನಿನ ವಾಯುಮಂಡಲದ ವಾತಾವರಣವೂ, ಪುಷ್ಟಿಕರವಾದ ಆಹಾರವೂ ಮತ್ತು ಉತ್ತಮ ದರ್ಜೆಯ ವಾಸವೂ ಕಾರಣಗಳೆಂದು ತಿಳಿಸಿದ್ದನು. ೧೬೪೨ರ ಎಡ್ಜ್ ಹಿಲ್ ಯುದ್ಧದಲ್ಲಿ ತೊಡಗಿದ್ದ ಚಾರಲ್ಸ್ ದೊರೆ ಸತ್ತು, ರಾಜ ಪಕ್ಷದವರು ಸೋತ ಮೇಲೆ ಹಾರ್ವೆ ಆಕ್ಸ್‌ಫರ್ಡ್‌ಗೆ ಹಿಂತಿರುಗಿ, ಭ್ರೂಣಶಾಸ್ತ್ರ ಅಧ್ಯಯನ ಮಾಡಿ, "ಡಿ ಜನಿವೇಷನ್ ಅನಿಮಾಲಿಯಂ" ಎಂಬ ಉತ್ಕೃಷ್ಟವಾದ ಪುಸ್ತಕವನ್ನು ೧೬೫೧ರಲ್ಲಿ ಪ್ರಕಟಿಸಿದನು. ಇದರಲ್ಲಿ ಸೂಲಗಿತ್ತಿಶಾಸ್ತ್ರವೂ ಅಡಕವಾಗಿತ್ತು. ಇದು ಇಂಗ್ಲೀಷಿನಲ್ಲಿ ಬರೆದ ಪ್ರಸವ ಶಾಸ್ತ್ರದ ಮೊದಲನೇ ಪುಸ್ತಕ. ಪ್ರಾಣಿಗಳಲ್ಲೂ; ಮನುಷ್ಯನಲ್ಲೂ, ಭ್ರೂಣದ ಬೆಳವಣಿಗೆಯನ್ನು ವಿವರಿಸುತ್ತ ಜೈವಾಂಕುರ ಸೃಷ್ಟಿಯಿಂದುಂಟಾಗುತ್ತದೆಂದೂ, ಮೊಟ್ಟೆಯಿಂದ ಮರಿಯಾಗುತ್ತದೆಂದೂ ತಿಳಿಸಿದ್ದನು. ಹೆರಿಗೆಯಲ್ಲಿ, ಭ್ರೂಣದ ಚಲನದಿಂದಲೇ ಮಗು ಹುಟ್ಟುತ್ತದೆಂದೂ ತಿಳಿಸಿದ್ದನು

ಇಷ್ಟೊತ್ತಿಗೆ, ವಿಲಿಯಂ ಹಾರ್ವೆಗೆ ೭೦ ವರ್ಷಗಳ ಮೇಲಾಗಿತ್ತು. ಕಟ್ಟು ವಾರೆಯ ಕೀಲುನೋವಿನಿಂದ ನರಳುತ್ತಿದ್ದರೂ ಎಂದಿನಂತೆ ಯಾವಾಗಲೂ ಚುರುಕಾಗಿದ್ದನು. ಇವನ ಔದಾರ್ಯಕ್ಕೆ ತಕ್ಕಂತೆ, ವೈದ್ಯರ ವಿದ್ಯಾಶಾಲೆಗೆ ತನ್ನ ಪುಸ್ತಕ ಭಂಡಾರವನ್ನೂ ವಸ್ತುಸಂಗ್ರಹವನ್ನೂ ದಾನ ಮಾಡಿದನು ತನಗೆ ವಯಸ್ಸಾದ್ದರಿಂದ ವೈದ್ಯಶಾಲೆಯ ಅಧ್ಯಕ್ಷನಾಗಲು ಸಮ್ಮತಿಸಿರಲಿಲ್ಲ. ೧೬೫೭ನೇ ಜೂನ್ ೩ರಲ್ಲಿ ೮೦ನೇ ವಯಸ್ಸಿನಲ್ಲಿ ಮೃತಪಟ್ಟ. ಅವನ ಪಾರ್ಥಿವ ಶರೀರವನ್ನು ಸೀಸದಲ್ಲಿಟ್ಟು, ಲಂಡನ್ನಿಗೆ ೫೦ ಮೈಲಿ ದೂರದಲ್ಲಿದ್ದ ಎಸೆಕ್ಸ್‌ನ ಹೆಂಪ್‌ಸ್ಟೆಡ್‌ನಲ್ಲಿ ಹೂಳಲಾಯಿತು.

ಹೃದಯ ಟೊಳ್ಳಾದ ಅವಯವವೆಂದೂ ಗೊತ್ತಿದ್ದರೂ, ವೃತ್ತಾಕಾರದಲ್ಲಿ ರಕ್ತ ಸುತ್ತುತ್ತದೆಂದು ತಿಳಿದಿದ್ದರೂ, ರಕ್ತ ಎಲ್ಲಿಂದ ಬರುತ್ತದೆ, ಎಲ್ಲಿಗೆ ಹೋಗುತ್ತದೆ ಮತ್ತು ಏಕೆ ಹೋಗುತ್ತದೆ ಎಂಬ ಅಂಶಗಳಿಗೆ ಇನ್ನೂ ಉತ್ತರ ದೊರಕಿರಲಿಲ್ಲ. ಶರೀರದ ಪುಷ್ಟಿಗೋ ಶರೀರಕ್ಕೆಲ್ಲಾ ಶಾಖ ಹರಡುವುದಕ್ಕೋ ಖಚಿತವಾಗಿಲ್ಲವೆಂದು ಹಾರ್ವೆ ಹೇಳಿದ್ದನು.

ಗ್ಯಾಸ್ಪಾರ್ ಅಸೆಲ್ಲಿ

ಕ್ರಿಮೊನಾದ ಗ್ಯಾಸ್ಪಾರ್ ಅಸೆಲ್ಲಿ (೧೫೮೧-೧೬೨೬) ಕಂಡುಹಿಡಿದಿದ್ದ ಅನ್ನಕ್ಷೀರನಾಳಗಳನ್ನೂ, ಮತ್ತು ೧೬೪೭ರಲ್ಲಿ ಜೀನ್ ಪೆಕೆಟ್ ವ್ಯಕ್ತಪಡಿಸಿದ್ದ ಅನ್ನಕ್ಷೀರ ನಾಳಕ್ಕೂ ರಕ್ತನಾಳಕ್ಕೂ ಇರುವ ಸಂಬಂಧವನ್ನೂ ಹಾರ್ವೆ ನಂಬಿರಲಿಲ್ಲ. ಅಸೆಲ್ಲಿ ಅನ್ನಕ್ಷೀರ ನಾಳಗಳ ವಿಚಾರ ಬರೆದಿದ್ದ ಪುಸ್ತಕ ಹಾರ್ವೆ ೧೬೨೭ರಲ್ಲಿ ಬರೆದಿದ್ದ "ಡಿ ಮೋಟುಸ್ ಕಾರ್ಡಿಸ್" ಬೆಳಕಿಗೆ ಬರುವುದಕ್ಕೆ ಒಂದು ವರ್ಷ ಮುಂಚಿತವಾಗಿಯೇ ಪ್ರಕಟವಾಗಿತ್ತು. ನಾಯಿಯ ಕರುಳು ಮತ್ತು ಅಂತ್ರಪಟಲದಲ್ಲಿ ಬಿಳಿಯ ನಾಳಗಳಿರುವುದನ್ನು ಇದರಲ್ಲಿ ವಿವರಿಸಿದ್ದನು.

ಒಲಾಫ್ ರುಡ್ಬೆಕ್

ಇದಾದ ೩೦ ವರ್ಷಗಳಾದ ಮೇಲೆ ಒಲಾಫ್ ರುಡ್ಬೆಕ್ ಪಾಡ್ವದಲ್ಲಿ ವ್ಯಾಸಂಗ ಮಾಡುತ್ತಿದ್ದ ಸ್ವೀಡನ್ನಿನ ವಿದ್ಯಾರ್ಥಿ. ದುಗ್ಧರಸನಾಳಗಳನ್ನು ಕಂಡುಹಿಡಿದು, ಅನ್ನ ಕ್ಷೀರನಾಳಗಳಿಂದ ವ್ಯತ್ಯಾಸ ಮಾಡುವುದನ್ನು ತಿಳಿಸಿದನು.

ಮಾರ್ಸೆಲ್ಲೋ ಮ್ಯಾಲ್ಪಿಜಿ

ವೃತ್ತಾಕಾರದಲ್ಲಿ ರಕ್ತ ಸುತ್ತಬೇಕಾಗಿದ್ದರೆ ಕಿರು ಧಮನಿಗಳಿಗೂ ಕಿರು ಸಿರಗಳಿಗೂ ಇರುವ ಸಂಪರ್ಕವನ್ನು ಹಾರ್ವೆ ತಿಳಿದಿದ್ದರೂ, ಪ್ರಯೋಗಗಳಿಂದ ಕಣ್ಣಾರೆ ನೋಡಲು ತೋರಿಸಿರಲಿಲ್ಲ. ಇದನ್ನು ಬೊಲೋನಾದ ಮಾರ್ಸೆಲ್ಲೋ ಮ್ಯಾಲ್ಪಿಜಿ (೧೬೨೮-೯೪) ಸೂಕ್ಷ್ಮದರ್ಶಕದ ಸಹಾಯದಿಂದ ಕಣ್ಣಾರೆ ನೋಡಲು ತೋರಿಸಿದನು. ಕಪ್ಪೆಯ ಶ್ವಾಸಕೋಶವನ್ನು ಸೂಕ್ಷ್ಮದರ್ಶಕದಡಿ ಇಟ್ಟು ಪರೀಕ್ಷಿಸುತ್ತಿದ್ದಾಗ ಕಿರು ಧಮನಿಗಳಿಗೂ ಕಿರು ಸಿರಗಳಿಗೂ ಲೋಮನಾಳಗಳ ಮೂಲಕ ಇರುವ ಸಂಪರ್ಕವನ್ನು ಮ್ಯಾಲ್ಪಿಜಿ ನೋಡಿದ ಮೇಲೆ ರಕ್ತಪರಿಚಲನೆಯ ಎಲ್ಲಾ ಸಂಗತಿಗಳು ಸಂಪೂರ್ಣವಾಗಿ ತಿಳಿದಂತಾಯಿತು. ಅಲ್ಲಿಗೆ ಹಾರ್ವೆಯ ಶೋಧನೆಯೂ ಮುಗಿದಂತಾಯಿತು. ಹಾರ್ವೆ "ಡಿ ಮೋಟು ಕಾರ್ಡಿಸ್" ಪ್ರಕಟಿಸಿದ ಹಾಗೂ ಸೂಕ್ಷ್ಮದರ್ಶಕ ಯಂತ್ರ ಇಟಲಿಗೆ ಬರುವುದಕ್ಕೆ ೪ ವರ್ಷ ಮೊದಲು (೧೬೨೮) ಮ್ಯಾಲ್ಪಿಜಿ, ಬೊಲೋನ ಹತ್ತಿರವಿದ್ದ ಹಳ್ಳಿಯೊಂದರಲ್ಲಿ ಜನಿಸಿದನು. ಆದ್ದರಿಂದ ಮ್ಯಾಲ್ಪಿಜಿ ಹುಟ್ಟುವುದಕ್ಕಿಂತ ಅನೇಕ ವರ್ಷಗಳ ಹಿಂದೆಯೇ ಸೂಕ್ಷ್ಮದರ್ಶಕದ ಉಪಯೋಗ ತಿಳಿದಿತ್ತು.

ಮ್ಯಾಲ್ಪಿಜಿ ೧೬೫೩ರಲ್ಲಿ ವೈದ್ಯಶಾಸ್ತ್ರದಲ್ಲಿ ಬೊಲೋನ ವಿಶ್ವವಿದ್ಯಾಲಯದಿಂದ ಪಂಡಿತ ಪದವಿ ಪಡೆದು, ಆಗ ವೈದ್ಯ ಪ್ರಾಧ್ಯಾಪಕನಾಗಿದ್ದ ಬಾರ್ಟೊಲೊಮಿಯೊ ಮಸ್ಸಾರಿಯ ಆಪ್ತ ಶಿಷ್ಯನಾಗಿದ್ದು, ಅವನ ತಂಗಿಯನ್ನೇ ಲಗ್ನವಾಗಿದ್ದನು. ಮಸ್ಸಾರಿ ಸತ್ತನಂತರ ಮ್ಯಾಲ್ಪಿಜಿಯೇ ವೈದ್ಯಶಾಸ್ತ್ರದ ಪ್ರಾಧ್ಯಾಪಕನಾಗಿ ಬಹಳ ಪ್ರಖ್ಯಾತಿ ಪಡೆದಿದ್ದನು. ಈ ಸಮಾಚಾರವನ್ನು ಕೇಳಿ, ಟಸ್ಕನಿಯ ೨ನೇ ಫರ್ಡಿನೆಂಡ್ ಪೀಸ ವಿಶ್ವವಿದ್ಯಾಲಯವನ್ನು ಇಟಲಿಯ ಉತ್ಕೃಷ್ಟ ವಿಶ್ವವಿದ್ಯಾಲಯವನ್ನಾಗಿ ಮಾಡುವ ಉದ್ದೇಶದಿಂದ ಮ್ಯಾಲ್ಪಿಜಿಯನ್ನು ಬರಮಾಡಿಕೊಂಡನು. ಪೀಸದಲ್ಲಿ ೩ ವರ್ಷವಿದ್ದು ಬೊರೆಲ್ಲಿ ಸ್ನೇಹ ಸಂಪಾದಿಸಿ, ಪುನಃ ಬೊಲೋನೊವಿಗೆ ಬಂದು ವೈದ್ಯಶಾಸ್ತ್ರ ಪ್ರಾಧ್ಯಾಪಕನಾಗಿ, ೧೬೯೪ರಲ್ಲಿ ಸಾಯುವ ತನಕ ಕೆಲಸ ಮಾಡುತ್ತಿದ್ದನು. ಬೊಲೋನಾಕ್ಕೆ ಹಿಂತಿರುಗಿದಾಗ ಲಂಡನ್ನಿನ ರಾಜಸಂಸ್ಥೆಯಿಂದ ಪತ್ರವ್ಯವಹಾರ ನಡೆಸಲು ಕರೆಬಂದು, ಒಪ್ಪಿಕೊಂಡು ತನ್ನ ಲೇಖನಗಳನ್ನು ಈ ಸಂಸ್ಥೆ ವತಿಯಿಂದ ಪ್ರಕಟಮಾಡಲು ಪ್ರಾರಂಭಿಸಿದ್ದನು. ಚರ್ಮದ ಪೊರೆಗಳನ್ನೂ, ತೊರಳೆಯ ದುಗ್ಧರಸ ಗ್ರಂಥಿಗಳನ್ನೂ, ಮೂತ್ರಪಿಂಡದ ಗ್ಲಾಮೊರುಲೈಗಳನ್ನೂ, ಇವನೇ ಮೊದಲಿಗೆ ಕಂಡುಹಿಡಿದವನು. ಹೀಗೆ ಎಲ್ಲಾ ಸಸ್ಯ ಮತ್ತು ಪ್ರಾಣಿ ವರ್ಗಗಳ ವಿಷಯಗಳಲ್ಲೂ ಕೆಲಸ ಮಾಡಿ, ಸೂಕ್ಷ್ಮ

ದರ್ಶಕದ ಅಂಗರಚನೆಕಾರನೆಂದು ಹೆಸರು ಪಡೆದಿದ್ದನು.



ಮಾರ್ಸೆಲ್ಲೊ ಮ್ಯಾಲ್ಪಿಜಿ ಪಿಂಡಶಾಸ್ತ್ರದ ಪಿತಾಮಹ.
ಅವನು ಬರೆದ ಅಂಡಾಶಯದ ಚಿತ್ರಗಳು (೧೬೬೬)

ಆಕ್ಸ್‌ಫರ್ಡಿನ ದೇಹಶಾಸ್ತ್ರ ವಿಜ್ಞಾನಿಗಳ ಕೊಡುಗೆ

ಇಷ್ಟಾದರೂ ರಕ್ತ ಏತಕ್ಕೆ ಸುತ್ತುತ್ತಿದೆ ಎನ್ನುವ ಪ್ರಶ್ನೆಗೆ ಉತ್ತರವಿರಲಿಲ್ಲ. ಈ ಪ್ರಯತ್ನದಲ್ಲಿ ರಾಜಸಂಸ್ಥೆಯ ಸ್ಥಾಪಕರಲ್ಲಿ ಚಿಕ್ಕ ವಯಸ್ಸಿನ ನಾಲ್ವರು ಆಕ್ಸ್‌ಫರ್ಡ್ ವಿಜ್ಞಾನಿಗಳು ಉತ್ತರವನ್ನು ಒದಗಿಸಲು ಹೆಜ್ಜೆ ಹೆಜ್ಜೆ ಇಟ್ಟು ಬಗೆಹರಿಸಲೆತ್ನಿಸಿದರು.

ರಾಬರ್ಟ್ ಬಾಯಿಲ್

ಇವರಲ್ಲಿ ಮೊದಲನೆಯ ರಾಬರ್ಟ್ ಬಾಯಿಲ್ (೧೬೨೭–೯೧) ಹಣವಂತನಾಗಿದ್ದು, ತನ್ನ ಸಂಪತ್ತನ್ನೂ ಮತ್ತು ಮೇಧಾವಿಶಕ್ತಿಯನ್ನೂ ವಿಜ್ಞಾನಕ್ಕೆ ಮುಡುಪಾಗಿ ಕೊಟ್ಟು ಶೋಧನೆಯಲ್ಲಿ ತೊಡಗಿದನು. ಇವನು ವಿಶ್ವವಿದ್ಯಾಲಯವನ್ನು ಸೇರಿ ಸರಿಯಾದ ರೀತಿಯಲ್ಲಿ ವ್ಯಾಸಂಗ ಮಾಡದಿದ್ದರೂ, ತನ್ನ ಗುರುವಿನ ಜತೆಯಲ್ಲಿ ಯೂರೋಪಿನಲ್ಲೆಲ್ಲಾ ಸಂಚಾರ ಮಾಡಿ ಫ್ರೆಂಚ್, ಜರ್ಮನ್, ಇಟಾಲಿಯನ್ ಭಾಷೆಗಳಲ್ಲಿ ಪಂಡಿತನಾಗಿದ್ದನು. ಸಂಚಾರ ಮುಗಿಸಿ ಹಿಂತಿರುಗಿದ ಮೇಲೆ ಆಕ್ಸ್‌ಫರ್ಡ್ ಮತ್ತು ಲಂಡನ್ನಿನಲ್ಲಿ ವಿಜ್ಞಾನವನ್ನು ರೂಢಿಸಲು ಪ್ರಾರಂಭಿಸಿದನು. ಇವನು ಬರೆದ ೪೨ ಪುಸ್ತಕಗಳಲ್ಲಿ ೩೦ ಪುಸ್ತಕಗಳು ವಿಜ್ಞಾನಕ್ಕೆ ಸಂಬಂಧಪಟ್ಟದ್ದವು. ಜ್ಯೋತಿಷ್ಯವನ್ನು ಬಿಟ್ಟು ಉಳಿದ ಎಲ್ಲಾ ಶಾಸ್ತ್ರಗಳನ್ನೂ ತಿಳಿದಿದ್ದನು. ಉಸಿರಾಟ, ಉರಿಯುವಿಕೆ, ಕಾಂತ ವಿಜ್ಞಾನ

ವಿದ್ಯುಚ್ಛಕ್ತಿ ಮುಂತಾದ ವಿಷಯಗಳಲ್ಲಿ ಪ್ರಯೋಗ ನಡೆಸಿದ್ದನು. 'ಬಾಯಿಲ್‌ನ ನಿಯಮ' ಭೌತಶಾಸ್ತ್ರದಲ್ಲಿ ಈಗಲೂ ಪ್ರಚುರದಲ್ಲಿದೆ. ಇವನು ಮನುಷ್ಯ ಜೀವಿಸುವುದಕ್ಕೂ, ಬೆಂಕಿ ಉರಿಯುವುದಕ್ಕೂ ಗಾಳಿ ಅತಿ ಮುಖ್ಯವೆಂದು ಸಮರ್ಥಿಸಿದ್ದನು ಮುಚ್ಚಿರ (ನಿರ್ವಾಯು) ಸ್ಥಳದಲ್ಲಿ ಇಲಿ ಬದುಕುವುದಿಲ್ಲವೆಂದೂ, ಬತ್ತಿ ಉರಿಯುವುದಿಲ್ಲವೆಂದೂ, ಸರಿಯಾದ ಕಾಲದಲ್ಲಿ ಗಾಳಿಯನ್ನು ಒದಗಿಸಿದರೆ ಆಗ ಇಲಿ ಬದುಕುತ್ತದೆಂದೂ, ಬತ್ತಿ ಉರಿಯುತ್ತದೆಂದೂ ಪ್ರಯೋಗ ಮಾಡಿ ತೋರಿಸಿದ್ದನು.



ರಾಬರ್ಟ್ ಬಾಯಿಲ್

ರಾಬರ್ಟ್ ಹೂಕ್


ಈ ಪ್ರಯೋಗಗಳನ್ನು ಮುಂದುವರಿಸಿ, ಬಾಯಿಲ್‌ನ ಸಹಾಯಕನಾದ ರಾಬರ್ಟ್ ಹೂಕ್ ಉಸಿರ್ನಾಳದ ಮೂಲಕ ತುಂಬಿದ ಗಾಳಿಶ್ವಾಸಕೋಶದ ಹೊರ ಮೈಯಲ್ಲಿ ಮಾಡಿದ್ದ ರಂಧ್ರಗಳಿಂದ ಹೊರಗೆ ಹೋಗಲು ಅನುಕೂಲಮಾಡಿ, ನಾಯಿ ಜೀವದಿಂದಿರುವುದನ್ನು ಪ್ರದರ್ಶಿಸಿದ್ದನು. ಕೃತಕ ಉಸಿರಾಟದ ವಿಷಯವಾಗಿ ವಿಸೇಲಿಯಸ್ ತನ್ನ ಫ್ಯಾಬ್ರಿಕ ಗ್ರಂಥದ ಕೊನೆಯ ಅಧ್ಯಾಯದಲ್ಲಿ ವಿವರಿಸುತ್ತಾ, ಶ್ವಾಸಕೋಶಕ್ಕೆ ಉಸಿರು ತುಂಬಿದಾಗ ಹೃದಯ ಕೆಲಸ ಮಾಡುವುದನ್ನೂ, ಉಸಿರು ತುಂಬುವುದನ್ನು ನಿಲ್ಲಿಸಿದರೆ ಹೃದಯ ಸ್ಥಂಭನವಾಗುವುದನ್ನೂ ತಿಳಿಸಿದ್ದರೂ, ಕೃತಕ ಉಸಿರಾಟ ಸಾಧ್ಯವೆಂದು ಮೊಟ್ಟಮೊದಲಿಗೆ ಹೂಕ್ ದೃಢಪಡಿಸಿದನು.

ಆದರೂ ಶ್ವಾಸಕೋಶದಲ್ಲಿ ಗಾಳಿ ಮತ್ತು ರಕ್ತಗಳ ಪರಸ್ಪರ ಕ್ರಿಯೆ ಅರ್ಥವಾಗಿರಲಿಲ್ಲ. ಈ ಉಸಿರಾಟದ ಸಮಸ್ಯೆಯನ್ನು ಲೋವರ್ ಮತ್ತು ಮೇಯೋವ್ ಬಗೆಹರಿಸಿದರು.

ರಿಚ್ಚರ್ಡ್ ಲೋವರ್

ರಿಚರ್ಡ್ ಲೋವರ್ (೧೬೩೧–೧೬೯೧) ಹೂಕ್ ಎಂಬುವನ ಪ್ರಯೋಗ

ಗಳನ್ನು ಉತ್ತಮಪಡಿಸಿ ಕೃತಕ ಉಸಿರಾಟವನ್ನು ನಿಲ್ಲಿಸಿದರೆ ಶ್ವಾಸಕೋಶದ ರಕ್ತ ಕಪ್ಪುಮಯವಾಗುತ್ತದೆಂದೂ, ಪುನಃ ಗಾಳಿಯನ್ನು ಒದಗಿಸಿದರೆ ಕಪ್ಪುಮಯವಾಗಿದ್ದ ರಕ್ತ ಅಚ್ಚಗೆಂಪಾಗುತ್ತದೆಂದೂ ತೋರಿಸಿದನು ಪ್ರಯೋಗ ಮುಂದುವರಿಸಿ, ಬೇರೆ ಜಾಗದಿಂದ ಸಿರ ರಕ್ತ ತೆಗೆದು ಶ್ವಾಸಕೋಶದ ಧಮನಿ ಮೂಲಕ ಶ್ವಾಸಕೋಶಕ್ಕೆ ಹಾಯಿಸಿದರೆ ಅಚ್ಚಗೆಂಪಾಗುವುದನ್ನೂ ಪ್ರದರ್ಶಿಸಿದನು. ಹೀಗೆ ಮೊಟ್ಟಮೊದಲಿಗೆ ರಕ್ತದಾನ ಸಾಧ್ಯವೆಂದು ಲೋವರ್ ಹೇಳಿ (ಫೆಬ್ರುವರಿ ೧೬೬೫ರಲ್ಲಿ) ಪ್ರಾಣಿಯಿಂದ ಪ್ರಾಣಿಗೆ ರಕ್ತದಾನ ಮಾಡಿದನು. ಹಾಗೂ ಪ್ರಾಣಿಯಿಂದ ಮನುಷ್ಯನಿಗೂ ರಕ್ತ ಕೊಡಲಾಯಿತು. ೧೬೬೭ರಲ್ಲಿ ಕುರಿಯ



ರಿಚ್ಚರ್ಡ್ ಲೋವರ್

ರಕ್ತವನ್ನು ಮನುಷ್ಯನಿಗೆ ಕೊಟ್ಟೂ ಆಯಿತು. ಆದರೆ ರಕ್ತ ವರ್ಗ ಆಗ ತಿಳಿಯದ್ದರಿಂದಲೂ ರಕ್ತಕಣ ಲಯನ ಆಗುವುದರಿಂದಲೂ ಈ ಕಾರ್ಯ ಆಗಿನ ಕಾಲದಲ್ಲಿ ನೆರವೇರಲಿಲ್ಲ. ರಿಚ್ಚರ್ಡ್ ಲೋವರ್ ಆಕ್ಸ್‌ಫರ್ಡನ ಕ್ರೈಸ್ಟ್ ಚರ್ಚ್ ಕಾಲೇಜಿನಲ್ಲಿದ್ದಾಗ, ಥಾಮಸ್ ವಿಲ್ಲಿಸ್‌ಗೆ ಸಹಾಯಕನಾಗಿ ಕೆಲಸ ಮಾಡುತ್ತಿದ್ದನು. ಆಗ ವಿಲ್ಲಿಸ್ ಮಿದುಳಿನ ರಚನೆಯಲ್ಲಿ ತೊಡಗಿದ್ದು "ಸೆರಿಬ್ರಿ



ರಕ್ತದಾನದ ಮೊಟ್ಟಮೊದಲ ನಿದರ್ಶನ. ೧೬೬೮ರಲ್ಲಿ ಪರ್ಮನ್ ನಡೆಸಿದ ರಕ್ತದಾನ ಚಿಕಿತೆ

ಅನಾಟಮಿ" ಎಂಬ ಪುಸ್ತಕವನ್ನು ೧೬೬೪ರಲ್ಲಿ ಬರೆದನು. ಲೋವರ್ ರಕ್ತದಾನ ಮಾಡುವುದನ್ನು ಕಂಡುಹಿಡಿದ ಮೇಲೆ ಅವನಿಗೆ ಪಂಡಿತ ಪದವಿ ಸಿಕ್ಕಿತು. ಹಾಗೂ ರಾಜ ಸಂಸ್ಥೆಯ ಸದಸ್ಯತ್ವಕ್ಕೂ ಆರಿಸಲಾಯಿತು. ಪರ್‌ಮನ್ ಜರ್ಮನಿಯಲ್ಲಿ ಮೊಟ್ಟಮೊದಲಿಗೆ ರಕ್ತದಾನ ನಡೆಸಿದನು.

ಜಾನ್ ಮೆಯೋವ್

ಕೊನೆಯದಾಗಿ ಪ್ರಸಿದ್ಧಿ ಪಡೆದಿದ್ದ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ದೇಹ ಶಾಸ್ತ್ರಜ್ಞನಾದ ಜಾನ್ ಮೆಯೋವ್ ಕೇವಲ ತನ್ನ ೩೬ ವರ್ಷ ವಯಸ್ಸಿನಲ್ಲಿ ಉಸಿರಾಟದ ರಚನೆಯನ್ನು ಸಂಪೂರ್ಣವಾಗಿ ತಿಳಿದು,ಉಚ್ಛ್ವಾಸ ನಿಶ್ವಾಸ ನಡೆಯುವ ಕ್ರಮವನ್ನು, ಜೀವ ನಡೆಸುವ ವಾಯುವಿನಲ್ಲಿರುವ ಒಂದು ವಿಶೇಷ ವಸ್ತುವನ್ನೂ ವಿವರಿಸಿದ್ದನು. ಈ ಜೀವವಸ್ತುವನ್ನೇ ಒಂದು ಶತಮಾನದನಂತರ, ಪ್ರೀಸ್ಟ್ಲಿ ಬೇರ್ಪಡಿಸಿದ್ದು, ಲವಾಯ್ಸಿಯರ್ ಆಮ್ಲಜನಕವೆಂದು ಹೆಸರಿಟ್ಟಿದು. ಜಾನ್ ಮೆಯೋವ್ (೧೬೪೩–೧೬೭೯) ಆಕ್ಸ್‌ಫರ್ಡ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಥಾಮಸ್ ವಿಲ್ಲಿಸ್,ರಾಬರ್ಟ್ ಬಾಯಿಲ್, ಕ್ರಿಸ್ಟೊಫರ್ ರೆನ್, ರಿಚ್ಚರ್ಡ್ ಲೋವರ್ ಮತ್ತು ರಾಬರ್ಟ್ ಹೂಕ್ ಸಹೋದ್ಯೋಗಿಗಳ ಒಂದಿಗಿದ್ದು ಅವರ ಬೆಂಬಲವನ್ನು ಪಡೆದಿದ್ದನು.

ಮೊಟ್ಟಮೊದಲಿನ ಸೂಕ್ಷ್ಮದರ್ಶಕಗಾರರು

ಮ್ಯಾಲ್ಪಿಜಿ ಉಪಯೋಗಿಸಿದ್ದ ಸೂಕ್ಷ್ಮದರ್ಶಕ ಪುರಾತನ ವಿಜ್ಞಾನಿಗಳಿಗೂ ತಿಳಿದಿದ್ದಿರಬಹುದು. ಆದರೆ ಇದಕ್ಕೆ ಸಮರ್ಥನೆ ಸಾಲದು. ಮೊಟ್ಟಮೊದಲು ಸೂಕ್ಷ್ಮದರ್ಶಕ ಸಾಧಾರಣವಾಗಿ ಎರಡು ಪಕ್ಕಗಳಲ್ಲೂ ಉಬ್ಬುಳ್ಳ ಗಾಜಿನ ಬಿಲ್ಲೆಯಾಗಿತ್ತು. ಈ ಮಸೂರವನ್ನು ರೋಜರ್ ಬೇಕನ್ ಕನ್ನಡಕವನ್ನಾಗಿ ಬಳಸಬಹುದೆಂದು ಹೇಳಿದ್ದನು. ಈ ಸಾಧಾರಣ ಮಸೂರವನ್ನೇ ಮ್ಯಾಲ್ಪಿಜಿ ಮತ್ತು ಲ್ಯುವೆನ್‌ಹೋಕ್ ತಮ್ಮ ಶೋಧನೆಗಳಿಗೆ ಉಪಯೋಗಿಸಿದ್ದರು.

ಜೆನ್ಸನ್ ಸಕರಿಯಾಸ್

ಹಾಲೆಂಡಿನ ಮಿಡ್ಡೆಲ್‌ಬರ್ಗ್ ಪಟ್ಟಣದ ಕನ್ನಡಕ ತಯಾರಿಸುತ್ತಿದ್ದ ಸಕರಿಯಾಸ್ ಜೆನ್ಸೆನ್ ೧೬೦೯ರಲ್ಲಿ ಅಕಸ್ಮಾತ್ ಎರಡು ಮಸೂರಗಳನ್ನು ಒಟ್ಟಿಗೆ ಒಂದು ಕೊಳವೆಯೊಳಗೆ ಜೋಡಿಸಿದ್ದರಿಂದ ಸೂಕ್ಷ್ಮದರ್ಶಕ ಮತ್ತು ದೂರದರ್ಶಕಗಳ ಮೂಲ ತತ್ತ್ವ ಬೆಳಕಿಗೆ ಬಂದಿತು. ಈ ತತ್ತ್ವವನ್ನು ಗೆಲಿಲಿಯೊ ವಿಸ್ತರಿಸಿ ದೂರದರ್ಶಕವನ್ನೇ ತಯಾರಿಸಿದನು. ಆದರೆ ಇದು ಕೇವಲ ಆಟದ ಸಾಮಾನಾಗಿಯೇ ಅನೇಕ ವರ್ಷಗಳು ಕಳೆದವು.

ಅತನೇಸಿಯಸ್ ಕಿರ್ಚರ್

ಸೂಕ್ಷ್ಮದರ್ಶಕವನ್ನು ರೋಗಗಳ ಶೋಧನೆಯಲ್ಲಿ ಮೊಟ್ಟಮೊದಲಿಗೆ ಅತನೇಸಿ

ಯಸ್ ಕಿರ್ಚರ್ (೧೬೦೨-೮೦)ಉಪಯೋಗಿಸಿದನು. ಇವನು ಉರ್ಸ್‌ಬರ್ಗ್‌ನಲ್ಲಿ ದೇಹಶಾಸ್ತ್ರದ ಪ್ರಾಧ್ಯಾಪಕನಾಗಿದ್ದಾಗ ಪ್ಲೇಗ್ ರೋಗವಿದ್ದವನ ರಕ್ತ ಪರೀಕ್ಷಿಸಿ, ಕಣ್ಣಿಗೆ ಕಾಣದಂತಹ ಅನೇಕ ಸಣ್ಣ ಹುಳುಗಳು ರೋಗಿಯ ರಕ್ತದಲ್ಲಿದ್ದವೆಂದು ತಿಳಿಸಿದನು. ಆದರೆ ಅಷ್ಟು ಕಡಿಮೆ ಶಕ್ತಿಯುಳ್ಳ ಮಸೂರಗಳಿಂದ ನೋಡಲಸಾಧ್ಯವಾಗಿದ್ದುದರಿಂದ, ಇದು ತಪ್ಪು ತಿಳಿವಳಿಕೆಯೆಂದೂ, ಅವನು ನೋಡಿದುದು ರಕ್ತ ಕಣಗಳೆಂದೂ ಭಾವಿಸಬೇಕಾಯಿತು. ಆದರೂ ಸಾಂಕ್ರಾಮಿಕ ರೋಗಗಳು ಜೀವಂತ ಸಣ್ಣ ಕ್ರಿಮಿಗಳಿಂದ ಉತ್ಪತ್ತಿಯಾಗುತ್ತದೆಂದು ಅವನೇ ಹೇಳಿದ್ದರಿಂದ ಅವನ ಊಹೆ ತಪ್ಪಾಗಿರಲಿಲ್ಲ. ಅವನು ೧೬೮೦ರಲ್ಲಿ ಸಾಯುವ ತನಕ ೪೭ ವರ್ಷಗಳು ಪ್ರಾಧ್ಯಾಪಕನಾಗಿದ್ದು ವರ್ಷಕ್ಕೆ ಒಂದರಂತೆ ಮತಧರ್ಮ, ತತ್ತ್ವಶಾಸ್ತ್ರ, ಸಾಹಿತ್ಯ, ಸಂಗೀತ, ಜೋತಿಷ್ಯ, ಚರಿತ್ರೆ, ಗಣಿತ, ವೈದ್ಯಶಾಸ್ತ್ರ ಮುಂತಾದ ಸಮಸ್ತ ವಿಷಯಗಳಲ್ಲೂ ಪುಸ್ತಕಗಳನ್ನು ಬರೆದಿದ್ದನು. ಇವನ ಪುಸ್ತಕಗಳಲ್ಲೆಲ್ಲಾ ಸುಂದರ ಚಿತ್ರಗಳಿದ್ದವು. ಒಂದು ಪುಸ್ತಕದಲ್ಲಿ ಮೊಟ್ಟಮೊದಲಿಗೆ ಮಾಯಾದೀಪದ ಚಿತ್ರವೂ ಇತ್ತು. ಅದೇ ಪುಸ್ತಕದಲ್ಲಿ ಸೂಕ್ಷ್ಮದರ್ಶಕದಿಂದ ನೋಡಿ ತಿಳಿಯಬಹುದಾದ ಸಂಗತಿಗಳನ್ನೆಲ್ಲಾ ವಿವರಿಸಿದ್ದನು. ಹಾಲು ಮತ್ತು ಕಾಡಿಗಳಲ್ಲಿ (ವಿನೇಗರ್) ಸಾವಿರಾರು ಸಣ್ಣ ಹುಳುಗಳಿವೆಯೆಂದೂ, ಕೊಳೆತ ಪದಾರ್ಥಗಳಲ್ಲೂ ಇವೆಯೆಂದು ಹೇಳಿದನು.

ಆಂಟೊನಿ ವಾನ್ ಲ್ಯುವೆನ್‌ಹೋಕ್

ಆಂಟೊನಿ ವಾನ್ ಲ್ಯುವೆನ್‌ಹೋಕ್ (೧೬೩೨-೧೭೨೩) ಒಬ್ಬ ಅಸಾಧಾರಣ



ಲ್ಯೂವೆನ್‌ಹೋಕ್ (೧೬೩೨-೧೭೨೩)

ಮಹಾಪುರುಷನಾಗಿದ್ದನು. ಇವನು ವ್ಯಾಪಾರಸ್ಥನಾಗಿದ್ದು ಮಸೂರಗಳನ್ನು ತಾನೇ ಸ್ವತಃ ಉಜ್ಜಿ, ಸೂಕ್ಷ್ಮದರ್ಶಕಗಳನ್ನು ತಯಾರಿಸಿದ್ದನು. ಬೇರೆ ಯಾವ ಭಾಷೆಯೂ ಬರುತ್ತಿರಲಿಲ್ಲದ್ದರಿಂದ ತನ್ನ ಮಾತೃಭಾಷೆಯಾದ ಡಚ್ಚಿನಲ್ಲೇ ತಾನು ನೋಡಿದ ದೃಶ್ಯಗಳನ್ನು ಬರೆದು, ಇಂಗ್ಲೀಷಿಗೆ ಭಾಷಾಂತರಿಸಿ, ರಾಜಸಂಸ್ಥೆಯಿಂದ ಪ್ರಕಟಪಡಿಸಿದ್ದನು. ಮ್ಯಾಲ್ಪಿಜಿಯ ಪರಿಶೋಧನೆಗಳನ್ನು ವಿಸ್ತರಿಸುತ್ತಾ, ಮೀನು ಮತ್ತು ಕಪ್ಪೆಗಳಲ್ಲಿರುವ ಗೋಳಾಕಾರದ ಕೆಂಪು ರಕ್ತಕಣಗಳನ್ನೂ, ಮನುಷ್ಯನಲ್ಲಿರುವ ಗುಂಡು ಕೆಂಪು ರಕ್ತಕಣಗಳನ್ನೂ ವಿವರಿಸಿದ್ದನು. ಒಂದು ಸಲ, ಹಾವುಮೀನಿನ ಬಾಲದ ಲೋಮನಾಳದಲ್ಲಿ ರಕ್ತಚಲನೆಯನ್ನೂ ರಷ್ಯಾದ ಮಹಾ ಸಾರ್ ಪೀಟರ್‌ನಿಗೆ ತೋರಿಸಿದ್ದನು. ವೈದ್ಯಶಾಸ್ತ್ರಕ್ಕೆ ಸಂಬಂಧಪಟ್ಟ ಏಕಾಣುಜೀವಿಗಳನ್ನೂ, ಮುಂಜೀವಿಗಳನ್ನೂ ಇವನೇ ಮೊಟ್ಟಮೊದಲಿಗೆ ಕಂಡುಹಿಡಿದಿದ್ದನು. ತನ್ನ ಹಲ್ಲಿನ ಕೊಳೆಯಲ್ಲಿದ್ದ ಸಾವಿರಾರು ಸಣ್ಣ ಹುಳುಗಳನ್ನೂ, ಅವುಗಳ ವಿಚಿತ್ರ ಓಡಾಟವನ್ನೂ ಸೂಕ್ಷ್ಮದರ್ಶಕದಲ್ಲಿ ತೋರಿಸಿದನು. ಇವನು ಲಂಡನ್ನಿಗೆ ಭೇಟಿ ಕೊಡದಿದ್ದರೂ, ಇವನನ್ನು ರಾಜಸಂಸ್ಥೆಗೆ ಸದಸ್ಯನನ್ನಾಗಿ ಮಾಡಿ ಗೌರವಿಸಿದರು.

ಜಾನ್ ಸ್ವಮ್ಮರ್ಡಮ್

ಜಾನ್ ಸ್ವಮ್ಮರ್ಡಮ್ (೧೬೩೭-೮೦)ಹಾಲೆಂಡಿನ ಮತ್ತೊಬ್ಬ ಸುಪ್ರಸಿದ್ಧ ಸೂಕ್ಷ್ಮದರ್ಶಕಗಾರನೆನಿಸಿಕೊಂಡಿದ್ದನು. ಇವನಿಗೆ ಅನಾರೋಗ್ಯವಿದ್ದರೂ ಹೆಚ್ಚು ಸಾಮರ್ಥ್ಯದವನಾಗಿದ್ದನು. ತನ್ನ ಸ್ವಲ್ಪ ಆಯುಸ್ಸಿನಲ್ಲೇ ಅನೇಕ ಶೋಧನೆಗಳನ್ನು ಮಾಡಿ, ಜೇನು, ಚಿಟ್ಟೆ ಮುಂತಾದ ಕೀಟಗಳ ಅಂಗಚ್ಛೇದನೆ ಮಾಡಿ ಅನೇಕ ಪುಸ್ತಕಗಳನ್ನು ಬರೆದಿದ್ದನು. ಅವನ 'ಪ್ರಕೃತಿಯ ಬೈಬಲ್ಲು' ಅವನೊಬ್ಬನೇ ಬರೆದ ಪ್ರಸಿದ್ಧ ಗ್ರಂಥ.

ರಾಬರ್ಟ್ ಹೂಕ್

ಇಷ್ಟರೊಳಗೆ ಇಂಗ್ಲೆಂಡಿನಲ್ಲಿ ರಾಬರ್ಟ್‌ಹೂಕ್ (೧೬೩೫-೧೭೦೩) ರಾಜಸಂಸ್ಥೆಯ ಆಡಳಿತಗಾರನಾಗಿದ್ದು, 'ಸಣ್ಣ ಪ್ರಪಂಚ' (ಮೈಕ್ರೊಗ್ರಾಫಿಯ) ಎಂಬ ಅನೇಕ ಚಿತ್ರಗಳಿದ್ದ ಪುಸ್ತಕ ಒಂದನ್ನು ಬರೆದಿದ್ದನು. ಹಾಗೂ ಬಾಯಿಲ್ ಸಹಾಯಕನಾಗಿದ್ದಾಗ "ಕೃತಕ ಉಸಿರಾಟ" ಸಾಧ್ಯವೆಂದು ಸಮರ್ಥಿಸಿದ್ದನು. ಬೆಂಡಿನ ತೆಳು ಪದರವನ್ನು ಸೂಕ್ಷ್ಮದರ್ಶಕದಲ್ಲಿ ಪರೀಕ್ಷೆ ಮಾಡಿ ಜೇನುಗೂಡಿನಂತಿದೆಯೆಂದು ಹೇಳಿದ್ದಲ್ಲದೆ, ಜೀವಕೋಶವೆಂಬ ಪದವನ್ನು ಮೊಟ್ಟಮೊದಲಿಗೆ ಉಪಯೋಗಕ್ಕೆ ತಂದನು. ಸೂಕ್ಷ್ಮದರ್ಶಕದಲ್ಲಿ ಕ್ಷೌರದ ಕತ್ತಿಯು ಹರಿತವಿರುವ ಬಾಯಿಯನ್ನು ಪರೀಕ್ಷಿಸಿ ಹಳ್ಳತಿಟ್ಟುಗಳಿಂದ ಕೂಡಿರುವುದನ್ನೂ, ಸೂಜಿ ಕೊನೆಯಲ್ಲಿ ಅನೇಕ ಗೀರುಗಳಿರುವುದನ್ನೂ ತೋರಿಸಿದ್ದನು.



ರಾಬರ್ಟ್ ಹೂಕ್‌ನ ಮಿಣದರ್ಶಕ (೧೬೬೫)

ನೆಹೆಮಿಯ ಗ್ರ್ಯೂ

ನೆಹೆಮಿಯ ಗ್ರ್ಯೂ (೧೬೪೧–೧೭೧೨) ಲಂಡನ್ನಿನ ವೈದ್ಯನೂ, ರಾಜಸಂಸ್ಥೆಯ ಸದಸ್ಯನೂ, ಮತ್ತು ಕಾರ್ಯದರ್ಶಿಯೂ ಆಗಿದ್ದನು. ಇವನು ಸಸ್ಯಗಳ ಅಂಗರಚನೆ ಶಾಸ್ತ್ರದ ಪುಸ್ತಕವನ್ನು ಬರೆದು ಅದರಲ್ಲಿ ಸಸ್ಯಗಳಿಗೂ ಪ್ರಾಣಿಗಳಿಗೂ ಇರುವ ಹೋಲಿಕೆಯನ್ನೂ ಹಾಗೂ ಸಸ್ಯಗಳಲ್ಲಿ ಲಿಂಗ, ಜಾತಿ ಇರುವುದನ್ನೂ ತೋರಿಸಿದ್ದನು.

೧೭ನೇ ಶತಮಾನದ ವೈದ್ಯಸಂಸ್ಥೆಗಳು ಮತ್ತು ವೈದ್ಯ ಪತ್ರಿಕೆಗಳು

ವೈದ್ಯ ಸಂಸ್ಥೆಗಳು

ಇಟಲಿ ದೇಶದಲ್ಲೇ ಮೊಟ್ಟಮೊದಲಿಗೆ ವೈದ್ಯಸಂಸ್ಥೆ ಒಂದು ಸ್ಥಾಪಿತವಾದದ್ದು. ಪ್ರಸಿದ್ಧ ಶ್ರೀಮಂತ ಡ್ಯೂಕ್ ಫೆಡೆರಿಗೊಸೆಸಿ ೧೬೦೩ರಲ್ಲಿ ರೋಂ ನಗರದಲ್ಲಿ "ಅಕಾಡೆಮಿಕ್ ಡೈ ಲಿಂಕ್ಸಿ" ಎಂಬ ಸಂಸ್ಥೆಯನ್ನು ಸ್ಥಾಪಿಸಿದನು. ಇದನ್ನು ಅಭಿವೃದ್ಧಿಪಡಿಸಲು ದೂರದೃಷ್ಟಿ ಹೊಂದಿದ್ದ ವಿಜ್ಞಾನಿಗಳು ಈ ಸಂಸ್ಥೆಯಲ್ಲಿ ಕೆಲಸಮಾಡಲು ತೊಡಗಿದ್ದರು. ಅವರಲ್ಲಿ ಗೆಲಿಲಿಯೊ ಮೊದಲನೆಯ ಸದಸ್ಯ. ಪ್ಯಾರಿಸ್ಸಿನ ೧೪ನೇ ಲೂಯಿಯ ಆಶ್ರಯದಲ್ಲಿ, ಅವನ ಮಂತ್ರಿ ಕೊಲ್ಬರ್ಟನ ಪ್ರಭಾವದಿಂದ ೧೬೬೬ರಲ್ಲಿ 'ವಿಜ್ಞಾನ ಅಕಾಡಮಿ' ಸಂಸ್ಥೆ ಪ್ರಾರಂಭವಾಯಿತು. ಇದು ಅನೇಕ ಮುಖ್ಯ ವಿಜ್ಞಾನ ಗ್ರಂಥಗಳನ್ನು ಪ್ರಕಟಮಾಡಲು ಶ್ರದ್ಧೆ ವಹಿಸಿತ್ತು. ಜರ್ಮನಿಯಲ್ಲೂ ಹಲ್ಲೆ ಎಂಬುವನಿಂದ 'ಪ್ರಕೃತಿಯ ಕುತೂಹಲಕಾರಿ ಕಾಲೇಜು' ಸಂಸ್ಥೆ ೧೬೫೨ರಲ್ಲಿ ಪ್ರಾರಂಭವಾಯಿತು.

ಲಂಡನ್ನಿನ ರಾಜಸಂಸ್ಥೆ

ಇವೆಲ್ಲಕ್ಕಿಂತಲೂ ಪ್ರಸಿದ್ಧ ರಾಜಸಂಸ್ಥೆ ಲಂಡನ್ನಿನಲ್ಲಿ ೧೬೪೫ರಲ್ಲಿ ಪ್ರಾರಂಭವಾಗಿ, ಮೊದಲು ಚಿಕ್ಕದಾಗಿದ್ದು, ನಂತರ 'ಅಗೋಚರ ಕಾಲೇಜು' ಎಂದು ಮಾರ್ಪಾಡಾಗಿ ಒಬ್ಬ ಸದಸ್ಯನ ಕೊಟಡಿಯಲ್ಲಿ ಒಂದೊಂದು ಸಲ ಸೇರಿ ಚರ್ಚೆ ನಡೆಸುತ್ತಿತ್ತು. ಕೆಲವು ವರ್ಷಗಳಾದ ಮೇಲೆ ಆಕ್ಸ್‌ಫರ್ಡ್ ವಿಜ್ಞಾನಿಗಳು, ಅದರಲ್ಲೂ ದೇಹಶಾಸ್ತ್ರಜ್ಞರಾದ ಥಾಮಸ್ ವಿಲ್ಲಿಸ್, ಫ್ರಾನ್ಸಿಸ್ ಗ್ಲಿಸ್ಸನ್, ರಾಬರ್ಟ್ ಲೋವರ್, ರಾಬರ್ಟ್ ಬಾಯಿಲ್, ರಾಬರ್ಟ್ ಹೂಕ್, ಜಾನ್ ಮೆಯೋವ್, ಕ್ರಿಸ್ಟೊಫರ್ ರೆನ್ ಮುಂತಾದವರು ಒಟ್ಟುಗೂಡಿ ಜ್ಞಾನಾಭಿವೃದ್ಧಿಗಾಗಿ ಶ್ರಮಿಸಿ ೧೬೬೨ರಲ್ಲಿ ೨ನೇ ಚಾರಲ್ಸ್ ದೊರೆಯಿಂದ ರಾಜಶಾಸನ ಬಂದ ೨ ವರ್ಷಗಳಾದನಂತರ ತತ್ತ್ವಶಾಸ್ತ್ರದ ವ್ಯವಹಾರಗಳನ್ನು ಪ್ರಕಟಿಸಲು ಆರಂಭಿಸಿತು. ಸ್ಯಾಮ್ಯುಯಲ್ ಪೆಪಿಸ್ ಅಧ್ಯಕ್ಷನಾಗಿದ್ದಾಗ ನ್ಯೂಟನ್ನಿನ ತತ್ತ್ವಗಳನ್ನು ೧೬೮೭ರಲ್ಲಿ ಪ್ರಕಟಮಾಡಿತು.

ವಸ್ತುಪ್ರದರ್ಶನಾಲಯಂದ ಸಸ್ಯತೋಟಗಳು

ಇದೇ ವೇಳೆಯಲ್ಲಿ ವಸ್ತುಪ್ರದರ್ಶನಾಲಯಗಳು ಮತ್ತು ಸಸ್ಯತೋಟಗಳು ಆರಂಭವಾದವು. ಇವುಗಳಲ್ಲಿ ಪ್ಯಾರಿಸ್ಸಿನ ಕಾರ್ಡಿನಲ್ ರಿಚ್ಲು ೧೬೨೬ರಲ್ಲಿ ಸ್ಥಾಪಿಸಿದ 'ಜಾರ್ಡಿಯನ್ ಡಿಸ್ ಪ್ಲಾಂಟಿಸ್' ಎಂಬ ಸಸ್ಯತೋಟ ಅತಿ ಸುಂದರವಾಗಿಯೂ, ಪ್ರಾಮುಖ್ಯವಾಗಿಯೂ ಇತ್ತು. ಹಾಗೂ ಪ್ರತಿಯೊಂದು ವೈದ್ಯಶಾಲೆಯೂ, ಒಂದೊಂದು ಔಷಧ ಸಸ್ಯಗಳ ತೋಟವನ್ನು ಬೆಳೆಸುತ್ತಿದ್ದವು.

ಆಗ ಪ್ರಸಿದ್ಧಿಯಾಗಿದ್ದ ಎಡಿನ್‌ಬರೊ ಪಟ್ಟಣದಲ್ಲಿ ಸರ್ ರಾಬರ್ಟ್ ಸಿಬ್ಬಾಲ್ಡ್ ಮುಂದಾಳತ್ವದಲ್ಲಿ ಎಡಿನ್‌ಬರೊ ವೈದ್ಯರೆಲ್ಲಾ ಸೇರಿ, ೧೬೮೧ರಲ್ಲಿ ವೈದ್ಯರ ರಾಜವಿದ್ಯಾಕಾಲೇಜನ್ನು ಪ್ರಾರಂಭಿಸಲು ಏರ್ಪಡಿಸಿದರು. ಎಡಿನ್‌ಬರೊ ಹತ್ತಿರವಿದ್ದ ಹಾಲಿರೂಡ್ ಎಂಬಲ್ಲಿ ಒಂದು ಸಸ್ಯತೋಟವನ್ನು ಆರಂಭಿಸಲು ಯತ್ನಿಸಿದರು.

ಸರ್ ಹ್ಯಾನ್ಸ್ ಸ್ಲೋನ್

ಲಂಡನ್ನಿನಲ್ಲಿ ಸರ್ ಹ್ಯಾನ್ಸ್ ಸ್ಲೋನ್ ಚೆಲ್ಸಿಯದಲ್ಲಿ ನಿರ್ಮಿಸಿದ ಸಸ್ಯತೋಟ ಈಗಲೂ ಮಹತ್ತಿನದಾಗಿದೆ.

ರಾಜಸಂಸ್ಥೆಗೆ ಸೇರಿದ ಬ್ರಿಟಿಷ್ ಪ್ರದರ್ಶನಾಲಯದಲ್ಲಿದ್ದವುಗಳ ಜತೆಗೆ ಇನ್ನೂ ಅನೇಕ ಸಸ್ಯ ಮತ್ತು ಪ್ರಾಣಿವರ್ಗಗಳ ವಸ್ತುಗಳನ್ನು ಪಶ್ಚಿಮ ಇಂಡೀಸಿನಿಂದ ಸರ್ ಹ್ಯಾನ್ಸ್ ಸ್ಲೋನ್ (೧೬೬೮–೧೭೫೩) ತಂದು ಸಂಗ್ರಹಿಸಿದನು. ಇವನು ಸರ್ ಐಸಕ್ ನ್ಯೂಟನ್ ಅಂತರ ರಾಜಸಂಸ್ಥೆಯ ಅಧ್ಯಕ್ಷನೂ, ಲಂಡನ್ನಿನ ಪ್ರಸಿದ್ಧ ವೈದ್ಯನೂ, ರಾಣಿ ಆನ್ನಿಗೆ ಆಸ್ಥಾನವೈದ್ಯನೂ ಆಗಿದ್ದನು ಇವನ ಗೌರವಾರ್ಥವಾಗಿ ಅನೇಕ ರಸ್ತೆಗಳಿಗೆ ಇವನ ಹೆಸರನ್ನಿಟ್ಟಳು. ಇವನು ಮೊದಲು ಬ್ಲೂಮ್ಸ್‌ಬರಿಯಲ್ಲಿ ವಾಸವಾಗಿದ್ದು ನಂತರ ಚೆಲ್ಸಿಯದಲ್ಲೇ, ಸಸ್ಯತೋಟದ ಸಮೀಪದಲ್ಲಿ ನೆಲೆಸಿದನು.

ವೈದ್ಯ ಪತ್ರಿಕೆಗಳು

ವೈದ್ಯಪತ್ರಿಕೆಗಳನ್ನು ಪ್ರಕಟಿಸುವುದು ೧೭ನೇ ಶತಮಾನದ ಮತ್ತೊಂದು ಹಿರಿಯ ಕೆಲಸವಾಗಿತ್ತು. ರಾಜಸಂಸ್ಥೆ ಈ ಕಾರ್ಯದಲ್ಲಿ ತುಂಬಾ ಆಸಕ್ತಿಯಿಂದ ಕೆಲಸಮಾಡಿ ಎಲ್ಲಾ ವಿಜ್ಞಾನಿಗಳಿಂದ ಲೇಖನಗಳನ್ನು ಸ್ವಾಗತಿಸುತ್ತಿತ್ತು. ಇದರ ಮೊದಲನೆಯ ಪತ್ರಿಕೆ–ಫ್ರೆಂಚ್ ಪತ್ರಿಕೆ (೧೬೭೪–೮೧) ಪ್ರಕಟವಾಗಿತ್ತು. ಇದಕ್ಕೆ ನಿಕೊಲಾಸ್ ಡಿ ಬ್ಲೆನಿ (೧೬೫೨–೧೭೨೨) ಮುಖ್ಯ ಸಂಪಾದಕನಾಗಿದ್ದನು. ಇದಾದ ಮೇಲೆ ೧೬೮೪ರಲ್ಲಿ ಇಂಗ್ಲೀಷಿನಲ್ಲಿ ಪ್ರಕಟವಾದ 'ಮೆಡಿಸಿನೊ ಕ್ಯೂರಿಯೋಸ' ೨ ಪತ್ರಿಕೆಗಳನ್ನು ಹೊರಡಿಸಿ ಕೊನೆಗಂಡಿತು.

ಲೇಡನ್ನಿನ ವೈದ್ಯ ಕೇಂದ್ರ

ಲೇಡನ್ ವೈದ್ಯಶಾಲೆ

೧೬ನೇ ಶತಮಾನದಲ್ಲಿ ರೋಮನ್ ಕ್ಯಾತೊಲಿಕ್ ಮತದ ದೋಷಗಳನ್ನು ತಿದ್ದುವುದಕ್ಕಾಗಿ ಹುಟ್ಟಿ, ಸುಧಾರಿತ ಅಥವಾ ಪ್ರಾಟೆಸ್ಟೆಂಟ್ ಮತದ ಸ್ಥಾಪನೆಯಲ್ಲಿ ಮುಕ್ತಾಯವಾದ ಚಳವಳಿಯಿಂದ, ಇಟಲಿಯ ಮತ್ತು ಫ್ರಾನ್ಸಿನ ವಿಶ್ವವಿದ್ಯಾಲಯಗಳ ಮೆಚ್ಚಿಕೆ ತಗ್ಗಿ, ಪ್ರಾಟೆಸ್ಟೆಂಟ್ ಮತದ ಲೇಡನ್ ವಿಶ್ವವಿದ್ಯಾಲಯ ಪ್ರಸಿದ್ಧಿಗೆ ಬರಲು ಪ್ರಾರಂಭಿಸಿತು. ಈ ವಿಶ್ವವಿದ್ಯಾಲಯದಲ್ಲಿ ಪ್ರಾಟೆಸ್ಟೆಂಟ್, ಕ್ಯಾತೊಲಿಕ್, ಯಹೋದ್ಯರೆಲ್ಲರಿಗೂ ಸಮವಾಗಿ ಪ್ರವೇಶವಿತ್ತು. ಇಟಲಿಯ ವಿಶ್ವವಿದ್ಯಾಲಯಗಳಲ್ಲಿ ಕ್ಯಾತೊಲಿಕ್ ಅಲ್ಲದವರಿಗೆ ಪ್ರವೇಶವಿಲ್ಲದ್ದರಿಂದ, ಪಾಡ್ವದಲ್ಲಿ ಕ್ಯಾತೊಲಿಕ್ ಅಲ್ಲದವರಿಗೆ ಬೇರೆ ವಿಶ್ವವಿದ್ಯಾಲಯವಿದ್ದರೂ ಆ ವಿಶ್ವವಿದ್ಯಾಲಯಗಳು ನಶಿಸಿಹೋಗಿದ್ದವು. ಗ್ರೀಸಿನಿಂದ ಸಲೆರ್ನೊವಿಗೂ, ಸಲೆರ್ನೊನಿಂದ ಮಾಂಟ್‌ಪೆಲ್ಲಿಯರ್‌ಗೂ, ಅಲ್ಲಿಂದ ಪಾಡ್ವಕ್ಕೂ ವೈದ್ಯಶಾಸ್ತ್ರದ ಏಳಿಗೆ ಹರಡುತ್ತ ಬಂದು, ೧೭ನೇ ಶತಮಾನದಲ್ಲಿ ಹಾಲೆಂಡಿನ ಲೇಡನ್ನಿಗೆ ಬಂದು ನಿಂತಿತು. ಈ ಲೇಡನ್ ವಿಶ್ವವಿದ್ಯಾಲಯಕ್ಕೆ ಇಂಗ್ಲೆಂಡ್, ಸ್ಕಾಟ್ಲೆಂಡ್, ಐರ್ಲೆಂಡ್ ಮತ್ತು ಅಮೆರಿಕ ಕೂಡ ಸೇರಿ ಎಲ್ಲಾ ದೇಶಗಳಿಂದಲೂ ವಿದ್ಯಾರ್ಥಿಗಳು ವ್ಯಾಸಂಗ ಮಾಡಲು ಬಿದ್ದು ಬಿದ್ದು ಬರುತ್ತಿದ್ದರು.

ಲೇಡನ್ನಿನಲ್ಲಿ ವಿಶ್ವವಿದ್ಯಾಲಯದ ಸ್ಥಾಪನೆ

೧೫೭೪ರಲ್ಲಿ ಸ್ಪೆಯಿನ್ ದೇಶದ ಮುತ್ತಿಗೆಯನ್ನು ಧೈರ್ಯವಾಗಿ ಎದುರಿಸಿದ್ದಕ್ಕಾಗಿ ಆರೆಂಜಿನ ವಿಲಿಯಂ ಲೇಡನ್ ಪಟ್ಟಣದ ಜನರಿಗೆ ೧೦ ವರ್ಷಗಳ ತೆರಿಗೆ ವಿನಾಯಿತಿಯನ್ನಾಗಲಿ ಅಥವಾ ಒಂದು ವಿಶ್ವವಿದ್ಯಾಲಯದ ಸ್ಥಾಪನೆಯನ್ನಾಗಲೀ ಬಹುಮಾನವಾಗಿ ನೆರವೇರಿಸುವೆನೆಂದು ಅಪ್ಪಣೆ ಕೊಟ್ಟದ್ದಕ್ಕೆ, ಲೇಡನ್ ಪಟ್ಟಣದ ಬುದ್ಧಿವಂತರಾದ ಪ್ರಜೆಗಳು ವಿಶ್ವವಿದ್ಯಾಲಯವೇ ಬೇಕೆಂದು ಕೋರಿಕೊಂಡರು. ಅವರ

ಇಚ್ಛೆ ನೆರವೇರಿಸಲು ಲೇಡನ್‌ನಲ್ಲಿ ವಿಶ್ವವಿದ್ಯಾಲಯ ಸ್ಥಾಪಿತವಾಯಿತು. ಇಲ್ಲಿಯ ವೈದ್ಯಶಾಲೆಯಿಂದ ವಿಶ್ವವಿದ್ಯಾಲಯಕ್ಕೆ ಪ್ರವೇಶ ಪಡೆದವರಲ್ಲಿ ಇಂಗ್ಲೀಷಿನವನಾದ ಜಾನ್ ಜೇಮ್ಸ್ ಮೊಟ್ಟಮೊದಲನೆಯವನು. ವಿಶ್ವವಿದ್ಯಾಲಯದ ಭಾಷೆ ಲ್ಯಾಟಿನ್ ಆಗಿದ್ದರಿಂದ ಲೇಡನ್ ಅಂತರರಾಷ್ಟ್ರೀಯ ಪ್ರಖ್ಯಾತಿ ಪಡೆಯಲು ಯಾವ ಅಡಚಣೆಯೂ ಇರಲಿಲ್ಲ.

ಲೇಡನ್ನಿನ ಪ್ರಮುಖ ಪಂಡಿತರಲ್ಲಿ ಅಂಗರಚನೆಶಾಸ್ತ್ರ ಪ್ರವೀಣರಾದ, ಮಿದುಳಿನಲ್ಲಿರುವ ಸಿಲ್ವಿಯಸ್ ಸಂದನ್ನು ವಿವರಿಸಿದ ಫ್ರಾನ್ಸಿಸ್ಕಸ್ ಸಿಲ್ವಿಯಸ್ ಮತ್ತು ಇಂಗ್ಲೀಷ್ ಅಂಗರಚನೆಶಾಸ್ತ್ರಜ್ಞನಾದ ವಿಲಿಯಂ ಕೌಪರ್ ಕದ್ದು ತನ್ನದೆನಿಸಿಕೊಂಡ ಅಂಗರಚನೆಯ ಚಿತ್ರಪಠಗಳ ಪುಸ್ತಕ ಬರೆದ ಗೋವರ್ಟ್ ಬಿಡ್ಲೂ (೧೬೪೯-೧೭೧೩) ಮುಖ್ಯ ಅಧ್ಯಾಪಕರಾಗಿದ್ದರು.

ಪೀಟರ್ ಪಾ

ಪೀಟರ್ ಪಾ (೧೫೬೪-೧೬೧೭) ಲೇಡನ್ನಿನ ಸರ್ವತೋಮುಖ ಪಂಡಿತರಲ್ಲಿ ಒಬ್ಬ. ಇವನು ಪಾಡ್ವದ ಫ್ಯಾಬ್ರಿಸಿಯಸ್ ಕೈಕೆಳಗೂ, ಪ್ಯಾರಿಸ್ಸಿನಲ್ಲೂ ವ್ಯಾಸಂಗ ಮಾಡಿ, ಲೇಡನ್ನಿಗೆ ಹಿಂತಿರುಗಿದ ಮೇಲೆ ಅಂಗರಚನೆಶಾಸ್ತ್ರದ ಪ್ರಾಧ್ಯಾಪಕನಾಗೂ ಮತ್ತು ಸಸ್ಯ ತೋಟದ ಮುಖ್ಯಾಧಿಕಾರಿಯಾಗೂ ನೇಮಕವಾಗಿದ್ದನು. ಇವನು ಲೇಡನ್ನಿನ ಅಂಗರಚನೆಶಾಸ್ತ್ರದ ಶಾಲೆಯೊಂದನ್ನು ಸ್ಥಾಪಿಸಿ, ೨೨ ವರ್ಷಗಳು ಅದರ ಪ್ರಥಮ ಅಧಿಕಾರಿಯಾಗಿದ್ದು ೬೦ ಶವ ಪರೀಕ್ಷೆ ಮಾಡಿದ್ದನೆಂದು ಹೇಳಲಾಗಿದೆ. ಅಸ್ಥಿರಚನಾಶಾಸ್ತ್ರದಲ್ಲಿ ಪ್ರಪಂಚದ ಮನುಷ್ಯ ಜಾತಿಗಳಲ್ಲಿ ಕಂಡುಬರುವ ತಲೆಮೂಳೆಗಳ ವ್ಯತ್ಯಾಸವನ್ನು ಬರೆದು ಮಾನವ ಶಾಸ್ತ್ರದ ಮೂಲಕರ್ತನೆಂದು ಕೀರ್ತಿ ಪಡೆದಿದ್ದನು. ವೈದ್ಯವೃತ್ತಿಯಲ್ಲೂ ತೊಡಗಿದ್ದು, ಪ್ಲೇಗು ಬಂದಿದ್ದಾಗ ಶ್ರದ್ಧೆಯಿಂದ ಕೆಲಸ ಮಾಡಿ ಪ್ಲೇಗಿನ ಮೇಲೆ ಲೇಖನ ಒಂದನ್ನೂ ಬರೆದಿದ್ದನು.

ಫ್ರೆಡೆರಿಕ್ ರುಯೆಷ್

ಫ್ರೆಡೆರಿಕ್ ರುಯಷ್ (೧೬೩೮-೧೭೩೧) ಲೇಡನ್ನಿನ ಮತ್ತೊಬ್ಬ ಅಂಗರಚನೆ ಶಾಸ್ತ್ರಜ್ಞನಾಗಿದ್ದನು. ಇವನು ಮದ್ದನ್ನು ರಕ್ತನಾಳಕ್ಕೆ ಹಾಯಿಸಿ ಶವವನ್ನು ಸುರಕ್ಷಿತವಾಗಿಡುವ ಕ್ರಮವನ್ನು ತಿಳಿದಿದ್ದನು. ಹೀಗೆ ತಯಾರಿಸಿದ ಅನೇಕ ಮಾದರಿ ವಸ್ತುಗಳನ್ನು ಸಸ್ಯಗಳಿಂದಲೂ ಹವಳಗಳಿಂದಲೂ ಅಲಂಕರಿಸಿ ಪ್ರದರ್ಶಿಸಿದ್ದನು. ಈ ಸಂಗ್ರಹವನ್ನು ರಷ್ಯಾದ ಸಾರ್ ಮಹಾ ಪೀಟರ್ ಎಂಬುವನಿಗೆ ಮಾರಿದ್ದನೆಂದು ತಿಳಿದು ಬಂದಿದೆ.

ರೆಂಬ್ರಾಂಟ್ ಚಿತ್ರ

ಆಗಿನ ಕಾಲದ ಡಚ್ ಕಲೆಗಾರರು ಅಂಗರಚನೆಯ ವರ್ಣ ಚಿತ್ರಗಳಲ್ಲಿ ಬಹಳ ಆಸಕ್ತಿ ಹೊಂದಿದ್ದರಿಂದ, ವೈದ್ಯರ, ಹಲ್ಲು ಕೀಳುವವರ, ಠಕ್ಕು ವೈದ್ಯರ ಕೆಲಸಕಾರ್ಯ



ಸಹೋದ್ಯೋಗಿಗಳ ಗುಂಪಿಗೆ ಕೈಯ ಅಂಗರಚನೆಯನ್ನು ಟುಲ್ಪ್ ತೋರಿಸುತ್ತಿರುವುದು
ರೆಂಬ್ರಾಂಟ್‌ನ ವರ್ಣಚಿತ್ರ

ಗಳನ್ನು ಚಿತ್ರಿಸುತ್ತಿದ್ದರು. ಇವರ ಪೈಕಿ ರೆಂಬ್ರ್ಯಾಂಟ್ ಚಿತ್ರಿಸಿದ್ದ 'ಅಂಗರಚನೆ ಶಾಸ್ತ್ರದ ಬೋಧನೆ' ವರ್ಣಚಿತ್ರದಲ್ಲಿ, ಪ್ರಮುಖ ವೈದ್ಯನಾದ ಹಾಗೂ ಬೆರಿಬೆರಿ ರೋಗವನ್ನು ವಿವರಿಸಿದ್ದ ನಿಕೊಲಾಸ್ ಟುಲ್ಪ್ (೧೫೯೩–೧೬೭೪) ಶವ ಪರೀಕ್ಷೆಯನ್ನು ಮಾಡುತ್ತಿರುವುದನ್ನೂ ಬೋಧಿಸುತ್ತಿರುವುದನ್ನೂ ಎಲ್ಲರೂ ನೋಡಿರಬಹುದು.

ರೆಗ್ನಿಯರ್ ಗ್ರಾಫ್

ದೇಹಶಾಸ್ತ್ರದಲ್ಲೂ ಡಚ್ ವಿದ್ವಾಂಸರು ಪ್ರಖ್ಯಾತರಾಗಿದ್ದರು. ರೆಗ್ನಿಯರ್ ಡಿ ಗ್ರಾಫ್ (೧೬೪೧-೭೩) ಅಂಡಾಶಯದ ಗ್ರಾಫಿಯನ್ ಕುಹರವನ್ನು ೧೬೭೨ರಲ್ಲಿ ಕಂಡುಹಿಡಿದಿದ್ದನು. ಗಂಡು ಹೆಣ್ಣುಗಳ ಸಂತಾನಾಭಿವೃದ್ಧಿ ಅಂಗಗಳ ರಚನೆಯನ್ನೂ ವಿವರಿಸಿದ್ದನು. ವಿದ್ಯಾರ್ಥಿಯಾಗಿದ್ದಾಗಲೇ ೧೬೬೪ರಲ್ಲಿ ಮೇದೋಜೀರಕದ ರಸ ಕುರಿತು ಲೇಖನ ಬರೆದಿದ್ದನು. ಮೇದೋಜೀರಕ ನಾಳಕ್ಕೆ ಒಂದು ನಳಿಕೆಯನ್ನು ತೂರಿಸಿ, ರಸವನ್ನು ಶೇಖರಿಸುವ ರೀತಿಯನ್ನು ಈ



ಡಿ ಗ್ರಾಫ್ ನಡೆಸಿದ ಮೇದೋರಕ ಗ್ರಂಥಿಯ ನಾಳ ಪ್ರಯೋಗ

ಲೇಖನದಲ್ಲಿ ವಿವರಿಸಿದ್ದನು. ರಸದ ಗುಣಗಳನ್ನು ವಿವರಿಸುತ್ತ ಅದು ಆಮ್ಲದಂತಿದೆ ಎಂದು ಹೇಳಿದ್ದನು. ಇಂತಹ ಚಮತ್ಕಾರಿಗೆ ಮೇದೋಜೀರಕ ರಸ ಕ್ಷಾರೀಯವೆಂಬುದು ಹೇಗೆ ಗೊತ್ತಾಗಲಿಲ್ಲವೋ ತಿಳಿಯದು. ಇದು ಆಶ್ಚರ್ಯವೇ ಸರಿ. ಇವನು ಜೊಲ್ಲು ನಾಳಕ್ಕೆ ನಳಿಕೆ ತೂರಿಸಿ ಜೊಲ್ಲುರಸವನ್ನೂ ಪಿತ್ತಕೋಶದಿಂದ ಪಿತ್ತನಾಳದ ಮೂಲಕ ಪಿತ್ತರಸವನ್ನೂ ಶೇಖರಿಸಿ ಅವುಗಳ ಗುಣಗಳನ್ನು ವಿವರಿಸಿದ್ದನು.

ರೋಗಿ ಶಯ್ಯಾಪಕ್ಕದ ವಿದ್ಯಮಾನಗಳು

೧೭ನೇ ಶತಮಾನದ ತನಕ ರೋಗಿಯ ಶಯ್ಯಾಪಕ್ಕದ ವಿದ್ಯಮಾನಗಳನ್ನು ಕಲಿಯುವ ರೀತಿ ತಿಳಿದಿರಲಿಲ್ಲ. ಕೇವಲ ಚರ್ಚೆ,ವಾದವಿವಾದಗಳ ಯೋಗ್ಯತೆಯ ಮೇಲೆ ಪದವಿಗಳನ್ನು ನೀಡುತ್ತಿದ್ದರು. ವ್ಯಾಸಂಗ ಮಾಡುವಾಗ ರೋಗಿಯ ಸಂಪರ್ಕ ಅಗತ್ಯ ವೆಂದು ತಿಳಿದಿದ್ದರಿಂದ ಹಳೆಯ ಪದ್ಧತಿಯಾದ ವಾದವಿವಾದಗಳ ಬದಲು ಹೊಸದಾದ ರೋಗಿಯ ಹಾಸಿಗೆ ಪಕ್ಕದ ವಿದ್ಯಮಾನಗಳನ್ನು ಕಲಿಯಲು ಮೊಟ್ಟಮೊದಲಿಗೆ ಲೇಡನ್ನಿನಲ್ಲಿ ೧೬೩೬ರಲ್ಲಿ ಪ್ರಾರಂಭವಾಯಿತು. ಈ ಬದಲಾವಣೆಯಿಂದಲೂ, ಜಾತಿಭೇದ ವಿಲ್ಲದೆ ವಿಶ್ವವಿದ್ಯಾಲಯಕ್ಕೆ ಪ್ರವೇಶ ದೊರೆಯುತ್ತಿದ್ದುದರಿಂದಲೂ ಲೇಡನ್ ವಿಶ್ವ ವಿದ್ಯಾಲಯಕ್ಕೆ ನಾನಾ ದೇಶಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದರು. ಪ್ರಯೋಗ ಶಾಲೆಯ ಶಿಕ್ಷಣವನ್ನೂ ಕೊಡಲು ಫ್ರಾನ್ಸಿಸ್ಕಸ್ ಸಿಲ್ವಿಯಸ್ ಪ್ರಾರಂಭಿಸಿದ್ದುದ ರಿಂದಲೂ ಲೇಡನ್ ವೈದ್ಯಶಾಲೆ ಮತ್ತಷ್ಟು ಪ್ರಖ್ಯಾತಿ ಪಡೆಯಿತು.

ಹರ್ಮನ್ ಬೊರ್‌ಹಾವೆ

ಹೀಗೆ ರೋಗಿಯ ಹಾಸಿಗೆ ಪಕ್ಕದಲ್ಲಿ ಪಾಠ ಕಲಿಸುತ್ತಿದ್ದ ವೈದ್ಯರಲ್ಲಿ ಹರ್ಮನ್ ಬೊರ್‌ಹಾವೆ(೧೬೬೮-೧೭೩೮) ಪ್ರಸಿದ್ಧನಾಗಿದ್ದನು. ಇವನ ಪ್ರಭಾವದಿಂದ ರೋಗಿಯ ಹಾಸಿಗೆ ಪಕ್ಕದ ವೈದ್ಯಶಾಸ್ತ್ರ ಮೆಚ್ಚಿಗೆ ಪಡೆಯಿತು. ಹಾಗೂ ಈ ಪದ್ಧತಿಯನ್ನು ಅನು ಸರಿಸಿದ ಬ್ರಿಟನ್ನಿನ ವೈದ್ಯವಿದ್ಯಾಭ್ಯಾಸ ಪ್ರಪಂಚದಲ್ಲೇ ಒಂದು ಮಾದರಿಯಾಯಿತು.

ಹೆಂಡ್ರಿಕ್ ವಾನ್ ಡಿವೆಂಟರ್

ಪ್ರಸವ ಶಾಸ್ತ್ರದಲ್ಲೂ ಆಗ ಮುಂದಾಳುಗಳಿದ್ದರು.ಹೆಂಡ್ರಿಕ್ ವಾನ್ ಡಿವೆಂಟರ್ (೧೬೫೭-೧೭೨೪) ಹೇಗ್‌ನಲ್ಲಿ ತನ್ನ ವೃತ್ತಿಯಿಂದ ಸಂಪಾದನೆ ಮಾಡಿದುದಲ್ಲದೆ ಹೆಂಗಸರ ವಸ್ತಿಕುಹರಗಳ ವ್ಯತ್ಯಾಸಗಳನ್ನೂ ಮತ್ತು ಹೆರಿಗೆಯ ಮೇಲೆ ಅವುಗಳಿಂ ದಾಗುವ ಪರಿಣಾಮಗಳನ್ನೂ ಕಂಡುಹಿಡಿದು ತನ್ನ ಪುಸ್ತಕದಲ್ಲಿ ಮೊಟ್ಟಮೊದಲಿಗೆ ವಿವರಿಸಿದನು.

೨೫. ವೈದ್ಯಶಾಸ್ತ್ರ ವಿಜ್ಞಾನವೊ, ಕಲೆಯೊ, ಮೂಢ ನಂಬಿಕೆಯೊ?

೧೭ನೇ ಶತಮಾನದಲ್ಲಿ ಸಾಕಷ್ಟು ವೈಜ್ಞಾನಿಕ ಶೋಧನೆಗಳು ನಡೆದು, ವೈದ್ಯಶಾಸ್ತ್ರ ಒಂದು ಅಂತಸ್ತನ್ನು ಮುಟ್ಟಿದ್ದರೂ, ಅನೇಕ ವೈದ್ಯಶಾಸ್ತ್ರಜ್ಞರು ವಸ್ತುನಿಷ್ಠವಾಗಿ ರೋಗ ಮತ್ತು ಆರೋಗ್ಯವನ್ನು ವಿವರಿಸಲು ಯತ್ನಿಸಿದ್ದರು. ಅನೇಕರು ವೈದ್ಯಶಾಸ್ತ್ರವನ್ನು ವಿಜ್ಞಾನ ಮತ್ತು ಕಲೆಯೆಂದು ಭಾವಿಸಿದ್ದರು. ಮತ್ತೆ ಕೆಲವರು ವೈದ್ಯಶಾಸ್ತ್ರದಲ್ಲಿರುವ ಮೂಢ ನಂಬಿಕೆಯನ್ನು ಪ್ರದರ್ಶಿಸಿದ್ದರು.

ರಸಾಯನಿಕ ಮತ್ತು ಯಾಂತ್ರಿಕ ಭಾವನೆಗಳು

೧೭ನೇ ಶತಮಾನದ ಮೊದಲ ವರ್ಷಗಳಲ್ಲಿ ಎರಡು ಆಶ್ಚರ್ಯಕರ ಭಾವನೆಗಳು ಹುಟ್ಟಿದವು. ಒಂದು ಭಾವನೆಯ ಪ್ರಕಾರ ಶರೀರವನ್ನು ಒಂದು ಯಂತ್ರಕ್ಕೆ ಹೋಲಿಸಿ, ಶರೀರದಲ್ಲಿ ನಡೆಯುವ ಕ್ರಿಯೆಗಳೆಲ್ಲಾ ಕೇವಲ ಯಾಂತ್ರಿಕ ಶಕ್ತಿಯಿಂದ ನಡೆಯುತ್ತವೆಂದೂ, ಎರಡನೆಯ ಭಾವನೆಯ ಪ್ರಕಾರ ಶರೀರ ಒಂದು ಪರೀಕ್ಷಾನಾಳವೆಂದೂ ಕ್ರಿಯೆಗಳೆಲ್ಲಾ ರಸಾಯನಿಕ ಕ್ರಿಯೆಗಳೆಂದೂ ಹೇಳಲಾಗಿತ್ತು. ಈ ಭಾವನೆಗಳು ಹೊಸ ಮಾದರಿಯ ಅಭಿಪ್ರಾಯಗಳಾಗಿದ್ದರೂ, ಅವು ಅವಿವೇಕದ ಅಸಂಬದ್ಧ ಮಾತುಗಳೆಂದೂ ನಂಬಲಾಗಿತ್ತು.

ಸ್ಯಾಂಕ್ಟೋರಿಯಸ್

ಪಾಡ್ವದ ಸ್ಯಾಂಕ್ಟೋರಿಯಸ್ ತನ್ನ ಬುದ್ಧಿಕುಶಲತೆಯಿಂದ ಅನೇಕ ಯಾಂತ್ರಿಕ ಸಲಕರಣೆಗಳನ್ನು ಕಂಡುಹಿಡಿದಿದ್ದನು. ಜ್ವರದ ಮಟ್ಟವನ್ನು ಅಳೆಯಲು ಶಾಖಮಾಪಕವನ್ನೂ, ಶ್ವಾಸನಾಳವನ್ನು ಸೀಳಲು ಮುಕ್ಕೊರೆಗ ಮತ್ತು ಲಾಳ್ಗೊಳವೆಯನ್ನೂ, ನಾಡಿ ಎಣಿಸಲು ಗಡಿಯಾರವನ್ನೂ ಕಂಡುಹಿಡಿದಿದ್ದನು. ಇವೆಲ್ಲಕ್ಕಿಂತಲೂ ಮಿಗಿಲಾಗಿ ತೂಕ ಅಳೆಯುವ ಯಂತ್ರವನ್ನು ಕಲ್ಪಿಸಿ, ತಾನೇ ಪ್ರಯೋಗಗಳಿಗೆ ಒಳಗಾಗಿ, ಅಗೋಚರ ಬೆವರಿನ ಮಟ್ಟವನ್ನು ತಿಳಿದು, ಜೀವಸ್ತುಕರಣದ ಪರಿಶೀಲನೆಗೆ ಅಡಿಪಾಯ ಹಾಕಿದ್ದನು.

ಗಿಯೊವನ್ನಿ ಆಲ್ಫಾನ್ಸೊ ಬೊರೆಲ್ಲಿ

ಯಾಂತ್ರಿಕ ಶಕ್ತಿಭಾವನೆ ಹೊಂದಿದ್ದ ಗಿಯೊವನ್ನಿ ಆಲ್ಫಾನ್ಸೊ ಬೊರೆಲ್ಲಿ (೧೬೦೮–೭೯) ಪೀಸ ಪಟ್ಟಣದಲ್ಲಿ ಗಣಿತಶಾಸ್ತ್ರ ಪ್ರಾಧ್ಯಾಪಕನಾಗಿದ್ದಾಗ ಶರೀರದ ಚಲಬಲಶಾಸ್ತ್ರ ಮತ್ತು ಎಡೆಬಲಶಾಸ್ತ್ರಗಳಲ್ಲಿ ಅಭ್ಯಾಸ ಮಾಡತೊಡಗಿದ್ದನು. ಸ್ನಾಯುಗಳ ಸಂಕೋಚನೆಯ ಬಲವನ್ನೂ, ಸಂಕೋಚನಕ್ಕೆ ಬೇಕಾದ ನರಗಳ

ಮೂಲಕ ಹಾಯ್ದು ಬರುವ ರಸ ಪದಾರ್ಥವನ್ನೂ ವಿವರಿಸಿದ್ದನು.

ಜಿಯೊರ್ಜಿಯೊ ಬಾಗ್ಲಿವಿ

ಜಿಯೊರ್ಜಿಯೊ ಬಾಗ್ಲಿವಿ (೧೬೬೮-೧೭೦೭) ರೋಂ ನಗರದಲ್ಲಿ ಅಂಗರಚನೆ ಶಾಸ್ತ್ರದ ಪ್ರಾಧ್ಯಾಪಕನಾಗಿದ್ದರೂ, ಭೌತಶಾಸ್ತ್ರದಲ್ಲೂ, ರೋಗಿಯ ಪಕ್ಕದ ವೈದ್ಯ ಶಾಸ್ತ್ರದಲ್ಲೂ ಪಂಡಿತನಾಗಿದ್ದನು. ಮೊದಲಿಗೆ ಶರೀರವನ್ನು ಯಂತ್ರಕ್ಕೆ ಹೋಲಿಸಿ, ಹಲ್ಲುಗಳನ್ನು ಒಂದು ಜೊತೆ ಕತ್ತರಿಗೂ, ಎದೆಯನ್ನು ಒತ್ತುವ ತಿದಿಗೂ, ಹೃದಯ ಮತ್ತು ರಕ್ತನಾಳಗಳನ್ನು ನೀರಿನ ಯಂತ್ರಕ್ಕೂ ಜಠರವನ್ನು ಬೀಸುವ ಕಲ್ಲಿಗೂ ಹೋಲಿಸಿದ್ದನು. ಆದರೆ ವೈದ್ಯಶಾಸ್ತ್ರದ ಪ್ರಾಧ್ಯಾಪಕನಾದ ಅನಂತರ, ಶರೀರದ ಎಲ್ಲಾ ಕ್ರಿಯೆಗಳನ್ನು ಯಾಂತ್ರಿಕ ದೃಷ್ಟಿಯಿಂದ ವಿವರಿಸುವುದಕ್ಕಾಗುವುದಿಲ್ಲವೆಂದು ಹೇಳಿ, ರೋಗಿಯ ಹಾಸಿಗೆ ಪಕ್ಕದ ವಿದ್ಯಮಾನಗಳಿಗೆ ಪ್ರಾಮುಖ್ಯತೆ ಕೊಟ್ಟು 'ಡಿ ಪ್ರಾಕ್ಸಿ ಮೀಡಿಯ' ಎಂಬ ಪುಸ್ತಕ ಬರೆದು ಅದರಲ್ಲಿ ಕಾರಣ ಮತ್ತು ಕಣ್ಣರಿಕೆ ವೈದ್ಯಶಾಸ್ತ್ರದ ಎರಡು ಸ್ಥಂಭಗಳೆಂದು ನುಡಿದಿದ್ದನು. ಹೀಗೆ ಹಿಪ್ಪೊಕ್ರೇಟಿಸ್ ಉಪದೇಶಿಸಿದ್ದ ತತ್ತ್ವಗಳನ್ನು ಪುನಃ ಪಾಲಿಸಬೇಕಾದ ಕಾಲ ಒದಗಿಬಂದಿತು.


ಜೀನ್ ಬ್ಯಾಪ್ಟಿಸ್ಟೆ ವಾನ್ ಹೆಲ್ಮಾಂಟ್

ರಸಾಯನಿಕ ದೃಷ್ಟಿಯಿಂದ ಶರೀರದ ಕ್ರಿಯೆಗಳನ್ನು ವಿವರಿಸಿದವರಲ್ಲಿ ಜೀನ್ ಬ್ಯಾಪ್ಟಿಸ್ಟೆ ವಾನ್ ಹೆಲ್ಮಾಂಟ್ (೧೫೭೭-೧೬೪೪) ಈ ಭಾವನೆಯ ಸ್ಥಾಪಕನೆಂದು ಹೇಳಲಾಗಿತ್ತು. ಇವನು ಪ್ಯಾರಸೆಲ್ಸಸ್ ಬೆಂಬಲಿಗನಾಗಿದ್ದು, ಲೊವೇನಿನಲ್ಲಿ ಕೊಡ ಲಾಗಿದ್ದ ಎಂ.ಎ. ಪದವಿಯನ್ನು ತಾನು ಯಾವ ಕಲೆಯಲ್ಲೂ ಪಂಡಿತನಲ್ಲವೆಂದು ಹೇಳಿ ತಿರಸ್ಕರಿಸಿದನು ಕ್ರೈಸ್ತಮಠದ ಮತ್ತು ನ್ಯಾಯಸ್ಥಾನದ ಉದ್ಯೋಗಗಳನ್ನು, ಸುಳ್ಳು, ತಟವಟ, ಮೋಸ, ಪಾಪಗಳಿಂದ ಕೂಡಿವೆಯೆಂದು ಹೇಳಿ ಅವುಗಳನ್ನೂ ತಿರಸ್ಕರಿಸಿದನು. ಆದ್ದರಿಂದ ಅವನ ಪಾಲಿಗೆ ಉಳಿದಿದ್ದು ಒಂದೇ ವೈದ್ಯಶಾಸ್ತ್ರ. ಇದನ್ನು ಅಭಿವೃದ್ಧಿಪಡಿಸಲು ಪ್ಯಾರಸೆಲ್ಸಸ್‌ನ ತತ್ವಗಳನ್ನು ಆಧಾರವಾಗಿಟ್ಟುಕೊಂಡು ಕೆಲಸ ಮಾಡಲು ಪ್ರಾರಂಭಿಸಿದನು. ಪ್ಯಾರಸೆಲ್ಸಸ್ ನಂಬಿದ್ದಂತೆ, ಶರೀರದ ಕ್ರಿಯೆಗಳನ್ನು ನಡೆಸಲು ಒಂದು ವಿಧವಾದ ಶಕ್ತಿ ಇದೆಯೆಂದೂ ಅದನ್ನು 'ಬ್ಲಾಸ್' ಎಂದು ಹೆಲ್ಮಾಂಟ್ ಹೆಸರು ಕೊಟ್ಟಿದ್ದನು. ಇದು ಶರೀರದ ದೋಷಗಳನ್ನು ಜ್ವರ, ಕೆಮ್ಮು, ಮುಂತಾದ ರೋಗ ಲಕ್ಷಣಗಳ ಮೂಲಕ ಹೋಗಲಾಡಿಸುತ್ತವೆಂದು ತಿಳಿಸಿದ್ದನು. ಹೆಚ್ಚು ಕಡಿಮೆ ಆದರೆ ಅದಕ್ಕೆ ತಕ್ಕ ಶಮನ ಮಾಡಬೇಕೆಂದೂ ತಿಳಿಸಿದ್ದನು. ಇವನ ರಸಾಯನಿಕ ಭಾವನೆ ಒಂದು ಕಟ್ಟುಕಥೆಯೆಂದು ಅನೇಕರ ಅಭಿಪ್ರಾಯವಾಗಿತ್ತು.

ಫ್ರಾನ್ಸಿಸ್ಕಸ್ ಸಿಲ್ವಿಯಸ್

ಈ ವಿಚಿತ್ರ ರಸಾಯನಿಕ ಭಾವನೆಗಳನ್ನು ಸರಿಪಡಿಸಿ ಶರೀರದಲ್ಲಾಗುವ ಕ್ರಿಯೆ ಗಳನ್ನು ಯುಕ್ತವಾದ ರೀತಿಯಲ್ಲಿ ವಿವರಿಸಲು ಫ್ರಾನ್ಸಿಸ್ಕಸ್ ಸಿಲ್ವಿಯಸ್ ಯತ್ನಿಸಿ


ದನು. ಶರೀರದಲ್ಲಿ ನಡೆಯುವ ಹುದುಗು ಕ್ರಿಯೆ ಒಂದು ಸಾಮಾನ್ಯ ಕ್ರಿಯೆಯೆಂದೂ, ಇಂತಹ ಕ್ರಿಯೆಗಳು ಅನೇಕವಿವೆಯೆಂದೂ, ಈ ಕ್ರಿಯೆಗಳಿಂದಲೇ ಅನಿಲ ಉತ್ಪತ್ತಿಯಾಗುತ್ತದೆಂದೂ ಸ್ಪಷ್ಟಪಡಿಸಿದನು. ಜೊಲ್ಲು, ಪಿತ್ತರಸ, ಮೇದೋಜೀರಕರಸ ಮುಂತಾದ ಶರೀರದಲ್ಲಿ ಉತ್ಪತ್ತಿಯಾಗುವ ರಸಗಳನ್ನೂ ಅವುಗಳ ಕ್ರಿಯೆಗಳನ್ನೂ ಅಭ್ಯಾಸ ಮಾಡಿ ಅವುಗಳಉಪಯೋಗಗಳನ್ನು ವಿವರಿಸಿದನು. ಇವನ್ನೆಲ್ಲಾ ತಿಳಿದಿದ್ದ ಸಿಲ್ವಿಯಸ್ ಕೇವಲ ರಸಾಯನಿಕ ಶಾಸ್ತ್ರಜ್ಞ ಮಾತ್ರವಾಗಿರಲಿಲ್ಲ. ಉತ್ತಮವಾದ ರೋಗಿಯ ಹಾಸಿಗೆ ಪಕ್ಕದ ವೈದ್ಯನೂ ಆಗಿದ್ದನು ಲೇಡನ್ನಿನಲ್ಲಿ ಇವನು ಮೊಟ್ಟ ಮೊದಲಿಗೆ ರೋಗಿಯ ಹಾಸಿ ಪಕ್ಕದ ವೈದ್ಯವನ್ನು ಕಲಿಸಲು ಪ್ರಾರಂಭಿಸಿದನೆಂದೂ ಅವನಿಂದ ಕಲಿಯಲು ಅನೇಕ ಮಂದಿ ವಿದ್ಯಾರ್ಥಿಗಳು ಮುಂದೆ ಬರುತ್ತಿದ್ದರೆಂದೂ ಹೇಳಲಾಗಿದೆ.



ಫ್ರಾನ್ಸಿಸ್ಕಸ್ ಸಿಲ್ವಿಯಸ್


ಥಾಮಸ್ ವಿಲ್ಲಿಸ್

ಇವನು ಲೇಡನ್ನಿನಲ್ಲಿ ಪ್ರಖ್ಯಾತಿಗೆ ಬರುತ್ತಿದ್ದಾಗ, ಇಂಗ್ಲೆಂಡಿನಲ್ಲಿ ಥಾಮಸ್ ವಿಲ್ಲಿಸ್ (೧೬೨೧-೭೫)ಇದೇ ರಸಾಯನಿಕ ಭಾವನೆಯಲ್ಲಿ ಆಸಕ್ತಿ ತೋರಿಸುತ್ತಿದ್ದನು. ಇವನು ಮೊದಲು ಆಕ್ಸ್‌ಫರ್ಡ್‌ನಲ್ಲಿದ್ದು, ಅನಂತರ ಲಂಡನ್ನಿಗೆ ಬಂದು ನರಮಂಡಲವನ್ನು ಅಭಿವೃದ್ಧಿಪಡಿಸುವ ಕ್ರಮದಲ್ಲಿ ತೊಡಗಿದ್ದನು. ಮಿದುಳಡಿ ಇರುವ



ಥಾಮಸ್ ವಿಲ್ಲಿಸ್

ವಿಲ್ಲಿಸ್ ವೃತ್ತವೆಂಬ ಹೆಸರುಳ್ಳ ಧಮನಿಗಳನ್ನೂ, ಸಿಹಿಮೂತ್ರ ರೋಗಿಯ ಮೂತ್ರದಲ್ಲಿ ಸಕ್ಕರೆ ಇರುವುದನ್ನೂ ಇವನು ಕಂಡುಹಿಡಿದಿದ್ದನು. ಮಿದುಳನ್ನು ಕುರಿತು ಬರೆದ ಇವನ 'ಮಿದುಳಿನ ಅಂಗರಚನೆ' ಈ ವಿಷಯದ ಮೊದಲನೇ ಪುಸ್ತಕ ಸಂತ ಪಾಲ್ ಮಂದಿರದ ನಕ್ಷೆ ತಯಾರಿಸಿದ್ದ, ಹಾಗೂ ರಾಜಸಂಸ್ಥೆ ಸ್ಥಾಪಿಸಲು ಸಹಾಯ ಮಾಡಿದ್ದ ಕ್ರಿಸ್ಟೋಫರ್ ರೇ ಈ ಪುಸ್ತಕದ ಚಿತ್ರಗಳನ್ನು ಬರೆದಿದ್ದನು. ರೆನ್ ವೈದ್ಯನಲ್ಲದಿದ್ದರೂ, ಸಿರಗಳ ಮುಖಾಂತರ ಔಷಧಗಳನ್ನು ಶರೀರಕ್ಕೆ ಹಾಯಿಸಬಹುದೆಂದು ಸೂಚಿಸಿದ್ದನು.



ಆಕ್ಸ್‌ಫರ್ಡಿನ ಥಾಮಸ್ ವಿಲ್ಲಿಸ್ ೧೬೬೪ರಲ್ಲಿ ಪ್ರಕಟಿಸಿದ ಮಿದುಳಿನ ರಚನೆಯ ಚಿತ್ರ. ಇದರಲ್ಲಿ "ವಿಲ್ಲಿಸ್ ಸುತ್ತು" ಇರುವುದನ್ನು ನೋಡಬಹುದು

ರೋಗಿ ಹಾಸೆಪಕ್ಕದ ವೈದ್ಯಶಾಸ್ತ್ರ

ಫ್ರಾನ್ಸಿಸ್ ಗ್ಲಿಸ್ಸನ್

ಫ್ರಾನ್ಸಿಸ್ ಗ್ಲಿಸ್ಸನ್ (೧೫೯೭–೧೬೭೭) ಸರ್ ಥಿಯೊಡೋರ್ ಟರ್ಕೆಟ್ (೧೫೭೩–೧೬೫೫) ಮತ್ತು ಥಾಮಸ್ ಸೈಡೆನ್‌ಹ್ಯಾಮ್ (೧೬೨೪–೮೯) ಈ ಮೂವರು ವೈದ್ಯರು ೧೭ನೇ ಶತಮಾನದ ಶ್ರೇಷ್ಠ ವೈದ್ಯರಾಗಿದ್ದರು. ವಿಲ್ಲಿಸ್ ಕಾಲದವನಾಗಿದ್ದ ಗ್ಲಿಸ್ಸನ್, ಕೇಂಬ್ರಿಡ್ಜಿನಲ್ಲಿ, ವೈದ್ಯದ ಪ್ರಾಧ್ಯಾಪಕನಾಗಿದ್ದು, ಹಾರ್ವೆಯನಂತರ 'ಲಿಮ್ಲಿ' ಉಪನ್ಯಾಸಕನೂ ಆಗಿದ್ದನು. ಇವನು ಕೇಂಬ್ರಿಡ್ಜ್‌ನಲ್ಲಿ ಕೆಲಸಕ್ಕಿದ್ದರೂ, ಹೆಚ್ಚು ವೇಳೆಯನ್ನು ಲಂಡನ್ನಿನಲ್ಲೇ ಕಳೆಯುತ್ತಿದ್ದನೆಂದೂ, ಪರೀಕ್ಷೆಗಾಗಿ ಆಗಾಗ್ಗೆ ಕೇಂಬ್ರಿಡ್ಜ್‌ಗೆ ಹೋಗುತ್ತಿದ್ದನೆಂದೂ, ಉಪನ್ಯಾಸ ಮಾಡಲೂ ಕೂಡ ಹೋಗುತ್ತಿರಲಿಲ್ಲವೆಂದೂ ಹೇಳಲಾಗಿದೆ. ಲಂಡನ್ನಿನ ರಾಜಸಂಸ್ಥೆಗೂ, ವೈದ್ಯವಿದ್ಯಾಶಾಲೆಗೂ ಸದಸ್ಯನಾಗಿದ್ದು, ಅನಂತರ ವೈದ್ಯಶಾಲೆಯ ಅಧ್ಯಕ್ಷನೂ ಆಗಿ ಅನೇಕ ವರ್ಷಗಳು ಕೆಲಸ ಮಾಡಿದ್ದನು. ಇವನ 'ಈಲಿಯ ಅಂಗರಚನೆ' ಎಂಬ ಪುಸ್ತಕದಲ್ಲಿ ಬರೆದಿದ್ದ ಈಲಿಯ ಹೊರ ಕವಚದ ವಿಷಯ ಇವನ ಪ್ರಥಮ ಬರಹವಾಗಿತ್ತು. ಒಂದು ಪುಸ್ತಕದಲ್ಲಿ ಮಕ್ಕಳ ಮೆದುಮೂಳೆ ರೋಗವನ್ನು ಕೂಲಂಕಷವಾಗಿ ವಿವರಿಸಿದ್ದನು.

ಮೇಯರ್ನೆ

ಸರ್ ಥಿಯೋಡೋರ್ ಟರ್ಕೆಟ್ ಜಿನೀವ ಹತ್ತಿರವಿದ್ದ ಮೆಯರ್ನೆ ಊರಿ

ನವನು. ಆದ್ದರಿಂದ ಸಾಮಾನ್ಯವಾಗಿ ಇವನನ್ನು ಮೆಯರ್ನೆ ಎಂದು ಕರೆಯುತ್ತಿದ್ದರು. ಇವನು ಹೈಡಲ್‌ಬರ್ಗ್ ಮತ್ತು ಮಾಂಟ್‌ಪೆಲ್ಲಿಯರ್‌ಗಳಲ್ಲಿ ವ್ಯಾಸಂಗ ಮಾಡಿ, ಸ್ವಲ್ಪ ಕಾಲ ಪ್ಯಾರಿಸ್ಸಿನಲ್ಲಿದ್ದು, ೧೬೧೧ರಲ್ಲಿ ಲಂಡನ್ನಿಗೆ ಬಂದು ನೆಲೆಸಿದನು. ಅಲ್ಲಿ ರಾಜ ವೈದ್ಯಶಾಲೆಯ ಸದಸ್ಯನೂ, ೧ನೇ ಜೇಮ್ಸ್ನ ದೊರೆಯ ವೈದ್ಯನೂ ಆಗಿದ್ದನು. ಜೇಮ್ಸ್ ದೊರೆ ಇವನಿಗೆ 'ನೈಟ್' ಪದವಿಯನ್ನು ದಯಪಾಲಿಸಿದ್ದನು. ಇವನು ರಾಜವೈದ್ಯಶಾಲೆಯಿಂದ ೧೬೧೮ರಲ್ಲಿ ಪ್ರಕಟಿಸಿದ ಔಷಧಮಂಜರಿಯ ಮೊದಲನೆಯ ಸಂಪಾದಕನಾಗಿದ್ದನು. ಇವನು ಬರೆದುಕೊಟ್ಟ ಔಷಧ ಪಟ್ಟಿಯಲ್ಲಿ ಮನುಷ್ಯನ ತಲೆಮೂಳೆ ಪುಡಿ, ಮುಂಗುಲಿಯ ರಕ್ತ, ಬಾವಲಿಯ ತೈಲ ಮುಂತಾದವಿದ್ದವು. ಪಾದರಸದಿಂದ ತಯಾರಿಸಿದ ಔಷಧಗಳೂ ಇದ್ದವು ಜೇಮ್ಸ್ ದೊರೆಯ ರೋಗ ವಿವರಗಳನ್ನು ಬರೆದಿದ್ದ ಪುಸ್ತಕ ಇವನ ಪರಿಶೀಲನೆಯ ಚತುರತೆಯನ್ನು ತೋರುತ್ತಿತ್ತು. ಇದು ಈಗಲೂ ಬ್ರಿಟಿಷ್ ವಸ್ತುಸಂಗ್ರಹಾಲಯದಲ್ಲಿದೆ. ಜೇಮ್ಸ್ ದೊರೆಯ ದೇಹ ಪರಿಸ್ಥಿತಿಯನ್ನು ವರ್ಣಿಸುತ್ತ "ಸಮುದ್ರಯಾನೆಯಿಂದಾಗಲೀ, ಮದ್ಯಪಾನದಿಂದಾಗಲೀ, ಕುದುರೆ ಸಾರೋಟು ಸವಾರಿಯಿಂದಾಗಲೀ ಭಂಗ ಬಾರನಂತಹ ನಿಶ್ಚಲ ಜ್ಞಾನ ಶಕ್ತಿ ಅವನಿಗಿತ್ತು". ಎಂದು ವಿವರಿಸಿದ್ದನು.

ಸಿಡೆನ್‌ಹ್ಯಾಮ್

೧೭ನೇ ಶತಮಾನದ ಮಹಾಪುರುಷ ಥಾಮಸ್ ಸಿಡೆನ್‌ಹ್ಯಾಮ್ ಇಂಗ್ಲೀಷಿನ ಸಾಕ್ರೊಟೀಸ್ ಎಂದು ಹೆಸರ್ರು ಪಡೆದಿದ್ದನು. "ರೋಗ ಚಿಕಿತ್ಸೆಯಲ್ಲಿ ಸಿಡೆನ್‌ಹ್ಯಾಮ್‌ನ್ನು ಮೀರಿಸುವವರು ಯಾರೂ ಇರಲಿಲ್ಲ. ಹಾಗೂ ಅವನ ಮಾತುಗಳು ಅತಿಶಯಿಸಿದಂತಿದ್ದವು. ಎಂದು ಇವನ ಸಾಮರ್ಥ್ಯವನ್ನು ವಿವರಿಸಲಾಗಿತ್ತು. ಇವನು ಹಳೆಯ ಭಾವನೆಗಳನ್ನೆಲ್ಲಾ ಧ್ವಂಸ ಮಾಡಿ ವೈದ್ಯ ವಿದ್ಯೆಯಲ್ಲಿ ನವೀನತೆ ತಂದಿದ್ದನು. ಸರ್ ರಿಚರ್ಡ್ ಬ್ಲ್ಯಾಕ್‌ಮೋರ್ ಓದಲು ಒಂದು ಒಳ್ಳೆ ವೈದ್ಯ ಪುಸ್ತಕದ ಹೆಸರನ್ನು ಸೂಚಿಸ



ಥಾಮಸ್ ಸಿಡೆನ್‌ಹ್ಯಾಮ್ (೧೬೨೪-೮೯)

ಲೆಂದು ಕೇಳಿದಾಗ, 'ಡಾನ್ ಕ್ವಿಕ್ಸೋಟ್ ಪುಸ್ತಕವನ್ನು ಓದು, ಅದನ್ನು ನಾನೂ ಓದಿದ್ದೇನೆ' ಎಂದು ಸಿಡನ್‌ಹ್ಯಾಮ್ ಉತ್ತರ ಕೊಟ್ಟಿದ್ದನು. ಸರ್ ಹ್ಯಾನ್ಸ್ ಸ್ಲೋನ್ ವಿಚಾರವಾಗಿ "ಅಂಗರಚನೆಶಾಸ್ತ್ರ, ಸಸ್ಯಶಾಸ್ತ್ರ ಎಲ್ಲ ಅಪಡ್ಡಾಳು, ಬೇಡ ಸಾಕು. ಯುವಕನೇ, ರೋಗಿ ಬಳಿ ಸಾರು, ಅಲ್ಲಿ ಮಾತ್ರವೇ ನೀನು ರೋಗವನ್ನು ತಿಳಿಯುವೆ' ಎಂದು ಎಚ್ಚರಿಸಿದ್ದನು. ಸಾಕ್ರೊಟೀಸ್ ಉಪದೇಶಿಸಿದ್ದ ಇಂತಹ ತತ್ತ್ವಗಳನ್ನು ಪುನಃ ಜಾರಿಗೆ ತಂದು ಅಸ್ಪಷ್ಟ ಊಹೆಗಳಿಗಿಂತಲೂ ಸಾಮಾನ್ಯ ಅರಿವು ಮೇಲೆಂದು ತಿಳಿಸಿದ್ದನು.

೧೬೪೨ರಲ್ಲಿ ಆಕ್ಸ್‌ಫರ್ಡ್‌ನಲ್ಲಿ ಓದುತ್ತಿದ್ದಾಗ, ಒಳಯುದ್ಧ ದೊರೆಗೂ ಪ್ರಜಾಪ್ರತಿನಿಧಿಸಭೆ ಸದಸ್ಯರಿಗೂ ನಡೆದಾಗ ಸಿಡೆನ್‌ಹ್ಯಾಮ್ ಜಯಶೀಲನಾದ ಆಲಿವರ್ ಕ್ರಾಮ್‌ವೆಲ್ ಕಡೆ ಸೇರಿದ್ದು, ಯುದ್ಧ ಮುಗಿದನಂತರ ಆಕ್ಸ್‌ಫರ್ಡ್‌ಗೆ ಹಿಂತಿರುಗಿ ವೈದ್ಯ ವ್ಯಾಸಂಗ ಮುಂದುವರಿಸಿದ್ದನು. ಒಂದು ವರ್ಷದನಂತರ ವೈದ್ಯ ಪದವೀಧರನಾಗಿ ವೈದ್ಯವೃತ್ತಿಯಲ್ಲಿ ತೊಡಗಿದನು. ಆಕ್ಸ್‌ಫರ್ಡ್‌ನಲ್ಲಿ ರಾಬರ್ಟ್ ಬಾಯಿಲ್ ಮತ್ತು ಜಾನ್ ಲಾಕ್ ಇವನ ಸ್ನೇಹಿತರೂ ಸಂಗಡಿಗರೂ ಆಗಿದ್ದರು. ಆದರೆ ಹಾರ್ವೆ ರಾಜನ ಕಡೆಯುವನಾದ್ದರಿಂದ ಇವನಿಗೆ ಪರಿಚಯವಿರಲಿಲ್ಲ. ಇವನು ರಾಜ ವೈದ್ಯಶಾಲೆಯ ಸದಸ್ಯನಾಗಿಲ್ಲದಿದ್ದರೂ ರಾಜಾಸ್ಥಾನದ ವೈದ್ಯನಾಗಿಲ್ಲದಿದ್ದರೂ ಸಾಕಷ್ಟು ಪುಣ್ಯವಂತರು ಇವನಿಗೆ ಉತ್ತೇಜನ ಕೊಟ್ಟಿದ್ದರು. ಇವನು ಮೊದಲೇ ಹಣವಂತರ ವಂಶಕ್ಕೆ ಸೇರಿದ್ದನು. ಇವನ ಬರವಣಿಗೆಗಳು ಇವನು ಸತ್ತನಂತರ ಬೆಳಕಿಗೆ ಬಂದು ಎಲ್ಲೆಲ್ಲೂ ಪ್ರಸಿದ್ಧಿ ಪಡೆದವು.

ಬೋರ್‌ಹಾವೆ ಉಪನ್ಯಾಸ ಮಾಡುವಾಗ ಸಿಡೆನ್‌ಹ್ಯಾಮ್ ಹೆಸರೇನಾದರೂ ಎತ್ತಬೇಕಾಗಿ ಬಂದರೆ ಪ್ರತಿ ಸಲವೂ ತನ್ನ ಟೋಪಿಯನ್ನು ಗೌರವ ಸೂಚಿಸಲು ತಲೆಯಿಂದ ಮೇಲೆತ್ತುತ್ತಿದ್ದನೆಂದು ಹೇಳಲಾಗಿದೆ. ಹೀಗೆ ಗೌರವವಿಟ್ಟಿದ್ದವರಲ್ಲಿ ಥಾಮಸ್ ಡೋವರ್ ಕೂಡ ಒಬ್ಬ. ಇವನ ಹೆಸರಾಗಿ ಡೋವರ್ ಪುಡಿ ಈಗಲೂ ಉಪಯೋಗದಲ್ಲಿದೆ. ಇವನು ತನ್ನ ಪುಸ್ತಕವಾದ 'ತನ್ನ ನಾಡಿಗೆ ಪುರಾತನ ವೈದ್ಯನ ಬಳುವಳಿ, ೧೭೩೨'ದಲ್ಲಿ ಸಿಡೆನ್‌ಹ್ಯಾಮ್‌ನನ್ನು ಗುಣಗಾನ ಮಾಡಿದ್ದನು.

ಸಿಡೆನ್‌ಹ್ಯಾಂ ಲೇಖನಗಳು

ಸಿಡೆನ್‌ಹ್ಯಾಮ್ ಹೆಚ್ಚಿಗೆ ಬರೆಯದಿದ್ದರೂ, ಕಟ್ಟುವಾರೆ, ಸಿಡುಬು ಕುರಿತು ಬರೆದಿರುವ ಲೇಖನಗಳು ಅತ್ಯುತ್ತಮವಾಗಿದ್ದವು. ವೈದ್ಯಕೀಯ ಕಣ್ಣರಿಕೆ ಎಂಬ ಪುಸ್ತಕ ಎಲ್ಲರ ಮೆಚ್ಚಿಗೆಯನ್ನು ಪಡೆದಿತ್ತು. ದಡಾರದ ವಿಚಾರ ಬರೆಯುತ್ತ, ಇದು ವಿಶೇಷವಾಗಿ ಮಕ್ಕಳಲ್ಲಿ ಬರುತ್ತದೆಂದೂ, ಮೊದಲನೆಯ ದಿನ ನೆಗಡಿ ಮತ್ತು ಚಳಿ, ೨ನೇ ದಿನ ಜ್ವರ, ಬಾಯಾರಿಕೆ, ಅಲಸಿಕೆ, ೪ನೇ ದಿನ ರೋಗ ಬಲಿತು ಮುಖದಲ್ಲಿ ಕೆಂಪು ದದ್ದುಗಳೇಳುತ್ತವೆಂದೂ, ನಂತರ ಮೈಮೇಲೆಲ್ಲ ಕಾಣಿಸಿಕೊಳ್ಳುತ್ತವೆಂದೂ, ೮ನೇ ದಿನ ದದ್ದುಗಳು ಮರೆಸಿ ರೋಗಿ ಗುಣಮುಖವಾಗುತ್ತಾನೆಂದೂ ವಿವರಿಸಿದನು. ತಾನೇ ನರಳುತ್ತಿದ್ದ ಕಟ್ಟುವಾರೆಯ ಕೀಲು ನೋವನ್ನು ಇದೇ ರೀತಿ ಸ್ವಾರಸ್ಯವಾಗಿಯೂ, ಕೂಲಂಕಷವಾಗಿಯೂ ವಿವರಿಸಿದ್ದನು. ಇವನ ಚಿಕಿತ್ಸೆಯ ವಿಧಾನಗಳು ಕೂಡ ಸರಳವಾಗಿದ್ದವು.

ರಕ್ತಕೊರೆಗೆ ಕಬ್ಬಿಣದಿಂದ ತಯಾರಿಸಿದ ಔಷಧವನ್ನು ಇವನೇ ಮೊಟ್ಟಮೊದಲಿಗೆ ಉಪಯೋಗಿಸಿದ್ದನು. ೧೭ನೇ ಶತಮಾನದಲ್ಲಿ ಸಾಂಕ್ರಾಮಿಕವಾಗಿ ಹರಡಿದ್ದ ಮಲೇರಿಯ ಜ್ವರಕ್ಕೆ ಸಿಂಕೋನವನ್ನು ಉಪಯೋಗಿಸಿ ಗುಣಮಾಡುತ್ತಿದ್ದನು. ಉಪದಂಶ ಮೇಹ ರೋಗಕ್ಕೆ ಪಾದರಸದ ಮುಲಾಮನ್ನು ಹಚ್ಚಿ ಗುಣಪಡಿಸುತ್ತಿದ್ದನು. ಅಫೀಮು ಇವನ ಅಚ್ಚುಮೆಚ್ಚಿನ ಔಷಧವಾಗಿತ್ತು. 'ಸಿಡನ್‌ಹಾಮನ ರಾಳಮ' ಎಂದು ಹೆಸರಿದ್ದ ಅಫೀಮಿನ ಮದ್ದುಸಾರಕ ಇತ್ತೀಚಿನವರೆವಿಗೂ ಚಾಲ್ತಿಯಲ್ಲಿತ್ತು. ಜ್ವರವಿದ್ದಾಗ ತಂಪು ಮಾಡಬೇಕೆಂದೂ, ಕ್ಷಯ ರೋಗಿಯನ್ನು ಕುದುರೆ ಮೇಲೆ ಕುಳ್ಳಿರಿಸಿ ಬಯಲಿನಲ್ಲಿ ಗಾಳಿ ಸೇವಿಸಬೇಕೆಂದೂ ಹೇಳಿದ್ದನು ಆಗ ಜಾರಿಯಲ್ಲಿದ್ದ ರಸಾಯನಿಕ ಮತ್ತು ಯಾಂತ್ರಿಕ ಭಾವನೆಗಳನ್ನು ದೂರಮಾಡಿ, ಹಿಪ್ಪೊಕ್ರೇಟಿಸ್ ತತ್ತ್ವಗಳನ್ನು ಸ್ವಾಗತಿಸಿ, ರೋಗಿಯ ಹಾಸಿಗೆ ಪಕ್ಕದ ವಿದ್ಯಮಾನಗಳಿಗೆ ಹೆಚ್ಚು ಗಮನ ಕೊಡಬೇಕೆಂದು ಸಲಹೆ ಮಾಡಿದ್ದನು.

ಶಸ್ತ್ರವೈದ್ಯ

ಶಸ್ತ್ರವೈದ್ಯ ದೇಹಶಾಸ್ತ್ರಜ್ಞನಾದ ಹಾರ್ವೆ, ಸೂಕ್ಷ್ಮದರ್ಶಕನಾದ ಮ್ಯಾಲ್ಫಿಜಿ, ವೈದ್ಯಪ್ರವೀಣನಾದ ಸಿಡೆನ್‌ಹ್ಯಾಮ್ ಮುಂತಾದ ಮಹಾವ್ಯಕ್ತಿಗಳಿದ್ದಾಗ್ಯೂ, ಶಸ್ತ್ರವೈದ್ಯ ೧೭ನೇ ಶತಮಾನದಲ್ಲಿ ನಿರೀಕ್ಷಿಸಿದಷ್ಟು ಮುಂದುವರೆಯಲಿಲ್ಲ. ಆದರೂ ಜರ್ಮನಿಯಲ್ಲಿ ಹಿಲ್ಡೆನ್ನಿನ ಫ್ಯಾಬ್ರಿಉಲ್ಮ್ ಪಟ್ಟಣದ ಜೊಹಾನ್ ಸೂಲ್ಟೇಟಸ್ (೧೫೯೫–೧೬೪೫), ಸೇನಾ ಶಸ್ತ್ರವೈದ್ಯನಾದ ಗಾಟ್‌ಫ್ರೀಡ್ ಪುರ್ಮನ್ (೧೬೪೯–೧೭೧೧) ಹಾಗೂ ಪ್ಯಾರಿಸ್ಸಿನಲ್ಲಿ ಪಿಯರ್ರಿ ಡಿಯೊನಿಸ್ (೧೭೧೮) ಇವರು ಶಸ್ತ್ರವೈದ್ಯದ ಪ್ರವೀಣರೆನಿಸಿಕೊಂಡಿದ್ದರು.

ರಿಚರ್ಡ್ ವೈಸ್ಮನ್

ಇಂಗ್ಲೆಂಡಿನಲ್ಲಿ ಸಿಡನ್‌ಹ್ಯಾಮ್ ಹೇಗೆ ವೈದ್ಯಶಾಸ್ತ್ರದಲ್ಲಿ ಹೆಚ್ಚು ಪ್ರಖ್ಯಾತನಾಗಿದ್ದನೋ ಹಾಗೆಯೇ ಶಸ್ತ್ರವೈದ್ಯರಲ್ಲಿ ರಿಚರ್ಡ್ ವೈಸ್ಮನ್ (೧೬೨೨–೭೬) ಪ್ರಖ್ಯಾತಿ ಪಡೆದಿದ್ದನು. ಇವನನ್ನು ಶಸ್ತ್ರವೈದ್ಯದ ಪಿತಾಮಹನೆಂದು ಕರೆದಿದ್ದರು. ವೈಸ್ಮನ್ ಸೇನಾ ಶಸ್ತ್ರವೈದ್ಯನಾಗಿದ್ದು ಡಚ್ ನೌಕಾಬಲದಲ್ಲೂ ಅನಂತರ ೧ನೇ ಚಾರಲ್ಸ್ ಸೈನ್ಯದಲ್ಲೂ ಕೆಲಸ ಮಾಡಿದ್ದನು. ಸಿಡನ್‌ಹ್ಯಾಮ್ ಆಲಿವರ್ ಕ್ರಾಮ್‌ವೆಲ್ಲನ ಪಂಗಡಕ್ಕೆ ಸೇರಿದ್ದರೆ, ವೈಸ್ಮನ್ ಚಾರಲ್ಸ್ ದೊರೆಯ ಪಂಗಡಕ್ಕೆ ಸೇರಿದ್ದನು. ಪ್ರಜಾ ಯುದ್ಧದಲ್ಲಿ ಚಾರಲ್ಸ್ ದೊರೆ ಸೋತನಂತರ ವೈಸ್ಮನ್ ಸ್ಪೈಯಿನ್ ಸೈನ್ಯವನ್ನು ಸೇರಿದ್ದನು. ಇಂಗ್ಲೆಂಡಿನ ಯುದ್ಧ ಮುಗಿದು ೨ನೇ ಚಾರಲ್ಸ್ ದೊರೆಯಾದ ನಂತರ ವೈಸ್ಮನ್ ಲಂಡನ್ನಿಗೆ ಹಿಂತಿರುಗಿ ಸಾಯುವ ತನಕ ದೊರೆಯ ಆಸ್ಥಾನ ಶಸ್ತ್ರವೈದ್ಯನಾಗಿ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದನು. ಅವನು ಬರೆದ ಗ್ರಂಥ ಅವನು ಸತ್ತ ಮೇಲೆ ಪ್ರಕಟವಾಗಿ ಬಹಳ ಗೌರವ ಪಡೆಯಿತು, ಹಾಗೂ ಇಂಗ್ಲೆಂಡಿನ ಶಸ್ತ್ರ

ವೈದ್ಯ ಉತ್ತಮ ಮಟ್ಟಕ್ಕೆ ಏರಲು ಸಹಾಯವಾಗಿತ್ತು. ಇಷ್ಟಾದರೂ ವೈಸ್ಮನ್ ಗಂಡಮಾಲೆ ಮುಂತಾದ ರೋಗಗಳು ರಾಜಸ್ಪರ್ಶದಿಂದ ಗುಣವಾಗುತ್ತವೆಂದು ನಂಬಿದ್ದನು. ಈ ಪದ್ಧತಿ ಇಂಗ್ಲೆಂಡಿನಲ್ಲಿ ಮಾತ್ರವಲ್ಲ, ಫ್ರಾನ್ಸಿನಲ್ಲೂ ಇತ್ತು. ಫ್ರಾನ್ಸಿನ ೧೪ನೇ ಲೂಯಿ ಸುಮಾರು ೨೫೦೦ ರೋಗಿಗಳನ್ನು ಮುಟ್ಟಿ ಗುಣ ಮಾಡಿದ್ದನಂತೆ. ೧೭೭೫ರ ತನಕ ಈ ಪದ್ಧತಿ ಫ್ರಾನ್ಸಿನಲ್ಲಿ ಜಾರಿಯಲ್ಲಿತ್ತೆಂದು ಹೇಳಲಾಗಿದೆ. ಇಂಗ್ಲೆಂಡಿನಲ್ಲಿ ರಾಜಸ್ಪರ್ಶ ಬಂದದ್ದು ೧೧ನೇ ಶತಮಾನದ ಎಡ್ವರ್ಡ್ ಕಾಲದಲ್ಲಿ. ಸ್ಟ್ಯುವರ್ಟ್ ರಾಜರ ಕಾಲದಲ್ಲಿ ಶಿಖರವನ್ನು ಮುಟ್ಟಿತ್ತು. ೨ನೇ ಚಾರಲ್ಸ್ ದೊರೆ ಸರಾಸರಿಯಾಗಿ ವರ್ಷ ಒಂದಕ್ಕೆ ೪೦೦೦ಗಂಡಮಾಲೆ ರೋಗಿಗಳನ್ನು ಸ್ಪರ್ಶ ಮಾಡುತ್ತಿದ್ದನಂತೆ. ೧೬೬೦ ರಲ್ಲಿ ೬೭೨೫ ರೋಗಿಗಳನ್ನು ಸ್ಪರ್ಶಮಾಡಿ, ತನ್ನ ದೊರೆತನ ಮುಗಿಯುವುದರೊಳಗೆ ಒಟ್ಟು ೯೨,೧೦೭ ರೋಗಿಗಳನ್ನು ಸ್ಪರ್ಶ ಮಾಡಿದ್ದನೆಂದು ಹೇಳಲಾಗಿದೆ. ಚಾರಲ್ಸ್ ದೊರೆ ದೇಶಾಂತರ ಹೋಗಿದ್ದಾಗ ಹಾಲೆಂಡಿನಲ್ಲಿ ರೋಗಿಗಳು ಅಸಂಖ್ಯಾತವಾಗಿ ಬರುತ್ತಿದ್ದರೆಂದು ನಂಬಿದೆ. ಒಂದು ಸಲ ಜನಸಂದಣಿ ಹೆಚ್ಚಿ ೬ ಜನರು ತುಳಿತಕ್ಕೆ ಸಿಕ್ಕಿ ಸತ್ತರೆಂದೂ ಹೇಳಲಾಗಿದೆ. ಅನಂತರ ಬಂದ ವಿಲಿಯಂ ದೊರೆ ಈ ಪದ್ಧತಿಯನ್ನು ನಂಬದೆ ಆಸಕ್ತಿ ತೋರಿಸದಿದ್ದರೂ, ಅವನಾದ ಮೇಲೆ ಈ ಪದವಿಗೆ ಬಂದ ಆನ್ನೆ ರಾಣಿ ಈ ಪದ್ಧತಿಯನ್ನು ಪುನಃ ಜಾರಿಗೆ ತಂದಳು. ಶ್ರೇಷ್ಠನಾದ ಡಾ. ಸ್ಯಾಮ್ಯುಯಲ್ ಜಾನ್ಸನ್ ಕೂಡ ತನ್ನ ಚಿಕ್ಕಂದಿನಲ್ಲಿ ರಾಣಿ ಆನ್ನೆಯಿಂದ ಸ್ಪರ್ಶ ಹೊಂದಿದ್ದನಂತೆ. ಗಂಡಮಾಲೆ ಕುರಿತು ವೈಸ್ಮನ್ ಬರೆದಿರುವ ಲೇಖನದಲ್ಲಿ ರಾಜಸ್ಪರ್ಶದಿಂದ ಗುಣವಾಗಿರುವುದನ್ನು ತಾನೇ ಕಣ್ಣಾರ ನೋಡಿದ್ದೆನೆಂದೂ ತಿಳಿಸಿದ್ದಾನೆ. ದೊರೆಗೆ ಸಮಯವಿಲ್ಲದಿದ್ದಾಗ ರೋಗಕ್ಕೆ ತಕ್ಕ ಶಸ್ತ್ರಕ್ರಿಯೆಯನ್ನು ತಾನು ಮಾಡುತ್ತಿದ್ದೆನೆಂದೂ ತಿಳಿಸಿದ್ದನು.

ಸರ್ ಥಾಮಸ್ ಬ್ರೌನ್

ಹೀಗೆ ವೈಸ್ಮನ್ ಪ್ರಖ್ಯಾತ ಶಸ್ತ್ರವೈದ್ಯನಾಗಿದ್ದು ರಾಜಸ್ಪರ್ಶಕ್ಕೆ ಪ್ರೋತ್ಸಾಹ ಕೊಡುತ್ತಿದ್ದಾಗ, ನಾರ್ವಿಚ್ಚಿನ ಸರ್ ಥಾಮಸ್ ಬ್ರೌನ್ ಪ್ರಕೃತಿ ತತ್ತ್ವವಾದಿಯೂ, ಪ್ರಾಚೀನಾನ್ವೇಷಿಯೂ ಆಗಿದ್ದನು. ಹೀಗೆ ಹೊಸ ಹೊಸ ಪದ್ಧತಿಗಳನ್ನು ಅನುಸರಿಸುತ್ತಿದ್ದರೂ, ಇವನು ಮಂತ್ರ ಮಾಟಗಳಲ್ಲೂ ನಂಬಿಕೆ ಇಟ್ಟಿದ್ದನು. ಒಂದು ಸಲ ಮಾಟ ಮಾಡುತ್ತಿದ್ದರೆಂದು ಇಬ್ಬರು ಮುದುಕಿಯರನ್ನು ಗಲ್ಲಿಗೇರಿಸಲು ದೊರೆ ಆಜ್ಞೆ ಮಾಡಿದ್ದುದನ್ನು ಇವನು ತಪ್ಪಿಸಿದನೆಂದು ಹೇಳಲಾಗಿದೆ. ಮತ್ತೊಂದು ಸಲ ಮಾಟದ ಪರವಾಗಿ ಕೋರ್ಟಿನಲ್ಲಿ ಸಾಧಿಸಿದ್ದನೆಂದು ಹೇಳಲಾಗಿದೆ.

ಬ್ರೌನ್ ಲಂಡನ್ನಿನಲ್ಲಿ ಜನಿಸಿ, ಆಕ್ಸ್‌ಫರ್ಡ್, ಮಾಂಟ್‌ಪೆಲ್ಲಿಯರ್, ಪಾಡ್ವ, ಲೇಡನ್‌ಗಳಲ್ಲಿ ವ್ಯಾಸಂಗಮಾಡಿ, ನಾರ್ವಿಚ್ ಎಂಬಲ್ಲಿ ವೈದ್ಯವೃತ್ತಿ ಅಭ್ಯಾಸಿಸುತ್ತಿದ್ದನು. ಇವನು ರಾಜ ಪಕ್ಷದವನಾಗಿ ಮನ್ನಣೆ ಪಡೆದಿದ್ದುದರಿಂದ ದೊರೆ ನಾರ್ವಿಚ್ಚಿಗೆ

ಭೇಟಿ ಕೊಟ್ಟಿದ್ದಾಗ 'ನೈಟ್' ಪದವಿಯನ್ನು ದಯಪಾಲಿಸಿದ್ದನು. ಇವನ ಲೇಖನಗಳಲ್ಲಿ "ರಿಲಿಜಿಯೊ ಮೆಡಿಸಿ" ಅತಿ ಮುಖ್ಯವಾಗಿತ್ತು. ಇದರಲ್ಲಿ ಸಂಪ್ರದಾಯವಲ್ಲದ ಸಂಗತಿಗಳಿದ್ದರೂ, ಇಂಗ್ಲೆಂಡಿನಲ್ಲೂ, ಯೂರೋಪಿನಲ್ಲೂ, ಅನೇಕರಿಂದ ಗೌರವ ಪಡೆದಿತ್ತು. ಕೋಲ್‌ರಿಡ್ಜ್, ಲ್ಯಾಂಬ್, ಜಾನ್ಸನ್, ಲೊವೆಲ್ ಹಾಗೂ ಇತ್ತೀಚಿನ ಸರ್ ವಿಲಿಯಂ ಆಸ್ಲರ್ ಮುಂತಾದವರು ಇವನನ್ನು ಹೊಗಳಿ ಬರೆದಿದ್ದಾರೆ. "ಆಸ್ಲರನಿಗೆ ಬ್ರೌನ್ ವೀರಪುರುಷನಾಗಿದ್ದ" ಎಂದು ಗುತ್ರಿ ತಿಳಿಸಿದ್ದಾನೆ.

ಹಿಂದಿನ ಶತಮಾನಗಳ ಹಾಗೆಯೇ ೧೭ನೇ ಶತಮಾನದಲ್ಲೂ, ಯುದ್ಧಗಳೂ ಸಾಂಕ್ರಾಮಿಕ ರೋಗಗಳೂ ಸಾವು ನೋವುಗಳೂ ಆಗುತ್ತಲೇ ಇದ್ದವು. ೩೦ ವರ್ಷದ ಯುದ್ಧದಲ್ಲಿ ಜರ್ಮನಿಯ ಮುಕ್ಕಾಲು ಪಾಲು ಜನಸಂಖ್ಯೆ ಪ್ಲೇಗಿನಿಂದ ಮತ್ತು ಟೈಫಸ್ ಜ್ವರದಿಂದ ನಾಶವಾಯಿತೆಂದು ಹೇಳಲಾಗಿದೆ. ಹಾಗಾದರೂ, ೧೭ನೇ ಶತಮಾನದಲ್ಲಿ ಅನೇಕ ನೆಲಸು ನಾಡುಗಳು ಸ್ಥಾಪಿತವಾದವು. ಮೆಕ್ಸಿಕೊ, ಪೆರು ದೇಶಗಳು ಸ್ಪೈಯಿನ್ ಅಧೀನಕ್ಕೆ ಬಂದಿದ್ದವು. ಬ್ರೆಜಿಲ್ ದೇಶ ಪೋರ್ಚುಗೀಸರ ವಶವಾಗಿತ್ತು. ಕೆನಡ ಫ್ರೆಂಚರ ಕೈಸೇರಿದ್ದಿತು. ಇಂಡಿಯ, ಜಾವ, ಸುಮಾತ್ರಗಳು ಡಚ್ಚರಿಗೆ ವ್ಯಾಪಾರ ಸ್ಥಳಗಳಾಗಿದ್ದವು. ಇಂಗ್ಲೆಂಡು, ಅಮೇರಿಕ ದೇಶಗಳಲ್ಲಿ ನೆಲೆಸಲು ಪ್ರಾರಂಭಿಸಿದ್ದರು. ಹೀಗೆ ದೂರ ದೇಶಗಳಲ್ಲಿ ನೆಲೆಸಿದ್ದಾಗ ಹೊಸ ರೋಗಗಳು, ಹೊಸ ಔಷಧ ಗಿಡಮೂಲಿಕೆಗಳು ವಿಜ್ಞಾನಿಗಳ ಗಮನಕ್ಕೆ ಬಂದವು. ರೋಗಗಳ ಪೈಕಿ,ಉಪದಂಶ,ಹಳದಿ ಜ್ವರ, ಮಲೇರಿಯ ಮುಂತಾದ ರೋಗಗಳು ಯೂರೋಪನ್ನು ಮುಟ್ಟಿದವು. ಔಷಧಗಳ ಪೈಕಿ ಸಿಂಕೋನ ಮೊದಲು ಸ್ಪೈಯಿನಿಗೆ ಬಂದು ಅನಂತರ ಇಟಲಿ ಸೇರಿತು. ಚಳಿ ಜ್ವರ ಬಂದು ನರಳುತ್ತಿದ್ದ ಒಬ್ಬ ಸ್ಪೈಯಿನ್ ದೇಶದ ಸಿಪಾಯಿ ಪೆರು ದೇಶದಲ್ಲಿದ್ದಾಗ, ಬಾಯಾರಿಕೆ ತಾಳಲಾರದೆ, ಒಂದು ಹಳ್ಳದ, ಕಹಿಯಾಗಿದ್ದ ನೀರನ್ನು ಕುಡಿದು ಮರು ದಿನ ಜ್ವರದಿಂದ ಬಿಡುಗಡೆ ಆದನೆಂದೂ, ಹಳ್ಳದ ನೀರಿನಲ್ಲಿ ಬಿದ್ದಿದ್ದ ಮರದ ತೊಲೆ ನೀರು ಕಹಿಯಾಗಿದ್ದುದಕ್ಕೆ ಕಾರಣವಾಗಿತ್ತೆಂದೂ ಈ ಸುದ್ದಿ ಹರಡಿ ಕೌಂಟ್ ಸಿಂಕೊನ್ ಎಂಬುವನ ಹೆಂಡತಿ ಆನಡೆ ಒಸೊರಿಯೊ ಅದೇ ಜ್ವರದಿಂದ ನರಳುತ್ತಿದ್ದು, ಆ ಮರದ ಚಕ್ಕೆಯ ಕಷಾಯವನ್ನು ಕುಡಿದು ಗುಣವಾದಳೆಂದು ಹೇಳಲಾಗಿದೆ. ಇನ್ನೊಂದು ಕಥೆಯ ಪ್ರಕಾರ, ಸತ್ತಾಗ ಕೌಂಟ್ ಇನ್ನೂ ಪೆರು ದೇಶಕ್ಕೆ ಹೋಗಿರಲಿಲ್ಲವೆಂದೂ ಇವನ ಎರಡನೆಯ ಹೆಂಡತಿ ಜ್ವರದಿಂದ ಸತ್ತರೂ ಸ್ಪೈಯಿನಿಗೆ ಹಿಂತಿರುಗಲಿಲ್ಲವೆಂದು ಹೇಳಲಾಗಿದೆ. ಅಂತೂ ಕೌಂಟ್ ಹಿಂದಕ್ಕೆ ಬಂದಾಗ ಅವನ ವೈದ್ಯಕ್ಕೆ ಸಾಕಷ್ಟು ಚಕ್ಕೆಯನ್ನು ಯೂರೋಪಿಗೆ ತಂದಿದ್ದನಂತೆ.

೨೬. ೧೮ನೇ ಶತಮಾನದ ವೈದ್ಯಶಾಸ್ತ್ರ

ಆಧುನಿಕ ಯುಗ ಪ್ರಾರಂಭವಾಗುತ್ತಿದ್ದಾಗಲೇ ಶೋಧನೆಗಳು ನಡೆದು ಅನೇಕ ಉತ್ತಮ ಫಲಿತಾಂಶಗಳು ಶೇಖರವಾಗಿದ್ದರೂ, ಇವನ್ನೆಲ್ಲಾ ಹದ ಮಾಡಿ, ಜೋಡಿಸಿ, ವರ್ಗೀಕರಿಸುವ ವ್ಯವಸ್ಥೆ ಮಾತ್ರ ಇನ್ನೂ ಆಗಿರಲಿಲ್ಲ. ಹೀಗೆ ೧೮ನೇ ಶತಮಾನದಲ್ಲಿದ್ದ ಸ್ಥಿತಿಯನ್ನು ಸರಿಪಡಿಸಲು ಭೌತವಿಜ್ಞಾನಿ ನ್ಯೂಟನ್, ಸಸ್ಯ ಮತ್ತು ವೈದ್ಯ ವಿಜ್ಞಾನಿ ಲಿನ್ನೇಯಸ್ ಹಾಗೂ ಪ್ರಸಿದ್ಧ ವೈದ್ಯಪಂಡಿತ ಬೋರ್‌ಹಾವೆ ಮುಂದೆ ಬಂದು ಶ್ರದ್ಧೆಯಿಂದ ಕೆಲಸ ಮಾಡಿ ವಿಜ್ಞಾನವನ್ನೂ ಒಂದು ಅಂತಸ್ತಿಗೆ ತಂದರು.

ನ್ಯೂಟನ್

ಸರ್ ಐಸಾಕ್ ನ್ಯೂಟನ್ (೧೬೪೨-೧೭೨೭) ವೈದ್ಯಶಾಸ್ತ್ರಜ್ಞನಲ್ಲದಿದ್ದರೂ, ಅವನ ಆಧುನಿಕ ವಿಜ್ಞಾನ ಕಟ್ಟಳೆಗಳು ವೈದ್ಯಶಾಸ್ತ್ರಕ್ಕೆ ಸಾಕಷ್ಟು ಸಹಾಯಕವಾಗಿದ್ದವು. ವೈದ್ಯಶಾಸ್ತ್ರಕ್ಕೆ ಮಾತ್ರವಲ್ಲ, ಪ್ರಪಂಚದ ಎಲ್ಲಾ ವಿಜ್ಞಾನಗಳಿಗೂ, ಅಂದರೆ ಭೌತಶಾಸ್ತ್ರ, ಜ್ಯೋತಿಷ್ಯ, ಗಣಿತ ಮುಂತಾದವೆಲ್ಲಕ್ಕೂ ಅನ್ವಯಿಸುವ ಕಟ್ಟಳೆಗಳನ್ನು ಸೂಚಿಸಿದ್ದನು. ಇವನು ಬರೆದ ಪ್ರಿನ್ಸಿಪಿಯ ೧೬೮೭ರಲ್ಲಿ ಪ್ರಕಟವಾಗಿ, ಮನುಷ್ಯನ ವಿಜ್ಞಾನ ಶಕ್ತಿಯನ್ನು ಮೆರೆಸುವಂತಿತ್ತು.

ಲಿನ್ನೇಯಸ್

ಕಾರ್ಲ್ ವಾನ್ ಲಿನ್ನೆ ಅಥವಾ ಲಿನ್ನೇಯಸ್ (೧೭೦೭-೭೮) ೧೮ನೇ ಶತಮಾನದ ಪ್ರಾರಂಭದಲ್ಲಿ ಜನಿಸಿ, ವೈದ್ಯಶಾಸ್ತ್ರದಲ್ಲೂ, ಸಸ್ಯಶಾಸ್ತ್ರದಲ್ಲೂ ಪಂಡಿತನಾಗಿದ್ದನು. ಇವನು ಸಾಕಿ ಸಲಹಿದ್ದ ಸಸ್ಯಗಳ ತೋಟ ಈಗಲೂ ಉಪ್ಸಾಲದಲ್ಲಿ ಮಾದರಿಯಂತಿದೆ. ಸಸ್ಯಗಳನ್ನು ವಿಂಗಡಿಸಿ ಅವುಗಳ ವಂಶ, ಪ್ರಭೇದಗಳನ್ನು ವಿಂಗಡಿಸಿ ಎರಡು ಪದಗಳುಳ್ಳ ಹೆಸರನ್ನು ಪ್ರತಿಯೊಂದು ಸಸ್ಯಕ್ಕೂ ಕೊಟ್ಟನು. ಈ ಪದ್ಧತಿಯಿಂದ ವಿಜ್ಞಾನದಲ್ಲಿದ್ದ ಅವ್ಯವಸ್ಥೆ ಹೋಗಿ ಸಮಾನತೆ ಒದಗಿತು. ಇವನು ಬರೆದ 'ಪ್ರಕೃತಿ ಪದ್ಧತಿ' ೧೭೩೫ರಲ್ಲಿ ಪ್ರಕಟವಾಗಿ ಪ್ರಾಣಿಗಳ, ಸಸ್ಯಗಳ ದ್ವಿಪದ ಹೆಸರುಗಳ ವಿಧಾನ ವಿವರಗಳನ್ನು ಒಳಗೊಂಡಿತ್ತು.

ಬೋರ್‌ಹಾವೆ

ಲೇಡನ್ನಿನ ಹರ್ಮನ್ ಬೋರ್‌ಹಾವೆ (೧೬೬೮-೧೭೩೮) ೧೮ನೇ ಶತಮಾನದ ಅತ್ಯಂತ ಶ್ರೇಷ್ಠ ವೈದ್ಯನಾಗಿದ್ದನು. ಇವನು ರೋಗಿಯ ಹಾಸೆ ಪಕ್ಕದ ವೈದ್ಯಶಾಸ್ತ್ರದ ಮೇಲೆ ಸಾಕಷ್ಟು ಪ್ರಭಾವ ಬೀರಿದ್ದನು. ಲೇಡನ್ ಹತ್ತಿರವಿದ್ದ ಊರೊಂದರಲ್ಲಿ ಜನಿಸಿ, ಲೇಡನ್ನಿನಲ್ಲಿ ಮತ ಧರ್ಮಶಾಸ್ತ್ರ, ತತ್ತ್ವಶಾಸ್ತ್ರ, ಗಣಿತ ಮತ್ತು ವೈದ್ಯಶಾಸ್ತ್ರಗಳಲ್ಲಿ ಪರಿಣತಿ ಹೊಂದಿ, ೧೬೯೦ರಲ್ಲಿ ತತ್ತ್ವಶಾಸ್ತ್ರದ ಪಂಡಿತ ಪದವಿ ಪಡೆದನು.

ಆದರೆ ವೈದ್ಯನಾಗಬೇಕೆಂಬ ಆಸೆಯಿಂದ ಮನಸ್ಸು ಬದಲಾಯಿಸಿ ೧೬೯೩ರಲ್ಲಿ ಹಾರ್ಡರ್‌ವಿಕ್ ವಿಶ್ವವಿದ್ಯಾಲಯದಿಂದ ವೈದ್ಯಶಾಸ್ತ್ರದ ಪಂಡಿತ ಪದವಿಯನ್ನೂ ಪಡೆದು ಲೇಡನ್ನಿನಲ್ಲಿ ವೈದ್ಯವೃತ್ತಿ ಆರಂಭಿಸಿದನು. ೧೭೦೧ರಲ್ಲಿ ವೈದ್ಯಶಾಸ್ತ್ರದ ಅಧ್ಯಾಪಕನಾಗಿಯೂ, ೧೭೦೯ರಲ್ಲಿ ಪ್ರಾಧ್ಯಾಪಕನಾಗೂ ನೇಮಕವಾದನು. ಅಧ್ಯಾಪಕನಾಗಿ ಪ್ರಸಿದ್ಧಿಯಾಗಿದ್ದುದರಿಂದ ಯೂರೋಪಿನಿಂದೆಲ್ಲಾ ಅವನ ಉಪನ್ಯಾಸ ಕೇಳಲು ವಿದ್ಯಾರ್ಥಿಗಳು ಬರುತ್ತಿದ್ದರು. ಅವನ ಶಿಷ್ಯನಾದ ಹಲ್ಲರ್ ತನ್ನ ಗುರುವನ್ನು ಕುರಿತು 'ಇಡೀ ಯೂರೋಪಿನ ಅಧ್ಯಾಪಕ'ನೆಂದು ಹೇಳಿದ್ದನು. ರೋವೆನ್ ಕರ್ಕ್ ಎಂಬ ಊರಿನಲ್ಲಿ ೬ ಹಾಸಿಗೆಯುಳ್ಳ ಒಂದು ಹೆಂಗಸರ ರೋಗಿ ಕೋಣೆ, ೬ ಹಾಸಿಗೆಗಳುಳ್ಳ ಒಂದು ಗಂಡಸರ ರೋಗಿ ಕೋಣೆ ಇವನ ಅಧಿಕಾರದಲ್ಲಿದ್ದವು. ರೋಗಿಯ ಹಾಸೆ ಪಕ್ಕದ ವೈದ್ಯಶಾಸ್ತ್ರವನ್ನು ಬೋಧಿಸುವಾಗ ರೋಗಿಯ ಪೂರ್ವ ಚರಿತ್ರೆಯನ್ನೂ ತಿಳಿಯುತ್ತಿದ್ದುದಲ್ಲದೆ, ರೋಗಿಯ ಮೂತ್ರ ಹಾಗು ಸಾಮಾನ್ಯ ಪ್ರಕೃತಿಯನ್ನು ಪರಿಶೀಲಿಸುತ್ತಿದ್ದನು. ಆದರೆ ಆಗ ಕೈಬೆರಳುಗಳಿಂದ ಕುಟ್ಟಿ ಪರೀಕ್ಷಿಸುವ ಮತ್ತು ಕಿವಿಯಿಂದಾಲಿಸುವ ಪದ್ಧತಿಗಳಿಲ್ಲದ್ದರಿಂದ ಶರೀರದ ಅಂಗಗಳನ್ನು ಪ್ರತ್ಯೇಕವಾಗಿ ಪರೀಕ್ಷಿಸಲಾಗುತ್ತಿರಲಿಲ್ಲ. ಹೀಗಿದ್ದರೂ ಈ ೧೨ ಹಾಸಿಗೆಗಳಲ್ಲಿರುತ್ತಿದ್ದ ರೋಗಿಗಳ ಸಹಾಯದಿಂದಲೇ ಯುರೋಪಿನ ಅರ್ಧ ಮಂದಿ ಚಿಕಿತ್ಸಾ ವೈದ್ಯರು ತರಪೇತಾಗಿದ್ದರು.

ಬೋರ್‌ಹಾವೆಯ ಗುರಿ

ಹರ್ಮನ್ ಬೋರ್‌ಹಾವೆ ಬುದ್ಧಿವಂತನಾಗದಿದ್ದುದರಿಂದ ಮತ ಧರ್ಮ ಕಲಿಯಲು ಸೇರಿಸಬೇಕೆಂದೂ, ಅವನ ತಮ್ಮನನ್ನು ವೈದ್ಯವೃತ್ತಿಗೆ ಸೇರಿಸಬೇಕೆಂದೂ ಇದ್ದ ಅವನ ತಂದೆಯ ಆಕಾಂಕ್ಷೆ ನೆರವೇರದೆ, ಅವರ ಗುರಿ ಅದಲು ಬದಲಾಗಿ ಇವನೇ ವೈದ್ಯವೃತ್ತಿಯನ್ನು ಅವಲಂಬಿಸಿದನು. ಇವನ ತಮ್ಮ ಕ್ರೈಸ್ತ ಆರಾಧನ ಮಂದಿರವನ್ನು ಸೇರಿದನು. ಬೋರ್‌ಹಾವೆ ಬಹು ಬೇಗನೆ ವೈದ್ಯವೃತ್ತಿಯಲ್ಲಿ ಪ್ರಖ್ಯಾತಿ ಪಡೆದು ಹಿಪ್ಪೊಕ್ರೇಟಿಸ್ ಪದ್ಧತಿಯ ಪ್ರಕಾರ ರೋಗಿಗೆ ಪ್ರಾಮುಖ್ಯತೆ ಕೊಟ್ಟು, ಸಾಧಾರಣ ವಿವಾದಗಳಿಂದ ವೈದ್ಯಶಾಸ್ತ್ರವನ್ನು ಕಲಿಯಲಾಗುವುದಿಲ್ಲವೆಂದೂ, ರೋಗಿಯ ಪರಿಶೀಲನೆ ಅತ್ಯಗತ್ಯವೆಂದೂ ತಿಳಿಸಿದ್ದನು. ಇವನ ಚತುರತೆಯನ್ನು ಮೆಚ್ಚಿ ಚೀನ ದೇಶದಿಂದಲೂ ಸಲಹೆ ಕೇಳುವ ಪತ್ರಗಳು ಬರುತ್ತಿದ್ದವು. ಅವನ ಸಾರ್ವಜನಿಕ ಸೇವೆಯನ್ನು ಮೆಚ್ಚಿ ತಕ್ಕ ಗೌರವ ಸಲ್ಲಿಸಲು, ಅವನು ಜೀವಿಸಿದ್ದಾಗಲೇ, ಅವನ ಪ್ರತಿಮೆಯೊಂದನ್ನು ಲೇಡನ್ನಿನ ಹಳೆಯ ಆಸ್ಪತ್ರೆಯ ಎದುರಾಗಿ ಸ್ಥಾಪನೆ ಮಾಡಲಾಗಿತ್ತು. ಹೊಸ ಕಟ್ಟಡ ಒಂದಕ್ಕೆ ಬೋರ್‌ಹಾವೆಯ ಬೀಡು ಎಂದು ಹೆಸರಿಡಲಾಗಿತ್ತು. ಅವನು ವಾಸಿಸುತ್ತಿದ್ದ ಮನೆ, ಅವನ ಪ್ರೀತಿಗೊಳಗಾಗಿದ್ದ ಸಸ್ಯ ತೋಟಗಳು ಈಗಲೂ ಸ್ಮಾರಕಗಳಾಗಿವೆ. ಲೇಡನ್ನಿನಲ್ಲಿ ವೈದ್ಯರ ಸಭೆಗಳು ನಡೆಯುವಾಗಲೆಲ್ಲಾ ಅವನ

ಸಮಾಧಿಯ ಮೇಲೆ ಪುಷ್ಪಹಾರ ಹಾಕಿ ಅನಂತರ ಕೆಲಸ ಪ್ರಾರಂಭಿಸುವ ಪದ್ಧತಿ ಈಗಲೂ ಇದೆ.

ಬೋರ್‌ಹಾವೆ ಅಂತಹ ಸಂಶೋಧನೆಯನ್ನೇನೂ ಮಾಡಿರಲಿಲ್ಲ. ಶ್ರೇಷ್ಠ ಲೇಖನಗಳನ್ನೂ ಬರೆದಿರಲಿಲ್ಲ. ಆದರೂ ಅವನ ಎರಡು ಮುಖ್ಯ ಬರವಣಿಗೆಗಳಾದ (೧) ವೈದ್ಯಸಂಸ್ಥೆಗಳು (೨) ರೋಗ ನಿದಾನ ಮತ್ತು ಚಿಕಿತ್ಸೆಗಳ ಸೂತ್ರಗಳು ಬಹಳ ಸೂಕ್ತವಾಗಿದ್ದವು. ವೈದ್ಯಗ್ರಂಥಗಳು ಎಂಬ ಪುಸ್ತಕ ೧೭೦೮ರಲ್ಲಿ ಮೊದಲನೆಯ ಬಾರಿ ಪ್ರಕಟವಾಗಿ, ಅನಂತರ ೧೫ ಆವೃತ್ತಿಗಳು ಲ್ಯಾಟಿನ್ ಭಾಷೆಯಲ್ಲಿ ಪ್ರಕಟವಾದುವು. ಸೂತ್ರಗಳ ಗ್ರಂಥ ೧೭೦೯ರಲ್ಲಿ ಹೊರಬಿದ್ದು, ಲ್ಯಾಟಿನ್, ಫ್ರೆಂಚ್ ಮತ್ತು ಇಂಗ್ಲೀಷ್ ಭಾಷೆಗಳಿಗೆ ಭಾಷಾಂತರವಾಗಿತ್ತು. ಆಗ ಈ ಗ್ರಂಥಗಳು ಎಷ್ಟು ಪ್ರಸಿದ್ಧಿಯಾಗಿದ್ದವೊ, ಈಗ ಅಷ್ಟು ಕಣ್ಮರೆಯಾಗಿವೆ.

ರಸಾಯನಿಕ ಮತ್ತು ಯಾಂತ್ರಿಕ ಆಧಾರಗಳಿಂದ ವೈದ್ಯಶಾಸ್ತ್ರಕ್ಕೆ ಬೇಕಾದ ವಿಷಯಗಳನ್ನು ಆರಿಸಿಕೊಂಡು ಕೆಲಸ ಮಾಡುವುದರಲ್ಲಿ ಬೋರ್‌ಹಾವೆ ನಿಸ್ಸೀಮನಾಗಿದ್ದನು. ಶರೀರದಲ್ಲಿರುವ ಘನ ಮತ್ತು ದ್ರವ ವಸ್ತುಗಳ ಚಲನೆಯಿಂದ ಪ್ರಾಣ ಸಾಧ್ಯವೆಂದೂ, ಈ ಚಲನೆಗಳ ಬದಲಾವಣೆಗಳಿಂದ ರೋಗ ಏಳುತ್ತದೆಂದೂ ತಿಳಿಸಿದ್ದನು. ಆದರೂ ಅವನ ರೋಗ ಚಿಕಿತ್ಸೆಯ ವಿಧಾನಗಳಲ್ಲಿ ಯಾವ ಸಮಸ್ಯೆಯೂ ಮೂಡಿರಲಿಲ್ಲ. ೧೭೨೫ರಲ್ಲಿ ತಾನು ಕಟ್ಟುವಾರೆ ಕೀಲು ರೋಗಕ್ಕೊಳಗಾದುದರಿಂದ, ಸಸ್ಯಶಾಸ್ತ್ರ, ರಸಾಯನಶಾಸ್ತ್ರಗಳ ಉದ್ಯೋಗವನ್ನು ತ್ಯಜಿಸಿ, ರೋಗಿಯ ಹಾಸೆ ಪಕ್ಕದ ವೈದ್ಯಶಾಸ್ತ್ರವನ್ನು ಕಲಿಸುವ ಕಾರ್ಯದಲ್ಲಿ ಮಾತ್ರ ತೊಡಗಿದ್ದನು. ೧೭೩೮ ರಲ್ಲಿ ಸಾಯುವ ತನಕ, ೯ ವರ್ಷಗಳೂ ಇದೇ ಕೆಲಸದಲ್ಲಿದ್ದು ಇನ್ನಷ್ಟು ಗೌರವವನ್ನು ಸಂಪಾದಿಸಿದ್ದನು.

ಪ್ರಾಣಿ ಚೇತನ ಮತ್ತು ಜೀವ ಚೈತನ್ಯ

ಇಷ್ಟು ಉತ್ತಮ ಸ್ಥಿತಿಗೆ ವಿಜ್ಞಾನ ಮತ್ತು ವೈದ್ಯಶಾಸ್ತ್ರಗಳು ಬೆಳೆದು ಬಂದಿದ್ದರೂ, ಕೆಲವರು ವೈದ್ಯರು ಹಳೆಯ ಸಂಪ್ರದಾಯದ ಹಾಗೂ ವಿಚಿತ್ರವಾದ ಊಹಾಪೋಹಗಳನ್ನು ಪ್ರೋತ್ಸಾಹಿಸುತ್ತಿದ್ದರು. ವೈದ್ಯಶಾಸ್ತ್ರ, ಮತಧರ್ಮಶಾಸ್ತ್ರಗಳು ಬಹಳ ದಿನಗಳಿಂದ ಪರಸ್ಪರ ಆದರದಿಂದ ಬೆಳೆದು ಬಂದಿದ್ದರೂ, ಈಗ ಅಗಾಧವಾದ ಬಿರುಕು ಹುಟ್ಟಿ ಅವು ಬೇರೆಬೇರೆ ದಾರಿಯಲ್ಲಿ ಬೆಳೆಯಲಾರಂಭಿಸಿದ್ದವು. ವೈದ್ಯಶಾಸ್ತ್ರ ಪ್ರಾಪಂಚಿಕವಾಗಿ, ಯಾಂತ್ರಿಕ ರಸಾಯನಿಕ ಕ್ರಿಯೆಗಳ ಅಧೀನದಲ್ಲಿ ಬೆಳೆಯುತ್ತಿತ್ತು.

ಜಾರ್ಜ್ ಅರ್ನೆಸ್ಟ್ ಸ್ಟಾಲ್

ವಿಚಿತ್ರ ಊಹಾಪೋಹಗಳನ್ನು ಪ್ರೋತ್ಸಾಹಿಸುತ್ತಿದ್ದವರ ಪೈಕಿ ಜಾರ್ಜ್ ಅರ್ನೆಸ್ಟ್ ಸ್ಟಾಲ್ (೧೬೬೦–೧೭೩೪) ಹೊಸದಾಗಿ ಸ್ಥಾಪಿಸಿದ್ದ ಹಲ್ಲೆ ವಿಶ್ವವಿದ್ಯಾ

ಲಯದ ವೈದ್ಯಶಾಸ್ತ್ರದ ಪ್ರಾಧ್ಯಾಪಕನಾಗಿದ್ದು ರಸಾಯನಿಕ, ಯಾಂತ್ರಿಕ ಆಧಾರವನ್ನು ತ್ಯಜಿಸಿ ಮನುಷ್ಯನ ದೇಹ ಮತ್ತು ಜೀವಗಳೆರಡೂ ಒಟ್ಟಿಗೆ ಬೆರೆತಿವೆ ಎಂದೂ, ಜೀವವೇ ಮನುಷ್ಯನ ಬಾಳುವೆಗೆ ಅತಿ ಮುಖ್ಯವಾದುದೆಂದೂ ಹೇಳಿದನು. ಅಂಗರಚನೆಯ ಶಾಸ್ತ್ರವೂ ವೈದ್ಯನಿಗೆ ಸಹಾಯಕವಾದುದಲ್ಲವೆಂದು ಸಾರಿದ್ದನು. ಜೀವಾತ್ಮವಿಲ್ಲದಿದ್ದರೆ ಮಾತ್ರ, ಸತ್ತ ಮೇಲೆ ಶರೀರ ಕೊಳೆಯುತ್ತದೆಂದೂ, ಸರಿಯಾದ ನೆಲೆಯಿಲ್ಲದಿದ್ದರೆ ಶರೀರವನ್ನು ಜೀವಾತ್ಮ ತ್ಯಜಿಸುವುದೆಂದೂ,ಆಗ ಸಾವು ಉಂಟಾಗುತ್ತದೆಂದೂ ತಿಳಿಸಿದ್ದನು. ಇವನ ಈ 'ಚೇತನ' ಹೊಸದೇನಾಗಿರಲಿಲ್ಲ. ಹಿಂದಿನ ವೈದ್ಯರು ಇದನ್ನು 'ಆತ್ಮ' ಎಂದು ಕರೆದಿದ್ದರು. ಇದನ್ನೇ ಈಗಿನ ವೈದ್ಯರು ಉಪಪ್ರಜ್ಞೆ ಎಂದು ಕರೆದಿರುವುದು. ಆದರೂ ಆಗಿನ ವೈದ್ಯರು ಈ ತತ್ತ್ವವನ್ನು ಅಪ್ರಮಾಣವಾದ್ದೆಂದೂ ಅಸಂಬದ್ಧವಾದ್ದೆಂದೂ ಹೇಳಿದ್ದರು. ಮತಧರ್ಮಶಾಸ್ತ್ರಜ್ಞರೂ ಕೂಡ ಈ ತತ್ತ್ವವನ್ನು ಅಂಗೀಕರಿಸಿರಲಿಲ್ಲ. ಸ್ಟಾಲ್‌ನನ್ನು ಹುಳಿಮೋರೆಯ ಆಧ್ಯಾತ್ಮಶಾಸ್ತ್ರಜ್ಞನೆಂದು ಬೋರ್‌ಹಾವೆ ಕರೆದಿದ್ದನು. ಆದರೂ ಇವನ ಊಹೆಗಳು ಸಾಕಷ್ಟು ಬುದ್ಧಿಶಕ್ತಿಯನ್ನು ವೈದ್ಯರಲ್ಲಿ ಅರಳಿಸಿದ್ದವು. ಸ್ಟಾಲ್ ಏನಾದರೂ ೨೦ನೇ ಶತಮಾನದಲ್ಲಿದ್ದಿದ್ದರೆ, ಬಹು ಶ್ರೇಷ್ಠ ಮಾನಸಿಕ ಶಾಸ್ತ್ರಜ್ಞನಾಗಿರುತ್ತಿದ್ದನು. ಹಲ್ಲೆ ವಿಶ್ವವಿದ್ಯಾಲಯದಲ್ಲಿದ್ದಾಗ, ಸಹೋದ್ಯೋಗಿ ಹಾಫ್ಮನ್, ಇವನನ್ನು ವಿರೋಧಿಸಿದ್ದುದರಿಂದ, ಬಹಳ ಮನಸ್ತಾಪ ಬಂದು, ಜನರ ಪ್ರೀತಿಯನ್ನು ಕಳೆದುಕೊಂಡು ೧೭೧೬ ರಲ್ಲಿ ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟನು. ಅಷ್ಟರಲ್ಲೇ ಇವನಿಗೆ ಬರ್ಲಿನ್ನಿನ ರಾಜವೈದ್ಯ ಸ್ಥಾನ ದೊರಕಿತ್ತು.

ಫ್ರೆಡ್ರಿಕ್ ಹಾಫ್ಮನ್

ದೂಷಣೆ ಸಹಿಸಲಾರದ, ಮೊಂಡ ನಡತೆ ಇದ್ದ ಸ್ಟಾಲ್‌ನನ್ನು ವಿರೋಧಿಸಿದ್ದ ಫ್ರೆಡ್ರಿಕ್ ಹಾಫ್ಮನ್ (೧೬೬೦-೧೭೪೨) ನಡತೆಯಲ್ಲಿ ಸದ್ಗುಣಿಯಾಗಿಯೂ, ವಿಶ್ವಾಸಿಯಾಗಿಯೂ, ಯೋಗ್ಯನಾಗಿಯೂ ಇದ್ದನು. ಇವನು ವೈದ್ಯವೃತ್ತಿಯಲ್ಲಿ ಪ್ರಖ್ಯಾತಿ ಪಡೆದುದಲ್ಲದೆ, ಅಧ್ಯಾಪಕನಾಗಿಯೂ ಖ್ಯಾತಿ ಪಡೆದಿದ್ದನು. ಹಲ್ಲೆಯಲ್ಲಿ ಜನಿಸಿ ಹಲ್ಲೆ ವಿಶ್ವವಿದ್ಯಾಲಯದಲ್ಲಿ ಸ್ಟಾಲ್ ಪಡೆದಿದ್ದ ಪದವಿಗೆ ಸಮನಾದ ಪದವಿಯನ್ನು ಪಡೆದಿದ್ದನು. ಹಾಫ್ಮನ್ನಿನ ಸಾಮರ್ಥ್ಯವನ್ನು ಮೆಚ್ಚಿ, ಬಹಳ ಜನ ವಿದ್ಯಾರ್ಥಿಗಳೂ ವೈದ್ಯರೂ ಇವನಿಂದ ಪಾಠ ಕಲಿಯಲು ಹಲ್ಲೆ ವಿಶ್ವವಿದ್ಯಾಲಯಕ್ಕೆ ಬರುತ್ತಿದ್ದರು. ಸ್ವಲ್ಪ ಕಾಲ ಬರ್ಲಿನ್ನಿನಲ್ಲಿ ಫ್ರೆಡ್ರಿಕ್ ದೊರೆಯ ಆಸ್ಥಾನದಲ್ಲಿದ್ದು, ಸರಿಹೋಗದೆ, ೧೭೧೨ರಲ್ಲಿ ವಿಶ್ವವಿದ್ಯಾಲಯಕ್ಕೆ ಹಿಂತಿರುಗಿ ಸಾಯುವ ತನಕ ಪ್ರಾಧ್ಯಾಪಕನಾಗಿದ್ದು ಕೀರ್ತಿ ಗಳಿಸಿದ್ದನು. ಇವನು ಬರೆದ ಅನೇಕ ಪುಸ್ತಕಗಳ ಪೈಕಿ ೯ ಸಂಪುಟಗಳುಳ್ಳ ಗ್ರಂಥ ಬಹಳ ಉತ್ತಮ ದರ್ಜೆಯದಾಗಿತ್ತು. ಜೀವ, ಪ್ರಾಣ, ಆತ್ಮಗಳಲ್ಲದ ಜೀವಾಳವಾದ ಮತ್ತೊಂದು ವಸ್ತು ಪ್ರಪಂಚದಲ್ಲಿದೆಯೆಂದೂ, ಇದು ಶರೀರವನ್ನು ಒಂದು

ಹದವಾದ ಸಮಸ್ಥಿತಿಯಲ್ಲಿ ಇಡುತ್ತದೆಂದೂ ತಿಳಿಸಿದ್ದನು. ಈ ಹದವಾದ ಸಮಸ್ಥಿತಿಯೇನಾದರೂ ಹೆಚ್ಚು ಕಡಿಮೆಯಾದರೆ ರೋಗ ಬರುತ್ತದೆಂದೂ, ಹೆಚ್ಚಾಗಿದ್ದಾಗ ಕ್ರೂರವಾದ ರೋಗವೂ, ಕಡಿಮೆಯಾದಾಗ ಬೇರೂರಿದ ರೋಗವೂ ಬರುತ್ತದೆಂದೂ ತಿಳಿಸಿದ್ದನು. ರೋಗ ಜೋರಾಗಿರುವಾಗ ಶಾಮಕ ಔಷಧಗಳನ್ನು ಉಪಯೋಗಿಸಬೇಕೆಂದೂ, ಬೇರೂರಿರುವಾಗ ಚೋದಕ ಔಷಧಗಳನ್ನು ಕೊಡಬೇಕೆಂದೂ ತಿಳಿಸಿದ್ದನು. ಚೋದಕ ಔಷಧಗಳು ಈಗಲೂ ವಾಡಿಕೆಯಲ್ಲಿವೆ. ಆಗಿನ ಕಾಲಕ್ಕನುಗುಣವಾಗಿ ಹಾಫ್ಮನ್ ಕೆಲವು ರಹಸ್ಯವಾದ ಔಷಧಗಳನ್ನು ಕೊಡುತ್ತಿದ್ದರೂ, ಅವನ ಹೆಸರೇನೂ ಕುಂದಿರಲಿಲ್ಲ. ಅವುಗಳ ಪೈಕಿ ಹಾಫ್ಮನ್ನನ ವೇದನಹಾರಿ ಇನ್ನೂ ಉಪಯೋಗದಲ್ಲಿದೆ.

ಜಾನ್ ಬ್ರೌನ್

ಹಾಫ್ಮನ್ನನ ತತ್ತ್ವಗಳನ್ನು ಹೋಲುತ್ತಿದ್ದ ತತ್ತ್ವಗಳನ್ನೇ ಮುಂದಿಟ್ಟು ಜಾನ್ ಬ್ರೌನ್ (೧೭೩೫–೮೮) ಹಾಫ್ಮನ್ನನ ಅಂತ್ಯ ಕಾಲದಲ್ಲಿ, ಸ್ಕಾಟ್ಲೆಂಡಿನಲ್ಲಿ ಜನಿಸಿ, ಚರ್ಚಾಸ್ಪದಕ್ಕೆ ಕಾರಣನಾದನು. ಮೊದಲು ವಿದ್ಯಾ ಶಿಕ್ಷಣದಲ್ಲೂ, ಮತಧರ್ಮದಲ್ಲೂ ನಿಪುಣನಾಗಿದ್ದರೂ ಯಶಸ್ವಿಯಾಗದೆ, ವೈದ್ಯವೃತ್ತಿಯನ್ನು ಅವಲಂಬಿಸಿದನು. ಆದರೆ ಇವನ ಚಂಚಲ ಸ್ವಭಾವ, ಉಲ್ಲಾಸ ಶೀಲತೆ ಹಾಗೂ ಜಂಬಗಾರಿಕೆ ಇವುಗಳಿಂದ ಸಹೋದ್ಯೋಗಿಗಳಲ್ಲಿ ಪ್ರೀತಿ ವಿಶ್ವಾಸ ಹೋಗಿ ಅಪಕೀರ್ತಿ ಪಡೆದಿದ್ದನು. ಲ್ಯಾಟಿನ್ನಿನಲ್ಲಿ ಅಭಿರುಚಿ ಇದ್ದುದರಿಂದ ವೈದ್ಯ ವ್ಯಾಸಂಗ ಮಾಡುತ್ತಿದ್ದಾಗಲೇ ಪದವೀಧರರಿಗೂ, ಅಧ್ಯಾಪಕರಿಗೂ ಅವರ ಗ್ರಂಥಗಳನ್ನು ಲ್ಯಾಟಿನ್ನಿಗೆ ಭಾಷಾಂತರ ಮಾಡಿಕೊಟ್ಟು, ಅದರಿಂದ ತನ್ನ ವಿದ್ಯಾ ವೇತನವನ್ನು ಸಂಪಾದಿಸುತ್ತಿದ್ದನು. ಲ್ಯಾಟಿನ್ನಿನ ಅಧ್ಯಾಪಕನಾಗಿದ್ದಾಗ ಕಲ್ಲನ್ ವೈದ್ಯನ ಮೆಚ್ಚಿಗೆಗೆ ಪಾತ್ರನಾಗಿ ಅವನ ಸಂಸಾರದವರಿಗೆ ಖಾಸಗೀ ಅಧ್ಯಾಪಕನಾಗಿದ್ದನು. ಆದರೆ ಕೆಲವು ದಿವಸಗಳ ಅನಂತರ ಕಲ್ಲನ್ ಸಂಗಡ ಜಗಳವಾಡಿ ಅವನ ಗ್ರಂಥವನ್ನು ಎದುರಿಸುವ 'ವೈದ್ಯದ ಸರಳ ಪಾಠಗಳು' ಗ್ರಂಥವನ್ನು ೧೭೭೮ರಲ್ಲಿ ಬರೆದು, ಅದರಲ್ಲಿ ತನ್ನ ತತ್ತ್ವಗಳನ್ನು ವಿವರಿಸಿ ಉಪನ್ಯಾಸ ಮಾಡಲಾರಂಭಿಸಿದನು. ಅಸ್ಕ್ಲಿಪಿಯಾಡಿಸ್ ತತ್ತ್ವಗಳು ಇವನ ತತ್ತ್ವಗಳಿಗೆ ಆಧಾರವಾಗಿದ್ದವು. ಬ್ರೌನ್ ಬೆಂಬಲಿಗರಿಗೂ ಕಲ್ಲನ್ ಬೆಂಬಲಿಗರಿಗೂ ರಾಜ್ಯ ವೈದ್ಯಸಂಸ್ಥೆಯಲ್ಲಿ ಅನೇಕ ಸಾರಿ ಹೋರಾಟ ನಡೆದಿದ್ದುದರಿಂದ, ಪಂಡಿತ ಪದವಿಯನ್ನು ಎಡಿನ್ಬರೊ ವಿಶ್ವವಿದ್ಯಾನಿಲಯದಿಂದ ಪಡೆಯಲಾಗದೆ, ಸಂತ ಆಂಡ್ರೂಸ್‌ಗೆ ಹೋಗಿ ಅಲ್ಲಿ ಪಡೆದನು. ಬ್ರೌನಿನ ತತ್ತ್ವಗಳು ಯೂರೋಪಿಗೆ ಹರಡಿದಾಗ ಅನೇಕರಿಂದ ವಿರೋಧಿಸಲ್ಪಟ್ಟು, ಒಂದು ಸಲ ಗೊಟ್ಟಿಂಜನ್ ವಿಶ್ವವಿದ್ಯಾಲಯದಲ್ಲಿ ವಿರೋಧ ಪ್ರದರ್ಶನ ನಡೆದು, ಅದನ್ನು ಅಡಗಿಸಲು ಸೈನ್ಯವೇ ಬರಬೇಕಾಯಿತು. ಈ ವಿರೋಧಗಳಿಂದ ಅವನ ತವರೂರಿನಲ್ಲೂ ಗೌರವವಿಲ್ಲದಂತಾಯಿತು. ಸಹೋದ್ಯೋಗಿಗಳೆಲ್ಲಾ

ವಿರೋಧಿಗಳಾದರು. ಕೊನೆಗೆ ಸಾಲಕ್ಕೋಸ್ಕರ ಸೆರೆಮನೆಯನ್ನೂ ಸೇರಬೇಕಾಯಿತು. ವಿದ್ಯಾರ್ಥಿಗಳಲ್ಲಿ ಮಾತ್ರ ವಿಶ್ವಾಸವಿದ್ದುದರಿಂದ ಸೆರೆಮನೆಯಲ್ಲೂ ಉಪನ್ಯಾಸ ಕೇಳಲು ಹೋಗುತ್ತಿದ್ದರು. ಹೀಗೆ ಸೋತು, ತನ್ನ ಅದೃಷ್ಟವನ್ನು ಲಂಡನ್ನಿನಲ್ಲಿ ಪರೀಕ್ಷಿಸಲು ಹೋಗಿ ಅಲ್ಲೂ ಸರಿಹೋಗದೆ ೨ ವರ್ಷಗಳನಂತರ ಬಡತನದಲ್ಲಿ ಪ್ರಾಣ ಬಿಟ್ಟನು.

ಪ್ಯಾರಸೆಲ್ಸಸ್ಸಿನ ತತ್ತ್ವದ ಪ್ರಕಾರ ಬಿಡುವಿಲ್ಲದ ಉದ್ರೇಕದಿಂದ ಜೀವ ನಡೆಯುತ್ತದೆಂದೂ, ಹೊರ ಅಥವಾ ಒಳ ಉದ್ರೇಕಗಳೆಂಬ ೨ ಬಗೆಗಳ ಉದ್ರೇಕಗಳಿವೆಯೆಂದೂ, ಶಾಖ, ಆಹಾರ, ರಕ್ತ, ವಾಯು, ರಕ್ತದಿಂದ ಹುಟ್ಟುವ ರಸ ಹೊರ ಉದ್ರೇಕಗಳೆಂದೂ, ಸ್ನಾಯುಗಳ ಸೆಡೆತ, ಇಂದ್ರಿಯಗಳ ಅನುಭವ,ಮನೋವಿಕಾರ, ವನ್ನುಂಟುಮಾಡುವ ಚೈತನ್ಯಗಳು ಒಳ ಉದ್ರೇಕಗಳೆಂದೂ ಹೇಳಿದ್ದನು. ಉದ್ರೇಕಗಳಿಲ್ಲದಿದ್ದಾಗ ಸಾವುಂಟಾಗುತ್ತದೆಂದೂ, ಅವುಗಳ ವ್ಯತ್ಯಾಸದಿಂದ ರೋಗ ಉತ್ಪತ್ತಿಯಾಗುತ್ತದೆಂದೂ ತಿಳಿಸಿದನು. ಜೀವಕ್ರಿಯೆಗಳ ಅತಿ ಚಟುವಟಿಕೆಯಿಂದಾಗಲೀ ಅಥವಾ ತಗ್ಗಿದ ಚಟುವಟಿಕೆಯಿಂದಾಗಲೀ ರೋಗ ಬರಬಹುದೆಂದು ತಿಳಿಸಿ, ಚಟುವಟಿಕೆ ಅತಿಯಾಗಿರುವಾಗ ಶಾಮಕ ಔಷಧಗಳನ್ನೂ, ತಗ್ಗಿರುವಾಗ ಚೋದಕ ಔಷಧಗಳನ್ನೂ ಕೊಡಬೇಕೆಂದು ತಿಳಿಸಿದ್ದನು. ಇವನು ಉಪನ್ಯಾಸ ಮಾಡುವಾಗ ಚಟುವಟಿಕೆಯಿಂದಿರಲು ಅಫೀಮು ಸೇರಿಸಿದ ಮದ್ಯವನ್ನು ತೆಗೆದುಕೊಳ್ಳುತ್ತಿದ್ದನೆಂದು ಹೇಳಲಾಗಿದೆ. ಇವೆರಡು ಔಷಧಗಳು ಅವನ ಬಹಳ ಇಷ್ಟವಾದ ಮದ್ದುಗಳಾಗಿದ್ದವೆಂದೂ ತಿಳಿದುಬಂದಿದೆ. ಇವೇ ಅವನ ಮರಣಕ್ಕೂ ಕಾರಣವಾಗಿದ್ದವು. ಔಷಧಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಇವನು ಕೊಡುತ್ತಿದ್ದನೆಂದೂ, ಈ ಹೆಚ್ಚಿನ ಪ್ರಮಾಣದಲ್ಲಿ ತೆಗೆದುಕೊಂಡು ಸತ್ತ ರೋಗಿಗಳ ಸಂಖ್ಯೆ ಫ್ರೆಂಚ್ ಕ್ರಾಂತಿ ಮತ್ತು ನೆಪೋಲಿಯನ್ ನಡೆಸಿದ ಯುದ್ಧಗಳಲ್ಲಿ ಸತ್ತವರ ಸಂಖ್ಯೆಯನ್ನು ಮೀರಿತ್ತೆಂದು ಹೇಳಲಾಗಿದೆ.

ಸದೃಶಕ್ರಿಯಾ ಚಿಕಿತ್ಸೆ

ಸ್ಯಾಮ್ಯುಯೆಲ್ ಹ್ಯಾನಿಮನ್

ಹೀಗೆ ಅಧಿಕ ಪ್ರಮಾಣದಲ್ಲಿ ಔಷಧಿ ಕೊಡುತ್ತಿದ್ದ ಬ್ರೌನ್ ಕಾಲದಲ್ಲೇ, ಸ್ಯಾಮ್ಯುಯೆಲ್ ಹ್ಯಾನಿಮನ್(೧೭೫೫–೧೮೪೩) ಅಲ್ಪ ಪ್ರಮಾಣದಲ್ಲಿ ಔಷಧ ಕೊಡುವ ಪದ್ಧತಿಯನ್ನೂ, ಒಂದು ಮದ್ದಿನಿಂದ ಬಂದ ಅದೇ ರೋಗಕ್ಕೆ ಅದೇ ಮದ್ದನ್ನು ಕೊಡುವ ಪದ್ಧತಿಯನ್ನೂ, ಚರ್ಮವ್ಯಾಧಿ ಹುರುಕು ಎಲ್ಲಾ ರೋಗಗಳಿಗೂ ಮೂಲ ಕಾರಣವೆಂಬ ತತ್ತ್ವವನ್ನೂ ಮುಂದಿಟ್ಟು,ಸದೃಶಕ್ರಿಯಾ ಚಿಕಿತ್ಸೆ ಶಾಸ್ತ್ರವನ್ನು(ಹೋಮಿಯೊಪತಿ)ಸ್ಥಾಪಿಸಿದನು. ಇವನ ಪ್ರಭಾವ ಈಗಲೂ ಸಾಕಷ್ಟು ಬೆಳಗುತ್ತಲಿದೆ. ಇವನ ಒಂದು ಗ್ರಂಥದಲ್ಲಿ(೧೮೧೦)ಈ ತತ್ತ್ವಗಳನ್ನೆಲ್ಲಾ ವಿವರಿಸಿದನು. ಪ್ಯಾರಿಸ್,ಲಂಡನ್,

ಡಬ್ಲಿನ್‌ಮುಂತಾದ ಕಡೆಗಳಲ್ಲಿ ವೈದ್ಯವಿಜ್ಞಾನ ಅತಿಶಯವಾಗಿ ಬೆಳೆದಿದ್ದರೂ,ಸೋಜಿಗ ವಾದ,ಕೀಳು ಅಂತಸ್ತಿನ ಸದೃಶಕ್ರಿಯಾಶಾಸ್ತ್ರ ಮತ್ತು ಪ್ರಕೃತಿ ತತ್ತ್ವಶಾಸ್ತ್ರಗಳೆರಡು ಮುಂದೆಬರುತ್ತಿದ್ದವು. ಹ್ಯಾನಿರ್ಮ ಜರ್ಮನಿಯಲ್ಲಿ ಹುಟ್ಟಿ, ಲೀಪ್ಸಿಗ್ ಮತ್ತು ವಿಯನ್ನ ಗಳಲ್ಲಿ ವ್ಯಾಸಂಗ ಮಾಡಿ,ಹಣದ ಕೊರತೆಯಿಂದ ವಿಯನ್ನ ಬಿಟ್ಟು ಹರ್ಮನ್‌ಸ್ಟೈಟ್‌ನ ಶ್ರೀಮಂತನೊಬ್ಬನಿಗೆ ವೈದ್ಯನಾಗಿದ್ದು, ೧೭೭೯ರಲ್ಲಿ ಎರ್ಲಾಂಜೆನ್ ವಿಶ್ವವಿದ್ಯಾಲಯ ದಿಂದ ಪಂಡಿತ ಪದವಿಯನ್ನು ಪಡೆದಿದ್ದನು. ಕೆಲವು ಸ್ಥಳಗಳಲ್ಲಿ ವೈದ್ಯವೃತ್ತಿಯಿಂದಲೇ ಜೀವಿಸುತ್ತಿದ್ದು, ಅವನು ಲೀಪ್ಸಿಗ್ಗಿಗೆ ಹಿಂತಿರುಗಿ ಕಲ್ಲನ್ನಿನ ಔಷಧವಸ್ತುಶಾಸ್ತ್ರವನ್ನು ಭಾಷಾಂತರ ಮಾಡುತ್ತಿದ್ದಾಗ, ಕ್ವಿನೀನಿನ ಕ್ರಿಯೆಯ ಸಂಬಂಧದಲ್ಲಿ ತನ್ನ ತತ್ತ್ವ ವಾದ "ಅದಕ್ಕೆ ಅದೇ ಮದ್ದು" ಎಂಬ ತತ್ತ್ವವನ್ನು ಪ್ರತಿಪಾದಿಸಿದನು. ಜ್ವರ ವಾಸಿ ಮಾಡುವ ಕ್ವಿನೀನು ಸಿಂಕೋನ ಜ್ವರವನ್ನುಂಟುಮಾಡುತ್ತದೆಂಬ ನಂಬಿಕೆಯನ್ನು ಬಹಳ ದಿವಸ ಆಲೋಚಿಸಿ, ಇತರ ಔಷಧವಸ್ತುಶಾಸ್ತ್ರಜ್ಞರಿಂದ ದೃಢಪಡಿಸಲಾಗ ದಿದ್ದರೂ, ತನ್ನ ತತ್ತ್ವವನ್ನು ನಂಬಿ ಮುಂದಿಟ್ಟನು. 'ಅದೇ ತೆರನ ರೋಗವನ್ನು ಉಂಟುಮಾಡುವ ಪ್ರವೃತ್ತಿಯಿರುವ ಒಂದು ಔಷಧದಿಂದ ಮಾತ್ರವೇ ಒಂದು ರೋಗ ವನ್ನು ನಾಶಪಡಿಸಿ ಗುಣಪಡಿಸಬಹುದು'. 'ಸದೃಶವಾದವನ್ನು ಸದೃಶವಾದದಿಂದಲೇ ಗುಣಪಡಿಸಬಹುದು' ಎಂಬ ವಿಚಾರಗಳನ್ನು ಕುರಿತು ಅನೇಕ ಉಪನ್ಯಾಸಗಳನ್ನು ಮಾಡಿದನು. ಅನೇಕ ಬೆಂಬಲಿಗರನ್ನೂ ಅವನು ಪಡೆದಿದ್ದನು.

ಅಲ್ಪ ಪ್ರಮಾಣದಲ್ಲಿ ಔಷಧ ಉಪಯೋಗಿಸುವ ಇವನ ಎರಡನೇ ತತ್ತ್ವ ಸದೃಶ ಕ್ರಿಯಾ ಚಿಕಿತ್ಸೆಯ ಮತ್ತೊಂದು ಭಾಗವಾಗಿತ್ತು. ತೊಟ್ಟು ಔಷಧವನ್ನು ಒಂದು ಪೌಂಡು ನೀರಿನಲ್ಲಿ ಬೆರೆಸಿ, ರೋಗಿಗೆ ಕೊಟ್ಟರೆ, ಅದರ ಶಕ್ತಿ ಹೆಚ್ಚುತ್ತದೆಂದು ಹೇಳಿ ದನು. ಇವನ ಮೂರನೆಯ ತತ್ತ್ವ, ಚರ್ಮವ್ಯಾಧಿ ಹುರುಕು ಎಂಬುದೊಂದೇ ಮೆದು ಮೂಳೆ ರೋಗ, ಏಡಿಗಂತಿ, ಕಟ್ಟುವಾರೆ, ಹಳದಿ ಕಾಮಾಲೆ, ಶೋಬೆ, ಗೂರಲು, ಕಣ್ಪರೆ, ಇರುಳುಗಣ್ಣು ಮುಂತಾದ ೩೧ ರೋಗಗಳಿಗೆಲ್ಲಾ ಕಾರಣವೆಂದು ಹೇಳಿದನು. ಜರ್ಮನಿಯಲ್ಲಿ ಇವನ ತತ್ತ್ವಗಳಿಗೆ ಕೆಲವರು ಬೆಂಬಲ ಕೊಟ್ಟಿದ್ದರೂ, ಬಹು ಮಂದಿ ವಿರೋಧಿಸಿದರು. ಆದರೂ ಪ್ಯಾರಿಸ್, ಇಂಗ್ಲೆಂಡು, ಅಮೆರಿಕಗಳಲ್ಲಿ ಅನೇಕ ಸದೃಶ ಕ್ರಿಯಾಚಿಕಿತ್ಸೆಯ ವೈದ್ಯಶಾಲೆಗಳೂ, ಆಸ್ಪತ್ರೆಗಳೂ ಪ್ರಾರಂಭವಾಗಿ ಕೆಲಸ ಮಾಡ ಲಾರಂಭಿಸಿದ್ದವು. ಈಗಿನ ಅಭಿಪ್ರಾಯದ ಪ್ರಕಾರ, ಸದೃಶ ಕ್ರಿಯಾ ಚಿಕಿತ್ಸೆ ಕ್ರಮದ ಆಗಿನ ಪ್ರಭಾವ ಕೇವಲ ಹ್ಯಾನಿಮನ್ನನ ಭ್ರಮೆಯಾಗಿತ್ತೆಂದು ಹೇಳಲಾಗಿದೆ. ಹೆಚ್ಚು ನೀರು ಬೆರೆಸಿದ ಔಷಧದ ಶಕ್ತಿ ಕಡಿಮೆಯಾಗುತ್ತದೆಯೇ ಹೊರತು ಹೆಚ್ಚಾಗು ವುದಿಲ್ಲವೆಂಬುದು ಎಲ್ಲರ ಅಭಿಪ್ರಾಯ, ಹಾಗೂ ಹುರುಕು ರೋಗ ಎಲ್ಲಾ ೩೧ ರೋಗ ಗಳಿಗೂ ಕಾರಣವೆಂಬುದು ಒಂದು ವಿಚಿತ್ರವಾದ ಹಾಗೂ ಹಾಸ್ಯಾಸ್ಪದ ವಿಚಾರ ವೆಂಬುದೂ ಒಂದು ಸಾಮಾನ್ಯ ಅಭಿಪ್ರಾಯ. ಇಷ್ಟಾದರೂ, ಆಗಿನ ಕಾಲದಲ್ಲಿ

ರೂಢಿಯಲ್ಲಿದ್ದ ಅನೇಕ ಔಷಧಗಳಿದ್ದ ಮದ್ದನ್ನು ಕೊಡುವ ಬದಲು ಕೇವಲ ಒಂದೆರಡು ಔಷಧಗಳುಳ್ಳ ಮದ್ದನ್ನು ಕೊಡುವುದು ಮೇಲೆಂದು ಹೇಳಿದ ಅವನ ಸಮರ್ಥನೆ ಈಗಿನ ವೈದ್ಯಶಾಸ್ತ್ರಕ್ಕೆ ಎಷ್ಟೋ ಪ್ರಯೋಜನವನ್ನುಂಟುಮಾಡಿದೆ. ಅಲ್ಲದೆ, ಆಗ ಉಪ ಯೋಗದಲ್ಲಿದ್ದ ರಕ್ತ ಸುರಿಸುವ, ಹೊಪ್ಪಳೆ ಬರಿಸುವ, ಅತಿ ವಾಂತಿ ಭೇದಿ ಮಾಡಿಸುವ ಪದ್ಧತಿಗಳನ್ನು ವಿರೋಧಿಸಿದ್ದ ಅವನ ಬೋಧನೆಗಳು ಕೂಡ ಈಗಿನ ವೈದ್ಯಶಾಸ್ತ್ರಕ್ಕೆ ಪ್ರಯೋಜಕವಾಗಿವೆ. ಹ್ಯಾನಿಮನ್ನನ ಅಲ್ಪ ಪ್ರಮಾಣದ ಮದ್ದುಗಳು ಸುವಾಸನೆ ಮತ್ತು ರುಚಿಗಳನ್ನು ಹೊಂದಿರುವುದರಿಂದ, ಯಾವ ರೋಗಿಯೂ ಬೇಡವೆನ್ನುವುದಿಲ್ಲ.

ಪ್ರಕೃತಿ ತತ್ತ್ವಶಾಸ್ತ್ರ

ಪ್ರಕೃತಿ ತತ್ತ್ವಶಾಸ್ತ್ರ ಎಂಬ ಮತ್ತೊಂದು ಚಿಕಿತ್ಸೆ ಪದ್ಧತಿ ಆಗಿನ ಜರ್ಮನಿ ಯಲ್ಲಿ ಫ್ರೆಡ್ರಿಕ್ ವಿಲ್ಹೆಮ್ ಜೋಸೆಫ್ ವಾನ್ ಷೆಲ್ಲಿಂಗ್ (೧೭೭೫–೧೮೫೪) ಕಲ್ಪನೆ ಮಾಡಿ ಅಭಿವೃದ್ಧಿಪಡಿಸಿದ್ದನು. ಆದರೆ ಇದು ವೃಥಾ ಊಹಾಪೋಹವೆಂದೂ, ಕೇವಲ ಮನಸ್ಸಿನ ಕಲ್ಪನಾ ಚಿತ್ರವೆಂದೂ ಹೇಳಲಾಗಿದೆ. ಆದರೂ ಮನುಷ್ಯನಿಗೂ ಪ್ರಪಂಚಕ್ಕೂ ಇರುವ ಸಂಬಂಧಗಳ ವಾದವಿವಾದಗಳಿಂದಲೂ, ಜೀವಿ ವಂಶಗಳು ಪ್ರತ್ಯೇಕವಾಗಿ ಸೃಷ್ಟಿಯಾಗದೆ ಹಿಂದಿನ ರೂಪಗಳಿಂದ ವಿಕಾಸವಾಗುವ ವಾದವಿವಾದ ಗಳಿಂದಲೂ ವೈದ್ಯವಿಜ್ಞಾನಕ್ಕೆ ಸಾಕಷ್ಟು ಬೆಂಬಲ ಪ್ರಕೃತಿ ತತ್ತ್ವಶಾಸ್ತ್ರದಿಂದ ದೊರೆತಿದೆ.

ಬೋರ್‌ಹಾವೆಯ ಶಿಷ್ಯರು

ಆಲ್‌ಬ್ರೆಕ್ಟ್ ಹಲ್ಲರ್

ಬೋರ್‌ಹಾವೆ ಅತ್ಯುತ್ತಮನಾದ ಅಧ್ಯಾಪಕನಾಗಿದ್ದುದರಿಂದ ಇವನಿಗೆ ಅನೇಕ ಶಿಷ್ಯರಿದ್ದರು. ಇವರ ಪೈಕಿ ಅತ್ಯಂತ ಮುಖ್ಯವಾದವನೆಂದರೆ ಆಲ್‌ಬ್ರೆಕ್ಟ್ ವಾನ್ ಹಲ್ಲರ್ (೧೭೦೮–೭೭). ಇವನು ಚಿಕ್ಕ ವಯಸ್ಸಿನಲ್ಲೇ ತನ್ನ ಪಾಂಡಿತ್ಯವನ್ನು ತೋರ್ಪಡಿಸಿದ್ದನು. ೯ನೇ ವಯಸ್ಸಿನಲ್ಲಿ ಲ್ಯಾಟಿನ್ ಕಾವ್ಯಗಳನ್ನು ರಚಿಸಿದ್ದಲ್ಲದೆ ೨೦೦೦ಕ್ಕಿಂತಲೂ ಹೆಚ್ಚು ಜನರ ಜೀವನಚರಿತ್ರೆಗಳನ್ನು ಬರೆದಿದ್ದನು. ೧೫ನೇ ವಯ ಸ್ಸಿನಲ್ಲಿ ಟ್ಯುಬಿನ್‌ಜನ್‌ನಲ್ಲಿ ವೈದ್ಯ ವಿದ್ಯಾಭ್ಯಾಸ ಮಾಡಲು ಪ್ರಾರಂಭಿಸಿದ್ದನು. ಅನಂತರ ಲೇಡನ್ನಿಗೆ ಹೋಗಿ ಆಲ್ಬಿನಸ್ ಹಾಗೂ ಬೋರ್‌ಹಾವೆ ಕೈಕೆಳಗೆ ವ್ಯಾಸಂಗ ಮಾಡಿದನು. ೧೯ನೇ ವಯಸ್ಸಿನಲ್ಲಿ ಪಂಡಿತಪದವಿ ಪಡೆದು, ಹಲ್ಲೆಯ ಪ್ರಾಧ್ಯಾಪಕ ವಾನ್ ಕೊಷ್‌ವಿಟ್ಸ್ ತನ್ನ ಪುಸ್ತಕದಲ್ಲಿ ನಾಲಿಗೆಯ ಸಿರವನ್ನು ಜೊಲ್ಲುನಾಳವೆಂದು ತಿಳಿಸಿದ್ದ ತಪ್ಪನ್ನು ತಿದ್ದಿ ಸರಿಪಡಿಸಿದ್ದನು. ಹಾಲ್ಲರ್‌ನನ್ನು 'ಗ್ಯಾಲೆನ್‌ನಂತರ ಇವನೇ ವ್ಯವಸ್ಥಾ ಪದ್ಧತಿಯಲ್ಲಿ ಪಂಡಿತನೆನಿಸಿಕೊಂಡಿದ್ದನು' ಎಂದು ಗ್ಯಾರಿಸನ್ ವಿವರಿಸಿ ದ್ದಾನೆ.

ಆಗ ರೂಢಿಯಲ್ಲಿದ್ದ ರಸಾಯನಿಕ, ಯಾಂತ್ರಿಕ ತತ್ತ್ವಗಳನ್ನು ದೂರ ಮಾಡಿ ಅಂಗರಚನೆಯ ಮತ್ತು ದೇಹಶಾಸ್ತ್ರದ ಪ್ರಯೋಗ, ಪರಿಶೀಲನೆಗಳ ಆಧಾರದ ಮೇಲೆ ತನ್ನ ವಾದವಿವಾದಗಳನ್ನು ಸಮರ್ಥಿಸಿದ್ದನು. ಲಂಡನ್, ಪ್ಯಾರಿಸ್, ಬೇಸಲ್‌ಗಳಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿ, ಅಂಗರಚನೆಶಾಸ್ತ್ರ, ದೇಹಶಾಸ್ತ್ರ, ಸಸ್ಯಶಾಸ್ತ್ರಗಳಲ್ಲಿ ಪ್ರಸಿದ್ಧಿ ಪಡೆದು ೧೭೩೬ರಲ್ಲಿ ಹೊಸದಾಗಿ ಪ್ರಾರಂಭವಾಗಿದ್ದ ಗಾಟಿನ್‌ಜನ್ ವಿಶ್ವ ವಿದ್ಯಾಲಯದ ಪ್ರಾಧ್ಯಾಪಕನಾಗಿ ನೇಮಕವಾಗಿದ್ದನು. ಅಲ್ಲಿ ೧೭ ವರ್ಷಗಳು ಕೆಲಸ ಮಾಡಿ ಅನೇಕ ಶೋಧನೆಗಳನ್ನು ನಡೆಸಿದ್ದನು. ೧೩೦೦ ವಿಜ್ಞಾನ ಲೇಖನಗಳನ್ನು ಬರೆದಿದ್ದನು. ಹೀಗೆ ಪ್ರಬಲವಾಗಿದ್ದಾಗ ಬರ್ಲಿನ್ ಮತ್ತು ಆಕ್ಸ್‌ಫರ್ಡ್ ವಿಶ್ವ ವಿದ್ಯಾಲಯಗಳಿಂದ ಆಮಂತ್ರಣ ಬಂದಿತ್ತು. ೧೭೫೩ರಲ್ಲಿ ಎಲ್ಲಾ ಸ್ವಿಸ್ ಜನರಂತೆ, ತನ್ನ ಮನೆಯ ಹಂಬಲದಿಂದ, ಎಲ್ಲರಿಗೂ ಆಶ್ಚರ್ಯ ಉಂಟುಮಾಡುವಂತೆ ಬರ್ನ್ ಪಟ್ಟಣಕ್ಕೆ ವಿಶ್ರಾಂತಿ ಪಡೆಯಲು ಹಿಂತಿರುಗಿದನು. ಆದರೆ ಅಲ್ಲೂ ಕೂಡ ಸಾಯುವ ತನಕ ಕೆಲಸ ಮಾಡಬೇಕಾಯಿತು. ಅಲ್ಲಿ ಬಹಳ ದಿವಸ ಸಾರ್ವಜನಿಕ ಆರೋಗ್ಯಾಧಿಕಾರಿ ಯಾಗಿದ್ದನು. ಇವನು ಬರೆದಿದ್ದ ಲೇಖನಗಳೆಷ್ಟಿವೆಯೆಂದು ಹೇಳಲಾಗುತ್ತಿರಲಿಲ್ಲ. ಸುಮಾರು ೧೨೦೦ ಪುನರ್ವಿಮರ್ಶೆಗಳಿದ್ದವು. ೧೯೫ ದೇಹಶಾಸ್ತ್ರ ಮತ್ತು ಅಂಗಶಾಸ್ತ್ರದ ಲೇಖನಗಳಿದ್ದವು. ಇವುಗಳಲ್ಲಿ ಮುಖ್ಯವಾಗಿ ೨ ವಿಶ್ವಕೋಶಗಳು, ೪ ಅಂಗರಚನೆಯ ಲೇಖನಗಳು, ೧೨ ದೇಹಶಾಸ್ತ್ರದ ಲೇಖನಗಳು, ೯ ಸಸ್ಯಶಾಸ್ತ್ರದ ಪುಸ್ತಕಗಳು, ೫ ಪುಸ್ತಕ ವಿವರಣೆಗಳು, ೧ ಪದ್ಯಸಂಗ್ರಹ, ೪ ಚರಿತ್ರೆ ಕಾದಂಬರಿಗಳು, ೨ ಮತಧರ್ಮದ ಗ್ರಂಥಗಳು ಇದ್ದವೆಂದು ತಿಳಿದುಬಂದಿದೆ. ಭ್ರೂಣಶಾಸ್ತ್ರದ ಶೋಧನೆಗಳಲ್ಲೂ ಪ್ರಸಿದ್ಧಿ ಯಾಗಿದ್ದನು. ಮೊದಲು ಇವನಿಗೆ ಜೈವಾಂಕುರ ಸೃಷ್ಟಿಯಲ್ಲಿ ನಂಬಿಕೆ ಇದ್ದು, ಶೋಧನೆ ನಡೆಸಿದನಂತರ ಪೂರ್ವರೂಪಣ ವಾದದಲ್ಲಿ ನಂಬಿಕೆ ಹುಟ್ಟಿ, "ಪೂರ್ವಿಕಳ ಅಂಡಾಶಯದಲ್ಲಿ ಮಗಳೇ ಅಲ್ಲದೆ ಮೊಮ್ಮಗಳು, ಮರಿಮಗಳು, ಮರಿಮರಿಮಗಳೂ ಇರುವರು' ಹೀಗೆಂದು ವಿವರಿಸಿದ್ದನು. ದೇಹಶಾಸ್ತ್ರದಲ್ಲೂ ಅನೇಕ ಶೋಧನೆಗಳನ್ನು ನಡೆಸಿ ಸ್ನಾಯುಗಳ ಮುಖ್ಯ ಲಕ್ಷಣ ಕೆರಳಿಕತೆ, ನರದ ಮುಖ್ಯ ಲಕ್ಷಣ ಸೂಕ್ಷ್ಮತೆ ಎಂದೂ ತಿಳಿಸಿದ್ದನು. ಇವನ ಪುಸ್ತಕ ವಿವರಣೆಗಳ ಪೈಕಿ ಬಿಬ್ಲಿಯೊಥೆಕ ಎಂಬುದು ಈಗಲೂ ವೈದ್ಯಚರಿತ್ರೆಯಲ್ಲೇ ಅತಿ ಮುಖ್ಯವಾದ ಬರವಣಿಗೆಯೆಂದು ಹೇಳಲಾಗಿದೆ.

ಗೆರ್ಹಾರ್ಡ್ ವಾನ್ ಸ್ವೀಟನ್

ಹಳೇ ವಿಯನ್ನ ವೈದ್ಯಶಾಲೆ—ಬೋರ್‌ಹಾವೆಯ ಮತ್ತೊಬ್ಬ ಶ್ರೇಷ್ಠ ಶಿಷ್ಯನಾದ ಗೆರ್ಹಾರ್ಡ್ ವಾನ್ ಸ್ವೀಟನ್ (೧೭೦೦–೧೭೭೨) ಹಾಲೆಂಡಿನ ಲೇಡನ್ನಿ ನಲ್ಲಿ ಜನಿಸಿ, ಲೊವೇನ್ ಮತ್ತು ಲೇಡನ್‌ಗಳಲ್ಲಿ ವ್ಯಾಸಂಗ ಮಾಡಿ ೧೭೨೫ರಲ್ಲಿ ವೈದ್ಯ ಪಂಡಿತ ಪದವಿ ಪಡೆದಿದ್ದನು. ಇವನು ಬೋರ್‌ಹಾವೆಯ ಆಪ್ತ ಶಿಷ್ಯನಾಗಿದ್ದು ರಸಾ ಯನಿಕ ಪ್ರಯೋಗಶಾಲೆಯಲ್ಲಿ ಕೆಲಸ ಮಾಡುತ್ತಿದ್ದನು. ಬೋರ್‌ಹಾವೆಯ ಜತೆಯಲ್ಲಿ

ರೋಗಿಗಳನ್ನು ಪರೀಕ್ಷಿಸುತ್ತಿದ್ದನು. ಇವನಿಗೆ ಲಘು ಲಿಪಿ ಬರುತ್ತಿದ್ದುದರಿಂದ ಬೋರ್ ಹಾವೆ ವಿವರಿಸಿದ ರೋಗಗಳ ವಿವರಗಳನ್ನೆಲ್ಲಾ ಚಾಚೂ ತಪ್ಪದೆ ಬರೆದುಕೊಳ್ಳುತ್ತಿದ್ದನು. ಚಕ್ರವರ್ತಿನಿ ಮೇರಿಯ ತೆರೀಸಳ ಸಹೋದರಿಯ ರೋಗವನ್ನು ಗುಣಪಡಿಸಲು ಕರೆ ಬಂದು, ಬ್ರಸ್ಸೆಲ್ಸಿಗೆ ಹೋಗಿ, ಗುಣಪಡಿಸಲಾಗದಿದ್ದರೂ, ಚಕ್ರವರ್ತಿನಿಯ ಸಹಕಾರವನ್ನು ಸಂಪಾದಿಸಿದನು. ಆಗಿನಿಂದ ಅವಳ ಖಾಸಗಿ ವೈದ್ಯನಾಗಿ ೧೭೪೫ರಲ್ಲಿ ನೇಮಕವಾದನು. ಇವನ ಚತುರತೆಯಿಂದ ಬೋರ್‌ಹಾವೆಯ ಅಧಿಕಾರತ್ವಕ್ಕೆ ಅರ್ಹನಾಗಿದ್ದರೂ, ಇವನು ರೋಮನ್ ಕ್ಯಾತೊಲಿಕ್ ಆಗಿದ್ದುದರಿಂದ ಆ ಕೆಲಸಕ್ಕೆ ಅಡ್ಡಿ ಬಂದು, ಮೇರಿಯ ತೆರೀಸಳ ಮುಖ್ಯ ವೈದ್ಯನಾಗಿ ಮುಂದುವರಿದನು. ಪ್ರಾಧ್ಯಾಪಕನಲ್ಲದಿದ್ದರೂ, ರಾಣಿಯ ಪುಸ್ತಕ ಭಂಡಾರದಲ್ಲೇ ಅಂಗರಚನೆಶಾಸ್ತ್ರ, ದೇಹಶಾಸ್ತ್ರ, ರೋಗನಿದಾನ, ವೈದ್ಯಶಾಸ್ತ್ರಗಳಲ್ಲೆಲ್ಲಾ ಉಪನ್ಯಾಸ ಮಾಡುತ್ತಿದ್ದನು. ಇವನ ಈ ಉಪನ್ಯಾಸಗಳನ್ನು ಕೇಳಲು ಹೆಚ್ಚು ಮಂದಿ ವಿದ್ಯಾರ್ಥಿಗಳು ಎಲ್ಲಾ ಕಡೆಯಿಂದಲೂ ಬರುತ್ತಿದ್ದರು. ಇವನ ಪ್ರಖ್ಯಾತಿಯನ್ನು ಮೆಚ್ಚಿ ರಾಣಿ ತೆರೀಸ ವಿಯನ್ನದಲ್ಲಿದ್ದ ಹಳೇ ವೈದ್ಯ ವಿದ್ಯಾಶಾಲೆಯನ್ನು ಸುಧಾರಿಸಲು ಅಪ್ಪಣೆ ಕೊಟ್ಟನಂತರ, ಸ್ವೀಟನ್ ತನ್ನ ಬುದ್ಧಿಶಕ್ತಿಯನ್ನೆಲ್ಲಾ ಉಪಯೋಗಿಸಿ, ವೈದ್ಯ ವಿದ್ಯಾಶಾಲೆಯನ್ನು ಉತ್ತಮಪಡಿಸಿ ವಿಯನ್ನಾ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಸ್ಥಾಪಿಸಿದನು. ಈ ವೈದ್ಯಶಾಲೆಗೆ ಸ್ವೀಟನ್ನೇ ಮುಖ್ಯಾಧಿಕಾರಿಯಾದನು. ಇವನ ಸಲಹೆಯ ಮೇರೆ ರಾಣಿ ತೆರೀಸ, ಅಧಿಕಾರಿಗಳನ್ನೂ, ಅವರ ಸಂಬಳ ಸಾರಿಗೆಗಳನ್ನು ಗೊತ್ತುಮಾಡಿದಳು. ಈ ಬದಲಾವಣೆ ಅಲ್ಲಿಯ ವೈದ್ಯಸಂಘದ ಸದಸ್ಯರಿಗೆ ಸರಿಹೋಗದಿದ್ದರೂ, ರಾಣಿ ತೆರೀಸಳ ಅಧಿಕಾರದ ಬಲದಿಂದ ಯಾವ ತೊಂದರೆಯೂ ಬರಲಿಲ್ಲ. ವಿಯನ್ನದಲ್ಲಿ ನಡೆದ ಈ ವೈದ್ಯಶಿಕ್ಷಣದ ಸುಧಾರಣೆಗಳು ಲೇಡನ್ನಿನ ಸುಧಾರಣೆಗಳಿಗೆ ಸಮಾನವಾಗಿದ್ದವು. ವಿಯನ್ನ ವೈದ್ಯಶಾಲೆ ಆಗ ಮೇಲ್ಮಟ್ಟದ ಸ್ಥಾನ ಪಡೆಯಿತು. ವಿಯನ್ನಾದ ಮೊದಲನೆಯ ವೈದ್ಯ ವಿದ್ಯಾಶಾಲೆಯೆಂದು ಹೆಸರು ಕೂಡ ಬದಲಾಯಿತು.

ವೈದ್ಯಶಾಲೆಯಲ್ಲಿ ನಡೆದ ಸುಧಾರಣೆಗಳು ವಿಶ್ವವಿದ್ಯಾಲಯದ ಇತರ ಶಾಖೆಗಳಿಗೂ ಹರಡಿ, ತತ್ತ್ವಶಾಸ್ತ್ರ, ಮತಧರ್ಮಶಾಸ್ತ್ರ ಮುಂತಾದ ಶಾಖೆಗಳಲ್ಲದೆ ವಿಶ್ವವಿದ್ಯಾಲಯವೇ ಬದಲಾಯಿತು. ಹೀಗೆ ವಿಶ್ವವಿದ್ಯಾಲಯದ ಕಾರ್ಯಗಳಲ್ಲಿ ಎಡೆಬಿಡದೆ ಕೆಲಸ ಮಾಡುತ್ತಿದ್ದುದರಿಂದ ಸ್ವೀಟನ್ ಲೇಖನಗಳನ್ನು ಬರೆಯಲು ಸಾಧ್ಯವಾಗಲಿಲ್ಲ. "ಕಾಮೆಂಟೇರಿಯ ಇನ್ ಹರ್ಮನಿ ಬೋರ್‌ಹಾವೆ ಅಫಾರಿಸೊಮಾಸ್, ೧೭೫೪–೧೭೭೫" ಎಂಬ ೫ ಸಂಪುಟಗಳುಳ್ಳ ಗ್ರಂಥ ಒಂದನ್ನು ಮಾತ್ರ ಬರೆದಿದ್ದನು. ಇದರಲ್ಲಿದ್ದ ಲೇಖನಗಳು ಹಿಪ್ಪೊಕ್ರೇಟಿಸ್‌ನವುಗಳ ಮಾದರಿಯಲ್ಲಿದ್ದವು. ಜ್ವರ, ಉಪದಂಶ, ಕೀಲುವಾತ ಜ್ವರ, ಚರ್ಮದ ಗುಳ್ಳೆರೋಗಗಳೆಲ್ಲವೂ ಅವನ ಅತ್ಯುತ್ತಮ ಕೌಶಲದ ವಿವರಣೆಗಳಾಗಿದ್ದವು. ಇವನಿಗೆ ಬಡವರಲ್ಲಿದ್ದ ಸಹಾನುಭೂತಿ, ಪ್ರೇಮ

ಮನೆ ಮಾತಾಗಿದ್ದವು. ಠಕ್ಕು ವೈದ್ಯರನ್ನೂ, ರಸವಾದಿಗಳನ್ನೂ ವಿರೋಧಿಸಿ ಅವರ ಔಷಧ ಪದ್ಧತಿಗಳನ್ನು ರದ್ದುಮಾಡಿಸಿದನು. ವೈದ್ಯಶಾಸ್ತ್ರಕ್ಕೆ ಇಷ್ಟು ಕೀರ್ತಿ ತಂದಿದ್ದರಿಂದ ರಾಣಿ ತೆರೇಸ ಇವನಿಗೆ ಬ್ಯಾರನ್ ಪದವಿಯನ್ನು ದಯಪಾಲಿಸಿದಳು. ಯೂರೋಪಿನಲ್ಲೇ ಅತಿ ಶ್ರೇಷ್ಠ ವೈದ್ಯಶಾಲೆ ಇವನಿಂದ ಸ್ಥಾಪಿತವಾಗಿ ಎಲ್ಲರಿಗೂ ಮಾರ್ಗದರ್ಶಕವಾಯಿತು.

ಆಂಟನ್ ಡಿ ಹೇನ್

ವಿಯನ್ನದಲ್ಲಿ ಪ್ರಾರಂಭವಾದ ವೈದ್ಯ ವಿದ್ಯಾಶಾಲೆಯ ರೋಗಿಯ ಹಾಸೆಪಕ್ಕದ ವೈದ್ಯಶಾಸ್ತ್ರದ ಪ್ರಾಧ್ಯಾಪಕನಾಗಿ ತನ್ನ ಸಹೋದ್ಯೋಗಿ ಆಂಟನ್ ಡಿ ಹೇನ್‌ನನ್ನು ೧೭೫೪ರಲ್ಲಿ ಸ್ವೀಟನ್ ನೇಮಕ ಮಾಡಿದ್ದನು. ಇವನೂ ಬೋರ್‌ಹಾವೆಯ ಶಿಷ್ಯನಾಗಿದ್ದು ಹಿಂದಿನವರಿಗಿಂತಲೂ ಅತ್ಯುತ್ತಮ ಅಧ್ಯಾಪಕನೂ ವೈದ್ಯನೂ ಆಗಿದ್ದನು. ಸಮಯ ಒದಗಿದಾಗಲೆಲ್ಲಾ ಶವಚ್ಛೇದನೆ ಮಾಡಿ ರೋಗದ ಕಾರಣವನ್ನು ಅರಿಯಲು ಯತ್ನಿಸುತ್ತಿದ್ದನು. ರೋಗಿಗಳ ಪರೀಕ್ಷೆಗಾಗಿ ತಾಪಮಾಪಕವನ್ನೂ ರೋಗಚಿಕಿತ್ಸೆಯ ನೆರವಾಗಿ ಹೆಣ ಪರೀಕ್ಷೆಯನ್ನೂ ಜಾರಿಗೆ ತಂದ ವೈದ್ಯ ತಾನಾಗಿದ್ದರೂ, ಯಂತ್ರಮಂತ್ರ ಮಾಟಗಳಲ್ಲಿ ಇವನಿಗೆ ನಂಬಿಕೆ ಇತ್ತು.


ಲಿಯೊಪೋಲ್ಡ್ ಆನ್‌ಬ್ರುಗ್ಗರ್

ವಿಯನ್ನ ವೈದ್ಯವಿದ್ಯಾಶಾಲೆಯ ಮತ್ತೊಬ್ಬ ಸುಪ್ರಸಿದ್ಧ ಯೋಗ್ಯ ವೈದ್ಯನೆಂದರೆ ಲಿಯೊಪೋಲ್ಡ್ ಆನ್‌ಬ್ರುಗ್ಗರ್ (೧೭೨೨–೧೮೦೯). ಇವನೇ ರೋಗಿಯನ್ನು ಪರೀಕ್ಷೆ ಮಾಡುವುದರಲ್ಲಿ ಒಂದಾದ ಬೆರಳಿನಿಂದ ತಟ್ಟಿ ತಿಳಿಯುವ ಪದ್ಧತಿಯನ್ನು ಕಂಡುಹಿಡಿದವನು. ವಿಯನ್ನ ಶಾಲೆಯ ಸ್ವೀಟನ್ನಿನ ಶಿಷ್ಯನಾಗಿ ವ್ಯಾಸಂಗ ಮಾಡಿ, ಅಲ್ಲಿಂದಲೇ ವೈದ್ಯ ಪಂಡಿತ ಪದವಿಯನ್ನು ೧೭೫೨ರಲ್ಲಿ ಪಡೆದು ಸ್ಪ್ಯಾನಿಷ್ ಆಸ್ಪತ್ರೆಯ ವೈದ್ಯನಾಗಿ ನೇಮಕವಾಗಿದ್ದನು. ೧೭೬೨ರ ತನಕ ಮುಖ್ಯ ವೈದ್ಯನಾಗಿದ್ದು, ಸಹೋದ್ಯೋಗಿಗಳ ಸಹಕಾರವಿಲ್ಲದೆ ರಾಜೀನಾಮೆ ಇತ್ತು ಖಾಸಗಿ ವೈದ್ಯವೃತ್ತಿಯನ್ನು ಅವಲಂಬಿಸಿ, ಬಲ್ಲಿದರಿಗೂ, ಬಡವರಿಗೂ ಸಮನಾಗಿ ಉಪಚರಿಸಿ ಕೀರ್ತಿ ಪಡೆದಿದ್ದನು. ಇವನು ಸಂಗೀತಪ್ರೇಮಿ. ೧೭೮೪ರಲ್ಲಿ ಎರಡನೆ ಜೋಸೆಫ್ ಚಕ್ರವರ್ತಿ ಇವನನ್ನು ಉತ್ತಮ ವರ್ಗದವರ ಗುಂಪಿಗೆ ಸೇರಿಸಿ ನೈಟ್ ಪದವಿಯನ್ನು ಕೊಟ್ಟನು. ಇವನ ತಂದೆ ಹೋಟೇಲಿನ ಮಾಲೀಕನಾಗಿದ್ದುದರಿಂದ, ತಾನು ಬಾಲ್ಯದಿಂದಲೂ ಪೀಪಾಯಿಗಳನ್ನು ತಟ್ಟಿ ಒಳಗಡೆ ಮದ್ಯವೆಷ್ಟಿದೆಯೆಂಬುದನ್ನು ತಿಳಿಯುತ್ತಿದ್ದ ಪದ್ಧತಿಯನ್ನು ರೋಗಿಯ ಪರೀಕ್ಷೆಯಲ್ಲಿ ಆಚರಣೆಗೆ ತಂದನು. ಈ ಪದ್ಧತಿಯನ್ನು ತನ್ನ ೯೫ ಪುಟಗಳಿದ್ದ 'ನವೀನ ಕಾವನೆ' ಪುಸ್ತಕದಲ್ಲಿ ವಿವರಿಸಿ ತುಂಬು ನಾದ ಮತ್ತು ಮಂದ ನಾದಗಳನ್ನು ವಿಶದಪಡಿಸಿದ್ದನು. ಎದೆಯನ್ನು ಬೆರಳುಗಳಿಂದ ತಟ್ಟಿನೋಡುವ ಕ್ರಮವನ್ನೂ, ಅಳ್ಳೆ ಪರೆಯ ಪೊಳ್ಳಿನೊಳಗೆ ನೀರಿರುವಾಗ ಬರುವ ನಾದವನ್ನೂ, ಶ್ವಾಸಕೋಶ ಟೊಳ್ಳಾಗಿರು

ವಾಗ ಬರುವ ನಾದವನ್ನೂ, ಹೃದಯ ಹಿಗ್ಗಿರುವಾಗಲೂ, ಹೃದಯದ ಹೊರ ಪೊರೆ ಪೊಳ್ಳಿನೊಳಗೆ ನೀರು ಸೇರಿರುವಾಗ ಬರುವ ನಾದಗಳನ್ನೂ ವಿವರಿಸಿದ್ದನು. ಈ ಪದ್ಧತಿ ರೋಗ ನಿದಾನ ಮಾಡಲು ಅತಿ ಸಹಾಯಕವಾಗಿದ್ದರೂ, ಇವನ ಗುರು ಸ್ವೀಟನ್, ಮತ್ತು ಸಹೋದ್ಯೋಗಿ ಆಂಟನ್ ಡಿ ಹೇನ್ ಈ ವಿಚಾರವನ್ನು ತಮ್ಮ ಉಪನ್ಯಾಸಗಳಲ್ಲಾಗಲೀ ಲೇಖನಗಳಲ್ಲಾಗಲೀ ಎತ್ತೇ ಇರಲಿಲ್ಲ. ಆದರೆ ಆಮೇಲೆ ಬಂದ ಲೀಪ್ಸಿಗ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಕ್ರಿಶ್ಚಿಯನ್ ಜಿ. ಲಡ್ವಿಗ್ ಬೆರಳಿನಿಂದ ತಟ್ಟಿ ನೋಡುವ ಕ್ರಮವನ್ನು 'ಎದೆಗೂಡಿನ ರೋಗಗಳ ಕತ್ತಲಿಗೆ ಬೆಳಕನ್ನು ತರುವ ತಾಕು' ಎಂದು ಹೊಗಳಿದ್ದನು. ೧೮ನೇ ಶತಮಾನದ ಕೊನೆಯಲ್ಲಿ, ಜೀನ್ ನಿಕೊಲಾಸ್ ಕೊರ್ವಿ ಸಾರ್ಟ್ ಆನ್ ಬ್ರುಗ್ಗರ್‌ನ ತಟ್ಟಿ ಪರೀಕ್ಷಿಸುವ ಕ್ರಮವನ್ನು ರೂಢಿ ಮಾಡಿ, ಅವನು ಬರೆದಿದ್ದ ಪುಸ್ತಕವನ್ನು ಫ್ರೆಂಚ್ ಭಾಷೆಗೆ ಭಾಷಾಂತರಮಾಡಿ ಆನ್‌ಬ್ರುಗ್ಗರ್ ಮಹಿಮೆಯನ್ನು ವೈದ್ಯ ಪ್ರಪಂಚದ ಮುಂದಿಟ್ಟನು.

ಗಿಯೊವನ್ನಿ ಬ್ಯಾಟಿಸ್ಟ ಮಾರ್ಗ್ಯಾಗ್ನಿ

ಆನ್‌ಬ್ರುಗ್ಗರ್‌ನ 'ನವೀನ ಕಾವನೆ' ಹೊರಬಿದ್ದ ವರ್ಷವೇ ವೈದ್ಯಶಾಸ್ತ್ರಕ್ಕೆ ಘನತೆ ತರುವಂತಹ ಮತ್ತೊಂದು ಗ್ರಂಥ ಪ್ರಕಟವಾಯಿತು. ಇದೇ ಗಿಯೊವನ್ನಿ ಬ್ಯಾಟಿಸ್ಟ ಮಾರ್ಗ್ಯಾಗ್ನಿ (೧೬೮೨-೧೭೭೧) ಬರೆದ 'ರೋಗಗಳ ಸ್ಥಳ ಮತ್ತು ಕಾರಣ'




ಮಾರ್ಗ್ಯಾಗ್ನಿ

ಎಂಬ ಪುಸ್ತಕ. ಪೊರ್ಲಿಯಲ್ಲಿ ಜನಿಸಿದ್ದ ಮಾರ್ಗ್ಯಾಗ್ನಿ ತನ್ನ ೧೪ನೇ ವಯಸ್ಸಿನಲ್ಲೇ ಕಾವ್ಯ ರಚಿಸಲೂ, ತತ್ತ್ವಶಾಸ್ತ್ರವನ್ನು ಚರ್ಚಿಸಲೂ ಪ್ರಾರಂಭಿಸಿದ್ದನು. ೧೭೦೧ರಲ್ಲಿ, ೧೯ ವರ್ಷ ವಯಸ್ಸಿನಲ್ಲಿ ಬೊಲೋನ ವಿಶ್ವವಿದ್ಯಾಲಯದ ವೈದ್ಯ ಪಂಡಿತ ಪದವಿ

ಪಡೆದು ವಾಲ್ಸಾಲ್ವನ ಶಿಷ್ಯನಾಗಿದ್ದನು. ೧೭೦೬ರಲ್ಲಿ ತನ್ನ ಮೊದಲನೆಯ "ಅಡ್ವರ್ ಸಾರಿಯ ಅನಾಟೊಮಿಕ ಪ್ರೈಮ" ಪುಸ್ತಕವನ್ನು ಪ್ರಕಟ ಮಾಡಿದನು. ಇದರಲ್ಲಿ ಧ್ವನಿನಾಳದ ಸಂಪೂರ್ಣ ವಿವರವಿತ್ತು. ಹಾಗೂ ಆಗಿನ ಅಂಗರಚನೆಶಾಸ್ತ್ರದಲ್ಲಿದ್ದ ತಪ್ಪುಗಳನ್ನು ಸರಿಪಡಿಸಿದ್ದನು. ೧೭೧೧ರಲ್ಲಿ ಪಾಡ್ವದ ರೋಗಿಯ ಹಾಸೆಪಕ್ಕದ ವೈದ್ಯದ ಪ್ರಾಧ್ಯಾಪಕನಾಗಿ ನೇಮಕವಾಗಿದ್ದನು. ಅನಂತರ ವಿಸೇಲಿಯಸ್, ರಿಯಾಲ್ಡೊ ಕೊಲಂಬೊ, ಫೆಲ್ಲೋಪಿಯೊ ಮುಂತಾದ ಮಹಾಶಯರು ಪ್ರಾಧ್ಯಾಪಕರಾಗಿದ್ದ ಅಂಗರಚನೆ ಶಾಸ್ತ್ರದ ಪ್ರಾಧ್ಯಾಪಕನಾಗಿ, ತನ್ನ ೨೯ನೇ ವಯಸ್ಸಿನಲ್ಲಿ ಅಧಿಕಾರ ವಹಿಸಿಕೊಂಡು ೫೬ ವರ್ಷಗಳು ಕೆಲಸ ಮಾಡಿದನು. ಇವನ ಉಪನ್ಯಾಸಗಳು ಬಹಳ ಸ್ವಾರಸ್ಯವಾಗಿರುತ್ತಿದ್ದುದರಿಂದ ವಿದ್ಯಾರ್ಥಿಗಳು ಇಟಲಿ, ಜರ್ಮನಿಗಳಿಂದಲೂ ಹೆಚ್ಚು ಸಂಖ್ಯೆಯಲ್ಲಿ ಬರುತ್ತಿದ್ದರು. ಇವನು ಅಂಗರಚನೆಶಾಸ್ತ್ರ ಬರೆದುದಲ್ಲದೆ ೧೭೬೧ರಲ್ಲಿ, ೭೯ ವರ್ಷ ವಯಸ್ಸಿನಲ್ಲಿ ರೋಗನಿದಾನ ಗ್ರಂಥವನ್ನು ಬರೆದು ವೈದ್ಯಚರಿತ್ರೆಯಲ್ಲೇ ಅತಿಶ್ರೇಷ್ಠನೆಂದೆನಿಸಿಕೊಂಡನು. ರೋಗ ನಿದಾನದ ಪಿತಾಮಹನೆಂದೂ ಹೆಸರುಪಡೆದನು.

ಅಂಗರಚನೆಶಾಸ್ತ್ರಕ್ಕೂ, ರೋಗ ನಿದಾನಕ್ಕೂ, ರೋಗಿಯ ಹಾಸೆಪಕ್ಕದ ವೈದ್ಯಶಾಸ್ತ್ರಕ್ಕೂ ಇರುವ ಸಂಬಂಧಗಳನ್ನೂ ಎತ್ತಿ ತೋರಿಸಿದ್ದನು. ಅಂಗವಿಚ್ಛೇದನದ ಋಜುವಾತುಗಳಿಂದ ರೋಗ ಲಕ್ಷಣಗಳನ್ನೂ ರೋಗ ಕಾರಣಗಳನ್ನೂ ವಿವರಿಸಿದ್ದನು. ಹೀಗೆ ಮೊದಲನೆಯ ಬಾರಿಗೆ ಅಂಗಚ್ಛೇದನದಿಂದ ತಿಳಿದುಬಂದ ವಿಷಯಗಳನ್ನು ಸರಿಯಾಗಿ ಜೋಡಿಸಿ, ವಿಷಯಸೂಚಿ ತಯಾರಿಸಿ ಪ್ರತಿಯೊಂದರ ವಿವರಣೆಯ ಕೆಳಗೆ ಅದರಿಂದ ಬರಬಹುದಾದ ರೋಗ ಲಕ್ಷಣ, ಪೂರ್ವ ಚರಿತ್ರೆ, ಕಾರಣ, ಚಿಕಿತ್ಸೆ ಕ್ರಮಗಳನ್ನು ವಿವರಿಸಿದ್ದನು. ಅರಿಸ್ಟಾಟಲಿನಿಂದ ಹಿಡಿದು ತನ್ನ ಕಾಲದ ತನಕ ನಡೆದಿರುವ ಸಂಗತಿಗಳನ್ನೆಲ್ಲಾ ವಿಂಗಡಿಸಿ ವಿವರಿಸಿದ್ದನು. ಇವನು ರೋಗ ನಿದಾನ ವಿವರಿಸಿದ್ದ ರೋಗಗಳು ಅಸಂಖ್ಯಾತವಾಗಿದ್ದವು. ಉಪದಂಶದಿಂದುಂಟಾದ ಧಮನಿಗಳ ಹಿಗ್ಗಣೆ (ಅಗಲುಬ್ಬು), ಈಲಿಯ ತೀವ್ರ ಹಳದಿಸೊರಗಣೆ, ಪುಪ್ಪುಸುರಿತದ ಸಂಚಯಿಕೆ, ಮಿದುಳ ಹೊರ ಪೊರೆಯುರಿತ, ಜಠರದ ಏಡಿಗಂತಿ, ಸಾಧಾರಣ ಗಂತಿ, ಪಿತ್ತ ಗಲ್ಲು, ಹೃದಯದ ಒಳ ಪೊರೆಯುರಿತ,



ಮಕುಟದ ಇಟಿಕಣೆಯ ಮೊಟ್ಟಮೊದಲ ಚಿತ್ರವಿವರಣೆ ೧೭೧೫ರಲ್ಲಿ ರೇಮುಂಡ್ ವಿಯಸ್ಸೆನ್ಸ್ ಬರೆದ ಪುಸ್ತಕದಲ್ಲಿದೆ.

ಮಕುಟದ ಇಟಕಣೆ, ಮಹಾಧಮನಿಯ ಸಾಲದಿಕೆ, ಪುಪ್ಪುಸದ ಇಟಕಣೆ, ಕಿರೀಟಕ ಧಮನಿಗಳ ಪೆಡಸಣೆ, ಫ್ಯಾಲೋನ ನಾಲ್ಕರಶಾಸ್ತ್ರ, ಮಹಾಧಮನಿಯ ಒತ್ತಡಕಣೆ ಮುಂತಾದ ರೋಗಗಳ ವಿಧಾನಗಳನ್ನು ವಿವರಿಸಿದ್ದನು. ರೋಗಗಳ ಸೋಂಕುವಾಹಕ ಗಳನ್ನೂ ತಿಳಿದಿದ್ದನು. ಆದ್ದರಿಂದ ಸೋಂಕು ರೋಗಗಳಾದ ಕ್ಷಯ, ಸಿಡುಬುಗಳಿಂದ ಸತ್ತವರ ದೇಹವನ್ನು ಅಂಗಚ್ಛೇದನೆ ಮಾಡುತ್ತಿರಲಿಲ್ಲ. ನಾಯಿಹುಚ್ಚಿಗೆ (ಹೆಕಲಿ) ಕಾರಣ ತಿಳಿದಿದ್ದನು. ಹೀಗೆ ರೋಗಶಾಸ್ತ್ರೀಯ ಅಂಗರಚನೆಶಾಸ್ತ್ರದ ಕ್ರಮವನ್ನು ವೃದ್ಧಿಪಡಿಸಿ ವೈದ್ಯಶಾಸ್ತ್ರಕ್ಕೆ ಕಳೆ ತಂದಿದ್ದನು. ಇವನು ತತ್ತ್ವಶಾಸ್ತ್ರ, ಚರಿತ್ರೆ ಮುಂತಾದವಲ್ಲೂ ಪಾಂಡಿತ್ಯ ಪಡೆದಿದ್ದು ಅನೇಕ ಶೋಧನೆಗಳನ್ನೂ ನಡೆಸಿದ್ದನು.

ಎಡಿನ್ಬರೊ ವೈದ್ಯ ವಿದ್ಯಾಶಾಲೆ

ಮೊದಲಿಗೆ ಗ್ರೀಸಿನಲ್ಲಿ ಹಚ್ಚಿದ ವೈದ್ಯ ವಿದ್ಯೆಯ ಜ್ಯೋತಿ, ಸಲೆರ್ನೋವಿಗೂ, ನಂತರ ಮಾಂಟ್‌ಪೆಲ್ಲಿಯರ್, ಪಾಡ್ವ, ಲೇಡನ್‌ಗಳಲ್ಲೂ ಅನುಕ್ರಮವಾಗಿ ಬೆಳಗಿ, ೧೮ನೇ ಶತಮಾನದ ಆದಿಯಲ್ಲಿ ಎಡಿನ್ಬರೊ ಪಟ್ಟಣವನ್ನು ಮುಟ್ಟಿತು. ಅಂದಿನಿಂದ ಎಡಿನ್ಬರೊ ವೈದ್ಯವಿದ್ಯೆಯ ಕೇಂದ್ರವಾಗಿದೆ.

೧೬೬೦ರಲ್ಲೇ ಸರ್ ರಾಬರ್ಟ್ ಸಿಬ್ಬಾಲ್ಡ್ (೧೬೪೧–೧೭೨೨) ಲೇಡನ್ನಿನಲ್ಲಿ ಸಿಲ್ವಿಯಸ್ ಮುಂತಾದವರ ಕೈಕೆಳಗೆ ಕೆಲಸ ಮಾಡಿ, ಎಡಿನ್ಬರೋವಿಗೆ ಹಿಂತಿರುಗಿ ೧೬೮೧ರಲ್ಲಿ ಎಡಿನ್ಬರೊ ವೈದ್ಯರ ರಾಜವೈದ್ಯ ಕಾಲೇಜನ್ನು ಸ್ಥಾಪಿಸಿದನು. ಹಾಗೂ ಟೌನ್‌ನ ಕಾಲೇಜಿನ ಮೊದಲನೆಯ ವೈದ್ಯಶಾಸ್ತ್ರದ ಪ್ರಾಧ್ಯಾಪಕನಾದನು. ಇವನ ಜೊತೆಯಲ್ಲಿ ಡಾ. ಜೇಮ್ಸ್ ಹಾಲ್ಕೆಟ್ ಹಾಗೂ ಲೇಡನ್ನಿನಲ್ಲಿ ವಿದ್ಯಾರ್ಥಿಯಾಗಿದ್ದ ಡಾ. ಆರ್ಚಿಬಾಲ್ಡ್ ಪಿಟ್ಕೇರ್ನ್‌ನನ್ನೂ ವೈದ್ಯಶಾಸ್ತ್ರ ಪ್ರಾಧ್ಯಾಪಕರನ್ನಾಗಿ ನೇಮಿಸ ಲಾಗಿತ್ತು.

ಡಾ. ಆರ್ಚಿಬಾಲ್ಡ್ ಪಿಟ್ಕೇರ್ನ್

ಡಾ. ಆರ್ಚಿಬಾಲ್ಡ್ ಪಿಟ್ಕೇರ್ನ್ (೧೬೫೨–೧೭೧೩) ಪ್ರಾಧ್ಯಾಪಕನಾದಾಗ ೩೩ ವರ್ಷ ವಯಸ್ಸಾಗಿತ್ತು. ಸ್ಕಾಟ್ಲೆಂಡಿನ ಪ್ರಸಿದ್ಧ ವೈದ್ಯನಾಗಿ ಎಡಿನ್ಬರೊ ವೈದ್ಯ ಶಾಲೆಯ ಸ್ಥಾಪನೆಗೆ ಕಾರಣನಾದನು. ಅಲೆಗ್ಸಾಂಡರ್ ಮನ್ರೊ ಕೂಡ ಈ ಕಾರ್ಯ ದಲ್ಲಿ ಸಹಾಯ ಮಾಡಿದ್ದನು. ಪಿಟ್ಕೇರ್ನ್ ಎಡಿನ್ಬರೊ ವೈದ್ಯರ ರಾಜ ವೈದ್ಯ ಕಾಲೇಜಿನ ಸದಸ್ಯರಲ್ಲೆಲ್ಲಾ ಚಿಕ್ಕವನಾಗಿದ್ದನು. ಹಾರ್ವೆ ಕಂಡುಹಿಡಿದಿದ್ದ ರಕ್ತ ಪರಿಚಲನೆಯನ್ನು ಸಮರ್ಥಿಸಿ ಲೇಖನ ಬರೆದಿದ್ದನು. ಅವನು ಬರೆದ ಮತ್ತೊಂದು ಲೇಖನವಾದ 'ವೈದ್ಯಕೀಯ ಪ್ರಬಂಧಗಳು' ಇವನ ಕೀರ್ತಿಯನ್ನು ಬೆಳಗಿ, ೧೬೯೨ರಲ್ಲಿ ಲೇಡನ್ ವಿಶ್ವವಿದ್ಯಾಲಯದ ವೈದ್ಯಶಾಸ್ತ್ರದ ಪ್ರಾಧ್ಯಾಪಕನಾಗಲು ಸಹಾಯ

ಮಾಡಿತು. ಆದರೆ ಒಂದೇ ಒಂದು ವರ್ಷದನಂತರ ಸಂಸಾರದ ನಿಮಿತ್ತ ಎಡಿನ್ಬರೋಗೆ ಹಿಂತಿರುಗಬೇಕಾಯಿತು. ಲೇಡನ್ನಿನಲ್ಲಿದ್ದಾಗ ಪ್ರಖ್ಯಾತ ಬೋರ್‌ಹಾವೆ ಇವ ಶಿಷ್ಯನಾಗಿದ್ದು, ಇವನ ಅನಂತರ ಪ್ರಾಧ್ಯಾಪಕನಾಗಿದ್ದನು. ಲಂಡನ್ನಿನ ಡಾ. ರಿಚರ್ಡ್ ಮೀಡ್ ಕೂಡ ಇವನ ಶಿಷ್ಯನಾಗಿದ್ದನು.

ಜಾನ್ ಮನ್ರೊ

ಪಿಟ್ಕೇರ್ನ್ ಶಿಷ್ಯನಾದ ಜಾನ್ ಮನ್ರೊ (೧೭೩೭) ವಿದ್ಯಾವಂತನೂ, ಕೀರ್ತಿ ಪಡೆದವನೂ ಆಗಿ, ಆರೆಂಜ್ ವಿಲಿಯಂನ ಸೈನ್ಯದ ಶಸ್ತ್ರವೈದ್ಯನಾಗಿದ್ದನು. ಎಡಿನ್ಬರೊ ಪಟ್ಟಣದಲ್ಲಿ ಲೇಡನ್ನಿನ ವೈದ್ಯಶಾಲೆಗೆ ಸಮನಾದ ಒಂದು ಶಾಲೆಯನ್ನು ಸ್ಥಾಪಿಸಬೇಕೆಂಬುದೇ ಇವನ ಆಕಾಂಕ್ಷೆಯಾಗಿತ್ತು. ಎಡಿನ್ಬರೊ ವೈದ್ಯರಲ್ಲಿ ಈ ವಿಷಯವನ್ನು ಚರ್ಚಿಸಿ ಅವರಲ್ಲಿ ಅಭಿರುಚಿ ಹುಟ್ಟಿಸಿದನು. ಅಷ್ಟರೊಳಗೆ ಮೂವರು ವೈದ್ಯರು ಪ್ರಾಧ್ಯಾಪಕರಾಗಿ ನೇಮಕವಾಗಿದ್ದರು. ಸಿಬ್ಬಾಲ್ಡ್, ಹಾಲ್ಕೆಟ್ ಮತ್ತು ಪಿಟ್ಕೇರ್ನ್ ಹಾಗೂ ಅಂಗರಚನೆಶಾಸ್ತ್ರದ ಶಾಖೆಯಲ್ಲಿ ಎಲಿಯಟ್, ಮ್ಯಾಕ್‌ಗಿಲ್ ಮತ್ತು ಡ್ರಮಂಡ್ ನೇಮಕವಾಗಿದ್ದರು. ೧೭೦೫ರಲ್ಲಿ ರಾಬರ್ಟ್ ವಿಲಿಯಂ, ಮುಂದೆ ಎಡಿನ್ಬರೊ ವಿಶ್ವವಿದ್ಯಾಲಯವಾಗುವ ಆಗಿನ ಟೌನ್ ವೈದ್ಯ ಕಾಲೇಜಿನಲ್ಲಿ ಅಂಗಚ್ಛೇದನಕ್ಕಾಗಿ ನೇಮಕವಾಗಿದ್ದನು. ಈ ಸುಸಮಯವನ್ನು ಕಳೆದುಕೊಳ್ಳದೆ ಜಾನ್ ಮನ್ರೊ ತನ್ನ ಮಗ ಅಲೆಗ್ಸಾಂಡರ್‌ನನ್ನು ಅಂಗರಚನೆಶಾಸ್ತ್ರದ ಪ್ರಾಧ್ಯಾಪಕತ್ವಕ್ಕೆ ತರಪೇತು ಮಾಡುತ್ತಿದ್ದನು.

ಅಲೆಗ್ಸಾಂಡರ್ ಮನ್ರೊ (೧ನೇ ಮನ್ರೊ)

ಅಲೆಗ್ಸಾಂಡರ್ ಮನ್ರೊ (೧೬೯೭–೧೭೬೭), ಮೊದಲನೆಯ ಮನ್ರೊ ಎಂಬ ನಾಮಾಂಕಿತದಿಂದ ಲೇಡನ್ನಿನ ಬೋರ್‌ಹಾವೆ ಕೈಕೆಳಗೂ, ಲಂಡನ್ನಿನ ಚೆಸಲ್ಡನ್ ಕೈಕೆಳಗೂ ಅಭ್ಯಾಸ ಮಾಡಿ ಎಡಿನ್ಬರೋಗೆ ಹಿಂತಿರುಗಿದ ಕೂಡಲೇ, ಅಂಗರಚನೆ ಶಾಸ್ತ್ರದ ಪ್ರಾಧ್ಯಾಪಕನಾದನು. ಇವನು ತನ್ನ ಮೊದಲನೆಯ ಉಪನ್ಯಾಸದಲ್ಲಿ ಪ್ರಾರಂಭದಲ್ಲಿ ಕೊಂಚ ತಡವರಿಸಿದರೂ ಅನಂತರ ಸ್ವಾರಸ್ಯವಾಗಿ ಉಪನ್ಯಾಸ ಮಾಡಿ ಎಲ್ಲರ ಗಮನವನ್ನು ಸೆಳೆದಿದ್ದನು. ಹೀಗೆ ೩೮ ವರ್ಷಗಳ ಕಾಲ ಮನ್ರೊ ಅಂಗರಚನೆ ಶಾಸ್ತ್ರ ಮತ್ತು ಶಸ್ತ್ರವೈದ್ಯವನ್ನೂ ಬೋಧಿಸಿ ಎಡಿನ್ಬರೊ ವೈದ್ಯ ವಿದ್ಯಾ ಕಾಲೇಜಿನ ಪಿತಾಮಹನೆಂದು ಹೆಸರು ಪಡೆದಿದ್ದನು.

ಮನ್ರೊ ಕಾರ್ಯಸಿದ್ಧಿಯನ್ನು ನೋಡಿ ಹುರಿದುಂಬಿ, ವೈದ್ಯರ ವಿದ್ಯಾಕಾಲೇಜಿನ ನಾಲ್ಕು ಮಂದಿ ಸದಸ್ಯರು, ಡಾ. ಸೆಂಟ್‌ಕ್ಲೇರ್, ಡಾ. ರೂಥರ್‌ಫೋರ್ಡ್, ಡಾ. ಪ್ಲಮ್ಮರ್ ಹಾಗೂ ಡಾ. ಇನ್ನಿಸ್ ೧೭೨೬ರಲ್ಲಿ ಟೌನ್ ಕಾಲೇಜಿನ ಮಂಡಲಿಗೆ ಪ್ರಾರ್ಥನೆ ಸಲ್ಲಿಸಿ ಪ್ರಾಧ್ಯಾಪಕರಾಗಿ ನೇಮಿತರಾದರು. ಇವರೆಲ್ಲರೂ ಲೇಡನ್ನಿನ ಬೋರ್‌ಹಾವೆ ಕೈಕೆಳಗೆ ವೈದ್ಯ ಕಲಿತಿದ್ದರು. ಸರ್ ವಾಲ್ಟರ್ ಸ್ಕಾಟ್‌ನ ತಾತನಾದ

ಜಾನ್ ರೂಥರ್‌ಫೋರ್ಡ್ ವೈದ್ಯಶಾಸ್ತ್ರ ಪ್ರಾಧ್ಯಾಪಕನಾಗಿ ನೇಮಕವಾಗಿದ್ದನು. ಅದೇ ವರ್ಷ ಪ್ರಸವಶಾಸ್ತ್ರದ ಮೊದಲ ಪ್ರಾಧ್ಯಾಪಕನಾಗಿ ಜೋಸೆಫ್ ಗಿಬ್ಸನ್ ನೇಮಕವಾದನು. ಅಲೆಗ್ಸಾಂಡರ್ ಹ್ಯಾಮಿಲ್ಟನ್ ಕಾಲದಲ್ಲಿ ಬೇರೆ ಒಂದು ಪ್ರಸವ ಶಾಲೆ ತೆರೆಯಲಾಗಿತ್ತು. ೧೭೪೧ರಲ್ಲಿ ಎಡಿನ್ಬರೊ ರಾಯಲ್ ಇನ್‌ಫರ್ಮರಿ ಪ್ರಾರಂಭವಾಗಿ, ವೈದ್ಯವಿದ್ಯಾಭ್ಯಾಸ ಎಡಿನ್ಬರೊ ಪಟ್ಟಣದಲ್ಲಿ ಸುರಕ್ಷಿತವಾಗಿ ನೆಲೆಸಿತು.

ಅಲೆಗ್ಸಾಂಡರ್ ಮನ್ರೊ (೨ನೇ ಮನ್ರೊ)

ಮೊದಲನೆ ಮನ್ರೊ ಮಗ ಎರಡನೇ (ಅಲೆಗ್ಸಾಂಡರ್) ಮನ್ರೊ ತಂದೆಗಿಂತಲೂ ಬುದ್ಧಿವಂತನಾಗಿದ್ದು ಅವನ ೫ ವರ್ಷದ ಅವಧಿಯಲ್ಲಿ ಸುಮಾರು ೪೦,೦೦೦ ವಿದ್ಯಾರ್ಥಿಗಳನ್ನು ತರಪೇತು ಮಾಡಿದನು. ಮಿದುಳಿನಲ್ಲಿರುವ ಮನ್ರೊ ಕೊರೆಗಂಡಿಯನ್ನು ಇವನೇ ಕಂಡುಹಿಡಿದಿದ್ದು. ಅಂಗರಚನೆಶಾಸ್ತ್ರದ ಜತೆಗೆ ವೈದ್ಯಶಾಸ್ತ್ರದಲ್ಲೂ ಪಾಂಡಿತ್ಯ ಹೊಂದಿ ವೈದ್ಯವೃತ್ತಿಯಲ್ಲೂ ಮೇಲಾಗಿದ್ದನು. ಆಗಾಗ್ಗೆ ಶಸ್ತ್ರವೈದ್ಯದಲ್ಲೂ ಸಲಹೆ ಕೊಡುತ್ತಿದ್ದನು. ಇವನ ತಂದೆ ಶ್ರಮಪಟ್ಟು ಪ್ರಖ್ಯಾತಿಯನ್ನು ಸಾಧಿಸಿದ್ದರೆ ಇವನು ಪ್ರಖ್ಯಾತನಾಗೇ ಹುಟ್ಟಿದನು. ಇವನಾದನಂತರ ಇವನ ಮಗ ಮೂರನೆ ಅಲೆಗ್ಸಾಂಡರ್ ಮನ್ರೊ ಅಧಿಕಾರ ವಹಿಸಿದನಂತರ, ದುರದೃಷ್ಟದಿಂದ, ಮೊದಲಿದ್ದ ಪ್ರಾಮುಖ್ಯತೆ ಮುಂದುವರಿಯಲಿಲ್ಲ. ಮೂರನೇ ಮನ್ರೊ ತನ್ನ ತಾತ ತಯಾರಿಸಿದ್ದ ಟಿಪ್ಪಣಿ ಸಹಾಯದಿಂದ ಬೋಧಿಸುತ್ತಿದ್ದರೂ ೩೮ ವರ್ಷಗಳ ಕಾಲ ಅದೇ ಸ್ಥಾನದಲ್ಲಿದ್ದನು. ಮೂರು ಜನ ಮನ್ರೊಗಳು ಒಟ್ಟು ೧೨೬ ವರ್ಷಗಳ ಕಾಲ ಅಂಗರಚನೆಶಾಸ್ತ್ರವನ್ನು ಎಡಿನ್ಬರೊ ವಿಶ್ವವಿದ್ಯಾಲಯದಲ್ಲಿ ಪಾಠ ಕಲಿಸುತ್ತಿದ್ದಂತಾಯಿತು.

ಎಡಿನ್ಬರೊ ಶಸ್ತ್ರವೈದ್ಯರು

೧೮ನೇ ಶತಮಾನದ ಆದಿಯಲ್ಲಿ ಅಂಗರಚನೆಶಾಸ್ತ್ರ ಪ್ರಾಧ್ಯಾಪಕರೇ ಶಸ್ತ್ರವೈದ್ಯವನ್ನೂ ಕಲಿಸುತ್ತಿದ್ದರು. ಆಗಿನ ಶಸ್ತ್ರವೈದ್ಯರು ಸಾಧಾರಣ ವೈದ್ಯರಾಗಿದ್ದರೂ, ಕೆಲಸ ಕಾರ್ಯಗಳನ್ನು ರಾಯಲ್ (ಆಸ್ಪತ್ರೆ) ಇನ್‌ಫರ್ಮರಿಯಲ್ಲೇ ನಡೆಸುತ್ತಿದ್ದರು. ಶಸ್ತ್ರವೈದ್ಯ ಅಲೆಗ್ಸಾಂಡರ್ ವುಡ್ (೧೭೨೫–೧೮೦೭) ರೋಗಿಗಳನ್ನು ಪರೀಕ್ಷಿಸಲು ಹೋಗುತ್ತಿದ್ದಾಗ ಜತೆಯಲ್ಲಿ ಒಂದು ದೊಂಬ ಕಾಗೆಯನ್ನೂ ಒಂದು ಕುರಿಯನ್ನೂ ಕರೆದುಕೊಂಡು ಹೋಗುತ್ತಿದ್ದನಂತೆ. ಎಡಿನ್ಬರೊದಲ್ಲಿ ಕೊಡೆ ಹಿಡಿದು ಹೋಗುತ್ತಿದ್ದವರಲ್ಲಿ ಇವನೇ ಮೊದಲನೆಯವನೆಂದೂ ಹೇಳಿದೆ. ಇಂತಹ ವಕ್ರ ನಡತೆಗಳಿದ್ದರೂ, ವುಡ್ ಭಾರಿ ಶಸ್ತ್ರವೈದ್ಯನಾಗಿದ್ದನು. ಇವನಾದ ಮೇಲೆ ಲಂಡನ್ ಮತ್ತು ಪ್ಯಾರಿಸ್‌ಗಳಲ್ಲಿ ವ್ಯಾಸಂಗ ಮಾಡಿದ್ದ ಬೆಂಜಮಿನ್ ಬೆಲ್ (೧೭೪೯–೧೮೦೬) ಎಡಿನ್ಬರೊ ರಾಯಲ್ ಇನ್‌ಫರ್ಮರಿಯ ಶಸ್ತ್ರವೈದ್ಯನಾಗಿ ನೇಮಕವಾಗಿದ್ದನು. ಇವನು ಸ್ಕಾಟ್ಲೆಂಡಿನ ಮೊದಲನೇ ಶಸ್ತ್ರವೈದ್ಯ. ೬ ಸಂಪುಟಗಳುಳ್ಳ ಶಸ್ತ್ರವೈದ್ಯ ಪದ್ಧತಿಯನ್ನು ಬರೆದಿದ್ದನು.

ಇದು ಅನೇಕ ವರ್ಷಗಳು ಆದರ್ಶಕರವಾಗಿತ್ತು. ಸರ್ ಚಾರಲ್ಸ್ ಬೆಲ್ ಕೂಡ ಎಡಿನ್ಬರೊ ಶಸ್ತ್ರವೈದ್ಯರ ಗುಂಪಿನವನು.

ವಿಲಿಯಂ ಕಲ್ಲನ್

೧೮ನೇ ಶತಮಾನದ ಅಧ್ಯಾಪಕರಲ್ಲಿ ಬೋರ್‌ಹಾವೆ ಬಿಟ್ಟರೆ, ವಿಲಿಯಂ ಕಲ್ಲನ್ನೇ (೧೭೧೦-೯೦) ಅತಿ ಶ್ರೇಷ್ಠನಾಗಿದ್ದವನು. ಲ್ಯಾನಾರ್ಕ್‌ಷೈರಿನ ಹ್ಯಾಮಿಲ್‌ಟನ್‌ನಲ್ಲಿ ಜನಿಸಿದ್ದ ಕಲ್ಲನ್‌ನನ್ನು ಇವನ ವಕೀಲ ತಂದೆ ಗ್ಲಾಸ್ಗೊ ವಿಶ್ವವಿದ್ಯಾಲಯಕ್ಕೆ ಓದಲು ಸೇರಿಸಿದ್ದರೂ, ಅಲ್ಲಿ ಆಗ ವೈದ್ಯ ವಿಭಾಗವಿಲ್ಲದ್ದರಿಂದ ಗ್ಲಾಸ್ಗೊ ಶಸ್ತ್ರವೈದ್ಯನೊಬ್ಬನ ಹತ್ತಿರ ಸೇರಿ ಅಭ್ಯಾಸ ಮಾಡುತ್ತಿದ್ದನು. ಲಂಡನ್ನಿಗೂ ಹೋಗಿ ಕೆಲವು ದಿವಸ ಕೆಲಸ ಮಾಡಿ, ಅನಂತರ ಹಡಗಿನ ಶಸ್ತ್ರವೈದ್ಯನಾಗಿ ಪಶ್ಚಿಮ ಇಂಡೀಸಿಗೂ ಪ್ರಯಾಣ ಬೆಳೆಸಿದ್ದನು. ವೈದ್ಯವೃತ್ತಿಯನ್ನು ಸ್ವತಂತ್ರವಾಗಿ ನಡೆಸಬಹುದೆಂದು ತೋರಿದ ಕೂಡಲೇ ತನ್ನ ಊರಿನಲ್ಲೇ ಹ್ಯಾಮಿಲ್ಟನ್ ಡ್ಯೂಕನ ಆಶ್ರಯದಲ್ಲಿ ಪ್ರಾರಂಭಿಸಿದನು ಆಗ ಲ್ಯಾನ್ಯಾಕ್ಷೈರ್‌ನಲ್ಲೇ ವಾಸವಾಗಿದ್ದ ವಿಲಿಯಂ ಹಂಟರನ ಸ್ನೇಹ ಬೆಳೆಸಿ ಇಬ್ಬರೂ ಜತೆಯಲ್ಲಿ ಕೆಲಸ ಮಾಡಲು ಆರಂಭಿಸಿದರು. ಆದರೆ ಒಂದು ವರ್ಷದಲ್ಲೇ ಹಂಟರ್ ಅಂಗರಚನೆಶಾಸ್ತ್ರದಲ್ಲಿ ಮುಂದುವರಿಯಲು ಲಂಡನ್ನಿಗೆ ಹೊರಟನು. ಕಲ್ಲನ್ ಗ್ಲಾಸ್ಗೊಗೆ ಹೋಗಿ ವೈದ್ಯವೃತ್ತಿಯಲ್ಲಿ ತೊಡಗಿ ಉಪನ್ಯಾಸ ಮಾಡಲೂ ಆರಂಭಿಸಿದ್ದನು. ಅವನ ಅಚ್ಚುಮೆಚ್ಚಿನ ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಔಷಧವಸ್ತುಶಾಸ್ತ್ರ, ವೈದ್ಯಶಾಸ್ತ್ರ ಇವುಗಳಲ್ಲಿ ಉಪನ್ಯಾಸ ಮಾಡಿ ಗ್ಲಾಸ್ಗೊ ವೈದ್ಯಶಾಲೆಯ ಸ್ಥಾಪನೆಗೆ ಹೊಣೆಗಾರನಾದನು.

೧೭೫೧ರಲ್ಲಿ, ೪೧ ವರ್ಷ ವಯಸ್ಸಾಗಿದ್ದಾಗ ಗ್ಲಾಸ್ಗೊ ವೈದ್ಯಶಾಸ್ತ್ರದ ಪ್ರಾಧ್ಯಾಪಕನಾಗಿ ಕೆಲವು ವರ್ಷ ಕೆಲಸ ಮಾಡಿದನಂತರ, ೧೭೫೬ರಲ್ಲಿ ಎಡಿನ್ಬರೊ ವಿಶ್ವವಿದ್ಯಾಲಯದ ರಸಾಯನಶಾಸ್ತ್ರದ ಪ್ರಾಧ್ಯಾಪಕನಾಗಿ ನೇಮಕವಾದನು. ಇವನು ಲ್ಯಾಟಿನ್ನಿನಲ್ಲಿ ಉಪನ್ಯಾಸ ಮಾಡದೆ ಇಂಗ್ಲೀಷಿನಲ್ಲೇ ಮಾಡಲು ಆರಂಭಿಸಿದ್ದನು. ಗ್ಲಾಸ್ಗೊ ವಿಶ್ವವಿದ್ಯಾಲಯಕ್ಕೆ ಎಷ್ಟು ಗೌರವ ತಂದಿದ್ದನೋ ಅಷ್ಟೇ ಗೌರವವನ್ನು ಎಡಿನ್ಬರೊ ವಿಶ್ವವಿದ್ಯಾಲಯಕ್ಕೂ ತಂದನು. ರಸಾಯನಶಾಸ್ತ್ರ ಒಂದರಲ್ಲೇ ಸಮಾಧಾನವಿಲ್ಲದೆ, ರೋಗಿಯ ಹಾಸೆಪಕ್ಕದ ವೈದ್ಯಶಾಸ್ತ್ರದಲ್ಲೂ ಎಡಿನ್ಬರೊ ರಾಯಲ್ ಇನ್‌ಫರ್ಮರಿಯಲ್ಲಿ ಉಪನ್ಯಾಸ ಮಾಡುತ್ತಿದ್ದನು. ಆಗ ರಾಬರ್ಟ್ ವ್ಹಿಟ್ ಸತ್ತು, ಶರೀರ ಶಾಸ್ತ್ರದ ಪ್ರಾಧ್ಯಾಪಕತ್ವ ಖಾಲಿಯಾಗಿದ್ದುದರಿಂದ ಅದನ್ನೂ ತಾನು ವಹಿಸಿಕೊಂಡು ರಸಾಯನಶಾಸ್ತ್ರದ ಅಧಿಕಾರವನ್ನು ಗ್ಲಾಸ್ಗೊದಲ್ಲಿ ತನ್ನ ಶಿಷ್ಯನಾಗಿ ಪ್ರಖ್ಯಾತಿ ಪಡೆದಿದ್ದ ಜೋಸೆಫ್ ಬ್ಲಾಕ್‌ಗೆ ಒಪ್ಪಿಸಿದ್ದನು. ಅಂತ್ಯದಲ್ಲಿ ಅಬರ್ಡೀನಿನಿಂದ ವೈದ್ಯಶಾಸ್ತ್ರದ ಪ್ರಾಧ್ಯಾಪಕನಾಗಿ ಎಡಿನ್ಬರೋಗೆ ಬಂದಿದ್ದ ಜಾನ್ ಗ್ರೆಗೊರಿ ಜತೆಯಲ್ಲಿ ಒಬ್ಬೊಬ್ಬರು ಒಂದೊಂದು ದಿವಸ ಉಪನ್ಯಾಸ ಮಾಡುವಂತೆ ಒಪ್ಪಿ

ಕೊಂಡಿದ್ದು, ಗ್ರೆಗೊರಿ ಸತ್ತನಂತರ ತಾನೇ ಪ್ರಾಧ್ಯಾಪಕನಾದನು. ಆಗ ಕಲ್ಲನ್ನಿಗೆ ೬೩ ವರ್ಷ ವಯಸ್ಸಾಗಿತ್ತು. ೧೫ ವರ್ಷ ಕೆಲಸ ಮಾಡಿ ಸತ್ತನಂತರ, ಜಾನ್ ಗ್ರೆಗೊರಿಯ ಮಗ ಜೇಮ್ಸ್ ಗ್ರೆಗೊರಿ ವೈದ್ಯಶಾಸ್ತ್ರದ ಅಧಿಕಾರ ವಹಿಸಿಕೊಂಡನು.

ಕಲ್ಲನ್ ಉತ್ತಮ ದರ್ಜೆಯ ಪ್ರಾಧ್ಯಾಪಕನಾಗಿ, ಇಂಗ್ಲೀಷಿನಲ್ಲಿ ಉಪನ್ಯಾಸ ಮಾಡುತ್ತಿದ್ದುದರಿಂದ, ಉಪನ್ಯಾಸಗಳು ಬಹು ಸ್ವಾರಸ್ಯವಾಗಿರುತ್ತಿದ್ದುದರಿಂದಲೂ ಲೇಡನ್ನಿನ ಬೋರ್‌ಹಾವೆ ಉಪನ್ಯಾಸಗಳಿಗೆ ವಿದ್ಯಾರ್ಥಿಗಳು ಹೇಗೆ ಹೋಗುತ್ತಿದ್ದರೋ ಅದೇ ರೀತಿ ಇಂಗ್ಲೀಷ್ ಮಾತನಾಡುತ್ತಿದ್ದ ವಿದ್ಯಾರ್ಥಿಗಳೆಲ್ಲಾ ಎಡಿನ್ಬರೊವಿಗೆ ಬರುತ್ತಿದ್ದರು. ವಿದ್ಯಾರ್ಥಿಗಳಲ್ಲಿ ಪ್ರೀತಿ ವಿಶ್ವಾಸವಿದ್ದುದರಿಂದ ತನ್ನ ಮನೆಯನ್ನೂ ತನ್ನ ಪುಸ್ತಕಭಂಡಾರವನ್ನೂ ತಾನು ಸಂಪಾದಿಸಿದ ಹಣವನ್ನೂ ವಿದ್ಯಾರ್ಥಿಗಳ ಹಿತಕ್ಕೋಸ್ಕರ ಬಿಟ್ಟುಕೊಟ್ಟಿದ್ದನು. ಇವನ ಅನುರಾಗಿಗಳಲ್ಲೊಬ್ಬನಾದ ಪೆರುದೇಶದ ಹಿಪೊಲಿಟೊ ಉನಾನೆ ಎಡಿನ್ಬರೊ ಮತ್ತು ಲೇಡನ್ ಪದ್ಧತಿಗಳನ್ನು ತನ್ನ ದೇಶಕ್ಕೆ ಕೊಂಡು ಹೋಗಿ ಅಲ್ಲಿ ಅಭಿವೃದ್ಧಿಪಡಿಸಿದನು.

ಲಿನ್ನೇಯಸ್ ಹೇಗೆ ಸಸ್ಯಗಳನ್ನು ವಿಂಗಡಿಸಿದ್ದನೋ ಹಾಗೆಯೇ ಕಲ್ಲನ್ ಕೂಡ ರೋಗಗಳನ್ನು ಅವುಗಳ ಲಕ್ಷಣಗಳ ಆಧಾರದ ಮೇಲೆ ವಿಂಗಡಿಸಿ ೧೭೬೯ರಲ್ಲಿ 'ರೋಗ ವಿಂಗಡಶಾಸ್ತ್ರ ವಿಧಾನ ಸಂಗ್ರಹ' ಎಂಬ ಪುಸ್ತಕವನ್ನು ಬರೆದಿದ್ದನು. ಇದು ಹಾಗೂ ಅವನ 'ವೈದ್ಯಕಲೆಯ ಆಚರಣೆಯ ಸರಳ ಪಾಠಗಳು' ಎಂಬ ಪುಸ್ತಕಗಳು ಅವನ ಕೀರ್ತಿಯನ್ನು ಹೆಚ್ಚಿಸಿದವು. ಫ್ರೆಂಚ್ ಮತ್ತು ಜರ್ಮನ್ ಭಾಷೆಗಳಿಗೆ ಭಾಷಾಂತರವಾಗಿ ಯೂರೋಪಿನಲ್ಲೆಲ್ಲಾ ಉಪಯೋಗದಲ್ಲಿದ್ದವು. ಜ್ವರವನ್ನು ಕುರಿತು ಒಂದು ಪುಸ್ತಕವನ್ನೇ ಬರೆದಿದ್ದನು. ಆದರೂ ಇವನು ಯಾವ ಶೋಧನೆಯನ್ನೂ ಮಾಡಿರಲಿಲ್ಲ. ಇವನ ರೋಗಗಳ ವಿಂಗಡಣೆ, ಕಟ್ಟುವಾರೆ ಕೀಲುನೋವಿನ ಪರಿಚಯ ಜನರಲ್ಲಿ ನಂಬಿಕೆ ಹುಟ್ಟಿಸಿದ್ದರೂ, ಆಗಿನ ಕಾಲಕ್ಕೆ ತಕ್ಕನಾಗಿರಲಿಲ್ಲ. ಕಟ್ಟುವಾರೆ ಕೀಲುನೋವು ನರಮಂಡಲದ ರೋಗವೆಂದು ಹೇಳಿ, ರೋಗಿ ವ್ಯಾಯಾಮ ಮಾಡಬೇಕೆಂದೂ, ಮಾಂಸ ಹಾಗೂ ಮದ್ಯವನ್ನು ತ್ಯಜಿಸಬೇಕೆಂದೂ ತಿಳಿಸಿದ್ದನು.

ಫ್ರಾನ್ಸಿಸ್ ಹೋಮ್

ಲೇಡನ್ನಿನ ಹಾಗೂ ಅಲ್ಲಿಯ ಪ್ರಖ್ಯಾತ ಬೋರ್‌ಹಾವೆಯ ಪ್ರಭಾವವೂ ಎಡಿನ್ಬರೊ ವಿಶ್ವವಿದ್ಯಾಲಯದ ಏಳಿಗೆಗೆ ಬಹಳ ಹೊಣೆಯಾಗಿದ್ದವು. ಸಸ್ಯಶಾಸ್ತ್ರದ ಪ್ರಾಧ್ಯಾಪಕನಾಗಿ ನೇಮಕವಾದ ಚಾರಲ್ಸ್ ಆಲ್ಸ್‌ಟನ್ ಹಾಗೂ ೧೭೬೮ರಲ್ಲಿ ಔಷಧ ವಸ್ತುಶಾಸ್ತ್ರಕ್ಕೆ ನೇಮಕವಾದ ಫ್ರಾನ್ಸಿಸ್ ಹೋಮ್ ಇಬ್ಬರೂ ಲೇಡನ್ನಿನ ವಿದ್ಯಾರ್ಥಿಗಳಾಗಿದ್ದರು. ಫ್ಲಾಂಡರ್ಸ್ ಯುದ್ಧ ನಡೆಯುತ್ತಿದ್ದಾಗ, ಸೈನಿಕರೆಲ್ಲರೂ ಕಾಯಿಸಿ ಆರಿಸಿದ ನೀರನ್ನು ಕುಡಿಯಬೇಕೆಂದು ಹೋಮ್ ಅಪ್ಪಣೆ ಮಾಡಿದ್ದರಿಂದ ಅನೇಕ ಸೈನಿಕರು ರೋಗ ಬರದೆ ಪಾರಾಗಿದ್ದರು.

ರಾಬರ್ಟ್ ವ್ಹಿಟ್

ವೈದ್ಯಶಾಸ್ತ್ರಕ್ಕೆ ಪ್ರಾಧ್ಯಾಪಕನಾಗಿ ನೇಮಕವಾಗಿದ್ದ ರಾಬರ್ಟ್ ವ್ಹಿಟ್ (೧೭೧೪-೬೬) ಪಿತ್ತಕೋಶದಲ್ಲಿ ಬೆಳೆವ ಅಶ್ಮರಿಯನ್ನು ಕರಗಿಸಲು ಸುಣ್ಣದ ನೀರು ಮತ್ತು ಸಾಬೂನನ್ನು ಚುಚ್ಚುವುದಾಗಿ ಉಪಯೋಗಿಸಿ ಶೋಧನೆ ನಡೆಸಿದನು. ಮಿದುಳುಬಳ್ಳಿಯಿಂದಲೇ ಹಿಮ್ಮುರಿತ ಪ್ರತಿಕ್ರಿಯೆ ಏಳುತ್ತದೆಂದೂ, ಮಿದುಳಿನಿಂದಲ್ಲ ವೆಂದೂ ತಿಳಿಸಿದ್ದನು. ನರ ಮಂಡಲದ ರೋಗಗಳ ಶೋಧನೆಯಲ್ಲಿ ಹೆಚ್ಚು ಕೆಲಸ ನಡೆಸಿದ್ದನು. ಕ್ಷಯದ ಮಿದುಳಿನ ಹೊರ ಪೊರೆಯುರಿತವನ್ನೂ ಹಾಗೂ ಗಂಟಲಿನಲ್ಲಿ ಬರುವ ಗಂಟಲಮಾರಿ ರೋಗವನ್ನೂ ಸೂಕ್ಷ್ಮವಾಗಿ ವಿವರಿಸಿದ್ದನು.

ಜಾನ್ ಗ್ರೆಗೊರಿ

ಇವನನಂತರ ವೈದ್ಯಶಾಸ್ತ್ರದ ಪ್ರಾಧ್ಯಾಪಕನಾಗಿ ಬಂದ ಜಾನ್ ಗ್ರೆಗೊರಿ, ಅಷ್ಟರಲ್ಲೇ ಬೋರ್‌ಹಾವೆ ತೀರಿಹೋಗಿದ್ದ ಲೇಡೆ ವಿಶ್ವವಿದ್ಯಾಲಯದಲ್ಲೇ ವ್ಯಾಸಂಗ ಮಾಡಿದ್ದನು. ಇವನು ವೈದ್ಯ ವೃತ್ತಿಯಲ್ಲೂ, ಅಧ್ಯಾಪಕನಾಗಿಯೂ ಕೀರ್ತಿ ಪಡೆ ದಿದ್ದನು. ಇವನು ಬರೆದ "ಕಾನ್ಸ್‌ಪೆಕ್ಟಸ್ ಮೆಡಿಸಿನೆ" ಅತ್ಯುತ್ತಮವಾಗಿದ್ದು ಎಲ್ಲರೂ ಬಳಸುತ್ತಿದ್ದರು. ಅವನು ಉಪಯೋಗಿಸುತ್ತಿದ್ದ ಔಷಧಗಳಲ್ಲಿ, ಮ್ಯಾಗ್ನೀ ಸಿಯ, ರೇವಲ್ಚಿನ್ನಿ ಮತ್ತು ಶುಂಠಿಗಳಿಂದ ತಯಾರಿಸಿದ್ದ ಗ್ರೆಗೊರಿ ಪುಡಿ ಈಗಿನವರೆ ವಿಗೂ ಬಳಕೆಯಲ್ಲಿತ್ತು. ಇವನು ಕೊಂಚ ತಕರಾರಿನವನಾಗಿದ್ದುದರಿಂದ ಶಸ್ತ್ರವೈದ್ಯ ಜಾನ್ ಬೆಲ್ ಸಂಗಡ ವಿವಾದ ಮಾಡುತ್ತಿದ್ದುದಲ್ಲದೆ, ಪ್ರಸವಶಾಸ್ತ್ರದ ಪ್ರಾಧ್ಯಾಪಕ ಜೇಮ್ಸ್ ಹ್ಯಾಮಿಲ್ಟನ್ ಸಂಗಡ ಜಗಳವಾಡಿ ಹೊಡೆದು ಕೋರ್ಟಿಗೆ ಹೋಗಬೇಕಾ ಯಿತು. ಕೋರ್ಟಿನಲ್ಲಿ ೧೦೦ ಪೌಂಡುಗಳ ಜುಲ್ಮಾನೆ ಕೊಡಬೇಕಾಗಿ ಬಂದ ಗ್ರೆಗೊರಿ ಜುಲ್ಮಾನೆ ಕೊಟ್ಟರೂ ಹೊಡೆದದ್ದು ಸಾರ್ಥಕವಾಯಿತೆಂದು ಹೇಳಿದನಂತೆ.

ಸೇನಾದಳ, ನೌಕಾದಳಗಳಲ್ಲಿದ್ದ ಎಡಿನ್ಬರೊ ವೈದ್ಯರು

ಎಡಿನ್ಬರೊ ಪದವೀಧರರಾದ ಪ್ರಿಂಗಲ್ ಮತ್ತು ಲಿಂಡ್ ಅನುಕ್ರಮವಾಗಿ ಸೇನಾದಳದಲ್ಲೂ, ನೌಕಾದಳದಲ್ಲೂ ಅರ್ಹತೆ ಪಡೆದು ಎಡಿನ್ಬರೊ ವಿಶ್ವವಿದ್ಯಾಲಯಕ್ಕೆ ಕೀರ್ತಿ ಗಳಿಸಿದ್ದರು.

ಸರ್ ಜಾನ್ ಪ್ರಿಂಗಲ್

ಸರ್ ಜಾನ್ ಪ್ರಿಂಗಲ್ (೧೭೦೭-೮೨) ಸೆಂಟ್ ಆಂಡ್ರೂಸ್, ಎಡಿನ್ಬರೊ ಮತ್ತು ಲೇಡನ್‌ಗಳಲ್ಲಿ ಯಶಸ್ವಿಯಾಗಿ ವ್ಯಾಸಂಗ ಮಾಡಿ, ಲೇಡನ್ ವಿಶ್ವವಿದ್ಯಾ ಲಯದಿಂದ ೧೭೩೦ರಲ್ಲಿ ವೈದ್ಯ ಪಂಡಿತ ಪದವಿ ಪಡೆದಿದ್ದನು. ಎಡಿನ್ಬರೊ ನೀತಿ ಶಾಸ್ತ್ರ, ವಿಶ್ವಶಾಸ್ತ್ರದ ಪ್ರಾಧ್ಯಾಪಕನಾಗಿ ನೇಮಕವಾಗಿದ್ದರೂ ವೈದ್ಯವೃತ್ತಿ ನಡೆಸುತ್ತಿದ್ದನು. ಇವೆರಡರಲ್ಲೂ ಉನ್ನತ ಸ್ಥಾನ ಪಡೆದಿದ್ದು ಯೂರೋಪಿನಲ್ಲಿದ್ದ ಬ್ರಿಟಿಷ್ ಸೈನ್ಯದ

ಮುಖ್ಯಾಧಿಕಾರಿಯ ವೈದ್ಯನಾಗಿ ನೇಮಕವಾಗಿದ್ದನು. ಡೆಟ್ಟಿನ್‌ಜನ್ (೧೭೪೩) ಯುದ್ಧ ನಡೆಯುತ್ತಿದ್ದಾಗ ಸೇನಾದಳ ಆಸ್ಪತ್ರೆಗಳನ್ನು ಪವಿತ್ರ ಸ್ಥಳಗಳಂತೆ ಕಂಡು ರಕ್ಷಣೆಗೊಳಪಡಿಸಬೇಕೆಂದು ಪ್ರಿಂಗಲ್ ಸಲಹೆಯನ್ನು ಫ್ರೆಂಚ್ ಸೇನೆ ಮುಖ್ಯಾಧಿಪತಿ ಮನ್ನಿಸಿ, ಅಂದಿನಿಂದ ಈ ಪದ್ಧತಿ ಅತಿನಿಷ್ಠೆಯಿಂದ ನಡೆದುಬರಲು ಪ್ರಾರಂಭವಾಯಿತು. ಈ ಪದ್ಧತಿಯನ್ನು ಅನುಸರಿಸುವ ರೆಡ್‌ಕ್ರಾಸ್ ಸಂಸ್ಥೆಗಳು ಈಗಲೂ ಜಾರಿಯಲ್ಲಿವೆ. ಯುದ್ಧದಲ್ಲಿ ಗಾಯಗೊಂಡವರ ಭಯಂಕರ ಸ್ಥಿತಿ ಕುರಿತು ಜೀನ್ ಹೆನ್ರಿ ಡುನಾಂಟ್ ಬರೆದ ಲೇಖನದ ಆಧಾರದ ಮೇಲೆ ೧೮೬೩ನೇ ಅಕ್ಟೋಬರ್‌ನಲ್ಲಿ ಜಿನೀವ ಸಭೆ ನಡೆದು, ಯುದ್ಧದಲ್ಲಿ ಗಾಯಗೊಂಡವರನ್ನೂ, ರೋಗಿಗಳನ್ನೂ ಅವರನ್ನು ಉಪಚರಿಸುವ ವೈದ್ಯ ಪಂಗಡದವರನ್ನೂ ಸಂರಕ್ಷಿಸಲು ಅಂತರರಾಷ್ಟ್ರೀಯ ಒಪ್ಪಿಗೆ ಜಾರಿಗೆ ಬಂದಿತು. ೧೭೫೨ರಲ್ಲಿ ಪ್ರಿಂಗಲ್ ಬರೆದ 'ಸೇನೆಯ ರೋಗಗಳ ಮೇಲಿನ ಟಿಪ್ಪಣಿಗಳು' ಬಹಳ ಉತ್ಕೃಷ್ಟವಾಗಿದ್ದು ಫ್ರೆಂಚ್, ಜರ್ಮನ್ ಮತ್ತು ಇಟಾಲಿಯನ್ ಭಾಷೆಗಳಿಗೆ ಭಾಷಾಂತರವಾಯಿತು. ಇದರಲ್ಲಿ ಆಸ್ಪತ್ರೆಗಳಲ್ಲೂ, ಬಂದೀಖಾನೆಗಳಲ್ಲೂ, ಸಿಪಾಯಿಗಳ ವಾಸ ಸ್ಥಾನಗಳಲ್ಲೂ ಸರಿಯಾದ ಗಾಳಿಯಾಡುವ ಕ್ರಮಗಳನ್ನೂ, ಇವುಗಳ ಉಪಯೋಗ ಗಳನ್ನೂ ವಿವರಿಸಿದ್ದನು. ಆಂಟಿಸೆಪ್ಟಿಕ್ (ನಂಜುರೋಧಕ) ಎಂಬ ಪದವನ್ನು ಮೊಟ್ಟ ಮೊದಲಿಗೆ ಉಪಯೋಗಿಸಿ ಅನೇಕ ಲೇಖನಗಳನ್ನು ಬರೆದು, ರಾಜವೈದ್ಯ ಕಾಲೇಜಿನಲ್ಲಿ ಉಪನ್ಯಾಸಗಳನ್ನೂ ಮಾಡಿದ್ದನು. ಇವನ ಕೀರ್ತಿ ಬೆಳಗಲು ಮೂರನೆ ಜಾರ್ಜ್ ದೊರೆಯ ವೈದ್ಯನನ್ನಾಗಿಯೂ, ವೈದ್ಯರ ರಾಜವಿದ್ಯಾ ಕಾಲೇಜಿನ ಸದಸ್ಯನನ್ನಾಗಿಯೂ ಮತ್ತು ರಾಜಸಂಸ್ಥೆಯ ಅಧ್ಯಕ್ಷನಾಗಿಯೂ ಆರಿಸಿ ಗೌರವ ಸಲ್ಲಿಸಿದ್ದರು.

ಜೇಮ್ಸ್ ಲಿಂಡ್

ಸುಮಾರು ಇವೇ ಕಾಲದಲ್ಲಿ ಸೈನ್ಯದಳಕ್ಕೆ ಪ್ರಿಂಗಲ್ ಸೇವೆಸಲ್ಲಿಸುತ್ತಿದ್ದ ಹಾಗೆ, ಜೇಮ್ಸ್ ಲಿಂಡ್ (೧೭೧೬-೯೪) ನೌಕಾದಳಕ್ಕೆ ಶಸ್ತ್ರವೈದ್ಯನಾಗಿ ಸೇವೆ ಸಲ್ಲಿಸಿದನು. ಇವನು ಎಡಿನ್ಬರೊದಲ್ಲೇ ವ್ಯಾಸಂಗ ಮಾಡಿ, ತನ್ನ ೨೩ನೇ ವಯಸ್ಸಿನಲ್ಲಿ ನೌಕಾದಳ ವನ್ನು ಸೇರಿ ೯ ವರ್ಷಗಳು ಎಡೆಬಿಡದೆ ಉಷ್ಣವಲಯದ ಸಾಗರಗಳಲ್ಲಿ ಸೇವೆ ಮಾಡು ತ್ತಿದ್ದನು. ೧೭೪೮ರಲ್ಲಿ ನೌಕಾದಳದಿಂದ ನಿವೃತ್ತನಾಗಿ, ಎಡಿನ್ಬರೊ ಪಟ್ಟಣದಲ್ಲಿ ವೈದ್ಯವೃತ್ತಿ ಆರಂಭ ಮಾಡಿ ೧೦ ವರ್ಷಗಳು ನಡೆಸಿಕೊಂಡು ಬಂದಿದ್ದನು. ೨೫ ವರ್ಷ ಹಾಸ್ಲರ್ ಆಸ್ಪತ್ರೆಯ ವೈದ್ಯನಾಗಿದ್ದನು. ನೌಕಾದಳದಲ್ಲಿದ್ದಾಗ ದಳದ ಸೈನಿಕರಲ್ಲಿ ಸ್ಕರ್ವಿ ರೋಗ ಬಂದು ಅನೇಕ ಸಾವುನೋವುಗಳಾಗುತ್ತಿದ್ದುದನ್ನು ನೋಡಿ, ೧೭೫೩ರಲ್ಲಿ "ಎ ಟ್ರೀಟೈಸ್ ಆಫ್ ದಿ ಸ್ಕರ್ವಿ" ಎಂಬ ಪುಸ್ತಕ ಬರೆದು, ಅದರಲ್ಲಿ ರೋಗದ ಚಿಹ್ನೆ, ಕಾರಣ, ಚಿಕಿತ್ಸೆಗಳನ್ನೆಲ್ಲಾ ವಿವರಿಸಿದ್ದನು. ಆಗ ಅನ್ನಾಂಗಗಳು ಗೊತ್ತಿಲ್ಲದಿದ್ದರೂ, ನಿಂಬೆಹಣ್ಣಿನ ರಸವನ್ನು ಸ್ಕರ್ವಿ ರೋಗಿಗಳಿಗೆ ಕೊಟ್ಟು ಗುಣ ಪಡಿಸುತ್ತಿದ್ದನು. ಲಿಂಡ್‌ನ ಚಿಕಿತ್ಸೆ ಪದ್ಧತಿಯಿಂದ ಸ್ಕರ್ವಿ ರೋಗ ನೌಕಾದಳದಿಂದ

ಮಂಗಮಾಯವಾಯಿತು. ಅವನ ಚಿಕಿತ್ಸೆಯ ಕ್ರಮ ಹೆಚ್ಚಿನ ಮಟ್ಟದಲ್ಲಿ ಯಶಸ್ವಿಯಾಗುವ ವರೆವಿಗೆ ಅವನು ಬದುಕಿರಲಿಲ್ಲ. ಸ್ಕರ್ವಿ ರೋಗಿಗಳಿಗೆ ನಿಂಬೆಹಣ್ಣಿನ ಉಪ



ಜೇಮ್ಸ್ ಲಿಂಡ್ (೧೭೫೩) ಸೈನಿಕನಿಗೆ ನಿಂಬೆಹಣ್ಣು ನೀಡುತ್ತಿರುವುದು

ಯೋಗ ಒಂದು ಶತಮಾನದ ಹಿಂದೆಯೇ ಜಾನ್ ವುಡ್ಡಾಲ್ ಮತ್ತು ಜಾನ್ ಹಕ್ಸಾಮ್‌ಗಳಿಗೆ ಗೊತ್ತಿತ್ತು. ಆದರೆ ಲಿಂಡ್ ಪುನಃ ಈ ಪದ್ಧತಿಯನ್ನು ಮುಂದಿಡದಿದ್ದಿದ್ದರೆ ಸ್ಕರ್ವಿ ರೋಗದ ಚಿಕಿತ್ಸೆ ಇನ್ನೂ ಬಹಳ ಕಾಲ ಕತ್ತಲಲ್ಲಿರುತ್ತಿತ್ತು.

೨೭. ೧೮ನೇ ಶತಮಾನದ ಶಸ್ತ್ರವೈದ್ಯ

೧೮ನೇ ಶತಮಾನದಲ್ಲಿ ಅಂಗರಚನೆಶಾಸ್ತ್ರ ಹಾಗೂ ರೋಗಶಾಸ್ತ್ರೀಯ ಅಂಗ ರಚನೆಶಾಸ್ತ್ರಗಳ ಅಭಿವೃದ್ಧಿ ಶಸ್ತ್ರವೈದ್ಯದ ಬೆಳವಣಿಗೆಗೆ ಬಹಳ ಸಹಾಯಕವಾಗಿದ್ದವು. ಶಸ್ತ್ರಕ್ರಿಯೆಗಳ ವಿಧಾನಗಳು ನಿಜವಾಗಿಯೂ ಉತ್ತಮವಾಗಿದ್ದವು. ಹಿಂದೆ ಮಾಡ ಲಾಗದಿದ್ದ ಶಸ್ತ್ರಕ್ರಿಯೆಗಳು ಈಗ ಸಾಧ್ಯವಾಗಿದ್ದವು. ಇಷ್ಟಾದರೂ, ೧೯ನೇ ಶತಮಾನ ದಲ್ಲಿ ರಕ್ತದೋಷ ನಿವಾರಕ ಮತ್ತು ಅರಿವಳಿಸುವ ಮದ್ದುಗಳು ಪ್ರಯೋಗಕ್ಕೆ ಬರುವ ವರೆವಿಗೂ ಶಸ್ತ್ರಕ್ರಿಯೆಯ ಮೂಲತತ್ವಗಳು ಅಷ್ಟಾಗಿ ಮುಂದುವರಿದಿರಲಿಲ್ಲ. ಆದರೂ ೧೮ನೇ ಶತಮಾನದ ಮೂವರು ಶಸ್ತ್ರವೈದ್ಯರ ಹೆಸರುಗಳನ್ನು ಮರೆಯುವಂತಿಲ್ಲ. ಅವರೇ ವಿಲಿಯಂ ಚೆಸಲ್ಡನ್ (೧೬೮೮–೧೭೫೨), ಪರ್ಸಿವಲ್ ಪಾಟ್ (೧೭೧೪–೮೮) ಮತ್ತು ಇವರ ಶಿಷ್ಯ ಜಾನ್ ಹಂಟರ್ (೧೭೨೮–೯೩). ಹಂಟರನ ಗುರುಗಳು ದಕ್ಷತೆ ಯುಳ್ಳವರಾಗಿದ್ದರೂ, ಶಿಷ್ಯನಷ್ಟು ಯಶಸ್ವಿಯಾಗಿರಲಿಲ್ಲ.

ವಿಲಿಯಂ ಚೆಸಲ್ಡನ್



ಚೆಸಲ್‌ಡನ್ನಿನ ಆಸ್ಟಿಯೊಗ್ರಾಫಿಯದ ಒಂದು ಚಿತ್ರ.
ಮಗುವಿನ ಅಸ್ಥಿಪಂಜರ ದೊಡ್ಡವನ ತೋಳುಮೂಳೆಯನ್ನು ಹಿಡಿದಿದೆ.

ವಿಲಿಯಂ ಚೆಸಲ್ಡನ್ ಸಂತ ಥಾಮಸ್ ಆಸ್ಪತ್ರೆಯ ಶಸ್ತ್ರವೈದ್ಯನಾಗಿದ್ದು ಕಲ್ಲು ಕೊಯ್ದು ತೆಗೆವ ಶಸ್ತ್ರಕ್ರಿಯೆ ಯಲ್ಲಿ ಹೆಸರು ಪಡೆದಿದ್ದನು. ಆಗಿನ ಕಾಲದ ಪ್ರಸಿದ್ಧ ಪುರು ಷನೆಂದೆನಿಸಿಕೊಂಡು, ಸರ್ ಐಸಕ್ ನ್ಯೂಟನ್ ಮತ್ತು ಅಲೆಗ್ಸಾಂಡರ್ ಪೋಪ್‌ರ ವೈದ್ಯನಾಗಿದ್ದನು. ಕಣ್ಣಿನ ಪಾಪೆ ಪೊರೆ ಕರ್ತನ ಮಾಡಿ ಕಣ್ಕೊಟ್ಟವರಲ್ಲಿ ಇವನೇ ಮೊದಲನೆಯವ. ಕಲ್ಲು ಕೊಯ್ದು ತೆಗೆವ ಶಸ್ತ್ರಕ್ರಿಯೆ ಯನ್ನು ಒಂದು ನಿಮಿಷದಲ್ಲಿ

ಮಾಡಿ ಮುಗಿಸುತ್ತಿದ್ದನೆಂದು ಹೆಸರು ಪಡೆದಿದ್ದನು. ಗುಂಜೆಲು ಮೇಲಿನ ಕ್ರಿಯಾ ಪದ್ಧತಿಯನ್ನು ತ್ಯಜಿಸಿ ಗುದಮುಂದಾಣ ಭಾಗದಿಂದ ಶಸ್ತ್ರಕ್ರಿಯೆ ಮಾಡಲು ಪ್ರಾರಂಭಿಸಿದ್ದನು. ಆಗಿನ ಕಾಲದಲ್ಲಿ ಅರಿವಳಿಸುವ ಮದ್ದುಗಳು ಇಲ್ಲದಿದ್ದರೂ, ಕಲ್ಲುಕೊಯ್ತಗೆವ ಶಸ್ತ್ರಕ್ರಿಯೆಯಿಂದ ಶೇ. ೭ಕ್ಕಿಂತ ಹೆಚ್ಚು ಮರಣ ಸಂಭವಿಸುತ್ತಿರಲಿಲ್ಲ. ಚೆಸಲ್ಡನ್ ಶಸ್ತ್ರವೈದ್ಯದಲ್ಲಿ ಜಾಣನಾಗಿದ್ದುದಲ್ಲದೆ, ಅಂಗರಚನೆಶಾಸ್ತ್ರಜ್ಞನೂ, ಉತ್ತಮ ನಕ್ಷೆಗಾರನೂ ಆಗಿದ್ದನು. ಥೇಮ್ಸ್ ನದಿಗೆ ಮರದಲ್ಲಿ ಕಟ್ಟಿದ್ದ ಫುಲ್‌ಹ್ಯಾಮ್ ಸೇತುವೆಯ ನಕ್ಷೆಯನ್ನು ಇವನೇ ಬರೆದಿದ್ದನು.

ಪರ್ಸಿವಲ್ ಪಾಟ್

ಮತ್ತೊಬ್ಬ ಲಂಡನ್ನಿನ ಶಸ್ತ್ರವೈದ್ಯ ಪರ್ಸಿವಲ್ ಪಾಟ್ ಬೆನ್ನೆಲುಬಿನ ಕ್ಷಯ ರೋಗವನ್ನೂ, ಕಾಲಿನ ಹರಡಿನ ಮೇಲ್ಭಾಗದ ಮೂಳೆಮುರಿತವನ್ನೂ ವಿವರಿಸಿದ್ದನು. ಈ ರೋಗಗಳಿಗೆ ಈಗಲೂ ಅವನ ಹೆಸರಿದೆ. ೭೪ನೇ ವಯಸ್ಸಿನಲ್ಲಿ ಸಾಯುವ ತನಕ ಸಂತ ಬಾರ್ತೊಲೋಮ್ಯು ಆಸ್ಪತ್ರೆಯಲ್ಲೇ ಶಸ್ತ್ರಕ್ರಿಯೆ ಮಾಡುತ್ತಿದ್ದನು. ಸ್ಯಾಮ್ಯುಯಲ್ ಜಾನ್ಸನ್ ಮತ್ತು ಡೇವಿಡ್ ಗ್ಯಾರಿಕ್ ಇವನಿಂದಲೇ ಚಿಕಿತ್ಸೆ ಪಡೆಯುತ್ತಿದ್ದರು. ತಾನು ಕುದುರೆ ಮೇಲಿಂದ ಬಿದ್ದು, ಕಣಕಾಲೆ ಮೂಳೆಯ ಸಂಯುಕ್ತ ಮೂಳೆಮುರಿತ ಆಗಿದ್ದಾಗ ನೋವು ಅತಿಯಾದ್ದನ್ನೂ, ನೋವಿನಿಂದ ಅಲ್ಲಾಡದ್ದನ್ನೂ, ಆಗ ಕೈಮಂಚದ ಮೇಲೆ ಹೊತ್ತು ಹೋದುದನ್ನೂ ವಿವರಿಸಿದ್ದನು. ಆಗಿನ ಕಾಲದಲ್ಲಿ ಸಂಯುಕ್ತ ಮೂಳೆಮುರಿತಕ್ಕೆ ಛೇದನೆಯೇ ತಕ್ಕ ಕ್ರಿಯೆಯಾಗಿದ್ದರೂ, ಅವನ ಗುರು ಎಡ್ವರ್ಡ್ ನೋರ್ಸ್‌ನ ಸಹಾಯದಿಂದ ಕಾಲು ಉಳಿದು ಜೀವವೂ ಉಳಿಯಿತು. ಗಾಯ ಗುಣವಾಗಲು ಬಹು ದಿನ ಹಿಡಿದಿದ್ದರಿಂದ ಆ ವೇಳೆಯನ್ನು 'ಬೂರು' ಕುರಿತು ಬರೆಯಲು ಉಪಯೋಗಿಸಿಕೊಂಡಿದ್ದನು. ಇದು ಅವನ ಬರವಣಿಗೆಗಳಲ್ಲೆಲ್ಲಾ ಬಹು ಉತ್ತಮ ಗ್ರಂಥ. ಹೀಗೆ ಶಸ್ತ್ರವೈದ್ಯದ ಬೆಳವಣಿಗೆಗೆ ಸಾಕಷ್ಟು ಉತ್ತೇಜನ ಕೊಟ್ಟಿದ್ದನು.

ಹಂಟರ್ ಸೋದರರು

ವಿಲಿಯಂ ಹಂಟರ್

ಎಡಿನ್ಬರೊದಲ್ಲಿ ಕಲ್ಲನ್ ಜೊತೆ ಕೆಲಸ ಮಾಡುತ್ತಿದ್ದು, ಲಂಡನ್ನಿನಲ್ಲಿ ತನ್ನ ಅಂಗರಚನೆಶಾಸ್ತ್ರದ ಕ್ರಮವನ್ನು ಅಭಿವೃದ್ಧಿಪಡಿಸಿಕೊಳ್ಳಲು ಬಂದ ವಿಲಿಯಂ ಹಂಟರ್ (೧೭೧೮-೧೭೮೩) ಲಾನಾರ್ಕ್‌ಷೈರ್‌ನ ಮತ್ತೊಬ್ಬ ಸ್ಕಾಟ್ಲೆಂಡಿನವನಾದ ಡಾ. ಸ್ಮೆಲ್ಲಿ ಜೊತೆ ಸೇರಿ, ಕೆಲವು ದಿನಗಳಾದನಂತರ ಸೆಂಟ್ ಜಾರ್ಜ್ ಆಸ್ಪತ್ರೆಯ ಅಂಗಚ್ಛೇದನ ಕ್ರಿಯೆಯಲ್ಲಿ ತೊಡಗಿ ನಿಪುಣನಾಗಿ, ಶಸ್ತ್ರವೈದ್ಯದಲ್ಲೂ ನುರಿಯಲೆತ್ನಿಸಿದ್ದನು. ಅನಂತರ ೧೭೪೮ರಲ್ಲಿ ಪ್ರಸವಶಾಸ್ತ್ರದ ಕಡೆ ಗಮನ ಹರಿಸಿ, ಮಿಡ್ಲ್‌ಸೆಕ್ಸ್ ಆಸ್ಪತ್ರೆಯಲ್ಲಿ ಸೂಲ

ಗಸ್ತನಾಗಿ ನೇಮಕವಾಗಿದ್ದನು. ಈ ಉದ್ಯೋಗದಲ್ಲಿ ಕೀರ್ತಿ ಪಡೆದು ೧೭೬೨ರಲ್ಲಿ ರಾಣಿ ಚಾರ್ಲೊಟ್ಟಗೆ ಹೆರಿಗೆ ಮಾಡಿದ್ದನು. ಅಂಗರಚನೆಶಾಸ್ತ್ರವನ್ನು ಮುಂದುವರಿಸಿ ೧೭೪೬ರಲ್ಲಿ ದುಗ್ಧನಾಳಗಳು ರಕ್ತನಾಳಗಳ ತುದಿಯಲ್ಲವೆಂದೂ, ಅವು ಆಹಾರ ಹೀರುವ ಮಂಡಳಕ್ಕೆ ಸೇರಿದವೆಂದೂ ತಿಳಿಸಿದನು. ೧೭೪೭ರಲ್ಲಿ ಕಣ್ಣೀರು ಸಾಗುನಾಳವನ್ನೂ, ೧೭೫೨ರಲ್ಲಿ ಅವನ ತಮ್ಮನ ಸಹಾಯ ಪಡೆದು ರೇತುಸಾಗುವ ಕಿರ್ನಾಳಗಳನ್ನೂ ಕಂಡುಹಿಡಿದಿದ್ದನು. ೧೭೬೮ರಲ್ಲಿತನ್ನ ಹೊಸ ಮನೆಯನ್ನು ಕಟ್ಟಿಸಿ ಅಲ್ಲಿ ಅಂಗಚ್ಛೇದನಕ್ಕೂ, ಉಪನ್ಯಾಸ ಮಾಡುವುದಕ್ಕೂ, ವಸ್ತುಪ್ರದರ್ಶನಕ್ಕೂ ಸಾಕಷ್ಟು ಸ್ಥಳ ಒದಗಿಸಿ, ಸಾಯುವ ತನಕ ಆ ಕಾರ್ಯಗಳನ್ನು ನೆರವೇರಿಸುವುದರಲ್ಲಿ ತೊಡಗಿದ್ದನು. ವಸ್ತುಸಂಗ್ರಹದಲ್ಲಿ ಚಿತ್ರಪಠಗಳು, ಭಾವಚಿತ್ರಗಳು, ಕೆತ್ತನೆಯ ವಸ್ತುಗಳು, ಪುಸ್ತಕ, ಹಸ್ತಪ್ರತಿ, ನಾಣ್ಯ, ರತ್ನ, ಮಣಿ ಸಸ್ಯ ಮತ್ತು ಪ್ರಾಣಿಗಳ ಮಾದರಿ ವಸ್ತುಗಳೆಲ್ಲಾ ಇಲ್ಲಿದ್ದವು. ಇವೆಲ್ಲವೂ ಅವನ ಇಚ್ಛೆ ಪ್ರಕಾರ ಅವನು ಸತ್ತನಂತರ ಗ್ಲಾಸ್ಗೊ ವಿಶ್ವ ವಿದ್ಯಾಲಯಕ್ಕೆ ದಾನವಾದವು.

೨೫ ವರ್ಷ ಶ್ರಮಪಟ್ಟು ದುಡಿದು ಬರೆದ 'ಬಸಿರು ಗರ್ಭಕೋಶದ ಅಂಗರಚನೆ' ವಿಜ್ಞಾನದ ಒಂದು ಸಾಧನೆಯೇ ಆಗಿತ್ತು. ೧೭೭೪ರಲ್ಲಿ ಪ್ರಕಟವಾಗಿ ಇದರಲ್ಲಿ ೩೪ ತಾಮ್ರ ತಗಡುಗಳ ಮೇಲೆ ಕೆತ್ತಿದ್ದ ಚಿತ್ರಗಳಿದ್ದವು.



೯ ತಿಂಗಳಿನ ಬಸಿರ್ದುಂಬಿದ ಗರ್ಭಕೋಶದ ಅಂಗರಚನೆಯನ್ನು (೧೭೭೪) ತಯಾರ್ಮಾಡಲು ವಿಲಿಯಂ ಹಂಟರನಿಗೆ ೨೫ ವರ್ಷಗಳು ಹಿಡಿಯಿತು. ಆ ಗ್ರಂಥದ ಒಂದು ಅಂದವಾದ ಚಿತ್ರ ಇದು.

ಜಾನ್ ಹಂಟರ್

ವಿಲಿಯಂ ಹಂಟರನ ಸಾಧನೆ ಇಷ್ಟು ಉತ್ತಮವಾಗಿದ್ದರೂ, ೧೦ ವರ್ಷ ಚಿಕ್ಕವನಾಗಿದ್ದ ಇವನ ತಮ್ಮ ಜಾನ್ ಹಂಟರನ (೧೭೨೮-೧೭೯೩) ಸಾಧನೆಗಳ ಮುಂದೆ ಮೋಡಕವಿದಂತಿದ್ದವು. ಜಾನ್ ಹಂಟರ್ ತನ್ನ ಎಳೆತನದಲ್ಲಿ ಮೊಂಡನಾಗಿದ್ದುದರಿಂದ ವಿದ್ಯಾಭ್ಯಾಸ ಹತ್ತಿರಲಿಲ್ಲ. ಈ ಸ್ಥಿತಿಯಲ್ಲಿ ೨೦ ವರ್ಷ ವಯಸ್ಸಿನಲ್ಲಿ ಅಣ್ಣನ ಜೊತೆ ಕೆಲಸ ಮಾಡಲು ಲಂಡನ್ನಿಗೆ ಬಂದು ಸೇರಿದ್ದನು. ಸ್ವಲ್ಪ ದಿವಸಗಳಲ್ಲೇ ಅಂಗಚ್ಛೇದನೆಯಲ್ಲಿ ನಿಪುಣನಾಗಿ ಅಣ್ಣನಿಗಿಂತಲೂ ಹೆಚ್ಚು ಸಾಮರ್ಥ್ಯವುಳ್ಳವನಾಗಿದ್ದನು. ಹೀಗೆ ೧೧ ವರ್ಷ ಅಣ್ಣನ ಜೊತೆ ಕೆಲಸ ಮಾಡಿ ಘ್ರಾಣನರವನ್ನೂ ಮಿದುಳಿನ ೫ನೇ ನರದ ಕವಲುಗಳನ್ನೂ ಬಸಿರು ಗರ್ಭಕೋಶದ ಧಮನಿಗಳನ್ನೂ ಮೊಟ್ಟಮೊದಲಿಗೆ ಕಂಡುಹಿಡಿದಿದ್ದನು. ತನ್ನ ಸಾಧನೆಗಳಿಗೆ ಸಾಕಷ್ಟು ಪ್ರಶಸ್ತಿ ಸಿಕ್ಕದಿದ್ದುದರಿಂದ ಅಣ್ಣನಲ್ಲಿ ಮನಸ್ತಾಪವಾಗಿ ಬೇರೆಯಾದನು.

ಇದೇ ಸಮಯದಲ್ಲಿ ಜಾನ್ ಹಂಟರಿಗೆ ಕ್ಷಯ ಬಂದಿದ್ದುದರಿಂದ ಉಷ್ಣ ದೇಶದಲ್ಲಿ ವಿರಾಮ ಪಡೆಯಲು ಪೋರ್ಚುಗಲ್ಲಿಗೆ ಹೋಗಿ ಸೈನ್ಯದಳದ ವೈದ್ಯಾಧಿಕಾರಿಯಾಗಿದ್ದನು. ಆಗ ಅಣ್ಣನ ಜೊತೆ ಸೇರಿದ್ದ ವಿಲಿಯಂ ಹ್ಯೂಸನ್ (೧೭೩೯-೭೪) ರಕ್ತ ಹೆಪ್ಪುಗಟ್ಟುವಿಕೆಗೆ ರಕ್ತರಸದಲ್ಲಿರುವ ಹೆಪ್ಪುಗಟ್ಟಿಸುವ ದುಗ್ಧರಸ ಕಾರಣವೆಂದೂ, ರಕ್ತಕಣಗಳ ಜೋಡಣೆ ಕಾರಣವಲ್ಲವೆಂದೂ ತಿಳಿಸಿದ್ದನು. ರಕ್ತರಸದಲ್ಲಿನ ಈ



ಜಾನ್ ಹಂಟರ್ ತನ್ನ ವಸ್ತುಸಂಗ್ರಹಾಲಯದಲ್ಲಿ

ಪದಾರ್ಥಕ್ಕೆ ಈಗ ಫೈಬ್ರಿನೋಜನ್ (ತಂತುಕಜನಕ) ಎಂದು ಹೆಸರಾಗಿದೆ. ಜಾನ್ ಪೋರ್ಚುಗಲ್ಲಿನಿಂದ ಹಿಂತಿರುಗಿದನಂತರ ಶಸ್ತ್ರವೈದ್ಯದ ಕೆಲಸವನ್ನು ಪುನಃ ಆರಂಭಿಸಿ,

ಉಪನ್ಯಾಸ ಮಾಡತೊಡಗಿದ್ದನು. ಇವನ ವಿದ್ಯಾಭ್ಯಾಸ ಅಲ್ಪವಾಗಿದ್ದುದರಿಂದ ಅಷ್ಟು ಚೆನ್ನಾಗಿ ಉಪನ್ಯಾಸ ಮಾಡಲು ಬರುತ್ತಿರಲಿಲ್ಲ. ಆದರೂ ಜಾನ್ ಶ್ರೇಷ್ಠ ಅಧ್ಯಾಪಕನಾಗಿ, ಅನೇಕ ಶಿಷ್ಯರನ್ನು ಪಡೆದಿದ್ದನು. ಮ್ಯಾತ್ಯು ಬೇಲಿ, ಎವೆರಾರ್ಡ್ ಹೋಮ್, ಆಸ್ಟ್ಲಿಕೂಪರ್, ಜಾನ್ ಅಬೆರ್ನತಿ, ಎಡ್ವರ್ಡ್ ಜೆನ್ನರ್ ಮುಂತಾದವರೆಲ್ಲಾ ಇವನ ಶಿಷ್ಯರಾಗಿದ್ದರು. ಇವನಿಗೆ ಅಷ್ಟು ಸಂಪಾದನೆಯಿಲ್ಲದಿದ್ದರೂ ಹಣದ ಮೇಲೆ ಆಸೆ ಇರಲಿಲ್ಲ. ೧೦ ಪೌಂಡುಗಳಷ್ಟು ಹಣ ಕೈಸೇರಿದ ಕೂಡಲೇ ವಸ್ತುಗಳನ್ನು ಸಂಗ್ರಹಿಸಲು ಖರ್ಚು ಮಾಡುತ್ತಿದ್ದನು. ವಸ್ತು ಸಂಗ್ರಹದಲ್ಲಿ ಹೆಚ್ಚು ಆಸಕ್ತಿಯಿದ್ದುದರಿಂದ, ವಸ್ತು ಸಂಗ್ರಹಾಲಯಕ್ಕೇ ಒಟ್ಟು ೭೦,೦೦೦ ಪೌಂಡುಗಳಷ್ಟು ಖರ್ಚುಮಾಡಿದ್ದನೆಂದು ಹೇಳಲಾಗಿದೆ. ಇದಕ್ಕಾಗಿ ಲೆನಿಸ್ಟರ್ ಚೌಕದಲ್ಲಿ ಒಂದು ಹೊಸ ಕಟ್ಟಡ ಕಟ್ಟಿಸಿ ಅಲ್ಲಿ ವಸ್ತುಸಂಗ್ರಹಾಲಯಕ್ಕೂ, ಉಪನ್ಯಾಸ ಮಾಡುವುದಕ್ಕೂ, ವೈದ್ಯವೃತ್ತಿ ನಡೆಸುವುದಕ್ಕೂ ಸಾಕಷ್ಟು ಸ್ಥಳ ಒದಗಿಸಿಕೊಂಡನು. ಸುಮಾರು ೧೩,೬೦೦ ಮಾದರಿ ವಸ್ತುಗಳು ಅವನ ಸಂಗ್ರಹಾಲಯದಲ್ಲಿದ್ದವು. ಒಂದು ಸಣ್ಣ ಮೃಗಾಲಯವನ್ನೂ ಕೂಡ ನಿರ್ಮಿಸಿದ್ದನು. ಇದರಲ್ಲಿ ನಾನಾ ವಿಧಗಳ ಪ್ರಾಣಿಗಳಿದ್ದವು. ಸಂಗ್ರಹಿಸಿದ್ದ ವಸ್ತುಗಳಲ್ಲೆಲ್ಲಾ ಓಬ್ರಿಯಾನ್ನಿನ ಕಂಕಾಳ ಬಹು ಮುಖ್ಯವಾದ್ದು. ಜಾನ್ ಹಂಟರನ ಉದ್ದೇಶ ತಿಳಿದು, ಓಬ್ರಿಯಾನ್ ತಾನು ಸತ್ತ ಮೇಲೆ ತನ್ನ ಶವವನ್ನು ಸೀಸದ ಪೆಟ್ಟಿಗೆಯಲ್ಲಿರಿಸಿ, ಸಮುದ್ರದಲ್ಲಿ ಮುಳುಗಿಸಬೇಕೆಂದು ಹೇಳಿದ್ದರೂ, ಶವಸಂಚಾಲಕರಿಗೆ ೫೦೦ ಪೌಂಡುಗಳ ಲಂಚ ಕೊಟ್ಟು ಓಬ್ರಿಯಾನ್ನಿನ ಶವವನ್ನು ಹಂಟರ್ ಪಡೆದಿದ್ದನು.

ಹಂಟರನ ಅಂಗರಚನೆ ಹಾಗೂ ಸಸ್ಯ, ಪ್ರಾಣಿ ವಿಜ್ಞಾನಗಳಲ್ಲಿದ್ದ ಆಸಕ್ತಿಯನು ಮೆಚ್ಚಿ ೧೭೬೭ರಲ್ಲಿ ರಾಜಸಂಘದ ಸದಸ್ಯನನ್ನಾಗಿ ಆರಿಸಲಾಯಿತು. ಸ್ವಾರಸ್ಯವಾದ ಉಪನ್ಯಾಸಗಳನ್ನು ರಾಜಸಂಘದಲ್ಲಿ ಮಾಡಿದನು. ಇನ್ನೂ ಅನೇಕ ದೊಡ್ಡ ಪದವಿಗಳನ್ನೂ ಪಡೆದಿದ್ದನು. ಸತ್ತನಂತರದ ಜಠರದ ಜೀರ್ಣ ಶಕ್ತಿ, ಪ್ರಾಣಿಗಳ ಮತ್ತು ಸಸ್ಯಗಳ ಶಾಖ ಉತ್ಪಾದನೆ, ಮೀನುಗಳ ಕಿವಿಯ ಅಂಗ ಮುಂತಾದ ವಿಷಯಗಳನ್ನು ಕುರಿತು ಉಪನ್ಯಾಸ ಮಾಡಿದ್ದನು. ಆದರೂ ಲಂಡನ್ನಿಗೆ ಬಂದು ೨೦ ವರ್ಷಗಳಾದ ನಂತರ ಮಾತ್ರ ಸೆಂಟ್ ಜಾರ್ಜ್ ಆಸ್ಪತ್ರೆಯಲ್ಲಿ ಶಸ್ತ್ರವೈದ್ಯನಾಗಿ ನೇಮಕವಾದನು.

ವಿಜ್ಞಾನದಲ್ಲಿ ಹಂಟರಿಗಿದ್ದ ಆಸಕ್ತಿ ಬಹು ವಿಶಾಲವಾಗಿತ್ತು. ೧೭೬೭ರಲ್ಲಿ (ಪರಮಾ) ಗಾನೆರಿಯ ಮತ್ತು ಉಪದಂಶಗಳೆರಡೂ ಒಂದೇ ರೋಗವೋ ಅಥವಾ ಬೇರೆ ಬೇರೆಯೋ ಎಂದು ತಿಳಿಯಲು, ಗಾನೆರಿಯದಿಂದ ನರಳುತ್ತಿದ್ದವನ ಕೀವನ್ನು ತಾನೇ ಚುಚ್ಚಿಕೊಂಡು ಎರಡು ರೋಗಗಳಿಂದಲೂ ನರಳಿದನು. ರೋಗಿಗೆ ಎರಡು ರೋಗಗಳೂ ಇದ್ದಿದ್ದರಿಂದ ಹಂಟರನೂ ಎರಡರಿಂದಲೂ ನರಳಲೇಬೇಕಾಯಿತು. ಹಂಟರ್ ಉಪದಂಶದ ರತಿಹುಣ್ಣನ್ನು ತಾನು ಹೊಂದಿದ್ದ ಲಕ್ಷಣಗಳ ಆಧಾರದ ಮೇಲೆ ಕೂಲಂಕಷವಾಗಿ ವಿವರಿಸಿದ್ದನು. ಈ ಹುಣ್ಣಿಗೆ ಈಗಲೂ ಹಂಟರಿನ ರತಿ ಹುಣ್ಣು ಎಂದು ಹೆಸರಿದೆ. ಈ ಹುಣ್ಣು ಎದ್ದ ಕೆಲವು ದಿನಗಳಲ್ಲಿ ತೊಡೆಬಾವು ಹಾಗೂ ಮೈ

ಮೇಲೆ ತಾಮ್ರ ಬಣ್ಣದ ದದ್ದುಗಳು ಕಂಡುಬಂದಿದ್ದವು. ಈ ಉಪದಂಶ ತನಗೆ ಬಂದಿದೆ ಯೆಂದು, ಹಂಟರ್ ೩ ವರ್ಷ ಪಾದರಸದ ಔಷಧವನ್ನು ತೆಗೆದುಕೊಂಡಿದ್ದನು. ಈ ರೋಗದ ಪರಿಣಾಮವಾಗಿ ೧೭೭೩ರಲ್ಲಿ ಎದೆಶೂಲೆ ಬಂದು ೨೦ ವರ್ಷ ಅದೇ ರೋಗ ದಿಂದ ನರಳಿ, ೧೭೯೩ರಲ್ಲಿ ವಾದ ಮಾಡುತ್ತಿದ್ದಾಗ, ಇದ್ದಕ್ಕಿದ್ದಂತೆಯೇ ಎದೆ ಬಾಧೆ ಯಿಂದ ಪ್ರಾಣ ಬಿಟ್ಟನು.

ಹಂಟರ್ ೪ ಅತ್ಯುತ್ತಮವಾದ ಕೃತಿಗಳನ್ನು ಬರೆದಿದ್ದನು. ಅವು ಯಾವುವೆಂದರೆ, 'ಮನುಷ್ಯನ ಹಲ್ಲುಗಳ ಪ್ರಕೃತಿ ಚರಿತ್ರೆ', 'ಮೇಹ ರೋಗದ ಮೇಲಿನ ಗ್ರಂಥ', 'ಪ್ರಾಣಿಗಳ ಜೀವನ ರೀತಿಯ ಕೆಲವು ಭಾಗಗಳ ಮೇಲಿನ ಕಣ್ಣರಿಕೆ' ಹಾಗೂ 'ರಕ್ತ ದ ಉರಿತ ಮತ್ತು ಗುಂಡಿನೇಟು ಗಾಯಗಳು.' ಹಲ್ಲಿನ ರೋಗಗಳ ಪುಸ್ತಕ ಇಂಗ್ಲೀಷಿ ನಲ್ಲಿ ಬರೆದ ಮೊದಲನೆಯ ಹಲ್ಲಿನ ರೋಗದ ಪುಸ್ತಕ. ಉಪದಂಶ ಮತ್ತು ಗಾನರಿಯ ಗಳಿಗೆ ಒಂದೇ ಕಾರಣ ಎಂದು ತಿಳಿಸಿದ್ದರೂ, ಅವನ ಮೇಹರೋಗದ ಪುಸ್ತಕ ಮೆಚ್ಚು ವಂತಿತ್ತು. ಅವನ ಪುಸ್ತಕಗಳೆಲ್ಲ ಅಮೋಘವಾಗಿದ್ದುದರಿಂದ ಎಲ್ಲರ ಮನಸ್ಸನ್ನು ಸೆಳೆದಿದ್ದವು. ಅವನ ಶೋಧನೆಗಳಲ್ಲಿ ಸಂಶಯವೇನಾದರೂ ಬಂದರೆ, ಯೋಚಿಸಲು ಯತ್ನಿಸದೆ, ಪ್ರಯೋಗಗಳಿಂದ ಬಗೆಹರಿಸಲು ಪ್ರಯತ್ನಿಸುತ್ತಿದ್ದನು. ಒಂದು ಸಲ ಜನ್ನರ್‌ಗೆ ಕಾಗದ ಬರೆದು, 'ಯೋಚನೆ ಏಕೆ, ಪ್ರಯೋಗ ಮಾಡಿ ನೋಡಬಾರದೇಕೆ?' ಎಂದಿದ್ದನು. ಇವನ ಅಮೂಲ್ಯ ಸೇವೆಯನ್ನು ಜ್ಞಾಪಕದಲ್ಲಿಡಲು, ಇವನ ಹೆಸರಿನಲ್ಲಿ ಸ್ಮಾರಕ ಉಪನ್ಯಾಸಗಳು ಈಗಲೂ ಉನ್ನತ ಮಟ್ಟದಲ್ಲಿ ನಡೆದು ಬರುತ್ತಿವೆ. ಇವನ ಹಾಗೆ ಇವನ ಶಿಷ್ಯರೂ ಸಂಶೋಧನೆ ನಡೆಸುವುದರಲ್ಲಿ ಸಮರ್ಥರಾಗಿದ್ದರು.

ಹಂಟರನ ಶಿಷ್ಯರು, ಸಹೋದ್ಯೋಗಿಗಳು

ಜಾನ್ ಅಬೆರ್ನತಿ

ಜಾನ್ ಅಬೆರ್ನತಿ (೧೭೬೪-೧೮೩೧) ಸಂತ ಬಾರ್ತೊಲೊಮ್ಯು ಆಸ್ಪತ್ರೆಯ ಶಸ್ತ್ರವೈದ್ಯನಾದ ಪರ್ಸಿವಲ್ ಪಾಟ್ ಅನಂತರ ಅದೇ ಸ್ಥಾನಕ್ಕೆ ನೇಮಿತನಾಗಿದ್ದನು. ತನ್ನ ಗುರು ಹಂಟರ್‌ನ ಪದ್ಧತಿಗಳನ್ನೇ ಅನುಸರಿಸಿ ಅನೇಕ ಶಸ್ತ್ರಕ್ರಿಯೆಗಳನ್ನು ನಡೆಸಿ ದ್ದನು. ಮೊಟ್ಟಮೊದಲಿಗೆ ೧೭೯೬ರಲ್ಲಿ ಮುರಿಗರುಳಿನ ಹೊರ ಧಮನಿಯನ್ನು ಅಗಲುಬ್ಬು ಆದಾಗ ಕಟ್ಟು ಬಿಗಿದು ಸರಿಪಡಿಸಿದವನೇ ಇವನು.

ಆಸ್ಟ್ಲಿ ಕೂಪರ್

ಆಸ್ಟ್ಲಿ ಕೂಪರ್ (೧೭೬೮–೧೮೪೧) ಲಂಡನ್ನಿನ ಗೈಸ್ ಆಸ್ಪತ್ರೆಗೆ ಸೇರಿದ್ದರೂ ಹಂಟರನ ಶಿಷ್ಯನಾಗಿದ್ದನು. ಮೊದಲು ಎಡಿನ್ಬರೊದಲ್ಲಿ ಕಲಿತು ಲಂಡನ್ನಿಗೆ ಬಂದು ಹಂಟರನ ಶಿಷ್ಯನಾಗಿದ್ದನು. ಇವನಿಗೆ ಹೆಂಡತಿ ಕಡೆಯಿಂದಲೇ ಬಹಳ ಆಸ್ತಿ ಬಂದಿದ್ದ ರಿಂದ ವ್ಯಾಸಂಗ ಮಾಡುವುದರಲ್ಲೂ ಕಲಿಸುವುದರಲ್ಲೂ ಹಣವನ್ನು ಧಾರಾಳವಾಗಿ

ಬಳಸುತ್ತಿದ್ದನು. ಹೊತ್ತಾರೂಟದ ನೊದಲೇ ಆಸ್ಪತ್ರೆಗೆ ಹೋಗಿ ಅಂಗಚ್ಛೇದನೆ ಮಾಡುತ್ತಿದ್ದನೆಂದು ಹೇಳಲಾಗಿದೆ. ಹೀಗೇ ಸಾಯುವ ತನಕ ಕಷ್ಟಪಟ್ಟು ಕೆಲಸ ಮಾಡುತ್ತಿದ್ದನು. ಆಗಿನ ಕಾಲದ ನಿಯಮದ ಪ್ರಕಾರ ಶವಚ್ಛೇದನ ಪರೀಕ್ಷೆಗೆ ಶವಗಳು ಸುಲಭವಾಗಿ ಸಿಕ್ಕದಿದ್ದುದರಿಂದ ಹಣ ಖರ್ಚುಮಾಡಿ ಕಳ್ಳತನದಿಂದ ಪಡೆಯಬೇಕಾಗಿತ್ತು. ಕಳ್ಳತನದಿಂದ ಶವ ಒದಗಿಸುತ್ತಿದ್ದವರು ಶಿಕ್ಷೆಗೆ ಗುರಿಯಾದ ಪಕ್ಷದಲ್ಲಿ, ಅವರನ್ನು ಬಿಡಿಸಲು ಹಣದ ಸಹಾಯವನ್ನು ಮಾಡುತ್ತಿದ್ದನೆಂದು ತಿಳಿದು ಬಂದಿದೆ. ಹಗಲೆಲ್ಲಾ ದುಡಿದು ರಾತ್ರಿ ವೇಳೆ ಉಪನ್ಯಾಸ ಮಾಡಲೂ ರೋಗಿಗಳನ್ನು ನೋಡಲೂ ಹೋಗುತ್ತಿದ್ದನು. ಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದಾಗ ಸಹಾಯಕರಿಗೆ ತನ್ನ ಅಭಿಪ್ರಾಯಗಳನ್ನುಹೇಳಿ ಬರೆಸುತ್ತಿದ್ದನಂತೆ. ೧೮೦೮ರಲ್ಲಿ ಅಗಲುಬ್ಬಾಗಿದ್ದ ಸಾಮಾನ್ಯ ತಲೆಗೊರಳ ಧಮನಿ, ಹೊರ ಮುರಿಗರುಳ ಧಮನಿಗಳನ್ನು ಕಟ್ಟಿ ಬಿಗಿದು ಮೆಚ್ಚಿಗೆಗೆ ಪಾತ್ರನಾಗಿದ್ದನು.೧೮೧೭ರಲ್ಲಿ ಹೊಟ್ಟೆಯ ಮಹಾಧಮನಿಯನ್ನು ಕೂಡ ಪೂರ್ಣವಾಗಿ ಬಿಗಿದು ಧಮನಿಯ ಅಗಲುಬ್ಬನ್ನು ಸರಿಪಡಿಸಿದನು. ೪ ನೇ ಜಾರ್ಜ್ ದೊರೆಯ ತಲೆಯ ಮೇಲಿದ್ದ ಗಡ್ಡೆಯನ್ನು ಯಶಸ್ವಿಯಾಗಿ ಶಸ್ತ್ರಕ್ರಿಯೆ ಮಾಡಿ ತೆಗೆದು ಬ್ಯಾರನ್ ಪದವಿಯನ್ನು ಪಡೆದನು. ಅವನ ಬರವಣಿಗೆಗಳಲ್ಲಿ ಬೂರು ೧೮೦೪, ಕೀಲುಗಳ ರೋಗ ೧೮೨೨,ಮೊಲೆಯ ರೋಗ ೧೮೨೯,ತರಡು ರೋಗ ೧೮೩೦,ಓಮ (ಥೈಮಸ್) ಗ್ರಂಥಿ ರಚನೆ ೧೮೩೨, ಬಹು ಶ್ರೇಷ್ಠವಾಗಿದ್ದು ಎಲ್ಲೆಲ್ಲೂ ಬಳಕೆಯಲ್ಲಿದ್ದವು. ಕೂಪರ್ ಕಂಡು ಹಿಡಿದಿದ್ದರಿಂದ ಅವನ ಹೆಸರಿನಲ್ಲೇ ಈಗಲೂ ಬಳಕೆಯಲ್ಲಿರುವ ಕೂಪರ್ ದಡುಗಟ್ಟು ಮತ್ತು ಕೂಪರ್ ಬೂರು ಎಲ್ಲರ ಮೆಚ್ಚಿಗೆ ಪಡೆದಿದ್ದವು. ಹೀಗೆ ನಾನಾ ವಿಧದಲ್ಲಿ ವೈದ್ಯ ಶಾಸ್ತ್ರಕ್ಕೆ ಸಾಕಷ್ಟು ಕೊಡುಗೆ ನೀಡಿದ್ದನು.

ಫಿಲಿಪ್ ಸಿಂಗ್ ಫಿಸಿಕ್

ಫಿಲಿಪ್ ಸಿಂಗ್ ಫಿಸಿಕ್ (೧೭೬೮-೧೮೩೭) ಶಸ್ತ್ರವೈದ್ಯದಲ್ಲಿ ಪಾರಂಗತನಾಗಿ ಅಮೆರಿಕಾಕ್ಕೆ ತೆರಳಿ ಪೆನ್ಸಿಲ್ವೇನಿಯ ಆಸ್ಪತ್ರೆಯಲ್ಲಿ ಉತ್ತಮ ದರ್ಜೆಯ ಪ್ರಾಧ್ಯಾಪಕನಾಗಿದ್ದನು. ಅಲ್ಲಿ ಹಳದಿ ಜ್ವರ ಸಾಂಕ್ರಾಮಿಕವಾಗಿ ಹರಡಿ ಅನೇಕ ಸಾವು ನೋವು ಆಗುತ್ತಿದ್ದಾಗ ರೋಗಿಗಳಿಗೆ ಸಾಕಷ್ಟು ಸಹಾಯ ನೀಡಿದ್ದನು. ದುರದೃಷ್ಟವಶಾತ್ ರೋಗ ತನಗೇ ತಗುಲಿ ಬದುಕುವುದೇ ಕಷ್ಟವಾಗಿತ್ತು. ಹಂಟರ್‌ನ ಪ್ರಖ್ಯಾತಿಗೆ ಸಮನಾದ ಪ್ರಖ್ಯಾತಿಯನ್ನು ಅಮೆರಿಕದಲ್ಲಿ ಸಂಪಾದಿಸಿದ್ದುದರಿಂದ ಅಮೆರಿಕದ ಶಸ್ತ್ರವೈದ್ಯದ ಪಿತಾಮಹನೆಂದು ಹೆಸರು ಪಡೆದನು.

ಕೊಟುಗ್ನೊ ಮತ್ತು ಸ್ಕಾರ್ಪ

ಇದೇ ಕಾಲದಲ್ಲಿ ಇಂಗ್ಲೆಂಡಿನ ಶಸ್ತ್ರವೈದ್ಯರ ಸಮಾನವಾಗಿ ಯೂರೋಪಿನಲ್ಲೂ ಅನೇಕ ಪ್ರವೀಣರು ಮುಂದೆ ಬಂದಿದ್ದರು. ಸ್ಕಾರ್ಪನ ದಡುಗಟ್ಟು ಎಂಬ ಹೆಸರಿಗೆ ಕಾರಣನಾದ ಇಟಲಿಯ ಆನ್ಟೊನಿಯೊ ಸ್ಕಾರ್ಪ ಎಂಬುವನೂ, ಮಿದುಳು ಬೆನ್ನು

ಹುರಿಯ ದ್ರವ, ಒಳಗಿವಿಗೂಡಿನ ದ್ರವಗಳನ್ನು ಕಂಡುಹಿಡಿದ ನೇಪಲ್ಸ್ ಪಟ್ಟಣದ ಡೊಮೆನಿಕೊ ಕೊಟುಗ್ನೊ (೧೭೩೬–೧೮೨೨), ಬೊಲೋನಾದ ಆಂಟೊನಿಯೊ ವಾಲ್ಸಾಲ್ವ (೧೬೬೬-೧೭೨೩), ಜರ್ಮನಿಯ ಲೊರೆನ್ಸ್ ಹಿಸ್ಟರ್ (೧೬೮೩-೧೭೫೮) ಹಾಗೂ ಫ್ರಾನ್ಸಿನ ಸುಪ್ರಸಿದ್ಧ ಜೀನ್ ಲೂಯಿ ಪೆಟಿಟ್ (೧೬೭೪-೧೭೫೦) ಶಸ್ತ್ರವೈದ್ಯದ ಬೆಳವಣಿಗೆಗೆ ಸಾಕಷ್ಟು ಉತ್ತೇಜನ ಕೊಟ್ಟಿದ್ದರು. ಫ್ರಾನ್ಸಿನ ಪೆಟಿಟ್ ಮೊಟ್ಟಮೊದಲಿಗೆ ಚೂಚುಕಂದ ಮೂಳೆ ಶಸ್ತ್ರಕ್ರಿಯೆ ಮಾಡಿ ಕೀರ್ತಿ ಪಡೆದನು. ಪ್ಯಾರಿಸ್ಸಿಗೆ ಸೇರಿದ್ದ ಫ್ರಾನ್ಕಾಯ್ ಚೊಪಾರ್ಟ್ (೧೭೪೩–೧೭೯೫) ಅವಯವ ಛೇದನೆಗಳ ರೀತಿಯನ್ನು ಉತ್ತಮಪಡಿಸಿದ್ದನು. ಪಿಯರೆ ಜೋಸೆಫ್ ಡಿಸಾಲ್ಟ್ (೧೭೪೪-೯೫) ಮೂಳೆಮುರಿತದ ಚಿಕಿತ್ಸೆಯ ರೀತಿಯನ್ನು ಅಭಿವೃದ್ಧಿಪಡಿಸಿದ್ದನು.

೨೮. ೧೮ನೇ ಶತಮಾನದ ಪ್ರಸವ ಮತ್ತಿತರ ಶಾಸ್ತ್ರಗಳ ಬೆಳವಣಿಗೆ

ವೈದ್ಯವಿಜ್ಞಾನದ ಮೂರನೆಯ ಶಾಖೆಯಾದ ಪ್ರಸವಶಾಸ್ತ್ರವೂ ಹಳೆಯ ದಾದಿಯರ ಕೈಬಿಟ್ಟು, ಹೊಸ ರೀತಿಯ ಪ್ರವೀಣರಾದ ಸೂಲಗತ್ತರ ಆಶ್ರಯಕ್ಕೆ ಬರಲು ಪ್ರಾರಂಭವಾಗಿತ್ತು. ಅನೇಕ ವಿದ್ವಾಂಸರು ಈ ಪ್ರಸವಶಾಸ್ತ್ರಕ್ಕೆ ಜೀವ ತುಂಬಿ ಶಸ್ತ್ರವೈದ್ಯಕ್ಕೆ ಸಮಾನವಾಗುವಂತೆ ಕಳೆ ಕೊಟ್ಟರು. ಕೀರ್ತಿಶೇಷ ವಿಲಿಯಂ ಹಾರ್ವೆ ೧೬೫೧ರಲ್ಲಿ ಪ್ರಸವಶಾಸ್ತ್ರವನ್ನು ಬರೆದ ಮೊಟ್ಟಮೊದಲನೆಯ ಇಂಗ್ಲೀಷ್ ವೈದ್ಯ. ನಂತರ ಸರ್ ರಿಚರ್ಡ್ ಮ್ಯಾನಿಂಗ್‌ಹ್ಯಾಮ್ ೧೭೩೯ರಲ್ಲಿ ಹೆರಿಗೆಯ ರೋಗಿ ಕೋಣೆಗಳನ್ನು ವ್ಯವಸ್ಥೆ ಮಾಡಿದ್ದನು. ವಿಲಿಯಂ ಗಿಫರ್ಡ್ ೧೭೨೬ರಲ್ಲಿ ಗರ್ಭಕೋಶದಿಂದ ಮಗುವನ್ನು ಹೊರದೆಗೆಯಲು ಇಕ್ಕಳವನ್ನು ಉಪಯೋಗಿಸಿದನು. ಎಡ್ಮಂಡ್ ಚಾಪ್ಮನ್ ೧೭೩೩ರಲ್ಲಿ ಇಕ್ಕಳದ ಉಪಯೋಗಗಳನ್ನು ವಿವರಿಸಿದ್ದನು. ಐರ್ಲೆಂಡಿನ ಸರ ಫೀಲ್ಡಿಂಗ್ ಔಲ್ಡ್ ೧೭೧೦ರಲ್ಲೇ ಪ್ರಸವಶಾಸ್ತ್ರದ ವೈದ್ಯಶಾಲೆಯನ್ನು ಡಬ್ಲಿನ್ನಿನಲ್ಲಿ ಸ್ಥಾಪಿಸಲು ಸಹಾಯ ಮಾಡಿದ್ದನು.

ವಿಲಿಯಂ ಸ್ಮೆಲ್ಲಿ

ಬ್ರಿಟಿಷ್ ಪ್ರಸವಶಾಸ್ತ್ರಕ್ಕೆ ವಿಲಿಯಂ ಸ್ಮೆಲ್ಲಿ(೧೬೯೭-೧೭೬೩) ಅನೇಕ ರೀತಿಯಲ್ಲಿ ಅಭಿವೃದ್ಧಿ ತೋರಿಸಿದ್ದನು. ಗ್ಲಾಸ್ಗೊದಲ್ಲಿ ವ್ಯಾಸಂಗ ಮಾಡಿ, ಕೆಲ ಕಾಲ ಪ್ಯಾರಿಸ್ಸಿನಲ್ಲಿದ್ದು, ೧೭೩೯ರಲ್ಲಿ ಲಂಡನ್ನಿಗೆ ಬಂದು ಅಲ್ಲಿ ನೆಲಸಿ, ಉತ್ತಮ ಪ್ರಸವಶಾಸ್ತ್ರಜ್ಞನಾಗಿಯೂ, ಅಧ್ಯಾಪಕನಾಗಿಯೂ ಪ್ರಖ್ಯಾತಿ ಪಡೆದಿದ್ದನು. ಲಂಡನ್ನಿಗೆ ಬಂದ ೧೦ ವರ್ಷದ ಅವಧಿಯಲ್ಲೇ ೯೦೦ ವಿದ್ಯಾರ್ಥಿಗಳನ್ನು ತಯಾರಿಸಿದುದಲ್ಲದೆ, ತನ್ನ ಶಿಷ್ಯರ ಜೊತೆಯಲ್ಲಿ ೧೧೫೦ ಹೆರಿಗೆಗಳನ್ನು ನಡೆಸಿದ್ದನು. ಅವನು ಬರೆದ ಪ್ರಸವಶಾಸ್ತ್ರದ ಪುಸ್ತಕ ೧೭೫೨ರಲ್ಲಿ ಪ್ರಕಟವಾಗಿ, ಅದರಲ್ಲಿ ಹೆರಿಗೆ ವಿಧಾನ, ಹೆರಿಗೆ ಕಟ್ಟಳೆಗಳನ್ನು ವಿವರಿಸಲಾಗಿತ್ತು. ಇವನು ನಿವೃತ್ತನಾದ ಮೇಲೆ ತನ್ನ ಪುಸ್ತಕಭಂಡಾರವನ್ನು ತಾನು ಹುಟ್ಟಿ ಸತ್ತ ಲನಾರ್ಕ್ ಪಟ್ಟಣಕ್ಕೆ ದಾನ ಮಾಡಿದನು. ಇವನ ಆಸ್ತಿಯಲ್ಲಿ ಈಗ ಒಂದು ಅನಾಥಾಲಯ ನಡೆಯುತ್ತಿದೆ.

ಹೆರಿಗೆಯ ಇಕ್ಕಳವನ್ನು ಸ್ಮೆಲ್ಲಿ ಕಂಡುಹಿಡಿಯದಿದ್ದರೂ, ಉಪಯೋಗಿಸಲು ಅವನೇ ಮೊದಲನೆಯವನು. ಇಕ್ಕಳವನ್ನು ಸಾಧ್ಯವಾದಷ್ಟೂ ಕಡಿಮೆ ಉಪಯೋಗಿಸಬೇಕೆಂದೂ ತಿಳಿಸಿದ್ದನು. ಇಕ್ಕಳದ ಬಳಕೆ ಗರ್ಭಿಣಿಯರಿಗೆ ಇಷ್ಟವಿಲ್ಲದ್ದರಿಂದ ಮೊದಮೊದಲು ಅವರಿಗೆ ಗೊತ್ತಾಗದ ರೀತಿಯಲ್ಲಿ ಶಬ್ದ ಮಾಡದ ಮರದ ಇಕ್ಕಳಗಳನ್ನು ಉಪಯೋಗಿ

ಸುತ್ತಿದ್ದನು. ಇಕ್ಕಳದ ಆಕಾರ, ಅಂದಚಂದಗಳನ್ನು ಸ್ಮೃಲ್ಲಿ ವಿವರಿಸಿ ಸ್ಥಿರ ಪಡಿಸಿದ್ದನು. ನಿಜವಾಗಿಯೂ ಇಕ್ಕಳವನ್ನು ಕಂಡುಹಿಡಿದವನು ಹಿರಿಯ ಪೀಟರ್ ಚೆಂಬರ್ಲೀನ್ (೧೫೬೦–೧೬೩೧). ಆದರೆ ಈ ವಿಷಯವನ್ನು ೧೨೦ ವರ್ಷಗಳ ಕಾಲ ಚೆಂಬರ್ಲೀನ್ ಮನೆತನದವರು ಗೋಪ್ಯವಾಗಿಟ್ಟಿದ್ದರು. ಚೆಂಬರ್ಲೀನ್ ಮನೆತನದವ ರಲ್ಲಿ ೭ ಮಂದಿ ವೈದ್ಯರಿದ್ದರೂ ಇಕ್ಕಳದ ರಹಸ್ಯವನ್ನು ಒಬ್ಬನೂ ಬಿಟ್ಟಿರಲಿಲ್ಲ. ಇವನ ನಂತರ ಬಂದ ಅನೇಕ ಪ್ರಸವಶಾಸ್ತ್ರಜ್ಞರು ಇಕ್ಕಳಗಳ ಆಕಾರ, ಕೀಲು, ಬಾಗು ಗಳನ್ನು ಉತ್ತಮಪಡಿಸಿ ಅವುಗಳ ಉಪಯೋಗಗಳನ್ನೂ, ಬಳಕೆಯ ಸಂದರ್ಭಗಳನ್ನೂ ವಿವರಿಸಿದ್ದರು.

ಶರೀರಶಾಸ್ತ್ರ, ರಸಾಯನಶಾಸ್ತ್ರಗಳ ಸಂಶೋಧನೆಗಳು

ಸ್ಟೀಫನ್ ಹೇಲ್ಸ್

ಬಾಯಿಲ್, ಲೋವರ್, ಮೆಯಾಗಳಂತಹ ಶರೀರಶಾಸ್ತ್ರಜ್ಞರು ೧೮ನೇ ಶತ ಮಾನದ ಇಂಗ್ಲೆಂಡಿನಲ್ಲಿಲ್ಲದಿದ್ದರೂ, ರಾಜಸಂಸ್ಥೆ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾ ಲಯ ಸಾಕಷ್ಟು ಉತ್ತೇಜನವನ್ನು ಶರೀರಶಾಸ್ತ್ರಕ್ಕೆ ಕೊಟ್ಟಿದ್ದವು. ಟೆಡಿಂಗ್ಟನ್ ಪಟ್ಟಣದ ರೆವೆರೆಂಡ್ ಸ್ಟೀಫನ್ ಹೇಲ್ಸ್ (೧೬೭೭–೧೭೬೧) ಕ್ರಿಸ್ಟಿ ವಿದ್ಯಾಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗಲೇ ರಸಾಯನ ಶಾಸ್ತ್ರ, ಜೀವಶಾಸ್ತ್ರ, ಜ್ಯೋತಿಷ್ಯ ಮುಂತಾದವುಗಳಲ್ಲಿ ಆಸಕ್ತಿ ತೋರಿಸಿದ್ದನು. ಆಗ ಸ್ನೇಹಿತನಾಗಿದ್ದ ಒಬ್ಬ ವೈದ್ಯ ವಿದ್ಯಾರ್ಥಿಗೆ ಶವಚ್ಛೇದನೆ ಹಾಗೂ ಶರೀರಶಾಸ್ತ್ರದ ಪ್ರಯೋಗಗಳಲ್ಲಿ ಸಹಾಯ ಮಾಡುತ್ತಿದ್ದುದಲ್ಲದೆ, ನಾವಿಕರ ದೇಹಾರೋಗ್ಯದಲ್ಲೂ, ಬಂದೀಖಾನೆಗಳ ಗಾಳಿ ಸಂಚಾರದಲ್ಲೂ, ಆ ಕಾಲದಲ್ಲಿ ರೂಢಿಯಲ್ಲಿದ್ದ ಕುಡಿತವನ್ನು ತಪ್ಪಿಸುವುದರಲ್ಲೂ ಶ್ರಮ ವಹಿಸಿ ಕೆಲಸ ಮಾಡಿ ಸಾಕಷ್ಟು ಪರಿಹಾರ ತಂದಿದ್ದನು.

ಅವನು ನಡೆಸಿದ ಶರೀರಶಾಸ್ತ್ರದ ಪ್ರಯೋಗಗಳಲ್ಲಿ ರಕ್ತಚಲನೆ ಪ್ರಯೋಗವೇ ಅತಿ ಮುಖ್ಯವಾಗಿತ್ತು. ೧೭೧೧ ರಲ್ಲಿ ಕುದುರೆಯ ಕಾಲಿನ ಧಮನಿಯೊಂದಕ್ಕೆ ತೂರ್ನಳಿಕೆ ತೂರಿಸಿ ನಾಳದಲ್ಲಿ ರಕ್ತದೇರುವಿಕೆಯನ್ನು (ರಕ್ತದ ಒತ್ತಡ) ಮೊಟ್ಟ ಮೊದಲಿಗೆ ಅಳೆದನು. ಈ ಪ್ರಯೋಗದಲ್ಲಿ ಎಡ ಹೃದಯದ ಮೇಲೆ ೮ ಅಡಿ ೩ ಅಂಗುಲ ಎತ್ತರದ ಗಾಜಿನ ನಾಳದಲ್ಲಿ ರಕ್ತವೇರಿದ್ದುದನ್ನು ತೋರಿಸಿದ್ದನು. ಪ್ರಾಣಿಯ ಗಾತ್ರದ ಮೇಲೆ ರಕ್ತದ ಒತ್ತಡ ಆಧಾರವಾಗಿರುವುದೆಂದೂ, ಗಾತ್ರ ಹೆಚ್ಚಿ ದಂತೆಲ್ಲಾ ರಕ್ತದ ಒತ್ತಡ ಹೆಚ್ಚಿರುತ್ತದೆಂದೂ, ಕಡಿಮೆಯಾದಂತೆಲ್ಲಾ ಕಡಿಮೆಯಿರು ತ್ತದೆಂದೂ ಹೇಳಿದ್ದನು. ಹಾಗೂ ಸಣ್ಣ ಪ್ರಾಣಿಗಳಲ್ಲಿ ನಾಡಿ ಬಡಿತ ಹೆಚ್ಚಿರುತ್ತ ದೆಂದೂ, ದಪ್ಪ ಪ್ರಾಣಿಗಳಲ್ಲಿ ತಗ್ಗಿರುತ್ತದೆಂದೂ ತಿಳಿಸಿದನು. ನಿಮಿಷ ಒಂದಕ್ಕೆ ಹೃದಯದಿಂದ ಹರಿದ ರಕ್ತವನ್ನು ಗೊತ್ತುಮಾಡಿ, ಕರಗಿದ ಮೇಣವನ್ನು ತುಂಬಿ ಎಡ

ಹೃತ್ಕುಕ್ಷಿಯ ಅಳವನ್ನು ಕಂಡುಹಿಡಿದಿದ್ದನು. ಪ್ರಾಣಿಯ ಗಾತ್ರಕ್ಕೆ ಸಮನಾದ ರಕ್ತವನ್ನು ಎಡಹೃತ್ಕುಕ್ಷಿ ಹೊರಸಾಗಿಸುತ್ತದೆಂದೂ, ಗೊತ್ತುಮಾಡಿದ್ದನು. ರಕ್ತಚಲನೆಗೆ ಅಡ್ಡ ತರುವ ಧಮನಿಗಳ ತಡೆತವನ್ನೂ, ಬಿಸಿ ನೀರನ್ನು ರಕ್ತನಾಳಕ್ಕೆ ಹಾಯಿಸಿದಾಗ ರಕ್ತ ನಾಳಗಳು ಹಿಗ್ಗುವುದನ್ನೂ, ತಣ್ಣೀರು, ಕ್ವಿನೀನುಗಳು ಕಿರಿದಾಗಿಸುವುದನ್ನೂ ಕಂಡು ಹಿಡಿದಿದ್ದನು. ಈ ಉತ್ತಮ ದರ್ಜೆಯ ಪ್ರಯೋಗಗಳನ್ನು ಮೆಚ್ಚಿ, ಭಾಷಣ ಮಾಡ ದಿದ್ದರೂ, ಸ್ಟೀಫನ್ ಹೇಲ್ಸ್‌ನನ್ನು ರಾಜ ಸಂಸ್ಥೆಯ ಫೆಲೊ ಆಗಿ ೧೭೧೮ರಲ್ಲಿ ಆರಿಸಿತು. ಸಸ್ಯ ವಿಜ್ಞಾನದಲ್ಲೂ ಶ್ರೇಷ್ಠ ಪ್ರಯೋಗಗಳನ್ನು ನಡೆಸಿ 'ವಿಜ್ಞಾನದ ಇತಿಹಾಸದಲ್ಲೇ ನಾವು ಕಾಣುವ ಮೊದಾಮೊದಲ ಸಾಚಾ ಸಸ್ಯ ಅಂಗಕ್ರಿಯಾ ಶಾಸ್ತ್ರಜ್ಞ' ಎಂದು ಹಾರ್ವೆ ಗಿಬ್ಬನ್ ನುಡಿದನು.

ಇವನು ಬರೆದ ಒಂದು ಗ್ರಂಥದಲ್ಲಿನ ರಕ್ತದ ಒತ್ತಡದ ವಿಷಯ ಮೊಟ್ಟಮೊದ ಲನೆಯದು. ಇವನ ಲೇಖನಗಳೆಲ್ಲಾ ಜರ್ಮನ್, ಡಚ್, ಇಟಾಲಿಯನ್ ಭಾಷೆಗಳಿಗೆ ಭಾಷಾಂತರವಾದವು. ಸ್ಟೀಫನ್ ಹೇಲ್ಸ್ ನಡೆಸಿದ್ದ ಗಾಳಿ ಸಂಚಾರದ ಪ್ರಯೋಗಗಳ ಲ್ಲದೆ, ಗಾಳಿಯ ಇತರ ಗುಣಗಳನ್ನು ಜೊಸೆಫ್ ಬ್ಲ್ಯಾಕ್, ಹೆನ್ರಿ ಕೆವೆಂಡಿಷ್, ಜೊಸೆಫ್ ಪ್ರೀಸ್ಟ್ಲಿ ಮತ್ತು ಆಂಟಾಯಿನ್ ಲವಾಸಿಯರ್ ಮುಂತಾದ ರಸಾಯನ ಶಾಸ್ತ್ರಜ್ಞರು ಮುಂದುವರಿಸಿದ್ದರು.

ಪ್ರೀಸ್ಟ್ಲಿ ಮತ್ತು ಲವಾಸಿಯರ್

ಪ್ರೀಸ್ಟ್ಲಿ ೧೭೭೪ರಲ್ಲಿ ಉರಿಯಲು ಅನುಕೂಲಮಾಡುವ ಒಂದು ವಿಧದ ಗಾಳಿ ಯನ್ನೂ ಕಂಡುಹಿಡಿದ ಪ್ರಯೋಗ ಅತಿ ಶ್ರೇಷ್ಠವಾಗಿತ್ತು. 'ಈ ಗಾಳಿಯಲ್ಲಿ ಅಪೂರ್ವ ಬಲದ ಜ್ವಾಲೆಯೊಂದಿಗೆ ಮೋಂಬತ್ತಿ ಉರಿಯಿತು' ಎಂದನು. ನಂತರ ಆಂಟಾಯಿನ್ ಲವಾಸಿಯರ್ (೧೭೪೩–೧೭೯೪) ಪ್ರೀಸ್ಟ್ಲಿ ಕಂಡುಹಿಡಿದಿದ್ದ ಗಾಳಿಗೆ ಆಮ್ಲಜನಕ ವೆಂದು ಹೆಸರಿಟ್ಟು, ಆಮ್ಲಜನಕವನ್ನು ಕಂಡುಹಿಡಿದ ಖ್ಯಾತಿ ಪ್ರೀಸ್ಟ್ಲಿಗೆ ಸೇರಬೇಕೆಂದು ಹೇಳಿದನು. ಇದಕ್ಕಿಂತಲೂ ಮುಖ್ಯವಾಗಿ ಆಮ್ಲಜನಕ ಮನುಷ್ಯನ ಉಸಿರಾಟದಲ್ಲಿ ಅತಿ ಮುಖ್ಯ ಪಾತ್ರವಹಿಸುತ್ತದೆಂದು ತಿಳಿಸಿದ್ದನು. ಶ್ವಾಸಕೋಶಕ್ಕೆ ಹೋದ ಗಾಳಿ ಯಿಂದ ಆಮ್ಲಜನಕ ಉಪಯೋಗಿಸಲ್ಪಟ್ಟು, ಹೊರಬಿಟ್ಟ ಗಾಳಿಯಲ್ಲಿ ಇಂಗಾಲಾಮ್ಲ ಸೇರುವುದನ್ನು ತೋರಿಸಿದನು. ಈ ಶೋಧನೆಯನ್ನು ತಾನು ೧೭೭೭ರಲ್ಲಿ ಬರೆದ 'ಎಕ್ಸ್‌ಪೀರಿಯನ್ಸಸ್ ಸುರ್ ಲಾ ವೆಸ್ಟಿವೇಷನ್ ಡೆಸ್ ಅನಿಮನ್' ಎಂಬ ಲೇಖನದಲ್ಲಿ ವಿವರಿಸಿದನು. ಇವನ ಈ ಉಸಿರಾಟದ ತಿಳಿವಳಿಕೆ ಹಾರ್ವೆಯ ರಕ್ತಚಲನೆಗೆ ಸಮಾನವಾಗಿತ್ತು. ಹಾಗಾದರೂ, ಈ ತಿಳಿವಳಿಕೆ ಆಗಿನ ಫ್ರೆಂಚ್ ಕ್ರಾಂತಿಕಾರರಿಗೆ ಸರಿಬೀಳದೆ ಲವಾಸಿಯರ್‌ನನ್ನು ಗಲ್ಲಿಗೇರಿಸಿದರು. 'ಅವನ ತಲೆಯನ್ನು ಹಾರಿಸಲು ಕ್ಷಣಕಾಲ ಸಾಕು. ಆದರೆ ಅಂತಹದೇ ಇನ್ನೊಂದನ್ನು ಹುಟ್ಟಿಸಬೇಕಾದರೆ ನೂರು ವರುಷಗಳೂ ಸಾಲವು' ಎಂದು ಲವಾಸಿಯರನ ಸ್ನೇಹಿತ ಲಾಗ್ರಂಜೆ ಬರೆದಿರುವನು.

ರೂಮುರ್

೧೮ನೇ ಶತಮಾನದಲ್ಲಿ ಉಸಿರಾಟದ ತಿಳಿವಳಿಕೆ ಅಲ್ಲದೆ ಆಹಾರ ಅರಗುವ ಕ್ರಮದಲ್ಲೂ ತಿಳಿವಳಿಕೆ ಉಂಟಾಗಿತ್ತು. ಜಠರದಲ್ಲಿನ ಜೀರ್ಣ ಕ್ರಮವನ್ನು ರೂಮುರ್‌ನೇ (೧೬೮೩-೧೭೫೭) ಬೆಳಕಿಗೆ ತಂದಿದ್ದವನು. ರೂಮುರ್ ರೊಷೇಲ್‌ನಲ್ಲಿ ಜನಿಸಿ, ನ್ಯಾಯಶಾಸ್ತ್ರದಲ್ಲಿ ವ್ಯಾಸಂಗ ಮಾಡಿದ್ದರೂ, ವಿಜ್ಞಾನದಲ್ಲಿ ಪ್ರಯೋಗ ನಡೆಸುತ್ತಿದ್ದನು. ೧೭೦೮ರಲ್ಲಿ ವಿಜ್ಞಾನ ಸಂಸ್ಥೆಯ ಸದಸ್ಯನಾಗಿ ಅನೇಕ ಭಾಷಣಗಳನ್ನು ಮಾಡಿದ್ದನು. ತನ್ನ ಹೆಸರಿನಲ್ಲಿರುವ ಶಾಖಮಾಪಕವನ್ನು ಕಂಡುಹಿಡಿದಿದ್ದನು. ತಿಂದು ಅರಗದಿದ್ದ ಆಹಾರವನ್ನು ಉಗುಳುವ ರೂಢಿ ಹೊಂದಿರುವ ಹದ್ದಿನ ಜೀರ್ಣಕ್ರಮವನ್ನು ಪರಿಶೀಲಿಸಿದ್ದನು. ಲೋಹದ ಸಣ್ಣ ಕೊಳವೆಗಳೊಳಗೆ ಆಹಾರವಿಟ್ಟು ಹದ್ದಿಗೆ ಉಣ್ಣಿಸಿ ಅನಂತರ ಉಗುಳಿದ ಕೊಳವೆಗಳನ್ನು ಪರೀಕ್ಷಿಸಿದಾಗ ಆಹಾರ ಕೊಳೆಯದೆ ಅರಗಿರುವ ಸ್ಥಿತಿಯನ್ನು ಕಂಡಿದ್ದನು. ನಾಯಿಗಳಲ್ಲೂ ಇದೇ ರೀತಿಯಲ್ಲಿ ಪ್ರಯೋಗ ನಡೆಸಿದನು. ಜಠರದಲ್ಲಿರುವ ಜಠರ ರಸ ಆಹಾರವನ್ನು ಜೀರ್ಣಿಸುವ ಶಕ್ತಿಯನ್ನು ಹೊಂದಿದೆ ಎಂದು ಪ್ರಪಂಚದ ಮುಂದಿಟ್ಟನು.

ಸ್ಪಲ್ಲಾನ್ಸಾನಿ

ಈ ಪ್ರಯೋಗಗಳನ್ನೇ ಆಧಾರವಾಗಿಟ್ಟುಕೊಂಡು ಸ್ಪಲ್ಲಾನ್ಸಾನಿ (೧೭೨೯-೧೭೯೯) ಬೊಲೋನದಲ್ಲಿ ನ್ಯಾಯಶಾಸ್ತ್ರ ಕಲಿತಿದ್ದರೂ ವಿಜ್ಞಾನಗಳಲ್ಲಿ ಆಸಕ್ತಿ ಹೊಂದಿದ್ದನು. ಮೊಡೆನ ಮತ್ತು ಪಾವಿಯಗಳಲ್ಲಿ ಪ್ರಕೃತಿ ಚರಿತ್ರೆಯ ಪ್ರಾಧ್ಯಾಪಕನಾಗಿದ್ದಾಗ ಪಕ್ಷಿ, ಪ್ರಾಣಿಗಳಲ್ಲೂ ಪ್ರಯೋಗ ನಡೆಸಿದ್ದಲ್ಲದೆ ತನ್ನ ಮೇಲೂ ಪ್ರಯೋಗ ನಡೆಸಿ ಜೀರ್ಣಕ್ರಮವನ್ನು ಪರಿಶೀಲಿಸಿದ್ದನು. ನಾರು ಬಟ್ಟೆಯ ಸಣ್ಣ ಚೀಲಗಳಲ್ಲಿ ಆಹಾರವನ್ನು ತುಂಬಿ, ತಾನೇ ನುಂಗಿ, ಮಲದಿಂದ ಹೊರಗೆ ಬಂದ ಚೀಲಗಳನ್ನು ಪರೀಕ್ಷಿಸಿ ಆಹಾರ ಜೀರ್ಣವಾಗಿರುವುದನ್ನು ತಿಳಿಸಿದ್ದನು. ನುಂಗಿದ್ದ ಸ್ಪಂಜಿನಿಂದ ಬಂದ ಜಠರ ರಸವನ್ನು ಪ್ರಯೋಗಕ್ಕೊಳಪಡಿಸಿ ಜೀರ್ಣ ಕ್ರಮವನ್ನು ವಿವರಿಸಿದ್ದನು. ಹೀಗೆ ಹುಳಿಯಾಗದ, ಕೊಳೆಯದ ಜೀರ್ಣ ಕ್ರಮವನ್ನು ವಿಜ್ಞಾನ ಪ್ರಪಂಚದ ಮುಂದಿಟ್ಟದ್ದನು. ಉಸಿರಾಟದಿಂದಾಗುವ ಬದಲಾವಣೆಗಳನ್ನೂ ಪರಿಶೀಲಿಸಿ ಊತಕಗಳಲ್ಲೂ ಉಸಿರಾಟ ನಡೆಯುತ್ತದೆಂದೂ, ಆಮ್ಲಜನಕವನ್ನು ಊತಕ ಉಪಯೋಗಿಸಿಕೊಂಡು, ಇಂಗಾಲಾಮ್ಲವನ್ನು ಬಿಡುತ್ತದೆಂದೂ ತಿಳಿಸಿದನು. ಸೂಕ್ಷ್ಮದರ್ಶಕವನ್ನು ಉಪಯೋಗಿಸುವುದರಲ್ಲಿ ಬಹಳ ಚತುರನಾಗಿದ್ದನೆಂದು ಹೇಳಲಾಗಿದೆ. ಅಷ್ಟೇ ಅಲ್ಲದೆ, ಗರ್ಭಾದಾನ ಕ್ರಮವನ್ನೂ ಪರಿಶೀಲಿಸಿದ್ದನು. ಗಂಡುಗಪ್ಪೆಯ ಬೀಜಾಣುವನ್ನು ಹೆಣ್ಣುಗಪ್ಪೆಗೆ ಹಾಕಿ ಮರಿ ಮಾಡಿಸಿದ್ದನು. ಇದೇ ರೀತಿ ಹೆಣ್ಣು ನಾಯಿಯ ಗರ್ಭಕೋಶದೊಳಕ್ಕೆ ಗಂಡು ನಾಯಿಯ ಬೀಜಾಣುವನ್ನು ಹಾಕಿ, ಗರ್ಭವನ್ನು ಮೂಡಿಸಿ, ಪ್ರತಿಫಲವನ್ನು ಪಡೆದಿದ್ದನು.

೨೯. ಅನ್ವಯಿತ ರೋಗಶಾಸ್ತ್ರ

ಬಿಚಟ್

೧೮ನೇ ಶತಮಾನದಲ್ಲಿ ವೈದ್ಯಶಾಸ್ತ್ರ, ಶಸ್ತ್ರವೈದ್ಯಗಳಲ್ಲಿ ಪ್ರವೀಣರಿದ್ದುದಲ್ಲದೆ ರೋಗದ ಅಂಗಗಳ ರಚನೆಯಲ್ಲೂ, ರೋಗ ನಿದಾನದಲ್ಲೂ ವಿದ್ಯಾವಂತರಿದ್ದು ವೈದ್ಯ ವಿಜ್ಞಾನಕ್ಕೆ ಸಾಕಷ್ಟು ಸಹಾಯ ನೀಡಿದ್ದರು. ಅಡಿಪಾಯವನ್ನು ಹಾಕಿ ಶ್ರಮಪಟ್ಟು ಕೆಲಸ ಮಾಡಿದ ಗಿಯೊವಿನಿ ಬ್ಯಾಟಿಸ್ಟ ಮಾರ್ಗ್ಯಾಗ್ನಿಯೇ (೧೬೮೨–೧೭೭೧) ಇವರಲ್ಲಿ ಮುಖ್ಯನಾಗಿದ್ದವನು. ಇವನು ಮಾಡಿರುವ ಸೇವೆಯನ್ನು ಹಿಂದೆಯೇ ತಿಳಿಸಿದೆ. ಇದೇ ಶತಮಾನದ ಕೊನೆಯ ವರ್ಷಗಳಲ್ಲಿ ಮೇರಿ ಫ್ರಾಂಕಾಯ್ ಝ್ಯುವಿಯರ್ ಬಿಚಟ್ (೧೭೭೧–೧೮೦೨) ಊತಕಶಾಸ್ತ್ರದ ಅಡಿಪಾಯ ಹಾಕಿದ್ದನು. ಇದರಲ್ಲಿ ಜೀವ ಕಣ, ನರ, ಮೂಳೆ, ಸ್ನಾಯು, ಮತ್ತಿತರ ಊತಕಗಳಲ್ಲಿ ರೋಗದಿಂದಾಗುವ ಬದಲಾವಣೆ ಸೇರಿದ್ದವು. ರೋಗದ ಬದಲಾವಣೆಗಳು ಅಂಗಗಳಲ್ಲಿ ಊತಕಗಳಲ್ಲಿರುತ್ತವೆಂದು ಬಿಚಟ್ ಅಭಿಪ್ರಾಯಪಟ್ಟಿದ್ದನು. ಈ ಅಭಿಪ್ರಾಯಗಳೇ ವರ್ಕೌ ಸರಿಪಡಿಸುವ ತನಕ ಜಾರಿಯಲ್ಲಿದ್ದವು. ವರ್ಕೌ ಪ್ರಕಾರ ಅಂಗಗಳ ಹಾಗೂ ಊತಕಗಳ ಜೀವಕಣಗಳಲ್ಲಿ ರೋಗದ ಬದಲಾವಣೆಗಳಿರುತ್ತವೆಂದು ಗೊತ್ತಾಗಿತ್ತು.

ಮ್ಯಾತ್ಯು ಬೇಲಿ

ಹಂಟರನ ಸೋದರಳಿಯ ಹಾಗೂ ಗ್ಲಾಸ್ಗೊ ಪಟ್ಟಣದ ದೇವತಾಶಾಸ್ತ್ರದ ಪ್ರಾಧ್ಯಾಪಕನ ಮಗ ಮ್ಯಾತ್ಯು ಬೇಲಿ (೧೭೬೧–೧೮೨೩) ಪ್ರಖ್ಯಾತಿಯಾದ ಮತ್ತೊಬ್ಬ ರೋಗಶಾಸ್ತ್ರಜ್ಞನಾಗಿದ್ದನು. ಇವನು ೨೦ ವರ್ಷ ಅಂಗರಚನೆಶಾಸ್ತ್ರವನ್ನು ಕಲಿತು, ವೈದ್ಯವೃತ್ತಿಯಿಂದ ಹೆಚ್ಚು ಹಣ ಸಂಪಾದಿಸುತ್ತಿದ್ದನು. ೩ನೇ ಜಾರ್ಜ್ ದೊರೆಯ ಮತ್ತು ಸೆಂಟ್ ಜಾರ್ಜ್ ಆಸ್ಪತ್ರೆಯ ವೈದ್ಯ ಆಗಿದ್ದನು. ೧೭೯೩ ರಲ್ಲಿ ಪ್ರಕಟವಾದ ಇವನ ರೋಗದಂಗರಚನೆಶಾಸ್ತ್ರ ವೈದ್ಯಶಾಸ್ತ್ರದ ಬೆಳವಣಿಗೆಗೆ ಅತಿ



ಮ್ಯಾತ್ಯು ಬೇಲಿ ಗ್ರಂಥದಲ್ಲಿ ಶ್ವಾಸಕೋಶದ ಗಾಳಿಯುಬ್ಬಟೆ ಹಾಗೂ ಎಲುಬೀಕರಣ ಚಿತ್ರ

ಮುಖ್ಯವಾದ ಕೊಡುಗೆಯಾಗಿತ್ತು. ಇದರಲ್ಲಿ ಡಾ. ಸ್ಯಾಮ್ಯುಯಲ್ ಜಾನ್ಸನ್ ಮತ್ತಿತರ ಮಹನೀಯರ ಮೃತದೇಹಗಳ ಪರೀಕ್ಷೆ ನಡೆಸಿದ್ದರಿಂದ ಕಂಡ ರೋಗದಿಂದ ಬದಲಾವಣೆಯಾದ ಅಂಗಗಳ ಚಿತ್ರಗಳು ಅನೇಕವಿದ್ದವು. ಗಾಳಿಯುಬ್ಬಟೆಯನ್ನು ತೋರಿಸುತ್ತಿದ್ದ ಡಾ. ಜಾನ್ಸನ್ನನ ಶ್ವಾಸಕೋಶದ ಚಿತ್ರವೂ ಇವುಗಳಲ್ಲೊಂದು.

ಸಿಡುಬು, ದೇವಿಹಾಕಣೆ, ಸಾಂಕ್ರಾಮಿಕ ರೋಗಗಳ ಹತೋಟಿ

೧೮ನೇ ಶತಮಾನದಲ್ಲಿ ಪ್ಲೇಗು ಮುಂತಾದ ಸಾಂಕ್ರಾಮಿಕ ರೋಗಗಳು ಹರಡುತ್ತಿದ್ದುದರಿಂದ ರೋಗವನ್ನು ತಡೆಯಲು ಬಂದರುಗಳಲ್ಲಿ ತಕ್ಕ ಕ್ರಮಗಳನ್ನು ಅನುಸರಿಸಬೇಕಾಗಿತ್ತು. ರಷ್ಯಾದ ೧೭೭೯ರ ಪ್ಲೇಗಿನಲ್ಲಿ ೧೫೦,೦೦೦ ಜನ ಸತ್ತರು. ೧೭೭೯ ರಲ್ಲಿ ಮಧ್ಯ ಯೂರೋಪಿಗೆ ಹರಡಿ, ವರ್ಸೈಲ್ಸ್ ಮತ್ತು ಟೌಲಾನ್ ಪಟ್ಟಣಗಳಲ್ಲಿ ೧೭೨೦ರಲ್ಲಿ ಸುಮಾರು ೯೦,೦೦೦ ಜನರು ಸತ್ತರು. ಆಗ ರೂಢಿಯಲ್ಲಿದ್ದ ಸಂಪರ್ಕ ನಿಷೇಧ ಅಷ್ಟು ಉತ್ತಮವಾಗಿದ್ದಲ್ಲದಿದ್ದರೂ ಫ್ರಾನ್ಸಿನಲ್ಲಿ ತಕ್ಕ ಮಟ್ಟಿಗೆ ರೋಗದ ಹರಡುವಿಕೆಯನ್ನು ತಡೆದಿತ್ತು. ಸಿಡುಬು ಕೂಡ ಆಗ ಆಗಾಗ್ಗೆ ಎಲ್ಲೆಲ್ಲೂ ಹರಡಿ ಬಹಳ ಹಾನಿಯನ್ನು ಉಂಟುಮಾಡುತ್ತಿತ್ತು. ಸಿಡುಬು ತಲೆದೋರಿದಾಗ ಕೆಲವು ವೇಳೆ ಅತಿ ತೀವ್ರವಾಗಿರುತ್ತಿತ್ತು. ಕೆಲವು ವೇಳೆ ಸಾಧಾರಣವಾಗಿರುತ್ತಿತ್ತು. ಇನ್ನೂ ಕೆಲವು ವೇಳೆ ಸಾಧುವಾಗಿರುತ್ತಿತ್ತು. ಸಾಧುವಾಗಿ ನರಳಿದ್ದವರಲ್ಲಿ ತೀವ್ರ ರೋಗಬರುತ್ತಿರಲಿಲ್ಲ.

ಸಿಡುಬನ್ನು ತಡೆಗಟ್ಟಲು ದೇವಿ ಹಾಕಿಸುವ ಪದ್ಧತಿ ಹಿಂದೂ ದೇಶದಲ್ಲಿ ಬಹಳ ಹಿಂದಿನಿಂದಲೂ ರೂಢಿಯಲ್ಲಿತ್ತು. ದೇವಿ ಹಾಕಣೆ ಅಥರ್ವ ವೇದದಲ್ಲಿಯೂ ಕೂಡ (ಕ್ರಿ.ಪೂ.೧೦೦೦) ತಿಳಿಸಲಾಗಿದೆ. ಚೀನಾ ದೇಶದಲ್ಲೂ ರೂಢಿಯಲ್ಲಿತ್ತು. ಅಲ್ಲಿ ಸಿಡುಬುರೋಗದ ಹೊಪ್ಪಳೆಯ ಹೊಕ್ಕಿನ ಪುಡಿಯನ್ನು ಮೂಗಿಗೇರಿಸುವ ರೂಢಿ ಇತ್ತು. ಇಂಗ್ಲೆಂಡಿನಲ್ಲಿ ಹೊಪ್ಪಳೆಯ ರಸದಲ್ಲಿ ಅದ್ದಿದ ದಾರವನ್ನು ಚರ್ಮದಲ್ಲಿ ಗೀರಿದ ಗಾಯದ ಮೂಲಕ ಹಾಯಿಸುವ ರೂಢಿ ಇತ್ತು. ಈ ಪದ್ಧತಿಗಳಿಂದ ರೋಗ ಸಾಧುತರವಾಗಿ ಬಂದು ತೀವ್ರ ರೀತಿಯಲ್ಲಿ ಬರುವುದನ್ನು ಕಡಿಮೆ ಮಾಡುತ್ತಿತ್ತು. ಈ ಪದ್ಧತಿಯನ್ನು ಅನೇಕ ವೈದ್ಯರು ರೂಢಿ ಮಾಡಿ, ಸಾಂಕ್ರಾಮಿಕ ಆಸ್ಪತ್ರೆಗಳನ್ನೂ ದೇವಿ ಹಾಕುವ ಮನೆಗಳನ್ನೂ ಸ್ಥಾಪಿಸಿದರು.

ಥಾಮಸ್ ಡಿಮ್ಸ್‌ಡೇಲ್

ದೇವಿ ಹಾಕುತ್ತಿದ್ದವರಲ್ಲಿ ಪ್ರಸಿದ್ಧಿಯಾಗಿದ್ದ ಥಾಮಸ್ ಡಿಮ್ಸ್‌ಡೇಲ್ (೧೭೧೨ -೧೮೦೦) ಒಬ್ಬ ಸಾಧಾರಣ ಸಕಲಿ ವೈದ್ಯ. ಆದರೂ ಇವನ ಕೀರ್ತಿ ರಷ್ಯಾ ದೇಶಕ್ಕೆ ಹಬ್ಬಿ ಕ್ಯಾತರೀನ್ ರಾಣಿ ಇವನನ್ನು ಬರಮಾಡಿಕೊಂಡು ತಾನು ಮತ್ತು ತನ್ನ ಮಗ್ಗ

ದೇವಿ ಹಾಕಿಸಿಕೊಂಡಿದ್ದಲ್ಲದೆ, ಸೆಂಟ್ ಪೀಟರ್ಸ್‌ಬರ್ಗ್ ಮತ್ತು ಮಾಸ್ಕೊ ನಗರಗಳ ೨೦೦ ಜನರಿಗೂ ಹಾಕಿಸಿದಳು. ಎಲ್ಲರಿಗೂ ಸಾಧು ರೀತಿಯಲ್ಲಿ ರೋಗ ಬಂದು ಗುಣವಾಗಿತ್ತು. ಡಿಮ್ಸ್‌ಡೇಲ್‌ಗೆ ಕೀರ್ತಿ ಬಂದುದಲ್ಲದೆ ಬೇಕಾದಷ್ಟು ಹಣವೂ ಸಿಕ್ಕಿತು. ಇಷ್ಟಾದರೂ ಈ ಪದ್ಧತಿ ವೈಯಕ್ತಿಕವಾಗಿ ರಕ್ಷಣೆ ಕೊಡುತ್ತಿತ್ತೇ ಹೊರತು, ಸಾಮಾಜಿಕ ರಕ್ಷಣೆ ಕೊಡುತ್ತಿರಲಿಲ್ಲ. ಆದ್ದರಿಂದ ರೋಗ ಹರಡುವುದಾಗಲೀ, ರೋಗದಿಂದ ಸಾಯುವುದಾಗಲೀ ನಿಂತಿರಲಿಲ್ಲ.

ಎಡ್ವರ್ಡ್ ಜೆನ್ನರ್

ಇದೇ ಸಮಯದಲ್ಲಿ ಎಡ್ವರ್ಡ್ ಜೆನ್ನರ್ (೧೭೪೯–೧೮೨೩) ಮಾನವನ ರಕ್ಷಣೆಗೆ ತಲೆಬಾಗಿ ನಿಂತು, ಪ್ರಪಂಚದಲ್ಲೇ ಅತ್ಯುತ್ತಮವಾದ ಸಿಡುಬು ತಡೆಯುವ ಪದ್ಧತಿಯನ್ನು ಸ್ಥಿರಪಡಿಸಿದನು. ಇವನು ಹಂಟರನ ಪರಮ ಶಿಷ್ಯ. ಅವನ ಜೊತೆಯಲ್ಲಿ ಶರೀರಶಾಸ್ತ್ರ ಮತ್ತು ಪ್ರಕೃತಿಶಾಸ್ತ್ರಗಳಲ್ಲಿ ಪರಿಶೋಧನೆ ನಡೆಸಿದ್ದನು. ತನ್ನ ಊರಾದ ಬರ್ಕೆಲೆಯಲ್ಲಿ ವೈದ್ಯವೃತ್ತಿ ನಡೆಸುತ್ತ, ತನ್ನ ಮಹತ್ತರ ಶೋಧನೆಯನ್ನು ಪ್ರಪಂಚದ ಮುಂದಿಟ್ಟಾಗ, ಲಂಡನ್ನಿಗೆ ಹೋಗಿ ವೈದ್ಯವೃತ್ತಿಯನ್ನು ಪ್ರಾರಂಭಿಸಿದರೆ ಹೆಚ್ಚು ಹಣ ಸಂಪಾದಿಸಬಹುದೆಂದು ಹೇಳಿದ್ದ ಅವನ ಸ್ನೇಹಿತನ ಸಲಹೆಯನ್ನು ತಿರಸ್ಕರಿಸಿ 'ನನ್ನ ಆಶೋತ್ತರಗಳನ್ನು ತೀರಿಸಲು ಸಾಕಾಗುವಷ್ಟು ನಾನು ಸಂಪಾದಿಸಿದ್ದೇನೆ' ಎಂದು ಉತ್ತರ ಕೊಟ್ಟನು. ಬ್ರಿಸ್ಟಲ್ಲಿನ ಹತ್ತಿರವಿದ್ದ ಸಾಡ್ಬರಿಯಲ್ಲಿ ಲಡ್‌ಲಾ ಕೈಕೆಳಗೆ ಅಭ್ಯಾಸಿಸುತ್ತಿದ್ದಾಗ ಒಬ್ಬಳು ರೋಗಿ ಹೇಳಿದ




ಎಡ್ವರ್ಡ್ ಜೆನ್ನರ್

'ನನಗೆ ಗೋಮೈಲಿ ಬಂದಿತ್ತು, ಆದ್ದರಿಂದ ಇದು ನನಗೆ ಹತ್ತದು' ಎಂಬ ಮಾತುಗಳನ್ನು ಕೇಳಿ ಕುತೂಹಲಗೊಂಡು, ಮುಂದೆ ಈ ಮಾತಿನ ನಿಜಾಂಶವನ್ನು ಕಂಡುಹಿಡಿಯಲು ದೃಢ ಮನಸ್ಸು ಮಾಡಿಕೊಂಡಿದ್ದನು. ತನ್ನ ಗುರು ಮತ್ತು ಸ್ನೇಹಿತ ಹಂಟರನ ಸಂಗಡ ದನದ ಸಿಡುಬಿನ ವಿಚಾರ ಚರ್ಚೆ ನಡೆಸಿದ್ದರೂ, ಹಂಟರ್ ತನ್ನ ಲೇಖನಗಳಲ್ಲಿ ಈ ಸುದ್ದಿಯನ್ನೇ ಎತ್ತಿಲ್ಲ. ಜೆನ್ನರಿಗೆ ಬರೆದ ಪತ್ರಗಳಲ್ಲೂ ಕಾಣಿಸಿಲ್ಲ.

೧೭೭೭ರಲ್ಲಿ ಹಂಟರ್ ಎದೆಯ ಶೂಲೆಯಿಂದ ನರಳುತ್ತಿದ್ದಾಗ, ಜೆನ್ನರ್ ತನ್ನ ಗುರುವಿನ ಲಕ್ಷಣಗಳನ್ನು ನೋಡಿ ಗಾಬರಿಗೊಂಡು, ಎದೆ ಶೂಲೆಯ ವಿಚಾರವನ್ನು ಹೆಬೆರ್ಡೀನ್ ೧೭೬೮ರಲ್ಲೇ ಬರೆದಿದ್ದುರಿಂದ, ಅವನಿಗೆ ತಿಳಿಸುವುದು ಮೇಲೆಂದು, ೧೭೭೮ರಲ್ಲಿ ಜೆನ್ನರ್ ಕಾಗದ ಬರೆದು ತಿಳಿಸಿದ್ದನು. ತಾನು ಪರೀಕ್ಷಿಸಿದ ಒಬ್ಬ ರೋಗಿಯ ಹೃದಯದ ಕಿರೀಟಕ ಧಮನಿಗಳಲ್ಲಿ ಕಂಡುಬಂದಿದ್ದ ಬದಲಾವಣೆಗಳನ್ನೂ ವಿವರಿಸಿ ಅದೇ ಕಾಗದದಲ್ಲಿ ಬರೆದಿದ್ದನು. ಎದೆ ಶೂಲೆ ರೋಗದ ಪರಿಶೀಲನೆಯನ್ನು ಮುಂದುವರಿಸಿ ವೈದ್ಯ ಸಂಸ್ಥೆಯಲ್ಲಿ ಉಪನ್ಯಾಸವನ್ನೂ ಮಾಡಿದ್ದನು. ಆದರೆ ತನ್ನ ಗುರು ಓದಿ ಹೆದರುವನೆಂದು ತಿಳಿದು ಲೇಖನವನ್ನು ಪ್ರಕಟ ಮಾಡಲಿಲ್ಲ. ಮತ್ತೊಂದು ವೈದ್ಯ ಸಂಸ್ಥೆಯಲ್ಲಿ ದನದ ಸಿಡುಬಿನ ರಸವನ್ನು ಚುಚ್ಚಿ ಮನುಷ್ಯನಲ್ಲಿ ಬರುವ ತೀವ್ರ ಸಿಡುಬನ್ನು ತಡೆಯಬಹುದೆಂದೂ, ಇದನ್ನು ಸ್ಥಿರಪಡಿಸಬೇಕೆಂದೂ ಕೇಳಿಕೊಂಡಾಗ, ಆ ಕಂದಾಚಾರದ ಸಂಸ್ಥೆ ಜೆನ್ನರನ ಪ್ರಾರ್ಥನೆಯನ್ನು ತಿರಸ್ಕರಿಸಿ ಎಚ್ಚರಿಕೆ ಕೊಟ್ಟಿತ್ತು.

ಜೆನ್ನರನ ಪ್ರಯೋಗ

೨೦ ವರ್ಷ ಹೀಗೆ ಕಾಲ ಕಳೆದು, ಕೊನೆಗೆ ಧೈರ್ಯಮಾಡಿ ತನ್ನ ಪ್ರಯೋಗವನ್ನು ನಡೆಸಲು ೧೭೯೬ನೇ ಮೇ ೧೪ರಲ್ಲು, ಜೇಮ್ಸ್ ಫಿಪ್ಸ್ ಎಂಬ ೮ ವರ್ಷದ ಬಾಲಕನಿಗೆ, ಸರಾ ನೆಲ್ಮೆಸ್ ಎಂಬ ಹೈನಗಿತ್ತಿಯ ಕೈಮೇಲೆ ಎದ್ದಿದ್ದ ದನದ ಸಿಡುಬಿನ



ಸೊಂಕು ಹಸುವಿನ ಮೊಲೆಯಿಂದ ಹತ್ತಿದ ಆಕಳ ಸಿಡುಬು

ಬೊಬ್ಬೆಯ ರಸವನ್ನು ಚುಚ್ಚಿ, ೮ ವಾರಗಳು ಕಳೆದ ಅನಂತರ ಸಿಡುಬಿನ ರಸವನ್ನು ಚುಚ್ಚಿ ರೋಗವೇ ಬರದಿದ್ದುದನ್ನು ವಿಜ್ಞಾನ ಪ್ರಪಂಚದ ಮುಂದಿಟ್ಟು ರುಜುವಾತು ಮಾಡಿದನು. ಈ ವಿಷಯವನ್ನೆಲ್ಲಾ ೭೫ ಪುಟಗಳ ಒಂದು ಚಿಕ್ಕ ಪುಸ್ತಕದಲ್ಲಿ ವಿವರಿಸಿದ್ದನು. ಈ ದೇವಿ ಹಾಕಣೆಯ ಸದ್ಗುಣಗಳು ಎಲ್ಲೆಲ್ಲೂ ಹರಡಿ ಜೆನ್ನರಿಗೆ ಸನ್ಮಾನಗಳು ಒಂದರ ಮೇಲೊಂದು ಬಂದವು. ತನ್ನ ಪರಿಶೋಧನೆಗಳನ್ನು ಗುಟ್ಟಾಗಿ ಇಟ್ಟು ಉಪಯೋಗಿಸಿ ಭಾಗ್ಯವಂತನಾಗದೆ ವಿಜ್ಞಾನ ದೃಷ್ಟಿಯಿಂದ ಎಲ್ಲರಿಗೂ ತಿಳಿಯುವಂತೆ ಪ್ರಚುರ ಪಡಿಸಿದ್ದನು. ಇದರಿಂದ ಅವನಿಗೆ ಹಣದ ನಷ್ಟವೇ ಆಗಿತ್ತು. ಇದನ್ನು ಪರಿಹರಿಸಲು ೧೮೦೨ರಲ್ಲಿ ೧೦,೦೦೦ ಪೌಂಡುಗಳನ್ನೂ, ೧೮೦೭ರಲ್ಲಿ ೨೦,೦೦೦ ಪೌಂಡುಗಳನ್ನೂ ಸರ್ಕಾರ ಕೊಟ್ಟು ಸಹಾಯ ಮಾಡಿತು. ಇಷ್ಟಾದರೂ,

ಜನರ ಶಂಕೆಯೂ ಸಾಕಷ್ಟಿತ್ತು. ಇವನ ಶೋಧನೆಯ ಫಲಿತಾಂಶವನ್ನು ರಾಜಸಂಘದ ಮುಂದಿಟ್ಟಾಗ ಎದೆ ಶೂಲೆ ಪುಸ್ತಕದಿಂದ ಸಂಪಾದಿಸಿರುವ ಗೌರವ, ಪ್ರಖ್ಯಾತಿ ಎಲ್ಲವೂ ಈ ಪ್ರಕಟಣೆಯಿಂದ ನಾಶವಾಗುತ್ತದೆಂದು ಹೇಳಿ, ಪರಿಶೋಧನೆಯ ಪ್ರಕಟಣೆಯನ್ನು ತಿರಸ್ಕರಿಸಿತು. ಅನೇಕರು ಈ ತಿಳಿವಳಿಕೆಯನ್ನು ಕದ್ದು ತಮ್ಮದಾಗಿ ಮಾಡಿಕೊಳ್ಳಲು ಪ್ರಯತ್ನಪಟ್ಟಿದ್ದರು. ಆದರೆ ಅಮೆರಿಕದಲ್ಲಿ ಜೆನ್ನರನ ಸಂಶೋಧನೆಗೆ ಉತ್ಸಾಹದ ಸ್ವಾಗತ ಸಿಕ್ಕಿತ್ತು. ಮಸ್ಸಾಚುಸ್ಸೆಟ್ಸನ ಡಾ. ಬೆಂಜಮಿನ್ ವಾಟರ್‌ಹೌಸ್ ಈ ಕ್ರಿಯೆಯನ್ನು ಮೆಚ್ಚಿ,ಹಾಗೇ ತನ್ನ ಮಗುವಿಗೆ ದೇವಿ ಹಾಕಿಸಿದನು.ಅಮೆರಿಕದ ಅಧ್ಯಕ್ಷ



ಜೆನ್ನರ್ ದೇವಿ ಹಾಕುತ್ತಿರುವುದು

ಥಾಮಸ್ ಜೆಫರ್ಸನ್ ಕೂಡ ತನ್ನ ಮನೆತನದವರಿಗೆಲ್ಲಾ ಹಾಕಿಸಿದನು. ಫ್ರಾನ್ಸಿನಲ್ಲಿ ನೆಪೋಲಿಯನ್ ತನ್ನ ಸೈನ್ಯದಳದವರಿಗೆಲ್ಲಾ ದೇವಿ ಹಾಕಿಸಲು ಅಪ್ಪಣೆ ಕೊಟ್ಟನು. ಹೀಗೆ ಕೆಲವು ದಿವಸಗಳಲ್ಲೇ ಇತರ ಎಲ್ಲಾ ದೇಶಗಳಿಗೂ ಹರಡಿ ವೈದ್ಯರಿಂದಲೂ ಪ್ರಜೆಗಳಿಂದಲೂ ಸಾಕಷ್ಟು ಉತ್ತೇಜನ ಸಿಕ್ಕಿತು. ಇಷ್ಟಾದರೂ, ಜೆನ್ನರ್ ಲಂಡನ್ನಿನಲ್ಲಿ ವೈದ್ಯವೃತ್ತಿಯನ್ನು ಮುಂದುವರಿಸದೆ ತನ್ನಊರಿಗೆ ಹೋಗಿ ಬಡವರಿಗೂ,ಸ್ನೇಹಿತರಿಗೂ ಚಿಕಿತ್ಸೆ ಮಾಡಿಕೊಂಡಿದ್ದು ೧೮೨೩ರಲ್ಲಿ ದೈವಾಧೀನನಾದನು. ಆಗಿನ ಕಾಲದಲ್ಲಿ ಇಂಥ ಪ್ರಸಿದ್ಧ ಶೋಧನೆ ಮತ್ತೊಂದಿರಲಿಲ್ಲ. ಇದರಿಂದ ಸಿಡುಬಿನ ಹಾವಳಿ ಕಡಿಮೆಯಾಗಿ ಮರಣ ಸಂಖ್ಯೆ ತಗ್ಗಿತ್ತು. ಮೊದಲನೆಯ ಮಹಾ ಯುದ್ಧದಲ್ಲಿ ಸಿಡುಬು ಹಾಕಿಸಿದ್ದ ೪೦ ಲಕ್ಷ ಸೈನಿಕರಲ್ಲಿ ೮೫೩ ಸೈನಿಕರಿಗೆ ರೋಗ ತಗುಲಿದ್ದರೂ ಕೇವಲ ೧೪ ಮರಣಗಳು ಮಾತ್ರ ಉಂಟಾಗಿದ್ದವು. ಸಿಡುಬು ರೋಗವನ್ನು ಅಡಗಿಸಬೇಕೆಂದಿದ್ದ ಜೆನ್ನರನ ಆಕಾಂಕ್ಷೆ ನೆರವೇರಿತು. ಅವನ ಜೀವನ ಸಾರ್ಥಕವಾಯಿತು.

೩೦. ಇಂಗ್ಲೆಂಡಿನ ಚಿನ್ನದ ಹಿಡಿಯ ಬೆತ್ತದ ವೈದ್ಯರು

೧೮ನೇ ಶತಮಾನದಲ್ಲಿ ನೀಟುಗಾರರಾದ ವೈದ್ಯರಲ್ಲಿ ಸಾಧಾರಣವಾಗಿ ಅಲಂಕಾರದ ಉಡುಪನ್ನು ಧರಿಸುವ ರೂಢಿ ಇತ್ತು. ಮಕಮಲ್ಲಿನ ಕೋಟು, ಬೂಟು, ಮಂಡಿಯ ವರೆಗಿನ ಕಾಲುಚೀಲ, ಗಿಲೀಟಿನ ಗುಂಡಿ, ಟೋಫನ್ನಿನ ಇಲ್ಲವೇ ಮೂರು ಮೂಲೆಯ ಟೋಪಿ, ಕೈ ಗವುಸುಗಳು ಆ ಕಾಲದ ಉಡುಪುಗಳಾಗಿದ್ದವು. ಇವುಗಳ ಜೊತೆಗೆ ಚಿನ್ನದ ಅಥವಾ ಬೆಳ್ಳಿಯ ಹಿಡಿಯುಳ್ಳ ಬೆತ್ತವೂ ಒಂದು ಅಲಂಕಾರದ ಕೈ ಹಿಡಿಯಾಗಿತ್ತು. ಬೆತ್ತದ ಕೈಹಿಡಿ ಟೊಳ್ಳಾಗಿದ್ದು, ಅದರಲ್ಲಿ ಸುವಾಸನೆಯಾದ ಹಾಗೂ ರೋಗ ವಿರೋಧಿಸುವ ಮದ್ದನ್ನು ಇಟ್ಟುಕೊಳ್ಳುತ್ತಿದ್ದರು.

ಚಿನ್ನದ ಹಿಡಿಯ ಬೆತ್ತವನ್ನು ಮೊಟ್ಟಮೊದಲಿಗೆ ಜಾನ್ ರ್‍ಯಾಡ್‌ಕ್ಲಿಫ್ ಉಪ ಯೋಗಿಸುತ್ತಿದ್ದು, ಅದೇ ಬೆತ್ತವನ್ನು ಅವನನಂತರ ರಿಚರ್ಡ್ ಮೀಡ್‌ಗೆ ಕೊಟ್ಟನು. ಅವನು ಅವನ ತರುವಾಯಿಗಳಿಗೆ ಕೊಟ್ಟು ಕೊನೆಗೆ ಮ್ಯಾತ್ಯು ಬೇಲಿ ಕೈ ಸೇರಿತ್ತು. ಬೇಲಿ ಸತ್ತ ಮೇಲೆ ಅವನ ಹೆಂಡತಿ, ವೈದ್ಯರ ರಾಜವಿದ್ಯಾ ಕಾಲೇಜಿನ ಅಧ್ಯಕ್ಷ ಸರ್ ಹೆನ್ರಿ ಹಾಲ್‌ಫೋರ್ಡ್‌ಗೆ ದಾನ ಮಾಡಿದಳು. ವೈದ್ಯರ ಹೊಸ ಕಟ್ಟಡವನ್ನು ಪಾಲ್ ಮಾಲ್ ಈಸ್ಟ್‌ನಲ್ಲಿ ಕಟ್ಟಿಸಿ ಪ್ರವೇಶ ಮಾಡಿದಾಗ ಅಲ್ಲಿಯ ವಸ್ತುಸಂಗ್ರಹಾ ಲಯದಲ್ಲಿ ಇದನ್ನು ಇರಿಸಲಾಗಿತ್ತು. ಈಗ ಆ ಬೆತ್ತ ಕಾಲೇಜಿನ ಪುಸ್ತಕ ಭಂಡಾರದ ಒಂದು ಗಾಜಿನ ಬೀರುವಿನಲ್ಲಿ ಇಡಲಾಗಿದೆ.

ಜಾನ್ ರ್‍ಯಾಡ್ಕ್ಲಿಫ್

ಈ ಬೆತ್ತವನ್ನು ಮೊದಲು ಪಡೆದಿದ್ದ ಜಾನ್ ರ್‍ಯಾಡ್ಕ್ಲಿಫ್ (೧೬೫೦–೧೭೧೪) ಆಕ್ಸ್‌ಫರ್ಡ್‌ನಲ್ಲಿ ವೈದ್ಯವೃತ್ತಿಯನ್ನು ಅಭ್ಯಾಸ ಮಾಡುತ್ತಿದ್ದು ಕೆಲವು ದಿನಗಳನಂತರ ಲಂಡನ್ನಿಗೆ ಬಂದು ಸೇರಿದನು. ವಿದ್ಯಾಭ್ಯಾಸಕ್ಕಿಂತಲೂ ಇವನ ನೈಜ ಜಾಣತನ ಹಾಗೂ ವಿವೇಕ ಇವನ ಖ್ಯಾತಿಗೆ ಕಾರಣವಾಗಿ ಬೇಗನೆ ಭಾಗ್ಯವಂತನಾಗಿದ್ದನು. ಇವನ ಹೆಸರಿನಲ್ಲಿ ಕಟ್ಟಿಸಿರುವ ರ್‍ಯಾಡ್ಕ್ಲಿಫ್ ಆಸ್ಪತ್ರೆ, ರ್‍ಯಾಡ್ಕ್ಲಿಫ್ ಸಮೀಕ್ಷಾಲಯ ಮತ್ತು ರ್‍ಯಾಡ್ಕ್ಲಿಫ್ ಪುಸ್ತಕ ಭಂಡಾರಗಳನ್ನು ಸ್ಥಾಪಿಸುವ ಸಲುವಾಗಿ ಬೇಕಾಗುವ ಹಣವನ್ನು ಬಿಟ್ಟುಹೋಗಿದ್ದನು. ತನ್ನ ವೈದ್ಯವೃತ್ತಿಯ ಪ್ರಾರಂಭದಲ್ಲಿ ಪ್ರತಿಯೊಂದು ರೋಗಕ್ಕೂ ೨೦ ಚಿಕಿತ್ಸೆ ಕ್ರಮಗಳಿದ್ದವೆಂದೂ, ವೃತ್ತಿಯ ಕೊನೆಯ ದಿನಗಳಲ್ಲಿ ೨೦ ರೋಗಗಳಿಗೆ ಒಂದಾದರೂ ಔಷಧವಿರಲಿಲ್ಲವೆಂದೂ ನುಡಿದ ರಾಡ್ಕ್ಲಿಫ್‌ನ ಮಾತು ಗಳು ವೈದ್ಯನ ಮಿತಿಯನ್ನು ಪ್ರದರ್ಶಿಸುತ್ತಿದ್ದವು.

ರಿಚರ್ಡ್ ಮೆಡ್

ಕೊಂಚ ಅಹಂಭಾವದಿಂದ ವರ್ತಿಸುತ್ತಿದ್ದ ರಾಡ್ಕ್ಲಿಫ್‌ನ ತರುವಾಯಿಯಾದ

ರಿಚ್ಚರ್ಡ್ ಮೆಡ್ (೧೬೭೩–೧೭೫೪) ತನ್ನ ಪೂರ್ವಾಧಿಕಾರಿಯ ನಡತೆಗಳ ಬದಲು ಜನರನ್ನು ಒಲಿಸುವ ಸೌಮ್ಯ ತಂತ್ರಗಳನ್ನು ಹೊಂದಿದ್ದನು. ಇವನು ಲೇಡನ್ನಿನ ಪಿಟ್ಕೇರ್ನ್‌ನ ಶಿಷ್ಯನಾಗಿದ್ದು, ಲಂಡನ್ನಿಗೆ ಬಂದ ಮೇಲೆ ರ್ಯಾಡ್ಕ್ಲಿಫ್‌ನ ಕ್ಲಿನಿಕ್‌ನಲ್ಲಿ ವೈದ್ಯವೃತ್ತಿಯನ್ನು ಅವಲಂಬಿಸಿ ತನ್ನ ಪೂರ್ವಾಧಿಕಾರಿಗಿಂತಲೂ ಪ್ರಸಿದ್ಧನಾದನು. ಇವನ ಪುಸ್ತಕಭಂಡಾರ ಹಾಗೂ ವಸ್ತುಸಂಗ್ರಹಾಲಯ ಶೋಭಾಯಮಾನದಿಂದಿದ್ದು ದರಿಂದ ಆಗಿನ ಪ್ರೇಕ್ಷಕರಿಗೆ ಮೆಕ್ಕದಂತಿದ್ದವು.

೧೮ನೇ ಶತಮಾನದ ಇತರ ಪ್ರಸಿದ್ಧ ವೈದ್ಯರು

ವಿಲಿಯಂ ಹೆಬೆರ್ಡಿನ್

ಹಿರಿಯ ವಿಲಿಯಂ ಹೆಬೆರ್ಡಿನ್ (೧೭೧೦–೧೮೦೧) ವೈದ್ಯಶಾಸ್ತ್ರದ ಗೌರವ ವನ್ನೂ ಘನತೆಯನ್ನೂ ಎತ್ತಿಹಿಡಿದು ವೈದ್ಯಶಾಸ್ತ್ರದ ಬೆಳವಣಿಗೆಯನ್ನು ಸಾಕಷ್ಟು ಪ್ರೋತ್ಸಾಹಿಸಿದ್ದನು. ಕೇಂಬ್ರಿಡ್ಜ್ ವಿದ್ಯಾರ್ಥಿತನವನ್ನು ಮುಗಿಸಿ, ಲಂಡನ್ನಿನಲ್ಲಿ ವೈದ್ಯ ವೃತ್ತಿಯನ್ನು ಅವಲಂಬಿಸಿದಾಗ ೩ನೇ ಜಾರ್ಜ್ ದೊರೆಯ ವೈದ್ಯನಾಗಿದ್ದನು. ಪ್ರತಿ ರೋಗಿಯ ಚರಿತ್ರೆಯನ್ನೂ ಬರೆದಿಟ್ಟು, ತನ್ನ ೭೩ನೇ ವಯಸ್ಸಿನಲ್ಲಿ, ಮಗನ ಉಪ ಯೋಗಕ್ಕಾಗಿ ಒಂದು ಪುಸ್ತಕವನ್ನು ಬರೆದಿದ್ದನು. ಇದು ಲ್ಯಾಟಿನ್ನಿನಲ್ಲಿ ಇತ್ತು. ಇದನ್ನು ಇವನ ಮಗ ಇಂಗ್ಲೀಷಿಗೆ ಭಾಷಾಂತರ ಮಾಡಿ ತಂದೆ ಸತ್ತ ಮೇಲೆ ಪ್ರಕಟಿಸಿದನು. ಈ ಪುಸ್ತಕದಲ್ಲಿ ಮೊಟ್ಟಮೊದಲಿಗೆ ಎದೆಶೂಲೆ, ಸೀತಾಳ ಸಿಡುಬು, ಇರುಳುಗಣ್ಣು, ಬೆರಳು ಗಳ ಮೇಲೆ ಏಳುತ್ತಿದ್ದ ಹೆಬೆರ್ಡಿನ್ ಗಂಟುಗಳ ವಿವರಗಳೆಲ್ಲವೂ ಇದ್ದವು. ಸೀತಾಳ ಸಿಡುಬನ್ನು ಸಿಡುಬಿನಿಂದ ವ್ಯತ್ಯಾಸ ಮಾಡುವುದನ್ನೂ ವಿವರಿಸಿದ್ದನು. ಈ ಪುಸ್ತಕ ಆಗ ಅತಿ ಮೆಚ್ಚಿನ ಪುಸ್ತಕವಾಗಿದ್ದುದಲ್ಲದೆ ಈಗಲೂ ಓದಬಹುದಾದ ಪುಸ್ತಕವಾಗಿದೆ. ಹೆಬೆರ್ಡಿನ್‌ನ ಮಹತ್ವವನ್ನು ಕುರಿತು, ನಮ್ಮ ವಿದ್ಯಾಪ್ರವೀಣ ಚಿಕಿತ್ಸಾ ವೈದ್ಯರಲ್ಲಿ ಕೊನೆಯವನೆಂದು ಡಾಕ್ಟರ್ ಸ್ಯಾಮ್ಯುಯಲ್ ಜಾನ್ಸನ್ ಬರೆದಿದ್ದಾನೆ. ಹೆಬೆರ್ಡಿನ್ ಬರೆದ ಎದೆ ಶೂಲೆಯ ವಿವರಗಳು ಈಗ ಬರೆದಂತಿವೆ. ವಿಷವನ್ನು ಕ್ರಮೇಣ ಹೆಚ್ಚು ಹೆಚ್ಚಾಗಿ ಸೇವಿಸಿ ವಿಷವೇ ತಟ್ಟದಂತೆ ಮಾಡುವ ವಿಧಾನವನ್ನೂ ವಿಷಾಪಹಾರಿ ಕ್ರಮ ವನ್ನೂ ರದ್ದುಗೊಳಿಸಿ ಔಷಧ ಪ್ರಯೋಗ ಪದ್ಧತಿಯಿಂದ ತೆಗೆದುಹಾಕಿ ವೈದ್ಯಶಾಸ್ತ್ರಕ್ಕೆ ಮತ್ತೊಂದು ಸೇವೆ ಸಲ್ಲಿಸಿದನು.

ವಿಲಿಯಂ ವಿದರಿಂಗ್

ಹೃದಯ ರೋಗಕ್ಕೆ ತಕ್ಕ ಮದ್ದಾದ ಡಿಜಿಟ್ಯಾಲಿಸ್ ಮೂಲಿಕೆ ಗಿಡವನ್ನು ಕಂಡು ಹಿಡಿದಿದ್ದ ವಿಲಿಯಂ ವಿದರಿಂಗ್ (೧೭೪೧–೯೯) ಮತ್ತೊಬ್ಬ ಶ್ರೇಷ್ಠ ವೈದ್ಯ. ಇವನು ಹಗಲೂ ಇರುಳೂ ಕೆಲಸ ಮಾಡುತ್ತಿದ್ದು, ರಾತ್ರಿಯ ವೇಳೆ ಪ್ರಯಾಣ ಮಾಡು ವಾಗ ಗಾಡಿಯಲ್ಲಿ ದೀಪ ಇಟ್ಟುಕೊಂಡು ಓದುವುದರಲ್ಲೂ ಬರೆಯುವುದರಲ್ಲೂ ತೊಡಗಿ

ರುತ್ತಿದ್ದನು. ತನ್ನ ಊರಾದ ಷ್ರಾಪ್‌ಷೈರ್‌ನ ಒಬ್ಬಳು ಮುದುಕಿ ಶೋಬೆಗೆ ಮದ್ದಿದೆ ಎಂದು ಹೇಳಿದ್ದನ್ನು ಕೇಳಿ ಅದನ್ನು ಪಡೆದು ಸಸ್ಯಶಾಸ್ತ್ರದಲ್ಲಿ ತನಗಿದ್ದ ಅಭಿರುಚಿಯ ಸಹಾಯದಿಂದ, ಆ ಮದ್ದಿನಲ್ಲಿ ೨೦ ವಿಧವಿಧವಾದ ಸಸ್ಯಗಳಿವೆಯೆಂದೂ, ಅವುಗಳ ಲ್ಲೆಲ್ಲಾ ಫಾಕ್ಸ್ ಗ್ಲೌ ಎಂಬುದೇ ಶೋಬೆಗೆ ನಿರ್ದಿಷ್ಟವಾದ ಮದ್ದೆಂದೂ ವಿದರಿಂಗ್ ಹೇಳಿದನು. ಈ ಔಷಧವನ್ನು ತನ್ನ ವೃತ್ತಿಯಲ್ಲಿ ೧೦ ವರ್ಷಗಳ ಕಾಲ ಉಪಯೋ ಗಿಸಿ, ಅನಂತರ ಬರೆದ ಪುಸ್ತಕವನ್ನು ೧೭೮೫ರಲ್ಲಿ ಪ್ರಕಟಪಡಿಸಿದನು. ಅವನು ಹೇಳಿ ದಂತೆಯೇ ಅವನ ಶೋಧನೆ ವಿಜ್ಞಾನದ ಹಾಗೂ ಮಾನವನ ಹಿತಕ್ಕೆ ಆಧಾರಭಾಗ್ಯ ವಾಗಿದೆ. ಈಗಲೂ ಹೃದಯ ರೋಗಗಳಿಗೆ ಡಿಜಿಟ್ಯಾಲಿಸ್ ಬಿಟ್ಟರೆ ಬೇರೊಂದಿಲ್ಲ.

ಕ್ಯಾಲಬ್ ಪ್ಯಾರಿ

ಎಡಿನ್ಬರೊ ಪದವೀಧರನಾದ ಕ್ಯಾಲಬ್ ಪ್ಯಾರಿ (೧೭೫೫-೧೮೨೨) ಎದೆ ಶೂಲೆಯ ವಿಚಾರ ಅತಿ ಹಿಂದೆಯೇ ಬರೆದು ಕಿರೀಟಕ ಧಮನಿಗಳ ರೋಗದಿಂದ ಬರುತ್ತ ದೆಂದು ತಿಳಿಸಿದ್ದನು. ಮೆಡ್ಡ ಗಣ್ಣಿನ ಗಳಗಂಡ ರೋಗದ ವಿಷಯ ಅವನ ಲೇಖನ ಗಳಲ್ಲಿ ಮೊಟ್ಟಮೊದಲನೆಯದಾಗಿತ್ತು.

ಜಾನ್ ಫಾದರ್ಗಿಲ್


ಮತ್ತೊಬ್ಬ ಎಡಿನ್ಬರೊ ಪದವೀಧರ ಹಾಗೂ ಸ್ನೇಹಿತರ ಸಂಘದ ಮುಖ್ಯಸ್ಥ ರಲ್ಲೊಬ್ಬನಾದ ಜಾನ್ ಫಾದರ್ಗಿಲ್ (೧೭೧೨-೮೦) ಲಂಡನ್ನಿನಲ್ಲಿ ನೆಲಸಿ ೧೭೪೮ರಲ್ಲಿ ಗಂಟಲು ನೋವಿನ ವಿಚಾರವಾಗಿ ಬರೆದು ಪ್ರಖ್ಯಾತಿ ಪಡೆದಿದ್ದನು. ಇದರಿಂದ ಹಣ ಸಂಪಾದನೆಯಾಗಿ ಸಸ್ಯಶಾಸ್ತ್ರ ವ್ಯಾಸಂಗ ಮಾಡಲೆತ್ನಿಸಿದ್ದನು. ಅವನ ಸಸ್ಯತೋಟ ಲಂಡನ್ನಿನ ಈಗಿನ ಕ್ಯು ತೋಟಕ್ಕೆ ಸಮನಾಗಿತ್ತು. ಸಸ್ಯಶಾಸ್ತ್ರದ ಪಂಡಿತನಾಗಿದ್ದುದ ರಿಂದ ಔಷಧವಸ್ತುಶಾಸ್ತ್ರದಲ್ಲೂ ಪರಿಣತಿ ಹೊಂದಿದ್ದನು. ಅಲ್ಲದೆ,ಸಿಂಕೋನ,ಹೆಮ್ಲಾಕ್, ಕೀನೊ, ಕಾಫಿ ಮುಂತಾದವುಗಳ ಉಪಯೋಗಗಳನ್ನು ಅರಿತಿದ್ದನು. ಅವನ ಬರ ವಣಿಗೆಗಳಲ್ಲಿ "ಕಾಫಿಯ ಚರಿತ್ರೆ ಮತ್ತು ಉಪಯೋಗ" "ವಾಯುಗುಣ ಮತ್ತು ರೋಗ" ಬಹು ಸ್ವಾರಸ್ಯವಾಗಿದ್ದವು ೧೭೪೪ರಲ್ಲಿ, ಸತ್ತವನ ಶ್ವಾಸಕೋಶಕ್ಕೆ ಗಾಳಿ ತುಂಬಿ ಬದುಕಿಸಿದ ಪ್ರಯೋಗ ಮುಂದಿನ ಕೃತಕ ಉಸಿರಾಟಕ್ಕೆ ಆಧಾರವಾಗಿತ್ತು. ಅಪಸ್ಮಾರ, ಹೆಕಲಿ (ನಾಯಿ ಹುಚ್ಚು), ಎದೆಶೂಲೆ ಮುಂತಾದುವನ್ನು ಕುರಿತು ಲೇಖನ ಬರೆದಿದ್ದನು. ಅತಿ ಮುಖ್ಯವಾಗಿ ಗುಲಾಮಗಿರಿ ರದ್ದು ಮಾಡುವುದರಲ್ಲೂ, ಖಾನಿಷ್ಮಾರಿ ದಾಖಲು ಮಾಡುವುದರಲ್ಲೂ, ಲಂಡನ್ನಿನ ಕೆಲವು ರಸ್ತೆಗಳನ್ನು ಅಗಲ ಮಾಡುವುದ ರಲ್ಲೂ, ಗೋಧಿ ಜೊತೆಗೆ ಜೋಳ ಮತ್ತು ಆಲೂಗೆಡ್ಡೆಗಳನ್ನು ಉಪಯೋಗಿಸುವುದ ರಲ್ಲೂ, ಬಡವರಿಗೆ ಅಗ್ಗವಾಗಿ ಮೀನು ಒದಗಿಸುವುದರಲ್ಲೂ ಆಸಕ್ತಿಯಿಂದ ಕೆಲಸ ಮಾಡಿ ಪ್ರಜೆಗಳ ಆರೋಗ್ಯವನ್ನು ಅಭಿವೃದ್ಧಿಪಡಿಸಿದ್ದನು.

ಸೂಪ್ತ್ಯಾವಾಹನ ತತ್ತ್ವ

ವೈದ್ಯ ವಿಚಾರಗಳಲ್ಲಿ ಎಷ್ಟೇ ಮುಂದಿದ್ದರೂ, ವಿಚಾರ ಮಾಡದೆ ಸುಲಭವಾಗಿ ನಂಬುವ ಪರಿಸ್ಥಿತಿ ೧೮ನೇ ಶತಮಾನದಲ್ಲಿ ಎದ್ದು ಕಾಣುತ್ತಿತ್ತು. ಇದು ಎಷ್ಟೇ ಹಳೆಯ ಸಂಪ್ರದಾಯವಾಗಿದ್ದರೂ ಜನರು ನಂಬುತ್ತಿದ್ದರು. ಆದ್ದರಿಂದ ನಕಲಿ ವೈದ್ಯ ಕಪಾಲ ಸಾಮುದ್ರಿಕೆಗಳಿಗೆ ಪ್ರೋತ್ಸಾಹ ಸಿಕ್ಕಿತ್ತು, ಅದರಲ್ಲೂ ಮೆಸ್ಮರಿಸಂ ಎಂಬ ಒಂದು ಹೊಸ ಪದ್ಧತಿ ಯೂರೋಪಿನಲ್ಲೆಲ್ಲಾ ಭೂಕಂಪ ಹರಡಿದಂತೆ ಹರಡಿತ್ತು. ಜ್ಞಾನಿಗಳು, ಅಜ್ಞಾನಿಗಳು ಎಂಬ ಭೇಧಭಾವವಿಲ್ಲದೆ ಸಮಸ್ತರೂ ಇದನ್ನು ಪ್ರೋತ್ಸಾಹಿಸುತ್ತಿದ್ದರು. ಈ ಪದ್ಧತಿಗೆ ಕಾರಣನಾದ ಮೆಸ್ಮರ್ ಅವಿದ್ಯಾವಂತನಾಗಿರಲಿಲ್ಲ. ಹಳೇ ವಿಯನ್ನ ವೈದ್ಯಶಾಲೆಯ ಪದವೀಧರ.

ಮೆಸ್ಮರ್

ಫ್ರಾನ್ಸ್ ಆಂಟನ್ ಮೆಸ್ಮರ್ (೧೭೩೪–೧೮೧೫) ಮೊದಲು ತತ್ತ್ವಶಾಸ್ತ್ರ, ಮತಧರ್ಮಶಾಸ್ತ್ರಗಳನ್ನು ಓದಿ, ಅನಂತರ ವಿಯನ್ನದಲ್ಲಿ ೧೭೬೬ರಲ್ಲಿ ವೈದ್ಯಶಾಸ್ತ್ರದಲ್ಲಿ ಪದವಿ ಸ್ವೀಕರಿಸಿದ್ದನು. ಅವನ ವೈದ್ಯ ಪಂಡಿತ ಪದವಿಗೆ ಬರೆದಿದ್ದ ಲೇಖನ ಗ್ರಹಗಳ ಪ್ರಭಾವ ಕುರಿತುದಾಗಿತ್ತು. ಅದನ್ನೇ ಗುರಿಯಾಗಿಟ್ಟುಕೊಂಡು ತನ್ನ ಜೀವನೋಪಾಯಕ್ಕೆ ಅನ್ವಯಿಸಿಕೊಂಡಿದ್ದನು. ಗ್ರಹಗಳು ಹೇಗೆ ತಮ್ಮ ತಮ್ಮನ್ನೇ ಸೆಳೆಯುತ್ತವೆಯೋ ಹಾಗೆಯೇ ಮನುಷ್ಯನಶರೀರದ ಊತಕಗಳನ್ನೂ ಸೆಳೆಯುತ್ತವೆಂದು ಹೇಳಿದನು. ಈ ಪ್ರಭಾವಕ್ಕೆ "ಪ್ರಾಣಿಕಾಂತ ಶಕ್ತಿ" ಎಂದು ಹೆಸರು ಕೊಟ್ಟಿದ್ದನು. ಇದಕ್ಕೆ ಆಧಾರವಾಗಿ ಗ್ಯಾಲೆನ್ ಮತ್ತಿತರರ ಉದಾಹರಣೆಯನ್ನು ಮುಂದಿಟ್ಟಿದ್ದನು. ಇವನ ಹೆಂಡತಿ ಧನವಂತೆಯಾಗಿದ್ದುದರಿಂದ ಔತಣ



ಫ್ರಾನ್ಸ್ ಆಂಟನ್ ಮೆಸ್ಮರ್ ವಶೀಕರಣ ಸುಪ್ತ ಸ್ಥಿತಿಯ ಪ್ರವರ್ತಕ

ಗಳನ್ನು ಏರ್ಪಡಿಸಿ ಜನರ ಸ್ನೇಹವನ್ನು ಸಂಪಾದಿಸಿದ್ದರು. ಹಿಂದಿನ ಶತಮಾನದಲ್ಲಿ ರೂಢಿಯಲ್ಲಿದ್ದ ರಾಜಸ್ಪರ್ಶ ಗಂಡಮಾಲೆಯನ್ನು ಹೇಗೆ ಗುಣ ಮಾಡುತ್ತಿತ್ತೋ ಅದೇ ರೀತಿಯಲ್ಲಿ ತನಗೆ ರೋಗಗಳನ್ನು ಗುಣಮಾಡುವ ಶಕ್ತಿ ಇದೆ ಎಂದು ಹೇಳಿ ಮೆಸ್ಮರ್ ಚಿಕಿತ್ಸೆ ಕೊಡಲು ಪ್ರಾರಂಭಿಸಿದನು. ಇದಕ್ಕೆ ಹುರುಪು ಕೊಡಲು ಕೃತಕ ನಿದ್ದೆ ಬರಿಸುವ ಕ್ರಿಯೆಯನ್ನು (ಸುಪ್ತಾತ್ಮ್ಯಾವಾಹನ ತತ್ತ್ವ) ರೂಢಿ ಮಾಡಿದ್ದನು. ಇವನ ಕ್ರಿಯೆ ವಿಜ್ಞಾನದ ಆಧಾರದ ಮೇಲಿತ್ತೇ ಹೊರತು ನಟನೆ ಮೇಲಿರಲಿಲ್ಲ. ಈ ಕ್ರಿಯೆ ಈಗಿನ ಮನೋರೋಗ ಚಿಕಿತ್ಸೆಯ ಅಡಿಪಾಯವಾಗಿತ್ತು. ಇವನು ಮೊದಲು ರೋಗವನ್ನು ಗುಣ ಮಾಡಲು ಸೂಜಿಗಲ್ಲು ಕೋಲನ್ನು ಉಪಯೋಗಿಸುತ್ತಿದ್ದು, ಕ್ರಮೇಣ ತನ್ನ ಕೈಗಳಿಂದಲೇ ಗುಣ ಮಾಡುವ ಶಕ್ತಿ ಇರುವುದನ್ನು ಕಂಡು ಸ್ಪರ್ಶಕ್ರಿಯೆಯನ್ನೇ ಅಭಿವೃದ್ಧಿಪಡಿಸುತ್ತಿದ್ದನು. ವಿಯನ್ನದಲ್ಲೂ, ಪ್ಯಾರಿಸ್ಸಿನಲ್ಲೂ ಮೊದಲು ಹೆಚ್ಚು ಗಿರಾಕಿಗಳಿದ್ದು, ಪ್ರೋತ್ಸಾಹ ಸಿಕ್ಕಿದರೂ ಕ್ರಮೇಣ ಜನರಲ್ಲಿ ಅಪನಂಬಿಕೆ ಹುಟ್ಟಿ, ಅವನು ಆ ಪಟ್ಟಣಗಳನ್ನು ತ್ಯಜಿಸಬೇಕಾಯಿತು. ನಂತರ ತನ್ನ ಬೆಂಬಲಿಗರ ಸಂಗಡ ಬಂದು ಪಟ್ಟಣವನ್ನು ಸೇರಿದ್ದನು. ಈ ಸಮಯದಲ್ಲಿ ಪ್ಯಾರಿಸ್ಸಿನಲ್ಲಿದ್ದ ಬೆಂಬಲಿಗರೆಲ್ಲಾ ಸೇರಿ ಮೆಸ್ಮರನನ್ನು ಪುನಃ ಪ್ಯಾರಿಸ್ಸಿಗೆ ಬರಮಾಡಿಕೊಂಡು ಆದರಿಸಿದರು. ಮೆಸ್ಮರ್‌ನ ಕೀರ್ತಿ ಪುನಃ ಮತ್ತಷ್ಟು ಹರಡಿ ಗಿರಾಕಿಗಳು ಅಸಾಧ್ಯವಾಗಿ ಬರಲಾರಂಭಿಸಿದರು. ಅದರಲ್ಲೂ ಮನೋವಿಕಾರದ ಹೆಂಗಸರಂತೂ ಲೆಕ್ಕವಿಲ್ಲದಂತೆ ಬರುತ್ತಿದ್ದರು. ರೋಗಿಗಳನ್ನು ನೋಡಲು ಮೊದಲೇ ಕಾಲಾವಕಾಶ ಗೊತ್ತುಮಾಡಬೇಕಾಗಿತ್ತು. ರೋಗಿಗಳನ್ನು ಪರೀಕ್ಷಿಸುವಾಗ ಮೆಸ್ಮರ್ ಊದಾ ಅಥವಾ ಬಿಳಿಯ ನಿಲುವಂಗಿ ತೊಟ್ಟು, ಕೈಯಲ್ಲಿ ಒಂದು ಐಂದ್ರಜಾಲಕನ ದಂಡವನ್ನು ಹಿಡಿದು ಬರುತ್ತಿದ್ದನು. ಜನರಲ್ಲಿದ್ದ ಸಂಶಯವನ್ನು ಬಗೆಹರಿಸಲೂ, ಮೆಸ್ಮರನ ಚಿಕಿತ್ಸೆ ಸರಿಯೋ ತಪ್ಪೋ ಎಂದು ಗೊತ್ತುಮಾಡಲೂ, ೧೬ನೇ ಲೂಯಿ ದೊರೆ ೧೭೮೪ರಲ್ಲಿ ಗೊತ್ತುಮಾಡಿದ್ದ ನಿಯೋಗ ಒಂದು ಮೆಸ್ಮರನ ಪದ್ಧತಿ ಕೇವಲ ಕಲ್ಪನೆಯೆಂದು ತೀರ್ಮಾನ ಕೊಟ್ಟಿತು. ಆದರೂ ಅವನ ಕೀರ್ತಿ ಏನೂ ಕುಂದಲಿಲ್ಲ. ಕ್ರಮೇಣ ಪ್ಯಾರಿಸ್ಸಿನ ಕ್ರಾಂತಿಕಾರರ ವಿರೋಧ ಹೆಚ್ಚಿ, ಮೆಸ್ಮರ್ ಪ್ಯಾರಿಸ್ ಬಿಟ್ಟು, ಲಂಡನ್ ಮತ್ತು ವಿಯನ್ನಗಳೂ ಸರಿಹೋಗದೆ ಕಾನ್ಸಟೆನ್ಸ್ ಸರೋವರದ ಬಳಿ ಬಂದು ಕೆಲವು ದಿವಸವಿದ್ದು ಸತ್ತನು.

ಮೆಸ್ಮರ್ ಅವನ ಶತ್ರುಗಳ ಅಭಿಪ್ರಾಯದಂತೆ ಮೋಸಗಾರನಾಗಿರಲಿಲ್ಲ. ಪ್ರಾಣಿ ಕಾಂತಶಕ್ತಿಯನ್ನು ಪರೀಕ್ಷಿಸುವುದರಲ್ಲಿ ತೊಡಗಿದ್ದನು. ಅವನ ಶಿಷ್ಯ ಪ್ಯೂಸಿಗರ್‌ನ (೧೭೮೪) ಸಹಾಯದಿಂದ ಕೃತಕ ನಿದ್ದೆ ಬರಿಸುವ ರೀತಿಯನ್ನೂ ಅಭಿವೃದ್ಧಿಪಡಿಸುತ್ತಿದ್ದನು. ಈ ಕೃತಕ ನಿದ್ದೆ ಸಹಾಯದಿಂದ ಆ ಕಾಲದಲ್ಲಿ ಶಸ್ತ್ರಕ್ರಿಯೆಯನ್ನೂ ಮಾಡಲಾಗುತ್ತಿತ್ತು. ಕೃತಕ ನಿದ್ರಾವಸ್ಥೆ ಈಗ ಮನೋವಿಕಾರ, ಮನೋದೌರ್ಬಲ್ಯ, ಮನೋರೋಗಗಳನ್ನು ಗುಣಪಡಿಸಲು ಉಪಯೋಗವಾಗುತ್ತಿದೆ. ಮೆಸ್ಮರ್ ಈ ವಿದ್ಯೆಗೆ ಅಡಿಪಾಯ ಹಾಕಿದ್ದನೆಂದು ಹೇಳಿದರೆ ಅತಿಶಯವೇನಲ್ಲ.

೩೧. ೧೯ನೇ ಶತಮಾನದ ವೈದ್ಯಶಾಸ್ತ್ರ

೧೭೮೯ರಲ್ಲಿ ನಡೆದ ಫ್ರಾನ್ಸಿನ ಕ್ರಾಂತಿ, ೧೮ನೇ ಶತಮಾನದ ಮೊದಲ ವರ್ಷಗಳಲ್ಲಿ ನಡೆದ ನೆಪೋಲಿಯನ್ನಿನ ಯುದ್ಧಗಳು, ೧೮ನೇ ಶತಮಾನದ ಅಂತ್ಯದಲ್ಲಿ ನಡೆದ ಕೈಗಾರಿಕೆಗಳ ಕ್ರಾಂತಿಗಳೆಲ್ಲಾ ೧೯ನೇ ಶತಮಾನದ ವೈದ್ಯಶಾಸ್ತ್ರದ ಬದಲಾವಣೆಗೂ, ಬೆಳವಣಿಗೆಗೂ ಕಾರಣಗಳಾಗಿದ್ದವು. ವೈದ್ಯಶಾಸ್ತ್ರ ಮುಂದುವರಿದ ಹಾಗೆಲ್ಲಾ ಹೊಸ ಹೊಸ ರೋಗಗಳು ಕಂಡುಬರುತ್ತಿದ್ದವು. ರಷ್ಯಾದ ಮೇಲೆ ದಂಡೆತ್ತಿಹೋಗಿದ್ದ ನೆಪೋಲಿಯನ್ ಸೈನ್ಯ ಯುದ್ಧ ಮಾಡಲಾಗದೆ ಹಿಮ್ಮೆಟ್ಟಿದಾಗ ಕೇವಲ ೩೦೦೦ ಸೈನಿಕರು ಬದುಕಿ ಬಂದರೆಂದು ಶಸ್ತ್ರವೈದ್ಯ ಲಾರಿ ವಿವರಿಸಿದ್ದಾನೆ. ಹೋದ ಕಡೆಗಳಲ್ಲೆಲ್ಲಾ ನೈರ್ಮಲ್ಯ ಇಲ್ಲದ್ದರಿಂದ ಸಾಂಕ್ರಾಮಿಕ ಜಾಡ್ಯಗಳಾದ ವಿಷಮಶೀತ, ಸೊಕ್ಕಿನ ಜ್ವರಗಳೇ ಮುಂತಾದ ರೋಗಗಳು ಹಬ್ಬಿ, ಅವುಗಳ ಪರಿಣಾಮವಾಗಿ ಉಂಟಾದ ಸಾವುಗಳೇ ನೆಪೋಲಿಯನ್ನಿನ ಸೋಲಿಗೆ ಮುಖ್ಯ ಕಾರಣಗಳಾಗಿದ್ದವು.

೧೮ ಮತ್ತು ೧೯ನೇ ಶತಮಾನಗಳಲ್ಲಿ ನೇಯ್ಗೆ ಯಂತ್ರ, ಕಲ್ಲಿದ್ದಲಿನ ಊದು ಕುಲುಮೆ, ಜೇಮ್ಸ್ ವ್ಯಾಟ್ ಕಂಡುಹಿಡಿದ ಹಬೆ ಯಂತ್ರ ಬಳಕೆಗೆ ಬಂದಿದ್ದರಿಂದ ಕಬ್ಬಿಣ ಮತ್ತು ನೇಯ್ಗೆ ಕಾರ್ಖಾನೆಗಳು ಹಿಂದೆ ಯಾವಾಗಲೂ ಇಲ್ಲದಿದ್ದ ಮಟ್ಟಕ್ಕೆ ಅಭಿವೃದ್ಧಿ ಹೊಂದಿ, ಹಳ್ಳಿಯ ಜನರು ಪಟ್ಟಣವನ್ನು ಸೇರಲು ಅವಕಾಶವಾಯಿತು. ಈ ಬದಲಾವಣೆಗಳ ಜೊತೆಯಲ್ಲೇ ಅವುಗಳ ಪುರೋಭಿವೃದ್ಧಿಗೋಸ್ಕರ, ಯಂತ್ರಶಿಲ್ಪ, ಹೊಗೆಬಂಡಿ, ವಿದ್ಯುಚ್ಛಕ್ತಿ ಮುಂತಾದವೆಲ್ಲಾ ಬೆಳೆದುಬಂದಿದ್ದವು. ಹೀಗೆ ಪಟ್ಟಣಗಳು, ಕಾರ್ಖಾನೆಗಳು ಹೆಚ್ಚಿದಂತೆಲ್ಲಾ ಹೊಸ ಸಮಸ್ಯೆಗಳು ತಲೆದೋರಿದವು. ಜನಸಂದಣಿ, ಅನಾರೋಗ್ಯಕರ ಮನೆ, ಅಶುದ್ಧ ನೀರಿನ ಸರಬರಾಜು ಮತ್ತು ಆಹಾರಗಳು ಕಾರಣವಾಗಿ ಜನರ ಜೀವನ ಅಪಾಯಕ್ಕೀಡಾಗಿತ್ತು. ಇದರಿಂದ ರೋಗೋತ್ಪತ್ತಿ, ರೋಗ ವ್ಯಾಪನೆಯಿಂದ ಅಪಾರ ಪ್ರಾಣಗಳು ನಷ್ಟಗಳಾಗಿದ್ದವು. ಇದನ್ನು ತಡೆಯಲು ಆಗಿನ ವೈದ್ಯರಿಂದ ಸಾಧ್ಯವಾಗಿರಲಿಲ್ಲ. ಸಾರ್ವಜನಿಕ ಆರೋಗ್ಯವನ್ನು ಕಾಪಾಡಲು ವೈದ್ಯರ ಸಹಾಯವಿದ್ದರೂ ಸರ್ಕಾರದ ಬೆಂಬಲ ಮತ್ತು ಪ್ರೋತ್ಸಾಹ ಬೇಕೇಬೇಕಾಗಿತ್ತು. ಈ ಭಾವನೆಯನ್ನು ಸಮರ್ಥಿಸಿ, ಪ್ರಭಾವಶಾಲಿ ಜೊಹಾನ್ ಪೀಟರ್ ಫ್ರಾಂಕ್ ಕೆಲಸ ಮಾಡಲಾರಂಭಿಸಿ ಸಾರ್ವಜನಿಕ ಆರೋಗ್ಯದ ಪಿತಾಮಹನೆಂದು ಹೆಸರು ಪಡೆದಿದ್ದನು.

ಸಾರ್ವಜನಿಕ ಆರೋಗ್ಯ

೧೮ ಮತ್ತು ೧೯ನೇ ಶತಮಾನಗಳಲ್ಲಿ ಅನೇಕ ವಿದ್ವಾಂಸರು ಜನಾರೋಗ್ಯದ

ವಿಚಾರವನ್ನು ತಲೆಗಂಟಿಸಿಕೊಂಡು ರೋಗವ್ಯಾಪನೆಯನ್ನು ಸುಧಾರಿಸಲು ಪ್ರಾರಂಭಿಸಿದ್ದರು.

ಗಿಯೊವಿನ್ನಿ ಲ್ಯಾನ್ಸಿಸಿ

ಇವರ ಪೈಕಿ ಗಿಯೋವಿನ್ನಿ ಮರಿಯ ಲ್ಯಾನ್ಸಿಸಿ (೧೬೫೪–೧೭೨೦) ರೋಮಿನಲ್ಲಿ ಪ್ರಾಧ್ಯಾಪಕನಾಗಿದ್ದಾಗಲೇ ಮಲೇರಿಯ ಹಬ್ಬುವಿಕೆಯನ್ನೂ, ಜವುಗು ಭೂಮಿಯಿಂದೇಳುವ ಗಾಳಿಯ ಕೆಡುಕನ್ನೂ ತಿಳಿಸಿದ್ದನು. ಮಲೇರಿಯ ಹಬ್ಬಲು ಸೊಳ್ಳೆಗಳೇ ಕಾರಣವೆಂದೂ ತಿಳಿಸಿದ್ದನು. ಥಟ್ಟನೆ ಸಂಭವಿಸುವ ಮರಣ ಕುರಿತು ಬರೆದಿದ್ದ ಪುಸ್ತಕದಲ್ಲಿ ಹಿಗ್ಗಲಿದ ಹೃದಯ, ಕವಾಟಗಳ ಮೇಲೆದ್ದಿರುವ ಗಂಟುಗಳು ಥಟ್ಟನೆ ಸಂಭವಿಸುವ ಮರಣಕ್ಕೆ ಕಾರಣಗಳೆಂದೂ ತಿಳಿಸಿದ್ದನು.

ಬರ್ನಾರ್ಡಿನೊ ರಾಮುಜಿನ್ನಿ

ಇದೇ ಕಾಲದಲ್ಲಿ ಮೊಡೀನ ಪಟ್ಟಣದ ಪ್ರಾಧ್ಯಾಪಕ ಬರ್ನಾರ್ಡಿನೊ ರಾಮುಜಿನ್ನಿ (೧೬೩೩–೧೭೧೪) ಕಸಬುಗಳಿಂದ ಹುಟ್ಟುವ ರೋಗಗಳ ವಿಷಯವನ್ನು ಬರೆದಿದ್ದನು. ಗಣಿ ಕೆಲಸಗಾರರಲ್ಲೂ, ಕಲ್ಲುಕುಟಿಗರಲ್ಲೂ ಬರುವ ಶ್ವಾಸಕೋಶದ ರೋಗಗಳನ್ನೂ, ಕಮ್ಮಾರರಲ್ಲೂ ಚಿನ್ನದ ಮುಲಾಮುಗಾರರಲ್ಲೂ ಬರುವ ಕಣ್ಣಿನ ರೋಗಗಳನ್ನೂ, ಮುದ್ರಣಕಾರರಲ್ಲೂ, ಕುಂಬಾರರಲ್ಲೂ ಬರುವ ಸೀಸವಿಷತೆಯನ್ನೂ ಪಾದರಸದ ಮುಲಾಮನ್ನು ಹಚ್ಚುತ್ತಿದ್ದ ಶಸ್ತ್ರವೈದ್ಯರಲ್ಲಿ ಪಾದರಸವಿಷತೆಯನ್ನೂ, ಇತರ ರೋಗಗಳನ್ನೂ ವಿವರಿಸಿದ್ದನು.

ಜೊಹಾನ್ ಪೀಟರ್ ಫ್ರಾಂಕ್

ಸಾರ್ವಜನಿಕ ಆರೋಗ್ಯದ ಅಭಿವೃದ್ಧಿಯಲ್ಲಿ ಜೊಹಾನ್ ಪೀಟರ್ ಫ್ರಾಂಕ್ (೧೭೪೫–೧೮೨೧) ತನ್ನ ವರ್ಗದವರೆಲ್ಲರಿಗಿಂತಲೂ ಹೆಚ್ಚು ಸೇವೆಯನ್ನು ಸಲ್ಲಿಸಿದನು. ಜರ್ಮನಿ, ಆಸ್ಟ್ರಿಯ, ರಷ್ಯ ದೇಶಗಳಿಗೆ ಸೇರಿದ ಪಟ್ಟಣಗಳಲ್ಲಿ ಕೆಲಸ ಮಾಡಿ ೫ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕನಾಗಿದ್ದನು. ಅವನು ತನ್ನ ಚಿಕ್ಕಂದಿನಿಂದಲೂ ಸಾಮಾಜಿಕ ರೋಗಗಳ ಕಾರಣ ತಿಳಿಯಲು ಆಸಕ್ತನಾಗಿದ್ದನು. ವಿಶೇಷವಾಗಿ, ಅವನು ಜರ್ಮನಿ ದೊರೆಗಳ ಆಸ್ಥಾನದಲ್ಲಿದ್ದುದರಿಂದ ಸಾಮಾಜಿಕ ನಿಯಮಗಳನ್ನು ಸ್ಥಳಕ್ಕನುಸಾರವಾಗಿ ನಡೆಯಿಸುವಂತೆ ಪ್ರೇರೇಪಿಸಿದ್ದನು. ವೈದ್ಯರ, ದಾದಿಯರ ಶಿಕ್ಷಣದಲ್ಲೂ, ಆಸ್ಪತ್ರೆಗಳ ಆಡಳಿತದಲ್ಲೂ ಸಲಹೆ ಕೊಟ್ಟಿದ್ದನು. ೧೦ ವರ್ಷಗಳ ಕಾಲ ವಿಯನ್ನಾದಲ್ಲಿ ವೈದ್ಯಶಾಸ್ತ್ರ ಪ್ರಾಧ್ಯಾಪಕನಾಗಿದ್ದಾಗ ವೈದ್ಯಶಿಕ್ಷಣದಲ್ಲೂ ಉತ್ತಮ ಸಲಹೆ ನೀಡಿದ್ದನು. ಅವನ ಪ್ರಸಿದ್ಧವಾದ "ಮೆಡಿಷನಿಷ್ ಪಾಲಿಜಿ" ಪುಸ್ತಕದ ಮೊದಲನೆಯ ಸಂಪುಟದಲ್ಲಿ ವಿವಾಹ, ಸಂತಾನವೃದ್ಧಿ, ಗರ್ಭಾದಾನ, ಶಿಶುಜನನ ಮುಂತಾದ ವಿಷಯಗಳನ್ನೂ; ಎರಡನೇ ಸಂಪುಟದಲ್ಲಿ ಮಕ್ಕಳ ಆರೋಗ್ಯ, ಮೇಹ ರೋಗ ಮತ್ತು ಆಸ್ಪತ್ರೆಗಳ ವಿಷಯಗಳನ್ನೂ; ಮೂರನೆಯದರಲ್ಲಿ ಆಹಾರ,

ಉಡುಪು, ವಾಸಸ್ಥಾನಗಳ ವಿಷಯವನ್ನೂ ; ೪ ಮತ್ತು ೫ನೇ ಸಂಪುಟಗಳಲ್ಲಿ ಅನಿರೀಕ್ಷಿತ ಘಟನೆ, ಅಪರಾಧ, ಹೆಣಗಳ ವ್ಯವಸ್ಥೆ ಕ್ರಮಗಳನ್ನೂ; ೬ನೇಯದರಲ್ಲಿ ವೈದ್ಯ ಶಿಕ್ಷಣ, ವೈದ್ಯವೃತ್ತಿ ವಿಷಯಗಳನ್ನೂ ವಿವರಿಸಿದ್ದನು. ಇವನ್ನು ಅನುಸರಿಸಲು ಅವನು ಜೀವಂತನಾಗಿದ್ದಾಗ ಸಾಧ್ಯವಾಗದಿದ್ದರೂ, ಯುದ್ಧದ ಗಲಭೆ ನಿಂತು ಶಾಂತಿ ಸ್ಥಾಪನೆಯಾದ ಅನಂತರ ಅವನ ನುಡಿಗಳ ನಿಜಾಂಶ ಗೊತ್ತಾಗಿ ಆಚರಣೆಗೆ ಬರಲಾರಂಭಿಸಿದ್ದವು.

ಸಾರ್ವಜನಿಕ ಆರೋಗ್ಯ ಸರ್ಕಾರದ ಆದ್ಯ ಕರ್ತವ್ಯವೆಂಬ ಪೀಟರ್ ಫ್ರಾಂಕಿನ ಅಭಿಪ್ರಾಯ ೧೯ನೇ ಶತಮಾನದ ಹೊಸ ವಿಷಯವಾಗಿರಲಿಲ್ಲ. ಪುರಾತನ ಗ್ರೀಕರ ಮತ್ತು ರೋಮನ್ನರ ಆಡಳಿತದಲ್ಲಿ ಸಾರ್ವಜನಿಕ ಆರೋಗ್ಯ ನೋಡಿಕೊಳ್ಳಲು ವೈದ್ಯರನ್ನು ಸಂಬಳ ಕೊಟ್ಟು ಸರ್ಕಾರ ನೇಮಿಸಿತ್ತು. ಬಡವರಿಗೆ ಉಚಿತವಾಗಿ ಸಹಾಯವೂ ಸಿಕ್ಕುತ್ತಿತ್ತು. ಮಧ್ಯ ಯುಗದಲ್ಲೂ, ೧೫, ೧೬ ಮತ್ತು ೧೭ನೇ ಶತಮಾನಗಳಲ್ಲೂ ಪಟ್ಟಣಗಳಲ್ಲಿ ಬಡವರ ಆರೋಗ್ಯ ಮತ್ತು ಸ್ಥಳೀಯ ಆರೋಗ್ಯವನ್ನು ಕಾಪಾಡಲು ವೈದ್ಯರನ್ನು ನೇಮಿಸಲಾಗಿತ್ತು. ಆದರೆ ಕೈಗಾರಿಕೆ ಕ್ರಾಂತಿಯಾದ ಅನಂತರ ಜನಸಂಖ್ಯೆ ಹೆಚ್ಚಾದುದರಿಂದಲೂ, ಪಟ್ಟಣಗಳು ಅತಿಯಾಗಿ ಬೆಳೆದಿದ್ದರಿಂದಲೂ ಸಾರ್ವಜನಿಕ ಆರೋಗ್ಯವನ್ನು ಕಾಪಾಡಲು ಕಷ್ಟವಾಗಿತ್ತು. ಆದ್ದರಿಂದ ಸಾಂಕ್ರಾಮಿಕ ರೋಗಗಳು ತಲೆದೋರಿ ಸಾರ್ವಜನಿಕ ಆರೋಗ್ಯ ಒಂದು ಕಠಿಣ ಸಮಸ್ಯೆಯಾಗಿ ಪರಿಣಮಿಸಿತ್ತು. ಪಟ್ಟಣಗಳಲ್ಲಿ ಮಾತ್ರವೇ ಅಲ್ಲ, ಹಳ್ಳಿಗಳಲ್ಲಿಯೂ ಈ ಸಮಸ್ಯೆ ಎದ್ದಿತ್ತು. ವರ್ಕೌ ಪ್ರಬಲವಾಗುವವರೆವಿಗೂ ಪೀಟರ್ ಫ್ರಾಂಕಿನ ಅಭಿಪ್ರಾಯಗಳಿಗೆ ಮಾನ್ಯತೆ ಸಿಕ್ಕಿರಲಿಲ್ಲ. ಸೈಲೀಷಿಯದಲ್ಲಿ ವರ್ಕೌ ಸೊಕ್ಕಿನ (ಟೈಫಸ್) ಜ್ವರದ ಹಾವಳಿಯನ್ನು ತಡೆಗಟ್ಟಲು ಪ್ರಾರಂಭಿಸಿದಾಗ ಫ್ರಾಂಕಿನ ಸೂಚನೆಗಳು ಉಪಯುಕ್ತವೆಂದು ವ್ಯಕ್ತವಾದವು. ಸಾರ್ವಜನಿಕ ಆರೋಗ್ಯ ಸರ್ಕಾರದ ಸಮಸ್ಯೆಯೆಂದೂ, ಸಮಾಜ ಮತ್ತು ಆರ್ಥಿಕ ಹಿತಸಾಧನೆ ಸರ್ಕಾರದ ಬೆಂಬಲವಿಲ್ಲದಿದ್ದರೆ ನಡೆಯುವುದಿಲ್ಲವೆಂದೂ ವರ್ಕೌ ಘೋಷಿಸಿದ್ದನು. 'ಮಹಾ ಮಹಾ ಸಾಮ್ರಾಜ್ಯಗಳ ಗತಿಯನ್ನು ಅವುಗಳ ಜನರ ಇಲ್ಲವೇ ಸೈನ್ಯಗಳ ಆರೋಗ್ಯ ನಿರ್ಣಯಿಸುತ್ತದೆಂದು ಒಂದಕ್ಕಿಂತಲೂ ಹೆಚ್ಚು ಬಾರಿ ಚರಿತ್ರೆ ತೋರಿಸಿಕೊಟ್ಟಿದೆ' ಎಂದು ವರ್ಕೌ ಹೇಳಿದ್ದನು.

ಏಕಾಣುಜೀವಿಶಾಸ್ತ್ರ ಮುಂದುವರಿದು, ಏಕಾಣುಜೀವಿಗಳಿಂದಲೂ ಪರೋಪಜೀವಿಗಳಿಂದಲೂ ರೋಗ ಉತ್ಪತ್ತಿಯಾಗುತ್ತದೆಂದು ತಿಳಿವಳಿಕೆ ಬಂದ ಮೇಲೆ ಸಾರ್ವಜನಿಕ ಆರೋಗ್ಯದ ಸಮಸ್ಯೆ ಸುಲಭವಾಗುತ್ತಾ ಬಂತು. ಮಲಿನವಾದ ನೀರು, ಹಾಲು, ಆಹಾರಗಳ ಸೇವನೆಯಿಂದ ವಿಷಮಶೀತ ಜ್ವರ, ಕಾಲರಾಗಳೂ, ಕಫದ ಧೂಳಿನಿಂದ ಕ್ಷಯವೂ, ಸೊಳ್ಳೆಗಳ ಕಡಿತದಿಂದ ಮಲೇರಿಯ ಜ್ವರ ಮತ್ತು ಹಳದಿ ಜ್ವರವೂ, ನೊಣದ ಕಡಿತದಿಂದ ನಿದ್ರಾರೋಗವೂ, ಮನೆ ನೊಣದಿಂದ ವಿಷಮಶೀತ

ಜ್ವರವೂ ಬರುತ್ತದೆಂದು ಗೊತ್ತಾದನಂತರ ಕೇವಲ ಸಾಧಾರಣ ವೈದ್ಯವೃತ್ತಿಯಲ್ಲಿ ತೊಡಗಿರುವ ವೈದ್ಯನಿಂದ ಸಾರ್ವಜನಿಕ ಆರೋಗ್ಯ ಸಾಧ್ಯವಿಲ್ಲವೆಂದೂ, ಸರ್ಕಾರದ ಬೆಂಬಲ ಅತ್ಯಗತ್ಯವೆಂದೂ ಮನದಟ್ಟಾಗಿತ್ತು. ಆಗ ಪೀಟರ್ ಫ್ರಾಂಕಿನ ಘೋಷಣೆಗಳು ನಿಜವೆಂದು ದೃಢವಾದುವು.

ಈ ಸಮಸ್ಯೆಗಳನ್ನು ಮುಂದೆಯೂ ಪರೀಕ್ಷಿಸಿದಾಗ ರೋಗಗಳು ಬಡವರಲ್ಲಿ ಹೆಚ್ಚೆಂದೂ, ರೋಗಗಳಿಗೂ ಅಂಕಿ ಅಂಶಗಳ ಸಂಗ್ರಹಕ್ಕೂ ಇರುವ ಹತ್ತಿರ ಸಂಬಂಧವೂ ಗೋಚರವಾದವು. ರೋಗ ವ್ಯಾಪನೆ, ರೋಗಗಳಿಂದಾದ ಮರಣ ಸಂಖ್ಯೆಯ ಅಂಶಗಳ ನಿಜಸ್ಥಿತಿ ಸರ್ಕಾರಕ್ಕೆ ತಿಳಿದ ಮೇಲೆ ಸಾರ್ವಜನಿಕ ಆರೋಗ್ಯದಲ್ಲೂ, ಸ್ಥಳೀಯ ನೈರ್ಮಲ್ಯದಲ್ಲೂ ಆಸಕ್ತಿ ಹುಟ್ಟಿ ಅವಶ್ಯಕ ರೋಗ ನಿವಾರಕ ಕ್ರಮಗಳನ್ನು ಸರ್ಕಾರ ಆಚರಣೆಗೆ ತಂದಿತ್ತು.

ಪೆಟ್ಟೆನ್ಕಾಫರ್

ಮ್ಯೂನಿಚ್ಚಿನ ಮೊದಲ ಜನಾರೋಗ್ಯದ ಸಂಸ್ಥೆಯ ಆಡಳಿತಗಾರನಾದ ಮ್ಯಾಕ್ಸ್ ವಾನ್ ಪೆಟ್ಟೆನ್ಕಾಫರ್ ಸಾರ್ವಜನಿಕ ಆರೋಗ್ಯವೆಂದರೆ ಗ್ರಾಮಪಾಕೀಜು, ಕುಡಿಯುವ ನೀರಿನ ವ್ಯವಸ್ಥೆ ಮಾತ್ರವಲ್ಲ, ಜನರ ಪೋಷಣೆಗೆ ಅಗತ್ಯವಾದ ಸರಿಯಾದ ಹಾಗೂ ಸಾಕಾಗುವ ಆಹಾರ ಮತ್ತು ವಸತಿ ಕೂಡ ಅತ್ಯಗತ್ಯವೆಂದು ಹೇಳಿದನು. ಅನೇಕ ಅಡ್ಡಿ ಆತಂಕಗಳು ಈ ಸುಧಾರಣೆಗಳನ್ನು ನೆರವೇರಿಸುವಾಗ ಬಂದರೂ ಜಾಣತನದಿಂದ ತಳ್ಳಿಹಾಕಿ ಸಾರ್ವಜನಿಕ ಆರೋಗ್ಯ ಕಾಪಾಡಲು ತಕ್ಕ ಕ್ರಮಗಳನ್ನು ಸಕಾಲದಲ್ಲಿ ಜರ್ಮನಿಯ ಚಾನ್ಸಲರ್ ಬಿಸ್ಮಾರ್ಕ್ ಕೈಗೊಂಡಿದ್ದನು. ಈ ಕ್ರಮಗಳನ್ನು ಇತರ ರಾಜ್ಯಗಳೂ ಕೂಡ ತಕ್ಷಣವೇ ಅನುಸರಿಸಿ ಜನರ ಕ್ಷೇಮ ಸಾಧನೆಗೆ ಗುರಿಯಾದವು.

ವೈದ್ಯಶಾಸ್ತ್ರಕ್ಕೆ ಫ್ರಾನ್ಸಿನ ಶಸ್ತ್ರವೈದ್ಯರ ಕೊಡುಗೆ

೧೯ನೇ ಶತಮಾನದ ಮೊದಲ ವರ್ಷಗಳಲ್ಲಿ ಚತುರರಾದ ವೈದ್ಯರೂ, ಶಸ್ತ್ರವೈದ್ಯರೂ ಫ್ರಾನ್ಸಿನಲ್ಲಿ ಹುಟ್ಟಿ ವೈದ್ಯಶಾಸ್ತ್ರಕ್ಕೆ ಸಾಕಷ್ಟು ಕೊಡುಗೆ ನೀಡಿದ್ದರು. ಈ ಕೆಲಸದಲ್ಲಿ ಒಬ್ಬರಿಗಿಂತ ಒಬ್ಬರು ಮೀರಿಸಿದ್ದರು. ಇಲ್ಲಿಯ ತನಕ ಲೇಡನ್ನಿನಲ್ಲಿ ನೆಲೆಸಿದ್ದ ವೈದ್ಯ ಜ್ಯೋತಿ ಈಗ ಫ್ರಾನ್ಸಿಗೆ ಬಂದು ನೆಲೆಸಿತ್ತು. ಆಗ ತಾನೇ ಮುಗಿದಿದ್ದ ಫ್ರಾನ್ಸಿನ ಕ್ರಾಂತಿ, ಹಾಗೂ ನೆಪೋಲಿಯನ್ನಿನ ಯುದ್ಧಗಳು ಎಷ್ಟರಮಟ್ಟಿಗೆ ಈ ವೈದ್ಯ ಜ್ಯೋತಿಯ ಪ್ರಭಾವಕ್ಕೆ ಕಾರಣವೋ ತಿಳಿಯದು, ಆದರೂ ಅನೇಕ ವೈದ್ಯವಿದ್ವಾಂಸರು ನೆಪೋಲಿಯನ್ನನ ಆಡಳಿತದಲ್ಲಿ ವೈಯಕ್ತಿಕವಾಗಿಯೂ, ರಾಜಕೀಯ ಮಟ್ಟದಲ್ಲೂ ನೆರವಾಗಿದ್ದರು. ಏನೇ ಆಗಲಿ ಕ್ರಾಂತಿ ಮತ್ತು ಯುದ್ಧಗಳು ಮುಗಿದು ಶಾಂತಿ ನೆಲೆಸಿದ ಕೂಡಲೇ ಫ್ರಾನ್ಸಿನ ವೈದ್ಯ ಪರಿಸ್ಥಿತಿ ಹಾಗೂ ವೈದ್ಯ ಪರಿಶೋಧನೆ ಪ್ರಕಾಶಕ್ಕೆ ಬಂದುದರಲ್ಲಿ ಯಾವ ಅನುಮಾನವೂ ಇಲ್ಲ.

ಡಾಮಿನಿಕ್ ಜೀನ್ ಲಾರಿ

ಯುದ್ಧದಲ್ಲಿ ಭಾಗವಹಿಸಿ, ನೆಪೋಲಿಯನ್ನಿಗೆ ಆಪ್ತ ಸ್ನೇಹಿತನಾಗಿದ್ದ ಡಾಮಿನಿಕ್ ಜೀನ್ ಲಾರಿ (೧೭೬೬-೧೮೪೨) ಪ್ರಖ್ಯಾತ ಶಸ್ತ್ರವೈದ್ಯನಾಗಿದ್ದನು ಅವನು ೧೮೦೩ ಮತ್ತು ೧೮೨೯ ರಲ್ಲಿ ಬರೆದ ಪುಸ್ತಕಗಳಲ್ಲಿ ಇಟಲಿ, ಜರ್ಮನಿ, ಈಜಿಪ್ಟ್ ಮತ್ತು ರಷ್ಯಾಗಳಲ್ಲಿ ನಡೆದ ಯುದ್ಧಗಳ ಭೀಕರ ಗಾಯಗಳ ವಿವರಗಳಿದ್ದವು. ಬೊರೊಡಿನೊ ಎಂಬಲ್ಲಿ ೨೪ ಘಂಟೆಗಳೊಳಗೆ ೨೦೦ ಕೈಕಾಲುಗಳ ಛೇದನ ಮಾಡಿದ್ದನೆಂದು ತಿಳಿದುಬಂದಿದೆ. ಅಗಳುಪಾದ ರೋಗವನ್ನು ಇವನೇ ಮೊಟ್ಟಮೊದಲಿಗೆ ವಿವರಿಸಿದವನು (೧೮೧೨). ಈಜಿಪ್ಟಿನ ಕಣ್ಣುರೋಗ ಅಂಟುರೋಗವೆಂದು ತಿಳಿಸಿದವನೂ ಕೂಡ ಇವನೇ. ಈಜಿಪ್ಟಿನಲ್ಲಿದ್ದ ಫ್ರಾನ್ಸಿನ ಸೈನಿಕರಲ್ಲಿ ಕಂಡಿದ್ದ ಸ್ಕರ್ವಿ ರೋಗವನ್ನೂ ಇವನೇ ವಿವರಿಸಿದ್ದನು. ಗಾಯಗೊಂಡು ಆಹಾರವನ್ನು ನುಂಗಲಾರದ ಸೈನಿಕರಿಗೆ ರಬ್ಬರ್ ನಳಿಕೆಯನ್ನು ಗಂಟಲಿನಿಂದ ಜಠರಕ್ಕೆ ತೂರಿಸಿ ನಳಿಕೆ ಮೂಲಕ ಆಹಾರವನ್ನು ಕೊಡುತ್ತಿದ್ದನು. ಯುದ್ಧದಲ್ಲಿ ಗಾಯಗೊಂಡವರನ್ನು ತಕ್ಷಣವೇ ಕರೆದೊಯ್ಯುವ ಚರಚಿಕಿತ್ಸಾ ಕ್ರಮುವನ್ನು ಅನುಸರಿಸುತ್ತಿದ್ದನು. ಕುದುರೆ ಒದೆತದಿಂದ ನೆಪೋಲಿಯನ್ನಿಗೆ ಆಗಿದ್ದ ಏಕಮಾತ್ರ ಗಾಯವನ್ನು ಲಾರಿ ಗುಣಪಡಿಸಿದನು. ಇವನ ಯುದ್ಧ ಗಾಯಗಳ ಚಿಕಿತ್ಸೆ ಕ್ರಮುವನ್ನೂ ಇವನ ಧೈರ್ಯ ಸಾಹಸಗಳನ್ನೂ ಮೆಚ್ಚಿ ನೆಪೋಲಿಯನ್ ತಾನು ಸಾಯುವಾಗ ೧೦೦,೦೦೦ ಫ್ರಾಂಕುಗಳನ್ನು ಲಾರಿಗೆ ಬಿಟ್ಟು ಹೋಗಿದ್ದನು. ಹಾಗೂ 'ನಾನು ಕಂಡಿದ್ದವರಲ್ಲೆಲ್ಲಾ ಅತ್ಯಂತ ಶೀಲವಂತ' ಎಂದು ನೆಪೋಲಿಯನ್ ಲಾರಿಯನ್ನು ಹೊಗಳಿದ್ದನು.

ಪಿಯರ್ರೆ ಫ್ರಾಂಕಾಯ್ ಪರ್ಸಿ

ಲಾರಿಯ ಸಹೋದ್ಯೋಗಿಯೂ ಪ್ರಾಣ ಸ್ನೇಹಿತನೂ ಆಗಿದ್ದ ಪಿಯರ್ರೆ ಫ್ರಾಂಕಾಯ್ ಪರ್ಸಿ (೧೭೫೪-೧೮೨೫) ಲಾರಿಯ ಅನಂತರ ಅವನ ಅಧಿಕಾರವನ್ನು ವಹಿಸಿಕೊಂಡಿದ್ದ ಮತ್ತೊಬ್ಬ ಶಸ್ತ್ರವೈದ್ಯನಾಗಿದ್ದನು. ಇವನೂ ಕೂಡ ಗಾಯಗಳ ಚಿಕಿತ್ಸೆ ಕ್ರಮುವನ್ನೂ, ಚರಚಿಕಿತ್ಸೆ ಕ್ರಮುವನ್ನೂ ಸೈನ್ಯಾಡಳಿತವನ್ನೂ ಬಹುಮಟ್ಟಿಗೆ ಶುದ್ಧಪಡಿಸಿದ್ದನು. ಇವನು ೧೭೯೨ರಲ್ಲಿ ಬರೆದಿದ್ದ ಸೈನ್ಯದ ವೈದ್ಯಶಾಸ್ತ್ರವೆಂಬ ಪುಸ್ತಕ ಶ್ಲಾಘನೀಯವಾಗಿತ್ತು.

ಜೊಸೆಫ್ ಫ್ರಾಂಕಾಯ್ ಮ್ಯಾಲ್ಗೇಗ್ನಿ

ಇವನ ಅನಂತರ ಜೋಸೆಫ್ ಫ್ರಾಂಕಾಯ್ ಮ್ಯಾಲ್ಗೇಗ್ನಿ (೧೮೦೬-೧೮೬೫) ಪೋಲಿಷ್ ಕ್ರಾಂತಿ ಮುಗಿದ ಮೇಲೆ ಪ್ಯಾರಿಸ್ಸಿಗೆ ಹಿಂತಿರುಗಿ, ೧೮೩೪ ರಲ್ಲಿ 'ಶಸ್ತ್ರವೈದ್ಯದ ಕೈಪಿಡಿ' ಎಂಬ ಪುಸ್ತಕ ಬರೆದನು. ಇದು ಅರಬ್ಬಿ ಭಾಷೆಯೂ ಸೇರಿ ಐದು ಭಾಷೆಗಳಿಗೆ ಭಾಷಾಂತರವಾಯಿತು. ಆಂಬ್ರೋಸಿ ಪಾರೆ ಕುರಿತು ೧೮೪೦ ರಲ್ಲಿ ಬರೆದ ಪುಸ್ತಕದಲ್ಲಿ ಪಾರೆ ಜೀವನ ಚರಿತ್ರೆಯೊಡನೆ ಫ್ರಾನ್ಸಿನ ಶಸ್ತ್ರವೈದ್ಯದ ಬೆಳವಣಿಗೆಯೂ ಬರೆಯಲಾ

ಗಿತ್ತು. ಹಾಗೂ ಮೂಳೆಮುರಿತ, ಕೀಲುಪಲ್ಲಟಗಳನ್ನೂ ವಿವರಿಸಿದ್ದನು. ಮುಂಡಿ ಚಿಪ್ಪು ಮುರಿತವನ್ನು ತಾನೇ ಕಂಡುಹಿಡಿದಿದ್ದ ಲೋಹದ ಕೊಕ್ಕೆಗಳನ್ನು ಉಪಯೋಗಿಸಿ ಸರಿಪಡಿಸುತ್ತಿದ್ದನು.

ಗಿಲ್ಲಾಮೆ ಡ್ಯುಪ್ಯುಟ್ರೆನ್

'ಜನರಲ್ಲಿ ಕೊನೆಯವ, ಶಸ್ತ್ರವೈದ್ಯದಲ್ಲಿ ಮೊದಲನೆಯವ' ಎಂದು ಪರ್ಸಿ ವರ್ಣಿಸಿದ್ದ ಗಿಲ್ಲಾ ಮೆಡ್ಯುಪ್ಯುಟ್ರೆನ್ (೧೭೭೭–೧೮೩೫) ನಿಜವಾಗಿಯೂ ೧೯ನೇ ಶತಮಾನದ ಯೂರೋಪಿನ ಶಸ್ತ್ರವೈದ್ಯನೆನಿಸಿಕೊಂಡಿದ್ದನು. ಇವನು ೪ ವರ್ಷದ ಬಾಲಕನಾಗಿದ್ದಾಗ ಇವನ ಸುಂದರ ರೂಪವನ್ನು ಮೆಚ್ಚಿ ಒಬ್ಬಳು ಪುಣ್ಯವಂತೆ ಅಪಹರಿಸಿಕೊಂಡು ಹೋಗಿದ್ದಳು. ಇವಳಿಂದ ಬಿಡಿಸಿಕೊಂಡು ಬಂದ ಮೇಲೆ, ಅವನಿಗೆ ೧೨ ವರ್ಷ ವಯಸ್ಸಾಗಿದ್ದಾಗ, ಅಪ್ಪಣೆ ಪಡೆದು ಶಿಕ್ಷಣ ಕೊಡಿಸುವೆನೆಂದು ಹೇಳಿ, ಒಬ್ಬ ಅಶ್ವ ಸೈನ್ಯಾಧಿಕಾರಿ ಪ್ಯಾರಿಸ್ಸಿಗೆ ಕರೆದುಕೊಂಡು ಹೋಗಿದ್ದನು. ವಿದ್ಯಾಭ್ಯಾಸದ ಅನಂತರ ಹೊಟೇಲ್ ಡಿಯು ಎಂಬಲ್ಲಿ ಡ್ಯುಪ್ಯುಟ್ರೆನ್ ತನ್ನ ಶಸ್ತ್ರವೈದ್ಯದ ಕೆಲಸವನ್ನು ಆರಂಭಿಸಿ ಹೊಸ ಶಸ್ತ್ರಗಳನ್ನೂ, ಹೊಸ ಶಸ್ತ್ರಕ್ರಿಯೆಗಳನ್ನೂ ಕಲ್ಪಿಸಿ ಪ್ರಸಿದ್ಧಿ ಪಡೆದಿದ್ದನು. ೧೮೧೨ರಲ್ಲಿ ಶಸ್ತ್ರವೈದ್ಯದ ಪ್ರಾಧ್ಯಾಪಕತ್ವಕ್ಕೆ ಸ್ಪರ್ಧಿಸಿ, ೧೮೧೫ರಲ್ಲಿ ಮುಖ್ಯ ಶಸ್ತ್ರವೈದ್ಯನಾಗಿ ನೇಮಕವಾದನು. ಅವನ ಸಹೋದ್ಯೋಗಿಗಳು ಅವನನ್ನು ವೈಯಕ್ತಿಕವಾಗಿ ವಿರೋಧಿಸಿದರೂ, ಅವನ ಶಸ್ತ್ರಕ್ರಿಯೆಯನ್ನು ಮೆಚ್ಚಿದ್ದರು. ೧೮ನೇ ಲೂಯಿ ಚಕ್ರವರ್ತಿ ಇವನನ್ನು ಬ್ಯಾರನ್ ಪದವಿಗೆ ನೇಮಿಸಿ ಗೌರವಿಸಿದ್ದನು. ಕೃತಕ ಮಲದ್ವಾರವನ್ನು ಮಾಡಲು ಅಂತ್ರಚ್ಛೇದನ ಶಸ್ತ್ರವನ್ನು ಕಂಡುಹಿಡಿದಿದ್ದನು. ರೋಗವಿದ್ದ ದವಡೆ ಮೂಳೆಯನ್ನು ತೆಗೆದು ಸರಿಪಡಿಸುವ ಕ್ರಮದಲ್ಲಿ ಮೊದಲನೆಯವನಾಗಿದ್ದನು. ನುಲಿಗೊರಳನ್ನು ಸರಿಪಡಿಸಲು ಸ್ಟೆರ್ನೊಕ್ಲೀಡೊ ಮ್ಯಾಸ್ಟಾಯ್ಡ್ ಸ್ನಾಯುವನ್ನು ಕತ್ತರಿಸುತ್ತಿದ್ದನು. ಮೊಟ್ಟಮೊದಲಿಗೆ ಹೊರ ಇಲಿಯಕ್ ಧಮನಿಯನ್ನು ಬಿಗಿದು ಕಟ್ಟಿದ್ದನು. ಅವನ ಹೆಸರಿನಲ್ಲಿರುವ ಡ್ಯುಪ್ಯುಟ್ರೆನ್ನಿನ ಚಿಂಸೆಳೆತವನ್ನು ಶಸ್ತ್ರಕ್ರಿಯೆಯಿಂದ ಸರಿಪಡಿಸುತ್ತಿದ್ದನು. ಶಸ್ತ್ರಕ್ರಿಯೆ ಮಾಡಲೇಬೇಕಾದರೆ ಮಾತ್ರ ಮಾಡುತ್ತಿದ್ದನಲ್ಲದೆ ಅನಾವಶ್ಯಕವಾಗಿ ಮಾಡುತ್ತಿರಲಿಲ್ಲ ಮಾಡಲು ನಿರ್ಧರಿಸಿದನಂತರ ರೋಗಿಯನ್ನು ಎಚ್ಚರಿಕೆಯಿಂದ ಪರೀಕ್ಷಿಸಿ, ಎಲ್ಲವನ್ನೂ ಹದಪಡಿಸಿಕೊಂಡು ದೃಢ ಮನಸ್ಸಿನಿಂದ ನಡೆಸುತ್ತಿದ್ದನು. ಅವನ ರೋಗಿ ಹಾಸೆಪಕ್ಕದ ಉಪನ್ಯಾಸಗಳನ್ನು ಅವನ ಶಿಷ್ಯಂದಿರು ಒಟ್ಟುಗೂಡಿ ನಾಲ್ಕು ಸಂಪುಟಗಳಲ್ಲಿ ಪ್ರಕಟ ಮಾಡಿದರು. ಇದು ಜರ್ಮನ್, ಇಂಗ್ಲಿಷ್, ಇಟಾಲಿಯನ್, ಡೇನಿಷ್ ಭಾಷೆಗಳಿಗೆ ಭಾಷಾಂತರವಾಯಿತು.

ಜೀನ್ ಕ್ರುವೆಲ್ಲಿಯರ್

ಫ್ರಾನ್ಸಿನ ಶಸ್ತ್ರವೈದ್ಯದ ತುತ್ತತುದಿಯನ್ನು ಮುಟ್ಟಿದ್ದ ಡ್ಯುಪ್ಯುಟ್ರೆನ್, ರೋಗ

ಶಾಸ್ತ್ರೀಯ ಅಂಗರಚನೆಯನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತಿದ್ದ ಅವನ ಸಹೋದ್ಯೋಗಿ ಜೀನ್ ಕ್ರುವೆಲ್ಲಿಯರ್ (೧೭೯೧-೧೮೭೪) ೩೦ ವರ್ಷಗಳ ಅನಂತರ ರೋಗಶಾಸ್ತ್ರೀಯ ಅಂಗರಚನೆಯ ಚಿತ್ರಪಠಗಳ ಪುಸ್ತಕ ತಯಾರಿಸಿ ಪ್ರಕಟಿಸಿದನು. ಇವನು ತನ್ನ ಎಳೆತನದಲ್ಲಿ ಪಾದ್ರಿಯಾಗಬೇಕೆಂದಿದ್ದರೂ ತಂದೆಯ ಇಷ್ಟದಂತೆ ವೈದ್ಯ ವಿದ್ಯಾಭ್ಯಾಸ ಮಾಡಲು ಪ್ಯಾರಿಸ್ಸಿಗೆ ಬಂದು, ಅಲ್ಲಿ ಶವ ಪರೀಕ್ಷೆಯನ್ನು ಮೊದಲನೆಯ ಸಾರಿ ನೋಡಿದ ಕ್ಷಣವೇ ಅಸಹ್ಯಪಟ್ಟು ವೈದ್ಯಶಾಲೆಯನ್ನು ಬಿಟ್ಟು ಓಡಿಹೋಗಿದ್ದನು. ಆದರೆ ತಂದೆಯ ಆಜ್ಞೆಯನ್ನು ಉಲ್ಲಂಘಿಸಲಾಗದೆ ಪುನಃ ಹಿಂದಕ್ಕೆ ಬಂದು ವೈದ್ಯ ವಿದ್ಯೆಯಲ್ಲಿ ತೊಡಗಿದ್ದನು ಆಗ ಡ್ಯುಪ್ಯುಟ್ರೆನ್ನಿನ ಆದರದ ಸ್ವೀಕಾರ ಸಿಕ್ಕಿ ಅವನ ಪ್ರಭಾವದಿಂದ ಕ್ರುವೆಲ್ಲಿಯರ್ ರೋಗಶಾಸ್ತ್ರೀಯ ಅಂಗರಚನೆಯನ್ನು ಮುಂದುವರಿಸಲು ಆಸಕ್ತಿ ಹೊಂದಿದನು. ೧೮೧೬ರಲ್ಲಿ ವೈದ್ಯಪಂಡಿತ ಪದವಿ ಪಡೆದು, ತರುವಾಯ ಪ್ಯಾರಿಸ್ಸಿನಲ್ಲಿ ರೋಗಶಾಸ್ತ್ರೀಯ ಅಂಗರಚನೆಯ ಪ್ರಾಧ್ಯಾಪಕನಾಗಿ ೩೦ ವರ್ಷಗಳ ಕಾಲ ಅದೇ ಕೆಲಸದಲ್ಲಿ ತೊಡಗಿದ್ದನು. ಇವನು ಬರೆದಿದ್ದ ಚಿತ್ರಪಠಗಳ ಪುಸ್ತಕ ಆಗಿನ ಕಾಲದ ಪುಸ್ತಕಗಳಿಗೆಲ್ಲಾ ಉತ್ತಮವಾಗಿತ್ತು. ಅದರಲ್ಲಿ ಚೆಲ್ಲಿದ ಪೆಡಸಣೆಯನ್ನು ಮೊಟ್ಟಮೊದಲಿಗೆ ವಿವರಿಸಿತ್ತು. ಜಠರದ ಹುಣ್ಣು ಮತ್ತು ಮುಂದುವರಿವ ಸ್ನಾಯುವಿನ ಕ್ಷೀಣತೆಗಳ ವಿವರ ಮತ್ತು ಚಿತ್ರಗಳು ಕೂಡ ಅದರಲ್ಲಿ ಇದ್ದವು.

ವೈದ್ಯಶಾಸ್ತ್ರಕ್ಕೆ ಪ್ಯಾರಿಸ್ಸಿನ ವೈದ್ಯರ ಕೊಡುಗೆ

ಫಿಲಿಪ್ಪೆ ಪೈನೆಲ್

ಫಿಲಿಪ್ಪೆ ಪೈನೆಲ್ (೧೭೪೫–೧೮೨೬) ಸಾಧಾರಣ ವೈದ್ಯನಾಗದೆ ಮನಶಾಸ್ತ್ರಜ್ಞನಾಗಿ ಮನೋರೋಗಿಗಳನ್ನು ಕರುಣೆಯಿಂದ ಕಾಣಲು ಪ್ರಾರಂಭಿಸಿದವರಲ್ಲಿ ಮೊಟ್ಟಮೊದಲನೆಯವನು. ಟೌಲೌಸಿಯಲ್ಲಿ ವೈದ್ಯ ಪಂಡಿತ ಪದವಿ ಪಡೆದನಂತರ ಪ್ಯಾರಿಸ್ಸಿನಲ್ಲಿ ಗಣಿತಶಾಸ್ತ್ರದ ಅಧ್ಯಾಪಕನಾಗಿ ಮೂಳೆ ಮತ್ತು ಕೀಲುಗಳ ಚಲನೆಯನ್ನು ಕುರಿತು ಲೇಖನಗಳನ್ನು ಬರೆದನು. ಈ ಲೇಖನಗಳ ಉತ್ತಮ ವಿವರಣೆ ಎಲ್ಲರ ಮೆಚ್ಚಿಗೆಯನ್ನು ಸಂಪಾದಿಸಿತು. ಅವನ ಸ್ನೇಹಿತನೊಬ್ಬ ಹುಚ್ಚು ಹಿಡಿದು, ಕಾಡಿಗೆ ಓಡಿ ಹೋಗಿ, ತೋಳಗಳ ಬಾಯಿಗೆ ತುತ್ತಾದ್ದನ್ನು ನೋಡಿ ಮನಸ್ಸು ಕರಗಿ ಹುಚ್ಚುಗಳನ್ನು ಅಭ್ಯಾಸ ಮಾಡಲು ದೃಢ ಮನಸ್ಸು ಮಾಡಿ ಕಲಿತು, ೧೭೯೩ರಲ್ಲಿ ಪ್ಯಾರಿಸ್ಸಿನ ಬಿಸೆಟ್ರೆ ಹುಚ್ಚಾಸ್ಪತ್ರೆಯ ವೈದ್ಯನಾಗಿ ನೇಮಕವಾದನು. ಆ ಆಸ್ಪತ್ರೆಯಲ್ಲಿ ರೋಗಿಗಳನ್ನು ಕಾಡು ಮೃಗಗಳಂತೆ ಸರಪಣಿಗಳಿಂದ ಬಿಗಿದಿರುವುದನ್ನು ತಪ್ಪಿಸಿ ಅನುಕಂಪ ಚಿಕಿತ್ಸಾ ಕ್ರಮಗಳನ್ನು ಜಾರಿಗೆ ತಂದನು. ಅಲ್ಲಿ ಒಬ್ಬ ರೋಗಿಯನ್ನು ೪೦ ವರ್ಷಗಳಿಂದಲೂ ಮತ್ತೊಬ್ಬನನ್ನು ೩೬ ವರ್ಷಗಳಿಂದಲೂ ಅಪರಾಧಿಗಳಂತೆ ಸರಪಣಿಯಿಂದ ಬಿಗಿದಿಟ್ಟಿದ್ದರು.



ಪೈನೆಲ್ ಹುಚ್ಚರನ್ನು ಸಂಕೋಲೆಯಿಂದ ಬಿಡುಗಡೆ ಮಾಡಿ ದಯಾಪರ ಚಿಕಿತ್ಸೆ ಕೊಡಲು ಉತ್ತೇಜಿಸಿದನು (೧೭೯೩)

ಇವನ ಪ್ರಭಾವದಿಂದ, ರೋಗಿಗಳ ಪೂರ್ವ ಚರಿತ್ರೆ, ರೋಗ ಲಕ್ಷಣ,ಪ್ರಯೋಗಗಳ ವಿವರಗಳನ್ನೆಲ್ಲಾ ಬರೆಯುವ ಪದ್ಧತಿ ಜಾರಿಗೆ ಬಂದು, ಮನೋರೋಗಿಗಳಿಗೆ ಸಲ್ಲಬೇಕಾದ ಚಿಕಿತ್ಸಾಕ್ರಮಗಳು ಆಚರಣೆಗೆ ಬಂದವು. ಈ ಸಾಧನೆಗಳು ವಿಜ್ಞಾನ ದೃಷ್ಟಿಯಲ್ಲಿ ಶ್ರೇಷ್ಠವಾಗಿದ್ದರೂ, ದುರ್ಮಾರ್ಗದವರಿಗೆ ಪೈನೆಲ್ ಆಶ್ರಯಕೊಡುತ್ತಿರುವನೆಂದು ವಿರೋಧಿಗಳ ಗುಂಪೊಂದು ಅವನನ್ನು ದೂಷಿಸಿ ಹೊಡೆಯಲೆತ್ನಿಸಿತ್ತು. ಪೈನೆಲ್‌ನಿಂದ ಗುಣಹೊಂದಿದ್ದ ರೋಗಿಯೊಬ್ಬ ಅವನ ಸಹಾಯಕ್ಕೆ ಬರದಿದ್ದರೆ ಪೈನೆಲ್ಲಿಗೆ ಅಪಾಯ ಸಂಭವಿಸಬಹುದಿತ್ತು.

ಮನೋರೋಗಿಗಳ ಸಲುವಾಗಿ ಜಾರಿಗೆ ತಂದಿದ್ದ ಅಭಿವೃದ್ಧಿಗಳಲ್ಲದೆ,ರೋಗಗಳ ವರ್ಗೀಕರಣವನ್ನೂ ಜಾರಿಗೆ ತಂದಿದ್ದನು. ಪ್ರಾಣಿಗಳಲ್ಲೂ ಸಸ್ಯಗಳಲ್ಲೂ ಇರುವಂತೆ ರೋಗಗಳನ್ನು ಕೂಡ ವಿಂಗಡಿಸಿ, ೨೭೦೦ ರೋಗಗಳ ವರ್ಗ, ತರಗತಿ, ಕುಲ, ಜಾತಿ, ಪ್ರಭೇದಗಳನ್ನು ಗೊತ್ತುಮಾಡಿದನು. ಪೈನೆಲ್ಲಿನ ಈ ವಿಂಗಡಣೆ ಹೊಸದಾಗಿರಲಿಲ್ಲ. ಕಾರ್ಲ್ ವಾನ್ ಲಿನ್ನೆ (೧೭೦೭-೧೭೭೮) ಸಸ್ಯಗಳನ್ನು ವರ್ಗೀಕರಿಸಿದ್ದಲ್ಲದೆ ರೋಗಗಳನ್ನೂ ೧೭೬೩ರಲ್ಲೇ ವರ್ಗೀಕರಿಸಿದ್ದನು. ಲಿನ್ನೆಯ ಪದ್ಧತಿಯನ್ನೇ ಅನುಸರಿಸಿ ಪೈನೆಲ್, ಒಂದು ಶ್ರೇಷ್ಠ ಪುಸ್ತಕವನ್ನೂ ಬರೆದಿದ್ದನು. ಇವನ ಖ್ಯಾತಿಯನ್ನು ಮೆಚ್ಚಿ ೧೭೯೪ ರಲ್ಲಿ ಸಾಲ್ಪಿಟ್ರೇರೆ ಆಸ್ಪತ್ರೆಗೆ ವೈದ್ಯನನ್ನಾಗಿ ನೇಮಕ ಮಾಡಲಾಗಿತ್ತು. ಇಲ್ಲಿ ನಡೆಸಿದ ಶೋಧನೆಗಳ ಆಧಾರದ ಮೇಲೆ 'ರೋಗಿಹಾಸೆಯ ವೈದ್ಯ' ಎಂಬ ಪುಸ್ತಕವನ್ನು ಬರೆದನು.

ಜೀನ್ ನಿಕೋಲಾಸ್ ಕೋರ್ವಿಸಾರ್ಟ್

ಜೀನ್ ನಿಕೊಲಾಸ್ ಕೋರ್ವಿಸಾರ್ಟ್ (೧೭೫೫-೧೮೨೧) ರೋಗ ತನಿಖೆಯಲ್ಲಿ ತನ್ನದೇ ವಿಶೇಷವಾದ ಕ್ರಮವನ್ನು ಅನುಸರಿಸಿದ್ದನು. ಇವನಿಗೆ ವೈದ್ಯಶಾಸ್ತ್ರ ಒಂದು ಊಹಾತ್ಮಕ ಕಲೆಯಾಗಿತ್ತು. ರೋಗಗಳ ಕಾರಣವನ್ನೂ ಅವುಗಳ ಪ್ರಭಾವಗಳನ್ನೂ ತಿಳಿಯಲು, ರೋಗಲಕ್ಷಣಗಳನ್ನು ಶವಚ್ಛೇದನದ ಪರೀಕ್ಷೆ ಫಲಿತಾಂಶಗಳಿಗೆ ಹೋಲಿಸಿ ತನಿಖೆ ಮಾಡುತ್ತಿದ್ದನು. ಇವನು ನ್ಯಾಯಶಾಸ್ತ್ರವನ್ನು ಓದಲು ಮೊದಲು ಮನಸ್ಸುಮಾಡಿದ್ದು ಪ್ಯಾರಿಸ್ಸಿನಲ್ಲಿ. ಡಿಸಾಲ್ಟ್‌ನ ಉಪನ್ಯಾಸಗಳನ್ನು ಕೇಳಿದನಂತರ ವೈದ್ಯವ್ಯಾಸಂಗ ಮಾಡಲು ದೃಢಮಾಡಿ, ಹೊಟೇಲ್ ಡಿಯುವಿನಲ್ಲಿ ಅಂಗರಚನೆಯ ಮಾದರಿ ವಸ್ತುಗಳನ್ನು ತಯಾರಿಸಲು ಸೇರಿದನು. ರೋಗಿಗಳನ್ನು ಪರೀಕ್ಷಿಸುವಾಗ, ಎಚ್ಚರಿಕೆಯಿಂದ ರೋಗಿಯ ಆಕಾರ, ರೂಪು, ಕಳೆ, ಕಣ್ಣು ಕೂದಲುಗಳ ಬಣ್ಣ, ಧ್ವನಿ, ಮುಖದ ಸ್ನಾಯುಗಳ ಲಕ್ಷಣ, ಉಸಿರಾಟ, ನಾಡಿಯಾಟಗಳನ್ನೆಲ್ಲಾ ಕೂಲಂಕಷವಾಗಿ ಪರೀಕ್ಷಿಸುತ್ತಿದ್ದನು. ಆನ್‌ಬ್ರೂಗ್ಗರ್ ಕಂಡುಹಿಡಿದ ಬೆರಳುಗಳಿಂದ ತಟ್ಟಿ ಪರೀಕ್ಷಿಸುವ ಪದ್ಧತಿಯನ್ನು ರೂಢಿಗೆ ತಂದು ಅದರ ಗುಣಗಳನ್ನು ಮೆಚ್ಚಿದ್ದನು. ಇವನು ನೆಪೋಲಿಯನ್ನನ್ನು ಒಮ್ಮೆ ಎಚ್ಚರಿಕೆಯಿಂದಲೂ ಶ್ರದ್ಧೆಯಿಂದಲೂ ಪರೀಕ್ಷೆ ಮಾಡಿದ್ದರಿಂದ ನೆಪೋಲಿಯನ್ ಸಂತೋಷಪಟ್ಟು ಇವನಿಗೆ ಬ್ಯಾರನ್ ಪದವಿಯನ್ನು ದಯಪಾಲಿಸಿದನು. ಅಂದಿನಿಂದ ಇವನು ಬೋನಾಪಾರ್ಟೆಗೆ ಆಪ್ತ ಸ್ನೇಹಿತನೂ ಆಪ್ತ ವೈದ್ಯನೂ ಆಗಿ ಸೇವೆ ಸಲ್ಲಿಸಿದ್ದನು.

ವೈದ್ಯದ ಬೆಳವಣಿಗೆಗೆ ನೆರವು ನೀಡುವಂತಹ ಎರಡು ಪುಸ್ತಕಗಳನ್ನು ಕೋರ್ವಿಸಾರ್ಟ್ ಬರೆದಿದ್ದನು. ೧೮೦೬ರಲ್ಲಿ ಬರೆದಿದ್ದ ಹೃದಯ ರೋಗದ ಪುಸ್ತಕದಲ್ಲಿ ಊತಕಗಳನ್ನು ವಿಂಗಡಿಸಿ, ಹೃದಯದ ಹೊರಪೊರೆ, ಒಳಪೊರೆ, ಸ್ನಾಯು ಮತ್ತು ಕವಾಟಗಳ ರೋಗಗಳನ್ನೂ ವಿವರಿಸಿದ್ದನು. ಬಲ ಹೃದಯದ, ಎಡ ಹೃದಯದ ಸೋಲುಗಳ ವ್ಯತ್ಯಾಸವನ್ನು ತಿಳಿಸಿದ್ದನು. ಹೃದಯ ಅತಿಯಾಗಿ ದಪ್ಪನಾಗಿರುವುದನ್ನು ಹೃದಯದ ಹಿಗ್ಗಲಿಕೆಯಿಂದ ವ್ಯತ್ಯಾಸ ಮಾಡಿದ್ದನು. ಮೊಟ್ಟಮೊದಲಿಗೆ ಅಂಗದ ಗಾಯ ಎಂಬ ಹೆಸರನ್ನು ಉಪಯೋಗಿಸಿದ್ದನು. ಸೀಸಕದ,ಮಹಾಧಮನಿಯ, ಮೂರ್ದಳ ಕವಾಟಗಳ ವಿಕಾರಗಳನ್ನು ವಿಶದವಾಗಿ ವಿವರಿಸಿದನು. ಎದೆಶೂಲೆಯನ್ನು ವಿವರಿಸದಿದ್ದರೂ ಕಿರೀಟಕ ಧಮನಿಗಳ ರೋಗಗಳನ್ನು ಅರಿತಿದ್ದನು. ಆನ್‌ಬ್ರೂಗ್ಗರ್ ಬರೆದಿದ್ದ 'ನವೀನ ಕಾಣನೆ' ಎಂಬುದನ್ನು ೧೮೦೮ರಲ್ಲಿ ಭಾಷಾಂತರಿಸಿ ತನ್ನ ಪರಿಶೀಲನೆಗಳನ್ನೂ ಸೇರಿಸಿ ಉತ್ಕೃಷ್ಟವಾದ ತನ್ನ ಎರಡನೆಯ ಪುಸ್ತಕವನ್ನು ಬರೆದಿದ್ದನು. ಕೋರ್ವಿಸಾರ್ಟನ ಪ್ರಭಾವದಿಂದ ಮರೆತುಹೋಗಿದ್ದ ಆನ್‌ಬ್ರೂಗ್ಗರ್‌ನ ಪರೀಕ್ಷಾವಿಧಾನಗಳು ಪುನಃ ಯೂರೋಪಿನಲ್ಲೆಲ್ಲಾ ಬಳಕೆಗೆ ಬಂದಿದ್ದವು. ಉತ್ತಮ ವೈದ್ಯ

ಶಾಸ್ತ್ರಜ್ಞರಾಗಿದ್ದ ಬೇಯಲ್, ಲೆನೆಕ್, ಬೌಲ್ಲಾಡ್ ಇವರೆಲ್ಲ ಕೋರ್ವಿಸಾರ್ಟನ ಶಿಷ್ಯರಾಗಿದ್ದು ವೈದ್ಯಶಾಸ್ತ್ರಕ್ಕೆ ಸಾಕಷ್ಟು ಕೀರ್ತಿ ತಂದಿದ್ದರು.

ಗ್ಯಾಸ್ಪರ್ಡ್ ಲಾರೆಂಟ್ ಬೇಯಲ್

ಗ್ಯಾಸ್ಪರ್ಡ್ ಲಾರೆಂಟ್ ಬೇಯಲ್ (೧೭೭೪-೧೮೧೬) ೪೨ ವರ್ಷ ಮಾತ್ರ ಬದುಕಿದ್ದರೂ ವೈದ್ಯದೇಳಿಗೆಗೆ ಮಿತಿಮೀರಿ ಶ್ರಮಿಸಿದ್ದನು. ಇವನು ಅರ್ಧ ರಾತ್ರಿಯ ತನಕ ಕೆಲಸಮಾಡಿ, ವಿದ್ಯಾರ್ಥಿಗಳ ಜೊತೆ ಬೆಳಗಿನ ಜಾವ ಆಸ್ಪತ್ರೆಯಲ್ಲಿ ಗಸ್ತುಹಾಕಿ ಪಾಠ ಹೇಳುವ ರೂಢಿ ಹೊಂದಿದ್ದನು. ಅನಂತರ ಶವದ ಮನೆಯಲ್ಲಿ ಶವಚ್ಛೇದನೆ ಮಾಡಿ ತೋರಿಸುತ್ತಾ, ರೋಗದ ಲಕ್ಷಣಗಳಿಗೂ ಶವಪರೀಕ್ಷೆ ಲಕ್ಷಣಗಳಿಗೂ ಇರುವ ಸಂಬಂಧವನ್ನು ಕುರಿತು ಉಪನ್ಯಾಸ ಮಾಡುತ್ತಿದ್ದನು. ಇವನ ಪರಿಶೋಧನೆಗಳ ನ್ನೆಲ್ಲಾ ಸೇರಿಸಿ ಬರೆದಿದ್ದ ಪುಸ್ತಕ (೧೮೧೦) ಆಗಿನ ಕಾಲದ ಶ್ರೇಷ್ಠ ಗ್ರಂಥವಾಗಿತ್ತು. ಅವನ ಸ್ನೇಹಿತನೂ ಸಹೋದ್ಯೋಗಿಯೂ ಆಗಿದ್ದ ಲೆನೆಕ್ಕಿನ ಪ್ರಭಾವವನ್ನು ಬೀರುತ್ತಿತ್ತು. ರೋಗಿಯಲ್ಲಿ ರೋಗಲಕ್ಷಣಗಳು ಕಾಣುವ ಮೊದಲೇ ಕ್ಷಯ ಗಂಟುಗಳು ಶರೀರದಲ್ಲಿ ಎದ್ದಿರುವುವೆಂದು ತಿಳಿಸಿದನು. ಕ್ಷಯಗಂತಿಗೂ ಕ್ಷಯದ ಟೊಳ್ಳುಗಳಿಗೂ ಇರುವ ಸಂಬಂಧವನ್ನು, ಸಾವೆತೆರ ಕ್ಷಯ, ಧ್ವನಿನಾಳ ಕ್ಷಯ, ದುಗ್ಧಗ್ರಂಥಿ ಕ್ಷಯ, ಕರುಳುಕ್ಷಯ ಮುಂತಾದ ರೋಗಗಳನ್ನೂ ವಿವರಿಸಿದ್ದನು.


ರಿನೆ ತಿಯೊಫಿಲೆ ಹಯಸಿಂತೆ ಲೆನೆಕ್

ರಿನೆ ತಿಯೊಫಿಲೆ ಹಯಸಿಂತೆ ಲೆನೆಕ್ (೧೭೮೧–೧೮೨೬) ವೈದ್ಯಶಾಸ್ತ್ರಕ್ಕೆ ಶಾಶ್ವತ ಕೀರ್ತಿ ತಂದವರಲ್ಲೊಬ್ಬ. ಕ್ವಿಂಪರ್‌ನಲ್ಲಿ ಜನಿಸಿ ೬ನೇ ವಯಸ್ಸಿನಲ್ಲೇ ತನ್ನ ತಾಯಿಯನ್ನು ಕಳೆದುಕೊಂಡು, ಚಿಕ್ಕಪ್ಪ ಗಿಲ್ಲಾಮೆ ಸಂಗಡ ವಾಸಮಾಡಲು ನಾಂಟೆಸ್ಸಿಗೆ ಹೋಗಿ ಅವನ ಜೊತೆಯಲ್ಲೇ ವೈದ್ಯ ವಿದ್ಯಾಭ್ಯಾಸ ಮಾಡಲು ಪ್ರಾರಂಭಿಸಿದ್ದನು. ಆಗ ಅವನಿಗೆ ೧೪ ವರ್ಷ ವಯಸ್ಸಾಗಿತ್ತು. ೧೮೦೧ರಲ್ಲಿ ಪ್ಯಾರಿಸ್ಸಿಗೆ ಹೋಗಿ ಕೋರ್ವಿಸಾರ್ಟ್ ಮತ್ತು ಡ್ಯುಪ್ಯುಟ್ರೆನ್ ಕೈಕೆಳಗೆ ಕೆಲಸ ಮಾಡಿ ೧೮೦೪ರಲ್ಲಿ ಪಂಡಿತ ಪದವಿ ಪಡೆದಿದ್ದನು. ಬಿಚೆಟ್ ಬರೆದಿದ್ದ "ರೋಗ ಶಾಸ್ತ್ರೀಯ ಅಂಗರಚನೆ ಶಾಸ್ತ್ರ" ಮತ್ತು ತನ್ನ ಸಹೋದ್ಯೋಗಿ ಬೇಯಲ್ ಬರೆದಿದ್ದ "ಕ್ಷಯ ರೋಗದ ಶೋಧನೆ" ಎಂಬ ಪುಸ್ತಕಗಳು ಲೆನೆಕ್ ಮೇಲೆ ಸಾಕಷ್ಟು ಪ್ರಭಾವ ಬೀರಿದ್ದವು. ತತ್ಪರಿಣಾಮವಾಗಿ ಅವನಿಗೆ ಎರಡರಲ್ಲೂ ಆಸಕ್ತಿ ಹುಟ್ಟಿತು. ಅವನ ಆಸಕ್ತಿ ಚತುರತೆಗಳನ್ನು ನೋಡಿ ೧೮೧೪ರಲ್ಲಿ ನೆಕರ್ ಆಸ್ಪತ್ರೆಯ ವೈದ್ಯನಾಗಿ ನೇಮಕವಾದನು. ಒಬ್ಬ ರೋಗಿಯನ್ನು ಪರೀಕ್ಷಿಸುತ್ತಿದ್ದಾಗ ಅವನ ಬೊಜ್ಜಿನಿಂದ ಹೃದಯದ ಶಬ್ದಗಳು ಕೇಳಿಬರದಿರಲು, ಮರದ ದಿಮ್ಮಿಯ ಒಂದು ತುದಿಯಲ್ಲಿ ಒಂದು ಮಗು ಬಡಿದು ಮಾಡುತ್ತಿದ್ದ ಶಬ್ದವನ್ನು ಇನ್ನೊಂದು ಮಗು ದಿಮ್ಮಿಯ ಮತ್ತೊಂದು ತುದಿಯಲ್ಲಿ ಕಿವಿ ತಾಕಿಸಿ ಕೇಳುತ್ತಿದ್ದ ಚಿತ್ರ ಮನಸ್ಸಿಗೆ ಹೊಳೆದು, ಕಾಗದದ ಸುರುಳಿ ಸುತ್ತಿ ಒಂದು ತುದಿಯನ್ನು

ರೋಗಿಯ ಎದೆ ಮೇಲಿಟ್ಟು ಮತ್ತೊಂದು ತುದಿಯನ್ನು ತನ್ನ ಕಿವಿಗಿಟ್ಟು ಹೃದಯದ ಶಬ್ದ



ಲೆನೆಕ್ ತನ್ನ ಎದೆದರ್ಶಕದಿಂದ ರೋಗಿಯನ್ನು ಪರೀಕ್ಷಿಸುತ್ತಿರುವುದು



ಲೆನೆಕ್ಕಿನ ಆಕರ್ಣಕಗಳು

ಗಳನ್ನು ಕೇಳಿದಾಗ, ನೇರವಾಗಿ ಎದೆಯ ಮೇಲಿಟ್ಟು ಕಿವಿಯಿಂದ ಕೇಳಿಬರುತ್ತಿದ್ದುದ ಕ್ಕಿಂತಲೂ ಚೆನ್ನಾಗಿ ಕೇಳಿಬಂದುದನ್ನು ಅರಿತುಕೊಂಡನು. ಎದೆಯ ಮೇಲೆ ಕಿವಿಯಿಟ್ಟು ಕೇಳುವ ಪದ್ಧತಿ ಹಳೆಯದು. ಹಿಪ್ಪೊಕ್ರೇಟಿಸ್ ಕೂಡ ನೇರವಾಗಿ ಎದೆಯ ಮೇಲೆ ಕಿವಿ ಯಿಟ್ಟು ಅಳ್ಳೆಪರೆಯುರಿತದ ಕರಕರ ಶಬ್ದಗಳನ್ನು ಕೇಳಿ ವಿವರಿಸಿದ್ದನು. ಎದೆಯ ಮೇಲೆ ಕಿವಿಯಿಟ್ಟು ನೇರವಾಗಿ ಕೇಳುವ ಪದ್ಧತಿ ಅಷ್ಟು ಹಿತಕರವಾದುದಲ್ಲವೆಂದೂ, ಅನುಕೂಲ ವಾದುವಲ್ಲವೆಂದೂ, ಆಸ್ಪತ್ರೆಯಲ್ಲಿ ನಡೆಸಲು ಅಸಹ್ಯವಾದುದೆಂದೂ ಹೇಳಿ ಆಕರ್ಣಕ ಉಪಯೋಗಿಸಲು ಆರಂಭಿಸಿದ್ದನು. ಅನೇಕ ಅನುಭವಗಳು ಫಲಕಾರಿಯಾಗಿ ಒಂದು ಅಡಿ ಉದ್ದ, ಒಂದೂಕಾಲು ಅಂಗುಲ ಅಗಲವಿರುವ ಮರದ ಕೊಳವೆಯನ್ನು ತಯಾರಿಸಿ ಅದನ್ನು ರೋಗಿಯ ಪರೀಕ್ಷೆ ಮಾಡಲು ಉಪಯೋಗಿಸಲಾರಂಭಿಸಿದನು.

ಮೂರು ವರ್ಷ ಆಕರ್ಣಕವನ್ನು ಉಪಯೋಗಿಸಿ ಪಡೆದ ೧೮ ವರ್ಷ ರೋಗ ನಿದಾನ ಮತ್ತು ರೋಗಿ ಹಾಸೆ ಪಕ್ಕದ ವೈದ್ಯಶಾಸ್ತ್ರದಲ್ಲಿ ಪಡೆದ ಅನುಭವಗಳನ್ನು ಒಂದು ಪುಸ್ತಕದಲ್ಲಿ ಬರೆದನು. ಶ್ವಾಸಕೋಶ, ಹೃದಯದ ರೋಗಗಳ ಮತ್ತು ರೋಗ ಶಾಸ್ತ್ರೀಯ ಅಂಗರಚನೆಗಳೆಲ್ಲಾ ಇದರಲ್ಲಿ ಅಡಕವಾಗಿದ್ದವು. ಅನೇಕ ಹೊಸ ಹೊಸ ಶಬ್ದಗಳನ್ನು ಆಕರ್ಣಕದಿಂದ ಕೇಳಿ ವಿವರಿಸಿದ್ದನು. ಸಿಳ್ಳುದನಿ, ಪಂಗುಸಿರ್ನಾ ಳೊರೆತ, ಎದೆಯೊರೆತ, ಆಡುದನಿ ಎಂಬುವೇ ಈ ಹೊಸ ಶಬ್ದಗಳು. ಈ ಪುಸ್ತಕ ಪ್ರಕಟವಾದ ಕೂಡಲೇ ಎಲ್ಲೆಲ್ಲೂ ಆದರದಿಂದ ಬಳಸಲಾಗಿತ್ತು. ಈ ಪುಸ್ತಕದ ಮೊದಲನೇ ಭಾಗದಲ್ಲಿ ಶ್ವಾಸಕೋಶದ ರೋಗಗಳ ವಿವರಗಳಿದ್ದವು. ಪುಪ್ಪುಸುರಿತ, ಉಬ್ಬಟೆ, ಕೊಳೆತ, ಶೋಬೆ ಮುಂತಾದ ರೋಗಗಳ ಲಕ್ಷಣ, ಬೆಳವಣಿಗೆ, ನಿದಾನ ಗಳೆಲ್ಲವೂ ಇದ್ದವು. ಆಕರ್ಣಕದ ಉಪಯೋಗವನ್ನು ಬರೆದಿದ್ದುದಲ್ಲದೆ ಬೆರಳಿನಿಂದ ಕುಟ್ಟಿ ಪರೀಕ್ಷಿಸುವ ಪದ್ಧತಿಯ ಉಪಯೋಗಗಳನ್ನು ವಿವರಿಸಿದ್ದನು. ಆದರೆ ಪುಸ್ತಕದ ಎರಡನೇ ಭಾಗದಲ್ಲಿ, ಹೃದಯದ ರೋಗಗಳ ವಿವರ ಅಷ್ಟಾಗಿ ಉತ್ತಮವಾಗಿರಲಿಲ್ಲ. ಗುಂಡಿಗಿವಿ ಮಿಡಿತದಿಂದ ಹೃದಯದ ೨ನೇ ಶಬ್ದ ಉಂಟಾಗುತ್ತದೆಂದು ತಪ್ಪು ತಿಳಿಸಿ ದ್ದನು. ಶ್ವಾಸಕೋಶದ ಧಮನಿಗಳಲ್ಲಿ ಏಳುವ ಧಮನಿಯ ಅಡಚಣೆ ಅವನಿಗೆ ತಿಳಿದಿರ ಲಿಲ್ಲ. ಹೃದಯ ಕುಗ್ಗುವುದಕ್ಕೆ ಮೊದಲು ಉಂಟಾಗುವ ತೊನೆತವೂ ತಿಳಿದಿರಲಿಲ್ಲ.

ಈ ಪರಿಶೀಲನೆಗಳೆಲ್ಲಾ ಮುಗಿಯುವುದರೊಳಗೆ ಲೆನೆಕ್ಕಿಗೆ ಕ್ಷಯರೋಗ ಬಂದು, ಆರಾಮ ಪಡೆಯಲು ತನ್ನ ತೌರೂರಾದ ಬ್ರಿಟ್ಟಾನಿಗೆ ಹೋಗಬೇಕಾಗಿತ್ತು. ೨ ವರ್ಷ ಚೇತರಿಸಿಕೊಂಡು ಪುನಃ ಪ್ಯಾರಿಸ್ಸಿಗೆ ಬಂದು ಫ್ರಾನ್ಸ್ ಕಾಲೇಜಿನಲ್ಲಿ ಪ್ರಾಧ್ಯಾಪಕ ನಾದನು. ಆಗ ಫ್ರಾನ್ಸ್‌ರಾಣಿಯ ವೈದ್ಯನಾಗೂ ನೇಮಕವಾದನು. ಕ್ಷಯರೋಗ ದಿಂದ ನರಳುತ್ತಿರುವಾಗಲೇ ತನ್ನ ಪುಸ್ತಕದ ಎರಡನೇ ಮುದ್ರಣವನ್ನು ಪ್ರಕಟಿಸಿ ದ್ದನು. ಈ ಎರಡನೇ ಮುದ್ರಣ ಹೊಸದೆಂದೇ ಹೇಳಬಹುದಾಗಿತ್ತು. ಶ್ವಾಸಕೋಶ ಕ್ಷಯ, ಪುಪ್ಪುಸದ ಹುಣ್ಣು, ಪುಪ್ಪುಸ, ಕೊಳೆತ, ಹಿಗ್ಗುಸಿರ್ನಾಳ, ಪುಪ್ಪುಸದುಬ್ಬಟೆ,

ಗಾಳಿತುಂಬಿದೆದೆಗಳ ವ್ಯತ್ಯಾಸ ತಿಳಿಯಲು ತಿಳಿವಳಿಕೆ ನೀಡಿದ್ದನು. ಆದರೂ ಈ ಮುದ್ರಣದಲ್ಲೂ ಎರಡನೆಯ ಭಾಗ ಮೊದಲಿಗಿಂತಲೂ ಮೇಲಾಗಿರಲಿಲ್ಲ. ಹೀಗಿದ್ದರೂ ಹೃದಯದ ರೋಗಗಳ ವಿವರಣೆಗೆ ಸಾಕಷ್ಟು ಪ್ರಾಮುಖ್ಯತೆ ದೊರಕಿತ್ತು. ಮೇಜರ್ ಹೇಳಿರುವಂತೆ 'ಆದರ ನ್ಯೂನತೆಗಳು, ಕೆಲವೇಳೆ ಅಸ್ಪಷ್ಟತೆಯಿದ್ದರೂ ಹೃದಯ ಶಾಸ್ತ್ರಕ್ಕೆ ಲೆನೆಕ್ಕನ ಕೊಡುಗೆ ಪರಿಣಾಮಕಾರಿಯಾಗಿತ್ತು.'

ಫ್ರಾಂಕಾಯಸ್ ಬ್ರೌಸ್ಸಾಯಿಸ್

ಲೆನೆಕ್ಕಿನ ವೈರಿಯಾಗಿದ್ದ ಫ್ರಾಂಕಾಯಸ್ ಬ್ರೌಸ್ಸಾಯಿಸ್ (೧೭೭೨-೧೮೩೮) ಎಲ್ಲಾ ವಿಧದಲ್ಲೂ ಲೆನೆಕ್ಕಿಗೆ ವಿರೋಧವನ್ನು ವ್ಯಕ್ತಪಡಿಸಿದ್ದನು. ಲೆನೆಕ್ಕಿನ ಸಂಗಡ ಜಗಳವನ್ನೂ ಆಡಿದ್ದನು. ಪೈನೆಲ್, ಕ್ರುವೆಲ್ಲಿಯರ್, ಬ್ರೆಟೊನ್ನ್ಯು ಮುಂತಾದ ರೋಗ ವರ್ಗೀಕರಣ ವೈದ್ಯರ ಸಂಗಡವೂ ವಿರೋಧವನ್ನು ವ್ಯಕ್ತಪಡಿಸಿದ್ದನು. ಫ್ರಾನ್ಸಿನ ಕ್ರಾಂತಿಯ ಮತ್ತು ನೆಪೋಲಿಯನ್ನಿನ ಯುದ್ಧಗಳಲ್ಲೂ ಭಾಗವಹಿಸಿ, ಯುದ್ಧಗಳು ಮುಗಿದನಂತರ ಪ್ಯಾರಿಸ್ಸಿಗೆ ಬಂದು ಮಿಲಿಟರಿ ವೈದ್ಯಶಾಲೆಯಲ್ಲಿ ಬ್ರೌಸ್ಸಾಯಿಸ್ ಅಧ್ಯಾಪಕನಾಗಿದ್ದನು. ಅವನು ೧೮೦೮ರಲ್ಲಿ ಬರೆದ ಪುಸ್ತಕದಲ್ಲಿ ಎಲ್ಲಾ ರೋಗಗಳೂ ಜಠರ ಕರುಳುಗಳ ಉರಿತದಿಂದ ಉಂಟಾಗುತ್ತವೆಂದೂ, ಶರೀರದಿಂದ ರಕ್ತಸುರಿಸುವುದರಿಂದಲೂ, ಮಿತಾಹಾರದಿಂದಲೂ ರೋಗಗಳನ್ನು ಗುಣಪಡಿಸಬಹುದೆಂದು ತಿಳಿಸಿದ್ದನು. ರಕ್ತ ಸುರಿಸಲು ರಕ್ತ ಹೀರುವ ಜಿಗಣೆಗಳನ್ನು ಮೈಮೇಲೆ ಹಚ್ಚುವ ಪದ್ಧತಿಯನ್ನು ರೂಢಿ ಮಾಡಿದ್ದನು. ರೋಗಿಗಳು ಆಸ್ಪತ್ರೆಗೆ ಸೇರಿದ ಕೂಡಲೇ ಪರೀಕ್ಷೆ ನಡೆಯುವುದಕ್ಕೆ ಮೊದಲೇ ಜಿಗಣೆಗಳನ್ನು ಹಚ್ಚುವ ರೂಢಿಯೂ ಇತ್ತು. ೧೮೩೩ರಲ್ಲಿ ಈ ಚಿಕಿತ್ಸೆಗೋಸ್ಕರ ಸುಮಾರು ೪ ಕೋಟಿ ಜಿಗಣೆಗಳನ್ನು ಫ್ರಾನ್ಸಿಗೆ ಹೊರಗಿನಿಂದ ತರಿಸಿದ್ದರೆಂದು ಗೊತ್ತಾಗಿದೆ. ತಾನು ಬರೆದಿದ್ದ ಪುಸ್ತಕಕ್ಕೆ 'ಶರೀರಶಾಸ್ತ್ರೀಯ ವೈದ್ಯಶಾಸ್ತ್ರ' ಎಂದು ಹೆಸರಿಟ್ಟು ಲೆನೆಕ್, ಬೇಯಲ್ ಮುಂತಾದವರ ವಿರೋಧವನ್ನು ಅದರಲ್ಲಿ ವ್ಯಕ್ತಪಡಿಸಿದ್ದನು. ಬ್ರೌಸ್ಸಾಯಿಸ್ ಪದ್ಧತಿಗಳು ಎಷ್ಟೇ ವಿಚಿತ್ರವಾಗಿದ್ದರೂ ಅವನ ಪ್ರಖ್ಯಾತಿ ಕಡಿಮೆಯೇನಾಗಿರಲಿಲ್ಲ. ಆದರೂ ಅವನು ಜೀವಿಸಿದ್ದಾಗಲೇ ಅವನ ಪದ್ಧತಿಗಳಿಗೆ ಮನ್ನಣೆ ಸಿಕ್ಕಿರಲಿಲ್ಲ.

ಪಿಯರ್ರೆ ಫಿಡೆಲ್ ಬ್ರೆಟೊನ್ನ್ಯು

ಬ್ರೌಸ್ಸಾಯಿಸ್ಸಿನ ಪದ್ಧತಿಗಳನ್ನು ಖಂಡಿಸಿ ಅವು ಮುಂದೆ ತಲೆಯೆತ್ತದಂತೆ ಪಿಯರ್ರೆ ಫಿಡೆಲ್ ಬ್ರೆಟೊನ್ನ್ಯು (೧೭೭೮-೧೮೬೪) ತನ್ನ ಕಾರ್ಯಕ್ರಮಗಳನ್ನು ಕೈಗೊಂಡಿದ್ದನು. ಇವನು ತನ್ನ ೧೭ನೇ ವಯಸ್ಸಿನಲ್ಲಿ ಪ್ಯಾರಿಸ್ಸಿಗೆ ವೈದ್ಯವಿದ್ಯಾಭ್ಯಾಸ ಮಾಡಲು ಹೋದಾಗ ಡ್ಯುಪ್ಯುಟ್ರೆನ್, ಬೇಯಲ್, ರಿಕೇಮಿಯರ್ ಇವನ ಸಹಪಾಠಿಗಳಾಗಿದ್ದರು. ಇವನು ಪದವೀಧರನಾಗುವುದಕ್ಕೆ ಮೊದಲು ಕೋರ್ವಿಸಾರ್ಟ್‌ನ ಚಿಕಿತ್ಸಾಲಯದಲ್ಲಿ ಕೆಲಸಮಾಡಿ ಅವನ ಪದ್ಧತಿಗಳನ್ನು ಅರಿತಿದ್ದನು. ಪದವೀಧರ

ನಾದನಂತರ ಟೂರ್ಸ್ ಪಟ್ಟಣದ ಆಸ್ಪತ್ರೆಯ ಮುಖ್ಯ ವೈದ್ಯನಾಗಿ ೨೩ ವರ್ಷ ಕೆಲಸ ಮಾಡಿ ಪ್ರಖ್ಯಾತಿ ಪಡೆದಿದ್ದನು. ಇವನ ಶಿಷ್ಯರಾದ ಟ್ರೌಸ್ಸಿಯು ಮತ್ತು ವೆಲ್ಪಿಯು ಅವನ ಪ್ರಖ್ಯಾತಿಯನ್ನು ತಮ್ಮ ಪ್ರಭಾವದಿಂದ ಇನ್ನಷ್ಟು ಹರಡಿದ್ದರು.

ಇವನು ಗಂಟಲು ನೋವು ಮತ್ತು ಜ್ವರಗಳ ವಿಷಯಗಳಲ್ಲಿ ಬಹಳ ಆಸಕ್ತಿ ಹೊಂದಿದ್ದನು. ೧೮೧೮ರಲ್ಲಿ ಗಂಟಲು ನೋವಿನಿಂದ ಸತ್ತವರ ಶವಪರೀಕ್ಷೆ ನಡೆಸಿ ಗಂಟಲು ನೋವಿಗೆ ಕಾರಣವಾದ ಗಂಟಲಮಾರಿ ರೋಗದ ವಿಷಯವಾಗಿ ಪ್ಯಾರಿಸ್ಸಿನ ವೈದ್ಯಶಾಸ್ತ್ರದ ಸಂಸ್ಥೆಯಲ್ಲಿ ಭಾಷಣ ಮಾಡಿದ್ದನು. ಡಿಫ್ತೀರಿಯ (ಗಂಟಲಮಾರಿ) ಎಂಬ ಹೆಸರನ್ನು ಇವನೇ ಮೊಟ್ಟಮೊದಲಿಗೆ ಸೂಚಿಸಿದವನು. ೧೮೨೧–೧೮೨೭ರ ವರೆವಿಗೆ ಅನೇಕ ವಿಷಮಶೀತ ಜ್ವರದ ರೋಗಿಗಳನ್ನು ಪರೀಕ್ಷಿಸಿ ಚಿಕಿತ್ಸೆ ಮಾಡಿದ್ದಲ್ಲದೆ ಅದರಿಂದ ಸತ್ತ ೧೨೦ ಶವಗಳನ್ನು ಪರೀಕ್ಷಿಸಿ ಪೇಯರ್ ಮಚ್ಚೆಗಳಲ್ಲಿದ್ದ ವಿಷಮಶೀತ ಜ್ವರದ ಹುಣ್ಣುಗಳನ್ನು ವರ್ಣಿಸಿ, ಈ ಹುಣ್ಣುಗಳಿಗೂ ಕ್ಷಯರೋಗದ ಹುಣ್ಣುಗಳಿಗೂ ಇರುವ ವ್ಯತ್ಯಾಸವನ್ನು ಕೂಡ ವರ್ಣಿಸಿದ್ದನು. ವಿಷಮಶೀತ ಜ್ವರದ ಹುಣ್ಣಿನಲ್ಲುಂಟಾಗುವ ರಕ್ತಸ್ರಾವವನ್ನೂ, ಹುಣ್ಣು ಒಡೆದು ರಂಧ್ರವಾಗುವುದನ್ನೂ ವಿವರಿಸಿದ್ದನು.

ಕರುಳಿನ ಒಳಪೊರೆಯಲ್ಲಿ ಏಳುವ ಹುಣ್ಣುಗಳ ಸ್ಥಿತಿಗತಿಗಳನ್ನು ಇವನು ಪರಿಶೀಲಿಸಿದ್ದರೂ, ಪ್ರಕಟಿಸಿರಲಿಲ್ಲ. ಇವನ ಶಿಷ್ಯ ಟ್ರೌಸ್ಸಿಯು ೧೮೨೬ರಲ್ಲಿ ಈ ಪರಿಶೀಲನೆಗಳನ್ನು ಒಟ್ಟಿಗೆ ಸೇರಿಸಿ ಪ್ರಕಟಿಸಿದ್ದನು. ಬ್ರೆಟೋನ್ಯು ತನ್ನ ಪರಿಶೀಲನೆಗಳನ್ನು ಮುಂದುವರಿಸಿ ಪ್ರತಿಯೊಂದು ಸಾಂಕ್ರಾಮಿಕ ರೋಗಕ್ಕೂ ನಿರ್ದಿಷ್ಟವಾದ ಕಾರಣವಿದೆಯೆಂದು ಏಕಾಣು ಜೀವಿಶಾಸ್ತ್ರ ಉದಯವಾಗುವ ಮೊದಲೇ ಸ್ಪಷ್ಟಪಡಿಸಿದ್ದನು.

ಜೀನ್ ಬ್ಯಾಪ್ಟಿಸ್ಟೆ ಬೌಯಿಲ್ಲಾಡ್

೧೭೯೬ರಿಂದ ೧೮೮೧ರ ತನಕ ೮೫ ವರ್ಷ ಬದುಕಿದ್ದ ಜೀನ್ ಬ್ಯಾಪ್ಟಿಸ್ಟೆ ಬೌಯಿಲ್ಲಾಡ್ ಪ್ಯಾರಿಸ್ಸಿನಲ್ಲಿ ಕೋರ್ವಿಸಾರ್ಟ್, ಲೆನೆಕ್, ಡ್ಯುಪ್ಯುಟ್ರೆನ್ ಮತ್ತು ಮೆಜೆಂಡಿ ಮುಂತಾದ ವೈದ್ಯಪಂಡಿತರ ಕೈಕೆಳಗೆ ವಿದ್ಯಾಭ್ಯಾಸ ಮಾಡಿ ೧೮೨೩ರಲ್ಲಿ ಪಂಡಿತ ಪದವಿ ಪಡೆದಿದ್ದನು. ಪ್ರಯೋಗಗಳನ್ನು ನಡೆಸುವುದರಲ್ಲಿ ನಿಸ್ಸೀಮನಾಗಿದ್ದನು. ಶೋಫೆ, ಮಹಾಧಮನಿಯ ಅಗಲುಬ್ಬು, ಗೂರಲು, ಕಾಲರಗಳನ್ನು ಕುರಿತು ಲೇಖನ ಬರೆದಿದ್ದುದಲ್ಲದೆ, ಮಿದುಳಿನ ಮುಂಭಾಗದ ಹಾಲೆಯಲ್ಲಿ ವಾಚನಾ ಕೇಂದ್ರವಿದೆಯೆಂದು ಗಾಲ್ ಮೊದಲೇ ತಿಳಿಸಿದ್ದ ಸಂಗತಿಯನ್ನು ತನ್ನ ಪ್ರಯೋಗಗಳ ಹಾಗೂ ಶವ ಪರೀಕ್ಷೆಗಳ ಸಹಾಯದಿಂದ ಸ್ಥಿರಪಡಿಸಿದನು. ಪದಗಳನ್ನು ನಿರ್ಮಿಸುವ ಮತ್ತು ನುಡಿವ ಸಾಮರ್ಥ್ಯಗಳ ವ್ಯತ್ಯಾಸಗಳನ್ನೂ ಸೂಕ್ತವಾಗಿ ವಿವರಿಸಿದ್ದನು. ರೋಗಿ ಹಾಸೆ ಪಕ್ಕದ ವೈದ್ಯ ಪ್ರಾಧ್ಯಾಪಕನಾಗಿದ್ದಾಗ ಅವನ ವಿದ್ಯಾರ್ಥಿಗಳಿಂದ ಮೆಚ್ಚಿಗೆ ಪಡೆದಿದ್ದಲ್ಲದೆ ಅತಿ ಶ್ರೇಷ್ಠ ವೈದ್ಯಪಂಡಿತನೆಂದು ಹೆಸರು ಪಡೆದನು. ೧೮೩೫–೧೮೩೬ರಲ್ಲಿ ಬರೆದ ಅವನ "ಹೃದಯ ರೋಗ" ಪುಸ್ತಕಗಳು ಹೃದಯಶಾಸ್ತ್ರಕ್ಕೆ ಸಾಕಷ್ಟು ನೆರವು ನೀಡಿದ್ದವು. ಮೊದಲ

ನೆಯ "ಟ್ರೈಟ್" ಪುಸ್ತಕದಲ್ಲಿ ಹೃದಯುದ ಒಳಪೊರೆ, ಒಳಪೊರೆಯುರಿತವೆಂಬ ಪದ ಗಳನ್ನು ಕಲ್ಪಿಸಿ, ಅದರಲ್ಲಾಗುವ ಬದಲಾವಣೆಗಳನ್ನೂ ವಿವರಿಸಿದನು. ಎರಡನೆಯ ಪುಸ್ತಕದಲ್ಲಿ ಒಳಪೊರೆಯುರಿತಕ್ಕೂ ತೀವ್ರ ಕೀಲುವಾತ ಜ್ವರಕ್ಕೂ ಇರುವ ಸಂಬಂಧ ಗಳನ್ನೂ ತಿಳಿಸಿದನು. ಹೃದಯ ಶಬ್ದಗಳ ರಚನೆ ಮತ್ತು ಸೂಚನೆಗಳನ್ನೂ, ಕತ್ತಿನಲ್ಲಿ ಕಂಡುಬರುವ ಸಿರ ನಾಡಿ ಬಡಿತವನ್ನೂ ಅದರ ಮೌಲ್ಯವನ್ನೂ, ಹೃದಯದ ನಾಗಾಲೋಟವನ್ನೂ, ಮುಕುಟ ಕವಾಟದ ಇರುಕಣೆಯುಲ್ಲಿ ಕೇಳಿ ಬರುವ ಜೋಡಿ ಶಬ್ದಗಳನ್ನೂ, ಹೊರಪೊರೆಯುರಿತದಲ್ಲಿ ಕೇಳಿಬರುವ ಉಜ್ಜುವ ಶಬ್ದವನ್ನೂ, ಹೃದಯದ ಅಧಿಕ ಕುಗ್ಗಿತವನ್ನೂ ಮತ್ತು ನಿತ್ತುಡಿತವನ್ನೂ ವಿವರಿಸಿದ್ದನು. ಹೃದಯಶಾಸ್ತ್ರಕ್ಕೆ ಇವನು ಮಾಡಿರುವ ಸೇವೆಯನ್ನು ಮೆಚ್ಚಿ, 'ಬೊಯಿಲ್ಲಾಡನ ಗ್ರಂಥ ಹೃದಯಶಾಸ್ತ್ರದ ಅಮರ ಜೀವಿಗಳ ನಡುವೆ ಅವನ ಹೆಸರನ್ನಿಟ್ಟಿದೆ' ಎಂದು ಮೇಜರ್ ತಿಳಿಸಿದ್ದಾನೆ.

ಪಿಯರ್ರೆ ಚಾರಲ್ಸ್ ಅಲೆಗ್ಸಾಂಡರ್ ಲೂಯಿ

ನಮ್ಮ ಪೂಜ್ಯಭಾವನೆಯ ವ್ಯಕ್ತಿ ಎಂದು ಹೆಸರು ಪಡೆದಿದ್ದ ಪಿಯರ್ರೆ ಚಾರಲ್ಸ್ ಅಲೆಗ್ಸಾಂಡರ್ ಲೂಯಿ (೧೭೮೭-೧೮೭೨) ಕ್ಷಯರೋಗದಿಂದ ನರಳುತ್ತಿದ್ದ ೨೦೦೦ ಮಂದಿ ರೋಗಿಗಳನ್ನು ಪರೀಕ್ಷಿಸಿ ಸತ್ತವರನೇಕರ ಶವಗಳ ಪರೀಕ್ಷೆ ನಡೆಸಿ ಶ್ವಾಸಕೋಶದ ಮೇಲ್ತುದಿಯಲ್ಲಿ ಕ್ಷಯ ರೋಗ ಬಲಿಯುವುದನ್ನು ಕಂಡುಹಿಡಿದನು. ವಿಷಮಶೀತ ಜ್ವರದ ರೋಗಿಗಳನ್ನು ಇದೇ ಮಟ್ಟದಲ್ಲಿ ಪರೀಕ್ಷಿಸಿ, ಕರುಳಿನಲ್ಲಿದ್ದ ಹುಣ್ಣುಗಳಿಗೂ ಕರುಳಿನ ಇತರ ರೋಗಗಳ ಹುಣ್ಣುಗಳಿಗೂ ಇರುವ ವ್ಯತ್ಯಾಸವನ್ನು ತಿಳಿಸಿದನು. ಇವಕ್ಕಿಂತಲೂ ಮೇಲಾಗಿ ರೋಗಗಳ ಅಂಕಿ ಅಂಶಗಳಿಗೂ ವೈದ್ಯಶಾಸ್ತ್ರಕ್ಕೂ ಇರುವ ಪರಸ್ಪರ ಸಂಬಂಧವನ್ನು ಎತ್ತಿ ತೋರಿಸಿದನು. ಉತ್ತಮ ದರ್ಜೆಯ ಹಾಗೂ ಅಮೆರಿಕದ ವೈದ್ಯಶಾಸ್ತ್ರದ ಮುಂದಾಳುಗಳಾಗಿದ್ದ ೩೭ ಮಂದಿ ಅಮೆರಿಕನರು ಇವನ ಕೈಕೆಳಗೆ ವಿದ್ಯಾಭ್ಯಾಸ ಮಾಡಿದ್ದರೆಂಬ ಸರ್ ವಿಲಿಯಂ ಆಸ್ಲರ್‌ನ ಹೇಳಿಕೆ, ಲೂಯಿಯ ಪ್ರಾಮುಖ್ಯತೆಯನ್ನು ಸಮರ್ಥಿಸುತ್ತದೆ.

ಫ್ರಾಂಕಾಯಿಸ್ ಮೆಜೆಂಡಿ

೧೯ನೇ ಶತಮಾನದ ಮೊದಲ ಭಾಗದಲ್ಲಿ ರೋಗಿ ಹಾಸೆ ಪಕ್ಕದ ವೈದ್ಯಶಾಸ್ತ್ರ ದಲ್ಲಿದ್ದಷ್ಟೇ ಆಸಕ್ತಿ ಪ್ರಯೋಗ ವೈದ್ಯಶಾಸ್ತ್ರದಲ್ಲೂ ವೈದ್ಯಶಾಸ್ತ್ರಜ್ಞರಿಗಿತ್ತು. ಪ್ರಯೋಗ ವೈದ್ಯಶಾಸ್ತ್ರದಲ್ಲಿ ಆಸಕ್ತಿ ಇದ್ದವರಲ್ಲಿ ಫ್ರಾಂಕಾಯಿಸ್ ಮೆಜೆಂಡಿ (೧೭೮೩-೧೮೫೫) ಒಬ್ಬನು ೧೮೦೮ರಲ್ಲಿ ಪಡೆದ ಪದವಿಯ ಅಂಗವಾಗಿ ಅಂಗುಳನ್ನು ಕುರಿತ ಮಹಾ ಪ್ರಬಂಧವನ್ನು ಬರೆದನು. ೧೮೧೩ರಲ್ಲಿ ಅಂಗರಚನೆಶಾಸ್ತ್ರದ ಹುದ್ದೆಯನ್ನು ತ್ಯಜಿಸಿ, ಶರೀರ ಶಾಸ್ತ್ರದಲ್ಲಿ ಪ್ರಯೋಗ ನಡೆಸಲು ನಿರ್ಧರಿಸಿ, ೧೮೨೧ರಲ್ಲಿ "ಶರೀರ ಶಾಸ್ತ್ರ ಪ್ರಯೋಗ"ವೆಂಬ ಪತ್ರಿಕೆಯೊಂದನ್ನು ಆರಂಭಿಸಿದನು. ಕ್ರಮೇಣ ಮೆಜೆಂಡಿಯ ಪ್ರಭಾವ ಬೆಳೆದು ಫ್ರಾನ್ಸಿನ ವೈದ್ಯಶಾಲೆಯಲ್ಲಿ ವೈದ್ಯಶಾಸ್ತ್ರದ ಪ್ರಾಧ್ಯಾಪಕನಾಗಿ

ನೇಮಕವಾದನು. ಆಹಾರವನ್ನು ನುಂಗುವ ಕ್ರಮ, ಜೀರ್ಣಾಂಗಗಳಲ್ಲಿ ನಡೆವ ಆಹಾರ ಪಚನಾಕ್ರಮ, ಸಣ್ಣ ಮಿದುಳಿನ ಛೇದನದ ಪರಿಣಾಮ, ಮಿದುಳು ಬೆನ್ನುಹುರಿಯ ದ್ರವದ ಚಲನೆ ಮತ್ತು ಲಕ್ಷಣ, ಹೃದಯ ಮಿಡಿತದ ಕ್ರಮ ಇವೇ ಮುಂತಾದುವು ಇವನ ಪರಿಶೀಲನೆಗಳಲ್ಲಿ ಮುಖ್ಯವಾಗಿದ್ದವು. ಬ್ರೌಸ್ಸಾಯಿಸ್ಸಿನ ರಕ್ತ ಸುರಿಸುವ ಚಿಕಿತ್ಸಾ ಕ್ರಮವನ್ನು ಖಂಡಿಸಿ, ಅದರಿಂದಾಗುವ ದುಷ್ಪರಿಣಾಮಗಳನ್ನು ವಿವರಿಸಿದನು. ಔಷಧವಸ್ತು ಪ್ರಯೋಗ ನಡೆಸಿ ಬ್ರೊಮಿನ್, ಐಯೊಡಿನ್, ಸ್ಟ್ರಿಕ್ನೀನ್, ಮಾರ್ಫೀನ್, ಎಮಿಟಿನ್ ಮುಂತಾದ ಮದ್ದುಗಳ ಗುಣಗಳನ್ನು ವಿವರಿಸಿದನು. ಮೊಟ್ಟೆಯ ಬಿಳಿ ಲೋಳೆಯನ್ನು ಮೊಲಗಳಿಗೆ ಚುಚ್ಚಿ ನಡೆಸಿದ ಪರಿಶೀಲನೆಗಳ ಸಹಾಯದಿಂದ ೧೮೩೯ ರಲ್ಲಿ 'ಅಪರಕ್ಷಣೆ' ಎಂಬ ದೇಹ ಪರಿಸ್ಥಿತಿಯನ್ನು ಮೊಟ್ಟಮೊದಲಿಗೆ ವಿವರಿಸಿದನು. ಬೆನ್ನುಹುರಿಯ ಮುಂದಿನ ನರಗಳು ಚಾಲಕ ನರಗಳೆಂದೂ, ಹಿಂದಿನ ನರಗಳು ಅರಿವಿನ ನರಗಳೆಂದೂ ಸರ್ ಚಾರಲ್ಸ್ ಬೆಲ್ ತಿಳಿಸಿದ್ದನ್ನೂ ಸಮರ್ಥಿಸಿ, ೧೮೨೨ರಲ್ಲಿ ವಿಜ್ಞಾನ ಸಂಸ್ಥೆಯಲ್ಲಿ ಉಪನ್ಯಾಸ ಮಾಡಿದನು, ಇದು ಇತರ ಪರಿಶೀಲನೆಗಳಿಗಿಂತಲೂ ಮಹತ್ತರವಾದ್ದೆಂದು ಹೇಳಲು ಸಂಶಯವಿಲ್ಲ.

ಫ್ರಾನ್ಜ್ ಜೊಸೆಫ್ ಗಾಲ್

ಫ್ರಾನ್ಸಿನ ವೈದ್ಯಶಾಸ್ತ್ರಜ್ಞರಲ್ಲಿ ಕೀಳಲ್ಲದ ಫ್ರಾನ್ಜ್ ಜೊಸೆಫ್ ಗಾಲ್ (೧೭೫೮–೧೮೨೮) ಸ್ಟ್ರಾಸ್‌ಬರ್ಗ್, ವಿಯನ್ನಾಗಳಲ್ಲಿ ವ್ಯಾಸಂಗಮಾಡಿ, ೧೭೮೫ರಲ್ಲಿ ವೈದ್ಯ ಪಂಡಿತಪದವಿ ಪಡೆದು, ಮೊದಲು ಮುಖಸಾಮುದ್ರಿಕೆಯಲ್ಲೂ ಕಪಾಲರೂಪಶಾಸ್ತ್ರದಲ್ಲೂ ಆಸಕ್ತನಾಗಿ, ಅವನ್ನು ತೊರೆದು, ಕ್ರಮೇಣ ಮಿದುಳಿನ ರಚನೆ, ಕ್ರಿಯೆಗಳಲ್ಲಿ ಅಭಿರುಚಿ ಹುಟ್ಟಿ ಮಿದುಳಿನಲ್ಲಿ ಜ್ಞಾನಶಕ್ತಿ ಕೇಂದ್ರವಿರುವ ಸ್ಥಳವನ್ನು ಸ್ಥಾಪಿಸುವುದರಲ್ಲಿ ತೊಡಗಿದನು. ತನ್ನ ಸಹೋದ್ಯೋಗಿಗಳು ಈ ದೈಹಿಕವಾದ ಪರಿಶೀಲನೆಗಳನ್ನು ಸಹಿಸಲಾರದ್ದರಿಂದ ವಿಯನ್ನ ಬಿಟ್ಟು ತನ್ನ ಶಿಷ್ಯ ಜೊಹಾನ್ ಕ್ಯಾಸ್ಪರ್ ಸ್ಪುರ್ಸೀಮ್ (೧೭೭೬–೧೮೩೨) ಸಂಗಡ ಪ್ಯಾರಿಸ್ಸಿಗೆ ಬಂದು, ಇಬ್ಬರೂ ಕೂಡಿ ಕಪಾಲ ಸಾಮುದ್ರಿಕೆಗೆ ಉತ್ತೇಜನ ಕೊಟ್ಟರು. ಈ ಕ್ರಮ ವಿಜ್ಞಾನ ದೃಷ್ಟಿಯಿಂದ ಸರಿಯಲ್ಲದಿದ್ದರೂ ಅವರ ಪರಿಶೀಲನೆಗಳು ಮಿದುಳು ಬೆನ್ನುಹುರಿಗಳ ರಚನಾಕ್ರಮಗಳಿಗೆ ಸಾಕಷ್ಟು ನೆರವು ನೀಡಿದವು. ಏನೆಂದರೆ ಮಿದುಳಿನ ಬಿಳಿಯ ಭಾಗದಲ್ಲಿ ನರಗಳಿವೆಯೆಂದೂ, ಬೆನ್ನುಹುರಿಯಲ್ಲಿ ನರಗಳು ಅಡ್ಡ ಹಾಯುತ್ತವೆಂದೂ ವಿವರಿಸಿದ್ದರು.

ಆರ್ಮಂಡ್ ಟ್ರೌಸ್ಸಿಯು

೧೯ನೇ ಶತಮಾನದ ಮೊದಲ ಅರ್ಧದಲ್ಲಿ ಪ್ಯಾರಿಸ್ಸಿನ ವೈದ್ಯಶಾಸ್ತ್ರ ಎಷ್ಟು ಪ್ರಖ್ಯಾತಿಯಲ್ಲಿತ್ತೋ ಅಷ್ಟೇ ಪ್ರಖ್ಯಾತಿಯಲ್ಲಿ ಎರಡನೇ ಅರ್ಧದಲ್ಲೂ ಇತ್ತು. ಬ್ರೆಟೊನ್ಯ ಶಿಷ್ಯ ಆರ್ಮಂಡ್ ಟ್ರೌಸ್ಸಿಯು (೧೮೦೧–೧೮೬೭) ೧೯ನೇ ಶತಮಾನದ ಮಧ್ಯಕಾಲಕ್ಕೆ ಸೇರಿದ ಮುಖ್ಯ ವಿದ್ವಾಂಸನಾಗಿದ್ದನು. ೧೮೨೫ರಲ್ಲಿ ಪದವಿ ಪಡೆದ

ನಂತರ ೧೮೩೦ರಲ್ಲಿ ಪ್ರಕಟಿಸಿದ್ದ ಹಳದಿ ಜ್ವರದ ಲೇಖನ ಎಲ್ಲರ ಮೆಚ್ಚಿಗೆಯನ್ನು ಪಡೆದಿದ್ದುದಲ್ಲದೆ ೧೮೩೭ರಲ್ಲಿ ಪ್ರಕಟವಾದ 'ಧ್ವನಿನಾಳದ ಕ್ಷಯು' ಪ್ಯಾರಿಸ್ಸಿನ ವೈದ್ಯಶಾಸ್ತ್ರ ಸಂಸ್ಥೆಯಿಂದ ಬಹುಮಾನ ಪಡೆದಿತ್ತು. ೧೮೫೦ರಲ್ಲಿ ವೈದ್ಯಶಾಸ್ತ್ರದ ಪ್ರಾಧ್ಯಾಪಕನಾಗೂ ಹೊಟೇಲ್ ಡಿಯುವಿನ ವೈದ್ಯಪಂಡಿತನಾಗೂ ನೇಮಕವಾದನು. ಇವನೇ ಮೊಟ್ಟಮೊದಲಿಗೆ ಉಸಿರ್ನಾಳಚ್ಛೇದನವನ್ನು ಮಾಡಿದ್ದು. "ಉಸಿರ್ನಾಳಚ್ಛೇದನ" ಕುರಿತು ಲೇಖನವನ್ನೂ ಬರೆದನು. ಇವನು ಬರೆದಿದ್ದ ಎರಡು ಗ್ರಂಥಗಳು ಬಹು ಉತ್ತಮವಾಗಿದ್ದು, ಇಂಗ್ಲೀಷ್, ಇಟಲಿ, ಸ್ಪೇನ್ ಮತ್ತು ಜರ್ಮನ್ ಭಾಷೆಗಳಿಗೆ ಭಾಷಾಂತರವಾಗಿದ್ದವು. ಇಂಗ್ಲೀಷ್ ಭಾಷಾಂತರಗಳು ಲಂಡನ್ನಿನಲ್ಲೂ, ಫಿಲಡೆಲ್ಫಿಯದಲ್ಲೂ ಬಳಕೆಗೆ ಬಂದು ಇಂಗ್ಲೆಂಡ್ ಮತ್ತು ಅಮೆರಿಕದ ವೈದ್ಯರ ಮೆಚ್ಚಿಗೆ ಪಡೆದಿದ್ದವು. ಟ್ರೌಸ್ಸಿಯುವಿನ ಪ್ರಾಮಾಣಿಕತೆ ಮತ್ತು ಔದಾರ್ಯ ಅವನ ಶಿಷ್ಯರಲ್ಲೂ, ಸಹೋದ್ಯೋಗಿಗಳಲ್ಲೂ ಸಾಕಷ್ಟು ಗೌರವವನ್ನು ಸಂಪಾದಿಸಿದ್ದವು. ಈ ಯೋಗ್ಯತೆಗಳಿಂದ ಇವನನ್ನು ಡಬ್ಲಿನ್ನಿನ ಗ್ರೇವ್ಸ್‌ನಿಗೆ ಹೋಲಿಸಲಾಗಿತ್ತು.

ಆಲ್ಫ್ರೆಡ್ ವೆಲ್ಪಿಯು

ಬ್ರೆಟೊನ್ಯುವಿನ ಮತ್ತೊಬ್ಬ ಶಿಷ್ಯನಾದ ಆಲ್ಫ್ರೆಡ್ ವೆಲ್ಪಿಯು (೧೭೯೫–೧೮೬೭) ಪ್ಯಾರಿಸ್ಸಿನಲ್ಲಿ ೧೮೨೩ರಲ್ಲಿ ಪದವಿ ಪಡೆದ ಎರಡು ವರ್ಷಗಳನಂತರ 'ಅಂಗ ರಚನೆಯ ಶಸ್ತ್ರವೈದ್ಯದ ಸೂತ್ರಗಳು' ಪುಸ್ತಕವನ್ನು ಪ್ರಕಟಿಸಿ ಕೀರ್ತಿ ಗಳಿಸಿದನು. ಈ ಪುಸ್ತಕ ಯುರೋಪಿನ ಅನೇಕ ಭಾಷೆಗಳಲ್ಲಿ ಹಲವು ಸಾರಿ ಪ್ರಕಟವಾಯಿತು. ಇದರಿಂದ ಇವನ ಕೀರ್ತಿ ಇನ್ನಷ್ಟು ಹೆಚ್ಚಿ ಚಾರಿಟಿಯ ಶಸ್ತ್ರವೈದ್ಯ ವಿಭಾಗದ ಮುಖ್ಯಸ್ಥನಾಗಿ ೩೩ ವರ್ಷಗಳ ಕಾಲ ಒಂದೇ ಸಮನೆ ಶಸ್ತ್ರಕ್ರಿಯೆಗಳನ್ನು ನಡೆಸಿದನು. ಇವನ ಬರಹಗಳು ವೈದ್ಯಶಾಸ್ತ್ರಕ್ಕೆ ಸಾಕಷ್ಟು ನೆರವು ನೀಡಿದವು.

ಕ್ಲಾಡ್ ಬರ್ನಾರ್ಡ್

೧೯ನೇ ಶತಮಾನದ ಮೊದಲ ಭಾಗದಲ್ಲಿ ಉತ್ತಮೋತ್ತಮರಾದ ವೈದ್ಯರೂ ಶಸ್ತ್ರವೈದ್ಯರೂ ಪ್ಯಾರಿಸ್ಸಿನಲ್ಲಿದ್ದರೂ, ಪ್ರಯೋಗ ಶರೀರಶಾಸ್ತ್ರದಲ್ಲೂ ಪ್ರಯೋಗ ರೋಗಶಾಸ್ತ್ರದಲ್ಲೂ ಅಂತಹ ಶ್ರೇಷ್ಠರಿರಲಿಲ್ಲ. ಮೆಜೆಂಡಿ ಸಾಕಷ್ಟು ಶರೀರಶಾಸ್ತ್ರದ ಪ್ರಯೋಗಗಳನ್ನು ನಡೆಸುತ್ತಿದ್ದರೂ, ತನ್ನ ಬಹಳ ಕಾಲವನ್ನು ಹೊಟೇಲ್ ಡಿಯುವಿನಲ್ಲಿ ರೋಗಿಗಳನ್ನು ನೋಡುವುದರಲ್ಲಿ ಕಳೆಯುತ್ತಿದ್ದನು. ಹಾಗಿದ್ದರೂ ಆಗ್ಗೆ ಹೊಸದಾಗಿದ್ದ ಔಷಧವಸ್ತುಶಾಸ್ತ್ರಕ್ಕೆ ಅವನು ಅಸ್ತಿಭಾರ ಹಾಕಿದುದಲ್ಲದೆ, ಚಿಕ್ಕವನಾಗಿದ್ದ ಕ್ಲಾಡ್ ಬರ್ನಾಡ್ (೧೮೧೩–೧೮೭೮) ಎಂಬ ಶಿಷ್ಯನನ್ನು ತರಪೇತು ಮಾಡಿ ಅವನಲ್ಲಿ ಕುತೂಹಲವನ್ನುಂಟುಮಾಡಿದ್ದನು. ಬರ್ನಾರ್ಡ್ ಅದಕ್ಕೆ ತಕ್ಕನಾಗಿ ಎದ್ದು ನಿಂತು ಫ್ರಾನ್ಸಿನ ಅತ್ಯಂತ ಶ್ರೇಷ್ಠನಾದ ಶರೀರಶಾಸ್ತ್ರ ಪಂಡಿತನಾದ್ದಲ್ಲದೆ ಪ್ರಪಂಚದ ವೈದ್ಯಶಾಸ್ತ್ರದಲ್ಲೇ ಮಹಾಪುರುಷನೆನಿಸಿಕೊಂಡನು.

ಕ್ಲಾಡ್ ಬರ್ನಾರ್ಡ್ ಮೊದಮೊದಲು ಔಷಧ ವಿನಿಯೋಗ ಶಾಲೆಯಲ್ಲಿ ಕೆಲಸದಲ್ಲಿದ್ದಾಗಲೇ ಸಂಜೆ ಹೊತ್ತು ನಾಟಕಶಾಲೆಯಲ್ಲಿ ಕಾಲ ಕಳೆಯುತ್ತಿದ್ದನು. ನಾಟಕದಲ್ಲಿ ಅಭಿರುಚಿ ಇದ್ದುದರಿಂದ ಕೆಲವು ದಿವಸಗಳಲ್ಲೇ ಅಭಿನಯಿಸಲು ಅರ್ಹವಾದ ನಾಟಕಗಳನ್ನು ರಚಿಸಿದನು. ಇವನು ಬರೆದಿದ್ದ ಒಂದು ರುದ್ರನಾಟಕವನ್ನು ಆಗಿನ ಕಾಲದ ವಿಮರ್ಶಕನಾದ ಪ್ಯಾರಿಸ್ಸಿನ ಗಿರಾರ್ಡಿನ್‌ಗೆ ತೋರಿಸಿದಾಗ ಗಿರಾರ್ಡಿನ್ ಸಂತೋಷ ವ್ಯಕ್ತಪಡಿಸಿ, ಸಾಹಿತ್ಯದಲ್ಲಿರುವ ಆಸಕ್ತಿ ಬಿಡಬಾರದೆಂದೂ ಆದರೆ ಜೀವಿಸಲು ಅಗತ್ಯವಾದ ಹಣ ಸಂಪಾದಿಸಲು ವೈದ್ಯವೃತ್ತಿ ಅವಲಂಬಿಸಬೇಕೆಂದು ಬುದ್ಧಿ ಹೇಳಿದನು. ಅವನ ಸಲಹೆಯ ಪ್ರಕಾರ ಬರ್ನಾರ್ಡ್ ವೈದ್ಯ ವಿದ್ಯಾಭ್ಯಾಸಮಾಡಿ ಮೆಜೆಂಡಿ ಕೈಕೆಳಗೆ ಹೊಟೇಲ್ ಡಿಯುವಿನಲ್ಲಿ ಕೆಲಸಮಾಡಲು ೧೮೩೯ರಲ್ಲಿ ಸೇರಿದನು. ೧೮೪೧ರಲ್ಲಿ ಮೆಜೆಂಡಿಗೆ ಪ್ರಯೋಗಗಳನ್ನು ಸಿದ್ಧಗೊಳಿಸಲು ಅವಕಾಶ ಬಂದು, ಆ ಕೆಲಸದಲ್ಲಿ ಮೆಜೆಂಡಿಗಿಂತಲೂ ಉತ್ತಮನೆನಿಸಿಕೊಂಡನು ಮೊದಮೊದಲು ಮೆಜೆಂಡಿಗೆ ಸಹಾಯ ಮಾಡುತ್ತಿದ್ದು ಕ್ರಮೇಣ ತಾನೇ ತನ್ನ ಸಮಸ್ಯೆಗಳಲ್ಲಿ ಪ್ರಯೋಗ ನಡೆಸಲು ಪ್ರಾರಂಭಿಸಿದನು. ತನ್ನ ವೈದ್ಯಪಂಡಿತ ಪದವಿಗೋಸ್ಕರ ಬರೆದಿದ್ದ ಪ್ರೌಢ ಪ್ರಬಂಧದಲ್ಲಿ ಸಕ್ಕರೆಯನ್ನು ಸಿರದ ಮೂಲಕ ಶರೀರಕ್ಕೆ ಕೊಟ್ಟಾಗ ಮೂತ್ರದಲ್ಲಿ ಹಾಯದಿರುವುದನ್ನು ವಿಚಾರಿಸಿ ಬರೆದಿದ್ದನು. ಪದವೀಧರನಾದ ಮೇಲೆ ವೈದ್ಯವೃತ್ತಿಯನ್ನು ತ್ಯಜಿಸಿ ಪ್ರಯೋಗಶಾಲೆಯಲ್ಲಿ ಪೂರ್ಣ ಕೆಲಸ ಮಾಡಲು ದೃಢ ಮನಸ್ಸು ಮಾಡಿ ಪ್ರಯೋಗದ ಔಷಧಶಾಸ್ತ್ರಕ್ಕೆ ಅಸ್ತಿಭಾರ ಹಾಕಿದನು. ರಸಾಯನಿಕ ಹಾಗೂ ಭೌತಿಕ ರೀತಿಯಲ್ಲಿ ರೋಗ ಬರಿಸಿ ಪರೀಕ್ಷಿಸುವುದೇ ಈ ಪ್ರಯೋಗದ ಔಷಧಶಾಸ್ತ್ರದ ಗುರಿಯಾಗಿತ್ತು.

ಬರ್ನಾರ್ಡನ ಮುಖ್ಯ ಪ್ರಯೋಗಗಳು

ಬರ್ನಾರ್ಡನ ಪ್ರಯೋಗಗಳಲ್ಲಿ ಮೂರು ಅತ್ಯುತ್ತಮವಾಗಿದ್ದವು. ೧. ಈಲಿ ಸಕ್ಕರೆಯನ್ನು ತಯಾರಿಸುವ ವಿಧಾನ, ೨. ಆಹಾರವನ್ನು ಜೀರ್ಣಿಸಲು ಮೇದೋಜೀರಕ ರಸದ ಸಹಾಯ, ೩. ರಕ್ತನಾಳ ಚಾಲಕ ಮಂಡಲ. ಈಲಿಯಲ್ಲಿ ಹಿಟ್ಟಿನಂತಹ ಗ್ಲೈಕೊಜೆನ್ (ಪ್ರಾಣಿಹಿಟ್ಟು) ತಯಾರಾಗುವ ರೀತಿ, ಈಲಿಯಲ್ಲೂ ಶರೀರದ ಇತರೆಡೆಗಳಲ್ಲೂ ಅದು ಬದಲಾಗುವ ರೀತಿಯ ಪರಿಶೀಲನೆಗಳನ್ನೂ ೧೮೪೩ರಲ್ಲಿ ಪ್ರಾರಂಭ ಮಾಡಿ, ಅವನ ಜೀವಮಾನವೆಲ್ಲಾ ಈ ಪರಿಶೀಲನೆಯಲ್ಲೇ ತೊಡಗಿದ್ದನು. ಶರೀರದಲ್ಲಿ ಪಿಷ್ಟ, ಕೊಬ್ಬು, ಪ್ರೋಟೀನುಗಳ ಬದಲಾವಣೆ ಯಾವ ರೀತಿಯಲ್ಲಾಗುತ್ತದೆಂದು ೧೯ನೇ ಶತಮಾನದ ವೈದ್ಯರಿಗೆ ತಿಳಿದಿರಲಿಲ್ಲ. ಇವನ್ನು ಪರಿಶೀಲಿಸಲು ಬರ್ನಾರ್ಡ್ ಆಸಕ್ತನಾಗಿ, ಸಕ್ಕರೆ ಪದಾರ್ಥವನ್ನು ಸೇವಿಸಿದಾಗ, ಕರುಳಿನಿಂದ ಈಲಿಗೆ ಸಾಗಿಸುವ ಪೋರ್ಟಲ್ (ತೊರುಗೊಂದಿಯ ಸಿರದ ರಕ್ತದಲ್ಲೂ, ಈಲಿಯಿಂದ ಹೃದಯಕ್ಕೆ ಸಾಗಿಸುವ ಈಲಿಯ ಸಿರದ ರಕ್ತದಲ್ಲೂ ದ್ರಾಕ್ಷಿ ಸಕ್ಕರೆ (ಗ್ಲುಕೋಸ್)

ಇರುವುದನ್ನು ತೋರ್ಪಡಿಸಿದ್ದನು. ಸಕ್ಕರೆಯಿಲ್ಲದ ಆಹಾರ ಕೊಟ್ಟಾಗ ತೂರುಗೊಂದಿಯ ಸಿರದ ರಕ್ತದಲ್ಲಿ ದ್ರಾಕ್ಷಿ ಸಕ್ಕರೆ ಇಲ್ಲದ್ದನ್ನೂ, ಆದರೆ ಈಲಿಯ ಸಿರದ ರಕ್ತದಲ್ಲೂ ಮತ್ತು ಈಲಿ ಊತಕದಲ್ಲೂ ದ್ರಾಕ್ಷಿ ಸಕ್ಕರೆ ಇರುವುದನ್ನೂ ಕಂಡು ೧೮೪೮ರಲ್ಲಿ ಈಲಿ ದ್ರಾಕ್ಷಿ



ಕ್ಲಾಡ್ ಬರ್ನಾರ್ಡ್ ಈಲಿಯಲ್ಲಿ ಗ್ಲೈಕೋಜೆನ್ ಶೇಖರವಾಗಿರುವುದನ್ನು ಪತ್ತೆ ಹಚ್ಚಿದನು.

ಸಕ್ಕರೆಯನ್ನು ವಿಸರ್ಜಿಸುತ್ತದೆಂದು ಸ್ಥಿರಪಡಿಸಿದನು. ಈ ವಿಧಾನಕ್ಕೆ "ಒಳ ಸುರಿತ" ಎಂದು ನಾಮಕರಣ ಮಾಡಿದನು. ಅದೇ ವರ್ಷ ರಕ್ತದಿಂದ ಬಂದ ಪದಾರ್ಥಗಳಿಂದಲ್ಲದೆ, ಈಲಿಯಲ್ಲೇ ಇರುವ ಸಕ್ಕರೆ ಮಾರ್ಪಾಡಾಗುವ ಪದಾರ್ಥದಿಂದ ಸಕ್ಕರೆ ತಯಾರಾಗುತ್ತದೆಂದು ತಿಳಿಸಿದನು. ಈ ತಿಳಿವಳಿಕೆಗೆ ಪ್ರಯೋಗಪಡಿಸಿದ್ದ ಈಲಿ ಅಕಸ್ಮಾತ್ ೨೪ ಘಂಟೆ ಉಪಯೋಗವಾಗದಿದ್ದು ಪುನಃ ಪರೀಕ್ಷಿಸಿದಾಗ, ಈಲಿ ಊತಕದಲ್ಲಿ ಹೆಚ್ಚಿನ ಮಟ್ಟದಲ್ಲಿ ಸಕ್ಕರೆ ಇದ್ದುದೇ ಮೂಲ ಕಾರಣವಾಗಿತ್ತು. ಎರಡು ವರ್ಷಗಳ ಅನಂತರ ೧೮೫೭ರಲ್ಲಿ ಈ ಪದಾರ್ಥವನ್ನು ಪತ್ತೆ ಹಚ್ಚಿ ಇದಕ್ಕೆ ಗ್ಲೈಕೊಜೆನ್ (ಪ್ರಾಣಿಹಿಟ್ಟು) ಎಂದು ಹೆಸರಿಟ್ಟನು. ಆಹಾರದಿಂದ ಬಂದ ದ್ರಾಕ್ಷಿಸಕ್ಕರೆ ಈಲಿಯಲ್ಲೂ ಆಗುವುದಲ್ಲದೆ, ಸ್ನಾಯುಗಳಲ್ಲೂ ಪ್ರಾಣಿಹಿಟ್ಟು ಆಗುತ್ತದೆಂದು ಇತ್ತೀಚೆಗೆ ರೇಡಿಯೊ ಐಸೊಟೋಪಿನ ಸಹಾಯದಿಂದ ಗೊತ್ತಾಗಿದೆ. ಕಾರಲ್ ಫರ್ಡಿನೆಂಡ್ ಕೋರಿ ಮತ್ತು ಗರ್ಟಿ ತೆರೇಸ ಕೋರಿ ಸ್ನಾಯುಗಳ ಚಟುವಟಿಕೆಯಿಂದ ಕ್ಷೀರಾಮ್ಲ ತಯಾರಾಗಿ ಅದು ಈಲಿಯಲ್ಲಿ ಪ್ರಾಣಿಹಿಟ್ಟಿಗೆ ಪರಿವರ್ತನೆ ಆಗುತ್ತದೆಂದೂ, ಆದರೆ ಸ್ನಾಯುಗಳಲ್ಲಿ ಆಗುವುದಿಲ್ಲವೆಂದೂ, ಈಲಿಯ ಪ್ರಾಣಿಹಿಟ್ಟು ರಕ್ತದಲ್ಲಿ ದ್ರಾಕ್ಷಿಸಕ್ಕರೆಗೆ ಪರಿವರ್ತನೆಯಾದ ನಂತರ ಸ್ನಾಯುಗಳಲ್ಲಿ ಪ್ರಾಣಿಹಿಟ್ಟಾಗಿ ಬದಲಾಗುವುದೆಂದೂ ತಿಳಿಸಿದರು. ಈ ಬದ

ಲಾವಣೆಗೆ ಫಾಸ್ಫಾರೈಲೇಸ್ ಎಂಬ ಅಜೈವಿಕ ಕಿಣ್ವ ಅಗತ್ಯವೆಂದು ತಿಳಿಸಿದ್ದರು.

ಜೀರ್ಣಕ್ಕೆ ಮೇದೋಜೀರಕ ರಸ

ಆಹಾರದ ಜೀರ್ಣಕ್ಕೆ ಮೇದೋಜೀರಕ ರಸದ ಸಹಾಯ: ಮಾಂಸ ಒಂದನ್ನೇ ಆಹಾರವಾಗಿ ಸೇವಿಸುತ್ತಿದ್ದ ಮೊಲ ಒಂದರ ಶವದ ಪರೀಕ್ಷೆ ಮಾಡುತ್ತಿದ್ದಾಗ,ಅನ್ನಕ್ಷೀರ ನಾಳದಲ್ಲಿ ಬಿಳೀ ದ್ರವವಿರುವುದನ್ನು ಕಂಡು, ಇದೇ ಆಧಾರದ ಮೇಲೆ ನಾಯಿ ಮೇಲೂ ಪ್ರಯೋಗ ನಡೆಸಿ, ಕೊಬ್ಬು ಜೀರ್ಣವಾದನಂತರ ಬಿಳಿಯ ದ್ರವವಾಗಿ ಪರಿಣಮಿಸುತ್ತ ದೆಂದೂ ಬರ್ನಾರ್ಡ್ ತೀರ್ಮಾನಕ್ಕೆ ಬಂದನು. ಈ ಪರಿವರ್ತನೆಗೆ ಮೇದೋಜೀರಕ ರಸ ಕಾರಣವೆಂದೂ ಹಾಗೂ ಕರುಳಿನಿಂದ ಕೊಬ್ಬು ಶರೀರಕ್ಕೆ ಸೇರಲೂ ಈ ರಸವೇ ಕಾರಣವೆಂದೂ, ತೀರ್ಮಾನಿಸಿದನು. ಉಪವಾಸವಿದ್ದ ಪ್ರಾಣಿಯೊಂದರ ಮೇದೋ ಜೀರಕ ಗ್ರಂಥಿ ನಾಳದಲ್ಲಿ ಮೇದೋಜೀರಕ ರಸ ಉತ್ಪತ್ತಿಯಾಗದಿರುವುದನ್ನೂ,ಆಹಾರ ಕೊಟ್ಟನಂತರ ಆಮರಸ ದುರಾರ್ಗರುಳನ್ನು ಸೇರಿದ ಕೂಡಲೇ ಮೇದೋಜೀರಕ ರಸ ಉತ್ಪತ್ತಿಯಾಗುವುದನ್ನೂ ನಾಯಿಯ ಮೇಲೆ ನಡೆಸಿದ ಪ್ರಯೋಗಗಳಿಂದ ಬರ್ನಾರ್ಡ್ ತೋರಿಸಿದ್ದನು. ಮೇದೋಜೀರಕ ರಸದಿಂದ ಕೊಬ್ಬು ಜೀರ್ಣವಾಗುವುದಲ್ಲದೆ, ಪಿಷ್ಟ ಪದಾರ್ಥವೂ ಜೀರ್ಣವಾಗಿ ಮಾಲ್ಟೋಸ್ ಸಕ್ಕರೆಯಾಗುತ್ತದೆಂದು ತೋರ್ಪಡಿಸಿ ದ್ದನು. ಆದರೆ ಸಕ್ಕಸ್ ಎಂಟರಿಕಸ್‌ನಿಂದ ಎಂಟರೊಕೈನೇಸ್ ಬಿಡುಗಡೆಯಾಗಿ ಕರುಳಿಗೆ ಸುರಿದೊರೆತು, ಜಡಸ್ಥಿತಿಯಲ್ಲಿರುವ ಟ್ರಿಪ್ಸಿನೋಜನ್ ಚುರುಕಾದ ಟ್ರಿಪ್ಸಿನ್ ರೂಪಕ್ಕೆ ಪರಿವರ್ತನೆ ಆಗುವುದಿಲ್ಲವೆಂಬುದನ್ನು ಬರ್ನಾರ್ಡ್ ಅರಿತಿರಲಿಲ್ಲ. ಹಾಗೂ ಪ್ರೋಟೀನು ಟ್ರಿಪ್ಸಿನ್ನಿನಿಂದ ಜೀರ್ಣವಾಗುತ್ತದೆಂಬುದೂ ಅವನ ಪ್ರಯೋಗಗಳಿಂದ ಗೊತ್ತಾಗಲಿಲ್ಲ. ಇದರ ಕಾರಣ ಎಂಟರೊಕೈನೇಸ್ ಮಿಶ್ರವಾಗುವುದಕ್ಕೆ ಮೊದಲೇ ಮೇದೋಜೀರಕ ಗ್ರಂಥಿನಾಳದಿಂದ ನೇರವಾಗಿ ಬಂದ ಮೇದೋಜೀರಕ ರಸವನ್ನು ತನ್ನ ಪ್ರಯೋಗಗಳಲ್ಲಿ ಉಪಯೋಗಿಸಿದ್ದನು.

ರಕ್ತನಾಳ ಚಾಲಕ ನರ ಮಂಡಲ

ರಕ್ತನಾಳ ಚಾಲಕ ಮಂಡಲದಲ್ಲಿ ರಕ್ತನಾಳಗಳನ್ನು ಕುಗ್ಗಿಸುವ ಹಿಗ್ಗಿಸುವ ನರಗಳ ಕ್ರಿಯಾಶಕ್ತಿಯ ಪ್ರದರ್ಶನವೇ ಬರ್ನಾರ್ಡನ ಮೂರನೆಯ ಮಹಾ ಪ್ರಯೋಗ ವಾಗಿತ್ತು. ಕತ್ತಿನ ಅನುಕಂಪನ ನರವನ್ನು ಕತ್ತರಿಸಿದಾಗ ಅದೇ ಕಡೆಯ ತಲೆ ಮತ್ತು ಕತ್ತುಗಳಲ್ಲಿ ಶಾಖ ಏರುವುದನ್ನು ಗಲಖಲರಲ್ಲಿ ಮೊಲದ ಮೇಲೆ ಪ್ರಯೋಗ ನಡೆಸಿ ತೋರಿಸಿದ್ದನು. ದವಡೆಯ ಕೆಳಗಿನ ಜೊಲ್ಲು ಗ್ರಂಥಿಯ ಮೇಲೆ ಪ್ರಯೋಗ ನಡೆಸು ತ್ತಿದ್ದಾಗ, ಅನುಕಂಪನ ನರ, ರಕ್ತನಾಳಗಳನ್ನು ಕುಗ್ಗಿಸುತ್ತದೆಂದೂ ಕಾರ್ಡ ಟಿಂಪಾನಿ ನರ ಹಿಗ್ಗಿಸುತ್ತದೆಂದೂ ತೋರಿಸಿದ್ದನು. ಈ ಪ್ರಯೋಗಗಳ ಮೂಲಕ ರಕ್ತನಾಳ ಚಾಲಕ ನರ ಮಂಡಲದ ಪ್ರಭಾವವನ್ನು ವೈದ್ಯಶಾಸ್ತ್ರಜ್ಞರಲ್ಲಿ ಅರಿವುಂಟುಮಾಡಿದ್ದನು.

ಕ್ಲಾಡ್ ಬರ್ನಾರ್ಡ್‌ನ ಶ್ರೇಷ್ಠತೆ ಗಲಖಲರಲ್ಲಿ ಗೊತ್ತಾಗಿ, ಸಾರ್ಬೊನ್ನೆಯ

ಶರೀರಶಾಸ್ತ್ರದ ಪ್ರಾಧ್ಯಾಪಕನಾಗಿ ನೇಮಕವಾದನು. ಇವನು ವೈದ್ಯಶಾಸ್ತ್ರಕ್ಕೆ ಸಲ್ಲಿಸಿದ ಸೇವೆಗಳಲ್ಲೆಲ್ಲಾ ಅತಿ ಮುಖ್ಯ ಸೇವೆ, ಪರಿಶೋಧನೆ ನಡೆಸಲು ಅತ್ಯಗತ್ಯವಾದ ಮೂಲತತ್ವಗಳ ವಿವರಣೆಗಳನ್ನು ವಿಚಾರ ಮಾಡಿದ್ದು. ಎಲ್ಲರೂ ಆಗತ್ಯವಾಗಿ ಓದ ಬೇಕಾದ ಇವನ 'ಪ್ರಯೋಗ ವೈದ್ಯದ ವ್ಯಾಸಂಗಕ್ಕೆ ಪೀಠಿಕೆ' ೧೮೬೫ರಲ್ಲಿ ಪ್ರಕಟವಾಗಿ ಎಲ್ಲರ ಗಮನವನ್ನು ಸೆಳೆಯಿತು. ಇಂಗಾಲ ಮಾನಾಕ್ಸೈಡ್, ಕ್ಯೂರಾರೆ ಮುಂತಾದ ವಿಷಗಳ ಶೋಧನೆಗಳನ್ನೂ ಇವನು ನಡೆಸಿದನು. ಆಮ್ಲಜನಕವನ್ನು ಶ್ವಾಸಕೋಶದ ವಾಯುವಿನಿಂದ ತೆಗೆದುಕೊಂಡು ಇತರ ಊತಕಗಳಿಗೆ ಸಾಗಿಸುವುದೇ ಕೆಂಪು ರಕ್ತಕಣ ಗಳ ಕೆಲಸವೆಂದೂ, ಕ್ಯೂರಾರೆಯ ಉಪಯೋಗವನ್ನೂ ಗೊತ್ತುಮಾಡಿದ್ದನು. ಹೀಗೇ ಇನ್ನೂ ಅನೇಕ ಶೋಧನೆಗಳನ್ನು ಬರ್ನಾರ್ಡ್ ನಡೆಸಿ ವಿಶೇಷ ಮರ್ಯಾದೆ ಗೌರವ ವನ್ನೂ ಸಂಪಾದಿಸಿದನು.

ಚಾರಲ್ಸ್ ಬ್ರೌನ್ ಸಿಕ್ವಾರ್ಡ್

ಚಾರಲ್ಸ್ ಬ್ರೌನ್ ಸಿಕ್ವಾರ್ಡ್ (೧೮೧೭-೧೮೯೪) ಕ್ಲಾಡ್ ಬರ್ನಾರ್ಡನ ತರುವಾಯಿಯಾಗಿ ಫ್ರಾನ್ಸಿನ ವೈದ್ಯಶಾಲೆಗೆ ಪ್ರಾಧ್ಯಾಪಕನಾಗಿ ಬಂದಿದ್ದರೂ, ಇವ ನಿಗೂ ಬರ್ನಾರ್ಡಿಗೂ ಅನೇಕ ವ್ಯತ್ಯಾಸಗಳಿದ್ದವು. ಬರ್ನಾರ್ಡ್ ಪ್ಯಾರಿಸ್ಸಿನಲ್ಲಿ ಜನಿಸಿ ಪದವೀಧರನಾದನಂತರ ವೈದ್ಯವೃತ್ತಿಯನ್ನು ಬಿಟ್ಟು ಪ್ರಯೋಗಶಾಲೆಯನ್ನು ಸೇರಿದ್ದರೆ, ಬ್ರೌನ್ ಸಿಕ್ವಾರ್ಡ್ ವೈದ್ಯವೃತ್ತಿಯನ್ನು ತೊರೆಯದೆ ಪ್ರಯೋಗಗಳನ್ನು ನಡೆಸುತ್ತಿದ್ದನು. ಬರ್ನಾರ್ಡ್ ಪ್ಯಾರಿಸ್ಸಿನಲ್ಲೇ ಸಾಯುವ ತನಕ ಕೆಲಸ ಮಾಡಿದ್ದರೆ, ಬ್ರೌನ್ ಸಿಕ್ವಾರ್ಡ್ ತಾನು ಜನಿಸಿದ ಮಾರಿಷಸ್‌ನಲ್ಲೂ, ಪ್ಯಾರಿಸ್, ಲಂಡನ್, ನ್ಯೂಯಾರ್ಕ್‌ಗಳಲ್ಲೂ ಕೆಲಸ ಮಾಡಿ, ಫಿಲಡೆಲ್ಫಿಯ, ಬಾಸ್ಟನ್, ಡಬ್ಲಿನ್‌ಗಳಲ್ಲಿ ಉಪನ್ಯಾಸ ಮಾಡಿದನು. ಪ್ಯಾರಿಸ್ಸಿಗೆ ಬರುವ ಮುನ್ನ ರಿಚ್ಮಂಡಿನ ವರ್ಜಿನಿಯದ ವೈದ್ಯಶಾಲೆಯಲ್ಲೂ, ಹಾರ್ವಾರ್ಡ್ ವೈದ್ಯಶಾಲೆಯಲ್ಲೂ ಪ್ರಾಧ್ಯಾಪಕನಾಗಿದ್ದನು. ಮೊಲದ ಕತ್ತಿನ ಅನುಕಂಪನ ನರವನ್ನು ಕತ್ತರಿಸಿ ಅದೇ ಕಡೆಯ ತಲೆಯಲ್ಲೂ ಕತ್ತಿ ನಲ್ಲೂ ಕಾವೇರುವುದನ್ನು ಬರ್ನಾರ್ಡ್ ತೋರಿಸಿದ್ದರೆ, ಬ್ರೌನ್ ಸಿಕ್ವಾರ್ಡ್ ಅದೇ ಪ್ರಯೋಗ ನಡೆಸಿ ಕತ್ತರಿಸಿದ ನರದ ತುದಿಗೆ ಗ್ಯಾಲ್ವಾನಿ ವಿದ್ಯುತ್ಪ್ರಯೋಗ ಮಾಡಿ ಕಾವೇರಿದ್ದ ಚರ್ಮ ತಣ್ಣಗಾದುದನ್ನೂ ಮತ್ತು ಬಿಳಿಚಿಕೊಂಡಿದ್ದನ್ನೂ ೧೮೫೨ರಲ್ಲಿ ತೋರಿಸಿದನು. ಪ್ಯಾರಿಸ್ಸಿನಲ್ಲಿ ಪದವಿಯ ಅಂಗವಾಗಿ ಮಿದುಳುಬಳ್ಳಿಯ ನರಗಳ ಕ್ರಿಯೆ ಗಳನ್ನು ಕುರಿತು ೧೮೪೦ರಲ್ಲಿ ಬ್ರೌನ್ ಸಿಕ್ವಾರ್ಡ್ ಲೇಖನವನ್ನು ಬರೆದನು. ಇದೇ ಪ್ರಯೋಗವನ್ನು ಮುಂದುವರಿಸಿ, ೧೮೪೯ರಲ್ಲಿ ಮಿದುಳುಬಳ್ಳಿಯ ಅರೆಚ್ಛೇದನದಿಂದ ಅಂಗಾಯದಡಿ ಶರೀರದ ಎದುರುಭಾಗದಲ್ಲಿ ಸ್ಪರ್ಶ ನಾಶವಾಗುವುದನ್ನೂ ಅಂಗಾಯ ದಡಿ ಶರೀರದ ಅದೇ ಭಾಗದಲ್ಲಿ ಸ್ಪರ್ಶವಿರುವುದನ್ನೂ ತೋರಿಸಿದ್ದನು. ಈ ಬದಲಾವ ಣೆಗೆ ಈಗಲೂ ಬ್ರೌನ್ ಸಿಕ್ವಾರ್ಡ್ ಲಕ್ಷಣ ಕೂಟವೆಂದು ಹೆಸರಿದೆ. ೧೮೫೬ರಲ್ಲಿ ಅನೇಕ

ಪ್ರಯೋಗಗಳ ಸಹಾಯದಿಂದ ಅಡ್ರೀನಲ್ ಗ್ರಂಥಿಗಳು ಶರೀರಕ್ಕೆ ಅತ್ಯಗತ್ಯವೆಂದೂ ತೋರ್ಪಡಿಸಿದ್ದನು. "ಒಳ ಸುರಿತ" ಎಂಬ ಕ್ರಿಯೆ ಕ್ಲಾಡ್ ಬರ್ನಾರ್ಡ್‌ನ ಸೃಷ್ಟಿಯಾಗಿದ್ದರೂ, ಈ ಅಭ್ಯಾಸಕ್ಕೆ ಬ್ರೌನ್ ಸಿಕ್ವಾರ್ಡ್ ಸಾಕಷ್ಟು ಉತ್ತೇಜನ ಕೊಟ್ಟು ಪ್ರಯೋಗಗಳನ್ನು ನಡೆಸಿದನು. ಇವುಗಳ ಫಲವಾಗಿ ಥೈರಾಯ್ಡ್, ಅಡ್ರೀನಲ್, ಮೇದೋಜೀರಕ ಗ್ರಂಥಿ, ಈಲಿ ಮತ್ತು ಮೂತ್ರಪಿಂಡಗಳಲ್ಲೆಲ್ಲಾ ಒಳಸುರಿತ ಇದೆಯೆಂದೂ, ಅವುಗಳಿಂದ ರೋಗಗಳನ್ನು ಗುಣಪಡಿಸಬಹುದೆಂದೂ ನಂಬಿದ್ದನು.

ಐರ್ಲೆಂಡ್ ವೈದ್ಯರ ಕೊಡುಗೆ

೧೯ನೇ ಶತಮಾನದಲ್ಲಿ ಪ್ಯಾರಿಸ್ಸಿನ ವೈದ್ಯವೃಂದ ವೈದ್ಯಶಾಸ್ತ್ರದ ಪರಿಶೋಧನೆಗಳಲ್ಲಿ ನಿಸ್ಸಂದೇಹವಾದ ಪ್ರಮುಖ ಸ್ಥಾನವನ್ನು ಹೊಂದಿದ್ದಾಗ, ಇತರ ದೇಶಗಳು ಸುಮ್ಮನಿರಲಿಲ್ಲ. ಸಾಕಷ್ಟು ವಿಚಾರಣೆಗಳನ್ನು ನಡೆಸುತ್ತಲೇ ಇದ್ದವು. ಐರ್ಲೆಂಡಿನ ಡಬ್ಲಿನ್ ಪಟ್ಟಣದಲ್ಲಿ ಕೆಲವು ವೈದ್ಯ ವಿದ್ವಾಂಸರು ಗಣನೀಯವಾದ ಸಂಶೋಧನೆಗಳನ್ನು ನಡೆಸುತ್ತಿದ್ದರಲ್ಲದೆ ವೈದ್ಯಶಾಸ್ತ್ರಕ್ಕೆ ಅತಿ ಶೋಭಾಯಮಾನವಾದ ಕೊಡುಗೆಗಳನ್ನೂ ನೀಡಿದ್ದರು.

ಅಬ್ರಹಾಮ್ ಕಾಲ್ಲೀಸ್

ಇವರಲ್ಲಿ ಮೊದಲನೆಯವನಾದ ಅಬ್ರಹಾಮ್ ಕಾಲ್ಲೀಸ್ (೧೭೭೩–೧೮೪೩) ಡಬ್ಲಿನ್ನಿನ ಟ್ರನಿಟಿ ವೈದ್ಯ ವಿದ್ಯಾಶಾಲೆಯಲ್ಲಿ ಓದಿ,ಅನಂತರ ಎಡಿನ್ಬರೊವಿನಲ್ಲಿ ಮುಂದುವರಿಸಿ, ೧೭೯೭ರಲ್ಲಿ ವೈದ್ಯ ಪಂಡಿತ ಪದವಿ ಪಡೆದಿದ್ದನು. ಕೆಲಸಕ್ಕೆಂದು ಲಂಡನ್ನಿಗೆ ಕಾಲ್ನಡಿಗೆಯಲ್ಲೇ ಹೋಗಿ ಸ್ವಲ್ಪ ದಿವಸಗಳ ಅನಂತರ ಡಬ್ಲಿನ್ನಿಗೆ ಹಿಂತಿರುಗಿ ವೈದ್ಯ ವೃತ್ತಿಯಲ್ಲಿ ತೊಡಗಿದನು. ೧೮೦೪ರಲ್ಲಿ ಐರ್ಲೆಂಡಿನ ಶಸ್ತ್ರವೈದ್ಯ ಶಾಲೆಯಲ್ಲಿ ಅಂಗರಚನೆ ಶಾಸ್ತ್ರಕ್ಕೂ, ಶಸ್ತ್ರವೈದ್ಯಕ್ಕೂ ಪ್ರಾಧ್ಯಾಪಕನಾಗಿ ಅಲ್ಲೇ ೩೨ ವರ್ಷ ಕೆಲಸ ಮಾಡಿದನು. ಇವನ ಉತ್ತಮ ಶಸ್ತ್ರಕ್ರಿಯೆಗಳು ಐರ್ಲೆಂಡಿನ ವೈದ್ಯಶಾಲೆಯ ಕೀರ್ತಿಯನ್ನು ಹೆಚ್ಚಿಸಿದವು. ಕಾಲ್ಲೀಸ್ ಬರೆದಿದ್ದ 'ಶಸ್ತ್ರವೈದ್ಯದ ಅಂಗರಚನೆಶಾಸ್ತ್ರದ ಮೇಲಿನ ಪ್ರಕರಣ ಗ್ರಂಥ' ೧೮೧೧ರಲ್ಲಿ ಬೆಳಕಿಗೆ ಬಂದು, ಸಾಕಷ್ಟು ಮೆಚ್ಚಿಗೆ ಪಡೆಯಿತು. ರೇಡಿಯಸ್ ಮೂಳೆಯ ಮಣಿಕಟ್ಟಿನ ತುದಿಯ ಮುರಿತವನ್ನು ಕುರಿತು ಬರೆದಿದ್ದ ಲೇಖನ ಅಚ್ಚುಮೆಚ್ಚಿನದಾಗಿತ್ತು. ಇದಕ್ಕೆ ಈಗಲೂ ಕಾಲ್ಲೀಸ್‌ನ ಮೂಳೆ ಮುರಿತವೆಂದು ಹೆಸರಿದೆ. ೧೮೩೭ರಲ್ಲಿ ಬರೆದಿದ್ದ ಮೇಹರೋಗಗಳ ಲೇಖನ ಅಷ್ಟೇ ಉತ್ಕೃಷ್ಟವಾಗಿದ್ದು ಅದರಲ್ಲಿ 'ತಾನು ರೋಗವನ್ನು ಅನುಭವಿಸದೆಯೇ ಆರೋಗ್ಯವಂತ ತಾಯಿ ಉಪದಂಶ ಪೀಡಿತ ಕೂಸನ್ನು ಹೆರಬಹುದು' ಎಂಬ ಕಾಲ್ಲೀಸ್ ಕಟ್ಟಳೆ ಈಗಲೂ ಅನ್ವಯದಲ್ಲಿದೆ.

ಜಾನ್ ಚೇಯಿನ್

ಕಾಲ್ಲೀಸ್‌ಗೆ ೪ ವರ್ಷ ಹಿರಿಯವನಾಗಿದ್ದ, ಜಾನ್ ಚೇಯಿನ್ (೧೭೭೭–

೧೮೩೬) ಸ್ಕಾಟ್ಲೆಂಡಿನಲ್ಲಿ ಹುಟ್ಟಿ, ಎಡಿನ್ಬರೊವಿನಲ್ಲಿ ವೈದ್ಯ ಪದವಿ ಪಡೆದು ಐರ್ಲೆಂಡಿನ ಬ್ರಿಟಿಷ್ ಸೈನ್ಯದಲ್ಲಿ ಕೆಲಸಕ್ಕಿದ್ದನು. ಅಲ್ಲಿ ಕೆಲಸ ಮುಗಿದನಂತರ ಎಡಿನ್ಬರೊವಿಗೆ ಹಿಂತಿರುಗಿ ತನ್ನ ತಂದೆಗೆ ಸಹಾಯಕನಾಗಿದ್ದನು. ಅದೇ ಕಾಲದಲ್ಲಿ ಚಾರಲ್ಸ್ ಬೆಲ್ ಕೈಕೆಳಗೆ ರೋಗ ನಿದಾನವನ್ನು ಕಲಿಯುತ್ತಿದ್ದನು.ಮಕ್ಕಳ ರೋಗಗಳಲ್ಲಿ ಆಸಕ್ತಿ ಹುಟ್ಟಿ ಪುಸ್ತಕ ಒಂದನ್ನು ಬರೆದು ಅದರಲ್ಲಿ ಧ್ವನಿನಾಳ, ಉಸಿರ್ನಾಳ ರೋಗಗಳ ನಿದಾನ, ಕರುಳಿನ ಶೂಲೆ, ಕೂರಾದ ನೀರ್ದಲೆ ಮುಂತಾದ ರೋಗಗಳನ್ನು ವಿವರಿಸಿದ್ದನು. ೯ ವರ್ಷ ಎಡಿನ್ಬರೊವಿನಲ್ಲಿ ಕೆಲಸ ಮಾಡಿದ ಅನಂತರ ೧೮೦೯ರಲ್ಲಿ ಡಬ್ಲಿನ್ನಿಗೆ ಬಂದು ಮೀತ್ ಆಸ್ಪತ್ರೆಯಲ್ಲಿ ಪ್ರಸಿದ್ಧ ವೈದ್ಯನೂ ಅಧ್ಯಾಪಕನೂ ಆಗಿದ್ದು, ಅನಂತರ ಶಸ್ತ್ರ ವೈದ್ಯರ ವೈದ್ಯಶಾಲೆಯಲ್ಲಿ ವೈದ್ಯದ ಪ್ರಾಧ್ಯಾಪಕನಾಗಿ ನೇಮಕವಾದನು. ಆಗ ತನ್ನ ಸಾಮರ್ಥ್ಯವನ್ನೆಲ್ಲಾ ಉಪಯೋಗಿಸಿ ಐರ್ಲೆಂಡಿನ ವೈದ್ಯಶಾಲೆಯನ್ನು ಸ್ಥಾಪಿಸಿ ಕೀರ್ತಿ ಪಡೆದಿದ್ದನು. ಚೇಯಿನ್-ಸ್ಟೋಕ್ಸ್ ಉಸಿರಾಟ, ಮಕ್ಕಳ ಕೈಪಾದಗಳ ಸೆಡೆತ, ಸೊಕ್ಕಿನ ಜ್ವರದ ಸಂಕ್ಷೇಪ ವಿವರಣೆ ಮುಂತಾದುವನ್ನು ಇವನು ಪ್ರಾಧ್ಯಾಪಕನಾಗಿ ದ್ದಾಗಲೇ ಬರೆದು ಎಲ್ಲರ ಮೆಚ್ಚಿಗೆಗೆ ಪಾತ್ರನಾಗಿದ್ದನು.

ರಾಬರ್ಟ್ ಗ್ರೇವ್ಸ್

ಐರ್ಲೆಂಡಿನ ರಾಬರ್ಟ್ ಜೇಮ್ಸ್ ಗ್ರೇವ್ಸ್ (೧೭೯೬-೧೮೫೩) ಡಬ್ಲಿನ್ನಿನ ವೈದ್ಯ ಪದವೀಧರನಾದ ಅನಂತರ, ಲಂಡನ್, ಎಡಿನ್ಬರೊ, ಬರ್ಲಿನ್, ಗಾಟ್ಟಿನ್ಜನ್ ಗಳಲ್ಲಿ ವೈದ್ಯ ವ್ಯಾಸಂಗ ಮುಂದುವರಿಸಿ ಶ್ರೇಷ್ಠ ವೈದ್ಯನಾಗಿದ್ದಲ್ಲದೆ ಬಹು ಭಾಷಾ ಪ್ರವೀಣನಾಗಿದ್ದನು. ಜರ್ಮನಿ ಮತ್ತು ಇಟಲಿಗಳ ಭಾಷೆಗಳು ತನ್ನ ಮಾತೃಭಾಷೆ ಯಷ್ಟೇ ಸುಲಭವಾಗಿದ್ದವು. ಹೊರ ದೇಶಗಳಲ್ಲಿ ವ್ಯಾಸಂಗ ಮುಗಿಸಿ ೧೮೨೧ರಲ್ಲಿ ಡಬ್ಲಿ ನ್ನಿಗೆ ಹಿಂತಿರುಗಿ,ಮೀತ್ ಆಸ್ಪತ್ರೆಯ ವೈದ್ಯನಾಗಿ ಸೇರಿ, ೨೨ವರ್ಷ ಸೇವೆ ಸಲ್ಲಿಸಿದನು. ಆಗಿನ ವೈದ್ಯ ವಿದ್ಯೆಯಲ್ಲಿದ್ದ ಕೆಲವು ದೋಷಗಳನ್ನು ಸರಿಪಡಿಸಿ ತಕ್ಕ ಬದಲಾವಣೆ ಗಳನ್ನು ಆಚರಣೆಗೆ ತಂದನು.'ಪ್ರೌಢ ವೈದ್ಯ ವಿದ್ಯಾರ್ಥಿಗಳು ರೋಗಿಗಳ ಜವಾಬ್ದಾರಿ ಯನ್ನು ಹೊತ್ತು ರೋಗಿ ಕೋಣೆಯ ಸುತ್ತಾಟದಲ್ಲಿ ಮುಖ್ಯ ವೈದ್ಯನಿಗೆ ನಿದಾನ, ಚಿಕಿತ್ಸೆ, ಮುನ್ನಡೆಗಳನ್ನು ವರದಿ ಮಾಡುವ' ಪದ್ಧತಿ ಆಗ ಆಚರಣೆಯಲ್ಲಿತ್ತು. ಇವನು ಬರೆದಿದ್ದ 'ವೈದ್ಯಶಾಸ್ತ್ರದ ಆಚರಣೆಯ ಮೇಲಿನ ಹಾಸೆಬದಿಯ ಉಪನ್ಯಾಸಗಳು' ಎಂಬ ಪುಸ್ತಕವನ್ನು ಎಲ್ಲರೂ ಸ್ವಾಗತಿಸಿದರು. ಜ್ವರಗಳ ಪರಿಚಯವಿದ್ದು, ಆ ರೋಗಿ ಗಳಿಗೆ ಸಾಕಾದಷ್ಟು ಆಹಾರ ಕೊಡಬೇಕೆಂದು ತಿಳಿಸಿದನು. ಈಗಲೂ ಅವನ ಹೆಸರಿ ನಲ್ಲಿರುವ, 'ಗ್ರೇವ್ಸ್ ರೋಗ'ವನ್ನು ಪರಿಶೀಲಿಸಿ ಲಂಡನ್ನಿನ ವೈದ್ಯಶಾಸ್ತ್ರ ಹಾಗೂ ಶಸ್ತ್ರವೈದ್ಯ ಪತ್ರಿಕೆಯಲ್ಲಿ ೧೮೩೫ರಲ್ಲಿ ಪ್ರಕಟಿಸಿದನು.

ವಿಲಿಯಂ ಸ್ಟೋಕ್ಸ್

ಗ್ರೇವ್ಸ್‌ನಷ್ಟೇ ಸಮರ್ಥನಾದ ವಿಲಿಯಂ ಸ್ಟೋಕ್ಸ್ (೧೮೦೪-೭೮) ಗ್ರೇವ್ಸ್

ಗಿಂತ ಚಿಕ್ಕವನಾದರೂ ಅವನ ಆಪ್ತ ಸ್ನೇಹಿತನೂ ಸಹೋದ್ಯೋಗಿಯೂ ಆಗಿ ೩೦ ವರ್ಷಗಳೂ ಜೊತೆಯಲ್ಲೇ ಕೆಲಸ ಮಾಡಿದನು. ಐರ್ಲೆಂಡಿನ ದೇಶಭಕ್ತ, ಪ್ರಭಾವಶಾಲಿ, ರಾಜಪೋಷಿತ ವೈದ್ಯನಾಗಿದ್ದ ಇವನ ತಂದೆಯಂತೆ ತಾನೂ ವಿದ್ಯಾವಂತನಾಗಿ ಎಡಿನ್ಬರೊವಿನಲ್ಲಿ ೧೮೨೫ರಲ್ಲಿ ವೈದ್ಯ ಪದವಿ ಪಡೆದಿದ್ದನು ಎಡಿನ್ಬರೊವಿನಲ್ಲಿದ್ದಾಗಲೇ ಆಕರ್ಣಕದ ಉಪಯೋಗವನ್ನು ಕುರಿತು ಒಂದು ಪುಸ್ತಕವನ್ನೂ ಬರೆದಿದ್ದನು. ೧೮೨೬ರಲ್ಲಿ ಡಬ್ಲಿನ್ನಿಗೆ ಬಂದು ಮೀತ್ ಆಸ್ಪತ್ರೆಯ ವೈದ್ಯಶಾಸ್ತ್ರದ ಪ್ರಾಧ್ಯಾಪಕನಾಗಿ ನೇಮಕವಾದಾಗ ಅವನಿಗೆ ೨೨ ವರ್ಷ ಮಾತ್ರ ವಯಸ್ಸಾಗಿತ್ತು. ಆದರೂ ಉಪನ್ಯಾಸ ಮಾಡುವುದರಲ್ಲೂ, ರೋಗಿ ಹಾಸಿಗೆಪಕ್ಕದ ವೈದ್ಯವನ್ನು ಕಲಿಸುವುದರಲ್ಲೂ ಅತಿ ಚುರುಕಾಗಿದ್ದನು. ೧೮೪೭ರಲ್ಲಿ ಬರೆದ ಇವನ ಮೊದಲನೆಯ ಪುಸ್ತಕ 'ಎದೆಯ ರೋಗಗಳು' ಎಂಬುದು ಉತ್ಕೃಷ್ಟವಾಗಿತ್ತು ಲೆನೆಕ್ ಬರೆದಿದ್ದ ಪುಸ್ತಕಕ್ಕೆ ಇದನ್ನು ಹೋಲಿಸಬಹುದಾಗಿತ್ತು. ಆದರೆ ೨೦ ವರ್ಷಗಳ ಅನುಭವ ಪಡೆದು ಅನಂತರ ಬರೆದಿದ್ದ 'ಹೃದಯ ಮತ್ತು ಮಹಾಧಮನಿಯ ರೋಗಗಳು' ಎಂಬ ಪುಸ್ತಕ ಎದೆಯ ರೋಗಗಳ ಪುಸ್ತಕದಷ್ಟು ಮೇಲಾಗಿರಲಿಲ್ಲ. ಆದರೂ ಇದು ಒಳ್ಳೆಯ ಅಡಕವಾದ ಪುಸ್ತಕವಾಗಿತ್ತು. ಇದರಲ್ಲಿ ಭರದ ವೇಗದ ಗುಂಡಿಗೆ, ಚೇಯಿನ್-ಸ್ಟೋಕ್ಸ್ ಉಸಿರಾಟ, ಸ್ಟೋಕ್ಸ್-ಆಡಮ್ಸ್ ರೋಗಗಳ ವಿವರಗಳಿದ್ದವು. ವಿಷಮಶೀತ ಮತ್ತು ಸೊಕ್ಕಿನ ಜ್ವರ ರೋಗಗಳು ಒಂದೇ ರೋಗವೆಂದು ಸ್ಟೋಕ್ಸ್ ಹೇಳದಿದ್ದರೆ ಇವನ ಕೀರ್ತಿ ಮತ್ತಷ್ಟು ಹೆಚ್ಚಬಹುದಾಗಿತ್ತು, ಆದರೂ ಇವನಿಗೆ ಅನೇಕ ಗೌರವಗಳು ಕಾದು ನಿಂತಿದ್ದವು. ಎಡಿನ್ಬರೊ, ಆಕ್ಸ್‌ಫರ್ಡ್, ಕೇಂಬ್ರಿಡ್ಜ್ ವೈದ್ಯಶಾಲೆಗಳಿಂದ ಗೌರವಗಳ ಪ್ರಶಸ್ತಿ ಬಂದವು. ರಾಣಿಯ ವೈದ್ಯನಾಗಿಯೂ, ರಾಜಸಂಸ್ಥೆಯ ಸದಸ್ಯನಾಗಿಯೂ ಆರಿಸಲ್ಪಟ್ಟಿದ್ದನು. ಹೀಗೆ ೫೦ ವರ್ಷಗಳೂ ಒಂದೇ ಸಮನೆ ಮೀತ್ ಆಸ್ಪತ್ರೆಯಲ್ಲಿ ಕೆಲಸ ಮಾಡಿ ವೈದ್ಯಾಭಿವೃದ್ಧಿಗೆ ಸಾಕಷ್ಟು ಸೇವೆ ಸಲ್ಲಿಸಿದನು.

ಡಾಮನಿಕ್ ಕೊರ್‍ರಿಗನ್

ಗ್ರೇವ್ಸ್ ಮತ್ತು ಸ್ಟೋಕ್ಸ್‌ರವರ ಸ್ನೇಹಿತನೂ ಸಹೋದ್ಯೋಗಿಯೂ ಆಗಿದ್ದ ಡಾಮನಿಕ್ ಜಾನ್ ಕೊರ್‍ರಿಗನ್ (೧೮೦೨-೮೦) ಅವರಷ್ಟೇ ಗೌರವವನ್ನು ಸಂಪಾದಿಸಿದ್ದನು. ಎಡಿನ್ಬರೊ ವೈದ್ಯ ಪದವೀಧರನಾದನಂತರ ಡಬ್ಲಿನ್ನಿಗೆ ಬಂದು ಮೀತ್ ಆಸ್ಪತ್ರೆಯ ರೋಗಶಾಸ್ತ್ರೀಯ ಅಂಗರಚನೆಯ ವಿಭಾಗವನ್ನು ಸೇರಿಕೊಂಡನು. ಹಾಗೂ ಜೆರ್ವಿಸ್ ರಸ್ತೆ ಆಸ್ಪತ್ರೆಯ ವೈದ್ಯನಾಗೂ ಸೇರಿದನು. ಇಲ್ಲಿನ ಅನುಭವದಿಂದ ಹೃದಯ ರೋಗವನ್ನು ಕುರಿತು ಅನೇಕ ಲೇಖನಗಳನ್ನು ಬರೆದಿದ್ದನು. ಕೊರ್‍ರಿಗನ್ ನಾಡಿ ಎಂಬ ತನ್ನ ಹೆಸರಿನ ನಾಡಿ ಭೇದವನ್ನು ವಿವರಿಸಿದನು. ಸ್ಟೋಕ್ಸ್ ಮಾಡಿದ್ದ ತಪ್ಪನ್ನು ತಿದ್ದಿ ವಿಷಮಶೀತ ಮತ್ತು ಸೊಕ್ಕಿನ ಜ್ವರಗಳು ಬೇರೆ ಬೇರೆ ರೋಗಗಳೆಂದು ೧೮೫೩ರಲ್ಲಿ ತನ್ನ ಉಪನ್ಯಾಸ ಮಾಲೆಯಲ್ಲಿ ತಿಳಿಸಿದ್ದನು. ಐರ್ಲೆಂಡಿನ ವೈದ್ಯಾಭಿವೃದ್ಧಿ

ಕೊರ್ರಿಗನ್ ಕಾಲ ಮುಗಿಯುವ ವರೆವಿಗೂ ಮೇಲ್ಮಟ್ಟದಲ್ಲೇ ಇತ್ತು. ಹೀಗೆ ಐರ್ಲೆಂಡಿನ ವೈದ್ಯರು ವೈದ್ಯಶಾಸ್ತ್ರದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದರು.

ಬ್ರಿಟನ್ನಿನ ವೈದ್ಯಶಾಸ್ತ್ರ ಹಾಗೂ ವಿಜ್ಞಾನಗಳ ಅಭಿವೃದ್ಧಿ


ಲಂಡನ್ನಿನ ಗೈ ಆಸ್ಪತ್ರೆಯ ಪ್ರಮುಖ ವೈದ್ಯರು

ಬಂಡವಾಳ ಮಾರುಕಟ್ಟೆಯಲ್ಲೂ, ಮುದ್ರಣ ಕೆಲಸದಲ್ಲೂ ದೆಸೆ ತಗುಲಿ ಹಣವಂತನಾಗಿದ್ದ, ಲಂಡನ್ ಪಟ್ಟಣದ ಪ್ರಮುಖ ನಿವಾಸಿಯಾಗಿದ್ದ, ಥಾಮಸ್ ಗೈ ತನ್ನ ಹೆಸರಿನಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಲು ಹಣ ಒದಗಿಸಿದನು. ಅವನ ಜೀವಮಾನದ ಕೊನೆಯ ವರ್ಷದಲ್ಲಿ ಆಸ್ಪತ್ರೆ ಕಟ್ಟಡ ಮುಗಿದು, ೧೭೨೫ನೇ ಜನವರಿ ೬ರಲ್ಲಿ, ಅವನು ಸತ್ತ ೧೦ ದಿವಸಗಳ ಅನಂತರ ತೆರೆಯಲಾಯಿತು. ಪ್ರಾರಂಭದಿಂದಲೂ, ಅನೇಕ ವೈದ್ಯರೂ, ಶಸ್ತ್ರವೈದ್ಯರೂ ಸಾಲು ಸಾಲಾಗಿ ಈ ಆಸ್ಪತ್ರೆಯ ಅಗ್ರಗಣ್ಯರಾಗಿದ್ದರು. ೧೯ನೇ ಶತಮಾನದ ಮೊದಲ ಭಾಗದಲ್ಲಿ ಗಮನಾರ್ಹವಾಗಿ ನಾಲ್ವರು ವೈದ್ಯ ಪಂಡಿತರಿದ್ದರು. ಅವರು ಯಾರೆಂದರೆ, ಬ್ರೈಟ್, ಅಡಿಸನ್, ಹಾಡ್ಜ್ಕಿನ್ ಮತ್ತು ಕೂಪರ್. ಈ ನಾಲ್ವರು ಗೈ ಆಸ್ಪತ್ರೆಯನ್ನು ಗ್ರೇವ್ಸ್ ಮತ್ತು ಸ್ಟೋಕ್ಸ್‌ರವರಿಂದ ಪ್ರಸಿದ್ಧಿಗೆ ಬಂದಿದ್ದ ಮೀತ್ ಆಸ್ಪತ್ರೆಯ ಸರಿಸಮಕ್ಕೆ ತಂದರು. ಮೀತ್ ಆಸ್ಪತ್ರೆಯ ವೈದ್ಯರ ಹಾಗೆ ಇವರೂ ಪರಿಶೋಧನೆಗಳಲ್ಲೂ, ಓದು ಕಲಿಸುವುದರಲ್ಲೂ ಉತ್ಕೃಷ್ಟರಾಗಿದ್ದರು.

ರಿಚರ್ಡ್ ಬ್ರೈಟ್

ರಿಚರ್ಡ್ ಬ್ರೈಟ್ (೧೭೮೯–೧೮೫೮) ಬ್ರಿಸ್ಟಲ್ಲಿನಲ್ಲಿ ಜನಿಸಿ ಎಡಿನ್ಬರೊವಿನಲ್ಲಿ ಎಲ್ಲರಂತೆ ವಿದ್ಯಾಭ್ಯಾಸ ಮಾಡಿದನು. ಇವನ ಹೊರ ದೇಶಗಳ ಸಂಚಾರಕ್ಕೂ ಅಲ್ಲಿಯ ವಿದ್ಯಾಭ್ಯಾಸಕ್ಕೂ, ಹಣವಂತನಾಗಿದ್ದ ಇವನ ತಂದೆ ಸಾಕಷ್ಟು ಹಣ ಒದಗಿಸಿ ಉತ್ತೇಜನ ಕೊಟ್ಟಿದ್ದನು. ಕೆಲವು ಕಾಲ ಐಸ್ಲೆಂಡಿನಲ್ಲಿ ಪ್ರಾಣಿ ಮತ್ತು ಸಸ್ಯಗಳನ್ನು ಪರಿಶೀಲಿಸಿಕೊಂಡಿದ್ದು ಗೈ ಆಸ್ಪತ್ರೆ ಸೇರಲು ಲಂಡನ್ನಿಗೆ ಹಿಂತಿರುಗಿದನು. ೧೮೧೧ರಲ್ಲಿ ಪುನಃ ಎಡಿನ್ಬರೋವಿಗೆ ಹೋಗಿ ೧೮೧೩ರಲ್ಲಿ ವೈದ್ಯ ಪದವಿ ಪಡೆದು ಯೂರೋಪಿನಲ್ಲಿ ವೈದ್ಯ ವಿದ್ಯಾಭ್ಯಾಸವನ್ನು ಮುಂದುವರಿಸಲು ಹೋದನು. ಹಾಲೆಂಡ್, ಫ್ರಾನ್ಸ್, ಜರ್ಮನಿ, ಹಂಗೇರಿಗಳಲ್ಲಿ ಮಾಡಿದ ಪ್ರವಾಸಗಳನ್ನು ಕುರಿತು ಬರೆದಿದ್ದ ಲೇಖನ ಎಲ್ಲರ ಗಮನವನ್ನು ಸೆಳೆಯಿತು. ಇದರಲ್ಲಿ ಹಂಗೇರಿಯ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳ ವರ್ಣನೆಗಳಿದ್ದವು. ಚಿತ್ರಗಾರನಾಗಿ, ಅನೇಕ ವರ್ಣಚಿತ್ರಗಳನ್ನು ಈ ಲೇಖನದಲ್ಲಿ ಸೇರಿಸಿದ್ದನು. ಯೂರೋಪಿನ ಪ್ರವಾಸ ಮುಗಿದ ಅನಂತರ ಗೈ ಆಸ್ಪತ್ರೆಯಲ್ಲಿ ಸಹಾಯಕ ವೈದ್ಯನಾಗಿ ನೇಮಕವಾದನು. ಅಲ್ಲಿ ರೋಗಿಗಳನ್ನು ಪರೀಕ್ಷಿಸಿ ಕಲಿಯುತ್ತ, ಶವಪರೀಕ್ಷೆ ನಡೆಸಿ ರೋಗದ ಕಾರಣಗಳನ್ನು ತಿಳಿಯಲೆತ್ನಿಸಿದನು. ಇವನ ಬುದ್ಧಿಶಕ್ತಿಯನ್ನೂ, ತಾಳ್ಮೆಯನ್ನೂ ಮೆಚ್ಚಿ ಅನೇಕರು ಇವನಿಂದ ಕಲಿಯಲು

ಬರುತ್ತಿದ್ದರು. ಇವನ ರೋಗಿಗಳ ರೋಗ ಸ್ಥಿತಿಯ ದಾಖಲೆಯಲ್ಲಿ ಶೋಬೆ, ಮೂತ್ರ ಪಿಂಡುರಿತ, ಪ್ರೊಟೀನಿದ್ದ ಮೂತ್ರ ಇವುಗಳ ಪರಸ್ಪರ ಸಂಬಂಧವನ್ನು ಚರ್ಚಿಸಿ ತನ್ನ ಹೆಸರನ್ನಿಟ್ಟಿರುವ ಬ್ರೈಟ್ ರೋಗವನ್ನು ವಿವರಿಸಿದ್ದನು. ಇದರಲ್ಲಿ ತಾನೇ ಚಿತ್ರಿಸಿದ್ದ ಚಿತ್ರಗಳೂ ಇದ್ದವು. ಆ ರೋಗದಲ್ಲಿ ಬರುವಂತಹ ಹೃದಯದ ದಡುತನವನ್ನೂ, ರಕ್ತದಲ್ಲಿ ಯೂರಿಯ ಮಿತಿಮೀರುವುದನ್ನೂ ತಿಳಿಸಿದ್ದನು. ಈ ರೋಗಗಳ ವಿವರಣೆಯ ಜೊತೆಗೆ ಮೇದೋಜೀರಕದ ವ್ಯತ್ಯಾಸದಿಂದೇಳುವ ಸಿಹಿಮೂತ್ರ ಅಲ್ಲದೆ, ಈಲಿಯ ಕೂರಾದ ಹಳದಿ ಕ್ಷೀಣತೆ, ಒಂದೇ ಮಗ್ಗುಲಿನ ಸೆಳವುಗಳ ವಿವರಣೆಗಳೂ ಇದ್ದವು. ಇದು ಅವನ ಮೊದಲನೆಯ ದಾಖಲೆಯಾಗಿತ್ತು. ಎರಡನೆ ದಾಖಲೆಯಲ್ಲಿ ಕಿವಿ ಸೋರುವಿಕೆ, ಧ್ವನಿನಾಳ ಕ್ಷಯ, ಮಿದುಳಿನ ರಕ್ತಸ್ರಾವ, ಲಕ್ವ ಮತ್ತು ಸೆಟೆಬೇನೆ ರೋಗಗಳ ವರ್ಣನೆ ಹಾಗೂ ವಿಷಮಶೀತ, ಮೂತ್ರಪಿಂಡುರಿತ, ಈಲಿ ಹಳದಿ ಕ್ಷೀಣತೆ, ಮಿದುಳಿನ ರೋಗ ಇವುಗಳ ಅಂಗಾಯುಗಳನ್ನು ಚಿತ್ರಿಸಿ ವಿವರಿಸಿದ್ದನು. ಈ ಪರಿಶೋಧನೆಗಳ ಫಲವಾಗಿ ಇವನ ಕೀರ್ತಿ ಹೆಚ್ಚಿ, ಇವನನ್ನು ಕೊಂಡಾಡದವರೇ ಇರಲಿಲ್ಲ. ಅದರಲ್ಲೂ ಹೊರ ದೇಶಗಳಲ್ಲಿ ಈಗಿನ ವೈದ್ಯರಿಗಿಂತಲೂ ಹೆಚ್ಚು ಕೀರ್ತಿ ಗಳಿಸಿದ್ದನು. ಇವನು ಸತ್ತಾಗ ಬ್ರೈಟ್ ರೋಗದಿಂದಲೇ ಸತ್ತನೆಂದು ಅನೇಕರು ಭಾವಿಸಿದ್ದರು. ನಿಜವಾಗಿಯೂ ಮಹಾಧಮನಿಯ ಇರುಕಣೆ ರೋಗದಿಂದ ಸತ್ತನೆಂದು ಶವಪರೀಕ್ಷೆ ನಡೆಸಿದ್ದರಿಂದ ಗೊತ್ತಾಯಿತು.



ರಿಚರ್ಡ್ ಬ್ರೈಟ್ ಮತ್ತು ಅವನು ಪರಿಶೀಲಿಸಿದ ಮೂತ್ರಪಿಂಡುರಿತದ ಚಿತ್ರವಿವರಣೆ.

ಥಾಮಸ್ ಅಡಿಸನ್

ಬ್ರೈಟ್ ಮಹಾವ್ಯಕ್ತಿಯ ಸಹೋದ್ಯೋಗಿ ಥಾಮಸ್ ಅಡಿಸನ್‌ಗೆ (೧೭೯೩–೧೮೬೦) ಲ್ಯಾಟಿನ್ ಭಾಷೆಯಲ್ಲಿ ಸಲಿಗೆ ಇದ್ದುದರಿಂದ, ಎಡಿನ್ಬರೊವಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಲ್ಯಾಟಿನ್ನಿನಲ್ಲೇ ಟಿಪ್ಪಣಿ ಬರೆದುಕೊಳ್ಳುತ್ತಿದ್ದನೆಂದು

ಹೇಳಲಾಗಿದೆ. ಬ್ರೈಟ್ ಹಾಗೆ ಹಣವಂತನಲ್ಲದ್ದರಿಂದ ಹೊರ ದೇಶದ ಪ್ರಯಾಣ ವಿರಲಿಲ್ಲ. ಬ್ರೈಟ್ ಎಷ್ಟು ಆನಂದಭರಿತನಾಗಿದ್ದನೋ ಅಡಿಸನ್ ಅಷ್ಟೇ ಗಂಟು ಮುಖದವನಾಗಿದ್ದನು. ಅಡಿಸನ್ ರೋಗವೆಂಬ ಮೂತ್ರಪಿಂಡದ ಮೇಲಿನ ಗ್ರಂಥಿಯ ಅಥವಾ ಅಡ್ರೀನಲ್ ಗ್ರಂಥಿ ರೋಗದ ವಿವರಣೆ ಇವನ ಪ್ರಖ್ಯಾತಿಗೆ ಕಾರಣವಾಗಿದೆ. ಈ ರೋಗದ ವಿವರಣೆ ಮೊಟ್ಟಮೊದಲಿಗೆ ೧೮೪೯ನೇ ಮಾರ್ಚಿ ೧೫ರಲ್ಲಿ ವೈದ್ಯರ 'ಗೆಜೆಟ್ಟನಲ್ಲಿ' ಪ್ರಕಟವಾಗಿತ್ತು. ಅದೇ ಗೆಜೆಟ್ಟನಲ್ಲಿ ಅಡಿಸನ್ನನ ರಕ್ತಕೊರೆ ಅಥವಾ ಕೇಡಿನ ರಕ್ತಕೊರೆ ಅಥವಾ ತಾನಾಗುಟ್ಟಿದ ರಕ್ತಕೊರೆ ಎಂಬ ರೋಗವನ್ನೂ ವಿವರಿಸಿದನು. ಸಿಹಿಮೂತ್ರದ ಹಳಗಂತಿ ರೋಗದ ವಿವರಣೆ ಬೇರೆ ಲೇಖನದಲ್ಲಿ ಬರೆದಿದ್ದ. ಇವನ ಕೀರ್ತಿಗೆ ಈ ಬರವಣಿಗೆಗಳೇ ಅಲ್ಲದೆ ವೈದ್ಯಶಾಸ್ತ್ರದಲ್ಲಿ ಆತನಿಗಿದ್ದ ಬುದ್ಧಿಶಕ್ತಿ, ಉಪನ್ಯಾಸ ಮಾಡಲು ಇದ್ದ ಚತುರತೆಗಳೂ ಕಾರಣವಾಗಿದ್ದವು. ರೋಗ ನಿದಾನ ಮಾಡುವುದರಲ್ಲಿ ನಿಸ್ಸೀಮನಾಗಿದ್ದನು. ಇವನ ಮಾತುಗಳು ಸೂಕ್ತವಾಗಿದ್ದರೂ ಕಟುವಾಗಿದ್ದವು. ಈ ಮಾತುಗಳನ್ನು ಕೇಳಿ ವಿದ್ಯಾರ್ಥಿಗಳೂ, ಸಹೋದ್ಯೋಗಿಗಳೂ ಬೆರಗಾಗುತ್ತಿದ್ದರು. 'ವಿದ್ಯಾರ್ಥಿಗಳು ಅವನನ್ನು ಪೂಜಿಸುತ್ತಿದ್ದರೂ, ಅವನನ್ನು ಪ್ರೀತಿಸುವುದಕ್ಕಿಂತಲೂ ಅವನಿಗೆ ಹೆದರುತ್ತಿದ್ದರೆಂದು' ಮೇಜರ್ ಬರೆದಿರುವನು. ಇವನ ವೈಯಕ್ತಿಕ ಸಾಮರ್ಥ್ಯ ಇವನ ಸ್ಥಾನಕ್ಕೆ ಬೆಂಬಲ ಕೊಟ್ಟಿತು. ಬ್ರೈಟ್ ಮತ್ತು ಆಸ್ಟ್ಲಿ ಕೂಪರ್‌ಗಳಿಗಿಂತಲೂ ಮೇಲಾಗಿದ್ದನೆಂದು ಹೇಳಬಹುದು. ಇವನ ೩೦–೪೦ ವರ್ಷಗಳ ಅವಧಿಯಲ್ಲಿ ಅನೇಕ ಮಂದಿ ಗೈ ಆಸ್ಪತ್ರೆಯ ವೈದ್ಯರು ಇವನ ಶಿಷ್ಯರಾಗಿದ್ದು ಇವನನ್ನು ಪೂಜಿಸುತ್ತಿದ್ದರು.

ಥಾಮಸ್ ಹಾಡ್ಜ್‌ಕಿನ್

ಗೈ ಆಸ್ಪತ್ರೆಯ ಮತ್ತೊಬ್ಬ ಶ್ರೇಷ್ಠ ವೈದ್ಯನಾಗಿದ್ದ ಥಾಮಸ್ ಹಾಡ್ಜ್‌ಕಿನ್ (೧೭೯೮–೧೮೬೬) ಬ್ರೈಟ್ ಮತ್ತು ಅಡಿಸನ್‌ರವರ ಹಾಗೆ ಎಡಿನ್ಬರೊವಿನಲ್ಲಿ ವ್ಯಾಸಂಗ ಮಾಡಿ, ೧೮೨೩ರಲ್ಲಿ ಪದವಿ ಪಡೆದು, ಲಂಡನ್ನಿಗೆ ಬಂದು ಗೈ ಆಸ್ಪತ್ರೆಯ ವಸ್ತು ಸಂಗ್ರಹಾಲಯದ ಆಡಳಿತಗಾರನಾಗೂ, ರೋಗದಂಗಗಳ ಪರೀಕ್ಷಾಧ್ಯಾಪಕನಾಗೂ ಸೇರಿ, ಮಾದರಿ ವಸ್ತುಗಳನ್ನೂ ಅವುಗಳ ವಿವರಣೆ ಪಟ್ಟಿಯನ್ನೂ ಹದಪಡಿಸಿದನು. ಈ ಅನುಭವಗಳಿಂದ ರಸಿಕೆ ಮತ್ತು ಲೋಳೆಪೊರೆಗಳ ರೋಗಗಳ ಅಂಗರಚನೆಯ ಮೇಲೆ ಉಪನ್ಯಾಸ ಮಾಡಲು ಅವನಿಗೆ ಸಹಾಯಕರವಾಗಿತ್ತು. ಹೀಗೆ ೧೦ ವರ್ಷ ಕೆಲಸ ಮಾಡಿಯೂ ವೈದ್ಯ ಸಹಾಯಕ ಪ್ರಾಧ್ಯಾಪಕ ಸ್ಥಾನ ಸಿಕ್ಕದೆ ಕೆಲಸಕ್ಕೆ ರಾಜಿನಾಮೆ ಕೊಟ್ಟು, ದಾನ ಧರ್ಮದ ಕೆಲಸಗಳಲ್ಲಿ ತೊಡಗಿದ್ದು, ಹೊರ ದೇಶಗಳಲ್ಲಿ ಪ್ರಯಾಣ ಮಾಡುತ್ತಿದ್ದಾಗ ಜಾಪ್ಪ ಎಂಬಲ್ಲಿ ಕಾಲವಾದನು. ಹಾಡ್ಜ್‌ಕಿನ್ನನ ಬರಹಗಳಲ್ಲಿ ಅಂಗರಚನಾ ವಿಭಾಗಕ್ಕೆ ಸಾಕಷ್ಟು ಸ್ಥಳ ದೊರೆತಿತ್ತು. ಇವನ ಉಪನ್ಯಾಸಗಳಲ್ಲಿ ಕರುಳುವಾಳದ ಕೂರಾದ ಉರಿತ ಸ್ವಾರಸ್ಯಕರವಾಗಿತ್ತು. ೧೮೩೨ರಲ್ಲಿ ಇವನ

ಹೆಸರಿನ ರೋಗದ ೭ ರೋಗಿಗಳ ಪೈಕಿ, ಮೂವರು ಮಾತ್ರ ನಿಜವಾದ ಹಾಡ್ಜ್‌ಕಿನ್ ರೋಗಿಗಳಾಗಿದ್ದರೆಂದು ಗೊತ್ತಾಗಿದೆ.

ಆಸ್ಟ್ಲಿ ಕೂಪರ್

ಆಸ್ಟ್ಲಿ ಕೂಪರ್ ಹೆಸರನ್ನು ಕಾಣಿಸದೆ ಗೈ ಆಸ್ಪತ್ರೆಯ ಗೌರವ ಸ್ಥಾನವನ್ನು ಕೊಂಡಾಡಿದರೆ ತಪ್ಪಾದೀತು. ಬ್ರೈಟ್ ಸೇರುವುದಕ್ಕೆ ಮೊದಲೇ ಕೂಪರ್ ಗೈ ಆಸ್ಪತ್ರೆಯನ್ನು ಸೇರಿದ್ದನು. ಇವನು ಶಸ್ತ್ರಕ್ರಿಯೆ ನಡೆಸುವುದರಲ್ಲಿ ನಿಸ್ಸೀಮನಾಗಿದ್ದನು. ಎಡಿನ್ಬರೊವಿನಲ್ಲಿ ವ್ಯಾಸಂಗ ಮುಗಿಸಿಕೊಂಡು ಲಂಡನ್ನಿಗೆ ಬಂದು ಜಾನ್ ಹಂಟರನ ಕೈಕೆಳಗೆ ಕೆಲಸ ಕಲಿತು, ೧೮೦೦ರಲ್ಲಿ ಗೈ ಆಸ್ಪತ್ರೆ ಶಸ್ತ್ರವೈದ್ಯನಾಗಿ ನೇಮಕವಾದನು. ಇವನು ವೈದ್ಯಶಾಸ್ತ್ರಕ್ಕೆ ಸಲ್ಲಿಸಿದ ಕಾಣಿಕೆಯನ್ನು "ಹಂಟರನ ಬೆಂಬಲಿಗರು" ಎಂಬ ಮಾಲೆಯಲ್ಲಿ ಮೊದಲೇ ತಿಳಿಸಿದೆ.

ವಿಲಿಯಂ ಗಲ್

ಅಡಿಸನ್, ಬ್ರೈಟ್, ಹಾಡ್ಜ್‌ಕಿನ್ ಮತ್ತು ಕೂಪರ್ ಇವರುಗಳಿಗೆ ಸಮಾನವಾಗಿದ್ದ ವಿಲಿಯಂ ಗಲ್ (೧೮೭೬–೧೮೯೦) ಇವರ ತರುವಾಯ ಗೈ ಆಸ್ಪತ್ರೆಯ ಅಧಿಕಾರದಲ್ಲಿದ್ದು ೧೮೫೮ರಲ್ಲಿ ವೈದ್ಯನಾಗಿ ನೇಮಕವಾದನು. ಇವನು ತನ್ನ ೨೧ನೇ ವಯಸ್ಸಿನಲ್ಲೇ ಲಂಡನ್ನಿಗೆ ಬಂದು ಲಂಡನ್ ವಿಶ್ವವಿದ್ಯಾಲಯದ ಎಂ.ಡಿ.ಪದವಿಯನ್ನು ೧೮೪೬ರಲ್ಲಿ ಪಡೆದನು. ನಂತರ ೧೮೫೮ರಲ್ಲಿ ರಾಜಸಂಘದ ಸದಸ್ಯತನವನ್ನೂ ೧೮೮೦ ಮತ್ತು ೧೮೮೪ರಲ್ಲಿ ಕೇಂಬ್ರಿಡ್ಜ್ ಮತ್ತು ಎಡಿನ್ಬರೊಗಳಿಂದ ಎಲ್.ಎಲ್.ಡಿ. ಪದವಿಗಳನ್ನೂ ಪಡೆದನು. ಆಗಿನ ವೇಲ್ಸ್ ರಾಜಕುಮಾರನನ್ನು ವಿಷಮಶೀತ ಜ್ವರದಿಂದ ಕಾಪಾಡಿ ಬ್ಯಾರೊನೆಟ್ ಪದವಿಯನ್ನೂ ಸ್ವೀಕರಿಸಿದನು. ಇವನ ಅನೇಕ ಲೇಖನಗಳಲ್ಲಿ ೧೮೫೬ರಲ್ಲಿ ಬರೆದ ಬೆನ್ನುಹುರಿತವೆ ರೋಗದ ರೋಗ ನಿದಾನ, ೧೮೬೬ರಲ್ಲಿ ಬರೆದ ಬಿಟ್ಟುಬಿಟ್ಟು ಬರುವ ರಕ್ತವರ್ಣಜನಕ ಮೂತ್ರ ರೋಗದ ವಿವರಣೆ ಅತಿ ಮುಖ್ಯವಾಗಿದ್ದವು. ಸಟ್ಟನ್ ಸಂಗಡ ಸೇರಿ ಬೇರೂರಿದ ಮೂತ್ರಪಿಂಡುರಿತದ ಧಮನಿ ಲೋಮನಾಳಗಳ ತಂತುಗೂಡಿಕೆಯನ್ನು ವಿವರಿಸಿದ್ದನು. ಹಾಗೂ ೧೮೭೩ರಲ್ಲಿ ಬರೆದ ಲೋಳುಬ್ಬರ ಅಗ್ಗೆ ಅತ್ಯಂತ ಉತ್ಕೃಷ್ಟವಾದ ಲೇಖನವಾಗಿತ್ತು. ಹೀಗೆ ಪ್ರಖ್ಯಾತಿಪಡೆದಿದ್ದ ಗಲ್‌ಗೆ ಹಣದ ಕೊರತೆ ಇರಲಿಲ್ಲ. ಇವನು ಸತ್ತಾಗ ૩,૩೪,೦೦೦ ಪೌಂಡುಗಳನ್ನು ಬಿಟ್ಟುಹೋಗಿದ್ದನೆಂದು ಗೊತ್ತಾಗಿದೆ.

ಬ್ರಿಟನ್ನಿನ ಇತರ ಶಸ್ತ್ರವೈದ್ಯರು

೧೮೬೫ನೇ ಮಾರ್ಚಿಯಲ್ಲಿ ನಂಜುರೋಧಕದ ಉಪಯೋಗವನ್ನು ಲಿಸ್ಟರ್ ಬಹಿರಂಗಪಡಿಸುವ ವರೆವಿಗೂ ಶಸ್ತ್ರಕ್ರಿಯೆ ಆಗಿರುವ ರೋಗಿಗಳ ಗಾಯಗಳು ಕೀತು ನಾಯಲು ಬಹಳ ದಿನಗಳಾಗುತ್ತಿದ್ದವು. ಅನೇಕರಿಗೆ ಗಾಯವೇ ವಾಸಿಯಾಗದೆ


ಸಾಯುತ್ತಿದ್ದರು. ಸಂಯುಕ್ತ ಮೂಳೆಮುರಿತಗಳಿಗೆ ಅಂಗಛೇದನೆಯೇ ಸಾಧಾರಣವಾದ ಶಸ್ತ್ರಕ್ರಿಯೆ ಆಗಿತ್ತು. ಇದರಿಂದ ಕೊನೆಯ ಪಕ್ಷ ಶೇ. ೨೫ರಷ್ಟು ಮರಣ ಸಂಭವಿಸುತ್ತಿತ್ತು. ಶಸ್ತ್ರಕ್ರಿಯೆ ನಡೆದ ವೇಳೆಯಲ್ಲಿ, ಈಗಿನ ಹಾಗೆ ಜೀವಿಮಡಿಯಾದ ಮೇಲಂಗಿ, ಟೋಪಿ, ಬಾಯಿ ಮುಸುಕುಗಳಿರಲಿಲ್ಲ. ಶಸ್ತ್ರವೈದ್ಯ ತನ್ನ ದಿನವಹಿ ಉಡುಪನ್ನೇ ಧರಿಸಿ ಶಸ್ತ್ರಕ್ರಿಯೆ ಮಾಡುತ್ತಿದ್ದನು. ಅವನ ಉಡುಪು ರಕ್ತಕರೆಯಾಗಿರುತ್ತಿತ್ತು. ಹೊಲಿಗೆ ಸೂಜಿದಾರಗಳು ಅವನ ಅಂಗಿಯಿಂದ ನೇತಾಡುತ್ತಿದ್ದವು. ರೋಗಿಯ ಹಾಸಿಗೆಯ ಬಳಿ ಕೀವುತುಂಬಿದ ಬಟ್ಟಲುಗಳಿದ್ದವು. ಶಸ್ತ್ರಕ್ರಿಯೆ ಮಾಡಿಸಿಕೊಂಡವರ ರೋಗಿಕೋಣೆ ಕೀವಿನ ದುರ್ವಾಸನೆಯಿಂದ ಕೂಡಿರುತ್ತಿತ್ತು. ಮೇಲಾಗಿ ಆಗ ಅರಿವಳಿಕೆಯ ಉಪಯೋಗ ಇನ್ನೂ ರೂಢಿಯಲ್ಲಿಲ್ಲದ್ದರಿಂದ ಶಸ್ತ್ರಕ್ರಿಯೆ ನಡೆಯುತ್ತಿದ್ದಾಗ ರೋಗಿಗಾಗುತ್ತಿದ್ದ ಪ್ರಾಣಹಿಂಸೆಯ ಜೊತೆಗೆ, ಕೊಳೆತು, ಕೀವು ಸುರಿಯುತ್ತಿದ್ದ ಗಾಯಗಳ ನೋವನ್ನೂ ರೋಗಿ ಸಹಿಸಬೇಕಿತ್ತು. ಈ ಸನ್ನಿವೇಶದಲ್ಲಿ ಶಸ್ತ್ರವೈದ್ಯರಿಗಿದ್ದ ಜವಾಬ್ದಾರಿ ಹಾಗೂ ಕಷ್ಟನಿಷ್ಠೂರಗಳಿಗೆ ಏನೂ ಕಡಿಮೆಯಿರಲಿಲ್ಲ. ಇಷ್ಟಾದರೂ, ವೈದ್ಯಶಾಸ್ತ್ರವನ್ನು ಮುಂದುವರಿಸುತ್ತಿದ್ದ ಮಹನೀಯರು ಸ್ತೋತ್ರಾರ್ಹರು. ಲಿಸ್ಟನ್, ಸೈಮ್, ಬ್ರಾಡಿ, ಫರ್ಗ್ಯುಸನ್, ಪೇಜೆಟ್ ಮುಂತಾದವರು ಈ ವರ್ಗಕ್ಕೆ ಸೇರಿದವರು.

ರಾಬರ್ಟ್ ಲಿಸ್ಟನ್

ರಾಬರ್ಟ್ ಲಿಸ್ಟನ್ (೧೭೯೪–೧೮೪೭) ಬ್ರಿಟನ್ನಿನಲ್ಲಿ ಅರಿವಳಿಕೆ ಉಪಯೋಗಿಸಿ ಶಸ್ತ್ರಕ್ರಿಯೆ ನಡೆಸಿದ ಮೊಟ್ಟಮೊದಲನೆಯ ಶಸ್ತ್ರವೈದ್ಯ. ಈ ಬಗೆಯ ಶಸ್ತ್ರಕ್ರಿಯೆ ಲಂಡನ್ನಿನ ವಿಶ್ವವಿದ್ಯಾಲಯದ ವೈದ್ಯಶಾಲೆಯಲ್ಲಿ ೧೮೪೬ನೇ ಡಿಸೆಂಬರ್ ೨೧ರಲ್ಲಿ ನಡೆಯಿತು. ಅರಿವಳಿಕೆಯನ್ನು ನಡೆಸಿದವನು ಪೀಟ್ ಸ್ಕ್ವೈರ್. ರೋಗಿ ೩೬ ವರ್ಷ ವಯಸ್ಸಿನ ಫ್ರೆಡರಿಕ್ ಚರ್ಚಿಲ್ ಎಂಬ ಒಬ್ಬ ಬಟ್ಲರ್. ಆಗ ಜೊಸೆಫ್ ಲಿಸ್ಟರ್ ವಿದ್ಯಾರ್ಥಿಯಾಗಿದ್ದು ಈ ಶಸ್ತ್ರಕ್ರಿಯೆಯನ್ನು ನೋಡಿದನು. ಶಸ್ತ್ರಕ್ರಿಯೆ ನಡುತೊಡೆಯ ಛೇದನೆಯಾಗಿತ್ತು.

ತನ್ನ ಎಳೆತನದಲ್ಲಿ ಲಿಸ್ಟನ್ ಎಡಿನ್ಬರೊನಲ್ಲಿ ಅಂಗರಚನಾಕಾರನಾಗಿದ್ದ ಜಾನ್ ಬಾರ್‌ಕ್ಲೆಯ ಕೈಕೆಳಗೆ ಕೆಲಸ ಕಲಿತನು. ೧೮೧೮ರಲ್ಲಿ ಬಾರ್‌ಕ್ಲೆಯ ಜೊತೆ ಜಗಳವಾಡಿ ತಾನೇ ಸ್ವತಃ ಅಂಗರಚನೆಶಾಸ್ತ್ರವನ್ನು ಕಲಿಯಲು ಪ್ರಾರಂಭಿಸಿದನು. ಆಗ ಇವನ ಕಿರಿಯವನಾದ ಸೈಮ್ ಇವನ ಜೊತೆಗೂಡಿ ಇಬ್ಬರೂ ಶಸ್ತ್ರಕ್ರಿಯೆ ನಡೆಸುತ್ತಿದ್ದರು. ಆದರೆ ಅತಿ ಸ್ನೇಹ ಗತಿ ಕೆಡಿಸಿತು ಎಂಬಂತೆ, ಇವರಿಬ್ಬರೂ ಜಗಳವಾಡಿ ೧೮೩೩ರಲ್ಲಿ ಬೇರೆಬೇರೆಯಾಗಿ, ಸೈಮ್ ರೋಗಿಹಾಸೆ ಪಕ್ಕದ ಶಸ್ತ್ರವೈದ್ಯದ ಪ್ರಾಧ್ಯಾಪಕನಾಗಿ ನೇಮಕವಾದನು. ಆದರೂ, ಲಿಸ್ಟನ್ ಅನೇಕ ಬಗೆಯ ಶಸ್ತ್ರಕ್ರಿಯೆಗಳನ್ನು ನಡೆಸಿ ಪ್ರಖ್ಯಾತಿ ಪಡೆದಿದ್ದನು. ಅಂಗಛೇದನೆ, ಮೂತ್ರಕಲ್ಲು ಕೊಯ್ತೆಗೆತ, ಗಡ್ಡೆಗಂಟುಗಳ ತೆಗೆತ

ಮುಂತಾದ ಶಸ್ತ್ರಕ್ರಿಯೆಗಳೆಲ್ಲಾ ಕೈಗೂಡಿದ್ದರಿಂದ ಅನೇಕ ರೋಗಿಗಳು ಚಿಕಿತ್ಸೆಗೆ ರಾಯಲ್ ಇನ್ಫರ್ಮರಿಗೆ ಹೋಗದೆ ಇವನ ಬಳಿಗೇ ಬರಲು ಪ್ರಾರಂಭವಾದಾಗ



೧೮೪೬. ವಿಶ್ವವಿದ್ಯಾಲಯ ಪ್ರೌಢ ವಿದ್ಯಾಶಾಲೆ ಆಸ್ಪತ್ರೆಯಲ್ಲಿ ರಾಬರ್ಟ್ ಲಿಸ್ಟನ್ ತೊಡೆಯ ಕೊಯ್ತಗೆತವನ್ನು ನೋಡಬಹುದು. ಲಿಸ್ಟನ್ ಎದುರು ನಿಂತಿರುವ ಪಾರ್ಶ್ವ ದೃಶ್ಯ ಜೋಸೆಫ್ ಲಿಸ್ಟರ್‌ನದು.

ಇವನನ್ನು ರಾಯಲ್ ಇನ್ಫರ್ಮರಿಗೆ ಸೇರಿಸಕೂಡದೆಂದು ಬಹಿಷ್ಕರಿಸಿದರು. ಇದರಿಂದ ಅಲ್ಲಿ ಮುಖ್ಯ ಶಸ್ತ್ರವೈದ್ಯನಾಗಲು ೫ ವರ್ಷಗಳೇ ಕಾಯಬೇಕಾಗಿತ್ತು. ೧೮೨೭ರಲ್ಲಿ ಕೊನೆಗೆ ರಾಯಲ್ ಇನ್ಫರ್ಮರಿಗೆ ಸೇರಿದಾಗ, ಸೈಮ್ ಶಸ್ತ್ರವೈದ್ಯದ ಪ್ರಾಧ್ಯಾಪಕನಾಗಿದ್ದನು. ಈ ಪರಿಸ್ಥಿತಿ ಸರಿಹೋಗದೆ, ಎಡಿನ್ಬರೊ ಬಿಡಬೇಕಾಗಿ ಬಂದಾಗ, ೧೮೩೪ರಲ್ಲಿ ಲಂಡನ್ನಿನ ವಿಶ್ವವಿದ್ಯಾಲಯದ ವೈದ್ಯಶಾಲೆಯಲ್ಲಿ ಆಕಸ್ಮಿಕವಾಗಿ ಕೆಲಸ ಸಿಕ್ಕಿತು. ಲಂಡನ್ನಿನಲ್ಲಿ ಇವನಿಗೆ ಸಾಕಷ್ಟು ಸ್ವಾಗತ ಸಿಕ್ಕಿ ತನ್ನ ಕುಶಲತೆಗಳನ್ನು ತೋರಲು ಅವಕಾಶ ದೊರಕಿತು. ಇವನು ೧೮೩೦ರಲ್ಲಿ 'ಶಸ್ತ್ರವೈದ್ಯದ ಮೂಲಪಾಠಗಳು' ಎಂಬ ಪುಸ್ತಕವನ್ನೂ, ೧೮೩೭ರಲ್ಲಿ 'ಪ್ರಾಯೋಗಿಕ ಮತ್ತು ಶಸ್ತ್ರಕ್ರಿಯೆಯ ಶಸ್ತ್ರವೈದ್ಯದ ಮೇಲೆ ಒಂದು ಪ್ರಕರಣ ಗ್ರಂಥ' ಎಂಬ ಪುಸ್ತಕವನ್ನೂ ಬರೆದು ಕೀರ್ತಿಗಳಿಸಿದನು. ಇವನ ಹೆಸರಿನ ಮೂಳೆ ಇಕ್ಕಳ ಈಗಲೂ ಉಪಯೋಗದಲ್ಲಿದೆ.

ಜೇಮ್ಸ್ ಸೈಮ್

ಲಿಸ್ಟನ್ನಿಗಿಂತಲೂ ಉತ್ತಮನಾಗಿದ್ದ ಜೇಮ್ಸ್ ಸೈಮ್ (೧೭೯೯–೧೮೭೦), ಲಿಸ್ಟನ್ ಸತ್ತನಂತರ ಲಂಡನ್ನಿನ ವಿಶ್ವವಿದ್ಯಾಲಯದ ವೈದ್ಯಶಾಲೆಯ ಶಸ್ತ್ರವೈದ್ಯದ ಪ್ರಾಧ್ಯಾಪಕನಾಗಿ, ಅಲ್ಲಿಯ ಸ್ಥಿತಿಗತಿಗಳು ಸರಿಹೋಗದೆ ೬ ತಿಂಗಳು ಕೆಲಸ ಮಾಡಿ ಎಡಿನ್ಬರೊವಿಗೆ ಹಿಂತಿರುಗಿ ಮೊದಲಿದ್ದ ಸ್ಥಾನವನ್ನೇ ಅಲಂಕರಿಸಿದನು. ಲಂಡನ್ನಲ್ಲಿದ್ದ

೬ತಿಂಗಳು ವಿನಹ ಅವನ ಉಳಿದ ಜೀವಮಾನವನ್ನೆಲ್ಲಾ ಎಡಿನ್ಬರೋವಿಗೇ ಅರ್ಪಿಸಿ ಆ ಪಟ್ಟಣಕ್ಕೆ ಕೀರ್ತಿ ತಂದಿದ್ದನು. ಅಲ್ಲಿ ಶಸ್ತ್ರವೈದ್ಯದ ಪ್ರಾಧ್ಯಾಪಕನಾಗಿ ಒಟ್ಟು ೩೭ ವರ್ಷಗಳು ಕೆಲಸ ಮಾಡಿದನು. ಲಿಸ್ಟನ್ನಿಗೂ ಸೈಮ್‌ಗೂ ಪೈಪೋಟಿ ಇಲ್ಲದಿದ್ದರೆ ಶಸ್ತ್ರವೈದ್ಯಕ್ಕೆ ಪ್ರಗತಿ ಬರುತ್ತಿರಲಿಲ್ಲ. ಸೈಮ್ ತನ್ನ ಎಳೆತನದಲ್ಲೇ ರೋಗವಿದ್ದ ಕೀಲುಗಳನ್ನು ಛೇದಿಸಿ ತೊಡೆ, ತೋಳುಗಳನ್ನು ಉಳಿಸಲು ಯತ್ನಿಸಿದ್ದನು. ಈ ಅನುಭವದಿಂದ 'ರೋಗದ ಕೀಲುಗಳ ಕೊಯ್ತ್ತೆಗೆತದ ಮೇಲಿನ ಪ್ರಕರಣದ ಗ್ರಂಥ'ವನ್ನು ಬರೆದಿದ್ದನು. ಎಲ್ಲರ ಮೆಚ್ಚಿಗೆಯನ್ನು ಪಡೆದ 'ಶಸ್ತ್ರವೈದ್ಯದ ತತ್ತ್ವಗಳು' ಎಂಬ ಪುಸ್ತಕವೂ ಆಗಲೇ ಹೊರಬಿದ್ದಿತು. ಇದರಲ್ಲಿ ಮುಂಡಿಯ ಮೇಲಿನ ಕಾಲಿನ ಛೇದನೆ ವಿಧಾನವನ್ನು ವಿವರಿಸಿದ್ದನು. ಇದು 'ಸೈಮ್‌ನ ಅಂಗಛೇದನೆ' ಎಂಬ ನಾಮಾಂಕಿತದಲ್ಲಿದೆ. ಅಲ್ಲಿಯವರೆವಿಗೆ ಸ್ಕಾಟ್ಲೆಂಡಿನಲ್ಲಿ ನಡೆಸದೇ ಇದ್ದ ತೊಡೆಯ ಸಂದಿನ ಛೇದನೆಯನ್ನು ಲಿಸ್ಟನ್ನಿನ ಸಹಾಯದಿಂದ ನಡೆಸಿದನು. ೧೮೨೯ನೇ ಮೇ ೮ರಲ್ಲಿ ತನಗೆ ಎಲ್ಲೂ ಕೆಲಸವಿಲ್ಲದ್ದರಿಂದ ತನ್ನದೇ ಒಂದು ಆಸ್ಪತ್ರೆಯನ್ನು ತೆರೆದು ಶಸ್ತ್ರಕ್ರಿಯೆ ಪ್ರಾರಂಭಿಸಿ, ಅಲ್ಲಿ ಮೊಟ್ಟಮೊದಲಿಗೆ ಮೊಲೆಯನ್ನು ಕೊಯ್ದು ತೆಗೆದನು. ಹೀಗೆ ವೈದ್ಯಶಾಸ್ತ್ರದ ಬೆಳವಣಿಗೆಗೆ ಸೈಮ್ ಮಾಡಿರುವ ಸೇವೆ ಅತಿಶಯವಾಗಿತ್ತು. ಇವನ ಹೆಸರು ಯೂರೋಪಿನಲ್ಲೆಲ್ಲಾ ಆಗ ಮನೆ ಮಾತಾಗಿತ್ತು. 'ದುರದೃಷ್ಟಕರವಾಗಿ ಅವನಿಗೆ ವಿವಾದಕ್ಕಿಳಿಯುವ ಪ್ರವೃತ್ತಿ ಇದ್ದರೂ ಶಸ್ತ್ರವೈದ್ಯದ ಮುಖ್ಯ ವಾಸ್ತುಶಿಲ್ಪಿಗಳಲ್ಲಿ ಒಬ್ಬನೆಂದು ಅವನನ್ನು ಭಾವಿಸಬಹುದು' ಎಂದು ವೈದ್ಯ ಚರಿತ್ರೆಗಾರ ಡಾಗ್ಲಾಸ್ ಗುತ್ರೀ ತಿಳಿಸಿದ್ದಾನೆ.



ಶಸ್ತ್ರವೈದ್ಯದ ಭಾಷಣ ಮಾಡುತ್ತಿರುವ
ಜೇಮ್ಸ್ ಸೈಮ್

ಬೆಂಜಮಿನ್ ಬ್ರೋಡಿ

ಎಡಿನ್ಬರೊನಲ್ಲಿ ಸೈಮ್ ಪ್ರಖ್ಯಾತಿಗೆ ಬರುತ್ತಿದ್ದಾಗ, ಲಂಡನ್ನಿನಲ್ಲಿ ಲಿಸ್ಟನ್ ಅಲ್ಲದೆ, ಬ್ರಾಡಿ, ಫರ್ಗುಸನ್ ಮತ್ತು ಪೇಜೆಟ್ ಎಂಬ ತ್ರಿಮೂರ್ತಿಗಳು ಶಸ್ತ್ರವೈದ್ಯದ

ಮಹಾಗಣ್ಯರಾಗಿದ್ದರು. ಇವರಲ್ಲಿ ಬೆಂಜಮಿನ್ ಬ್ರೋಡಿ (೧೭೮೩-೧೮೦೨) ಶಸ್ತ್ರ ವೈದ್ಯನಾಗಿದ್ದುದಲ್ಲದೆ, ಶರೀರಶಾಸ್ತ್ರ, ತತ್ವಶಾಸ್ತ್ರ ಹಾಗೂ ಆಡಳಿತದಲ್ಲೂ ಪ್ರವೀಣ ನಾಗಿದ್ದನು. ಶರೀರಶಾಸ್ತ್ರಕ್ಕೆ ಸಂಬಂಧಪಟ್ಟ ಪ್ರಾಣಿಗಳ ಶಾಖ, ಹೃದ ಯದ ಕ್ರಿಯೆಯ ಮೇಲಿದ್ದ ನರಗಳ ಹತೋಟಿ ಮತ್ತು ವಿಷಮೂಲಿಕೆಗಳನ್ನು ಕುರಿತು ಲೇಖನವನ್ನು ಬರೆದಿದ್ದನು. 'ಕೀಲುಗಳ ರೋಗಗಳನ್ನು ಕುರಿತು' ಇವನ ಅತ್ಯುತ್ತಮ ಪುಸ್ತಕವಾಗಿತ್ತು. ಶಸ್ತ್ರವೈದ್ಯದಲ್ಲಿನ ಕುಶಲತೆ ಇವನಿಗೆ ಅನೇಕ ಗೌರವಗಳನ್ನು ತಂದಿತ್ತು. ಶಸ್ತ್ರವೈದ್ಯರ ರಾಜವೈದ್ಯ ಸಂಘದ ಮತ್ತು ರಾಜ ಸಂಘದ ಅಧ್ಯಕ್ಷ ನಾಗಿ ಆಗಿನ ಬ್ರಿಟನ್ನಿನ ವೈದ್ಯ ಶಿಕ್ಷಣಕ್ಕೂ ವೈದ್ಯ ವೃತ್ತಿಗೂ ಗಮನಾರ್ಹವಾದ ಸೇವೆ ಸಲ್ಲಿಸಿದ್ದನು.

ವಿಲಿಯಂ ಫರ್ಗುಸನ್

ವಿಲಿಯಂ ಫರ್ಗುಸನ್ (೧೮೦೮–೭೭) ಎಡಿನ್ಬರೊನಲ್ಲಿ ವ್ಯಾಸಂಗ ಮುಗಿಸಿ ಲಂಡನ್ನಿನ ರಾಜವೈದ್ಯ ಕಾಲೇಜಿನ ಆಸ್ಪತ್ರೆಯ ಶಸ್ತ್ರವೈದ್ಯದ ಪ್ರಾಧ್ಯಾಪಕನಾಗಿ ತನ್ನ ೩೨ನೇ ವಯಸ್ಸಿನಲ್ಲೇ ಆಸ್ಟ್ಲಿ ಕೂಪರ್‌ನ ಸಹಾಯದಿಂದ ನೇಮಕವಾದನು. ರೋಗವಿದ್ದ ಕೀಲಿನ ಛೇದನ ಮಾಡುವುದರಲ್ಲಿ ಸೈಮ್‌ನ ಅಭಿಪ್ರಾಯವನ್ನೇ ಅನು ಮೋದಿಸಿದನು. ಸೀಳಿದ ಮೇಲ್ತುಟಿ ಸರಿಪಡಿಸುವುದರಲ್ಲಿ ನಿಸ್ಸೀಮನಾಗಿದ್ದನು. ಮೂತ್ರಗಲ್ಲು ಕೊಯ್ದು ತೆಗೆಯಲು ತನ್ನದೇ ಆದ ಕಲ್ಲು ಪುಡಿ ಮಾಡುವ ಶಸ್ತ್ರವನ್ನು ಕಂಡುಹಿಡಿದನು. ಇವನ 'ಪ್ರಾಯೋಗಿಕ ಶಸ್ತ್ರವೈದ್ಯದ ಪದ್ಧತಿ ೧೮೪೨' ಪ್ರಸಿದ್ಧ ಪುಸ್ತಕಗಳಲ್ಲೊಂದಾಗಿತ್ತು.

ಜೇಮ್ಸ್ ಪೇಜೆಟ್


ತ್ರಿಮೂರ್ತಿಗಳ ಪೈಕಿ ಮೂರನೆಯವನಾದ ಜೇಮ್ಸ್ ಪೇಜೆಟ್ (೧೮೧೪-೧೮೯೯) ಆಗಿನ ಕಾಲದ ಶಸ್ತ್ರವೈದ್ಯರಲ್ಲೆಲ್ಲಾ ಶ್ರೇಷ್ಠನಾಗಿದ್ದನು. ಬ್ರೋಡಿಗೆ ೩೧ ವರ್ಷ ಚಿಕ್ಕವನಾಗಿದ್ದರೂ, ಬೆಟ್ಟನಿ ಇವನನ್ನು 'ಅವನ ಕಾಲದ ಅಗ್ರಗಣ್ಯ ಶಸ್ತ್ರವೈದ್ಯ ತತ್ತ್ವಜ್ಞಾನಿ ಮತ್ತು ವಾಗ್ಮಿ' ಎಂದಿದ್ದನು. ೧೮೩೪ರಲ್ಲಿ ಲಂಡನ್ನಿಗೆ ಬಂದು, ಸೆಂಟ್ ಬಾರ್ತಾಲೊಮ್ಯು ಆಸ್ಪತ್ರೆ ಸೇರಿ, ತನ್ನ ವ್ಯಾಸಂಗದ ಮೊದಲನೆಯ ವರ್ಷ ದಲ್ಲೇ ಸ್ನಾಯುಗಳಲ್ಲಿದ್ದ ಬಿಳಿ ಚುಕ್ಕೆಗಳನ್ನು ಕಂಡು ಸೂಕ್ಷ್ಮದರ್ಶಕದಿಂದ ಪರೀಕ್ಷಿಸಿ ಅವುಗಳೊಳಗೆ ಹುಳುಗಳಿರುವುದನ್ನು ವಿವರಿಸಿದನು. ರಿಚ್ಚರ್ಡ್ ಬರ್ಟನ್ನಿಗೆ ಇದನ್ನು ತೋರಿಸಿದಾಗ ಹುಳಕ್ಕೆ ಟ್ರೈಕೀನಿಯ ಸ್ಪೈರಾಲಿಸ್ ಎಂದು ಹೆಸರು ಕೊಟ್ಟಿದ್ದನು. ಅನಂತರ ಪೇಜೆಟ್ ವೈದ್ಯಪದವಿ ಪಡೆದು ಅದೇ ಆಸ್ಪತ್ರೆಯಲ್ಲಿ ವಸ್ತುಪ್ರದರ್ಶನಾಲಯದ ಮುಖ್ಯಸ್ಥನಾಗಿ, ೧೮೪೭ರಲ್ಲಿ ಶಸ್ತ್ರವೈದ್ಯರ ರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕನಾಗಿ ನೇಮಕವಾದನು. ೧೮೫೧ರಲ್ಲಿ ರಾಜಸಂಘದ ಸದಸ್ಯನಾಗಿ ಪದವಿಪಡೆದ ೧೫ ವರ್ಷ ಗಳನಂತರ ವೈದ್ಯವೃತ್ತಿ ನಡೆಸಲು ಪ್ರಾರಂಭಿಸಿದ್ದನು. ಅವನ ಚತುರತೆ, ತಾಳ್ಮೆ,

ಜಾಣತನ ಹಾಗೂ ರೋಗ ನಿದಾನದಲ್ಲಿದ್ದ ಅನುಭವವೆಲ್ಲವೂ ಅವನ ಪ್ರಖ್ಯಾತಿಗೆ ಕಾರಣವಾಗಿದ್ದವು. ಖ್ಯಾತಿ ಹೆಚ್ಚಿದಂತೆಲ್ಲಾ ಅವನಿಗೆ ವೈಜ್ಞಾನಿಕ ಪ್ರಯೋಗಗಳಲ್ಲಿ ಕುತೂಹಲ ಹೆಚ್ಚಿತ್ತು. ೧೮೫೧ರಲ್ಲಿ ಬರೆದ 'ಗಂತಿಗಳ ಮೇಲಿನ ಉಪನ್ಯಾಸಗಳು' ೧೮೫೩ರ 'ಶಸ್ತ್ರವೈದ್ಯದ ರೋಗಶಾಸ್ತ್ರ' ಹಾಗೂ 'ರೋಗಿ ಹಾಸೆಬದಿಯ ಉಪನ್ಯಾಸಗಳು ಮತ್ತು ಪ್ರಬಂಧಗಳು' ಬಹು ಮೆಚ್ಚಿನ ಲೇಖನಗಳಾಗಿದ್ದವು. ಮೊಲೆ ತೊಟ್ಟಿನ ಇಸಬು ಬೆಳೆದು ಮೊಲೆಯ ಏಡಿಗಂತಿಯಾಗುವ ರೋಗ ಮತ್ತು ಮೂಳೆಯ ರೋಗವಾದ 'ರೂಪಗೆಡುವ ಎಲುಬುರಿತ' ಎಂಬ ರೋಗಗಳನ್ನು ೧೮೭೪, ೧೮೭೬ ರಲ್ಲೂ ಮೊಟ್ಟಮೊದಲಿಗೆ ವರ್ಣಿಸಿದನು. ಈ ಎರಡು ರೋಗಗಳು ಈಗಲೂ ಅವನ ಹೆಸರಿನಲ್ಲಿ ಕರೆಯಲಾಗುತ್ತಿವೆ. ಈ ಮಹತ್ಕಾರ್ಯಗಳಿಂದ ಅವನ ಹೆಸರು ಎಲ್ಲೆಲ್ಲೂ ಹರಡಿ, ರೋಗಿಗಳಿಂದಲೂ, ವಿದ್ಯಾರ್ಥಿಗಳಿಂದಲೂ, ಸಹೋದ್ಯೋಗಿಗಳಿಂದಲೂ ಸಾಕಷ್ಟು ಗೌರವ ಸಂದಿತು. ಗ್ಲ್ಯಾಡ್‌ಸ್ಟನ್, ರಸ್ಕಿನ್, ಟೆನ್ನಿಸ್ಸನ್, ಬ್ರೌನಿಂಗ್, ಎಲಿಯೆಟ್, ಹಕ್ಸ್ಲಿ, ಡಾರ್ವಿನ್, ವರ್ಕೌ, ಪ್ಯಾಶ್ಚರ್ ಮುಂತಾದ ಮಹನೀಯರೆಲ್ಲಾ ಇವನ ಆಪ್ತ ಸ್ನೇಹಿತರಾಗಿದ್ದರು.

ಜೇಮ್ಸ್ ಸಿಂಪ್ಸನ್

ವಿಲಿಯಂ ಹಂಟರ್, ಜಾನ್ ಹಂಟರ್, ಮ್ಯಾತ್ಯು ಬೇಲಿ, ಚಾರಲ್ಸ್ ಬೆಲ್, ವಿಲಿಯಂ ಸ್ಮೆಲ್ಲಿ, ರಾಬರ್ಟ್ ಲಿಸ್ಟನ್ ಮುಂತಾದ ಸ್ಕಾಟ್ಲೆಂಡಿನ ವೈದ್ಯ ವಿಜ್ಞಾನಿಗಳೆಲ್ಲಾ ಲಂಡನ್ನಿಗೆ ಬಂದು ಕೀರ್ತಿ ಐಶ್ವರ್ಯಾದಿಗಳನ್ನು ಸಂಪಾದಿಸಿದರೆ, ಸ್ಕಾಟ್ಲೆಂಡಿನಲ್ಲೇ ಹುಟ್ಟಿ, ಸ್ಕಾಟ್ಲೆಂಡಿನಲ್ಲೇ ಬೆಳೆದು, ಅಂತರ ರಾಷ್ಟ್ರೀಯ ಕೀರ್ತಿಯನ್ನು ಗಳಿಸಿದ್ದ ಜೇಮ್ಸ್ ಯಂಗ್ ಸಿಂಪ್ಸನ್ (೧೮೧೧-೧೮೭೦) ಸ್ಕಾಟ್ಲೆಂಡಿನಲ್ಲೇ ತನ್ನ ಜೀವಮಾನವನ್ನೆಲ್ಲಾ ಕಳೆದು ಕೀರ್ತಿ ಗಳಿಸಿದನು. ೧೮೩೨ರಲ್ಲಿ ಎಡಿನ್ಬರೊದಿಂದ ವೈದ್ಯ ಪಂಡಿತ ಪದವಿ ಪಡೆದು ರೋಗಶಾಸ್ತ್ರದ ಸಹಾಯಕನಾಗಿ ನೇಮಕವಾದನು. ಆದರೆ, ಇವನಿಗೆ ಹೆರಿಗೆಶಾಸ್ತ್ರ ವಿಧಾನಗಳಲ್ಲಿ ಬಹು ಅಭಿರುಚಿ ಇದ್ದುದರಿಂದ, ಅದನ್ನು ಕಲಿತು ಸತ್ತೆಯ ರೋಗಗಳು, ಪಿಂಡಗೂಸಿನ ಕರುಳ್ಕಡುಪರೆಯುರಿತ, ಪಿಂಡಗೂಸಿನ ಬೂರು ಹಾಗೂ ಉಭಯಲಿಂಗತನಗಳನ್ನು ಕುರಿತು ಶ್ರೇಷ್ಠ ಲೇಖನಗಳನ್ನು ಬರೆದಿದ್ದನು. ಇವುಗಳ ಆಧಾರದ ಮೇಲೆ ೧೮೪೦ರಲ್ಲಿ ಎಡಿನ್ಬರೊ ವಿಶ್ವವಿದ್ಯಾಲಯದ ಹೆರಿಗೆಶಾಸ್ತ್ರದ ಪ್ರಾಧ್ಯಾಪಕನಾಗಿ ನೇಮಕವಾದನು.

೧೯ನೇ ಶತಮಾನದ ಮಧ್ಯ ಭಾಗದಲ್ಲಿ ಆಗತಾನೆ ಅರಿವಳಿಕೆಯ ಉಪಯೋಗದ ಅರಿವಾಗುತ್ತಿತ್ತು. ೧೮೪೬ನೇ ಅಕ್ಟೋಬರ್ ತಿಂಗಳಲ್ಲಿ ಬಾಸ್ಟನ್ ಪಟ್ಟಣದ ಮಾರ್ಟನ್ ಮೊಟ್ಟಮೊದಲಿಗೆ ಈಥರ್ ಅರಿವಳಿಕೆಯನ್ನು ಉಪಯೋಗಿಸಿದನು. ೧೮೪೬ನೇ ಡಿಸೆಂಬರಿನಲ್ಲಿ ಲಂಡನ್ನಿನ ರಾಬರ್ಟ್ ಲಿಸ್ಟನ್ ಶಸ್ತ್ರಕ್ರಿಯೆ ನಡೆಸಲು ಯಶಸ್ವಿಯಾಗಿ ಈಥರ್ ದ್ರವವನ್ನೇ ಉಪಯೋಗಿಸಿದನು. ೧೮೪೭ನೇ ಜನವರಿ



ಕ್ಲೋರೋಫಾರ್ಮ್ ಮತ್ತು ಈಥರ್ ಎರಡರ ಬೆರಕೆಯನ್ನು ಸೇದಲು ಉಪಯೋಗಿಸುತ್ತಿದ್ದ 'ಷಿಪ್ವೆ' ಉಪಕರಣ.

೧೯ರಲ್ಲಿ ಸಿಂಪ್ಸನ್ ಹೆರಿಗೆ ಮಾಡಲು ಈಥರ್ ದ್ರವವನ್ನು ಉಪಯೋಗಿಸಿ ಅದರಲ್ಲಿ ಒಗ್ಗದಿರುವ ಗುಣಗಳಿದ್ದುದರಿಂದ ಅದರ ಬದಲು ಕ್ಲೋರೋಫಾರ್ಮನ್ನು ಮೊಟ್ಟಮೊದಲಿಗೆ ಉಪಯೋಗಕ್ಕೆ ತಂದನು. ಕ್ಲೋರೋಫಾರ್ಮಿನ ಉಪಯೋಗವನ್ನು ಅನೇಕರು ವಿರೋಧಿಸಿದ್ದರೂ, ೧೮೫೩ರಲ್ಲಿ ರಾಣಿ ವಿಕ್ಟೋರಿಯಳ ೮ನೇ ಹೆರಿಗೆಗೆ ಯಶಸ್ವಿಯಾಗಿ ಉಪಯೋಗಿಸಿದ ಅನಂತರ ಅದರ ಸ್ಥಾನ ಸ್ಥಿರವಾಗಿ ಮುಂದೆ ಎಲ್ಲಾ ಶಸ್ತ್ರಕ್ರಿಯೆಗಳನ್ನು ನೋವಿಲ್ಲದಂತೆ ನಡೆಸಲು ನೆರವಾಯಿತು.

ಬ್ರಿಟನ್ನಿನ ಮಹಾವಿಜ್ಞಾನಿಗಳು

ಹಂಫ್ರೀ ಡೇವಿ

೧೯ನೇ ಶತಮಾನದಲ್ಲಿ ವೈದ್ಯಶಾಸ್ತ್ರಕ್ಕೆ ಸೇವೆ ಸಲ್ಲಿಸಿದ ಮಹಾವಿಜ್ಞಾನಿಗಳ ಗುಣಗಾನ ಇಲ್ಲಿ ಅಸಮಂಜಸವೇನಲ್ಲ. ಯೂರೋಪಿನಲ್ಲಿ ವೈಜ್ಞಾನಿಕರು ಹೇಗೆ ಮುಂದುವರಿದಿದ್ದರೋ ಹಾಗೆಯೇ ಇಂಗ್ಲೆಂಡಿನಲ್ಲೂ ಅನೇಕರು ಮುಂದುವರಿದಿದ್ದರು. ಹಂಫ್ರೀ ಡೇವಿ (೧೭೭೮–೧೮೨೯) ಬ್ರಿಸ್ಟಲ್ಲಿನ ವೈದ್ಯ ವಾಯುವಿಕ ಸಂಸ್ಥೆಯಲ್ಲಿ ವಿವಿಧ ಅನಿಲಗಳ ರೋಗನಿವಾರಕ ಗುಣಗಳನ್ನು ಪರೀಕ್ಷಿಸಲು ತನ್ನ ೧೯ನೇ ವಯಸ್ಸಿನಲ್ಲೇ ಪ್ರಾರಂಭಿಸಿದ್ದನು. ನೈಟ್ರಸ್ ಆಕ್ಸೈಡ್ ಅನಿಲವನ್ನು ಸೇವಿಸಬಹುದೆಂದೂ, ಅದರಿಂದ ಉಲ್ಲಾಸವಾಗುತ್ತದೆಂದೂ ಅವನು ಒಂದು ವರ್ಷದಲ್ಲೇ ಕಂಡುಹಿಡಿದನು. ಅವನ ವಿಜ್ಞಾನ ಸಂಪತ್ತನ್ನು ಮೆಚ್ಚಿ ರಾಜ ಸಂಘದ ರಸಾಯನಶಾಸ್ತ್ರದ ಅಧ್ಯಾಪಕನಾಗಿ ನೇಮಕ ಮಾಡಿದರು.

ಮೈಕೇಲ್ ಫ್ಯಾರಡೆ


ಕೆಲವು ವರ್ಷಗಳನಂತರ ಮೈಕೇಲ್ ಫ್ಯಾರಡೆ (೧೭೯೧–೧೮೬೭) ಡೇವಿಯ ವಿದ್ಯಾರ್ಥಿಯಾಗಿ ಸೇರಿ ಕ್ರಮೇಣ ಡೇವಿಯ ಸಹಾಯಕನಾಗಿ, ಅವನ ಮರಣಾ

ನಂತರ ರಸಾಯನಶಾಸ್ತ್ರದ ಪ್ರಾಧ್ಯಾಪಕನಾಗಿ ನೇಮಕವಾದನು. ಡೇವಿಯ ಹೆಸರಿಟ್ಟಿರುವ ಗಣಿಕಾರರ ರಕ್ಷಕ ದೀಪ ಈಗಲೂ ಕಲ್ಲಿದ್ದಲಿನ ಗಣಿಗಳಲ್ಲಿ ಉಪಯೋಗದಲ್ಲಿದೆ. ವಿದ್ಯುತ್ ರಸಾಯನ ಮತ್ತು ವಾಯುಶಾಸ್ತ್ರಗಳ ಕ್ಷೇತ್ರದಲ್ಲಿ ಡೇವಿ ಹೆಚ್ಚು ಆಸಕ್ತಿ ತೋರಿದ್ದನು. ನೈಟ್ರಸ್ ಆಕ್ಸೈಡ್ ಉಲ್ಲಾಸಗೊಳಿಸುವುದಲ್ಲದೆ ಅರಿವಳಿಸುತ್ತದೆಂದು ೧೭೯೯ರಲ್ಲಿ ತನ್ನ ಲೇಖನದಲ್ಲಿ ತಿಳಿಸಿದನು. ಫ್ಯಾರಡೆಯ ಜೊತೆ ಅನಿಲಗಳು ದ್ರವವಾಗುವ ವಿಧಾನವನ್ನೂ ಕಂಡುಹಿಡಿದನು. ೧೮೩೧ ರಲ್ಲಿ ವಿಜ್ಞಾನಕ್ಕೆ ಶಾಶ್ವತವಾದ ಕೀರ್ತಿ ತಂದಿದ್ದ ವಿದ್ಯುತ್ಕಾಂತದ ಚೋದನೆ ಹಾಗೂ ಚೋದನೆ ಸುರುಳಿಯನ್ನು ಫ್ಯಾರಡೆ ಕಂಡುಹಿಡಿದು ಕೃತಾರ್ಥನಾಗಿದ್ದನು.

ಜಾನ್ ಡಾಲ್ಟನ್

ಡೇವಿ ಮತ್ತು ಫ್ಯಾರಡೆಗಳಿಗೆ ಸರಿಸಮನಾದ ಜಾನ್ ಡಾಲ್ಟನ್ (೧೭೬೬–೧೮೪೪) ಕೂಡ ಅನೇಕ ಅನಿಲಗಳ ಲಕ್ಷಣಗಳನ್ನು ವರ್ಣಿಸಿದ್ದಲ್ಲದೆ ಬಣ್ಣಗುರುಡನ್ನೂ ಪರಮಾಣು ತೂಕವನ್ನೂ ವಿವರಿಸಿ ಜ್ಞಾನೋದಯವನ್ನುಂಟುಮಾಡಿದನು.

ಚಾರಲ್ಸ್ ಡಾರ್ವಿನ್



ಚಾರಲ್ಸ್ ಡಾರ್ವಿನ್

ಚಾರಲ್ಸ್ ಡಾರ್ವಿನ್ (೧೮೦೯-೧೮೮೨) ವೈದ್ಯಶಾಸ್ತ್ರಕ್ಕೆ ಮಾಡಿರುವಷ್ಟು ಸೇವೆಯನ್ನು ಮತ್ತಾರೂ ಮಾಡಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗುವುದಿಲ್ಲ. ಇವನ 'ವಂಶಗಳ ಹುಟ್ಟನ್ನು ಕುರಿತು' ವೈಜ್ಞಾನಿಕ ಚರಿತ್ರೆಯಲ್ಲೇ ಅತಿ ಉತ್ಕೃಷ್ಟವಾದ ಪುಸ್ತಕವೆಂದು ಹೆಸರು ಪಡೆದಿದೆ. ಇದು ಜೀವಿಶಾಸ್ತ್ರ, ತತ್ತ್ವ, ಮತ, ಸಾಮಾಜಿಕಶಾಸ್ತ್ರಗಳ ಮೇಲೆಲ್ಲಾ ಪ್ರಭಾವ ಬೀರಿದ್ದಲ್ಲದೆ ವೈದ್ಯಶಾಸ್ತ್ರದ ಮೇಲೂ ಸಾಕಷ್ಟು ಪ್ರಭಾವ

ಬೀರಿತ್ತು ಡಾರ್ವಿನ್ ವೈದ್ಯಶಾಸ್ತ್ರವನ್ನು ಎಡಿನ್ಬರೊವಿನಲ್ಲೂ,ಮತಧರ್ಮ ಶಾಸ್ತ್ರವನ್ನು ಕೇಂಬ್ರಿಡ್ಜಿನಲ್ಲೂ ವ್ಯಾಸಂಗ ಮಾಡಿ ೧೮೩೧ ರಿಂದ ೧೮೩೬ರವರೆವಿಗೆ ಅಟ್ಲಾಂಟಿಕ್ ದ್ವೀಪಗಳಿಗೂ, ದಕ್ಷಿಣ ಅಮೆರಿಕದ ಸಮುದ್ರ ತೀರಕ್ಕೂ, ಶಾಂತಿ ಮತ್ತು ಹಿಂದೂ ಸಾಗರಗಳ ದ್ವೀಪಗಳಿಗೂ, ಪ್ರಕೃತಿ ಪರಿಶೀಲನೆ ನಡೆಸಲು ಬೀಗಲ್ ಎಂಬ ಹಡಗಿನ ಮೇಲೆ ಸಮುದ್ರಯಾನ ಮಾಡಿದನು. ೧೮೩೮ ರಲ್ಲಿ 'ಜನಸಂಖ್ಯೆಯನ್ನು ಕುರಿತು ಮಾಲ್ತಸ್' ಭಾಷಣ ಮಾಡಿದನಂತರ, 'ಅಸ್ತಿತ್ವಕ್ಕಾಗಿ ಹೋರಾಟ' ಅವನಿಗೆ ಮನದಟ್ಟಾಗಿ, ಅಂತಹ ಪರಿಸ್ಥಿತಿಯಲ್ಲಿ ಅನುಕೂಲಕರ ಭಿನ್ನರೂಪಗಳು ಸುರಕ್ಷಿತವಾಗಿದ್ದು ಅನನುಕೂಲಕರವಾದವು ಹಾಳಾಗುವ ಪ್ರವೃತ್ತಿ ತೋರುವುವು. ಇದರ ಫಲವೇ ಹೊಸ ವಂಶಗಳ ರೂಪಿಕೆ ಎಂದು ತಿಳಿಸಿದ್ದನು. ಇದರ ಪರಿಣಾಮವಾಗಿ 'ನೈಸರ್ಗಿಕ ಆಯ್ಕೆ ಮತ್ತು ವಿಕಾಸ'ವೆಂಬ ಡಾರ್ವಿನ್ನಿನ ತತ್ತ್ವ ಸ್ಥಿರವಾಗಿ, ೧೮೭೧ ರಲ್ಲಿ ಹೊರಬಿದ್ದ ಡಾರ್ವಿನ್ನಿನ 'ಮಾನವನ ಹುಟ್ಟು' ಪುಸ್ತಕಕ್ಕೆ ಆಧಾರವಾಯಿತು. ಈ ಮಹತ್ತರ ಭಾವವನ್ನು ಮತಧರ್ಮ ಶ್ರೇಷ್ಠರನ್ನೊಳಗೊಂಡು ಅನೇಕ ಮಹನೀಯರು ವಿರೋಧಿಸಿದ್ದರೂ, ಆ ವಿವಾದಗಳಲ್ಲಿ ಬಾಯಿ ಹಾಕದೆ ದೂರವಿದ್ದನು.

ಡಾರ್ವಿನ್ ವಿವಾದಗಳಲ್ಲಿ ಆಸಕ್ತಿ ತೋರದಿದ್ದರೂ ಅವನ ಬೆಂಬಲಿಗನಾದ ಥಾಮಸ್ ಹಕ್ಸ್ಲಿ (೧೮೨೫–೧೮೯೫) ಡಾರ್ವಿನ್ನಿನ ತತ್ತ್ವಗಳನ್ನು ಎತ್ತಿಹಿಡಿದು ಹೋರಾಟಕ್ಕೆ ನಿಂತನು. ಹಕ್ಸ್ಲಿ ಚೇರಿಂಗ್ ಕ್ರಾಸ್ ಆಸ್ಪತ್ರೆಯಲ್ಲಿ ವ್ಯಾಸಂಗ ಮಾಡಿ ೧೮೪೫ರಲ್ಲಿ ಲಂಡನ್ನಿನ ವಿಶ್ವವಿದ್ಯಾಲಯದ ಪದವಿ ಪಡೆದನಂತರ ರ್ಯಾಟಲ್ ಸ್ನೇಕ್ ಎಂಬ ಹಡಗಿನಲ್ಲಿ ಆಸ್ಟ್ರೇಲಿಯ ತೀರದ ಪ್ರಕೃತಿಯನ್ನು ಪರಿಶೀಲಿಸಲು ಹೋಗಿ ಮೂರು ವರ್ಷಗಳು ಪ್ರಾಣಿ ಮತ್ತು ಸಸ್ಯಗಳ ಶೋಧನೆಯಲ್ಲಿ ತೊಡಗಿದ್ದನು. ಸಮುದ್ರಯಾನ ಮುಗಿಸಿ ಲಂಡನ್ನಿಗೆ ಬಂದೊಡನೆ ಶಸ್ತ್ರವೈದ್ಯ ರಾಜ ವೈದ್ಯರ ಕಾಲೇಜಲ್ಲಿ ಪ್ರಾಧ್ಯಾಪಕನಾಗಿ ಅನೇಕ ಲೇಖನಗಳನ್ನು ಬರೆದನು. ಇವನ 'ಬೆನ್ನೆಲುಬಿ ಪ್ರಾಣಿಗಳ ಅಂಗರಚನೆಶಾಸ್ತ್ರದ ಕೈಪಿಡಿ, ೧೮೭೧' ಹಾಗೂ 'ಶರೀರಶಾಸ್ತ್ರದಲ್ಲಿ ಸುಲಭ ಪಾಠಗಳು, ೧೮೬೬' ಮತ್ತು 'ನಿಸರ್ಗದಲ್ಲಿ ಮಾನವನ ಸ್ಥಾನಕ್ಕೆ ಸಾಕ್ಷ್ಯ, ೧೮೬೩' ಅತಿ ಉತ್ಕೃಷ್ಟವಾಗಿದ್ದವು. ಹಕ್ಸ್ಲಿಯ ಸ್ಥಾನಮಾನಗಳಿಗೆ ಸರಿಯಾಗಿ, ಎಡಿನ್ಬರೊ, ಆಕ್ಸ್‌ಫರ್ಡ್, ಕೇಂಬ್ರಿಡ್ಜ್ ವಿಶ್ವವಿದ್ಯಾಲಯಗಳು ತಕ್ಕ ಗೌರವಗಳನ್ನು ದಯಪಾಲಿಸಿದವು.

೩೨ ಅಮೆರಿಕದ ವೈದ್ಯಶಾಸ್ತ್ರದ ಉನ್ನತಿ

ಯೂರೋಪಿನ ಜನಾಂಗದವರು ಅಮೆರಿಕದಲ್ಲಿ ನೆಲಸಿದಾಗ ಅವರವರ ಸಂಸ್ಕೃತಿ, ಮತ, ಧರ್ಮ, ವೈದ್ಯ ಪದ್ಧತಿಗಳನ್ನು ಆಯಾ ಜನಾಂಗದವರು ಆಚರಿಸುತ್ತಿದ್ದರು. ಕ್ವಿಬೆಕ್ ದೇಶದಲ್ಲಿ ಫ್ರಾನ್ಸಿನ ಸಂಸ್ಕೃತಿ ನೆಲೆಸಿತ್ತು. ನ್ಯೂ ಇಂಗ್ಲೆಂಡಿನಲ್ಲಿ ಬ್ರಿಟನ್ನಿನ ಪದ್ಧತಿ ಇತ್ತು. ದಕ್ಷಿಣ ಅಮೆರಿಕ ಮತ್ತು ಉತ್ತರ ಅಮೆರಿಕಗಳ ದಕ್ಷಿಣದ ಬಹುಭಾಗಗ ಸ್ಪೇಯಿನ್, ಪೋರ್ಚುಗಲ್ ಸಂಸ್ಕೃತಿಗಳನ್ನು ಆಚರಿಸುತ್ತಿದ್ದವು. ಇವರ ಪೈಕಿ ಸ್ಪೆಯಿನ್ ಜನಾಂಗದವರು ಮೊಟ್ಟಮೊದಲಿನ ವೈದ್ಯಶಾಲೆಗಳನ್ನೂ ಆಸ್ಪತ್ರೆಗಳನ್ನೂ ಸ್ಥಾಪಿಸಿದರು. ಮೊದಲನೆಯ ವಿಶ್ವವಿದ್ಯಾಲಯ ಸಾಂಟೊ ಡೊಮಿಂಗೊದಲ್ಲಿ ೧೫೩೮ ರಲ್ಲಿ ಸ್ಥಾಪಿತವಾಯಿತು. ೧೬೦೭ ರಲ್ಲಿ ಇಂಗ್ಲೀಷಿನವರು ಜೇಮ್ಸ್ ಟೌನಿನಲ್ಲಿ ಪ್ರಾರಂಭಿಸುವುದಕ್ಕೆ ಮೊದಲೇ ಮೆಕ್ಸಿಕೊದಲ್ಲಿ ೧೫೫೧ ರಲ್ಲಿ ಸ್ಥಾಪಿತವಾಗಿ ಮೊಟ್ಟ ಮೊದಲನೆಯ ವೈದ್ಯಶಾಲೆ ೧೫೮೦ರಲ್ಲಿ ಅನುಭವಕ್ಕೆ ಬಂದಿತ್ತು. ಇದೇ ರೀತಿ ವಿಶ್ವ ವಿದ್ಯಾಲಯಗಳು, ವೈದ್ಯಶಾಲೆಗಳು ಲೀಮ, ಕಾರ್ಡೋಬ, ಅರ್ಜೆಂಟೈನಗಳಲ್ಲೂ ಆರಂಭವಾದವು.

ಸ್ಪೆಯಿನ್ ಜನಾಂಗದವರು ಅಮೆರಿಕದಲ್ಲಿ ನೆಲಸಿದಾಗ ಅಲ್ಲಿದ್ದ ಜನರ ರೋಗಾದಿಗಳನ್ನೂ, ಅವುಗಳ ಚಿಕಿತ್ಸೆಯ ರೀತಿಯನ್ನೂ ಕುರಿತು ಆ ಜನಾಂಗದ ವಿದ್ವಾಂಸರು ಲೇಖನ ಬರೆದಿದ್ದರು. ಗನ್ಸಾಲೊ ಫರ್ನಾಂಡಿಸ್ ಒವೀಡೊ, ಕೊಪೇಬಿ, ಗೊಯಾಕ್, ಕೊಕೊ, ಹೊಗೆಸೊಪ್ಪಿನ ಔಷಧ ಗುಣಗಳನ್ನು ವಿವರಿಸಿದ್ದಲ್ಲದೆ, ೧೫೨೬ ರಲ್ಲಿ ಬರೆದ ಸುಮೆರಿಯ ಗ್ರಂಥದಲ್ಲಿ ತೊಡೆವಾಳೆಯನ್ನೂ, ಯಾಸ್ ರೋಗವನ್ನೂ ವಿವರಿಸಿದ್ದನು. ಸ್ಪೆಯಿನ್ ಜನರು ಅಮೆರಿಕದಿಂದ ತಮ್ಮ ದೇಶಕ್ಕೆ ಹಿಂತಿರುಗಿದಾಗ ಅನೇಕರು ಹಳದಿ ಕಾಮಾಲೆಯಿಂದ ನರಳಿದರೆಂದೂ, ಅವರಲ್ಲನೇಕರು ಸತ್ತರೆಂದೂ ತಿಳಿದುಬಂದಿದೆ.

ಫ್ರ್ಯಾನ್ಸಿಸ್ಕೊ ಹೆರ್ನಾಂಡೆಸ್

ಫ್ರಾನ್ಸಿಸ್ಕೊ ಹೆರ್ನಾಂಡೆಸ್ (೧೫೧೭-೧೫೮೭) ಎಂಬ ವೈದ್ಯ ಮೆಕ್ಸಿಕೋದಲ್ಲಿ ಅನೇಕ ವರ್ಷಗಳಿದ್ದು ೩೦೦೦ ಔಷಧ ಗಿಡಮೂಲಿಕೆಗಳನ್ನೂ ಆಗ ಮೆಕ್ಸಿಕೋದಲ್ಲಿ ಹರಡಿದ್ದ ಸೊಕ್ಕಿನ ಜ್ವರದ ವಿವರಗಳನ್ನೂ ಮತ್ತು ಅದರಿಂದ ಸತ್ತವರ ಶವಪರೀಕ್ಷೆ ಗಳನ್ನೂ ನಡೆಸಿ ವಿವರಿಸಿದ್ದನು.

ಹೊನ್ನು ಮತ್ತು ಮಣ್ಣಿಗೋಸ್ಕರ ಬಂದು ನೆಲಸಿದ್ದ ಸ್ಪೆಯಿನ್ ಜನರ ಆಕಾಂಕ್ಷೆ, ಆಸಕ್ತಿ, ನ್ಯೂ ಇಂಗ್ಲೆಂಡಿನಲ್ಲಿ ನೆಲೆಸಿದ್ದ ಜನರಿಗಿರಲಿಲ್ಲ. ಇವರು ಕೇವಲ ಮತ

ಧರ್ಮದ ದೃಷ್ಟಿಯಿಂದ ಬಂದಿದ್ದರು. ಇವರು ನೆಲಸಿದ್ದ ಪ್ರಾಂತ್ಯ ಸ್ಪೆಯಿನ್ನರು ನೆಲೆಸಿದ್ದ ಪ್ರಾಂತ್ಯದಷ್ಟು ಫಲವತ್ತಾಗಿರಲಿಲ್ಲ. ಸಂಸ್ಕೃತಿಗಳಲ್ಲೂ, ವೈದ್ಯಾಭಿವೃದ್ಧಿಗಳಲ್ಲೂ ಅಷ್ಟು ಮುಂದುವರಿದಿರಲಿಲ್ಲ.

ಸ್ಯಾಮ್ಯುಯಲ್ ಫುಲ್ಲರ್

ಲೇಡನ್ ವಿಶ್ವವಿದ್ಯಾಲಯದಲ್ಲಿ ೧೧ ವರ್ಷ ಓದಿದ್ದ ಡಾ. ಸ್ಯಾಮ್ಯುಯಲ್ ಫುಲ್ಲರ್ ವೈದ್ಯ ಪದವಿ ಇಲ್ಲದಿದ್ದರೂ, ೧೬೨೦ರಲ್ಲಿ ಮೆ ಫ್ಲವರ್ ಎಂಬ ಹಡಗಿನಲ್ಲಿ ಅಮೆರಿಕಾಕ್ಕೆ ಬಂದು, ೧೬೩೩ರಲ್ಲಿ ತಾನು ಸಿಡುಬಿನಿಂದ ಸಾಯುವ ತನಕ ಔಷಧ ಕೊಡುತ್ತಲೇ ಇದ್ದನು. ಇವನು ಸತ್ತನಂತರ ಮಸಚೂಸೆಟ್ಸ್‌ನಲ್ಲಿ ೧೦೦ ವರ್ಷ ಯಾರೂ ಸರಿಯಾದ ವೈದ್ಯರಿರಲಿಲ್ಲ. ಅನಂತರ ವೈದ್ಯವೃತ್ತಿಯನ್ನು ಅವಲಂಬಿಸಿದ್ದ ವೈದ್ಯರು, ಬ್ರಿಟಿಷರ ಪದ್ಧತಿಯನ್ನು ಅನುಸರಿಸಿ ಬಾಸ್ಟನ್, ನ್ಯೂಯಾರ್ಕ್, ಫಿಲಡೆಲ್ಫಿಯಗಳಲ್ಲಿ ಕೆಲಸ ಮಾಡತೊಡಗಿದ್ದರು.

ಬ್ರಿಟನ್ನಿನಿಂದ ರಾಜಕೀಯ ಬಿಡುಗಡೆ ಪಡೆದನಂತರ, ಅಮೆರಿಕ ತನ್ನ ವೈದ್ಯ ವೃತ್ತಿಯನ್ನು ಸ್ವಂತವಾಗಿಯೇ ಅಭಿವೃದ್ಧಿಪಡಿಸಲು ಆರಂಭಿಸಿ, ಅಮೆರಿಕದ ಕ್ರಾಂತಿ ಪ್ರಾರಂಭವಾಗುವುದಕ್ಕೆ ಸ್ವಲ್ಪ ಕಾಲ ಮೊದಲು ಫಿಲಡೆಲ್ಫಿಯದ ಮೊಟ್ಟಮೊದಲ ವೈದ್ಯಶಾಲೆಯನ್ನು ಜಾರಿಗೆ ತಂದಿತು. ಎಡಿನ್ಬರೊವಿನಲ್ಲಿ ವಿಲಿಯಂ ಕಲ್ಲೆನ್ ಮತ್ತು ಸಿಡೆನ್ ಹ್ಯಾಮ್ ಕೈಕೆಳಗೆ ಕೆಲಸ ಕಲಿತಿದ್ದ ವೈದ್ಯರು ವೈದ್ಯಶಾಲೆಯ ಮೂಲ ವೈದ್ಯಪಂಡಿತರಾಗಿದ್ದರು. ಫಿಲಡೆಲ್ಫಿಯದಲ್ಲಿ ಕ್ವೇಕರರು ಎಂಬ ಮಿತ್ರ ಮಂಡಲಿಯ ಜನರು ನೆಲಸಿ ೧೭೫೦ರಲ್ಲಿ ಪೆನ್ಸಿಲ್ವೇನಿಯ ಆಸ್ಪತ್ರೆಯನ್ನು ಸ್ಥಾಪನೆ ಮಾಡಿದರೂ, ಬಾಸ್ಟನ್ನಿನಲ್ಲಿ ನೆಲೆಸಿದ್ದ ಧರ್ಮಶುದ್ಧಿವಾದಿ ಗುಂಪಿನವರೇ ೧೮೨೧ರ ವರೆವಿಗೂ ಆಸ್ಪತ್ರೆಯನ್ನು ಸ್ಥಾಪನೆ ಮಾಡಿರಲಿಲ್ಲ.

ಫಿಲಡೆಲ್ಫಿಯದ ಮೊಟ್ಟಮೊದಲ ವೈದ್ಯಶಾಲೆಯ ಅಸ್ತಿಭಾರ ಹಾಕಿದವರ ಪೈಕಿ ಮಾರ್ಗನ್, ಷಿಪ್ಪೆನ್, ರಷ್ ಮೂವರು ಅತಿ ಮುಖ್ಯರು.

ಜಾನ್ ಮಾರ್ಗನ್

ಜಾನ್ ಮಾರ್ಗನ್ (೧೭೩೫–೧೭೮೯) ಫಿಲಡೆಲ್ಫಿಯದಲ್ಲಿ ಜನಿಸಿ ಎಡಿನ್ಬರೋನಲ್ಲಿ ಮನ್ರೊ ಕೈಕೆಳಗೆ ವ್ಯಾಸಂಗ ಮಾಡಿ ವೈದ್ಯ ಪದವಿ ಪಡೆದಾಗ "ಡಿ ಪೌಪಾಯಿಸಿ" ಎಂಬ ಕೀವಿನ ನಿರ್ಮಾಣವನ್ನು ಕುರಿತು ಲೇಖನ ಬರೆದನು. ಕೀವು ರಕ್ತನಾಳದಿಂದ ಹೊರಬೀಳುತ್ತದೆಂಬ ಈ ಊಹೆಯನ್ನು ಕಾನ್‌ಹೀಂ ಸಮರ್ಥಿಸಲು ಒಂದು ಶತಮಾನ ಕಳೆಯಬೇಕಾಯಿತು. ಎಂ. ಡಿ. ಪದವಿಯನ್ನು ಪಡೆದು ಫ್ರಾನ್ಸಿನಲ್ಲೂ, ಇಟಲಿಯಲ್ಲೂ ವ್ಯಾಸಂಗವನ್ನು ಮುಂದುವರಿಸಿ, ಲಂಡನ್ ಮತ್ತು ಎಡಿನ್ಬರೊ ವೈದ್ಯದ ರಾಜ ವೈದ್ಯ ಕಾಲೇಜುಗಳಿಂದಲೂ, ಪ್ಯಾರಿಸ್ ಮತ್ತು ರೋಮ್‌ಗಳ ವೈದ್ಯಸಂಸ್ಥೆಗಳಿಂದಲೂ,

ಲಂಡನ್ನಿನ ರಾಜ ಸಂಘದಿಂದಲೂ ಗೌರವ ಸಂಪಾದಿಸಿ ಯೂರೋಪಿನ ವೈದ್ಯಶಾಲೆಗಳಿಗಿಂತಲೂ ಮೇಲಾದ ವೈದ್ಯಶಾಲೆಯನ್ನು ಫಿಲಡೆಲ್ಫಿಯದಲ್ಲಿ ಸ್ಥಾಪಿಸಬೇಕೆಂಬ ಆಸೆಯಿಂದ ಮಾರ್ಗನ್ ಹಿಂತಿರುಗಿದನು. ಕೂಡಲೇ ೧೭೬೫ರಲ್ಲಿ, ವೈದ್ಯಶಾಲೆಯೊಂದನ್ನು ಸ್ಥಾಪಿಸಿ ಅದರ ವೈದ್ಯಶಾಸ್ತ್ರ ಶಾಖೆಯ ಪ್ರಾಧ್ಯಾಪಕನಾಗಿ ನೇಮಕವಾದನು. ಇದು ಉತ್ತರ ಅಮೆರಿಕದ ಮೊದಲನೆಯ ಹುದ್ದೆ. ಕೆಲವು ತಿಂಗಳುಗಳ ನಂತರ ಕಿರಿಯ ವಿಲಿಯಂ ಷಿಪ್ಪೆನ್ ಅಂಗರಚನೆಶಾಸ್ತ್ರದ ಹಾಗೂ ಶಸ್ತ್ರವೈದ್ಯದ ಪ್ರಾಧ್ಯಾಪಕನಾಗಿಯೂ, ೧೭೬೯ರಲ್ಲಿ ಬೆಂಜಮಿನ್ ರಷ್ ರಸಾಯನಶಾಸ್ತ್ರದ ಪ್ರಾಧ್ಯಾಪಕನಾಗಿಯೂ ನೇಮಕವಾದರು.

ಫಿಲಡೆಲ್ಫಿಯದ ವೈದ್ಯಶಾಲೆಯ ಪ್ರಾರಂಭೋತ್ಸವದಲ್ಲಿ, ವೈದ್ಯ ವಿದ್ಯಾಭ್ಯಾಸ ಕ್ರಮವನ್ನು ಚರ್ಚಿಸಿ ಹಳೇ ಪದ್ಧತಿಯಾದ ಗುರು ಶಿಷ್ಯತನವನ್ನು ತ್ಯಜಿಸಬೇಕೆಂದೂ ಅದರ ಬದಲು ಲ್ಯಾಟಿನ್, ಗಣಿತ, ಪ್ರಕೃತಿಶಾಸ್ತ್ರ, ಆಧುನಿಕ ಭಾಷೆಯೊಂದನ್ನು ಮೊದಲು ಕಲಿತು, ಅನಂತರ ಅಂಗರಚನೆ, ಔಷಧವಸ್ತುಶಾಸ್ತ್ರ ಮುಂತಾದ ವೈದ್ಯಶಾಸ್ತ್ರಗಳನ್ನು ಕಲಿಯಬೇಕೆಂದೂ ಮಾರ್ಗನ್ ತಿಳಿಸಿದನು, ಅಲ್ಲಿಯ ವರೆವಿಗೆ ರೂಢಿಯಲ್ಲಿದ್ದ ಹಲವು ವೈದ್ಯವಿಭಾಗಗಳ ಒಂದು ವಿಭಾಗದಲ್ಲಿ ಹೆಚ್ಚಿನ ಪರಿಶ್ರಮ ಪಡೆದಿರಬೇಕೆಂದೂ ತಿಳಿಸಿದನು. ೧೭೭೫ರ ಕ್ರಾಂತಿ ಯುದ್ಧ ಪ್ರಾರಂಭವಾದಾಗ ಸೇನೆಯ ಆಸ್ಪತ್ರೆಗಳ ಮುಖ್ಯಾಧಿಕಾರಿಯಾಗಿಯೂ ಅಮೆರಿಕ ಸೈನ್ಯದ ವೈದ್ಯನಾಗಿಯೂ ನೇಮಕವಾಗಿದ್ದು, ಆಗಿನ ರಾಜಕೀಯ ಕಾರಣಗಳಿಂದ ಷಿಪ್ಪೆನ್ ಸಂಗಡ ಜಗಳವಾಡಿ, ೧೭೭೭ರಲ್ಲಿ ಕೆಲಸವನ್ನು ಬಿಟ್ಟನು. ಆಗಿನಿಂದ ಅವನ ಹೆಸರು ಹಿಂದೆ ಬಿದ್ದು ಷಿಪ್ಪೆನ್ ಮುಂದೆ ಸಾಗಿದ್ದನು.

ವಿಲಿಯಂ ಷಿಪ್ಪೆನ್

ವಿಲಿಯಂ ಷಿಪ್ಪೆನ್ (೧೭೩೬–೧೮೦೮) ಮಾರ್ಗನ್ ತರುವಾಯ ಸೈನ್ಯದ ಮುಖ್ಯಾಧಿಪತಿಯಾಗಿದ್ದಾಗ ಮೂರು ವರ್ಷಗಳ ಅನಂತರ ಸೈನಿಕ ನ್ಯಾಯಸ್ಥಾನದ ವಿಚಾರಣೆಗೆ ಗುರಿಯಾಗಿ ಕೆಲಸದಿಂದ ಬಿಡುಗಡೆಯಾಗಿತ್ತು. ಯುದ್ಧ ಮುಗಿದ ನಂತರ ಫಿಲಡೆಲ್ಫಿಯ ವೈದ್ಯಶಾಲೆಯ ಅಂಗರಚನೆಶಾಸ್ತ್ರದ ಪ್ರಾಧ್ಯಾಪಕನಾಗಿ ನೇಮಕವಾದರೂ, ಹೆರಿಗೆ ವೈದ್ಯದಲ್ಲಿ ಆಸಕ್ತಿ ಇದ್ದುದರಿಂದ ಅದರಲ್ಲಿ ವಿದ್ಯಾರ್ಥಿಗಳನ್ನು ತರಬೇತು ಮಾಡುತ್ತಿದ್ದನು. ಮಾರ್ಗನ್ ಮತ್ತು ಷಿಪ್ಪೆನ್ ಯೂರೋಪಿನಲ್ಲಿ ವ್ಯಾಸಂಗ ಮುಂದುವರಿಸುತ್ತಿದ್ದಾಗ, ಫಾದರ್ಗಿಲ್‌ನ ಸ್ನೇಹ ಬೆಳೆದು ಅವನ ಪ್ರಭಾವದಿಂದ ಈ ಹೊಸ ವೈದ್ಯಶಾಲೆಯಲ್ಲಿ ಇಬ್ಬರಿಗೂ ಉದ್ಯೋಗ ಲಭಿಸಿತು.

ಬೆಂಜಮಿನ್ ರಷ್

ಬೆಂಜಮಿನ್ ರಷ್ (೧೭೪೫–೧೮೧೩) ಮತ್ತೊಬ್ಬ ಫಿಲಡೆಲ್ಫಿಯ ವಿದ್ಯಾರ್ಥಿ,

ಫಾದರ್ಗಿಲ್ ಸಹಾಯದಿಂದ ಲಂಡನ್ ಮತ್ತು ಎಡಿನ್ಬರೊಗಳಲ್ಲಿ ವ್ಯಾಸಂಗ ಮಾಡಿ, ಅನಂತರ ಮಾರ್ಗನ್ನಿನ ಸ್ಥಾನವನ್ನು ಪಡೆದನು. ಸುಮಾರು ೪೪ ವರ್ಷ ವೈದ್ಯಶಾಸ್ತ್ರ ಪ್ರಾಧ್ಯಾಪಕನಾಗಿದ್ದು 'ಅಮೆರಿಕದ ಸಿಡನ್‌ಹ್ಯಾಮ್' ಎಂದು ಹೆಸರನ್ನು ಪಡೆದಿದ್ದನು. ಇವನ ಕೈಕೆಳಗೆ ಕಲಿತ ಅನೇಕ ಮಂದಿ ವೈದ್ಯರು ಇವನ ಹೆಸರನ್ನು ದೂರ ದೇಶಗಳಿಗೆ ಕೊಂಡುಹೋಗಿ ಇವನ ಕೀರ್ತಿಯನ್ನು ಕೊಂಡಾಡಿದ್ದರು. ಇವನು ಸತ್ತ ೩೦ ವರ್ಷಗಳನಂತರ ಚಿಕಾಗೊ ಪಟ್ಟಣದಲ್ಲಿ ಇವನ ಜ್ಞಾಪಕಾರ್ಥವಾಗಿ ವೈದ್ಯಶಾಲೆಯೊಂದನ್ನು ತೆರೆದು ಗೌರವ ಸಲ್ಲಿಸಿದರು.

ಎಡಿನ್ಬರೋನಲ್ಲಿ ರಷ್ ಎಂ. ಡಿ. ಪದವಿಯನ್ನು ಪಡೆಯಲು ಬರೆದ ಲೇಖನದಲ್ಲಿ ಜಠರದಲ್ಲಾಗುವ ಪಚನ ಕ್ರಿಯೆಯನ್ನು ವಿವರಿಸಿದನು. ಇವನ 'ವೈದ್ಯಕ ತನಿಖೆಗಳು ಮತ್ತು ಕಣ್ಣಾರಿಕೆಗಳು' ಪುಸ್ತಕದಲ್ಲಿ ರೋಗಗಳ ಚಿಕಿತ್ಸೆಯ ಕ್ರಮಗಳ ವಿವರ ಅಷ್ಟು ಉತ್ತಮವಾಗಿಲ್ಲದಿದ್ದರೂ, ರೋಗಗಳ ಗುಣ ದೋಷಗಳ ವಿವರ ಚೆನ್ನಾಗಿತ್ತು.



ಬೆಂಜಮಿನ್ ರಷ್

ಅದರಲ್ಲಿ ಹಳದಿ ಜ್ವರ ಸ್ಥಳೀಯವಾಗಿಯೇ ಹುಟ್ಟುತ್ತದೆಂದೂ, ಸಾಂಕ್ರಾಮಿಕವಾಗಿ ಹಬ್ಬುವುದಿಲ್ಲವೆಂದೂ, ಶೋಬೆ, ಹೆಕಲಿ (ನಾಯಿ ಹುಚ್ಚು), ಶ್ವಾಸಕೋಶ ಕ್ಷಯ, ಕಾಲರ ಮತ್ತು ಡೆಂಗೆ ರೋಗಗಳನ್ನು ವಿವರಿಸಿದ್ದನು. ಹುಳುಕಲ್ಲುಗಳನ್ನು ಕೀಳುವುದರಿಂದ ಅನೇಕ ರೋಗಗಳು ಗುಣವಾಗುತ್ತವೆಂದೂ, ಹಲ್ಲಿನ ಮೇಲ್ಮುದಿಯ ಸೋಂಕಿಗೂ ಸಂಧಿವಾತಕ್ಕೂ ಇರುವ ಸಂಬಂಧವನ್ನು ವಿವರಿಸಿ, ರೋಗೋತ್ಪತ್ತಿಗೆ ಕಾರಣವಾದ ಎಡೆಗೂರಿದ ಸೋಂಕಿನ ಪ್ರಾಮುಖ್ಯತೆಯನ್ನು ಮೊಟ್ಟಮೊದಲಿಗೆ ತಿಳಿಸಿದನು, ೧೮೧೨ರಲ್ಲಿ ರಷ್ ಸಾಯುವುದಕ್ಕೆ ೧ ವರ್ಷ ಮುಂಚಿತವಾಗಿ ಪ್ರಕಟವಾದ

'ಮನಸ್ಸಿನ ರೋಗಗಳ ಮೇಲಿನ ವೈದ್ಯ ತನಿಖೆಗಳು ಮತ್ತು ಕಣ್ಣರಿಕೆಗಳು' ಎಂಬ ಅತ್ಯುತ್ತಮ ಗ್ರಂಥದಲ್ಲಿ ಅನುವಂಶೀಯತೆ, ಮಿದುಳಿನ ವಿಕಾರ ರಚನೆ ಮತ್ತು ಮದ್ದು ಮುಂತಾದ ಅಂಶಗಳಿಗೂ ಮನೋರೋಗಗಳಿಗೂ ಇರುವ ಸಂಬಂಧವನ್ನು ವಿವರಿಸಿದನು. ಇದು ಅಮೆರಿಕದಲ್ಲಿ ಬರೆದ ಮನೋರೋಗದ ಮೊದಲನೆಯ ಪುಸ್ತಕ. ೭೦ ವರ್ಷಗಳ ಕಾಲ ಪಠ್ಯ ಪುಸ್ತಕವಾಗಿತ್ತು. ಇದರ ಪರಿಣಾಮವಾಗಿ ಅಮೆರಿಕದ ಮೊದಲನೆಯ ಮನೋವ್ಯಾಧಿ ಚಿಕಿತ್ಸಕನೆಂದು ರಷ್ ಹೆಸರು ಪಡೆದನು. ಇವನು ರಾಜಕೀಯದಲ್ಲೂ ಕೈ ಹಾಕಿ, ೧೭೭೬ರಲ್ಲಿ ಸ್ವಾತಂತ್ರ್ಯ ಘೋಷಣೆಗೆ ರುಜು ಹಾಕಿ, ಅದೇ ಸಮಯದಲ್ಲಿ ಶಿಕ್ಷೆಗಳನ್ನು ಬಹಿರಂಗವಾಗಿ ಕೊಡುತ್ತಿದ್ದ ಪದ್ಧತಿಯನ್ನು ವಿರೋಧಿಸಿ, ಅದನ್ನು ರದ್ದು ಪಡಿಸಲು ಸರ್ವಸ್ವವನ್ನೂ ತ್ಯಾಗ ಮಾಡಿದ್ದನು. ಇವನಲ್ಲಿ ಚಿಕ್ಕವರು ದೊಡ್ಡವರು ಎನ್ನುವ ಭೇದ ಭಾವವೇ ಇರಲಿಲ್ಲ. ಫಿಲಿಪ್ ಸಿಂಗ್ ಫಿಸಿಕ್ (೧೭೬೮–೧೮೩೭) ಚಿಕ್ಕವನಾಗಿದ್ದರೂ, ಅವನ ಉಪನ್ಯಾಸಗಳನ್ನು ಕೇಳಿ ಚಪ್ಪಾಳೆ ಹೊಡೆದು ಉತ್ತೇಜನ ಕೊಟ್ಟಿದ್ದನು.



ಬೆಂಜಮಿನ್ ರಷ್ ಶಾಂತಗೊಳಿಸಲು ಉಪಯೋಗಿಸುತ್ತಿದ್ದ ಕುರ್ಚಿ

ಫಿಲಿಪ್ ಸಿಂಗ್ ಫಿಸಿಕ್

ಫಿಸಿಕ್ ಎಡಿನ್ಬರೊ ಎಂ. ಡಿ. ಪದವಿಯನ್ನು ೧೭೯೨ರಲ್ಲಿ ಪಡೆದು ತನ್ನ ಸ್ವಂತ ಸ್ಥಳಕ್ಕೆ ಹಿಂತಿರುಗಿದ ಮೇಲೆ, ೧೭೯೩ರಲ್ಲಿ ಸಾಂಕ್ರಾಮಿಕವಾಗಿ ಹರಡುತ್ತಿದ್ದ ಹಳದಿ ಜ್ವರದ ರೋಗಿಗಳನ್ನು ಉಪಚರಿಸುತ್ತಿದ್ದುದಲ್ಲದೆ, ಅದರಿಂದ ಸತ್ತವರ ಶವ ಪರೀಕ್ಷೆ ನಡೆಸಿ ರೋಗದ ಪರಿಚಯ ಹೊಂದುತ್ತಿದ್ದನು. ಶಸ್ತ್ರಕ್ರಿಯೆ ಮಾಡಲು ಅವನಿಗೆ ಅತಿ ಪ್ರೇಮ. ಕೃಷ್ಣಾಜಿನದ ಹೊಲಿಗೆ ದಾರವನ್ನೂ, ಗಂಟಲಿನ ಗಡ್ಡೆ ತೆಗೆಯುವ ಶಸ್ತ್ರವನ್ನೂ, ಕೃತಕ ಆಸನ ನಿರ್ಮಿಸುವ ಶಸ್ತ್ರಕ್ರಿಯೆಯನ್ನೂ ವಿವರಿಸಿದನು. ವಿಷವನ್ನು ಸೇವಿಸಿದ ರೋಗಿಗಳ ಜಠರದಿಂದ ವಿಷವನ್ನು ತೆಗೆಯಲು ನಳಿಕೆಯನ್ನು ಉಪಯೋಗಿಸಿದವರಲ್ಲಿ ಇವನೇ ಮೊದಲನೆಯವನು.

ಸ್ಯಾಮ್ಯುಯಲ್ ಬಾರ್ಡ್

ಫಿಲಡೆಲ್ಫಿಯದಲ್ಲಿ ಮೊದಲನೇ ವೈದ್ಯಶಾಲೆ ಪ್ರಾರಂಭವಾದ ೩ ವರ್ಷಗಳ ನಂತರ, ಅಮೆರಿಕದ ಎರಡನೆಯ ವೈದ್ಯಶಾಲೆ ನ್ಯೂಯಾರ್ಕ್ ರಾಜ ವಿದ್ಯಾಶಾಲೆಯಲ್ಲಿ ೧೭೬೮ರಲ್ಲಿ ಪ್ರಾರಂಭವಾಯಿತು. ವೈದ್ಯಶಾಲೆಯ ವೈದ್ಯರ ಪೈಕಿ ಸ್ಯಾಮ್ಯುಯಲ್ ಬಾರ್ಡ್ (೧೭೪೨–೧೮೨೧) ಪ್ರಾಧ್ಯಾಪಕನಾಗಿದ್ದು, ಕ್ರಾಂತಿ ಮುಗಿದ ನಂತರ ಕೊಲಂಬಿಯ ವೈದ್ಯಶಾಲೆ ಎಂಬ ಹೆಸರಿನಲ್ಲಿ ಸ್ವಲ್ಪ ಕಾಲವಿದ್ದು, ಅನಂತರ, ೧೮೦೭ರಲ್ಲಿ ವೈದ್ಯರ ಹಾಗೂ ಶಸ್ತ್ರವೈದ್ಯರ ವೈದ್ಯಶಾಲೆಯಾಗಿ ಬದಲಾದನಂತರವೂ ಅಲ್ಲೇ ಕೆಲಸ ಮಾಡಿ ಅನೇಕ ಲೇಖನಗಳನ್ನು ಬರೆದನು. ಇವುಗಳ ಪೈಕಿ ಗಂಟಲ ಮಾರಿ ರೋಗದ ವಿವರ ಅತಿ ಉತ್ಕೃಷ್ಟವಾಗಿತ್ತು.

ಹೊಸಾಕ್ ಮತ್ತು ಮಾಟ್

ಇದೇ ಶಾಲೆಯಲ್ಲಿ ಡೆವಿಡ್ ಹೊಸಾಕ್ (೧೭೬೯–೧೮೩೫) ವೈದ್ಯನಾಗೂ, ವೆಲೆಂಟೈನ್ ಮಾಟ್ (೧೭೮೫–೧೮೬೫) ಶಸ್ತ್ರವೈದ್ಯನಾಗಿಯೂ ಕೆಲಸಮಾಡಿ ಕೀರ್ತಿ ಗಳಿಸಿದರು. ಹೊಸಾಕ್ ಲಂಡನ್ನಿನಲ್ಲಿದ್ದಾಗ 'ನೋಟದ ಕಣ್ಣರಿಕೆಗಳು' ಎಂಬುದನ್ನು ಕುರಿತು ರಾಜ ಸಂಘದಲ್ಲಿ ಉಪನ್ಯಾಸ ಮಾಡಿದನು. ಕೂಡಲೆ ಇವನ ಹೆಸರು ಅಟ್ಲಾಂಟಿಕ್ ಸಾಗರದ ಎರಡು ತೀರಗಳಲ್ಲೂ ಪ್ರಸಿದ್ಧಿಯಾಗಿ, ಅಮೆರಿಕಾಕ್ಕೆ ಹಿಂತಿರುಗಿದ ಮೇಲೆ ತೊಡೆ ಧಮನಿಯನ್ನು ಬಿಗಿಯುವುದರಲ್ಲಿ ಅಮೆರಿಕದ ಮೊಟ್ಟಮೊದಲನೇ ಶಸ್ತ್ರವೈದ್ಯನಾದನು ವೆಲೆಂಟೈನ್ ಮಾಟ್ ೫೦ ವರ್ಷಗಳು ಅಮೆರಿಕದ ಶಸ್ತ್ರವೈದ್ಯಕ್ಕೆ ಸೇವೆ ಸಲ್ಲಿಸಿ,ಅಮೆರಿಕದಲ್ಲಿ ಅಲ್ಲಿನ ತನಕ ಯಾರೂ ಮಾಡದಿದ್ದ ಅನಾಮಿಕ ಧಮನಿಯ ಬಂಧನವನ್ನು ೧೮೧೮ರಲ್ಲಿ ನಡೆಸಿದನು. ಇದರಿಂದ ಅವನ ಖ್ಯಾತಿ ಹೆಚ್ಚಿ ಇನ್ನೂ ಮುಖ್ಯವಾದ ಶಸ್ತ್ರಕ್ರಿಯೆಗಳನ್ನು ನಡೆಸಲು ಹೆಚ್ಚಿನ ಅನುಕೂಲ ದೊರಕಿತು. ದವಡೆ ಮೂಳೆಯ ತೆಗೆತ,ಕೊರಳೆಲುಬಿನ ಛೇದನ, ಸಾಮಾನ್ಯ ಟೊಂಕದ ಧಮನಿಯ ಬಂಧನ ಇತ್ಯಾದಿಗಳೇ ಮುಖ್ಯಕ್ರಿಯೆಗಳಾಗಿದ್ದವು. 'ಅಗಲುಬ್ಬುಗಳನ್ನು ಗುಣಪಡಿಸಲು ಬದುಕಿರುವ ಇಲ್ಲವೇ ಸತ್ತ ಯಾವ ಶಸ್ತ್ರವೈದ್ಯನೇ ಆಗಲಿ ಅಷ್ಟೊಂದು ರಕ್ತನಾಳಗಳನ್ನು ಬಿಗಿಸಿದ್ದೇ ಆಗಲಿ, ಅಷ್ಟು ಯಶಸ್ವಿಯಾಗಾಗಲಿ ಮಾಡಿರಲಾರ' ಎಂದು ಸ್ಯಾಮ್ಯುಯಲ್ ಡಿ ಗ್ರಾಸ್ ಬರೆದಿದ್ದಾನೆ.

ಅತ್ತಕಡೆ, ಅಮೆರಿಕಾಕ್ಕೆ ಪುರಾತನ ವಿದ್ಯಾಶಾಲೆಯಾಗಿದ್ದ, ಹಾರ್ವಾರ್ಡ್ ಶಾಲೆ ಪ್ರಾರಂಭವಾದ ೫೦ ವರ್ಷಗಳ ಅನಂತರ ವೈದ್ಯಶಾಲೆಯೊಂದು ಅದಕ್ಕೆ ಸೇರಿದಂತೆ ಪ್ರಾರಂಭವಾಯಿತು. ಇದು ಹಾರ್ವಾರ್ಡ್ ವಿಶ್ವವಿದ್ಯಾಲಯದ ಅಂಗವಾಗಿ ೧೭೮೩ರಲ್ಲಿ ಸೇರಿ, ಡಾ. ವಾರೆನ್ ಶಸ್ತ್ರವೈದ್ಯ ಪ್ರಾಧ್ಯಾಪಕನಾಗಿಯೂ, ಡಾ.ವಾಟರ್ ಹೌಸ್ ವೈದ್ಯಪ್ರಾಧ್ಯಾಪಕನಾಗಿಯೂ ಡಾ. ಡೆಕ್ಸ್‌ಟರ್ ರಸಾಯನಶಾಸ್ತ್ರದ ಪ್ರಾಧ್ಯಾಪಕನಾಗಿಯೂ ನೇಮಕ ಮಾಡಿಕೊಂಡಿತ್ತು.

ವಾಟರ್‌ಹೌಸ್

ವಾಟರ್‌ಹೌಸ್ ತನ್ನ ೫ ವರ್ಷದ ಕುಮಾರ ಡೇನಿಯಲ್‌ಗೆ ಅಮೇರಿಕದಲ್ಲೇ ಮೊಟ್ಟಮೊದಲಿಗೆ ಸಿಡುಬು ತಡೆಯಲು ದೇವಿ ಹಾಕಿಸಿದನು. ಅಲ್ಲದೆ ಎಲ್ಲರೂ ದೇವಿ ಹಾಕಿಸಿಕೊಳ್ಳಬೇಕೆಂದು ಉಪದೇಶ ಮಾಡಿದನು. ಅಧ್ಯಕ್ಷ ಥಾಮಸ್ ಜೆಫರ್‌ಸನ್‌ಗೆ ಸಿಡುಬಿನ ಲಸಿಕೆಯನ್ನು ಕಳುಹಿಸಿ ಅವನ ಮನೆಯವರಿಗೆಲ್ಲಾ ದೇವಿ ಹಾಕಿಸಿದನು. ಇದೇ ರೀತಿ ಲಸಿಕೆಯನ್ನು ವಾಷಿಂಗ್ಟನ್, ಫಿಲಡೆಲ್ಫಿಯ, ನ್ಯೂ ಯಾರ್ಕ್ ಪಟ್ಟಣಗಳಿಗೂ ಕಳುಹಿಸಿ ದೇವಿಹಾಕಣೆಯ ಉಪಯೋಗವನ್ನು ಸ್ಥಿರಪಡಿಸಿದ್ದನು. ಇವುಗಳ ಮೆಚ್ಚಿಗೆಯನ್ನು ಸ್ವೀಕರಿಸಿದನು. ಇದಕ್ಕಾಗಿ ಅವನನ್ನು 'ಅಮೆರಿಕದ ಜೆನ್ನರ್' ಎಂದು ನಾಮಕರಣ ಮಾಡಿದ್ದರು.

ಜೇಮ್ಸ್ ಜಾಕ್ಸನ್

ಇವರಲ್ಲದೆ ೧೯ನೇ ಶತಮಾನದ ಮೊದಲ ೫೦ ವರ್ಷಗಳಲ್ಲಿ ವಾಟರ್‌ಹೌಸ್ ತರುವಾಯ ಬಂದ ವೈದ್ಯದ ಪ್ರಾಧ್ಯಾಪಕ ಜೇಮ್ಸ್ ಜಾಕ್ಸನ್ (೧೭೭೭–೧೮೬೭) ಹಾಗೂ ಶಸ್ತ್ರವೈದ್ಯದ ಪ್ರಾಧ್ಯಾಪಕ ಜಾನ್ ಕಾಲಿನ್ಸ್ ವಾರೆನ್ (೧೭೭೮–೧೮೫೬) ಹಾರ್ವರ್ಡ್ ವೈದ್ಯಶಾಲೆಯ ಏಳಿಗೆಗೆ ಸಾಕಷ್ಟು ತ್ಯಾಗ ಮಾಡಿದ್ದರು. ಬಹಳ ಜನರ ಮೆಚ್ಚಿಗೆಗೊಳಗಾಗಿದ್ದ 'ಯುವಕ ವೈದ್ಯನಿಗೆ ಪತ್ರಗಳು,೧೮೫೫' ಎಂಬ ಪುಸ್ತಕವನ್ನು ಜಾಕ್ಸನ್ ಬರೆದಿದ್ದಲ್ಲದೆ ದೇವಿಹಾಕಣೆಯ ಚಳುವಳಿಯಲ್ಲೂ ಹೆಚ್ಚಿನ ಭಾಗವಹಿಸಿದನು. 'ಗುಂಡಿಗೆಯ ಅಂಗಕ್ಕಂಟಿದ ರೋಗಗಳ ರೋಗಿಗಳು' ಎಂಬ ಪುಸ್ತಕವನ್ನು ಜಾನ್ ವಾರೆನ್ ೧೮೦೯ರಲ್ಲಿ ಪ್ರಕಟಿಸಿದ್ದಲ್ಲದೆ, 'ನ್ಯೂ ಇಂಗ್ಲೆಂಡಿನ ವೈದ್ಯಶಾಸ್ತ್ರ ಮತ್ತು ಶಸ್ತ್ರವೈದ್ಯ ಪತ್ರಿಕೆ'ಯ ಹಾಗೂ ಮೆಸ್ಸಚೂಸೆಟ್ಸಿನ ಸಾಮಾನ್ಯ ಆಸ್ಪತ್ರೆಯ ಸ್ಥಾಪನೆಗೂ ಆಸಕ್ತಿ ವಹಿಸಿ ಕೆಲಸ ಮಾಡಿದನು.

ಅಮೆರಿಕದ ಮಧ್ಯ ಪ್ರದೇಶಕ್ಕೆ ವೈದ್ಯಶಾಸ್ತ್ರದ ಪ್ರವೇಶ

ಅಮೆರಿಕದ ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಕುಶಲ ವಿದ್ಯೆಗಳು ಮೊದಲಿಗೆ ಅಟ್ಲಾಂಟಿಕ್ ಸಾಗರದ ತೀರ ಪ್ರದೇಶದಲ್ಲಿ ಮಾತ್ರ ನೆಲೆಸಿ, ೧೮ನೇ ಶತಮಾನದಲ್ಲಿ ಅಮೆರಿಕದ ಮಧ್ಯ ಪ್ರದೇಶಕ್ಕೆ ಪಸರಿಸಲು ಪ್ರಾರಂಭವಾಯಿತು. ವೈದ್ಯಶಾಸ್ತ್ರವೂ ಇತರ ವಿದ್ಯೆಗಳಂತೆ ಮಧ್ಯ ಪ್ರದೇಶಕ್ಕೆ ಸಾಗಿ ಅಮೆರಿಕದ ಚರಿತ್ರೆ ಸುಗಮವಾಗಿ ಬೆಳೆಯಲು ಕಾರಣವಾಗಿತ್ತು. ಎಫ್ರೈಯ್ಮ್ ಮೆಕ್ಡೊವೆಲ್ (೧೭೭೧–೧೮೩೦) ಬೆಂಜಮಿನ್ ಡಡ್ಲಿ (೧೭೮೫–೧೮೭೦) ಮತ್ತು ಡೇನಿಯಲ್ ಡ್ರೇಕ್ (೧೭೮೫–೧೮೫೨) ಮುಂತಾದವರು ಈ ಅಭಿವೃದ್ಧಿಗೆ ಕಾರಣರು.

ಎಫ್ರಾಯಿಮ್ ಮೆಕ್ಡೊವೆಲ್

ಮೆಕ್ಡೊವೆಲ್ ಎಡಿನ್ಬರೋನಲ್ಲಿ ವ್ಯಾಸಂಗ ಮಾಡಿದ್ದರೂ ಪದವಿ ಪಡೆದಿರಲಿಲ್ಲ.

೧೭೯೫ರಲ್ಲಿ ಡಾನ್ವಿಲ್ಲೆಗೆ ಹಿಂತಿರುಗಿ ನೂರಾರು ಮೈಲಿ ದೂರದ ಸುತ್ತಲಿನ ಪ್ರದೇಶದ ಜನರಿಗೆ ವೈದ್ಯ ಸೌಲಭ್ಯವನ್ನು ಕಲ್ಪಿಸಿದನು. ಆಗಿನ ಕಾಲದಲ್ಲಿ ರಸ್ತೆಗಳಾಗಲೀ ಗಾಡಿಗಳಾಗಲೀ ಇಲ್ಲದಿದ್ದರಿಂದ ಕುದುರೆ ಮೇಲೆ ಪ್ರಯಾಣಮಾಡಿ ಔಷಧೋಪಚಾರ ಗಳನ್ನು ನೀಡುತ್ತಿದ್ದನು. ಶಸ್ತ್ರಕ್ರಿಯೆ ನಡೆಸಲು ಮರದಿಂದ ಕಟ್ಟಿದ್ದ ಕೊಟಡಿಗಳಲ್ಲದೆ ಬೇರೆ ಜಾಗವಿರಲಿಲ್ಲ. ೧೮೦೯ರಲ್ಲಿ ಶ್ರೀಮತಿ ಜೇನ್ ಕ್ರಾಫೊರ್ಡ್‌ನ ಗರ್ಭದಂತಿದ್ದ ಇಪ್ಪತ್ತೆರಡೂವರೆ ಪೌಂಡ್ ತೂಕದ ಅಂಡಾಶಯದ ಗಡ್ಡೆಯನ್ನು ಕೇವಲ ೨೫ ನಿಮಿಷ ಗಳಲ್ಲಿ ಅರಿವಳಿಕೆಯೇ ಇಲ್ಲದೆ ಶಸ್ತ್ರಕ್ರಿಯೆ ನಡೆಸಿ ಕೀರ್ತಿ ಪಡೆದನು. ರೋಗಿಗೆ ಯಾವ ತೊಂದರೆಯೂ ಇಲ್ಲದೆ ಗುಣವಾಯಿತು. ಶ್ರೀಮತಿ ಜೇನಳು ಶಸ್ತ್ರಕ್ರಿಯೆ ಆದ ಮೇಲೂ ೩೩ ವರ್ಷ ಬದುಕಿದ್ದು ತನ್ನ ೭೮ನೇ ವಯಸ್ಸಿನಲ್ಲಿ ಸತ್ತಳು. ಈ ರೋಗದ ವಿಷಯ ಕುರಿತು ಬರೆದಿದ್ದ ಮೆಕ್ಡೊವೆಲ್ಲಿನ ಲೇಖನ ಬಹಳ ಆಶ್ಚರ್ಯಕರವಾಗಿತ್ತು. ಇದರ ನಂತರ ಇದೇ ರೀತಿಯ ಇನ್ನೆರಡು ಶಸ್ತ್ರಕ್ರಿಯೆಗಳನ್ನೂ ಅವನೇ ನಡೆಸಿದ ಮೇಲೆ, ಎಡಿನ್ಬರೊ, ಲಂಡನ್ ಮತ್ತು ಗ್ಲಾಸ್ಗೊ ಪಟ್ಟಣಗಳ ವೈದ್ಯರು ಅನುಕ್ರಮವಾಗಿ ಈ ಶಸ್ತ್ರಕ್ರಿಯೆಯನ್ನು ಆಚರಣೆಗೆ ತಂದರು. ಮೆಕ್ಡೊವೆಲ್ ಒಟ್ಟು ೮ ಅಂಡಾಶಯದ ಗಡ್ಡೆಗಳ ಮೇಲೆ ಶಸ್ತ್ರಕ್ರಿಯೆಗಳನ್ನು ನಡೆಸಿದನು. ಇದರಿಂದ ಅವನನ್ನು 'ಅಂಡಾಶಯ ಛೇದನೆಯ ತಂದೆ' ಎಂದು ಸ್ಪೆನ್ಸರ್ ವೆಲ್ಸ್ ನಾಮಕರಣ ಮಾಡಿದ್ದನು. ಮೂತ್ರ ಗಲ್ಲು ಕೊಯ್ತೆಗೆವ ಶಸ್ತ್ರಕ್ರಿಯೆಯಲ್ಲೂ ಹೆಚ್ಚು ಸಾವುಗಳಿಲ್ಲದೆ ಜಯ ಗಳಿಸಿದ್ದನು.

ಬೆಂಜಮಿನ್ ಡಡ್ಲಿ

ಮೆಕ್ಡೊವೆಲ್ಲಿಗಿಂತಲೂ ಉತ್ತಮನಾಗಿದ್ದ ಕೆಂಟಕಿ ಶಸ್ತ್ರವೈದ್ಯ ಬೆಂಜಮಿನ್ ವಿನ್‌ಸ್ಲೊ ಡಡ್ಲಿ (೧೭೮೫–೧೮೭೦) ಬಡವನಾಗಿದ್ದುದರಿಂದ ವ್ಯಾಪಾರದಿಂದ ಹಣ ಸಂಪಾದಿಸುವ ವರೆವಿಗೂ ವ್ಯಾಸಂಗ ಪಡೆಯಲು ಯೂರೋಪಿಗೆ ಹೋಗುವುದಕ್ಕಾಗ ಲಿಲ್ಲ. ಲಂಡನ್ನಿನಲ್ಲಿ ಕೂಪರ್ ಕೈಕೆಳಗೂ, ಪ್ಯಾರಿಸ್ಸಿನಲ್ಲಿ ಲ್ಯಾರಿ ಕೈಕೆಳಗೂ ಕೆಲಸ ಕಲಿತು ಲೆಕ್ಸಿಂಗ್‌ಟನ್ನಿಗೆ ಬಂದು ವೈದ್ಯವೃತ್ತಿಯಲ್ಲಿದ್ದನು. ಶಸ್ತ್ರಕ್ರಿಯೆ ನಡೆಸುವಾಗ ಬಿಸಿನೀರನ್ನು ಬಳಸುವುದರಿಂದಾಗುವ ಪ್ರಯೋಜನಗಳನ್ನು ಅರಿತಿದ್ದನು. ಒತ್ತಡಕ್ಕೆ ಈಡಾಗಿದ್ದ ಮಿದುಳಿನ ಅಪಸ್ಮಾರವನ್ನು ತಡೆಯಲು, ರೋಗಿಯ ತಲೆಚಿಪ್ಪನ್ನು ಕೊರೆ ದಾಗ, ತಲೆಯೊಳಗಿನ ಒತ್ತಡ ತಗ್ಗುವುದನ್ನು ೧೮೨೮ರಲ್ಲಿ ಮೊಟ್ಟಮೊದಲಿಗೆ ತೋರಿ ಸಿದ್ದನು. ಫಿಲಡೆಲ್ಫಿಯ, ನ್ಯೂ ಯಾರ್ಕ್, ಬಾಸ್ಟನ್, ಬಾಲ್ಟಿಮೋರ್ ವೈದ್ಯಶಾಲೆ ಗಳಿಗೆ ಸಮಾನವಾಗಿದ್ದ ಲೆಕ್ಸಿಂಗ್‌ಟನ್ನಿನ ಟ್ರಾನ್ಸಿಲ್ವೇನಿಯ ವಿಶ್ವವಿದ್ಯಾಲಯದ ವೈದ್ಯಶಾಲೆಯ ಏಳಿಗೆಗೆ ಇವನೇ ಕಾರಣಕರ್ತೃವಾಗಿದ್ದನು.

ಡೇನಿಯಲ್ ಡ್ರೇಕ್

ಈ ವೈದ್ಯಶಾಲೆಯ ಔಷಧ ವೈದ್ಯಶಾಖೆಯ ಮುಖ್ಯಸ್ಥನಾಗಿ ಡೇನಿಯಲ್ ಡ್ರೇಕ್ (೧೭೮೫–೧೮೫೨) ಮೆಕ್ಡೊವೆಲ್ಲನ ಪ್ರಭಾವದಿಂದ ನೇಮಕವಾದನು. ಡ್ರೇಕ್ ಬಡವ

ರಲ್ಲಿ ಬಡವನಾಗಿದ್ದುದರಿಂದ ಹೊರ ದೇಶಗಳಿಗೆ ವ್ಯಾಸಂಗ ಮಾಡಲು ಹೋಗದಿದ್ದರೂ ತನ್ನ ಸ್ವಂತ ಸಾಮರ್ಥ್ಯದಿಂದಲೇ ಉತ್ತಮ ವೈದ್ಯ ಹಾಗೂ ಉತ್ತಮ ಅಧ್ಯಾಪಕ ನಾಗಿದ್ದನು. ಇವನು ಅನೇಕ ವೈದ್ಯಶಾಲೆಗಳನ್ನು ಸ್ಥಾಪಿಸಿದ್ದಲ್ಲದೆ, ೬ ವೈದ್ಯಶಾಲೆ ಗಳಲ್ಲಿ ೧೧ ಬೇರೆ ಬೇರೆ ವೈದ್ಯಶಾಖೆಗಳಿಗೆ ಮುಖ್ಯಸ್ಥನಾಗಿದ್ದನು. ಟ್ರಾನ್ಸಿಲ್ವೇನಿಯಾ ಸಿನ್ಸಿನ್ನಾಟಿ, ಒಹಾಯೊ, ಫಿಲಡೆಲ್ಫಿಯ ವಿದ್ಯಾಲಯಗಳಲ್ಲಿ ಕೆಲಸ ಮಾಡಿ ಸಾಕಷ್ಟು ಕೊಡುಗೆ ನೀಡಿದನು. 'ಡಾ. ಡ್ರೇಕ್ ಒಬ್ಬ ಮಹಾ ಉಪನ್ಯಾಸಕನಾಗಿದ್ದ. ಅಲ್ಲದೆ ಅಪೂರ್ವ ಶಕ್ತಿಯ ಲೇಖಣಿಯನ್ನೂ ಹಿಡಿದಿದ್ದನು' ಎಂದು ಅವನ ಸ್ನೇಹಿತ ಗ್ರಾಸ್ ಅಭಿನಂದಿಸಿದ್ದನು. 'ಉತ್ತರ ಅಮೆರಿಕದ ಒಳಗಣ ಕಣಿವೆಯ ರೋಗಗಳು' ಎಂಬ ಪುಸ್ತಕದಲ್ಲಿ ಬರೆದಿದ್ದ ಮಿಸ್ಸಿಸ್ಸಿಪ್ಪಿ ಕಣಿವೆಯ ಪ್ರಕೃತಿ, ಆಹಾರ, ಕಸಬು, ವಾಸ ಸ್ಥಾನ ಹಾಗೂ ರೋಗಗಳ ವಿವರಗಳೇ ಇದಕ್ಕೆ ಸಾಕ್ಷಿಯಾಗಿತ್ತು.

ವಿಲಿಯಂ ಬ್ಯುಮಾಂಟ್

ಡ್ರೇಕ್ ಮತ್ತು ಡಡ್ಲಿ ಜನಿಸಿದ್ದ ೧೭೮೫ ನೇ ಇಸವಿಯಲ್ಲೇ ವಿಲಿಯಂ ಬ್ಯುಮಾಂಟ್ (೧೭೮೫–೧೮೫೩) ಜನಿಸಿ ಪ್ರಸಿದ್ಧ ಶರೀರ ವಿಜ್ಞಾನದ ಪಂಡಿತನಾಗಿ ದ್ದನು. ಅವನಿಗೆ ಜಠರ ಮತ್ತು ಜಠರ ರಸದ ಗುಣಗಳನ್ನು ಅಭ್ಯಾಸ ಮಾಡಲು ಸುಯೋಗ ಒಂದು ೧೮೧೨ರಲ್ಲಿ ಒದಗಿತ್ತು. ವೈದ್ಯವೃತ್ತಿ ನಡೆಸಲು ೧೮೧೨ನೆ ಜೂನ್ ೨ರಲ್ಲಿ ಅನುಮತಿ ದೊರೆತ ತಿಂಗಳಲ್ಲೇ ಇಂಗ್ಲೆಂಡಿನ ಮೇಲೆ ಅಮೆರಿಕ ಯುದ್ಧ ಹೂಡಲು, ಬ್ಯುಮಾಂಟ್ ಅಮೆರಿಕದ ಸೈನ್ಯ ಸೇರಿ, ಯುದ್ಧದಲ್ಲಿ ತಾನು ಅನುಭವಿಸು ತ್ತಿದ್ದ ವಿಷಯಗಳನ್ನೆಲ್ಲಾ ಬರೆದಿಡಲು ಪ್ರಾರಂಭಿಸಿದ್ದನು. ೧೮೨೨ನೇ ಜೂನ್ ತಿಂಗಳಲ್ಲಿ ಫ್ರೆಂಚ್-ಕೆನಡದ ಅಲೆಕ್ಸಿಸ್ ಸೆಂಟ್ ಮಾರ್ಟಿನ್‌ನಿಗೆ ಅಕಸ್ಮಾತ್ತಾಗಿ ಹೊಟ್ಟೆಗೆ ಗುಂಡಿನೇಟು ಬಿದ್ದು, ಬ್ಯುಮಾಂಟ್ ಚಿಕಿತ್ಸೆ ಕೊಡಬೇಕಾಗಿತ್ತು. ಹೊಟ್ಟೆ ಯಿಂದ ಗುಂಡನ್ನು ತೆಗೆದು, ತನ್ನ ಮನೆಯಲ್ಲೇ ಮಾರ್ಟಿನ್ನನ್ನು ಇಟ್ಟುಕೊಂಡು ಚಿಕಿತ್ಸೆ ನಡೆಸಿದನು. ಗಾಯ ಗುಣವಾಗಲು ಎರಡು ವರ್ಷ ಹಿಡಿಯಿತು. ಆದರೆ ಜಠರ ದಿಂದ ಹೊರಕ್ಕೆ ಕೊಳವೆಯಾಕಾರದ ತೂತೊಂದು ಉಳಿದಿತ್ತು. ಈ ತೂತಿನ ಮೂಲಕ ಜಠರದೊಳಗಿನ ವಿವರಗಳನ್ನೂ, ಆಹಾರ ಜೀರ್ಣವಾಗುವ ಬಗೆಯನ್ನೂ ತಿಳಿದು, ಆಹಾರ ಜೀರ್ಣಿಸುವ ಶಕ್ತಿ ಜಠರ ರಸಕ್ಕಿದೆಯೆಂದು ೧೮೨೬ರಲ್ಲಿ ಪ್ರಕಟಪಡಿಸಿ ದನು. ೧೮೨೫ರಿಂದ ೧೮೩೩ರ ತನಕ ಮಾರ್ಟಿನ್ ಮೇಲೆ ಅನೇಕ ಪ್ರಯೋಗಗಳನ್ನು ನಡೆಸಿ, ವರ್ಜೀನಿಯ ವಿಶ್ವವಿದ್ಯಾಲಯದ ರಸಾಯನ ಪ್ರಾಧ್ಯಾಪಕನಾದ ಸಿಲ್ಲಿಮನ್ ಸಹಾಯ ಪಡೆದು ಹೈಡ್ರೋಕ್ಲೋರಿಕಾಮ್ಲ ಜಠರ ರಸದ ಮುಖ್ಯ ದ್ರವವೆಂದು ತಿಳಿಯ ಪಡಿಸಿದನು. ಈ ಪ್ರಯೋಗಗಳ ಫಲವಾಗಿ ಪ್ರಸಿದ್ಧವಾದ 'ಜಠರ ರಸ ಮತ್ತು ಜೀರ್ಣನೆಯ ಅಂಗಕ್ರಿಯೆಶಾಸ್ತ್ರದಲ್ಲಿ ಪ್ರಯೋಗಗಳು ಮತ್ತು ಕಣ್ಣರಿಕೆಗಳು' ಎಂಬ ಪುಸ್ತಕವನ್ನು ಬ್ಯುಮಾಂಟ್ ೧೮೩೩ರಲ್ಲಿ ಬರೆದು ಪ್ರಕಟಿಸಿದನು. ಇದರಲ್ಲಿ ಜಠರ ರಸದ ಉತ್ಪತ್ತಿಗೂ ಮನಸ್ಸಿನ ಸ್ಥಿತಿಗೂ ಇರುವ ಸಂಬಂಧವನ್ನು ವಿವರಿಸಿದನು.

ಬ್ಯೂಮಾಂಟನ ಜಠರ ಸಂಶೋಧನೆಗಳು ಹಾಗೂ ಮೆಕ್ಡೊವೆಲ್ಲಿನ ಶಸ್ತ್ರಕ್ರಿಯೆಗಳು ಯುರೋಪಿನಲ್ಲೆಲ್ಲಾ ಗಲಿಬಿಲಿ ಮಾಡಿದ್ದವು. ಅಮೆರಿಕದ ಒಳ ಪ್ರದೇಶವಾದ ಕೆಂಟಕಿಯಿಂದ ಹೊರಬಿದ್ದ ಸಂಶೋಧನೆಗಳನ್ನು ಅನೇಕ ವಿಜ್ಞಾನಿಗಳು ನಂಬಿರಲಿಲ್ಲ. ಆದರೆ ಈಥರ್ ಅರಿವಳಿಕೆ ಹೊರಬಿದ್ದ ಕೂಡಲೆ ಅವರೇ ವಿಜ್ಞಾನಿಗಳು ಅಮೆರಿಕದ ಸಾಮರ್ಥ್ಯಕ್ಕೆ ತಮ್ಮ ಮೆಚ್ಚಿಗೆಯನ್ನು ತೋರ್ಪಡಿಸಿದ್ದರು.

ಶಸ್ತ್ರವೈದ್ಯದಲ್ಲಿ ಅರಿವಳಿಕೆ

ವೈದ್ಯ ಪ್ರಪಂಚದಲ್ಲಿ ಅರಿವಳಿಕೆಯಷ್ಟು ಆಶ್ಚರ್ಯಕರ ಸಂಶೋಧನೆ ಬೇರೊಂದಿಲ್ಲವೆಂದು ಅನೇಕರ ಅಭಿಪ್ರಾಯವಿದೆ. ಇದರ ಮೂಲ ಸಂಶೋಧನಕಾರನಾರೆಂಬುದು ಚರ್ಚಾಸ್ಪದವಾದ್ದಾದರೂ, ಸಂಶೋಧನೆ ಅಮೆರಿಕ ವಿಜ್ಞಾನಿಗಳಿಗೆ ಸಲ್ಲಬೇಕಾದುದರಲ್ಲಿ ಯಾವ ಸಂಶಯವೂ ಇಲ್ಲ. ಶಸ್ತ್ರಕ್ರಿಯೆ ನಡೆಸುವಾಗ ನೋವಿಲ್ಲದಂತೆ ಮಾಡುವ ಔಷಧವನ್ನು ಪತ್ತೆಹಚ್ಚಲು ಬಹು ದಿನಗಳಿಂದ ಪರಿಶೋಧನೆ ನಡೆಯುತ್ತಿತ್ತು. ಅರಿವಳಿಕೆ ವಿಷಯವನ್ನು ಪ್ಲೇಟೋ ತನ್ನ ತತ್ತ್ವಶಾಸ್ತ್ರದ ಚರ್ಚೆಯಲ್ಲಿ ಎತ್ತಿದ್ದನೆಂದೂ ಅನಂತರ ಮೊದಲನೇ ಶತಮಾನದಲ್ಲಿ ಡಿಯೊಸ್ಕೊರಿಡಿಸ್ ಎಂಬುವನು ಶಸ್ತ್ರಕ್ರಿಯೆ ನಡೆಸುವಾಗ ನೋವಿಲ್ಲದಂತೆ ಮಾಡಲು ಮಾಂಡ್ರಗೊರದ ಬಳಕೆಯನ್ನು ಸೂಚಿಸಿದ್ದನೆಂದೂ ತಿಳಿದುಬಂದಿದೆ. ಅಂದಿನಿಂದ ಒಂದು ಸಹಸ್ರ ವರ್ಷ ಕಳೆದನಂತರ ಅರೇಬಿಯ ವೈದ್ಯರು ಅರಿವಳಿಸುವ ಮದ್ದನ್ನು ಕಂಡುಹಿಡಿದರೆಂದೂ, ಆಮೇಲೆ ಸಾಲೆರ್ನೊ ವೈದ್ಯಶಾಲೆಯಲ್ಲಿ ಅರಿವಳಿಕೆ ರೂಢಿಗೆ ಬಂದಿತೆಂದೂ ಗೊತ್ತಾಗಿದೆ. ಆದರೂ ಪಾರೆ, ವೈಸ್ಮನ್, ಚೆಸಲ್ಡನ್, ಫಾಬ್ರಿ, ಹಂಟರ್, ಲಾರಿ, ಬೆಲ್, ಕೂಪರ್, ಅಬೆರ್ನತಿ ಹಾಗೂ ಮೆಕ್ಡೊವೆಲ್ ಎಲ್ಲರೂ ನೋವಿಲ್ಲದಂತೆ ಶಸ್ತ್ರಕ್ರಿಯೆ ಮಾಡಲು ಅರಿತಿರಲಿಲ್ಲ. ಇದು ಸದ್ಯಕ್ಕೆ ಅಸಾಧ್ಯವೆಂದು ೧೮೩೯ರಲ್ಲಿ ವೆಲ್ಪಿಯು ಸಂಶಯಪಟ್ಟಿದ್ದನು.

ನೈಟ್ರಸ್ ಆಕ್ಸೈಡ್ ಹಾಗೂ ಈತರ್

೧೭೭೨ರಲ್ಲಿ ಜೋಸೆಫ್ ಪ್ರೀಸ್ಟ್ಲಿ ನೈಟ್ರಸ್ ಆಕ್ಸೈಡ್‌ನ ಉಪಯೋಗವನ್ನು ಕಂಡುಹಿಡಿದಿದ್ದರೂ, ಅದರ ಗುಣದೋಷಗಳು ೧೭೯೯ರಲ್ಲಿ ಮಾತ್ರ ಡೇವಿಯಿಂದ ಹೊರಬಿದ್ದವು. ಇದೇ ರೀತಿ ಕೃತಕ ಈತರ್ ೧೫೪೦ರಲ್ಲೇ ವಲೇರಿಯಸ್ ಕೋರ್ಡಸ್ ತಯಾರಿಸಿದ್ದರೂ, ಮೈಕೇಲ್ ಫ್ಯಾರಡೆ ೧೮೧೮ರಲ್ಲಿ ವಿವರಿಸುವ ವರೆವಿಗೂ ಅದರ ಉಪಯೋಗ ತಿಳಿದಿರಲಿಲ್ಲ. ೧೮೨೪ರಲ್ಲಿ ಹಿಕ್ಮನ್ ಪ್ರಾಣಿಗಳಲ್ಲಿ ನೋವಿಲ್ಲದೆ ಶಸ್ತ್ರಕ್ರಿಯೆ ನಡೆಸಲು ಈತರ್ ಉಪಯೋಗಿಸಿ, ಮನುಷ್ಯರಲ್ಲೂ ಉಪಯೋಗಿಸಬಹುದೆಂದು ಸೂಚಿಸಿದ್ದನು. ಹಿಕ್ಮನ್ನನ ಹೇಳಿಕೆಯನ್ನು ಲಾರಿ ಸಮರ್ಥಿಸಿದರೂ ಸರಿಯಾದ ಬೆಂಬಲ ಸಿಕ್ಕಿರಲಿಲ್ಲ. ಪ್ಯಾರಿಸ್ಸಿನ ವೈದ್ಯರ ಸಂಸ್ಥೆಯೇ ಈ ವಿಷಯವನ್ನು ವಿಚಾರಿಸಬೇಕೆಂದು ಡೇವಿ ಅಭಿಪ್ರಾಯಪಟ್ಟಿದ್ದನು.

ಉಲ್ಲಾಸದಿಂದ ಕಾಲ ಕಳೆಯಲು ಆಗಿನ ಜನರು ನಗಿಸುವ ನೈಟ್ರಸ್ ಆಕ್ಸೈಡನ್ನು

ಉಪಯೋಗಿಸುತ್ತಿದ್ದರು. ಹೀಗೆ ಇಂಗ್ಲೆಂಡಿನಲ್ಲೂ, ಅಮೆರಿಕದಲ್ಲೂ ಕಿರಿಯರು ಸಾಯಂ ಕಾಲದ ಹೊತ್ತು ಕಾಲ ಕಳೆಯಲು ಗುಂಪುಗುಂಪಾಗಿ ಸೇರುತ್ತಿದ್ದರು. ಹೀಗಿರುವಾಗ ನೈಟ್ರಸ್ ಆಕ್ಸೈಡ್ ಬದಲು, ಸುಲಭವಾಗಿ ಉಪಯೋಗಿಸಬಹುದಾದ ಸಲ್ಫ್ಯೂರಿಕ್ ಈತರ್ ಕ್ರಮೇಣ ಜಾರಿಗೆ ಬಂದಿತು. ಈ ಈತರ್-ಸೇವನೆಯ ವಿನೋದಕೂಟಗಳು ಆಗ ಸಾಮಾನ್ಯ ದೃಶ್ಯಗಳಾಗಿದ್ದವು.

ವಿಲಿಯಂ ಇ. ಕ್ಲಾರ್ಕ್

ಈ ಕೂಟಗಳಲ್ಲಿ ಭಾಗವಹಿಸುತ್ತಿದ್ದ ರಾಚೆಸ್ಟರಿನ ರಸಾಯನಶಾಸ್ತ್ರ ವಿದ್ಯಾರ್ಥಿ ವಿಲಿಯಂ ಇ. ಕ್ಲಾರ್ಕ್ ಈತರ್ ಆವಿಗೆ ಬೇರೊಂದು ಉಪಯೋಗವನ್ನು ಯೋಚಿಸಿ, ೧೮೪೨ನೇ ಜನವರಿ ತಿಂಗಳಲ್ಲಿ ಒಬ್ಬ ತರುಣಿಗೆ ಈತರನ್ನು ಕೊಟ್ಟು ನೋವಿಲ್ಲದೆ ಹಲ್ಲು ಕೀಳಿಸಿದ್ದನು.

ಕ್ರಾಫೊರ್ಡ್ ಲಾಂಗ್

ಇವನ ಹಾಗೆ ಈತರ್ ವಿನೋದಕೂಟಗಳ ಅನುಭವವಿದ್ದ ಕ್ರಾಫೊರ್ಡ್ ವಿಲಿಯಂ ಸನ್ ಲಾಂಗ್(೧೮೧೫–೭೮),೧೮೪೨ನೇ ಮಾರ್ಚಿ ೩೦ನೆಯ ತಾರೀಕಿನಲ್ಲಿ ಈತರ್ ಉಪಯೋಗಿಸಿ ಶಸ್ತ್ರಕ್ರಿಯೆಯನ್ನೇ ನಡೆಸಿದ್ದನು. ಆದ್ದರಿಂದ ಇವನನ್ನು ಈತರ್‌ನ ಮೂಲಪುರುಷನೆಂದು ಕರೆದರು.

ಹೊರೇಸ್ ವೆಲ್ಸ್

ಅದೇ ಕಾಲದಲ್ಲಿ ಕನ್ನೆಕ್ಟಿಕಟ್‌ಗೆ ಸೇರಿದ ಹಾರ್ಟ್‌ಫೊರ್ಡ್‌ನ, ಹೊರೇಸ್ ವೆಲ್ಸ್ (೧೮೧೫–೪೮) ದಂತವೈದ್ಯ ನೈಟ್ರಸ್ ಆಕ್ಸೈಡನ್ನು ಉಪಯೋಗಿಸಿ ಹಲ್ಲು ಕೀಳುವ ಪ್ರದರ್ಶನ ಒಂದನ್ನು ಮಸ್ಸಚೂಸೆಟ್ಸ್ ಆಸ್ಪತ್ರೆಯಲ್ಲಿ ೧೮೪೫ನೇ ಜನವರಿ ಯಲ್ಲಿ ನಡೆಸಿದಾಗ, ರೋಗಿ ಸ್ವಲ್ಪ ನರಳಿದ್ದನ್ನು ಕಂಡು ಅಲ್ಲಿ ನೆರೆದಿದ್ದ ಸಭಿಕರು ಅನುಮಾನ ವ್ಯಕ್ತಪಡಿಸಿದರು.

ವಿಲಿಯಂ ಮಾರ್ಟನ್

ಆದರೆ ಈ ಪ್ರದರ್ಶನದಲ್ಲಿ ಭಾಗವಹಿಸಿದ್ದ ವೆಲ್ಸ್‌ನ ವಿದ್ಯಾರ್ಥಿ ವಿಲಿಯಂ ತಾಮಸ್ ಗ್ರೀನ್ ಮಾರ್ಟನ್ (೧೮೧೯–೬೮) ನೈಟ್ರಸ್ ಆಕ್ಸೈಡ್ ಬದಲಾಗಿ ಈತರ್ ಉಪಯೋಗಿಸಲು ದೃಢ ಮನಸ್ಸು ಮಾಡಿ, ೧೮೪೬ನೇ ಸೆಪ್ಟೆಂಬರ್ ೩೦ರಲ್ಲಿ ಹಲ್ಲುಕೀಳಲು ಈತರನ್ನೇ ಉಪಯೋಗಿಸಿದ್ದನು. ಇದರ ಆಧಾರದ ಮೇಲೆ ಮಸ್ಸಚೂ ಸೆಟ್ಸ್ ಆಸ್ಪತ್ರೆಯಲ್ಲಿ ೧೮೧೬ನೇ ಅಕ್ಟೋಬರ್ ೧೬ರಲ್ಲಿ ರೋಗಿಯ ಕತ್ತಿನಲ್ಲಿದ್ದ ಸಾಮಾನ್ಯ ಗಡ್ಡೆಯೊಂದನ್ನು ಈತರನ್ನು ಉಪಯೋಗಿಸಿ ತೆಗೆಯಲಾಯಿತು. ಇದರ ನಂತರ, ಈತರ್ ಸಹಾಯದಿಂದ ಅನೇಕ ಶಸ್ತ್ರಕ್ರಿಯೆಗಳು ನಡೆದವು. ಆದ್ದರಿಂದ ಅರಿವಳಿಸುವ ದ್ರವವನ್ನು ಕಂಡುಹಿಡಿಯಲು ಮಾರ್ಟನ್ ಕಾರಣಕರ್ತೃವಾಗಿದ್ದನೆಂದು ಬಹು ಜನರ ಅಭಿಪ್ರಾಯವಾಗಿದೆ.

ಈ ಅರಿವಳಿಸುವ ಸಾಧಾರಣ ವಿಧಾನದಲ್ಲಿ, ರಾಬರ್ಟ್ ಲಿಸ್ಟನ್ ಇಂಗ್ಲೆಂಡಿನಲ್ಲಿ ಮೊಟ್ಟಮೊದಲಿಗೆ ೧೮೪೬ನೇ ಡಿಸೆಂಬರ್ ತಿಂಗಳಲ್ಲಿ ತೊಡೆಯು ಛೇದನ ನಡೆಸಿದನು. ೧೮೪೭ನೇ ಜನವರಿ ತಿಂಗಳಲ್ಲಿ ಎಡಿನ್ಬರೊನಲ್ಲಿ ಜೇಮ್ಸ್ ಸಿಂಪ್ಸನ್ ಹೆರಿಗೆ ಮಾಡಿದನು. ಆದರೆ ಈತರ್ ಉಪಯೋಗದಲ್ಲಿದ್ದ ದೋಷಗಳನ್ನು ಸಿಂಪ್ಸನ್ ಅರಿತು, ಅದರ ಬದಲು ಕ್ಲೊರೊಫಾರ್ಮ್ ಉಪಯೋಗಿಸಲು ೧೮೪೭ನೇ ನವೆಂಬರ್ ತಿಂಗಳಲ್ಲಿ ಪ್ರಾರಂಭಿಸಿದನು.

ಆಲಿವರ್ ಹೋಮ್ಸ್

ಹೀಗಿರುವಾಗ ಆಲಿವರ್ ವೆಂಡೆಲ್ ಹೋಮ್ಸ್ ೧೮೪೬ರ ನವೆಂಬರ್ ೨೧ರಲ್ಲಿ ಮಾರ್ಟನ್‌ಗೆ ಕಾಗದ ಬರೆದು, ತಾನು ಶೋಧನೆಯಲ್ಲಿ ಭಾಗವಹಿಸದಿದ್ದರೂ, ಶಸ್ತ್ರ ಕ್ರಿಯೆ ನಡೆಸುವಾಗ ನೋವಿಲ್ಲದಂತೆ ಮಾಡುವ ಸ್ಥಿತಿಗೆ ಅನೆಸ್ತೀಸಿಯ (ಅರಿವು ಅಳಿಸಿರುವುದು) ಎಂದು ಹೆಸರು ಕೊಡಬೇಕೆಂದು ಸೂಚಿಸಿದನು. ಆಲಿವರ್ ಹೋಮ್ಸ್ ವೈದ್ಯನಾಗಿದ್ದುದಲ್ಲದೆ ಶ್ರೇಷ್ಠ ಕವಿಯೂ ಆಗಿದ್ದನು. 'ಹೊತ್ತಾರೂಟದ ಮೇಜಿನ ನಿರಂಕುಶ ಪ್ರಭು', 'ಹೊತ್ತಾರೂಟದ ಮೇಜಿನ ಬಳಿ ಪ್ರಾಧ್ಯಾಪಕ', 'ಅಟ್ಲಾಂಟಿಕ್ ಮಂತ್ಲಿ' ಎಂಬ ಲೇಖನಗಳನ್ನೂ ಹಾಗೂ ಅನೇಕ ಪದ್ಯಗಳನ್ನೂ ಬರೆದಿದ್ದನು. ವೈದ್ಯಶಾಸ್ತ್ರದ ಅತ್ಯಂತ ಮೆಚ್ಚಿನ ಕೊಡುಗೆಯಂತಿದ್ದ 'ನವ ಇಂಗ್ಲೆಂಡಿನಲ್ಲಿ ಬಿಟ್ಟುಬಿಟ್ಟು ಬರುವ ಜ್ವರಗಳು', 'ನರ ನೋವು ಬೇನೆಗಳ ಗುಣ ಮತ್ತು ಚಿಕಿತ್ಸೆ', 'ಬಾಣಂತಿ ಜ್ವರದ ಅಂಟುವ ಗುಣ'ಗಳ ಬರಹಗಾರನಾಗಿದ್ದನು. ಮೊದಲನೆಯ ಎರಡು ವೈದ್ಯ ಲೇಖನಗಳು ಬಹುಮಾನ ಪಡೆದವು. ಮೂರನೆಯದು ೧೮೪೩ರಲ್ಲಿ ಹೊರಬಿದ್ದು, ಹೆರಿಗೆ ಆದನಂತರ ಬರುವ ಜ್ವರಕ್ಕೆ ವೈದ್ಯನೇ ಕಾರಣನೆಂದೂ, ಅವನೇ ಒಬ್ಬರಿಂದೊಬ್ಬರಿಗೆ ರೋಗ ಹರಡುವವನೆಂದೂ ತಿಳಿಸಿದ್ದನು. ಹಾಗೂ ವಿಸರ್ಪಿ ರೋಗವೂ ಇದೇ ರೀತಿ ಹರಡುವುದೆಂದೂ ತಿಳಿಸಿದ್ದನು.

ಅಮೆರಿಕದ ಆಗಿನ ಇತರ ಶ್ರೇಷ್ಠ ವೈದ್ಯರಲ್ಲಿ ಆಸ್ಟಿನ್ ಫ್ಲಿಂಟ್ ಸ್ಯಾಮ್ಯುಎಲ್ ಡಿ. ಗ್ರಾಸ್ ಹಾಗೂ ಜೇಮ್ ಸಿಮ್ಸ್ ಮುಖ್ಯ ಮಹನೀಯರಾಗಿದ್ದರು.

ಆಸ್ಟಿನ್ ಫ್ಲಿಂಟ್

ಆಸ್ಟಿನ್ ಫ್ಲಿಂಟ್ (೧೮೧೨-೧೮೮೬) ಹಾರ್ವರ್ಡಿನ ವೈದ್ಯಶಾಲೆಯಿಂದ ವೈದ್ಯ ಪದವಿಯನ್ನು ಪಡೆದ ಮೇಲೆ, ಬಾಸ್ಟನ್ನಿನಲ್ಲಿ ಸ್ವಲ್ಪ ಕಾಲವಿದ್ದು, ಬಫಲೊ ಪಟ್ಟಣಕ್ಕೆ ಹೋಗಿ ವೈದ್ಯವೃತ್ತಿ ನಡೆಸುತ್ತಿದ್ದಾಗ ಅಲ್ಲಿಯ ವೈದ್ಯಶಾಲೆಯ ಸ್ಥಾಪನೆಗೆ ಆಸಕ್ತಿಯಿಂದ ಕೆಲಸ ಮಾಡಿದ್ದನು. ಆ ಶಾಲೆಯ ಪ್ರಾಧ್ಯಾಪಕನಾಗಿ ಔಷಧ ವೈದ್ಯದ ಶಾಖೆಯ ಮುಖ್ಯಸ್ಥನಾದನು. ಇವನು ಆಸ್ಪತ್ರೆಯಲ್ಲಿ ಕೆಲಸ ಮಾಡುವಾಗಲೆಲ್ಲಾ ಆಕರ್ಣಕ ಯಾವಾಗಲೂ ಅವನ ಕೈಯಲ್ಲೇ ಇರುತ್ತಿತ್ತು. ರೋಗ ನಿದಾನ ಮಾಡುವ ಹೊಸ ಹೊಸ ಪದ್ಧತಿಗಳು ಇವನಿಂದ ಹೊರಬಿದ್ದವು. ಆದ್ದರಿಂದಲೇ ಇವನನ್ನು ಅಮೆರಿಕದ

ಲೆನೆಕ್ ' ಎಂದು ಕರೆಯಲಾಗಿದೆ. ಫ್ಲಿಂಟ್ ತನ್ನ ಔದ್ಯೋಗಿಕ ಸಾಮರ್ಥ್ಯದಿಂದ ಚಿಕಾಗೊ, ಲೂಯಿಸ್ವಿಲ್ಲೆ ಹಾಗೂ ನ್ಯೂಯಾರ್ಕ್‌ಗಳಲ್ಲೂ ಪ್ರಾಧ್ಯಾಪಕನಾಗಿದ್ದು, ರೋಗಗಳ ಗುಣದೋಷಗಳನ್ನು ಬರೆದಿಡುತ್ತಿದ್ದನು. ಈ ಬರವಣಿಗೆ ಸುಮಾರು ೧೬,೭೯೨ ಪುಟಗಳಷ್ಟಿದ್ದವು. “ ಉಸಿರಾಟದಂಗಗಳ ರೋಗಗಳ ನಿದಾನ ಹಾಗೂ ಶಾರೀರಿಕ ಶೋಧನೆ, ೧೮೫೬ ”, “ ಬಡಿತಿಳಿವಳಿಕೆ ಹಾಗೂ ಕಿವಿಗೇಳಿಕೆಗಳ ಸಂಗ್ರಹ, ೧೮೬೫ ” , “ ಗುಂಡಿಗೆರೋಗಗಳ ನಿದರ್ಶನ ೧೮೫೯ ”, “ ವೈದ್ಯಶಾಸ್ತ್ರದ ನಿಯಮಗಳು ಹಾಗೂ ಪ್ರಯೋಗ, ೧೮೬೬ ” ಎಂಬ ಪುಸ್ತಕಗಳು ಮುಖ್ಯವಾಗಿದ್ದವು. ಇವನ ಹೆಸರಿನ “ ಆಸ್ಟಿನ್ ಮರ್ಮರ ” ೧೮೬೨ರಲ್ಲಿ ವಿವರಿಸಲಾಗಿತ್ತು. ಲೆನೆಕ್ಕಿನ ಕ್ಷಯ ರೋಗದ ಮೇಲಿನ ಅಭಿಪ್ರಾಯಗಳನ್ನು ನೀಮೇಯರ್ ವಿರೋಧಿಸಿದಾಗ, ೬೭೦ ಕ್ಷಯ ರೋಗಿಗಳ ದಾಖಲೆಗಳನ್ನು ವಿವರಿಸಿ ಲೆನೆಕ್ ತನ್ನ ಪರವಾಗಿ ವಾದಿಸಿದ್ದನು.

ಜೇಮ್ಸ್ ಸಿಮ್ಸ್

ಫ್ಲಿಂಟ್ ವೈದ್ಯದಲ್ಲಿ ಉನ್ನತಿ ಪಡೆದಿದ್ದಂತೆ, ಅದೇ ಕಾಲದಲ್ಲಿದ್ದ ಜೇಮ್ಸ್ ಸಿಮ್ಸ್ ಮತ್ತು ಸ್ಯಾಮ್ಯುಯಲ್ ಗ್ರಾಸ್ ಶಸ್ತ್ರವೈದ್ಯದಲ್ಲಿ ಉನ್ನತಿ ಪಡೆದಿದ್ದರು.



ಜೇಮ್ಸ್ ಮೆರಿಯನ್ ಸಿಮ್ಸ್

ಜೇಮ್ಸ್ ಮೆರಿಯನ್ ಸಿಮ್ಸ್ (೧೮೧೩–೧೮೮೩) ಫಿಲಡೆಲ್ಫಿಯದ ಜೆಫರ್ಸನ್ ವೈದ್ಯಶಾಲೆಯ ಪದವಿ ಪಡೆದನಂತರ ಶಸ್ತ್ರಕ್ರಿಯೆಯಲ್ಲಿ ಅವನಿಗಿದ್ದ ಧೈರ್ಯ ಸಾಹಸಗಳನ್ನು ಮೆಚ್ಚಿ ಜನರು ಬಹಳ ಉತ್ತೇಜನ ಕೊಟ್ಟರು. ಅಲ್ಲಿಯ ತನಕ ಚಿಕಿತ್ಸೆಯೇ ಇಲ್ಲದಿದ್ದ ಮೂತ್ರಕೋಶ ಯೋನಿಗಳ ನಡುವಣ ಬೋರಿಗೆಯನ್ನು ಸರಿಪಡಿಸುವ ಹೊಸ ಶಸ್ತ್ರಕ್ರಿಯೆಯನ್ನು ವಿವರಿಸಿ ಎಲ್ಲರಲ್ಲೂ ಬಹಳ ಆಶ್ಚರ್ಯವನ್ನು ಉಂಟುಮಾಡಿದ್ದನು.

ಹೊಸ ಚಿಕಿತ್ಸೆಯ ಕ್ರಮದಲ್ಲಿ ರೋಗಿಯನ್ನು ಸಿಮ್ಸ್ ನಿಲುವಿನಲ್ಲಿ ಮಲಗಿಸುವ ಹೊಸ ಪದ್ಧತಿ ರೂಢಿಗೆ ಬಂದಿತ್ತು, ಹಾಗೂ ಬಾತಿನ ಕೊಕ್ಕಿನಂತಿರುವ ನಾಳ ಹಿಗ್ಗಿಸುವ ಒಳ ಗನ್ನಡಿಯನ್ನು ಆಗ ಉಪಯೋಗಿಸಿದ್ದನು. ೧೮೬೧ರಲ್ಲಿ ಯೂರೋಪಿನ ಪ್ರವಾಸವನ್ನು ಕೈಗೊಂಡು ಪ್ಯಾರಿಸ್ಸಿನಲ್ಲಿ ವೆಲ್ಪಿಯು, ನಿಲಟನ್ ಮುಂತಾದವರ ಸಮಕ್ಷಮ ಶಸ್ತ್ರ ಕ್ರಿಯೆಯನ್ನು ನಡೆಸಿ ಗಲಿಬಿಲಿಗೊಳಿಸಿದ್ದನು. ಆದರೂ ಇವನು ಪ್ರಾಧ್ಯಾಪಕನಾಗುವ ಅದೃಷ್ಟವಿರಲಿಲ್ಲ.

ಸ್ಯಾಮ್ಯುಯಲ್ ಡಿ. ಗ್ರಾಸ್

ಸ್ಯಾಮ್ಯುಯಲ್ ಡಿ. ಗ್ರಾಸ್ (೧೮೦೫–೧೮೮೪) ವಿದ್ಯಾರ್ಥಿಯಾಗಿದ್ದಾಗ ಪುಸ್ತಕವನ್ನು ತಲೆದಿಂಬಿನ ಕೆಳಗೆ ಇಟ್ಟು ನಿದ್ರಿಸುವ ರೂಢಿ ಇತ್ತು. ಇವನು ಪದವಿ ಪಡೆದನಂತರ ೧೮೩೦ರಲ್ಲಿ ಬರೆದ 'ಮೂಳೆಗಳ, ಕೀಲುಗಳ ಅಂಗರಚನೆ, ಅಂಗಕ್ರಿಯೆ ಮತ್ತು ರೋಗಗಳು' ಎಂಬ ಪುಸ್ತಕ ಹೆಚ್ಚು ಸಂಖ್ಯೆಯಲ್ಲಿ ಮಾರಾಟವಾಗುವಷ್ಟು ಶ್ರೇಷ್ಠವಾಗಿತ್ತು. ೧೮೩೯ರಲ್ಲಿ ಸಿನ್ಸಿನ್ನಾಟಿ ವೈದ್ಯಶಾಲೆಯ ರೋಗಶಾಸ್ತ್ರದ ಹಾಗೂ ಅಂಗರಚನೆಶಾಸ್ತ್ರದ ಪ್ರಾಧ್ಯಾಪಕನಾಗಿದ್ದು, "ರೋಗಶಾಸ್ತ್ರ ಮತ್ತು ಅಂಗರಚನೆ ಶಾಸ್ತ್ರದ ಸರಳ ಪಾಠಗಳು" ಎಂಬ ಇಂಗ್ಲೀಷ್ ಭಾಷೆಯಲ್ಲೇ ಇಲ್ಲದ ಸಂಪೂರ್ಣ ವಾಗಿರುವ ಮೊದಲ ಪುಸ್ತಕವನ್ನು ಬರೆದನು. ಅನಂತರ ೧೮೪೦ರಲ್ಲಿ ಲೂಯಿಸ್ವಿಲ್ಲೆ ವಿಶ್ವವಿದ್ಯಾಲಯದ ಶಸ್ತ್ರವೈದ್ಯದ ಪ್ರಾಧ್ಯಾಪಕನಾಗಿ, ೧೬ ವರ್ಷ ಉತ್ತಮ ದರ್ಜೆಯ ಶಸ್ತ್ರಕ್ರಿಯೆಗಳನ್ನು ನಡೆಸಿದನು. ಆಗ ಅನೇಕ ಪುಸ್ತಕಗಳನ್ನು ಅವನು ಬರೆದನು. ೧೮೫೬ರಲ್ಲಿ ಜೆಫರ್ಸನ್ ವೈದ್ಯಶಾಲೆಯಿಂದ ಕರೆ ಬಂದು, 'ಶಸ್ತ್ರವೈದ್ಯ ಪದ್ಧತಿ' ಎಂಬ ವಿವರವಾದ ೨೩೬೦ ಪುಟಗಳ ಸಚಿತ್ರ ಪುಸ್ತಕ ಬರೆಯಲು ಸಮಯ ಒದಗಿತ್ತು. ವಿಶ್ರಾಂತಿ ಇಲ್ಲದೆ ಕೊನೆಯ ವರೆವಿಗೂ ದುಡಿದು ಅನೇಕ ಗೌರವಗಳನ್ನೂ, ಗ್ಯಾರಿಸನ್ ಹೇಳಿರುವಂತೆ 'ಅವನ ಕಾಲದ ಅಮೆರಿಕದ ಮಹಾನ್ ಶಸ್ತ್ರವೈದ್ಯ' ಎಂಬ ಕೀರ್ತಿಯನ್ನೂ ಪಡೆದನು.

ಹೀಗೆ ೧೯ನೇ ಶತಮಾನದ ಅಮೆರಿಕದ ವೈದ್ಯಶಾಸ್ತ್ರ, ಶತಮಾನದ ಮಧ್ಯ ಭಾಗದಲ್ಲಿ ಒಂದು ಅಂತಸ್ತನ್ನು ಮುಟ್ಟಿತ್ತು. ಮೊದಲು ಲಂಡನ್, ಎಡಿನ್ಬರೊ, ಲೇಡನ್ ಮತ್ತು ಪ್ಯಾರಿಸ್‌ಗಳ ಆಶ್ರಯದಲ್ಲಿದ್ದು, ಈಗ ತನ್ನ ಕಾಲ್ಮೇಲೇ ನಿಲ್ಲುವ ಶಕ್ತಿ ಹೊಂದಿ ಪ್ರಪಂಚದ ವೈದ್ಯಶಾಸ್ತ್ರದೊಂದಿಗೆ ಸಮಾನತೆ ಪಡೆದಿತ್ತು. ಶರೀರ ವಿಜ್ಞಾನ ದಲ್ಲೂ, ರೋಗಿ ಹಾಸೆಪಕ್ಕದ ವೈದ್ಯಶಾಸ್ತ್ರದಲ್ಲೂ, ಶಸ್ತ್ರವೈದ್ಯದಲ್ಲೂ ಅತ್ಯುತ್ತಮ ರಾದ ಪಂಡಿತರು ಬೆಳಕಿಗೆ ಬಂದಿದ್ದರು. ಅರಿವಳಿಸಿ ಶಸ್ತ್ರಕ್ರಿಯೆ ಮಾಡುವ ಕ್ರಮ ಅಮೆರಿಕದಲ್ಲಿ ಮೊಟ್ಟಮೊದಲಿಗೆ ಆರಂಭವಾಗಿತ್ತು. ಆದರೂ ಜರ್ಮನಿಯಲ್ಲಿ ನಡೆಯುತ್ತಿದ್ದ ಆಶ್ಚರ್ಯಕರವಾದ ಅಭಿವೃದ್ಧಿಗಳನ್ನು ಹಿಂಬಾಲಿಸಲು ಹಿಂಜರಿದಿರಲಿಲ್ಲ.

೩೩. ಯೂರೋಪಿನಲ್ಲಿ ವೈದ್ಯಶಾಸ್ತ್ರ

ವಿಯನ್ನದ ಹೊಸ ವೈದ್ಯಶಾಲೆ

೧೯ನೇ ಶತಮಾನದ ಮಧ್ಯ ಭಾಗದಲ್ಲಿ ವಿಯನ್ನ ಪುನಃ ಯೂರೋಪಿನ ವೈದ್ಯ ಶಾಸ್ತ್ರದ ವಿದ್ಯಾ ಕೇಂದ್ರವಾಗಿ ಪರಿಣಮಿಸಿತು. ಇದಕ್ಕೆ ಕಾರಣ ವಿಯನ್ನದ ಹೊಸ ವೈದ್ಯಶಾಲೆ. ಅಲ್ಲಿ ಆಗ ರೋಗಶಾಸ್ತ್ರದ ಪಂಡಿತ ರಾಕಿಟಾನ್ಸ್ಕಿ, ಔಷಧ ವೈದ್ಯ ಸ್ಕೋಡ ಮತ್ತು ಚರ್ಮ ರೋಗಗಳ ವೈದ್ಯ ಪಂಡಿತ ಹೆಬ್ರ ಉನ್ನತ ಅಧ್ಯಾಪಕರಾಗಿದ್ದರು. ಇವರ ವೈದ್ಯ ಶಿಕ್ಷಣದ ಮಟ್ಟವನ್ನು ಮೆಚ್ಚಿ ಯೂರೋಪಿನ ಎಲ್ಲಾ ಭಾಗಗಳಿಂದಲೂ ವಿದ್ಯಾರ್ಥಿಗಳು ಹೆಚ್ಚು ಸಂಖ್ಯೆಯಲ್ಲಿ ವೈದ್ಯ ಕಲಿಯಲು ವಿಯನ್ನಕ್ಕೆ ಬರುತ್ತಿದ್ದರು. ಇದೇ ರೀತಿ ವಿಯನ್ನದ ಖ್ಯಾತಿ ಪ್ರಪಂಚದ ಮೊದಲನೆಯ ಯುದ್ಧದ ತನಕ ಒಂದೇ ಸಮನೆ ಬೆಳಗುತ್ತಿತ್ತು. ಈ ಮಹನೀಯರ ಅಸ್ತಿಭಾರದ ಸಹಾಯದಿಂದ ಇವರ ತರುವಾಯಿಗಳು ಕೂಡ ವಿಯನ್ನ ವೈದ್ಯಶಾಲೆಯ ಪ್ರಗತಿಯನ್ನು ಕಾಪಾಡಿಕೊಂಡು ಬಂದಿದ್ದರು. ಆಗ ಜರ್ಮನಿ ಇನ್ನೂ ಷಿಲ್ಲಿಂಗ್ ಪ್ರಕೃತಿ ತತ್ತ್ವಶಾಸ್ತ್ರದ ಪ್ರಭಾವ ದಲ್ಲೇ ಇತ್ತು. ಆಗ ವಿಯನ್ನ ತನ್ನ ಹೊಸ ವೈದ್ಯಶಾಲೆಯ ಉನ್ನತ ವೈದ್ಯಾಭಿ ವೃದ್ಧಿಗಳಿಂದ ಜರ್ಮನಿಯ ವೈದ್ಯಶಾಸ್ತ್ರಕ್ಕೆ ಚೈತನ್ಯ ಕೊಟ್ಟು ಹೊಸ ಯುಗ ಪ್ರಾರಂಭ ವಾಗಲು ಬೆಂಬಲ ನೀಡಿತು.

ರಾಕಿಟಾನ್ಸ್ಕಿ

ಕಾರ್ಲ್ ರಾಕಿಟಾನ್ಸ್ಕಿ (೧೮೦೪–೧೮೭೮) ಪದವಿ ಪಡೆದು (೧೮೨೮) ಒಳ್ಳೇ ಪದವಿಯಲ್ಲಿದ್ದರೂ ವೈದ್ಯ ವೃತ್ತಿಗೆ ಕೈ ಹಾಕದೆ, ತನ್ನ ಕಾಲವನ್ನೆಲ್ಲಾ ರೋಗ ಶಾಸ್ತ್ರದ ಸಂಸ್ಥೆಗೆ ನೀಸಲಾಗಿ ಅರ್ಪಿಸಿದ್ದನು. ಇವನು ಮೊದಲನೆಯದನ್ನು ೧೮೨೭ ರಲ್ಲ ಮಾಡಿ, ೧೮೭೫ರಲ್ಲಿ ತನ್ನ ಕೆಲಸಕ್ಕೆ ರಾಜಿನಾಮೆ ಕೊಡುವ ವರೆಗೆ ತಾನೇ ಸ್ವತಃ, ೩೦,೦೦೦ ಶವ ಪರೀಕ್ಷೆಗಳನ್ನು ನಡೆಸಿದ್ದನು. ಹೀಗೆ ೪೮ ವರ್ಷ ಸೇವೆ ಸಲ್ಲಿಸಿ ರೋಗ ಶಾಸ್ತ್ರದಲ್ಲೂ, ರೋಗಸಂಗಾಯಗಳ ವಿವರಣೆಯಲ್ಲೂ ಪರಿಪೂರ್ಣತೆ ಹೊಂದಿದ್ದನು. ಆಗ ಇವನಿಗೆ ಸರಿಸಮಾನಾದವರು ಯಾರೂ ಮುಂದೆ ಬಂದಿರಲಿಲ್ಲ. ಪುಪ್ಪುಸುರಿತಕ್ಕೂ ಪಂಗುಪಿನ್ನಾಳ ಪುಪ್ಪುಸುರಿತಕ್ಕೂ ಇರುವ ವ್ಯತ್ಯಾಸವನ್ನು ಇವನೇ ಮೊಟ್ಟಮೊದಲಿಗೆ ವಿವರಿಸಿದನು. ಹಾಗೂ ಮೊದಲನೆಯ ಬಾರಿಗೆ ಕೂರಾದ ಹಳದಿ ಸಮೇತ, ಮೂತ್ರ ಪಿಂಡಪ ಹಿಟ್ಟಿಂದ ರೋಗ, ಬೆನ್ನೆಲು ಜರಿಕೆ ರೋಗಗಳನ್ನು ವಿವರಿಸಿದ್ದನು. ಶ್ವಾಸ ಕೋಶದ ಗಾಳಿಯುಬ್ಬಟೆ, ಧಮನಿಗಳ ರೋಗ, ಹೃದಯದ ಮಧ್ಯ ಪೊರೆಯ ಕುಂದು ಗಳನ್ನೂ ವಿವರಿಸಿದ್ದನು. ಇವನ 'ರೋಗಶಾಸ್ತ್ರದ ಅಂಗರಚನೆಯ ಮೇಲಿನ ಪ್ರಕರಣ ಗ್ರಂಥ' ೧೮೪೨ರಲ್ಲಿ ಹೊರಬಿದ್ದು, ರೋಗದ ಅಂಗಾಂಗಗಳ ವಿಷಯಗಳಲ್ಲೂ, ರೋಗ

ಶಾಸ್ತ್ರಕ್ಕನುಸಾರವಾದ ರೋಗ ವರ್ಗೀಕರಣದಲ್ಲೂ ಉತ್ಕೃಷ್ಟವಾದ ಪುಸ್ತಕವಾಯಿತು. ಇವುಗಳ ಆಧಾರದ ಮೇಲೆ ರಾಕಿಟಾನ್ಸ್ಕಿಯನ್ನು 'ರೋಗಶಾಸ್ತ್ರದ ಅಂಗರಚನೆಯ ಲಿನ್ನೆ' ಎಂದು ವರ್ಕೌ ನಾಮಕರಣ ಮಾಡಿದ್ದನು.

ಜೋಸೆಫ್ ಸ್ಕೋಡ

ರಾಕಿಟಾನ್ಸ್ಕಿಯ ಸಹೋದ್ಯೋಗಿಯಾಗಿ ಜೋಸೆಫ್ ಸ್ಕೋಡ (೧೮೦೫–೮೧) ಅವನಂತೆ ಸೆಕೊ ಹುಟ್ಟಿಗೆ ಸೇರಿದ್ದರೂ ಅನೇಕ ರೀತಿಗಳಲ್ಲಿ ಅವನಂತಿರಲಿಲ್ಲ. ಆದರೆ ಇವನ ಚತುರತೆ, ಬುದ್ಧಿಶಕ್ತಿ ಅತಿಶಯವಾಗಿತ್ತು. ಇವನನ್ನು ಬಹಳ ಮೆಚ್ಚಿ, ಒಬ್ಬಳು ಸಾಹುಕಾತಿ ಸ್ಕೋಡ ವಿಯನ್ನಕ್ಕೆ ಬಂದು ವೈದ್ಯಶಾಸ್ತ್ರ ಕಲಿತರೆ ತಾನು ಆಶ್ರಯ ಕೊಡುವೆನೆಂದು ಹೇಳಲು, ಸ್ಕೋಡ ತಕ್ಷಣವೇ ಒಪ್ಪಿ, ತನ್ನ ಜನ್ಮ ಸ್ಥಳದಿಂದ ವಿಯನ್ನಕ್ಕೆ ಇರುವ ೬ ದಿವಸದ ಹಾದಿಯನ್ನು ಕಾಲ್ನಡಿಗೆಯಲ್ಲೇ ಮುಗಿಸಿ ಬಂದು ವಿಯನ್ನ ಸೇರಿದನು. ಅಲ್ಲಿ ೧೮೩೧ರಲ್ಲಿ ಪದವಿ ಪಡೆದು ಸಂಬಳವಿಲ್ಲದೆ "ಆಲ್ಜೆಮಿನಾನಸ್ ಕ್ರಾಂಕಾಚೂರ್" ಆಸ್ಪತ್ರೆಯಲ್ಲಿ ಕೆಲಸ ಮಾಡಲು ಒಪ್ಪಿ ರೋಗನಿದಾನ ಮಾಡಲು ಹೊಸ ಹೊಸ ವಿಧಾನಗಳನ್ನು ಉಪಯೋಗಿಸುತ್ತಿದ್ದನು. ರಾಕಿಟಾನ್ಸ್ಕಿ ಶವಪರೀಕ್ಷೆ ಮಾಡುತ್ತಿದ್ದಾಗ ಹೋಗಿ ತಾನು ಮಾಡಿದ್ದ ರೋಗನಿದಾನ ಸರಿಯೋ ಇಲ್ಲವೋ ಎಂಬುದನ್ನು ತಾಳೆ ನೋಡುತ್ತಿದ್ದನು. ಈ ಅಭ್ಯಾಸಗಳ ಆಧಾರದ ಮೇಲೆ, 'ಬಡಿತ ಮತ್ತು ಆಲಿಸಿಕೆಯ ಮೇಲಿನ ಪ್ರಕರಣ ಗ್ರಂಥ' ಎಂಬ ಪುಸ್ತಕವನ್ನು ಜರ್ಮನ್ ಭಾಷೆಯಲ್ಲಿ ಬರೆದು, ಲೆನೆಕ್ ಮಾಡಿದ್ದ ಕೆಲವು ತಪ್ಪುಗಳನ್ನು ತಿದ್ದಿ, ತನ್ನ ಹೊಸ ವಿಧಾನಗಳನ್ನು ವಿವರಿಸಿದನು. ಈ ಸಮಯದಲ್ಲಿ ಫ್ರಾನ್ಸಿನ ಮಂತ್ರಿಯೊಬ್ಬನನ್ನು ಪರೀಕ್ಷಿಸಲು, ಇತರ ವೈದ್ಯರ ಸಂಗಡ ಹೋಗಲು ಇವನಿಗೂ ಕರೆ ಬಂದು, ಮಂತ್ರಿಗಿದ್ದ ರೋಗ ಇತರರ ಅಭಿಪ್ರಾಯವಾಗಿದ್ದ ಪಿತ್ತಕೋಶದ ರೋಗವಲ್ಲವೆಂದೂ, ಹೊಟ್ಟೆಯ ಮಹಾಧಮನಿಯ ಅಗಲುಬ್ಬು ಎಂದೂ ಹೇಳಿ ಸ್ಕೋಡ ಭಿನ್ನಾಭಿಪ್ರಾಯಪಟ್ಟನು. ಇವನ ಅಭಿಪ್ರಾಯವೇ ಸರಿಯೆಂದು ಮಂತ್ರಿ ಸತ್ತೊಡನೆ ಮಾಡಿದ ಶವಪರೀಕ್ಷೆಯಿಂದ ದೃಢಪಟ್ಟಿತು. ಈ ಕುಶಲತೆಯನ್ನು ಮೆಚ್ಚಿ, ಇವನನ್ನು ೧೮೪೧ರಲ್ಲಿ ಮುಖ್ಯ ವೈದ್ಯನಾಗೂ ೧೮೪೬ರಲ್ಲಿ ವೈದ್ಯಶಾಸ್ತ್ರ ಪ್ರಾಧ್ಯಾಪಕನಾಗೂ ನೇಮಕ ಮಾಡಿದರು. ಇವನು ಕಂಡುಹಿಡಿದಿದ್ದ ಸ್ಕೋಡನ ಮರುನಾದ ಎಂಬ ರೋಗ ಲಕ್ಷಣ ಈಗಲೂ ಅದೇ ಹೆಸರಿನಲ್ಲಿ ರೂಢಿಯಲ್ಲಿದೆ.

ಫರ್ಡಿನೆಂಡ್ ಹೆಬ್ರ

ಸ್ಕೋಡನ ವಶದಲ್ಲಿದ್ದ ಎದೆಯ ರೋಗಗಳ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಫರ್ಡಿನೆಂಡ್ ಹೆಬ್ರ (೧೮೧೬–೮೦) ಚರ್ಮ ರೋಗಗಳಲ್ಲಿ ತನ್ನ ಅಭಿರುಚಿಯನ್ನು ತೋರ್ಪಡಿಸಿ, ಆ ವಿಭಾಗದಲ್ಲಿ ಕೆಲಸ ಮಾಡಲು ಒಪ್ಪಿ ಮೊದಲ ಒಂದು ವರ್ಷದಲ್ಲೇ ೨೭೦೦ ಚರ್ಮರೋಗಿಗಳನ್ನು ಪರೀಕ್ಷಿಸಿದನು. ಅವರಲ್ಲಿ ೨೨೦೦ ರೋಗಿಗಳು ಕಜ್ಜಿ

ಯಿಂದ ನರಳುತ್ತಿದ್ದುದನ್ನು ನೋಡಿ ಚರ್ಮರೋಗದ ಶಾಖೆಯಲ್ಲಿ ವಿಶೇಷ ಪರಿಶ್ರಮ ಪಡೆದು ಪರಿಶೀಲನೆ ನಡೆಸುತ್ತಿದ್ದನು. ಕಜ್ಜಿ ಒಬ್ಬರಿಂದೊಬ್ಬರಿಗೆ ಹರಡುತ್ತದೆಂದೂ ಕಜ್ಜಿಯ ಕ್ರಿಮಿ ಇದಕ್ಕೆ ಕಾರಣವೆಂದೂ; ಕ್ರಿಮಿಯನ್ನು ನಾಶಪಡಿಸಿದರೆ ರೋಗ ಗುಣವಾಗುತ್ತದೆಂದೂ ತಿಳಿಸಿದನು. ರಾಕಿಟಾನ್ಸ್ಕಿ ಮತ್ತು ಸ್ಕೋಡರ ಜೊತೆಯಲ್ಲಿ ಕಲೆತು ಹೊಸ ಹೊಸ ರೋಗ ನಿದಾನಗಳಲ್ಲೂ, ರೋಗದ ಅಂಗಾಯದ ವಿವರಣೆ ಗಳಲ್ಲೂ ಪರಿಶ್ರಮವನ್ನು ಪಡೆದಿದ್ದನು. ಇವನ 'ರೋಗಶಾಸ್ತ್ರದ ಅಂಗರಚನೆಶಾಸ್ತ್ರದ ಆಧಾರದ ಮೇಲೆ ಚರ್ಮರೋಗಗಳನ್ನು ವಿಂಗಡಿಸುವ ಒಂದು ಯತ್ನ, ೧೮೪೫' ಎಂಬ ಜರ್ಮನ್ ಭಾಷೆಯ ಪುಸ್ತಕ ಅತ್ಯುತ್ತಮವಾಗಿತ್ತು. ಇದರ ಅನಂತರ ೧೮೪೪ರಲ್ಲಿ ಚರ್ಮರೋಗದ ಮುಖ್ಯ ವೈದ್ಯನಾಗೂ, ೧೮೬೯ರಲ್ಲಿ ಚರ್ಮರೋಗದ ಪ್ರಾಧ್ಯಾಪಕ ನಾಗೂ ನೇಮಕವಾದನು. ಅವನ ೧೮೬೦-೧೮೭೬ ಕಾಲದ ಒಂದು ಚರ್ಮರೋಗದ ಪಠ್ಯಪುಸ್ತಕ ಅವನಿಗೆ ಗೌರವವನ್ನು ಸಂಪಾದಿಸಿತ್ತು. ಇದರ ಮೊದಲ ಅರ್ಧ ಭಾಗ ವನ್ನು ಹೆಬ್ರ ಸ್ವಂತ ಬರೆದನು. ಉಳಿದ ಅರ್ಧವನ್ನು ಕಪೋಸಿ ಬರೆದು ಮುಗಿಸಿದನು. ಇದು ಇಂಗ್ಲೀಷ್, ಫ್ರೆಂಚ್, ಇಟಲಿ ಮತ್ತು ರಷ್ಯದ ಭಾಷೆಗಳಿಗೆ ಭಾಷಾಂತರವಾಗಿ ಯೂರೋಪಿನಲ್ಲೆಲ್ಲಾ ಪ್ರಸಿದ್ಧಿಯಾಯಿತು.

ಜೊಸೆಫ್ ಹಿರ್ಟಲ್

ರಾಕಿಟಾನ್ಸ್ಕಿ, ಸ್ಕೋಡ ಹಾಗೂ ಹೆಬ್ರ ಎಂಬ ತ್ರಿಮೂರ್ತಿಗಳ ಪ್ರತಿಭೆಯಿಂದ ಅನೇಕ ವಿದ್ಯಾರ್ಥಿಗಳು ಯೂರೋಪಿನ ಎಲ್ಲಾ ಭಾಗಗಳಿಂದಲೂ, ಹೊರ ದೇಶ ಗಳಿಂದಲೂ ವಿಯನ್ನಕ್ಕೆ ಬಂದು ವಿದ್ಯೆಯನ್ನು ಕಲಿಯುತ್ತಿದ್ದರು. ಅವರಲ್ಲೊಬ್ಬನಾದ ಜೊಸೆಫ್ ಹಿರ್ಟಲ್ (೧೮೧೦-೧೮೯೪) ವಿಯನ್ನ ವೈದ್ಯಶಾಲೆಯ ಮೊದಲ ಅಂಗ ರಚನೆಶಾಸ್ತ್ರದ ಪ್ರಾಧ್ಯಾಪಕನಾಗಿ ನೇಮಕವಾದನು. ಇವನ ಉಪನ್ಯಾಸಗಳು, ಬರವಣಿಗೆಗಳು ಸ್ವಾರಸ್ಯಪೂರ್ಣವಾಗಿದ್ದವು. ಇವನು ಬರೆದಿದ್ದ "ಲೆಹ್‌ಬುಕ್ ಡರ್ ಅನಾಟೊಮಿಕ್" ಅತಿ ಶ್ರೇಷ್ಠವಾಗಿತ್ತು. ಇವನ ಸಾಧನೆಗಳನ್ನು ಮೆಚ್ಚಿ 'ಸಿಸೆರೋ ನಂತೆ ಮಾತಾಡಿ, ಹೀನ್‌ನಂತೆ ಬರೆಯುತ್ತಿದ್ದನು' ಎಂದು ಜುಕ್ಕರ್‌ಕ್ಯಾಂಡಲ್ ಹೇಳಿದನು.

ಇಗ್ನಾಸ್ ಸೆನ್ಮೆಲ್‌ವೀಸ್

ಹೆರಿಗೆ ವೈದ್ಯದಲ್ಲಿ ಆಸಕ್ತನಾದ ಇಗ್ನಾಸ್ ಫಿಲಿಪ್ ಸೆಮ್ಮೆಲ್‌ವೀಸ್ (೧೮೧೮ -೧೮೬೫) ಹಂಗೇರಿಯಲ್ಲಿ ಜನಿಸಿ, ೧೮೪೦ರಲ್ಲಿ ವಿಯನ್ನಾಕ್ಕೆ ವೈದ್ಯವಿದ್ಯೆ ಕಲಿಯಲು ಬಂದು, ೧೮೪೪ರಲ್ಲಿ ವೈದ್ಯಪದವಿಯನ್ನು ಪಡೆದನು. ಹೆರಿಗೆ ಶಾಖೆಯಲ್ಲಿ ಕೆಲಸ ಮಾಡು ತ್ತಿದ್ದಾಗ, ಒಂದು ಚಿಕಿತ್ಸಾಲಯದಲ್ಲಿ ಮರಣ ಸಂಖ್ಯೆ ಬಹು ಹೆಚ್ಚಾಗಿದ್ದುದನ್ನೂ, ಇನ್ನೊಂದರಲ್ಲಿ ಮರಣ ಸಂಖ್ಯೆ ಕಡಿಮೆ ಇದ್ದುದನ್ನೂ ನೋಡಿ ಇದರ ಕಾರಣ ತಿಳಿಯಲು ಕಾತುರನಾಗಿ, ಮೊದಲ ಚಿಕಿತ್ಸಾಲಯದಲ್ಲಿ ವಿದ್ಯಾರ್ಥಿಗಳು ಶವ ಪರೀಕ್ಷಾಲಯದಿಂದ

ನೇರವಾಗಿ ಬಂದು ಕೈ ತೊಳೆಯದೆ ಗರ್ಭಿಣಿಯರ ಯೋನಿ ಪರೀಕ್ಷೆ ಮಾಡುತ್ತಿದ್ದುದರಿಂದ ಅಲ್ಲಿ ಸಾವು ನೋವುಗಳು ಹೆಚ್ಚಿದ್ದವೆಂದೂ, ಇನ್ನೊಂದರಲ್ಲಿ ದಾದಿಯರು ಪರಿ



ಸೆಮ್ಮೆಲ್‌ವೀಸ್ (ಪ್ರಸವಾಲಯದಲ್ಲಿ)

ಶುದ್ಧವಾದ ಕೈಗಳಿಂದ ಪರೀಕ್ಷೆ ನಡೆಸುತ್ತಿದ್ದುದರಿಂದ ಸಾವು ಕಡಿಮೆಯಾಗಿದ್ದವೆಂದೂ ಸೆಮ್ಮೆಲ್‌ವೀಸ್ ತೀರ್ಮಾನಕ್ಕೆ ಬಂದನು. ಶವಪರೀಕ್ಷೆ ಮಾಡುತ್ತಿದ್ದಾಗ ಚಾಕುವಿನಿಂದ ಗಾಯಗೊಂಡು ಸೋಂಕು ತಗುಲಿ ಸತ್ತಿದ್ದ ಪ್ರಾಧ್ಯಾಪಕ ಕೊಲ್ಲೆಷ್ಕನ ಅಂಗಾಂಗಗಳ ವಿವರ ಬಾಣಂತಿ ಜ್ವರದಿಂದ ಸತ್ತವರ ಅಂಗಾಂಗಗಳನ್ನು ಹೋಲುತ್ತಿದ್ದುದರಿಂದ ಬಾಣಂತಿ ಜ್ವರಕ್ಕೆ ಸೋಂಕೇ ಕಾರಣವೆಂದು ಅವನು ಅಭಿಪ್ರಾಯಪಟ್ಟನು. ಅನೇಕ ಗರ್ಭಿಣಿಯರ ಸಾವಿಗೆ ತನ್ನ ಚೊಕ್ಕಟವಿಲ್ಲದ ರೀತಿಯೇ ಕಾರಣವಾಗಿತ್ತೆಂದು ಶೋಕವನ್ನು ವ್ಯಕ್ತಪಡಿಸಿದನು. ಆದ್ದರಿಂದ ಗರ್ಭಿಣಿಯರನ್ನು ಪರೀಕ್ಷಿಸುವಾಗಲೂ, ಹೆರಿಗೆ ನಡೆಸುವಾಗಲೂ ಚೊಕ್ಕವಾದ ಕೈಗಳಿಂದ ಪರೀಕ್ಷೆ ನಡೆಸಬೇಕೆಂದು ೧೮೪೭ರಲ್ಲಿ ಕಾನೂನೊಂದು ಜಾರಿಗೆ ಬಂದಿತು. ಇದರಿಂದ ಸಾವು ನೋವುಗಳು ಕ್ರಮೇಣ ಕಡಿಮೆಯಾಗುತ್ತ ಬಂದು, ಒಂದು ವರ್ಷದ ಅವಧಿಯಲ್ಲಿ ಮೊದಲನೇ ಚಿಕಿತ್ಸಾಲಯದಲ್ಲಿ ಸಾವೇ ಇಲ್ಲದಂತಾಯಿತು. ಈ ಕಾನೂನು ಮೊಟ್ಟಮೊದಲಿನ ನಂಜುರೋಧಕದ ಅಥವಾ ವಿಷನಾಶಕ ಯೋಜನೆಯಾಗಿತ್ತು. ಈ ಅಭಿಪ್ರಾಯವನ್ನು ಪ್ರಾಧ್ಯಾಪಕ ಕ್ಲೀನ್ ವಿರೋಧಿಸಿದಾಗ, ರಾಕಿಟಾನ್ಸ್ಕಿ, ಸ್ಕೋಡ ಮತ್ತು ಹೆಬ್ರ ಸೆಮ್ಮೆಲ್‌ವೀಸ್‌ನ ಅಭಿಪ್ರಾಯಗಳೇ ಸರಿಯೆಂದು ಸಮರ್ಥಿಸಿ ಸೆಮ್ಮೆಲ್‌ವೀಸಿಗೆ ಬೆಂಬಲ ಕೊಟ್ಟಿದ್ದರು. ಅನಂತರ ೧೮೬೧ರಲ್ಲಿ ಇವನು ಬರೆದ 'ಬಾಣಂತಿ ಜ್ವರದ ಕಾರಣಗಳು, ಕಲ್ಪನೆ ಮತ್ತು

ನಿರೋಧ' ಎಂಬ ಪುಸ್ತಕದಲ್ಲಿ ತನ್ನ ಅಭಿಪ್ರಾಯಗಳನ್ನು ಸಮರ್ಥಿಸಿದ್ದಲ್ಲದೆ ತನ್ನ ವಿರೋಧಿಗಳನ್ನು ಕಟುತರವಾಗಿ ಟೀಕಿಸಿದನು.

ರಾಕಿಟಾನ್ಸ್ಕಿ,ಸ್ಕೋಡ,ಹೆಬ್ರ ಮುಂತಾದವರ ಕೊಡುಗೆಗಳಿಂದ ವಿಯನ್ನಹೊಸ ವೈದ್ಯಶಾಲೆ ಪ್ರಖ್ಯಾತಿ ಪಡೆದು ಮುಂದಿನ ವೈದ್ಯ ಪರಿಣತರಿಗೆ ಸಾಕಷ್ಟು ನೆರವನ್ನು ನೀಡಿದವು. ಇದನ್ನು ಉಪಯೋಗಿಸಿಕೊಂಡು ಬಿಲ್ರಾತ್, ಟ್ಯಾಂಡ್ಲರ್, ಜುಕ್ಕರ್ ಕ್ಯಾಂಡಲ್,ವೆಂಕಿಬಾಕ್, ವಾನ್ ನೂರ್ಡೆನ್, ಎಷಿರೀಷ್, ವಾನ್ ಪಿರ್ಕೆ ಆದಿಯಾಗಿ ವಿಯನ್ನ ವೈದ್ಯಶಾಲೆಯ ಗೌರವವನ್ನು ಕಾಪಾಡಿಕೊಂಡು ಬಂದಿದ್ದರು. ಧ್ವನಿನಾಳ ದರ್ಶಕ ಯಂತ್ರ ಹಾಗೂ ಮೂಗು ಪರೀಕ್ಷೆ ಸಲಕರಣೆಗಳು ಆಗ ಉಪಯೋಗಕ್ಕೆ ಬಂದಿದ್ದವು. ಕಣ್ಣುರೋಗ, ಕಿವಿರೋಗ, ಧ್ವನಿನಾಳ ರೋಗಗಳೆಂದು ವಿಶೇಷ ಶಾಖೆಗಳು ೧೯ನೇ ಶತಮಾನದ ಮಧ್ಯಭಾಗದಲ್ಲಿ ಪ್ರಾರಂಭವಾಗಿ ವೈದ್ಯ ವಿದ್ಯಾಭಿವೃದ್ಧಿಗೆ ಸಲಹೆ ಕೊಟ್ಟಿದ್ದವು. ಅದೇ ಶತಮಾನದ ಎರಡನೆ ಅರ್ಧ ಭಾಗದಲ್ಲಿ ವಿಯನ್ನ ಶ್ರೇಷ್ಠತೆ ಮತ್ತಷ್ಟು ಹೆಚ್ಚಿ, ಅಮೆರಿಕದ ವಿದ್ಯಾರ್ಥಿಗಳೂ, ವೈದ್ಯರೂ ಸಾಕಷ್ಟು ಸಂಖ್ಯೆಯಲ್ಲಿ ಹೆಚ್ಚಿನ ಶಿಕ್ಷಣವನ್ನು ಪಡೆಯಲು ವಿಯನ್ನಕ್ಕೆ ಬಂದು ತರಪೇತು ಪಡೆಯುತ್ತಿದ್ದರು.

ಜರ್ಮನಿಯಲ್ಲಿ ವೈದ್ಯಶಾಸ್ತ್ರದ ಮುನ್ನಡೆ

ವಿಯನ್ನದಲ್ಲಿ ವೈದ್ಯಶಾಸ್ತ್ರ ಶಿಖರವನ್ನು ಮುಟ್ಟಿದಾಗ ಜರ್ಮನಿ ಇನ್ನೂ ಪ್ರಕೃತಿ ತತ್ತ್ವಶಾಸ್ತ್ರದಲ್ಲೇ ತಡವರಿಸುತ್ತಿತ್ತು ಸುಮಾರು ೨೫ ವರ್ಷಗಳು ನೆಪೋಲಿಯನ್ನನ ಯುದ್ಧದಿಂದಲೂ,ಫ್ರೆಂಚರ ಆಕ್ರಮಣದಿಂದಲೂ ಜರ್ಮನಿ ತಲೆಯೆತ್ತಲು ಸಾಧ್ಯವಾಗದೆ ೧೯ನೇ ಶತಮಾನದ ಮೊದಲಿನಲ್ಲಿ ಈ ಮಾನಸಿಕ ಹಾಗೂ ಭೌತಿಕ ಶೈಥಿಲ್ಯಗಳಿಂದ ಪಾರಾಗುವ ಲಕ್ಷಣಗಳು ಕಂಡುಬಂದವು. ಫ್ರಾನ್ಸ್ ಮತ್ತು ಆಸ್ಟ್ರಿಯ ವೈದ್ಯಶಾಸ್ತ್ರ ಪ್ಯಾರಿಸ್ ಮತ್ತು ವಿಯನ್ನ ಪಟ್ಟಣಗಳ ಹದ್ದುಬಸ್ತನ್ನೂ ಮೀರಿ ತನ್ನ ಪ್ರಭಾವವನ್ನು ಜರ್ಮನಿ ಪ್ರಾಂತ್ಯದಲ್ಲೆಲ್ಲಾ ಹರಡಿ ಅನೇಕ ವೈದ್ಯ ಕೇಂದ್ರಗಳಲ್ಲಿ ಹುರುಪಿನಿಂದ ಮುಂದುವರಿಯುತ್ತಿದ್ದುದೇ ಇದಕ್ಕೆ ಕಾರಣವಾಗಿತ್ತು.

ಜೊಹನ್ನೆಸ್ ಮುಲ್ಲರ್

ಜೊಹನ್ನೆಸ್ ಮುಲ್ಲರ್ (೧೮೦೧-೧೮೫೮) ಈ ಹುರುಪಿನ ಮುಂದಾಳತ್ವವನ್ನು ವಹಿಸಿ ಜರ್ಮನಿಯಲ್ಲಿ ವೈದ್ಯಶಾಸ್ತ್ರದ ಮುನ್ನಡೆಗೆ ಕಾರಣಕರ್ತೃವಾದನು. ಇವನು ಚಿಕ್ಕಂದಿನಿಂದಲೂ ಸೂಕ್ಷ್ಮದೃಷ್ಟಿಯುಳ್ಳವನಾಗಿ, ವಿದ್ಯಾರ್ಥಿಯಾಗಿದ್ದಾಗಲೇ 'ಪಿಂಡ ಗೂಸಿನ ಉಸಿರಾಟ' ವೆಂಬ ಲೇಖನ ಬರೆದಿದ್ದನು. ಇದು ಬಹುಮಾನವನ್ನೂ ಪಡೆದಿತ್ತು. 'ಪ್ರಕೃತಿ ತತ್ತ್ವಶಾಸ್ತ್ರ'ವನ್ನು ದೂರಮಾಡಿ ಪ್ರಯೋಗ ಹಾಗೂ ಅವುಗಳಿಂದೇಳುವ ನಿಗಮನಗಳನ್ನು ಜಾರಿಗೆ ತರಲು ಶ್ರಮಿಸಿದ್ದನು. ೧೮೨೨ರಲ್ಲಿ ಪದವಿ ಪಡೆದು ಬಾನ್‌ನಲ್ಲಿ ಅಂಗರಚನೆ, ಅಂಗಕ್ರಿಯೆ ಶಾಸ್ತ್ರಗಳ ಪ್ರಾಧ್ಯಾಪಕನಾಗಿ ನೇಮಕ

ವಾದನು. ಬರ್ಲಿನ್ನಿನ ರುಡಾಲ್ಫ್ ಸತ್ತನಂತರ ಅವನ ಸ್ಥಳದಲ್ಲಿ ಅಂಗರಚನೆ, ಅಂಗಕ್ರಿಯೆ ಮತ್ತು ರೋಗಶಾಸ್ತ್ರಗಳ ಪ್ರಾಧ್ಯಾಪಕನಾಗಿ ೧೮೩೩ರಲ್ಲಿ ನೇಮಕವಾಗಿ ೨೫ ವರ್ಷಗಳ ಕಾಲ, ಸಾಯುವ ತನಕ ಸೇವೆಯನ್ನುಸಲ್ಲಿಸಿದನು. ಇವನು ಶಿಕ್ಷಣ ಕೊಡುವುದರಲ್ಲಿ ಹೇರಾಸಕ್ತಿ ಪಡೆದಿದ್ದನು. ಇದರಿಂದ ಇವನಿಗೆ ಅಗ್ರಸ್ಥಾನ ಒದಗಿತ್ತು. ಮೂಳೆ, ಮೃದ್ವಸ್ಥಿ, ಗ್ರಂಥಿಗಳ ಪರಿಶೋಧನೆ ನಡೆಸಿ ಪ್ರಖ್ಯಾತಿ ಪಡೆದನು. ಮುಲ್ಲರ್ ಸಾಗುನಾಳವನ್ನು ಕಂಡುಹಿಡಿಯಲು ಕಾರಣನಾಗಿದ್ದನು. ಕಣ್ಜಾಲದ ಒತ್ತಡದಿಂದೇಳುವ ಬಣ್ಣಗಳ ಅನುಭವ, ಧ್ವನಿ, ಧ್ವನಿತಂತು ಮುಂತಾದ ವಿಷಯಗಳ ಅರಿವಿತ್ತು. ಸೂಕ್ಷ್ಮದರ್ಶಕವನ್ನು ಉಪಯೋಗಿಸಿ ನಾನಾ ತರಹದ ಗಡ್ಡೆಗಳ ವಿವರಗಳನ್ನು ತಿಳಿದಿದ್ದನು. ಮುಲ್ಲರ್ ಪತ್ರಿಕೆ ೧೮೩೪ರಲ್ಲಿ ಹೊರಬೀಳಲು ಇವನೇ ಕಾರಣನಾಗಿದ್ದನು. ೧೮೩೩–೧೮೪೦ರಲ್ಲಿ ಬರೆದ 'ಅಂಗಕ್ರಿಯೆಯ ವೈದ್ಯಶಾಸ್ತ್ರದ ಕೈಪಿಡಿ' ಇವನ ಶ್ರೇಷ್ಠ ಗ್ರಂಥ. ಫ್ರಾನ್ಸಿನಲ್ಲಿ ಕ್ಲಾಡ್ ಬರ್ನಾರ್ಡ್ ಹೇಗೋ ಹಾಗೆ ಜರ್ಮನಿಯಲ್ಲಿ ಮುಲ್ಲರ್ ವಿಜ್ಞಾನದಲ್ಲಿ ಪ್ರಸಿದ್ಧಿಯಾಗಿದ್ದನು. ಆದರೆ ಲೆಕ್ಕಕ್ಕೆ ಬರುವ ಶಿಷ್ಯರಾರನ್ನೂ ಬರ್ನಾರ್ಡ್ ಮುಂದೆ ತಂದಿರಲಿಲ್ಲ. ಮುಲ್ಲರ್ ಆದರೂ ಅನೇಕ ಗಣ್ಯ ವ್ಯಕ್ತಿಗಳನ್ನು ತರಪೇತು ಮಾಡಿದ್ದನು. ಅವರ ಪೈಕಿ ಷ್ವಾನ್, ಹೆನ್ಲಿ, ರೇಮಂಡ್, ವರ್ಕೌ, ಹೆಲ್ಮೋಲ್‌ಟ್ಸ್ ಅಸಾಧಾರಣ ಕೊಡುಗೆ ನೀಡಿದ್ದರು.

ಕಾರ್ಲ್ ಲಡ್ವಿಗ್

ಕಾರ್ಲ್ ಲಡ್ವಿಗ್ (೧೮೧೬–೧೮೯೫) ಮಾರ್ಬರ್ಗ್‌ನಿಂದ ೧೮೪೯ರಲ್ಲಿ ಪದವಿ ಪಡೆದು ಅಲ್ಲೇ ೧೦ ವರ್ಷಗಳ ಕಾಲ ಪ್ರಾಧ್ಯಾಪಕನಾಗಿ ಕೆಲಸ ಮಾಡಿದನು. ಮೂತ್ರ ತಯಾರಾಗುವ ರೀತಿಯನ್ನು ಪರೀಕ್ಷಿಸಿ ಮೂತ್ರಪಿಂಡದಲ್ಲಿರುವ ರಕ್ತನಾಳಗಳ ಗೊಂಚಲುಗಳ ಮೇಲ್ಪರೆ ಒಂದು ಸಾಧಾರಣ ಶೋಧಕ ಯಂತ್ರವೆಂದು ತಿಳಿಸಿದನು. ರಕ್ತಚಲನೆಯ ಪ್ರಯೋಗಗಳಲ್ಲಿ ಉಪಯೋಗಿಸುವ ಅಲೆಚಿತ್ರಕವನ್ನು ೧೮೪೭ರಲ್ಲಿ ಕಂಡುಹಿಡಿದನು. ೧೮೫೫ರಿಂದ ೧೮೬೫ರ ತನಕ ವಿಯನ್ನದಲ್ಲಿ ಪ್ರಾಧ್ಯಾಪಕನಾಗಿದ್ದಾಗ ರಕ್ತದ ಅನಿಲಗಳನ್ನೂ, ರಕ್ತಹರಿಮಾಪಿಯನ್ನೂ ಕಂಡುಹಿಡಿದನು. ಅನಂತರ ೧೮೬೫ರಲ್ಲಿ ಲೀಪ್ಸಿಗ್‌ನಿಂದ ಕರೆ ಬಂದು, ಅಲ್ಲಿ ತನ್ನ ಹೆಸರಿನ ಅಂಗಕ್ರಿಯೆಶಾಸ್ತ್ರ ಸಂಸ್ಥೆಯೊಂದನ್ನು ಸ್ಥಾಪಿಸಿದನು. ಇದು ಪ್ರಪಂಚದಲ್ಲೇಮೇಲಾದ ಅಂಗಕ್ರಿಯೆಶಾಸ್ತ್ರದ ಸಂಸ್ಥೆಯಾಗಿ ಪರಿಣಮಿಸಿತು. ಇಲ್ಲಿ ಇವನ ಕೈಕೆಳಗೆ ೨೦೦ ಶ್ರೇಷ್ಠ ವಿಜ್ಞಾನಿಗಳು ತರಪೇತು ಪಡೆಯುತ್ತಿದ್ದರು. ಇವನ ಒಂದು ವಿಶೇಷ ಗುಣವೆಂದರೆ, ತಾನು ಪ್ರಯೋಗ ನಡೆಸಿ ಅದರ ಪ್ರತಿಫಲವನ್ನು ಇತರರ ಹೆಸರಿನಲ್ಲಿ ಪ್ರಕಟ ಮಾಡುತ್ತಿದ್ದನು. 'ಲಡ್ವಿಗ್ಗನು ಪರಿಚಯ ಮಾಡಿಕೊಂಡವರೆಲ್ಲರೂ ಅವನ ಆತ್ಮಾಕರ್ಷಕ ವ್ಯಕ್ತಿತ್ವದ ಪ್ರಭಾವಕ್ಕೊಳಗಾಗುತ್ತಿದ್ದರು' ಎಂದು ಕ್ರೊನೆಕರ್ ತಿಳಿಸಿದ್ದಾನೆ.

ಲೀಬಿಗ್

ಲಡ್ವಿಗ್ ಕಾಲದಲ್ಲೇ ರಸಾಯನಶಾಸ್ತ್ರದಲ್ಲಿ ಹೆಸರು ಪಡೆದಿದ್ದ ಲೀಬಿಗ್

(೧೮೦೩–೧೮೭೩) ಪ್ಯಾರಿಸ್ಸಿನಲ್ಲಿ ವ್ಯಾಸಂಗವನ್ನು ಮುಗಿಸಿ, ಜರ್ಮನಿಗೆ ಹಿಂತಿರುಗಿ, ಗೀಸ್ಸೆನ್‌ನಲ್ಲಿ ೧೮೨೬ರಲ್ಲಿ ಪ್ರಾಧ್ಯಾಪಕನಾದನು. ಇವನ ಪ್ರೇರಣೆಯಿಂದ ಸರ್ಕಾರ ರಸಾಯನಶಾಸ್ತ್ರದ ಪ್ರಯೋಗಶಾಲೆಯೊಂದನ್ನು ಸ್ಥಾಪಿಸಿತು. ಇದರಲ್ಲಿ ಲೀಬಿಗ್ ಅಜೈವಿಕ ರಸಾಯನಶಾಸ್ತ್ರದ ಅನೇಕ ಶೋಧನೆಗಳನ್ನು ಮಾಡಿ ಪ್ರಖ್ಯಾತಿ ಪಡೆದನು. ಅವುಗಳಲ್ಲಿ ಹಿಪ್ಪೂರಿಕ್ ಆಮ್ಲ, ಕ್ಲೋರಾಲ್, ಕ್ಲೋರೋಫಾರ್ಮ್ ಮುಂತಾದವುಗಳ ಶೋಧನೆಗಳು ಮುಖ್ಯವಾದವು. ರಕ್ತವಸೆ, ಪಿತ್ತರಸಗಳಲ್ಲೂ ಪ್ರಯೋಗ ನಡೆಸಿದ್ದನು. ಶರೀರದಲ್ಲಾಗುವ ಉರಿವು ಮತ್ತು ಆಮ್ಲಜನಕಗೂಡಿಕೆ ಶರೀರದ ಶಾಖೋತ್ಪತ್ತಿಗೆ ಕಾರಣವೆಂದು ತಿಳಿಸಿದನು. ಇವನು ೧೮೪೨ರಲ್ಲಿ ಜರ್ಮನ್ ಭಾಷೆಯಲ್ಲಿ ಪ್ರಕಟ ಮಾಡಿದ 'ಅಂಗಕ್ರಿಯೆಶಾಸ್ತ್ರ, ರೋಗಶಾಸ್ತ್ರಗಳಿಗೆ ಅನ್ವಯಿಸುವ ಜೈವಿಕ ರಸಾಯನ ಶಾಸ್ತ್ರ' ಎಂಬ ಪುಸ್ತಕ ಜೈವಿಕ ರಸಾಯನಶಾಸ್ತ್ರದ ಮೊಟ್ಟಮೊದಲ ಪುಸ್ತಕವಾಗಿತ್ತು. ಇದರಲ್ಲಿ ಜೀವವಸ್ತುಕರಣದ ಕಲ್ಪನೆಯನ್ನು ಇವನು ಮೊಟ್ಟಮೊದಲಿಗೆ ಹೊರಪಡಿಸಿದನು. ಆದರೂ ಏಕಾಣುಜೀವಿಗಳಲ್ಲೂ, ಜೀವಂತ ಹುದುಗುಗಳಲ್ಲೂ ನಂಬಿಕೆ ಇರಲಿಲ್ಲ. ಒಮ್ಮೆ ಪ್ಯಾಶ್ಚೂರ್ ಈ ವಿಷಯವಾಗಿ ಚರ್ಚಿಸಲು ಲೀಬಿಗ್‌ನನ್ನು ನೋಡಬಂದಾಗ ಮೈ ಸರಿಯಿಲ್ಲವೆಂದು ಹೇಳಿ ಚರ್ಚೆಗೆ ಆಸ್ಪದವನ್ನೇ ಕೊಡಲಿಲ್ಲವೆಂದು ಹೇಳಲಾಗಿದೆ. ೧೮೫೨ರಿಂದ ಸಾಯುವ ತನಕ ಮ್ಯೂನಿಕ್ಕಿನಲ್ಲಿ ರಸಾಯನಶಾಸ್ತ್ರದ ಪ್ರಾಧ್ಯಾಪಕನಾಗಿ ಕೆಲಸ ಮಾಡಿದ್ದರೂ, ಅವನ ಮುಖ್ಯ ಶೋಧನೆಗಳೆಲ್ಲಾ ಅವನು ಗೀಸ್ಸೆನ್‌ನಲ್ಲಿ ಇದ್ದಾಗಲೇ ನಡೆದಿದ್ದವೆಂದು ತಿಳಿದುಬಂದಿದೆ. ವೋಲರ್ ಜೊತೆ ಸೇರಿ, ಲೀಬಿಗ್ ೧೮೩೨ರಲ್ಲೇ ರಸಾಯನಶಾಸ್ತ್ರದ ಚರಿತ್ರೆಯಲ್ಲೇ ಪ್ರಸಿದ್ಧವೆಂದೆನಿಸಿದ ಬೆನ್ಜಾಲ್ಡಿಹೈಡ್ ಶೋಧನೆಯನ್ನು ನಡೆಸಿದ್ದನು.

ಫ್ರೀಡ್ರಿಕ್ ವೋಲರ್

ಫ್ರೀಡ್ರಿಕ್ ವೋಲರ್ (೧೮೦೦–೧೮೮೨) ಗಾಟಿಂಜನ್‌ನಲ್ಲಿ ರಸಾಯನಶಾಸ್ತ್ರದ ಪ್ರಾಧ್ಯಾಪಕನಾಗುವುದಕ್ಕೆ ಮೊದಲೇ, ೧೮೪೪ರಲ್ಲಿ ತನ್ನ ೨೪ನೇ ವಯಸ್ಸಿನಲ್ಲಿಯೇ ಆಹಾರದ ಜೊತೆಯಲ್ಲಿ ತೆಗೆದುಕೊಂಡ ಬೆನ್ಜೋಯಿಕ್ ಆಮ್ಲ ಶರೀರದಲ್ಲಿ ಬದಲಾವಣೆ ಹೊಂದಿ ಹಿಪ್ಪೂರಿಕ್ ಆಮ್ಲವಾಗಿ ಮೂತ್ರದಲ್ಲಿ ಕಾಣುವುದನ್ನು ತೋರಿಸಿದನು. ಇದು ಅಂಗಕ್ರಿಯೆ ರಸಾಯನಶಾಸ್ತ್ರದ ಮೂಲ ಶೋಧನೆ. ಇದಾದ ೪ ವರ್ಷಗಳ ಅನಂತರ, ರಸಾಯನಶಾಸ್ತ್ರದ ಮತ್ತೊಂದು ಮಹತ್ತರವಾದ ಶೋಧನೆಯೆಂದರೆ ಅಮೋನಿಯಂ ಸಯನೇಟನ್ನು ಬಿಸಿ ಮಾಡಿ ಮೂತ್ರಲವಣವನ್ನು ತಯಾರಿಸುವುದನ್ನು ಪ್ರಪಂಚದ ಮುಂದಿಟ್ಟು, ರಸಾಯನಶಾಸ್ತ್ರದಲ್ಲೇ ಮೊಟ್ಟಮೊದಲ ಬಾರಿಗೆ ಅಜೈವಿಕ ಪದಾರ್ಥದಿಂದ ಜೀವಾಳಬಲ ವಾದದ ಸಹಾಯವಿಲ್ಲದೆ ಜೈವಿಕ ಪದಾರ್ಥವನ್ನು ತಯಾರಿಸುವ ವಿಧಾನವನ್ನು ತೋರಿಸಿಕೊಟ್ಟನು.

ಜೊಹಾನ್ ಷಾನ್ಲೀನ್

ಜೊಹಾನ್ ಲ್ಯೂಕಸ್ ಷಾನ್ಲೀನ್ (೧೭೯೩–೧೮೬೪) ಮುಲ್ಲರ್‌ನ ಹಾಗೆ

ಒಳ್ಳೆಯ ಬರಹಗಾರನಲ್ಲದಿದ್ದರೂ, ಉಪನ್ಯಾಸ ಕೊಡುವುದರಲ್ಲೂ, ರೋಗಿ ಹಾಸೆ ಪಕ್ಕದ ನಿದರ್ಶನಗಳಲ್ಲೂ, ರೋಗಿಯನ್ನು ಪರೀಕ್ಷಿಸುವುದರಲ್ಲೂ ಬಹಳ ಚತುರ ಆದ್ದರಿಂದಲೇ ಇವನು ಜರ್ಮನಿಯ ರೋಗಿ ಹಾಸೆಪಕ್ಕದ ವೈದ್ಯಶಾಸ್ತ್ರದ ಮುನ್ನಡೆಗೆ ಕಾರಣನಾದನು. ಹುರಿ ಹೊಸೆಯುವವನ ಮಗನಾಗಿದ್ದರೂ, ಲ್ಯಾಂಡ್‌ಷಟ್ ವಿಶ್ವ ವಿದ್ಯಾಲಯದಲ್ಲೂ, ಅನಂತರ ವುರ್ಜ್‌ಬರ್ಗ್ ವಿಶ್ವವಿದ್ಯಾಲಯದಲ್ಲೂ ವ್ಯಾಸಂಗ ಮಾಡಿ ೧೮೧೬ರಲ್ಲಿ ವುರ್ಜ್‌ಬರ್ಗ್‌ನಿಂದ ಪದವಿ ಪಡೆದಿದ್ದನು. ೧೮೩೩ರಲ್ಲಿ ಜೂರಿಚ್‌ನಲ್ಲೂ, ೧೮೪೦ರಲ್ಲಿ ಬರ್ಲಿನ್ನಿನಲ್ಲೂ ವೈದ್ಯಶಾಸ್ತ್ರದ ಪ್ರಾಧ್ಯಾಪಕನಾಗಿ ಸೇವೆ ಸಲ್ಲಿಸಿದನು. "ಷಾನ್ಲೀನ್ ರೋಗ"ವನ್ನು ವಿವರಿಸಲು ಇವನೇ ಮೊದಲನೆಯವನು. ಹಾಗೂ ಹುಟ್ಟಸಿಪ್ಪು ರೋಗದ ಪರೋಪಜೀವಿಯ ಗುಣಗಳನ್ನು ವಿವರಿಸಿದ್ದನು. ಪ್ರಕೃತಿ ತತ್ತ್ವಶಾಸ್ತ್ರದಲ್ಲಿ ಮೊದಮೊದಲು ನಂಬಿಕೆಯಿದ್ದು ಕಾಲಾಂತರ ನಂಬಿಕೆ ತಪ್ಪಿ, ವೈದ್ಯ ಶಾಸ್ತ್ರದಲ್ಲಿ ಆಸಕ್ತಿ ಹುಟ್ಟಿ, ಅದು ಅನುಭವ, ನಿಜಾಂಶ ಪೂರ್ಣವಾಗಿದೆಯೆಂದು ತೀರ್ಮಾನಿಸಿದನು.

ಷ್ವಾನ್ ಮತ್ತು ಷ್ಲೀಡೆನ್

ಮುಲ್ಲರ್ ವಿದ್ಯಾರ್ಥಿ ಥಿಯೊಡೊರ್ ಷ್ವಾನ್ (೧೮೧೦–೮೨) ಮತ್ತು ಅದೇ ಕಾಲದಲ್ಲಿ ಬರ್ಲಿನ್ನಿನ ಸಸ್ಯಶಾಸ್ತ್ರದ ಪ್ರಾಧ್ಯಾಪಕನಾಗಿದ್ದ ಮತಯಾಸ್ ಷ್ಲೀಡೆನ್ (೧೮೦೪–೮೧)ಇಬ್ಬರೂ ಸೇರಿ ಜೀವಕಣ ವಾದದ ಮೂಲ ಪುರುಷರಾಗಿ ಜೀವವಿಜ್ಞಾನ ಶಾಸ್ತ್ರಕ್ಕೆ ಕಳೆ ತುಂಬಿದರು. ಷ್ವಾನ್ ಬರ್ಲಿನ್ನಲ್ಲಿ ಪದವಿಯನ್ನು ಪಡೆದ ಮೇಲೆ ಮುಲ್ಲರ್,ಹೆನ್ಲಿ, ಷ್ಲೀಡೆನ್‌ರ ಸಂಪರ್ಕವನ್ನು ಹೊಂದಲು ಸಮಯ ಒದಗಿತ್ತು.ಷ್ಲೀಡೆನ್ ೧೮೩೮ರಲ್ಲಿ ಸಸ್ಯಗಳೆಲ್ಲಾ ಜೀವಕಣಗಳಿಂದ ಕೂಡಿವೆಯೆಂದೂ, ಜೀವಕಣಗಳ ನಾಭಿಯ ಬದಲಾವಣೆಯಿಂದ ಸಸ್ಯ ಬೆಳೆಯುತ್ತದೆಂದೂ ತಿಳಿಸಿದನು. ಒಂದು ವರ್ಷ ಕಳೆದ ನಂತರ, ಷ್ವಾನ್, ಸಸ್ಯ ಮತ್ತು ಪ್ರಾಣಿಗಳೆರಡರಲ್ಲೂ ಜೀವಕಣಗಳಿವೆಯೆಂದೂ, ಪ್ರತಿಯೊಂದು ಅಂಗದ ಜೀವಕಣಗಳು ತಮ್ಮವೇ ವಿಶೇಷ ಲಕ್ಷಣಗಳನ್ನು ಹೊಂದಿವೆಯೆಂದೂ ಲೇಖನವನ್ನು ಬರೆದು ತಿಳಿಸಿದನು. ಜೀವಕಣವನ್ನು ಇವರಿಬ್ಬರಿಗಿಂತಲೂ ಮೊದಲೇ ಅನೇಕ ವಿಜ್ಞಾನಿಗಳು ವಿವರಿಸಿದ್ದರೂ, ಷ್ವಾನ್ ಮತ್ತು ಷ್ಲೀಡೆನ್‌ರ ವಿವರ ಆಗಿನ ಕಾಲದ ದೃಷ್ಟಿಯಲ್ಲಿ ಹೆಚ್ಚಿನ ಪ್ರಭಾವವನ್ನು ಬೀರಿತು. ಮುಲ್ಲರ್‌ನ ಸಹವಾಸದಲ್ಲಿದ್ದಾಗ ಷ್ವಾನ್ ಇನ್ನೂ ಅನೇಕ ಶೋಧನೆಗಳನ್ನು ನಡೆಸಿದನು. ಭ್ರೂಣಬೆಳೆಯಲು ಗಾಳಿ ಅತ್ಯಗತ್ಯವೆಂದೂ,ನರ ತಂತುಗಳಿಗೆ ಒಂದು ಹೊದಿಕೆ ಇದೆಯೆಂದೂ,ಅನ್ನನಾಳದ ಮೇಲ್ಭಾಗದಲ್ಲಿ ಪಟ್ಟೆ ಸ್ನಾಯುವಿದೆಯೆಂದೂ, ಹುದುಗೇಳಲು ಹುದುಗು ಕಾರಣವೆಂದೂ, ಕಾಯಿಸಿದರೆ ಹುದುಗು ನಾಶವಾಗುವುದೆಂದೂ, ಜಠರದಲ್ಲಿ ಪೆಪ್ಸಿನ್ ಕಿಣ್ವವಿದೆಯೆಂದೂ, ಆಹಾರ ಜೀರ್ಣವಾಗಲು ಪಿತ್ತರಸ ಅಗತ್ಯವೆಂದೂ ಷ್ವಾನ್ ಶೋಧನೆ ನಡೆಸಿದನು. ೧೮೩೯ರಲ್ಲಿ ಜರ್ಮನ್ ಭಾಷೆಯಲ್ಲಿ 'ಸೂಕ್ಷ್ಮದರ್ಶಕದ ಶೋಧನೆಗಳು'

ಎಂಬ ಲೇಖನವನ್ನು ಬರೆದ ಮೇಲೆ ಷ್ವಾನ್‌ಗೆ ಬೆಲ್ಜಿಯಂನಿಂದ ಕರೆ ಬಂದು ಅಲ್ಲಿ ಸಾಯುವ ತನಕ ೪೦ ವರ್ಷ ಕೆಲಸ ಮಾಡುತ್ತಿದ್ದನು. ಆದರೂ ಬರ್ಲಿನ್ನಿನಲ್ಲಿ ೫ ವರ್ಷ ಮುಲ್ಲರ್‌ನ ಸಹವಾಸದಲ್ಲಿದ್ದಾಗ ನಡೆಸಿದಷ್ಟು ಸಂಶೋಧನೆಯನ್ನು ಬೆಲ್ಜಿಯಂನಲ್ಲಿ ನಡೆಸಲಾಗಲಿಲ್ಲ. ಇದಕ್ಕೆ ಮುಲ್ಲರ್ ಮತ್ತು ಮುಲ್ಲರ್ ಶಿಷ್ಯಂದಿರ ಪ್ರಭಾವವೇ ಕಾರಣವೆಂದು ತಿಳಿದು ಬಂದಿದೆ.

ಜೇಕಬ್ ಹೆನ್ಲಿ

ಮುಲ್ಲರ್‌ನ ಮತ್ತೊಬ್ಬ ಅಚ್ಚುಮೆಚ್ಚಿನ ಶಿಷ್ಯ ಜೇಕಬ್ ಹೆನ್ಲಿ (೧೮೦೯–೮೫) ಮಿಣಿ ಅಂಗರಚನೆಶಾಸ್ತ್ರದಲ್ಲಿ ಸಾಕಷ್ಟು ಪ್ರಯೋಗ ನಡೆಸಿ, ತೋರ ಅಂಗರಚನೆಶಾಸ್ತ್ರದಲ್ಲಿ ವಿಸೇಲಿಯಸ್ ಪಡೆದಿದ್ದಷ್ಟು ಶ್ರೇಷ್ಠತೆಯನ್ನು ಪಡೆದಿದ್ದನು. ಬಾನ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಸುಧಾರಣ ವಿದ್ಯಾರ್ಥಿ ಸಂಘ ಒಂದನ್ನು ಸೇರಿ ಜರ್ಮನಿಯ ಸಣ್ಣ ಪುಟ್ಟ ರಾಜ್ಯಗಳನ್ನು ಒಟ್ಟುಗೂಡಿಸುವ ರಾಜಕೀಯದ ಚಳುವಳಿಯಲ್ಲಿ ಭಾಗವಹಿಸಿದನು. ಆಗ ಮುಲ್ಲರ್‌ನ ಸಂಬಂಧ ಬೆಳೆದು ಅವನ ಪ್ರಭಾವಕ್ಕೆ ಒಳಗಾಗಿ, ೧೮೪೦ರಲ್ಲಿ ಜರ್ಮನ್ ಭಾಷೆಯಲ್ಲಿ ಬರೆದ ಅತಿ ಶ್ರೇಷ್ಠವಾದ ತನ್ನ "ದುರ್ನಾತ ಹಾಗೂ ಸೋಂಕು ಮತ್ತು ದುರ್ನಾತದಿಂದೇಳುವ ಸೋಂಕು ರೋಗಗಳು" ಎಂಬ ಪುಸ್ತಕದಲ್ಲಿ ಶಾಖೋತ್ಪತ್ತಿಗೆ ಕಾರಣವಾದ ವಸ್ತು ಜೀವವುಳ್ಳದೆಂದು ತಿಳಿಸಿದ್ದನು. ಈ ಆಧಾರದ ಮೇಲೆ ಸಿಡುಬು, ಹೆಕಲಿ, ಉಪದಂಶ, ಕ್ಷಯ ಮತ್ತು ದದ್ದುಪಡೆಗಳನ್ನು ವಿವರಿಸಿದನು. ಅನಂತರ ಬರ್ಲಿನ್ ಬಿಟ್ಟು, ಜೂರಿಚ್, ಹೈಡೆಲ್‌ಬರ್ಗ್, ಗಾಟಿಂಜನ್‌ಗಳಲ್ಲಿ ಪ್ರಾಧ್ಯಾಪಕನಾಗಿದ್ದು ಸಾಯುವ ತನಕ ಶೋಧನೆಗಳನ್ನು ನಡೆಸುತ್ತಿದ್ದನು. ಚರ್ಮದ ಮೇಲ್ಪರೆ ಕಣಗಳನ್ನು ಮೊಟ್ಟಮೊದಲಿಗೆ ಇವನು ವಿವರಿಸಿ, ಪರೆಯ ಉಪಯೋಗವನ್ನು ತಿಳಿಸಿದ್ದನು. ಕರುಳಿನ ಪೊರೆಯ ಕಣಗಳನ್ನೂ ವಿವರಿಸಿದನು. ಮೇಲ್ಪರೆಯ ಕಂಬಾಕಾರದ ಎವೆಗೂಡಿದ ಕಣಗಳನ್ನೂ ಸ್ಪಷ್ಟಪಡಿಸಿದನು. ಹೀಗೆ, ೧೮೪೧ರಲ್ಲಿ 'ಮಿಣಿದರ್ಶಿಕ ಅಂಗರಚನೆ'ಯನ್ನೂ ೧೮೬೬–೭೧ರ ತನಕ 'ಮಂಡಲದ ಅಂಗರಚನೆ'ಯನ್ನೂ, ೧೮೪೬–೧೮೫೩ರ ತನಕ 'ಸಮಂಜಸ ರೋಗಶಾಸ್ತ್ರದ ಕೈಪಿಡಿ'ಯನ್ನೂ ಬರೆದು ಕೀರ್ತಿ ಪಡೆದನು. ವ್ಯಾಸಂಗಕ್ಕೆ ಸಂಬಂಧವಿಲ್ಲದ ಕಲೆಗಳಾದ ಸಂಗೀತದಲ್ಲಿ, ಅದರಲ್ಲೂ ಪಿಟೀಲು ನುಡಿಸುವುದರಲ್ಲಿ ನಿಪುಣನಾಗಿದ್ದನು ಕ್ಷಣ ಕಾಲದಲ್ಲೇ ಯಾವ ಸಂಗೀತ ಕಚೇರಿಯಲ್ಲಾದರೂ ಭಾಗವಹಿಸುವಷ್ಟು ಶಕ್ತನಾಗಿದ್ದನು.

೨೫ ವರ್ಷ ಒಂದೇ ಸಮನೆ ಅಂಗರಚನೆಶಾಸ್ತ್ರ, ಅಂಗಕ್ರಿಯೆಶಾಸ್ತ್ರ, ರೋಗಶಾಸ್ತ್ರಗಳ ಪ್ರಾಧ್ಯಾಪಕನಾಗಿದ್ದ ಮುಲ್ಲರ್ ಸತ್ತ ಅನಂತರ, ರೀಕರ್ಟ್ ಅಂಗರಚನೆಶಾಸ್ತ್ರದ ಪ್ರಾಧ್ಯಾಪಕನಾಗಿಯೂ, ಡುಬಾಯ್ ರೇಮಂಡ್ ಅಂಗಕ್ರಿಯೆಶಾಸ್ತ್ರದ ಪ್ರಾಧ್ಯಾಪಕನಾಗಿಯೂ, ವರ್ಕೌ ರೋಗಶಾಸ್ತ್ರದ ಪ್ರಾಧ್ಯಾಪಕನಾಗಿಯೂ ಇದ್ದರು.

ರೀಕರ್ಟ್

ರೀಕರ್ಟ್ (೧೮೧೧–೮೫) ಅಂಗಗಳ ಮತ್ತು ಊತಕಗಳ ಊತಕಶಾಸ್ತ್ರಕ್ಕೆ ದುಡಿದು, ಸೇವೆ ಸಲ್ಲಿಸಿದ್ದಲ್ಲದೆ, 'ಹಿಪ್ಪಲಿ ಹಂತ'ದ ಗರ್ಭಗೂಡಿದ ಅಂಡಾಶಯು, ಜೀವಕಣಗಳಾಗಿ ಪರಿಣಮಿಸುತ್ತದೆಂದೂ, ಈ ಜೀವಕಣಗಳಿಂದ ಎಲ್ಲಾ ಅಂಗಾಂಗ ಗಳು ಮಾರ್ಪಾಡಾಗುತ್ತವೆಂದೂ ತಿಳಿಸಿದನು. ಇವನು ಅಚ್ಚುಮೆಚ್ಚಿನ ಅಧ್ಯಾಪಕ ನಾಗಿದ್ದರೂ, ಡಾರ್ವಿನ್ನಿನ ವಿಕಾಸವಾದದ ಊಹೆಯನ್ನೂ ಪರಿವರ್ತನೆಯನ್ನೂ ವಿರೋಧಿಸಿದ್ದರಿಂದ ಜೀವವಿಜ್ಞಾನಿಗಳ ಸಮೂಹದಲ್ಲಿ ಇವನಿಗೆ ಅಷ್ಟು ಗೌರವವಿರ ಲಿಲ್ಲ.


ರೇಮಂಡ್

ಡುಬಾಯಸ್ ರೇಮಂಡ್ (೧೮೧೮–೯೬) ಫ್ರಾನ್ಸ್ ದೇಶದ ನಿರಾಶ್ರಿತನಾಗಿ ಜರ್ಮನಿಗೆ ಬಂದು ಮುಲ್ಲರ್‌ನ ಸಹೋದ್ಯೋಗಿಯಾಗಿ ಅನೇಕ ವಿದ್ಯುದಂಗಕ್ರಿಯೆ ಶಾಸ್ತ್ರದ ಸಮಸ್ಯೆಗಳಲ್ಲಿ ಸಹಕರಿಸಿದ್ದನು. ೧೮೪೮ರಲ್ಲಿ 'ಪ್ರಾಣಿ ವಿದ್ಯುತ್ತಿನ ಮೇಲಿನ ತನಿಖೆಗಳು' ಎಂಬ ಗ್ರಂಥವನ್ನು ಬರೆದು ಆಗ್ಗೆ ಹೊಸದೆನಿಸಿದ್ದ ವಿದ್ಯುದಂಗಕ್ರಿಯೆ ಶಾಸ್ತ್ರದ ನಿರ್ಮಾಣಕ್ಕೆ ಕಾರಣನಾದನು. ಇದಕ್ಕೋಸ್ಕರ ೧೮೫೮ರಲ್ಲಿ ಒಂದು ಹೊಸ ಪ್ರಯೋಗಶಾಲೆ ಪ್ರಾರಂಭವಾಗಿ ಅಲ್ಲಿ ಸಾಯುವ ತನಕ ರೇಮಂಡ್ ಸೇವೆ ಸಲ್ಲಿಸಿದ್ದನು.

ರುಡಾಲ್ಫ್ ವರ್ಕೌ

ಜಹಾನ್ನೆಸ್ ಮುಲ್ಲರ್‌ನ ಪ್ರಭಾವಕ್ಕೆ ಸಿಕ್ಕಿ ಅವನಿಂದ ಶಿಕ್ಷಣ ಪಡೆದಿದ್ದ ರುಡಾಲ್ಫ್ ವರ್ಕೌ (೧೮೨೧–೧೯೦೨) ಆಗಿನ ಕಾಲದ ಗಣ್ಯ ವೈದ್ಯನಾಗಿದ್ದನು. ಇವನು ಹಿಪ್ಪೊಕ್ರೇಟಿಸ್, ಗ್ಯಾಲೆನ್, ಮಾರ್ಗಾಗ್ನಿ, ಆನ್‌ಬ್ರೂಗ್ಗರ್ ಮತ್ತು ಲೆನೆಕ್ ಮಹನೀಯರನ್ನು ಹೋಲುವಷ್ಟು ಸಾಮರ್ಥ್ಯವನ್ನು ಹೊಂದಿದ್ದನು ಇವನು ಹೊಸ ರೋಗಶಾಸ್ತ್ರದ ನಿರ್ಮಾಪಕನೆಂದು ಹೆಸರುಗಳಿಸಿ, ವೈದ್ಯಶಾಸ್ತ್ರದ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿದ್ದನು. ೧೮೩೯ರಲ್ಲಿ ಬರ್ಲಿನ್ನಿನ ಫ್ರೀಡ್ರಿಕ್ ವಿಲ್‌ಹೆಲ್ಮ್ ಸಂಸ್ಥೆ ಯನ್ನು ಸೇರಿ ವ್ಯಾಸಂಗಮಾಡಿ, ೧೮೪೩ನೇ ಅಕ್ಟೋಬರ್ ೨೧ರಲ್ಲಿ ಶ್ರೇಷ್ಠ ಅಂಗ ಕ್ರಿಯೆಶಾಸ್ತ್ರಜ್ಞನಾದ ಮುಲ್ಲರ್‌ನ ಕೈಯಿಂದಲೇ ಪದವಿ ಸ್ವೀಕರಿಸಿದನು. ವರ್ಕೌ ಒಬ್ಬ ಸಾಮಾನ್ಯ ವ್ಯಕ್ತಿಯಾಗಿರಲಿಲ್ಲ. ಇವನ ಜೀವಮಾನದಲ್ಲಿ ಎಂದಿಗೂ ಎರಡನೆಯವನು ಎನಿಸಿಕೊಂಡಿರಲಿಲ್ಲ. ಇವನು ರೋಗಶಾಸ್ತ್ರದ ಪರಿಣತನಾಗಿದ್ದುದಲ್ಲದೆ, ಮಾನವ ಶಾಸ್ತ್ರದಲ್ಲೂ ರಾಜಕೀಯದಲ್ಲೂ ಧುರೀಣನಾಗಿದ್ದನು. ಇವನ ೨೬ ವರ್ಷ ವಯಸ್ಸಿ ನಲ್ಲೇ ಸೈಲೀಷಿಯದಲ್ಲಿ ಹರಡಿದ್ದ ಸೊಕ್ಕಿನ ಜ್ವರದ ವಿಚಾರಣೆ ನಡೆಸಲು ಸರ್ಕಾರ ಅರಿ ಸಿ ಕಳುಹಿಸಿತ್ತು. ಅಲ್ಲಿ ಹೀನತರ ಸ್ಥಿತಿಯಲ್ಲಿದ್ದ ಸಾಮಾಜಿಕ ಜೀವನವನ್ನು ನೋಡಿ ಸರ್ಕಾರಕ್ಕೆ ವಿರೋಧವಾದ ವರದಿ ಸಲ್ಲಿಸಿದ್ದರಿಂದ ಅವನ ಕೆಲಸಕ್ಕೇ ಧಕ್ಕೆ ಬಂದಿತು.

ಅದೃಷ್ಟವಶಾತ್, ಅದೇ ಸಮಯದಲ್ಲಿ ವುರ್ಜ್‌ಬರ್ಗ್‌ನಿಂದ ಕರೆ ಬಂದು ಅಲ್ಲಿಯ ವಿಶ್ವ ವಿದ್ಯಾಲಯದ ರೋಗಶಾಸ್ತ್ರದ ಪ್ರಾಧ್ಯಾಪಕನಾಗಿ ಚುನಾಯಿತನಾದನು. ೧೮೪೯



ವರ್ಕೌ, ರೋಗಶಾಸ್ತ್ರದ ಪ್ರವೀಣ

ರಿಂದ ೭ ವರ್ಷ ಅಲ್ಲಿ ಕೆಲಸ ಮಾಡಿ ಅನೇಕ ಲೇಖನಗಳನ್ನು ಬರೆದನು. ೧೮೫೬ರಲ್ಲಿ ಬರ್ಲಿನ್ನಿನಲ್ಲಿ ಒಂದು ಹೊಸ ರೋಗಶಾಸ್ತ್ರದ ಅಂಗರಚನೆಶಾಸ್ತ್ರ ವಿಭಾಗವನ್ನು ಪ್ರಾರಂಭಿಸಲು ಕರೆ ಬಂದು ಆ ಸಂಸ್ಥೆಯ ಮುಖ್ಯಾಧಿಕಾರಿಯಾಗಿ ಸಾಯುವ ತನಕ ಅದರ ಏಳಿಗೆಗೆ ಶ್ರಮವಹಿಸಿ ಸೇವೆ ಸಲ್ಲಿಸಿದನು.

ರೋಗಶಾಸ್ತ್ರದ ಬದಲಾವಣೆಗಳಲ್ಲಿ ಜೀವಕಣವೇ ಅತಿ ಮುಖ್ಯ ಎಂಬ ವರ್ಕೌನ ಭಾವನೆ,ಅವನ ಸಾಧನೆಗಳಲ್ಲೆಲ್ಲಾ ಅತಿ ಮುಖ್ಯವಾದ ಸಾಧನೆ. ಇದರ ಸಂಬಂಧವಾಗಿ ವೈದ್ಯಶಾಸ್ತ್ರದಲ್ಲೇ ಶ್ರೇಷ್ಠವಾದ 'ಜೀವಕಣದ ರೋಗಶಾಸ್ತ್ರ' ಎಂಬ ಪುಸ್ತಕವನ್ನು ಬರೆದನು. ಇದರಲ್ಲಿ 'ಒಂದು ಜೀವಕಣದಿಂದಲೇ ಇನ್ನೊಂದು ಜೀವಕಣ' ಹಾಗೂ 'ರೋಗದ ಜೀವಕಣಗಳು ಆರೋಗ್ಯವಂತ ಜೀವಕಣಗಳ ಮಾದರಿಗಳಿಂದಲೇ ಬರುತ್ತವಲ್ಲದೆ ಕೇವಲ ಅವುಗಳ ಮಾರ್ಪಾಡುಗಳು' ಎಂಬ ವಾದವೂ ಅಡಕವಾಗಿತ್ತು. ಈ ವಾದದಿಂದ ತಬ್ಬಿಬ್ಬಾದ ವೈದ್ಯ ಪ್ರಪಂಚವೇ ಕೊನೆಗೆ ವರ್ಕೌನನ್ನು ಹಿಂಬಾಲಿಸಿತು. ಇದಕ್ಕೆ ಮೊದಲೇ ವರ್ಕೌ ಪತ್ರಿಕೆ ಎಂದು ಹೆಸರಿದ್ದ "ಅರ್‌ಚಿವ್‌ತೆರ್ ಪ್ಯಾತೊಲೊಜಿಸ್ ಅನಾಟೊಮಿ" ಯನ್ನು ಹೊರಡಿಸಿದ್ದನು. ರೋಗಗಳಲ್ಲಿ ಬಿಳಿಕಣತೆ ಉಂಟಾಗುವುದನ್ನು ಇವನೇ ಮೊದಲಿಗೆ ಕಂಡುಹಿಡಿದನು. ವರ್ಕೌ ಸಂಸ್ಥೆಗೆ ತಾನೇ ತಯಾರಿಸಿದ್ದ ೨೩೦೦೦ ಸಾಯಿಗಟ್ಟಿಸಿದ ಮಾದರಿ ವಸ್ತುಗಳನ್ನೂ ಸಂಗ್ರಹಿಸಿದ್ದನು. ಸಿರದುರಿತವೇ ಅನೇಕ ರೋಗಗಳಿಗೆ ಕಾರಣವೆಂಬ ಕ್ರುವೆಲಿಯರ್ ವಾದ

ವನ್ನು ದೂರ ಹಾಕಿ, ರೋಗಗಳಲ್ಲಿ ಕಾಣಿಸುವ ಕೂಡ್ರಣಿಕೆಗೆ ಸಿರಗಳಲ್ಲಿ ನಿಧಾನವಾಗಿ ರಕ್ತಹರಿಯುವಾಗ ರಕ್ತ ಹೆಪ್ಪುಗಟ್ಟುವುದೇ ಕಾರಣವೆಂದು ಸಾಧಿಸಿದನು. ಅಡಚಿಕೆ ಎಂಬ ರೋಗ ಸ್ಥಿತಿಯನ್ನು ಕೂಡ ವಿವರಿಸಿದನು. ಇವನು ಮೊಟ್ಟಮೊದಲಿಗೆ ಜಿಡ್ಡಿನ ಅನುವಳಿಕೆಯ ಮತ್ತು ಜಿಡ್ಡಿನ ಒಳಪಸರಿಕೆಯ ಸ್ಥಿತಿಗಳನ್ನೂ ವಿಂಗಡಿಸಿದ್ದನು. ಬಿಳಿಕಣ ರಕ್ತ ರೋಗವನ್ನು ಅರಿತಿದ್ದುದಲ್ಲದೆ, ಅದರ ಎರಡು ಬಗೆಗಳಾದ ಗ್ರಂಥಿತೆರಬಿಳಿಕಣರಕ್ತ ಹಾಗೂ ಮಜ್ಜೆಯಿಂದ ಬಿಳಿಕಣರಕ್ತ ಎಂಬ ರಕ್ತಬೇನೆಗಳನ್ನೂ ಗುರುತಿಸಿದನು.

ಇವುಗಳಲ್ಲದೆ ಮಾನವಶಾಸ್ತ್ರದ ಸಂಬಂಧವಾಗಿ ಜರ್ಮನಿ ದೇಶದ ಮಕ್ಕಳ ಮೈಯಿನ ಸ್ವಭಾವಗಳನ್ನೂ ಮತ್ತು ಆ ದೇಶದ ವಸತಿಯ ಸ್ಥಿತಿಗಳನ್ನೂ, ಸಿಪಾಯಿಗಳ ಬಿಡಾರ ಸ್ಥಿತಿಗಳನ್ನೂ ಉಲ್ಲೇಖಿಸಿ ಬರೆದಿದ್ದನು. ರಾಜಕೀಯದಲ್ಲೂ ಅತ್ಯಂತ ಸೇವೆ ಸಲ್ಲಿಸಿ ಬರ್ಲಿನ್ನಿಗೆ ಚರಂಡಿ ಸೌಕರ್ಯವನ್ನೂ ನೀರಿನ ಸರಬರಾಜನ್ನೂ ಹೊಸರೀತಿಯಲ್ಲಿ ಒದಗಿಸಲು ಬೆಂಬಲ ಕೊಟ್ಟಿದ್ದನು. ವರ್ಕೌ ತನ್ನ ಎಳೆತನದಲ್ಲೇ ವೈದ್ಯರ ಚಳುವಳಿ ಯಲ್ಲಿ ಭಾಗವಹಿಸಿ ವೈದ್ಯರ ಹಕ್ಕುಬಾಧ್ಯತೆಗಳಿಗೋಸ್ಕರ ವೈದ್ಯಮಂತ್ರಿಯನ್ನು ನೇಮಿ ಸಬೇಕೆಂದು ಸರ್ಕಾರಕ್ಕೆ ಮನವಿ ಮಾಡಿದ್ದನು. ಜರ್ಮನಿಯ ರೈಕ್‌ಸ್ಟಾಗ್ ಸಭೆಗೆ ೧೮೮೦–೧೮೯೩ರ ತನಕ ಸದಸ್ಯನಾಗಿದ್ದು ಅದರಲ್ಲೂ ಉದಾರ ಪಕ್ಷಕ್ಕೆ ಸೇರಿದವನಾಗಿ ಅನೇಕ ಬಾರಿ ಬಿಸ್ಮಾರ್ಕ್‌ನ ಆಡಳಿತವನ್ನು ಟೀಕಿಸಿದ್ದನು. ಮೇಲಾಗಿ ಅನೇಕ ರಾಜ ಕೀಯ ಲೇಖನಗಳನ್ನೂ ಬರೆದಿದ್ದನು. ವರ್ಕೌನ ಕೆಲಸ ಕಾರ್ಯಗಳನ್ನು ಮೆಚ್ಚಿ ಅವನ ೭೦ನೇ ಮತ್ತು ೮೦ನೇ ಹುಟ್ಟು ಹಬ್ಬಗಳನ್ನು ವಿಜ್ಞಾನಿಗಳೆಲ್ಲಾ ಸೇರಿ ವಿಜೃಂಭಣೆಯಿಂದ ಆಚರಿಸಿ ಅವನ ಸೇವೆಯನ್ನು ಸ್ಮರಿಸಿದರು.

ಹರ್ಮನ್ ವಾನ್ ಹೆಲ್ಮೋಲ್‌ಟ್ಸ್

ಜಹನ್ನೆಸ್ ಮುಲ್ಲರ್‌ನ ಶಿಷ್ಯರ ಶ್ರೇಣಿಯಲ್ಲಿ ಹರ್ಮನ್ ವಾನ್ ಹೆಲ್ಮೋಲ್‌ಟ್ಸ್ (೧೮೨೧–೯೪) ಮತ್ತೊಬ್ಬ ಶ್ರೇಷ್ಠ ವೈದ್ಯನೆಂದು ಹೆಸರು ಪಡೆದಿದ್ದನು. ಭೌತಶಾಸ್ತ್ರ ದಲ್ಲೂ, ರಸಾಯನಶಾಸ್ತ್ರದಲ್ಲೂ ಇವನಿಗೆ ಅಭಿರುಚಿ ಹೆಚ್ಚಾಗಿತ್ತು. ಆದರೆ ಇವು ಗಳಿಂದ ಸಂಪಾದನೆ ಹೆಚ್ಚಿದ್ದರಿಂದ ಇವನ ತಂದೆಯ ಪ್ರೇರಣೆಯ ಮೇರೆ ವೈದ್ಯವೃತ್ತಿ ಯನ್ನು ಅವಲಂಬಿಸಬೇಕಾಯಿತು. ಇವನು ಚಿಕ್ಕಂದಿನಿಂದಲೂ ಬುದ್ಧಿವಂತನಾಗಿದ್ದು ದರಿಂದ ಯಾವುದೂ ಕಷ್ಟವಾಗಿರಲಿಲ್ಲ. ಎಳೆತನದಲ್ಲೇ ಮೂಲ ಗ್ರೀಕ್‌ನಲ್ಲಿದ್ದ ಹೋಮರ್ ಹಾಗೂ ಮೂಲ ಅರಬ್ಬಿಯಲ್ಲಿದ್ದ ಲುಕ್ಮನ್ ಕಥೆಗಳನ್ನು ಓದುತ್ತಿದ್ದನು. ಗಣಿತದಲ್ಲೂ ಸಾಮರ್ಥ್ಯ ಹೆಚ್ಚಾಗಿತ್ತು. ಮುಲ್ಲರ್ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಅವನ 'ಬಲದ ಜೋಪಾಸನೆ' ಎಂಬ ಲೇಖನ ಎಲ್ಲರ ಗಮನವನ್ನೂ ಸೆಳೆದಿತ್ತು. ೧೮೪೯ರಲ್ಲಿ ಕೋನಿಗ್ಸ್‌ಬರ್ಗ್ ವಿಶ್ವವಿದ್ಯಾಲಯದ ಅಂಗಕ್ರಿಯೆಶಾಸ್ತ್ರದ ಪ್ರಾಧ್ಯಾ ಪಕನಾಗಿ ನೇಮಕವಾದ್ದರಿಂದ ಮೂಲ ಪರಿಶೋಧನೆ ನಡೆಸಲು ಸಮಯ ಸಿಕ್ಕಿ ನರಗಳ ಆವೇಗದ ಸಾಗಣೆಯ ವೇಗವನ್ನು ನಿರ್ಧರಿಸಿದನು. ಕಪ್ಪೆಯ ನರದ ಆವೇಗದ ವೇಗ

ಒಂದು ಸೆಕೆಂಡಿಗೆ ೨೦ ಮೀಟರಿನಷ್ಟು ಇದೆಯೆಂದು ಗೊತ್ತುಪಡಿಸಿದನು. ಇದಾದ ಮೇಲೆ ಕಣ್ಣಾಲವನ್ನು ಮೊಟ್ಟಮೊದಲಿಗೆ ಕಣ್ಣಾರೆ ನೋಡುವಂತಹ ಕಣ್ಣಾಲದರ್ಶಕವನ್ನು ಕಂಡುಹಿಡಿದನು. ಈ ಶೋಧನೆಗಳ ಆಧಾರದ ಮೇಲೆ "ಅಂಗಕ್ರಿಯೆಯ ನೋಟ ಶಾಸ್ತ್ರ ೧೮೫೬–೬೭" ಎಂಬ ಉತ್ತಮ ಕೃತಿಯೊಂದನ್ನು ಬರೆದನು.

ಥಾಮಸ್ ಯಂಗ್

೧೮೦೧ರಲ್ಲಿ ಥಾಮಸ್ ಯಂಗ್ ಎಂಬ ಬ್ರಿಟನ್ನಿನ ಕಣ್ಣು ವಿಜ್ಞಾನಿ ಬರೆದಿದ್ದ 'ಕಣ್ಣಿನ ಯಾಂತ್ರಿಕತೆಯನ್ನು ಕುರಿತು' ಎಂಬ ಕೃತಿಯನ್ನು ಸಮರ್ಥಿಸಿ ವಿಸ್ತರಿಸಿದನು. ಆದ್ದರಿಂದಲೇ ಬಣ್ಣ ನೋಟದ ತತ್ತ್ವಕ್ಕೆ "ಯಂಗ್-ಹೆಲ್ಮೋಲ್‌ಟ್ಜ್" ಹೆಸರಾಗಿದೆ.

ಕಣ್ಣಿನ ಅಂಗಕ್ರಿಯೆಗಳ ಶೋಧನೆಗಳೆಲ್ಲಾ ಮುಗಿದ ಮೇಲೆ ಹೆಲ್ಮೋಲ್‌ಟ್ಸ್ ಶ್ರವಣೇಂದ್ರಿಯಕ್ಕೆ ಗಮನಕೊಟ್ಟು 'ಸ್ವರದ ಅರಿವುಗಳು' ವಿಷಯ ಕುರಿತು ಲೇಖನ ಬರೆದನು. ಅವನಿಗೆ ಸಂಗೀತ ಜ್ಞಾನವಿದ್ದುದರಿಂದ ಆಲಿಸಿಕೆಯ ವಿಷಯದಲ್ಲಿ ಶೋಧನೆ ನಡೆಸಲು ಆಸಕ್ತಿ ಹೆಚ್ಚಾಗಿತ್ತು. ಗಣಿತ ಹಾಗೂ ಸಂಗೀತ ಒಂದಕ್ಕೊಂದು ದೂರವಿರುವಂತೆ ಕಂಡುಬಂದರೂ ಅವುಗಳ ಪರಸ್ಪರ ಸಂಬಂಧವನ್ನು ವ್ಯಕ್ತಪಡಿಸಿದನು. ೧೮೭೧ರಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕನಾಗಿ ಬರ್ಲಿನ್ನಿಗೆ ತೆರಳಿ ಸಾಯುವ ತನಕ ಅಲ್ಲಿ ಕೆಲಸಮಾಡಿ ಹೇನ್‌ರಿಚ್ ಹೆರ್‌ಟ್ಸ್ ಸಹಾಯ ಪಡೆದು ವಿದ್ಯುಚ್ಚಲಬಲಶಾಸ್ತ್ರದ ಮೇಲೆ ಶೋಧನೆ ನಡೆಸಿದನು. ಈ ಮಧ್ಯೆ ಇಂಗ್ಲೆಂಡಿಗೂ ಅಮೆರಿಕಾಕ್ಕೂ ಭೇಟಿ ಕೊಟ್ಟು ಅಲ್ಲಿನವರ ಸ್ನೇಹ ಬೆಳೆಸಿದನು. ಇವನ ಶೋಧನೆಗಳು ಪ್ರಪಂಚ ವಿಜ್ಞಾನಕ್ಕೆ ಅತ್ಯುತ್ತಮ ಕೊಡುಗೆಗಳಾಗಿದ್ದುವಲ್ಲದೆ, ವಿಜ್ಞಾನಗಳಲ್ಲಿರುವ ಪರಸ್ಪರ ಸಂಬಂಧವನ್ನು ತೋರಿಸುತ್ತಾ, ಭೌತಶಾಸ್ತ್ರದಿಂದ ಅಂಗಕ್ರಿಯೆಶಾಸ್ತ್ರಕ್ಕೆ ಆಗಿರುವ ಪ್ರಯೋಜನಗಳನ್ನು ದೃಢಪಡಿಸಿದ್ದವು.

೩೪. ೧೯ನೇ ಶತಮಾನದ ವಿಶೇಷ ವೈದ್ಯಶಾಸ್ತ್ರ ಸಾಧನೆಗಳು


ವರ್ಕೌ ಮತ್ತು ಇತರರ ಮುಂದಾಳತ್ವದಲ್ಲಿ ಜರ್ಮನಿ ಪ್ರಗತಿ ಹೊಂದುತ್ತಿರುವಾಗ, ವರ್ಕೌಗೆ ೨೨ ವರ್ಷ ಕಿರಿಯವನಾದ ರಾಬರ್ಟ್ ಕಾಕ್ ಅಣುಜೀವಿ ಸಾಕಣೆಯನ್ನೂ, ೨೪ ವರ್ಷ ಕಿರಿಯವನಾದ ವಿಲ್‌ಹೆಲ್ಮ್ ರಾಂಟ್ಜನ್ 'ಕ್ಷ' ಕಿರಣ ವ್ಯವಸ್ಥೆಯನ್ನೂ ಪ್ರಪಂಚದ ಮುಂದಿಟ್ಟು, ಜರ್ಮನಿಯ ಬಾವುಟವನ್ನು ಮತ್ತಷ್ಟು ಮೇಲೇರಿಸಿದರು. ಜರ್ಮನಿ ಮುಂದುವರಿಯುತ್ತಿರುವಾಗ ಇಂಗ್ಲೆಂಡಿನಲ್ಲಿ ಜೋಸೆಫ್ ಲಿಸ್ಟರ್ ಕೀವು, ನಂಜಿರದಿಕೆ ಎಂಬ ಮಹತ್ವಪೂರಿತ ಶೋಧನೆಗಳನ್ನೂ, ಫ್ರಾನ್ಸಿನಲ್ಲಿ ಲೂಯಿ ಪ್ಯಾಸ್ಚೂರ್ ಹುದುಗೇಳಿಕೆ ಮತ್ತು ರೋಗೋತ್ಪತ್ತಿಯಲ್ಲಿ ರೋಗಾಣುಗಳ ಪಾತ್ರವನ್ನೂ ಹೊರಗೆಡಹಿಸಿ ವಿಜ್ಞಾನಿಗಳ ಗಮನವನ್ನು ಸೆಳೆದರು. ಇದೇ ಕಾಲದಲ್ಲಿ ರೋಗಿಗಳ ಶುಶ್ರೂಷೆಗೆ ಅತಿ ಮುಖ್ಯವಾದ ದಾದಿ ಕಸಬನ್ನು ಸುಧಾರಿಸಲು ಇಂಗ್ಲೆಂಡಿನ ಫ್ಲಾರೆನ್ಸ್ ನೈಟಿಂಗೇಲ್ ದೃಢ ನಿಷ್ಠೆಯಿಂದ ಕೆಲಸವಾರಂಭಿಸಿದ್ದಳು. ಆಗ ಅಂತರ ರಾಷ್ಟ್ರೀಯ ಸಂಸ್ಥೆಯಾದ ಕೆಂಪು ಶಿಲುಬೆಯ ಚರಚಿಕಿತ್ಸಾ ವ್ಯವಸ್ಥೆಗೆ ರಾಬರ್ಟ್ ಡ್ಯುನಾಂಟ್ ಇದೇ ಕಾಲದಲ್ಲಿ ಅಸ್ತಿಭಾರ ಹಾಕಿ, ಯುದ್ಧದಲ್ಲಿ ಗಾಯಗೊಂಡವರ ಸಹಾಯಕ್ಕೆ ಕಾರಣನಾಗಿದ್ದನು. ಇವಲ್ಲದೆ ಉಷ್ಣವಲಯದ ರೋಗಗಳಲ್ಲೂ, ಸೇನೆಯ ಹಾಗೂ ನಾವೆಯ ಶಸ್ತ್ರಕ್ರಿಯೆಗಳಲ್ಲೂ, ಜನಾರೋಗ್ಯದ ವ್ಯವಸ್ಥೆಯಲ್ಲೂ ಅನೇಕ ಶೋಧನೆಗಳೂ ಸುಧಾರಣೆಗಳೂ ಹೊರಬಿದ್ದವು.

ನಂಜಿರದಿಕೆ ಮತ್ತು ನಂಜುರೋಧ

ನೋವಿಲ್ಲದೆ ಶಸ್ತ್ರಕ್ರಿಯೆಯನ್ನು ನಡೆಸಲು ಸಾಧ್ಯವಾಗಿದ್ದರೂ, ಕೀವುಂಟಾಗದಂತೆ ನಂಜು ಹತ್ತದಂತೆ ನಡೆಸಲು ಇನ್ನೂ ಸಾಧ್ಯವಾಗಿರಲಿಲ್ಲ. ಇದನ್ನು ಸಾಧಿಸಿದವನು ಜೋಸೆಫ್ ಲಿಸ್ಟರ್. ಕೀವುನಂಜನ್ನು ನೇರವಾದ ಕ್ರಮದಿಂದ ಹಾಳುಮಾಡಲು ಯತ್ನಿಸಿದನು. ಹೊರಗಿನಿಂದ ಕ್ರಿಮಿಗಳನ್ನು ಗಾಯಕ್ಕೆ ಸೇರದಂತೆ ಮಾಡಿ, ಮೊದಲೇ ಸೇರಿದ್ದ ಕ್ರಿಮಿಗಳನ್ನು ನಾಶ ಮಾಡುವ ರೀತಿಯನ್ನು ತಿಳಿಯಲು ಸಾವಧಾನವಾಗಿ ಕೆಲಸ ಮಾಡತೊಡಗಿದ್ದನು. ಈ ಮನಮುಟ್ಟುವ ಬದಲಾವಣೆಯನ್ನು ಈಗ ಸಾರ್ವತ್ರಿಕವಾಗಿ ಮೆಚ್ಚಲಾಗಿದೆ. ನಂಜುರೋಧಕ್ಕಿಂತಲೂ ನಂಜಿರದಿಕೆಗೆ ಇತ್ತೀಚೆಗೆ ಪ್ರಾಶಸ್ತ್ಯ ಕೊಡಲಾಗಿದೆ.

ಜೋಸೆಫ್ ಲಿಸ್ಟರ್ (೧೮೨೭–೧೯೧೨) ಲಾರ್ಡ್ ಪದವಿಯನ್ನು ಪಡೆದು ಶ್ರೀಮಂತ

ವರ್ಗಕ್ಕೆ ಸೇರಿದ ಮೊಟ್ಟಮೊದಲನೆಯ ವೈದ್ಯ. ಇವನು ಈಗಿನ ಲಂಡನ್ನಿನ ಪೂರ್ವ ದಿಕ್ಕಿನ ಎಲ್ಲೆಗೆ ಸೇರಿರುವ ಎಸೆಕ್ಸಿನ ಪ್ಲೇಸ್ಟವ್‌ನಲ್ಲಿರುವ ಅಪ್ಟನ್ ಭವನದಲ್ಲಿ ಜನಿಸಿದನು. ಲಿಸ್ಟರ್‌ನ ಕಾಲದಲ್ಲಿ ಅಪ್ಟನ್ ಒಂದು ಹಳ್ಳಿಯಾಗಿತ್ತು. ಲಿಸ್ಟರ್‌ನ ವಂಶಸ್ಥರು ಕ್ವೇಕರ್ ಗುಂಪಿಗೆ ಸೇರಿದವರಾಗಿದ್ದರಿಂದ, ಎಲ್ಲರಂತೆ ಲಿಸ್ಟರ್ ಕೂಡ ಸರಳ ಸೌಮ್ಯ ಸ್ವಭಾವಿಯಾಗಿದ್ದನು. ಇವನ ತಂದೆಯಾದ ಜೇಮ್ಸ್ ಜೋಸೆಫ್ ಲಿಸ್ಟರ್ ಅನುಕೂಲವಾದ ಮದ್ಯ ವ್ಯಾಪಾರಿಯಾಗಿದ್ದು ತನ್ನ ಬಿಡುವಿನ ಹೊತ್ತಿನಲ್ಲಿ ವಿಜ್ಞಾನಕಪ್ರಯೋಗಗಳಲ್ಲಿ ತೊಡಗಿರುತ್ತಿದ್ದನು ಸೂಕ್ಷ್ಮದರ್ಶಕ ಯಂತ್ರದ ಪ್ರಯೋಗ ತಂತ್ರದಲ್ಲಿ ಹೆಚ್ಚು ಆಸಕ್ತಿಯಿದ್ದುದರಿಂದ, ಇವನನ್ನು ರಾಜ ಸಂಘದ ಸದಸ್ಯನನ್ನಾಗಿ ಆರಿಸಲಾಗಿತ್ತು.



ಜೋಸೆಫ್ ಲಿಸ್ಟರ್

ಚಿಕ್ಕಂದಿನಿಂದಲೇ ವೈದ್ಯನಾಗಬೇಕೆಂದಿದ್ದ ಲಿಸ್ಟರ್ ೧೮೪೪ರಲ್ಲಿ ಲಂಡನ್ನಿನ ವಿಶ್ವವಿದ್ಯಾಲಯದ ಕಾಲೇಜನ್ನು ಸೇರಿ, ೧೮೪೭ರಲ್ಲಿ ಬಿ.ಎ. ಪದವಿಪಡೆದು ೧೮೫೨ರಲ್ಲಿ ಎಂ.ಬಿ. ಪದವಿ ಪಡೆದನು. ಆಗ ಇವನಿಗೆ ಅಂಗಕ್ರಿಯೆಶಾಸ್ತ್ರದಲ್ಲಿ ಬಹಳ ಪ್ರೇಮ ಮತ್ತು ಆಸಕ್ತಿ ಇತ್ತು. ಇದರ ಫಲವಾಗಿ ಕರಿಯಾಲಿಯಲ್ಲಿರುವ ಅಗಲಿಸುವ ಹಾಗೂ ಕಿರಿದಾಗಿಸುವ ಸ್ನಾಯುಗಳ ವಿಷಯದಲ್ಲಿ ಲೇಖನವನ್ನು ಬರೆದನು. ಅವನ ಎರಡನೆಯ ಲೇಖನದಲ್ಲಿ ಚರ್ಮದ ಕೂದಲು ನೆಟ್ಟಗೆ ನಿಂತು ನಿಮಿರೇಳುವ ಸ್ಥಿತಿಯನ್ನು ವಿವರಿಸಿದನು. ಅಂಗಕ್ರಿಯೆಶಾಸ್ತ್ರಕ್ಕಿದ್ದ ಪ್ರಭಾವವನ್ನು ಒತ್ತಿಹೇಳುತ್ತ ವೈದ್ಯನಿಗಿಂತಲೂ ಶಸ್ತ್ರವೈದ್ಯನಿಗೇ ಅದು ಬಹು ಮುಖ್ಯವೆಂದು ಸ್ಪಷ್ಟಪಡಿಸಿದನು.

ಎಡಿನ್ಬರೊನಲ್ಲಿ

ಲಿಸ್ಟರ್ ತನ್ನ ಅಂಗಕ್ರಿಯೆಶಾಸ್ತ್ರದ ಪ್ರಾಧ್ಯಾಪಕನಾದ ವಿಲಿಯಂ ಷಾರ್ಪಿಯ ಪ್ರೇರಣೆ ಮೇಲೆ, ಅವನಿಂದ ಬಂದ ಶಿಫಾರಸ್ಸು ಕಾಗದವನ್ನು ಪಡೆದು ಯೂರೋಪಿನಲ್ಲೇ ಪ್ರಖ್ಯಾತಿಯಾಗಿದ್ದ ಎಡಿನ್ಬರೊ ಶಸ್ತ್ರವೈದ್ಯ ಮತ್ತು ಪ್ರಾಧ್ಯಾಪಕ ಜೇಮ್ಸ್ ಸೈಮ್‌ನ ಕೈಕೆಳಗೆ ಶಸ್ತ್ರಕ್ರಿಯೆಯನ್ನು ಕಲಿಯಲು ಒಂದು ತಿಂಗಳ ಮಟ್ಟಿಗೆ ಹೋಗಿ ೭ ವರ್ಷ ಎಡಿನ್ಬರೊವಿನಲ್ಲೇ ನಿಂತನು. ೧೮೫೩ರಲ್ಲಿ ಸೈಮ್ ಹತ್ತಿರ ಆಸ್ಪತ್ರೆಯ ವೈದ್ಯನಾಗಿದ್ದು, ಅನಂತರ ಎಡಿನ್ಬರೊ ರಾಜಚಿಕಿತ್ಸಾಲಯದ ಸಹಾಯಕ ಶಸ್ತ್ರವೈದ್ಯನಾಗಿಯೂ ಹಾಗೂ ಶಸ್ತ್ರವೈದ್ಯದ ಅಧ್ಯಾಪಕನಾಗಿಯೂ ನೇಮಕವಾದನು. ಕ್ರಮೇಣ ಸೈಮ್‌ನ ಸ್ನೇಹ ಹೆಚ್ಚಿ ಅವನ ಮಗಳು ಅಗ್ನಿಸ್‌ಳನ್ನು ೧೮೫೬ನೇ ಏಪ್ರಿಲ್ ೨೩ರಲ್ಲಿ ಲಗ್ನವಾಗಿ ತನ್ನ ವಂಶಸ್ಥರ ಕ್ವೇಕರ್ ಪಂಗಡವನ್ನು ತ್ಯಜಿಸಿದನು. ಮುಂದಿನ ೩೭ ವರ್ಷದ ಅವರ ದಾಂಪತ್ಯ ಜೀವನದಲ್ಲಿ, ಅಗ್ನಿಸ್ ನಿಷ್ಠೆಯಿಂದ ಗಂಡನಿಗೆ ಸಹಾಯಕಳಾದಳು. ಅವನ ಕಾರ್ಯದರ್ಶಿಯಂತೆ ಸೇವೆಸಲ್ಲಿಸುತ್ತಾ ಅವನು ಘಂಟೆಗಟ್ಲೆ ಹೇಳುತ್ತಿದ್ದುದನ್ನು ಬರಹಗಳಲ್ಲೆಲ್ಲಾ ಬರೆದಿಡುತ್ತಾ ಅವನ ವೈದ್ಯ ಪ್ರಯೋಗಗಳಲ್ಲೂ ಸಹಾಯ ಮಾಡುತ್ತಾ ಅವನ ಕೀರ್ತಿ ಸಾಧನೆಗೆ ಅತ್ಯಂತ ನೆರವು ನೀಡಿದ್ದಳು.


ಹೀಗಿರುವಾಗ, ಶಸ್ತ್ರಕ್ರಿಯೆಯ ಪ್ರಯೋಗಗಳ ಕಡೆ ಗಮನ ಹೆಚ್ಚಿ 'ಉರಿತದ ಮೊದಾಮೊದಲ ಹಂತಗಳು' ಹಾಗೂ 'ರಕ್ತದ ಹೆಪ್ಪುಗಟ್ಟಿಕೆ' ಎಂಬ ಎರಡು ಲೇಖನಗಳನ್ನು ಬರೆದನು. ಆದರೆ ವೈದ್ಯವೃತ್ತಿಯಲ್ಲಿ ಅವನು ಅಷ್ಟೊಂದು ಮುಂದಿರಲಿಲ್ಲ. ಈ ಸಮಯದಲ್ಲಿ ೧೮೬೦ರಲ್ಲೂ ಗ್ಲಾಸ್ಗೊ ವಿಶ್ವವಿದ್ಯಾಲಯದ ರಾಜಪೋಷಿತ ಶಸ್ತ್ರವೈದ್ಯರ ಪ್ರಾಧ್ಯಾಪಕತ್ವ ದೊರಕಿ, ಮಾವನ ಮೇಲ್ವಿಚಾರಣೆ ತಪ್ಪಿ, ತನ್ನ ಇಷ್ಟದಂತೆ ಕೆಲಸ ಮಾಡಲು ಅವನಿಗೆ ಸಮಯ ಒದಗಿತ್ತು. ಇಲ್ಲಿ ಚರಿತ್ರಾರ್ಹವಾದ ಶೋಧನೆಗಳು ಅವನ ಕೈಯಿಂದ ಹೊರಬಿದ್ದಿದ್ದವು.

ಗ್ಲಾಸ್ಗೊವಿನಲ್ಲಿ

ಗ್ಲಾಸ್ಗೊ ಆಸ್ಪತ್ರೆ ಸೇರಿದಾಗ ಆಸ್ಪತ್ರೆಯ ರೋಗಿ ಕೋಣೆ ಗಲೀಜಾಗಿ, ಗಾಯಗಳು ಕೊಳೆತು ಕೀವು ಕಾರುತ್ತಿದ್ದವು. ಸಾಧಾರಣ ಮೂಳೆಮುರಿತ ಕೀವಿಲ್ಲದೆ ಗುಣವಾಗುತ್ತಿದ್ದರೂ ಸಂಯುಕ್ತ ಮೂಳೆಮುರಿತದಿಂದ ಕೀವುಗೂಡಿ ರೋಗಿ ನರಳುತ್ತಿದ್ದನು. ಅನೇಕ ವೇಳೆ ಮರಣವೂ ಸಂಭವಿಸುತ್ತಿತ್ತು. ಇದನ್ನು ಪರೀಕ್ಷೆ ಮಾಡಿ, ಗಾಳಿಗೆ ತೆರೆದಿದ್ದ ಗಾಯಗಳು ಕೊಳೆಯಲು ಗಾಳಿಯಲ್ಲಿ ಕಾರಣವಿರಬಹುದೆಂದೂ, ಗಾಳಿಯೆಲ್ಲ ನೇರವಾಗಿ ಕಾರಣವಲ್ಲದಿದ್ದರೂ ಅದರಲ್ಲಿರುವ ಜೀವಾಣುಗಳು ಕಾರಣವೆಂದೂ ತಿಳಿಸಿದನು. ಈ ಸಮಸ್ಯೆಯನ್ನೂ ಗ್ಲಾಸ್ಗೊ ರಸಾಯನಶಾಸ್ತ್ರದ ಪ್ರಾಧ್ಯಾಪಕ ಥಾಮಸ್ ಆಂಡರ್ಸನ್ ಜೊತೆ ಚರ್ಚಿಸಲು, ಗಾಳಿಯಲ್ಲಿರುವ ಅಣುಜೀವಿಗಳಿಂದ ಹಳಸುವುದೆಂದೂ ಹುದುಗೇಳುವುದೆಂದೂ ಪ್ಯಾಸ್ಚೂರ್ ತಿಳಿಸಿದ್ದ ವಿಷಯವನ್ನು ಲಿಸ್ಟರ್‌ನ ಗಮ

ನಕ್ಕೆ ತರಲು ಅವನ ಸಂತೋಷಕ್ಕೆ ಪಾರವೇ ಇರಲಿಲ್ಲ. ಅವನ ಬರವಣಿಗೆಯಲ್ಲೂ, ಭಾಷಣಗಳಲ್ಲೂ ಪ್ಯಾಸ್ಟ್ಯೂರ್‌ನ ಮಹಿಮೆಯನ್ನು ಕೊಂಡಾಡಿ ತನ್ನ ಕೃತಜ್ಞತೆಯನ್ನು ತೋರ್ಪಡಿಸಿದನು. ಈ ರೋಗಾಣುಜೀವಿಗಳನ್ನು ನಾಶಮಾಡಿದ ಪಕ್ಷದಲ್ಲಿ ಗಾಯ ಕೊಳೆಯುವುದಿಲ್ಲವೆಂದು ಕೂಡ ಹೇಳಿ, ಹಿಂದೆ ಕಾರ್ಲೈಲ್‌ನಲ್ಲಿ ಗ್ರಾಮದ ರೊಚ್ಚನ್ನು ಶುದ್ಧಮಾಡಲು ಉಪಯೋಗಿಸುತ್ತಿದ್ದ ಕಾರ್ಬಾಲಿಕಾಮ್ಲವನ್ನು ನಂಜುರೋಧಕವಾಗಿ ಉಪಯೋಗಿಸಿ ಗಾಯವನ್ನು ಗುಣಪಡಿಸುತ್ತಿದ್ದನು. ಈ ಆಮ್ಲವನ್ನು ಉಪಯೋಗಿಸಿದ ೯ ತಿಂಗಳೊಳಗಾಗಿ ಅವನ ರೋಗಿ ಕೋಣೆಗಳಲ್ಲಿ ಕೊಳೆತವಾಗಲೀ, ಕೊಳೆತದಿಂದೇಳುವ ರೋಗಗಳಾಗಲೀ ಕಂಡು ಬರಲಿಲ್ಲ.

ಕಚ್ಚಾ ಇಂಗಾಲೆಣ್ಣೆ ಆಮ್ಲದಿಂದೇಳುತ್ತಿದ್ದ ಕೆರಳಿಕೆಯನ್ನು ಕಡಿಮೆ ಮಾಡಲು ನೀರು ಬೆರಸಿ ೧ : ೨೦ ಅಥವಾ ೧ : ೪೦ ತೀಕ್ಷ್ಣತೆಯಲ್ಲಿ ಉಪಯೋಗಿಸುತ್ತಿದ್ದನು.



ಲಿಸ್ಟರ್ ಉಪಯೋಗಿಸುತ್ತಿದ್ದ ಶಸ್ತ್ರಕ್ರಿಯೆಯ ಮೇಜು

ಇದನ್ನೇ ಗಾಯದ ಕಟ್ಟುಗಳಿಗೂ ಹಾಕಲಾಗುತ್ತಿತ್ತು. ಕ್ರಮೇಣ ಗಾಯಗಳ ಚಿಕಿತ್ಸೆಯಲ್ಲಿ ಉಪಯೋಗಿಸುವ ಎಲ್ಲಾ ಪದಾರ್ಥಗಳನ್ನೂ ಇತರ ಸಲಕರಣೆಗಳನ್ನೂ ಈ ನಂಜುರೋಧಕದಿಂದ ಶುದ್ಧಿಪಡಿಸಿದನಂತರವೇ ಉಪಯೋಗ ಮಾಡಲಾಗುತ್ತಿತ್ತು. ಮೇಲಾಗಿ ಇಂಗಾಲೆಣ್ಣೆ ಆಮ್ಲದ ತುಂತುರಿನ ಅನಿಲಾವರಣವನ್ನು ಕೂಡ ಶಸ್ತ್ರಕ್ರಿಯೆ ಕೋಣೆಯಲ್ಲೂ ಹಾಗೂ ರೋಗಿಕೋಣೆಗಳಲ್ಲಿಯೂ ನಿರ್ಮಿಸಿ ನಂಜಿರದಂತೆ ಮಾಡುವ ಈ ಪದ್ಧತಿ ಅನೇಕ ವರ್ಷಗಳ ತನಕ ಜಾರಿಯಲ್ಲಿತ್ತು. ೧೮೬೫ನೇ ಮಾರ್ಚ್ ತಿಂಗಳಲ್ಲಿ ಸಂಯುಕ್ತ ಮೂಳೆಮುರಿತವನ್ನು ಗುಣಪಡಿಸಲು ನಂಜುರೋಧ ಪದ್ಧತಿಯನ್ನು ಮೊಟ್ಟಮೊದಲಿಗೆ ಲಿಸ್ಟರ್ ಉಪಯೋಗಿಸಿದನು. ೧೮೬೭ರಲ್ಲಿ ಲ್ಯಾನ್ಸೆಟ್ ಎಂಬ ವೈದ್ಯ ವಾರ

ಪತ್ರಿಕೆಯಲ್ಲಿ ತನ್ನ ಶಸ್ತ್ರಕ್ರಿಯೆಗಳ ಅನುಭವವನ್ನು 'ಸಂಯುಕ್ತ ಮೂಳೆ ಮುರಿತದ ಚಿಕಿತ್ಸೆಯ ಒಂದು ವಿಧಾನವನ್ನು ಕುರಿತು' ಎಂದು ಪ್ರಕಟಿಸಿದನು. ಚಿಕಿತ್ಸೆಗೊಳಗಾಗಿದ್ದ ಒಟ್ಟು ೧೧ ರೋಗಿಗಳಲ್ಲಿ ೯ ಜನರು ಅವರ ಮೂಳೆಮುರಿತ ಗುಣವಾಗಿ ಬದುಕಿದರು. ಒಬ್ಬನಿಗೆ ಕಾಲನ್ನು ಕತ್ತರಿಸಬೇಕಾಗಿತ್ತು. ಒಬ್ಬ ಮಾತ್ರ ಸತ್ತನು. ಇದಾದ ಒಂದು ವರ್ಷದ ಅನಂತರ 'ಬ್ರಿಟಿಷ್ ಮೆಡಿಕಲ್ ಜರ್ನಲ್'ನಲ್ಲಿ 'ಶಸ್ತ್ರವೈದ್ಯದಲ್ಲಿ ನಂಜು ರೋಧಕ ಪದ್ಧತಿಯ ಚಿಕಿತ್ಸೆಯನ್ನು ಕುರಿತು' ಲೇಖನ ಬರೆದು ತನ್ನ ಚಿಕಿತ್ಸೆಯ ಪದ್ಧತಿ



ಲಿಸ್ಟರ್ ನಂಜುರೋಧಕದಿಂದ ರೋಗಿಯನ್ನು ಸುಧಾರಿಸುತ್ತಿರುವುದು

ಗಳನ್ನು ವಿವರಿಸಿ, ಇಂಗಾಲೆಣ್ಣೆ ಆಮ್ಲವನ್ನು ಉಪಯೋಗಿಸಲು ತನ್ನ ಬೆಂಬಲವನ್ನು ವ್ಯಕ್ತಪಡಿಸಿದನು.

ಎಡಿನ್ಬರೊವಿಗೆ ಮತ್ತೆ ಪ್ರಯಾಣ

ಪ್ರಾಧ್ಯಾಪಕ ಸೈಮ್ ೧೮೬೯ರಲ್ಲಿ ಲಕ್ವ ಹೊಡೆದು ಹಾಸಿಗೆ ಹಿಡಿದಾಗ ಲಿಸ್ಟರ್‌ಗೆ ಎಡಿನ್ಬರೊವಿಗೆ ಬರಲು ಸುಲಭವಾಗಿತ್ತು. ಸೈಮ್ ಸತ್ತ ಕೂಡಲೇ ಎಡಿನ್ಬರೊ ರೋಗಿ ಹಾಸೆಪಕ್ಕದ ಶಸ್ತ್ರವೈದ್ಯದ ಪ್ರಾಧ್ಯಾಪಕನಾಗಿ ನೇಮಕವಾದನು. ಆಗಲೇ ಅವನ ಶತೃ ಸಿಮ್ಸನ್ ಕೂಡ ಸತ್ತು ಅವನ ಪ್ರಯೋಗಗಳಿಗೆ ಯಾವ ಅಡ ಚಣೆಯೂ ಇಲ್ಲವಾಯಿತು. ಉದ್ದದ ಹಾಗೂ ನುಲಿದ ಕತ್ತುಳ್ಳ ಗಾಜಿನ ಸೀಸೆಯಲ್ಲಿ ಟ್ಟಿರುವ ಮೂತ್ರ ಕೆಡುವುದಿಲ್ಲವೆಂದು ಹೇಳಿರುವ ಪ್ಯಾಸ್ಚೂರಿನ ತಿಳಿವಳಿಕೆಯನ್ನು ಲಿಸ್ಟರ್ ಪುಷ್ಟೀಕರಿಸಿ ತಾನು ಭಾಷಣ ಮಾಡುವಾಗಲೆಲ್ಲಾ ಅಂತಹ ಸೀಸೆಗಳನ್ನು ತೆಗೆದುಕೊಂಡು ಹೋಗಿ ಪ್ರದರ್ಶಿಸುತ್ತಿದ್ದನು. ಪ್ಯಾಸ್ಚೂರ್‌ನ ಸಂಗಡ ಸ್ನೇಹ ಬೆಳೆಸಿ

ಕಾಗದ ಪತ್ರಗಳನ್ನು ಬರೆದು, ತನ್ನ ವೈಯಕ್ತಿಕ ಗೌರವವನ್ನು ಸೂಚಿಸಿದ್ದಲ್ಲದೆ ಇಬ್ಬರೂ ಜೀವಾವಧಿ ಸ್ನೇಹ ಬೆಳೆಸಿದ್ದರು.

ಲಿಸ್ಟರ್ ತನ್ನ ಪ್ರತಿಯೊಂದು ಕೆಲಸವನ್ನೂ ಕೂಲಂಕಷವಾಗಿ ಮಾಡುತ್ತಿದ್ದ ನೆಂಬುದಕ್ಕೆ ಅವನು ಹೇಳಿದ್ದ 'ವಿವರಗಳ ಮೇಲಿನ ಗಮನಕ್ಕೆ ತಕ್ಕಂತಿರುತ್ತದೆ ವಿಜಯ' ಮತ್ತು 'ವೈದ್ಯಗಾರಿಕೆಯಲ್ಲಿ ಒಂದೇ ಒಂದು ಕಟ್ಟಳೆಯಿದೆ; ರೋಗಿಯ ಜಾಗದಲ್ಲಿ ನೀವು ಇರುವಂತೆ ಭಾವಿಸಿ' ಎನ್ನುವ ಸೂತ್ರಗಳೇ ಸಾಕ್ಷಿಯಾಗಿವೆ. ಇವನು ಕಂಡು ಹಿಡಿದಿದ್ದ ಬಟವೆ ಚಿಮುಟ ಮತ್ತು ಬೆದಗಡ್ಡಿ ತುದಿಯ ಕತ್ತರಿ ಈಗಲೂ ಉಪಯೋಗ ದಲ್ಲಿವೆ. ಇವಲ್ಲದೆ ಕರುಳಿನ ಹುರಿಕಟ್ಟು, ಬಸಿವ ರಬ್ಬರ್ ಕೊಳವೆಗಳನ್ನೂ ಕಂಡು ಹಿಡಿದನು. ಇವನ್ನು ಇಂಗಾಲೆಣ್ಣೆ ಆಮ್ಲದಲ್ಲಿಟ್ಟು ಶುದ್ಧಿ ಮಾಡಿ ಉಪಯೋಗಿಸು ತ್ತಿದ್ದನು. ಬಸಿವ ರಬ್ಬರ್ ನಾಳವನ್ನು ಮೊಟ್ಟಮೊದಲಿಗೆ ೧೮೭೧ರಲ್ಲಿ ವಿಕ್ಟೋರಿಯ ರಾಣಿಗಿದ್ದ ಕಂಕುಳಿನ ಕುರುವನ್ನು ಬಸಿಯಲು ಉಪಯೋಗಿಸಿದ್ದನು. ಈ ಮಹ ತ್ಕಾರ್ಯಗಳಿಂದ ಅವನ ಕೀರ್ತಿ ಹೆಚ್ಚಿದಂತೆಲ್ಲಾ ಅವನ ಸುಖ ಸಂತೋಷಗಳೂ ಹೆಚ್ಚಿದವು. ವಿದ್ಯಾರ್ಥಿಗಳು ತಾನು ಮುಂದು ನಾನು ಮುಂದು ಎಂದು ಲಿಸ್ಟರನ ಭಾಷಣವನ್ನು ಕೇಳಲು ಕಾತುರರಾಗಿದ್ದರು. ಹೊರ ದೇಶಗಳಿಂದಲೂ ವಿದ್ಯಾರ್ಥಿಗಳು, ವಿಜ್ಞಾನಿಗಳು ಎಡೆಬಿಡದೆ ಎಡಿನ್ಬರೊವಿಗೆ ಬಂದು ಹೋಗುತ್ತಿದ್ದರು. ಹೀಗಿರುವಾಗ, ಹೊಸ ವೈದ್ಯ ವಿದ್ಯೆ ಕಲಿಯಲು ಕಾತುರವಾಗಿದ್ದ ಜರ್ಮನಿ, ಲಿಸ್ಟರ್‌ನನ್ನು ೧೮೭೫ರಲ್ಲಿ ಬರಮಾಡಿಕೊಂಡು ಗೌರವ ಸಲ್ಲಿಸಿತು. ಯೂರೋಪಿನ ಇತರ ಪಟ್ಟಣಗಳಲ್ಲೂ ಅವನ ಶಸ್ತ್ರ ಕ್ರಿಯೆಗಳಿಗೆ ಸಾಕಷ್ಟು ಬೆಂಬಲ ಸಿಕ್ಕಿತ್ತು. ಅಮೆರಿಕದಲ್ಲೂ ಅವನ ಪ್ರಭಾವಕ್ಕೆ ಅಡ್ಡಿಯಿರಲಿಲ್ಲ. ಅಲ್ಲಿ ೧೮೭೬ನೇ ಸೆಪ್ಟೆಂಬರ್‌ನಲ್ಲಿ ನಡೆದ ಅಂತರ ರಾಷ್ಟ್ರೀಯ ವೈದ್ಯ ಸಮ್ಮೇಳನಕ್ಕೆ ಭೇಟಿ ಕೊಟ್ಟದ್ದಾಗ ಆದರದ ಸ್ವೀಕಾರ ಸಿಕ್ಕಿತ್ತು.

ಲಂಡನ್ನಿನಲ್ಲಿ

ಅವನ ೫೦ನೇ ಹುಟ್ಟಿದ ಹಬ್ಬದ ವರ್ಷವಾದ ೧೮೭೭ರಲ್ಲಿ, ಸರ್ ವಿಲಿಯಂ ಫರ್ಗುಸನ್ ಸತ್ತು ತೆರವಾದ ಲಂಡನ್ನಿನ ರಾಜ ವೈದ್ಯ ಕಾಲೇಜಿನ ರೋಗಿ ಹಾಸೆಪಕ್ಕದ ಶಸ್ತ್ರವೈದ್ಯ ಪ್ರಾಧ್ಯಾಪಕ ಸ್ಥಾನಕ್ಕೆ ಕರೆ ಬಂದು ಹೊರಟಾಗ,ಎಡಿನ್ಬರೊ ವಿದ್ಯಾರ್ಥಿಗಳು ಸುಮಾರು ೭೦೦ ಜನ ಸೇರಿ ಅವನು ಎಡಿನ್ಬರೊ ಬಿಟ್ಟು ಹೋಗಬಾರದೆಂದು ಮನವಿ ಮಾಡಿಕೊಂಡರು. ಆದರೆ ಲಿಸ್ಟರ್ ಈ ಸಮಯ ಜೀವನದ ಧ್ಯೇಯ ಸಾಧಕವೆಂದರಿತು ಲಂಡನ್ನಿನಲ್ಲೂ ತನ್ನ ನಂಜುರೋಧಕ ಪದ್ಧತಿಯನ್ನು ಹರಡಲು ತನ್ನ ಸಂಗಡ ವಾಟ್ಸನ್ ಚೇನ್ ಮತ್ತು ಜಾನ್ ಸ್ಟೂವರ್ಟ್‌ರ ಸಮೇತ ಹೋಗಿ ಲಂಡನ್ನಿನ ಪ್ರಾಧ್ಯಾಪಕತ್ವ ವನ್ನು ಸ್ವೀಕರಿಸಿದನು. ಆದರೆ ಸ್ವೀಕಾರ ಅಷ್ಟೊಂದು ಹಿತವಾಗಿರಲಿಲ್ಲ. ವಿದ್ಯಾರ್ಥಿ ಗಳೆಲ್ಲರೂ ನಿರುತ್ಸಾಹಿಗಳಾಗಿದ್ದರು. ದಾದಿಯರು ಹಗೆತನ ತೋರಿದರು. ಸಹೋ ದ್ಯೋಗಿಗಳು ಟೀಕಿಸುತ್ತಿದ್ದರು.ಆದ್ದರಿಂದ ಅವನ ಭಾಷಣವನ್ನು ಕೇಳಲು ಹೆಚ್ಚು ಜನರು

ಬರುತ್ತಿರಲಿಲ್ಲ. ಅವನ ಅಭಿಪ್ರಾಯವನ್ನು ಅನುಸರಿಸಿದರೆ ಹೊರಗಿನ ಪರೀಕ್ಷಕರಿಂದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುದಿಲ್ಲವೆಂದು ವಿದ್ಯಾರ್ಥಿಗಳಲ್ಲಿ ಭಯ ಉಂಟಾಗಿತ್ತು. ಪರೀಕ್ಷೆ ಮುಗಿಸಿದ ಕೇವಲ ಹತ್ತು ಹನ್ನೆರಡು ವಿದ್ಯಾರ್ಥಿಗಳು ಮಾತ್ರ ಭಾಷಣಗಳನ್ನು ಕೇಳಲು ಹೋಗುತ್ತಿದ್ದರು.

ಹೀಗೆ ಅನೇಕ ತೊಡರುಗಳಿದ್ದರೂ ಕ್ರಮೇಣ ಜನರಲ್ಲಿ ಬದಲಾವಣೆಯಾಯಿತು. ಲಿಸ್ಟರ್ ನಡೆಸಿದ ಮಂಡಿಯ ಶಸ್ತ್ರಚಿಕಿತ್ಸೆಯನ್ನು ನೋಡಿ ಲಂಡನ್ನಿನ ವೈದ್ಯರಲ್ಲಿ ಆಶ್ಚರ್ಯವಾಗಿದ್ದಲ್ಲದೆ ತಮ್ಮ ಮೆಚ್ಚಿಗೆಯನ್ನೂ ತೋರ್ಪಡಿಸಿದ್ದರು. ಟೀಕೆಗಳು ನಿಂತು ಲಿಸ್ಟರನ ಪದ್ಧತಿಗಳೇ ಆಚರಣೆಗೆ ಬಂದವು. ರಾಜ ವೈದ್ಯ ಕಾಲೇಜಿನಲ್ಲಿ ಸುಮಾರು ೧೫ ವರ್ಷಗಳು ಹೀಗೆ ಪ್ರಾಧ್ಯಾಪಕನಾಗಿದ್ದು, ೧೮೮೧ರಲ್ಲಿ ಲಂಡನ್ನಿನಲ್ಲೇ ನಡೆದ ೭ನೇ ಅಂತರ ರಾಷ್ಟ್ರೀಯ ವೈದ್ಯಕೀಯ ಸಮ್ಮೇಳನದಲ್ಲಿ ತಾನು ಭಾಗವಹಿಸಲು ಹೋಗಿ, ಪ್ಯಾಸ್ಚ್ಯೂರ್, ವರ್ಕೌ, ಹಕ್ಸ್ಲಿ ಹಾಗೂ ವೋಕ್‌ಮನ್ ಮುಂತಾದವರ ಸಮಕ್ಷಮದಲ್ಲಿ ಭಾಗಿಯಾಗಿದ್ದನು. ಈ ಸಮಯದಲ್ಲಿ ವೋಕ್‌ಮನ್ ತನ್ನ ಭಾಷಣದಲ್ಲಿ ಲಿಸ್ಟರ್‌ನ್ನು ಕುರಿತು 'ಶಸ್ತ್ರವೈದ್ಯ ಸಾಧಿಸಿರುವ ಈ ಮಹಾ ಮುನ್ನಡೆಯೊಂದಿಗೆ ಬಿಡಿಸಲಾಗದಂತೆ ಸೇರಿರುವವನ ಹೆಸರು ತನ್ನ ಗಂಡುಮಕ್ಕಳಲ್ಲಿ ಒಬ್ಬನದೆಂದು ಇಂಗ್ಲೆಂಡು ಹೆಮ್ಮೆಪಡಬಹುದು' ಎಂದು ಶ್ಲಾಘಿಸಿದ್ದನು.

೧೮೯೧ರಲ್ಲಿ ತೆರೆದ ಹೆಕಲಿಯ (ನಾಯಿಹುಚ್ಚು) ಬ್ರಿಟನ್ನಿನ ಪ್ಯಾಸ್ಚ್ಯೂರ್ ಸಂಸ್ಥೆಯ ಬೆಳವಣಿಗೆಯಲ್ಲಿ ಲಿಸ್ಟರ್ ಆಸಕ್ತಿ ತೋರಿಸಿದ್ದರಿಂದ ೧೯೦೨ರಲ್ಲಿ ಈ ಸಂಸ್ಥೆ ಲಿಸ್ಟರ್ ರೋಗ ನಿವಾರಕ ವೈದ್ಯ ಸಂಸ್ಥೆ ಎಂದು ಹೆಸರು ಪಡೆದಿತ್ತು. ಇವನ ಸಾಧನೆಗಳನ್ನು ಮೆಚ್ಚಿ ೧೮೯೫ರಲ್ಲಿ ರಾಜ ಸಂಘದ ಅಧ್ಯಕ್ಷನಾಗಿ ಆರಿಸಿ ಬಂದನು. ೧೮೯೭ರಲ್ಲಿ ಲಾರ್ಡ್ ಪದವಿಯೂ ದೊರಕಿತು. ೧೯೦೨ರಲ್ಲಿ ನಡೆದ ೭ನೇ ಎಡ್ವರ್ಡ್ ದೊರೆಯ ಪಟ್ಟಾಭಿಷೇಕ ಸಮಾರಂಭದಲ್ಲಿ ಜೋಸೆಫ್ ಲಾರ್ಡ್ ಲಿಸ್ಟರ್‌ನನ್ನು ಗೌರವ ವರ್ಗದ ಸದಸ್ಯನನ್ನಾಗಿ ಆರಿಸಲಾಯಿತು. ಇಷ್ಟರಲ್ಲೇ ತನ್ನ ೮೦ನೇ ವರ್ಷದ ವರ್ಧಂತಿಯ ಸಮಯದಲ್ಲಿ ಪ್ರಾಧ್ಯಾಪಕನ ಕೆಲಸದಿಂದಲೂ, ಆಸ್ಪತ್ರೆಯ ನೌಕರಿಯಿಂದಲೂ ನಿವೃತ್ತನಾಗಿ, ೧೯೧೨ರಲ್ಲಿ ತನ್ನ ೮೫ನೇ ವಯಸ್ಸಿನಲ್ಲಿ ಮೃತನಾದನು. ಅವನು ಕಣ್ಮರೆಯಾದಾಗ ಅವನ ಗುಣಗಾನ ಮಾಡಿದವರ ಸಂಖ್ಯೆ ಎಣಿಸಲಾರದಷ್ಟಿತ್ತು. 'ಅವನ ಕೋಮಲ ಸ್ವಭಾವ, ಶಾಂತ ಮನೋಧರ್ಮ, ದೃಢಸಂಕಲ್ಪದ ನಿರ್ಧಾರ, ನಿಂದನೆಗೆ ಅಸಡ್ಡೆ, ವಿರೋಧ ಟೀಕೆಗಳ ಸ್ಥೈರಣೆ ಇವು ಒಟ್ಟುಗೂಡಿ ಅವನನ್ನು ಪುರುಷರಲ್ಲಿ ಕೀರ್ತಿವಂತನಾಗಿ ಮಾಡಿದವು' ಎಂಬ ಶಸ್ತ್ರವೈದ್ಯ ರಾಜ ಸಂಘದ ಶ್ಲಾಘನೆ ಅವನ ಯೋಗ್ಯತೆಗೆ ಸಲ್ಲತಕ್ಕದಾಗಿತ್ತು.

ಏಕಾಣುಜೀವಿಶಾಸ್ತ್ರದ ಮುನ್ನಡೆ

ನಂಜುರೋಧಕ ವೈದ್ಯಶಾಸ್ತ್ರ ಬೆಳಕಿಗೆ ಬರುತ್ತಿದ್ದ ಕಾಲದಲ್ಲೇ ಏಕಾಣುಜೀವಿ

ಶಾಸ್ತ್ರ ಕೂಡ ತಲೆಯೆತ್ತುತ್ತಿತ್ತು. ಈ ಏಕಾಣುಜೀವಿಶಾಸ್ತ್ರದ ಏಳಿಗೆಗೆ ಫ್ರಾನ್ಸಿನ ಪ್ಯಾಸ್ಚೂರ್ ಉತ್ತರಾಧಿಕಾರಿಯಾಗಿದ್ದರೂ, ಇತರರು ಅಲ್ಲಲ್ಲಿ ತಮ್ಮ ಶಕ್ತ್ಯನು ಸಾರವಾಗಿ ಕೊಡುಗೆ ನೀಡುತ್ತಿದ್ದರು. ರೋಗೋತ್ಪತ್ತಿಗೆ ರೋಗಾಣುಗಳು ಕಾರಣ ವೆಂದು ಬಹಳ ಹಿಂದೆಯೇ ಮಾರ್ಕಸ್ ಟೆರೆಂಟಿಯಸ್ ವಾರ್ರೊ (ಕ್ರಿ.ಪೂ.೧೧೬–೨೭), ಫ್ರಾಕಾಸ್ಟೋರಿಯಸ್ (೧೫೪೬) ಮತ್ತು ಕಿರ್ಚರ್ (೧೬೫೮) ಇಬ್ಬರೂ ತಿಳಿಸಿದ್ದರು. ಲ್ಯುವೆನ್‌ಹಾಕ್ ೧೬೮೩ರಲ್ಲಿ ದಂಡಾಣುಜೀವಿ ಹಾಗೂ ಕಾಯ್ಜೀವಿಗಳೆಂದು ಹೇಳ ಬಹುದಾದ ಜೀವಿಗಳನ್ನು ವಿವರಿಸಿದ್ದರೂ, ರೋಗೋತ್ಪತ್ತಿಗೂ ಅವಕ್ಕೂ ಇರುವ ಸಂಬಂಧವನ್ನು ತಿಳಿಸಿರಲಿಲ್ಲ. ಹೀಗೆ ೧೯ನೇ ಶತಮಾನದ ಕಡೆಯ ಅರ್ಧದ ವರೆವಿಗೂ ಸರಿಯಾದ ಪುರಸ್ಕಾರ ಏಕಾಣುಜೀವಿಶಾಸ್ತ್ರಕ್ಕೆ ಸಿಕ್ಕಿರಲಿಲ್ಲ.


ಅಗಾಸ್ಟಿನೊ ಬಾಸ್ಸಿ

ಇಷ್ಟರಲ್ಲೇ ಅಗಾಸ್ಟಿನೊ ಬಾಸ್ಸಿ (೧೭೭೧–೧೮೫೬) ನ್ಯಾಯಶಾಸ್ತ್ರದ ಪದವೀ ಧರನಾಗಿದ್ದರೂ, ವೈದ್ಯಶಾಸ್ತ್ರದಲ್ಲಿ ಸಾಕಷ್ಟು ತಿಳಿವಳಿಕೆ ಹೊಂದಿದ್ದನು. ಪ್ರಸಿದ್ಧ ಪುರುಷರಾದ ಭೌತ ವಿಜ್ಞಾನಿ ವೋಲ್ಟ, ಅಂಗರಚನೆ ವಿಜ್ಞಾನಿ ಸ್ಕಾರ್ಪ, ಅಂಗಕ್ರಿಯೆ ವಿಜ್ಞಾನಿ ಸ್ಪಲ್ಲಾನ್ಜಾನಿ ಹಾಗೂ ರೋಗಿ ಹಾಸೆಪಕ್ಕದ ವೈದ್ಯ ವಿಜ್ಞಾನಿ ರಾಸೊರಿ ಯವರ ಭಾಷಣಗಳನ್ನು ಕೇಳುತ್ತಿದ್ದುದರಿಂದಲೇ ವೈದ್ಯಶಾಸ್ತ್ರದಲ್ಲಿ ತಿಳಿವಳಿಕೆ ಉಂಟಾ ಗಿತ್ತು. ಆದರೆ ಇವನಿಗೆ ಕಣ್ಣಿನ ತೊಂದರೆ ಇದ್ದುದರಿಂದ ಸರ್ಕಾರಿ ನೌಕರಿಯಲ್ಲಿ ಕೆಲಸ ಮಾಡಲು ಸಾಗದೆ ಬೇಸಾಯ ಮಾಡಿಸಿಕೊಂಡು ತನ್ನ ಊರಿನಲ್ಲಿ ನೆಲೆಸಿದನು. ಅಲ್ಲಿ ರೇಷ್ಮೆಹುಳುರೋಗದ ಹಾವಳಿ ಹೆಚ್ಚಾಗಿದ್ದುದನ್ನು ನೋಡಿ ರೋಗದ ಕಾರಣವನ್ನು ಕಂಡುಹಿಡಿಯಲು ಯತ್ನಿಸಿ, ಪರೋಪಜೀವಿಯಾದ ಬೂಸ್ಟು ಕಾರಣವೆಂದು ತಿಳಿಸಿ ದ್ದನು. ಈ ಬೂಸ್ಟನ್ನು ಬೊಟ್ರೈಟಿಸ್ ಬಾಸ್ಸಿಯಾನ ಎಂದು ಅವನ ಜ್ಞಾಪಕಾರ್ಥ ವಾಗಿ ಕರೆಯಲಾಗಿತ್ತು. ಈ ರೋಗವನ್ನು ನಾಶಮಾಡಲು ರೋಗವಿರುವ ಹುಳು ಗಳನ್ನು ಪ್ರತ್ಯೇಕಿಸಬೇಕೆಂದೂ ಹಾಗೂ ಕ್ರಿಮಿನಾಶಕ ಔಷಧಗಳನ್ನು ಹಾಕಬೇಕೆಂದೂ ಪ್ರಕಟಿಸಿದನು. ೧೮೪೪ರಲ್ಲಿ "ಸುಯಿ ಸೆಂಟಗಿ ಇನ್ ಜೆನಿವೇಲ್" (ಸರ್ವಸಾಮಾನ್ಯ ವಾದ ಅಂಟುರೋಗಗಳನ್ನು ಕುರಿತು) ಎಂಬ ಲೇಖನವನ್ನು ಬರೆದು ಅದರಲ್ಲಿ ಸಿಡುಬು, ಪ್ಲೇಗು, ಉಪದಂಶ, ಚುಕ್ಕೆ ಜ್ವರ ಎಂಬ ರೋಗಗಳು ಏಕಾಣುಜೀವಿಗಳಿಂದ ಉತ್ಪ ತ್ತಿಯಾಗುತ್ತವೆಂದು ತಿಳಿಸಿದನು. ಮಸ್ಕಾರ್ಡಿನ್ ಎಂಬ ರೇಷ್ಮೆಹುಳು ರೋಗದ ಇವನ ಇನ್ನೊಂದು ಪುಸ್ತಕವಂತೂ ಆಗಿನ ವಿಜ್ಞಾನಿಗಳಲ್ಲಿ ಬಹಳ ಕುತೂಹಲ ಉಂಟು ಮಾಡಿತು. ಈ ಮಹತ್ಕಾರ್ಯಗಳ ಫಲವಾಗಿ, ಇವನು 'ಸೊಂಕಿನ ಕಾರಣವಾಗಿ ಪರೋಪಜೀವಿ ತತ್ತ್ವದ ಮೂಲಪುರುಷ'ನೆಂದು ಹೆಸರು ಪಡೆದನು.

ಲೂಯಿ ಪ್ಯಾಸ್ಚೂರ್

ಏಕಾಣುಜೀವಿಶಾಸ್ತ್ರದ ಜನಕನೆಂದೆನಿಸಿಕೊಂಡಿದ್ದ ಲೂಯಿ ಪ್ಯಾಸ್ಚೂರ್

(೧೮೨೨-೯೫) ವರ್ಕೌನ ಸಮಕಾಲೀನನಾಗಿದ್ದನು. ಇವನು ಹುಟ್ಟಿದ್ದು ಫ್ರಾನ್ಸಿನ ಡೊಲ್ ಎಂಬಲ್ಲಿ. ಇವನ ತಂದೆ ನೆಪೋಲಿಯನ್ನನ ಸೈನ್ಯದಲ್ಲಿದ್ದು, ನಿವೃತ್ತಿಯಾದನಂತರ ಚರ್ಮ ಹದಮಾಡುವ ಕೆಲಸದಲ್ಲಿ ತೊಡಗಿದ್ದನು. ಪ್ಯಾಸ್ಚೂರ್ ಕುಶಲ ವಿದ್ಯೆಯಲ್ಲಿ ಚತುರನಾಗಿದ್ದರೂ, ಸಾಧಾರಣ ಓದು ಬರಹದಲ್ಲಿ ಅಷ್ಟೊಂದು ಚುರುಕಾಗಿರಲಿಲ್ಲ. ಇವನು ವೈದ್ಯ ಪದವೀಧರನಲ್ಲದಿದ್ದರೂ, ವೈದ್ಯಚರಿತ್ರೆಯಲ್ಲಿ ಅಸಾಧಾರಣನಾಗಿದ್ದನು. ವಿಜ್ಞಾನಗಳಲ್ಲಿ ಪದವಿ ಪಡೆದ ಮೇಲೆ, ರಸಾಯನಶಾಸ್ತ್ರಜ್ಞ ಬಲಾರ್ಡ್‌ನಲ್ಲಿ ಕೆಲಸಕ್ಕಿದ್ದು, ೧೮೪೮ರಲ್ಲಿ ಡಾಕ್ಟೊರೇಟ್ ಪದವಿಯನ್ನು ಪಡೆದನು. ಆಗ ಅವನ ಮೊದಲ ಪ್ರಯೋಗ ಚಿಂಚಾಮ್ಲಗಳನ್ನು ಹಾಗೂ ಉಪ ಚಿಂಚಾಮ್ಲ ಹರಳುಗಳನ್ನು ಸೂಕ್ಷ್ಮದರ್ಶಕದಲ್ಲಿಟ್ಟು ಪರೀಕ್ಷಿಸುವುದಾಗಿತ್ತು.



ತನ್ನ ಪ್ರಯೋಗಶಾಲೆಯಲ್ಲಿ ಲೂಯಿ ಪ್ಯಾಸ್ಚೂರ್

ಚಿಂಚಾಮ್ಲದ ಹರಳುಗಳು ಬಲಗಡೆಗೆ ತಿರುಗಿದ್ದುದನ್ನೂ, ಉಪಚಿಂಚಾಮ್ಲದ ಹರಳುಗಳಲ್ಲಿ ಕೆಲವು ಬಲಕ್ಕೂ ಕೆಲವು ಎಡಕ್ಕೂ ತಿರುಗಿದ್ದುದನ್ನೂ ನೋಡಿ, ಬಲ ತಿರುವಿನ ಹರಳುಗಳ ದ್ರಾವಣ ಧೃವೀಕರಿತ ಬೆಳಕನ್ನು ಬಲಕ್ಕೆ ಬಾಗಿಸುವುದನ್ನೂ, ಎಡಕ್ಕೆ ತಿರುಗಿದ್ದ ಹರಳುಗಳ ದ್ರಾವಣ ಎಡಕ್ಕೆ ಬಾಗಿಸುವುದನ್ನೂ ಕಂಡುಹಿಡಿದಿದ್ದನು. ಈ ಪ್ರಯೋಗದ ಫಲಿತಾಂಶವನ್ನು ಅಕಾಡೆಮೀ ಡೆಸ್ ವಿಜ್ಞಾನಿಗಳ ಮುಂದಿಟ್ಟು ಎಲ್ಲರಿಂದಲೂ ಮೆಚ್ಚಿಗೆ ಪಡೆದಾಗ ಅವನಿಗೆ ಕೇವಲ ೨೬ ವರ್ಷ ವಯಸ್ಸಾಗಿತ್ತು.

ಅನಂತರ ವಿಜ್ಞಾನ ಸಂಶೋಧನೆಯಲ್ಲಿ ಮತ್ತಷ್ಟು ಆಸಕ್ತಿ ಹುಟ್ಟಿ ದ್ರಾಕ್ಷಾರಸದ ಹುದುಗೇಳಿಕೆಯನ್ನೂ, ಕ್ರಿಮಿಕೀಟಗಳ ರೋಗಗಳನ್ನೂ, ಸಾಕಿದ ಪ್ರಾಣಿಗಳ ರೋಗಗಳನ್ನೂ ಹಾಗೂ ಮನುಷ್ಯನ ರೋಗಗಳನ್ನೂ ಒಂದೊಂದಾಗಿ ಪರೀಕ್ಷೆ ಮಾಡುವುದರಲ್ಲಿ ತೊಡಗಿದನು. ಮೊದಲಿಗೆ ಲೈಸಿಯಲ್ಲೂ, ಮುಂದಿನ ವರ್ಷ ಸ್ಟ್ರಾಸ್ಬರ್ಗ್‌ನಲ್ಲೂ ಪ್ರಾಧ್ಯಾಪಕನಾಗಿದ್ದು, ೧೮೫೪ರಲ್ಲಿ ಲಿಲ್ಲೆ ವಿಜ್ಞಾನಗಳ ಪ್ರಾಧ್ಯಾಪಕನಾಗಿಯೂ ಮತ್ತು ಮುಖ್ಯಾಧಿಕಾರಿಯಾಗಿಯೂ ನೇಮಕವಾಗಿ, ಕೊನೆಯಲ್ಲಿ ೨೦ ವರ್ಷಗಳ ಕಾಲ ಪ್ಯಾರಿಸ್ಸಿನಲ್ಲಿ ಕೆಲಸಮಾಡಲು ಅವಕಾಶ ದೊರಕಿತು. ಜೀವನದ ಕೊನೆಯ ೬ ವರ್ಷಗಳನ್ನು ಅವನ ಗೌರವಾರ್ಥವಾಗಿ ೧೮೬೮ ರಲ್ಲಿ ಅವನ ಹೆಸರನ್ನೇ ಇಟ್ಟ

ಕಟ್ಟಿಸಿದ ಪ್ಯಾಸ್ಚೂರ್ ಸಂಸ್ಥೆಯಲ್ಲಿ ಸಂಶೋಧನೆ ನಡೆಸುತ್ತಾ ಕಾಲ ಕಳೆದನು. ಸಂಶೋಧನೆಗಳನ್ನು ನಡೆಸಲು ಆತನ ಹೆಂಡತಿ ಯಾವಾಗಲೂ ದೃಢ ನಿಷ್ಠೆಯಿಂದ ಸಹಾಯ ಮಾಡುತ್ತಿದ್ದಳು.

ಲಿಲ್ಲೆಯಲ್ಲಿ

ಬೀಟ್ ಗೆಣಸಿನಿಂದ ಮದ್ಯತಯಾರಿಸುವ ಸ್ಥಳವಾದ ಲಿಲ್ಲೆಯಲ್ಲಿದ್ದಾಗ ಹುದುಗೆಬ್ಬಿಸುವುದನ್ನು ಪರೀಕ್ಷಿಸಲು ಅವನಿಗೆ ಅವಕಾಶ ದೊರಕಿತ್ತು. ಹುದುಗೆಬ್ಬಿಸುವಿಕೆ ಒಂದು ಸಾಧಾರಣ ರಸಾಯನಿಕ ಪ್ರತಿಕ್ರಿಯೆ ಅಲ್ಲ, ಅದಕ್ಕೆ ಏಕಾಣುಜೀವಿಗಳು



ಲೂಯಿ ಪ್ಯಾಸ್ಚೂರ್ ಹುಳಿತ ಹಾಗೂ ಕೊಳೆತಗಳಿಗೆ ರಸಾಯನಿಕ ಬದಲಾವಣೆಗಳಲ್ಲದೆ ಜೀವಿಗಳೂ ಅಗತ್ಯ ಎಂದು ಹೇಳಿದ್ದನು.

ಅಗತ್ಯವೆಂದು ಕಂಡುಹಿಡಿದನು. ಹುದುಗೆಬ್ಬಿಸಲು ಏಕಾಣುಜೀವಿಗಳು ಹೇಗೆ ಅಗತ್ಯವೊ ಹಾಗೆಯೇ ಮದ್ಯ ತಯಾರಾಗಲೂ ಏಕಾಣುಜೀವಿಗಳು ಅತ್ಯಗತ್ಯವೆಂದೂ ತಿಳಿಸಿದನು. ಬಿಸಿ ಮಾಡುವುದರಿಂದ ಈ ಹುದುಗೇಳುವುದನ್ನು ತಡೆಯಬಹುದೆಂದು ಕೂಡ ತಿಳಿಸಿದನು. ಈ ಆಧಾರದ ಮೇಲೆ ಪ್ಯಾಸ್ಚೂರೀಕರಣ ಎಂದು ಹೆಸರನ್ನಿಡಲಾಯಿತು. ಅನಂತರ ಹುದುಗೆಬ್ಬಿಸಲು ಕಾರಣವಾದ ಏಕಾಣುಜೀವಿಗಳು ತಮ್ಮಷ್ಟಕ್ಕೆ ತಾವೇ ಹುಟ್ಟುವುದಿಲ್ಲವೆಂದೂ, ಗಾಳಿಯಲ್ಲಿ ಬಂದು ಸೇರುತ್ತವೆಂದೂ ವ್ಯಕ್ತಪಡಿಸಿದನು. ಈ ಸಂಶೋಧನೆ, ನಂಜುರೋಧಕದ ಶಸ್ತ್ರವೈದ್ಯವನ್ನು ಲಿಸ್ಟರ್ ಉತ್ತಮಪಡಿಸಲು ಅನುಕೂಲವಾಯಿತು. ಈ ಸಂಶೋಧನೆಗಳು ನಡೆಯುತ್ತಿದ್ದ ೧೮೬೫ನೇ ವರ್ಷದಲ್ಲಿ ಫ್ರಾನ್ಸಿನ ದಕ್ಷಿಣ ಪ್ರಾಂತಗಳಲ್ಲಿ ರೇಷ್ಮೆ ಹುಳುವಿನ ರೋಗ ಸಾಂಕ್ರಾಮಿಕವಾಗಿ ಹರಡಿ ರೇಷ್ಮೆ ಕೈಗಾರಿಕೆ ನಷ್ಟಕ್ಕೆ ಗುರಿಯಾಗಿದ್ದನ್ನು ತಡೆಯಲು, ಸರ್ಕಾರ ಪ್ಯಾಸ್ಚೂರನ್ನು

ಕಳುಹಿಸಲು, ೩ ವರ್ಷಗಳು ಅಲ್ಲಿ ಕೆಲಸಮಾಡಿ ಎರಡು ಬಗೆಗಳ ರೋಗಗಳನ್ನು ಪತ್ತೆ ಹಚ್ಚಿದ್ದಲ್ಲದೆ, ಅವುಗಳನ್ನು ತಡೆಗಟ್ಟುವ ವಿಧಾನಗಳನ್ನೂ ಸೂಚಿಸಿದನು. ಇವನ ಈ ಕಾರ್ಯಕ್ರಮಗಳಿಂದ, ೧೦ ವರ್ಷದ ಲಾಗಾಯಿತು ೨,೦೦೦,೦೦೦ ಫ್ರಾಂಕುಗಳಷ್ಟು ನಷ್ಟವಾಗಿದ್ದ ರೇಷ್ಮೆ ಕೈಗಾರಿಕೆ ರಕ್ಷಿಸಲ್ಪಟ್ಟು ಫ್ರಾನ್ಸ್ ಪುನಃ ರೇಷ್ಮೆ ಕೈಗಾರಿಕೆಯಲ್ಲಿ ಮುಂದುವರಿಸಲು ಕಾರಣವಾಯಿತು. ಮಿದುಳಿನ ರಕ್ತಸ್ರಾವದ (ಲಕ್ವ) ದೆಸೆಯಿಂದ, ೧೮೬೮ರಲ್ಲಿ ಶರೀರದ ಎಡ ಭಾಗ ಬಲಹೀನವಾಗಿ ೩ ತಿಂಗಳು ಹಾಸಿಗೆ ಹಿಡಿದಿದ್ದು, ಚೇತರಿಸಿಕೊಂಡನಂತರ ಪುನಃ ತನ್ನ ಸಂಶೋಧನೆಗಳನ್ನು ನಡೆಸಲು ಯಥಾಶಕ್ತಿಯಿಂದ ಪ್ಯಾಸ್ಚೂರ್ ಪ್ರಾರಂಭಿಸಿದನು. ಈ ಅನುಭವಗಳ ಆಧಾರದ ಮೇಲೆ ಲಿಲ್ಲೆಯಲ್ಲಿ ಒಂದು ಪ್ರಾರಂಭೋತ್ಸವದ ಭಾಷಣ ಮಾಡುತ್ತಾ, 'ಕಣ್ಣರಿಕೆಯ ಕ್ಷೇತ್ರಗಳಲ್ಲಿ ಸಿದ್ಧವಾಗಿರುವ ಮನಸ್ಸುಗಳಿಗೇ ಅದೃಷ್ಟ ಅನುಕೂಲಿಸುತ್ತದೆ' ಎಂದು ಪ್ಯಾಸ್ಚೂರ್ ಹೇಳಿದ್ದು ಇಂದಿಗೂ ನಿಜವಾಗಿದೆ.

ಏಕಾಣುಜೀವಿಶಾಸ್ತ್ರದಲ್ಲಿ ಆಸಕ್ತಿ

ಇಲ್ಲಿಯ ವರೆವಿಗೆ ರಸಾಯನಶಾಸ್ತ್ರಜ್ಞ ಎನಿಸಿಕೊಂಡಿದ್ದ ಪ್ಯಾಸ್ಚೂರ್, ಇನ್ನು ಮುಂದೆ ಏಕಾಣುಜೀವಿಶಾಸ್ತ್ರದ ಕಡೆ ಗಮನಕೊಟ್ಟು ನೆರಡಿ ರೋಗ ಅಥವ ತೊರಳೆ ಜ್ವರ ಫ್ರಾನ್ಸಿನ ಕುರಿ ಮತ್ತು ದನಕರುಗಳಲ್ಲಿ ಸಾಂಕ್ರಾಮಿಕವಾಗಿ ಹರಡಿ ಬಹಳ ನಷ್ಟ ಮಾಡುತ್ತಿದ್ದುದನ್ನು ಕಂಡು, ತನ್ನ ಶಕ್ತಿ ಸಾಮರ್ಥ್ಯಗಳನ್ನು ಅತ್ತಕಡೆ ತಿರುಗಿಸಿ ಅವನ್ನು ತಡೆಗಟ್ಟುವ ಪ್ರಯತ್ನದಲ್ಲಿ ತೊಡಗಿದನು. ಜೆನ್ನರ್ ಹಾಕಿದ ಪಂಕ್ತಿಯನ್ನು ಅನುಸರಿಸಿ ದುರ್ಬಲ ರೂಪದ ವಿಷಕಣವನ್ನು ತಯಾರಿಸಿ, ಅದನ್ನು ಪ್ರಾಣಿಗಳಿಗೆ ಚುಚ್ಚಿ ಕಟುವಲ್ಲದ ರೋಗವನ್ನು ಬರಿಸಿ ಪ್ರಾಣಿಗಳಲ್ಲಿ ರಕ್ಷಣೆ ಉಂಟಾಗುವಂತೆ ಮಾಡಿದನು. ಇದೇ ರೀತಿಯ ಸಾಧನೆಯನ್ನು ಕೋಳಿ ಕಾಲರವನ್ನು ತಡೆಯಲು ಕೂಡ ಉಪಯೋಗಿಸಿದನು. ಇವೆಲ್ಲಕ್ಕಿಂತಲೂ ಮೇಲಾಗಿ, ಹುಚ್ಚುನಾಯಿ ಕಡಿತದಿಂದ ಮನುಷ್ಯನಿಗೆ ಬರುತ್ತಿದ್ದ ಹೆಕಲಿ ರೋಗವನ್ನು ತಡೆಯಲು ಕಂಡುಹಿಡಿದ ಸಾಧನವೇ ಅತಿ ಶೋಭಿಸುತ್ತಿತ್ತು. ೧೮೮೫ನೇ ಜೂಲೈ ೬ರಲ್ಲೂ ಹುಚ್ಚುನಾಯಿ ಕಡಿದಿದ್ದ ಅಲ್ಸೇಷಿಯನ್ ಹುಡುಗ ಜೋಸೆಫ್ ಮೀಸ್ಟರ್‌ನನ್ನು ರೋಗಹತ್ತದಂತೆ ಗುಣಪಡಿಸಿ ಖ್ಯಾತಿ ಪಡೆದನು. ಕೆಲವು ತಿಂಗಳನಂತರ ಮತ್ತೊಬ್ಬನನ್ನೂ ಇದೇ ರೀತಿ ಗುಣಪಡಿಸಿದನು.

ಇದಕ್ಕೆ ಮೊದಲು ಅನೇಕ ಪ್ರಯೋಗಗಳ ಫಲವಾಗಿ, ನಾಯಿಗಳಲ್ಲಿ ಬರುವ ಹುಚ್ಚು ರೋಗವೂ, ಮನುಷ್ಯನಲ್ಲಿ ಬರುವ ಹೆಕಲಿಯೂ (ನಾಯಿಹುಚ್ಚು) ವಿಷಕಣದಿಂದ ಉಂಟಾಗುತ್ತದೆಂದೂ, ಆ ವಿಷಕಣ ನರಮಂಡಲದಲ್ಲಿರುತ್ತದೆಂದೂ ವ್ಯಕ್ತಪಡಿಸಿದ್ದನು. ಈ ವಿಷಕಣಗಳನ್ನು ಒಂದು ಪ್ರಾಣಿಯಿಂದ ಮತ್ತೊಂದು ಪ್ರಾಣಿಗೆ ಸಾಗಿಸಿ, ಕ್ರಮೇಣ ಶರೀರದಲ್ಲಿ ರೋಗ ಹೊರಹೊಮ್ಮುವ ಕುಮುಲುವ ಕಾಲ ಕಡಿಮೆಯಾಗುತ್ತಾ ಬಂದು, ೭ ದಿವಸಕ್ಕಿಂತ ಕಡಿಮೆಯಾಗದ ಸ್ಥಿತಿಗೆ ಕಾರಣವಾದ ವಿಷಕಣವನ್ನು

ಸ್ಥಿರವಿಷಕಣವೆಂದು ಕರೆಯಲಾಯಿತು. ಹೀಗೆ ವಿಷಕಣದ ತೀಕ್ಷ್ಣತೆಯನ್ನು ಹೆಚ್ಚಿಸಿದ ರೀತಿಯನ್ನು ಅರಿತ ಮೇಲೆ, ವಿಷಕಣವಿರುವ ಪದಾರ್ಥಗಳನ್ನು ಒಣಗಿಸಿ, ವಿಷಕಣದ ತೀಕ್ಷ್ಣತೆಯನ್ನು ತೀರಾ ಇಳಿಸಿ, ಈ ದುರ್ಬಲ ವಿಷಕಣವನ್ನು ಹೊಸ ಪ್ರಾಣಿಗೆ ಹೆಚ್ಚು ಹೆಚ್ಚಿನ ಪ್ರಮಾಣದಲ್ಲಿ ಚುಚ್ಚಿ, ಕ್ರಮೇಣ ಕಸುವುಳ್ಳ ಹೊಸ ವಿಷಕಣವನ್ನು ಚುಚ್ಚಿದರೂ ರೋಗ ಹತ್ತದ್ದನ್ನು ಹೊರಗೆಡಹಿದನು. ಈ ಆಧಾರಗಳ ಬೆಂಬಲದಿಂದ ಆರೋಗ್ಯದಿಂದಿರುವ ನಾಯಿಯನ್ನು ಹುಚ್ಚುನಾಯಿ ಕಚ್ಚಿದರೂ ರೋಗ ಬಾರದಂತೆಯೂ, ಅದೇರೀತಿ ಹುಚ್ಚುನಾಯಿ ಕಚ್ಚಿದವರಿಗೂ ರೋಗಬಾರದಂತೆಯೂ ಮಾಡುವ ಕ್ರಮವನ್ನು ಪ್ರಪಂಚಕ್ಕೇ ಪ್ರದರ್ಶಿಸಿದನು. ಅಂದಿನಿಂದ ನಾಯಿ ಹುಚ್ಚು ರೋಗವನ್ನು ಲಸಿಕೆ ಚುಚ್ಚಿ ಗುಣಪಡಿಸುವ ಪ್ಯಾಸ್ಚ್ಯೂರ್ ಪದ್ಧತಿ ಎಲ್ಲೆಲ್ಲೂ ಪ್ರಸಿದ್ಧಿಗೆ ಬಂದಿತು. ಪ್ರಪಂಚದ ನಾನಾಕಡೆಗಳಲ್ಲಿ ಪ್ಯಾಸ್ಚ್ಯೂರ್ ಸಂಸ್ಥೆಗಳು ಸ್ಥಾಪಿತವಾದವು. ಪ್ಯಾರಿಸ್ಸಿನಲ್ಲಿ ಸ್ಥಾಪಿತವಾದ ಸಂಸ್ಥೆಗೆ, ರಾಜರಾದ ರಷ್ಯ ದೇಶದ ಸಾರ್, ಬ್ರೆಜಿಲ್ ಚಕ್ರವರ್ತಿ, ತುರ್ಕಿಯ ಸುಲ್ತಾನ್ ಮುಂತಾದವರೆಲ್ಲಾ ಸೇರಿ ೨,೫೦೦,೦೦೦ ಫ್ರಾಂಕುಗಳನ್ನು ದಾನ ಮಾಡಿ ಕಟ್ಟಿಸಿದರು. ಈ ಹಣವನ್ನು ೧೮೮೮ ರಲ್ಲಿ ಪ್ಯಾಸ್ಚ್ಯೂರಿಗೆ ಅರ್ಪಿಸಲಾಯಿತು. ಆದರೆ ವಯಸ್ಸಾದ ಪ್ಯಾಸ್ಚ್ಯೂರ್ ಶ್ರದ್ಧೆಯಿಂದ ಕೆಲಸಮಾಡಲು ಸಾಧ್ಯವಾಗದಿದ್ದರೂ, ಆಗಾಗ್ಗೆ ಭೇಟಿ ಕೊಡುತ್ತಿದ್ದು, ತನ್ನ ಕೊನೆಯ ಭೇಟಿಯನ್ನು ೧೮೯೫ನೇ ಜೂನ್‌ನಲ್ಲಿ ಕೊಟ್ಟು, ಆದೇ ವರ್ಷದ ಸೆಪ್ಟೆಂಬರ್ ತಿಂಗಳಲ್ಲಿ ದೈವಾಧೀನನಾದನು.



ಹುಚ್ಚುನಾಯಿಯ ಸಂಗಡ ಪ್ಯಾಸ್ಚ್ಯೂರ್‌ನ ಎರಡನೇ ರೋಗಿ ಜುಪಿಲ್ಲೆ ಎಂಬ ಹುಡುಗ ಹೋರಾಡುತ್ತಿರುವ ಚಿತ್ರ.

ಹೀಗೆ ಪ್ಯಾಶ್ಚ್ಯೂರ್ ವ್ಯವಸಾಯ, ಕೈಗಾರಿಕೆ, ವೈದ್ಯಶಾಸ್ತ್ರ ಹಾಗೂ ಮಾನವ ಕುಲಕ್ಕೆ ಸೇವೆ ಸಲ್ಲಿಸಿ ಎಲ್ಲರ ಮೆಚ್ಚಿಗೆಗೆ ಪಾತ್ರನಾದನು. ಇಂತಹ ಸುಪ್ರಸಿದ್ಧ ಮಾನವನ ೭೦ನೇ ವರ್ಷಂತಿ ಉತ್ಸವವನ್ನು ಆಚರಿಸಲು ನಾನಾ ಕಡೆಗಳಿಂದ ಶ್ರೇಷ್ಠ

ವಿಜ್ಞಾನಿಗಳೆಲ್ಲಾ ಪ್ಯಾರಿಸ್ಸಿಗೆ ಬಂದು ಸಮಾರಂಭವನ್ನು ನೆರವೇರಿಸುತ್ತಿದ್ದಾಗ, 'ನಿಜವಾಗೂ ವೈದ್ಯಸೇವೆ ನಿಮಗೆ ಋಣಿಯಾಗಿರುವುದಕ್ಕಿಂತಲೂ ಹೆಚ್ಚಿನ ಇನ್ನಾವ ವ್ಯಕ್ತಿಯೂ ಈ ವಿಶಾಲ ಪ್ರಪಂಚದಲ್ಲಿ ಇನ್ನಿಲ್ಲ' ಎಂದು ಲಿಸ್ಟರ್ ಕೊಂಡಾಡಿದುದಕ್ಕೆ 'ಅಜ್ಞಾನ ಮತ್ತು ಯುದ್ಧಗಳ ಮೇಲೆ ವಿಜ್ಞಾನ ಮತ್ತು ಶಾಂತಿ ವಿಜಯಿಯಾಗಬೇಕು........ನರಳುತ್ತಿರುವಮಾನವ ಕೋಟಿಗೆ ಬಹಳಷ್ಟು ಸೇವೆ ಸಲ್ಲಿಸಿರುವವರ ಕೈಯಲ್ಲಿದೆ ಭವಿಷ್ಯ....ನನ್ನ ಪ್ರೀತಿ ಪಾತ್ರ ಲಿಸ್ಟರ್, ನಾನು ನಿನ್ನನ್ನು ಉದ್ದೇಶಿಸಿ ಹೇಳುತ್ತಿರುವೆನು' ಎಂದು ಪ್ಯಾಸ್ಚ್ಯೂರ್ ಅಪ್ಪಣೆ ಕೊಡಿಸಿದನು. ಆಗ ಇಬ್ಬರೂ ಆಲಿಂಗನ ಮಾಡಿ ತಮ್ಮ ತಮ್ಮ ವಿಶ್ವಾಸಗಳನ್ನು ವ್ಯಕ್ತಪಡಿಸಿದರು. ಆಗಿನಿಂದೀಚೆಗೆ ವೈದ್ಯಶಾಸ್ತ್ರ ಹಾಗೂ ಶಸ್ತ್ರವೈದ್ಯದಲ್ಲಿ ಹೊಸ ಯುಗವೇ ಪ್ರಾರಂಭವಾಯಿತೆನ್ನಲಾಗಿದೆ.

ಪ್ಯಾಸ್ಚ್ಯೂರ್ ತನ್ನ ಜೀವಮಾನದಲ್ಲಿ ಅನೇಕ ಬಿರುದು ಬಾವಲಿಗಳನ್ನು ಸಂಪಾದಿಸಿ ಹಲವು ಸಂಸ್ಥೆಗಳಿಗೆ ಸದಸ್ಯನಾಗಿಯೂ, ಮುಖ್ಯಾಧಿಪತಿಯಾಗಿಯೂ, ಸಾರ್ಬೋನ್ನೆಯಲ್ಲಿ (೧೮೬೭–೧೮೮೯) ರಸಾಯನಶಾಸ್ತ್ರ ಪ್ರಾಧ್ಯಾಪಕನಾಗೂ, ಈಕೋಲಿನಲ್ಲಿ ೧೮೬೩–೧೮೬೭ರಲ್ಲೂ ಪ್ರಾಧ್ಯಾಪಕನಾಗಿದ್ದು ಸೇವೆ ಸಲ್ಲಿಸಿದನು. ಅವನ ಕೊಡುಗೆಗಳು ಸಾಧಾರಣವಾಗಿ 'ವಿಜ್ಞಾನ ಅಕಾಡಮಿ' ಅಥವಾ 'ವೈದ್ಯಶಾಸ್ತ್ರ ಅಕಾಡಮಿ' ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದವು. ಅವನು ಬದುಕಿದ್ದಾಗಲೇ ನಾಲ್ಕು ಮುಖ್ಯ ಬಿಡಿ ಪ್ರಬಂಧಗಳನ್ನು ಬರೆದಿದ್ದನು.

ರಾಬರ್ಟ್ ಕಾಕ್

ಏಕಾಣುಜೀವಿಶಾಸ್ತ್ರದ ಸ್ಥಾಪಕನೆಂದು ಹೆಸರು ಪಡೆದಿದ್ದ ಜರ್ಮನಿ ದೇಶದ ರಾಬರ್ಟ್ ಕಾಕ್ (೧೮೪೩–೧೯೧೦) ಪ್ಯಾಸ್ಚ್ಯೂರ್ ಮಹನೀಯನಿಗೆ ೨೧ ವರ್ಷ ಕಿರಿಯವನಾಗಿದ್ದರೂ, ಸಮಾನನೆಂದೆನಿಸಿದ್ದನು. ಹ್ಯಾನೋವರ್ ಹತ್ತಿರದಲ್ಲಿ ಜನಿಸಿ, ಗೊಟ್ಟಿಂಜನ್‌ನಿಂದ ೧೮೬೬ರಲ್ಲಿ ಪದವಿ ಪಡೆದು, ತನ್ನ ಗುರುವಾದ ಜೇಕಬ್ ಹೆನ್ಲಿಯ ಪ್ರಭಾವದಿಂದ ವೈದ್ಯವಿಜ್ಞಾನದಲ್ಲಿ ಆಸಕ್ತಿ ಹುಟ್ಟಿ, ಓಲ್ಸ್ಟೀನ್ ಎಂಬಲ್ಲಿ ಗ್ರಾಮವೈದ್ಯನಾಗಿದ್ದರೂ ಏಕಾಣುಜೀವಿಶಾಸ್ತ್ರದಲ್ಲಿ ಪ್ರಯೋಗಗಳನ್ನುನಡೆಸುತ್ತಿದ್ದನು. ರೇಷ್ಮೆಹುಳು ರೋಗ, ಮದ್ಯ ಹುದುಗೇಳುವಿಕೆಗಳಲ್ಲಿ ಪ್ಯಾಸ್ಚ್ಯೂರ್ ತೊಡಗಿದ್ದಾಗ, ಕಾಕ್ ಕೇವಲ ಹಳ್ಳಿಯ ಜನರ ಸೇವೆಯಲ್ಲಿದ್ದನು. ೧೮೪೯ರಲ್ಲೇ ಪೊಲೆಂಡರ್ ಕಂಡುಹಿಡಿದಿದ್ದ ನೆರಡಿ ದಂಡಾಣುಜೀವಿಯೇ ಆಗ ಸಾಂಕ್ರಾಮಿಕವಾಗಿ ದನ ಕರುಗಳಲ್ಲೂ, ಮನುಷ್ಯರಲ್ಲೂ ಹಾವಳಿ ನಡೆಸುತ್ತಿದ್ದ ನೆರಡಿ ರೋಗದ ಕಾರಣವೆಂದು ಕಾಕ್ ಕಂಡುಹಿಡಿದನು. ಅನಂತರ ೧೮೭೬ರಲ್ಲಿ ತನ್ನ ಪ್ರಯೋಗಗಳ ಫಲಿತಾಂಶವನ್ನು ಪ್ರಕಟಿಸಿ, ಅದರ ಅಂಗವಾಗಿ ಬ್ರೆಸ್ಲೊ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಫರ್ಡಿನೆಂಡ್ ಕಾನ್ ಅಪ್ಪಣೆ ಪಡೆದು, ಕಾನ್, ವೀಗರ್ಟ್, ಟ್ರಾಬ್, ಕಾನ್ಹೇಮ್ ಮುಂತಾದವರ ಎದುರು ಪ್ರದರ್ಶಿಸಿ ಅವರಿಂದ ಪ್ರಶಂಸೆ ಪಡೆದನು. ವಿಶ್ವವಿದ್ಯಾಲಯದ ಶಿಕ್ಷಣ ಇಲ್ಲದಿದ್ದರೂ

ಸ್ವತಃ ನಡೆಸಿದ ಕಾಕ್‌ನ ಪ್ರಯೋಗಗಳನ್ನು ಮೆಚ್ಚಿ, ಕಾನ್ ತನ್ನ ಪತ್ರಿಕೆಯಾದ "ಬೀಟ್ರಿಜ್ ಜಸ್ ಬಯಾಲಜಿಕ್ ಜುರ್ ಪ್ಲಾನ್‌ಜನ್"ನಲ್ಲಿ ಪ್ರಕಟಿಸಿದನು. ಕಾಕ್‌ನ ಪ್ರಸಿದ್ಧಿ ಎಲ್ಲೆಲ್ಲೂ ಹರಡಿ ಫ್ರಾನ್ಸನ್ನು ತಲುಪಿದಾಗ, ಪಾಲ್ ಬರ್ಟ್ ವಿರೋಧ ವ್ಯಕ್ತ ಪಡಿಸಲು, ಕಾಕ್ ನಡೆಸಿದ್ದ ಪ್ರಯೋಗಗಳನ್ನು ಪ್ಯಾಸ್ಚೂರ್ ಪುನಃ ನಡೆಸಿ ಕಾಕ್‌ನ ಪ್ರಕಟಣೆಗಳನ್ನು ಸಮರ್ಥಿಸಿ ಕಾಕ್‌ನನ್ನು ಬಿಡುಗಡೆ ಮಾಡಿದನು.

ಇದರ ಅನಂತರ ರೋಗಾಣುಗಳು ಬಣ್ಣವೇರುವ ಗುಣ, ಅವುಗಳ ಛಾಯಾಚಿತ್ರ ತೆಗೆಯುವ ವಿಧಾನವನ್ನು ಕಾಕ್ ೧೮೭೭ರಲ್ಲಿ ಕಾನ್‌ನ ವಿಶೇಷ ಪತ್ರಿಕೆಯಲ್ಲಿ ವಿವರಿ-



ರಾಬರ್ಟ್ ಕಾಕ್ ತಾನೇ ತೆಗೆದ ಏಕಾಣುಜೀವಿಗಳ ಮಿಣಚಿತ್ರಗಳು

ಸಿದನು. ೧೮೭೮ರಲ್ಲಿ ಗಾಯದ ಸೊಂಕು ಎಂಬ ಬಿಡಿ ಪ್ರಬಂಧವನ್ನು ಬರೆದನು. ಹೀಗೆ ಕಾಕ್‌ನ ಪ್ರಖ್ಯಾತಿ ಹೆಚ್ಚುತ್ತಾ ಕಾನ್ ಸಹಾಯದಿಂದ ಬರ್ಲಿನ್ನಿನ ಸಾಮ್ರಾಜ್ಯದ ಆರೋಗ್ಯ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದಾಗ, ಲಾಫ್ಲರ್ ಮತ್ತು ಗ್ಯಾಫ್ಕಿಯವರ ಸ್ನೇಹ ದೊರೆತಿತು. ಇಲ್ಲಿ ೧೮೮೧ರಲ್ಲಿ ಏಕಾಣುಜೀವಿಗಳ ಶುದ್ಧ ಸಾಕಣೆಯ ವಿಷಯದಲ್ಲಿ ಪ್ರಯೋಗ ನಡೆಸಿ, ಲಂಡನ್ನಿನ ರಾಜ ವಿದ್ಯಾಶಾಲೆಯಲ್ಲಿ ನಡೆದ ಅಂತರ ರಾಷ್ಟ್ರೀಯ ವೈದ್ಯ ಸಂಘದಲ್ಲಿ ನೆರೆದಿದ್ದ ಲಿಸ್ಟರ್, ವರ್ಕೌ, ಪ್ಯಾಸ್ಚೂರ್ ಮುಂತಾದವರ ಸಮಕ್ಷಮದಲ್ಲಿ ವಿವರಿಸಿದಾಗ ಎಲ್ಲರ ಮೆಚ್ಚಿಗೆ ದೊರೆತುದಲ್ಲದೆ ಪ್ಯಾಸ್ಚೂರ್ ಕೂಡ ವಿಶೇಷ ಗೌರವವನ್ನು ಸಲ್ಲಿಸಿದನು.

ಕಾಕ್‌ನ ಸಿದ್ಧಾಂತಗಳು

ರೋಗಾಣುಗಳ ವಿಷಯವನ್ನು ಹೆಚ್ಚಿಗೆ ಅರಿಯಲು ಹೊಸ ಪದ್ಧತಿಗಳನ್ನು

ಉಪಯೋಗಕ್ಕೆ ತರುತ್ತಿದ್ದಾಗ, ೧೮೮೨ರಲ್ಲಿ ಅತ್ಯಂತ ಪ್ರದರ್ಶನಾತ್ಮಕ ಸಾಧನೆಯಾದ ಕ್ಷಯಾಣುಜೀವಿಯ ವಾಸ್ತವಿಕವನ್ನು ಗೊತ್ತುಪಡಿಸಿದ್ದನು. ಈ ವಿಷಯವನ್ನು ಪ್ರಕಟಿಸಿದ್ದ ಪತ್ರಿಕೆಯಲ್ಲೇ ಕಾಕ್‌ನ ಸಿದ್ಧಾಂತಗಳನ್ನೂ ವಿವರಿಸಿದನು. ಅವು ಯಾವುವೆಂದರೆ, (೧) ಏಕಾಣುಜೀವಿ ರೋಗಿಯಲ್ಲಿ ಬದುಕಿರಬೇಕು ಹಾಗೂ ಅದರಿಂದ ರೋಗವನ್ನು ಬರಿಸುವಂತಿರಬೇಕು, (೨) ಅದು ಶುದ್ಧ ಸಾಕಣೆಯಲ್ಲಿ ಬೆಳೆಯಬೇಕು, (೩) ಅದನ್ನು ಸೂಕ್ಷ್ಮವಾದ ಪ್ರಾಣಿಗಳಿಗೆ ಕೊಟ್ಟರೆ ಮೊದಲ ರೋಗವೇ ಬೆಳೆಯಬೇಕು, ಹಾಗೂ ಅದರಿಂದ ಅದೇ ಏಕಾಣುಜೀವಿ ಶುದ್ಧ ಸಾಕಣೆಯಲ್ಲಿ ಬೆಳೆಯಬೇಕು. ಈ ಸಿದ್ಧಾಂತಗಳು ನವೀನ ಏಕಾಣುಜೀವಿಶಾಸ್ತ್ರದ ಅಸ್ತಿಭಾರದಂತಿವೆ. ಇದಲ್ಲದೆ, ೧೮೯೦ರಲ್ಲಿ ಕ್ಷಯರೋಗ ಗುಣಪಡಿಸುವ ಮದ್ದೆಂದು ನಂಬಿ ಕ್ಷಯಾಣುಸಾರವನ್ನೂ ಕಂಡು ಹಿಡಿದನು. ಆದರೆ ಇದರಿಂದ ರೋಗ ಪರಿಹಾರವಾಗದೆ, ರೋಗ ನಿದಾನ ಮಾಡುವ ವಿಧಾನವಾಗಿ ಪರಿಣಮಿಸಿತು.

ಇವಲ್ಲದೆ ೧೮೮೩ರಲ್ಲಿ ಈಜಿಪ್ಟಿಗೂ, ಇಂಡಿಯಾಕ್ಕೂ, ವಾಂತಿಭೇದಿ ನಿಯೋಗದ ಮುಖ್ಯಾಧಿಪತಿಯಾಗಿ ಜರ್ಮನಿಯಿಂದ ನೇಮಕವಾಗಿ ರೋಗದ ಬಳುಕವನ್ನು ಕಂಡು ಹಿಡಿದಿದ್ದಲ್ಲದೆ, ನೀರು, ಆಹಾರ, ಬಟ್ಟೆಬರೆಗಳಿಂದ ಕಾಲರ ಹರಡುತ್ತದೆಂದೂ ಗೊತ್ತು ಮಾಡಿದ್ದನು. ಅದೇ ಕಾಲದಲ್ಲಿ ಈಜಿಪ್ಟಿನ ಕಣ್ಣು ನೋವಿಗೆ ಕಾರಣವಾದ ಕಾಕ್–ವೀಕ್ಸ್ ದಂಡಾಣುಜೀವಿಯನ್ನು ಕೂಡ ಕಂಡುಹಿಡಿದಿದ್ದನು. ಇವನ ಈ ಕೊಡುಗೆಗಳನ್ನು ಮೆಚ್ಚಿ ೧೮೮೫ರಲ್ಲಿ ಬರ್ಲಿನ್ನಿನ ವಿಶ್ವವಿದ್ಯಾಲಯದ ಆರೋಗ್ಯಶಾಸ್ತ್ರ ಹಾಗೂ ಏಕಾಣುಜೀವಿಶಾಸ್ತ್ರದ ಪ್ರಾಧ್ಯಾಪಕನಾಗಿಯೂ, ೧೮೯೧ರಲ್ಲಿ ಬರ್ಲಿನ್ನಿನ ಅಂಟುರೋಗಗಳ ಸಂಸ್ಥೆಯ ಆಡಳಿತಗಾರನಾಗಿಯೂ ನೇಮಕವಾದನು. ೧೮೯೩ರಲ್ಲಿ ನೀರಿಂದೇಳುವ ರೋಗಗಳನ್ನು ಕುರಿತು ಲೇಖನ ಒಂದನ್ನು ಬರೆದಿದ್ದನು. ಮೂರು ವರ್ಷಗಳ ಅನಂತರ, ಬ್ರಿಟನ್ನಿನ ಸರ್ಕಾರದ ಪರವಾಗಿ ಆಫ್ರಿಕಾ ಖಂಡಕ್ಕೆ ಹೋಗಿ ಪ್ಲೇಗು, ಟೆಕ್ಸಾಸ್ ಜ್ವರ, ಕಾಳಮೂತ್ರ ಜ್ವರ, ಮಲೇರಿಯ, ಸುರ್ರ ಹಾಗೂ ಪ್ಲೇಗು ರೋಗಗಳನ್ನು ವಿವರಿಸಿದ್ದನು.

ಈ ಮಹತ್ಕಾರ್ಯಗಳಿಂದ ಇವನ ಕೀರ್ತಿ ಹೆಚ್ಚಿ ೧೯೦೫ರಲ್ಲಿ ನೊಬೆಲ್ ಬಹುಮಾನ ದೊರಕಿತು. ಜಪಾನಿನಲ್ಲಿ ಇವನ ಗೌರವಾರ್ಥವಾಗಿ ಒಂದು ಮಂದಿರವನ್ನು ಕಟ್ಟಿಸಲಾಗಿದೆ. ಇಷ್ಟು ಸಂತೋಷ ಸಂಭ್ರಮಗಳ ಮಧ್ಯೆ ಮೆರೆಯುತ್ತಿದ್ದಾಗ, ತನ್ನ ಹೆಂಡತಿಯನ್ನು ತ್ಯಜಿಸಿ, ಒಬ್ಬ ಸಿನಿಮಾ ನಟಿಯನ್ನು ಲಗ್ನವಾದುದರಿಂದ ಜರ್ಮನಿ ಆದ್ಯಂತ ಇವನನ್ನು ಖಂಡಿಸಿ ಕೋಪಗೊಂಡಿತ್ತು. ಕೆಲವು ವರ್ಷಗಳ ಅನಂತರ ೧೯೧೦ ರಲ್ಲಿ ಹೃದಯಾಘಾತದಿಂದ ಕಾಕ್ ದೈವಾಧೀನನಾದನು.

ಕಾಕ್ ವಿನಃ ಇತರರ ಕೊಡುಗೆಗಳು

ಏಕಾಣುಜೀವಿಶಾಸ್ತ್ರದಲ್ಲಿ ಕಾಕ್‌ನಿಗಿದ್ದ ಪ್ರೇಮ, ಆಸಕ್ತಿ ಎಲ್ಲರ ಮೆಚ್ಚಿಗೆ

ಯನ್ನು ಸಂಪಾದಿಸಿದ್ದರಿಂದ, ಯೂರೋಪಿನ ಎಲ್ಲಾ ಕಡೆಗಳಿಂದ ವಿದ್ಯಾರ್ಥಿಗಳೂ, ವಿಜ್ಞಾನಿಗಳೂ ಇವನ ಪ್ರಯೋಗಶಾಲೆಯಲ್ಲಿ ಕೆಲಸಮಾಡಲು ಕುತೂಹಲದಿಂದ ಬರುತ್ತಿದ್ದರು. ಏಕಾಣುಜೀವಿಶಾಸ್ತ್ರದ ಹುಚ್ಚು ಜರ್ಮನಿಯಲ್ಲಿ ಮಾತ್ರವೇ ಅಲ್ಲದೆ, ಇತರ ದೇಶಗಳಲ್ಲೂ ಹರಡಿ,೧೮೮೦-೧೯೦೦ವರೆಗೆ ಎಲ್ಲಾ ಕಡೆ ಅನೇಕ ವಿಜ್ಞಾನಿಗಳು ನಾನಾ ಸಾಧನೆಗಳನ್ನು ಸಾಧಿಸಿದರು. ನಾರ್ವೆಯಲ್ಲಿ ಬರ್ಗೆನ್ನಿನ ಹ್ಯಾನ್ಸೆನ್ ಕುಷ್ಠ ದಂಡಾಣುಜೀವಿಯನ್ನೂ,೧೮೭೯ರಲ್ಲಿ ನೀಸ್ಸರ್ ರೇತುಕಾಯಿಲೆಜೀವಿಯನ್ನೂ, ೧೮೮೦ರಲ್ಲಿ ಎಬೆರ್ತ್ ವಿಷಮಶೀತ ಜ್ವರದ ದಂಡಾಣುಜೀವಿಯನ್ನೂ, ೧೮೮೪ರಲ್ಲಿ ಪ್ಯಾಸ್ಚ್ಯೂರ್ ಕಂಡುಹಿಡಿದಿದ್ದ ಪುಪ್ಪುಸಕಾಯಿಲೆಜೀವಿ ಪುಪ್ಪುಸುರಿತವನ್ನು ಉಂಟುಮಾಡುತ್ತದೆಂಬ ಫ್ರಾಂಕೆಲ್ ಹೇಳಿಕೆಯನ್ನೂ, ೧೮೮೩ರಲ್ಲಿ ಕ್ಲೆಬ್ಸ್ ಗಂಟಲಮಾರಿಯ ದಂಡಾಣುಜೀವಿಯನ್ನೂ, ೧೮೮೪ರಲ್ಲಿ ನಿಕೊಲೇರ್ ಸೆಟೆಬೇನೆಯ ದಂಡಾಣುಜೀವಿಯನ್ನೂ, ೧೮೮೭ರಲ್ಲಿ ವೀಷಲ್‌ಬಾವ್ ಮಿದುಳ್ಪರೆಕಾಯಿಲೆಜೀವಿಯನ್ನೂ, ಅದೇ ವರ್ಷ ಬ್ರೂಸ್ ಏರಿಳಿವ ಜ್ವರ ಕಾಯಿಲೆಜೀವಿಯನ್ನೂ, ೧೮೯೨ರಲ್ಲಿ ವೆಲ್ಷ್ ಮತ್ತು ನುಟ್ಟಲ್ ಅನಿಲ ದಂಡಾಣುಜೀವಿಯನ್ನೂ, ಹಾಗೂ ೧೮೯೪ರಲ್ಲಿ ಕಿಟಸಾಟೊ ಮತ್ತು ಯೆರ್ಸಿನ್ ಪ್ರತ್ಯೇಕವಾಗಿ ಮಹಾಮಾರಿ (ಪ್ಲೇಗು) ದಂಡಾಣುಜೀವಿಯನ್ನೂ ಕಂಡುಹಿಡಿದು ಏಕಾಣುಜೀವಿಶಾಸ್ತ್ರಕ್ಕೆ ಸಾಕಷ್ಟು ಸೇವೆ ಸಲ್ಲಿಸಿದರು.

ಪ್ಯಾಸ್ಚ್ಯೂರ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ರೂಸ್ ಮತ್ತು ಯೆರ್ಸಿನ್ ಗಂಟಲಮಾರಿ ರೋಗದ ಲಕ್ಷಣಗಳು ಗಂಟಲಮಾರಿ ದಂಡಾಣುಜೀವಿಯಿಂದ ಮೂಡಿದ ಜೀವಿವಿಷದಿಂದ ಬರುತ್ತವೆಂದು ಗೊತ್ತುಮಾಡಿದರು. ಮುಂದಿನ ವರ್ಷ ಕಾಕ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಬೆಹ್ರಿಂಗ್ ಮತ್ತು ಕಿಟಸಾಟೊ ೧೮೯೦ನೇ ಡಿಸೆಂಬರ್ ೩ರಲ್ಲೂ ಸೆಟೆಬೇನೆ ಜೀವಿಷರೋಧಕವನ್ನು ಕಂಡುಹಿಡಿದರು. ಕೆಲವೇ ಕೆಲವು ದಿವಸಗಳಲ್ಲಿ ಬೆಹ್ರಿಂಗ್ ತಾನೊಬ್ಬನೇ ಸೋಂಕು ರಕ್ಷೆಯಿಂದ ಗಂಟಲಮಾರಿ ರೋಗವನ್ನು ತಡೆಗಟ್ಟುವ ಕ್ರಮವನ್ನು ವಿವರಿಸಲು, ಪ್ಯಾಸ್ಚ್ಯೂರ್ ಸಂಸ್ಥೆಯ ರೋವ್ ಎಂಬುವನು ಗಂಟಲಮಾರಿ ಸೋಂಕು ರಕ್ಷೆಯನ್ನು ತಯಾರಿಸಿ, ರೋಗವಿರುವ ಮಕ್ಕಳಿಗೆ ಕೊಟ್ಟು ಮರಣ ಸಂಖ್ಯೆಯನ್ನು ಶೇ. ೫ರಿಂದ ಶೇ. ೨೪ಕ್ಕೆ ಇಳಿಸಿದನು. ಹೀಗೆ ಒಬ್ಬರಾದ ಮೇಲೊಬ್ಬರು ಗಂಟಲಮಾರಿ ಸೋಂಕು ರಕ್ಷೆಯ ಗುಣವನ್ನು ವ್ಯಕ್ತಪಡಿಸಿ, ಅದರ ಉಪಯೋಗಗಳನ್ನು ದೃಢಪಡಿಸಿದರು. ಈ ಶೋಧನೆಗಳು ಬೆಳಕಿಗೆ ಬರುತ್ತಿದ್ದಾಗ ಪ್ಯಾಸ್ಚ್ಯೂರ್ ಮಹಾಶಯ ಆರ್ಬ್ವಾಯ್‌ನಲ್ಲಿ ವಾಸವಾಗಿದ್ದು, ಶೋಧನೆಗಳ ಪ್ರತಿ ವಿವರಗಳನ್ನೂ ಅತ್ಯಂತ ಕುತೂಹಲದಿಂದಲೂ ಆಸಕ್ತಿಯಿಂದಲೂ ಅನುಸರಿಸುತ್ತಿದ್ದನೆಂದು ವ್ಯಾಲೆರಿ-ರೇಡಟ್ ಬರವಣಿಗೆಯಿಂದ ತಿಳಿದುಬಂದಿದೆ.

ಎಡ್ವಿನ್ ಕ್ಲೆಬ್ಸ್

ಹೆಚ್ಚು ಆಡಂಬರವಿಲ್ಲದೆ ಏಕಾಣುಜೀವಿಶಾಸ್ತ್ರಕ್ಕೆ ಸಾಕಷ್ಟು ಕೊಡುಗೆ ನೀಡಿದ್ದ

ಎಡ್ವಿನ್ ಕ್ಲೆಬ್ಸ್ (೧೮೩೪-೧೯೧೩) ಕೊನಿಸ್ಬರ್ಗ್‌ನಲ್ಲಿ ರಾತ್ಕೆ ಮತ್ತು ಹೆಲ್ಮೊಟ್ಸ್ ಹತ್ತಿರ ವ್ಯಾಸಂಗ ನಡೆಸಿದುದಲ್ಲದೆ ವುರ್ಜ್ ಬರ್ಗ್‌ನ ವರ್ಕೌ ಕೈಕೆಳಗೂ ವ್ಯಾಸಂಗ ನಡೆಸಿದ್ದನು. ಕ್ಲೆಬ್ಸ್‌ನ ಮುಂದಿನ ಜೀವನದಲ್ಲಿ ವರ್ಕೌನ ಪ್ರಭಾವ ಬಹಳ ಪರಿಣಾಮಕಾರಿಯಾಗಿತ್ತು. ವರ್ಕೌ ಜೊತೆಯಲ್ಲೇ ಬರ್ಲಿನ್ನಿಗೆ ತೆರಳಿ ೧೮೫೭ರಲ್ಲಿ ಪದವಿ ಪಡೆದು ಅನಂತರ ಕ್ಷಯರೋಗದ ವಿಷಯವಾಗಿ ಕ್ಲೆಬ್ಸ್ ಬರೆದ ಪ್ರಬಂಧ ಅತಿ ಶ್ರೇಷ್ಠವಾಗಿತ್ತು. ಕೆಲವು ವರ್ಷಗಳಾದ ಮೇಲೆ, ರೋಗಶಾಸ್ತ್ರದ ಪ್ರಾಧ್ಯಾಪಕನಾಗಿ ಬರ್ನ್‌ನಲ್ಲೂ, ಅನಂತರ ವುರ್ಜ್ ಬರ್ಗ್‌ನಲ್ಲೂ (೧೮೭೧), ಪ್ರಾಗ್‌ನಲ್ಲೂ, (೧೮೭೩), ಜೂರಿಚ್‌ನಲ್ಲೂ (೧೮೮೨) ಸೇವೆ ಸಲ್ಲಿಸಿದನು. ಹೀಗೆ ೧೧ ವರ್ಷ ಕೆಲಸ ಮಾಡಿ ೧೮೭೬ರಲ್ಲಿ ಚಿಕಾಗೊ ರಷ್ ವೈದ್ಯಶಾಲೆಯಲ್ಲಿ ರೋಗಶಾಸ್ತ್ರದ ಪ್ರಾಧ್ಯಾಪಕತ್ವವನ್ನು ಅಂಗೀಕರಿಸಿ ಕ್ಷಯರೋಗದ ಶೋಧನೆಗಳಲ್ಲಿದ್ದನು. ಆದರೂ, ೧೯೦೦ರಲ್ಲಿ ಅವನು ಪುನಃ ಯೂರೋಪಿಗೆ ಹಿಂತಿರುಗಿ ಹ್ಯಾನೋವರ್, ಬರ್ಲಿನ್, ಲೌಸ್ಸಾನ್ ಮತ್ತು ಬರ್ನ್ ನಗರಗಳಲ್ಲಿ ಕೆಲಸ ಮಾಡಲು ಒಪ್ಪಿ ತನ್ನ ಪ್ರಯೋಗಗಳನ್ನು ಮುಂದುವರಿಸಿದನು. ದೇಶದೇಶಗಳಲ್ಲಿ ಅಲೆದಂತೆಯೇ ಪ್ರಯೋಗಗಳಲ್ಲಿಯೂ ಒಂದೇ ಸಮಸ್ಯೆಯಲ್ಲಿ ಗುರಿಯಿಡದೆ, ಒಂದರಿಂದ ಒಂದಕ್ಕೆ ಬದಲಾಯಿಸುತ್ತ ಸರಿಯಾದ ಪರಿಣಾಮವನ್ನು ಪಡೆದಿರಲಿಲ್ಲ. ಹೀಗಿದ್ದರೂ, ಅವನು ಬರೆದ 'ರೋಗದ ಅಂಗರಚನೆಶಾಸ್ತ್ರದ ಕೈಪಿಡಿ' ಹೊರಬಿದ್ದ ಮೇಲೆ ಎಲ್ಲಾ ರೋಗಶಾಸ್ತ್ರ ಪಂಡಿತರೂ ಇವನಿಗೆ ಬೆಂಬಲ ಕೊಟ್ಟು ಮೆಚ್ಚಿಗೆ ವ್ಯಕ್ತಪಡಿಸಿದ್ದರು. ಮದ್ದು ಗುಂಡುಗಳಿಂದಾದ ಗಾಯ,ನೆರಡಿ, ಉಪದಂಶ, ವಿಷಮಶೀತ ಜ್ವರ, ಗಂಟಲಮಾರಿ ಮುಂತಾದ ರೋಗಗಳಲ್ಲಿ ಇತರರಿಗಿಂತಲೂ ಇವನೇ ಮೊದಲು ಶೋಧನೆ ನಡೆಸಿದರೂ ತೀರ್ಮಾನಕ್ಕೆ ಮಾತ್ರ ಬಂದಿರಲಿಲ್ಲ. 'ಅನೇಕ ರೋಗಕಾರಕ ಏಕಾಣುಜೀವಿಗಳನ್ನು ಮೊದಾಮೊದಲಾಗಿ ಕಂಡು ಆಂಶಿಕವಾಗಿ ವರ್ಣಿಸಿದವರಲ್ಲಿ ನಾನೂ ಒಬ್ಬ; ಆದರೆ ನಿರ್ಣಾಯಕ ಪುರಾವೆಯನ್ನು ಒದಗಿಸುವ ವಿಧಾನಗಳು ಮಾತ್ರ ನನಗೆ ಕೈಗೂಡಲಿಲ್ಲ.' ಎಂದು ತಾನೇ ಹೇಳಿಕೊಂಡಿದ್ದನ್ನು ಅವನ ವಿದ್ಯಾರ್ಥಿಯೊಬ್ಬ ವ್ಯಕ್ತಪಡಿಸಿದ್ದನು.

ಜರ್ಮನಿಯ ವೈದ್ಯರು

ವರ್ಕೌ ಮತ್ತು ಕಾಕ್‌ರ ಪ್ರಭಾವದಿಂದ ಜರ್ಮನಿಯ ಅನೇಕ ನಿಪುಣರು ವೈದ್ಯಶಾಸ್ತ್ರದ ನಾನಾ ಭಾಗಗಳಲ್ಲಿ ತಮ್ಮ ತಮ್ಮ ವಿಶ್ವವಿದ್ಯಾಲಯಗಳಲ್ಲಿಯೇ ಮುಂದುವರಿಯುತ್ತಿದ್ದರು. ಆದರಲ್ಲೂ ೧೮೭೦ರಲ್ಲಿ ಫ್ರಾನ್ಸಿಗೂ ಜರ್ಮನಿಗೂ ನಡೆದ ಯುದ್ಧದಲ್ಲಿ ಜರ್ಮನಿ ಗೆದ್ದ ಮೇಲಂತೂ, ಜರ್ಮನಿ ತನ್ನ ವಿಶ್ವವಿದ್ಯಾನಿಲಯಗಳಿಗೂ, ಆಸ್ಪತ್ರೆಗಳಿಗೂ ಧಾರಾಳವಾಗಿ ಪ್ರೋತ್ಸಾಹಕೊಟ್ಟು, ವೈಜ್ಞಾನಿಕ ಸಂಶೋಧನೆಗಳು ಹೆಚ್ಚು ಹೆಚ್ಚಾಗಿ ಬೆಳೆಯಲು ಅನುಕೂಲ ಮಾಡಿತ್ತು. ಇದನ್ನು ಇತರ ದೇಶಗಳು ಮೆಚ್ಚಿದರೂ ಅಸೂಯೆ ತೋರಿದವು. ಜರ್ಮನಿಯ ಈ ಖ್ಯಾತಿಯನ್ನು ಪ್ಯಾಶ್ಚೂರ್

ಅನೇಕ ವೇಳೆ ಹೊಗಳಿ ತನ್ನ ಮಾತೃಭೂಮಿಯಾದ ಫ್ರಾನ್ಸು ವೈಜ್ಞಾನಿಕ ಶೋಧನೆಗಳಿಗೆ ಸಾಕಷ್ಟು ಪ್ರೋತ್ಸಾಹ ಕೊಡದಿದ್ದುದನ್ನು ಖಂಡಿಸಿದನು. ಆದರೆ ೧೮೭೦ನೇ ಯುದ್ಧದಲ್ಲಿ ಫ್ರಾನ್ಸಿಗೆ ಸೋಲಾದ ಮೇಲೆ ಅವನು ಜರ್ಮನಿಯ ಖ್ಯಾತಿ ಎಷ್ಟೇ ಇರಲಿ ಅದನ್ನು ಸಹಿಸುತ್ತಿರಲಿಲ್ಲ. ಹೀಗೆ ಜರ್ಮನಿ ಮುಂದುವರಿದು ಒಂದನೇ ಮಹಾ ಯುದ್ಧದ ತನಕ ಒಂದೇ ಸಮನೆ ವೈದ್ಯಶಾಸ್ತ್ರದಲ್ಲಿ ತನ್ನ ವೈಶಿಷ್ಟ್ಯವನ್ನು ಕಾಪಾಡಿಕೊಂಡು ಬಂದಿತು. ಮಿಣಿದರ್ಶನದ ಅಂಗರಚನೆ, ರೋಗಶಾಸ್ತ್ರದಂಗರಚನೆ, ಸಹಜ ಹಾಗೂ ರೋಗಶಾಸ್ತ್ರದ ಅಂಗಕ್ರಿಯೆಶಾಸ್ತ್ರ, ಔಷಧಶಾಸ್ತ್ರ, ಏಕಾಣುಜೀವಿಶಾಸ್ತ್ರ ಮುಂತಾದ ವೈದ್ಯಶಾಸ್ತ್ರದ ವಿಭಾಗಗಳೆಲ್ಲಾ ಅಭಿವೃದ್ಧಿ ಹೊಂದಿದವು. ರೋಗಿಹಾಸೆ ಪಕ್ಕದ ವೈದ್ಯಶಾಸ್ತ್ರ, ಶಸ್ತ್ರವೈದ್ಯಗಳು ಕೂಡ ಮುಂದುವರಿದು ಹೊಸ ತಿಳಿವಳಿಕೆಗಳನ್ನು ಹೊರಪಡಿಸಿದ್ದವು. ಬರ್ಲಿನ್ ಪಟ್ಟಣವೇ ಈ ವೈಜ್ಞಾನಿಕ ಚಟುವಟಿಕೆಗೆ ಮುಖ್ಯ ಕೇಂದ್ರವಾಗಿತ್ತು. ಬರ್ಲಿನ್ನಿನ ಪ್ರಭಾವ ಸುತ್ತಮುತ್ತಲಿನ ವಿಶ್ವವಿದ್ಯಾಲಯಗಳಿಗೂ, ಸಂಶೋಧನಾಲಯಗಳಿಗೂ ಹರಡಿ ಅವು ಕೂಡ ವೈದ್ಯಶಾಸ್ತ್ರದ ಕೇಂದ್ರಗಳಾಗಿ ಪರಿಣಮಿಸಿದ್ದವು. ಅಲ್ಲಿಯ ಸಂಶೋಧನಾಕಾರಿಗಳು ಒಬ್ಬರನ್ನೊಬ್ಬರು ಮೀರಿಸುತ್ತಿದ್ದರು.

ಕೊಲ್ಲಿಕರ್ ಮತ್ತು ಹಿಸ್

ಈ ವೈದ್ಯಶಾಸ್ತ್ರಜ್ಞರ ಪಟ್ಟಿ ಬಹು ದೊಡ್ಡದಿತ್ತು. ಇವರಲ್ಲಿ ಅನೇಕರು ನೂತನ ವೈದ್ಯಶಾಸ್ತ್ರಕ್ಕೆ ಸಾಕಷ್ಟು ಕೊಡುಗೆ ನೀಡಿದರು. ವುರ್ಜ್‌ಬರ್ಗ್‌ನ ರುಡಾಲ್ಫ್ ಆಲ್ಬರ್ಟ್ ಕೊಲ್ಲಿಕರ್ ಮತ್ತು ಲೀಪ್ಜಿಗ್ಗಿನ ವಿಲ್‌ಹೆಲ್ಮ್ ಹಿಸ್ ಅಂಗರಚನೆಶಾಸ್ತ್ರದಲ್ಲಿ ಗಟ್ಟಿಗರೆನಿಸಿಕೊಂಡಿದ್ದರು. ಕೊಲ್ಲಿಕರ್ ಕ್ರಮುವರಿತ ಊತಕಶಾಸ್ತ್ರದಲ್ಲಿ ನಿಪುಣನಾಗಿದ್ದರೆ, ಹಿಸ್ ಊತಕಜನನದಲ್ಲಿ ನಿಪುಣನಾಗಿದ್ದನು. ಕೊಲ್ಲಿಕರ್ ಹೆಚ್ಚಳಿಕೆಯನ್ನು ಮಿನಟ್ ವರ್ಣಿಸುತ್ತ 'ಎಂದಿಗಾದರೂ ಜೀವಿಸಿದ್ದ ಯಾರೇ ವ್ಯಕ್ತಿಗಿಂತಲೂ, ಪ್ರಾಣಿಗಳ ಮಿಣಿದರ್ಶಕ ರಚನೆಯನ್ನು ತನ್ನ ನೇರವಾದ ಸ್ವಂತ ಕಣ್ಣರಿಕೆಯಿಂದ ಹೆಚ್ಚಾಗಿ ತಿಳಿದಿದ್ದನು' ಎಂದು ಹೇಳಿದ್ದಾನೆ. ನರ ಜೀವಕಣದಿಂದ ಅಚ್ಚು ಉರುಳೆ ಹುಟ್ಟುತ್ತದೆಂದು ತಿಳಿಸಿ ಹಿಸ್ ಪ್ರಖ್ಯಾತಿ ಪಡೆದನು.

ಕಾನ್‌ಹೀಮ್

ವರ್ಕೌ ಶಿಷ್ಯ ಬ್ರೆಸ್ಲೋದ ಜೂಲಿಯಸ್ ಕಾನ್‌ಹೀಮ್ ರೋಗಶಾಸ್ತ್ರದಲ್ಲಿ ಪ್ರಸಿದ್ಧಿಯಾಗಿದ್ದನು. ಉರಿತಕ್ಕೆ ನವಿರು ನಾಳಗಳಿಂದ ಹಾದುಬಂದ ಬಿಳಿ ರಕ್ತಕಣಗಳೇ ಕಾರಣವೆಂದೂ ಈ ಬಿಳೀ ರಕ್ತಕಣಗಳೇ ಕೀವು ಕಣಗಳಾಗುವುವೆಂದೂ ತಿಳಿಸಿದನು. ಈ ತಿಳಿವಳಿಕೆ ಅವನ ಗುರು ವರ್ಕೌನ ನುಸುತೂರಿಕೆಗೆ ವಿರುದ್ಧವಾಗಿತ್ತು. ೧೮೭೭ರಲ್ಲಿ, ಮೊಲದ ಕಣ್ಣಿನ ಮುಂದಿನ ಗೂಡಿಗೆ ಕ್ಷಯದ ಕ್ರಿಮಿಗಳನ್ನು ತೂರಿಸಿ ರೋಗವನ್ನು ಬೆಳೆಸಿದ್ದನು.

ವೀಗರ್ಟ್ ಮತ್ತು ರೆಕ್ಲಿಂಗಾಸನ್

ಕಾರ್ಲ್ ವೀಗರ್ಟ್ ಏಕಾಣುಜೀವಿಗಳನ್ನು ಪರೀಕ್ಷಿಸಲು ಬಣ್ಣಕಟ್ಟುವ ವಿಧಾನಗಳನ್ನು ಕಂಡುಹಿಡಿದಿದ್ದನು. ಡೇನಿಯಲ್ ವಾನ್ ರೆಕ್ಲಿಂಗಾಸನ್ ತನ್ನ ಹೆಸರಿನ ವಾನ್ ರೆಕ್ಲಿಂಗಾಸನ್ ರೋಗ, ತಂತುಜಿಟ್ಟೆಯ ಎಲುಬುರಿತ ಮತ್ತು ವಿಕಲ ನವಗಂತಿ ಕೀಲುರಿತ ರೋಗಗಳನ್ನು ವಿವರಿಸಿ ಹೆಸರು ಪಡೆದಿದ್ದನು.

ಫ್ಲೂಗರ್ ಮತ್ತು ಕೂಹ್ನ

ಅಂಗಕ್ರಿಯೆಶಾಸ್ತ್ರದಲ್ಲಿ ಬಾನ್‌ನ ಫ್ಲೂಗರ್ ಮತ್ತು ವಿಲ್ಲಿ ಕೂಹ್ನ ಅನೇಕ ಶೋಧನೆಗಳನ್ನು ನಡೆಸಿದರು.

ಪೆಟ್ಟೆನ್‌ಕಾಫರ್ ಮತ್ತು ವಾಯ್ಟ್

ಮ್ಯೂನಿಕ್ಕಿನ ಮ್ಯಾಕ್ಸ್ ವಾನ್ ಪೆಟ್ಟೆನ್‌ಕಾಫರ್ ಮತ್ತು ಕಾರ್ಲ್ ವಾನ್ ವಾಯ್ಟ್ ಜೀವಸ್ತುಕರಣಕ್ಕೆ ಹೊಸ ಜೀವಕಳೆ ತುಂಬಿದರು.

ರೋಗಿಹಾಸೆಪಕ್ಕದ ವೈದ್ಯ

ರೋಗಿಹಾಸೆಪಕ್ಕದ ವೈದ್ಯದಲ್ಲಂತೂ ಅಸಂಖ್ಯಾತ ವಿಜ್ಞಾನಿಗಳು ಮುಂದುವರಿದಿದ್ದರು. ಫ್ರೀಡ್ರಿಕ್ ತಿಯೋಡಾರ್ ವಾನ್ ಫ್ರೀರಿಕ್ಸ್, ಲುಡ್ವಿಗ್ ಟ್ರಾಬ್, ಅಡಾಲ್ಫ್ ಕುಸ್ಮಾಲ್, ಆಸ್ಕಾರ್ ಮಿನ್ಕೋವ್‌ಸ್ಕಿ, ಹೆನ್ರಿಕ್ ಕ್ವಿಂಕೆ ಮುಂತಾದವರು ಅನೇಕ ವಿಧಗಳಲ್ಲಿ ವೈದ್ಯಶಾಸ್ತ್ರಕ್ಕೆ ಕೊಡುಗೆ ನೀಡಿದರು. ಶಸ್ತ್ರವೈದ್ಯದಲ್ಲಿ ಕಾರ್ಲ್ ತೀರ್ಷ್,ರಿಚ್ಚರ್ಡ್, ವಾನ್ ವೋಕ್‌ಮನ್, ಜೊಹಾನ್ ವಾನ್ ಮಿಕ್ಯುಲಿಕ್ಸ್ ರಡೇಕಿ ಮತ್ತು ಆಲ್‌ಬ್ರೆಕ್ಟ್ ವಾನ್ ಗ್ರೀಫೆ. ನಾನಾ ವಿಧಗಳಲ್ಲಿ ಕೀರ್ತಿ ಪಡೆದಿದ್ದರು. ಇವರ ಜೊತೆಗೆ ವಿಯನ್ನ ಪಟ್ಟಣದ ಜರ್ಮನ್ ಭಾಷಾಭಿಮಾನಿಗಳಾದ ಹರ್ಮನ್ ನಾತ್ನೇಂಗಲ್, ವಾನ್ ಬ್ರುಕ್, ಹಾಗೂ ಶ್ರೇಷ್ಠರ ಶ್ರೇಷ್ಠನಾದ ತಿಯೋಡರ್ ಬಿಲ್ರಾತ್ ಶಸ್ತ್ರವೈದ್ಯನೂ ಜರ್ಮನ್ ವೈದ್ಯಶಾಸ್ತ್ರಕ್ಕೆ ಸಾಕಷ್ಟು ಗೌರವ ತಂದಿದ್ದರು.

ಅಮೆರಿಕದಲ್ಲಿ ಜರ್ಮನ್ ವೈದ್ಯಶಾಸ್ತ್ರದ ಪ್ರಭಾವ

ಬೌಡಿಚ್

ಹೀಗೆ ಮುಂದುವರಿದಿದ್ದ ಜರ್ಮನಿಗೆ ಅಮೆರಿಕದಿಂದ ಅನೇಕ ವೈದ್ಯಶಾಸ್ತ್ರಜ್ಞರು ಬಂದು ವೈದ್ಯ ಸಂಶೋಧನೆಗಳಲ್ಲಿ ತರಬೇತು ಪಡೆದು ಹಿಂತಿರುಗುತ್ತಿದ್ದರು. ಇವರ ಪೈಕಿ ಹೆನ್ರಿ ಪಿ. ಬೌಡಿಚ್ ಲೀಪ್ಸಿಗ್ಗಿನ ಕಾರ್ಲ್ ಲುಡ್ವಿಗ್ ಹತ್ತಿರವೂ, ಪ್ಯಾರಿಸ್ಸಿನ ಕ್ಲಾಡ್ ಬರ್ನಾರ್ಡ್ ಹತ್ತಿರವೂ ಕೆಲಸ ಕಲಿತು ಹಿಂತಿರುಗಿ, ೧೮೭೧ರಲ್ಲಿ ಹಾರ್ವರ್ಡಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಜ್ಜುಗೊಳಿಸಿದ್ದ ಅಂಗಕ್ರಿಯೆ ಪ್ರಯೋಗಶಾಲೆಯನ್ನು ಸ್ಥಾಪಿಸಿದನು.

ರೆಜಿನಾಲ್ಡ್ ಫಿಟ್ಸ್

ಇದೇ ರೀತಿಯಲ್ಲಿ ರೆಜಿನಾಲ್ಡ್ ಫಿಟ್ಸ್ ಎರಡು ವರ್ಷಗಳ ಕಾಲ ವಿಯನ್ನದಲ್ಲಿ ರಾಕಿಟಾನ್ಸ್ಕಿ ಮತ್ತು ಸ್ಕೋಡ ಹತ್ತಿರವೂ, ಅನಂತರ ಬರ್ಲಿನ್ನಿನ ವರ್ಕೌ ಹತ್ತಿರವೂ ಇದ್ದು ಬಾಸ್ಟನ್ನಿಗೆ ಹಿಂತಿರುಗಿ ಹಾರ್ವಡಿನ ರೋಗಶಾಸ್ತ್ರದ ಪ್ರಾಧ್ಯಾಪಕನಾಗಿ ಸೇರಿದನು. ಇವನು ಕೆಲವು ವರ್ಷಗಳಾದ ಮೇಲೆ, ರೋಗಿಹಾಸೆಪಕ್ಕದ ವೈದ್ಯರಲ್ಲಿ ಆಸಕ್ತನಾಗಿ ಅದರಲ್ಲಿ ನುರಿತು ಅತಿ ಶ್ರೇಷ್ಠ ವೈದ್ಯನೆಂದೆನಿಸಿಕೊಂಡನು. ೧೮೮೬ರಲ್ಲಿ, ೧೯ನೇ ಶತಮಾನದಲ್ಲೇ ಅತಿಮುಖ್ಯ ಸಾಧನೆಯಾದ ಕರುಳುವಾಳುರಿತ ರೋಗವನ್ನೂ ಅದರ ತೊಂದರೆಗಳನ್ನೂ ವೈದ್ಯರ ಗಮನಕ್ಕೆ ತಂದಿದ್ದನು. ಅದೇ ವರ್ಷ ಜೂರಿಚ್ಚಿನ ಶಸ್ತ್ರವೈದ್ಯ ಕ್ರಾನ್ಲೀನ್ ಕರುಳುವಾಳವನ್ನು ಕೊಯ್ದು ಶಸ್ತ್ರಕ್ರಿಯೆ ನಡೆಸಿದನು. ಹೀಗೆ ಜರ್ಮನ್ ವೈದ್ಯಶಾಸ್ತ್ರ ಅಮೆರಿಕದಲ್ಲಿ ಬೇರೂರಿ, ೧೯ನೇ ಶತಮಾನದ ಕೊನೆಯಲ್ಲಿ, ಬಾಲ್ಟಿಮೋರಿನಲ್ಲಿ ಜಾನ್ ಹಾಪ್ಕಿನ್ಸ್ ವೈದ್ಯಶಾಲೆ ಪ್ರಾರಂಭವಾಯಿತು. ಇದು ಅಮೆರಿಕಾದಲ್ಲೇ ಅತಿ ಶ್ರೇಷ್ಠ ಸಂಸ್ಥೆಯಾಯಿತು. ಜರ್ಮನಿಯ ಪ್ರಭಾವವನ್ನು ಕುರಿತು, ೧೯೧೦ರಲ್ಲಿ ಆಸ್ಲರ್ ಹೀಗೆ ಹೇಳಿದ್ದಾನೆ: 'ಜರ್ಮನಿಯ ವಿಶ್ವವಿದ್ಯಾನಿಲಯಗಳು ಅದರ ಪ್ರಮುಖ ವಿಶಿಷ್ಟ ಘನತೆ, ಶ್ರದ್ಧಾಸಕ್ತಿಯ ಕೆಚ್ಚು ಮತ್ತು ಅವುಗಳಲ್ಲಿ ಕೈಗೊಂಡ ಕಾರ್ಯಗಳ ವೈಶಿಷ್ಟ್ಯವಾದ ಕೂಲಂಕಷತೆಯ ಒಲವನ್ನು ನಮ್ಮ ಯುವಕರಿಗೆ ಎದೆ ತುಂಬ ತುಂಬಿ ಅವರನ್ನು ಹಿಂದಿರುಗಿಸುವುದೇ ಅಮೆರಿಕದಲ್ಲಿರುವ ನಮಗೆ ಅದು ಕೊಡಬಹುದಾದ ಮಹತ್ತರ ಕೊಡುಗೆ.'

ಜಾನ್ ಹಾಪ್ಕಿನ್ಸ್ ವೈದ್ಯಶಾಲೆ

ವರ್ತಕ ಮತ್ತು ಲೇವಾದೇವಿ ದಣಿಯಾಗಿದ್ದ ಜಾನ್ ಹಾಪ್ಕಿನ್ಸ್ ತನ್ನ ೭೨ನೇ ವಯಸ್ಸಿನಲ್ಲಿ ಬಾಲ್ಟಿಮೋರ್ ಪಟ್ಟಣದ ಕೋಟ್ಯಾಧೀಶ್ವರನಾಗಿ ಸುಮಾರು ೭೦೦೦,೦೦೦ ಡಾಲರುಗಳಷ್ಟು ಹಣ ಸಂಪಾದಿಸಿದ್ದನು. ಈ ಹಣದಲ್ಲಿ ಅರ್ಧವನ್ನು ಸಾರ್ವಜನಿಕ ಸಹಾಯಕ್ಕಾಗಿ ಒಂದು ವಿಶ್ವವಿದ್ಯಾಲಯಕ್ಕೂ, ಇನ್ನರ್ಧವನ್ನು ಒಂದು ಆಸ್ಪತ್ರೆಗೂ ಮೀಸಲಾಗಿ ತೆಗೆದಿಟ್ಟು ಕೀರ್ತಿ ಸಂಪಾದಿಸಿದನು. ಇವನು ಬದುಕಿದ್ದಾಗಲೇ ಆಸ್ಪತ್ರೆಗೆ ತಕ್ಕ ಜಾಗ ಕೂಡ ನೋಡಿ ಕೊಂಡಿಟ್ಟಿದ್ದನು. ಆದರೆ ಹಾಪ್ಕಿನ್ಸ್ ಸತ್ತು ೩ ವರ್ಷವಾದ ಮೇಲೆ, ೧೮೭೬ರಲ್ಲಿ ವಿಶ್ವವಿದ್ಯಾಲಯವೂ, ಜಾನ್ ಹಾಪ್ಕಿನ್ಸ್ ಆಸ್ಪತ್ರೆ ೧೮೮೯ರಲ್ಲೂ, ವೈದ್ಯಶಾಲೆ ೧೮೯೩ರಲ್ಲೂ ಪ್ರಾರಂಭವಾದವು.

ಗಿಲ್ಮನ್

ಜಾನ್ ಹಾಪ್ಕಿನ್ಸ್ ವಿಶ್ವವಿದ್ಯಾಲಯದ ಅಧಿಪತಿಯಾಗಿ, ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದಲ್ಲಿ ಅಧ್ಯಕ್ಷನಾಗಿದ್ದ ಡೇನಿಯಲ್ ಕಾಯ್ಟ್ ಗಿಲ್ಮನ್‌ನನ್ನು ೧೮೭೪

ರಲ್ಲೇ ನೇಮಕ ಮಾಡಲಾಗಿತ್ತು. ಇವನು ಪದವಿಗೆ ಬಂದನಂತರದ ಕೆಲವು ದಿವಸಗಳಲ್ಲೇ ಅಮೆರಿಕದ ಉಚ್ಚ ಶಿಕ್ಷಣ ಚರಿತ್ರಾರ್ಹವಾದ ಪ್ರಖ್ಯಾತಿ ಪಡೆಯಿತು. ಅಮೆರಿಕದಲ್ಲೇ ಉತ್ಕೃಷ್ಟರಾಗಿದ್ದ ಅಧ್ಯಾಪಕರನ್ನು ಆರಿಸಿ ನೇಮಕ ಮಾಡಲಾಗಿದ್ದುದೇ ಇದಕ್ಕೆ ಕಾರಣ. ಇವರ ಸಹಾಯದಿಂದ ಸ್ನಾತಕ ತರಗತಿಗಳು ಕೆಲಸ ಮಾಡಲಾರಂಭಿಸಿದ್ದವು.

ಜಾನ್ ಬಿಲ್ಲಿಂಗ್ಸ್

ವಿಶ್ವವಿದ್ಯಾಲಯದ ಶಂಕುಸ್ಥಾಪನೆ ಆದ ದಿವಸದಿಂದಲೇ, ಜಾನ್ ಹಾಪ್ಕಿನ್ಸ್ ಆಸ್ಪತ್ರೆ ಮತ್ತು ವೈದ್ಯಶಾಲೆಯನ್ನು ಪ್ರಾರಂಭಿಸಲು ಗಿಲ್ಮನ್ ಕಾತುರನಾಗಿದ್ದನು. ಇವನ ಈ ಕೆಲಸದಲ್ಲಿ ಎಚ್. ನ್ಯೂವೆಲ್ ಮಾರ್ಟಿನ್ ಮತ್ತು ಜಾನ್ ಷಾ ಬಿಲ್ಲಿಂಗ್ಸ್ ಸಹಾಯಕರಾಗಿದ್ದರು. ವೈದ್ಯ ಚರಿತ್ರೆ, ವೈದ್ಯಶಾಸ್ತ್ರ ಮತ್ತು ವೈದ್ಯ ನ್ಯಾಯಶಾಸ್ತ್ರಗಳನ್ನು ಕುರಿತು ಬಿಲ್ಲಿಂಗ್ಸ್ ಉಪನ್ಯಾಸ ಮಾಡುತ್ತಿದ್ದುದಲ್ಲದೆ, ಆಸ್ಪತ್ರೆಯ ರಚನಾಕ್ರಮಗಳಲ್ಲೂ ಅತಿಶಯವಾದ ಆಸಕ್ತಿ ತೋರಿಸಿದ್ದನು. ಈ ಸಂಸ್ಥೆಗಳನ್ನು ಅಭಿವೃದ್ಧಿಪಡಿಸಲು ಹೆಚ್ಚು ತಿಳಿವಳಿಕೆ ಪಡೆಯಲು ೧೮೭೬ರಲ್ಲಿ ಜರ್ಮನಿಗೆ ಪ್ರವಾಸ ಕೈಗೊಂಡು ಲೀಪ್ಸಿಗ್ ಪಟ್ಟಣದ ಲಡ್ವಿಗ್ ಪ್ರಯೋಗ ಶಾಲೆಗೆ ಭೇಟಿಕೊಟ್ಟಾಗ, ಅಮೆರಿಕದಿಂದ ಜರ್ಮನಿಗೆ ಬಂದು ಕೆಲಸ ಕಲಿಯುತ್ತಿದ್ದ ವಿಲಿಯಂ ಎಚ್. ವೆಲ್ಷ್ ನಡೆಸುತ್ತಿದ್ದ ಕಾರ್ಯಭಾರಗಳನ್ನು ನೋಡಿ ಮೆಚ್ಚಿ, ಜಾನ್ ಹಾಪ್ಕಿನ್ಸ್ ವೈದ್ಯಶಾಲೆಗೆ ತಕ್ಕವನೆಂದು ತೀರ್ಮಾನಿಸಿ ಅವನನ್ನು ಬರಮಾಡಿಕೊಳ್ಳಲು ತನ್ನ ಸ್ನೇಹಿತರ ಸಲಹೆ ಪಡೆದು ಕರೆ ಕೊಟ್ಟಿದ್ದನು. ೧೮೮೪ರಲ್ಲಿ ಬಿಲ್ಲಿಂಗ್ಸ್ ಮತ್ತು ಕಾನ್‌ಹೀಮ್‌ರ ಶಿಫಾರಸ್ಸುಗಳ ಆಧಾರದ ಮೇಲೆ ಅಧ್ಯಕ್ಷ ಗಿಲ್ಮನ್, ಜರ್ಮನಿಯಿಂದ ಹಿಂತಿರುಗಿದ್ದ ವೆಲ್ಷ್‌ನನ್ನು ರೋಗಶಾಸ್ತ್ರದ ಪ್ರಾಧ್ಯಾಪಕನಾಗಿ ನೇಮಿಸಿಕೊಂಡನು. ಆದರೆ ವೈದ್ಯಶಾಲೆ ಪ್ರಾರಂಭವಾಗಲು ಕೆಲವು ದಿವಸಗಳು ಬೇಕಾಗಿದ್ದುದರಿಂದ ಸದ್ಯಕ್ಕೆ ವೈದ್ಯರಿಗೆ ಉಪನ್ಯಾಸ ಮಾಡತೊಡಗಿದನು. ಹೀಗಿರುವಾಗ, ಇವನು ನೇಮಕವಾದ ೪ನೇ ವರ್ಷದಲ್ಲಿ (೧೮೮೮) ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯದಲ್ಲಿ ರೋಗಿಹಾಸೆಪಕ್ಕದ ವೈದ್ಯಶಾಸ್ತ್ರದ ಪ್ರಾಧ್ಯಾಪಕ ವಿಲಿಯಂ ಆಸ್ಲರ್ ಮಹಾಪುರುಷನನ್ನು ಜಾನ್ ಹಾಪ್ಕಿನ್ಸ್ ಆಸ್ಪತ್ರೆಯ ಮುಖ್ಯ ವೈದ್ಯ ಅಲ್ಲದೆ ವೈದ್ಯಶಾಸ್ತ್ರ ಪ್ರಾಧ್ಯಾಪಕನಾಗೂ ನೇಮಕ ಮಾಡಲಾಯಿತು. ಆಸ್ಲರ್ ನೇಮಕವನ್ನು ಮೆಚ್ಚಿ ವೆಲ್ಷ್ "ನಾನು ಮುಗ್ಧನಾದೆನು. ಹಾಪ್ಕಿನ್ಸ್‌ಗೆ ಅವನ ಆಯ್ಕೆ ನನ್ನದೆಂದು ತೋರುತ್ತದೆ" ಎಂದು ಸಮರ್ಥಿಸಿದನು. ಇವರಿಬ್ಬರೂ ಹಾಪ್ಕಿನ್ಸ್ ಸಂಸ್ಥೆಗಳಿಗೆ ಮೂಲಪ್ರಾಯರಾಗಿ ಅವುಗಳ ಏಳಿಗೆಗೆ ಸಾಕಷ್ಟು ದುಡಿಯಲಾರಂಭಿಸಿದರು. ಸದ್ಯದಲ್ಲೇ, ವಿಲಿಯಂ ಸ್ಟೀವರ್ಟ್ ಹಾಲ್ಸ್ಟೆಡ್ ಮತ್ತು ಹೊವಾರ್ಡ್ ಆಟ್‌ವುಡ್ ಕೆಲ್ಲಿ ಶಸ್ತ್ರವೈದ್ಯದ ಮತ್ತು ಹೆಣ್ಣುರೋಗವೈದ್ಯದ ಪ್ರಾಧ್ಯಾಪಕರಾಗಿ ನೇಮಕವಾದರು. ೧೮೯೩ರಲ್ಲಿ, ಜರ್ಮನಿಯಲ್ಲಿ ಹಿಸ್ ಮತ್ತು


ಲಡ್ವಿಗ್ ಹತ್ತಿರ ಕೆಲಸಕ್ಕಿದ್ದ ಫ್ರಾಂಕ್ಲಿನ್ ಪಿ. ಮಾಲ್ ಅಂಗರಚನೆ ಶಾಸ್ತ್ರದ ಪ್ರಾಧ್ಯಾಪಕನಾಗಿಯೂ, ಸ್ಟ್ರಾಸ್‌ಬರ್ಗಿನ ಪದವೀಧರನಾದ ಜಾನ್ ಜೆ. ಅಬೆಲ್ ಔಷಧಶಾಸ್ತ್ರದ ಪ್ರಾಧ್ಯಾಪಕನಾಗಿಯೂ ಹಾಗೂ ವಿಲಿಯಂ ಎಚ್. ಹೊವೆಲ್ ಅಂಗ ಕ್ರಿಯೆಶಾಸ್ತ್ರದ ಪ್ರಾಧ್ಯಾಪಕನಾಗಿಯೂ ನೇಮಕವಾದರು. ಇವರೆಲ್ಲಾ ಅಲಂಕರಿಸಿದ್ದ ವೈದ್ಯ ಸಂಸ್ಥೆ ಕೆಲವು ರೀತಿಗಳಲ್ಲಿ ಗಮನಾರ್ಹವಾಗಿತ್ತು. ವಯಸ್ಸಿನಲ್ಲಿ ೪೫ ವರ್ಷ ವಯಸ್ಸಾಗಿದ್ದ ವೆಲ್ಷ್ ಮತ್ತು ಆಸ್ಲರ್‌ರನ್ನು ಬಿಟ್ಟರೆ ಉಳಿದವರೆಲ್ಲರೂ ಸಾಮಾನ್ಯವಾಗಿ ಒಂದೇ ಸಮನ ಚಿಕ್ಕ ವಯಸ್ಸಿನವರಾಗಿದ್ದರು. ಕೆಲ್ಲಿ ಮತ್ತು ಮಾಲ್‌ರಿಗೆ ೩೧ ವರ್ಷ ವಯಸ್ಸು. ಹೊವೆಲ್‌ಗೆ ೩೩, ಅಬೆಲ್‌ಗೆ ೩೬, ಹಾಲ್ಸ್‌ಟೆಡ್‌ಗೆ ೩೮ ವರ್ಷ ಆಗಿತ್ತು. ಹೊವೆಲ್ ಬಿಟ್ಟು ಮಿಕ್ಕವರೆಲ್ಲಾ ಜರ್ಮನಿಯಲ್ಲಿ ಉಚ್ಚ ಶಿಕ್ಷಣ ಪಡೆದವರು.

ಜಾನ್ ಹಾಪ್ಕಿನ್ಸ್ ನಿಯಮಗಳು

ಜಾನ್ ಹಾಪ್ಕಿನ್ಸ್ ವೈದ್ಯಶಾಲೆ ಸೇರಬೇಕಾಗಿದ್ದಲ್ಲಿ ಕೆಲವು ನಿಯಮಗಳಿದ್ದವು. ಅಭ್ಯರ್ಥಿಗಳು ಪ್ರಥಮ ಪದವೀಧರರಾಗಿರಬೇಕಾಗಿತ್ತು. ಫ್ರೆಂಚ್ ಮತ್ತು ಜರ್ಮನ್ ಭಾಷೆಗಳಲ್ಲಿ ಸೂಕ್ಷ್ಮ ಪರಿಚಯವಿರಬೇಕಾಗಿತ್ತು. ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಿಶಾಸ್ತ್ರಗಳಲ್ಲಿ ವಿಧಿಸಿದ್ದ ಕ್ರಮಗಳನ್ನು ಅರಿತಿರಬೇಕಾಗಿತ್ತು. ಆದುದರಿಂದ ಶಾಲೆಯನ್ನು ಸೇರಲು ಸ್ವಲ್ಪ ಕಷ್ಟವೇ ಆಗಿತ್ತು. ಈ ನಿಯಮಗಳನ್ನು ವಿವರಿಸುತ್ತ, ತಾನು ಪ್ರಾಧ್ಯಾಪಕನಾಗಿಲ್ಲದಿದ್ದ ಪಕ್ಷದಲ್ಲಿ, ಅಭ್ಯರ್ಥಿಯಾಗಿ ಸೇರಲು ತನಗೆ ಅವಕಾಶವೇ ಇರುತ್ತಿರಲಿಲ್ಲವೆಂದು ಆಸ್ಲರ್ ಹೇಳಿಕೊಂಡಿದ್ದನು. ನಿಯಮಾವಳಿಯ ಮತ್ತೊಂದು ಹೊಸ ಮಾರ್ಗವೆಂದರೆ, ಹುಡುಗರಿಗಿದ್ದ ನಿಯಮಗಳೇ ಹುಡುಗಿಯರಿಗೂ ಇದ್ದದ್ದು ಒಂದು ವಿಶೇಷ. ಈ ನೂತನ ಆಡಳಿತ ಸೂತ್ರಗಳಿಂದ ಜಾನ್ ಹಾಪ್ಕಿನ್ಸ್ ವೈದ್ಯ ಶಾಲೆ ಒಂದು ಮಾರ್ಗದರ್ಶಕ ಶಾಲೆಯಾಗಿದ್ದುದಲ್ಲದೆ, ಶ್ರೇಷ್ಠ ಮಹನೀಯರ ಹಾಗೂ ಅನುಭವಶಾಲಿಗಳ ಸಂಶೋಧನಾ ಶಕ್ತಿಯಿಂದ ಗಮನಾರ್ಹವಾದ ಸಂಸ್ಥೆಯಾಗಿತ್ತು.

ವಿಲಿಯಂ ಹೆನ್ರಿ ವೆಲ್ಷ್

ವಿಲಿಯಂ ಹೆನ್ರಿ ವೆಲ್ಷ್ (೧೮೫೦–೧೯೩೪): ಇವನು ಹುಟ್ಟಿದ್ದು ಕನೆಕ್ಟಿಕಟ್ಟಿನ ನಾರ್ಫೊಕ್ಕಿನಲ್ಲಿ. ಇವನ ತಂದೆ ವೈದ್ಯ. ೧೮೭೦ರಲ್ಲಿ ಯೇಲ್‌ನಿಂದ ಪ್ರಥಮ ಪದವಿ ಪಡೆದು ಗ್ರೀಕ್ ಭಾಷೆಯ ಪ್ರಾಧ್ಯಾಪಕನಾಗಬೇಕೆಂದಿದ್ದನು. ಆದರೆ ಕೆಲಸ ಸಿಗದ್ದರಿಂದ ವೈದ್ಯಶಾಸ್ತ್ರ ಅವಲಂಬಿಸಿ ನ್ಯೂಯಾರ್ಕ್‌ನಲ್ಲಿ ವೈದ್ಯ ಪದವಿಯನ್ನು ಪಡೆದು, ಅನಂತರ ಉನ್ನತ ಶಿಕ್ಷಣ ಪಡೆಯಲು ಜರ್ಮನಿಗೆ ಹೋಗಿ ಸ್ಟ್ರಾಸ್‌ಬರ್ಗ್, ಲೀಪ್ಸಿಗ್, ಬ್ರೆಸ್ಲಾಗಳಲ್ಲಿ ಕೆಲಸ ಮಾಡಿದ್ದನು. ಬ್ರೆಸ್ಲಾನಲ್ಲಿದ್ದಾಗ, ಎಡ ಹೃದಯವನ್ನು ಒತ್ತಿ ಶ್ವಾಸಕೋಶದ ಉಬ್ಬರ ಉಂಟು ಮಾಡುವ ಪ್ರಯೋಗವನ್ನು ಕಂಡುಹಿಡಿದನು. ಇದು ೧೮೭೮ರಲ್ಲಿ ವರ್ಕೌನ ಪತ್ರಿಕೆಯಲ್ಲಿ ಪ್ರಕಟವಾಯಿತು. ಜರ್ಮನಿಯಲ್ಲಿ ಮಿಣಿದರ್ಶಕ ಅಂಗರಚನೆ ಮತ್ತು ರೋಗಶಾಸ್ತ್ರಗಳ ಪರಿಚಯ ಹೊಂದಿ ಅಮೆರಿಕಾಕ್ಕೆ



ಎಡದಿಂದ ಬಲಕ್ಕೆ: ಡಾ. ವೆಲ್ಷ್. ಡಾ. ಹಾಲ್‌ಸ್ಟೆಡ್, ಡಾ. ಆಸ್ಲರ್,
ಡಾ. ಕೆಲ್ಲಿ ಆಗಿನ ಉನ್ನತ ವೈದ್ಯರು

ಹಿಂತಿರುಗಿದನಂತರ, ೧೮೮೪ರಲ್ಲಿ ಜಾನ್ ಹಾಪ್ಕಿನ್ಸ್ ವಿಶ್ವವಿದ್ಯಾಲಯದಲ್ಲಿ ರೋಗ ಶಾಸ್ತ್ರದ ಪ್ರಾಧ್ಯಾಪಕನಾಗಿ ನೇಮಕವಾದನು. ತಕ್ಕ ಪ್ರಯೋಗಶಾಲೆ ಜಾರಿಗೆ ಬಂದ ಮೇಲೆ ಅನೇಕ ಕಿರಿಯ ವೈದ್ಯರು ಇವನನ್ನು ಸೇರಿ, ಮುಂದಿನ ರೋಗಶಾಸ್ತ್ರದ ಹಾಗೂ ಏಕಾಣುಜೀವಿಶಾಸ್ತ್ರದ ಪ್ರಮುಖರಾಗಲು ಅವಕಾಶ ಆಗ ಒದಗಿತು. ಅವರ ಪೈಕಿ ವಾಲ್ಟರ್ ರೀಡ್, ಸೈಮನ್ ಫ್ಲೆಕ್ಸ್ನರ್, ಜೆ.ಎಚ್. ರೈಟ್ ಮುಂತಾದವರಿದ್ದರು. ವಿಲಿಯಂ ಟಿ. ಕೌನ್ಸಿಲ್ಮನ್ ಅವನ ಆಪ್ತ ಸ್ನೇಹಿತನಾಗಿ ರೋಗಶಾಸ್ತ್ರದ ಪ್ರಯೋಗ ಗಳಲ್ಲಿ ಸಹಕರಿಸುತ್ತಿದ್ದನು.

ಜಾನ್ ಹಾಪ್ಕಿನ್ಸ್ ವೈದ್ಯಶಾಲೆಯ ಸ್ಥಾಪನೆಯಲ್ಲೂ, ಅಲ್ಲಿಯ ವೈದ್ಯ ಶಿಕ್ಷಣ ಹಾಗೂ ವೈದ್ಯ ಸಂಶೋಧನೆಗಳ ಮೇಲೆ ವೆಲ್ಷ್‌ಗಿದ್ದ ಪ್ರೇಮ ಮತ್ತು ಆಸಕ್ತಿ ಅವನನ್ನು ವೈದ್ಯಶಾಸ್ತ್ರದಲ್ಲಿ ಪ್ರಮುಖನಾಗಿಸಿದ್ದವು. ಅವನ ಉಪನ್ಯಾಸಗಳಂತೂ ಕೇಳಲು ಸುಶ್ರಾವ್ಯಕರವಾಗಿದ್ದವು. ೧೮೯೨ರಲ್ಲಿ, ವೆಲ್ಷ್ ದಂಡಾಣುಜೀವಿಯನ್ನು ತಾನೇ ಕಂಡುಹಿಡಿದು ವಿವರಿಸಿದನು. ಕ್ರಮೇಣ ಒಂದಾದ ಮೇಲೆ ಒಂದರಂತೆ ಉನ್ನತ ಅಧಿಕಾರವನ್ನು ಪಡೆದು ಎಲ್ಲರ ಗೌರವವನ್ನು ಸಂಪಾದಿಸಿದನು.

ವಿಲಿಯಂ ಆಸ್ಲರ್

ವಿಲಿಯಂ ಆಸ್ಲರ್ (೧೮೪೯–೧೯೨೦) ವೈದ್ಯ ವಿದ್ಯೆಗೆ ಸೇವೆಯನ್ನು ಸಲ್ಲಿಸಿರುವವ ರಲ್ಲಿ ಪ್ರಮುಖನೆನ್ನಬಹುದು. ಇವನ ಜನನ ಕೆನಡದಲ್ಲಿ. ಟರಾಂಟೊ ಟ್ರನಿಟಿ ಕಾಲೇಜಿ

ನಲ್ಲಿ ವ್ಯಾಸಂಗ ಮಾಡಿ, ಪಾದ್ರಿಯಾಗಬೇಕೆಂದಿದ್ದರೂ ಅದೃಷ್ಟವಶಾತ್ ವೈದ್ಯವೃತ್ತಿಯನ್ನು ಅವಲಂಬಿಸಿದನು. ಮಾಂಟ್ರಿಯಾಲ್‌ನ ಮ್ಯಾಕ್‌ಗಿಲ್ ವಿಶ್ವವಿದ್ಯಾಲಯದಿಂದ ೧೮೭೨ರಲ್ಲಿ ವೈದ್ಯ ಪದವಿ ಪಡೆದು, ಲಂಡನ್, ಬರ್ಲಿನ್, ಲೀಪ್ಸಿಗ್, ವಿಯನ್ನಗಳಿಗೆ ಭೇಟಿಕೊಟ್ಟು, ಮಾಂಟ್ರಿಯಾಲ್‌ಗೆ ಹಿಂತಿರುಗಿದನಂತರ ತನ್ನ ೨೬ನೇ ವಯಸ್ಸಿನಲ್ಲೇ ಮ್ಯಾಕ್‌ಗಿಲ್ಲಿನ ಪ್ರಾಧ್ಯಾಪಕನಾಗಿಯೂ, ಮಾಂಟ್ರಿಯಾಲ್ ಆಸ್ಪತ್ರೆಯ ರೋಗಶಾಸ್ತ್ರ ಶಾಸ್ತ್ರಜ್ಞನಾಗಿಯೂ ನೇಮಕವಾದನು. ಆದ್ದರಿಂದಲೇ ಇವನನ್ನು ವಿದ್ಯಾರ್ಥಿಗಳು ಎಳೆಯ ಪ್ರಾಧ್ಯಾಪಕನೆಂದು ಕರೆಯುತ್ತಿದ್ದನು. ಅನಂತರ ೫ ವರ್ಷ ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡಿ, ೧೮೮೯ರಲ್ಲಿ ಹೊಸದಾಗಿ ಸ್ಥಾಪಿತವಾದ ಜಾನ್ ಹಾಪ್ಕಿನ್ಸ್ ವೈದ್ಯಶಾಲೆಯಲ್ಲಿ ವೈದ್ಯಶಾಸ್ತ್ರದ ಪ್ರಾಧ್ಯಾಪಕನಾಗಿ ಸೇರಿದನು. ೧೬ ವರ್ಷ ಈ ಬಾಲ್ಟಿಮೋರ್ ಸಂಸ್ಥೆಯಲ್ಲಿ ಅತಿಶಯವಾದ ಸೇವೆ ಸಲ್ಲಿಸಿದನು. 'ವೈಯಕ್ತಿಕ ಚೆಲವಿನ ವ್ಯಕ್ತಿ, ಹುಟ್ಟು ಶಿಕ್ಷಕ, ಪ್ರಭಾವೀ ವಾಗ್ಮಿ, ಮೋಹಕ ಬರಹಗಾರ, ವ್ಯಾಪಕ ಆಸ್ಥೆಗಳುಳ್ಳ ವಿದ್ವಾಂಸ, ಮಹತ್ತರವಾದ ಬುದ್ಧಿಶಕ್ತಿಗಳೊಂದಿಗೆ ಅಪರಿಮಿತ ಕರುಣೆ ಅನುಕಂಪ, ಸಮಯೋಚಿತ ಜಾಣ್ಮೆಗಳನ್ನೂ ಪಡೆದು, ಅವನು ತನ್ನ ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನವನಾಗಿ, ಮೇಲು ಕೀಳಾದವರ, ಬಡವ ಬಲ್ಲಿದರ ಗೆಳೆಯನಾಗಿದ್ದನು' ಎಂದು ಮೇಜರ್ ತನ್ನ ವೈದ್ಯ ಚರಿತ್ರೆಯಲ್ಲಿ ವಿವರಿಸಿದ್ದಾನೆ.

ಆಸ್ಲರ್ ಜಾನ್ ಹಾಪ್ಕಿನ್ಸ್ ಆಸ್ಪತ್ರೆಯಲ್ಲಿ ಇಂಗ್ಲೀಷ್ ಮತ್ತು ಜರ್ಮನ್ ಶಿಕ್ಷಣ ಪದ್ಧತಿಗಳನ್ನು ಆಚರಣೆಗೆ ತಂದು ಒಂದು ಮಾದರಿ ಸಂಸ್ಥೆಯನ್ನಾಗಿ ಮಾಡಿ



ಜಾನ್ ಹಾಪ್ಕಿನ್ಸ್ ಸಂಸ್ಥೆಯ ವೈದ್ಯರು

ಧ್ದನು. ಇವನು ಮತ್ತು ಇವನ ಸಂಗಡಿಗರೆಲ್ಲಾ ಆದರ್ಶವಾದಿಗಳಾಗಿದ್ದರು. ಇವನು ಹೇಳಿರುವ ಮಾತು 'ಒಂದು ಸಂಸ್ಥೆಯ ಗತಿ ಅದರ ಗೋಡೆಗಳ ಒಳಗೆ ಕೆಲಸ ಮಾಡುವವರಲ್ಲೂ, ಅವರು ಇಟ್ಟುಕೊಂಡಿರುವ ಮತ್ತು ಕಲಿಸುವ ಆದರ್ಶಗಳಲ್ಲೂ ಅಡಗಿದೆ' ಎಂಬುದು ಗಮನಾರ್ಹವಾಗಿತ್ತು. ಬಾಲ್ಟಿಮೋರ್‌ಗೆ ಬಂದ ೨ ವರ್ಷಗಳಲ್ಲೇ, ಪ್ರಪಂಚಕ್ಕೇ ಅಚ್ಚುಮೆಚ್ಚಾದ 'ವೈದ್ಯಶಾಸ್ತ್ರ ಸೂತ್ರಗಳು ಮತ್ತು ಆಚರಣೆ' ಎಂಬ ಒಂದು ಪಠ್ಯ ಪುಸ್ತಕವನ್ನು ಬರೆದು (೧೮೯೨) ಪ್ರಕಟಿಸಿ ಕೀರ್ತಿ ಪಡೆದನು. ಈ ಪುಸ್ತಕ ಅನೇಕ ಭಾಷೆಗಳಿಗೆ ಭಾಷಾಂತರವಾಯಿತು. ಇವನ ಈ ಪ್ರಮುಖ ಕೆಲಸಗಳನ್ನು ಮೆಚ್ಚಿ, ಅನೇಕ ವಿಶ್ವವಿದ್ಯಾಲಯಗಳೂ, ಸರ್ಕಾರಗಳೂ ಗೌರವ ಪ್ರಶಸ್ತಿಗಳನ್ನು ನೀಡಿದವು. ಇವನು ಹೆಚ್ಚಿನ ಶೋಧನೆಗಳನ್ನು ಕಂಡುಹಿಡಿಯದಿದ್ದರೂ ೧೮೭೩ರಲ್ಲಿ ರಕ್ತ ಚಪ್ಪಟಿಕಗಳನ್ನು ಪರೀಕ್ಷಿಸಿ ತನಿಖೆ ಮಾಡಿದ್ದನು. ೧೯೦೩ರಲ್ಲಿ ಕೆಂಪು ಹಲಕಣರಕ್ತ ರೋಗವನ್ನು ವಿವರಿಸಿದ್ದಲ್ಲದೆ ಗುಂಡಿಗೆಯೊಳ್ಪರೆಯುರಿತದಲ್ಲಿ ಏಳುವ ಆಸ್ಲರ್ ಗಂಟುಗಳನ್ನೂ ವಿವರಿಸಿದ್ದನು. ಇವನ ನೇತೃತ್ವದಲ್ಲಿ 'ಆಧುನಿಕ ವೈದ್ಯಶಾಸ್ತ್ರ' ಮತ್ತು 'ವೈದ್ಯಶಾಸ್ತ್ರದ ತ್ರೈಮಾಸಿಕ ಪತ್ರಿಕೆ' ಪ್ರಕಟವಾಗುತ್ತಿದ್ದವು. ಇವನ ಅನೇಕ ವಿಷಯಗಳನ್ನು ಕುರಿತ ಭಾಷಣ ಮಾಲೆ 'ಸಮಚಿತ್ತತೆ' ಎಲ್ಲೆಲ್ಲೂ ಈಗಲೂ ಬಹಳ ಜನಪ್ರಿಯವಾಗಿ ವೈದ್ಯರಿಗೂ, ವಿದ್ಯಾರ್ಥಿಗಳಿಗೂ ಒಂದು ದೈವ ಪ್ರೇರಣೆಯಂತಿದೆ. ಇವನ ದೊಡ್ಡ ಪುಸ್ತಕ ಭಂಡಾರವನ್ನು, ಇವನು ದಿವಂಗತನಾದ ಮೇಲೆ ಇವನ ಸ್ಮಾರಕವಾಗಿ ಮ್ಯಾಕ್‌ಗಿಲ್ ವಿಶ್ವವಿದ್ಯಾಲಯಕ್ಕೆ ದಾನವಾಗಿ ಕೊಡಲಾಯಿತು. ವೈದ್ಯಶಾಸ್ತ್ರದ ಚರಿತ್ರೆಯಲ್ಲಿ ಇವನಿಗಿದ್ದ ಪ್ರೇಮವನ್ನು ಹೇಳತೀರದು. ವೆಲ್ಷ್ ಹೇಳಿರುವಂತೆ 'ವೈದ್ಯಶಾಸ್ತ್ರ ಚರಿತ್ರೆಯ ಪಾಂಡಿತ್ಯದ ವಿದ್ಯಾರ್ಥಿಯಾಗಿದ್ದ ಅವನ ಕೀರ್ತಿ ರೋಗಿ ಹಾಸೆಪಕ್ಕದ ಒಬ್ಬ ಮಹಾ ಶಿಕ್ಷಕನಾಗಿರುವ ಖ್ಯಾತಿಗೆ ಕೇವಲ ಎರಡನೆಯದಾಗಿತ್ತು.'

ಆಸ್ಲರ್ ಹೇಳಿದ್ದ ಹಿತಕರವಾದ ಹಾಗೂ ಆಹ್ಲಾದಕರವಾದ ಸೂಕ್ತಿಗಳನ್ನು ವೈದ್ಯ ವೃಂದದವರೆಲ್ಲಾ ಓದಿರಬಹುದು. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ.

'ಒಂದು ಯುಗದ ದರ್ಶನಗಳು ಮುಂದಿನದರ ಅವಿವೇಕಗಳಾಗಿವೆ. ನೆನ್ನೆಯ ತಿಳಿಗೇಡಿತನ ನಾಳಿನ ವಿವೇಕವಾಗಿದೆ.'

'ಇಪ್ಪತ್ತು ಶತಮಾನಗಳ ಸಕಲ ಬದಲಾವಣೆಗಳ, ಅವಕಾಶಗಳ ನಡುವೆ ಗ್ರೀಕರ ಆದರ್ಶಗಳಿಗನುಸಾರವಾಗಿ ವೃತ್ತಿಯಲ್ಲಿ ಬಾಳಿದವರ ಅಭಾವ ಎಂದಿಗೂ ಆಗಿಲ್ಲ.'

'ವೈದ್ಯಶಾಸ್ತ್ರದ ಹಲವು ತೊಡಕುಗಳನ್ನು ಚಾರಿತ್ರಿಕ ವಿಧಾನದಿಂದ ಮಾತ್ರವೇ ಫಲಪ್ರದವಾಗಿ ಬಿಡಿಸಲೆತ್ನಿಸಬಹುದು.'

'ಗತಕಾಲದ ಮಹಾಪುರುಷರನ್ನು ಲಘು ಗೌರವದಿಂದ ಕಾಣುವುದಾದರೆ ಅದು ಬರಡು ಯುಗ.'

'ದಿನದ ಚಟುವಟಿಕೆಗಳನ್ನು ಸರಿಯಾಗಿ ನಡೆಸಿದರೆ, ಯುಕ್ತವಾಗಿ ಸರಿದೂಗಿಸಿದರೆ, ಕೆಲಸ ಬರೀ ಕೆಲಸವಲ್ಲ, ಅದೇ ಆನಂದ.'

'ಭವಿಷ್ಯವನ್ನು ತೊಲಗಿಸಿ; ಈ ಹೊತ್ತಿಗಾಗಿ ಅದರ ಪಾಲಿಗೆ ಬಂದ ಕರ್ಮಕ್ಕಾಗಿ ಮಾತ್ರ ಬಾಳಿರಿ'.

'ಉಲ್ಲಾಸ ಮತ್ತು ಒಳ್ಳೆಯ ಮನಸ್ಸು ವೈದ್ಯಶಾಸ್ತ್ರದ ಅಭ್ಯಾಸ, ಆಚರಣೆಗಳಲ್ಲಿ ಅಪಾರವಾಗಿ ನೆರವಾಗುತ್ತವೆ.'

'ನಿಮ್ಮ ದೇಹದ ವೇದನಾ ಸ್ಥಿತಿಯನ್ನು ಚೆನ್ನಾಗಿ ಹತೋಟಿಯಲ್ಲಿಟ್ಟುಕೊಳ್ಳುವುದು ಮೊದಲು ಅಗತ್ಯ.'

'ವೈದ್ಯನಿಗೆ ಸಂಸ್ಕೃತಿಯ ಜೊತೆಗೆ ವಿದ್ಯೆ ಇರಬೇಕು. ಅವನಲ್ಲಿ ಹಾರ್ವೆಯ ವಿಜ್ಞಾನವೂ, ಸಿಡೆನ್‌ಹ್ಯಾಮನ ಕಲೆಯೂ ಇರಬಹುದು. ಬಾಳಿನಲ್ಲಿ ಅಷ್ಟೊಂದು ಗಣನೆಗೆ ಬರುವ ಅಂತಃಕರಣದ ಉತ್ತಮ ಸ್ವಭಾವಗಳೇ ಅವನಲ್ಲಿ ಇಲ್ಲವಾಗಬಹುದು.'

ವಿಲಿಯಂ ಹಾಲ್ಸ್ಟೆಡ್

ವಿಲಿಯಂ ಸ್ಟ್ಯುವರ್ಟ್ ಹಾಲ್ಸ್ಟೆಡ್ (೧೮೫೨-೧೯೨೨) ಜರ್ಮನಿಯಲ್ಲಿ ಉಚ್ಚ ಶಿಕ್ಷಣ ಪಡೆದು ನ್ಯೂಯಾರ್ಕಿಗೆ ಹಿಂತಿರುಗಿದ ಮೇಲೆ ಅಲ್ಲಿಯ ೬ ಆಸ್ಪತ್ರೆಗಳಲ್ಲಿ ಶಸ್ತ್ರವೈದ್ಯನಾಗಿ ಕೆಲಸ ಮಾಡುತ್ತಿದ್ದನು. ೧೮೮೧ರಲ್ಲಿ, ಗಾಳಿದುಂಬಿದ ರಕ್ತವನ್ನು ಪುನಃ ಅದೇ ರೋಗಿಗೆ ಕೊಡುವ ಪದ್ಧತಿಯನ್ನು ಜಾರಿಗೆ ತಂದನು. ಗಾಯಗಳಿಂದ ಕೀವು ಬಸಿಯಲು ಸಿಗರೇಟು ಬಸಿಗೊಳವೆಯನ್ನು ಉಪಯೋಗಿಸಿದ್ದನು. ೧೮೮೫ರಲ್ಲೇ ಅತಿ ಮುಖ್ಯವಾದ ನರತಡೆಯ ಅರಿವಳಿಕೆಯನ್ನು ಕೊಕೇನ್‌ನಿಂದ ಉಂಟುಮಾಡಿ ಶಸ್ತ್ರಕ್ರಿಯೆ ನಡೆಸುತ್ತಿದ್ದನು. ಕೊಕೇನನ್ನು ತಾನೇ ಚುಚ್ಚಿಕೊಂಡು ಶಸ್ತ್ರಕ್ರಿಯೆ ನಡೆಸಿದ್ದರಿಂದ ಆ ಮದ್ದಿನ ದುಚ್ಚಾಳಿ ಬೆಳೆದು ಅದನ್ನು ತಪ್ಪಿಸಿಕೊಳ್ಳಲು ಅವನಿಗೆ ಬಹು ಪ್ರಯಾಸವಾಯಿತು. ಇದರಿಂದ ಅವನ ವೈದ್ಯವೃತ್ತಿ ಹಾಗೂ ದೇಹಾರೋಗ್ಯ ಕೆಟ್ಟವು. ೨ ವರ್ಷಗಳನಂತರ ಈ ಚಾಳಿಯಿಂದ ಬಿಡುಗಡೆಯಾಗಿ ಬಾಲ್ಟಿಮೋರ್‌ನ ವೆಲ್ಷ್ ಪ್ರಯೋಗ ಶಾಲೆ ಸೇರಿ ಅಲ್ಲಿ ಗಾಯ ಮಾಯುವ ಬಗೆಯನ್ನೂ, ಗುರಾಣಿಕ ಗ್ರಂಥಿಯ ಕ್ರಿಯೆಗಳನ್ನೂ ತಿಳಿದು ವಿವರಿಸಿದನು. ಕ್ರಮೇಣ ೧೮೯೦ರಲ್ಲಿ ಶಸ್ತ್ರ ವೈದ್ಯದ ಪ್ರಾಧ್ಯಾಪಕನಾಗಿ ೩೨ ವರ್ಷ ಸೇವೆ ಸಲ್ಲಿಸಿ ಕೀರ್ತಿ ಗಳಿಸಿದನು.

ಹೊವರ್ಡ್ ಕೆಲ್ಲಿ

ಹೊವರ್ಡ್ ಆಟ್ವುಡ್ ಕೆಲ್ಲಿ ತನ್ನ ೩೧ನೇ ವರ್ಷ ವಯಸ್ಸಿನಲ್ಲೇ ಜಾನ್ ಹಾಪ್ಕಿನ್ಸ್ ಆಸ್ಪತ್ರೆಯಲ್ಲಿ ಹೆರಿಗೆಶಾಸ್ತ್ರ ಮತ್ತು ಹೆಣ್ಣುರೋಗವೈದ್ಯದ ಪ್ರಾಧ್ಯಾಪಕನಾಗಿ ಸೇರಿ, ವೆಲ್ಷ್, ಆಸ್ಲರ್ ಮತ್ತು ಹಾಲ್ಸ್ಟೆಡ್‌ರವರಂತೆಯೇ ಹಾಪ್ಕಿನ್ಸ್ ಆಸ್ಪತ್ರೆಗೆ ಸೇವೆ ಸಲ್ಲಿಸಿದನು.

ಎಬೆಲ್

ಈ ಸಾಲ್ವರಲ್ಲದೆ, ಅಂಗರಚನೆಶಾಸ್ತ್ರದ ಮಾಲ್ ಭ್ರೂಣಶಾಸ್ತ್ರದಲ್ಲಿ ಅನೇಕ ಸಂಶೋಧನೆಗಳನ್ನು ನಡೆಸಿದನು. ಔಷಧಶಾಸ್ತ್ರ ಪ್ರಾಧ್ಯಾಪಕ ಜರ್ಜ್ ಜೆ.ಎಬೆಲ್ ಎಪಿನೆಫ್ರೀನ್ ಮತ್ತು ಬುಫಾಜಿನ್ ಎಂಬ ಚೋದನಿಗಳನ್ನು ಕಂಡುಹಿಡಿದುದಲ್ಲದೆ, ಅವನ ೬೯ನೇ ವಯಸ್ಸಿನಲ್ಲಿ ಇನ್ಸುಲಿನ್ ಹರಳುಗಳನ್ನು ತಯಾರಿಸಿದನು. ಹಾಗೂ ಅವನ ಜೀವನದ ಕೊನೆಯಾದ ೮೧ನೇ ವಯಸ್ಸಿನಲ್ಲಿ ಸೆಟೆಬೇನೆಯ ಜೀವಿವಿಷದ ಗುಣಗಳನ್ನು ವಿವರಿಸಿದನು.

ಹೊವೆಲ್

ಅಂಗಕ್ರಿಯೆಯಲ್ಲಿ ಅಮೆರಿಕಾಕ್ಕೆ ಪ್ರಧಾನನೆನಿಸಿ ಹೊವೆಲ್ ರಕ್ತ ಹೆಪ್ಪುಗಟ್ಟುವಿಕೆಯ ಮೂಲ ಗುಣಗಳನ್ನು ತಿಳಿಸಿದ್ದಲ್ಲದೆ, ಹೆಪಾರಿನ್ ಮತ್ತು ಕಿಫಾಲಿನ್ ವಸ್ತುಗಳನ್ನೂ ಕಂಡುಹಿಡಿದನು. ಇನ್ನೂ ಮೇಲಾಗಿ ಅಂಗಕ್ರಿಯೆಶಾಸ್ತ್ರದ ಪಠ್ಯಪುಸ್ತಕವನ್ನು ಬರೆದು ಕೀರ್ತಿ ಗಳಿಸಿದನು. ಈ ಪುಸ್ತಕ ೪೦ ವರ್ಷಗಳ ಕಾಲ ವೈದ್ಯ ವಿದ್ಯಾರ್ಥಿಗಳಿಗೆ ಒತ್ತಾಸೆಯಾಗಿತ್ತು. ಇವರಲ್ಲದೆ, ಜಾನ್ ಹಾಪ್ಕಿನ್ಸ್ ಸಂಸ್ಥೆಗಳಿಗೆ ಕೌನ್ಸಿಲ್ಮನ್, ಮ್ಯಾಕ್ಕಾಲಮ್, ವಾಲ್ಟರ್ ರೀಡ್, ಮ್ಯಾಕ್‌ಕ್ರಿಯೆ, ಹಾರ್ವಿ ಕುಷಿಂಗ್ ಮುಂತಾದವರು ಸಾಕಷ್ಟು ಕೊಡುಗೆ ನೀಡಿ ಘನತೆ ಗೌರವಗಳನ್ನು ಸಂಪಾದಿಸಿದರು.

ಹೀಗೆ ಜರ್ಮನಿ ಸಹಾಯದಿಂದ ಅಮೆರಿಕದ ವೈದ್ಯಶಾಸ್ತ್ರ ಬೆಳೆಯುತ್ತಿದ್ದಾಗ ಫ್ರಾನ್ಸ್ ಮತ್ತು ಬ್ರಿಟನ್‌ಗಳೇನೂ ಹಿಂದಿರಲಿಲ್ಲ. ಫ್ರಾನ್ಸು ತನ್ನ ಮೊದಲ ಸ್ಥಾನವನ್ನು ಕಳೆದುಕೊಂಡಿದ್ದರೂ, ಹಿಂದಿನ ಸಂಪ್ರದಾಯವನ್ನು ಮಾತ್ರ ಕಾಪಾಡಿಕೊಂಡು ಬರುತ್ತಿತ್ತು. ನರವ್ಯೂಹ ಶಾಸ್ತ್ರದಲ್ಲಿ ಯಾರಿಗೂ ತಲೆ ಬಾಗಿಸಿರಲಿಲ್ಲ. ಆರ್ಮಂಡ್ ಡುಷೆನ್ನೆ, ಪಾಲ್ ಬ್ರೋಕ, ಜೀನ್ ಮಾರ್ಟಿನ್ ಷಾರ್ಕೊ ಮುಂತಾದವರು ನರಮಂಡಲದ ಸಂಬಂಧವಾಗಿ ಶ್ರೇಷ್ಠ ಶೋಧನೆಗಳನ್ನು ನಡೆಸಿದರು. ಆಗ ಷಾರ್ಕೊನಷ್ಟು ಪ್ರಸಿದ್ಧಿಯಾಗಿದ್ದವರೇ ಇರಲಿಲ್ಲ. 'ಆಧುನಿಕ ನರಶಾಸ್ತ್ರ ಪ್ರಮುಖವಾಗಿ ಫ್ರೆಂಚ್ ಪರಂಪರೆಯದಾಗಿ, ಷಾರ್ಕೊ ಮತ್ತವನ ಶಿಷ್ಯರ ಮೂಲಕ ಬೊಲೋನಿನ ಡುಷೆನ್ನೆಯಿಂದ ಬಂದಿದೆ'.

ಬ್ರಿಟನ್ನು ಕೂಡ ಸಾಕಷ್ಟು ಮುಂದುವರೆದಿತ್ತು. ಅಂಗರಚನೆ, ಅಂಗಕ್ರಿಯೆ ಮತ್ತು ರೋಗ ಶಾಸ್ತ್ರಗಳಲ್ಲಿ ಜರ್ಮನಿಯಷ್ಟು ಮುಂದಿರದಿದ್ದರೂ, ವೈದ್ಯಶಾಸ್ತ್ರದಲ್ಲಿ ಅನೇಕರು ಘನವಾದ ಕೊಡುಗೆಗಳನ್ನು ನೀಡಿದ್ದರು. ರೋಗಶಾಸ್ತ್ರಜ್ಞರಾದ ವಿಲಿಯಂ ಬೌಮನ್ ಮತ್ತು ಜಿ.ಎಚ್. ಬೆನೆಟ್, ಕೂಡ್ಗರಣಿಕೆ ಮತ್ತು ಅಡಚಿಕೆಗಳಲ್ಲಿ ಪ್ರಸಿದ್ಧಿಯಾಗಿದ್ದ ವಿಲಿಯಂ ಎಸ್. ಕರ್ಕಿಸ್, ನರ ಮಂಡಲದ ಪ್ರಧಾನಿ ಹ್ಯೂಲಿಂಗ್ಸ್ ಜಾಕ್ಸನ್, ಹೃದಯಶಾಸ್ತ್ರದಲ್ಲಿ ಶ್ರೇಷ್ಠನಾದ ವಿಲಿಯಂ ಬ್ರಾಡ್‌ಬೆಂಟ್, ಉಷ್ಣವಲಯದ ರೋಗಗಳ ಪ್ರವೀಣ ಪ್ಯಾಟ್ರಿಕ್ ಮ್ಯಾನ್ಸನ್ ಹಾಗೂ ಕೇಂಬ್ರಿಡ್ಜ್ ಅಂಗಕ್ರಿಯೆಶಾಸ್ತ್ರದ ಮೈಕೇಲ್ ಫಾಸ್ಟರ್ ಇವರೆಲ್ಲ ಯಾರಿಗೂ ಕಡಿಮೆಯಾಗಿರಲಿಲ್ಲ.

೩೫. ವಿಶೇಷ ವೈದ್ಯಶಾಖೆಗಳಾರಂಭ

ಎಲ್ಲಕ್ಕಿಂತಲೂ ಮಿಗಿಲಾಗಿ ೧೯ನೇ ಶತಮಾನದ ಕೊನೇ ಭಾಗದಲ್ಲಿ ವೈದ್ಯಶಾಸ್ತ್ರದ ಅನೇಕ ವಿಶೇಷ ಶಾಖೆಗಳು ಹುಟ್ಟಿಕೊಂಡು ಪ್ರತಿಯೊಂದೂ ಯಾವ ಅಡಚಣೆಯೂ ಇಲ್ಲದೆ ಮುಂದುವರಿಯಲು ಪ್ರಾರಂಭಿಸಿದವು. ವೈದ್ಯಶಾಸ್ತ್ರ, ಶಸ್ತ್ರವೈದ್ಯ ಮೊದಲಿಂದಲೂ ಉತ್ತಮ ಸ್ಥಿತಿಯಲ್ಲಿದ್ದರೂ, ಈಗ ಹೆಚ್ಚು ಪ್ರಗತಿ ಹೊಂದುತ್ತಿದ್ದವು. ಇವುಗಳ ಜೊತೆಗೆ ಉಷ್ಣವಲಯದ ರೋಗಗಳು, ಜೀವಸ್ತುಕರಣದ ರೋಗಗಳು, ಹೃದಯದ ರೋಗಗಳು, ಮಕ್ಕಳ ರೋಗಗಳು, ನರ ಮಂಡಲದ ರೋಗಗಳು ಇತ್ಯಾದಿಗಳ ವಿಶೇಷ ಶಾಖೆಗಳಲ್ಲೆಲ್ಲಾ ವಿಜ್ಞಾನಿಗಳು ಮುಂದುವರಿದು ಅನೇಕ ಶೋಧನೆಗಳನ್ನು ನಡೆಸಿದರು. ಇವುಗಳ ಸಾಲಿನಲ್ಲೇ ನಿರೋಧಕ ವೈದ್ಯ ಕೂಡ ಬೆಳೆದು ಬಂದಿತು. ನಿರೋಧಕ ವೈದ್ಯ ಪುರಾತನ ಕಾಲದಿಂದಲೂ ಅಭಿವೃದ್ಧಿಯಲ್ಲಿದ್ದರೂ ಆಧುನಿಕ ರೀತಿಯಲ್ಲಿ ೧೯ನೇ ಶತಮಾನದಲ್ಲಿ ಮಾತ್ರ ತಲೆ ಹಾಕಿತು. ಸೇನೆ ಮತ್ತು ನೌಕೆ ವೈದ್ಯಗಳ ವಿಭಾಗಗಳು ೧೮ನೇ ಶತಮಾನದಲ್ಲೇ ಫ್ರಾನ್ಸಿನಲ್ಲೂ, ಇಂಗ್ಲೆಂಡಿನಲ್ಲೂ ಸಾಕಷ್ಟು ಬೆಳೆದುಬಂದವು. ಇತರ ದೇಶಗಳಿಗೂ ಹರಡಲೆತ್ನಿಸಿದವು.

ಉಷ್ಣವಲಯದ ರೋಗಗಳ ತಿಳಿವಳಿಕೆ ಹಾಗೂ ಅವುಗಳ ನಿಗ್ರಹಣ

ಉಷ್ಣವಲಯದ ರೋಗಗಳು

ಮಲೇರಿಯ, ಪ್ಲೇಗು, ಸೊಕ್ಕಿನ ಮತ್ತು ವಿಷಮಶೀತ ಜ್ವರಗಳು, ಕಾಲರ, ಭೇದಿ ಮೊದಲಾದ ರೋಗಗಳು ಉಷ್ಣವಲಯದಲ್ಲಿ ಮಾತ್ರ ಇದ್ದವೆಂದು ಹೇಳುವುದು ಸರಿಯಲ್ಲವೆಂದು ಕೆಲವರ ಅಭಿಪ್ರಾಯವಿದೆ. ಏಕೆಂದರೆ ಯೂರೋಪಿನ ಅನೇಕ ಭಾಗಗಳಲ್ಲೂ, ಸಮಶೀತೋಷ್ಣ ಪ್ರದೇಶಗಳೆಂದು ಹೆಸರಾದ ನಾಡುಗಳ ಮುಂದುವರಿದ ಜನಾಂಗಗಳಲ್ಲೂ ಈ ರೋಗಗಳು ಹಾವಳಿ ನಡೆಸುತ್ತಿದ್ದವು. ಆದರೆ ಈ ದೇಶಗಳಲ್ಲಿ ತಕ್ಕ ನಿರೋಧ ಕ್ರಮಗಳನ್ನು ಆಚರಿಸಿದ್ದರಿಂದ ಕ್ರಮೇಣ ಈ ರೋಗಗಳ ಹಾವಳಿ ತಗ್ಗಿ ನಿರೋಧ ಕ್ರಮವಿಲ್ಲದಿದ್ದ ಉಷ್ಣವಲಯದ ದೇಶಗಳಲ್ಲಿ ಯಥಾಸ್ಥಿತಿಯಲ್ಲೇ ಹಾವಳಿ ನಡೆಸುತ್ತಿದ್ದವು. ಈ ಕಾರಣದಿಂದ ಇವನ್ನು ಉಷ್ಣವಲಯದ ರೋಗಗಳೆಂದು ಕರೆಯುಲಾಗಿದೆ. ಭಾರತದ ಪರಿಸ್ಥಿತಿಯನ್ನೇ ಪರೀಕ್ಷಿಸುವುದಾದರೆ, ಈಗ್ಗೆ ೧೫೦ ವರ್ಷಗಳ ಹಿಂದೆ ಹಾವಳಿ ನಡೆಸುತ್ತಿದ್ದ ರೋಗಗಳು ಈಗ ಇಲ್ಲದಂತಾಗಿವೆ. ಮಲೇರಿಯ ಕೆಲವು ಸ್ಥಳಗಳನ್ನು ಬಿಟ್ಟು ಉಳಿದೆಡೆಗಳಲ್ಲೆಲ್ಲಾ ಸಂಪೂರ್ಣವಾಗಿ ನಿರ್ಮೂಲವಾಗಿದೆ.

ಪ್ಲೇಗು ಈಗ ಭಾರತದಲ್ಲಿ ಇಲ್ಲವೇ ಇಲ್ಲವೆನ್ನಬಹುದು. ಸಿಡುಬು ಕೂಡ ನಿರ್ನಾಮ. ವಿಷಮಶೀತ ಜ್ವರ, ಭೇದಿ ಮುಂತಾದ ಕರುಳು ರೋಗಗಳು ಕೊಳಚೆ ಇದ್ದೆಡೆಗಳಲ್ಲಿ ಮಾತ್ರ ಇನ್ನೂ ಪ್ರಬಲವಾಗಿಯೇ ಇವೆ. ದೇಶದ ನೈರ್ಮಲ್ಯ ಹೆಚ್ಚುವ ತನಕ ಈ ರೋಗಗಳು ನಿರ್ಮೂಲವಾಗುವುದಿಲ್ಲ. ಈ ರೋಗಗಳು ಕಣ್ಮರೆಯಾದರೆ ಮಾತ್ರ ದೇಶ ಮುಂದುವರಿದಿದೆ, ನಾಗರಿಕವಾಗಿದೆ ಎನ್ನಬಹುದು.

ವೈಜ್ಞಾನಿಕ ದೃಷ್ಟಿಯಲ್ಲಿ ಈ ರೋಗಗಳನ್ನು ತಡೆಗಟ್ಟಲು ತಕ್ಕ ಕ್ರಮಗಳನ್ನು ೧೯ನೇ ಶತಮಾನದ ಕೊನೆಯಲ್ಲಿ ಮಾತ್ರ ಕೈಗೊಳ್ಳಲಾಯಿತು. ಈ ರೋಗಗಳನ್ನು ತಿಳಿಯಲು ಅನೇಕ ಮಹನೀಯರು ತಮ್ಮ ದೇಹವನ್ನೇ ತ್ಯಾಗ ಮಾಡಿ ಸೇವೆ ಸಲ್ಲಿಸಿದ್ದಾರೆ.

ಮಲೇರಿಯ

ಈ ರೋಗ ಬಹಳ ದಿನಗಳಿಂದಲೂ ಪ್ರಪಂಚದ ಎಲ್ಲಾ ಕಡೆ ಜನರನ್ನು ಪೀಡಿಸುತ್ತಿತ್ತು. ಈಗ ಇದರ ಹಾವಳಿ ಬಹಳ ತಗ್ಗಿದ್ದರೂ ಇನ್ನೂ ಅನೇಕ ಕಡೆಗಳಲ್ಲಿ ಇದ್ದೇ ಇದೆ. ಕೆಟ್ಟ ಗಾಳಿಯ ಸೇವನೆಯಿಂದ ಬರುತ್ತದೆಂದು ಹಿಂದಿನ ಕಾಲದಲ್ಲಿ ನಂಬಿದ್ದರಿಂದ, ಮಲೇರಿಯ ಎಂದು ಹೆಸರಾಗಿದೆ.

ಲೆವಿರಾನ್

ಕಾನ್ಸ್ಟೆಂಟೈನಿನಲ್ಲಿ ಕಾಣೆಯಾಗಿದ್ದ ಫ್ರೆಂಚ್ ಸೈನ್ಯದ ವೈದ್ಯ ಆಲ್ಫೋನ್ಸ್ ಲೆವಿರಾನ್ ೧೮೮೦ರಲ್ಲಿ ಮಲೇರಿಯ ರೋಗದ ವಿದ್ಯಮಾನಗಳನ್ನು ತಿಳಿಯಲು ಪ್ರಯೋಗ ನಡೆಸಿದನು. ಇವನು ಶವ ಪರೀಕ್ಷೆ ನಡೆಸುತ್ತಿದ್ದಾಗ ಈಲಿಯಲ್ಲೂ, ಮಿದುಳಿನ ರಕ್ತನಾಳಗಳಲ್ಲೂ ರಂಗೇರಿದ್ದ ಸೂಕ್ಷ್ಮ ಕಣಗಳನ್ನು ನೋಡಿ, ಆಸಕ್ತಿಯಿಂದ ಹೆಚ್ಚು ಪರಿಚಯ ಮಾಡಿಕೊಂಡು, ಈ ಬಣ್ಣವೇರಿದ ಸೂಕ್ಷ್ಮ ಕಣಗಳ ವಿಷಯವನ್ನು ಪ್ಯಾರಿಸ್ಸಿನ 'ವಿಜ್ಞಾನಗಳ ಅಕಾಡಮಿ' ಎಂಬ ಪತ್ರಿಕೆಯಲ್ಲಿ ಪ್ರಕಟಿಸಿದನು. ಇದನ್ನು ವಿಜ್ಞಾನಿಗಳು ಆದರದಿಂದ ಸ್ವೀಕರಿಸದೆ ಶಂಕಿಸಿದ್ದರು. ಆದರೂ ಲೆವಿರಾನ್ ಎದೆಗುಂದದೆ ತನ್ನ ಸಂಶೋಧನೆಗಳನ್ನು ಮುಂದುವರಿಸಿ, ಚಳಿ ಬಂದಿದ್ದ ರೋಗಿಗಳ ರಕ್ತ ಪರೀಕ್ಷಿಸಿದಾಗೆಲ್ಲಾ ಈ ಬಣ್ಣದ ಸೂಕ್ಷ್ಮ ಕಣಗಳನ್ನು ಗುರುತಿಸಿದನು. ೧೮೮೪ರಲ್ಲಿ ಲೆವಿರಾನ್ ರೋಮ್ ಪಟ್ಟಣಕ್ಕೆ ಹೋಗಿ ಅಲ್ಲಿಯೂ ಮಲೇರಿಯ ರೋಗಿಗಳ ರಕ್ತದಲ್ಲಿ ಈ ಬಣ್ಣದ ಕಣಗಳನ್ನು ಕಂಡ ವಿಷಯವನ್ನು ಬ್ಯಾಸೆಲ್ಲಿ, ಬ್ಯಾಸ್ಟಿಯನೆಲ್ಲಿ, ಸೆಲ್ಲಿ, ಗ್ರಾಸಿ, ಮಾರ್ಷಿಯ ಫಾವ ಮುಂತಾದ ಇಟಲಿ ದೇಶದ ವಿಜ್ಞಾನಿಗಳಿಗೆ ಪರಿಚಯ ಮಾಡಿಕೊಟ್ಟನು.

ಗೋಲ್ಗಿ

೧೮೮೬ ರಲ್ಲಿ ವಿಜ್ಞಾನಿ ಗೋಲ್ಗಿ ಪಡಿಜೀವಿ ರೂಪದ ಮಲೇರಿಯ ರೋಗ

ಕ್ರಿಮಿಗಳನ್ನು ವಿವರಿಸಿದ್ದಲ್ಲದೆ, ಇವು ರಕ್ತವನ್ನು ಹೊಕ್ಕಾಗ ಜ್ವರ ಬರುತ್ತಿದ್ದುದನ್ನೂ ತೋರಿಸಿದನು. ಹಾಗೂ ಮೂಗಡುವಿನ ಮತ್ತು ನಾಲ್ಗಡುವಿನ ಮಲೇರಿಯದಲ್ಲಿ ಎರಡೂ ಬಗೆಯ ಪರಪಿಂಡಿಗಳಿಗಿರುವ ವ್ಯತ್ಯಾಸಗಳನ್ನೂ ತಿಳಿಯಪಡಿಸಿದನು.

ಸೆಲ್ಲಿ ಮತ್ತು ಮಾರ್ಷಿಯ ಫಾವ

೧೮೮೯ ರಲ್ಲಿ ಸೆಲ್ಲಿ ಮತ್ತು ಮಾರ್ಷಿಯ ಫಾವ ಇವೆರಡು ಬಗೆಗಳ ಪರಪಿಂಡಿಗಳ ಜೊತೆಗೆ ಬೇಸಗೆ_ವಸಂತಗಳ ಎಂಬ ಮೂರನೇ ಬಗೆಯ ಪರಪಿಂಡಿಯನ್ನೂ ತೋರಿಸಿದರು. ಆಗ ಸಾಂಕ್ರಾಮಿಕ ರೀತಿಯಲ್ಲಿ ಹರಡುತ್ತಿದ್ದ ಮಲೇರಿಯ ರೋಗವನ್ನು ತಡೆಯಲು ಸೂಕ್ತ ಕ್ರಮಗಳನ್ನು ಕೈಗೊಂಡರು. ಮಲೇರಿಯ ರೋಗದ ಪರಪಿಂಡಿಗಳನ್ನು ಪರೀಕ್ಷಿಸಲು ಅಲ್ಲಿಯ ವರೆವಿಗೆ ಬಿಸಿ ರಕ್ತವನ್ನು ಉಪಯೋಗಿಸುತ್ತಿದ್ದರು.

ರೋಮನಾವ್‌ಸ್ಕಿ

೧೮೯೧ ರಲ್ಲಿ ಈ ಜೀವಿಗಳನ್ನು ಉತ್ತಮ ರೀತಿಯಲ್ಲಿ ಪರೀಕ್ಷಿಸಲು ಅನುಕೂಲವಾದ ಬಣ್ಣಗೂಡಿಸುವ ವಿಧಾನವನ್ನು ಸೆಂಟ್ ಪೀಟರ್ಸ್‌ಬರ್ಗಿನ ಡಿಮಿಟ್ರಿ ರೋಮನಾವ್‌ಸ್ಕಿ ಪತ್ತೆಹಚ್ಚಿದನು.

ಸರ್ ಪ್ಯಾಟ್ರಿಕ್ ಮ್ಯಾನ್ಸನ್

ಲೆವಿರಾನಿನ ಸಂಶೋಧನೆ ಬಹಳ ಕಾಲ ಸಂದೇಹದಲ್ಲೇ ಇತ್ತು. ಇದನ್ನು ಸಮರ್ಥಿಸಲು ಅನೇಕರು ಶೋಧನೆಗಳನ್ನು ನಡೆಸುತ್ತಲೇ ಇದ್ದರು. ಆಸ್ಲರ್ ೧೮೯೨ರ ಮುದ್ರಣದ ತನ್ನ ವೈದ್ಯಶಾಸ್ತ್ರ ಪಠ್ಯ ಪುಸ್ತಕದಲ್ಲಿ,ಮಲೇರಿಯ ವಿವರಣೆ ಸಂದರ್ಭದಲ್ಲಿ ಈ ಶೋಧನೆಯನ್ನು ಸಮರ್ಥಿಸದೆ ಯಾರೂ ಸುಮ್ಮನಿರಲಾರರೆಂದು ತಿಳಿಸಿದ್ದನು. ಹಾಗೂ ಈ ಪರಪಿಂಡಿಯ ಇನ್ನೂ ಅನೇಕ ವಿಷಯಗಳು ಬೆಳಕಿಗೆ ಬಂದಿಲ್ಲವೆಂದೂ ತಿಳಿಸಿದ್ದನು. ಮಲೇರಿಯ ಹರಡುವಿಕೆಗೆ ಸೊಳ್ಳೆಗಳೇ ಕಾರಣವೆಂದು ೧೮೮೪ ರಲ್ಲೇ ಲೆವಿರಾನ್ ತಿಳಿಸಿದ್ದನು. ಅಷ್ಟಲ್ಲೇ, ಸೊಳ್ಳೆಗಳಿಂದ ಫೈಲೇರಿಯ ರೋಗ ಹರಡುತ್ತದೆಂದು ಸರ್ ಪ್ಯಾಟ್ರಿಕ್ ಮ್ಯಾನ್ಸನ್ ಚೀನದಲ್ಲಿ ಬಹಿರಂಗಪಡಿಸಿದ್ದನು.

ರೊನಾಲ್ಡ್ ರಾಸ್

ಇವನು ಇಂಗ್ಲೆಂಡಿಗೆ ಹಿಂತಿರುಗಿದನಂತರ, ಇವನಂತೆಯೇ ಇಂಡಿಯಾದಿಂದ ಹಿಂತಿರುಗಿದ್ದ ರೊನಾಲ್ಡ್ ರಾಸ್‌ಗೆ ೧೮೯೪ ರಲ್ಲಿ ಸೊಳ್ಳೆಗಳಿಂದ ಮಲೇರಿಯ ಹಬ್ಬುವುದನ್ನು ಅರಿಯಲು ಉತ್ತೇಜನ ಕೊಟ್ಟಿದ್ದನು. ಇಂಡಿಯದ ವೈದ್ಯ ಸೇವೆಯಲ್ಲಿ ಕೆಲಸ ಮಾಡುತ್ತಿದ್ದಾಗ, ೧೩ ವರ್ಷ ಮಲೇರಿಯ ರೋಗದ ವಿಷಯದಲ್ಲಿ ಪ್ರಯೋಗ ನಡೆಸಿದರೂ ಮಲೇರಿಯ ರೋಗದ ಪರಪಿಂಡಿಯನ್ನು ರಾಸ್ ನೋಡಿರಲೇ ಇಲ್ಲ. ಚೇರಿಂಗ್ ಕ್ರಾಸ್ ಆಸ್ಪತ್ರೆಯಲ್ಲಿ ಮ್ಯಾನ್ಸನ್ ಒಬ್ಬ ಮಲೇರಿಯ ರೋಗಿಯ ರಕ್ತವನ್ನು ಪರೀಕ್ಷೆ ಮಾಡುತ್ತಿದ್ದಾಗ ಕಂಡ ಮಲೇರಿಯ ಪರಪಿಂಡಿಯನ್ನು ರಾಸ್‌ಗೆ

ರೋಗ ಹರಡುವುದರಲ್ಲಿ ಸೊಳ್ಳೆಯ ಪಾತ್ರವನ್ನು ವಿವರಿಸಿದನು. ಇದರಿಂದ ಪ್ರೇರಿತನಾಗಿ, ಬಹಳ ಆಸಕ್ತಿಯಿಂದ ಕೆಲಸ ಮಾಡಿ, ೧೮೯೭ರಲ್ಲಿ ಮಲೇರಿಯದ ರೋಗಿಯ ರಕ್ತ ಹೀರಿದ್ದ ಅನಾಫಿಲಿಸ್ ಸೊಳ್ಳೆಯ ಹೊಟ್ಟೆಯಲ್ಲಿ ಮಲೇರಿಯ ಪರಪಿಂಡಿ ಇರುವುದನ್ನು ರಾಸ್ ತೋರಿಸಿದನು.

ಮ್ಯಾಕ್ಕಲಮ್

ಅದೇ ವರ್ಷ ಜಾನ್ ಹಾಪ್ಕಿನ್ಸ್ ಆಸ್ಪತ್ರೆಯ ಮ್ಯಾಕ್ಕಲಮ್ ಮಲೇರಿಯ ಪರಪಿಂಡಿಯ ಕಶಾಂಗವನ್ನು ವಿವರಿಸಿ ಅದು ಮಲೇರಿಯ ಪರಪಿಂಡಿಯ ಲಿಂಗ ರೂಪವೆಂದು ತಿಳಿಸಿದ್ದನು. ೧೮೯೮ ರಲ್ಲಿ ಅದೇ ಪರಪಿಂಡಿಯನ್ನು ಅನಾಫಿಲಿಸ್ ಸೊಳ್ಳೆಯ ಜೊಲ್ಲು ಗ್ರಂಥಿಯಲ್ಲಿ ರಾಸ್ ತೋರಿಸಿದ್ದನು. ಈ ಶುಭವಾರ್ತೆಯಿಂದ ಮ್ಯಾನ್ಸನ್ನಿಗೆ ಬಹಳ ಸಂತೋಷವಾಯಿತು.

ಡಾ. ಸಾಂಬನ್

ಈ ಶೋಧನೆಯನ್ನು ಮತ್ತಷ್ಟು ಸಮರ್ಥಿಸಲು ಇಟಲಿಯ ಡಾ. ಸಾಂಬನ್ ಕಳುಹಿಸಿದ್ದ ಮಲೇರಿಯದ ಸೊಂಕು ಹತ್ತಿದ್ದ ಸೊಳ್ಳೆಗಳಿಂದ ಮ್ಯಾನ್ಸನ್ನನ ಮಗ ತುರ್ಬರ್ನ್ ಕಚ್ಚಿಸಿಕೊಂಡು, ಕಚ್ಚಿದ ಎರಡು ವಾರಗಳನಂತರ ಮಲೇರಿಯ ಜ್ವರದಿಂದ ನರಳಿದನು. ಗ್ರಾಸಿ ಮತ್ತು ಬಿಗ್ನಾಮಿ ಕೂಡ ಇದೇ ರೀತಿ ಪ್ರಯೋಗಗಳನ್ನು ನಡೆಸಿದರು. ಆದರೆ ಮಲೇರಿಯ ಜ್ವರ ತುಂಬಿ ತುಳುಕುತ್ತಿದ್ದ ಪ್ರದೇಶಗಳಲ್ಲಿ ಈ ಪ್ರಯೋಗಗಳನ್ನು ನಡೆಸದ್ದರಿಂದ ಮ್ಯಾನ್ಸನ್ನನ ಪ್ರಯೋಗಗಳಷ್ಟು ಇವು ಉತ್ತಮವಾಗಿರಲಿಲ್ಲ. ಡಾ. ಸಾಂಬನ್, ಡಾ. ಲೊ ಮತ್ತು ಸ್ನೇಹಿತನಾದ ಟೆರ್ಜಿ ಮೂವರೂ ಮಲೇರಿಯ ಸೊಂಕಿರುವ ಪ್ರದೇಶದಲ್ಲೇ ಸೊಳ್ಳೆಗಳ ಕಾಟವಿಲ್ಲದಿರುವ ಗುಡಿಸಲುಗಳಲ್ಲಿ ವಾಸ ಮಾಡಿ ಮಲೇರಿಯ ಬಾರದಿರುವುದನ್ನು ತೋರಿಸಿದರು. ಈ ಪ್ರಯೋಗಗಳೆಲ್ಲಾ ಮಲೇರಿಯ ರೋಗಕ್ಕೂ ಸೊಳ್ಳೆಗೂ ಇರುವ ಬಾಂಧವ್ಯವನ್ನು ವ್ಯಕ್ತಪಡಿಸಿದವು.

ಕ್ಯುಲೆಕ್ಸ್ ಮತ್ತು ಈಡಿಸ್ ಸೊಳ್ಳೆಗಳು ಮಲೇರಿಯ ಜ್ವರಕ್ಕೆ ಕಾರಣವಲ್ಲವೆಂದೂ, ಅನಾಫಿಲಿಸ್ ಸೊಳ್ಳೆಗಳೇ ಕಾರಣವೆಂದೂ, ಇವುಗಳ ಜಠರದ ಪರೆಯಲ್ಲಿ ಮಲೇರಿಯ ಪರಪಿಂಡಿ ಬೆಳೆಯುತ್ತದೆಂದೂ, ೧೮೯೭ನೇ ಏಪ್ರಿಲ್‌ನಲ್ಲಿ ರಾಸ್ ಪತ್ತೆಹಚ್ಚಿದನು. ಆದೇ ವರ್ಷದ ಬೇಸಿಗೆಯಲ್ಲಿ ಮ್ಯಾಕ್ಕಲಮ್ ಮೊಟ್ಟಮೊದಲಿಗೆ ಗಂಡು ಕೂಟಜೀಕಣದ ಮೈಯಿಂದ ಕಶಾಂಗಗಳು, ಅಂದರೆ ಗಂಡು ಕೂಟಕಣಗಳು ಹೊರಗೆ ಬರುತ್ತಿರುವುದನ್ನು ಕಂಡುಹಿಡಿದುದಲ್ಲದೆ, ಈ ಗಂಡು ಕೂಟಕಣ ಸ್ತ್ರೀ ಕೂಟಕಣವನ್ನು ಕೂಡಿ ಗರ್ಭ ಮೂಡಿಸುತ್ತಿರುವುದನ್ನು ಕೂಡ ಸೂಕ್ಷ್ಮದರ್ಶಕದಲ್ಲಿ ನೋಡಿದ್ದನು. ಈ ಮೂಲಕ ಮಲೇರಿಯ ಪರಪಿಂಡಿಯ ಜೀವಚಕ್ರದಲ್ಲಿ ಲಿಂಗದವತಾರವಿರುವುದನ್ನು ವ್ಯಕ್ತಪಡಿಸಿದನು. ಅನಂತರ ರಾಸ್ ಕಲ್ಕತ್ತದಲ್ಲಿ, ಹಕ್ಕಿ ಮಲೇರಿಯ ಜ್ವರಕ್ಕೆ

ಕಾರಣವಾದ ಕ್ಯುಲೆಕ್ಸ್ ಸೊಳ್ಳೆಗಳಲ್ಲಿ ಮಲೇರಿಯ ಪರಪಿಂಡಿಯ ಎಲ್ಲಾ ರೂಪಗಳನ್ನೂ ಪರೀಕ್ಷೆ ಮಾಡಿದ್ದಲ್ಲದೆ, ಪರಪಿಂಡಿಯ ತತ್ತಿಚೀಲ ಒಡೆದು ಬೀಜಕಣಜೀವಿಗಳು ಬಿಡುಗಡೆಯಾಗುವುದನ್ನೂ, ಇವು ಸೊಳ್ಳೆಯ ಜೊಲ್ಲು ಗ್ರಂಥಿ ಸೇರುವುದನ್ನೂ ತೋರಿಸಿದನು. ಇವನ ಈ ಶಕ್ತಿಸಾಮರ್ಥ್ಯಗಳನ್ನು ಮೆಚ್ಚಿ, ೧೯೦೨ ರಲ್ಲಿ ನೊಬೆಲ್ ಬಹುಮಾನವನ್ನು ವಿಕ್ಕವರೊಂದಿಗೆ ಕೊಡಲಾಯಿತು.

ಹೀಗಿರುವಾಗ, ೧೮೯೮ರಲ್ಲಿ ಇಟಲಿಯ ಬಿಗ್ನಾಮಿ, ಬ್ಯಾಸ್ಟಿಯನೆಲ್ಲಿ ಮತ್ತು ಗ್ರಾಸಿ ಪ್ಲಾಸ್ಮೊಡಿಯ ವಾಲ್ಸಿಪಾರಮ್ ಪ್ಲಾ.ಮಲೇರಿಯೆ ಮತ್ತು ಪ್ಲಾ.ವೈವಾಕ್ಸ್‌ಗಳ ರೂಪಗಳನ್ನೆಲ್ಲಾ ಪ್ರಕಟಿಸಿದ್ದರು. ಆದರೂ ಸೊಂಕಿದ್ದ ಸೊಳ್ಳೆ ಕಡಿದ ಅರ್ಧ ಗಂಟೆ ಕಾಲ ಪುನಃ ರೋಗಿಗೆ ಜ್ವರ ಬರುವ ವರೆವಿಗೆ ಪರಪಿಂಡಿಗಳು ಇರುವ ಜಾಗವನ್ನು ತಿಳಿದಿರಲಿಲ್ಲ. ಈ ಅರ್ಧ ಘಂಟೆಯಲ್ಲಿ ಪರಪಿಂಡಿಗಳು ಈಲಿಯಲ್ಲಿ ಸೇರಿ ಅಲ್ಲೇ ಬೆಳೆಯುತ್ತಿರುವುದನ್ನು ಎರಡನೇ ಯುದ್ಧದ ಕೊನೆಯಲ್ಲಿ ಹೆನ್ರಿ ಎಡ್ವರ್ಡ್ ಷಾರ್ಟ್ ಮತ್ತು ಪರ್ಸಿವಲ್ ಕ್ಲಾಡ್ ಗಾರ್ನ್ಹಾಮ್ ಪತ್ತೆಹಚ್ಚಿದರು. ಸರ್ ಹ್ಯಾಮಿಲ್ಟನ್ ಫೇರ್ಲಿ ಕೂಡ ಈ ಪ್ರಯೋಗಗಳಲ್ಲಿ ಭಾಗವಹಿಸಿದ್ದನು.

ಹಳದಿ ಜ್ವರ

ಅಮೆರಿಕದಲ್ಲಿ ಕೊಲಂಬಸನ ಕಾಲದಿಂದಲೂ ಆಗಾಗ್ಗೆ ಸಾಂಕ್ರಾಮಿಕವಾಗಿ ಕಾಣಿಸಿಕೊಳ್ಳುತ್ತಿದ್ದ ಹಳದಿ ಜ್ವರ ಈಗ ಕಾಣದಂತಾಗಿದೆ. ೧೮೯೩ರಲ್ಲೇ ಸಾಂಟೊ ಡೊಮಿಂಗೋದಲ್ಲಿ ಹಳದಿ ಜ್ವರ ತಲೆಹಾಕಿತ್ತು. ೧೭೯೩ರಲ್ಲಿ, ೪೦,೦೦೦ ಜನರಿದ್ದ ಫಿಲಡೆಲ್ಫಿಯದಲ್ಲಿ ೪೦೪೧ ಜನರು ಹಳದಿ ಜ್ವರಕ್ಕೆ ತುತ್ತಾದರು. ೧೮೭೦ರಲ್ಲಿ ನೆಪೋಲಿಯನ್ ಸೈನ್ಯ ವೆಸ್ಟ್ ಇಂಡೀಸನ್ನು ಮುತ್ತಿದಾಗ ಸೈನ್ಯವೆಲ್ಲಾ ಈ ರೋಗಕ್ಕೀಡಾಗಿ ನಿರ್ಮೂಲವಾಯಿತೆಂದು ಹೇಳಲಾಗಿದೆ.

ಕಾರ್ಲಾಸ್ ಫಿಂಡ್ಲೆ

ಹೀಗೆ ಹಾವಳಿ ನಡೆಯುತ್ತಿದ್ದಾಗ, ೧೮೮೧ರಲ್ಲಿ ಕ್ಯೂಬ ವೈದ್ಯ ಕಾರ್ಲಾಸ್ ಫಿಂಡ್ಲೆ ಹಳದಿ ಜ್ವರ ಹರಡಲು ಸೊಳ್ಳೆಗಳು ಕಾರಣವೆಂದು ನುಡಿದು ಅಮೆರಿಕದ ವೈದ್ಯಶಾಸ್ತ್ರದ ಪತ್ರಿಕೆಯಲ್ಲಿ ಪ್ರಕಟಿಸಿದನು. ಆದರೆ ಅವನ ಅಭಿಪ್ರಾಯ ಅಷ್ಟು ಹಿತವಾಗಿರಲಿಲ್ಲ. ೧೯೦೦ರಲ್ಲಿ ಸ್ಪೇನಿಗೂ ಅಮೆರಿಕಕ್ಕೂ ಆದ ಯುದ್ಧದಲ್ಲಿ ಹಳದಿ ಜ್ವರದಿಂದ ಹವಾನ ಬಹು ನಷ್ಟ ಪಡಬೇಕಾಯಿತು ಆಗ ವಾಲ್ಟರ್ ರೀಡ್, ಜೇಮ್ಸ್ ಕೆರೋಲ್, ಜೆಸ್ಸಿ ಲಾಸಿಯರ್ ಮತ್ತು ಆರಿಸ್ಟಿಡೆಸ್ ಆಗ್ರಮೆಂಟೆ ಇವರಿದ್ದ ಹಳದಿ ಜ್ವರದ ಸಂಸ್ಥೆಯೊಂದನ್ನು ಸ್ಥಾಪಿಸಲಾಗಿತ್ತು. ಹಾಗೂ ಹವಾನದ ಆರೋಗ್ಯಾಧಿಕಾರಿ ಮೇಜರ್ ಡಬ್ಲಿಯು. ಸಿ. ಗೊರ್ಗಾಸ್, ಮತ್ತು ಸೊಳ್ಳೆಯ ಪಾತ್ರವನ್ನು ಮುಂದಿಟ್ಟಿದ್ದ ಕಾರ್ಲಾಸ್ ಫಿಂಡ್ಲೆಯ ಸಹಾಯವನ್ನೂ ತೆಗೆದುಕೊಳ್ಳಲಾಯಿತು. ಈ ಸಂಸ್ಥೆ ಹಳದಿ ಜ್ವರ ಹರಡಲು ಸೊಳ್ಳೆಯೇ ಕಾರಣವೆಂದೂ, ಆ ಸೊಳ್ಳೆ, ಈಡಿಸ್ ಈಜಿಪ್ಟೈ ಎಂಬು

ದೆಂದೂ ಸ್ಥಿರಪಡಿಸಿದರು. ರೋಗಿ ಮುಟ್ಟಿದ್ದರಿಂದಾಗಲೀ, ಉಗುಳು ಗಲೀಜು ಗಳಿಂದಾಗಲೀ ರೋಗ ಬರುವುದಿಲ್ಲವೆಂದೂ ತಿಳಿಸಿದರು. ಪ್ರಯೋಗಗಳನ್ನು ನಡೆಸು ತ್ತಿದ್ದಾಗ, ರೋಗದ ಸೊಳ್ಳೆಯಿಂದ ಕಚ್ಚಿಸಿಕೊಂಡಿದ್ದ ಕೆರೋಲ್ ಹಳದಿ ಜ್ವರದಿಂದ ನರಳಿ ಬಿಡುಗಡೆಯಾಗಿದ್ದನು. ಆದರೆ ಆಕಸ್ಮಾತ್ತಾಗಿ ಕಚ್ಚಿಸಿಕೊಂಡಿದ್ದ ಲಾಸಿಯರ್ ರೋಗಕ್ಕೆ ಬಲಿಯಾದನು. ಸೊಳ್ಳೆಯ ಪಾತ್ರ ಸ್ಥಿರವಾದನಂತರ, ೧೫೦ ವರ್ಷ ಹಾವಳಿ ನಡೆಸಿದ್ದ ಹಳದಿ ಜ್ವರವನ್ನು ಕೇವಲ ಮೂರು ತಿಂಗಳಲ್ಲಿ ಸೊಳ್ಳೆಗಳನ್ನು ನಿರ್ಮೂಲ ಮಾಡಿ ಹವಾನ ಪ್ರದೇಶದಲ್ಲಿ ರೋಗವಿಲ್ಲದಂತೆ ಮಾಡಲಾಯಿತು. ಪನಾಮ ಕಾಲುವೆ ಕಟ್ಟುವಾಗಲೂ ಹಳದಿ ಜ್ವರದ ಹಾವಳಿ ಇಲ್ಲದಂತೆ ನೋಡಿಕೊಳ್ಳಲಾಗಿತ್ತು.

ಬ್ರೂಸ್

ನಿದ್ದೆಯ ಬೇನೆ ಅಥವಾ ಬೈರೊಡಲಿಬೇನೆ ಈಗಲೂ ಆಫ್ರಿಕದಲ್ಲಿ ಇದ್ದೇ ಇದೆ. ಜ್ವರ, ಹಾಲ್ರಸ ಗ್ರಂಥಿಗಳ ಊತ, ಗಾಢ ನಿದ್ರೆ ಈ ರೋಗದ ಮುಖ್ಯ ಗುಣಗಳು. ಟ್ರೈಪಾನೊಸೋಮ್ ಎಂಬ ಪರಪಿಂಡಿಯೇ ಈ ರೋಗಕ್ಕೆ ಕಾರಣ. ಇದು ಮೀನು, ಕಪ್ಪೆ, ಇಲಿ, ಕುದುರೆ, ಒಂಟೆ ಮುಂತಾದ ಪ್ರಾಣಿಗಳಲ್ಲೂ ಮನುಷ್ಯನಲ್ಲೂ ರೋಗ ಬರಿಸುತ್ತಿದ್ದುದನ್ನು ವಾಲೆಂಟಿನ್, ಗ್ರೂಬಿ, ಲೆವಿಸ್, ಇವಾನ್ಸ್, ಅಟ್ಕಿನ್ಸನೇ ಮುಂತಾದ ವಿಜ್ಞಾನಿಗಳು ಪತ್ತೆ ಹಚ್ಚಿದರು. ಆಫ್ರಿಕದ ಕೆಲವು ಭಾಗಗಳಲ್ಲಿ ಜಾನು ವಾರುಗಳಿಗೆ ಈ ರೋಗ ತಗುಲಿ ನಷ್ಟವಾಗುತ್ತಿತ್ತು. ಆಗ ಬ್ರೂಸ್ ಆ ಪ್ರಾಣಿಗಳ ರಕ್ತದಲ್ಲಿ ಬೈರೊಡಲಿಗಳನ್ನು ನೋಡಿದ್ದಲ್ಲದೆ, ಸೆಟ್ಸೆ ನೊಣದ ಕಡಿತದಿಂದ ರೋಗ ಹರಡುತ್ತದೆಂದೂ ಕಂಡುಹಿಡಿದನು.

ಜೊಸೆಫ್ ಡಟ್ಟನ್

ರೋಗಿಯ ರಕ್ತದಲ್ಲಿ ಈ ಪರಪಿಂಡಿಗಳಿರುವುದನ್ನು ೧೯೦೨ರಲ್ಲಿ ಜೊಸೆಫ್ ಎವೆರೆಟ್ ಡಟ್ಟನ್ ಲಿವರ್‌ಪೂಲಿನ ಉಷ್ಣವಲಯದ ವೈದ್ಯಶಾಲೆಯಲ್ಲಿ ಪತ್ತೆ ಹಚ್ಚಿದನು.

ಆಲ್ಡೊ ಕ್ಯಾಸ್ಟಲ್ಲಾನಿ

ಈ ಮಧ್ಯೆ ಉಗಾಂಡದಲ್ಲಿ, ನಿದ್ದೆ ಬೇನೆಯಿಂದ ಬಹಳ ಜನರು ಸಾಯುತ್ತಿದ್ದು ದನ್ನು ನೋಡಿ, ಬ್ರಿಟಿಷ್ ಸರ್ಕಾರ ಕತ್ಬರ್ಟ್ ಕ್ರಿಸ್ಟಿ, ಜಾರ್ಜ್ ಕಾರ್ಮಿಕೆಲ್ ಲೊ ಮತ್ತು ಆಲ್ಡೊ ಕ್ಯಾಸ್ಟಲ್ಲಾನಿ ಇವರನ್ನೊಳಗೊಂಡ ರಾಜ ಸಂಘದ ನಿಯೋಗ ವೊಂದನ್ನು ರೋಗದ ಬಗೆ ಹರಿಸಲು ಕಳುಹಿಸಿತು. ೧೯೦೨ರ ಜುಲೈ ತಿಂಗಳಲ್ಲಿ ಈ ನಿಯೋಗ ಉಗಾಂಡಕ್ಕೆ ಬಂದಾಗ, ನವೆಂಬರಿನಲ್ಲಿ ಮಿದುಳು ಬೆನ್ನುಹುರಿ ದ್ರವದಲ್ಲಿ ಬೈರೊಡಲಿ ಇರುವುದನ್ನು ಆ ನಿಯೋಗದ ಸದಸ್ಯ ಕ್ಯಾಸ್ಟಲ್ಲಾನಿ ಕಂಡುಹಿಡಿದನು. ೧೯೦೩ರಲ್ಲಿ ರಾಜ ಸಂಘದ ಎರಡನೆಯ ನಿಯೋಗದ ಬ್ರೂಸ್ ಮತ್ತು ಡೇವಿಡ್ ನಬಾರ್ರೊ ಪ್ರಯೋಗಗಳನ್ನು ಮುಂದುವರಿಸಿ,ಬೈರೊಡಲಿ ಕ್ರಿಮಿ ಮಿದುಳು ಬೆನ್ನುಹುರಿ ದ್ರವದಲ್ಲಿರುವುದನ್ನೂ ರಕ್ತದಲ್ಲಿರುವುದನ್ನೂ, ನಿದ್ದೆಬೇನೆಗೂ ಸೆಟ್ಸೆ ನೊಣಗಳಿಗೂ

ಇರುವ ಸಂಬಂಧವನ್ನೂ ಸ್ಥಿರಪಡಿಸಿದರು. ಇವರ ಅನಂತರ ಇನ್ನೂ ಅನೇಕ ಮಹನೀಯರು ಈ ರೋಗದ ಇತರ ವಿಷಯಗಳನ್ನೂ ಕಂಡುಹಿಡಿದರು.

ಲೀಷ್ಮನ್‌ಬೇನೆ ಅಥವಾ ಕಾಳ ಜ್ವರ

ಲೀಷ್ಮನ್–ಡಾನೊವನ್

ಲೀಷ್ಮನ್ ಬೇನೆಗೆ ಕಾರಣವಾದ ಪರಪಿಂಡಿಯನ್ನು ೧೯೦೦ರಲ್ಲಿ 'ಡಮ್ ಡಮ್' ಜ್ವರದ ರೋಗಿಯೊಬ್ಬನಲ್ಲಿ ಲೀಷ್ಮನ್ ಕಂಡುಹಿಡಿದಿದ್ದನು. ಆದರೆ ಅವನು ೧೯೦೩ರ ಮೇ ತಿಂಗಳ ವರೆವಿಗೂ ಪ್ರಕಟಿಸಿರಲಿಲ್ಲ. ಜುಲೈ ತಿಂಗಳಲ್ಲಿ ಮದ್ರಾಸ್‌ನಲ್ಲಿ ಕೆಲಸ ಮಾಡುತ್ತಿದ್ದ ಚಾರ್ಲ್ಸ್ ಡಾನೊವನ್ ಅದೇ ಪರಪಿಂಡಿಯನ್ನು ವಿವರಿಸಿ ಅದಕ್ಕೆ ಲೀಷ್ಮೇನಿಯ ಡಾನೊವನಿ ಎಂದು ಹೆಸರಿಟ್ಟನು. ಅದೇ ವರ್ಷ, ದೆಹಲಿ ಕುರುವಿಗೆ ಕಾರಣವಾದ ಲೀಷ್ಮೇನಿಯ ಟ್ರಾಪಿಕ ಪರಪಿಂಡಿಯನ್ನು ಜೇಮ್ಸ್ ಹೋಮರ್ ರೈಟ್ ಪತ್ತೆಹಚ್ಚಿ ವಿವರಿಸಿದನು. ಈ ಪರಪಿಂಡಿಯನ್ನು ರಷ್ಯದ ಪೀಟರ್ ಬೊರೊವಿಸ್ಕಿ ೫ ವರ್ಷದ ಹಿಂದೆಯೇ ಕಂಡುಹಿಡಿದಿದ್ದನು.

ರೋಜರ್ಸ್

೧೯೦೪ರಲ್ಲಿ ಸರ್ ಲಿಯೊನಾರ್ಡ್ ರೋಜರ್ಸ್ ಲೀಷ್ಮನ್–ಡಾನೊವನ್ ಕಾಯಗಳನ್ನು ಸಾಕಣೆ ಮಾಡಿ, ಈ ಗುಂಡು ಪರಪಿಂಡಿ ಕಾರ್ಯವಾಸಿಯೇ ಬೈರೊಡಲಿ ರೂಪ ತಾಳುವುದೆಂದು ವ್ಯಕ್ತಪಡಿಸಿದನು. ೧೯೧೧ರಲ್ಲಿ ಚಾರ್ಲ್ಸ್ ಮೊರ್ಲೆ ವೆನ್ಯಾನ್ ಚರ್ಮದ ಲೀಷ್ಮನ್ ಬೇನೆಯನ್ನು ಮರಳು ಚಿಗಟ ಅಥವಾ ಮೀನಮಶಕ ಹರಡುತ್ತದೆಂದು ಗೊತ್ತುಮಾಡಿದನು.

ಪ್ಲೇಗು ಪ್ರಪಂಚದಲ್ಲಿ ಇದರಂತಹ ಹಾವಳಿ ನಡೆಸಿದ ರೋಗ ಇನ್ನಾವುದೂ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಇದಕ್ಕೆ ಉಷ್ಣವಲಯದ ರೋಗವೆಂದು ಹೆಸರಿದ್ದರೂ ಪ್ರಪಂಚದ ಎಲ್ಲಾ ಕಡೆಗಳಲ್ಲೂ ಹಾವಳಿ ಉಂಟುಮಾಡಿದೆ. ಕ್ರಿ. ಪೂ. ೪೩೦ರಲ್ಲಿ ಅಥೆನ್ಸ್ ನಗರದಲ್ಲೂ, ೫೪೨ರಲ್ಲಿ ಜಸ್ಟಿನಿಯನ್‌ನಲ್ಲೂ, ೧೩೪೮ರಲ್ಲಿ ಮಹಾಮಾರಿ ಎಂಬ ಹೆಸರಿನಲ್ಲಿ ಯೂರೋಪಿನಲ್ಲೂ, ೧೬೬೫ರಲ್ಲಿ ಲಂಡನ್ನಿನಲ್ಲೂ, ೧೮೯೪ರಲ್ಲಿ ಕ್ಯಾಂಟನ್ನಲ್ಲೂ, ೧೮೯೫ರಲ್ಲಿ ಭಾರತದಲ್ಲೂ ಅತಿ ನಷ್ಟ ಉಂಟುಮಾಡಿತ್ತು. ಈ ಕಾಳಮಾರಿ ಯೂರೋಪಿನ ಅರ್ಧ ಜನಸಂಖ್ಯೆಯನ್ನೇ ನಿರ್ಮೂಲ ಮಾಡಿತು. ಲಂಡನ್ನಿನ ಮಹಾಪ್ಲೇಗು ಸಾವಿರಾರು ಮರಣಕ್ಕೆ ಕಾರಣವಾಯಿತು. ಕ್ಯಾಂಟನ್ನಿನಲ್ಲಿ ೧೦೦,೦೦೦ ಸಾವುಗಳಿಗೂ, ಭಾರತದಲ್ಲಿ ಒಂದು ವರ್ಷ ೧,೩೦೦,೦೦೦ ಸಾವುಗಳಿಗೂ ಕಾರಣವಾಗಿತ್ತು.

ಕಿಟಸಾಟೊ ಮತ್ತು ಯರ್ಸಿನ್

ಪ್ಲೇಗು ರೋಗಾಣುವನ್ನು ಕಿಟಸಾಟೊ ಮತ್ತು ಯರ್ಸಿನ್ ೧೮೯೪ರಲ್ಲಿ ಕಂಡು

ಹಿಡಿದು ವಿವರಿಸಿದ್ದರೂ ರೋಗ ಹರಡುವ ರೀತಿ ತಿಳಿದಿರಲಿಲ್ಲ. ಕೆಲವು ಪುರಾತನ ಕೃತಿಗಳಲ್ಲಿ ಪ್ಲೇಗಿಗೂ ಇಲಿಗಳಿಗೂ ಇರುವ ಸಂಬಂಧ ವಿವರಿಸಿರುವುದನ್ನು ತಿಳಿದು, ಹಾಗೂ ಚೀನಾದಲ್ಲಿ ಹಾಲಿ ರೋಗ ಬರಲು ಇಲಿಗಳ ಪಾತ್ರ ಸಂಶಯವಿದ್ದರಿಂದಲೂ, ೧೮೯೮ರಲ್ಲಿ ರೋಗ ಹರಡಲು ಇಲಿ ಚಿಗಟ ಕಾರಣವಿರಬಹುದೆಂದು ಪಾಲ್ ಲೂಯಿ ಸಿಮಂಡ್ ಸೂಚಿಸಿದ್ದನು. ಆದರೂ, ಇಲಿಯ ಮೇಲಿನ ಚಿಗಟ ಹೇಗೆ ರೋಗ ಬರಿಸುತ್ತದೆ ಎಂಬುದು ಸಂಶಯವಾಗಿಯೇ ಉಳಿದಿತ್ತು.

ಬಾಕಟ್ ಮತ್ತು ಮಾರ್ಟಿನ್

೧೯೧೪ರಲ್ಲಿ ಆರ್ಥರ್ ವಿಲಿಯಂ ಬಾಕಟ್ ಮತ್ತು ಸರ್ ಚಾರ್ಲ್ಸ್ ಮಾರ್ಟಿನ್ ರೋಗವಿದ್ದ ಇಲಿಯ ರಕ್ತವನ್ನು ಸೇವಿಸಿದ್ದ ಚಿಗಟ ಮನುಷ್ಯನನ್ನು ಕಚ್ಚುವುದರಿಂದ ರೋಗ ಉಂಟಾಗುತ್ತದೆಂದು ಸ್ಥಿರಪಡಿಸಿದರು. ಮುಂದೆ ಸಾಗದೆ ಚಿಗಟದ ಜಠರದಲ್ಲೇ ತಂಗಿದ್ದ ಪ್ಲೇಗ್ ರೋಗಾಣುಗಳು, ಮನುಷ್ಯನನ್ನಾಗಲೀ, ಇಲಿಯನ್ನಾಗಲೀ ಚಿಗಟ ಕಚ್ಚಿದಾಗ, ಕಚ್ಚಿದ ಗಾಯದೊಳಕ್ಕೆ ಕಕ್ಕಿ ಹರಿಸುತ್ತದೆಂದೂ ತೀರ್ಮಾನಿಸಿದರು. ಇಲಿಗಳನ್ನು ನಿರ್ಮೂಲ ಮಾಡುವುದರಿಂದ ಪ್ಲೇಗೂ ನಿರ್ಮೂಲವಾಗುತ್ತದೆಂದು ಆಗ ತಾನೇ ಜ್ಞಾನೋದಯವಾಯಿತು.

ಜೀವಸ್ತುಕರಣದ ರೋಗಗಳು

ಬರ್ನಾರ್ಡ್ ನಾನಿನ್

ಸ್ಟ್ರಾಸ್‌ಬರ್ಗಿನ ಅಡಾಲ್ಫ್ ಕುಸ್ಮಾಲ್ (೧೮೨೨–೧೯೦೨), ಅನಂತರ ಬರ್ನಾರ್ಡ್ ನಾನಿನ್ (೧೮೩೯–೧೯೨೫) ಇಬ್ಬರ ಹೆಸರುಗಳು ಜೀವಸ್ತುಕರಣದ ರೋಗಗಳ ಸಂದರ್ಭದಲ್ಲಿ ಒಂದಾಗಿದ್ದವು. ನಾನಿನ್ ಮೊದಲು ಫ್ರಿರಿಕ್‌ನ ಸಹಾಯಕನಾಗಿದ್ದು ಅವನ ಹಿತನುಡಿಗಳು ನಾನಿನ್ನಿಗೆ ಅಚ್ಚುಮೆಚ್ಚಾಗಿದ್ದವು. ನಾನಿನ್ನಿಗೆ ವೈದ್ಯದಲ್ಲಿ ಆಸಕ್ತಿ ಹುಟ್ಟಲು ಅವನೇ ಕಾರಣ. ನಾನಿನ್ನಿನ ಪ್ರಖ್ಯಾತಿ ಬೆಳೆದು ಅವನ ಪ್ರೇರಣೆಯಿಂದಲೇ ಸ್ಟ್ರಾಸ್‌ಬರ್ಗಿನಲ್ಲಿ ಒಂದು ಚಿಕಿತ್ಸಾಲಯ ಪ್ರಾರಂಭವಾಗಿ ಕ್ರಮೇಣ ಜರ್ಮನ್ ಸಾಮ್ರಾಜ್ಯದಲ್ಲೇ ಮಹತ್ತಾದ ಚಿಕಿತ್ಸಾಲಯವಾಗಿ ಪರಿಣಮಿಸಿತು. ನಾನಿನ್ ಈ ವೈದ್ಯಶಾಲೆಯ ಏಳಿಗೆಗೆ ತನ್ನ ತನು ಮನವನ್ನೆಲ್ಲಾ ಅರ್ಪಿಸಿದನು. ಈಲಿಯ ರೋಗಗಳಲ್ಲೂ, ಸಿಹಿಮೂತ್ರ ರೋಗದಲ್ಲೂ ಅನೇಕ ಪರಿಪೂರ್ಣವಾದ ಶೋಧನೆಗಳನ್ನು ನಡೆಸಿದನು. ಇವನಲ್ಲಿ ಸಿಹಿಮೂತ್ರ ರೋಗದ ಚಿಕಿತ್ಸೆಯನ್ನು ಕಲಿಯಲು ಅನೇಕ ಮಹನೀಯರು ಸ್ಟ್ರಾಸ್‌ಬರ್ಗಿಗೆ ಬರುತ್ತಿದ್ದರು. ಇವರಲ್ಲಿ ಸ್ಕಾಟ್ಲೆಂಡಿನ ಕಷ್ನಿ ಮತ್ತು ಬಾಸ್ಟನ್ನಿನ ಜಾಸ್ಲಿನ್ ಮುಂತಾದವರಿದ್ದರು. ನಾನಿನ್ನಿಗೆ ಸಹಾಯಕನಾಗಿದ್ದ ವಾನ್ ಮೆರಿಂಗ್ ಮತ್ತು ಮಿಂಕೋವ್‌ಸ್ಕಿ ಅವನ ಸೂಚನೆಯ ಮೇರೆ ನಾಯಿಯ ಮೇದೋಜೀರಕ ಗ್ರಂಥಿಯನ್ನು ಹೊರ ತೆಗೆದು ಸಿಹಿಮೂತ್ರ ರೋಗವಾಗುವಂತೆ ಪ್ರಯೋಗ ನಡೆಸಿದರು. ೧೯೦೭ರಲ್ಲಿ ಮಯಕವಿರುವ ಸಿಹಿಮೂತ್ರ ರೋಗಿಯ

ಶರೀರದಲ್ಲಿ ಆಮ್ಲ ತಯಾರಾಗುವುದನ್ನು ಇವನೇ ಮೊಟ್ಟಮೊದಲಿಗೆ ಬಹಿರಂಗ ಪಡಿಸಿದನು. ಈ ಸ್ಥಿತಿಗೆ ಆಮ್ಲ ವಿಷತೆ ಎಂದು ಹೆಸರು ಕೊಡಲಾಗಿತ್ತು.

ಫ್ರೆಡೆರಿಕ್ ಪೇವಿ

ಜರ್ಮನಿಯಲ್ಲಿ ಹೀಗೆ ಸಿಹಿಮೂತ್ರ ರೋಗದ ತಿಳಿವಳಿಕೆ ಬೆಳೆಯುತ್ತಿದ್ದಾಗ, ಇಂಗ್ಲೆಂಡಿನಲ್ಲಿ ಫ್ರೆಡೆರಿಕ್ ವಿಲಿಯಂ ಪೇವಿ (೧೮೨೯–೧೯೧೧) ಗೈಸ್ ಆಸ್ಪತ್ರೆಯಲ್ಲಿ ಕ್ಲಾಡ್ ಬರ್ನಾರ್ಡ್ ನಡೆಸುತ್ತಿದ್ದ ಪ್ರಯೋಗಗಳನ್ನು ಮುಂದುವರಿಸಿ ಸಿಹಿಮೂತ್ರ ರೋಗದ ತಿಳಿವಳಿಕೆಗೆ ಸಾಕಷ್ಟು ಬೆಂಬಲ ಕೊಟ್ಟನು. ಇತ್ತೀಚೆಗೆ, ೧೯೨೨ರಲ್ಲಿ ಫ್ರೆಡೆರಿಕ್ ಬ್ಯಾಂಟಿಂಗ್ ಮತ್ತು ಚಾರ್ಲ್ಸ್ ಎಚ್. ಬೆಸ್ಟ್ ಇವರಿಂದ ಪತ್ತೆಯಾದ ಇನ್ಸುಲಿನ್ ಸಿಹಿಮೂತ್ರರೋಗಿಗಳ ಭವಿಷ್ಯದಲ್ಲಿ ಅಪಾರ ಬದಲಾವಣೆಯನ್ನು ಉಂಟು ಮಾಡಿತು.

ಹೃದಯ ಬೇನೆ ಶಾಸ್ತ್ರ—೧೯ನೇ ಶತಮಾನದಲ್ಲಿ ಅಂಗಕ್ರಿಯೆಶಾಸ್ತ್ರದಲ್ಲೂ, ಔಷಧ ಶಾಸ್ತ್ರದಲ್ಲೂ ನಡೆಯುತ್ತಿದ್ದ ಸಂಶೋಧನೆಗಳು ಹೃದಯ ಬೇನೆಗಳ ತಿಳಿವಳಿಕೆಗೆ ಆಧಾರವಾಗಿದ್ದವು.

ವಿಲಿಯಂ ಹಿಸ್

ಅಂಗಕ್ರಿಯೆಶಾಸ್ತ್ರಜ್ಞನಾದ ವಿಲಿಯಂ ಹಿಸ್ (೧೮೬೩-೧೯೩೪) ಲೀಪ್ಸಿಗ್ಗಿನಲ್ಲಿ ಪ್ರಾಧ್ಯಾಪಕನಾಗಿದ್ದಾಗ ಹೃದಯದ ಬಡಿತ ಸ್ನಾಯುಜನಕ ಸ್ವಭಾವವುಳ್ಳದೆಂದು ಕಂಡುಹಿಡಿದನು. ಸಾಮಾನ್ಯ ವೈದ್ಯ ವೃತ್ತಿಯನ್ನು ಅವಲಂಬಿಸಿದ್ದ ಆಗಸ್ಟಸ್ ವಾಲರ್ (೧೮೫೬–೨೦) ಹೃದಯದ ವಿದ್ಯುದಾವೇಗವನ್ನು ದಾಖಲು ಮಾಡಿ ವಿದ್ಯುದ್ಹೃದಯಚಿತ್ರಕ್ಕೆ ಆಧಾರ ನೀಡಿದನು. ಕೇಂಬ್ರಿಡ್ಜಿನ ವಾಲ್ಟರ್ ಹೊಲ್ಬ್ರೂಕ್ ಗಾಸ್ಕೆಲ್ (೧೮೪೭-೧೯೧೪) ಹೃದಯದ ನರಗಳನ್ನು ವಿವರಿಸಿ, ಹೃದಯದ ತಡೆ ಎಂಬ ಪರಿಸ್ಥಿತಿಯನ್ನು ಪರಿಚಯ ಮಾಡಿಕೊಟ್ಟನು. ಬಾರ್ತಲೊಮ್ಯು ಆಸ್ಪತ್ರೆಯ ವೈದ್ಯ ಸರ್ ಲಾಡರ್ ಬ್ರಂಟನ್ (೧೮೪೪–೧೯೧೬) ಎದೆ ಶೂಲೆಯನ್ನು ಶಮನ ಮಾಡುವ ನೈಟ್ರೈಟ್ ಔಷಧ ಕಂಡುಹಿಡಿದು ಹೃದಯ ರೋಗಗಳ ಚಿಕಿತ್ಸೆಗೆ ಸಹಾಯ ನೀಡಿದ್ದನು. ಎಡಿನ್ಬರೊನ ಸರ್ ಥಾಮಸ್ ರಿಚರ್ಡ್ ಫ್ರೇಸರ್ (೧೮೪೧–೧೯೨೦) ಮತ್ತು ಇವನ ತರುವಾಯ ಆರ್ಥರ್ ರಾಬರ್ಟ್ಸನ್ ಕಷ್ನಿ (೧೮೬೬–೧೯೨೬) ಇವರು ಹೃದಯದ ಮೇಲೆ ವರ್ತಿಸುವ ಮದ್ದುಗಳನ್ನು ಪರೀಕ್ಷಿಸಿ ವಿವರಿಸಿದ್ದರು. ರಕ್ತದ ಒತ್ತಡವನ್ನು ಅಳೆಯಲು ಧಮನಿಯೊತ್ತಡಮಾಪಿ ಎಂಬ ಸಲಕರಣೆಯನ್ನು ಪ್ಯಾರಿಸ್ಸಿನ ಪಿಯರ್ರೆ ಕಾರ್ಲ್ ಪೊಟೇನ್ (೧೮೨೫ ೧೯೦೧) ಬಳಕೆಗೆ ತಂದನು. ಈ ವಿಧಾನವನ್ನು ಇಂಗ್ಲೆಂಡಿನಲ್ಲಿ ಕೇಂಬ್ರಿಡ್ಜಿನ ಪ್ರಾಧ್ಯಾಪಕ ಹಾಗೂ ಹೃದಯಶಾಸ್ತ್ರದ ಪ್ರಭಾವಶಾಲಿ ಸರ್ ಥಾಮಸ್ ಕ್ಲಿಫರ್ಡ್ ಆಲ್ಬಟ್ (೧೮೩೬–೧೯೨೫) ಕೂಡ ರೂಢಿಗೆ ತಂದಿದ್ದನು. ಇವನು 'ವೈದ್ಯಶಾಸ್ತ್ರದ ಪದ್ಧತಿ' ಎಂಬ ಪುಸ್ತಕದ ಗ್ರಂಥಕರ್ತೃ. ಇದೇ

ಕಾಲದಲ್ಲಿ ಆಗ ಆಕ್ಸ್‌ಫರ್ಡಿನಲ್ಲಿದ್ದ ಪ್ರಾಧ್ಯಾಪಕ ಸರ್ ವಿಲಿಯಂ ಆಸ್ಲರ್ (೧೮೪೯-೧೯೧೯) ಹೃದಯಶಾಸ್ತ್ರವನ್ನು ತಾನೇ ಸ್ವತಃ ಅನೇಕ ರೀತಿಯಲ್ಲಿ ಅಭಿವೃದ್ಧಿ ಪಡಿಸಿದ್ದನು.

ಸರ್ ಜೇಮ್ಸ್ ಮೆಕೆನ್ಸಿ

ಲಂಡನ್ನಿನ ಸರ್ ಜೇಮ್ಸ್ ಮೆಕೆನ್ಸಿ (೧೮೫೩-೧೯೨೫) ಹೃದಯ ಬೇನೆ ಹಾಗೂ ಹೃದಯದ ಕ್ರಮಗೆಟ್ಟ ಮಿಡಿತವನ್ನು ತಿಳಿಯಲು ಉಪಯೋಗವಾಗಿದ್ದ ಹಲ ಚಿತ್ರಕವನ್ನು (೧೯೦೨) ಕಂಡುಹಿಡಿದನು. ಇವನ ಅನೇಕ ಶೋಧನೆಗಳಿಂದ ಹೃದಯ ಶಾಸ್ತ್ರ ಒಂದು ಹೊಸ ಹಂತವನ್ನು ಮುಟ್ಟಿತು. ಇವನು ಹೃದಯ ಬೇನೆಯ ಘನ ಪಂಡಿತನಾಗಿದ್ದರೂ, ಹೃದಯ ಶೂಲೆಯ ಬಗ್ಗೆ ಶೋಧನೆ ನಡೆಸಿದ್ದರೂ, ಅದರಿಂದಲೇ ತಾನೂ ಸಾಯಬೇಕಾಗಿತ್ತು. ಆ ಕಾಲದಲ್ಲಿ ಅಮೆರಿಕದ ಆಸ್ಟಿನ್ ಫ್ಲಿಂಟ್ (೧೮೧೨-೮೬) ಮತ್ತು ಜೇಕಬ್ ಡ ಕಾಸ್ಟ (೧೮೩೩-೧೯೦೦)ಹೃದಯಶಾಸ್ತ್ರದಲ್ಲಿ ಮುಖಂಡ ರಾಗಿದ್ದು ಸಾಕಷ್ಟು ಮುನ್ನಡೆ ಸಾಧಿಸಿದ್ದರು.

ಮಕ್ಕಳ ವೈದ್ಯಶಾಸ್ತ್ರ

ಚಾರ್ಲ್ಸ್ ವೆಸ್ಟ್

ಮಕ್ಕಳ ವೈದ್ಯಶಾಸ್ತ್ರ ವಿಶೇಷ ಶಾಖೆಯಾಗಿ ಜನಿಸಿದ್ದು ೧೯ನೇ ಶತಮಾನದ ಒಂದು ವಿಶೇಷವೇ ಹೌದು. ಮೊಟ್ಟಮೊದಲಿಗೆ ಈ ವೈದ್ಯದ ಕಡೆಗೆ ಲಂಡನ್ನಿನ ಹೆರಿಗೆಶಾಸ್ತ್ರದ ಪಂಡಿತ ಚಾರ್ಲ್ಸ್ ವೆಸ್ಟ್ (೧೮೧೬-೧೮೯೮) ಗಮನ ಕೊಟ್ಟನು. ಇವನು ಮಕ್ಕಳ ರೋಗವನ್ನು ಕುರಿತು ಮಾಡಿದ್ದ ಉಪನ್ಯಾಸಗಳು ಬಹು ಶ್ರೇಷ್ಠ ವಾಗಿದ್ದವು. ಇವನ ಶ್ರಮದ ಫಲವಾಗಿ ಗ್ರೇಟ್ ಆರ್ಮಂಡ್ ರಸ್ತೆಯ ಮಕ್ಕಳ ರೋಗದ ಆಸ್ಪತ್ರೆ ೧೮೫೨ರಲ್ಲಿ ಪ್ರಾರಂಭವಾಯಿತು. ಅನಂತರ, ಈ ಆಸ್ಪತ್ರೆಯ ಅಧಿ ಕಾರ ಸರ್ ಜಾರ್ಜ್ ಫ್ರೆಡೆರಿಕ್ ಸ್ಟಿಲ್ (೧೮೬೮-೧೯೪೧) ಕೈಗೆ ಬಂದು ಅನೇಕ ಸಂಶೋಧನೆಗಳು ನಡೆದವು. ಇವನು ಮಕ್ಕಳ ವೈದ್ಯದ ಪೂರ್ವ ಚರಿತ್ರೆಯನ್ನೂ ಬರೆದು ಹೆಸರು ಪಡೆದನು.

ಜಾನ್ ಥಾಮ್ಸನ್

ಇದೇ ಕಾಲದಲ್ಲಿ ಪ್ರಪಂಚದಲ್ಲೇ ಅತ್ಯುತ್ತಮ ಮಕ್ಕಳ ವೈದ್ಯನೆನಿಸಿಕೊಂಡಿದ್ದ ಜಾನ್ ಥಾಮ್ಸನ್ (೧೮೫೬-೧೯೨೬) ಅನೇಕ ಸಂಶೋಧನೆಗಳನ್ನು ನಡೆಸಿ ದ್ದಲ್ಲದೆ, ಮಕ್ಕಳ ವೈದ್ಯದ ಒಂದು ಪಠ್ಯಪುಸ್ತಕವನ್ನೂ ಬರೆದನು. ಈ ಪುಸ್ತಕ ಅನೇಕ ಭಾಷೆಗಳಿಗೆ ಭಾಷಾಂತರವಾಗಿ ಗೌರವ ಪಡೆಯಿತು. ಬರ್ಲಿನ್ನಿನ ಹೆನಾಕ್ (೧೮೨೦-೧೯೧೦) ಮತ್ತು ಹ್ಯೂಬ್ನರ್ (೧೮೪೩-೧೯೨೬), ನ್ಯೂ ಯಾರ್ಕಿನ ಅಬ್ರಹಾಮ್ ಜೇಕಬಿ (೧೮೩೦-೧೯೧೯), ಲೂಯಿ ಸ್ಮಿತ್ (೧೮೨೭-೯೭) ಹಾಗೂ

ಹಾವರ್ಾರ್ಡಿನ ಥಾಮಸ್ ಮಾರ್ಗನ್ ರಾಚ್ (೧೮೪೯-೧೯೧೪) ಮುಂತಾದವರೆಲ್ಲಾ ಮಕ್ಕಳ ವೈದ್ಯಕ್ಕೆ ಸಾಕಷ್ಟು ಕೊಡುಗೆ ನೀಡಿದರು.

ನರಶಾಸ್ತ್ರ— ಹಿಂದಿನಿಂದಲೂ ಫ್ರಾನ್ಸ್ ದೇಶದ ವೈದ್ಯರು ಈ ವಿಶೇಷ ವೈದ್ಯಶಾಖೆಗೆ ಉತ್ತೇಜನ ಕೊಟ್ಟಿದ್ದರೂ, ೧೯ನೇ ಶತಮಾನದಲ್ಲಿ ಇದಕ್ಕೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಸಿಕ್ಕಿ ವಿಶೇಷ ರೀತಿಯಲ್ಲಿ ಬೆಳೆಯಿತು. ಇತರ ದೇಶಗಳೂ ಹಿಂದೆ ಬೀಳಲಿಲ್ಲ. ೧೭೬೮ ರಲ್ಲಿ ಎಡಿನ್ಬರೊನ ರಾಬರ್ಟ್ ವ್ಹಿಟ್ ಮಿದುಳುಪೊರೆ ಕ್ಷಯವನ್ನು ವಿವರಿಸಿದ್ದನು. ನೇಪಲ್ಸ್‌ನ ಡೊಮೆನಿಕೊ ಕೊಟುಗ್ನೊ ೧೭೭೦ ರಲ್ಲಿ ಟೊಂಕಶೂಲೆ ರೋಗವನ್ನು ವಿವರಿಸಿ ಚಿತ್ರಿಸಿದನು. ಲಂಡನ್ನಿನ ಜೇಮ್ಸ್ ಪಾರ್ಕಿನ್ಸನ್ ೧೮೧೭ರಲ್ಲಿ ನಡುಕ ಲಕ್ವ ರೋಗದ ಚಕ್ರವನ್ನು ವಿವರಿಸಿದ್ದನು. ಜರ್ಮನಿಯಲ್ಲೂ ಅನೇಕ ವೈದ್ಯಶ್ರೇಷ್ಠರಿದ್ದರು. ಅವರ ಪೈಕಿ ಮೊರಿಟ್ಸ್ ಹೆನ್ರಿಚ್ ರಾಂಬರ್ಗ್ (೧೭೯೫–೧೮೭೩) ನರಶಾಸ್ತ್ರವನ್ನು ಕುರಿತು ಬರೆದಿದ್ದ ಅವನ ಲೇಖನ ಉತ್ಕೃಷ್ಟವಾಗಿತ್ತು. ಬರ್ಲಿನ್ನಲ್ಲಿದ್ದ ರಾಂಬರ್ಗಿನ ವೈದ್ಯಾಲಯಕ್ಕೆ ಹೆಚ್ಚು ಹೆಚ್ಚಾಗಿ ಪರಿಣತರು ಬಂದು ತರಪೇತು ಪಡೆಯುತ್ತಿದ್ದರು. ಹೈಡೆಲ್‌ಬರ್ಗ್ ಪಟ್ಟಣದ ವಿಲ್‌ಹೆಲ್ಮ್ ಹೆನ್ರಿಚ್ ಎರ್ಬ್ (೧೮೪೦–೧೯೨೧) ಮೂಲಭೂತ ಸಂಶೋಧನೆಗಳನ್ನು ಸ್ವತಃ ನಡೆಸಿ ಕೀರ್ತಿ ಗಳಿಸಿದನು. ಅವುಗಳಲ್ಲಿ ಮೇಹರೋಗವಾದ ಉಪದಂಶಕ್ಕೂ ಬೆನ್ನುಹುರಿ ತವೆಗೂ ಇರುವ ಸಂಬಂಧದ ವಿವರ ಅತಿ ಮುಖ್ಯವಾಗಿತ್ತು.

ಹೂಲಿಂಗ್ಸ್ ಜಾಕ್ಸನ್

ಬ್ರಿಟನ್ನಿನಲ್ಲಿ ಇತ್ತೀಚೆಗೆ ನರಶಾಸ್ತ್ರದ ಜಾನ್ ಹ್ಯೂಲಿಂಗ್ಸ್ ಜಾಕ್ಸನ್(೧೮೩೪–೧೯೧೧) ಮುಖ್ಯ ಹೊಣೆಗಾರನಾಗಿದ್ದನು. ಇವನು ಲಂಡನ್ ಆಸ್ಪತ್ರೆಯಲ್ಲಿ ಕೆಳಗಿನ ಹಂತದಿಂದ ಪ್ರಾರಂಭಿಸಿ ಕೊನೆಗೆ ಆ ಆಸ್ಪತ್ರೆಯ ಮುಖ್ಯ ಔಷಧ ವೈದ್ಯನಾಗಿ ಬೆಳಗಿದನು. ತನ್ನ ಎಳೆತನದಲ್ಲೇ ನರವೈದ್ಯವನ್ನು ರೂಢಿಸುವ ಆಸೆ ಇದ್ದುದರಿಂದ ೧೮೫೯ರಲ್ಲಿ ಪ್ರಾರಂಭವಾದ ರಾಣಿಯ ಚೌಕದಲ್ಲಿರುವ ರಾಷ್ಟ್ರೀಯ ಆಸ್ಪತ್ರೆಯನ್ನು ಸೇರಿ ನರಶಾಸ್ತ್ರಕ್ಕೆ ಸಾಕಷ್ಟು ಸೇವೆ ಸಲ್ಲಿಸಿದನು. ಮಿದುಳಿನ ವಿಚಾರಗಳಿಂದಾದ ವಾಕ್ ದೋಷಗಳನ್ನು ವಿವರಿಸಿದನು. ಬ್ರೋಕ ಗುರ್ತಿಸಿದ್ದ ಶೋಧನೆಗಳನ್ನು ಸಮರ್ಥಿಸಿ ಬಲಚರಲ್ಲಿ ವಾಚನ ಕೇಂದ್ರ ಮಿದುಳಿನ ಎಡ ಅರ್ಧಗೋಳದಲ್ಲಿದೆಯೆಂದು ಗೊತ್ತುಪಡಿಸಿದನು. ಜಾಕ್ಸನ್ನನ ಅಪಸ್ಮಾರವೆಂಬ ಸ್ಥಳೀಯ ಸೆಳವು ಮಿದುಳಿನ ಹೊರ ಭಾಗದಲ್ಲಿರುವ ಚಾಲಕ ನೆಲೆಯಲ್ಲಿ ವಿಕಾರವಾಗಲೀ ಗಾಯವಾಗಲೀ ಇದ್ದರೆ ಬರುತ್ತದೆಂದು ತಿಳಿಸಿದ್ದನು. ಹಾಗೂ ರೋಗದ ಸ್ನಾಯು ಚಲನೆಗಳ ವಿಂಗಡಣೆಯನ್ನೂ ಮಿದುಳಿನ ವಿಕಾರದ ಆಧಾರದ ಮೇಲೆ ವಿವರಿಸಿದನು. ಇವೆಲ್ಲಾ ಅವನ ಸ್ವಂತ ಶೋಧನೆಗಳಾಗಿದ್ದವು. ಇವನು ಸತ್ತನಂತರ ಇವನ ಕೀರ್ತಿ ಬೆಳಗಲು ಪ್ರಾರಂಭವಾಗಿ ಈಗಲೂ ಬೆಳಗುತ್ತಿದೆ.

ಸರ್ ವಿಲಿಯಂ ಗವರ್ಸ್

ಜಾಕ್ಸನ್ನಿನಷ್ಟು ಶ್ರೇಷ್ಠನಲ್ಲದಿದ್ದರೂ, ಸರ್ ವಿಲಿಯಂ ರಿಚರ್ಡ್ ಗವರ್ಸ್‌ನ (೧೮೪೫-೧೯೧೫) ಕೊಡುಗೆಗಳು ಮಹತ್ತರವಾದವು. ಬೆನ್ನುಹುರಿ ನರದ ಸಾಗು ದಾರಿ ಒಂದನ್ನು ವಿವರಿಸಿದ್ದನು. ಅಲ್ಲದೆ, ನರಶಾಸ್ತ್ರದಲ್ಲಿ ಕಣ್ಣುದರ್ಶಕದ ಉಪಯೋಗ ಗಳನ್ನು ವಿವರಿಸಿದ್ದನು ಗವರ್ಸ್ ಕಣ್ಣುವೈದ್ಯದ ಪಠ್ಯಪುಸ್ತಕ ಒಂದನ್ನೂ ಬರೆದಿದ್ದನು. ಇತ್ತೀಚೆಗೆ, ಸರ್ ಹೆನ್ರಿ ಹೆಡ್(೧೮೬೧-೧೯೪೦) ಮೂಕತನವನ್ನು ವಿವರಿಸಿ ಬ್ರಿಟಿಷ್ ನರವೈದ್ಯ ಶಾಸ್ತ್ರಕ್ಕೆ ಗೌರವ ತಂದನು. ಆಗಿನ ಅಮೆರಿಕದ ನರಶಾಸ್ತ್ರಜ್ಞರ ಪೈಕಿ ಫಿಲಡೆಲ್ಫಿಯದ ಸೈಲಾಸ್ ವಿಯರ್ ಮಿಚೆಲ್ (೧೮೨೯-೧೯೧೪) ಕೆಲವು ನರ ರೋಗಗಳ ಚಿಕಿತ್ಸೆಗಳನ್ನು ಉತ್ತಮಪಡಿಸಿದ್ದಲ್ಲದೆ ನರಗಳಿಗೆ ಬಿದ್ದ ಪೆಟ್ಟಿನ ಪರಿಣಾಮ ಗಳನ್ನೂ ವಿವರಿಸಿದನು.

ನೂತನ ನರಶಾಸ್ತ್ರದ ವಿದ್ಯಮಾನಗಳಲ್ಲಿ ಎಲ್ಲಾ ದೇಶಗಳಿಗಿಂತಲೂ ಫ್ರಾನ್ಸ್‌ದೇಶ ಮುಂಚಿನಿಂದಲೂ ಮುನ್ನಡೆದಿತ್ತು. ಗಿಲ್ಲಾಮೆ ಬೆಂಜಮಿನ್ ಆರ್ಮಂಡ್ ಡ್ಯೂಷನ್ (೧೮೦೬-೧೮೭೫) ಹಕ್ಕುಬಾಧ್ಯತೆಗಳಿಲ್ಲದಿದ್ದರೂ ಪ್ಯಾರಿಸ್ಸಿನ ಆಸ್ಪತ್ರೆಗಳಲ್ಲಿ ಅಲೆ ದಾಡುತ್ತಾ ನರಶಾಸ್ತ್ರವನ್ನು ಅಭಿವೃದ್ಧಿಪಡಿಸುತ್ತಿದ್ದನು. ಹೀಗೆ ೩೦ ವರ್ಷಗಳ ಕಾಲ ದುಡಿದು ಬೇರೂರಿದ ಕೀಲುವಾತದಿಂದ ನರಳುತ್ತಿರುವ ರೋಗಿಗಳಿಗೆ ಫ್ಯಾರಡೆ ವಿದ್ಯುತ್ ಹರಿವನ್ನು ಕೊಟ್ಟು ಗುಣ ಪಡಿಸುತ್ತಿದ್ದನು. ಈ ವಿದ್ಯುತ್ ಹರಿವನ್ನು ಶರೀರಕ್ಕೆ ಹರಿಸುವಾಗ ಚರ್ಮವನ್ನು ಚುಚ್ಚಬೇಕಿಲ್ಲವೆಂದೂ,ಅದರ ಬದಲು ವಿದ್ಯುತ್ ತುದಿಗಡ್ಡಿಯ ಕೆಳಗೆ ಒದ್ದೆ ಬಟ್ಟೆಯನ್ನಾಗಲೀ ಸ್ಪಂಜನ್ನಾಗಲೀ ಇಟ್ಟು ಹರಿಸಬಹು ದೆಂದೂ ತಿಳಿಸಿದನು. ಹೀಗೆ ಆಸ್ಪತ್ರೆಯಿಂದ ಆಸ್ಪತ್ರೆಗೆ ಹೋಗಿ ರೋಗಿಗಳ ಕ್ಷೇಮ ಸಮಾಚಾರಗಳನ್ನು ಅರಿಯುತ್ತಿದ್ದುದನ್ನು ಅನೇಕ ವೈದ್ಯರಂತೂ ಸಹಿಸದಿದ್ದರೂ, ಅನೇಕರು ಇವನನ್ನು ಕೇವಲ ಕೆಡಕುಂಟುಮಾಡದ ಒಬ್ಬ ವಿಚಿತ್ರ ವೈದ್ಯನೆಂದು ಭಾವಿಸಿ ಅಸಡ್ಡೆ ತೋರಿಸಿದರು. ಆದರೂ, ಇವನ ಕೆಲಸ ಕಾರ್ಯಗಳನ್ನು ಮೆಚ್ಚಿ 'ವೈದ್ಯ ಶಾಸ್ತ್ರದ ಭೂಮಿಕೆಯಲ್ಲಿ ತಲೆಯೆತ್ತಿದ ಬಲು ಅಪೂರ್ವ ವ್ಯಕ್ತಿಗಳಲ್ಲಿ ಒಬ್ಬ'ನೆಂದು ಸರ್ ಆರ್ಥರ್ ಕೀತ್ ಹೊಗಳಿದ್ದಾನೆ. ಆಗಿನ ಕಾಲದಲ್ಲಿ ಗೊತ್ತಿಲ್ಲದಿದ್ದ ಅನೇಕ ನರರೋಗಗಳನ್ನು ಡ್ಯೂಷನ್ ತಾನೇ ಪರೀಕ್ಷಿಸಿ ವಿವರಿಸಿದ್ದನು. ಅವುಗಳಲ್ಲಿ ಸಂಚಾಲಕ ತಲೆತಿರುಗು, ಮುಂದುವರಿವ ಸ್ನಾಯು ನಮೆತ, ಮಿದುಳ್ಗಡ್ಡೆ ಲಕ್ವ ಮುಖ್ಯ ವಾಗಿದ್ದವು. ಮೇಲಾಗಿ ಅವನು ಬರೆದಿದ್ದ 'ಸಂಚಾಲನೆಯ ಅಂಗಕ್ರಿಯೆಶಾಸ್ತ್ರ' ಕೃತಿ ಎಲ್ಲಕ್ಕಿಂತಲೂ ಹೆಚ್ಚು ಕೀರ್ತಿ ಸಂಪಾದಿಸಿತ್ತು. ಇವನ ಚತುರತೆ ಹಾಗೂ ಸಾಧನೆಗಳು ಮರಣಾನಂತರ ಬೆಳಕಿಗೆ ಬಂದು ಎಲ್ಲರ ಮೆಚ್ಚಿಗೆಯನ್ನು ಪಡೆದವು.

ಜೀನ್ ಮಾರ್ಟಿನ್ ಷಾರ್ಕೊ

ಇದೇ ಕಾಲದಲ್ಲಿ, ಜೀನ್ ಮಾರ್ಟಿನ್ ಷಾರ್ಕೊ (೧೮೨೫-೯೩) ಮತ್ತೊಬ್ಬ

ಶ್ರೇಷ್ಠ ನರವೈದ್ಯನಾಗಿ ಪ್ರಾಮುಖ್ಯತೆ ಹೊಂದಿದಾಗ ಅವನ ಹತ್ತಿರ ವೈದ್ಯ ಕಲಿಯಲು ಅನೇಕ ವಿಜ್ಞಾನಿಗಳು ಹೊರ ದೇಶಗಳಿಂದ ಬರುತ್ತಿದ್ದರು. ಷಾರ್ಕೊವಿನ ಅತ್ಯಂತ ಪ್ರಸಿದ್ಧ ಶಿಷ್ಯರಾದ ಪಿಯರೆ ಮಾರಿ (೧೮೫೩-೧೯೪೦), ಜೊಸೆಫ್ ಜೂಲ್ಸ್ ಡಿಜೆರಿನ್



ಷಾರ್ಕೊ ಉನ್ಮಾದ ರೋಗಿಯನ್ನು ನಿದರ್ಶಿಸುತ್ತಿರುವುದು

(೧೮೪೯-೧೯೧೭) ಹಾಗೂ ಜೊಸೆಫ್ ಬ್ಯಾಬಿನ್ಸ್ಕಿ (೧೮೫೭-೧೯೩೨), ತಮ್ಮ ಗುರುವಿನಷ್ಟೇ ಸೇವೆ ಸಲ್ಲಿಸಿದರು ಮಾರಿ ಹೊಸ ಹೊಸ ನರ ರೋಗಗಳನ್ನು ಕಂಡು ಹಿಡಿದುದಲ್ಲದೆ, ತೋರವಯುವಿ ಮತ್ತು ಮೂಕತನ ಇತ್ಯಾದಿ ರೋಗಗಳ ಕಾರಣಗಳನ್ನು ಗೊತ್ತುಮಾಡಿ ಕೀರ್ತಿ ಗಳಿಸಿದನು. ಡಿಜೆರಿನ್ ನರ ಮಂಡಲದ ಅಂಗರಚನೆಯ ಪುಸ್ತಕ ವನ್ನೂ ಬರೆದಿದ್ದನು ಉನ್ಮಾದ ಹಾಗೂ ಬ್ಯಾಬಿನ್‌ಸ್ಕಿ ಚಿಹ್ನೆಗಳನ್ನು ಬ್ಯಾಬಿನ್‌ಸ್ಕಿ ವಿವರಿಸಿ ಎಲ್ಲರ ಗಮನವನ್ನು ಸೆಳೆದನು.

ಮನೋರೋಗಶಾಸ್ತ್ರ ಮತ್ತು ವೈದ್ಯಕೀಯ ಮನಶ್ಶಾಸ್ತ್ರ


ಫಿಲಿಪ್ಪೆ ಪೈನೆಲ್

ಇತ್ತೀಚೆಗೆ ಮನೋರೋಗಶಾಸ್ತ್ರದ ವಿಚಾರದಲ್ಲಿರುವ ಮನೋಭಾವದ ಬದ ಲಾವಣೆ ಬೇರೆ ಯಾವ ವೈದ್ಯಶಾಸ್ತ್ರದ ವಿಶೇಷ ಶಾಖೆಯಲ್ಲೂ ಹುಟ್ಟಿಲ್ಲ. ಮೊಟ್ಟ ಮೊದಲಿಗೆ ಫಿಲಿಪ್ಪೆ ಪೈನೆಲ್ (೧೭೪೫-೧೮೨೬), ೧೭೯೮ರಲ್ಲಿ ಪ್ಯಾರಿಸ್ಸಿನ ಬಿಸೆಟ್ರೆ ಆಸ್ಪತ್ರೆಯಲ್ಲಿ ಬಂಧನದಲ್ಲಿದ್ದ ಹುಚ್ಚು ರೋಗಿಗಳಿಗೆಲ್ಲಾ ಸಂಕೋಲೆಗಳನ್ನು ತೆಗೆಯಿಸಿ ಸಾಮಾನ್ಯ ರೋಗಿಗಳಿಗೆ ಕೊಡತಕ್ಕ ಸೌಕರ್ಯಗಳನ್ನು ಕೊಡಬೇಕೆಂದು ಧೈರ್ಯ ದಿಂದ ಸಾಧಿಸಿದ್ದನು. ಆಗ ಒಬ್ಬ ಮನೋರೋಗಿ ೪೦ ವರ್ಷ ಸಂಕೋಲೆಯಲ್ಲಿದ್ದ. ಮತ್ತೊಬ್ಬನು ೩೬ ವರ್ಷವಿದ್ದ. ಮನೋರೋಗಿಗಳನ್ನು ಅಪರಾಧಿಗಳೆಂದು ಭಾವಿಸ ಬಾರದೆಂದೂ, ಅವರನ್ನು ಮಾನಸಿಕ ಆಸ್ಪತ್ರೆಗಳಲ್ಲಿ ಇಡಬೇಕೆಂದೂ ಸಲಹೆ ಮಾಡಿದನು.

ಫ್ರಾನ್ಸಿನಲ್ಲಿ ಕ್ರಾಂತಿ ನಡೆಯುತ್ತಿದ್ದಾಗ, ಈ ಸಲಹೆಗಳನ್ನು ಪೈನೆಲ್ ಕೊಡಬೇಕಾಗಿದ್ದರೂ ಅಂಜಲಿಲ್ಲ. ಇವನು ಹುಚ್ಚರಿಗೆ ಆಶ್ರಯವನ್ನು ಕೊಡುತ್ತಾನೆಂದು ಜನರ ಗುಂಪೊಂದು ದೊಂಬಿಯೆದ್ದು ಇವನ ಮೇಲೆ ಕೈ ಮಾಡಿದರು. ಆಗ ಸಂಕೋಲೆಯಿಂದ ಬಿಡುಗಡೆಯಾಗಿದ್ದ ಒಬ್ಬ ರೋಗಿ ಇವನ ಸಹಾಯಕ್ಕೆ ಬಂದು ರಕ್ಷಿಸಿದನು.

ವಿಲಿಯಂ ಟೂಕ್

ಈ ಚಳುವಳಿಗೆ ಸಾಕಷ್ಟು ಬೆಂಬಲ ಕೊಟ್ಟು ವೈದ್ಯನಲ್ಲದ ಆದರೆ ಜನೋಪಕಾರಿಯಾಗಿದ್ದ ವಿಲಿಯಂ ಟೂಕ್ ೧೭೯೬ರಲ್ಲಿ ಮನೋರೋಗಿಗಳಿಗೆ ಮೀಸಲಾಗಿ ಒಂದು ಆಸ್ಪತ್ರೆಯನ್ನು ತೆಗೆದು, ಅಲ್ಲಿ ಬಂಧನ ಹಾಗೂ ಸಂಕೋಲೆ ಇಲ್ಲದಿರುವಂತೆ ಸಲಹೆ ನೀಡಿದ್ದನು. ಇದು ಯಾರ್ಕ್ ಪಟ್ಟಣದಲ್ಲಿ ಸ್ಥಾಪಿತವಾಗಿತ್ತು. ಇದಕ್ಕೆ ಬಹಳ ಜನರು ಬೆಂಬಲ ಕೊಟ್ಟುದ್ದಲ್ಲದೆ ಧನ ಸಹಾಯವನ್ನು ಕೂಡ ಮಾಡಿದರು. ವಿಲಿಯಂ ಟೂಕ್‌ನ ಮರಿಮಗನಾದ ಡೇನಿಯಲ್ ಹಾಕ್ ಟೂಕ್ (೧೮೨೭-೯೫) ಆಗ ವೈದ್ಯಶಾಸ್ತ್ರ ಮುಗಿಸಿಕೊಂಡು ಮನೋರೋಗಶಾಸ್ತ್ರದಲ್ಲಿ ಪರಿಣತಿ ಪಡೆದಿದ್ದನು. ಇವನು ಮನೋರೋಗಶಾಸ್ತ್ರದ ಸ್ಥಾನಮಾನವನ್ನು ಹೆಚ್ಚಿಸಲು ಬ್ರಿಟನ್ನಿನಲ್ಲೂ, ಅಮೆರಿಕದಲ್ಲೂ ಸಹಾಯ ನೀಡಿದ್ದನು. ಇವನೂ ಹೆನ್ರಿ ಮಾಡ್‌ಸ್ಲೆ (೧೮೩೫-೧೯೧೮) ಸೇರಿ ಮನಶ್ಶಾಸ್ತ್ರದ ಪತ್ರಿಕೆಯೊಂದನ್ನು ಹೊರಡಿಸಿದರು.



ಸಿಗ್ಮಂಡ್ ಫ್ರಾಯಡ್

ಸಿಗ್ಮಂಡ್ ಫ್ರಾಯಡ್

ಹೀಗಿರುವಾಗ, ೧೮೮೫ರಲ್ಲಿ ಷಾರ್ಕೊ ಜೊತೆ ಪ್ಯಾರಿಸ್ಸಿನಲ್ಲಿ ಕೆಲಸ ಮಾಡುತ್ತಿದ್ದ ಸಿಗ್ಮಂಡ್ ಫ್ರಾಯಡ್ (೧೮೫೬-೧೯೩೯) ಮನೋರೋಗಶಾಸ್ತ್ರದಲ್ಲಿ ಕ್ರಾಂತಿಯೆಬ್ಬಿಸಿ ಅದಕ್ಕೆ ಹೊಸ ರೂಪವನ್ನು ಕೊಟ್ಟನು. ಮನಸ್ಸಿನ ಅಜಾಗೃತ ಸ್ಥಿತಿಯನ್ನು ಹೊರಗೆಡಹಿ ವೈದ್ಯಶಾಸ್ತ್ರದ ತಿಳಿವಳಿಕೆಯನ್ನೇ ಮಾರ್ಪಡಿಸಿದನು. 'ಶಕ್ತಿಯುತ ಮನೋಕ್ರಿಯಾಗತಿಗಳಿರುವುವಾದರೂ, ಅವು ಜನರ ಎಚ್ಚರಕ್ಕೆ ಬರದಂತೆ ಅವಿತಿರುತ್ತವೆ' ಎಂಬ ಭಾವನೆಯನ್ನು ತಾನು ೧೮೮೯ರಲ್ಲಿ ಅರಿತೆನೆಂದು ಫ್ರಾಯಡ್ ತನ್ನ

ಜೀವನ ಚರಿತ್ರೆಯಲ್ಲಿ ತಿಳಿಸಿದ್ದಾನೆ. ಈ ಅರಿವಿನಿಂದ ಮನೋಬಿಡಿಪರೀಕ್ಷೆ ಎಂಬ ಸೂಕ್ಷ್ಮ ಪರೀಕ್ಷೆಯನ್ನು ಹೊರಗೆಡಹಿ, ಅಲ್ಲಿಯ ತನಕ ತಾನು ಉಪಯೋಗಿಸುತ್ತಿದ್ದ ಸುಪ್ತಸ್ಥಿತಿಯನ್ನು ತ್ಯಜಿಸಬಹುದೆಂದು ಪ್ರಚುರಪಡಿಸಿದನು. ಈಗ ಬೆಳಕಿಗೆ ಬಂದಿರುವ ಫ್ರಾಯ್ಡ್‌ನ ಮೂಲತತ್ವಗಳು ಆಗ್ಗೆ ಸುಲಭವಾಗಿ ಅಂಗೀಕೃತವಾಗಲಿಲ್ಲ. ಲೈಂಗಿಕ ಮನಶ್ಶಾಸ್ತ್ರಕ್ಕೆ ಅವನು ಹೆಚ್ಚು ಮನಸ್ಸು ಕೊಟ್ಟಿದ್ದುದರಿಂದ ಅವನನ್ನು ಅನೇಕರು ಟೀಕಿಸಿದ್ದರು. ಈ ಟೀಕೆಗಳನ್ನೆಲ್ಲಾ ಅವನು ಅನುಸರಿಸಿದ್ದ ಅಜಾಗೃತ ಸ್ಥಿತಿಯ ಸಂಶೋಧನೆಗಳು ಮುಚ್ಚಿ ಮರೆಮಾಡಿದ್ದವು. ಆದರೂ, ಫ್ರಾಯ್ಡ್‌ನ ಕ್ರಾಂತಿಕಾರಕ ಅಭಿಪ್ರಾಯಗಳೆಲ್ಲಾ ಇನ್ನೂ ಸರಿಯಾಗಿ ಅರ್ಥವಾಗಿಲ್ಲ. ಹೀಗೆ ಬೆಳೆದುಬಂದ ವೈದ್ಯಕೀಯ ಮನಶ್ಶಾಸ್ತ್ರ, ವೈದ್ಯಶಾಸ್ತ್ರದ ಎಲ್ಲಾ ಶಾಖೆಗಳಿಗೂ ಹರಡಿ ವೈದ್ಯಶಾಸ್ತ್ರಕ್ಕೆ ಹೊಸ ಹುರುಪನ್ನು ಕೊಟ್ಟಿತ್ತು.

ಕಣ್ಣುವೈದ್ಯ

ಕಣ್ಣಿನ ರೋಗಗಳು ಹಾಗೂ ಅವುಗಳ ಚಿಕಿತ್ಸೆ ಕ್ರಮಗಳು ಪುರಾತನ ಕಾಲದಿಂದ ರೂಢಿಯಲ್ಲಿದ್ದರೂ, ೧೯ನೇ ಶತಮಾನದಲ್ಲಿ ಹೊಸ ಅರಿವುಂಟಾಗಿ ಮುಂಸಾಗಿತು.

ಹೆಲ್ಮೋಲ್ಟ್ಸ್

೧೮೫೧ರಲ್ಲಿ ಹೆಲ್ಮೋಲ್ಟ್ಸ್, ಕಣ್ಣುದರ್ಶಕವನ್ನು ಕಂಡುಹಿಡಿದು ಕಣ್ಣುರೋಗಗಳಿಗೇ ಅಲ್ಲದೆ ವೈದ್ಯಶಾಸ್ತ್ರಕ್ಕೂ ಸಾಕಷ್ಟು ಒತ್ತಾಸೆ ಕೊಟ್ಟಿದ್ದನು. ಥಾಮಸ್ ಯಂಗ್ (೧೭೭೩-೧೮೨೯) ಹೆಲ್ಮೋಲ್ಟ್ಸ್‌ನ ಹಾಗೆ ಅನೇಕ ಶೋಧನೆಗಳನ್ನು ನಡೆಸಿ



ಹೆಲ್ಮೋಲ್ಟ್ಸ್ ತಾನು ಕಂಡುಹಿಡಿದ ಕಣ್ಣುದರ್ಶಕ ಯಂತ್ರದಿಂದ ಕಣ್ಣು ಪರೀಕ್ಷೆ ಮಾಡುತ್ತಿರುವುದು.

ತನ್ನ ೨೧ನೇ ವಯಸ್ಸಿನಲ್ಲೇ ರಾಜ ಸಂಘದ ಸದಸ್ಯತ್ವವನ್ನು ಪಡೆದನು. ಯಂಗ್, ಹೆಲ್ಮೋಲ್‌ಟ್ಸ್ ಇಬ್ಬರೂ ಸೇರಿ ಹೊರಗೆಡಹಿದ್ದ ಬಣ್ಣ ನೋಟದ ಕಲ್ಪನೆ ಅತ್ಯುತ್ತಮವಾಗಿತ್ತು. ಸೆಂಟ್ ಬಾರ್ತಲೊಮ್ಯೂ ಆಸ್ಪತ್ರೆಯಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಕಣ್ಣು ಮಸೂರದ ಆಕಾರವನ್ನು ಕಣ್ಣಿನ ಸ್ನಾಯು ಬದಲಾಯಿಸುತ್ತದೆಂದು ಯಂಗ್ ಪತ್ತೆ ಹಚ್ಚಿದನು. ಅಲ್ಲದೆ ನೋಟಶಾಸ್ತ್ರ ಮತ್ತಿತರ ಕಣ್ಣಿನ ಶೋಧನೆಗಳನ್ನೂ ನಡೆಸಿದನು.

ಕಾರ್ನೀಲಿಯಸ್ ಡಾಂಡರ್ಸ್

ಹೆಲ್ಮೋಲ್‌ಟ್ಸ್ ಹಾಗೂ ಯಂಗರವರಷ್ಟೇ ಪ್ರಖ್ಯಾತಿಯಾಗಿದ್ದ ಉಟ್ರೆಕ್ಟನ ಅಂಗಕ್ರಿಯೆಶಾಸ್ತ್ರದ ಪ್ರಾಧ್ಯಾಪಕ ಫ್ರಾನ್ಸ್ ಕಾರ್ನೀಲಿಯಸ್ ಡಾಂಡರ್ಸ್ (೧೮೧೮–೮೯) ೧೮೬೪ರಲ್ಲಿ ಬರೆದು ಪ್ರಕಟಿಸಿದ ಇಂಗ್ಲಿಷ್ ಪುಸ್ತಕದಲ್ಲಿ ವಕ್ರೀಕರಣ (ಓಸರಿಕೆ) ದೋಷಗಳನ್ನೂ ನಮೂದಿಸಿದನು.

ಸರ್ ವಿಲಿಯಂ ಬೌಮನ್

ಅಂಗಕ್ರಿಯೆಶಾಸ್ತ್ರಜ್ಞನಾಗಿದ್ದು ಮೂತ್ರಜನಕಾಂಗದ ಕ್ರಿಯೆಗಳನ್ನು ವಿವರಿಸಿ, ಅನಂತರ ಕಣ್ಣು ವೈದ್ಯನಾಗಿ ಮೂರ್‌ಫೀಲ್ಡ್ಸ್ ರಾಜ ಕಣ್ಣಾಸ್ಪತ್ರೆಯನ್ನು ಸೇರಿದ್ದ ಸರ್ ವಿಲಿಯಂ ಬೌಮನ್ (೧೮೧೬–೯೨) ಅನೇಕ ವರ್ಷ ಲಂಡನ್ನಿನ ಪ್ರಖ್ಯಾತ ಕಣ್ಣು ವೈದ್ಯನಾಗಿದ್ದನು. ಇವನು ಕಣ್ಣುಗುಡ್ಡೆಯ ಕೋಡ್ಪರೆಯಲ್ಲಿರುವ ಅಡಿಪರೆಯನ್ನು ವಿವರಿಸಿದ್ದನು. ಇದು ಈಗಲೂ ಅವನ ಹೆಸರಿನಲ್ಲೇ ಇದೆ. ಇದೇ ಕಾಲದಲ್ಲಿ, ಗ್ಲಾಸ್ಗೊ ಪಟ್ಟಣದಲ್ಲಿದ್ದ ವಿಲಿಯಂ ಮೆಕೆನ್ಸಿ (೧೭೯೧–೧೮೬೮) ಅಷ್ಟೇ ಪ್ರಖ್ಯಾತಿ ಪಡೆದಿದ್ದನು.

ಆರ್ಗೈಲ್ ರಾಬರ್ಟ್ಸನ್

ಎಡಿನ್ಬರೊನಲ್ಲಿ ಡಗ್ಲಾಸ್ ಆರ್ಗೈಲ್ ರಾಬರ್ಟ್ಸನ್ (೧೮೩೭–೧೯೦೯) ಕಣ್ಣುವೈದ್ಯದಲ್ಲಿ ಜಗತ್‌ಪ್ರಖ್ಯಾತಿ ಪಡೆದು ಅನೇಕ ಶೋಧನೆಗಳನ್ನು ನಡೆಸಿದನು. 'ಆರ್ಗೈಲ್ ರಾಬರ್ಟ್ಸನ್ ಪಾಪೆ' ಎಂಬ ಪಾಪೆಯ ಪ್ರತಿಕ್ರಿಯೆ ಎಲ್ಲಾ ವೈದ್ಯವಿದ್ಯಾರ್ಥಿಗಳ ಮನೆಮಾತಾಗಿದೆ.

ವಾನ್ ಗ್ರಾಫೆ

ಕಣ್ಣಿನ ಶಸ್ತ್ರಕ್ರಿಯೆ ಕೂಡ ಇದೇ ಕಾಲದಲ್ಲಿ ಪ್ರಕಾಶಕ್ಕೆ ಬರುತ್ತಲೇ ಇತ್ತು. ಆಲ್ಬರ್ಟ್ ವಾನ್ ಗ್ರಾಫೆ (೧೮೨೮–೭೦) ಹತ್ತಗಣ್ಣು ರೋಗಕ್ಕೆ ಕರಿಯಾಲಿ ಕೊಯ್ತೆಗೆದ ಶಸ್ತ್ರಕ್ರಿಯೆಯನ್ನು ಮಾಡಿ ದೃಷ್ಟಿ ದಾನ ಮಾಡಿದನು. ಶಸ್ತ್ರಕ್ರಿಯೆ ಅವನದೇ ಒಂದು ಪದ್ಧತಿ. ಮೆಡ್ಡಗಣ್ಣಿನ ಗಳಗಂಡ ರೋಗದ ವಾನ್ ಗ್ರಾಫೆ ಚಿಹ್ನೆ ವೈದ್ಯ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಬಳಕೆಯಲ್ಲಿದೆ. ಕಣ್ಣುದರ್ಶಕದ ಉಪಯೋಗವನ್ನು ಇವನು ಮೊಟ್ಟಮೊದಲಿಗೆ ಬಳಕೆಗೆ ತಂದು ಅನೇಕ ಕಣ್ಣು ಚಿಹ್ನೆಗಳನ್ನು ವಿವರಿಸಿದ್ದನು.

ಕಿವಿಶಾಸ್ತ್ರ ಮತ್ತು ದನಿನಾಳಶಾಸ್ತ್ರ

ಡುವೆರ್ನಿ

ಯೂಸ್ಟೇಕಿಯಸ್ ಮತ್ತು ಫೆಲ್ಲೊಪಿಯಸ್ ಕಿವಿಯ ಅಂಗರಚನೆ ಕ್ರಮವನು ವಿವರಿಸಿದ ಸ್ವಲ್ಪ ಕಾಲದನಂತರ ಮೊಟ್ಟಮೊದಲನೇ ಕಿವಿ ರೋಗಗಳ ಪುಸ್ತಕವನ್ನು ಜೆ. ಜಿ. ಡುವೆರ್ನಿ (೧೬೪೮-೧೭೩೦) ಬರೆದನು. ಇದನ್ನು ಬರೆದಾಗ ಇವನು ಪ್ಯಾರಿಸ್ಸಿನಲ್ಲಿ ಅಂಗರಚನೆಶಾಸ್ತ್ರ ಪ್ರಾಧ್ಯಾಪಕನಾಗಿದ್ದನು. ಇದು ಫ್ರೆಂಚ್ ಭಾಷೆಯಲ್ಲಿದ್ದು ಜರ್ಮನ್ ಹಾಗೂ ಇಂಗ್ಲೀಷ್ ಭಾಷೆಗಳಿಗೆ ೧೭೩೨ ಮತ್ತು ೧೭೪೮ರಲ್ಲಿ ಭಾಷಾಂತರವಾಯಿತು.

ಆನ್ಟೋನಿಯೊ ವಾಲ್ಸಾಲ್ವ

ಆನ್ಟೋನಿಯೊ ವಾಲ್ಸಾಲ್ವ (೧೬೬೬-೧೭೨೩) ಬೊಲೋನಿನಲ್ಲಿ ೧೭೦೪ರಲ್ಲಿ ಕಿವಿ ಪರಿಣತ ವೈದ್ಯನಾಗಿದ್ದಾಗ ಬರೆದ ಪುಸ್ತಕದಲ್ಲಿ ಕಿವುಡಿಗೆ ವಾಲ್ಸಾಲ್ವ ಗಾಳಿ ತುಂಬುವಿಕೆಯನ್ನು ವಿವರಿಸಿದನು. ೧೮೧೬ರ ತನಕ ಪ್ರತ್ಯೇಕವಾದ ಕಿವಿ ರೋಗದ ಆಸ್ಪತ್ರೆಗಳಿರಲಿಲ್ಲ. ಆಗ ಅರ್ಹನಲ್ಲದ ವೈದ್ಯ ಜಾನ್ ಹಾರ್ರಿಸನ್ ಕರ್ಟಿಸ್ ಕಿವಿ ಆಸ್ಪತ್ರೆಯೊಂದನ್ನು ಸ್ಥಾಪಿಸಿದನು. ಇದು ಕ್ರಮೇಣ ರಾಜ ಕಿವಿ ಆಸ್ಪತ್ರೆಯಾಯಿತು. ಕರ್ಟಿಸ್ಸಿಗೆ ಕಿವಿ ರೋಗಗಳ ವಿಚಾರ ತಿಳಿಯದಿದ್ದರೂ, ಎಲ್ಲಾ ಕಿವಿರೋಗಗಳನ್ನೂ ಪಿಚಕಾರಿ ಹಾಕಿ ಗುಣಪಡಿಸುತ್ತಿದ್ದನು.

ಜೋಸೆಫ್ ಟೋಯನ್ಬಿ

೧೯ನೇ ಶತಮಾನದ ಪ್ರಾರಂಭದಲ್ಲಿ ಕಿವಿಶಾಸ್ತ್ರ ಅಡ್ಡಕಸಬಿ ವೈದ್ಯರ ಕೈಗೆ ಸಿಕ್ಕಿ ಹಾಳಾಗುವ ಪರಿಸ್ಥಿತಿ ಒದಗಿತ್ತು. ಆಗ ಶಸ್ತ್ರವೈದ್ಯ ರಾಜ ಶಾಲೆಯ ಪ್ರಾಧ್ಯಾಪಕ ಓವೆನ್‌ನ ಸಹಾಯಪಾಲಕ ಜೋಸೆಫ್ ಟೊಯನ್ಬಿ (೧೮೧೫-೬೬) ಕಿವಿ ರೋಗಗಳ ಪುಸ್ತಕ ಬರೆದು, ಅದರಲ್ಲಿ ತಾನು ಮಾಡಿದ್ದ ೨೦೦೦ ಕಿವಿ ಛೇದನದ ಅನೇಕ ವಿವರಣೆಗಳನ್ನು ನಮೂದಿಸಿದ್ದನು. ಗಂಟಲು ಕಿವಿ (ಯೂಸ್ಟೇಕಿಯನ್) ನಾಳ ಕಿರಿದಾಗಿರುವುದನ್ನೂ, ಕಿವಿಪೆಡಸಣೆಯನ್ನೂ, ಕೀವುಗಿವಿಯಿಂದ ಸೋಂಕು ಮಿದುಳಿಗೆ ಹರಡಬಹುದೆಂದೂ ತಿಳಿಸಿದ್ದನು. ಚೂಚುಕಂದ ಶಸ್ತ್ರಕ್ರಿಯೆಯನ್ನು ಆತ ಮಾಡದಿದ್ದರೂ ಅದನ್ನು ಮಾಡಬಹುದೆಂದು ತಿಳಿಸಿದ್ದನು. ಕಿವಿಮೊರೆತವನ್ನು ಕ್ಲೋರೋಫಾರ್ಮ್ ಸೇವಿಸಿದನಂತರ ಕಿವಿಗೆ ಗಾಳಿ ತುಂಬಿ ಸರಿಪಡಿಸಬಹುದೆಂದು ನಂಬಿ ತಾನೇ ಈ ಪ್ರಯೋಗಕ್ಕೆ ಒಳಪಟ್ಟು ಪ್ರಾಣ ಕಳೆದುಕೊಂಡನು. ಆದರೂ, ಇವನೇ ನೂತನ ಕಿವಿಶಾಸ್ತ್ರದ ಸ್ಥಾಪಕನೆಂದು ಹೇಳಬಹುದು.

ಟೊಯನ್ಬಿಯ ಜೊತೆ ಇದ್ದ ಜೇಮ್ಸ್ ಹಿನ್ಟನ್ (೧೮೨೨-೭೫) ಮೊಟ್ಟಮೊದಲನೆಯ ಚೂಚುಕಂದ ಶಸ್ತ್ರಕ್ರಿಯೆಯನ್ನು ಮಾಡಿ ಇಂಗ್ಲೆಂಡಿಗೇ ಹೆಸರು ಗಳಿಸಿದ್ದನು. ಪ್ಯಾರಿಸಿನ ನೂತನ ಕಿವಿಶಾಸ್ತ್ರಜ್ಞ ಜೀನ್ ಮಾರಿ ಗಾಸ್ಪಾರ್ಡ್ ಇಟಾರ್ಡ್ (೧೭೭೫-

೧೮೫೮) ಹಾಗೂ ಜರ್ಮನಿಯ ವಿಲ್‌ಹೆಲ್ಮ್ ಕ್ರಾಮರ್ (೧೮೦೧-೭೫) ಹಾಗೂ ವಿಯನ್ನದ ಆಡಮ್ ಪೊಲಿಟ್ಜರ್ (೧೮೩೫-೧೯೨೦) ಕೂಡ ಕಿವಿಶಾಸ್ತ್ರಕ್ಕೆ ಸಾಕಷ್ಟು ಸೇವೆಯನ್ನು ಸಲ್ಲಿಸಿದರು.

ದನಿನಾಳಶಾಸ್ತ್ರದಲ್ಲೂ ಆಗ ಸಾಕಷ್ಟು ಪ್ರಗತಿಯಾಗಿತ್ತು. ಮ್ಯಾನ್ಯುಯಲ್ ಗಾರ್ಸಿಯ (೧೮೦೫-೧೯೦೬) ದನಿನಾಳದರ್ಶಕವನ್ನು ಕಂಡುಹಿಡಿದು ಪ್ಯಾರಿಸ್ಸಿನಲ್ಲಿ ಪ್ರಖ್ಯಾತಿ ಪಡೆದನು. ವಿಯನ್ನದ ಅಟ್ಟೊ ಚಿಯಾರಿ (೧೮೫೩-೧೯೧೮) ಹಾಗೂ ಮಾರ್ಕಸ್ ಹಜೆಕ್‌ರ (೧೮೬೧-೧೯೪೧) ದನಿನಾಳಶಾಸ್ತ್ರದ ವೈದ್ಯಶಾಲೆಗಳಿಗೆ ಹೊರ ದೇಶಗಳಿಂದ ವೈದ್ಯರು ಬಂದು ತರಪೇತು ಪಡೆದು ಹಿಂತಿರುಗುತ್ತಿದ್ದರು. ಇದೇ ರೀತಿ ಪ್ರಖ್ಯಾತಿ ಪಡೆದಿದ್ದ ಬ್ರಿಟನ್ನಿನ ಸರ್ ಮೊರೆಲ್ ಮ್ಯಾಕೆನ್ಸಿ(೧೮೩೭-೯೨)ದನಿನಾಳದ ಏಡಿಗಂತಿಯಿಂದ ನರಳುತ್ತಿದ್ದ ಜರ್ಮನಿಯ ಚಕ್ರವರ್ತಿ ೩ನೇ ಫ್ರೆಡೆರಿಕ್‌ನನ್ನು ಪರೀಕ್ಷಿಸಿ ಸಲಹೆ ಕೊಟ್ಟನು. ಫಿಲಡೆಲ್ಫಿಯದ ಷೆವೇಲಿಯರ್ ಜಾಕ್ಸನ್ (೧೮೬೫-೧೯೫೮) ಆಗ್ಗೆ ಬಳಕೆಯಲ್ಲಿ ತಿಳಿವಳಿಕೆಗಳ ಆಧಾರದ ಮೇಲೆ ಉಸಿರ್ನಾಳದರ್ಶಕವನ್ನು ಅನುಗೊಳಿಸಿ, ಅದರಿಂದ ಪರೀಕ್ಷೆ ಮಾಡುವ ಕ್ರಮಗಳನ್ನು ಉತ್ತಮಪಡಿಸಿದನು.

ಚರ್ಮಶಾಸ್ತ್ರ ಮತ್ತು ಮೇಹರೋಗಶಾಸ್ತ್ರ

ರಾಬರ್ಟ್ ವಿಲ್ಲನ್

ಬ್ರಿಟನ್ನಿನ ರಾಬರ್ಟ್ ವಿಲ್ಲನ್(೧೭೫೭-೧೮೧೨)ಚರ್ಮಶಾಸ್ತ್ರದ ಮೂಲ ಪುರುಷನೆಂದು ಭಾವಿಸಲಾಗಿತ್ತು. ಇವನು ಲಂಡನ್ನಿನಲ್ಲಿ ವೈದ್ಯವೃತ್ತಿಯಲ್ಲಿ ತೊಡಗಿದ್ದಾಗ ದೇವಿ ಹಾಕುವುದನ್ನು ಸಮರ್ಥಿಸಿ, ಅದನ್ನು ಸರ್ಕಾರ ಅಂಗೀಕರಿಸಿ ಕಾನೂನು ಮಾಡಬೇಕೆಂದು ಸಲಹೆಕೊಟ್ಟನು ಆದರೆ, ಅವನು ಸತ್ತ ೪೧ ವರ್ಷಗಳ ತನಕ ಕಾನೂನು ಜಾರಿಗೆ ಬರಲಿಲ್ಲ. ಅವನು ಅನೇಕ ಚರ್ಮರೋಗಗಳ ಗುಣಗಳನ್ನು ಅರಿತು, ವಿಂಗಡಿಸಿ ಅವುಗಳಲ್ಲಿ ಅನೇಕ ರೋಗಗಳು ವ್ಯಾಪಾರ, ಕಸಬುಗಳಿಗೆ ಸಂಬಂಧಪಟ್ಟಿರುವುವೆಂದು ತಿಳಿಸಿದನು. ಅವನು ಬರೆದ 'ಚರ್ಮ ರೋಗಗಳನ್ನು ಕುರಿತು' ಎಂಬ ಪುಸ್ತಕವಂತೂ ಶಾಸ್ತ್ರೀಯವಾಗಿತ್ತು.

ಚಾರ್ಲ್ಸ್ ಲಾರಿ

ವಿಲ್ಲನ್ ಬ್ರಿಟನ್ನಿನ ಚರ್ಮಶಾಸ್ತ್ರದ ಮೂಲ ಪುರುಷನಾಗಿದ್ದಂತೆ ಆನ್ನೆ ಚಾರ್ಲ್ಸ್ ಲಾರಿ (೧೭೨೬-೮೩) ಫ್ರಾನ್ಸಿನ ಮೂಲ ಪುರುಷನೆಂದು ಹೆಸರು ಪಡೆದು ಚರ್ಮಶಾಸ್ತ್ರದ ಪಠ್ಯಪುಸ್ತಕವನ್ನು ೧೭೭೭ರಲ್ಲಿ ಪ್ಯಾರಿಸ್ಸಿನಲ್ಲಿ ಬರೆದನು.

ರೇಮಂಡ್ ಸೆಬೊರಾಡ್

ಪ್ಯಾರಿಸ್ಸಿನ ಸೆಂಟ್ ಲೂಯಿ ಆಸ್ಪತ್ರೆಯ ರೇಮಂಡ್ ಸೆಬೊರಾಡ್ (೧೮೬೪-೧೯೩೮) ಹುಳುಕಡ್ಡಿ ಹಾಗೂ ಇತರ ಅಣಬೇನೆ ರೋಗಗಳನ್ನೆಲ್ಲಾ ವಿವರಿಸಿದನು.

ಇರಾಸ್ಮಸ್ ವಿಲ್ಸನ್

೧೯ನೇ ಶತಮಾನದಲ್ಲಿ ಬಹಳ ಖ್ಯಾತಿಪಡೆದಿದ್ದ ಬ್ರಿಟನ್ನಿನ ಚರ್ಮವೈದ್ಯ ಸರ್ ಇರಾಸ್ಮಸ್ ವಿಲ್ಸನ್ (೧೮೮೯–೮೪) ಶಸ್ತ್ರವೈದ್ಯರ ರಾಜ ಸಂಘದಲ್ಲಿ ಚರ್ಮಶಾಸ್ತ್ರದ ಪ್ರಾಧ್ಯಾಪಕ ಪೀಠವನ್ನು ಸ್ಥಾಪಿಸಿದನು. ಹಾಗೂ 'ಲ್ಯಾನ್ಸೆಟ್' ವೈದ್ಯ ವಾರಪತ್ರಿಕೆಯ ಸಹಾಯಕ ಸಂಪಾದಕನೂ ಆಗಿದ್ದನು. ಇವನು ಚರ್ಮಶಾಸ್ತ್ರದ ವೈದ್ಯ ಕಸಬನ್ನು ಅವಲಂಬಿಸಿದಾಗ, 'ಆಯ್ಕೆಯ ವಿಚಾರವಾಗಿ ಎಂದಿಗೂ ವಿಷಾದಪಡಲಿಲ್ಲ, ಚೆನ್ನಾದ ಆರೋಗ್ಯದ ಚರ್ಮಕ್ಕಿಂತಲೂ ಸುಂದರವಾದ್ದು ಮತ್ತೊಂದು ಮಾತ್ರ ಇದೆ. ಅದೇನೆಂದರೆ, ಅಪರೂಪದ ಒಂದು ಚರ್ಮ ರೋಗ' ಎಂದು ಹೇಳಿದನು. ಅಲ್ಲದೆ, ಹೆಚ್ಚು ಹಣ ಸಂಪಾದಿಸಿ, ಲೋಕೋಪಕಾರಿ ಕೆಲಸಗಳಲ್ಲಿ ತೊಡಗಿದ್ದನು. ಇವನಿಗೆ ಈಜಿಪ್ಟಿನ ಪ್ರಾಚೀನ ಶಾಸ್ತ್ರದಲ್ಲಿ ಹೆಚ್ಚು ಆಸಕ್ತಿ ಇದ್ದುದರಿಂದ ಹಣಕೊಟ್ಟು, ಚೌಮೂಲೆಯ ಸೂಜಿಯಾಕಾರದ ಸ್ಮಾರಕ ಸ್ಥಂಭವನ್ನು ಈಜಿಪ್ಟಿನಿಂದ ತಂದು ಥೇಮ್ಸ್ ನದಿ ದಡದಲ್ಲಿ ಸ್ಥಾಪಿಸಿದನು.

ಫರ್ಡಿನೆಂಡ್ ಹೆಬ್ರ


ಇದೇ ರೀತಿ ಎಡಿನ್ಬರೊ, ಹಾರ್ವಾರ್ಡ್ ಮತ್ತಿತರ ಪಟ್ಟಣಗಳಲ್ಲೂ, ಚರ್ಮ ಶಾಸ್ತ್ರ ಬೆಳೆದು ಬರುತ್ತಿತ್ತು. ವಿಯನ್ನದಲ್ಲಿ ಚರ್ಮಶಾಸ್ತ್ರದ ವೈದ್ಯಶಾಲೆಯನ್ನು ಸ್ಥಾಪಿಸಿದ ಫರ್ಡಿನೆಂಡ್ ಹೆಬ್ರ (೧೮೧೬–೮೦) ೧೯ನೇ ಶತಮಾನದ ಚರ್ಮಶಾಸ್ತ್ರದ ಮಹಾಪುರುಷ ಚರ್ಮರೋಗಗಳ ವಿಂಗಡಣೆ, ಅವುಗಳ ರೋಗನಿದಾನ ಹಾಗೂ ಕಾರಣಗಳನ್ನು ವಿವರಿಸಿದನು. ಹಾಮ್ಬರ್ಗಿನ ಪಾಲ್ ಗೆರ್ಸನ್ ಉನ್ನ (೧೮೫೦–೧೯೨೯) ಕೂಡ ಚರ್ಮಶಾಸ್ತ್ರಕ್ಕೆ ಸಾಕಷ್ಟು ಸೇವೆ ಸಲ್ಲಿಸಿದನು.

ಫಿಲಿಪ್ಪೆ ರಿಕಾರ್ಡ್

ಹೀಗೆ ಚರ್ಮಶಾಸ್ತ್ರ ಒಂದು ಪ್ರತ್ಯೇಕ ಶಾಖೆಯಾಗಿ ಬೆಳೆಯುತ್ತಿದ್ದಾಗ,ಉಪದಂಶ ಮೇಹರೋಗದ ಚಿಹ್ನೆಗಳು ಚರ್ಮದಲ್ಲಿ ಕಾಣುತ್ತಿದ್ದುದರಿಂದ ಅವನ್ನೂ ಚರ್ಮರೋಗಗಳ ಗುಂಪಿನಲ್ಲೇ ಸೇರಿಸಲಾಯಿತು ೧೯ನೇ ಶತಮಾನದಆದಿಯಲ್ಲಿ ಪ್ಯಾರಿಸ್ಸಿನ ಫಿಲಿಪ್ಪೆ ರಿಕಾರ್ಡ್ (೧೭೯೯–೧೮೮೯) ಉಪದಂಶದ ಪರಿಣತನಾಗಿದ್ದು, ಅದರ ಮೂರು ಹಂತಗಳನ್ನು ವಿವರಿಸಿ ಎಲ್ಲರ ಮೆಚ್ಚಿಗೆಯನ್ನು ಸಂಪಾದಿಸಿದನು. ೧೯೦೫ರಲ್ಲಿ ಉಪದಂಶದ ಬಿಳಿಚ ನಾಗಕೀಟವನ್ನು ಪತ್ತೆ ಹಚ್ಚಿದ ಹ್ಯಾಮ್ಬರ್ಗಿನ ಫ್ರಿಟ್ಸ್ ರಿಚರ್ಡ್ ಷೌಡಿನ್ (೧೮೭೧–೧೯೦೬), ಉಪದಂಶ ರೋಗಿ ರಕ್ತ ಪರೀಕ್ಷೆಯನ್ನು ೧೯೦೬ರಲ್ಲಿ ಕಂಡುಹಿಡಿದ ಬರ್ಲಿನ್ನಿನ ಆಗಸ್ಟ್ ವಾನ್ ವಾಸರ್ಮನ್ (೧೮೬೬–೧೯೨೫) ಹಾಗೂ ೧೯೦೯ರಲ್ಲಿ ಉಪದಂಶ ಗುಣಪಡಿಸಲು ೬೦೬ ಎಂಬ ಮದ್ದನ್ನು ಕಂಡುಹಿಡಿದ ಫ್ರಾಂಕ್‌ಫರ್ಟಿನ ಪಾಲ್ ಆರ್ಲಿಕ್ (೧೮೫೪–೧೯೧೫) ಈ ಮೂವರೂ ಉಪದಂಶಶಾಸ್ತ್ರಕ್ಕೆ ಮಹತ್ತರ ಸೇವೆ ಸಲ್ಲಿಸಿದರು. ಇವರಲ್ಲಿ ಕೊನೆಯ ಇಬ್ಬರು ಕಾಕ್ ಮಹಾಶಯನ ಶಿಷ್ಯಂದಿ

ರಾಗಿ ಜನಸೇವೆಯೇ ಜನಾರ್ಧನ ಸೇವೆಯೆಂದು ನಂಬಿದ್ದರು. ರಸಾಯನರೋಗ ಚಿಕಿತ್ಸೆಗೆ ಆರ್ಲಿಕ್‌ನೇ ಮೂಲಪುರುಷನೆಂದು ಪ್ರಖ್ಯಾತಿ ಪಡೆದನು.


ವಿಕಿರಣಶಾಸ್ತ್ರ



ವಿಲ್‌ಹೆಲ್ಮ್ ಕಾನ್‌ರಾಡ್ ರಾಂಟ್‌ಜನ್

ಕಾನ್ರಾಡ್ ರಾಂಟ್‌ಜನ್

ವೈದ್ಯಶಾಸ್ತ್ರದಲ್ಲೇ ಅತಿ ಮುಖ್ಯವಾದ 'ಕ್ಷ' ಕಿರಣದ ತಿಳಿವಳಿಕೆ ೧೯ನೇ ಶತಮಾನದ ಕೊನೇ ವರ್ಷಗಳಲ್ಲಿ ಬಹಿರಂಗವಾಗಿತ್ತು. ೧೮೯೫ರ ನವೆಂಬರ್ ೮ರಲ್ಲಿ ವುರ್ಜ್‌ಬರ್ಗಿನ ವಿಲ್‌ಹೆಲ್ಮ್ ಕಾನ್ರಾಡ್‌ರಾಂಟ್ಜೆನ್ (೧೮೪೫–೧೯೨೩) ಹಿಟ್ಟಾರ್ಫ್-ಕ್ರೂಕ್ಸ್ ನಾಳದ ಮೂಲಕ ವಿದ್ಯುತ್ ಹರಿವನ್ನು ಹರಿಸಿದಾಗ, ಪಕ್ಕದ ಮೇಜಿನ ಮೇಲಿದ್ದ ಬೇರಿಯಂ ಪ್ಲಾಟಿನೊಸಯನೈಡ್ ಹರಳುಗಳು ಸೂಸುಮಿರುಗುವುದನ್ನು ನೋಡಿ, ಪ್ರಯೋಗ ಮುಂದುವರಿಸಿ ಈ ಸೂಸುಮಿರುಗಣೆಯು



ರಾಂಟ್‌ಜನ್ ಭಾಷಣ ಮಾಡುತ್ತಿರುವುದು

ಉಪಯೋಗಗಳನ್ನು ಹೊರಗೆಡಹಿದನು. ಈ ಸಂಗತಿಯನ್ನು ೧೮೯೬ನೇ ಜನವರಿ ೨೩ರಲ್ಲಿ ವುರ್ಜ್‌ಬರ್ಗ್ ವಿಶ್ವವಿದ್ಯಾಲಯದ ಭೌತಶಾಸ್ತ್ರ ಸಂಸ್ಥೆಯಲ್ಲಿ ತಿಳಿಸಿದ್ದನು. ಮೂಳೆಮುರಿತ, ಕೀಲುಪಲ್ಲಟ ಮುಂತಾದವನ್ನು ಈ 'ಕ್ಷ' ಕಿರಣದ ಸಹಾಯದಿಂದ ಮೊದಮೊದಲು ಪರೀಕ್ಷಿಸಲಾಗುತ್ತಿತ್ತು. ಕ್ರಮೇಣ ಬಿಸ್ಮತ್ ಮತ್ತು ಬೇರಿಯಂ ಮುಂತಾದ ಆಚೆತೂರದ ವಸ್ತುಗಳ ದ್ರಾವಣಗಳನ್ನು ಉಪಯೋಗಿಸಿ ಜಠರ, ಕರುಳು ನಾಳ, ಪಿತ್ತದ ಹಾಗೂ ಮೂತ್ರದ ನಾಳಗಳನ್ನು ಪರೀಕ್ಷಿಸಲು ಬಳಸಲಾಗಿತ್ತು. ಅನಂತರ ಶ್ವಾಸಕೋಶ, ಮಿದುಳು ಇತ್ಯಾದಿ ಅವಯವಗಳನ್ನೆಲ್ಲಾ ಪರೀಕ್ಷಿಸಲು 'ಕ್ಷ' ಕಿರಣ ಅತ್ಯುತ್ತಮ ಸಾಧನವಾಯಿತು. ಹೀಗೆ 'ಕ್ಷ' ಕಿರಣ ಕಂಡುಹಿಡಿದು ವೈದ್ಯಶಾಸ್ತ್ರಕ್ಕೆ ಸೇವೆ ಸಲ್ಲಿಸಿದ್ದರಿಂದ ರಾಂಟ್‌ಜನ್ನಿಗೆ ನೊಬೆಲ್ ಬಹುಮಾನ ೧೯೦೧ರಲ್ಲಿ ದೊರೆಯಿತು. ದುರಾದೃಷ್ಟವಶಾತ್ 'ಕ್ಷ' ಕಿರಣದಿಂದ ಉಪಯೋಗವಿದ್ದರೂ ಹಾನಿಕರವಾಗಿತ್ತು. ಅನೇಕ ವಿಜ್ಞಾನಿಗಳಿಗೆ ರಕ್ಷಣಾವಿಧಾನಗಳಿಲ್ಲದೆ 'ಕ್ಷ' ಕಿರಣದಿಂದ ಏಡಿಗಂತಿ ಎದ್ದು ಮರಣಕ್ಕೀಡಾದರು. ಇತ್ತೀಚೆಗೆ ಸೂಕ್ತ ರಕ್ಷಣಾ ವಿಧಾನಗಳು ಉಪಯೋಗಕ್ಕೆ ಬಂದು ಕೆಡುಕನ್ನೆಲ್ಲಾ ನಿವಾರಿಸಲಾಗಿದೆ.



ಒಂದು ಹೊಸ ರೀತಿಯ ಕಿರಣವನ್ನು ಪ್ರಸಿದ್ಧಗೊಳಿಸಿದಾಗ ಪ್ರೊ. ಕೊಲ್ಲಿಕರನ ಕೈವಿಕಿರಣ ಚಿತ್ರವನ್ನು ಪ್ರೊ. ರಾಂಟ್‌ಜನ್ ತೆಗೆದದ್ದು.

ರೈಬರ್ಗ್ ಫಿನ್ಸೆನ್

ಕ್ರಮೇಣ ಅನೇಕ ಚರ್ಮ ರೋಗಗಳನ್ನು ಗುಣಪಡಿಸಲು 'ಕ್ಷ' ಕಿರಣ ಉಪಯೋಗಕ್ಕೆ ಬಂದಿತು. ಇತ್ತೀಚೆಗೆ, ಆಳವ 'ಕ್ಷ' ಕಿರಣ ಏಡಿಗಂತಿಯನ್ನು ಗುಣಪಡಿಸಲು ಬಳಕೆಯುಲ್ಲಿದೆ. ಈ ಸಂದರ್ಭದಲ್ಲಿ ನೀಲ್ಸ್ ರೈಬರ್ಗ್ ಫಿನ್ಸೆನ್ (೧೮೬೦–೧೯೦೪)

ಚರ್ಮತವೆ ರೋಗವನ್ನು ಗುಣಪಡಿಸಲು ೧೮೯೩ರಲ್ಲಿ ತೀರಿದ ನೇರಳೆ ಬೆಳಕಿನ ಉಪಯೋಗವನ್ನು ಪ್ರಕಟಿಸಿದನು.

ಕ್ಯೂರಿಗಳು

ಪಿಯರ್ರೆ ಕ್ಯೂರಿ (೧೮೫೯-೧೯೦೬) ಮತ್ತು ಮೇರಿ ಕ್ಯೂರಿ (೧೮೬೭-೧೯೩೪)



ಪಿಯುರ್ರೆ ಹಾಗೂ ಮೇರಿ ಕ್ಯೂರಿ, ಮಗಳು ಐರೀನ್ ಕ್ಯೂರಿ ಜೊತೆಯಲ್ಲಿ (೧೯೦೪)

೧೮೯೮ರಲ್ಲಿ ರೇಡಿಯಂ ವಿಕರಣವನ್ನು ಪತ್ತೆ ಹಚ್ಚಿ, ಇದರ ಫಲವಾಗಿ ಏಡಿಗಂತಿ ಮುಂತಾದ ರೋಗಗಳಿಗೆ ಗುಣಕಾರಿ ಸೌಕರ್ಯಗಳನ್ನು ಪ್ರಪಂಚದ ಮುಂದಿಟ್ಟರು.

ವೈದ್ಯವೃತ್ತಿಗೆ ಹೆಂಗಸರ ಆಗಮನ

ಹೆಂಗಸು ವೈದ್ಯಶಾಸ್ತ್ರವನ್ನು ಕಲಿತು ತನ್ನ ಜೀವನದ ಆಧಾರವೆಂದು ಭಾವಿಸಿ ಅವಲಂಬಿಸಿದ್ದು, ೧೯ನೇ ಶತಮಾನದ ಒಂದು ವೈಶಿಷ್ಟ್ಯವೆಂದು ಹೇಳಬಹುದು. ಇದಕ್ಕೆ ಹಿಂದೆ ಹೆಂಗಸು ಆಗಾಗ್ಗೆ ವೈದ್ಯವೃತ್ತಿಯಲ್ಲಿ ಆಸಕ್ತಿ ತೋರಿಸಿರಬಹುದು. ಸೆಲೆರ್ನೊ ವೈದ್ಯಶಾಲೆಯ ಟ್ರಾಟುಲ ವೈದ್ಯಶಾಸ್ತ್ರದ ಶಿಕ್ಷಣದಲ್ಲಿ ಸಹಾಯ ಮಾಡಿರುವುದೂ ಸಹಜವೇ. ಆದರೆ ,ಹೆಂಗಸು ವೈದ್ಯ ವಿದ್ಯಾಭ್ಯಾಸ ಮಾಡಲು ಆರಂಭಿಸಿದ್ದು, ಹಾಗೂ ಗಂಡಸಿಗೆ ಸಮನಾಗಿ ವೈದ್ಯವೃತ್ತಿಯನ್ನವಲಂಬಿಸಿದ್ದು ಇತ್ತೀಚೆಗೆ ಮಾತ್ರ. ಎಲಿಜಬೆತ್ ಬ್ಲಾಕ್‌ವೆಲ್ (೧೮೨೧-೧೯೧೦) ಬ್ರಿಸ್ಟಲ್ಲಿಂದ ಅಮೆರಿಕಾಕ್ಕೆ ತನ್ನ ತಾಯಿ ತಂದೆಗಳೊಡನೆ ಹೋಗಿ ವೈದ್ಯಶಾಸ್ತ್ರ ಕಲಿತು ನ್ಯೂಯಾರ್ಕ್‌ನಿಂದ ೧೮೪೯ರಲ್ಲಿ ಪದವಿ ಪಡೆದು ಮೇಲ್ಪಂಕ್ತಿ ಹಾಕಿದಳು. ಹೆಂಗಸರು ವೈದ್ಯ ವಿದ್ಯಾಭ್ಯಾಸ ಮಾಡಲು ಮುಂದೆ ಬರುತ್ತಿದ್ದುದರಿಂದಲೂ, ಅವರಿಗೆ ತಕ್ಕ ಉತ್ತೇಜನ ಕೊಡುವ ಭಾವನೆಯಿಂದಲೂ

ಮುಂದಿನ ವರ್ಷ ಪೆನ್ಸಿಲ್ವೇನಿಯದ ಹೆಂಗಸರ ವೈದ್ಯಶಾಲೆಯೊಂದು ಫಿಲಡೆಲ್ಫಿಯದಲ್ಲಿ ಸ್ಥಾಪಿತವಾಯಿತು. ಇದನ್ನು ಹೆಂಗಸರಿಗೆ ಮಾತ್ರ ತೆಗೆಯಲಾಗಿತ್ತು. ಬ್ರಿಟನ್ನಿನಲ್ಲೂ ಇದೇ ರೀತಿ ಅನುಕೂಲ ದೊರೆತು ಎಲಿಜಬೆತ್ ಗ್ಯಾರೆಟ್ (೧೮೩೬–೧೯೧೭) ಮೊಟ್ಟಮೊದಲನೆಯ ವೈದ್ಯ ಪದವೀಧರೆಯಾಗಿದ್ದಳು. ಇವಳು ಹೆಂಗಸರ ವೈದ್ಯ ವಿದ್ಯಾಭ್ಯಾಸಕ್ಕೋಸ್ಕರ ಬಹಳ ದುಡಿದು ಡಾ. ಸೋಫಿಯ ಜೆಕ್ಸ್-ಬ್ಲೇಕ್‌ಳ ಸಹಾಯ ಪಡೆದು, ೧೮೭೪ರಲ್ಲಿ ಲಂಡನ್ನಿನ ವೈದ್ಯಶಾಲೆಯನ್ನು ಸ್ಥಾಪಿಸಿದಳು. ಬ್ರಿಟನ್ನಿನ ವಿಶ್ವವಿದ್ಯಾಲಯಗಳಿಗೆಲ್ಲಾ ಎಡಿನ್ಬರೊ ವಿಶ್ವವಿದ್ಯಾಲಯವೇ ಉಚ್ಚ ವೈದ್ಯ ಶಿಕ್ಷಣಕ್ಕೆ ಹೆಂಗಸರನ್ನು ಸೇರಿಸಿಕೊಳ್ಳುವುದರಲ್ಲಿ ಮೊದಲನೆಯದು. ಆದರೆ, ಹೆಂಗಸರಿಗೆ ಪ್ರತ್ಯೇಕ ಶಿಕ್ಷಣ ಮಾತ್ರ ಕೊಟ್ಟರೂ, ಗಂಡಸರಿಗೆ ಸಲ್ಲುತ್ತಿದ್ದ ಸ್ಥಾನಮಾನಗಳನ್ನು ಕೊಟ್ಟರಲಿಲ್ಲ. ಆಗಿನ ಎಡಿನ್ಬರೊ ವಿದ್ಯಾರ್ಥಿನಿಯರಲ್ಲಿ ಸೋಫಿಯ ಜೆಕ್ಸ್–ಬ್ಲೇಕ್ (೧೮೪೦–೧೯೧೨) ಅಗ್ರಗಣ್ಯಳು. ಎಷ್ಟೇ ಪ್ರತಿಭಟನೆಗಳಿದ್ದರೂ ತಡೆದು ತನಗೆ ಸಲ್ಲಬೇಕಾಗಿದ್ದ ಹಕ್ಕುಗಳನ್ನೆಲ್ಲಾ ಪಡೆದಳು. ಅವಳು ೧೮೭೬ರಲ್ಲಿ ಪದವಿ ಪಡೆಯುವ ಸಮಯಕ್ಕೆ ಸರಿಯಾಗಿ, ಸಾಮಾನ್ಯ ವೈದ್ಯಮಂಡಳಿ ವೈದ್ಯೆಯರೂ ಸಾಮಾನ್ಯ ವೈದ್ಯವೃತ್ತಿಯನ್ನು ನಡೆಸಬಹುದೆಂದು ಅಂಗೀಕರಿಸಿತು.

ದಾದಿಯರ ವೃತ್ತಿಯಲ್ಲಿ ಕ್ರಾಂತಿ

೧೯ನೇ ಶತಮಾನದ ಮಧ್ಯಭಾಗಕ್ಕೂ ಹಿಂದೆ, ದಾದಿಯರ ಕೆಲಸವನ್ನು ಮನೆಯ ಆಳಿನ ಕೆಲಸಕ್ಕೆ ಹೋಲಿಸಬಹುದಾಗಿತ್ತು. ಆಗ ಇಂಗ್ಲೆಂಡಿನಲ್ಲಿ ಒಬ್ಬ ದಾದಿಯ ಸಂಬಳ ವರ್ಷ ಒಂದಕ್ಕೆ ಕೇವಲ ೫ ಪೌಂಡುಗಳು ಮಾತ್ರವಿತ್ತು. ಬೆಳಗಿನ ಜಾವ ೬ ಘಂಟೆಯಿಂದ ಸಂಜೆ ಆರು ಘಂಟೆಯ ತನಕ ಕೆಲಸ ದುಡಿಯಬೇಕಿತ್ತು. ರೋಗಿಗಳ ಶುಶ್ರೂಷೆಯಲ್ಲದೆ ಆಸ್ಪತ್ರೆಗಳ ಮಲಿನ ಕೆಲಸಗಳಿಗೂ ಗಮನ ಕೊಡಬೇಕಾಗಿತ್ತು. ರಾತ್ರಿಯ ವೇಳೆ ಸುಮಾರು ೧೦೦ ರೋಗಿಗಳ ಜವಾಬ್ದಾರಿ ಒಬ್ಬ ದಾದಿಯ ಮೇಲೆ ಬಿದ್ದಿರುತ್ತಿತ್ತು. ಹೀಗಿರುವಾಗ, ಈ ವೃತ್ತಿಯನ್ನು ಉತ್ತಮಿಸಲು ಸುಧಾರಣೆಗಳು ಅಗತ್ಯವೆಂದು ಕಂಡುಬಂದು, ಎಲಿಜಬೆತ್ ಫ್ರೈ (೧೭೮೦–೧೮೪೫) ತನ್ನ ಪ್ರಭಾವದಿಂದ ಸುಧಾರಿಸಲು ಪ್ರವೇಶಮಾಡಿ ಈ ಕೆಲಸದಲ್ಲಿ ಮೊಟ್ಟಮೊದಲನೆಯವಳಾದಳು. ೧೮೨೩ರಲ್ಲಿ ಇಂಗ್ಲೆಂಡಿಗೆ ಭೇಟಿಕೊಟ್ಟ ಜರ್ಮನಿಯ ಥಿಯೊಡಾರ್ ಫ್ಲೀಡ್ನರ್ (೧೮೦೦–೬೪) ಫ್ರೈಯಳ ಉಪದೇಶಗಳನ್ನು ಮೆಚ್ಚಿ, ತನ್ನ ದೇಶಕ್ಕೆ ಹಿಂತಿರುಗಿದನಂತರ ೧೮೩೬ರಲ್ಲಿ ತನ್ನ ಹೆಂಡತಿ ಸಂಗಡ ಬಡರೋಗಿಗಳ ಶುಶ್ರೂಷೆಗೋಸ್ಕರ ಒಂದು ಚಿಕ್ಕ ಆಸ್ಪತ್ರೆಯನ್ನು ಸ್ಥಾಪಿಸಿದನು. ಆದ್ದರಿಂದ, ದಾದಿಯರ ವೃತ್ತಿಯಲ್ಲಿ ಸುಧಾರಣೆ ತಂದ ದೇಶಗಳಲ್ಲಿ ಜರ್ಮನಿಯೇ ಮೊದಲನೆಯದೆಂದು ಹೇಳಬಹುದು.

ಫ್ಲಾರೆನ್ಸ್ ನೈಟಿಂಗೇಲ್

ಇದಕ್ಕೂ ಹೆಚ್ಚಿನ ಸುಧಾರಣೆಗಳನ್ನು ಕ್ರಮೇಣ ಫ್ಲಾರೆನ್ಸ್ ನೈಟಿಂಗೇಲ್ (೧೮೨೦–೧೯೧೦) ತನ್ನ ದೃಢ ನಿಷ್ಠೆಯಿಂದಲೂ ಪ್ರೇರೇಪಣೆಯಿಂದಲೂ ಜಾರಿಗೆ

ತಂದಳು. ಇವಳು ದಾದಿಯರ ವೃತ್ತಿಯಲ್ಲಿ ಕ್ರಾಂತಿ ಎಬ್ಬಿಸಿದವಳೆಂದು ಹೇಳುವುದರಲ್ಲಿ ಯಾವ ಸಂಶಯವೂ ಇಲ್ಲ. ಇವಳಿಗೆ ೧೮೪೪ರಲ್ಲಿ ರೋಗಿಗಳ ಶುಶ್ರೂಷೆಯಲ್ಲಿ ಆಸಕ್ತಿಹುಟ್ಟಿ, ದಾದಿಯರ ಕೆಲಸದಲ್ಲಿ ತರಪೇತು ಪಡೆಯಲು ೧೮೪೬ರಲ್ಲಿ ಜರ್ಮನಿಯ "ಕೈಸರ್ಸ್‌ವರ್ತ್ ಡಿಕೊನೆಸೆಸ್" ಎಂಬ ಸಂಸ್ಥೆಯನ್ನು ಸೇರಿದಳು. ಅಲ್ಲಿ ಮೂರು ತಿಂಗಳು ಕೆಲಸವನ್ನು ಕಲಿತು, ೧೮೫೩ರಲ್ಲಿ ಹಾರ್ಲಿ ರಸ್ತೆಯ ಮೇಲ್ಭಾಗದಲ್ಲಿ ಶ್ರೀಮಂತೆ ರೋಗಿಯರ ಶುಶ್ರೂಷೆಗೋಸ್ಕರ ಏರ್ಪಡಿಸಿದ್ದ ಸಂಸ್ಥೆಯೊಂದರ ಅಧಿಕಾರ ವಹಿಸಿಕೊಂಡಳು.



ಫ್ಲಾರೆನ್ಸ್ ನೈಟಿಂಗೇಲ್

೧೮೫೪ರಲ್ಲಿ ನಡೆಯುತ್ತಿದ್ದ ಕ್ರಿಮಿಯ ಯುದ್ಧದಲ್ಲಿ ಗಾಯವಾದ ಬ್ರಿಟಿಷ್ ಸೈನಿಕರಿಗೆ ಸರಿಯಾದ ಚಿಕಿತ್ಸೆ ದೊರಕದ್ದರಿಂದ, ನೈಟಿಂಗೇಲಳು ಅನುಭವವಿದ್ದ ೩೮ ದಾದಿಯರ ಸಂಗಡ ಗಾಯವಾದವರಿಗೆ ಸೇವೆ ಸಲ್ಲಿಸಲು ಹೊರಟು, ಸ್ಕುಟಾರಿಯಲ್ಲಿದ್ದ ಕೊಳಕಿನಿಂದ ತುಂಬಿ ತುಳುಕುತ್ತಿದ್ದ ಸೇನೆಯ ಆಸ್ಪತ್ರೆಯೊಂದರ ಜವಾಬ್ದಾರಿಯನ್ನು ವಹಿಸಿಕೊಂಡಳು. ಸೇವೆ ಸಲ್ಲಿಸುವುದಲ್ಲದೆ ದಾದಿಯರನ್ನು ತರಪೇತು ಮಾಡುವುದೇ ಇವಳ ಧ್ಯೇಯ. ಹೀಗಿದ್ದರೂ, ಮೇಲಿನ ಸೇನಾ ಅಧಿಕಾರಿಗಳಿಂದ ಅವಳಿಗೆ ಅಷ್ಟೇನೂ ಪ್ರೋತ್ಸಾಹ ಸಿಗಲಿಲ್ಲ. ಜೀವ ಉಳಿದು ಬದುಕಿದ್ದ ಸೈನಿಕರು ಮಾತ್ರ ಅವಳ ಆಡಳಿತ ಚಾತುರ್ಯವನ್ನೂ, ಸರಳತೆ, ಪ್ರೀತಿ ವಿಶ್ವಾಸಗಳನ್ನೂ ಮೆಚ್ಚಿ ಕೊಂಡಾಡಿದರು. ಅವಳು ಆಡಳಿತ ವಹಿಸಿಕೊಂಡ ಕೂಡಲೇ ಹಗಲಿರುಳೆಲ್ಲಾ ಕೆಲಸ ಮಾಡಬೇಕಿತ್ತು. ಹಗಲಿನಲ್ಲಿ ಆಸ್ಪತ್ರೆಗಳಿಗೆ ಭೇಟಿಕೊಟ್ಟು ಸಲಹೆ ನೀಡುತ್ತಿದ್ದಳು. ರಾತ್ರಿ ವೇಳೆ ದೀಪ ಹಿಡಿದು ಗಾಯಗೊಂಡಿದ್ದವರ ಯೋಗಕ್ಷೇಮ ವಿಚಾರಿಸುತ್ತಿದ್ದುದಲ್ಲದೆ, ವರದಿ ಹಾಗೂ ಕಾಗದಪತ್ರಗಳನ್ನು ಬರೆಯುತ್ತಿದ್ದಳು. ಆದ್ದರಿಂದಲೇ, ಇವಳಿಗೆ 'ದೀಪಧಾರಿಣಿ' ಎಂದು ಹೆಸರಾಯಿತು. ಇವಳ ಜವಾಬ್ದಾರಿಯಲ್ಲಿ ೧೦,೦೦೦ಕ್ಕೂ ಮೀರಿ ರೋಗಿಗಳಿದ್ದುದರಿಂದ ಆಸ್ಪತ್ರೆಗಳನ್ನು ಗಸ್ತು ಮಾಡಿ ಬರುವುದೇ ಬಹಳ ಕಷ್ಟವಾಗುತ್ತಿತ್ತು. ಇವಳ ಕೈಕೆಳಗಿದ್ದ ದಾದಿಯರ ಸಹಾಯದಿಂದ ಇಷ್ಟು ಜನಕ್ಕೂ ಆಹಾರ, ಬಟ್ಟೆಬರೆ, ಔಷಧಿ

ಗಳನ್ನು ಹಂಚುತ್ತಿದ್ದುದಲ್ಲದೆ ಆಸ್ಪತ್ರೆಯ ಸಕಲ ಪ್ರದೇಶವನ್ನೂ ಶುದ್ಧೀಕರಿಸುತ್ತಿದ್ದಳು. ಈ ಕೆಲಸ ಕಾರ್ಯಗಳ ಫಲವಾಗಿ, ೧೮೫೫ನೇ ಫೆಬ್ರವರಿ ತಿಂಗಳಲ್ಲಿ ಶೇ. ೪೨ ರಷ್ಟು ಇದ್ದ ಸಾವು, ಅದೇ ವರ್ಷ ಜೂನ್ ತಿಂಗಳಿನಲ್ಲಿ ಶೇ. ೨ಕ್ಕೆ ಇಳಿದಿತ್ತು. ಕ್ರಿಮಿಯ ಯುದ್ಧಕಾಲದಲ್ಲಿ ನಡೆದ ನೈಟಿಂಗೇಲಳ ಈ ಸಾಧನೆಗಳು ಅವಳನ್ನು ರಾಷ್ಟ್ರ ವೀರ ನಾರಿಯರ ಶ್ರೇಣಿಗೆ ಏರಿಸಿದ್ದವು. ಯುದ್ಧಾನಂತರ ಇವಳನ್ನು ಲಂಡನ್ನಿಗೆ ಬರಮಾಡಿಕೊಂಡು ವಿಜಯ ಸ್ವಾಗತ ಕೊಡಬೇಕೆಂದು ಬ್ರಿಟಿಷ್ ಸರ್ಕಾರ ತೀರ್ಮಾನಿಸಿ, ಹೇಳಿಕಳುಹಿಸುವುದರೊಳಗೆ ಯಾರಿಗೂ ತಿಳಿಯದಂತೆ ಒಂದು ಫ್ರೆಂಚ್ ಹಡಗಿನಲ್ಲಿ ಕಡಲ್ಗಾಲುವೆ ದಾಟಿ ತನ್ನ ಮನೆಯನ್ನು ಸೇರಿಬಿಟ್ಟದ್ದಳು. ತನ್ನ ಸ್ವಾರ್ಥವನ್ನು ಮೆರೆಸುವುದರಲ್ಲಿ ಅವಳಿಗೆ ಇಷ್ಟವಿರಲಿಲ್ಲ. ಲಂಡನ್ನಿಗೆ ಹಿಂತಿರುಗಿದನಂತರ, ಸಾರ್ವತ್ರಿಕ ಚಂದಾ ಎತ್ತಿ, ಅದರಿಂದ ಸೆಂಟ್ ಥಾಮಸ್ ಆಸ್ಪತ್ರೆಯಲ್ಲಿ ಒಂದು ದಾದಿಯರ ಪಾಠಶಾಲೆಯನ್ನು ನಿರ್ಮಿಸಿ ತನ್ನ ಧ್ಯೇಯವನ್ನು ಸಾಧಿಸುವುದರಲ್ಲಿ ತೊಡಗಿದಳು. ಈ ಪಾಠಶಾಲೆ ಇಂಗ್ಲೆಂಡ್ ಹಾಗೂ ಅಮೆರಿಕಗಳ ದಾದಿಯರ ಮಾದರಿ ತರಪೇತು ಕೇಂದ್ರವಾಗಿತ್ತು. ಈ ಕಾರಣಗಳಿಂದ ಇವಳು ದಾದಿಯರ ತರಪೇತು ಶಾಲೆಯ ಸ್ಥಾಪಕಿಯೆಂದು ಹೆಸರು ಪಡೆದಿದ್ದಲ್ಲದೆ, ಇವಳು ಮಹತ್ತರವಾದ ಜನೋಪಕಾರಿ ಸೇವೆ ಸಲ್ಲಿಸಿದ್ದರಿಂದ ಸಾಯುವುದಕ್ಕೆ ೩ ವರ್ಷಕ್ಕೆ ಮೊದಲು "ಆರ್ಡರ್ ಆಫ್ ಮೆರಿಟ್" ಪ್ರಶಸ್ತಿ ಗೌರವವನ್ನೂ ಪಡೆದಳು.

ನೈಟಿಂಗೇಲಳ ಈ ಕಾರ್ಯಕಲಾಪಗಳಿಂದ ೧೮೬೪ರಲ್ಲಿ ಜಿನೀವ ನಗರದಲ್ಲಿ 'ಅಂತರರಾಷ್ಟ್ರೀಯ ಕೆಂಪು ಶಿಲುಬೆ ಸಮಿತಿ' ಪರೋಕ್ಷವಾಗಿ ಸ್ಥಾಪಿಸಲ್ಪಟ್ಟಿತ್ತು.

ಕೆಂಪು ಶಿಲುಬೆ ಸಂಸ್ಥೆ

ಕ್ರಿಮಿಯ ಯುದ್ಧದಲ್ಲಿ ಬ್ರಿಟನ್ನಿನ ಸೈನಿಕರು ಅನುಭವಿಸಿದ ಕಷ್ಟನಷ್ಟಗಳನ್ನು ಕುರಿತು ನೈಟಿಂಗೇಲ್ ಬರೆದ ವರದಿ ಪ್ರಕಟಣೆಯಾದ ೩ ವರ್ಷಗಳನಂತರ, ಉತ್ತರ ಇಟಲಿಯಲ್ಲಿ ಪ್ರಯಾಣ ಮಾಡುತ್ತಿದ್ದ ಸ್ವಿಸ್ ಬ್ಯಾಂಕುಗಾರ ಹಾಗೂ ಜನೋಪಕಾರಿಯಾಗಿದ್ದ ಹೆನ್ರಿ ಡುನಾಂಟ್ ಆಗ ಅಲ್ಲಿ ಆಸ್ಟ್ರಿಯ ಸೈನಿಕರಿಗೂ ಒಟ್ಟುಗೂಡಿದ ಇಟಲಿ ಮತ್ತು ಫ್ರೆಂಚ್ ಸೈನಿಕರಿಗೂ ಸಾಲ್ಫೆರಿನೊ ಎಂಬಲ್ಲಿ ನಡೆಯುತ್ತಿದ್ದ ಯುದ್ಧದಲ್ಲಿ ವೈದ್ಯ ಚಿಕಿತ್ಸೆ ಯಾವುದೂ ಇಲ್ಲದೆ ಮಡಿದವರನ್ನು ಕಂಡು ಭೀತಿಗೊಂಡನು. ಈ ಯುದ್ಧ ಕೇವಲ ೧೫ ಘಂಟೆಗಳ ಕಾಲ ಮಾತ್ರ ನಡೆಯಿತು. ಆದರೂ ಹೋರಾಡುತ್ತಿದ್ದ ೩೦೦,೦೦೦ ಸೈನಿಕರಲ್ಲಿ ೪೦,೦೦೦ಕ್ಕೂ ಹೆಚ್ಚು ಮಂದಿ ಮಡಿದಿದ್ದರು, ಇಲ್ಲವೆ ಗಾಯಗೊಂಡು ಮಡಿಯುತ್ತಿದ್ದರು. ಈ ಯುದ್ಧ ನಡೆದದ್ದು ೧೮೫೯ರ ಜೂನ್ ೨೪ರಲ್ಲಿ. ಈ ಪರಪೀಡಕ ಹಿಂಸೆ ಕಂಡು ಡುನಾಂಟ್‌ನ ಮನಸ್ಸು ನೊಂದು ತನ್ನ ವ್ಯಥೆಯನ್ನು ಒಂದು ಪುಸ್ತಕದಲ್ಲಿ ವಿವರಿಸಿ (೧೮೬೨) ಪ್ರಕಟಿಸಿದನು. ಈ ಸಣ್ಣ ಪುಸ್ತಕದಲ್ಲಿ ಗಾಯವಾದವರ ಕಷ್ಟ ನಿಷ್ಠುರಗಳನ್ನೂ ವೈದ್ಯಚಿಕಿತ್ಸೆ ಇಲ್ಲದೆ

ಸಾಯುತ್ತಿದ್ದ ದೃಶ್ಯಗಳನ್ನೂ ವಿವರಿಸಿದ್ದಲ್ಲದೆ, ರಾಷ್ಟ್ರಗಳಲ್ಲಿ ಒಂದಕ್ಕೊಂದಕ್ಕೆ ಭೇದ ಭಾವವಿಲ್ಲದೆ, ಯುದ್ಧ ಕಾಲದಲ್ಲಿ ನೊಂದವರಿಗೆ ಚಿಕಿತ್ಸೆ ನೀಡುವಂತೆಯೂ, ಇದನ್ನು ನೆರವೇರಿಸಲು ನಾಗರಿಕ ದೇಶಗಳೆಲ್ಲಾ ಸೇರಿ ಒಂದು ಸಂಸ್ಥೆಯನ್ನು ಏರ್ಪಡಿಸಬೇಕೆಂದೂ ತಿಳಿಸಿದನು. ಡುನಾಂಟ್‌ನ ಪುಸ್ತಕ ತಕ್ಷಣವೇ ಜನರಲ್ಲಿ ಅತ್ಯಾಶ್ಚರ್ಯವನ್ನುಂಟು ಮಾಡಿತ್ತು. ಇದರ ಪ್ರಭಾವವಂತೂ ಜರ್ಮನಿ, ಇಟಲಿ, ಮತ್ತಿತರ ಭಾಷೆಗಳಿಗೆ ಈ ಪುಸ್ತಕ ಭಾಷಾಂತರವಾಗುವಷ್ಟಿತ್ತು. ಇದು 'ಹೋಮರ್'ನ ಕೃತಿಗಳಿಗಿಂತಲೂ ಶ್ರೇಷ್ಠವೆಂದೂ, ಆ ಶತಮಾನದಲ್ಲಿ ಇಂಥ ಬೇರೊಂದು ಪುಸ್ತಕವಿರಲಿಲ್ಲವೆಂದೂ ಹಲವರ ಅಭಿಪ್ರಾಯವಾಗಿತ್ತು. ಡುನಾಂಟನ ಸೂಚನೆಗಳಿಗೆ ಚಕ್ರವರ್ತಿಗಳಿಂದಲೂ ಕ್ರೈಸ್ತ ದೇವಾಲಯಗಳ ಅಧಿಕಾರಿಗಳಿಂದಲೂ, ಸೇನೆ ಮತ್ತು ಸಾಮಾನ್ಯ ಜನರಿಂದಲೂ ತಕ್ಷಣವೇ ಮಾನ್ಯ ಸಿಕ್ಕಿ, ಸಕಾಲದಲ್ಲಿ ಕಾರ್ಯರೂಪಕ್ಕೆ ತರಲು ಒತ್ತಾಯ ಮಾಡಲು ೧೮೬೩ರಲ್ಲಿ ೧೪ ರಾಷ್ಟ್ರಗಳ ೩೬ ಮಂದಿ ಪ್ರತಿನಿಧಿಗಳ ಒಂದು ಸಮಿತಿ ಜಿನೀವದಲ್ಲಿ ಸೇರಿತು. ಮುಂದಿನ ವರ್ಷ, ೧೬ ಸರ್ಕಾರಗಳ ೨೬ ಪ್ರತಿನಿಧಿಗಳು ಸೇರಿ, ಜಿನೀವ ವಿಧ್ಯುಕ್ತ ಸಭೆ ಎಂಬ ಅಂತರರಾಷ್ಟ್ರೀಯ ಸಂಸ್ಥೆಯನ್ನು ಸ್ಥಾಪಿಸಿ, ಕೆಂಪು ಶಿಲುಬೆಯ ೧೦ ಕಾನೂನುಗಳನ್ನೊಳಗೊಂಡ ಒಪ್ಪಂದಕ್ಕೆ ಸಹಿಹಾಕಿ ಕೆಲಸಕಾರ್ಯಗಳನ್ನು ನೆರವೇರಿಸಲಿದ್ದರು. ಗಾಯಗೊಂಡವರ ರಕ್ಷಣೆ ಅತ್ಯಗತ್ಯ, ಮಿಲಿಟರಿ ಆಸ್ಪತ್ರೆಗಳನ್ನು ತಟಸ್ಥ ವಲಯಗಳೆಂದು ಭಾವಿಸಬೇಕು, ವೈದ್ಯ ಸಂಸ್ಥೆಗಳ ಸಿಬ್ಬಂದಿ ಹಾಗೂ ಆಸ್ತಿ ಪಾಸ್ತಿಗಳನ್ನು ರಕ್ಷಿಸಬೇಕು, ಈ ರಕ್ಷೆಯ ಹೆಗ್ಗುರುತಾದ ಕೆಂಪು ಶಿಲುಬೆಯಿರುವ ಬಿಳಿಯ ಬಾವುಟ ಹೀಗೆಂಬ ಕಾನೂನುಗಳನ್ನು ನಿಯಮಿಸಿದರು.

ಈ ಕೆಂಪು ಶಿಲುಬೆಯನ್ನು ಸ್ಥಾಪಿಸಿ, ಬೆಳೆಸುವುದರಲ್ಲಿ ಡುನಾಂಟನ ಖಜಾನೆಯೆಲ್ಲಾ ಬರಿದಾಗಿ ೧೮೬೭ರಲ್ಲಿ ಅವನು ನಿರ್ಗತಿಕನಾಗಿ ಯಾರ ಕಣ್ಣಿಗೂ ಬೀಳದಾದನು. ಕೊಳಚೆ ಪ್ರದೇಶದಲ್ಲಿ ಜೀವಿಸುತ್ತಿದ್ದು, ೧೮೭೦ರ ಯುದ್ಧದ ಕಾಲದಲ್ಲಿ, ಹೊರಗೆ ಬಂದು ಯುದ್ಧದಲ್ಲಿ ಗಾಯಗೊಂಡವರಿಗೆ ಸಹಾಯ ಮಾಡಲು ಬರುವ ದೇಶದ ಪ್ರಜೆಗಳನ್ನು ಸ್ವತಂತ್ರರೆಂದು ಭಾವಿಸಬೇಕೆಂದೂ, ಅವರನ್ನು ಹಿಂಸಿಸಬಾರದೆಂದೂ ಘೋಷಿಸಿ ಪುನಃ ೧೮೭೫ರಲ್ಲಿ ತಲೆಮರೆಸಿಕೊಂಡನು. ೧೫ ವರ್ಷಗಳ ಕಾಲ ಅವನು ಬದುಕಿರುವ ಸಮಾಚಾರವೇ ಗೊತ್ತಿರಲಿಲ್ಲ. ಅವನು ಸಾರಿದ ಹಿತ ನುಡಿಗಳು ಎಲ್ಲಾ ದೇಶಗಳಲ್ಲೂ ಹರಡಿ ಪ್ರಭಾವ ಬೀರುತ್ತಿರುವಾಗ ಅವನ ಜೀವನವೇ ಒಂದು ಪುರಾಣ ಕಥೆಯಾಗಿತ್ತು. ೧೮೯೦ರಲ್ಲಿ ಡುನಾಂಟ್ ೬೨ ವರ್ಷ ವಯಸ್ಸಿನಲ್ಲಿ ಸ್ವಿಟ್ಸರ್ಲೆಂಡಿನ ಒಂದು ಅನಾಥಾಲಯದಲ್ಲಿ ಕಂಡುಬಂದು, ೫ ವರ್ಷಗಳನಂತರ ಹೇಡನ್ನಿನ ಒಂದು ರೋಗಾಲಯದಲ್ಲಿ ಭ್ರಮೆಯಿಂದ ನರಳುತ್ತಿದ್ದುದನ್ನು ಸ್ವಿಟ್ಸರ್ಲೆಂಡಿನ ಪತ್ರಿಕೋದ್ಯಮಿಯೊಬ್ಬ ನೋಡಿ ಗುರ್ತಿಸಿದನು. ಡುನಾಂಟನ ಮಹತ್ವವನ್ನು ಮೆಚ್ಚಿ ೧೯೦೧ರಲ್ಲಿ ಮೊಟ್ಟಮೊದಲನೆಯ ನೊಬೆಲ್ ಶಾಂತಿ ಬಹುಮಾನವನ್ನು ಕೊಡಲಾಗಿತ್ತು. ಇದರಲ್ಲಿ ಬಂದ ಹಣವನ್ನೆಲ್ಲಾ ಬಡವರಿಗೋಸ್ಕರ ದಾನ ಮಾಡಿ, ೧೯೧೦

ರಲ್ಲಿ ೮೨ ವರ್ಷ ವಯಸ್ಸಾಗಿದ್ದಾಗ ಪ್ರಾಣಬಿಟ್ಟನು. ಇವನ ಸೇವೆ ಪರಮೋತ್ಕೃಷ್ಟವಾಗಿತ್ತು. ಇವನು ಸಾಧಿಸಿದ್ದ "ಎಲ್ಲಾ ಕಾಲದಲ್ಲೂ ಮಹತ್ತಮ ಮಾನವ ಹಿತಕಾರಿ ಸಾಧನೆಗಳಲ್ಲಿ ಕೆಂಪು ಶಿಲುಬೆಯೂ ಒಂದು ಎನ್ನುವುದರಲ್ಲಿ ಸಂದೇಹವೇ ಇಲ್ಲ".

ನಿರೋಧಕ ಮತ್ತು ಸಾಮಾಜಿಕ ವೈದ್ಯಶಾಸ್ತ್ರ

ವೈದ್ಯಶಾಸ್ತ್ರದ ವಿವಿಧ ವಿಶೇಷ ಶಾಖೆಗಳು ಪ್ರತ್ಯೇಕವಾಗಿ ಬೆಳೆದುಬರುತ್ತಿದ್ದಾಗ, ಎಲ್ಲಕ್ಕಿಂತಲೂ ಮುಖ್ಯವಾದ ರೋಗ ನಿರೋಧಕ ಮತ್ತು ಸಾಮಾಜಿಕ ವೈದ್ಯಶಾಸ್ತ್ರ ಕೂಡ ಬೆಳೆದುಬರುತ್ತಿತ್ತು. ರೋಗಗಳನ್ನು ನಿರೋಧಿಸುವ ಸಲುವಾಗಿ ಅನೇಕ ವಿಧಾನಗಳು ಹಿಂದಿನಿಂದಲೂ ರೂಢಿಯಲ್ಲಿದ್ದವು. ಗ್ರೀಸ್ ಮತ್ತು ರೋಮನ್ ಚಕ್ರಾಧಿಪತ್ಯಗಳು ನೀರು ಸರಬರಾಜು, ಗ್ರಾಮಗಳ ನಿರ್ಮಲೀಕರಣಗಳಿಗೆ ನೀಡಿದ್ದ ವಿಧಾನಗಳು ಈಗಿನವಂತಿದ್ದವು. ಪ್ರಜೆಗಳ ಆರೋಗ್ಯ ಸರ್ಕಾರದ ಜವಾಬ್ದಾರಿಗಳಲ್ಲಿ ಒಂದು ಮುಖ್ಯ ಅಂಗವಾಗಿತ್ತು. ವೈದ್ಯಾಧಿಕಾರಿಗಳು ಸರ್ಕಾರದಿಂದ ಸಂಬಳ ಪಡೆದು ಬಡಬಗ್ಗರಿಗೆ ಉಚಿತವಾಗಿ ಸಲಹೆ ಕೊಡುತ್ತಿದ್ದರು. ಮಧ್ಯ ಯುಗದಲ್ಲೂ, ೧೬ ಮತ್ತು ೧೭ನೇ ಶತಮಾನಗಳಲ್ಲೂ ಬಡವರಿಗೆ ಉಚಿತವಾಗಿಯೇ ವೈದ್ಯರು ರಕ್ಷಣೆ ಕೊಡಲು ನೇಮಕವಾಗಿದ್ದರು.

ಜೊಹಾನ್ ಪೀಟರ್ ಫ್ರಾಂಕ್

ಅನಂತರ ೧೮ನೇ ಶತಮಾನದಲ್ಲಿ ಕೈಗಾರಿಕೆ ಕ್ರಾಂತಿ ಎದ್ದಾಗ, ಹಳೆ ಪದ್ಧತಿಗಳು ಆಗಿನ ಸ್ಥಿತಿಗತಿಗಳಿಗೆ ಸರಿಬರದೆ ಜನರ ಆರೋಗ್ಯ ಕುಂದಲು ಪ್ರಾರಂಭಿಸಿತು. ಜೊಹಾನ್ ಪೀಟರ್ ಫ್ರಾಂಕ್ (೧೭೪೫-೧೮೨೧) ೧೮ನೇ ಶತಮಾನದ ಕೊನೆಯಲ್ಲಿ ಜನಾರೋಗ್ಯದ ಕಾನೂನನ್ನು ಜಾರಿಗೆ ತರುವ ವರೆವಿಗೂ ಅದೇ ರೀತಿ ಸಾಗಿತ್ತು. ಇವನು ಬಡತನದಲ್ಲಿ ಬೆಳೆದು ಕೀರ್ತಿ ಗಳಿಸಿದ್ದನು. ಪ್ರಜೆಗಳಲ್ಲಿ ಮಾತ್ರವೇ ಅಲ್ಲದೆ ರಾಜರಲ್ಲೂ ಜನಾರೋಗ್ಯದ ಮನೋಭಾವ ಹುಟ್ಟಿಸುವುದೇ ಇವನ ಧ್ಯೇಯ. ನೀರು ಸರಬರಾಜು, ಗ್ರಾಮ ನಿರ್ಮಲೀಕರಣ, ಶಾಲಾ ಮಕ್ಕಳ ಆರೋಗ್ಯ ಮುಂತಾದ ವಿಷಯಗಳಿರುವ ೯ ಸಂಪುಟಗಳ ಆರೋಗ್ಯಾಡಳಿತದ ಪುಸ್ತಕಗಳನ್ನು ಬರೆದನು.

ವರ್ಕೌ

೩೪ ವರ್ಷಗಳನಂತರ, ಸಾಂಕ್ರಾಮಿಕವಾಗಿ ಹಬ್ಬುತ್ತಿದ್ದ ಸೊಕ್ಕಿನ ಜ್ವರದ ತನಿಖೆಯನ್ನು ವರ್ಕೌ ನಡೆಸುತ್ತಿದ್ದಾಗ ಸಾರ್ವಜನಿಕ ಆರೋಗ್ಯವೂ ಅವನ ಗಮನಕ್ಕೆ ಬಂದು, ಆಗಿನಿಂದ ಅದರ ಪ್ರಯೋಜನಗಳನ್ನು ಸರ್ಕಾರಕ್ಕೆ ತಿಳಿಸಲು ಪ್ರಾರಂಭಿಸಿದನು. ರೋಗಗಳನ್ನು ತಡೆದು, ಆರೋಗ್ಯವನ್ನು ಉತ್ತಮಗೊಳಿಸಿ, ಸಾಮಾಜಿಕ ಹಾಗೂ ವೈದ್ಯಕೀಯ ದೃಷ್ಟಿಗಳಿಂದ ಸಾರ್ವಜನಿಕರ ಹಿತವನ್ನು ಸರ್ಕಾರ ಸಾಧಿಸಬೇಕೆಂದು ತಿಳಿಸಿದನು. ಹೀಗೆ ತನಿಖೆ ಮಾಡುತ್ತಾ, ರೋಗರುಜಿನಗಳು ಬಡವರಲ್ಲೂ,

ಕೊಳಚೆ ಪ್ರದೇಶಗಳಲ್ಲೂ ಹೆಚ್ಚಿರುವುದು ಕಂಡುಬಂದಿತು. ಇದರ ಮೂಲಕ ಅಂಕಿ ಅಂಶಗಳಿಗೂ ಜನಾರೋಗ್ಯಕ್ಕೂ ಇರುವ ಸಂಬಂಧವನ್ನು ವರ್ಕ್ ಸರ್ಕಾರದ ಗಮನಕ್ಕೆ ತಂದಿದ್ದನು. ಸರ್ಕಾರ ಇದನ್ನು ಅಂಗೀಕರಿಸಿ, ಸಾರ್ವಜನಿಕ ಆರೋಗ್ಯ, ಗ್ರಾಮ ನಿರ್ಮಲೀಕರಣಗಳಲ್ಲಿ ಕ್ರಮವನ್ನು ಕೈಗೊಳ್ಳಲು ಆಸಕ್ತಿ ತೋರಿತು ಕ್ರಮೇಣ ೧೯ನೇ ಶತಮಾನದಲ್ಲಿ ಸಾರ್ವಜನಿಕ ಆರೋಗ್ಯಶಾಸ್ತ್ರದ ಒಂದೇ ಒಂದು ಪ್ರಮುಖ ಶಾಲೆಯಾಯಿತು.

ಸರ್ ಜಾನ್ ಸೈಮನ್ (೧೮೧೬-೧೯೦೪) ಲಂಡನ್ನಿನಲ್ಲೂ, ಮಾರ್ಕ್ಸ್‌ವಾನ್ ಪೆಟ್ಟಿನ್‌ಕಾಫರ್ (೧೮೧೮-೧೯೦೧) ಮ್ಯೂನಿಚ್ಚಿನಲ್ಲೂ, ಲೆಮ್ಯುಯೆಲ್ ಷಟ್ಟಕ್ (೧೭೯೩-೧೮೫೯) ಅಮೆರಿಕದಲ್ಲೂ ಸಾರ್ವಜನಿಕ ಆರೋಗ್ಯದ ಕಡೆ ಹೆಚ್ಚು ಆಸಕ್ತಿ ತೋರಿ ತಕ್ಕ ಕ್ರಮ ಕೈಗೊಳ್ಳಲಿದ್ದರು.

ಸರ್ ಜಾನ್ ಸೈಮನ್

೧೯ನೇ ಶತಮಾನದಲ್ಲಿ ಜನಾರೋಗ್ಯಕ್ಕೆ ಅತ್ಯಂತ ಸೇವೆ ಸಲ್ಲಿಸಿದವರಲ್ಲಿ ಸರ್ ಜಾನ್ ಸೈಮನ್ನೇ ಮುಖ್ಯಸ್ಥ. ಅವನ ಮನೆತನದವರೆಲ್ಲಾ ೧೦೦ ವರ್ಷದ ಹತ್ತಿರ ಬದುಕಿದ್ದರು. ಅವನ ತಂದೆ ೯೭ ವರ್ಷ, ತಾಯಿ ೯೫ ವರ್ಷ ಬದುಕಿದ್ದರು. ೧೪ ಮಕ್ಕಳಲ್ಲೊಬ್ಬನಾಗಿದ್ದ ಜಾನ್ ಸೈಮನ್ ವೈದ್ಯ ಶಿಕ್ಷಣ ಮುಗಿದನಂತರ ೧೮೪೮ರಲ್ಲಿ ಲಂಡನ್ನಿನ ಆರೋಗ್ಯ ವೈದ್ಯಾಧಿಕಾರಿಯಾಗಿ ನೇಮಕವಾದನು. ಆಗ ಲಂಡನ್ನಿನ ಗ್ರಾಮ ಪಾಕೀಜು, ನೀರು ಸರಬರಾಜು, ವಸತಿ ಮುಂತಾದವು ಉತ್ತಮ ಸ್ಥಿತಿಯಲ್ಲಿಲ್ಲದ್ದರಿಂದ ಹೆದರದೆ ಸರ್ಕಾರಕ್ಕೆ ಜಾನ್ ಒಂದು ವರದಿಯನ್ನು ಒಪ್ಪಿಸಿದನು. ಸರ್ಕಾರ ಎಚ್ಚೆತ್ತು ಪಟ್ಟಣದ ಕೊಳಚೆಯನ್ನು ನಿವಾರಿಸಲು ಅಧಿಕಾರವನ್ನು ಜಾನ್‌ಗೆ ವಹಿಸಿಕೊಟ್ಟಿತು. ಥೇಮ್ಸ್ ನದಿಯ ಕೊಳಕು ನೀರಿನ ಅಪಾಯಗಳನ್ನು ನಿವಾರಿಸಿದ್ದಲ್ಲದೆ, ಎಲ್ಲರೂ ದೇವಿ ಹಾಕಿಸಿಕೊಳ್ಳಬೇಕೆಂದು ೧೮೫೩ರಲ್ಲಿ ಕಡ್ಡಾಯ ಮಾಡಿಸಿದನು.

ಪೆಟ್ಟೆನ್ಕಾಫರ್

ಪೆಟ್ಟೆನ್ಕಾಫರ್ ಇದೇ ರೀತಿ ಜರ್ಮನಿಯ ಮುಖ್ಯ ಪಟ್ಟಣಗಳಿಗೆ ಶುದ್ಧ ನೀರನ್ನು ಒದಗಿಸುವ ಸಲುವಾಗಿ ಪ್ರಮುಖ ಪಾತ್ರವನ್ನು ವಹಿಸಿದನು. ಪರಿಶುದ್ಧವಾದ ಆಹಾರವನ್ನು ಒದಗಿಸುವುದರಲ್ಲೂ ಅವನು ಆಸಕ್ತಿ ತೋರಿದನು. ೧೮೬೬ರಲ್ಲಿ ಜನಾರೋಗ್ಯ ಸಂಸ್ಥೆಯೊಂದನ್ನು ಮ್ಯೂನಿಚ್ಚಿನಲ್ಲಿ ಸ್ಥಾಪಿಸಿದ್ದಲ್ಲದೆ, 'ಆರೋಗ್ಯಶಾಸ್ತ್ರದ ಕೈಪಿಡಿ' ಎಂಬ ಪುಸ್ತಕವನ್ನೂ ಬರೆದಿದ್ದನು. ಕ್ರಿಮಿಗಳಿಂದ ರೋಗ ಉತ್ಪತ್ತಿಯಾಗುವುದೆಂಬ ಕಾಕ್‌ನ ತತ್ವವನ್ನು ನಂಬದೆ, ಅದನ್ನು ಎದುರಿಸಲು ಅವಿವೇಕದಿಂದ ಸಾಕಣೆ ಮಾಡಿದ್ದ ಕಾಲರ ಅಣುಜೀವಿಗಳನ್ನು ತಾನೇ ಸೇವಿಸಿದನು ಅದೃಷ್ಟವಶಾತ್, ಅವನಿಗೆ ಈ ಅವಿವೇಕದಿಂದಯಾವ ಹಾನಿಯೂ ತಾಕಲಿಲ್ಲ.

ಲೆಮ್ಯುಲ್ ಷಟ್ಟಕ್

ಲೆಮ್ಯುಲ್ ಷಟ್ಟಕ್ ಸಾಧಾರಣವಾಗಿ, ಪುಸ್ತಕ ಮಾರುವುದರಲ್ಲೂ, ಪ್ರಕಟಿಸುವುದರಲ್ಲೂ ತೊಡಗಿದ್ದರೂ, ಸಾರ್ವಜನಿಕ ಆರೋಗ್ಯವನ್ನು ಉತ್ತಮಪಡಿಸುವುದರಲ್ಲಿ ಹೆಚ್ಚು ಆಸಕ್ತನಾಗಿದ್ದನು. ಇವನು ೧೮೪೫ರಲ್ಲಿ ಬಾಸ್ಟನ್ನಿನ ಜನಗಣತಿಯನ್ನು ತೆಗೆದಾಗ ಅದರ ಅಂಗವಾಗಿ ಆರೋಗ್ಯ ಹಾಗೂ ವಸತಿಗಳ ಮುಖ್ಯಾಂಶಗಳು ತಿಳಿದು ಬಂದವು. ತನಿಖೆಯನ್ನು ಮುಂದುವರಿಸಿ ಆ ಪ್ರಾಂತದ ಅಂಕಿ ಅಂಶಗಳನ್ನು ಗೊತ್ತು ಮಾಡಿ, ಮಸ್ಸಾಚುಸೆಟ್ಸ್ ನಿರ್ಮಲೀಕರಣ ನಿಯೋಗದ ವರದಿಯನ್ನು ೧೮೫೦ರಲ್ಲಿ ಪೂರೈಸಿ ಸಾರ್ವಜನಿಕ ಆರೋಗ್ಯದ ವಿಶೇಷ ಪ್ರಯೋಜನಗಳನ್ನು ಸರ್ಕಾರದ ಮುಂದಿಟ್ಟನು.

ಬಿಸ್ಮಾರ್ಕ್

ಕೈಗಾರಿಕೆ ಕ್ರಾಂತಿಯ ಅಂಗವಾಗಿ ಬೆಳೆದಿದ್ದ ಕಾರ್ಮಿಕರ ಚಳುವಳಿ ಜರ್ಮನಿಯಲ್ಲಿ ಆಗ ಅಶಾಂತಿಗೊಳಿಸಿತ್ತು. ರೋಗ ರುಜಿನಗಳು ಕೂಡ ತಲೆದೋರಿ ಸಮಾಜ ಮುಂದುವರಿಯಲು ಸಾಧ್ಯವಾಗಿರಲಿಲ್ಲ. ಇಂಕ್ಕೂ ಮೀರಿದ್ದ ಜರ್ಮನಿಯ ಸಣ್ಣ ಸಣ್ಣ ಪ್ರಾಂತ್ಯಗಳನ್ನು ಒಟ್ಟುಗೂಡಿಸಿ, ಪ್ರಷ್ಯದ ನಾಯಕತ್ವದಲ್ಲಿ ಜರ್ಮನ್ ಚಕ್ರಾಧಿಪತ್ಯವನ್ನು ಸ್ಥಾಪಿಸಬೇಕೆಂದಿದ್ದ ಬಿಸ್ಮಾರ್ಕ್‌ನ ಆಸೆ ನೆರವೇರಲು ಈ ದುಸ್ಥಿತಿಗಳು ಅಡ್ಡಿ ಬಂದಿದ್ದವು. ೧೮೪೯ನೇ ಇಸವಿಗೆ ಮುಂಚಿತವೇ 'ಕಾರ್ಮಿಕರ ಸಾಮಾಜಿಕ ಅಭದ್ರತೆಯೇ ಅವರು ರಾಷ್ಟ್ರದ ಗಂಡಾಂತರವಾಗಿರಲು ನಿಜವಾದ ಕಾರಣ' ಎಂಬ ಭಾವನೆ ಜರ್ಮನಿಯಲ್ಲಿ ಹುಟ್ಟಿತು. ಇದನ್ನು ಹೋಗಲಾಡಿಸಿ ರಾಜ್ಯವನ್ನು ಉತ್ತಮಪಡಿಸಲು, ೧೮೮೧ರಲ್ಲಿ ಬಿಸ್ಮಾರ್ಕ್ ಸಾರ್ವಜನಿಕ ವಿಮೆಯನ್ನು ಜಾರಿಗೆ ತಂದು ಕಡ್ಡಾಯ ಮಾಡಿದ್ದನು. ವಿಮೆ ಮುಂತಾದ ಕಾರ್ಯ ಚಟುವಟಿಕೆಗಳಲ್ಲಿ ಸರ್ಕಾರ ಕೈ ಹಾಕುವುದು ಸರಿಯಲ್ಲವೆಂದು ಈ ಕಾನೂನನ್ನು ಪ್ರಗತಿಪರ ಪಕ್ಷ ವಿರೋಧಿಸಿತು. ಆದರೂ ಜಗ್ಗದೆ ಎಲ್ಲಾ ಪಂಗಡಗಳಿಗೂ ಬೇರೆ ರೂಪದಲ್ಲಿ ರಿಯಾಯಿತಿ ತೋರಿಸಿ, ೧೮೮೪ರಲ್ಲಿ ರೋಗ ನಿರೋಧಕ ವಿಮೆಯ ಕಾನೂನನ್ನು ಜಾರಿಗೆ ತಂದನು. ಹೀಗೆ ಎಷ್ಟೇ ವಿರೋಧವಿದ್ದರೂ ಯುಕ್ತಿಯಿಂದ ಗೆದ್ದು ೧೮೮೯ರಲ್ಲಿ ಸಾಮಾಜಿಕ ವಿಮೆಯ ಕಾನೂನನ್ನು ಪೂರ್ತಾ ಜಾರಿಗೆ ತಂದು ಸಮಾಜಕ್ಕೆ ನಿಜವಾದ ಸೇವೆ ಸಲ್ಲಿಸಿದನು.

ವೈದ್ಯಕೀಯ ಪತ್ರಿಕೋದ್ಯೋಗ, ಗ್ರಂಥ ವಿವರಣೆ ಹಾಗೂ ವೈದ್ಯ ಚರಿತ್ರೆ

ಮುದ್ರಣ ಕಲೆ ಬರುವುದಕ್ಕಿಂತ ಮೊದಲು, ಓಲೆಗರಿ, ಜಂಬುಕಾಗದ, ಕಲ್ಲು, ಲೋಹ ಶಿಲೆಗಳಲ್ಲಾಗಲೀ ಗ್ರಂಥಗಳನ್ನು ಬರೆದಿಡಲಾಗುತ್ತಿತ್ತು. ಆಗ ವೃತ್ತ ಪತ್ರಿಕೆಗಳೇ ಇರಲಿಲ್ಲ. ಅಚ್ಚು ಬಂದ ಮೇಲೂ ವೃತ್ತ ಪತ್ರಿಕೆಗಳು ಅಷ್ಟಾಗಿ ಹೆಚ್ಚಾ

ಗಲಿಲ್ಲ. ೧೯ನೇ ಶತಮಾನದಿಂದೀಚೆಗೆ ಮಾತ್ರ ಇವು ಹೆಚ್ಚಾಗಿ ಪ್ರಕಟವಾಗುತ್ತಿವೆ. ದಿನಚರಿ ವೈದ್ಯಕೀಯ ಪ್ರಯೋಗಗಳ ಹಾಗೂ ಸ್ವತಂತ್ರ ಕಲ್ಪನಾ ಶಕ್ತಿಯನ್ನು ಪರಿಚಯಿಸುವುದೇ ಈ ಪತ್ರಿಕೆಗಳ ಉದ್ದೇಶ. ಈಗಲೂ ಹಾಗೆಯೇ ಇದೆ.

ವೈದ್ಯಕೀಯ ವೃತ್ತ ಪತ್ರಿಕೆಗಳ ಪೈಕಿ ಎಡಿನ್ಬರೊ ವೈದ್ಯಕೀಯ ವೃತ್ತಪತ್ರಿಕೆ ಬ್ರಿಟನ್ನಿನ ಬಹಳ ಹಳೆಯ ಪತ್ರಿಕೆಯೆಂದು ಹೇಳಬಹುದು. ಇದು ೧೮೦೫ರಿಂದಲೂ ಪ್ರಕಟವಾಗುತ್ತಿದೆ. ಅನಂತರ, ೧೮೨೩ರಲ್ಲಿ ಪ್ರಾರಂಭವಾದ ಲ್ಯಾನ್ಸೆಟ್‌ನಲ್ಲಿ ಸಾಮಾನ್ಯ ವೈದ್ಯನಾಗಿದ್ದ ಥಾಮಸ್ ಹೆನ್ರಿ ವೇಕ್ಲಿ (೧೮೨೧-೧೯೦೭) ಆಗಿನ ಭಾಷಣಗಳನ್ನೂ, ಶಸ್ತ್ರಕ್ರಿಯೆಗಳನ್ನೂ ವಿವರವಾಗಿ ಪ್ರಕಟಿಸುತ್ತಿದ್ದನು. ಗ್ಲಾಸ್ಗೊ ವೈದ್ಯಕೀಯ ವೃತ್ತಪತ್ರಿಕೆ ೧೮೨೮ರಲ್ಲೂ, ಡಬ್ಲಿನ್ ಪತ್ರಿಕೆ ೧೮೩೯ರಲ್ಲೂ ಪ್ರಾರಂಭವಾದವು. ೧೮೩೨ರಲ್ಲಿ ಸರ್‌ಚಾರ್ಲ್ಸ್ ಹೇಸ್ಟಿಂಗ್ಸ್ (೧೭೯೪-೧೮೬೬) ಬ್ರಿಟಿಷ್ ವೈದ್ಯರ ಸಂಘವನ್ನು ಸ್ಥಾಪಿಸಿ, ಅದರ ಅಂಗವಾಗಿ ಸಭೆಯ ವ್ಯವಹಾರಗಳನ್ನು ಪತ್ರಿಕೆ ರೂಪದಲ್ಲಿ ಪ್ರಕಟಿಸಲು ಪ್ರಾರಂಭಿಸಿದನು. ಇದು ೧೮೫೭ರಲ್ಲಿ ಬ್ರಿಟಿಷ್ ವೈದ್ಯಕೀಯ ವಾರಪತ್ರಿಕೆಯಾಯಿತು.

ಎಫ್. ಎಚ್. ಗ್ಯಾರ್ರಿಸನ್ ೧೯೨೪ರಲ್ಲಿ ಪ್ರಕಟವಾದ ತನ್ನ 'ವೈದ್ಯಶಾಸ್ತ್ರದ ಚರಿತ್ರೆಯ ಪ್ರವೇಶಿಕೆ' ಎಂಬ ಪುಸ್ತಕದಲ್ಲಿ ಬರೆಯುತ್ತಾ, ೧೯೧೩ರಲ್ಲಿ ಪ್ರಪಂಚದಲ್ಲೆಲ್ಲಾ ಒಟ್ಟು ೧೬೫೪ ವೈದ್ಯಕೀಯ ವೃತ್ತ ಪತ್ರಿಕೆಗಳಿದ್ದವೆಂದೂ, ಅವುಗಳ ಪೈಕಿ ೬೩೦ ಅಮೆರಿಕದವೆಂದೂ, ೪೬೧ ಜರ್ಮನಿಯವೆಂದೂ, ೨೬೮ ಫ್ರಾನ್ಸಿನವೆಂದೂ, ೧೫೨ ಬ್ರಿಟನ್ನಿನವೆಂದೂ, ೭೫ ಇಟಲಿ, ೭೯ ಸ್ಪೈಯಿನ್ ದೇಶದವೆಂದೂ ತಿಳಿಸಿದ್ದಾನೆ. ದಿನೇ ದಿನೇ ಪತ್ರಿಕೆಗಳು ಹೆಚ್ಚುತ್ತಾ ಬಂದು, ೧೯೨೫ರಲ್ಲಿ ವಾಷಿಂಗ್ಟನ್ ಸರ್ಜನ್ ಜನರಲ್ ಪುಸ್ತಕ ಭಂಡಾರಕ್ಕೆ ೧೯೨೭ ವೈದ್ಯಕೀಯ ವೃತ್ತ ಪತ್ರಿಕೆಗಳು ಬರುತ್ತಿದ್ದವೆಂದು ಹೇಳಲಾಗಿದೆ. ಇವುಗಳ ಪೈಕಿ 'ವೈದ್ಯಶಾಸ್ತ್ರದ ನ್ಯೂ ಇಂಗ್ಲೆಂಡಿನ ಪತ್ರಿಕೆ' ೧೮೧೨ರಿಂದಲೂ, 'ವೈದ್ಯ ವಿಜ್ಞಾನಗಳ ಅಮೆರಿಕದ ಪತ್ರಿಕೆ' ೧೮೨೦ರಿಂದಲೂ, 'ಹೆರಿಗೆಶಾಸ್ತ್ರ ಮತ್ತು ಹೆಣ್ಣುರೋಗಶಾಸ್ತ್ರದ ಅಮೆರಿಕದ ಪತ್ರಿಕೆ' ೧೮೬೮ರಿಂದಲೂ ಹಾಗೂ 'ಶಸ್ತ್ರವೈದ್ಯದ ವರ್ಷಾನು ಚರಿತ್ರೆಗಳು' ೧೮೮೫ರಿಂದಲೂ ಪ್ರಕಟವಾಗುತ್ತಿವೆ.

ಫ್ರಾನ್ಸಿನ ಪತ್ರಿಕೆಗಳಲ್ಲಿ ಲಾ ಗೆಜೆಟ್ ಡಿ ಫ್ರಾನ್ಸ್ ಎಂಬ ವಾರಪತ್ರಿಕೆ ೧೬೩೧ರಲ್ಲಿ ವೈದ್ಯ ಥಿಯೊಫ್ರಾಸ್ಟೆ ರಿನೊಡೊನಿಂದ (೧೫೮೬-೧೬೫೩) ಪ್ರಕಟನೆ ಆರಂಭವಾಗಿ ವೃತ್ತ ಪತ್ರಿಕೆಗಳಿಗೆಲ್ಲಕ್ಕೂ ಬಹಳ ಪುರಾತನವಾಗಿತ್ತು. ಆದ್ದರಿಂದಲೇ ರಿನೊಡೊ 'ಪತ್ರಿಕೋದ್ಯೋಗದ ಪಿತಾಮಹ'ನೆಂದು ಕರೆಯಲ್ಪಟ್ಟನು. ಫ್ರಾನ್ಸಿನ ನಿಕೊಲಾಸ್ ಡಿ ಬ್ಲೆಗ್ನಿ (೧೬೫೨-೧೭೨೨) ಪ್ರಾರಂಭಿಸಿದ ವೈದ್ಯಕೀಯ ಪತ್ರಿಕೆಯೂ ಮೊಟ್ಟಮೊದಲನೆಯ ಫ್ರೆಂಚ್ ಭಾಷೆಯ ಪತ್ರಿಕೆ. ೧೭೧೭ ರಲ್ಲಿ ಲ್ಯಾಟಿನ್ ಭಾಷೆಯಲ್ಲಿ ಪ್ರಕಟವಾಗಿದ್ದ ಒಂದು ವೈದ್ಯಕೀಯ ಜರ್ಮನ್ ವೃತ್ತ ಪತ್ರಿಕೆ ಬರ್ಲಿನ್ನಿನಲ್ಲಿ

ಮುದ್ರಿತವಾಗಿತ್ತು. ಇದು ಸುಧಾಫ್ ಪ್ರಕಾರ, ಜರ್ಮನಿಯ ಮೊದಲನೆಯ ವೈದ್ಯಕೀಯ ಪತ್ರಿಕೆ. ಅನಂತರ ಅನೇಕ ವೃತ್ತಪತ್ರಿಕೆಗಳಲ್ಲದೆ, ವಿಶೇಷ ವೈದ್ಯಕೀಯ ಪತ್ರಿಕೆಗಳು ಕೂಡ ಪ್ರಕಟವಾಗಲು ಪ್ರಾರಂಭಿಸಿದವು. ವರ್ಕೌ, ಫ್ಲೂಗರ್ ಹಾಗೂ ಲಾಂಗೆನ್‌ಬೆಕ್ ಮುಖ್ಯ ಬರಹಗಾರರಾಗಿದ್ದರು. ಬಗೆಬಗೆಯ ವಿಶೇಷ ವೈದ್ಯ ಪತ್ರಿಕೆಗಳಲ್ಲಿ ವೈದ್ಯಚರಿತ್ರೆಯ ವೃತ್ತಪತ್ರಿಕೆಯೂ ಒಂದಾಗಿತ್ತು. ಇದನ್ನು ಮೊಟ್ಟಮೊದಲಿಗೆ ೧೭೯೦ರಲ್ಲಿ ನ್ಯುರೆಂಬರ್ಗ್‌ನಲ್ಲಿ ಫಿಲಿಫ್ ಲಡ್ವಿಗ್ ವಿಟ್ವರ್ (೧೭೫೨–೯೨) ಪ್ರಕಟಿಸಿದನು. ಆದರೆ, ಅದಕ್ಕೆ ಬೆಂಬಲ ಸಾಲದೆ ಒಂದೇ ಸಂಚಿಕೆಗೆ ನಿಂತುಹೋಯಿತು. ಈಚೆಗೆ, ಸಾಕಷ್ಟು ಹೊಸ ವೈದ್ಯಚರಿತ್ರೆ ಪತ್ರಿಕೆಗಳು ಮುದ್ರಿತವಾಗುತ್ತಿವೆ.

ಜಾನ್ ಬಿಲ್ಲಿಂಗ್ಸ್

೧೯ನೇ ಶತಮಾನದಲ್ಲಿ ವೈದ್ಯಕೀಯ ಸಾಹಿತ್ಯ ಓದಲಾಗದಿದ್ದಷ್ಟು ಪ್ರಮಾಣದಲ್ಲಿ ಪ್ರಕಟವಾಗುತ್ತಿದ್ದುದರಿಂದ, ಅದನ್ನು ಸುಲಭ ರೀತಿಯಲ್ಲಿ ಓದುಗರ ಮುಂದಿಡಲು ಟಿಪ್ಪಣಿ ಅಥವಾ ಗ್ರಂಥ ವಿವರಣೆಗಳೂ ಪ್ರಚಾರವಾದವು. ಇವನ್ನು ಬರೆದಿದ್ದವರಲ್ಲಿ ಜಾನ್ ಷಾ ಬಿಲ್ಲಿಂಗ್ಸ್ (೧೮೩೮–೧೯೧೩) ಒಬ್ಬ ಮುಖ್ಯ ಗ್ರಂಥಕರ್ತ. ಇವನ 'ಪ್ರಧಾನ ಶಸ್ತ್ರವೈದ್ಯನ ಗ್ರಂಥಾಲಯದ ವಿಷಯಸೂಚಿ ವಿವರಪಟ್ಟಿ' ಹಾಗೂ 'ವೈದ್ಯಶಾಸ್ತ್ರದ ವಿಷಯಸೂಚಿ' ಬಹಳ ಶ್ರೇಷ್ಠವಾದವು. ಮೊದಲು ಅಂಗರಚನೆಯ, ಅನಂತರ ಶಸ್ತ್ರವೈದ್ಯದ ಅಧ್ಯಾಪಕನಾಗಿದ್ದು ಕೆಲವು ಕಾಲಾನಂತರ ಸೇನಾ ನೌಕರಿ ಸೇರಿದನು. ಅಲ್ಲಿ ಲೆಫ್ಟಿನೆಂಟ್ ಕರ್ನಲ್ ಹುದ್ದೆ ಪಡೆದು ವಾಷಿಂಗ್ಟನ್ ಸರ್ಜನ್ ಜನರಲ್ ಕಛೇರಿಗೆ ೧೮೬೪ರಲ್ಲಿ ವರ್ಗವಾದನು. ಜಾನ್ ಬಿಲ್ಲಿಂಗ್ಸ್ ಬಾಲ್ಟಿಮೋರಿನ ಜಾನ್ ಹಾಪ್ಕಿನ್ಸ್ ಆಸ್ಪತ್ರೆ ಮತ್ತು ವೈದ್ಯಶಾಲೆಗಳ ಯೋಜನೆಗಳಲ್ಲಿ ಮುಖ್ಯ ಪಾತ್ರ ವಹಿಸಿದನು. ಇವನ ನಾನಾವಿಧದ ಕೆಲಸ ಕಾರ್ಯಗಳನ್ನು ಮೆಚ್ಚಿ ನಾನಾಕಡೆಗಳಿಂದ ಗೌರವ ಪ್ರಶಸ್ತಿಗಳು ಬಂದವು. ಸರ್ಜನ್ ಜನರಲ್ ಕಛೇರಿಯನ್ನು ಸೇರಿದಾಗ ಅಲ್ಲಿ ಕೇವಲ ೨೦೦೦ ಪುಸ್ತಕಗಳು ಇದ್ದವು. ೧೮೭೩ ರಲ್ಲಿ ೨೫೦೦೦ಕ್ಕೆ ಏರಿದ್ದವು. ೧೮೭೬ರಲ್ಲಿ ಗ್ರಂಥಸೂಚಿಯ ಕೆಲಸ ಪ್ರಾರಂಭವಾಗಿ ೧೮೮೦ ರಲ್ಲಿ ಮೊದಲನೆಯ ಹೊಸ ಗ್ರಂಥಸೂಚಿ ಪಟ್ಟಿ ತಯಾರಾಯಿತು. ಮೊದಲ ೧೬ ಸಂಪುಟಗಳು ೧೮೯೫ ರಲ್ಲಿ ಮುಗಿದವು.

ರಾಬರ್ಟ್ ಫ್ಲೆಚರ್

೧೮೭೬ರಲ್ಲಿ ರಾಬರ್ಟ್ ಫ್ಲೆಚರ್ (೧೮೨೩–೧೯೧೨) ಜಾನ್ ಬಿಲ್ಲಿಂಗ್ಸ್‌ನ ಸಹಾಯಕ್ಕೆ ಬಂದು ಇಬ್ಬರೂ ಕೆಲಸ ಮಾಡುತ್ತಿದ್ದರು. ೧೮೭೯ರಲ್ಲಿ ಫ್ಲೆಚರ್ ಹೆಚ್ಚಿನ ಪಾತ್ರವಹಿಸಿದ್ದ ಮೊದಲ 'ವೈದ್ಯಶಾಸ್ತ್ರದ ವಿಷಯಸೂಚಿ' ಹೊರಬಿದ್ದಿತು. ಫ್ಲೆಚರ್ ೧೯೧೨ ರಲ್ಲಿ ಸತ್ತಮೇಲೆ ಅವನ ಜವಾಬ್ದಾರಿಯನ್ನು ಫೀಲ್ಡಿಂಗ್ ಹಡ್ಸನ್ ಗ್ಯಾರಿಸನ್ (೧೮೭೦–೧೯೩೫) ವಹಿಸಿಕೊಂಡನು. ಅಮೆರಿಕದ ವೈದ್ಯಕೀಯ

ಸಂಘ ಹೊರಡಿಸುತ್ತಿದ್ದ 'ಪ್ರಚಲಿತ ವೈದ್ಯಕೀಯ ಸಾಹಿತ್ಯಕ್ಕೆ ತ್ರೈಮಾಸಿಕ ಸಂಚಿತ ವಿಷಯಸೂಚಿ' ಮೊದಲಿಂದ ಇದ್ದ 'ವೈದ್ಯಶಾಸ್ತ್ರದ ವಿಷಯಸೂಚಿ'ಯ ಜೊತೆ ೧೯೨೭ ರಲ್ಲಿ ಬೆರೆತು 'ತ್ರೈಮಾಸಿಕ ಸಂಚಿತ ವೈದ್ಯಕೀಯ ವಿಷಯಸೂಚಿ' ಎಂಬ ಹೊಸ ಶಿರೋನಾಮೆಯಲ್ಲಿ ಈಗಲೂ ಪ್ರಕಟವಾಗುತ್ತಿದೆ.

'ವಿಷಯಸೂಚಿ ವಿವರಪಟ್ಟಿ' ಹಾಗೂ 'ವೈದ್ಯಶಾಸ್ತ್ರದ ವಿಷಯಸೂಚಿ' ಎರಡು ಗ್ರಂಥಸೂಚಿಗಳಿಗೂ ಗ್ಯಾರ್ರಿಸನ್ ಸಂಪಾದಕನಾಗಿ ಮುಂದುವರಿದನು. ಇವನು ಬಿಲ್ಲಿಂಗ್ಸ್ ಮತ್ತು ಫ್ಲೆಚರ್‌ರ ಆಪ್ತ ಶಿಷ್ಯನಾಗಿದ್ದನು. ಜಾನ್ ಹಾಪ್ಕಿನ್ಸ್ ವಿಶ್ವ ವಿದ್ಯಾಲಯದಲ್ಲಿ ಗುಮಾಸ್ತೆಯಾಗಿದ್ದುಕೊಂಡು ವೈದ್ಯವನ್ನು ಕಲಿಯಲಾರಂಭಿಸಿ ದನು. ವೈದ್ಯ ಪದವೀಧರನಾದ ಮೇಲೆ ವೈದ್ಯವೃತ್ತಿಯಲ್ಲಿ ಆಸಕ್ತಿ ಇಲ್ಲದೆ ಗುಮಾಸ್ತ ನಾಗೇ ೪೦ ವರ್ಷ ಕೆಲಸ ಮಾಡಿದನು. ಮಧ್ಯೆ ೨ ವರ್ಷ ಮಾತ್ರ ಸೇನೆ ನೌಕರಿಯ ಲ್ಲಿದ್ದು ಕರ್ನಲ್ ಹುದ್ದೆಯನ್ನು ಪಡೆದನು. ಇವನಿಗೆ ಸಾಹಿತ್ಯ ಮತ್ತು ಸಂಗೀತ ಅಂದರೆ ಪಂಚಪ್ರಾಣ. ಆದರೆ ಆಡಳಿತದಲ್ಲಿ ಶಕ್ತಿಯೂ ಇರಲಿಲ್ಲ, ಆಸೆಯೂ ಇರಲಿಲ್ಲ. ಆದ್ದರಿಂದಲೇ ಪುಸ್ತಕ ಭಂಡಾರದ ಸಹಾಯಕ ಅಧಿಕಾರಿಯ ಹುದ್ದೆಗಿಂತ ಮೇಲೇರ ಲಿಲ್ಲ. ಇವನ ಲೇಖಣಿಯಿಂದ ಅನೇಕ ಪುಸ್ತಕಗಳೂ ಲೇಖನಗಳೂ ಹೊರಬಿದ್ದವು. 'ವೈದ್ಯಶಾಸ್ತ್ರದ ಚರಿತ್ರೆಗೆ ಪೀಠಿಕೆ' ಅವನ ಅತಿ ಮುಖ್ಯ ಗ್ರಂಥ. ೧೯೧೩ರಲ್ಲಿ ಇದರ ಪ್ರಥಮ ಮುದ್ರಣವಾಗಿ, ಈಚೆಗೆ ಅನೇಕ ಆವೃತ್ತಿಗಳು ಹೊರಬಿದ್ದಿವೆ. ವೈದ್ಯ ಚರಿತ್ರೆ ಗಳಲ್ಲಿ ಈ ಪುಸ್ತಕಕ್ಕೆ ಅಗ್ರ ಸ್ಥಾನ ಸಿಕ್ಕಿರುವಷ್ಟು ಬೇರೆ ಯಾವುದಕ್ಕೂ ಸಿಕ್ಕಿಲ್ಲ.

ಕಾರ್ಲ್ ಸುಧಾಫ್

ಯೂರೋಪಿನಲ್ಲಿ ವೈದ್ಯ ಚರಿತ್ರೆಗಾರನಾಗಿದ್ದ ಕಾರ್ಲ್ ಸುಧಾಫ್ (೧೮೫೩–೧೯೩೮) ದಂತವೈದ್ಯ ಚರಿತ್ರೆ, ಸಲೆರ್ನೊ ವೈದ್ಯಶಾಲೆ, ಜರ್ಮನಿಯ ವೈದ್ಯಶಾಸ್ತ್ರದ ಪ್ರಥಮಾವಸ್ಥೆ, ಗಳಗಂಡದ ಪ್ರಾರಂಭ ಮತ್ತು ವೈದ್ಯಚರಿತ್ರೆಯಲ್ಲಿ ಪ್ಯಾರಸೆಲ್ಸಸ್‌ನ ಪಾತ್ರವೇ ಮುಂತಾದ ಪುಸ್ತಕಗಳನ್ನು ಬರೆದು ವೈದ್ಯ ಚರಿತ್ರೆಗೆ ಸಾಕಷ್ಟು ಸೇವೆ ಸಲ್ಲಿಸಿ ದನು. ಡುಸೆಲ್ಡಾರ್ಫ್‌ನಲ್ಲಿ ವೈದ್ಯವೃತ್ತಿ ನಡೆಸುತ್ತಿದ್ದಾಗ ತನ್ನ ವಿರಾಮ ಕಾಲ ವನ್ನೆಲ್ಲಾ ವೈದ್ಯಚರಿತ್ರೆಗೇ ಮೀಸಲಾಗಿಟ್ಟಿದ್ದನು ಹೀಗೆ ಕೆಲಸ ಮಾಡಿದನಂತರ ಲೀಪ್ಸಿಗ್ ವಿಶ್ವವಿದ್ಯಾಲಯದಲ್ಲಿ ವೈದ್ಯಚರಿತ್ರೆ ಪ್ರಾಧ್ಯಾಪಕನಾಗಿ ನೇಮಕವಾಗಿ ಅಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸಿ, ಇಟಲಿಗೆ ಹೋಗಿ ಪುಸ್ತಕ ಭಂಡಾರ ಹಾಗೂ ವಸ್ತು ಸಂಗ್ರಹ ಶಾಲೆಗಳ ಪರಿಚಯವನ್ನು ಮಾಡಿಕೊಂಡು ಬಂದು ಈ ಸಂಸ್ಥೆಯನ್ನು ಅಭಿ ವೃದ್ಧಿಮಾಡಿದ್ದನು. 'ಅತ್ಯುನ್ನತ ಕಸಬಿನ ಆದರ್ಶಗಳನ್ನು ಮುಂದುವರಿಸುವ ಯತ್ನ ದಲ್ಲಿ ಸುಧಾಫ್ ಹಿಪ್ಪೊಕ್ರೇಟಿಸಿನ ನಿಜವಾದ ಶಿಷ್ಯನಾಗಿದ್ದನು'.

ಸರ್ ನಾರ್ಮನ್ ಮೂರ್

ಇಂಗ್ಲೆಂಡಿನಲ್ಲಿ ವೈದ್ಯ ಚರಿತ್ರೆಗೆ ಅಷ್ಟಾಗಿ ಪ್ರೋತ್ಸಾಹವಿಲ್ಲದಿದ್ದಾಗ, ಬಾರ್ತ

ಲೊಮ್ಯು ಆಸ್ಪತ್ರೆ ವೈದ್ಯನಾದ ಸರ್ ನಾರ್ಮನ್ ಮೂರ್ (೧೮೪೭–೧೯೩೨) ಪುನರುಜ್ಜೀವನ ಕೊಟ್ಟು ಅನೇಕ ಸಂಗ್ರಹಗಳಿಗೆ ನೆರವಾದನು. ಬಾರ್ತಾಲೊಮ್ಯು ಆಸ್ಪತ್ರೆಯ ಚರಿತ್ರೆ ಅವನ ಒಂದು ಮುಖ್ಯ ಬರಹವಾಗಿತ್ತು. ಡಾ. ಥಾಮಸ್ ಫಿಟ್ಸ್‌ಪ್ಯಾಟ್ರಿಕ್‌ನ (೧೮೩೨–೧೯೦೦) ಗೌರವಾರ್ಥವಾಗಿ ಕೊಡಲಾಗಿದ್ದ 'ಬ್ರಿಟಿಷ್ ದ್ವೀಪಗಳಲ್ಲಿನ ವೈದ್ಯಶಾಸ್ತ್ರದ ಪರಿಶೀಲನೆಯ ಚರಿತ್ರೆ'(೧೯೦೮) ಎಂಬ ಉಪನ್ಯಾಸ ಸರ್ ಥಾಮಸ್ ಮೂರ್‌ನ ಕೊಡುಗೆಗಳಲ್ಲಿ ಅತಿ ಶ್ರೇಷ್ಠವಾಗಿತ್ತು. ಈ ಗೌರವಾರ್ಥದ ದತ್ತಿ ಉಪನ್ಯಾಸ ಈಗಲೂ ವೈದ್ಯರ ರಾಜ ಕಾಲೇಜಿನಲ್ಲಿ ನಡೆಯುತ್ತಿದೆ.

ಸರ್ ಡಿ ಆರ್ಸಿ ಪವರ್

ಸರ್ ಡಿ ಆರ್ಸಿ ಪವರ್(೧೮೫೫–೧೯೪೧)ಅದೇ ಬಾರ್ತಾಲೊಮ್ಯು ಆಸ್ಪತ್ರೆಯಲ್ಲಿ ಶಸ್ತ್ರವೈದ್ಯನಾಗಿದ್ದು ಕೊಂಡು ವೈದ್ಯಚರಿತ್ರೆಯಲ್ಲಿ ಪಾರಂಗತನಾಗಿ,'ರಾಷ್ಟ್ರೀಯ ಜೀವನ ಚರಿತ್ರೆಯ ನಿಘಂಟು' ಎಂಬ ಸಂಗ್ರಹಕ್ಕೆ ಹೆಚ್ಚು ಲೇಖನಗಳನ್ನು ಬರೆದಿದ್ದನು. ಹಾಗೂ ಪುಸ್ತಕ ಭಂಡಾರದ ಅಧಿಕಾರಿ ವಿಕ್ಟರ್ ಗಸ್ಟೇವ್ ಪ್ಲಾರ್ (೧೮೬೦–೧೯೨೯) ಪೂರೈಸಿದ್ದ 'ಶಸ್ತ್ರವೈದ್ಯರ ರಾಜ ಕಾಲೇಜಿನ ಸದಸ್ಯರ ಜೀವನಗಳು' ಎಂಬ ಎರಡು ಸಂಪುಟಗಳನ್ನು ೧೯೩೦ರಲ್ಲಿ ಮುದ್ರಣಕ್ಕೆ ಸಿದ್ಧಪಡಿಸಿದನು.

ಕ್ಲಿಫರ್ಡ್ ಆಲ್ಬಟ್

ಜೇಮ್ಸ್ ಫಿನ್ಲೇಸನ್ (೧೮೪೦-೧೯೦೬) ಗ್ಲಾಸ್ಗೋದಲ್ಲೂ, ಜಾನ್ ಡಿಕ್ಸನ್ ಕೊಮ್ರೀ (೧೮೭೫-೧೯೩೯) ಎಡಿನ್ಬರೊನಲ್ಲೂ, ಸರ್ ಥಾಮಸ್ ಕ್ಲಿಫರ್ಡ್ ಆಲ್ಬಟ್ (೧೮೩೬-೧೯೨೫) ಕೇಂಬ್ರಿಡ್ಜಿನಲ್ಲೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪರಿಣತಿಯನ್ನು ಪಡೆದಿದ್ದುದಲ್ಲದೆ, ವೈದ್ಯ ಚರಿತ್ರೆಯಲ್ಲೂ ಪ್ರವೀಣರಾಗಿದ್ದರು. ಹೃದಯಶಾಸ್ತ್ರ ಪ್ರವೀಣ ಆಲ್ಬಟ್, ೬ ಸಂಪುಟಗಳ 'ವೈದ್ಯಶಾಸ್ತ್ರ ಪದ್ಧತಿ' ಎಂಬುದನ್ನೂ, ಫಿಟ್ಸ್ ಪ್ಯಾಟ್ರಿಕ್ ಗೌರವಾರ್ಥವಾಗಿ ಕೊಟ್ಟಿದ್ದ 'ರೋಮ್‌ನಲ್ಲಿ ಗ್ರೀಕ್ ವೈದ್ಯಶಾಸ್ತ್ರ' ಎಂಬ ಉಪನ್ಯಾಸವನ್ನೂ ವೈದ್ಯಚರಿತ್ರೆಗೆ ಕೊಡುಗೆಗಳಾಗಿ ನೀಡಿದ್ದರು. ಇವನ ರಾಷ್ಟ್ರೀಯ ಜೀವನ ಚರಿತ್ರೆಯನ್ನು ಬರೆದು ಸರ್ ಹಂಫ್ರಿ ಡೇವಿ ರಾಲೆಸ್ಟನ್ (೧೮೬೨-೧೯೪೪) ಆಲ್ಬಟ್‌ನ ಅತಿಶಯೋಕ್ತಿಗಳನ್ನು ಬೆಳಕಿಗೆ ತಂದನು.

ಸರ್ ವಿಲಿಯಂ ಆಸ್ಲರ್

ಆಲ್ಬಟ್ ಇದ್ದ ಕಾಲದಲ್ಲೇ ಕೀರ್ತಿ ಪಡೆದಿದ್ದ ಸರ್ ವಿಲಿಯಂ ಆಸ್ಲರ್ (೧೮೪೯-೧೯೧೯) 'ಹಳೆಯ ಪ್ರಪಂಚವನ್ನು ಹೊಸದಕ್ಕೆ ಸಂಬಂಧ ಕಲ್ಪಿಸುವುದರಲ್ಲಿ ಬಹುಶಃ ಇನ್ನಾವ ವೈದ್ಯನೂ ಮಾಡಿರದಷ್ಟು ಸಾಧಿಸಿದನು.' ಕೆನಡದಲ್ಲಿ ಜನ್ಮವೆತ್ತಿ, ವೈದ್ಯಶಾಸ್ತ್ರದ ಪ್ರಾಧ್ಯಾಪಕನಾಗಿ ಮಾಂಟ್ರಿಯಲ್ (೧೮೭೪), ಫಿಲಡೆಲ್ಫಿಯ (೧೮೮೪), ಬಾಲ್ಟಿಮೋರ್ (೧೮೮೯), ಆಕ್ಸ್‌ಫರ್ಡ್ (೧೯೦೪) ಗಳಲ್ಲಿ ತನ್ನ ಪ್ರತಿಭೆಯನ್ನು ಪ್ರದರ್ಶಿಸಿ ಅಂತರ ರಾಷ್ಟ್ರೀಯ ಗೌರವವನ್ನು ಸಂಪಾದಿಸಿದನು. 'ಒಳತಳಿ

ಯೆಬ್ಬಿಸುವುದು ದನಗಳಲ್ಲಿ ಎಷ್ಟು ಹಾನಿಕರವೋ ಕಾಲೇಜುಗಳಲ್ಲೂ ಅಷ್ಟೇ', 'ನಮ್ಮ ಸಂಸ್ಕೃತಿ ಪ್ರಪಂಚಕ್ಕೆಲ್ಲ ಸೇರಿದ್ದಾಗಿರಬೇಕೇ ಹೊರತು ರಾಷ್ಟ್ರೀಯವಾಗಿರಬಾರದು.' ಎಂದು ಅವನು ಅಭಿಪ್ರಾಯ ಹೊಂದಿದ್ದನು. ಮ್ಯಾಕ್‌ಗಿಲ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿ ಸೇರಿದಾಗ, ಅವನಿಗೆ ಕೇವಲ ೨೧ ವರ್ಷ ವಯಸ್ಸು ಮಾತ್ರ ಆಗಿತ್ತು. ಆದ್ದರಿಂದ ಇವನನ್ನು 'ಮರಿ ಪ್ರಾಧ್ಯಾಪಕ' ಎಂದು ಗೆಳೆಯರು ಕರೆಯುತ್ತಿದ್ದರು. ಇವನುಬರೆದಿದ್ದ 'ವೈದ್ಯಶಾಸ್ತ್ರದ ತತ್ತ್ವಗಳು ಮತ್ತು ಆಚರಣೆ, ೧೮೯೨' ಫ್ರೆಂಚ್, ಜರ್ಮನ್, ಸ್ಪಾನಿಷ್, ಚೀನಾ ಭಾಷೆಗಳಿಗೆ ಭಾಷಾಂತರವಾಗಿ ಎಲ್ಲೆಲ್ಲೂ ಹರಡಿತ್ತು. ಈಗಲೂ ಇದು ಒಂದು ಆದರ್ಶವಾದ ಪಠ್ಯಪುಸ್ತಕವಾಗಿದೆ. ರೋಗಿಹಾಸೆಪಕ್ಕದ, ರೋಗಶಾಸ್ತ್ರ ಹಾಗೂ ವೈದ್ಯಚರಿತ್ರೆ, ಸಾಹಿತ್ಯಗಳಲ್ಲಿದ್ದ ಅನುಭವವೇ ಇವನಿಗೆ ಸ್ಫೂರ್ತಿ ಕೊಟ್ಟ ಪ್ರೇರಣೆಗಳಾದ್ದವು. ಸ್ನೇಹಿತರು, ವಿದ್ಯಾರ್ಥಿಗಳು, ಸಹೋದ್ಯೋಗಿಗಳು ಎಲ್ಲರೂ ಇವನ ನಯನುಡಿಗಳನ್ನೂ, ಪಾಂಡಿತ್ಯವನ್ನೂ ಮೆಚ್ಚಿ ಭಕ್ತಿಪೂರ್ವಕ ಪೂಜೆ ಸಲ್ಲಿಸಿದರು.

೩೬. ೨೦ನೇ ಶತಮಾನದ ವೈದ್ಯಶಾಸ್ತ್ರದ ಉನ್ನತಿ

ಈ ಶತಮಾನದಲ್ಲಿ ವೈದ್ಯವಿಜ್ಞಾನದ ಮುನ್ನಡೆ ಬೃಹತ್ತರವಾಗಿ ಬೆಳೆಯುತ್ತಿರುವುದರಿಂದ ಈ ಪುಸ್ತಕದಲ್ಲಿ ಎಲ್ಲವನ್ನೂ ತಿಳಿಸಲಸಾಧ್ಯ. ಈ ಕಾರಣದಿಂದಲೇ ೨೦ನೇ ಶತಮಾನದ ತನಕ ಮಾತ್ರ ವೈದ್ಯ ದರ್ಶನವನ್ನು ಈ ಪುಸ್ತಕದಲ್ಲಿ ಬರೆಯಲಾಗುವುದೆಂದು ಪ್ರಾರಂಭಿಸಿದ್ದು. ಆದರೆ ಇತ್ತೀಚಿನ ಸಂಶೋಧನೆಗಳನ್ನು ಕೊಂಚವೂ ತಿಳಿಸದಿದ್ದಲ್ಲಿ ಓದುಗರಿಗೆ ಅಸಮಾಧಾನವೂ ಸಂಶಯವೂ ಬರುವುದೆಂದು ತಿಳಿದು ೨೦ನೇ ಶತಮಾನದ ವೈದ್ಯಶಾಸ್ತ್ರ ಅಭಿವೃದ್ಧಿಯನ್ನು ಸೂಕ್ಷ್ಮವಾಗಿ ತಿಳಿಸಲು ಮುಂದುವರಿಸಿದೆ.

ಜರ್ಮನಿಯ ಸ್ವರ್ಣ ಯುಗ

ಜರ್ಮನಿ ಅದರ ಉನ್ನತ ಪದವಿಯನ್ನು ಕೊಂಚವೂ ತಗ್ಗಿಸದೆ ೨೦ನೇ ಶತಮಾನದ ಪ್ರಾರಂಭದಲ್ಲೂ ಮುಂದುವರಿಸುತ್ತಾ ಬಂತು. ವಿಶ್ವವಿದ್ಯಾಲಯಗಳಲ್ಲಿ ಆಸ್ಪತ್ರೆಗಳಲ್ಲಿ ಈ ವಿಜ್ಞಾನದ ಮುನ್ನಡೆಯಂತೂ ಎದ್ದು ಕಂಡುಬರುತ್ತಿತ್ತು. ರಸಾಯನ ಶಾಸ್ತ್ರ, ಏಕಾಣುಜೀವಿಶಾಸ್ತ್ರ, ರೋಗಶಾಸ್ತ್ರ, ಅಂಗಕ್ರಿಯೆಶಾಸ್ತ್ರ ಹಾಗೂ ಔಷಧವೈದ್ಯ ಶಾಸ್ತ್ರಗಳೆಲ್ಲದರಲ್ಲೂ ನಡೆದ ಸಂಶೋಧನೆಗಳಿಂದ ಜರ್ಮನಿಯ ಈ ಅವಧಿಯನ್ನ ಸ್ವರ್ಣ ಯುಗವೆಂದು ಕರೆಯಬಹುದು.

ರಸಾಯನಶಾಸ್ತ್ರದಲ್ಲಿ ಎಮಿಲ್ ಫಿಷರ್ (೧೮೫೨-೧೯೧೯) ತನ್ನ ಜೀವಮಾನದ ಬಹಳ ಕಾಲವನ್ನೆಲ್ಲಾ ಅಮೈನೊ ಆಮ್ಲದಿಂದ ಪ್ರೋಟಿನನ್ನು ಕೃತಕಲ್ಪಿಸುವುದರಲ್ಲಿ ವಿನಿಯೋಗಿಸಿದನು. ಫೀನೈಲ್ ಹೈಡ್ರಜೀನ್, ಮ್ಯಾನ್ನೋಸ್, ಕೆಫೀನ್ ಹಾಗೂ ಇತರ ಪೂರೀನ್ ಸಂಯುಕ್ತಗಳನ್ನೂ, ವೆರೊನಾಲ್ ಹಾಗೂ ಮತ್ತಿತರ ನಿದ್ದೆಕಾರಿಗಳನ್ನೂ ಕೃತಕಲ್ಪಿಸಿದನು. ಇವನಂತೆ, ಬರ್ಲಿನ್ನಿನ ಮೊದಲ ವೈದ್ಯ ಚಿಕಿತ್ಸಾಲಯದ ಕಿರಿಯ ವಿಲ್‌ಹೆಲ್ಮ್ ಹಿಸ್ ಮುಖ್ಯಾಧಿಕಾರಿಯಾಗಿದ್ದಾಗ 'ಹಿಸ್‌ನ ಪಿಂಡಿ' ಎಂಬ ಇವನ ಹೆಸರನ್ನು ಹೊಂದಿರುವ ವಿವರ ಗುಂಡಿಗೆಶಾಸ್ತ್ರಕ್ಕೆ ಇವನ ಮುಖ್ಯ ಕೊಡುಗೆಯಾಯಿತು. ಕೀಲುಬಾವು ಹಾಗೂ ಕಟ್ಟುವಾರೆಗಳಲ್ಲಿ ಉತ್ತಮ ಸಾಧನೆಗಳನ್ನೂ ಕಲ್ಪಿಸಿದನು. ಫ್ರೆಡ್ರಿಕ್ ಕ್ರಾಸ್ ಆಗಿನ ಎರಡನೆಯ ಚಿಕಿತ್ಸಾಲಯಕ್ಕೆ ನೆರವಾದನು. ಹೀಗೆ ಅನೇಕ ವೈದ್ಯ ವಿದ್ವಾಂಸರು ಜರ್ಮನಿಯ ವೈದ್ಯ ಐಶ್ವರ್ಯಕ್ಕೆ ಕಾರಣರಾದರು. ಉದಾಹರಣೆ–ಮುಲ್ಲರ್, ರಾಂಬರ್ಗ್, ಸ್ಟ್ರುಂಪೆಲ್, ಫ್ಲೆಕ್ಸ್‌ನರ್ ಹಾಗೂ ಸುಧಾಫ್ ಮತ್ತು ಕಾರೆಲ್ ವೆಂಕಿಬಾಕ್. ವೆಂಕಿಬಾಕ್ 'ಗುಂಡಿಗೆ ತಾಳಗತಿಗೆಡಿಕೆ' ಮತ್ತು ವೆಂಕಿಬಾಕ್ ಪಿಂಡಿಯನ್ನು ವಿವರಿಸಿ ಗುಂಡಿಗೆಶಾಸ್ತ್ರದಲ್ಲಿ ಪ್ರವೀಣನೆನಿಸಿಕೊಂಡನು.

ವೈದ್ಯಶಾಸ್ತ್ರದಲ್ಲಿ ಇವರೆಲ್ಲರೂ ಹೇಗೆ ಮುಂದಾಳುಗಳಾಗಿದ್ದರೋ, ಹಾಗೇ ಶಸ್ತ್ರವೈದ್ಯ

ದಲ್ಲೂ ಕೂಡ ಬಿಯರ್, ಹೊಪ್ಪ, ಟ್ರೆಂಡಲೆನ್‌ಬರ್ಗ್, ಪೇಯರ್ ಹಾಗೂ ಲೆಕ್ಸರ್ ಎಂಬುವರು ಉನ್ನತ ಸ್ಥಾನಗಳನ್ನು ಪಡೆದಿದ್ದರು.ಆಗಸ್ಟ ಬಿಯರ್ ೧೮೯೮ರಲ್ಲಿ ಬೆನ್ನು ಹುರಿಯ ಅರಿವಳಿಕೆಯನ್ನು ಜಾರಿಗೆ ತಂದನು. ಆಲ್ಬರ್ಟ್ ಹೊಪ್ಪ ಕಣ್ಣಿನ ಶಾಸ್ತ್ರದಲ್ಲಿ ಪ್ರವೀಣನಾದನು. ಅಡಾಲ್ಫ್ ರೊರೆನ್ಸ್ ತಟ್ಟೆಪಾದ, ಸೊಂಟದ ಕೀಲುತಪ್ಪಿಕೆ ಹಾಗೂ ರಕ್ತವಿಲ್ಲದ ಶಸ್ತ್ರಕ್ರಿಯೆ ಮುಂತಾದ ವಿಷಯಗಳಲ್ಲಿ ಕೀರ್ತಿ ಪಡೆದನು. ರೋಗ ಶಾಸ್ತ್ರದಲ್ಲಿ ಮಿದುಳ್ಪರೆಕಾಯಿಲೆಯನ್ನು ಕಂಡುಹಿಡಿದು ಆಂಟನ್ ವೀಪಲ್‌ಬಾವ್ ಏಕಾಣುಜೀವಿಶಾಸ್ತ್ರಕ್ಕೆ ತಿರುಳು ತುಂಬಿದನು.


ಇದೇ ವೇಳೆ,ವಿಯನ್ನದಲ್ಲಿ ಜೂಲಿಯಸ್ ವ್ಯಾಗ್ನರ್ ವಾನ್ ಜಾರಿಗ್ ಹಾಗೂ ಸಿಗ್ಮಂಡ್ ಫ್ರಾಯ್ಡ್ ಮನೋರೋಗ ವೈದ್ಯರಲ್ಲಿ ಉತ್ತಮರೆನಿಸಿಕೊಂಡರು. ೧೯೧೭ರ ಜೂನ್ ೧೪ರಲ್ಲಿ ವ್ಯಾಗ್ನರ್ ವಾನ್ ಜಾರಿಗ್ ಉದ್ವೇಗ ರೋಗದ ರೋಗಿಗಳಿಗೆ ಮಲೇರಿಯ ಜ್ವರ ಹತ್ತಿಸಿ ಗುಣಪಡಿಸಿದುದನ್ನು ೧೯೧೮ರಲ್ಲಿ ಪ್ರಕಟಪಡಿಸಿದನು. ಅಂದಿನಿಂದ ಈ ಚಿಕಿತ್ಸೆ ಎಲ್ಲಾ ಕಡೆಯಲ್ಲೂ ಒಂದು ಮಾದರಿ ಚಿಕಿತ್ಸೆಯಾಯಿತು. ಸಿಗ್ಮಂಡ್ ಫ್ರಾಯ್ಡ್ ನರರೋಗ ವೈದ್ಯದಲ್ಲಿ ಕ್ರಾಂತಿ ಎಬ್ಬಿಸಿ, ಮನಸ್ಸನ್ನು ಅರಿವುಳ್ಳದ್ದು ಅರಿವಿಲ್ಲದ್ದು ಎಂದು ಎರಡು ವಿಧಗಳಾಗಿ ಪರಿಗಣಿಸಿ ಅವುಗಳ ಪರಸ್ಪರ ಪ್ರತಿಕ್ರಿಯೆಗಳನ್ನು ಪರೀಕ್ಷಿಸಿದನು. ಹಾಗೂ ಸ್ವಪ್ನಗಳ ಅರ್ಥಗಳನ್ನು ಕುರಿತು ಅವು ಅನೇಕ ಸಲ ಮನಸ್ಸಿನ ನಿಗೂಢ ಪ್ರತಿಕ್ರಿಯೆಯೆಂದು ಊಹಿಸಿದನು.

ಜರ್ಮನಿಯ ಏಕಾಣುಜೀವಿಶಾಸ್ತ್ರದ ಒಂದು ಮಹತ್ತರ ಶೋಧನೆ ಎಂದರೆ ಉಪದಂಶ ರೋಗದ ಕಾರಕವನ್ನು ಕಂಡುಹಿಡಿದದ್ದು. ಇದನ್ನು ಬರ್ಲಿನ್ನಿನಲ್ಲಿ ಫ್ರಿಟ್ಸ್ ಷೌಡಿನ್ ೧೯೦೫ರಲ್ಲಿ ವಿವರಿಸಿದನು. ಅಲ್ಲದೆ, ವಿವಿಧ ಚಲ್ಕಣಗಳನ್ನು ಗುರ್ತಿಸಿ ಆಮಶಂಕೆಗೆ ಕಾರಣವಾದ ಎಂಟಮೀಬ ಹಿಸ್ಟೊಲಿಟಿಕವೆಂಬ ಕರುಳ್ಚಲ್ಕಣವನ್ನು ಬೇರ್ಪಡಿಸಿದನು. ಎರಿಕ್ ಹಾಫ್‌ಮನ್ ಸಂಗಡ ಸೇರಿ ಉಪದಂಶದ ಕಾರಕವಾದ ಸುರುಗೂವಲಿಯನ್ನು ಒಂದು ವಿಶೇಷ ರೀತಿಯಲ್ಲಿ ಬಣ್ಣ ಕಟ್ಟುವುದನ್ನೂ ತೋರಿಸಿದನು. ಹೀಗೆ ಉಪದಂಶದ ಸುರುಗೂದಲಿಯನ್ನು ಕಂಡುಹಿಡಿದ ಷೌಡಿನ್ ಕ್ಷಯಾಣುವನ್ನು ಕಂಡುಹಿಡಿದ ರಾಬರ್ಟ್ ಕಾಕ್ ಮಹಾಶಯನಿಗೆ ಸಮಾನನೆಂದೆನಿಸಿಕೊಂಡನು. ಮುಂದಿನ ವರ್ಷ ೧೯೦೬ರಲ್ಲಿ ಉಪದಂಶ ರೋಗ ಗೊತ್ತಾಗುವುದಕ್ಕೆ ಬೆಂಬಲ ಕೊಡುವ ವಾಸರ್‌ಮನ್ ಪ್ರತಿಕ್ರಿಯೆಯನ್ನು ಆಗಸ್ಟ್ ವಾನ್ ವಾಸರ್‌ಮನ್(೧೮೬೬–೧೯೨೫) ಪ್ರಕಟಿಸಿದನು. ಉಪದಂಶ ರೋಗವನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ತಿಳಿಯಲು ಈ ವಿಶೇಷ ಶೋಧನೆಗಳು ಸಹಾಯ ಮಾಡಿದವು.

ಪಾಲ್ ಆರ್ಲಿಕ್


೧೯ನೇ ಶತಮಾನದ ಕೊನೆಯ ಹಂತದಲ್ಲೂ ೨೦ನೇ ಶತಮಾನದ ಪ್ರಾರಂಭದಲ್ಲೂ ಉಪದಂಶ ರೋಗದ ಶೋಧನೆಯಲ್ಲಿ ಕೀರ್ತಿ ಪಡೆದವರಲ್ಲಿ ಪಾಲ್ ಆರ್ಲಿಕ್

ಎಂಬ ಜರ್ಮನಿ ವೈದ್ಯ ಒಬ್ಬ. ಇವನು ಸೈಲೀಷಿಯದಲ್ಲಿ ಹುಟ್ಟಿಸ್ಟ್ರಾಸ್ ಬರ್ಗ್, ಫ್ರೀಬರ್ಗ್, ಲೀಪ್ಸಿಗ್ ಮುಂತಾದ ಸ್ಥಳಗಳಲ್ಲಿ ವ್ಯಾಸಂಗ ಮಾಡಿ ೧೮೭೮ರಲ್ಲಿ ಡಾಕ್ಟೊರೇಟ್ ಪದವಿಯನ್ನು ಪಡೆದನು. ಇವನು ವಿದ್ಯಾರ್ಥಿಯಾಗಿದ್ದಾಗಲೇ ಊತಕದಲ್ಲಿಯ ಸೀಸವನ್ನು ಫುಕ್ಸಿನ್ನಿನಿಂದ ಬಣ್ಣಗಟ್ಟುವ ಬಗೆಯನ್ನು ತಿಳಿಸಿದನು. ಈ ಬಗೆಯ ಶೋಧನೆಗಳನ್ನು ಮುಂದುವರಿಸಿ, ೧೮೭೯ರಲ್ಲಿ ಬಿಳಿ ರಕ್ತ ಕಣಗಳಲ್ಲಿರುವ ನುಚ್ಚು ಹರಳುಗಳನ್ನು ವಿಶೇಷ ರೀತಿಯಲ್ಲಿ ಬಣ್ಣಗಟ್ಟಿಸಿ ಮೂರು ವಿಧವಾದ ಬಿಳಿ ರಕ್ತಕಣಗಳನ್ನು ವಿಂಗಡಿಸಲು ಸಹಾಯ ಮಾಡಿದನು. ಈ ಶೋಧನೆಯೇ ನವೀನ ರಕ್ತವಿಜ್ಞಾನದ ಒಂದು ಅಡಿಪಾಯವಾಯಿತು. ೧೮೯೯ರಲ್ಲಿ ಮರಿವಣ, ಜೀವವಿಷ, ಏಡಿಗಂತಿ ಮುಂತಾದ ಶೋಧನೆಗಳಲ್ಲಿ ತೊಡಗಿದ್ದು ೧೯೦೬ರಲ್ಲಿ ಒಂದು ವಿಶೇಷ ಸಂಸ್ಥೆಯೊಂದು ಇವನ ಪಾಲಿಗೆ ಮುಡುಪಾಗಿ ಬಂತು. ಅಲ್ಲಿ ರಸಾಯನರೋಗಚಿಕಿತ್ಸೆಯನ್ನು ಅಭಿವೃದ್ಧಿಗೊಳಿಸುತ್ತ ೧೯೧೦ರಲ್ಲಿ ಉಪದಂಶವನ್ನು ಗುಣಪಡಿಸುವ ಸಾಲ್ವಾರ್ಸಾನ್ (೬೦೬) ಎಂಬ ಮದ್ದನ್ನು ಕಂಡುಹಿಡಿದನು. ಈ ಮದ್ದಿನ ಉಪಯೋಗ ಅನೇಕ ವರ್ಷಗಳು ಜಾರಿಯಲ್ಲಿತ್ತು. ಇವೆಲ್ಲದರ ಫಲಶ್ರುತಿ, ೧೯೦೮ರಲ್ಲಿ ನೊಬೆಲ್ ಪ್ರಶಸ್ತಿ ಪಡೆದು ರಸಾಯನರೋಗಚಿಕಿತ್ಸೆಯ ಕ್ರಮವನ್ನು ಬೆಳಕಿಗೆ ತಂದನು.




ಪಾಲ್ ಆರ್ಲಿಕ್

ಇದೇ ಕಾಲದಲ್ಲಿ ರೋಗಶಾಸ್ತ್ರದ ಸಂಶೋಧನೆಗಳಲ್ಲಿ ಹೊವಾರ್ಡ್ ರಿಕೆಟ್ಸ್ ಮತ್ತು ಪ್ರೊವಸೆಕ್ ಎಂಬ ವೈದ್ಯರ ಹೆಸರನ್ನು ನೆನೆಯಬೇಕು. ರಿಕೆಟ್ಸ್ ಉಣ್ಣೆಜ್ವರ, ಪ್ರೊವಸೆಕ್ ಹೇನುಕೂರೆಜ್ವರವೆಂಬ ರೋಗಗಳ ಸಂಶೋಧನೆಗಳನ್ನು ನಡೆಸಿದರು. ಇವರಿಬ್ಬರೂ ವೈದ್ಯ ವಿಜ್ಞಾನದ ಪ್ರೋತ್ಸಾಹಕ್ಕಾಗಿ ಕೆಲಸಮಾಡುತ್ತ ಹೇನುಕೂರೆಜ್ವರ ಬಂದು ಧರ್ಮಬಲಿಯಾದರು. ಏಕಾಣುಜೀವಿಶಾಸ್ತ್ರ ಬೆಳೆಯುತ್ತಿರುವಾಗಲೇ ಅತಿಸೂಕ್ಷ್ಮದರ್ಶಕ ವಿಷಕಣಗಳ ಶೋಧನೆಯೂ ಬೆಳೆದುಬಂದು, ೧೮೯೮ರಲ್ಲಿ ಲಾಫ್ಲರ್ ಎಂಬ ವಿಜ್ಞಾನಿ ವಿಷಕಣದಿಂದ ಕಾಲು ಬಾಯಿ ಜ್ವರ ಬರುತ್ತದೆಂದು ತಿಳಿಸಿದನು. ಮುಂದಿನ ಕೆಲವು ವರ್ಷಗಳಲ್ಲಿ, ನಲವತ್ತು ಬಗೆಬಗೆಯ ವಿಷಕಣಗಳು ಮನುಷ್ಯನಲ್ಲಿ



ಪೊಲಿಯೊಮೈಲೈಟಿಸ್ ವಿಷಕಣದ ವಿದ್ಯುತ್ಕಣ ಮಿಣಚಿತ್ರ

ರೋಗ ಉಂಟುಮಾಡುವುದನ್ನು ತೋರಿಸಿದನು. ಉದಾಹರಣೆ–ಸಿಡುಬು, ತಟ್ಟು, ನಾಯಿಹುಚ್ಚು, ಪೊಲಿಯೊಮೈಲೈಟಿಸ್ ಮುಂತಾದವು. ಜೀವಸತ್ತ್ವ ಮತ್ತು ರೋಗಗಳ ಸಂಭವತೆಯಲ್ಲಿ ಒಗ್ಗದಿಕೆಯ ಪಾತ್ರವೇ ಮುಂತಾದ ಇನ್ನೂ ಅನೇಕ ಸಾಧನೆಗಳು ೨೦ನೇ ಶತಮಾನದ ಮೊದಲ ವರ್ಷಗಳಲ್ಲಿ ಕಂಡುಬಂದವು. ಫ್ಯೂಸನ್ ಮತ್ತು ಕ್ರೈಸ್ಟ್ ಎ ಜೀವಸತ್ತ್ವವನ್ನೂ, ಜೇನಸ್ ಮತ್ತು ಡೊನಾಕ್ ಬಿ ಜೀವಸತ್ತ್ವವನ್ನೂ, ಖುನ್ ಬಿ೨ ಅಥವ ರಿಬೊಫ್ಲೆವಿನ್ ಜೀವಸತ್ತ್ವವನ್ನೂ, ಗೋಲ್ಡ್‌ಬರ್ಗರ್ ಪೆಲ್ಲಾಗ್ರ ಸತ್ತ್ವವನ್ನೂ, ಜೆಂಟ್ ಗೊಯಾರ್ಗಿ ಸಿ ಜೀವಸತ್ತ್ವವನ್ನೂ ಹಾಗೂ ಇವಾನ್ಸ್



ಜೊಸೆಫ್ ಗೋಲ್ಡ್‌ಬರ್ಗರ್ ಬಿ ಜೀವಸತ್ವ ಅಭಾವದಿಂದ ಪೆಲ್ಲಾಗ್ರ ಬರುತ್ತದೆಂದು ಕಂಡುಹಿಡಿದಿದ್ದನು.

ಇ ಜೀವಸತ್ತ್ವವನ್ನೂ ಕಂಡುಹಿಡಿದು ಗೌರವ ಪಡೆದರು. ಎಲಿಯಟ್‌ಸನ್, ಮೊರ್‍ರಿಲ್ ವೈಮಾನ್, ವಾನ್ ಹೆಲ್ಮಾಂಟ್, ಚಾರಲ್ಸ್ ರಿಕೆಟ್, ವಾನ್ ಪಿರ್ಕೆಟ್ ಮುಂತಾದವರೆಲ್ಲಾ ಒಗ್ಗದಿಕೆ ರೋಗಗಳ ಶೋಧನೆಯಲ್ಲಿ ಭಾಗಿಗಳಾಗಿದ್ದರು.

ಕಪ್ಪೆಯ ಗುಂಡಿಗೆ ಕುಗ್ಗುವಾಗ ವಿದ್ಯುತ್ ಹರಿವು ಉಂಟಾಗುತ್ತದೆಂದು ೧೮೪೩ ಹಾಗೂ ೧೮೫೬ರಲ್ಲೇ ಗೊತ್ತಾಗಿತ್ತು. ಆದರೆ ಲೇಡನ್ ವಿಶ್ವವಿದ್ಯಾಲಯದ ಶರೀರ ವಿಜ್ಞಾನದ ಪ್ರಾಧ್ಯಾಪಕ ವಿಲ್ಲೆಮ್ ಐನ್‌ತೋವನ್ ಒಂದು ಸುಲಭವಾದ ಹರಿವಿದ್ಯುನ್ಮಾಪಿಯನ್ನು ೧೯೦೩ರಲ್ಲಿ ಕಂಡುಹಿಡಿದು, ಅನಂತರ ಮೊಟ್ಟಮೊದಲ ವಿದ್ಯುತ್‌ಗುಂಡಿಗೆಚಿತ್ರಕವನ್ನೂ ತಯಾರಿಸಿದನು. ಇದರಿಂದ ಮನುಷ್ಯನ ಗುಂಡಿಗೆಯಲ್ಲಿ ಏಳುವ ವಿದ್ಯುತ್ ಬದಲಾವಣೆಗಳನ್ನು ಅಳೆಯಲು ಅನುಕೂಲವಾಯಿತು. ಇದೇ ಸಮಯದಲ್ಲಿ, ಗುಂಡಿಗೆ ಶಾಸ್ತ್ರ ಸರ್ ಜೇಮ್ಸ್ ಮೆಕೆನ್ಸಿಯ ಪರಿಶೀಲನೆಗಳ ಸಹಾಯದಿಂದ ಮುಂದುವರಿಯುತ್ತಿತ್ತು.

ಮೆಕೆನ್ಸಿ

೨೦ನೇ ಶತಮಾನದ ವೈದ್ಯರಲ್ಲಿ ಗುಂಡಿಗೆಶಾಸ್ತ್ರಕ್ಕೆ ಮೆಕೆನ್ಸಿ ನೀಡಿದಷ್ಟು ಕೊಡುಗೆಯನ್ನು ಇನ್ನಾರೂ ನೀಡಿಲ್ಲವೆಂದು ಹೇಳಬಹುದು. ಚಿಕ್ಕಂದಿನಲ್ಲಿ ಇವನನ್ನು ದಡ್ಡ ಎಂದು ಕರೆಯುತ್ತಿದ್ದರೆಂದು ತಾನೇ ಹೇಳಿಕೊಂಡಿದ್ದಾನೆ. ಅಲ್ಲದೆ, ಬುದ್ಧಿಶಕ್ತಿಗಿಂತ ಜ್ಞಾಪಕಶಕ್ತಿಯೇ ಮೇಲೆಂದಿದ್ದ ಆಗಿನ ಕಾಲದ ನಂಬಿಕೆ ಇವನನ್ನು ಕೊಂಚ ಮಟ್ಟಿಗೆ ಬಾಧಿಸುತ್ತಿತ್ತು. ಆದರೂ ೧೮೭೮ರಲ್ಲಿ ಎಡಿನ್ಬರೊ ವೈದ್ಯಶಾಲೆಯಿಂದ ಪದವೀಧರನಾಗಿ ಲ್ಯಾಂಕಾಷೈರಿನ ಬರ್ನ್ಲಿ ಎಂಬ ಪಟ್ಟಣದಲ್ಲಿ ವೈದ್ಯಕಸುಬನ್ನು ಕೈಗೊಂಡನು. ಆಗ ತಾನು ಪರೀಕ್ಷಿಸುತ್ತಿದ್ದ ರೋಗಿಗಳಲ್ಲಿ ಕ್ರಮಗೆಟ್ಟ ನಾಡಿಯನ್ನು ಅನೇಕರಲ್ಲಿ ಕಾಣುತ್ತಿದ್ದನು.ತನಗೆ ಈ ಕ್ರಮಗೆಟ್ಟ ನಾಡಿಯ ರೀತಿಗಳನ್ನು ತಿಳಿಯಲು ಅಸಾಧ್ಯವಾದುದರಿಂದ ಅನೇಕ ದೊಡ್ಡ ಪುಸ್ತಕಗಳನ್ನು ಓದಿದುದಲ್ಲದೆ, ತನ್ನ ಪ್ರಾಧ್ಯಾಪಕರುಗಳನ್ನೂ ವಿಚಾರಿಸಲು ಎಡಿನ್‌ಬರೋವಿಗೆ ಪುನಃ ತೆರಳಿದನು. ಅಲ್ಲಿಯೂ ಕೂಡ ಸರಿಯಾದ ಉತ್ತರ ದೊರೆಯದೆ ತಾನೇ ಸ್ವತಃ ಪರೀಕ್ಷೆ ನಡೆಸಲಾರಂಭಿಸಿದನು. ಈ ಶೋಧನೆಯಲ್ಲಿ 'ಡಡ್‌ಜನ್ ನಾಡಿಚಿತ್ರಕ' ಮತ್ತು ತನ್ನ ಹೆಸರುಳ್ಳ 'ಮೆಕೆನ್ಸಿ ಮಸಿಹಲಚಿತ್ರಕ'ಗಳನ್ನು ಉಪಯೋಗಿಸಿ ಕ್ರಮಗೆಟ್ಟ ನಾಡಿಯ ವಿಚಾರಗಳನ್ನು ತಿಳಿದು ೧೯೦೨ರಲ್ಲಿ 'ನಾಡಿ ಪರೀಕ್ಷೆ' ಎಂಬ ಪುಸ್ತಕವನ್ನು ಪ್ರಕಟಿಸಿದನು. ಇದಾದ ಕೆಲವು ವರ್ಷಗಳನಂತರ'ಗುಂಡಿಗೆಯ ರೋಗಗಳು'ಎಂಬ ಮತ್ತೊಂದು ಪುಸ್ತಕವನ್ನು ಬರೆದನು. ಇವುಗಳ ಮಹಿಮೆ ಹಿರಿದಾಗಿದ್ದು, ಅನೇಕ ಭಾಷೆಗಳಿಗೆ ಭಾಷಾಂತರವಾದವು. ಮೆಕೆನ್ಸಿಯ ಪ್ರಭಾವವೂ ಹೆಚ್ಚಿತು. ಅನೇಕ ಬಿರುದುಗಳೂ ಬಂದವು. ೧೦ ವರ್ಷ ಗುಂಡಿಗೆ ವೈದ್ಯಪಟುವೆಂದು ಮನ್ನಣೆ ದೊರಕಿ,ಕೆಲವು ದಿವಸಗಳಾದ ಮೇಲೆ ೧೯೨೫ರಲ್ಲಿ ಮರಣಹೊಂದಿದನು.

ಚಿಕಾಗೋ ಕೊಡುಗೆ

ಅತ್ತಕಡೆ ಚಿಕಾಗೊ ಪಟ್ಟಣದಲ್ಲಿ ಡಾ.ಜೇಮ್ಸ್ ಹೆರ್ರಿಕ್ ೧೯೧೨ರಲ್ಲಿ "ಕಿರೀಟಕ ಧಮನಿಯಲ್ಲಿ ಏಳುವ ಥಟ್ಟನೆಯ ತಡೆಯ ಹಾಸೆಬದಿಯ ಲಕ್ಷಣ"ವೆಂಬ ಪುಸ್ತಕ

ಬರೆದು ಸಾವಿಗೆ ಕಿರೀಟಕ ತಡೆ ಬಹು ಸಾಮಾನ್ಯ ಕಾರಣವೆಂದು ತಿಳಿಸಿದನು. ಇದೇ ಕಾಲದಲ್ಲಿ ವೈದ್ಯಕೀಯ ಸಂಶೋಧನೆಯಲ್ಲಿ ಚಿಕಾಗೊ ಒಂದು ಉನ್ನತ ಮಟ್ಟವನ್ನು ಮುಟ್ಟಲು ಫ್ರ್ಯಾಂಕ್ ಬಿಲ್ಲಿಂಗ್ಸ್ (೧೮೫೪–೧೯೩೨), ಜೊಸೆಫ್ ಕ್ಯಾಪ್ಸ್, ಎರ್ನೆಸ್ಟ್ ಐರನ್ಸ್, ಎಡ್ವರ್ಡ್ ರೋಸಿನವ್, ಜೊಸೆಫ್ ಮಿಲ್ಲರ್, ಜಾರ್ಜ್ ಡಿಕ್, ಗ್ಲಾಡಿಸ್ ಡಿಕ್, ವಾಲ್ಟರ್ ಪಾಮರ್ ಮುಂತಾದವರೆಲ್ಲಾ ಕಾರಣರಾದರು. ಇದೇ ರೀತಿ ರೋಗಶಾಸ್ತ್ರದಲ್ಲೂ ಶಸ್ತ್ರವೈದ್ಯದಲ್ಲೂ ಅನೇಕ ಮಹನೀಯರು ತಮ್ಮತಮ್ಮ ಕೊಡುಗೆಗಳನ್ನು ನೀಡಿದರು. ಇದೇ ವೇಳೆಯಲ್ಲಿ ವೈದ್ಯ ಶಾಸ್ತ್ರದ ಅಭಿವೃದ್ಧಿಗೋಸ್ಕರ ವೈದ್ಯ ಸಂಸ್ಥೆಗಳು, ಪುಸ್ತಕ ಭಂಡಾರ ಹಾಗೂ ವೈದ್ಯಪತ್ರಿಕೆಗಳೂ ಆರಂಭವಾದವು.

ಚಿಕಾಗೊ ಒಂದರಲ್ಲೇ ಅಲ್ಲದೆ, ಅಮೆರಿಕದ ಇತರ ಪಟ್ಟಣಗಳಲ್ಲೆಲ್ಲಾ ವೈದ್ಯದ ಅಭಿವೃದ್ಧಿ ಪ್ರಾರಂಭವಾಯಿತು. ಮಧುಮೇಹ ರೋಗಕ್ಕೆ ಬಾಸ್ಟನ್ನಿನ ಜೊಸ್ಲಿನ್ ತನ್ನ ಕಾಲವನ್ನೆಲ್ಲಾ ಅರ್ಪಿಸಿ, ಮಧುಮೇಹ ರೋಗದ ಅಂಶಗಳನ್ನೆಲ್ಲಾ ತಿಳಿಸಿದನು. ಲೆವೈನ್ ಗುಂಡಿಗೆ ವೈದ್ಯಕ್ಕೆ ಗಮನ ಕೊಟ್ಟು ಅದರಲ್ಲಿ ಪಂಡಿತನಾದನು. ಹಾರ್ವಾರ್ಡ್‌ನಲ್ಲಿ ಲಾಹೆ ಶಸ್ತ್ರವೈದ್ಯಕ್ಕೆ ಸಾಕಷ್ಟು ಬೆಂಬಲಕೊಟ್ಟು, ಅನಂತರ ಬಾಸ್ಟನ್ನಿನಲ್ಲಿ ಲಾಹೆ ಚಿಕಿತ್ಸಾಲಯವನ್ನೂ ಪ್ರಾರಂಭಿಸಿದನು. ಇದು ಮೇಯೊ ಚಿಕಿತ್ಸಾಲಯದ ಮಾದರಿಯಲ್ಲಿತ್ತು. ಕ್ಲೀವ್‌ಲೆಂಡ್, ಸೆಂಟ್ ಲೂಯಿ, ಕ್ಯಾನ್ಸಾಸ್, ಫಿಲಡೆಲ್ಫಿಯ, ನ್ಯೂ ಯಾರ್ಕ್ ಮುಂತಾದ ಪಟ್ಟಣಗಳಲ್ಲೆಲ್ಲಾ ವೈದ್ಯಶಾಸ್ತ್ರ ಬೆಳೆಯಿತು. ಇವು



ಹಾರ್ವೆ ಕುಷಿಂಗ್

ಗಳನ್ನು ಪ್ರಸಿದ್ಧಿಗೆ ತಂದ ಮಹನೀಯರು ಅನೇಕರು. ಇವರುಗಳ ಹೆಸರುಗಳು ಬಹು ಸಂಖ್ಯಾತವಾಗಿರುವುದರಿಂದ ಬರೆದರೆ ಒಂದು ದೊಡ್ಡ ಪಟ್ಟಿಯೇ ಆಗುತ್ತದೆ. ಅಲ್ಲದೆ,

ಅವರ ಹೆಸರುಗಳು ಇನ್ನೂ ಹೊಸದಾಗಿರುವುದರಿಂದ ಚರಿತ್ರೆಗೆ ಸಲ್ಲದಿರಬಹುದು. ನ್ಯೂಯಾರ್ಕಿನ ರಾಕಿಫೆಲ್ಲರ್ ಸಂಸ್ಥೆಯಲ್ಲಿ, ಅಲೆಕ್ಸಿಸ್ ಕ್ಯಾರೆಲ್ ಸೈಮನ್ ಫ್ಲೆಕ್ಸ್ನರ್ ಮುಂತಾದ ಮಹನೀಯರು ರಸಾಯನಶಾಸ್ತ್ರ, ಸೋಂಕುರೋಗ, ವಿಷಕಣ ರೋಗಗಳಲ್ಲಿ ಶ್ಲಾಘನೀಯವಾದ ಕೊಡುಗೆಗಳನ್ನು ನೀಡಿದರು. ಬಾಲ್ಟಿಮೋರಿನಲ್ಲಿ ಹಾಲ್ಸ್ಟೆಡ್ ಮತ್ತು ಹಾರ್ವೆ ಕುಷಿಂಗ್ ಶಸ್ತ್ರವೈದ್ಯದಲ್ಲಿ ನೀಡಿದ ಕೊಡುಗೆಗಳು ಅರ್ಹತೆಗೆ ತಕ್ಕವಾಗಿದ್ದವು. ಕುಷಿಂಗ್ ನರಶಸ್ತ್ರವೈದ್ಯದಲ್ಲಿ ನಿಪುಣನೆಂದೆನಿಸಿಕೊಂಡನು. ಕುಷಿಂಗ್ ಲಕ್ಷಣಕೂಟ ಇವನ ವಿವರಣೆಯೇ ಆಗಿತ್ತು. ಆಸ್ಲರ್ ಹಾಗೂ ವಿಸೇಲಿಯಸ್‌ರವರ ಜೀವನ ಚರಿತ್ರೆಗಳನ್ನು ಬರೆದು ಬಹುಮಾನಗಳನ್ನೂ ಪಡೆದನು. ಕೊನೆಯದಾಗಿ ಮಿನ್ನಿಸೊಟದ ರಾಚೆಸ್ಟರ್‌ನಲ್ಲಿ ವಿಲಿಯಂ ಮೇಯೊ ಮತ್ತು ಚಾರಲ್ಸ್ ಮೇಯೊರವರ ಅದ್ಭುತ ಶಸ್ತ್ರಕ್ರಿಯೆಗಳನ್ನು ನೋಡಲು ಪ್ರಪಂಚದ ಎಲ್ಲಾ ಕಡೆಗಳಿಂದಲೂ ಶಸ್ತ್ರವೈದ್ಯರು ಬರಲಾರಂಭಿಸಿದರು.

ಇಂಗ್ಲೆಂಡಿನ ಪ್ರಭಾವ

ಇಂಗ್ಲೆಂಡಿನಲ್ಲಿ ಹಾಗೂ ಫ್ರಾನ್ಸಿನಲ್ಲಿ ಸಾಕಷ್ಟು ಸರಂಜಾಮುಗಳಲ್ಲಿಲ್ಲದಿದ್ದರೂ, ಹಣಕಾಸಿನ ಕೊರತೆ ಇದ್ದರೂ, ವೈದ್ಯರು, ಶಸ್ತ್ರವೈದ್ಯರು, ರೋಗಶಾಸ್ತ್ರಜ್ಞರು ಮತ್ತು ಶರೀರ ವಿಜ್ಞಾನಿಗಳು ಹಲವರಿದ್ದರು. ಇಂಗ್ಲೆಂಡಿನಲ್ಲಿ, ಕ್ಲಿಫರ್ಡ್ ಆಲ್ಬಟ್ ಮತ್ತು ಹಂಫ್ರಿ ರೊಲೆಸ್ಟನ್ ಎಂಬ ಗುರು ಶಿಷ್ಯರು ಅನೇಕ ಕೊಡುಗೆಗಳನ್ನು ನೀಡಿದರು. ಆಲ್ಬಟ್ ೧೮೯೬ ಹಾಗೂ ೧೮೯೯ರಲ್ಲಿ 'ವೈದ್ಯ ಶಾಸ್ತ್ರ ಪದ್ಧತಿ'ಯನ್ನೂ ಸರಿ ನೋಡಿ ಪ್ರಕಟಿಸಿದನು. ೮೦ ವರ್ಷಗಳ ವಯಸ್ಸಾಗಿದ್ದಾಗ 'ಧಮನಿಗಳ ರೋಗಗಳು' ಎಂಬ ಮತ್ತೊಂದು ಪುಸ್ತಕ ಬರೆದನು ಇಂಗ್ಲೀಷ್ ವೈದ್ಯವೃತ್ತಿಯಲ್ಲಿ ಉನ್ನತ ಮಟ್ಟವನ್ನು ಪಡೆದಿದ್ದ ರೊಲೆಸ್ಟನ್ 'ಈಲಿಯ ರೋಗಗಳು' ಎಂಬ ಪುಸ್ತಕ ಬರೆದನು. ಮೊಯಿನಿಹ್ಯಾನ್ ಹಾಗೂ ವಿಕ್ಟರ್ ಹ್ಯೂಗೊ ಶಸ್ತ್ರವೈದ್ಯದಲ್ಲಿ ಕೀರ್ತಿ ಗಳಿಸಿದರು. ಸರ್ ಫ್ರೆಡೆರಿಕ್ ಟ್ರೀವ್ಸ್ ೧೯ನೇ ಶತಮಾನದ ಕೊನೆಯಲ್ಲಿಯೇ ಒಡಲು ಶಸ್ತ್ರಚಿಕಿತ್ಸೆಯಲ್ಲಿ ಶ್ರೇಷ್ಠನಾಗಿ ೧೯೦೨ರಲ್ಲಿ ಏಳನೇ ಎಡ್ವರ್ಡ್ ದೊರೆಗೆ ಕರುಳನಾಳಕೊಯ್ತಗೆತವನ್ನು ನಡೆಸಿದನು. ಅವನ ಬರವಣಿಗೆಗಳಲ್ಲಿ 'ಶಸ್ತ್ರವೈದ್ಯದ ಅನ್ವಯಿಕ ಅಂಗರಚನೆ' ಶ್ರೇಷ್ಠವಾಗಿತ್ತು. ಆಗ ಶರೀರವಿಜ್ಞಾನದಲ್ಲಂತೂ ಇಂಗ್ಲೆಂಡಿನ ಮಟ್ಟ ಗಮನಾರ್ಹವಾಗಿತ್ತು. ಅರ್ನೆಸ್ಟ್ ಹೆನ್ರಿ ಸ್ಟಾರ್ಲಿಂಗ್ (೧೮೬೬-೧೯೨೭) ಲಂಡನ್ನಿನ ವಿಶ್ವವಿದ್ಯಾಲಯದ ಶರೀರವಿಜ್ಞಾನ ಪ್ರಾಧ್ಯಾಪಕನಾಗಿದ್ದು ವಿಭಾಜಕದ ಒತ್ತಡಕ್ಕೆ ರಸಿಕೆಯ ಪ್ರೊಟೀನಾಂಶ ಕಾರಣವೆಂದೂ, ಊತಕಗಳಿಂದ ರಕ್ತಕ್ಕೆ ದ್ರವ ಸಾಗಲು ವಿಭಾಜಕದ ಒತ್ತಡ ಅಗತ್ಯವೆಂದೂ ೧೮೯೬ರಲ್ಲಿ ತಿಳಿಸಿದನು. ಹಾಗೂ ವಿಲಿಯಂ ಬೇಲಿಸ್ ಸಂಗಡ ಮುಂಗರುಳು, ಮುರಿಗರುಳುಗಳಿಂದ ಹೊರ ಬರುವ ಸೆಕ್ರೆಟಿನ್ ರಕ್ತದಲ್ಲಿ ಸೇರಿ ಪಿತ್ತರಸ ಹಾಗೂ ಮೇದೋಜೀರಕ ರಸಗಳ ಉತ್ಪತ್ತಿಗೆ ಕಾರಣ ಆಗುವುವೆಂದು ೧೯೦೨ರಲ್ಲಿ ಬಹಿ

ರಂಗಪಡಿಸಿದನು. ಈ ರೀತಿಯ ಒಳಗಿನ ಸುರಿತಗಳಿಗೆ ಚೋದನಿಗಳೆಂದು ಹೆಸರನ್ನೂ ಕೊಟ್ಟನು. ರಕ್ತಚಲನೆಯ ಶೋಧನೆಯಲ್ಲೂ ವಿಶೇಷ ಫಲಗಳನ್ನು ಪಡೆದು, ಅವನ ಹೆಸರಿನಲ್ಲಿರುವ ಗುಂಡಿಗೆಯ ನಿಯಮವನ್ನು ವಿವರಿಸಿದನು. ಜಾನ್ ಸ್ಕಾಟ್ ಹಾಲ್ಡೇನ್ (೧೮೬೦–೧೯೩೬) ಕಲ್ಲಿದ್ದಲು ಗಣಿಗಳಲ್ಲೇಳುವ ವಿಷಗಾಳಿ ಸಂಶೋಧನೆಯಲ್ಲಿ ತೊಡಗಿ, ಇಂಗಾಲಾಮ್ಲ ಹಾಗೂ ಇಂಗಾಲ ಜಲಜನಕ ಸಂಯುಕ್ತದ ಮತ್ತು ವಾಯುವಿನ ಮಿಶ್ರಣಗಳ ತೊಂದರೆಗಳನ್ನು ವಿವರಿಸಿದನು. ಅದೂ ಅಲ್ಲದೆ, ಉಸಿರಾಟಕ್ಕೆ ಆಮ್ಲ ಜನಕ ಚೋದಕಾರಿಯಲ್ಲವೆಂದೂ, ಇಂಗಾಲ ಹಾಗೂ ಆಮ್ಲ ಜನಕದ ಮಿಶ್ರಣ, ಕಾರ್ಬನ್ ಡೈ ಆಕ್ಸೈಡ್ ಇವು ಕಾರಣವೆಂದೂ ತಿಳಿಸಿದನು. ಷಾರ್ಪಿ ಶೇಫರ್ ಮತ್ತು ಷೆರಿಂಗ್ ಟನ್ ಕೂಡ ವಿಜ್ಞಾನಕ್ಕೆ ಸಾಕಷ್ಟು ಕೊಡುಗೆಗಳನ್ನು ಅರ್ಪಿಸಿದರು.

ಫ್ರಾನ್ಸಿನ ಏಳಿಗೆ

ಇಂಗ್ಲೆಂಡು ಹೀಗೆ ಪ್ರಸಿದ್ಧಿಗೆ ಬರುತ್ತಿದ್ದಾಗ ಫ್ರಾನ್ಸಿನ ಮಾರಿ, ಡಿ ಜೆರೀನ್, ಜೇನೆಟ್, ಬ್ಯಾಬಿನ್‌ಸ್ಕಿ, ಪಿಯರಿ ಮಾರಿ ಮುಂತಾದವರೆಲ್ಲಾ ನರವೈದ್ಯಶಾಸ್ತ್ರದಲ್ಲಿ ಅನೇಕ ಶೋಧನೆಗಳನ್ನು ನಡೆಸಿ ನರವೈದ್ಯಶಾಸ್ತ್ರದ ಪ್ರಮಾಣವನ್ನು ಹೆಚ್ಚಿಸಿದರು. ವೈದ್ಯಶಾಸ್ತ್ರಪಟುಗಳಾದ ವಿಡಾಲ್, ರೋಜರ್, ಹೇಯಮ್ ತಮ್ಮ ತಮ್ಮ ಆಸಕ್ತಿ




ಜೀವವಿಜ್ಞಾನದ ಉಪಯೋಗ.
ಕುದುರೆಯಿಂದ ರಕ್ತ ರಸಿಕೆಯನ್ನು ತಯಾರಿಸುತ್ತಿರುವುದು.

ಗಳಲ್ಲಿ ಮುಂದೆ ಸಾಗಿದರು. ಶರೀರ ವಿಜ್ಞಾನದಲ್ಲಿ ಚಾರಲ್ಸ್ ರಿಕೆಟ್ ಏಕಾಣುಜೀವಿಗಳನ್ನು ಪ್ರಾಣಿಗಳ ಶರೀರಕ್ಕೆ ಚುಚ್ಚಿ, ರಕ್ಷಣಾವಸ್ತು ಬೆಳೆಯುವುದನ್ನು ೧೮೮೮ರಲ್ಲಿ

ತೋರಿಸಿದನು. ಹಾಗೂ ೧೮೯೦ರಲ್ಲಿ ರಸಿಕೆಯ ರೋಗಚಿಕಿತ್ಸೆಯನ್ನು ಮೊಟ್ಟಮೊದಲಿಗೆಉಪಯೋಗಿಸಿದನು. ಇವುಗಳ ಮೆಚ್ಚುಗೆಯಾಗಿ ೧೯೧೩ರಲ್ಲಿ ಇವನಿಗೆ ನೊಬೆಲ್ ಪ್ರಶಸ್ತಿ ದೊರಕಿತು.

ಯುರೋಪಿನ ಇತರ ದೇಶಗಳ ಕೊಡುಗೆ

ಸ್ವಿಟ್ಸರ್‌ಲೆಂಡಿನ ಶಸ್ತ್ರವೈದ್ಯ ಪ್ರಾಧ್ಯಾಪಕ ತಿಯೊಡಾರ್ ಕಾಕರ್ ಗಳಗಂಡ ರೋಗದ ಸ್ಥಿತಿಗತಿಗಳನ್ನು ವಿವರಿಸಿದುದಕ್ಕೆ ೧೯೦೯ರ ನೊಬೆಲ್ ಬಹುಮಾನ ದೊರಕಿತು. ಇವನ ಸಹೋದ್ಯೋಗಿ ಹರ್ಮನ್ ಸಹಲಿ ರಕ್ತಕೊರೆಯ ರೋಗಗಳನ್ನು ವಿವರಿಸುತ್ತಾ, 'ಸಹಲಿಯೇ ರಕ್ತಬಣ್ಣಕಮಾಪಿ'ಯನ್ನು ತಯಾರಿಸಿದನು. ಬೂರು ರೋಗಕ್ಕೆ ತಕ್ಕ ಶಸ್ತ್ರಚಿಕಿತ್ಸೆ ಕಂಡುಹಿಡಿದವನು ಇಟಲಿಯ ಶಸ್ತ್ರವೈದ್ಯ ಎಡೊಆರ್ಡೊ ಬ್ಯಾಸ್ಸಿನಿ (೧೮೪೪-೧೯೨೪) ಎಂಬುವನು. ಕ್ಯಾಸ್ಟಲ್ಲಾನಿ, ಮಾಸ್ಸೊ ಹಾಗೂ ರಿವ-ರಾಕ್ಸಿ ಇತರರು ಇಟಲಿಯ ವೈದ್ಯಶಾಸ್ತ್ರದ ಏಳಿಗೆಗೆ ಕಾರಣರಾದರು. ರಿವ-ರಾಕ್ಸಿ ಧಮನಿ ಒತ್ತಡ ಮಾಪಿ ಆಗಿನ ಕಾಲದ ವಾಸ್ತವ ಶೋಧನೆಯಾಗಿತ್ತು. ಸ್ಪೇನಿನ



ರಕ್ತದ ಒತ್ತಡ ಅಳೆಯಲು ಉಪಯೋಗಿಸುವ
ರಿವ-ರಾಕ್ಸಿ ಧಮನಿ ಒತ್ತಡಮಾಪಿಯ ಮೊದಲ ಮಾದರಿ ಯಂತ್ರ

ರೇಮನ್ ಕಹಾಲ್ (೧೮೫೨-೧೯೩೪) ನರಮಂಡಲದ ರೋಗ ರಚನೆ ಹಾಗೂ ಅಂಗ ರಚನೆಗಳನ್ನು ಗೊಲ್ಗೀ ರಂಗು ಉಪಯೋಗಿಸಿ ಮೇಲ್ಪಂಕ್ತಿ ಹಾಕಿದನು. ೨೦ನೇ ಶತಮಾನದ ಶರೀರ ವಿಜ್ಞಾನದ ಪಂಡಿತ ಮಹಾಶಯನೆಂದೆನಿಸಿಕೊಂಡ ರಷ್ಯದ ಇವಾನ್ ಪೆಟ್ರೊವಿಚ್ ಪ್ಯಾವ್‌ಲಾವ್ ಜೀರ್ಣಶಕ್ತಿಗೂ ಮನದ ಚೋದನೆಗೂ



ರೇಮನ್ ಕಹಾಲ್



ಇವಾನ್ ಪ್ಯಾವ್‌ಲಾವ್

ಇರುವ ಸಂಬಂಧವನ್ನು ತೋರಿಸಿ ನಿಯಮಾಧೀನ ಹಿಮ್ಮರಿತವನ್ನು ಊರ್ಜಿತಗೊಳಿಸಿದನು. ಇವನು ಸೆಂಟ್ ಪೀಟರ್ಸ್‌ಬರ್ಗ್‌ನಲ್ಲಿ ವ್ಯಾಸಂಗ ಮಾಡಿ ಅಲ್ಲಿಯ ಸೇನಾ ವೈದ್ಯ ಪ್ರೌಢಶಾಲೆಯಲ್ಲೇ ಪ್ರಾಧ್ಯಾಪಕನಾಗಿದ್ದು, ಜಠರ ರಸದ ಲಕ್ಷಣಗಳನ್ನು ತಿಳಿಯಲು ನಾಯಿಯ ಜಠರವನ್ನು ಚೀಲದಂತೆ ಮಾರ್ಪಡಿಸಿ ಶೋಧನೆ ನಡೆಸಿದನು.

ಅಮೆರಿಕದ ವೈದ್ಯ ವಿದ್ಯಾಭ್ಯಾಸ

೧೯ನೇ ಶತಮಾನದಲ್ಲಿ ಅಮೆರಿಕದ ವೈದ್ಯಶಾಲೆಗಳು ಹೆಚ್ಚುತ್ತಿದ್ದುದನ್ನು ನೋಡಿ

ದರೆ ಆಶ್ಚರ್ಯವಾಗುತ್ತಿತ್ತು. ಶಾಲೆಗಳು ಪ್ರತಿಯೊಂದು ಪಟ್ಟಣದಲ್ಲೂ ಪ್ರಾರಂಭವಾಗಿ ದರ್ಜೆಗೆ ಗಮನ ಕಡಿಮೆಯಾಗುತ್ತಾ ಬಂದಿತು. ಆದುದರಿಂದ ಶಾಲೆಗಳ ಅರ್ಹತೆಯನ್ನು ಗೊತ್ತುಮಾಡಲು ಫ್ಲೆಕ್ಸನರ್ ನೇಮಕವಾಗಿ ಪರೀಕ್ಷೆ ನಡೆದು ೧೯೧೦ರಲ್ಲಿ ವರದಿ ಬಂದ ಮೇಲೆ ದರ್ಜೆಯಲ್ಲಿ ಕಡಿಮೆಯಾಗಿದ್ದ ವೈದ್ಯಶಾಲೆಗಳಲ್ಲಿ ಕೆಲವು ಮುಚ್ಚಲ್ಪಟ್ಟವು. ಕೆಲವು ತಾವಾಗಿ ನ್ಯೂನತೆಗಳನ್ನು ಸರಿಪಡಿಸಿಕೊಂಡವು. ಈ ಕಾರ್ಯದಲ್ಲಿ ಅಮೆರಿಕದ ವೈದ್ಯಕೀಯ ಸಂಸ್ಥೆಯೂ ಕೈಹಾಕಿ ಬೆಂಬಲ ಕೊಟ್ಟಿತು. ಇವುಗಳ ಫಲವಾಗಿ



ಅಮೆರಿಕದ ವೈದ್ಯ ಸಂಸ್ಥೆ

೧೯೪೯ರಲ್ಲಿ ವೈದ್ಯಶಾಲೆಗಳ ಅಂಕಿ ೭೨ಕ್ಕೆ ಇಳಿಯಿತು ಹೀಗೆ ವೈದ್ಯ ವಿದ್ಯಾಭ್ಯಾಸ ಒಂದು ಹದಕ್ಕೆ ಬರುತ್ತಿರುವಾಗ, ವೈದ್ಯ ಸಂಶೋಧನೆಗಳನ್ನು ಉತ್ತಮಗೊಳಿಸಲು ಅನೇಕ ವೈದ್ಯ ಸಂಸ್ಥೆಗಳು ಜನನವಾದವು. ೧೯೦೧ರಲ್ಲಿ ಪ್ರಾರಂಭವಾದ ರಾಕಿಫೆಲ್ಲರ್ ಸಂಸ್ಥೆ ವಿಜ್ಞಾನದ ಮುನ್ನಡೆಯಲ್ಲಿ ಮಾದರಿಯಾಗಿ ನಡೆಯಲಾರಂಭಿಸಿತು. ಫ್ರಾನ್ಸಿನ ಪ್ಯಾಸ್ಚೂರ್ ಸಂಸ್ಥೆ ಹೇಗೆ ಪ್ರಸಿದ್ಧವಾಯಿತೋ ಹಾಗೆಯೇ, ಇದು ಕೂಡ ಕೊಂಚ ಕಾಲದಲ್ಲೇ ಉತ್ತಮಗೊಂಡು ಅನೇಕ ವೈದ್ಯರು ಇಲ್ಲಿ ಕೆಲಸ ಮಾಡಲು ಬರಲಾರಂಭಿಸಿದರು. ಈ ಸಂಸ್ಥೆಯ ಅಲೆಕ್ಸಿಸ್ ಕ್ಯಾರೆಲ್ಲಿಗೆ ಸಿಕ್ಕಿದ ೧೯೧೨ರ ವೈದ್ಯಶಾಸ್ತ್ರದ ನೊಬೆಲ್ ಬಹುಮಾನವಂತೂ ಅಮೆರಿಕದಲ್ಲಿ ಮೊದಲನೆಯ ವೈದ್ಯ ಬಹುಮಾನವಾಗಿತ್ತು. ಅಲ್ಲದೆ ನಾಗುಚಿ ೧೯೧೩ರಲ್ಲಿ ನರ ಉಪದಂಶ ರೋಗಿಗಳ ಮಿದುಳಿನಲ್ಲಿ ಸ್ಪೈರೊಕೀಟ ಪಲ್ಲಡವೆಂಬ ಸುರುಗೂದಲಿಯನ್ನು ನಿದರ್ಶಿಸಿದನು. ರ್ರೀಯಂಶ (ಆರ್ ಎಚ್) ಎಂಬ ಹೊಸ ರಕ್ತ ವರ್ಗವನ್ನು ಇದೇ ಸಂಸ್ಥೆಯಲ್ಲಿ ಲ್ಯಾಂಡ್‌ಸ್ಟೀನರ್ ಮತ್ತು ವೀನರ್ ೧೯೪೦ರಲ್ಲಿ ಪತ್ತೆ ಹಚ್ಚಿದರು. ಇದೇ ರೀತಿ ಪ್ರಖ್ಯಾತಿಗೆ ಬಂದ

ಇತರ ಸಂಸ್ಥೆಗಳೆಂದರೆ, ೧೯೧೮ರಲ್ಲಿ ಪ್ರಾರಂಭವಾದ ಜನಾರೋಗ್ಯಕ್ಕೆ ಮುಡುಪಾದ ಜಾನ್ ಹಾಪ್ಕಿನ್ಸ್ ಮತ್ತು ೧೯೨೨ರಲ್ಲಿ ಪ್ರಾರಂಭವಾದ ಹಾರ್ವಾರ್ಡ್ ಸಂಸ್ಥೆ, ಅಲ್ಲದೆ ಜಾನ್ ಹಾಪ್ಕಿನ್ಸ್ ಸಂಸ್ಥೆಯಲ್ಲೇ ಅದೇ ಸಂಸ್ಥೆಯ ಹಣ ಸಹಾಯದಿಂದ ವೈದ್ಯ ಚರಿತ್ರೆ ಸಂಸ್ಥೆಯೊಂದು ೧೯೨೯ರಲ್ಲಿ ಸ್ಥಾಪಿತವಾಯಿತು. ಇಲ್ಲಿ ಫೀಲ್ಡಿಂಗ್ ಎಚ್. ಗ್ಯಾರಿಸನ್ ೧೯೩೦ರಲ್ಲಿ ಅಧಿಕಾರ ವಹಿಸಿಕೊಂಡು, ವೈದ್ಯ ಚರಿತ್ರೆಗೆ ಸಂಬಂಧಪಟ್ಟ ಸಂಶೋಧನೆಗಳನ್ನು ನಡೆಸಿ ಅನೇಕ ಪುಸ್ತಕಗಳನ್ನು ಬರೆದನು. ಅವನಿಗೆ ಖ್ಯಾತಿ ತಂದದ್ದು "ವೈದ್ಯಶಾಸ್ತ್ರದ ಚರಿತ್ರೆಯ ಪರಿಚಯ" ಎಂಬ ಪುಸ್ತಕ.

ಅಮೆರಿಕದ ಖಾಸಗಿ ವೈದ್ಯ ಚಿಕಿತ್ಸಾಲಯಗಳು

೧೯ನೇ ಶತಮಾನದ ಕೊನೆಯ ಹಂತದಲ್ಲಿ ಪ್ರಾರಂಭವಾಗಿದ್ದ ಮೇಯೊ ಚಿಕಿತ್ಸಾಲಯದ ಮಾದರಿಯಲ್ಲೇ ೨೦ನೇ ಶತಮಾನದಲ್ಲೂ ಅನೇಕ ಖಾಸಗಿ ಚಿಕಿತ್ಸಾಲಯಗಳು ಕೆಲಸ ಮಾಡಲು ತೊಡಗಿದವು. ರಾಚೆಸ್ಟರಿನ ಮೇರಿ ಆಸ್ಪತ್ರೆ ೧೮೮೯ರಲ್ಲಿ ಪ್ರಾರಂಭವಾದ ಕಾಲದಿಂದಲೇ ಮೇಯೊ ಚಿಕಿತ್ಸಾಲಯವೂ ಪ್ರಾರಂಭವಾಯಿತು. ಆಗ ಅಲ್ಲಿ ಹದಿಮೂರು ರೋಗಿಗಳಿಗೆ ಮೂರು ಜನ ಶಸ್ತ್ರವೈದ್ಯರಿದ್ದರು. ವಿಲಿಯಂ ಡಬ್ಲಿಯು. ಮೇಯೊ, ಹಾಗೂ ಅವನ ಇಬ್ಬರು ಮಕ್ಕಳು, ವಿಲಿಯಂ ಜೆ. ಮೇಯೊ ಮತ್ತು ಚಾರಲ್ಸ್ ಎಚ್. ಮೇಯೊ. ಆಗ ತಂದೆ ಮೇಯೋವಿಗೆ



ಡಾ. ಚಾರಲ್ಸ್ ಮೇಯೋ, ಡಾ. ವಿಲಿಯಂ ಡಬ್ಲಿಯು. ಮೇಯೋ,
ಡಾ. ವಿಲಿಯಂ, ಜೆ. ಮೇಯೋ.

೭೦ ವರ್ಷ ವಯಸ್ಸಾಗಿದ್ದುದರಿಂದ ಮಕ್ಕಳೇ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಯಿತು. ಇವರಿಬ್ಬರೂ ಶಸ್ತ್ರವೈದ್ಯದಲ್ಲಿ ಇನ್ನೂ ಹೊಸಬರಾಗಿದ್ದುದರಿಂದ, ಶಸ್ತ್ರಕ್ರಿಯೆ


ಮಿತವಾಗಿ ನಡೆಯುತ್ತಿತ್ತು. ಬರುಬರುತ್ತ ಅವರ ಶಕ್ತಿ, ಸಾಮರ್ಥ್ಯ, ಹಾಗೂ ಕುಶಲತೆ ಹೆಚ್ಚಿ ಅದ್ಭುತ ಶಸ್ತ್ರವೈದ್ಯರೆನಿಸಿಕೊಂಡರು. ೧೯೧೦ರನೇ ವರ್ಷದೊಳಗೆ ಕಟ್ಟಡಗಳ ಕೆಲಸವೆಲ್ಲಾ ಮುಗಿದು, ವೈದ್ಯ ವಿಭಾಗಗಳೆಲ್ಲಾ ಒಂದು ಹತೋಟಿಗೆ ಬಂದು, ಮಿನ್ನಿಸೋಟ ವಿಶ್ವವಿದ್ಯಾಲಯದ ಒಂದು ಅಂಗವಾಗಿ ಕೆಲಸ ಮಾಡಲು ಯತ್ನಿಸಿ, ಉನ್ನತ ಮಟ್ಟದ ವೈದ್ಯ ವಿದ್ಯಾಭ್ಯಾಸವೂ ಅಲ್ಲಿ ಪ್ರಾರಂಭವಾಯಿತು. ಅಲ್ಲಿ ತರಪೇತಾದ ವಿದ್ಯಾರ್ಥಿಗಳು ಈಗ ಪ್ರಪಂಚದ ನಾನಾಕಡೆಗಳಲ್ಲಿ ಕೆಲಸ ಮಾಡಿ ಕೀರ್ತಿ ಗೊಳಿಸಿದ್ದಾರೆ. ಹೆಗ್ಗುರಾಣಿಕತೆಯ ರೋಗಿಗಳಿಗೆ ಶಸ್ತ್ರಚಿಕಿತ್ಸೆಗೆ ಮೊದಲು ರೋಗ ವನ್ನು ಹದಕ್ಕೆ ತರಲು ಐಯೊಡಿನ್ ಪ್ರಯೋಗವನ್ನು ಪ್ಲಮರ್ ೧೯೨೩ರಲ್ಲಿ ಪ್ರಾರಂಭಿಸಿದನು. ಕೆಂಡಾಲ್ ೧೯೩೬ರಲ್ಲಿ ಕಾರ್ಟಿಸಾನ್ ಎಂಬ ಹೊಸ ಅತಿ ಮುಖ್ಯ ವಾದ ಮದ್ದನ್ನು ಬೇರ್ಪಡಿಸಿದನು. ಇವರ ಹಾಗೆ ಇನ್ನೂ ಅನೇಕ ಮಂದಿ ಮೇಯೋ ವೈದ್ಯರು ವಿಧವಿಧವಾದ ರೀತಿಯಲ್ಲಿ ವೈದ್ಯಶಾಸ್ತ್ರದ ಅಭಿವೃದ್ಧಿಗೆ ಕಾರಣರಾದರು.

ಮೇಯೊ ಚಿಕಿತ್ಸಾಲಯದ ಮಾದರಿಯಲ್ಲಿ, ಬಾಸ್ಟನ್ನಿನ ಲಾಹೆ ಚಿಕಿತ್ಸಾಲಯ, ಕ್ಲೀವ್‌ಲೆಂಡಿನ ಕ್ಲೀವ್‌ಲೆಂಡ್ ಚಿಕಿತ್ಸಾಲಯ, ನ್ಯೂ ಆರ್ಲಿಯನ್ಸಿನ ಆಷ್‌ನರ್ ಚಿಕಿತ್ಸಾಲಯ ಮುಂತಾದವೆಲ್ಲಾ ಪ್ರಾರಂಭವಾಗಿ ಅಮೆರಿಕ ದೇಶಕ್ಕೆ ಕೀರ್ತಿ ತಂದಿವೆ.

ಇನ್ಸುಲಿನ್ ಶೋಧನೆ

ಎಷ್ಟು ಹಿಂದೆ ಎಂದರೆ ೧೬೭೪ರಲ್ಲೇ ಥಾಮಸ್ ವಿಲ್ಲಿಸ್ ಸಿಹಿಮೂತ್ರ ರೋಗಿ ಗಳ ಮೂತ್ರ ಸಿಹಿಯಾಗಿರುತ್ತದೆಂದು ತಿಳಿಸಿದ್ದನು. ೧೭೭೬ ರಲ್ಲಿ ಸುಂಡಿಸಿದ ಮೂತ್ರ ದಲ್ಲಿ ಸಕ್ಕರೆ ಇರುವುದನ್ನು ಮ್ಯಾತ್ಯು ದಾಬ್ಸನ್ ತೋರಿಸಿದನು. ನಾಯಿಯ ಮಾಂಸಲಿಯನ್ನು ಕಿತ್ತು ತೆಗೆದನಂತರ ನಾಯಿಗೆ ಸಿಹಿಮೂತ್ರ ಬರುತ್ತದೆಂದು ೧೮೮೯ ರಲ್ಲಿ ಮೆರಿಂಗ್ ಮತ್ತು ಮಿನ್‌ಕೌವ್‌ಸ್ಕಿ ಶೋಧನೆ ನಡೆಸಿ ತೋರಿಸಿದರು. ಸಿಹಿ ಮೂತ್ರ ರೋಗದಿಂದ ಸತ್ತವರ ಮಾಂಸಲಿಯ ಲ್ಯಾಂಗರ್‌ಹಾನ್ಸ್‌ನ ಕಿರಿದ್ವೀಪಗಳಲ್ಲಿ ರೋಗದ ಬದಲಾವಣೆಗಳನ್ನು ೧೯೦೦ರಲ್ಲಿ ಓಪಿ ನಿದರ್ಶಿಸಿದನು. ಇವರುಗಳೆಲ್ಲರ ಶೋಧನೆಗಳಿಂದ ಮನದಟ್ಟಾಗಿ, ಬ್ರಿಟನ್ನಿನ ಅಂಗಕ್ರಿಯೆ ವಿಜ್ಞಾನಿ ಎಡ್ವರ್ಡ್ ಷಾರ್ಪಿ ಷೇಫರ್ ೧೯೧೬ರಲ್ಲಿ ಲ್ಯಾಂಗರ್‌ಹಾನ್ಸ್ ಕಿರಿದ್ವೀಪಗಳಿಂದ ಒಂದು ರಸ ಬಿಡುಗಡೆ ಯಾಗುತ್ತದೆಂದು ತಿಳಿಸಿ, ಅದಕ್ಕೆ ಇನ್ಸುಲಿನ್ ಎಂದು ನಾಮಕರಣ ಮಾಡಿದನು. ಟೊರೊಂಟೊ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದ ಎಲುನೇರ್ಪಿಕ ವೈದ್ಯ ಫ್ರೆಡರಿಕ್ ಬ್ಯಾಂಟಿಂಗ್, ಆಗ ಅಲ್ಲಿ ವಿದ್ಯಾರ್ಥಿಯಾಗಿದ್ದ ಚಾರಲ್ಸ್ ಬೆಸ್ಟ್ ಸಂಗಡ ಸೇರಿ ಪ್ರಾಧ್ಯಾಪಕ ಮೆಕ್ಲಿಯಾಡ್‌ನ ಪ್ರಯೋಗಾಲಯದಲ್ಲಿ ಶೋಧನೆ ನಡೆಸಿ ಇನ್ಸು ಲಿನ್ನಿನ ವಾಸ್ತವತೆಯನ್ನು ಪ್ರಕಟ ಮಾಡಿದನು. ಆಗ ಬ್ಯಾಂಟಿಂಗಿಗೆ ಕೇವಲ ೩೦ವರ್ಷ ವಯಸ್ಸಾಗಿತ್ತು. ಬೆಸ್ಟಿಗೆ ೨೩ ವರುಷ ಮಾತ್ರ. ಸಿಹಿಮೂತ್ರ ರೋಗದ ಚಿಕಿತ್ಸೆ ಯಲ್ಲಿ ಈ ಇನ್ಸುಲಿನ್ ಕ್ರಾಂತಿ ಎಬ್ಬಿಸಿ ಜ್ಞಾನೋದಯ ಉಂಟುಮಾಡಿತು. ಇನ್ನೂ

ಇದಕ್ಕೆ ಬದಲು ಮದ್ದು ಗೊತ್ತಾಗಿಲ್ಲ. ಅಂದಿನಿಂದ ಒಳಸುರಿಕಶಾಸ್ತ್ರ ಜನ್ಮವೆತ್ತಿದೆ.




ಟೊರೊಂಟೊದಲ್ಲಿ ಬ್ಯಾಂಟಿಂಗ್ ಹಾಗೂ ಬೆಸ್ಟ್ ೧೯೨೧ರಲ್ಲಿ ಇನ್ಸುಲಿನನ್ನು ಕಂಡುಹಿಡಿದು ಬೇರ್ಪಡಿಸಿದರು.

ವೈದ್ಯದ ಮುನ್ನಡೆ ಅಮೆರಿಕದಲ್ಲಿ ಮಾತ್ರವೇ ಅಲ್ಲದೆ, ಮೆಕ್ಸಿಕೊ, ಮಧ್ಯ ಅಮೆರಿಕ, ದಕ್ಷಿಣ ಅಮೆರಿಕವೇ ಮುಂತಾದ ದೇಶಗಳಲ್ಲೂ ಮುಂದುವರಿಯುತ್ತಿತ್ತು. ಯೂರೋಪಿನಲ್ಲೂ ಮೊದಲಿನಂತೆ ಅಭಿವೃದ್ಧಿ ಇದ್ದೇ ಇತ್ತು. ಪ್ರಪಂಚದ ಒಂದನೇ ಮಹಾಯುದ್ಧದಲ್ಲಿ ಕಫದ ಮೂಲಕ ಹರಡುತ್ತಿದ್ದ ರೋಗಗಳಾದ ಪುಪ್ಪುಸುರಿತ ಮುಂತಾದ ರೋಗಗಳಿಗೆ ತಕ್ಕ ಮದ್ದುಗಳಿರಲಿಲ್ಲ. ೧೯೩೫ರಲ್ಲಿ ಜರ್ಮನಿಯ ಗೆರ್‌ಹಾರ್ಡ್ ಡೊಮಾಗ್ ಮೊಟ್ಟಮೊದಲಿಗೆ ರಕ್ತಕಣಲಯಕ ಸರಕಾಯಿಜ್ಜೀವಿಗಳಿಗೆ ಮಾರಕ ಮದ್ದಾದ ಪ್ರಾಂಟೊಸಿಲ್ ಎಂಬುದನ್ನು ಕಂಡುಹಿಡಿದನು. ಪ್ರಾಂಟೋಸಿಲ್ಲಿನ ಮೂಲ ವಸ್ತುವಾದ ಸಲ್ಫೋನೇಮೈಡ್ ಮದ್ದೇ ಪುಪ್ಪುಸುರಿತ ಮುಂತಾದ ರೋಗವಿರುವ ರೋಗಿಗಳಿಗೆ ಅಂದಿನಿಂದ ಉಪಯೋಗಿಸಲಾಗುತ್ತಿದೆ. ಶಸ್ತ್ರವೈದ್ಯರು ಎತ್ತೆಚ್ಚು ಶಸ್ತ್ರವೈದ್ಯ ಚಿಕಿತ್ಸೆಗಳಲ್ಲೂ ಉಪಯೋಗಿಸಲಾರಂಭಿಸಿದರು. ಹೀಗೆ ಜರ್ಮನಿಯವರು ಮುಂದುವರಿಯುತ್ತಾ ೧೯೩೧ರಲ್ಲಿ ನೋಲ್ ಮತ್ತು ರಸ್ಕ ಎಂಬ ಬರ್ಲಿನರು ಮೊಟ್ಟಮೊದಲ ವಿದ್ಯುತ್ಕಣ ಮಿಣಿದರ್ಶಕವನ್ನು ನಿರ್ಮಿಸಿದರು. ಇದರ ಸಹಾಯದಿಂದ ವಿಷಕಣ ಹಾಗೂ ಏಕಾಣುಜೀವಿತಿನಾಳಿಯಂತಹ ಕಿರಿ ಜೀವಿಗಳನ್ನು ಕೂಡ ಪರೀಕ್ಷಿಸುವಂತಾಯಿತು. ಇದಕ್ಕೆ ಕೊಂಚ ಮೊದಲು, ೧೯೨೯ರಲ್ಲಿ ಮೂರನೇ ಮಹತ್ತರವಾದ ಜರ್ಮನ್ ಶೋಧನೆಯಾದ ವಿದ್ಯುನ್ಮಿದುಳಚಿತ್ರಕವನ್ನು ಡಾ. ಹ್ಯಾನ್ಸ್‌ಬರ್ಗರ್ ಕಂಡುಹಿಡಿದು ಕೀರ್ತಿಶೇಷನಾದನು.

ಎರಡನೆಯ ಮಹಾಯುದ್ಧದ ವರೆವಿಗೂ ಸಲ್ಫೋನೆಮೈಡ್ ಮದ್ದೇ ಮುಖ್ಯ ರೋಗಾಣುನಾಶಕ ಮದ್ದಾಗಿತ್ತು. ಅದೃಷ್ಟವಶಾತ್ ಎರಡನೇ ಮಹಾ ಯುದ್ಧ ನಡೆಯು



ಅಲೆಗ್ಸಾಂಡರ್ ಫ್ಲೆಮಿಂಗ್ (ಎಡದಿಂದ ಮೊದಲನೆಯುವನು)
ಸಹವಿಜ್ಞಾನಿಗಳೊಂದಿಗೆ.



ಜೀವಿರೋಧಕ ಮದ್ದುಗಳ ತಯಾರಿಕೆ.

ತ್ತಿರುವಾಗಲೇ ಜೀವಿರೋಧಕ ಮದ್ದುಗಳು ಬಳಕೆಗೆ ಬಂದವು. ಇದಕ್ಕೆ ಕಾರಣ ೧೯೨೮ರಲ್ಲಿ ಲಂಡನ್ನಿನ ಸೆಂಟ್ ಮೇರಿ ಆಸ್ಪತ್ರೆಯ ಅಲೆಗ್ಸಾಂಡರ್ ಫ್ಲೆಮಿಂಗ್ ನಡೆಸಿದ ಶೋಧನೆ. ಈ ಶೋಧನೆ ಆಕಸ್ಮಾತ್ತಾದದ್ದಾದರೂ, ಅಂದಿನಿಂದ ಪೆನಿಸಿಲ್ಲಿನ್ ಜೀವದಾನಮಾಡುವ ಆಶ್ಚರ್ಯದ ಮದ್ದಾಗಿದೆ. ಇದರನಂತರ ಶ್ರೇಷ್ಠ ವಿಜ್ಞಾನಿಗಳ ಸಹಾಯದಿಂದ ಸ್ಟ್ರೆಪ್ಟೊಮೈಸಿನ್, ಕ್ಲೊರಾಂಫೆನಿಕಾಲ್, ಟೆಟ್ರಸೈಕ್ಲಿನ್ ಮುಂತಾದ ಜೀವಿರೋಧಕ ಮದ್ದುಗಳು ಬಳಕೆಯಲ್ಲಿವೆ.

ವೈದ್ಯಶಾಸ್ತ್ರ ಹೀಗೆ ಮುಂದುವರಿಯುತ್ತಿರುವಾಗ ಶಸ್ತ್ರವೈದ್ಯ ಅಷ್ಟೇನೂ ಹಿಂದಿರಲಿಲ್ಲದಿದ್ದರೂ ಅಷ್ಟೇನೂ ಶ್ಲಾಘನೀಯವಾಗಿರಲಿಲ್ಲ. ಜಠರಿರಿತ, ಜಠರಕರುಳುಕಂಡಿರಿತ, ಜಠರ ಕೊಯ್ತ್ತಿಗೆತ, ಪಿತ್ತಕೋಶಕೊಯ್ತ್ತಿಗೆತವೇ ಮುಂತಾದ ಮುಖ್ಯ ಶಸ್ತ್ರಕ್ರಿಯೆಗಳೆಲ್ಲಾ ೧೯ನೇ ಶತಮಾನದಲ್ಲೇ ರೂಢಿಗೆ ಬಂದಿದ್ದವು. ನರಶಸ್ತ್ರವೈದ್ಯ, ಶ್ವಾಸಕೋಶ ಶಸ್ತ್ರವೈದ್ಯ, ಗುಂಡಿಗೆ ಶಸ್ತ್ರವೈದ್ಯ ಅಷ್ಟಾಗಿ ಮುಂದುವರಿದಿರಲಿಲ್ಲ. ನರಶಸ್ತ್ರವೈದ್ಯದಲ್ಲಿ ಮಾತ್ರ, ಕುಷಿಂಗ್ ೧೯೧೧ ಹಾಗೂ ೧೯೧೨ರಲ್ಲಿ ತಲೆಯೊಳಗಣ ಎರಡು ಗಂತಿಗಳನ್ನು ತೆಗೆದು ಹಾಕಿದ್ದನು. ೧೯೧೮ರಲ್ಲಿ ಕುಷಿಂಗ್ ಮಹಾಶಯನ ವಿದ್ಯಾರ್ಥಿ ಡ್ಯಾಂಡಿ ತಲೆಯೊಳಗಿನ ಗಂತಿಗಳ ಸ್ಥಿತಿಗತಿಗಳನ್ನು ತಿಳಿಯಲೋಸುಗ ಮಿದುಳ್ಗುಣಿಚಿತ್ರಣ ಎಂಬ ರೋಗ ನಿದಾನ ಮಾಡುವ ಮಾಪಿಯನ್ನು ವಿವರಿಸಿದನು. ಅಲ್ಲಿಂದೀಚೆಗೆ ವೈದ್ಯ ಸಂಶೋಧನೆ ಪ್ರೇಕ್ಷಣೀಯವಾಗಿ ಬೆಳೆಯುತ್ತಾ ಇದೆ. ಹಿಂದೆಯೇ ತಿಳಿದಿದ್ದ ಬೆನ್ನುಹುರಿಯ ಅರಿವಳಿಕೆಗೆ ಆಧಾರದಂತೆ ಸಿರನಾಳಾಂತರ ಅರಿವಳಿಕೆ, ಉಸಿರ್ನಾಳಾಂತರ ಅರಿವಳಿಕೆ ಮುಂತಾದ ಅರಿವಳಿಕೆಯ ತಿಳಿವಳಿಕೆ ಬಳಕೆಗೆ ಬಂದ ಮೇಲೆ ಶಸ್ತ್ರವೈದ್ಯ ಅಸಾಧಾರಣವಾಗಿ ಬೆಳೆಯುತ್ತಾ ಇದೆ. ಮುಖ್ಯವಾಗಿ ನಾಟಿಹಾಕಣೆ, ಗುಂಡಿಗೆಯ ಶಸ್ತ್ರಕ್ರಿಯೆ, ಮಿದುಳಿನ ಒಳಗಿನ ಶಸ್ತ್ರಕ್ರಿಯೆ ಹಾಗೂ ಸುರೂಪಿಕ ಶಸ್ತ್ರಕ್ರಿಯೆಯೆಲ್ಲಾ ಮೇಲ್ಮಟ್ಟದಲ್ಲಿ ನಡೆಯುತ್ತಾ ಇವೆ.

* * *

ಪಾರಿಭಾಷಿಕ ಪದಕೋಶ

ಅಗಲುಬ್ಬು *aneurysm*
ಅಗಳು ಪಾದ *trench-foot*
ಅಡಚಿಕೆ *embolism*
ಅಡಿಪರೆ *basement membrane*
ಅಡಿಮದ್ದು *suppository*
ಅಡ್ಡಕಸಬಿ *quack*
ಅಡ್ಗೆರೆ *chiasma*
ಅಣಬೇನೆ *mycosis*
ಅನ್ನಕ್ಷೀರ *chyle*
ಅನ್ನಕೋಶ *stomach*
ಅನ್ನಾಂಗ *vitamin*
ಅನುಕಂಪನ *sympathetic*
ಅನುವಳಿಕೆ *degeneration*
ಅನ್ವಯಿತ *applied*
ಅಪರಕ್ಷಣೆ *anaphylaxis*
ಅರ್ಧಗೋಳ *hemisphere*
ಅರಿವಳಿಕೆ *anaesthesia*
ಅರಿವಿನ *sensory*
ಅರಿವು *sensation*
ಅರೆತಲೆನೋವು *migraine*
ಅಲೆಚಿತ್ರಕ *kymograph*
ಅಶ್ಮರಿಕರ್ತನ *lithotomy*
ಅಂಗಕ್ರಿಯೆಶಾಸ್ತ್ರ *physiology*
ಅಂಗಚ್ಛೇದನೆ *dissection*
ಅಂಗರಚನೆಕಾರ *anatomist*
ಅಂಗರಚನೆಶಾಸ್ತ್ರ *anatomy*
ಅಂಗಾಯು *lesion*
ಅಂಡವಾಯು *hydrocoele*
ಅಂಡಾಶಯಛೇದನೆ *ovariotomy*
ಅಂತ್ರಪಟಲ *mesentery*
ಅಳ್ಳೆಪರೆ *pleura*
ಅಳ್ಳೆಪರೆಯುರಿತ *pleurisy*
ಆಕರ್ಣಕ *stethoscope*
ಆಚೆತೂರದ *opaque*
ಆಡುದನಿ *egophony*
ಆನೆಕಾಲು ರೋಗ *elephantiasis*
ಆಮರಸ *chyme*
ಆಮ್ಲವಿಷತೆ *acidosis*
ಆಲಿಸಿಕೆ *auscultation*
ಆಸ್ಪತ್ರೆ *infirmary*
ಆರೋಗ್ಯಶಾಸ್ತ್ರ *hygeine*
ಆಹಾರಶಾಸ್ತ್ರ *dietetics*
ಆಳದ ಕ್ಷ ಕಿರಣ *deep X ray*
ಇಕ್ಕಳ *forceps*
ಇಟಕಣೆ, ಇರುಕಣೆ *stenosis*
ಇರುಳುಗಣ್ಣು *night blindness*

ಇಂಗಾಲೆಣ್ಣೆ *carbolic*
ಈಲಿ *liver*
ಉದ್ರೇಕಕಾರಕ *irritant*
ಉನ್ಮಾದ *hysteria*
ಉಪದಂಶ *syphilis*
ಉಪದಂಶಶಾಸ್ತ್ರ *syphilology*
ಉಭಯಲಿಂಗಿತನ *hermaphroditism*
ಉಮ್ಮತ್ತಿ *datura*
ಉರಿತ *inflammation*
ಉರಿಮೂತ್ರ *strangury*
ಉರಿವು *combustion*
ಉಸಿರ್ನಾಳಛೇದನ *tracheotomy*
ಊತಕ *tissue*
ಊತಕಜನನ *histogenesis*
ಊತಕಶಾಸ್ತ್ರ *histology*
ಎಡೆಬಲಶಾಸ್ತ್ರ *statics*
ಎದೆಯೊರೆತ *pectoriloquy*
ಎದೆಶೂಲೆ *angina pectoris*
ಎಲುನೇರ್ಪಿಕೆ *orthopaedic*
ಏಕಾಣುಜೀವಿಗಳು *bacteria*
ಏಕಾಣುಜೀವಿತಿನಾಳಿ *bacteriophage*
ಏಕಾಣುಜೀವಿಶಾಸ್ತ್ರ *bacteriology*
ಏಡಿಗಂತಿ *cancer*
ಏರಿಳಿವ ಜ್ವರ *undulant fever*
ಒಗ್ಗದಿಕೆ *allergy*
ಒತ್ತಡಕಣೆ *co–arctation*
ಒಳಗನ್ನಡಿ *speculum*
ಒಳಗಿವಿ *internal ear*
ಒಳಸುರಿಕ *endocrine*
ಒಳಸುರಿಕಶಾಸ್ತ್ರ *endocrinology*
ಓಮ ಗ್ರಂಥಿ *thymus gland*
ಓಸರಿಕೆ *refraction*
ಔಷಧಚೀಟಿ *prescription*
ಔಷಧಮಂಜರಿ *pharmacopoeia*
ಔಷಧವಸ್ತುಶಾಸ್ತ್ರ *pharmacognosy*
ಔಷಧ ವೈದ್ಯ *physician*
ಔಷಧಶಾಸ್ತ್ರ *pharmacology*
ಕಟುಕರೋಹಿಣಿ *hellebore*
ಕಟ್ಟುಪಟ್ಟಿ *bandage*
ಕಟ್ಟುಮದ್ದು *antidote*
ಕಟ್ಟುವಾರೆ *gout*
ಕಟ್ಟುಸರಿ *poultice*
ಕಣಕಾಲೆ *tibia*
ಕಣ್ಜಾಲ *retina*
ಕಣ್ಜಾಲದರ್ಶಕ *retinoscope*
ಕಣ್ಣರಿಕೆ *observation*
ಕಣ್ಣುದರ್ಶಕ *ophthalmoscope*
ಕಣ್ಣುಪರೆ *cataract*
ಕಣ್ಣುವೈದ್ಯ *ophthalmologist*
ಕಣ್ಣವೆಯ *ciliary*
ಕಪಾಲರೂಪಶಾಸ್ತ್ರ *craniology*
ಕಪಾಲಸಾಮುದ್ರಿಕ *phrenology*
ಕಲ್ಲುತೆಗೆತ *lithotomy*
ಕರಣ *appliance*
ಕರಿಯಾಲಿ *iris*
ಕರಿಯಾಲಿಕೊಯ್ತೆಗೆತ *iridectomy*
ಕರುಳ್ಚಲ್ಕಣ *entamoeba*
ಕರುಳ್ನಡುಪರೆಯುರಿತ *mesenteritis*
ಕರುಳುವಾಳ *appendix*
ಕರುಳುವಾಳುರಿತ *appendicitis*
ಕವಾಟ *valve*
ಕಶಾಂಗ *flagellum*

ಕೃತಕಲ್ಪನೆ *synthesis*
ಕ್ಷಯಾಣು *tubercle*
ಕ್ಷಯಾಣುಸಾರ *tuberculin*
ಕಂಕಾಳ *skeleton*
ಕಂಡರ *tendon*
ಕಂಪವಾತ *chorea*
ಕಾಡಿ *vinegar*
ಕಾಯ್ಜೀವಿ *coccus*
ಕಾವನೆ *invention*
ಕಾಳ ಜ್ವರ *kala azar*
ಕಾಳಮೂತ್ರ ಜ್ವರ *blackwater fever*
ಕಾಂತಶಕ್ತಿ *magnetism*
ಕಿರ್ನಾಳ *tubule*
ಕಿರಣಣಬೇನೆ *actinomycosis*
ಕಿರಿ ದ್ವೀಪ *islet*
ಕಿರೀಟಕ *coronary*
ಕಿವಿಪೆಡಸಣೆ *otosclerosis*
ಕಿವಿಮೊರೆತ *tinnitus*
ಕಿವಿಶಾಸ್ತ್ರ *otology*
ಕಿವಿಶಾಸ್ತ್ರಜ್ಞ *otologist*
ಕೀಲುವಾತ *rheumatism*
ಕುಮುಲವ *incubating*
ಕುಷ್ಠ *leprosy*
ಕುಂಡಿಮುಳುಗು ಸ್ನಾನ *Sitz bath*
ಕೂಟಕಣ *gamete*
ಕೂಟಜೀಕಣ *gametocyte*
ಕೂಡ್ಗರಣೆಕೆ *thrombosis*
ಕೂರಾದ *acute*
ಕೆರಳಿಕೆ *irritation*
ಕೆಳದವಡೆ *mandible*
ಕೆಂಪು ಶಿಲುಬೆ *red cross*
ಕೇಡಿನ ರಕ್ತಕೊರೆ *pernicious anaemia*
ಕೊಚ್ಚುನೀರಿನ ಕಕ್ಕಸು *flush latrine*
ಕೊಯ್ತಗೆತ *excision*
ಕೋಡ್ಪರೆ *cornea*
ಗಳಗಂಡ *goitre*
ಗಂಟಲಮಾರಿ *diphtheria*
ಗಂಟು *node, vegetation*
ಗಾಳಿದುಂಬಿದ *aerated*
ಗಾಳಿಯುಬ್ಬಟೆ *emphysema*
ಗಾಳಿಸಂಚಾರ *ventilation*
ಗ್ರಾಂರಂಗೇರದ *Gram–negative*
ಗ್ರಾಮುಸಾರ *sewage*
ಗುದನಾಳ *anal canal*
ಗುರಾಣಿಕ*thyroid*
ಗುಂಜೆಲು *pubis*
ಗುಂಡಿಗೆಯೊಳ್ಪರೆಯುರಿತ *endocarditis*
ಗುಂಡಿಗೆಶಾಸ್ತ್ರ *cardiology*
ಚಪ್ಪಟಿಕ *platelet*
ಚರ್ಮತವೆ *lupus*
ಚರ್ಮಶಾಸ್ತ್ರ *dermatology*
ಚರ *mobile*
ಚಲಬಲಶಾಸ್ತ್ರ *dynamics*
ಚಲ್ಕಣ *amoeba*
ಚಾಲಕ *motor*
ಚರಸೆಡೆತ *contracture*
ಚಿಂಚಾಮ್ಲ *tartaric acid*
ಚೂಚುಕಂದ *mastoid*
ಚೆಲ್ಲಿದ *disseminated*
ಚೋದನಿ *hormone*
ಜಠರಕರುಳು ಕಂಡಿರಿತ *gastroenterostomy*

ಜಠರಕೊಯ್ತಗೆತ *gastrectomy*
ಜಠರ ರಸ *gastric juice*
ಜಠರದ ಹುಣ್ಣು *gastric ulcer*
ಜಠರರಿತ *gastrostomy*
ಜನನಾಂಗಗಳು *genitals*
ಜರೀಗಿಡ *fern*
ಜಲೋದರ *ascites*
ಜಂತು ಹುಳು *round worm*
ಜೀವಕಣ, ಜೀವಕೋಶ *cell*
ಜೀವದ್ರವ್ಯೀಕರಣ *metabolism*
ಜೀವವಸ್ತುಕರಣ *metabolism*
ಜೀವಾಣು *organism*
ಜೀವಾಳ ಜಲ *aqua vitae*
ಜೀವಿಮುಡಿ *sterile*
ಜೀವಿರೋಧಕ *antibiotic*
ಜೀವಿವಿಷ *toxin*
ಜೀವಿಷರೋಧಕ *antitoxin*
ಜೀರ್ಕಟ್ಟು *truss*
ಜೋಪಾಸನೆ *conservation*
ಟೊಂಕಶೂಲೆ *sciatica*
ಡೊಕ್ಕರಿಸಿದ *strangulated*
ತಟ್ಟೆಪಾದ *flat–foot*
ತ್ರಡೆ *block*
ತತ್ತಿಚೀಲ *oocyst*
ತರಡು *testis*
ತಲೆಗೊರಳ *carotid*
ತಂತುಕಜನಕ *fibrinogen*
ತಂತುಚಿಟ್ಟಿಯ *fibrocystic*
ತಾನಾಗುಟ್ಟಿದ *idiopathic*
ತಾಳಗತಿಗೆಡಿಕೆ *arrhythmia*
ತಿರುವು *convolution*
ತುದಿಗಡ್ಡಿ *terminal*
ತುಂತುರು *spray*
ತೂರುಗೊಂದಿನ *portal*
ತೊಡೆಬಾವು, ತೊಡೆವಾಳಿ *bubo*
ತೊನ್ನು *leucoderma*
ತೊನೆತ *thrill*
ತೊರಳೆ *spleen*
ತೋರವಯವಿ *acromegaly*
ದಡುಗಟ್ಟು *fascia*
ದಡುತನ *hypertrophy*
ದದ್ದು *rash*
ದನಿನಾಳದರ್ಶಕ *laryngoscope*
ದನಿನಾಳಶಾಸ್ತ್ರ *laryngology*
ದಂಡಾಣುಜೀವಿ *bacillus*
ದಾದಿ *nurse*
ದುಗ್ಧರಸ *lymph*
ದುಚ್ಚಾಳಿ *addiction*
ದುರಾರ್ಗರುಳು *duodenum*
ದೆಹಲಿ ಕುರು *Delhi boil*
ದೇಹಶಾಸ್ತ್ರ *physiology*
ಧಮನಿ *artery*
ಧಮನಿಯೊತ್ತಡಮಾಪಿ *sphygmomanometer*
ಧ್ರುವೀಕರಿತ *polarised*
ಧ್ವನಿನಾಳ *larynx*
ನಡುತಡಕೆ *septum*
ನಡುದೆರೆ *mediastinum*
ನರತಡೆ *nerve block*
ನರಶಸ್ತ್ರವೈದ್ಯ *neurosurgery*
ನರಶಾಸ್ತ್ರ *neurology*
ನರಶಾಸ್ತ್ರಜ್ಞ *neurologist*
ನವಗಂತಿ *neoplasm*

ನಳಿಕೆ *catheter*
ನಂಜಿನ ಕೊರಡು *nux vomica*
ನಂಜಿರದಿಕೆ *asepsis*
ನಂಜು *sepsis*
ನಂಜುರೋಧಕ *antiseptic*
ನಾಡಿಚಿತ್ರಕ *sphygmograph*
ನಾಲ್ಕರಶಾಸ್ತ್ರ *tetrology*
ನಾಲ್ಗಡುವಿನ *quartan*
ನಿತ್ತುಡಿತ *fibrillation*
ನಿದಾನ *diagnosis*
ನಿದ್ದೆಕಾರಿ *hypnotic*
ನಿದ್ದೆಬೇನೆ *sleeping sickness*
ನಿಯಮಾಧೀನ *conditioned*
ನಿರ್ನಾಳ ಗ್ರಂಥಿ *ductless gland*
ನಿರೋಧಕ *preventive*
ನೀರ್ದಲೆ *hydrocephalus*
ನೀರುಹಬ್ಬೆ *witlow*
ನುಲಿಗೊರಳು *torticollis*
ನುಸುತೂರಿಕೆ *diapedesis*
ನೆರಡಿ *anthrax*
ನೋಟಶಾಸ್ತ್ರ *optics*
ನೋವು ಕಳೆವ *analgesic*
ಪಟ್ಟೆ ಸ್ನಾಯು *striped muscle*
ಪಡಿಜೀವಿ *merozoite*
ಪರಪಿಂಡಿ *parasite*
ಪರಮಾ *gonorrhoea*
ಪರಿಕರ್ತನ *circumcision*
ಪಂಗುಸಿರ್ನಾಳೊರೆತ *bronchophony*
ಪ್ರಸವಶಾಸ್ತ್ರ *obstetrics*
ಪ್ರಸವ ಶಾಸ್ತ್ರಜ್ಞ *obstetrician*
ಪಾದರಸವಿಷತೆ *mercurialism*
ಪಾಪೆ *pupil*

ಪ್ಯಾಶ್ಚುರೀಕರಣ *Pasteurization*
ಪ್ರಾಣಿಹಿಟ್ಟು *glycogen*
ಪಿತ್ತಕೋಶ ಕೊಯ್ತೆಗೆತ *cholecystectomy*
ಪಿತ್ತಗಲ್ಲು *gall stone*
ಪಿಂಡಗೂಸು *foetus*
ಪುಪ್ಪುಸಕಾಯಿಜೀವಿ *pneumococcus*
ಪುಪ್ಪುಸುರಿತ *pneumonia*
ಪೆಡಸಣೆ *sclerosis*
ಬಟವೆ *sinus*
ಬಣ್ಣ ನೋಟ *colour vision*
ಬಲಚ *right–handed*
ಬಸಿಗೊಳವೆ *drain-tube*
ಬಸಿವ *draining*
ಬಳುಕ *vibrio*
ಬಿಳಿಕಣತೆ *leucocytosis*
ಬಿಳಿಕಣರಕ್ತ *leucaemia*
ಬಿಳಿಚ ನಾಗಕೀಟ *spirochaeta pallida*
ಬೀಜಕಣಜೀವಿ *sporozoite*
ಬೂರು *hernia*
ಬೆದಗಡ್ಡಿ *probe*
ಬೆನ್ನುಹುರಿತವೆ *tabes dorsalis*
ಬೆನ್ನೆಲುಬಿ *vertebrate*
ಬೆನ್ನೆಲುಬು *vertebra*
ಬೆನ್ನೆಲುಬುರಿತ *spondylitis*
ಬೆವರು ಜ್ವರ *sweating sickness*
ಬೇರೂರಿದ *chronic*
ಬೊರಿಗೆ *fistula*
ಬೈರೊಡಲಿಬೇನೆ *trypanosomiasis*
ಭ್ರೂಣಶಾಸ್ತ್ರ *embryology*
ಮಜ್ಜೆಯುಂದ *myeloid*
ಮನೋಬಿಡಿಪರೀಕ್ಷೆ *psychoanalysis*
ಮನೋರೋಗಚಿಕಿತ್ಸೆ *psychotherapy*

ಮನೋರೋಗಶಾಸ್ತ್ರ *psychiatry*
ಮಯಕ *coma*
ಮರ್ಮರ *murmur*
ಮರುನಾದ *resonance*
ಮರೆವಣೆ *immunity*
ಮಸೂರ *lens*
ಮಹಾಧಮನಿ *aorta*
ಮಹಾಮಾರಿ *plague*
ಮಂಡಿಚಿಪ್ಪು *patella*
ಮಾಸು *placenta*
ಮಾಂಸಲಿ *pancreas*
ಮಿಣಿದರ್ಶಕ *microscope*
ಮಿದುಳ್ಪರೆಕಾಯ್ಜೀವಿ *meningococcus*
ಮಿದುಳುಪೊರೆಯ *meningeal*
ಮಿದುಳುಬಳ್ಳಿ *spinal cord*
ಮಿದುಳ್ಗುಳಿ *ventricle*
ಮಿದುಳ್ಗುಳಿಚಿತ್ರಣ *ventriculography*
ಮೀನಮಶಕ *phlebotomus*
ಮುಕುಟದ *mitral*
ಮುಖಸಾಮುದ್ರಿಕೆ *physiognomy*
ಮುಟ್ಟುನೋವು *dysmenorrhoea*
ಮುನ್ನರಿವು *prognosis*
ಮುರತ *antidote*
ಮುರಿಗರುಳು *ileum*
ಮುಂಗರುಳು *duodenum*
ಮುಂಜೀವಿ *protozoon*
ಮೂಕತನ *aphasia*
ಮೂಗಡುವಿನ *tertiary*
ಮೂತ್ರಕೊಟಡಿ *urinal*
ಮೂತ್ರಕೋಶ *urinary bladder*
ಮೂತ್ರಕೋಶುರಿತ *cystitis*
ಮೂತ್ರಪಿಂಡ *kidney*
ಮೂತ್ರನಾಳ *urethra*
ಮೂರ್ದಳದ *tricuspid*
ಮೂಳೆಗಂತಿ *osteoma*
ಮೂಳೆಮುರಿತ *bone fracture*
ಮೂಳೆಯುರಿತ *osteitis*
ಮೆಡ್ಡಗಣ್ಣು *exophthalmos*
ಮೆದುಮೂಳೆರೋಗ *rickets*
ಮೆಂಡಿಕೆ *tonsil*
ಮೆಂಡಿಕೆಯುರಿತ *tonsillitis*
ಮೇಲ್ಪರೆ *epithelium*
ಮೇಹ ರೋಗ *venereal disease*
ಮೇಹರೋಗಶಾಸ್ತ್ರ *venereology*
ಮೈಯಿಳಿತ *abortion*
ಮೊಲ್ಲಗರ *epilepsy*
ಯಂತ್ರಶಿಲ್ಪ *engineering*
ಯಾಂತ್ರಿಕತೆ *mechanism*
ರಕ್ತಕಣಲಯಕ *haemolytic*
ರಕ್ತಕೊರೆ *anaemia*
ರಕ್ತಬಣ್ಣಕಮಾಪಿ *haemoglobinometer*
ರಕ್ತನಾಳಚಾಲಕ *vasomotor*
ರಕ್ತರಸ *plasma*
ರಕ್ತವರ್ಣಜನಕ *haemoglobin*
ರಕ್ತವಿಜ್ಞಾನ *haematology*
ರತಿಹುಣ್ಣು *chancre*
ರಸತಂತ್ರ *alchemy*
ರಸವಾದಿ *alchemist*
ರಸಾಯನರೋಗಚಿಕಿತ್ಸೆ *chemotherapy*
ರಸಿಕೆ *serum*
ರಾಜಸಂಸ್ಥೆ *Royal Society*
ರಾಜಸ್ಪರ್ಶ *royal touch*
ರಾಳಮ *laudanum*
ರ್ರೀಯಂಶ *Rh–factor*

ರೂಪಗೆಡುವ *deformans*
ರೇತುಕಾಯಿಜ್ಜೀವಿ *gonococcus*
ರೇತುಸಾಗುವ *seminiferous*
ರೇವಲ್ಚಿನ್ನಿ *rhubarb*
ರೋಗಚಿಕಿತ್ಸೆ *therapy*
ರೋಗಲಕ್ಷಣ *symptom*
ರೋಗವಿಂಗಡಶಾಸ್ತ್ರ *nosology*
ರೋಗಶಾಸ್ತ್ರ *pathology*
ರೋಗಶಾಸ್ತ್ರಜ್ಞ *pathologist*
ರೋಗಾಣುಜೀವಿ *pathogen*
ರೋಗಿಕೋಣೆ *ward*
ಲಕ್ವ *stroke, hemiplegia*
ಲಕ್ಷಣಕೂಟ *syndrome*
ಲಾಡಿಹುಳು *tape–worm*
ಲೀಷ್ಮನ್‌ಬೇನೆ *Leishmaniasis*
ಲೋಮನಾಳ *capillary*
ಲೋಳುಬ್ಬರ *myxoedema*
ಲೋಳೆ *mucus*
ಲೋಳೆಪರೆ *mucous membrane*
ವಕ್ರೀಕರಣ *refraction*
ವಸ್ತಿ *enema*
ವಿಕಿರಣಶಾಸ್ತ್ರ *radiology*
ವಿದ್ಯುಚ್ಚಲಬಲಶಾಸ್ತ್ರ *electrodynamics*
ವಿದ್ಯುತ್ಕಣ *electron*
ವಿದ್ಯುತ್ಕಾಂತಕ *electromagnetic*
ವಿದ್ಯುದ್ಗುಂಡಿಗೆ ಚಿತ್ರ *electrocardiogram*
ವಿದ್ಯುನ್ಮಿದುಳಚಿತ್ರಕ *electroencephalograph*
ವಿಷಕಣ *virus*
ವಿಷತೆ *poisoning*
ವಿಷಮಶೀತ *typhoid*
ವಿಷಮುರಿ *antidote*
ವಿಸರ್ಪಿ *erysipelas*
ವೈದ್ಯ ನ್ಯಾಯಶಾಸ್ತ್ರ *medical jurisprudence*
ವೈದ್ಯಶಾಸ್ತ್ರ *medicine*
ಶರೀರಶಾಸ್ತ್ರ *physiology*
ಶಸ್ತ್ರಕ್ರಿಯೆ *operation*
ಶಸ್ತ್ರವೈದ್ಯ *surgery, surgeon*
ಶಾಖಮಾಪಕ *thermometer*
ಶಾಮಕ *sedative*
ಶೋಬೆ *dropsy*
ಸದೃಶಕ್ರಿಯಾಚಿಕಿತ್ಸೆ *homoeopathy*
ಸಮಚಿತ್ತತೆ *aequanimitas*
ಸರಕಾಯಿಜ್ಜೀವಿ *streptococcus*
ಸಂಚಾಲಕ *locomotor*
ಸಂಧಿವಾತ *rheumatism*
ಸಂಪುಟಕ *codex*
ಸಾಕಣೆ *culture*
ಸಾಗುದಾರಿ *tract*
ಸಾಗುನಾಳ *duct*
ಸಾರಕ *extract*
ಸಾಲದಿಕೆ *incompetence*
ಸಾವೆತೆರ *miliary*
ಸಾಂಕ್ರಾಮಿಕ *epidemic*
ಸ್ನಾಯು *muscle*
ಸ್ನಾಯುಜನಿಕ *myogenic*
ಸಿರ *vein*
ಸಿರದುರಿತ *phlebitis*
ಸಿರನಾಳಾಂತರ *intravenous*
ಸಿಹಿಮೂತ್ರ *diabetes mellitus*
ಸಿಳ್ಳುದನಿ *rale*
ಸೀಸಕದ *mitral*
ಸೀಸವಿಷತೆ *plumbism*
ಸಿಂಪಿ *oyster*

ಸ್ತ್ರೀರೋಗಶಾಸ್ತ್ರ *gynecology*
ಸುಡಿಕೆ *cautery*
ಸುರಮಾ *antimony*
ಸುರುಗೂದಲಿ *spirochaete*
ಸುರೂಪಿಕ ಶಸ್ತ್ರಕ್ರಿಯೆ *plastic operation*
ಸೂಜಿಚುಚ್ಚುಗೆ *acupuncture*
ಸೂಜಿಹುಳು *pinworm*
ಸೂಡು *cautery*
ಸೂಪ್ತ್ಯಾವಾಹನ *hypnotism*
ಸೂಲಗಸ್ತ *male midwife*
ಸೂಲಗಿತ್ತಿ *midwife*
ಸೂಲಗಿತ್ತಿಶಾಸ್ತ್ರ *midwifery*
ಸೆಟೆಬೇನೆ *tetanus*
ಸೆಡೆತ *spasm*
ಸೆತ್ತೆ *placenta*
ಸೇರುವೆ *suture*
ಸೊಕ್ಕಿನ ಜ್ವರ *typhus fever*
ಸೊರಗಣೆ *atrophy*
ಹತ್ತಗಣ್ಣು *glaucoma*
ಹಲಕಣರಕ್ತ *polycythaemia*
ಹಲಚಿತ್ರಕ *polygraph*
ಹರಿವಿದ್ಯುನ್ಮಾಪಿ *galvanometer*
ಹಳದಿ ಜ್ವರ *yellow fever*
ಹೃದಯ ಒಳಪರೆ *endocardium*
ಹೃದಯ ಹೊರಪರೆಯುರಿತ *pericarditis*
ಹೃದಯಶಾಸ್ತ್ರ *cardiology*
ಹಾಲ್ರಸ *lymph*
ಹಾಲೆ *lobe*
ಹಾಸೆಪಕ್ಕದ *clinical*
ಹಾಸಿಗೆಬದಿಯ *clinical*
ಹಿಟ್ಟಂದ *amyloid*
ಹಿಮ್ಮುರಿತ *reflex*
ಹಿಸ್ ಪಿಂಡಿ *His body*
ಹೀರೊತ್ತು *swab*
ಹುಟ್ಟಸಿಪ್ಪು *favus*
ಹುದುಗು *yeast*
ಹುರಿಕಟ್ಟು *ligature*
ಹುರುಕು *psora*
ಹೆಕಲಿ *rabies*
ಹೆಗ್ಗರುಳು *colon*
ಹೆಗ್ಗುರಾಣಿಕತೆ *hyperthyroidism*
ಹೆಣ್ಣುರೋಗವೈದ್ಯ *gynecologist*
ಹೆರಿಗೆಶಾಸ್ತ್ರ *obstetrics*
ಹೊತ್ತಾರೂಟ *breakfast*

ಚಿತ್ರಗಳಿಗಾಗಿ ಕೃತಜ್ಞತೆ

ಈ ಪುಸ್ತಕದಲ್ಲಿ ಅಚ್ಚಾಗಿರುವ ಚಿತ್ರಗಳಿಗೆ ಆಕರ ಸಂಸ್ಥೆಯೂ ಗ್ರಂಥಗಳೂ ಕೆಳಗೆ ಕಂಡಂತಿವೆ. ಅಂಕಿಗಳು ಚಿತ್ರಗಳಿರುವ ಪುಟಗಳನ್ನು ಸೂಚಿಸುತ್ತವೆ.

ಪಾರ್ಕ್ ಡೇವಿಸ್ ಅಂಡ್ ಕಂಪನಿ

2, 3, 10, 12, 18, 24, 38, 48, 58, 70, 77, 97, 103, 107, 112, 121, 124, 160, 173, 179, 190, 205, 213, 241, 250, 254, 267, 280, 283, 291, 312, 321, 326, 333, 340, 345, 359, 377, 382, 400, 402, 404, 406, 407, 410, 411.

ಡಗ್ಲಾಸ್ ಗುತ್ರೀ ವೈದ್ಯಚರಿತ್ರೆ

21, 96, 145, 166, 215, 224, 251, 283, 298, 302, 303, 347, 383.

ಆರ್. ಎಚ್. ಮೇಜರ್ ವೈದ್ಯಚರಿತ್ರೆ

1, 9, 14, 20, 21, 25, 26, 29, 34, 39, 52, 53, 60, 62, 66, 68, 76, 88, 97, 102, 108, 112, 123, 126, 133, 134, 136, 153, 160, 162, 167, 171, 172, 188, 195, 204, 206, 210, 211, 219, 223, 225, 242, 265, 266, 271, 307, 313, 337, 344, 349, 358, 376, 382, 384, 386, 399, 406, 408.

ಚಾರ್ಲ್ಸ್ ಸಿಂಗರ್ ಹಾಗೂ ಅಂಡರ್‌ವುಡ್ ವೈದ್ಯಚರಿತ್ರೆ

19, 57, 65, 86, 143, 168, 169, 253, 263, 306, 339, 375, 400, 405.

ಇತ್ತೀಚಿನ ನಮ್ಮ ಕೆಲವು ಪ್ರಕಟಣೆಗಳು